ದೇಶಿ-ವಿದೇಶಿಯರ ದೃಷ್ಟಿಯಲ್ಲಿ ಹಂಪಿ : ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿರುವ ಮಹಾಪ್ರಬಂಧ)

ಸಂಶೋಧಕರು

ಸಿ.ಜಿ. ಜಿಲಾನ್‌ಜಾನ್

ಮಾರ್ಗದರ್ಶಕರು

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಸಹ ಪ್ರಾಧ್ಯಾಪಕರು

667

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೬

ಪರಾಮರ್ಶೆಗೆ ಮಾತ್ರ

“ಸಿರಿಗನ್ನಡ” ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬.

Shri Mahantesh
BOOK BINDIN

Sl No- 667 667

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ,ಹಂಪಿ.

ದೇಶಿ–ವಿದೇಶಿಯರ ದೃಷ್ಟಿಯಲ್ಲಿ ಹಂಪಿ : ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿರುವ ಮಹಾಪ್ರಬಂಧ)

ಸಂಶೋಧಕರು

ಸಿ.ಜಿ. ಜಿಲಾನ್‌ಖಾನ್

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ,ಹಂಪಿ.

ಮಾರ್ಗದರ್ಶಕರು

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಸಹ ಪ್ರಾಧ್ಯಾಪಕರು

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೬

131992

954.87
JEE d

ಪ್ರಮಾಣ ಪತ್ರ

ದೇಶಿ–ವಿದೇಶಿಯರ ದೃಷ್ಟಿಯಲ್ಲಿ ಹಂಪಿ : ಚಾರಿತ್ರಿಕ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ವಿರೂಪಾಕ್ಷಿ ಪೂಜಾರಹಳ್ಳಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಸಮಾಜ ವಿಜ್ಞಾನಗಳ ನಿಕಾಯದ **ಚರಿತ್ರೆ ವಿಭಾಗಕ್ಕೆ** ಪಿಎಚ್.ಡಿ. ಪದವಿ ಸಲ್ಲಿಕೆಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಸಿ.ಜಿ.ಜಿಲಾನ್‌ಖಾನ್)

ದಿನಾಂಕ: 04-05-2016

ಸ್ಥಳ: ವಿದ್ಯಾರಣ್ಯ

ಸಂಶೋಧನ ವಿದ್ಯಾರ್ಥಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀ ಸಿ.ಜಿ.ಜಿಲಾನ್‌ಖಾನ್ ಅವರು **ದೇಶಿ-ವಿದೇಶಿಯರ ದೃಷ್ಟಿಯಲ್ಲಿ ಹಂಪಿ : ಚಾರಿತ್ರಿಕ ಅಧ್ಯಯನ** ಎನ್ನುವ ಪಿಎಚ್.ಡಿ. ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಇದನ್ನು ಇಲ್ಲಿಯವರೆಗೆ ಯಾವುದೇ ಪದವಿಗೆ ಸಲ್ಲಿಸಿರುವುದಿಲ್ಲವೆಂದು ಮತ್ತು ಇದನ್ನು ಇಡಿಯಾಗಿ ಇಲ್ಲವೇ ಬಿಡಿಯಾಗಿ ಎಲ್ಲಿಯೂ ಪ್ರಕಟಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: 04-05-2016

ಸ್ಥಳ: ವಿದ್ಯಾರಣ್ಯ

(ಡಾ. ವಿರೂಪಾಕ್ಷಿ ಪೂಜಾರಹಳ್ಳಿ)

ಮಾರ್ಗದರ್ಶಕರು

ಚರಿತ್ರೆ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

೪. ಕಟ್ಟಿಗೆ ಅಹಮದ್‌ಖಾನ್‌ನ ಗೋರಿ.

೫. ಕಮಲಾಪುರ ಕಂಪ್ಲಿ ರಸ್ತೆಯಲ್ಲಿರುವ ಮುಸಾಫೀರ್ ಖಾನೆಯ ನೋಟ.

೬. ಅವಸಾನದಂಚಿನಲ್ಲಿರುವ ವರಾಹ ದೇವಸ್ಥಾನದ ಪ್ರವೇಶದ್ವಾರ.

೭. ವಿಠ್ಠಲ ದೇವಾಲಯದ ಮುಂಭಾಗದ ಬಜಾರಿನ ಮರುಉತ್ಖನನದಲ್ಲಿ ದೊರೆತ ಪ್ರಾಚ್ಯಾವಶೇಷಗಳು.

೮. ಮಹಾನವಮಿ ದಿಬ್ಬದ ಬಳಿಯ ಪುಷ್ಕರಣಿ

೯ .ಮಹಾನವಮಿ ದಿಬ್ಬದ ಹೊರ ನೋಟ.

೧೦.ವಿಠ್ಠಲ ದೇವಾಲಯದಲ್ಲಿರುವ ಸಂಗೀತ ಕಂಬಗಳು.

೧೧.ಹಂಪಿಯ ವಿರುಪಾಕ್ಷಬೀದಿಯ ಆಕ್ರಮ ಕಟ್ಟಡಗಳನ್ನು ತೆರವುಗೊಳಿಸುತ್ತಿರುವ ನೋಟ.

೧೨.ಹಜಾರರಾಮ ದೇವಾಲಯದ ಭಿತ್ತಿಯ ಮೇಲಿನ ಪೌರಾಣಿಕ ಶಿಲ್ಪಗಳು.

೧೩.ವಿಠ್ಠಲ ದೇವಾಲಯದ ಹಿಂಬದಿಯಲ್ಲಿರುವ ವಿಷ್ಣು ದೇವಸ್ಥಾನದ ಕಂಬದ ಮೇಲಿರುವ ಮಿಥುನ ಶಿಲ್ಪಗಳು.

೧೪.ಭೀಮನ ದ್ವಾರದಲ್ಲಿರುವ ಭೀಮನ ವಿಗ್ರಹ.

೧೫.ಹಂಪಿ ವಿರುಪಾಕ್ಷ ದೇವಾಲಯದಲ್ಲಿರುವ ಕನ್ನಡಿಗರ ಅಧಿದೈವ ಭುವನೇಶ್ವರಿ ದೇವಿ.

೧೬.ಚಕ್ರತೀರ್ಥದ ಬಳಿಯ ನದಿ ದಂಡೆಯ ಮೇಲೆ ಧಾರ್ಮಿಕ ವಿಧಿ ನಡೆಸುತ್ತಿರುವ ಜಾನಪದ ದೈವಗಳು.

೧೭. ನದಿ ದಾಟಲು ಬಳಸುವ ಪಾರಂಪರಿಕ ಹರಿಗೋಲು.

೧೮. ಪ್ರಸಕ್ತ ಹಂಪಿಯಲ್ಲಿ ಬಳಸುತ್ತಿರುವ ಬ್ಯಾಟರಿ ಚಾಲಿತ ವಾಹನಗಳು.

೧೯. ಕೀಲುಕುದುರೆಯ ಜಾನಪದ ದೃಶ್ಯ.

೨೦. ಕನ್ನಡ ವಿಶ್ವವಿದ್ಯಾಲಯದ ಅಕ್ಷರ ಗ್ರಂಥಾಲಯದ ಕಟ್ಟಡ.

೨೧. ಕಮಲಾಪುರ ಮ್ಯೂಸಿಯಂನಲ್ಲಿರುವ ಹಂಪಿಯ ಮಾಡೆಲ್.

೪. ದೇಶಿ-ವಿದೇಶಿಯರ ಛಾಯಾಚಿತ್ರಗಳಲ್ಲಿ ನಿರೂಪಿತವಾಗಿರುವ ಹಂಪಿ

ಅಧ್ಯಾಯ ಒಂದು

೧.೧. ಅಧ್ಯಯನ ಉದ್ದೇಶ

೧.೨. ಅಧ್ಯಯನದ ಮಹತ್ವ

೧.೩. ಅಧ್ಯಯನದ ಪರಿಭಾಷೆಗಳ ತಾತ್ವಿಕ ಚರ್ಚೆ

೧.೪. ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

೧.೫. ಅಧ್ಯಯನದ ವ್ಯಾಪ್ತಿ

೧.೬. ಅಧ್ಯಯನದ ವಿಧಾನ

೧.೭. ಅಧ್ಯಯನದ ಸ್ವರೂಪ

ಅಧ್ಯಾಯ ಒಂದು

ಪ್ರಸ್ತಾವನೆ

ವಿಶ್ವ ಪರಂಪರೆಯ ಖ್ಯಾತಿ ಹೊಂದಿರುವ 'ಹಂಪಿ' ಹಲವು ಪ್ರಸಿದ್ಧ ಪ್ರವಾಸಿ ತಾಣಗಳಲ್ಲಿ ಒಂದು. ಇದು ದಕ್ಷಿಣ ಭಾರತದ ಪ್ರಸಿದ್ಧ ಯಾತ್ರಾ ಕ್ಷೇತ್ರವೂ ಆಗಿದೆ. ಇದನ್ನು 'ಪಂಪಾತೀರ್ಥ', 'ಹಂಪಾತೀರ್ಥ', 'ವಿರುಪಾಕ್ಷತೀರ್ಥ', 'ದಕ್ಷಿಣಕಾಶಿ', 'ಹೊಸಪಟ್ಟಣ' ಹಾಗೂ 'ವಿಜಯನಗರ' ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಹಂಪಿಯು ೧೪ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಟರಿಗೆ ಈ ಕ್ಷೇತ್ರ ರಾಜಧಾನಿಯಾಯಿತು. ಇದರಿಂದ ಹಂಪಿ ಇಡೀ ಭಾರತದಲ್ಲಿ ಹೆಸರುವಾಸಿಯಾಯಿತು. ಇದು ಅಂದಿನ ಮುಖ್ಯ ಆಡಳಿತದ ಕೇಂದ್ರವಾಗಿತ್ತು. ರಾಮಾಯಣ ಕಾಲದಿಂದಲೂ ಪ್ರಸಿದ್ಧವಾಗಿರುವ ಇದು ಹಲವು ತೆರನಾದ ವೈಶಿಷ್ಟ್ಯಗಳಿಗೆ ಹೆಸರುವಾಸಿಯಾಗಿದೆ. ಇತಿಹಾಸ ಪೂರ್ವ ಹಂಪಿಯಿಂದ ಹಿಡಿದು ಯುನೆಸ್ಕೋದ ವಿಶ್ವಪರಂಪರೆ ಹಂಪಿಯವರೆಗೆ ಹಂಪಿಯು ಭೂತ, ವರ್ತಮಾನ ಮತ್ತು ಭವಿಷತ್ ಕಾಲದವರೆಗೂ ಅಧ್ಯಯನಕ್ಕೆ ಒಳಗಾಗಿದೆ. ಒಳಗಾಗುತ್ತಿದೆ. ಪುರಾತತ್ವ, ಚರಿತ್ರೆ, ಶಾಸನ, ಜಾನಪದ, ಅಭಿವೃದ್ಧಿ ಹಾಗೂ ಅನ್ವೇಷಣೆಗೆ ಗುರಿಯಾಗುತ್ತಾ ಹಂಪಿಯು ಇನ್ನೂ ಅಧ್ಯಯನಕಾರರಿಗೆ ಅಧ್ಯಯನದ ವಸ್ತುವಾಗಿ ಪರಿಣಮಿಸಿದೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿರುವ ಇದು ಉತ್ತರ ಅಕ್ಷಾಂಶ ೧೫.೧೮.೫೦ ರಿಂದ ೧೫.೨೧೦ ಡಿಗ್ರಿಯವರೆಗೆ ಮತ್ತು ಪೂರ್ವ ರೇಖಾಂಶ ೭೮.೨೭.೫೦ರಿಂದ ೭೮.೩೦೦ ಡಿಗ್ರಿಯಲ್ಲಿದೆ.

ಹಂಪಿ ಭಾರತದ ಚರಿತ್ರೆಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದಿದೆ. ಇದು ಪ್ರಾಗೈತಿಹಾಸಿಕ ಕಾಲದಲ್ಲಿ ಆದಿಮಾನವರ ನೆಲೆಯಾಗಿ, ರಾಮಾಯಣದ ಕಾಲದಲ್ಲಿ ಕಿಷ್ಕಿಂಧೆಯಾಗಿ, ಪುರಾಣಗಳ ಕಾಲದಲ್ಲಿ ಪುಣ್ಯಕ್ಷೇತ್ರವಾಗಿ, ಸಾಧು-ಸಂತರ ಸಾಧನ ಕೇಂದ್ರವಾಗಿ, ದಾಸ ಸಾಹಿತ್ಯದ ನೆಲೆಬೀಡಾಗಿ, ಶಕ್ತಿ ಸಾಮರ್ಥ್ಯದ ಕೇಂದ್ರ ಸ್ಥಾನವಾಗಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ದಕ್ಷಿಣ ಭಾರತದಲ್ಲಿ ತನ್ನ ಹಿರಿಮೆಯನ್ನು ಹೆಚ್ಚಿಸಿಕೊಂಡಿದೆ. ಹಂಪಿ ಕರ್ನಾಟಕ ಚರಿತ್ರೆಯ ಅಧ್ಯಯನ ಮತ್ತು ಸಂಶೋಧನೆಯಲ್ಲಿ ಮಹತ್ವದ ಸ್ಥಾನ ಪಡೆದಿದೆ. ಹಂಪಿಯು ಪ್ರಾಗೈತಿಹಾಸಿಕ ಕಾಲದಿಂದಲೂ ಮಾನವನ ಚಟುವಟಿಕೆಯ ಕೇಂದ್ರವಾಗಿರುವುದು ಗಮನಾರ್ಹ. ಹಂಪಿ ಪರಿಸರದಲ್ಲಿ ಶಿಲಾಯುಗ ಕಾಲದ ಅವಶೇಷಗಳು, ಗವಿವರ್ಣಚಿತ್ರಗಳು ಹೆಚ್ಚಾಗಿ ಕಂಡುಬರುತ್ತವೆ. ಆದಿ ಚಾರಿತ್ರಿಕ ಕಾಲದಲ್ಲೂ ಹಂಪಿ, ದೇಶ ವಿದೇಶಗಳ ಗಮನಸೆಳೆದ

ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತೆಂದು ಸಂಶೋಧಕರು ಗುರುತಿಸಿದ್ದಾರೆ. ನಂತರದ ಶತಮಾನಗಳಲ್ಲಿ ಹಂಪಿ, ಧಾರ್ಮಿಕ ಕ್ಷೇತ್ರವಾಗಿ ಪಾವಿತ್ರ್ಯವನ್ನು ಪಡೆಯಿತು.

ಹಂಪಿ ಕುರಿತು ಪರಿಸರದ ಸ್ಥಳ ಪುರಾಣಗಳಲ್ಲಿ ನದಿ, ಬೆಟ್ಟ, ಋಷಿಗಳ ಉಲ್ಲೇಖಗಳಿವೆ. 'ಸ್ಕಂದ ಪುರಾಣ'ದಲ್ಲಿ 'ಪಂಪಾಮಹಾತ್ಮೆ'ಯ ವರ್ಣನೆ ಇದೆ. ಪಂಪಾಮಹಾತ್ಮೆಯಲ್ಲಿ ಹಂಪಿಯ ಪರಿಸರ ಹಾಗೂ ಕ್ಷೇತ್ರ ಮಹಿಮೆಯ ವರ್ಣನೆಯನ್ನು ಸಾಂಗವಾಗಿ ಚಿತ್ರಿಸಲಾಗಿದೆ. ಬ್ರಹ್ಮನ ಮಗಳಾದ ಪಂಪಾದೇವಿ ಶಿವನನ್ನು ಮದುವೆಯಾಗಲು ಹೇಮಕೂಟದ ಉತ್ತರಕ್ಕಿರುವ ಅರ್ಧಕೋಶ ದೂರದಲ್ಲಿರುವ 'ವಿಪ್ರಕೂಟ'ವೆಂಬ ಪರ್ವತ ಬಳಿಯ ಸರೋವರದ (ಪಂಪಾ ಸರೋವರ) ದಡದಲ್ಲಿ ಉಗ್ರವಾದ ತಪಸ್ಸನ್ನು ಆಚರಿಸುತ್ತಾಳೆ. ಅವಳ ತಪಸ್ಸಿಗೆ ಮೆಚ್ಚಿದ ಶಿವ ಅವಳ ಇಚ್ಛೆಯಂತೆ ವಿವಾಹವಾಗಿ ಪಂಪಾಪತಿ ಎನಿಸಿಕೊಳ್ಳುತ್ತಾನೆ. ಈ ಸ್ಥಳವನ್ನು 'ಪಂಪಾಕ್ಷೇತ್ರ'ವೆಂದು ಕರೆದನು. ಅವಳು ತಪಸ್ಸು ಮಾಡಿದ ಸರೋವರವನ್ನು 'ಪಂಪಾ ಸರೋವರ'ವೆಂದು ಖ್ಯಾತಿಯಾಗಲೆಂದು ವರ ಕೊಡುತ್ತಾನೆ. ನಂತರ ಇದು 'ಪಂಪಾದೇವೆ', 'ಪಂಪಾಪತಿ', 'ಪಂಪಾಕ್ಷೇತ್ರ', 'ಪಂಪಾಪುರ'ವೆಂಬ ಮೊದಲಾದ ಹೆಸರಿನಿಂದ ಪ್ರಖ್ಯಾತಿಯಾಯಿತು.

ಈ ಕ್ಷೇತ್ರದಲ್ಲಿ ಮೂರು ಕೋಟಿ ತೀರ್ಥಗಳಿದ್ದು, ಕಾಶಿಗಂಗೆಗೆ ಸಮಾನವೆನಿಸಿದ ತುಂಗಭದ್ರಾ ಎಂಬ ಪುಣ್ಯ ನದಿ ಹರಿಯುತ್ತದೆ. ಋಷಿಗಳ ಪೂರ್ವಾಶ್ರಮಗಳು ವಿರಾಜಿಸುತ್ತಿವೆ. ಇದು ಶಂಭುವಿನ ತಪೋಭೂಮಿಯೂ ಹೌದು. ಪಂಪಾಪತಿ, ಕಿನ್ನರೇಶ್ವರ, ಜಾಂಬವಂತೇಶ್ವರ, ಸೋಮನಾಥ, ಮಣಿಭದ್ರೇಶ್ವರ, ಈ ಪಂಚಲಿಂಗಗಳು ಭಕ್ತರಿಗೆ ಮುಕ್ತಿಗೊಳಿಸುವಂಥ ಸದಾಶಿವನ ಪಂಚಮುಖವಾಗಿ ಅವಿರ್ಭವಿಸಿ ಚಂದ್ರಾರ್ಕಾಗ್ನಿ ಕೋಟಿ ಪ್ರಕಾಶಗಳಿಂದ ಕಂಗೊಳಿಸುತ್ತದೆ. ಹೀಗೆ ಪೌರಾಣಿಕ ಶ್ರೇಷ್ಠತೆಯನ್ನು ಪಡೆದ ಈ ಕ್ಷೇತ್ರ ಧಾರ್ಮಿಕ, ಸಾಮಾಜಿಕವಾಗಿ ಮಹತ್ವ ಪಡೆಯುತ್ತ ರಾಜಕೀಯ ಚಟುವಟಿಕೆಗಳಿಗೆ ಎಡೆಮಾಡಿಕೊಟ್ಟಿತು. ವಿಜಯನಗರದರಸರ ಪೂರ್ವದಲ್ಲಿ ಅನೇಕ ಅರಸರು 'ಪಂಪಾತೀರ್ಥ' ಇಲ್ಲವೆ 'ವಿರೂಪಾಕ್ಷನ ಸನ್ನಿಧಿ'ಗೆ ಮತ್ತು ಈ ಪರಿಸರದ ಸುತ್ತಮುತ್ತಲಿನ ಸ್ಥಳೀಯ ದೇವಾಲಯಗಳಿಗೆ ಸ್ವತಃ ಬಂದು ದಾನದತ್ತಿಗಳನ್ನು ಕೊಡಲಾಗಿದೆ. ಇದರಿಂದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇದೊಂದು 'ಪವಿತ್ರ ಕ್ಷೇತ್ರ'ವೆಂದು ಜನಮಾನಸದಲ್ಲಿ ಆಳವಾಗಿ ಬೇರೂರಿತ್ತು.

ಹಂಪಿಯಲ್ಲಿ ಶಿಲಾಯುಗದ ಸಂಸ್ಕೃತಿ ಇತ್ತು ಎಂದು ತಿಳಿಯಲು ಪೂರ್ವ ಇತಿಹಾಸವನ್ನು ಗಣನೆಗೆ ತೆಗೆದುಕೊಳ್ಳುವುದು ಮುಖ್ಯವಾಗಿದೆ. ಹಂಪೆಯಲ್ಲಿ ವಿಜಯನಗರದ ಅರಸರ ಸಾಮ್ರಾಜ್ಯದ ಆಡಳಿತ ಕಾಲದಲ್ಲಿ (ಕ್ರಿ.ಶ.೧೩೩೬ ರಿಂದ ೧೫೬೫ರ ವರೆಗೆ) ಹಂಪೆಯನ್ನು ಬಳಸಿಕೊಂಡಿದ್ದ ವಿಜಯನಗರ ರಾಜಧಾನಿಯು ತೋರಿದ ಸರ್ವತೋಮುಖ ಅಭಿವೃದ್ಧಿ, ವೈಭವಗಳ ಪರಾಕಾಷ್ಠೆಯ ಪ್ರತಿಭೆಯಲ್ಲಿ ಅದಕ್ಕಿಂತಲೂ ಪೂರ್ವ ಇತಿಹಾಸವು ಅಷ್ಟೊಂದು ಗಣನೆಗೆ ಬಾರದ ಮರೆಯಾಗಿ ಹೋಗಿದೆ. ಆದ್ದರಿಂದ ಹಂಪೆಯ ಪೂರ್ವ ಇತಿಹಾಸವನ್ನು ಪರಿಗಣನೆಗೆ ತೆಗೆದುಕೊಳ್ಳುವುದು ಸೂಕ್ತವಾಗಿದೆ. ಹಂಪೆ ಕ್ರಿ.ಶ.೨ನೇ ಶತಮಾನದಿಂದಲೇ ಜನವಸತಿಯನ್ನು ಹೊಂದಿದ್ದು, ಒಂದು

ಮುಖ್ಯ ಧಾರ್ಮಿಕ ಕೇಂದ್ರವಾಗಿತ್ತು. ತದ ನಂತರ ಕದಂಬರ, ಬಾದಾಮಿಯ ಚಾಲುಕ್ಯರ, ಕಲ್ಯಾಣಿಯ ಚಾಲುಕ್ಯರ ಮತ್ತು ದ್ವಾರಸಮುದ್ರದ ಹೊಯ್ಸಳ ಅರಸರುಗಳ ಕಾಲದಲ್ಲಿಯೂ ಸಹ ತನ್ನದೇ ಆದ ಸಕ್ರಿಯಾತ್ಮಕ ಪಾತ್ರವನ್ನು ನಿರ್ವಹಿಸಿದೆ.

ವಿರುಪಾಕ್ಷಸ್ತು ವಿಶ್ವೇಶ್ವರಃ ತುಂಗಾಭದ್ರಾ ತುಜಾಹ್ನವಿಃ । ಪಂಪಾ ಕಾಶೀ ಸಮಾ ದಿವ್ಯಾಭುಕ್ತಿ ಮುಕ್ತಿ ಪ್ರದಾಯಿನೀ॥ (ವಿರೂಪಾಕ್ಷನೇ ವಿಶ್ವೇಶ್ವರನು, ತುಂಗಭದ್ರೆಯೇ ಗಂಗೆ, ಪಂಪಾಕ್ಷೇತ್ರವೇ ಕಾಶಿ, ಇದು ಭಕ್ತಿ ಮುಕ್ತಿಗಳನ್ನು ಕೊಡುವಂತದ್ದು,) ಅಂದಿನಿಂದ ಈ ಕ್ಷೇತ್ರ 'ದಕ್ಷಿಣಕಾಶಿ'ಯೆಂದು ಹೆಸರಾಗಿದೆ.

ಹೇಮಕೂಟದ ಎದುರಿನ ಪರ್ವತಕ್ಕೆ ಮಾತಂಗ ಪರ್ವತವೆಂದು ಹೆಸರು. ಇದು ಮತಂಗ ಋಷಿಯ ಸ್ಮಾರಕವಾಗಿ ನಿಂತಿದೆ. ಇಲ್ಲಿ ಮತಂಗ ಋಷಿ ಉಗ್ರತಪಸ್ಸನ್ನಾಚರಿಸಿ ಶಿವನನ್ನು ಒಲಿಸಿಕೊಂಡನು. ಪ್ರತ್ಯಕ್ಷನಾದ ಶಿವನನ್ನು ನಿನ್ನಂತಹ ಒಬ್ಬ ಮಗನನ್ನು ದಯಪಾಲಿಸೆಂದು ಕೇಳಿಕೊಂಡನು. ಅದಕ್ಕೆ ಶಿವನು 'ನಿನಗೆ ಮೂಢನಾದ ಒಬ್ಬ ಮಗ ಹುಟ್ಟುತ್ತಾನೆ' ಎಂದನು. ಆಗ ಮತಂಗನು ಹಾಗಾದರೆ ಪಾರ್ವತಿಯ ಅಂಶದಿಂದ ಅಪೂರ್ವ ಸುಂದರಳಾದ ಒಬ್ಬ ಮಗಳು ನನಗೆ ಹುಟ್ಟಲಿ ಮತ್ತು ಅವಳಿಗೆ ನೀನೇ ಪತಿಯಾಗಬೇಕೆಂದು ಕೇಳಿಕೊಂಡನಂತೆ. ಇದಕ್ಕೆ ಶಿವನು ಒಪ್ಪಿ ವರ ನೀಡಿ ಹೋದನು. ನಂತರ ಮಾತಂಗನಿಗೆ ಮಾತಂಗಿ ಎನ್ನುವ ಮಗಳು ಹುಟ್ಟಿದಳು. ಅವಳು ಯೌವನಕ್ಕೆ ಬಂದಾಗ ಶಿವನು ಕನ್ನೇಶ್ವರನೆಂಬ ಹೆಸರಿನಿಂದ ಬಂದು ಅವಳನ್ನು ವರಿಸಿದನು. ಹೀಗೆ ಹಂಪೆಯ ಬಗ್ಗೆ ಅನೇಕ ಸಂಗತಿಗಳು ಪುರಾಣಗಳಲ್ಲಿ ನಮಗೆ ಮಾಹಿತಿ ನೀಡುತ್ತವೆ. ವಿಜಯನಗರ ಹೆಸರಿನ ಮೂಲ ಬಗ್ಗೆ ಚರ್ಚಿಸಿದಾಗ ಹಂಪಿಯು ಪ್ರಾಚೀನ ಕಾಲದ ಪಟ್ಟಣವಾಗಿದ್ದು, ಇದನ್ನು ಹೊಯ್ಸಳರು ಮೊದಲು ನಿರ್ಮಿಸಿದ್ದರು. ಹಂಪಿಯ ದೇವಾಲಯಗಳ ಪುಣ್ಯ ಕ್ಷೇತ್ರವಾಗಿ ವಿಜಯನಗರ ಕಾಲದ ಪೂರ್ವದಿಂದಲೂ ಬೆಳೆದು ಬಂದಿದೆ. ಹೊಯ್ಸಳರ ಹಿಂದೆಯೆ ಹಂಪಿಯನ್ನು ದ್ವಿತೀಯ ರಾಜವಾಸ ಗೃಹ ಅಥವಾ ರಾಜಶಿಬಿರಕ್ಕಾಗಿ ಈ ಸ್ಥಳವನ್ನು ಆಯ್ಕೆ ಮಾಡಿದ್ದರು. ಈ ಮನೆತನದ ವಿನಯಾದಿತ್ಯ ಪಂಪಾತೀರ್ಥ(ಹಂಪಿ)ದಲ್ಲಿ ಸೇನಾಶಿಬಿರವನ್ನು ಕೈಗೊಂಡಿದ್ದವೆಂಬ ಉಲ್ಲೇಖ ೭ನೇ ಶತಮಾನದ ಒಂದು ಶಾಸನ ತಿಳಿಸುತ್ತದೆ. ಹಂಪಿಯು ವಿರೂಪಾಕ್ಷ ಮತ್ತು ಪಂಪಾದೇವಿ, ಬ್ರಹ್ಮೇಶ, ರಾಚಮಲ್ಲೇಶ ಮೊದಲಾದ ದೇವತೆಗಳ ಪೂಜೆಗಳಿಗೆ ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿ ಪಡೆದಿದೆ. ಹಂಪಿಯು ೧೩ನೇ ಶತಮಾನದ ವೇಳೆಗಾಗಲೇ ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತು. ಆದರೆ ೧೪ನೇ ಶತಮಾನದಲ್ಲಿ ಕುಮ್ಮಟದ ದೊರೆ ಮುಮ್ಮಡಿ ಸಿಂಗೆಯನಾಯಕ ಹೇಮಕೂಟ ದೇವಾಲಯ ಕಟ್ಟಿಸಿದ ಶಾಸನ ತಿಳಿಸುತ್ತದೆ. ಆದರೆ ಹೊಯ್ಸಳರಿಗೂ ಮತ್ತು ಕುಮ್ಮಟದ ದೊರೆಗಳು ಪರಸ್ಪರ ವೈರಿಗಳಾಗಿದ್ದರು. ಹೊಯ್ಸಳ ದೊರೆ ಮುಮ್ಮಡಿ ಬಲ್ಲಾಳ ಕ್ರಿ.ಶ. ೧೩೭೫ ರಲ್ಲಿ ಕುಮ್ಮಟ ರಾಜ್ಯದೊಂದಿಗೆ ನಿರ್ಣಾಯಕ ಯುದ್ಧ ಮಾಡಿ ಹಂಪಿ ಪ್ರದೇಶವನ್ನು ವಶಪಡಿಸಿಕೊಂಡನು.

ಹಾಸನ ತಾಲೂಕಿನ ಕೆನ್ನಗಾಲದ ಕ್ರಿ.ಶ. ೧೩೫೬ರ ಶಾಸನವೊಂದು ಬುಕ್ಕರಾಯನು ಆಳುತ್ತಿದ್ದ ರಾಜಧಾನಿಯನ್ನು ಮೊಟ್ಟ ಮೊದಲಿಗೆ 'ವಿಜಯನಗರ'ವೆಂಬ ಉಲ್ಲೇಖವಿದೆ. (ಎಂ.ಎ.ಆರ್. ಅನ್ಯುಯಲ್ ರಿಪೋರ್ಟ್ ಆಫ್ ಮೈಸೂರು ಆರ್ಕಿಯಾಲಜಿಕಲ್ ಡಿಪಾರ್ಟ್‌ಮೆಂಟ್) ೧೯೨೮, ಶಾಸನ ಸಂ.೩೪, ಮತ್ತು ನಂ.೪೯) ೧೩೫೬-೫೭ರ ಮುಂಚೆಯೇ ಹೊಸಪಟ್ಟಣದಿಂದ 'ವಿಜಯನಗರ'ವೆಂದು ಬದಲಾಗಿತ್ತು. ಆದರೆ ಕ್ರಿ.ಶ.೧೩೬೮ರ ನಂತರ ಹೊಸಪಟ್ಟಣದ ಹೆಸರು ಶಾಸನಗಳಲ್ಲಿ ಕಡಿಮೆಯಾಗಿ ಬಳಕೆಯಲ್ಲಿದ್ದ ವಿಜಯನಗರ ಹೆಸರೇ ಹೆಚ್ಚಾಗಿ ಕಂಡುಬರುತ್ತದೆ. ಈ ರೀತಿ ವಿಜಯನಗರ ಎಂಬ ಹೆಸರು ಸಂಗಮರ ಆಳ್ವಿಕೆಯಲ್ಲಿ ಕಂಡುಬಂದಿದ್ದು, ಈ ಹೊಸಪಟ್ಟಣದ ಬದಲಿಗೆ ವಿಜಯನಗರವೆಂದು ಪ್ರಸಿದ್ಧಿ ಪಡೆಯಿತು. ಹೀಗೆ ವಿಜಯನಗರವು ಹಲವು ಆಯಾಮಗಳನ್ನು ಪಡೆದುಕೊಂಡು ಸಂಶೋಧನೆಗೆ ಅವಕಾಶ ಮಾಡಿಕೊಟ್ಟಿದೆ. ಇದರ ಹಲವು ಹರವುಗಳನ್ನು ಕಥನದ ಮೂಲಕ ದೇಶಿ ವಿದೇಶಿಯರು ನಮಗೆ ಬಿಟ್ಟುಕೊಟ್ಟು ಹೋಗಿದ್ದಾರೆ. ಅದರ ಭಿನ್ನತೆಯನ್ನು ಇಲ್ಲಿ ಚರ್ಚಿಸಲಾಗಿದೆ.

ವಿಜಯನಗರ ಸಾಮ್ರಾಜ್ಯಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರು ಸಮಕಾಲೀನ ಇತಿಹಾಸಕಾರರು ವಿಜಯನಗರವನ್ನು ವಿವಿಧ ಹೆಸರುಗಳಿಂದ ಕರೆದಿದ್ದಾರೆ. ಕ್ರಿ.ಶ.೧೪೯೩ರಲ್ಲಿ ಪೋರ್ಚುಗೀಸರು ಗೋವಾದಲ್ಲಿ ಬಂದು ಇಳಿದಾಗ ನರಸಿಂಹ ರಾಜ್ಯವನ್ನು ಆಳುತ್ತಿದ್ದನು. ಆ ರಾಜನ ಹೆಸರನ್ನು ಆಧರಿಸಿ ನರಸಿಂಗ ಸಾಮ್ರಾಜ್ಯವೆಂತಲೂ, ರಾಜಧಾನಿಯನ್ನು 'ಬಿಸ್ನಗ' ಎಂದು ಕರೆಯುತ್ತಿದ್ದರು. ಫರಿಸ್ತಾನ ಉಲ್ಲೇಖದಲ್ಲಿ ಹೊಸಪಟ್ಟಣವನ್ನು 'ಬೀಜೆನಗರ್' ಎಂದು ಕರೆದನು.

ರಾಮಾಯಣದಲ್ಲಿ ಬರುವ ವಾಲಿಸುಗ್ರೀವರ ನಾಡು ಕಿಷ್ಕಿಂದೆ, ಇಂದಿನ ಹಂಪೆ ಮತ್ತು ಆನೆಗುಂದಿಗಳ ನಡುವಿನ ಪ್ರದೇಶವಾಗಿತ್ತೆಂದು ಹೇಳಲಾಗುತ್ತಿದೆ. ಚಕ್ರತೀರ್ಥದಿಂದ ಪುರಂದರದಾಸರ ಮಂಟಪದ ಕಡೆಗೆ ಹೋಗುವಾಗ ದಾರಿಯಲ್ಲಿ ಒಂದು ಗುಹೆ ಇದೆ. ಈ ಗುಹೆಯ ಮುಂದಿನ ಹಾಸುಗಲ್ಲಿನ ಮೇಲೆ ಬಿಳಿ ಪಟ್ಟೆಯೊಂದು ಮೂಡಿದೆ. ಈ ಪಟ್ಟೆಗೆ ಸೀತೆಯ ಸೆರಗೆಂದು ಹೇಳುತ್ತಾರೆ. ಗುಹೆಯಲ್ಲಿದ್ದ ಸೀತೆಯನ್ನು ರಾವಣನು ಅಪಹರಿಸಿಕೊಂಡು ಹೋಗುವಾಗ ಅವಳ ಸೆರಗು ಕೆಳಗೆ ಎಳೆಯುತ್ತ ಹೋಯಿತು ಹಾಗೆ ಎಳೆದಲ್ಲಿ ಹೀಗೆ ಪಟ್ಟೆ ಮೂಡಿದೆಯಂತೆ ಎಂದು ಐತಿಹ್ಯಗಳಿವೆ. ಇದರ ಪಕ್ಕದಲ್ಲಿ ಒಂದು ಸಣ್ಣ ಕೊಳ ಇದೆ. ಇದು ಸರೋವರ ಆನೆಗುಂದಿ ಸಮೀಪದಲ್ಲಿರುವ 'ವಾಲಿ ಭಂಡಾರ', 'ಮಧುವನ', 'ಅಂಜನಾದ್ರಿ ಪರ್ವತ' ಮುಂತಾದವುಗಳಿಂದಾಗಿ ಈ ಪ್ರದೇಶವು ರಾಮಾಯಣದೊಂದಿಗೆ ಸಂಪರ್ಕ ಪಡೆದಿದೆ. ಇಂತಹ ಐತಿಹ್ಯಗಳು ಮತ್ತು ನಂಬಿಕೆಗಳು ಈ ಅಧ್ಯಯನಕ್ಕೆ ಪೂರಕವಾಗಿವೆ.

ತುಂಗಭದ್ರೆಯ ದಕ್ಷಿಣ ತೀರದಲ್ಲಿರುವ ಪುರಾತನ ಪಂಪಾ ಕ್ಷೇತ್ರವೇ ಹಂಪಿ. ಪಂಪ ಎಂಬ ಪದವೇ ಹಂಪ-ಹಂಪಿ ಎಂದು ಪರಿವರ್ತನೆಯಾಗಿದೆ. ಮಧ್ಯಯುಗದಲ್ಲಿ ಈ ಕ್ಷೇತ್ರವು 'ಭಾಸ್ಕರ ಕ್ಷೇತ್ರ', 'ಪಂಪಾತೀರ್ಥ' ಹಾಗೂ 'ಪಂಪಾ' ಮುಂತಾದ ಹೆಸರುಗಳಿಂದ ಪ್ರಸಿದ್ಧವಾಗಿತ್ತು.

ಶಿಲಾಶಾಸನಗಳಲ್ಲಿ ತಾಮ್ರ ಶಾಸನಗಳಲ್ಲಿ ಮತ್ತು ಸಾಹಿತ್ಯದಲ್ಲಿ ಹಂಪಿಯ ಹೆಸರು ಅಸಂಖ್ಯಾತ ಪ್ರಸ್ತಾಪ ಕಂಡಿದೆ. ಹಂಪಿಗೆ ಹೇಮಕೂಟವೇ ಕೋಟೆ, ತುಂಗಭದ್ರೆಯೇ ಕೊತ್ತಲ. ತಂದೆ ವಿರೂಪಾಕ್ಷನೇ ರಕ್ಷಕ, ರಾಯರರಾಮ ಮಹಾರಾಯ ಹರಿಹರನೇ ಚಕ್ರವರ್ತಿಯೆಂದು ಬಣ್ಣಿಸಲಾಗಿದೆ. ೧೨ನೆಯ ಶತಮಾನದ ವೇಳೆಗೆ ಕರ್ನಾಟಕದಲ್ಲಿಯೇ ಪ್ರಮುಖ ಧಾರ್ಮಿಕ ಕೇಂದ್ರವಾಗಿದ್ದ ಹಂಪಿ, ಅದರ ಅಧಿಪತಿ ವಿರೂಪಾಕ್ಷನೆಂದು ಕವಿವರ್ಯರಿಂದಲೂ ಸ್ತುತಿಸಲ್ಪಟ್ಟಿದೆ. ಕನ್ನಡದ ಸುಪ್ರಸಿದ್ಧ ಕವಿಗಳಾದ ಹರಿಹರ ಮತ್ತು ರಾಘವಾಂಕರು ಅನೇಕ ಕೃತಿಗಳನ್ನು ರಚಿಸಿದರು. ಆ ಕೃತಿಗಳಲ್ಲಿ ಹರಿಹರನ ಮಹಾಕಾವ್ಯ 'ಗಿರಿಜಾಕಲ್ಯಾಣ' ಒಂದು. ಇದರಲ್ಲಿ ಶಿವ ಮತ್ತು ಪಾರ್ವತಿಯರ ಮದುವೆ ವಸ್ತುವಿದೆ. ಅದು ಪಂಪಾ ವಿರೂಪಾಕ್ಷನನ್ನು ವಂದಿಸುವ ಮೂಲಕ ಪ್ರಾರಂಭವಾಗಿ ಪುನಃ ಅದೇ ವಂದನೆಗಳೊಂದಿಗೆ ಮುಕ್ತಾಯವಾಗುತ್ತದೆ. ಈ ಕೃತಿಯ ಅನೇಕ ಪದ್ಯಗಳಲ್ಲಿ ವಿರೂಪಾಕ್ಷನನ್ನು ಹಂಪಿಯಾಳ್ದ ಇಲ್ಲವೆ ಹಂಪಿಯರಸನೆಂದು ಹೇಳಲಾಗಿದೆ. ಈತನ ಇನ್ನೊಂದು ಕೃತಿ 'ರಕ್ಷಾಶತಕ'. ಇದರಲ್ಲಿ ಪ್ರತಿ ಪದ್ಯವೂ "ಪಂಪಾಪುರದ ವಿರೂಪಾಕ್ಷ ರಕ್ಷಿಪುದೆನಂದು" ಎಂದು ಮುಕ್ತಾಯವಾಗುತ್ತದೆ. ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದ ಆರಂಭದಲ್ಲಿ ಪಂಪಾವಿರೂಪಾಕ್ಷರ ಸ್ತುತಿಯಿದೆ.

ಹಂಪೆಯ ಹೆಸರು ಸಾವಿರಾರು ವರ್ಷಗಳ ಹಿಂದಿನ ಶಾಸನಗಳಲ್ಲಿ ದೊರೆಯುತ್ತದೆ. ಪಲ್ಲವರ ಮಹಾರಾಣಿಯೊಬ್ಬಳು ಪಂಪಾಪತಿಗೆ ಭೂದಾನ ನೀಡಿದ ವಿಷಯ ಕ್ರಿ.ಶ.೧೦೧೩ರ ಗೋಣಿಹಾಳು ಶಾಸನದಲ್ಲಿದೆ. ವಿರೂಪಾಕ್ಷ ದೇವಾಲಯದಲ್ಲಿರುವ ಒಂದು ಶಾಸನವು ವಿರೂಪಾಕ್ಷ ಮತ್ತು ಪಂಪಾದೇವಿಯರಿಗೆ ದಾನ ನೀಡಿದ ಸಂಗತಿಯನ್ನು ತಿಳಿಸುತ್ತದೆ. ವಿರೂಪಾಕ್ಷ ದೇವಾಲಯದ ಉತ್ತರ ದಿಕ್ಕಿನ ಗೋಪುರದಲ್ಲಿರುವ ಶಾಸನವು ಕ್ರಿ.ಶ.೧೨೩೭ರ ಹೊಯ್ಸಳ ಸೋಮೇಶ್ವರನು ವಿರೂಪಾಕ್ಷನಿಗೆ ದಾನ ನೀಡಿದ್ದನ್ನು ಹೇಳುತ್ತದೆ. ಹಂಪೆಯು ಕಂಪಿಲದೇವ ಹೊಯ್ಸಳರು, ಕಲ್ಯಾಣ ಚಾಲುಕ್ಯರು ಮುಂತಾದವರ ಆಡಳಿತಕ್ಕೆ ಒಳಪಟ್ಟಿದ್ದನ್ನು ಇತಿಹಾಸ ತಿಳಿಸುತ್ತದೆ. ವಿರೂಪಾಕ್ಷನ ನಿಷ್ಠಾವಂತ ಭಕ್ತರಾದ ಹರಿಹರ ರಾಘವಾಂಕರು ಹಂಪೆಯಲ್ಲಿ ವಾಸವಾಗಿದ್ದರು. ಅವರು ತಮ್ಮ ಕಾವ್ಯ, ಕೃತಿಗಳಲ್ಲಿ ಹಂಪಿ ರಚಿಸಿದ್ದಾರೆ. ಈ ಎಲ್ಲಾ ಅಂಶಗಳು ವಿಜಯನಗರದ ಸ್ಥಾಪನೆಯ ಪೂರ್ವದಲ್ಲಿಯೇ ಹಂಪೆ ಒಂದು ಸುಪ್ರಸಿದ್ಧ ಕ್ಷೇತ್ರವಾಗಿತ್ತು ಎಂಬುದನ್ನು ತಿಳಿಸುತ್ತದೆ.

ಬಾದಾಮಿಯ ಚಾಲುಕ್ಯ ದೊರೆ ವಿನಯಾದಿತ್ಯನ ಕಾಲದ ಕ್ರಿ.ಶ.೬೮೯ರ ತಾಮ್ರ ಶಾಸನವೊಂದು ಹಂಪಿಯನ್ನು 'ಪಂಪಾತೀರ್ಥ' ಎಂದು ಕರೆದಿರುವುದು ಕಾಣಬಹುದು. ಪ್ರಾಚೀನ ಕಾಲದಿಂದಲೂ ಹಂಪಿಯು ವಿದ್ಯಾ ಮತ್ತು ಧಾರ್ಮಿಕ ಕೇಂದ್ರವಾಗಿದೆ. ಕ್ರಿ.ಶ.೧೦೭೬ರ ದಾನ ಶಾಸನದ ಪ್ರಕಾರ ಮಹಾಪ್ರಧಾನ ದಂಡನಾಯಕ ಚಟ್ಟೋಪಾಧ್ಯಾಯನು ಪುರಾಣ ಪ್ರವಚನಕಾರರಿಗೆ ಸಲಿಯಾನಾ ೮೦ ಲೊಕ್ಕಿ ಗದ್ಯಾಣಗಳನ್ನು ನೀಡುತ್ತಿದ್ದನು. ಕ್ರಿ.ಶ.೧೧೬೩ರ ಶಾಸನದ ಪ್ರಕಾರ ಕಳಚೂರಿ ಅರಸರ ಬಿಜ್ಜಳನು ಶ್ರೀ ವಿರೂಪಾಕ್ಷನ ಸನ್ನಿಧಿಯಲ್ಲಿ ಮಹಾದಾನಗಳನ್ನು

ನೀಡುತ್ತಿದ್ದನು. ೧೧ನೇ ಶತಮಾನದ ಶಾಸನವೊಂದರಲ್ಲಿ ವಿರೂಪಾಕ್ಷನನ್ನು 'ಮಹಾಕಾಲ'ನೆಂದು ಕರೆಯಲಾಗಿದೆ. ಕೆಲವೆಡೆ 'ವಿಜಯ ವಿರೂಪಾಕ್ಷಪುರ'ವೆಂದು ಕರೆಯಲಾಗಿದೆ.

ವಿದೇಶದ ಪ್ರವಾಸಿಗರು ಮತ್ತು ಭಾರತ ದೇಶದ ಪ್ರವಾಸಿಗರು ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ಹಂಪಿಗೆ ಬಂದು ಹೋಗಿರುವುದುಂಟು. ಈ ಪ್ರದೇಶವು ತುಂಗಭದ್ರಾ ನದಿ ತಟದಲ್ಲಿ ಇದ್ದು, ಕ್ರಿ.ಶ. ೧೩೩೬ ರಿಂದ ೧೫೬೫ರ ವರೆಗೆ ಸುಮಾರು ೨೩೬ ವರ್ಷಗಳ ಕಾಲ ವಿಜಯನಗರ ಅರಸರ ರಾಜಧಾನಿಯಾಗಿ ತನ್ನ ಸ್ಥಳದ ಹಿನ್ನೆಲೆಯನ್ನು ಮತ್ತಷ್ಟು ಹೆಚ್ಚಿಸಿಕೊಂಡಿತ್ತು. ಹಂಪಿಯನ್ನು ಶಾಸನಗಳಲ್ಲಿ ಹಾಗೂ ಕಾವ್ಯಗಳಲ್ಲಿ ಅಲ್ಲದೆ ಜನಸಾಮಾನ್ಯರು 'ಪಂಪಾಕ್ಷೇತ್ರ', 'ಪಂಪಾತೀರ್ಥ', 'ಪಂಪಾತಟ', 'ಭಾಸ್ಕರ ಕ್ಷೇತ್ರ' ಹಾಗೂ 'ಹಂಪೆ' ಇವೆ ಮುಂತಾದ ಹೆಸರುಗಳಿಂದ ಕರೆಯಲಾಗಿದೆ.

ಈ ರೀತಿಯಾಗಿ ಗುರುತಿಸಿಕೊಂಡಿರುವ ಹಂಪಿಗೆ ಬಂದು ಹೋದ ಪ್ರವಾಸಿಗರು ಅನೇಕರು. ಅವರು ದೇಶಿಯ, ವಿದೇಶಿಯ ಅಥವಾ ಹಂಪಿ ಪರಿಸರದ ಕುರಿತು ಅಧ್ಯಯನ ಮಾಡಿದ ಅಧ್ಯಯನಕಾರರು, ಹವ್ಯಾಸಿ ಬರಹಗಾರರು. ಅವರು ಹಂಪಿಯನ್ನು ತಾವು ಗ್ರಹಿಸಿಕೊಂಡ ಪರಿಯಲ್ಲಿ ದಾಖಲಿಸಿರುವುದು ಕಂಡುಬರುತ್ತದೆ. ಅವರು ದಾಖಲಿಸಿರುವ ದಾಖಲೆಗಳು ಬಹುಮಹತ್ವದ ಚಾರಿತ್ರಿಕ ವಿವರಗಳನ್ನು ನೀಡುತ್ತವೆ. ಆ ವಿವರಗಳು ವಿಶಿಷ್ಟವಾಗಿ ಗೋಚರಿಸುತ್ತವೆ. ಇಂದಿನ ಚಾರಿತ್ರಿಕ ಮಾನದಂಡದಿಂದ ಅವುಗಳನ್ನು ನೋಡದೆ, ದೇಶಿ-ವಿದೇಶಿಗರ ಕಣ್ಣಲ್ಲಿ, ಮನಸ್ಸಿನಲ್ಲಿ ಕಾಣಿಸಿಕೊಂಡ ವಿವರಗಳ ಪರಿಪೇಕ್ಷ್ಯದಲ್ಲಿ ಪರಿಭಾವಿಸಿಕೊಳ್ಳಬೇಕಾಗುತ್ತದೆ. ಅವುಗಳು ಪ್ರತಿಯೊಬ್ಬ ಪ್ರವಾಸಿಗರ ಕಣ್ಣಲ್ಲಿ ಕಂಡುಕೊಂಡ, ರೂಪಿಸಿಕೊಂಡ ಚರಿತ್ರೆಯ ನಿರ್ಮಾಣದ ಸಂಗತಿಗಳೇ ಆಗಿವೆ.

ಹಂಪಿಯು ವಿಜಯನಗರದ ರಾಜಧಾನಿಯಾದಂದಿನಿಂದ ವಿಜಯನಗರಕ್ಕೆ ಅನೇಕ ಜನ ವಿದೇಶಿಯರು ಹಾಗೂ ದೇಶಿಯರು ಬಂದು ಹೋಗಿರುವರು. ಈ ಪ್ರವಾಸಿಗರ ಖಾಸಗಿ ದಿನಚರಿ ಮತ್ತು ಪ್ರವಾಸ ಕಥನಗಳು ಬಹುಮುಖ್ಯವೆಂಬುದನ್ನು ಕಳೆದ ಶತಮಾನದ ಚಾರಿತ್ರಿಕ ಅಧ್ಯಯನಕಾರರಿಂದ ತಿಳಿದುಬರುತ್ತದೆ. ಪ್ರವಾಸಿಗರ ಬರಹಗಳು, ಸ್ಥಳೀಯರ ದಾಖಲೆಗಳು ಅಧ್ಯಯನಕಾರರರಿಗೆ ಹೊಸ ಬಗೆಯ ಆಕರಗಳು ಆಗಿವೆ. ಈ ಬಗೆಯ ಬಹುಶಿಸ್ತೀಯ ಅಧ್ಯಯನದ ಮೂಲಕ ಪ್ರಾಗೈತಿಹಾಸಿಕ ಕಾಲದಿಂದ ಇಂದಿನವರೆಗೂ ಬಂದು ಹೋದ ದೇಶಿ-ವಿದೇಶಿಯರ ಬರಹಗಳು ಹಂಪಿಯ ಚರಿತ್ರೆಯನ್ನು ವಿವರಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಹಂಪಿ ಪರಿಸರ ಪ್ರಾಚೀನಕಾಲದಿಂದಲೂ ಉತ್ತಮ ಭೌಗೋಳಿಕ ಪರಿಸರ ಹೊಂದಿದೆ. ಇದರಿಂದಾಗಿ ಪ್ರಾಗೈತಿಹಾಸಿಕ ಮಾನವ ಹಂಪಿ ಪರಿಸರದ ವಿವಿಧ ನೆಲೆಗಳಲ್ಲಿ ಹಿಂದಿನಿಂದಲೂ ವಾಸಿಸುತ್ತಾ ಬಂದಿದ್ದಾನೆ. ಇಲ್ಲಿ ನೆಲೆಯೂರಿದ ಪ್ರಾಗೈತಿಹಾಸಿಕ ಮಾನವ ತನ್ನ ಹಲವು ಕುರುಹುಗಳನ್ನು ಇಲ್ಲಿ ಬಿಟ್ಟು ಹೋಗಿದ್ದಾನೆ. ಇವುಗಳು ಅಂದಿನ ಸಂಸ್ಕೃತಿಯನ್ನು, ಅವನ ಜೀವನ ಶೈಲಿಯನ್ನು ಅರಿಯಲು ಏಕಮೇವ ಆಧಾರಗಳಾಗಿವೆ. ಹಂಪಿ ಪರಿಸರದಲ್ಲಿ

ಪ್ರಾಗೈತಿಹಾಸಿಕ ಮಾನವನಿಗೆ ಸೇರಿದ ಸುಮಾರು ೨೮೦ಕ್ಕೂ ಹೆಚ್ಚು ನೆಲೆಗಳಿವೆ. ಅವುಗಳಲ್ಲಿ ಮುಖ್ಯವಾಗಿ ಹಿರೇಬೆನಕಲ್, ಚಿಕ್ಕ ಜಂತಕಲ್, ಆನೆಗೊಂದಿ, ಮಲ್ಲಾಪುರ(ಗಂಗಾವತಿ ತಾಲೂಕು), ಕಮಲಾಪುರ, ಕಾಳಘಟ್ಟ, ಕಾರಿಗನೂರು, ಸಂಕ್ಲಲಾಪುರ, ಹಂಪಿ, ವೆಂಕಟಾಪುರ, ಧರ್ಮಸಾಗರ, ಬೈಲುವದ್ದಿಗೇರಿ, ನಲ್ಲಾಪುರ, ಮೆಟ್ರಿ, ಕಂಪ್ಲಿ(ಹೊಸಪೇಟೆ ತಾ.), ಹುಲಿಕುಂಟೆ, ಕುಮತಿ(ಕೂಡ್ಲಿಗಿ ತಾ.) ಪಿಕ್ಲಿಹಾಳ್, ಸಂಗನಕಲ್ಲು, ನಿಟ್ಟೂರು, ಉದೇಗುಳಂ, ಕಪ್ಪುಗಲ್ಲು, ಬ್ರೂಸ್ ಬ್ರೇಟ್ ಬೆಟ್ಟ (ಬಳ್ಳಾರಿ ತಾ.), ಕುಡತಿನಿ, ದರೋಜಿ (ಸಂಡೂರು ತಾ.) ನುಂಕೆಮಲೆ, ಜಟ್ಟಿಂಗರಾಮೇಶ್ವರ, ಬ್ರಹ್ಮಗಿರಿ, ಸಿದ್ದಾಪುರ, ಮೊಳಕಾಲ್ಮುರು(ತಾ.) ಅಲ್ಲದೆ ನೀಲಗುಂದ, ಬಾಗಳಿ(ಹೂವಿನಹಡಗಲಿ ತಾ.), ಆನೆಗೊಂದಿ, ಮಲ್ಲಾಪುರ, ಹೀರೆಬೆನಕಲ್, ಜಂತಕಲ್(ಗಂಗಾವತಿ.ತಾ), ಅರಿಷಿಣಗೊಂದಿ, ಆಸಗೋಡು, ಚಿಪ್ಪನಕೆರೆ(ಚಿತ್ರದುರ್ಗ ತಾ.)ಗಳಲ್ಲಿ ಪ್ರಮುಖ ಪ್ರಾಗೈತಿಹಾಸಿಕ ನೆಲೆಗಳು ಕಂಡುಬರುತ್ತವೆ. ಕೆಲವು ಕಡೆ ಈ ನೆಲೆಗಳು ಸಾಕಷ್ಟು ದುಸ್ಥಿತಿಯಲ್ಲಿ ಇದ್ದರೆ, ಇನ್ನೂ ಕೆಲವು ಕಡೆ ಕಾಲನ ತುಳಿತಕ್ಕೆ ಸಿಕ್ಕು ಅವನತಿಯತ್ತ ಮುಖ ಮಾಡಿರುವ ನೆಲೆಗಳು ಈ ಭೌಗೋಳಿಕ ಪರಿಸರದಲ್ಲಿ ಕಾಣಬಹುದಾಗಿದೆ.

ಪವಿತ್ರ ಪುಣ್ಯ ಕ್ಷೇತ್ರವೆನಿಸಿದ ಹಂಪಿ ಕೆಲವರಿಗೆ ಯಾತ್ರಾ ಕ್ಷೇತ್ರವಾಗಿ, ಇನ್ನು ಕೆಲವರಿಗೆ ಭಕ್ತಿ ಮತ್ತು ಮುಕ್ತಿಯನ್ನು ಕರುಣಿಸುವ ಕ್ಷೇತ್ರವಾಗಿ, ಇನ್ನು ಕೆಲವರಿಗೆ ಪ್ರಸಿದ್ಧ ಪ್ರವಾಸಿ ಕ್ಷೇತ್ರವಾಗಿ ಬಹು ಹಿಂದಿನಿಂದಲೂ ಪರಿಗಣಿಸಲ್ಪಟ್ಟಿದೆ. ಅಂದಿನಿಂದ ಇಂದಿನವರೆಗೂ ಒಂದಲ್ಲ ಒಂದು ಕಾರಣಕ್ಕೆ ಅನೇಕರು ಇಲ್ಲಿಗೆ ಭೇಟಿ ನೀಡುತ್ತಲೇ ಇದ್ದಾರೆ. ಹಂಪಿಗೆ ಭೇಟಿ ನೀಡಿದ ಭಕ್ತಜನರು, ಪ್ರವಾಸಿಗಳು, ಅಧಿಕಾರಿಗಳು, ಯಾತ್ರಿಕರು, ವಿದ್ವಾಂಸರು ಬಹು ಹಿಂದಿನಿಂದಲೂ ಅದನ್ನು ತಮ್ಮದೇ ಆದ ದೃಷ್ಟಿಯಲ್ಲಿ ನೋಡಿದ್ದಾರೆ. ಹಂಪಿಯನ್ನು ನೋಡುವ ಬಗೆ ಒಬ್ಬರಿಂದ ಒಬ್ಬರಿಗೆ ಭಿನ್ನವಾಗಿದೆ. ಕೆಲವರು ಸಮಕಾಲೀನ ಪರಿಸ್ಥಿತಿ ಮತ್ತು ಕಾಲಕ್ಕನುಗುಣವಾಗಿ ನೋಡಿದರೆ, ಇನ್ನು ಕೆಲವರು ತಮ್ಮ ವೈಯಕ್ತಿಕ ಹಿನ್ನೆಲೆಯಲ್ಲಿ ಕಂಡು ಅದನ್ನು ತಮ್ಮ ಬರಹಗಳಲ್ಲಿ ದಾಖಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಹಂಪಿಯನ್ನು ಸಾಹಿತ್ಯ ಕೃತಿಗಳು, ವಿದ್ವಾಂಸರು, ಸಾಹಿತಿಗಳು ನೋಡಿದ ದೃಷ್ಟಿಕೋನ ಯಾವ ಬಗೆಯದು ಎಂಬುದು ಮಹತ್ವದ ಸ್ಥಾನವನ್ನು ಪಡೆದುಕೊಳ್ಳುತ್ತದೆ.

ಈ ಹಿನ್ನೆಲೆಯಲ್ಲಿ ಹಂಪಿಗೆ ಭೇಟಿ ನೀಡಿದವರಲ್ಲಿ ದೇಶಿ ಮತ್ತು ವಿದೇಶಿ ಪ್ರವಾಸಿಗರು, ಸಾಹಿತಿ ಮತ್ತು ಬರಹಗಾರರು ಮುಖ್ಯರಾಗಿದ್ದು, ಅವರಿಗೆ ಹಂಪಿ ಯಾವ ಬಗೆಯಲ್ಲಿ ಗೋಚರಿಸಿದೆ. ಅವರು ಕಂಡಂತೆ, ಅವರು ಹಂಪಿಯನ್ನು ಏಕೆ ಮುಖ್ಯವೆಂದು ಪರಿಗಣಿಸುತ್ತಾರೆ. ಅದಕ್ಕೆ ಇರುವ ಕಾರಣಗಳೇನು? ಯಾವ ಆಧಾರಗಳ ಮೇಲೆ ಅವರು ಹಂಪಿಯನ್ನು ಮುಖ್ಯವೆಂದು ಪರಿಗಣಿಸಿ, ಸಂಶೋಧನೆಗೆ ಒಳಪಡಿಸುವುದು ಈ ಅಧ್ಯಯನದ ಆಶಯವಾಗಿದೆ.

೧.೧. ಅಧ್ಯಯನದ ಉದ್ದೇಶ

ಯಾವುದೇ ಇತಿಹಾಸ ಅಧ್ಯಯನಕ್ಕೆ ಆಕರಗಳು ಬಹುಮುಖ್ಯ ಪಾತ್ರವಹಿಸುತ್ತವೆ. ಹಂಪಿ ಕುರಿತು ಅಧ್ಯಯನ ಮಾಡಲು ಶಾಸನಗಳು, ಸಾಹಿತ್ಯಿಕ ಆಕರಗಳು, ವಿದೇಶಿ ಪ್ರವಾಸಿಗರ ವರದಿಗಳು, ಸ್ಮಾರಕ ಅವಶೇಷಗಳು, ಗ್ರಂಥಗಳು ಮತ್ತು ಲೇಖನಗಳು ಸಹಾಯಕವಾಗಿವೆ. ಹಂಪಿ ಕುರಿತು ಅಧ್ಯಯನ ಮಾಡುವವರಿಗೆ ಮೂಲ ಸಾಮಾಗ್ರಿಗಳು ಸಾಕಷ್ಟು ಇವೆ. ಇವು ಕಾಲಾಂತರದಲ್ಲಿ ರೂಪಾಂತರಗೊಂಡು, ಇಲ್ಲವೇ ಮೂಲ ರೂಪದಲ್ಲಿಯೇ ಇಂದಿಗೂ ಉಳಿದು ಬಂದಿವೆ. ಇವುಗಳ ವ್ಯಾಪಕ ಸಮೀಕ್ಷೆ ನಡೆಯಬೇಕಿದೆ. ಹಂಪಿಯ ಚಾರಿತ್ರಿಕ ಹಿನ್ನೆಲೆ, ಅದರ ವೈಶಿಷ್ಟ್ಯತೆ, ಹಂಪಿಯನ್ನು ದೇಶಿ ವಿದೇಶಿಯರು ಯಾವ ಬಗೆಯಲ್ಲಿ ನೋಡಿದ್ದಾರೆ ಎಂಬುದನ್ನು ಮತ್ತು ಇಲ್ಲಿನ ಪರಂಪರೆ ಮತ್ತು ಸಂಸ್ಕೃತಿಯ ಪಸರುವಿಕೆಯಲ್ಲಾದ ಬದಲಾವಣೆ, ಅವುಗಳ ವಿಸ್ತಾರದ ಕುರಿತು ತಾರ್ಕಿಕವಾಗಿ ವಿಶ್ಲೇಷಿಸಬೇಕಾದ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಈ ಪ್ರಸಕ್ತ ಅಧ್ಯಯನ ಕೈಗೊಳ್ಳಲಾಗಿದ್ದು, ಅದರ ಉದ್ದೇಶಗಳು ಈ ಮುಂದಿನಂತಿವೆ:

೧) ಹಂಪಿ ಹೆಸರಿನ ಹಿನ್ನೆಲೆ, ಪೌರಾಣಿಕ ಮತ್ತು ಚಾರಿತ್ರಿಕ ಹಿನ್ನೆಲೆ ಮತ್ತು ಪ್ರಾಚೀನತೆ ಮತ್ತು ವೈಶಿಷ್ಟ್ಯತೆಯನ್ನು ದಾಖಲಿಸುವುದು. ದೊರೆಯಬಹುದಾದ ಅವಶೇಷಗಳನ್ನು ಆಧಾರವಾಗಿಟ್ಟುಕೊಂಡು ಪ್ರಾಗೈತಿಹಾಸಿಕ ಮಾನವನ ಜೀವನ ಕ್ರಮ ಮತ್ತು ವೈಶಿಷ್ಟ್ಯತೆ ಚಾರಿತ್ರಿಕ ಕಾಲಘಟ್ಟದ ರಾಜಮನೆತನಗಳು ಮತ್ತು ಅವರ ಕೊಡುಗೆಗಳೇನು? ಮೊದಲಾದ ವಿವರಗಳನ್ನು ವಿಶ್ಲೇಷಿಸುವುದು. ಮುಖ್ಯವಾಗಿ ಪ್ರಾಗೈತಿಹಾಸಿಕ ಕಾಲದಲ್ಲಿ ಮಾನವನ ಜನಜೀವನ ಹೇಗಿತ್ತು ಅದು ಚಾರಿತ್ರಿಕ ಕಾಲದಲ್ಲಿ ಅಂದರೆ ಪ್ರಾಚೀನ, ಮಧ್ಯಕಾಲೀನ, ಆಧುನಿಕ ಕಾಲದಲ್ಲಿ ಹೇಗೆ ಅಭಿವೃದ್ಧಿಯಾಯಿತು, ಅದರ ಹಿನ್ನೆಲೆ ಏನು, ಅವರ ಕುರುಹುಗಳು ಮಾನವ ಜನಜೀವನದ ಏಳ್ಗೆಯಲ್ಲಿ ಯಾವ ರೀತಿ ಪಾತ್ರ ನಿರ್ವಹಿಸುತ್ತವೆ ಎನ್ನುವುದನ್ನು ದಾಖಲಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

೨) ಮಾನವ ಸಂಸ್ಕೃತಿಯ ಏಳ್ಗೆಯಲ್ಲಿ ಹಂಪಿಯ ಭೌಗೋಳಿಕ ಲಕ್ಷಣಗಳು ಮತ್ತು ಅವುಗಳ ಪ್ರಭಾವ ಏನು? ಈ ಪರಿಸರದಲ್ಲಿನ ಸಂಸ್ಕೃತಿ ಮತ್ತು ಪರಂಪರೆಯ ಬೆಳವಣಿಗೆಗೆ ಇಲ್ಲಿನ ಪರಿಸರದ ಪಾತ್ರವನ್ನು ಪ್ರಾಸಂಗಿಕವಾಗಿ ವಿಶ್ಲೇಷಿಸುವುದು ಈ ಅಧ್ಯಯನದ ಆಶಯವಾಗಿದೆ.

೩) ಹಂಪಿಯನ್ನು ದೇಶಿ ಮತ್ತು ವಿದೇಶಿ ವಿದ್ವಾಂಸರು ಯಾವ ಬಗೆಯಲ್ಲಿ ಗ್ರಹಿಸಿದ್ದಾರೆ. ಅವರ ನಿರೂಪಣಾ ದೃಷ್ಟಿಕೋನಗಳೇನು? ಎನ್ನುವುದನ್ನು ಒಂದೆಡೆ ದಾಖಲಿಸುವುದು ಮತ್ತು ವಿಶ್ಲೇಷಿಸುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

೪) ದೇಶಿ ಪ್ರವಾಸಿಗರ ಅಥವಾ ಯಾತ್ರಿಕರು ಹಂಪಿಯನ್ನು ಯಾವ ದೃಷ್ಟಿಯಲ್ಲಿ ಕಂಡಿದ್ದಾರೆ; ಕನ್ನಡ ಸಾಹಿತ್ಯದ ಮುಖ್ಯ ಕೃತಿಗಳಲ್ಲಿ ಹಂಪಿಯನ್ನು ಯಾವ ಬಗೆಯಲ್ಲಿ ಚಿತ್ರಿಸಿವೆ; ಅಲ್ಲದೆ ಆಧುನಿಕ ವಿದ್ವಾಂಸರ ದೃಷ್ಟಿಯಲ್ಲಿ ಹಂಪಿ ಹೇಗೆ ನಿರೂಪಿತವಾಗಿದೆ ಎನ್ನುವುದನ್ನು ಸಮಕಾಲೀನ ಆಧಾರಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

೫) ಹಂಪಿಗೆ ಕಾಲಾಂತರದಲ್ಲಿ ಹಲವಾರು ವಿದೇಶಿ ಪ್ರವಾಸಿಗರು, ಅಧಿಕಾರಿಗಳು, ರಾಯಭಾರಿಗಳು ಭೇಟಿ ನೀಡಿದ್ದಾರೆ. ಅವರ ದೃಷ್ಟಿಯಲ್ಲಿ ಹಂಪಿ ಹೇಗೆ ನಿರೂಪಿತವಾಗಿದೆ; ಅಲ್ಲದೆ ವಿದೇಶದ ಆಧುನಿಕ ವಿದ್ವಾಂಸರು ತಮ್ಮ ಕೃತಿಗಳಲ್ಲಿ ಹಂಪಿಯನ್ನು ಯಾವ ದೃಷ್ಟಿಯಲ್ಲಿ ನಿರ್ವಚಿಸಿದ್ದಾರೆ ಎನ್ನುವುದನ್ನು ವಿವರಿಸುವುದು ಸಹ ಈ ಅಧ್ಯಯನ ಉದ್ದೇಶವಾಗಿದೆ.

೬) ಪ್ರಕಟಿತ ಮತ್ತು ಅಪ್ರಕಟಿತ ಮಾಹಿತಿಗಳನ್ನು ಅನುಸರಿಸಿ ಹಂಪಿಯ ಮಹತ್ವ ಇವುಗಳ ಆಧಾರದ ಮೇಲೆ ಈ ಸಂಸ್ಕೃತಿಯ ಅರಿವು ವಿಸ್ತಾರಗಳನ್ನು ದಾಖಲಿಸುವುದು. ದೊರೆತ ಆಕರ ಮತ್ತು ಅವಶೇಷಗಳನ್ನು ಆಧಾರವಾಗಿಟ್ಟುಕೊಂಡು ಹಂಪಿಯ ವೈಶಿಷ್ಟ್ಯತೆಯನ್ನು ನಿರೂಪಿಸುವುದು. ಈ ನೆಲೆಗಳ ಕುರಿತು ಜನರಲ್ಲಿ ಮನೆಮಾಡಿಕೊಂಡಿರುವ ದಂತಕಥೆ, ಐತಿಹ್ಯಗಳನ್ನು ಪೂರಕವಾಗಿ ದಾಖಲಿಸುವುದು ಈ ಅಧ್ಯಯನದ ಮತ್ತೊಂದು ಉದ್ದೇಶವಾಗಿದೆ.

೧.೨. ಅಧ್ಯಯನದ ಮಹತ್ವ

ಚಾರಿತ್ರಿಕ ಅಧ್ಯಯನವು ನಿನ್ನೆ ಮೊನ್ನೆಯದಲ್ಲ, ಅದಕ್ಕೆ ಅದರದೇ ಆದ ಚರಿತ್ರೆಯಿದೆ. ಇದರ ಭಾಗವಾಗಿ ಸಹಸ್ರಾರು ವಿದ್ವಾಂಸರು ಹಲವು ದಶಕಗಳಲ್ಲಿ ಇದನ್ನು ಶೋಧಿಸುತ್ತಾ ಬಂದಿದ್ದಾರೆ. ಈ ಮುಖೇನ ಹಂಪಿಯ ಚಾರಿತ್ರಿಕ ನೆಲೆಯಲ್ಲಿ ಅಧ್ಯಯನ ನಡೆಸಿದ್ದಾರೆ. ಆದರೆ ದೇಶ–ವಿದೇಶಿಯರ ದೃಷ್ಟಿಯಲ್ಲಿ ಹಂಪಿಯನ್ನು ನೋಡುವಲ್ಲಿ ಕೆಲವೇ ಲೇಖನಗಳು ಬರಹಗಳಿವೆ. ಆದರೆ ಇದರ ನಿರ್ದಿಷ್ಟವಾದ ಚರ್ಚೆಗಳು ನಡೆದಿರುವುದು ಕಡಿಮೆ. ಈ ಹಿನ್ನೆಲೆಯಲ್ಲಿ 'ದೇಶಿ–ವಿದೇಶಿಯರ ದೃಷ್ಟಿಯಲ್ಲಿ ಹಂಪಿಯನ್ನು ಕೇಂದ್ರೀಕರಿಸಿ ಇತಿಹಾದ ಭಾಗವಾಗಿ ಪರಿಗಣಿಸಿ ಅದರ ಸಾಂಸ್ಕೃತಿಕ ಚರ್ಚೆ ಮಾಡುವ ಅಗತ್ಯತೆಯಿದೆ. ಹೀಗೆ ಮಾಡುವಾಗ ಅನೇಕ ಸಾಹಿತ್ಯ ಕೃತಿಗಳು, ವಿದ್ವಾಂಸರ ಹೇಳಿಕೆಗಳು, ಪ್ರಕಟಿತ, ಅಪ್ರಕಟಿತ ಗ್ರಂಥಗಳ ಮುಖೇನ ವಿಶೇಷವಾಗಿ ಚರ್ಚಿಸುವ ಅಗತ್ಯತೆಯಿದೆ. ಹಂಪಿ ಭಾರತೀಯ ಇತಿಹಾಸಕ್ಕೆ ಮಾತ್ರವಲ್ಲ, ಒಟ್ಟು ಕರ್ನಾಟಕ ಸಂಸ್ಕೃತಿಯ ದೃಷ್ಟಿಕೋನದಿಂದಲೂ ಮುಖ್ಯವಾಗಿದೆ. ಹಂಪಿಯ ಹಿಂದಿನ ಗತವೈಭವವನ್ನು ಬಿಂಬಿಸುವ ಅನೇಕ

ದೇಶ–ವಿದೇಶಿಯರು ಬರೆದ ಅನೇಕ ಬರಹಗಳು, ಹೇಳಿಕೆಗಳಿವೆ. ಇವು ಸಿನಿಮಾ, ಟಿ.ವಿ.ಗಳಂತಹ ಮಾಧ್ಯಮಗಳು ಪ್ರಭಾವಶಾಲಿಯಾಗಿ ಸಹೃದಯರ ಮನದಾಳದಲ್ಲಿ ಬೇರೂರುವಂತೆ ಮಾಡಿವೆ. ಕರ್ನಾಟಕ ಪರಂಪರೆಯ ದ್ಯೋತಕವಾಗಿರುವ ಹಂಪಿಯನ್ನು ಉಳಿಸಿ, ಬೆಳೆಸಿಕೊಳ್ಳುವ ವಿಷಯವು ಈಗ ಅಳವಿಗೂ ಮೀರಿದ ಸಂಗತಿಯಾಗಿದೆ. ಇತಿಹಾಸ ಸಂಶೋಧಕರು ಸಹೃದಯರು ಹಂಪಿಯನ್ನು ವರ್ತಮಾನದಲ್ಲಿ ಇತಿಹಾಸ ಕ್ಷೇತ್ರದಲ್ಲಿ ಕ್ರಿಯಾಶೀಲವಾಗಿರುವ ಧೋರಣೆ ಮತ್ತು ಪ್ರವೃತ್ತಿಗಳನ್ನು ತಿಳಿಯಲು ಆಸಕ್ತರಾಗಿದ್ದಾರೆ. ಆದರೆ ಅವರ ಈ ಆಸಕ್ತಿಯನ್ನು ಪೂರೈಸುವಂತಹ ಪ್ರಯತ್ನಗಳು ಇತಿಹಾಸದಲ್ಲಿ ವಿಸ್ತಾರಗೊಳ್ಳುತ್ತಿಲ್ಲ ಈ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಹಂಪಿಯನ್ನು 'ದೇಶಿ–ವಿದೇಶಿಯರು' ಇತಿಹಾಸವಾಗಿ ಕಟ್ಟಿಕೊಟ್ಟಿರುವ ಹಿನ್ನೆಲೆಯನ್ನು ಚಾರಿತ್ರಿಕ ಅಧ್ಯಯನ ಮಾಡಬೇಕೆನ್ನುವ ಆಶಯವೂ ಈ ಪ್ರಬಂಧಕ್ಕೆಯಿದೆ.

ದೇಶಿ ಮತ್ತು ವಿದೇಶಿ ವಿದ್ವಾಂಸರು ಪ್ರಧಾನವಾಗಿ ಅಂದಿನ ವಿಜಯನಗರದ ಶಿಲ್ಪ, ಶಾಸನ, ಚಿತ್ರಕಲೆ, ವೀರಗಲ್ಲು ಮತ್ತು ಮಾಸ್ತಿ ಕಲ್ಲುಗಳು, ಹಸ್ತಪ್ರತಿ ಹಾಗೂ ಸಾಹಿತ್ಯ, ಸಾಮಾಜಿಕ, ಧಾರ್ಮಿಕ, ಅರ್ಥಿಕ, ಆಡಳಿತ, ಸಾಂಸ್ಕೃತಿಕ, ಕಲೆ ಮತ್ತು ವಾಸ್ತುಶಿಲ್ಪ ಮುಂತಾದ ವಿಷಯಗಳನ್ನು ಪ್ರಧಾನವಾಗಿರಿಸಿಕೊಂಡು ಅಧ್ಯಯನ ಮಾಡಿದ್ದಾರೆ. ಆದರೆ ಪ್ರಸ್ತುತ ವಿಷಯದ ಮೇಲೆ ಕೆಲವೇ ಕೆಲ ವಿದ್ವಾಂಸರು ಅಲ್ಲಲ್ಲಿ ಪ್ರಾಸಂಗಿಕವಾಗಿ ತಮ್ಮ ಕೃತಿಗಳಲ್ಲಿ ತುಂಬಾ ಗೌಣವಾಗಿ ಪ್ರಸ್ತಾಪಿಸಿದ್ದಾರೆ. ಅಂದರೆ ಇಲ್ಲಿಯವರೆಗೆ ಈ ವಿಷಯದ ಮೇಲೆ ಯಾವುದೇ ಅಧ್ಯಯನಗಳು ವ್ಯವಸ್ಥಿತವಾಗಿ ನಡೆದಿಲ್ಲ. ಆದ್ದರಿಂದ ಸುದೀರ್ಘ ಮತ್ತು ವ್ಯವಸ್ಥಿತ ಅಧ್ಯಯನದ ಅವಶ್ಯಕತೆ ಇದೆ. ಸಂಶೋಧಕರಿಂದ, ವಿದ್ವಾಂಸರಿಂದ ಗಮನಿಸದೆ ಉಳಿದಿರುವ ಈ ವಿಷಯದ ಮೇಲೆ ವ್ಯವಸ್ಥಿತ ಅಧ್ಯಯನ ಮಾಡಬೇಕಾದ ತುರ್ತು ಅಗತ್ಯವಿದೆ.

ಹಂಪಿಗೆ ಭೇಟಿ ನೀಡಿದವರಲ್ಲಿ ದೇಶಿ ಮತ್ತು ವಿದೇಶಿ ಪ್ರವಾಸಿಗರು, ಸಾಹಿತಿ ಮತ್ತು ಬರಹಗಾರರು ಮುಖ್ಯರಾಗಿದ್ದು, ಅವರಿಗೆ ಹಂಪಿ ಯಾವ ಬಗೆಯಲ್ಲಿ ಗೋಚರಿಸಿದೆ. ಅವರು ಕಂಡಂತೆ, ಅವರು ಹಂಪಿಯನ್ನು ಏಕೆ ಮುಖ್ಯವೆಂದು ಪರಿಗಣಿಸುತ್ತಾರೆ; ಅದಕ್ಕೆ ಇರುವ ಕಾರಣಗಳೇನು? ಯಾವ ಆಧಾರಗಳ ಮೇಲೆ ಅವರು ಹಂಪಿಯನ್ನು ಮುಖ್ಯವೆಂದು ಪರಿಗಣಿಸುತ್ತಾರೆ ಎನ್ನುವುದನ್ನು ಪರಿಶೀಲಿಸಿ ಸಂಶೋಧನೆಗೆ ಒಳಪಡಿಸಬೇಕಾದ ಅಗತ್ಯತೆಯಿದೆ. ಇದರಿಂದ ಹಂಪಿಯ ಕುರಿತಂತೆ ಯಾವ ಬಗೆಯಲ್ಲಿ ಇತಿಹಾಸ ಲೇಖನಶಾಸ್ತ್ರ (ಇತಿಹಾಸ ಬರವಣಿಗೆ ಕ್ರಮ) ಬೆಳವಣಿಗೆ ಆಯಿತು ಎನ್ನುವುದನ್ನು ಅರಿಯಲು ಸಹಾಯಕವಾಗುತ್ತದೆ. ಅಲ್ಲದೆ ಮುಂದಿನ ಅಧ್ಯಯನಗಳಿಗೆ ಒಂದು ಮಾದರಿಯೂ ಆಗುತ್ತದೆ. ಆದ್ದರಿಂದ ಈ ಕುರಿತಂತೆ ವ್ಯವಸ್ಥಿತ ದಾಖಲೆಯ ಅವಶ್ಯಕತೆ ಇದೆ. ತಪ್ಪಿದಲ್ಲಿ ಚಾರಿತ್ರಿಕ ಆಕರಗಳು ಕೈತಪ್ಪಿ ಹೋಗುವ ಸಾಧ್ಯತೆಯಿರುವುದರಿಂದ ಬಹುಬೇಗನೇ ಈ ವಿಷಯದ ಮೇಲೆ ಅಧ್ಯಯನ ಮಾಡುವ ಜರೂರಿತ್ತು. ಹೀಗಾಗಿ ಈ ಅಧ್ಯಯನ ಮಹತ್ವತೆಯನ್ನು ಎತ್ತಿಹಿಡಿಯುವುದಾಗಿದೆ.

ಚಾರಿತ್ರಿಕವಾಗಿ ಗಮನಿಸಿದಾಗ ಚರಿತ್ರೆ ಮತ್ತು ಕನ್ನಡ ಸಾಹಿತ್ಯ ಒಂದನ್ನೊಂದು ಬಿಟ್ಟಿರಲಾರವು. ಇವು ಇತಿಹಾಸವನ್ನು ಬರೆಯುವುದಕ್ಕೆ ಒಂದಕ್ಕೊಂದು ಪೂರಕವಾಗಿವೆ. ಹಂಪಿಯನ್ನು ಸಾಹಿತ್ಯ ಕೃತಿಗಳಲ್ಲಿ ಬಿಂಬಿಸಿರುವುದು ಕಂಡುಬರುತ್ತದೆ. ಹೀಗಾಗಿ ಆಧುನಿಕ ಮತ್ತು ಆಧುನಿಕ ಪೂರ್ವ ಸಾಹಿತ್ಯಗಳಲ್ಲಿ ಇದರ ಚಹರೆ ಎದ್ದು ಕಾಣುವಂತಹದ್ದು. ಇದನ್ನು ತಾತ್ವಿಕವಾಗಿ ವಿಶ್ಲೇಷಿಸುವ ಕಾರ್ಯ ಮಾಡುವುದಾಗಿದೆ.

೧.೩. ಅಧ್ಯಯನದ ಪರಿಭಾಷೆಗಳ ತಾತ್ವಿಕ ಚರ್ಚೆ

ಭಾರತವು ಪ್ರಪಂಚದಲ್ಲಿ ಪ್ರಾಚೀನ ನಾಗರಿಕತೆ ಮತ್ತು ಇತಿಹಾಸ ಹೊಂದಿದ ದೇಶಗಳಲ್ಲಿ ಒಂದಾಗಿದೆ. ಇದರಲ್ಲಿ ವಾಸ್ತುಶಿಲ್ಪ, ಕಲೆ, ಸಾಹಿತ್ಯ, ಸಂಗೀತದಿಂದ ಸಮ್ಮಿಲನಗೊಂಡಿವೆ.

ಇದರಿಂದ ವಿದೇಶಿ ಮತ್ತು ದೇಶಿಯರನ್ನು ಎಲ್ಲಕ್ಕಿಂತ ಹೆಚ್ಚಾಗಿ ಶಾಂತಿಗಾಗಿ ಭಾರತವು ಆಕರ್ಷಿಸಿದೆ. ಆ ಕಾರಣಕ್ಕಾಗಿಯೇ ಪ್ರಾಚೀನ ಕಾಲದಿಂದ ಇಂದಿನವರೆಗೂ ಭಾರತಕ್ಕೆ ಅನೇಕ ವಿದೇಶಿಯರು ಬಂದು ಹೋಗಿದ್ದಾರೆ. ಇಲ್ಲಿ ಕಂಡದ್ದನ್ನು, ಕೇಳಿದ್ದನ್ನು ಮನಸಾರೆ ಮೆಚ್ಚಿ ತಮ್ಮ ಪ್ರವಾಸ ಕಥನದಲ್ಲಿ ದಾಖಲಿಸಿದ್ದಾರೆ. ಇದುವೇ ಇತಿಹಾಸ ವಿದ್ವಾಂಸರಿಗೆ ಆಕರಗಳಾಗಿ ಪರಿಣಮಿಸಿವೆ. ಹೀಗೆ ಭಾರತಕ್ಕೆ ಪ್ರವಾಸ ಕ್ರಮವಾಗಿ, ಗ್ರೀಕರು, ಚೀನಿಯರು, ಅರಬ್ಬಿ, ಪರ್ಶಿಯನ್, ಇಟಲಿ, ಪೋರ್ಚುಗೀಸರು, ಹಾಲೆಂಡಿನವರು ಬಂದರು. ಇವರು ಅನೇಕ ಅರಸು ಮನೆತನಗಳನ್ನು ಸಂದರ್ಶಿಸಿದ್ದಾರೆ. ತಮ್ಮ ಅನುಭವಗಳನ್ನು ದಾಖಲಿಸಿ ಹಂಚಿಕೊಂಡಿದ್ದಾರೆ. ಈ ಮೂಲಕ ಅವರು ಭಾರತದ ಇತಿಹಾಸದ ರಚನೆಗೆಗಾಗಿ ಮಹದುಪಕಾರ ಮಾಡಿದ್ದಾರೆ. ಇದು ಇಂದಿಗೆ ಇತಿಹಾಸ.

ಕರ್ನಾಟಕದ ವಿಜಯನಗರ ಅಥವಾ ಹಂಪಿಗೆ ವಿದೇಶಗಳಿಂದ ಪ್ರವಾಸಿಗರು ಅಥವಾ ರಾಯಭಾರಿಗಳು ದೊಡ್ಡ ಪ್ರಮಾಣದಲ್ಲಿ ಬಂದು ಹೋದವರು ಇದ್ದಾರೆ. ಕ್ರಿ.ಶ.೧೪ನೇ ಶತಮಾನ ಪೂರ್ವಾರ್ಧದಿಂದ ಈ ಪ್ರವೃತ್ತಿ ನಡೆದೇ ಇದೆ. ಈ ಹೋಗಿ ಬರುವಿಕೆಗೆ ಹಲವು ಕಾರಣ, ಉದ್ದೇಶ, ಗುರಿಯ ಇದೆ. ಈ ಪ್ರಕ್ರಿಯೆ ಆರಂಭವಾಗಿ ಕಳೆದ ಶತಮಾನದವರೆಗೂ ಬಂದು ಹೋದ ಪರದೇಶದ ಸಂದರ್ಶಕರನ್ನು 'ವಿದೇಶಿಯರು' ಎಂದು ಪ್ರಸ್ತುತ ಅಧ್ಯಯನದಲ್ಲಿ ಕರೆದುಕೊಳ್ಳಲಾಗಿದೆ. ಇವರು 'ಪ್ರವಾಸ ಕಥನ'ಗಳನ್ನು ಬರೆದಿಟ್ಟಿದ್ದಾರೆ. ಇವು ಈ ಅಧ್ಯಯನಕ್ಕೆ ಪೂರಕ ಆಕರಗಳಾಗಿವೆ.

ಹಾಗಾಗಿ ನೆಲದ ಜೊತೆಗೆ ಸಾವಯವ ಸಂಬಂಧ ಹೊಂದಿದವರ ಸಮಗ್ರ ಬದುಕಿನ ಕ್ರಮವನ್ನು ವಿವರಿಸುವ ಅಥವಾ ಗುರುತಿಸುವ ಸಂದರ್ಭದಲ್ಲಿ 'ದೇಶಿ', 'ದೇಸೀಯತೆ', 'ದೇಶೀವಾದ' ಈ ಮೂರು ಅರ್ಥಗಳು ತನ್ನದೇ ಆದ ಅರ್ಥವನ್ನು ಕನ್ನಡದಲ್ಲಿ ವಿಸ್ತರಿಸಿಕೊಳ್ಳುತ್ತವೆ. ಇನ್ನೊಂದು ಅರ್ಥದಲ್ಲಿ ಗ್ರಹಿಸುವುದಾದರೆ, ನಮ್ಮತನದ ನೆಲದ ಪಾರಂಪರಿಕ ಸತ್ವವನ್ನು ಆಲೋಚನ ಕ್ರಮವನ್ನಾಗಿ ರೂಪಿಸಿಕೊಳ್ಳುವುದು. ಬೇರೆ ದೇಶಗಳನ್ನು ಗಮನದಲ್ಲಿರಿಸಿಕೊಂಡಾಗ ಭಾರತವು ದೇಶಿಯಾಗುತ್ತದೆ. ಅದೇ ಭಾರತವನ್ನು ಗಮನದಲ್ಲಿರಿಸಿಕೊಂಡಾಗ ಇಲ್ಲಿನ 'ಪ್ರಾದೇಶಿಕತೆ' ದೇಶಿಯಾಗುತ್ತದೆ. ಹೀಗೆ ದೇಶಿ ಹಲವು ಆಯಾಮಗಳನ್ನು ಪಡೆಯುತ್ತಾ ಬಂದಿದೆ. ಅಂದರೆ 'ದೇಶಿ' ಒಂದು ದೇಶಕ್ಕೆ ಸಂಬಂಧಿಸಿದ ಪದವಾಗಿಯೂ ಇದೆ. 'ದೇಸಿ' ಒಂದು ದೇಶದಲ್ಲಿ ಪರಂಪರಾನುಗತವಾಗಿ ಬಂದಿರುವ ಸಂಸ್ಕೃತಿ ಆಚಾರ ವಿಚಾರಗಳಿಗೆ ಸಂಬಂಧಿಸಿದ ಪದವೆಂತಲೂ ಬಳಕೆಯಿದೆ.

ದೇಶಿ ಎಂದರೆ ಹೆಸರೇ ಸೂಚಿಸುವಂತೆ 'ಸ್ಥಳೀಯತೆ' ಎಂದರ್ಥ. ಸ್ಥಳೀಯರು ವಿಜಯನಗರ ಅಥವಾ ಹಂಪಿಯನ್ನು ನೋಡಿ ಬರೆದಿರುವ ಕೃತಿ, ಲೇಖನ, ಕವನ, ಕಾದಂಬರಿ ಮೊದಲಾದ ಕಥನಗಳನ್ನು ತಮ್ಮ ಕೃತಿಗಳಲ್ಲಿ ಬರೆದಿದ್ದಾರೆ. ಅವರನ್ನೇ ಇಲ್ಲಿ ದೇಶಿಯರು ಎಂದು ಕರೆದುಕೊಳ್ಳಲಾಗಿದೆ.

ಚಾರಿತ್ರಿಕ ಹಿನ್ನೆಲೆಯಲ್ಲಿ ನೋಡಿದಾಗ ದೇಶಿ, ವಿದೇಶಿಯರು ವಿಜಯನಗರವನ್ನು ಭೇಟಿಕೊಟ್ಟವರು ದೊಡ್ಡ ಪ್ರಮಾಣದಲ್ಲಿ ಇದ್ದಾರೆ. ಅವರು ಕಟ್ಟಿಕೊಟ್ಟ ಅನೇಕ ಆಕರಗಳೇ ಇಂದಿಗೂ ಹಂಪಿಯನ್ನು ತಿಳಿಯುವುದಕ್ಕೆ ಮತ್ತು ಇಂತಹ ಪ್ರಬಂಧವನ್ನು ಕಟ್ಟುವುದಕ್ಕೆ ಸಹಾಯಕವಾಗಿದೆ. ಜೊತೆಗೆ ಇಂದಿನ ವರ್ತಮಾನದ ಭವಿಷ್ಯತ್ತನ್ನು ನಿರ್ಮಿಸಿಕೊಳ್ಳುವುದಕ್ಕೆ ಇಂತಹ ಆಕರಗಳು ಪೂರಕವಾಗಿವೆ.

ಚಾರಿತ್ರಿಕ ಅಧ್ಯಯನವೆಂದರೆ, ಹಂಪಿಯ ಚರಿತ್ರೆಯನ್ನು ಬರೆಯುವುದು ಮಾತ್ರವಲ್ಲ; ಅದು ಹೇಗೆ ಆಯಾ ಪ್ರದೇಶದ ಜನರ ಆಲೋಚನ ಕ್ರಮ ಮತ್ತು ಅಭಿರುಚಿಯನ್ನು ರೂಪಿಸಿತು ಎಂಬುದಾಗಿದೆ. ಹೀಗಾಗಿ ಇಲ್ಲಿ ನಿರ್ದಿಷ್ಟವಾಗಿ ದೇಶಿ–ವಿದೇಶಿಯರನ್ನು ಗಮನದಲ್ಲಿ ಇಟ್ಟುಕೊಂಡಿರುವುದು ಗಮನಾರ್ಹವಾದುದು. ಹಿನ್ನೆಲೆಯಲ್ಲಿ ಇಲ್ಲಿ ಚಾರಿತ್ರಿಕ ಅಧ್ಯಯನವೆಂದು ಕರೆದುಕೊಳ್ಳಲಾಗಿದೆ.

೧.೪. ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಹಂಪಿ ಹಾಗೂ ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ಹಲವಾರು ಅಧ್ಯಯನಗಳು ಇಲ್ಲಿಯವರೆಗೆ ನಡೆದಿವೆ. ಈ ಕುರಿತಂತೆ ಕೆಲವು ಕೃತಿಗಳು ಈಗಾಗಲೇ ಪ್ರಕಟಗೊಂಡಿವೆ. ವಿಜಯನಗರವನ್ನು ಕುರಿತಂತೆ ನಡೆದಿರುವ ಇಲ್ಲಿಯವರೆಗಿನ ಅಧ್ಯಯನಗಳಲ್ಲಿ ಎರಡು ಅಂಶಗಳನ್ನು ಮುಖ್ಯವಾಗಿ ಗುರುತಿಸಬಹುದು.

೧) ವಸಾಹತುಶಾಹಿ ಪ್ರಭಾವದಿಂದ ರಚಿತವಾದ ಬರಹಗಳು

೨) ರಾಷ್ಟ್ರಪ್ರೇಮದಿಂದ ಪ್ರಭಾವಿತವಾದ ಬರಹಗಳು

ಈ ಮೇಲಿನ ಎರಡು ಪಂಥಗಳಿಂದ ಪ್ರಭಾವಿತರಾದ ವಿದ್ವಾಂಸರು ತಮ್ಮದೇ ಆದ ಇತಿ ಮಿತಿಯಲ್ಲಿ ವಿಜಯನಗರ ಮತ್ತು ಹಂಪಿಯನ್ನು ಕಾಣುವ ಅದನ್ನು ಜನರಿಗೆ ತಮ್ಮ ದೃಷ್ಟಿಯಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಅವರಲ್ಲಿ ಪ್ರಮುಖವಾಗಿ ರಾಬರ್ಟ್‌ಸಿವಿಲ್, ಸೂರ್ಯನಾರಾಯಣರಾವ್, ಕೆ.ಎ.ನೀಲಕಂಠಶಾಸ್ತ್ರಿ, ಶ್ರೀಕಂಠಯ್ಯ, ಬಿ.ಎ.ಸಾಲೆತ್ತೊರೆ, ನಾಗರಾಜರಾವ್.ಎಂ.ಎಸ್., ಎಫ್.ಡಬ್ಲ್ಯೂ.ರಾಬರ್ಟ್‌ಸನ್, ಜಾರ್ಜಮಿಶಲ್, ಜಾನ್ ಫ್ರಿಜ್, ವಸುಂಧರ ಫಿಲಿಯೋಜ, ಅನ್ನಾ ಡೋಲ್ಕಾಂಪಿಯಾ, ದಿ.ಬಾಲಸುಬ್ರಮಣ್ಯ, ಟಿ.ವಿ.ಮಹಾಲಿಂಗಂ, ಪಿ.ಬಿ.ದೇಸಾಯಿ, ಎಂ.ಎಸ್.ಪುಟ್ಟಣ್ಣ, ಆರ್.ನರಸಿಂಹಾಚಾರ್, ಉತ್ತಂಗಿ ಚೆನ್ನಬಸಪ್ಪ, ಎಂ.ಗೋವಿಂದ ಪೈ, ಮುಳಿಯ ತಿಮ್ಮಪ್ಪಯ್ಯ, ಕಪಟರಾಳ ಕೃಷ್ಣರಾವ್, ಹುಲ್ಲೂರು ಶ್ರೀನಿವಾಸ ಜೋಯಿಸ, ಎಂ,ಎಚ್.ಕೃಷ್ಣ, ಶಂ.ಬಾ.ಜೋಶಿ, ಆರ್.ಎಸ್.ಪಂಚಮುಖಿ, ಎಸ್.ಶ್ರೀಕಂಠಶಾಸ್ತ್ರಿ, ಜಿ.ಎಸ್.ಗಾಯಿ, ಡಾ.ಶ್ರೀನಿವಾಸ ರಿತ್ತಿ, ಎಂ.ಚಿದಾನಂದಮೂರ್ತಿ, ಅ.ಸುಂದರ, ಷ.ಶೆಟ್ಟರ್, ಹಂಪನಾಗರಾಜಯ್ಯ, ಎಂ.ಎಂ.ಕಲಬುರ್ಗಿ, ಸೂರ್ಯನಾಥ್ ಕಾಮತ್, ಟಿ.ಪರಮೇಶ್ವರ, ಎಸ್.ವೈ.ಸೋಮಶೇಖರ ಮತ್ತು ಡಾ.ಎಚ್.ತಿಪ್ಪೇಸ್ವಾಮಿ ಮುಂತಾದ ವಿದ್ವಾಂಸರನ್ನು ಹೆಸರಿಸಬಹುದು.

'ಪ್ರೋಟೋ ಹಿಸ್ಟಾರಿಕ್ ಕಲ್ಚರ್ ಆಫ್ ದಿ ತುಂಗಭದ್ರಾವ್ಯಾಲಿ' ಎನ್ನುವ ಕೃತಿಯಲ್ಲಿ ಈ ಭಾಗದ ಕೆಲವು ಪ್ರಾಗೈತಿಹಾಸಿಕ ನೆಲೆಗಳ ಕುರಿತು ಎಂ.ಎಸ್.ನಾಗರಾಜರಾವ್ ಅವರು ದಾಖಲಿಸಿದ್ದಾರೆ. ಕೆ.ಬಿ.ಶಿವತಾರಕರವರು ಕರ್ನಾಟಕ ಪುರಾತತ್ವ ನೆಲೆಗಳು ಎನ್ನುವ ಕೃತಿಯಲ್ಲಿ ಇಲ್ಲಿನ ಕೆಲವು ಪ್ರಾಗೈತಿಹಾಸಿಕ ನೆಲೆಗಳನ್ನು ದಾಖಲೆಮಾಡಿದ್ದಾರೆ. ಹಾಗೇ ಸಂಗನಕಲ್ಲು ಪಿಕ್ಲಿಹಾಳ್, ಕಪ್ಪಗಲ್‌ನಲ್ಲಿ ನಡೆದ ಉತ್ಖನನಗಳ ಮಹತ್ವವನ್ನು ಸುಬ್ಬಾರಾವ್, ಕೆ.ಪೆದ್ದಯ್ಯ, ಆಲ್‌ಚಿನ್.ಬಿ. ಮತ್ತು ಎಫ್.ಆರ್.ಅಲ್‌ಚಿನ್ ಅನ್ಸರಿ.ಜೆಡ್., ಡಿ.ಮಜುಂದಾರ್ ಮೊದಲಾದ ವಿದ್ವಾಂಸರು ತಮ್ಮ ವಿವಿಧ ಉತ್ಖನನ ವರದಿಗಳಲ್ಲಿ ಆ ನೆಲೆಗಳ ಮಹತ್ವವನ್ನು ದಾಖಲಿಸಿದ್ದಾರೆ.

ಬಿ.ಎ.ವಿವೇಕ ರೈ ಅವರ 'ಪ್ರವಾಸಿ ಕಂಡ ವಿಜಯನಗರ' ಕೃತಿಯಲ್ಲಿ ಅಬ್ದುಲ್ ರಜಾಕ್ ಕಂಡ ವಿಜಯನಗರದ ವರ್ಣನೆಯಿದೆ. ಟಿ. ಪರಮೇಶ್ವರಪ್ಪನವರ 'ಹಂಪೆ ಪರಂಪರೆ' ಎನ್ನುವ ಕಿರುಕೃತಿಯಲ್ಲಿ(೧೯೯೭) ವಿಜಯನಗರ ಸಾಮ್ರಾಜ್ಯದಲ್ಲಿದ್ದ ವಿವಿಧ ಧರ್ಮ ಮತ್ತು ಸಂಸ್ಕೃತಿಯನ್ನು ಪರಿಚಯಿಸಿದ್ದಾರೆ. ಗುರುಮೂರ್ತಿ ಪೆಂಡಕೂರು ಅವರು 'ಕೃಷ್ಣದೇವರಾಯನ ಕಾಲದಲ್ಲಿ ಕ್ರೈಸ್ತ ಮಿಷನರಿಗಳು' ಎಂಬ ಲೇಖನದಲ್ಲಿ ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತ ಧರ್ಮಗಳ ಪ್ರಭಾವಗಳನ್ನು ಗುರುತಿಸಿದ್ದಾರೆ. ಶ್ರೀಕಂಠಯ್ಯನವರ 'ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರಣ' ಕೃತಿಯಲ್ಲಿ ವಿಜಯನಗರ ಕಾಲದ ಸಾಮಾಜಿಕ ವ್ಯವಸ್ಥೆಯ ಕುರಿತು ವಿವರಣೆ ನೀಡಿದ್ದಾರೆ. ವಿಜಯನಗರ ಕಾಲದಲ್ಲಿ ಮುಸ್ಲಿಂಧರ್ಮೀಯರ ಕುರಿತು ಲೇಖನಗಳು ಪ್ರಕಟಗೊಂಡಿವೆ. ಚನ್ನಬಸಪ್ಪ, ಎಸ್.ಪಾಟೀಲ್ ಅವರು ಬಳ್ಳಾರಿ ಜಿಲ್ಲೆ ಮತ್ತು ಹಂಪಿ(ವಿಜಯನಗರ) ಶಾಸನಗಳನ್ನು ಸಂಗ್ರಹಿಸಿ ರಾಜ್ಯ ಪುರಾತತ್ವ ಇಲಾಖೆಯಿಂದ ಪ್ರಕಟಿಸಿದ್ದಾರೆ. ಎಂ.ಎಂ.ಕಲಬುರ್ಗಿಯವರು ಕರ್ನಾಟಕದ ನಾಡುಗಳ ಬಗ್ಗೆ ಪ್ರಕಟಿಸಿರುವ ಕೃತಿಯಲ್ಲಿ ವಿಜಯನಗರ ಕಾಲದ ನಾಡುಗಳ ವಿವರಗಳಿವೆ. ಎಚ್.ಎಲ್.ನಾಗೇಗೌಡ ಸಂಪಾದಿಸಿರುವ 'ಪ್ರವಾಸಿ ಕಂಡ ಇಂಡಿಯಾ' ಕೃತಿಯಲ್ಲಿ ಹಂಪಿಗೆ ಭೇಟಿ ಇತ್ತ ಕೆಲ ಪ್ರವಾಸಿಗರ ವಿವರಗಳಿವೆ. ಅಲ್ಲದೆ ಎಸ್. ರಾಜಶೇಖರವರು 'ವಿಜಯನಗರ ಕಲೆ ಮತ್ತು ವಾಸ್ತುಶಿಲ್ಪ'ದ ಬಗ್ಗೆ ಬರೆದಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು 'ಹಂಪಿ ಜಾನಪದ' ಮತ್ತು ಚಲುವರಾಜು ಅವರು 'ಹಂಪಿ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು' ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ. ರಾಜ್ಯ ಪುರಾತತ್ವ ಇಲಾಖೆಯವರು ಪ್ರತಿವರ್ಷ ಇಲಾಖೆ ವತಿಯಿಂದ ಪ್ರಕಟಿಸುತ್ತಿರುವ 'ವಿಜಯನಗರ ಅಧ್ಯಯನ'ದ ವಿವಿಧ ಸಂಪುಟಗಳಲ್ಲಿ ವಿಜಯನಗರ ಚರಿತ್ರೆಯ ಇತ್ತೀಚಿನ ಸಂಶೋಧನೆಗಳನ್ನು ದಾಖಲಿಸಲಾಗಿದೆ. ಎಸ್.ವೈ.ಸೋಮಶೇಖರ ಅವರ 'ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿ' ಎಂಬ ಕೃತಿಯಲ್ಲಿ ವಿಜಯನಗರ ಸೈನ್ಯ ವ್ಯವಸ್ಥೆ ಕುರಿತು ದಾಖಲಿಸಿದ್ದಾರೆ. ವೆಂಕಟರಾವ್ ಅವರ 'ಸ್ಟೇಟಸ್ ಆಫ್ ಮುಸ್ಲಿಂಸ್ ಇನ್ ದಿ ವಿಜಯನಗರ ಎಂಪೈರ್' ಕೃತಿಯಲ್ಲಿ ಮುಸ್ಲಿಂರ ಸ್ಥಿತಿಗತಿಗಳನ್ನು ಹೇಳಿದ್ದಾರೆ. ಹಂಪಿ ಸಂಪುಟದಲ್ಲಿ 'ವಿಜಯನಗರದ ಶಾಸನದಲ್ಲಿ ಕುಸ್ತಿಯ ಉಲ್ಲೇಖಗಳು' ಎಂಬ ಲೇಖನವನ್ನು ಜೈನುಲ್ಲಾ ಬಳ್ಳಾರಿಯವರು ರಚಿಸಿದ್ದಾರೆ. 'ಹಂಪಿಯ ಪ್ರೇರಣೆಯ

ಸಂಕೇತವಾಗಿ' ಎಂಬ ಲೇಖನದಲ್ಲಿ ಪ್ರೊ.ಲಕ್ಷ್ಮಣ ತೆಲಗಾವಿಯವರು ಸಂಶೋಧಿಸಿ ಬರೆದಿದ್ದಾರೆ. ನಾಜಿಯಾ ಖಾಜಿಯವರು ಹಂಪಿ ಪರಿಸರದಲ್ಲಿ ಕಂಡುಬರುವ 'ಹಿಂದೂ ಮುಸ್ಲಿಂ ವಾಸ್ತುಶಿಲ್ಪ ಸ್ಮಾರಕಗಳು' ಕುರಿತಾಗಿ ಡಾ.ವಿರೂಪಾಕ್ಷಿ ಪೂಜಾರಹಳ್ಳಿ ಅವರ ಮಾರ್ಗದರ್ಶನದಲ್ಲಿ ಎಂ.ಫಿಲ್. ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಡಿಸಲಾಗಿದೆ. ವಿರೂಪಾಕ್ಷಿ ಪೂಜಾರಹಳ್ಳಿ ಅವರು '೨೦ನೇ ಶತಮಾನದ ಪೂರ್ವಾರ್ಧದಲ್ಲಿ ಹಂಪಿಗೆ ಭೇಟಿ ನೀಡಿದ ಗಣ್ಯರ ಅಭಿಪ್ರಾಯಗಳು' ಲೇಖನವನ್ನು ಚರಿತ್ರೆಯ ಅಧ್ಯಯನದಲ್ಲಿ ಪ್ರಕಟಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ವಾಸುದೇವ ಬಡಿಗೇರ, ವೈ.ಸೋಮಶೇಖರ್, ಕೊಟ್ರೇಶ್, ಬಾಲಸುಬ್ರಮಣ್ಯ, ಲಕ್ಷ್ಮಣ ತೆಲಗಾವಿ, ವಿರುಪಾಕ್ಷಿ ಪೂಜಾರಹಳ್ಳಿ, ಚೆನ್ನಸ್ವಾಮಿ ಸೋಸಲೆ, ಮೋಹನ ಕೃಷ್ಣ ರೈ. ಸಿ.ಆರ್.ಗೋವಿಂದರಾಜು ಮತ್ತು ಎಚ್.ತಿಪ್ಪೇಸ್ವಾಮಿ ಇವರು ಅಲ್ಲಲ್ಲಿ ಕೆಲ ಬಿಡಿಲೇಖನಗಳನ್ನು, ವರದಿಗಳನ್ನು ಈ ಪರಿಸರದ ಕುರಿತು ಪ್ರಕಟಿಸಿದ್ದಾರೆ. ಈ ಮೇಲಿನವರು ಹೆಸರಿಸಲಾದ ಮತ್ತು ಇಲ್ಲಿ ಉಲ್ಲೇಖಿಸದೆ ಇರುವ ಲೇಖನಗಳು ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದ ಗ್ರಂಥಗಳು ಸಹ ಈ ಆಧ್ಯಯನಕ್ಕೆ ಆಕರವಾಗಿವೆ.

೧.೫. ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ವಿಷಯದ ಅಧ್ಯಯನವು ನಿರ್ದಿಷ್ಟವಾದ ಚೌಕಟ್ಟನ್ನು ಹೊಂದಿರಬೇಕಾಗುತ್ತದೆ. ನಿರ್ದಿಷ್ಟವಾದ ವ್ಯಾಪ್ತಿಯು ವಿಷಯದ ಅಧ್ಯಯನಕ್ಕೆ ಅನುಕೂಲತೆಯನ್ನು ಮಾಡಿಕೊಡುತ್ತದೆ. ಅದರಂತೆ ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಆಕರವ್ಯಾಪ್ತಿ, ಸ್ಥಳವ್ಯಾಪ್ತಿ ಮತ್ತು ಕಾಲವ್ಯಾಪ್ತಿ ಎಂದು ಮೂರು ರೀತಿಯಲ್ಲಿ ವರ್ಗೀಕರಿಸಿಕೊಳ್ಳಲಾಗಿದೆ.

ಅ) ಆಕರ ವ್ಯಾಪ್ತಿ: ಹಂಪಿ ಮತ್ತು ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಪ್ರಕಟವಾದ ಸಾಹಿತ್ಯ, ಚರಿತ್ರೆಗೆ ಸಂಬಂಧಿಸಿದ ಕೃತಿಗಳು, ಪ್ರಕಟಿತ, ಅಪ್ರಕಟಿತ ಸಂಶೋಧನ ಪ್ರಬಂಧಗಳು, ಶಾಸನಗಳು, ಸ್ಮಾರಕ ಮತ್ತು ಸ್ಮಾರಕ ಅವಶೇಷಗಳನ್ನು ಆಧಾರವಾಗಿಟ್ಟುಕೊಂಡು ಈ ಅಧ್ಯಯನ ಮಾಡಲಾಗಿದೆ. ವಿದೇಶಿ ಪ್ರವಾಸಿಗರಾದ ಅಬ್ದುಲ್ ರಜಾಕ್, ದುಆರ್ತೆ ಬಾರ್ಬೊಸಾ, ದಾಮಿಂಗೋ ಪಾಯೇಸ್ (ಡುಮಿಂಗೋ ಪೇಯಿಸ್), ಫೆರ್ನಾವೋ ನೂನಿಜ್, ನಿಕೊಲೆ–ದೆ–ಕೊಂತಿ(ನಿಕೋಲೋಕಾಂಟಿ), ಅಥನೇಷಿಯಸ್ ನಿಕಿಟಿನ್, ಸೀಜರ್ ಫ್ರೆಡರಿಕ್, ಲೊಡೊವಿಕೊ ದಿ ವರ್ತೆಮಾ, ಲೆಫ್ಟಿನೆಂಟ್ ಎಮಿಟ್ ಮುಂತಾದವರು ತಮ್ಮ ಪ್ರವಾಸ ಕೃತಿಗಳಲ್ಲಿ ಹಂಪಿಯನ್ನು ಕುರಿತು ಬರೆದಿದ್ದಾರೆ. ಅವುಗಳು ಅಲ್ಲದೆ, ಕ್ಷೇತ್ರಕಾರ್ಯದ ಮೂಲಕ ಸ್ಥಳೀಯ ವಿದ್ವಾಂಸರನ್ನು ಸಂದರ್ಶನ ಮಾಡಿದ ವಿವರಗಳು ಪ್ರಸ್ತುತ ಅಧ್ಯಯನದ ಆಕರಗಳಾಗಿವೆ. ಕೆಲವೊಂದು ಇಂಗ್ಲಿಷ್ ಕೃತಿಗಳು ಕೂಡ ಈ ಅಧ್ಯಯನಕ್ಕೆ ಆಕರಗಳಾಗಿವೆ.

ಆ) ಸ್ಥಳ ವ್ಯಾಪ್ತಿ: ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಪ್ರಸ್ತುತ ಸಂದರ್ಭದ ಹಂಪಿಗೆ ಮಾತ್ರ ಸೀಮಿತಗೊಳಿಸಿಕೊಳ್ಳಲಾಗಿದೆ. ಆದರೆ ಹಂಪಿಯ ಸುತ್ತಮುತ್ತಲಿನ ಪ್ರದೇಶಗಳಾದ

ಆನೆಗೊಂದಿ, ವಿರುಪಾಪುರ ಗಡ್ಡಿ, ಕಮಲಾಪುರ, ಕಡ್ಡಿರಾಂಪುರ, ಮಲಪನಗುಡಿ, ತಳವಾರಘಟ್ಟ, ಬುಕ್ಕಸಾಗರ, ವೆಂಕಟಾಪುರ, ಹನುಮನಹಳ್ಳಿ, ಹೊಸಪೇಟೆ ಹಾಗೂ ಗಂಗಾವತಿ ಪ್ರದೇಶಗಳನ್ನು ಪ್ರಾಸಂಗಿಕವಾಗಿ ಆಯ್ದುಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕಾರಣ ಈ ಸ್ಥಳಗಳಿಂದ ಅಧ್ಯಯನಕ್ಕೆ ಪೂರಕವಾದ ಮಾಹಿತಿಗಳನ್ನು ಪಡೆಯಲಾಗಿದೆ.

ಇ) ಕಾಲ ವ್ಯಾಪ್ತಿ: ಪ್ರಸ್ತುತ ಅಧ್ಯಯನಕ್ಕೆ ವ್ಯಾಪ್ತಿಯನ್ನು ಹಂಪಿಯ ಉಗಮದಿಂದ ಇಂದಿನ ವರೆಗಿನ ಕಾಲವನ್ನು ಸೀಮಿತಗೊಳಿಸಲಾಗಿದೆ. ಅಂದರೆ ಕ್ರಿ.ಶ.೧೩೩೬ರ ಪೂರ್ವದಿಂದ ಹಿಡಿದು ಕ್ರಿ.ಶ. ೨೦೧೧ರ ವರೆಗಿನ ಕಾಲಘಟ್ಟವನ್ನು ಇಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

೧.೬. ಅಧ್ಯಯನದ ವಿಧಾನ

ಚರಿತ್ರೆಯನ್ನು ಅಧ್ಯಯನ ಮಾಡುವ ಸಂಶೋಧಕರಿಗೆ ಚರಿತ್ರೆಯ ವಿಧಿವಿಧಾನಗಳ ಬಗ್ಗೆ ಸಾಮಾನ್ಯವಾದ ತಿಳುವಳಿಕೆ ಅಗತ್ಯ. ಚರಿತ್ರೆಯನ್ನು ಕಟ್ಟುವಾಗ ಗತಕಾಲದ ಘಟನೆಗಳು ಮುಖ್ಯವಾಗುತ್ತವೆ. ಈ ಗತಕಾಲದ ಘಟನೆಗಳೇ ಮುಂದಿನ ಇತಿಹಾಸವಾಗಿ ರೂಪುಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ದೇಶ ವಿದೇಶಿಯರು ಹಂಪಿಯನ್ನು ಯಾವ ತಾತ್ವಿಕ ದೃಷ್ಟಿಕೋನದಲ್ಲಿ ನೋಡಿದ್ದಾರೆ ಎನ್ನುವ ಅಂಶಗಳ ಮೂಲಕ ಮುಂದೆ ಸಾಗುತ್ತದೆ. ಈ ವಿಷಯಕ್ಕೆ ಪೂರಕವಾಗಿ ಮಾಹಿತಿಗಳನ್ನು ಹಲವು ಮೂಲಗಳಿಂದ ಸಂಗ್ರಹಿಸುವುದು ಮತ್ತು ಸಂಗ್ರಹಿಸಿದಂತಹ ಮಾಹಿತಿಯನ್ನು ವಿಶ್ಲೇಷಣೆ ಮಾಡುವುದು ಸಂಶೋಧನೆಯ ಬಹುಮುಖ್ಯವಾದ ಅಂಗವಾಗಿದೆ. ಅದಕ್ಕೆ ಅನುಸರಿಸುವ ವಿಧಾನವು ಸಮಾಜ, ಚರಿತ್ರೆ, ಸಾಹಿತ್ಯ ಮತ್ತು ಸಂಸ್ಕೃತಿ ಸಂಶೋಧನೆಗಳಲ್ಲಿ ಬೇರೆ ಬೇರೆಯಾದ ದೃಷ್ಟಿಕೋನ ಇರುತ್ತದೆ. ಹೀಗಾಗಿ ಪ್ರಸ್ತುತ ಪ್ರಬಂಧದ ಮುಖ್ಯ ಧೋರಣೆ 'ದೇಶಿ–ವಿದೇಶಿಯರು ಹಂಪಿ'ಯನ್ನು ಗ್ರಹಿಸಿರುವ ದೃಷ್ಟಿಕೋನವನ್ನು ಚರಿತ್ರೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿ ಅಧ್ಯಯನದ ವಿಧಾನವನ್ನು ಕಟ್ಟಿಕೊಳ್ಳಲಾಗಿದೆ. ಅವು ಈ ರೀತಿಯಾಗಿವೆ:

೧) ಆಕರಗಳಿಲ್ಲದ ಚರಿತ್ರೆಯನ್ನು ಸೃಷ್ಟಿಸುವುದು ಅಸಾಧ್ಯವಾದ ಮಾತು. ಆದರೆ ಇಂದು ಸಿದ್ಧಾಂತಗಳಿಲ್ಲದೆ ಚರಿತ್ರೆಯಿಲ್ಲ ಎನ್ನುವ ಹೇಳಿಕೆ ಹೆಚ್ಚಾಗಿ ಕಂಡುಬರುತ್ತಿದೆ. ಆದರೂ ಈ ಸಿದ್ಧಾಂತಗಳ ರೂಪುಗೊಳ್ಳುವಿಕೆಯಲ್ಲೂ ಆಕರಗಳು ನಿರ್ಣಾಯಕ ಕೆಲಸ ಮಾಡುತ್ತವೆ. ಚರಿತ್ರೆಯಲ್ಲಿ ಗತಿಸಿದ ಯಾವುದೋ ಒಂದು ಘಟನೆಯನ್ನು ಕುರಿತು ಅಧ್ಯಯನ ನಡೆಸಬೇಕೆನ್ನುವಾಗ ಮೊದಲು ಮಾಡಬೇಕಾದ ಕೆಲಸವೆಂದರೆ, ಆ ಘಟನೆಯ ಕುರಿತು ಮಾಹಿತಿ ನೀಡುವ ದಾಖಲೆಗಳನ್ನು ಸಂಗ್ರಹಿಸುವುದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಈ ಅಧ್ಯಯನದ ಕ್ಷೇತ್ರ ಕಾರ್ಯದಲ್ಲಿ ಸಂಶೋಧಿಸಿದ ಮಾಹಿತಿಯನ್ನು ಪೂರಕ ಸಾಮಾಗ್ರಿ ಎಂದು, ಇಲ್ಲಿಯವರೆಗೆ ಬಂದಿರಬಹುದಾದ ಪ್ರಕಟಿತ, ಅಪ್ರಕಟಿತ ಕೃತಿಗಳಿಂದ, ನಿಯತಕಾಲಿಕೆ, ಸಂಸ್ಮರಣ ಗ್ರಂಥಗಳನ್ನು ಪ್ರಾಥಮಿಕ ಆಕರಗಳೆಂದು ಕರೆದುಕೊಂಡು ಸಿಕ್ಕ ಮಾಹಿತಿಯನ್ನು ಸಂಗ್ರಹಿಸಿ ಚರ್ಚೆಗೆ ಒಳಪಡಿಸಲಾಗಿದೆ. ಅಲ್ಲದೇ ಈ ಕ್ಷೇತ್ರದ ಮೇಲೆ ರಚಿತವಾಗಿರುವ ಕೆಲ ಪ್ರಕಟಿತ ಅಪ್ರಕಟಿತ ಲೇಖನಗಳನ್ನು ಅಭ್ಯಾಸ ಮಾಡಿ ಇವುಗಳ ಆಧಾರದ ಮೇಲೆ ಈ ಪ್ರಬಂಧವನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

೨) ಕೇಂದ್ರ ಮತ್ತು ರಾಜ್ಯ ಪುರಾತತ್ವ ಇಲಾಖೆಗಳ ವರದಿಗಳು, ಪ್ರಕಟಿತ ಕೃತಿಗಳ ನೆರವಿನಿಂದ ಈ ಪರಿಸರದಲ್ಲಿ ಕಾಣಬರುವ ಸಂಸ್ಕೃತಿಯ ಕೇಂದ್ರಗಳಾದ ಪ್ರಾಗೈತಿಹಾಸಿಕ ನೆಲೆಗಳು, ಚಾರಿತ್ರಿಕ ನೆಲೆಗಳು, ಹಬ್ಬ, ಜಾತ್ರೆ ನಡೆಯುವ ದೇವಾಲಯಗಳು ಮತ್ತು ಅಲ್ಲಿ ನಡೆಯುವ ವಿಶೇಷ ಆಚರಣೆಗಳು ಹಾಗೂ ಪ್ರಮುಖ ಪ್ರವಾಸಿ ತಾಣಗಳು, ಪ್ರವಾಸಿಗರ ಸವಲತ್ತುಗಳು, ಪ್ರವಾಸಿಗರ ಹೆಸರು, ದೇಶ, ಪ್ರವಾಸದ ಉದ್ದೇಶ, ಇಲ್ಲಿನ ಸಮಸ್ಯೆಗಳು ಮತ್ತು ಪರಿಹಾರಗಳು ಸ್ಥಳ, ಹೆಸರು, ತಾಲೂಕು, ಜಿಲ್ಲೆ ಅದರ ವೈಶಿಷ್ಟ್ಯತೆ, ನಕ್ಷೆ ಮೊದಲಾದ ವಿವರಗಳಿರುವ ಎರಡು ಪ್ರತ್ಯೇಕ ಪ್ರ–ಪತ್ರಗಳನ್ನು ಮೊದಲಿಗೆ ಸಿದ್ಧ ಮಾಡಿಕೊಳ್ಳಲಾಗಿದೆ. ಕೇಂದ್ರ ಮತ್ತು ರಾಜ್ಯ ಪುರಾತತ್ವ ಇಲಾಖೆಗಳಿಂದ ಈ ನೆಲೆಗಳ ಬಗ್ಗೆ ಮಾಹಿತಿ ಪಡೆದು ಕ್ಷೇತ್ರಕಾರ್ಯ ಮಾಡಬೇಕಾದ ಸ್ಥಳಗಳನ್ನು ಖಚಿತಪಡಿಸಿಕೊಳ್ಳಲಾಗಿದೆ.

೩) ಅನಂತರ ಕ್ಷೇತ್ರಕಾರ್ಯಕೈಗೊಂಡು, ಪ್ರಶ್ನಾವಳಿಗಳ ಮೂಲಕ ಮಾಹಿತಿ ಪಡೆದು ಛಾಯಾಚಿತ್ರಗಳನ್ನು ತೆಗೆದುಕೊಂಡು ಬರಲಾಗಿದೆ. ಮೊದಲು ಪ್ರಕಟಿತ ಗ್ರಂಥ ಮತ್ತು ವರದಿಗಳಿಂದ ಸಂಗ್ರಹಿಸಲಾದ ಟಿಪ್ಪಣಿ, ಇತ್ಯಾದಿ ಮಾಹಿತಿಗಳನ್ನೆಲ್ಲಾ ಕಲೆಹಾಕಿ, ತಾತ್ವಿಕವಾಗಿ ಚಿಂತಿಸಿ, ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

೪) ಕೆಲವೊಮ್ಮೆ ಆಕರಗಳು ತನ್ನಷ್ಟಕ್ಕೆ ತಾನೇ ಬರಡಾಗಿರುವ ಸಾಧ್ಯತೆಗಳಿರುತ್ತದೆ. ಇತಿಹಾಸಕಾರರ ಊಹೆ ಅಥವಾ ಕಲ್ಪನೆಗಳು ಆಕರಗಳ ಜೊತೆಗೆ ಸೇರಿ ಚರ್ಚೆ ನಡೆಸಿದಾಗ ಒಳನೋಟಗಳಿಂದ ಕೂಡಿದ ಅರ್ಥಪೂರ್ಣವಾದ ಇತಿಹಾಸ ಸೃಷ್ಟಿಯಾಗುತ್ತದೆ. ಇದೇ ಕಾರಣದಿಂದಾಗಿ ಒಂದೇ ಆಕರಗಳನ್ನು ಬಳಸಿ ಇಬ್ಬರು ಬರೆದು ಇತಿಹಾಸ ವಿಭಿನ್ನವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ದೇಶಿ ಮತ್ತು ವಿದೇಶಿ ಪ್ರವಾಸಿಗರು ಹಂಪಿಯನ್ನು ಅರ್ಥೈಸಿಕೊಂಡಿರುವ ವಿವಿಧ ಆಯಾಮಗಳಲ್ಲಿ ಭಿನ್ನತೆ ಇರುವ ಸಾಧ್ಯತೆಗಳಿವೆ. ಹಾಗೆಯೇ ಪ್ರಕಟಿತ ಗ್ರಂಥಗಳಲ್ಲಿ ಉಲ್ಲೇಖವಾಗಿರುವ ಕೆಲವು ಸ್ಥಳಗಳಲ್ಲಿ ಇಂದು ಯಾವುದೇ ಕುರುಹುಗಳು ದೊರೆಯುವುದಿಲ್ಲ. ಆದಕಾರಣ ಅಂಥ ಸ್ಥಳಗಳಲ್ಲಿ ಈ ಕಾಲದ ನೆಲೆಗಳು ಇದ್ದಿರಬಹುದೆಂದು ಊಹಿಸಲಾಗಿದೆ. ಇಲ್ಲಿನ ನೆಲೆಗಳಲ್ಲಿ ದೊರೆತ ಅವಶೇಷಗಳ ಆಧಾರದ ಮೇಲೆ ಅವುಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಕ್ಷೇತ್ರ ಪರಿವೀಕ್ಷಣಾ ಕಾರ್ಯಗಳು ತೆಗೆದ ಛಾಯಾಚಿತ್ರಗಳು, ನಕ್ಷೆಗಳು ಈ ಅಧ್ಯಯನಕ್ಕೆ ಪೂರಕ ಮಾಹಿತಿ ನೀಡುತ್ತವೆ. ಹೀಗೆ ಪ್ರಕಟಿತ ಮಾಹಿತಿಯ ಆಧಾರದ ಮೇಲೆ ಈ ಸಂಸ್ಕೃತಿಯನ್ನು ಗುರುತಿಸಲು ಪ್ರಯತ್ನಿಸಿದಾಗ ಅವುಗಳ ಹರಿವು ವಿಸ್ತಾರವಾಗಿರುವುದು ಕಂಡುಬರುತ್ತದೆ.

೫) ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿ ಬರುವ ಹಲವು ಪಠ್ಯಗಳನ್ನು ಓದುವಾಗ ಅಧ್ಯಯನಕ್ಕೆ ತೊಡಕುಂಟಾಯಿತು. ಆಗ ಕನ್ನಡದ ವಿದ್ವಾಂಸರನ್ನು ಮುಖತಃ ಭೇಟಿಯಾದಾಗ ಹಂಪಿಯನ್ನು ಈ ಪಠ್ಯಗಳ ಹಿನ್ನೆಲೆಯಲ್ಲಿ ಹೇಗೆ ಬಿಂಬಿತವಾಗಿದೆ ಎನ್ನುವುದನ್ನು ತಿಳಿಸಿಕೊಟ್ಟರು. ಈ ಮಾಹಿತಿ ಈ ಅಧ್ಯಯನಕ್ಕೆ ಪೂರಕವಾಗಿದೆ. ಅದನ್ನು ಇಲ್ಲಿ ಅಧ್ಯಯನದ ದೃಷ್ಟಿಯನುಸಾರವಾಗಿ ನಿರೂಪಿಸಿಕೊಳ್ಳಲಾಗಿದೆ.

೬) ಆಧುನಿಕ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕಾವ್ಯ, ಕಾದಂಬರಿಗಳು ವಿಶಿಷ್ಟತೆಯನ್ನು ಪಡೆದುಕೊಂಡಿವೆ. ಈ ಸಾಹಿತ್ಯದ ಪ್ರಕಾರಗಳಲ್ಲಿ ಹಂಪಿಯನ್ನು ಕುರಿತು ಹಲವು ವಿಷಯಗಳು ಚರ್ಚಿತವಾಗಿವೆ. ಇನ್ನು ಅಧ್ಯಯನದ ತೆಕ್ಕೆಗೆ ತೆಗೆದುಕೊಂಡು ಅಧ್ಯಯನದ ಚೌಕಟ್ಟಿಗೆ ಅಳವಡಿಸಿಕೊಳ್ಳಲಾಗಿದೆ.

೭) ಹಂಪಿಯ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕಲೆ ಮತ್ತು ವಾಸ್ತುಶಿಲ್ಪಗಳ ಮೂಲಕ ಚರ್ಚಿಸುವಾಗ ಆ ಕುರಿತು ಹಲವು ಆಧುನಿಕ ಮತ್ತು ಆಧುನಿಕಪೂರ್ವ ಪಠ್ಯಗಳಲ್ಲಿ ಇವುಗಳನ್ನು ಕಾಣಬಹುದಾಗಿದೆ. ಅದನ್ನು ಒಂದು ಅಧ್ಯಾಯವನ್ನಾಗಿ ರೂಪಿಸಿಕೊಂಡು ಅಧ್ಯಯನ ಮಾಡಲಾಗಿದೆ.

೮) ಹಂಪಿಯನ್ನು ದೇಶಿ-ವಿದೇಶಿಯರ ದೃಷ್ಟಿಕೋನವನ್ನು ಎರಡು ವಿಧದಲ್ಲಿ ಅಧ್ಯಯನ ಮಾಡಲಾಗಿದೆ. ಅ) ಚಾರಿತ್ರಿಕ ನೆಲೆಯ ವಿಧಾನ: ಇಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಮುಖ್ಯವಾಗಿ ಇಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಆ) ವರ್ತಮಾನದ ನೆಲೆಯ ವಿಧಾನ: ಇಲ್ಲಿ ಹಂಪಿಯನ್ನು ಯಾವ ಯಾವ ನಿಯೋಗಗಳಲ್ಲಿ ಬಳಕೆಯಾಗುತ್ತಿದೆ ಎನ್ನುವುದನ್ನು ಪ್ರಧಾನವಾಗಿ ಗಮನಿಸಲಾಗಿದೆ. ಹೀಗೆ ಹಂಪಿಯ ಗತಕಾಲದ ಚರಿತ್ರೆಯನ್ನು ಮತ್ತು ಅದರ ವರ್ತಮಾನದ-ರೂಪಾಂತರಗಳನ್ನು ಒಟ್ಟಿಗೆ ಇಟ್ಟು ನೋಡುವ ವಿಧಾನವನ್ನು ಇಲ್ಲಿ ಅನುಸರಿಸಲಾಗಿದೆ.

೯) ಹಿಂದಿನ ಮತ್ತು ವರ್ತಮಾನದಲ್ಲಿ(೨೦೦೫-೧೧) ಹಂಪಿಯ ಚರಿತ್ರೆಯನ್ನು ವಿದ್ವಾಂಸರು ಬರೆದಿರುವ ಟಿಪ್ಪಣಿಗಳನ್ನು ಪರಸ್ಪರ ಹೋಲಿಸುವ ಮೂಲಕ ಹಂಪಿಯ ಚಾರಿತ್ರಿಕ ನೋಟ ಬೆಳೆದು ಬಂದ ಬಗೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

೧.೭. ಅಧ್ಯಯನದ ಸ್ವರೂಪ

ವಿಜಯನಗರ ಅಥವಾ ಹಂಪಿಯನ್ನು ಕುರಿತು ಎಲ್ಲ ಬಗೆಯ ಪ್ರವಾಸಿಗರ ಬರಹಗಳು ಇತಿಹಾಸದ ಆಕರಗಳಾಗಿ ನಿರ್ಮಾಣವಾಗಿವೆ. ಕ್ರಿ.ಶ. ೧೫ನೇ ಶತಮಾನದ ಪೂರ್ವಾರ್ಧದಿಂದ ೨೦೧೧ರ ದಶಕದವರೆಗೆ ಹಂಪಿಗೆ ಹೋಗಿ ಬಂದವರ ಪಟ್ಟಿ ದೊಡ್ಡದಿದೆ. ಆದರೆ ಅವರ ಆಯ್ದ 'ಪ್ರವಾಸ ಕಥನ'ಗಳನ್ನು ಇಲ್ಲಿ ಮುಖ್ಯವಾಗಿ ಗಮನಿಸಲಾಗಿದೆ. ಪ್ರಸ್ತುತ ಅಧ್ಯಯನವನ್ನು ಚರಿತ್ರೆ ಅಧ್ಯಯನದ ವಿಧಾನಗಳನ್ನು ಬಳಸಿಕೊಂಡು ವಿಶ್ಲೇಷಿಸಲಾಗಿದೆ. ಇಲ್ಲಿ ಕಾಲ, ಘಟನೆ, ವ್ಯಕ್ತಿ, ದೇಶಿ ಮತ್ತು ವಿದೇಶಿ ಎಂಬ ಸಂಗತಿಗಳಿಗೆ ಒತ್ತುಕೊಟ್ಟು ಮಹಾಪ್ರಬಂಧದಲ್ಲಿ ಸಮಾರೋಪ ಸೇರಿಸಿಕೊಂಡು ಒಟ್ಟು ಎಂಟು ಅಧ್ಯಾಯಗಳನ್ನು ರೂಪಿಸಿಕೊಳ್ಳಲಾಗಿದೆ.

ಮೊದಲನೇ ಅಧ್ಯಾಯದಲ್ಲಿ ಪ್ರಸ್ತಾವನೆ, ಅಧ್ಯಯನದ ಉದ್ದೇಶ, ಮಹತ್ವ, ವಿಧಾನ ಮತ್ತು ಸ್ವರೂಪ, ವ್ಯಾಪ್ತಿ, ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ ಹಾಗೂ ಅಧ್ಯಯನದ ಪರಿಭಾಷೆಗಳ ತಾತ್ವಿಕ ಚರ್ಚೆಯನ್ನು ಕುರಿತು ಅಧ್ಯಯನ ಮಾಡಲಾಗಿದೆ. ಹಂಪಿಯನ್ನು ಶಿಲಾಯುಗದ ಸಂಸ್ಕೃತಿಯಿಂದ ಇಲ್ಲಿಯವರೆಗೆ ಹಲವು ಬಗೆಯ ಹೆಸರುಗಳನ್ನು ಕರೆಯಲಾಗಿದೆ. ಹಾಗೆಯೇ ಅನೇಕ ಶಾಸನಗಳಲ್ಲಿ ಹಂಪಿ ಉಲ್ಲೇಖಿತವಾಗಿದೆ. ಅದನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಎರಡನೇ ಅಧ್ಯಾಯವು ಹಂಪಿಯ ಭೌಗೋಳಿಕ ಪರಿಸರ ಎಂಬುದಾಗಿದೆ. ಇದರಲ್ಲಿ ಹಂಪಿಯ ಹೆಸರಿನ ಹಿನ್ನೆಲೆ, ಹಂಪಿಯ ಭೌಗೋಳಿಕ ಲಕ್ಷಣಗಳು ಎಂಬ ಉಪ ಅಧ್ಯಾಯಗಳಿವೆ. ಹಂಪಿ ಹೆಸರಿನ ಹಿನ್ನೆಲೆಯನ್ನು ಚರ್ಚಿಸುವಾಗ ಹಲವು ಶಾಸನಗಳು ಆಕರಗಳಾಗಿ ಇಲ್ಲಿ ಬಳಕೆಗೊಂಡಿವೆ. ಹಾಗೆಯೇ ಹಂಪಿಯ ಭೌಗೋಳಿಕ ಲಕ್ಷಣಗಳಲ್ಲಿ ಹಂಪಿಯ ವಾಯುಗುಣ ಮತ್ತು ಜೀವ ಸಂಕುಲ, ಅರಣ್ಯ, ನದಿಗಳು, ಭೂಮಿಯ ರಚನೆ ಮತ್ತು ಶಿಲಾ ಸಂಪತ್ತು, ಮಣ್ಣು ಮತ್ತು ಖನಿಜ ಸಂಪತ್ತು, ಕೃಷಿ ಉತ್ಪನ್ನಗಳು ಎಂಬುದಾಗಿ ವರ್ಗೀಕರಿಸಿಕೊಂಡು ಇಲ್ಲಿ ಚರ್ಚಿಸಲಾಗಿದೆ. ಇವು ಹಂಪಿಯ ವೈವಿಧ್ಯತೆಯನ್ನು ತಿಳಿಯಲು ಸಹಾಯಕವಾಗುತ್ತವೆ.

ಮೂರನೇ ಅಧ್ಯಾಯದಲ್ಲಿ ಪ್ರಾಗೈತಿಹಾಸಿಕ ಕಾಲ ಮತ್ತು ಚಾರಿತ್ರಿಕ ಕಾಲ ಎಂದು ಪ್ರಧಾನವಾಗಿ ವಿಭಾಗಿಸಿಕೊಳ್ಳಲಾಗಿದೆ. ಪ್ರಾಗೈತಿಹಾಸಿಕ ಕಾಲದಲ್ಲಿ ಮತ್ತೆ ಹಳೇ ಶಿಲಾಯುಗ ಸಂಸ್ಕೃತಿ, ಸೂಕ್ಷ್ಮ ಶಿಲಾಯುಗ ಸಂಸ್ಕೃತಿ, ನೂತನ ಶಿಲಾಯುಗ ಸಂಸ್ಕೃತಿ, ಶಿಲಾ ತಾಮ್ರಯುಗ ಸಂಸ್ಕೃತಿ ಹಾಗೂ ಕಬ್ಬಿಣಯುಗ/ ಬೃಹತ್‌ಶಿಲಾಯುಗ ಸಂಸ್ಕೃತಿ ಎಂದು ಉಪ ಅಧ್ಯಾಯಗಳಾಗಿ ರೂಪಿಸಿಕೊಳ್ಳಲಾಗಿದೆ. ಚಾರಿತ್ರಿಕ ಕಾಲವನ್ನು ಪುನಃ ಪ್ರಾಚೀನ ಕಾಲದ ಹಂಪಿ, ಮಧ್ಯಕಾಲೀನ ಹಂಪಿ, ಆಧುನಿಕ ಕಾಲದ ಹಂಪಿ ಎಂದು ಮೂರು ಉಪವಿಭಾಗಗಳಾಗಿ ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗಿದೆ. ಈ ಮೂರು ವಿಭಾಗಗಳು ಒಂದಕ್ಕೊಂದು ತಳಕು ಹಾಕಿಕೊಂಡಿರುವುದರಿಂದ ಇವು ಅಧ್ಯಯನಕ್ಕೆ ಪೂರಕವಾಗಿದೆ.

ನಾಲ್ಕು ಮತ್ತು ಐದನೇ ಅಧ್ಯಾಯಗಳಲ್ಲಿ ಹಂಪಿಯನ್ನು ದೇಶಿಯರ, ವಿದೇಶಿ ಪ್ರವಾಸಿಗರ/ ಯಾತ್ರಿಕರ ದೃಷ್ಟಿಯನ್ನು ಕನ್ನಡ ಜಾನಪದ ಸಾಹಿತ್ಯ ಕೃತಿಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಆಧುನಿಕ ವಿದ್ವಾಂಸರ ದೃಷ್ಟಿಯಲ್ಲಿ ಹಂಪಿ ಎನ್ನುವ ಅಧ್ಯಯನವನ್ನು ಮೂರು ಉಪ ಅಧ್ಯಾಯಗಳನ್ನಾಗಿ ಮಾಡಿಕೊಂಡು ಅವುಗಳಲ್ಲಿ ಹಂಪಿಯನ್ನು ದೇಶಿ ಪ್ರವಾಸಿಗರು/ ಯಾತ್ರಿಕರು, ಆಧುನಿಕ ವಿದ್ವಾಂಸರು ಯಾವ ಬಗೆಯಲ್ಲಿ ಕಂಡಿದ್ದಾರೆ ಮತ್ತು ಅದನ್ನು ಯಾವ ರೀತಿ ತಮ್ಮ ಬರಹಗಳಲ್ಲಿ ದಾಖಲಿಸಿದ್ದಾರೆ ಎಂಬುದನ್ನು ಮುಖ್ಯವಾಗಿ ವಿವರಿಸಲಾಗಿದೆ. ಆಧುನಿಕ ಕನ್ನಡ ಪೂರ್ವ ಸಾಹಿತ್ಯ ಕೃತಿಗಳು ಹಂಪಿಯನ್ನು ಯಾವ ಬಗೆಯಲ್ಲಿ ಉಲ್ಲೇಖಿಸಿವೆ ಎನ್ನುವುದನ್ನು ಸಹ ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ದೇಶಿ–ವಿದೇಶಿ ವಿದ್ವಾಂಸರ ದೃಷ್ಟಿಯಲ್ಲಿ, ಲೇಖನಗಳ ದೃಷ್ಟಿಯಲ್ಲಿ ಸಂಶೋಧನ ಪ್ರಬಂಧಗಳು ಮತ್ತು ಕೃತಿಗಳ ಹಿನ್ನೆಲೆಯಲ್ಲಿ ಹಾಗೂ ಗಣ್ಯರ ದೃಷ್ಟಿಯಲ್ಲಿ ಹಂಪಿಯನ್ನು ಹಲವು ಆಯಾಮಗಳಲ್ಲಿ ನೋಡಲಾಗಿದೆ. ಅದನ್ನು ಇಲ್ಲಿ ಚಾರಿತ್ರಿಕವಾದ ದೃಷ್ಟಿಕೋನದಲ್ಲಿ ವಿವರಿಸಲಾಗಿದೆ.

ಆರನೇ ಅಧ್ಯಾಯದಲ್ಲಿ ಹಂಪಿಯ ಸಾಂಸ್ಕೃತಿಕ ಹಿನ್ನೆಲೆಯನ್ನು ಕಲೆ ಮತ್ತು ವಾಸ್ತು ಶಿಲ್ಪಗಳ ಮೂಲಕ ಚರ್ಚಿಸಲಾಗಿದೆ. ನಂತರ ಸಂಸ್ಕೃತಿ, ಪ್ರಮುಖ ಹಬ್ಬ, ಜಾತ್ರೆಗಳ ಮುಖೇನ ಹಂಪಿಯ ಸಂಸ್ಕೃತಿ ಎನ್ನುವ ಉಪ ಶೀರ್ಷಿಕೆಗಳ ಅಡಿಯಲ್ಲಿ ವ್ಯವಸ್ಥಿತವಾಗಿ ಚರ್ಚಿಸಲಾಗಿದೆ.

ಏಳನೇ ಅಧ್ಯಾಯದಲ್ಲಿ ಹಂಪಿಯ ಸಮಕಾಲೀನ ಸಮಸ್ಯೆಗಳು ಮತ್ತು ಪ್ರಸುತ್ತತೆಯನ್ನು ಪ್ರವಾಸೋದ್ಯಮದ ಹಿನ್ನೆಲೆಯಲ್ಲಿ ಹಂಪಿ, ವಿಶ್ವಪರಂಪರೆಯ ತಾಣವಾಗಿ ಹಂಪಿ ಎನ್ನುವ

ವಿಷಯಗಳನ್ನು ಪ್ರಸಕ್ತ ಹಂಪಿಯನ್ನು ಕೇಂದ್ರವನ್ನಾಗಿಟ್ಟುಕೊಂಡು, ಅದು ಯಾವ ಬಗೆಯ ಸಮಸ್ಯೆಗಳನ್ನು ಎದುರಿಸುತ್ತದೆ ಮತ್ತು ಅದಕ್ಕೆ ಪರಿಹಾರಗಳೇನು ಎನ್ನುವುದನ್ನು ಸಹ ಚರ್ಚಿಸಲಾಗಿದೆ.

ಎಂಟನೇ ಅಧ್ಯಾಯದಲ್ಲಿ ಸಮಾರೋಪವಿದೆ. ಇದರಲ್ಲಿ ಅಧ್ಯಯನದ ಫಲಿತಗಳು ಹಾಗೂ ಅಧ್ಯಯನದ ಹೊಸ ಸಾಧ್ಯತೆಗಳನ್ನು ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ.

❑❑❑

ಅಧ್ಯಾಯ ಎರಡು

ಹಂಪಿಯ ಭೌಗೋಳಿಕ ಪರಿಸರ

೨.೧. ಹಂಪಿ ಹೆಸರಿನ ಹಿನ್ನೆಲೆ

೨.೨. ಹಂಪಿಯ ಭೌಗೋಳಿಕ ಲಕ್ಷಣಗಳು

ಅಧ್ಯಾಯ ಎರಡು

ಹಂಪಿಯ ಭೌಗೋಳಿಕ ಪರಿಸರ

ಪ್ರಸ್ತಾವನೆ

ಜೀವ ಸಂಕುಲದ ಉಗಮ, ವಿಕಾಸ ಹಾಗೂ ಅಭಿವೃದ್ಧಿಯಲ್ಲಿ ಪರಿಸರ ಗಮನಾರ್ಹ ಪಾತ್ರವಹಿಸಿದೆ. ಅಷ್ಟೆ ಅಲ್ಲದೆ ಇಡೀ ಸಂಸ್ಕೃತಿಯ ಏಳ್ಗೆ ಮತ್ತು ಅವನತಿ ಅಲ್ಲಿನ ಪರಿಸರವನ್ನು ಅವಲಂಬಿಸಿರುತ್ತದೆ. ಆಯಾ ಭೌಗೋಳಿಕ ಪರಿಸರವನ್ನು ಅವಲಂಬಿಸಿಯೇ ವಿಶ್ವದ ನಾಗರಿಕತೆಗಳು ಮತ್ತು ಸಾಮ್ರಾಜ್ಯಗಳು ಜನ್ಮತಾಳಿ ಅವನತಿ ಹೊಂದಿದ್ದು ಇಂದಿಗೆ ಇತಿಹಾಸ.

ಹಂಪಿ ಮತ್ತು ಅದರ ಸುತ್ತಮುತ್ತಲಿನ ಉತ್ತಮ ಭೌಗೋಳಿಕ ಪರಿಸರದಿಂದಾಗಿ, ಇಲ್ಲಿ ಬಹು ಹಿಂದಿನಿಂದ ಮಾನವ ಸಂಸ್ಕೃತಿ ರೂಪುಗೊಂಡಿದೆ. ಇಲ್ಲಿನ ಭೌಗೋಳಿಕ ಪರಿಸರದಲ್ಲಿ ಕಂಡುಬರುವ ಪ್ರಮುಖ ಭೌಗೋಳಿಕ ಅಂಶಗಳು ಯಾವುವು; ಅದರ ಭೂ–ಮೇರೆಗಳು ಯಾವುವು ಮತ್ತು ಅವು ಇಲ್ಲಿನ ಮಾನವ ಸಂಸ್ಕೃತಿಯ ಅಭಿವೃದ್ಧಿಯಲ್ಲಿ ಹೇಗೆ ತನ್ನ ಪಾತ್ರವನ್ನು ನಿರ್ವಹಿಸಿವೆ ಎಂಬುದನ್ನು ಅಧ್ಯಯನ ಮಾಡುವುದು ಇಲ್ಲಿ ಮುಖ್ಯವೆನಿಸುತ್ತದೆ. ಆದ್ದರಿಂದ ಹಂಪಿಯ ಭೌಗೋಳಿಕ ಸ್ಥಾನ, ಅದರ ಹೆಸರಿನ ಹಿನ್ನೆಲೆ ಮತ್ತು ಇಲ್ಲಿನ ಪರಿಸರದ ವೈಶಿಷ್ಟ್ಯತೆಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

೨.೧. ಹಂಪಿ ಹೆಸರಿನ ಹಿನ್ನೆಲೆ

ವಿಶ್ವವಿಖ್ಯಾತ 'ಹಂಪಿ' ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿಗೆ ಸೇರಿದ್ದು, ಭೌಗೋಳಿಕವಾಗಿ ಹಾಗೂ ಚಾರಿತ್ರಿಕವಾಗಿ ತನ್ನದೇ ಆದ ಮಹತ್ವ ಮತ್ತು ಹಿನ್ನೆಲೆಯನ್ನು ಹೊಂದಿದೆ. ಈ ಪರಿಸರ ವಿಶೇಷವಾಗಿ ವಿಜಯನಗರ ಸಾಮ್ರಾಜ್ಯದ ಕಾಲಾವಧಿಯಲ್ಲಿ ಅದರ ಆಡಳಿತ ಕೇಂದ್ರವಾಗಿ, ಅದರ ರಾಜಧಾನಿಯಾಗಿ, ಉಪನಗರವಾಗಿ ಅಲ್ಲದೇ ಸಾಂಸ್ಕೃತಿಕ ಕೇಂದ್ರವಾಗಿ ಪ್ರಸಿದ್ಧಿ ಪಡೆದಿತ್ತು.

'ಹಂಪಿ' ಎಂಬ ಪದದ ನಿಷ್ಪತ್ತಿಯ ಕುರಿತಂತೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಅದು ವ್ಯಕ್ತಿವಾಚಕವೋ ಅಥವಾ ಪ್ರದೇಶ ವಾಚಕವೋ ಎಂಬ ಜಿಜ್ಞಾಸೆಯ ಚರ್ಚೆ ಇಂದಿಗೂ ಇತಿಹಾಸ ವಿದ್ವಾಂಸರಲ್ಲಿ ನಡೆದೇ ಇದೆ. ಹಂಪಿಯಲ್ಲಿ ದೊರೆತ ಶಾಸನಗಳು ಮತ್ತು ಇಲ್ಲಿ ರಚಿತವಾದ ಸಾಹಿತ್ಯ ಕೃತಿಗಳು ಹಂಪಿಯನ್ನು ದಾಖಲಿಸಿದ ಬಗೆಯನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

"ಪಂಪ' ಎಂಬುದರಿಂದ 'ಹಂಪಿ'ಯಾಗಿರಬೇಕೆಂದು ಒಂದು ಅಭಿಪ್ರಾಯವಿದೆ. 'ಪಂ' ಅಂದರೆ ಅಮೃತವೆಂದೂ 'ಪ' ಎಂದರೆ ಸ್ವರ್ಣವೆಂದು ಅರ್ಥೈಸಿ, ಬೇವವರಿಗೆ ಅಮೃತ ಸವಾನವಾದ ವೋಕ್ಷವನ್ನು ಸಂಪತ್ ರೂಪವಾದ ಭೋಗವನ್ನು ಕೊಟ್ಟು ರಕ್ಷಿಸುವಂತಹದ್ದಾಗಿರುವುದರಿಂದ ಇದಕ್ಕೆ 'ಪಂಪಾ" ಎಂದು ಹೆಸರಾಯಿತೆಂದು ಪಂಪಾ ಮಹಾತ್ಮೆ ಕೃತಿಯಲ್ಲಿ ವಿಶ್ಲೇಷಿಸಲಾಗಿದೆ.[೧] ಚಿದಾನಂದಮೂರ್ತಿ ಅವರು 'ಪಂಪಾ' ಎಂಬುದು ಒಂದು ನದಿ ಈ ನದಿಯ ಉಲ್ಲೇಖ ರಾಮಾಯಣ, ಮಹಾಭಾರತಗಳಲ್ಲಿಯೂ ಬರುತ್ತದೆ. ಇಂದಿಗೂ ಕೂಡ ಈ ಹೆಸರಿನ ನದಿಗಳು ಕೇರಳ ಮತ್ತು ಆಂಧ್ರಗಳಲ್ಲಿ ಇವೆ ಎಂದು ಹೇಳುತ್ತಾ, ಪಂಪಾ(ಪಂಪ) ದ್ರಾವಿಡ ಭಾಷೆಯ ಪದವಾದರೆ ಅದರ ಮೂಲ ದಟ್ಟವಾಗಿರುವುದು, ಸಂದಣಿಯ ಎಂಬರ್ಥದ ಕನ್ನಡ ಪಂಪಕ(ಪಪ್ಪಕ) ಪುಷ್ಪಕ ಆಗಿರಬಹುದು. ತಮಿಳು–ಪಂಪು, ಪಂಪಲ್; ತೆಲುಗು–ಪಂಬು; ಧಾತು–ಪರ(ದು) ಹರಡು ದಟ್ಟ ಅರಣ್ಯದ ಮಧ್ಯೆ ಹರಿಯುವ ನದಿ ಪಂಪಾ(ಪಂಪ) ಆಗಿರಬಹುದು. 'ಪಂಪಾ' ಪದವು ಮೂಲತಃ ನದಿಯನ್ನು ಹೇಳುತ್ತದೆ. "ಪಂಪಾ' ನದಿ ಹರಿಯುತ್ತಿದ್ದ ಪ್ರಾಚೀನ ಜನವಸತಿಯ ಹಂಪಿ ಪ್ರದೇಶದಲ್ಲಿ ಪಂಪಾಂಬಿಕೆ ದೇವತೆ ಒಂದು ಆಕೆಯ ದೇವಾಲಯದ ಸುತ್ತ ಹಳ್ಳಿ ಬೆಳೆದಿದ್ದರಿಂದ ಆ ಊರಿಗೆ 'ಪಂಪೆ' ಎಂದು ನಾಮಕರಣಗೊಂಡು ಬೆಳಕಿಗೆ ಬಂದಿತು" ಎಂದು ಹೇಳುತ್ತಾರೆ.[೨]

ಸಾಮಾನ್ಯವಾಗಿ ಜನತೆಯು ತುಂಗಭದ್ರಾ ನದಿಯನ್ನು ಹಂಪಿಹೊಳೆ, ಪಂಪಾತೀರ್ಥ ಎಂದು ಕರೆಯುವುದುಂಟು. ಇದು ಭೌಗೋಳಿಕವಾಗಿ ಹರಿದು ಬರುತ್ತ ಅಲ್ಲಲ್ಲಿ ಕವಲೊಡೆದಿರುವುದು ಮತ್ತೇ ಕೂಡಿರುವುದು ಅನೇಕ ನಡುಗಡ್ಡೆಗಳನ್ನು ಸೃಷ್ಟಿಸಿರುವುದು ಶಾಖೆಗಳಾಗಿ ಹರಿದು ಹಂಚಿ ಹೋಗಿದ್ದರಿಂದ 'ಪಂಪ' ಅಂದರೆ ಭಾಗಗಳಾಗಿದ್ದು, ಎಂಬರ್ಥವನ್ನು ಪಡೆದು ಈ ಭಾಗದ ಜನರ ಬಾಯಲ್ಲಿ ಹಂಪಿ ಹೊಳೆಯಾಗಿದೆ. "ದ್ರಾವಿಡಿಯನ್ ಎಟಮೆಲಾಜಿಕಲ್" ಎಂಬ ನಿಘಂಟುವಿನಲ್ಲಿ ಪಯಲ್, ಪಂಚು, ಪಂಪ, ಪಡು, ಪಂಕು ಮೊದಲಾದ ಪದಗಳಿಗೆ "ವಿಂಗಡಣೆ" ಎಂಬ ಅರ್ಥವಿದೆ.[೩] ಹೀಗಾಗಿ ಈ ಭಾಗದ ಜನರು ಇಲ್ಲಿನ ನದಿಯಿಂದಾಗಿ ಇದನ್ನು ಪಂಪ ಎನ್ನುತ್ತಾರೆ. ಜನರ ಬಾಯಲ್ಲಿ ಈ ಪದ ಸ್ಖಾಲಿತ್ಯವಾಗಿ ಮುಂದೆ ಹಂಪಿಯಾಯಿತು ಎಂದು ಹೇಳಬಹುದಾಗಿದೆ.

'ಪಂಪಾ' ಎಂಬ ಶಬ್ದವು ಭಾಗಶಃ ವ್ಯಕ್ತಿವಾಚಕವಾಗಿರದೆ ನದಿವಾಚಕವಾಗಿಯೇ ಇದೆ. ತುಂಗಭದ್ರಾ ನದಿಯಿಂದಲೇ "ಪಂಪಾ" ಹೆಸರು ಬಂದಿದೆ. ಈ ನದಿಯ ದಂಡೆಯ ಮೇಲೆ ಪಾರ್ವತಿ ನೆಲೆಸಿದಳೆಂದು ಪಂಪಾನದಿ ತೀರದಲ್ಲಿ ಅವಳು ನೆಲೆಸಿದ್ದರಿಂದ ಶಕ್ತಿಗೆ ಅಧಿದೇವತೆಯಾಗಿದ್ದರಿಂದ ಶಕ್ತಿಯ ಆರಾಧನೆ ಹೆಚ್ಚಿತು. ಪಾರ್ವತಿ ಪಂಪಾನದಿ ತೀರದಲ್ಲಿ ನೆಲೆಸಿದ್ದರಿಂದ ಇವಳನ್ನು ಪಂಪಾಂಬಿಕೆಯಾದಳು, ಜನರ ಬಾಯಲ್ಲಿ ಪಂಪಾದೇವಿ ಹಂಪಾದೇವಿಯಾದಳು. ನಂತರ ಈಕೆಯ ಪ್ರಭಾವದಿಂದ ನದಿಯು ಪಂಪಾ ತೀರವಾಗಿ ಕೊನೆಗೆ 'ಹಂಪಿ' ಎಂದು ಹೆಸರು ಪಡೆದು ಪ್ರಸಿದ್ಧಿಯನ್ನು ಪಡೆಯಿತು.

ಹಂಪಿಯು ರಾಮಾಯಣ ಕಾಲದಲ್ಲಿ ವಾಲಿ–ಸುಗ್ರೀವರ ರಾಜಧಾನಿಯಾದ ಕಿಷ್ಕಿಂಧೆಯಾಗಿತ್ತು ಎಂದು ಜನರು ಹೇಳುತ್ತಾರೆ. ಆದರೆ ೧೦ನೇ ಶತಮಾನದಿಂದೀಚೆಗೆ ಇದನ್ನು 'ಪಂಪಾಕ್ಷೇತ್ರ', 'ಹಂಪಿ', 'ಹೊಸಪಟ್ಟಣ' 'ವಿರೂಪಾಕ್ಷ ತೀರ್ಥ', 'ವಿಜಯನಗರ', 'ವಿದ್ಯಾನಗರ' ಮತ್ತು 'ದಕ್ಷಿಣಕಾಶಿ' ಮುಂತಾದ ಪರ್ಯಾಯ ಹೆಸರುಗಳಿಂದ ಶಾಸನಗಳಲ್ಲಿ ಕರೆಯಲ್ಪಟ್ಟಿದೆ.[೪]

"ಕ್ರಿ.ಶ. ೧೧೯೯ರ ಇಮ್ಮಡಿ ರಾಚಮ್ಮನ ಶಾಸನವು 'ಪಂಪಾಕ್ಷೇತ್ರ', 'ಪಂಪಾತೀರ್ಥ', 'ವಿರೂಪಾಕ್ಷ ತೀರ್ಥ' ಎಂದು ಕರೆದಿದೆ.[೫] ವಿರೂಪಾಕ್ಷ ದೇವಾಲಯದ ಕನಕಗಿರಿ ಗೋಪುರದಲ್ಲಿನ ಹೊಯ್ಸಳ ಸೋಮೇಶ್ವರನ ಕ್ರಿ.ಶ. ೧೨೩೬ರ ಶಾಸನವು "ಪಂಪಾಕ್ಷೇತ್ರ"ವೆಂದೂ, ಇದೇ ಗೋಪುರದ ಪೂರ್ವಕ್ಕಿರುವ (ಕ್ರಿ.ಶ.೧೩೭೯) ೨ನೇ ಹರಿಹರನ ಕಾಲದ ಶಾಸನವು "ಶ್ರೀ ಬುಕ್ಕರಾಜೋ ವಿಜಯಾಧಿದಾನಾಂ ಪುರಂದರಶ್ರೀ" ಎಂದೂ ಉಲ್ಲೇಖವಿದೆ.[೬] ಅದು ಹೀಗೆಂದು ಅರ್ಥೈಸುತ್ತದೆ: 'ವಿಜಯ' ಎಂಬ ಅಭಿದಾನದಿಂದ ಕಂಗೊಳಿಸುವ ನಗರದಲ್ಲಿ ಶ್ರೀ ಬುಕ್ಕರಾಯನು ಆಳ್ವಿಕೆ ಮಾಡುತ್ತಿದ್ದನು. ಈ ಶಾಸನವು ಹಂಪಿಯನ್ನು "ವಿಜಯ" ಎಂದು[೭] ಹಾಗೂ ನದಿಯ ದಂಡೆಯ ನರಸಿಂಹ ದೇವಾಲಯದ ಪೂರ್ವಕ್ಕಿರುವ ಬಂಡೆಯ ಮೇಲಿನ ಶಾಸನವು "ಪಂಪಾತೀರ" ಎಂದೂ,[೮] ಇದರ ಪಕ್ಕದ ಶಾಸನದಲ್ಲಿ "ಪಂಪಾ ತೀರನಿಲಯ" ಎಂದು ಕರೆದಿದೆ.[೯] ಈ ಶಾಸನವು 'ವಿರೂಪಾಕ್ಷ' ಪಂಪಾ ಸ್ಥಳದ ಒಡೆಯ ಎಂಬರ್ಥ ಎಂದಿರುವುದರಿಂದ ಹಂಪಿಯನ್ನು ಪಂಪಾ ಎಂದು ಕರೆಯುತ್ತಿದ್ದರೆಂದು ತಿಳಿಯಬಹುದಾಗಿದೆ.

ಕ್ರಿ.ಶ.೧೪೦೦ಕ್ಕೆ ಸೇರುವ ವಿಜಯವಿಠಲ ದೇವಾಲಯದ ಹೊಂಡದ ಬಂಡೆಯ ಮೇಲಿನ ಈ ಶಾಸನದಲ್ಲಿ "ತುಂಗಭದ್ರಾ ತೀರ(ದ)ಲು ಭಾಸ್ಕರ ಕ್ಷೇತ್ರದಲು ಪಂಪಾ ಸರಸ್ಸಿನ" ಎಂದು ಉಲ್ಲೇಖವಿದೆ.[೧೦] ಇದರಲ್ಲಿ ತುಂಗಭದ್ರಾ ತೀರದ ಭಾಸ್ಕರ ಕ್ಷೇತ್ರ, ಪಂಪಾ ಸರಸ್ಸು ಎಂದು ಕರೆದಿದೆ. ಆನೆ ಸಾಲಿನ ಹಿಂದಿರುವ ಜೈನ ಬಸದಿಯ ಗೋಡೆಯಲ್ಲಿನ ೨ನೇ ದೇವರಾಯನು ಕ್ರಿ.ಶ. ೧೪೨೪ರ ಶಾಸನದಲ್ಲಿ "...ವಿಜಯನಗರಸ್ಯ....ವಿಜಯನಗರ ರೀತಿ ತಸ್ಮಿನಗರೀ..." ಎಂದೂ,[೧೧] ಅಲ್ಲೇ ಇರುವ ಬೆಟ್ಟದ ಮೇಲಿನ ಗುಂಡಿನ ಮೇಲೆ ಇರುವ ಶಾಸನವು "ವಿಜಯನಗರ ಪಟ್ಟಣ" ಎಂದೂ,[೧೨] ಗಾಣಗಿತ್ತಿ ಬಸಿದಿಯ ಮುಂಭಾಗದ ಮಹಾಸ್ತಂಭದಲ್ಲಿನ ಕ್ರಿ.ಶ.೧೩೮೬ರ ಶಾಸನವು 'ವಿಜಯಾಭಿದಂ ನಗರಂ' ಎಂದು ಉಲ್ಲೇಖಿತಗೊಂಡಿದೆ.[೧೩] ವಿಜಯನಗರ ಪಟ್ಟಣ, ವಿಜಯಾಭಿದನಗರ ವಿಜಯನಗರ ರೀತಿ ಎಂದು ಬುಕ್ಕರಾಯ ಮತ್ತು ೨ನೇ ದೇವರಾಯನ ಕಾಲದ ಶಾಸನಗಳು ಹಂಪಿಯನ್ನು ಈ ಮೇಲ್ಕಂಡ ಹೆಸರಿಂದ ಕರೆಯುತ್ತವೆ. ಪ್ರೌಢದೇವರಾಯನ ಕ್ರಿ.ಶ.೧೪೫೫ರ ಶಾಸನವು ಇದು ನಿಂಬಾಪುರ, ಕಪಿಲಾಶ್ರಮದ ಬಳಿಯಿದೆ. ಇದು 'ಶ್ರೀ ತುಂಗಭದ್ರಾ ಪರಿಲೇ ನಗರೇ... ವಿಜಯನಗರೀ... ಎಂದೂ ಹಂಪಿಯನ್ನು 'ತುಂಗಾಭದ್ರಾ ಪರಿಖೇನಗರ' 'ವಿಜಯನಗರಿ' ಎಂದು ದಾಖಲಿಸಿದೆ.[೧೪]

ಕೃಷ್ಣದೇವರಾಯನ ಕಾಲದ ಕ್ರಿ.ಶ.೧೫೨೨ರ ಶಾಸನವು ಇದು ಕಮಲಾಪುರದ ವಾಯುವ್ಯಕ್ಕೆ ಇರುವ ಕುಂಬಾರ ಕುಂಟೆಯ ದರ್ಗಾ ಬಳಿಯ ಹೊಂಡದಲ್ಲಿದೆ. ಇದು "ವಿಜಯನಗರ ಪಟ್ಟಣ" ಎಂದೂ ಹೇಳಿದೆ.[೧೫] ಮಾತಂಗ ಪರ್ವತದ ಮೇಲೆ ಇರುವ ಅಚ್ಯುತ ದೇವರಾಯನ ಕ್ರಿ.ಶ.೧೫೩೨ರ ಶಾಸನವು "ವಿಜೇಯನಾಗರ" ವೆಂದೂ,[೧೬] ಸದಾಶಿವರಾಯನ ಕ್ರಿ.ಶ.೧೫೪೫ರ ಶಾಸನವು 'ವಿದ್ಯಾನಗರ' ಎಂದು ದಾಖಲಿಸಿವೆ.[೧೭] ಇದು ಸದ್ಯಕ್ಕೆ ಚಂಡಿಕೇಶ್ವರ ದೇವಾಲಯದಲ್ಲಿ ಮುರಿದು ಬಿದ್ದಿರುವ ಸ್ಥಿತಿಯಲ್ಲಿಯೇ ಇದೆ. ಕ್ರಿ.ಶ.೧೩೭೯ರ ೨ನೇ ಹರಿಹರನ ಕಾಲದ ಶಾಸನವು "ಪಂಪಾಂಬುಧಿ"[೧೮] ಎಂದೂ, ಲಕ್ಷ್ಮೀಧರನ ಕ್ರಿ.ಶ.೧೪೧೦ರ ಶಾಸನವು "ಪಂಪಾಪುರ"ವೆಂದೂ,[೧೯] ಕ್ರಿ.ಶ.೧೧೯೯ರ ಕುರುಗೋಡು ಸಿಂಧರ ಕಲಿದೇವನ ಶಾಸನವು "ಪಂಪಾತೀರ್ಥ", "ಹಂಪೆ" ಎಂದು ದಾಖಲಿಸಿದೆ.[೨೦] ಹೀಗೆ 'ಹಂಪಿ'ಯನ್ನು 'ಹಂಪಿಯ ಮೃಡರ' ಇನ್ನೂ ಹಲವಾರು ನಾಮಗಳಿಂದ ಶಾಸನಗಳು ದಾಖಲಿಸಿವೆ.[೨೧] ಶಾಸನಗಳಂತೆ ಕನ್ನಡದಲ್ಲಿ ರಚನೆಯಾದ ಹಲವಾರು ಸಾಹಿತ್ಯ ಕೃತಿಗಳು ಸಹ ಹಂಪಿಯ ಹೆಸರನ್ನು ತಮ್ಮದೇ ಆದ ದೃಷ್ಟಿಕೋನದಲ್ಲಿ ದಾಖಲಿಸಿವೆ. ಆ ಸಾಹಿತ್ಯ ಕೃತಿಗಳಲ್ಲಿರುವ 'ಹಂಪಿ' ಹೆಸರಿನ ಉಲ್ಲೇಖಗಳನ್ನು ಹೀಗೆ ಚರ್ಚಿಸಲಾಗಿದೆ.

ಮಹಾಕವಿ ಹರಿಹರ ತನ್ನ ಎಲ್ಲಾ ಕಾವ್ಯಗಳಲ್ಲಿ "ಪಂಪಾಪುರದರಸ", ಹಂಪೆಯಾಳ್ದನೆಂದು ವಿರೂಪಾಕ್ಷನನ್ನು ಸ್ತುತಿಸಿದ್ದಾನೆ. ಅಂದರೆ ಹಂಪೆಯನ್ನು ಪಂಪಾಪುರ, ಹಂಪೆ ಎಂದು ಆತ ಕರೆದಿದ್ದಾನೆ. ರಾಘವಾಂಕನೂ ಕೂಡ "ಹಂಪೆಯ ಹರೀಶ್ವರನ ವರಸುತ" ಎಂದು ತನ್ನೆಲ್ಲ ಕಾವ್ಯಗಳಲ್ಲಿ ಹೇಳಿಕೊಂಡಿದ್ದಾನೆ. ಹರಿಶ್ಚಂದ್ರ ಕಾವ್ಯದಲ್ಲಂತೂ ವಿರೂಪಾಕ್ಷನನ್ನು "ಪಂಪಾಪತಿ", "ಪಂಪಾಧಿಪತಿ", "ಹಂಪೆಯ ಮೃಡಂ" ಎಂದು ಹಂಪಿಯನ್ನು ಪಂಪಾ, ಹಂಪೆ ಎಂದು ಕರೆದಿದ್ದಾನೆ.

'ಶಿವತತ್ತ್ವ ಚಿಂತಾಮಣಿ' ಕೃತಿಯಲ್ಲಿ ಪ್ರೌಢದೇವರಾಯನ ಪ್ರಧಾನಿ– ಲಕ್ಕಣ್ಣ ದಂಡೇಶನಂತು ಹಂಪೆಯನ್ನು 'ವಿಜಯ ಕಲ್ಯಾಣ', 'ವಿಜಯ ನಗರಿ',[೨೨] 'ವಿಜಯ ಕಲ್ಯಾಣಪುರ', 'ವಿಜಯ ಕಲ್ಯಾಣ ಪಟ್ಟಣ', 'ಪಂಪಾಕ್ಷೇತ್ರ',[೨೩] 'ಪಂಪಾಪುರ'[೨೪] ಎಂಬಿತ್ಯಾದಿಯಾಗಿ ಹಂಪಿಯ ವಿವಿಧ ಹೆಸರುಗಳನ್ನು ಉಲ್ಲೇಖಿಸಿದ್ದಾನೆ. ಕಲ್ಮಠದ ಪ್ರಭುದೇವ ತನ್ನ 'ಲಿಂಗಲೀಲಾ ವಿಲಾಸ ಚಾರಿತ್ರ್ಯ'ದಲ್ಲಿ ವಿದ್ಯಾನಗರವೆಂದೂ,[೨೫] ಚಂದ್ರಶೇಖರ ಕವಿ ತನ್ನ ಪಂಪಾಸ್ಥಾನ ವರ್ಣನಂ ಕಾವ್ಯದಲ್ಲಿ "ಪಂಪೆಯ ವಿರೂಪಾಕ್ಷಂ",[೨೬] ಹಂಪೆಯಾಳ್ದ, 'ಪಂಪಾ ಮಹಾಕ್ಷೇತ್ರ', 'ಪಂಪಾಕ್ಷೇತ್ರ'[೨೭] ಹಾಗೂ "ಪಂಪಾಪುರಿ" ಎಂದು ಕರೆದಿದ್ದಾನೆ.[೨೮]

ಒಟ್ಟಾರೆಯಾಗಿ 'ಹಂಪಿ'ಯನ್ನು ಶಾಸನಗಳು ಹಾಗೂ ಕಾವ್ಯಗಳು 'ಪಂಪಾತೀರ್ಥ, ಪಂಪಾವರ ಕ್ಷೇತ್ರ, ದಕ್ಷಿಣ ಕಾಶಿ, ವಿರೂಪಾಕ್ಷ ತೀರ್ಥ, ಪಂಪಾಕ್ಷೇತ್ರ, ವಿಜಯ, ಪಂಪಾತೀರ, ಪಂಪಾತೀರ ನಿಲಯ, ಪಂಪಾ, ಭಾಸ್ಕರ ಕ್ಷೇತ್ರ, ಪಂಪಾ ಸರಸ್ಸು, ವಿಜಯನಗರ, ವಿಜಯನಗರ ಪಟ್ಟಣ, ವಿಜಯಾಭಿದನಗರ, ತುಂಗಭದ್ರಾ ಪರಿಖೇನಗರ, ವಿಜಯನಗರಿ, ವಿಜೇಯನಗರ

ಪಟ್ಟಣ, ಪಂಪಾಂಬುಧಿ, ಪಂಪಾಪುರ, ಹಂಪಾತೀರ್ಥ, ಹಂಪೆ, ವಿಜಯ ಕಲ್ಯಾಣ, ವಿಜಯ ಕಲ್ಯಾಣಪುರ, ವಿದ್ಯಾನಗರ, ಪಂಪ ಮಹಾಕ್ಷೇತ್ರ, ಪಂಪಾಪುರಿ ಎಂಬ ಇತ್ಯಾದಿ ಹೆಸರುಗಳಿಂದ ಕರೆಯಲ್ಪಟ್ಟಿದೆ. ಆದರೆ ಇಂದಿಗೂ ಅದು 'ಹಂಪಿ' ಎಂಬ ಹೆಸರಿನಿಂದ ಜಗದ್ವಿಖ್ಯಾತಿಯಾಗಿ ನಿಂತಿರುವುದು ಒಂದು ಮಹಾ ಇತಿಹಾಸವೇ ಸರಿ.

೨.೨. ಹಂಪಿಯ ಭೌಗೋಳಿಕ ಲಕ್ಷಣಗಳು

ಹಂಪಿ ತಾಲ್ಲೂಕು ಕೇಂದ್ರದಿಂದ ಸು.೧೪ ಕಿ.ಮೀ. ದೂರದಲ್ಲಿದ್ದು, ೧೪.೩೦°-೧೫.೧೫° ಉತ್ತರ ಅಕ್ಷಾಂಶ ಮತ್ತು ೨೫.೪೦°-೭೭.೧೧° ರೇಖಾಂಶಗಳ ನಡುವೆ ಇದೆ. ಇಲ್ಲಿಂದ ಬೆಂಗಳೂರಿಗೆ ೩೬೦ ಕಿ.ಮೀ., ಬಳ್ಳಾರಿಗೆ ೭೭ ಕಿ.ಮೀ ದೂರವಿದೆ. ಸಮುದ್ರಮಟ್ಟಕ್ಕಿಂತ ೪೫೭ ಮೀ. ಎತ್ತರವಿದೆ. ಇದು ೨೯.೬೦ ಚ.ಕಿ.ಮೀ. ವಿಸ್ತಾರ ಹೊಂದಿದೆ. ಇದು ಪ್ರಸ್ತುತ ಗ್ರಾಮ ಪಂಚಾಯಿತಿ ಕೇಂದ್ರವಾಗಿದ್ದು, ಇದರ ಉತ್ತರಕ್ಕೆ ಹನುಮನಹಳ್ಳಿ, ಆನೆಗೊಂದಿ (ಗಂಗಾವತಿ ತಾ.), ಈಶಾನ್ಯಕ್ಕೆ ವೆಂಕಟಾಪುರ, ಪೂರ್ವಕ್ಕೆ ಹೆಂಡಮಾರುವ ಗುಂಡು (ತಾಂಡ), ಆಗ್ನೇಯಕ್ಕೆ ಕಮಲಾಪುರ, ದಕ್ಷಿಣಕ್ಕೆ ಕಡ್ಡಿರಾಂಪುರ ಮತ್ತು ನೈರುತ್ಯಕ್ಕೆ ಗಾಳೆಮ್ಮನ ಗುಡಿ, ಮಲಪನಗುಡಿ ಹಾಗೂ ಪಶ್ಚಿಮಕ್ಕೆ ಡಣಾಪುರ, ನರಸಾಪುರ, ಗುಡಿ ಓಬಳಾಪುರ, ನಾಗೇನಹಳ್ಳಿ, ವಾಯುವ್ಯಕ್ಕೆ ವಿರುಪಾಪುರ ಗಡ್ಡಿಗಳಿದ್ದು(ಗಂಗಾವತಿ ತಾ.), ಇವು ಇದರ ಪ್ರಸಕ್ತ ಗ್ರಾಮದ ಭೂಮೇರೆಗಳಾಗಿವೆ. ಅಲ್ಲದೇ ಇದರ ಪೂರ್ವಕ್ಕೆ ಬಳ್ಳಾರಿ ತಾಲೂಕು(ನಂತರ ಮುಂದುವರಿದು ಆಂಧ್ರ ಪ್ರದೇಶದ ಅನಂತಪುರ ಹಾಗೂ ಕರ್ನೂಲ್) ಪಶ್ಚಿಮಕ್ಕೆ ದಾವಣಗೆರೆ, ಗದಗ, ದಕ್ಷಿಣಕ್ಕೆ ಚಿತ್ರದುರ್ಗ, ಉತ್ತರಕ್ಕೆ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳು ಇದರ ತಾಲೂಕು ಮತ್ತು ಜಿಲ್ಲಾ ಗಡಿಗಳಾಗಿವೆ.[೨೯]

ಹಂಪಿ ಮತ್ತು ಅದರ ಸುತ್ತಲಿನ ಭೂ-ಭಾಗಗಳು ಇಲ್ಲಿನ ಮಾನವ ಸಂಸ್ಕೃತಿಯ ವಿಕಾಸದಲ್ಲಿ ಬಹು ಮುಖ್ಯವಾದ ಪಾತ್ರ ನಿರ್ವಹಿಸಿವೆ. ಇಲ್ಲಿನ ಈ ಭೂ-ಭಾಗದ ಲಕ್ಷಣಗಳನ್ನು ಈ ರೀತಿಯಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ.

೧. ವಾಯುಗುಣ ಮತ್ತು ಜೀವ ಸಂಕುಲ

ಬಳ್ಳಾರಿ ಜಿಲ್ಲೆ ಬಿಸಿಲಿಗೆ ತುಂಬಾ ಪ್ರಸಿದ್ಧಿಯಾಗಿದೆ. ಹಂಪಿಯಲ್ಲಿ ಬೇಸಿಗೆ ಕಾಲವು ಫೆಬ್ರವರಿ ಅಂತ್ಯದಿಂದ ಆರಂಭವಾಗಿ ಜೂನ್ ತಿಂಗಳವರೆಗೆ ಇರುತ್ತದೆ. ಬಹುಶಃ ಆಗ ಶಾಖವು ಸರಾಸರಿ ೧೬.೭° ಸೆ. ದಿಂದ ೩೩.೯°ಸೆ. ವರೆಗೆ ಇರುತ್ತದೆ. ಕೆಲವು ಸಲ ಬಹುಶಃ ಇದು ೩೫° ರಿಂದ ೪೦°ಸೆ. ವರೆಗೆ ಏರುತ್ತದೆ. ಜುಲೈ ತಿಂಗಳಲ್ಲಿ ಆರಂಭವಾಗುವ ಮಳೆಗಾಲ ನವೆಂಬರ್ ತಿಂಗಳ ವರೆಗೆ ಇರುತ್ತದೆ. ಮಳೆಯ ವಾರ್ಷಿಕ ಸರಾಸರಿ ೫೭೪.೯ ಮಿ.ಮೀ. ಇರುತ್ತದೆ. ನವೆಂಬರ್ ಕೊನೆಯಿಂದ ಫೆಬ್ರವರಿಯವರೆಗೆ ಚಳಿಗಾಲವಿರುತ್ತದೆ. ಶುಷ್ಕ ವಾತಾವರಣವಿರುವ ಈ ಪ್ರದೇಶ ಮನುಷ್ಯನ ವಾಸಕ್ಕೆ ಅತ್ಯಂತ ಯೋಗ್ಯವಾಗಿದೆ.

ಈ ಪ್ರದೇಶದ ಕಾಡು ಹಾಗೂ ಬೆಟ್ಟಗುಡ್ಡಗಳಲ್ಲಿ ಚಿರತೆ, ಕರಡಿ, ಕಾಡುಹಂದಿ, ಮುಳ್ಳುಹಂದಿ, ನರಿ, ಜಿಂಕೆ, ತೋಳ ಮೊದಲಾದ ಕಾಡು ಪ್ರಾಣಿಗಳು ಹಾಗೂ ನವಿಲು, ಕಾಗೆ, ಗೂಬೆ, ಗೊರವಂಕ, ಕೌಜ, ಗುಡ್ಡಪೀರೆಡೆ, ನೀರುಕೋಳಿ, ನೀರುಹಂದಿ, ಮುಳ್ಳುಹಂದಿ, ಗುಬ್ಬಿ ಹಾಗೂ ಕಿಂಗ್‌ಫಿಷರ್ ಮುಂತಾದ ಬಗೆಯ ಪಕ್ಷಿಗಳು ಕಂಡುಬರುತ್ತವೆ. ಅಲ್ಲಧೆ ತುಂಗಭದ್ರಾ ನದಿ ನೀರಿನಲ್ಲಿ ಮೊಸಳೆ, ಮೀನು, ಕಪ್ಪೆ ಮೊದಲಾದ ಜಲಚರಗಳಿವೆ.[೫೦] ಅಲ್ಲದೆ ಮೊಲ, ಜಿಂಕೆಯಂತಹ ಸಣ್ಣ ಸಸ್ತನಿ ಪ್ರಾಣಿಗಳು ಇಲ್ಲಿ ಕಂಡುಬರುತ್ತವೆ. ನಾಗರ, ಮಿಡಿನಾಗರ, ಕೆರೆ, ಹಸಿರು, ಬಿಲ್ಲುರಗ, ನೂಲಾವು, ಪೆಂಜರ, ಹೆಬ್ಬಾವು, ಮಣ್ಣಮುಕ್ಕಿನಾವು ಹಾಗೂ ಕಪ್ಪು ಮತ್ತು ಕೆಂಪುಚೇಳು ಮೊದಲಾದ ವಿಷಜಂತುಗಳಿವೆ.

೨. ಅರಣ್ಯ

ಈ ಪರಿಸರದ ಭೌಗೋಳಿಕ ವಿಸ್ತೀರ್ಣ ೨೯,೫೬,೭೯೨ ಹೆಕ್ಟೇರುಗಳು. ಅದರಲ್ಲಿ ಅರಣ್ಯ ಪ್ರದೇಶ ೧೮,೯೯,೨೦೭ ಹೆಕ್ಟೇರುಗಳಿದೆ. ಹಂಪಿ ಸುತ್ತಲಿನ ತಾಲೂಕುಗಳಲ್ಲಿ ಶೇ ೪೦%ರಷ್ಟು ಅರಣ್ಯವಿದೆ. ಇವುಗಳಲ್ಲಿ ಹೆಚ್ಚಿನ ಪ್ರಮಾಣ ಅಂದರೆ ೧,೦೪,೯೭೯ ಹೆಕ್ಟೇರು ಅರಣ್ಯ ಪ್ರದೇಶ ಹೊಸಪೇಟೆ, ಕೂಡ್ಲಿಗಿ ಹಾಗೂ ಸಂಡೂರು ತಾಲೂಕುಗಳಲ್ಲಿದೆ.

ಈ ಪ್ರದೇಶವು ಮುಂಗಾರು ಹಾಗೂ ಹಿಂಗಾರುಮಳೆಯ ಸೆರಗಿನ ಪ್ರದೇಶ ಆದುದರಿಂದ ಅಲ್ಬೇಜಿಯ, ಅಕೇಶಿಯ, ಅರಾಬಿಕ್, ಯುಪೋರ್, ಬಿಯಾಸ ಜಾತಿಗಳಿಗೆ ಸೇರಿದ ಮರಗಿಡಗಳ ಪ್ರದೇಶವಾಗಿದೆ. ಇಂತಹ ಮರಗಿಡದ ಪ್ರದೇಶವನ್ನು ಅವಲಂಬಿಸುವ ಪ್ರಾಣಿಗಳಾದ ಮೊಲ, ಜಿಂಕೆಯಂತಹ ಸಣ್ಣ ಸಸ್ತನಿ ಪ್ರಾಣಿಗಳು ಇಲ್ಲಿ ಕಂಡುಬರುತ್ತವೆ. ಇದಕ್ಕೆ ಪೂರಕವಾಗಿ ಹೇಳುವುದಾದರೆ ತೆಕ್ಕಲಕೋಟೆ, ಸಂಗನಕಲ್ಲು ಹಳ್ಳೂರಿನಲ್ಲಿ ಆಲ್ವಿಯುಯಾ ಅಕಾಹಿಯ ಗುಂಪಿಗೆ ಸೇರಿದ ಸಸ್ಯಗಳು ಬೆಳೆಯುತ್ತಿದ್ದವು. ತೆಕ್ಕಲಕೋಟೆ ಸಂಗನಕಲ್ಲು ಹಳ್ಳೂರಿನಲ್ಲಿ ದೊರೆತಿರುವ ಇದ್ದಿಲಿನಿಂದ ಈ ಸಸ್ಯಗಳನ್ನು ಗುರುತಿಸಲಾಗಿದೆ.[೫೧] ಇಂದಿಗೂ ಸಹ ಉರುವಲು ಮತ್ತು ಬೇಸಾಯದ ಉಪಕರಣಗಳಿಗೆ ಇವುಗಳನ್ನು ಬಳಸುತ್ತಾರೆ. ಈ ಪ್ರದೇಶವು ಕಪ್ಪು ಎರೆಮಣ್ಣಿನಿಂದ ಕೂಡಿದ್ದು, ಇದು ಮೇಲೆ ತಿಳಿಸಿದ ಕುರುಚಲು ಗಿಡಗಳ ಪ್ರದೇಶದಿಂದ ಆವೃತವಾಗಿದೆ.

೩. ನದಿಗಳು

ಹಂಪಿಯಲ್ಲಿ ಹರಿಯುವ ತುಂಗಭದ್ರಾ ನದಿ ರಾಜ್ಯದ ಪ್ರಮುಖ ನದಿಗಳಲ್ಲಿ ಒಂದು. ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತಿರುವ ಇದು ಚಿಕ್ಕಮಗಳೂರು ಜಿಲ್ಲೆಯ ಪಶ್ಚಿಮ ಬೆಟ್ಟ ಸಾಲಿನ ವರಾಹ ಪರ್ವತದಲ್ಲಿ ಉಗಮವಾದ ಎರಡು ನದಿಗಳು ಶಿವಮೊಗ್ಗ ಜಿಲ್ಲೆಯ ಕೊಡಲಿಯಲ್ಲಿ ಬಂದು ಸೇರುತ್ತವೆ. ಅವುಗಳಲ್ಲಿ ಒಂದು ತುಂಗಾ ಇನ್ನೊಂದು ಭದ್ರಾ ಎರಡೂ ಕಲೆತು ಮುಂದೆ ಸಾಗಿದಾಗ ತುಂಗಭದ್ರಾ ಎಂದು ಕರೆಯಲಾಗಿದೆ.[೫೨] ತುಂಗಭದ್ರಾ ನದಿಯ

ಉಲ್ಲೇಖ ರಾಮಾಯಣ ಮತ್ತು ಪುರಾಣಗಳಲ್ಲಿ ಬಂದಿದೆ. ಮಹಾಭಾರತದಲ್ಲಿ ಜಾಹ್ನವಿ, ಕೃಷ್ಣವೇಣಿಗಳ ಜೊತೆಗೆ ತುಂಗಾವೇನಿ ಎಂಬ ಹೆಸರು ಬರುತ್ತದೆ. ಹಂಪಿಯ ಕೋದಂಡ ರಾಮಸ್ವಾಮಿ ದೇವಾಲಯದ ಬಳಿ ಇರುವ ಚಕ್ರತೀರ್ಥದ ಬಳಿ ಈ ನದಿ ಉತ್ತರಾಭಿಮುಖವಾಗಿ ಹರಿಯುತ್ತದೆ. ಈ ನದಿ ಇಲ್ಲಿ ಚಕ್ರಾಕಾರವಾಗಿ ಸುರಳೀಯಾಕಾರದಲ್ಲಿ ತಿರುಗುತ್ತಾ ಹರಿಯುವುದರಿಂದ ಇದನ್ನು ಚಕ್ರತೀರ್ಥವೆಂದು, ಇದು ಇಲ್ಲಿನ ಅಧಿದೇವತೆಯಾದ ಪಂಪಾಬಿಕೆಯ ಪ್ರತೀಕವಾಗಿರುವ ಕಾರಣಕ್ಕಾಗಿ ಇದನ್ನು 'ಪಂಪಾತೀರ್ಥ'ವೆಂದೇ ಕರೆಯಲಾಗುತ್ತದೆ. ಇದರ ನೀರು ರುಚಿಕರವಾಗಿದ್ದು, ಇದರಿಂದ 'ಗಂಗಾಸ್ನಾನ ತುಂಗಾಪಾನ' ಎಂಬ ನಾಣ್ಣುಡಿಯೇ ಈ ಪರಿಸರದಲ್ಲಿ ಬೆಳೆದು ಬಂದಿರುವುದು ಗಮನಾರ್ಹ. ಇದೇ ನದಿ ತುಂಬಿ ಹರಿಯುವಾಗ ಹಲವು ನೈಸರ್ಗಿಕ ಜಲಪಾತಗಳನ್ನು ವಿವಿಧ ಕಡೆ ಸೃಷ್ಟಿಸಿ ಪ್ರವಾಸಿಗರ ಆಕರ್ಷಣೆಯ ಕೇಂದ್ರಗಳಾಗಿವೆ. ಅವುಗಳಲ್ಲಿ ಹಂಪಿಯಲ್ಲಿನ 'ವಾಟರ್ ಫಾಲ್ಸ್' ಅತ್ಯಂತ ಮುಖ್ಯವಾದುದು.

ತುಂಗಾಭದ್ರಾ ನದಿ ಬಳ್ಳಾರಿ ಜಿಲ್ಲೆಯನ್ನು ಹರಪನಹಳ್ಳಿ ತಾಲೂಕಿನ ಕಡತಿ ಎಂಬ ಗ್ರಾಮದಲ್ಲಿ ಸೇರಿ ಮುಂದೆ ಹಗರಿಬೊಮ್ಮನಹಳ್ಳಿ, ಹೊಸಪೇಟೆ ಮತ್ತು ಸಿರಗುಪ್ಪ ತಾಲೂಕುಗಳನ್ನೊಳಗೊಂಡಂತೆ ೩೨೦ ಕಿ.ಮೀ. ಚಲಿಸಿ ಆಲೂರು ತಾಲೂಕಿನ ಚಲ್‌ಕೂಡಲೂರು ಗ್ರಾಮದ ಬಳಿ ಆಂಧ್ರಪ್ರದೇಶವನ್ನು ಸೇರುತ್ತದೆ.[೩೩] ಈ ನದಿ ಪಶ್ಚಿಮದಲ್ಲಿ ಧಾರವಾಡ, ಉತ್ತರದಲ್ಲಿ ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗಳಿಗೆ ಗಡಿಯಾಗಿ ಪರಿಣಮಿಸಿದೆ. ತುಂಗಭದ್ರಾ ನದಿಗೆ ಬಂದು ಸೇರುವ ಹಗರಿ, ಚಿಕ್ಕ ಹಗರಿ ನದಿಗಳು ಪ್ರಾಚೀನ ಕಾಲದಿಂದಲೂ ಕೃಷಿ ಅಭಿವೃದ್ಧಿಗೆ ನೀರನ್ನೊದಗಿಸುತ್ತಿವೆ.

ತುಂಗಭದ್ರಾ ನದಿಗೆ ಬಂದು ಸೇರುವ ಹಗರಿ, ಚಿಕ್ಕ ಹಗರಿಗಳಲ್ಲದೆ ಚಿನ್ನ ಹಗರಿಯನ್ನೊಳಗೊಂಡಂತೆ ಅನೇಕ ಹಳ್ಳಗಳು ಈ ಪ್ರದೇಶದಲ್ಲಿ ಹರಿಯುತ್ತವೆ. ತುಂಗಭದ್ರಾ ನದಿಯಂತೆ ಹಗರಿಯೂ ಚಿಕ್ಕಮಗಳೂರು ಜಿಲ್ಲೆಯ ಮಲ್ಲಯ್ಯನಗಿರಿ ಮತ್ತು ತಂಗಲಿಯಲ್ಲಿಯ ಎರಡು ನದಿಗಳನ್ನು ವೇದ ಮತ್ತು ಆವತಿ ಎಂದು ಕರೆಯಲಾಗಿದೆ. ಇವೆರಡೂ ಚಿತ್ರದುರ್ಗ ಜಿಲ್ಲೆಯಲ್ಲಿ ಸೇರಿ ವೇದಾವತಿ ಎಂದು ಕರೆಸಿಕೊಂಡು ನಂತರ ಬಳ್ಳಾರಿ ಜಿಲ್ಲೆಯನ್ನು (ರೂಪನಗುಡಿಯಲ್ಲಿ) ಪ್ರವೇಶಿಸುತ್ತದೆ. ಈ ಪ್ರದೇಶದ ಶಾಸನಗಳು ಇದನ್ನು 'ಅಹರಿ" ಅಗ-ಹರಿ'(ಅಘಹರಿ)(ಪಾಪವನ್ನು ತೊಳೆಯುವ) ಎಂದು ಕರೆದಿವೆ. ಈ ಪ್ರದೇಶದಲ್ಲಿ ೯೨.೮.ಕಿ.ಮೀ. ಸಾಗಿ ಸಿರಗುಪ್ಪ ತಾಲೂಕಿನ ಶ್ರೀಧರಗಡ್ಡೆ ಹಳ್ಳಿಯಲ್ಲಿ ತುಂಗಭದ್ರಾ ನದಿಯನ್ನು ಸೇರುತ್ತದೆ. ವಿಶಾಲವಾಗಿ ಹರಿದಿರುವ ಈ ನದಿ ನೀರನ್ನು ಪ್ರಾಚೀನ ಕಾಲದಿಂದಲೂ ತೋಟ ಗದ್ದೆಗಳಿಗೆ ಬಳಸಿಕೊಳ್ಳಲಾಗಿದೆ.[೩೪]

ತುಂಗಭದ್ರೆಯ ಇನ್ನೊಂದು ಉಪನದಿ ಚಿಕ್ಕಹಗರಿ ಚಿತ್ರದುರ್ಗ ಜಿಲ್ಲೆಯಲ್ಲಿ ಉಗಮವಾಗಿ, ಹರಪನಹಳ್ಳಿ ತಾಲೂಕಿನ ಅಂಜಿಗೇರಿಯಲ್ಲಿ ಈ ಪ್ರದೇಶವನ್ನು ಪ್ರವೇಶಿಸುತ್ತದೆ. ಹರಪನಹಳ್ಳಿ, ಹಡಗಲಿ, ಕೂಡ್ಲಿಗಿ ಹಗರಿಬೊಮ್ಮನಹಳ್ಳಿ ತಾಲೂಕುಗಳಲ್ಲಿ ಹರಿಯುವ ಇದು ಒಟ್ಟು ೪೦

ಕಿ.ಮೀ. ಸಾಗಿ ತುಂಗಭದ್ರೆಯನ್ನು ಸೇರುತ್ತದೆ. ಅದೇ ರೀತಿ ಚಿನ್ನಹಗರಿ ನದಿಯು ಚಿತ್ರದುರ್ಗ ಜಿಲ್ಲೆಯಲ್ಲಿ ಉಗಮಗೊಂಡು ಕೂಡ್ಲಿಗಿಯ ದಕ್ಷಿಣಕ್ಕೆ ಕಲ್ಲಹಳ್ಳಿಯಲ್ಲಿ ಈ ಪ್ರದೇಶವನ್ನು ಪ್ರವೇಶಿಸುತ್ತದೆ. ಇದನ್ನು ಚಿತ್ರದುರ್ಗ ಜಿಲ್ಲೆಯಲ್ಲಿ 'ಜಿನಗಿಹಳ್ಳ' ಎಂದು ಕರೆಯಲಾಗುತ್ತದೆ. ಬಳ್ಳಾರಿ-ಚಿತ್ರದುರ್ಗ ಜಿಲ್ಲೆಗಳ ಗಡಿಯಾಗಿ ಪರಿಣಮಿಸಿರುವ ಇದು ಆಂಧ್ರಪ್ರದೇಶದ ರಾಯದುರ್ಗ ತಾಲೂಕಿನ ಉತ್ತರದಲ್ಲಿ ಹಗರಿ ನದಿಗೆ ಬಂದು ಕೂಡುತ್ತದೆ. ಪೆದ್ದವಂಕಾ ಎಂದು ಕರೆಯುವ ಒಂದು ನೀರಿನ ಹರಿಯು ತಾಮ್ರಪರ್ವತದಲ್ಲಿ ಹುಟ್ಟಿ, ಕುಮತಿಯಲ್ಲಿ ಈ ಚಿನ್ನ ಹಗರಿ ಉಪನದಿಗೆ ಬಂದು ಸೇರುತ್ತದೆ.

ಈ ಮೂರು ಉಪನದಿಗಳೊಂದಿಗೆ ಆಯಾ ಸ್ಥಳಗಳಲ್ಲಿ ಅನೇಕ ಹಳ್ಳಗಳು ಉಗಮವಾಗಿ ತುಂಗಭದ್ರಾ ನದಿ ಇಲ್ಲವೆ ಈ ಉಪನದಿಗಳನ್ನು ಕೂಡಿಕೊಳ್ಳುತ್ತವೆ. ಹಗರನೂರು ಹಳ್ಳ, ಹಂಪಸಾಗರ ಹಳ್ಳ, ಗುರಿಪುರ ಹಳ್ಳ, ನಾರಿಹಳ್ಳ(ಇದನ್ನು ಕ್ರಿ.ಶ.೧೫೪೧ರ ಶಾಸನ "ನಾರಾಯಣಿ" ಎಂದು ಕರೆದಿದೆ) ಹರಿವನಮಹಳ್ಳ (ಕಾಜ್ರಿವಂಕ), ಮಾದಿಹಳ್ಳ, ತೆಲಗಿಹಳ್ಳ, ಇಟ್ಟಗಿಹಳ್ಳ, ಮಾರಹಳ್ಳ(ಹರಪನಹಳ್ಳಿ) ತಿಪ್ಪಾಪುರಹಳ್ಳ, ಹಿರೇಹಳ್ಳ(ಹಡಗಲಿ) ಮೊದಲಾದವು ಪ್ರಮುಖವಾದವು. ಇಲ್ಲಿನ ಅರಣ್ಯ ಮನುಷ್ಯನಿಗೆ ಅವಶ್ಯಕವಾದ ಹಣ್ಣು ಹಂಪಲು, ಮರ ಮುಟ್ಟು, ಉರುವಲು, ಔಷಧಿಗೆ ಉಪಯುಕ್ತವಾದ ಗಿಡ, ನಾರು-ಬೇರುಗಳನ್ನು ಒದಗಿಸಿದರೆ. ಇಲ್ಲಿನ ನದಿ, ಹಳ್ಳಗಳು ಮನುಷ್ಯನಿಗೆ ಅವಶ್ಯಕವಾಗಿ ಬೇಕಾದ ಜೀವಸೆಲೆ(ನೀರು)ಯನ್ನು ಒದಗಿಸಿ ಅವನ ಅವಶ್ಯಕತೆಗಳನ್ನು ಪೂರೈಸಿದೆ.

೪. ಭೂಮಿಯ ರಚನೆ ಮತ್ತು ಶಿಲಾಸಂಪತ್ತು

ಹಂಪಿಯಲ್ಲಿನ ಭೌಗೋಳಿಕ ಪರಿಸರವು ಬೆಟ್ಟ, ಖನಿಜಗಳಿಂದ ಮತ್ತು ಗ್ರಾನೈಟ್ ಶಿಲೆಗಳಿಂದ ಕಂಗೊಳಿಸುತ್ತಿದೆ. ಸಾಮಾನ್ಯವಾಗಿ ಕ್ರಿಸ್ಟಸ್ ಲೈನ್‌ಸಿಸ್ಟ್ (ಸ್ಫಟಿಕಾತ್ಮಕ ಪದರು ಶಿಲೆ) ಎಪಿಡಿಯೋರಾಯಿಟ್ಸ ಗ್ರಾನೈಟ್(ಜಂಬಿಟ್ಟಿಗೆ) ಮತ್ತು ಲೇಟರ್ ಗ್ರಾನಾಯಿಟ್ಸ ಶಿಲಾ ಪದರುಗಳಿಂದ ಕೂಡಿದೆ. ಅಲ್ಲಲ್ಲಿ ಡೈಕ್ ಶಿಲೆ ಕಂಡುಬರುತ್ತದೆ. ಕ್ರಿಸ್ಟಲೈನ್‌ಸಿಸ್ಟ್, ಎಪಿಡೊರಾಯಿಟ್ಸ್, ಗ್ರಾನೈಟ್ ಮೊದಲಾದ ಶಿಲೆಗಳು ಇಲ್ಲಿ ದೊರೆಯುತ್ತವೆ. ಇವುಗಳನ್ನು ಧಾರವಾಡ ಪ್ರದೇಶದಲ್ಲಿರುವಂತೆ ಹಳೆ ಮಾದರಿಯೆಂದು ಗುರುತಿಸಲಾಗಿದೆ.

ಹಂಪಿ ಪ್ರದೇಶವು ದಕ್ಷಿಣದಿಂದ ಉತ್ತರಕ್ಕೆ ಇಳಿಜಾರಾಗಿದ್ದು ಬೆಟ್ಟದಿಂದಾವರಿಸಿದೆ. ಇಲ್ಲಿ ಹೇಮಕೂಟ, ಮತಂಗ ಮತ್ತು ಮಾಲ್ಯವಂತ ಪರ್ವತಗಳಿದ್ದು ಅವು ಇಲ್ಲಿನ ಎತ್ತರದ ಪ್ರದೇಶಗಳಾಗಿವೆ. ಅಲ್ಲದೆ ಹಂಪಿ ಬೆಟ್ಟಕ್ಕೆ ಹೊಂದಿಕೊಂಡಂತಿರುವ ಆನೆಗೊಂದಿ ಬೆಟ್ಟ ಶ್ರೇಣಿ, ಮಲ್ಲಾಪುರ ಮತ್ತು ಚಿಕ್ಕ ಬೆನಕಲ್ ಮತ್ತು ಹೀರೇ ಬೆನಕಲ್ ಬೆಟ್ಟಗಳು ಪ್ರಧಾನವಾಗಿವೆ. ಅಂಜಿನಹಳ್ಳಿಯ ಅಂಜಾನಾದ್ರಿ ಪರ್ವತ ಇಲ್ಲಿನ ಅತಿ ಎತ್ತರದ ಬೆಟ್ಟಗಳಲ್ಲಿ ಒಂದಾಗಿದೆ. ಹಾಗೂ ಆನೆಗೊಂದಿ ಬೆಟ್ಟ, ಹಿರೇಬೆನಕಲ್ ಮತ್ತು ಕಮ್ಮಟದುರ್ಗಗಳ ಬೆಟ್ಟಗಳು ಸಹ ಎತ್ತರದ ಶಿಖರಗಳನ್ನು ಹೊಂದಿವೆ. ಹಂಪಿಯಿಂದ ದಕ್ಷಿಣಕ್ಕೆ ಕಂಡುಬರುವ ಜಂಬುನಾಥನ ಗುಡ್ಡ.

ಪ್ರಕೃತಿ ನಿರ್ಮಿತ ಮತ್ತೊಂದು ನೈಸರ್ಗಿಕ ಸಂಪತ್ತಿನ ರಾಶಿ. ಈ ಪ್ರದೇಶ ಪುರಾತನ ಜನರ ಕಬ್ಬಿಣ ತಯಾರಿಕೆಯ ಕೇಂದ್ರ, ಕಬ್ಬಿಣದ ಕಲ್ಲುಗಳನ್ನು ಕರಗಿಸಿ ಬೀಡು ಕಬ್ಬಿಣವನ್ನು ತಯಾರಿಸುತ್ತಿದ್ದ ಬಗೆಗೆ ಈ ಪ್ರದೇಶದಲ್ಲಿ ಕಬ್ಬಿಣದ ಕುಲುಮೆಯ ತ್ಯಾಜ್ಯ ವಸ್ತುಗಳು ಕಂಡುಬರುತ್ತವೆ. ಈ ಪ್ರದೇಶದಲ್ಲಿ ಇಂದಿಗೂ, ವಾಸಮಾಡುತ್ತಿರುವ ಮುದ್ದೆ ಕಂಬಾರ ಸಮುದಾಯ, ಅವರು ಪೂಜಿಸುತ್ತಿದ್ದ ಆದಿ ದೇವತೆ 'ಕಾಳಿ' ದೈವದ ನೆಲೆಗಳು ಸಾಕ್ಷಿ ನುಡಿಯುತ್ತವೆ. ಜಂಬುನಾಥ ಗುಡ್ಡದ ತುತ್ತ ತುದಿಯ ಕಾಳಿಯ ಗವಿಯಲ್ಲಿ ದೈವ ಇದ್ದ ಬಗೆಗೆ ತಿಳಿದುಬರುತ್ತದೆ. ಇಲ್ಲಿನ ಗಣಿಗಾರಿಕೆಯ ಕೆಲಸದಿಂದಾಗಿ ಕಾಳಿ ದೇವಸ್ಥಾನವನ್ನು ಬೆಟ್ಟದ ತಳದಲ್ಲಿ ಪ್ರತಿಷ್ಠಾಪಿಸಲಾಗಿದೆ. ಅಲ್ಲದೆ ಗೊಲ್ಲರ ಹಟ್ಟಿ, ಢಣಾಯಕನ ಕೆರೆ, ನಾಗೇನಹಳ್ಳಿ, ಕಾಕುಬಾಳು, ವಡ್ಡರಹಳ್ಳಿ, ಸಂಡೂರಿನ ಪರಿಸರದಲ್ಲಿ ಬೀಡು ಕಬ್ಬಿಣ ತಯಾರಿಕೆಯ ನೆಲೆಗಳು ಹಾಗೂ ಅವುಗಳ ಅವಶೇಷಗಳು ವಿಪುಲವಾಗಿ ಕಂಡುಬರುತ್ತವೆ. ಇಲ್ಲಿನ ಹೇರಳವಾದ ಬೆಟ್ಟರಾಶಿಯನ್ನು ಗಮನಿಸಿದಾಗ ಈ ಪ್ರದೇಶವು ಸಮೃದ್ಧ-ಸಸ್ಯರಾಶಿಯ ತಾಣವಾಗಿತ್ತೆಂಬುದಾಗಿ ತಿಳಿದುಬರುತ್ತದೆ. ಅಲ್ಲದೆ, ಇಲ್ಲಿನ ಆದಿಮ ಸಂಸ್ಕೃತಿಯ ಜನರು ಚಿತ್ರಿಸಿರುವ ಹುಲಿ, ಚಿರತೆ, ಆನೆಯಂತಹ ಚಿತ್ರಗಳು, ಆನೆ ವಾಸಿಸುತ್ತಿದ್ದ ದಟ್ಟ ಅರಣ್ಯ ಇದ್ದ ಸ್ಥಿತಿಯನ್ನು ಸ್ಪಷ್ಟಪಡಿಸುತ್ತವೆ.

ಅಲ್ಲದೆ ಸಂಡೂರು, ಕೂಡ್ಲಿಗಿ, ಹರಪನಹಳ್ಳಿ, ಗುಡೇಕೋಟೆ, ಹೊಸಪೇಟೆ, ಕಂಪ್ಲಿ, ದರೋಜಿ, ಕುರುಗೋಡು, ಬಳ್ಳಾರಿ ಮುಂತಾದ ಸ್ಥಳಗಳಲ್ಲಿ ದೊಡ್ಡ ದೊಡ್ಡ ಬೆಟ್ಟಗಳಿವೆ. ಸಂಡೂರು ಕುಮಾರಸ್ವಾಮಿ ಬೆಟ್ಟ(೧.೩೬ ಮೀ.) ರಾಮನಮಲೈ ಬೆಟ್ಟ(೯೨ ಮೀ.), ಜಂಬುನಾಥಗುಡ್ಡ(೯೦೮ ಮೀ.) ಎತ್ತರದ ಶಿಖರಗಳನ್ನು ಹೊಂದಿವೆ. ಕೂಡ್ಲಿಗಿ ಬೆಟ್ಟಗಳು ಎರಡು ಸಾಲುಗಳಲ್ಲಿವೆ. ಅವುಗಳಲ್ಲಿ ಒಂದು ಶ್ರೇಣಿ ಆನೆಕಲ್ಲು ದುರ್ಗ(೭೪ ಮೀ.) ಇನ್ನೊಂದು ಜರಿಮಲೆ ಗುಡ್ಡ(೮೩೮ ಮೀ.) ಹಾಗೂ ಗುಡೇಕೋಟೆಯಿಂದ ಈಶಾನ್ಯಕ್ಕೆ ಹರಡಿರುವ ಗುಡೇಕೋಟೆ ಬೆಟ್ಟ ಚಿನ್ನಹಗರಿ ನದಿ ದಾಟಿ, ಚಿತ್ರದುರ್ಗ ಜಿಲ್ಲೆಯ ಸೆರಗಿನಲ್ಲಿ ಹಾದು ಹೋಗುತ್ತದೆ. ಹಡಗಲಿ, ಹರಪನಹಳ್ಳಿ ತಾಲೂಕುಗಳಲ್ಲಿಯ ಮಲ್ಲಪ್ಪನಗುಡ್ಡ (೯೨೮ ಮೀ.) ತುಂಗಭದ್ರಾ ನದಿ ದಂಡೆಯ ಹೊನ್ನೂರಿನ ಬಳಿ ಪ್ರಾರಂಭವಾಗಿ ಆಗ್ನೆಯ ಕಡೆಗೆ ಹಬ್ಬಿದೆ. ಮಲ್ಲಪ್ಪನ ಗುಡ್ಡದ ನೈರುತ್ಯಕ್ಕಿರುವ ಕಲ್ಲಪ್ಪನ ಗುಡ್ಡ ವಾಯುವ್ಯದಿಂದ ಈಶಾನ್ಯಕ್ಕೆ ಸಾಗಿದ್ದು ಇದರಲ್ಲಿ ನರಸಿಂಹದೇವರ ಗುಡ್ಡ ಸೇರಿದಂತೆ ಉಚ್ಚಂಗಿಯಲ್ಲಿ ಕೊನೆಗೊಳ್ಳುತ್ತದೆ.[೩೫] ಪೂರ್ವ ಹಾಗು ಪಶ್ಚಿಮದ ನಡುವೆ ಸಂಡೂರು ಬೆಟ್ಟಗಳ ಶ್ರೇಣಿಯಿದೆ. ಇವು ಈಶಾನ್ಯದಿಂದ ಆಗ್ನೇಯದ ವರೆಗೂ ಹರಡಿವೆ. ಸಿರುಗುಪ್ಪ ಹಾಗು ಬಳ್ಳಾರಿ ಜಿಲ್ಲೆಯ ಪೂರ್ವದ ಭಾಗ ಬಯಲು ಪ್ರದೇಶವಾಗಿದೆ. ಈ ಭಾಗ ಸಮತಟ್ಟಾಗಿರುವುದರಿಂದ ನೀರಿನ ಶೇಖರಣೆಗೆ ಕಣಿವೆಗಳು ವಿರಳವಾಗಿವೆ. ಅಲ್ಲಲ್ಲಿ ಇರುವ ತಗ್ಗಿನಿಂದಾಗಿ ಮಳೆಗಾಲದ ನೀರು ಇಂಗುವಂತಹ ವ್ಯವಸ್ಥೆಯಿದೆ. ಈ ಪ್ರದೇಶವು ಸಮತಟ್ಟಾಗಿರುದರಿಂದ ಯಾವುದೇ ಹೆಚ್ಚಿನ ಮರ ಗಿಡಗಳು ಇರುವುದಿಲ್ಲ. ಅಲ್ಲದೇ, ಈ ಪ್ರದೇಶ ಕಪ್ಪುಎರೆಮಣ್ಣಿನಿಂದ ಕೂಡಿದೆ. ಸಮತಟ್ಟಾದ ಪ್ರದೇಶದಲ್ಲಿ

ಅಲ್ಲಲ್ಲಿ ಸಣ್ಣಬೆಟ್ಟಗಳ ಸಾಲುಗಳನ್ನು ಕಾಣಬಹುದು. ಈ ಸಾಲು ಒಂದು ತುದಿಯಿಂದ ಇನ್ನೊಂದು ತುದಿಯವರೆಗೂ ಅಂದರೆ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣಕ್ಕೆ ಹಬ್ಬಿವೆ. ಇವು ಅಲ್ಲಲ್ಲಿ ಸಣ್ಣ ದ್ವೀಪಗಳ ರೀತಿಯಾಗಿ ಮೇಲೆದ್ದಿರುವುದನ್ನು ಕಾಣಬಹುದು. ಈ ರೀತಿ ಅಲ್ಲಲ್ಲಿ ಬೆಟ್ಟಗಳು ಗುಂಪುಗಳಾಗಿರುವುದನ್ನು ಸಾಮಾನ್ಯವಾಗಿ ದಖನ್‌ಪ್ರಸ್ಥಭೂಮಿಯ ಹಲವೆಡೆ ಕಾಣಬಹುದು. ಈ ಲಕ್ಷಣಗಳನ್ನು ಹಂಪಿಯ ಪೂರ್ವದಿಕ್ಕಿನಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಆದರೆ ಹಡಗಲಿಯ ಭಾಗದಲ್ಲಿ ಮೇಲ್ಕಂಡ ಲಕ್ಷಣಗಳು ಸ್ವಲ್ಪ ಭಿನ್ನವಾಗಿವೆ. ಇಲ್ಲಿಯ ಬೆಟ್ಟ ಗುಡ್ಡಗಳು ಪೂರ್ವದಲ್ಲಿ ಕಂಡುಬರುವ ಭೂಪ್ರದೇಶಕ್ಕಿಂತ ಭಿನ್ನವಾಗಿವೆ. ಬೆಟ್ಟಗುಡ್ಡಗಳಿರುವುದರಿಂದ ಇಲ್ಲಿ ಸ್ವಲ್ಪ ಮಳೆ ಜಾಸ್ತಿ ಬೀಳುತ್ತದೆ. ಒರಟಾದ ನೆಲ ಹಾಗೂ ಎತ್ತರದ ದಿಣ್ಣೆಗಳು ಇಲ್ಲಿವೆ. ಇವು ಇಳಿಜಾರನ್ನು ಉತ್ತರದ ಕಡೆ ಹೊಂದಿವೆ. ಇದರಿಂದಾಗಿ ಮಳೆಯ ನೀರು ಉತ್ತರದಲ್ಲಿರುವ ಜೀವನದಿ ತುಂಗಭದ್ರೆಗೆ ಹರಿಯುತ್ತದೆ. ಪಶ್ಚಿಮದಲ್ಲಿ ಭೂ ಮೇಲ್ಮೈ ಎತ್ತರದಲ್ಲಿರುವುದರಿಂದ ಕುರುಚಲು ಗಿಡದ ಸಣ್ಣ ಕಾಂಡಗಳಿವೆ. ಸಂಡೂರು ಬೆಟ್ಟಗಳ ಶ್ರೇಣಿಯು ಮಧ್ಯದಲ್ಲಿರುವುದರಿಂದ ಜಿಲ್ಲೆಯಲ್ಲಿ ಎದ್ದುಕಾಣುತ್ತದೆ. ಅಲ್ಲದೆ ಅದು ಕಬ್ಬಿಣ ಮ್ಯಾಂಗನೀಸ್ ಅದಿರಿನ ಅಗಾದ ಭಂಡಾರವನ್ನು ಹೊಂದಿದೆ. ಆದುದರಿಂದ ಈ ಪ್ರದೇಶ ಕಬ್ಬಿಣ ಹಾಗೂ ಮ್ಯಾಂಗನೀಸ್ ಅದಿರಿನ ಗಣಿಗಾರಿಕೆಗೆ ಹೆಸರುವಾಸಿಯಾಗಿದೆ. ಮೇಲೆ ತಿಳಿಸಿದ ಬೆಟ್ಟಗಳ ಸಾಲುಗಳಲ್ಲದೆ ಈ ಜಿಲ್ಲೆಯಲ್ಲಿ ಕೆಲವು ಬಿಡಿ ಬಿಡಿಯಾದ ಬೆಟ್ಟಗಳ ಗುಂಪುಗಳಿವೆ. ಸಂಡೂರು ಬೆಟ್ಟಗಳ ಎತ್ತರಕ್ಕೆ ದರೋಜಿ ಬೆಟ್ಟಗಳಿವೆ. ಇದು ದರೋಜಿ ಗ್ರಾಮದ ಬಳಿ ಇದೆ. ಹಂಪಿ, ಆನೆಗೊಂದಿ, ದರೋಜಿ ಹಾಗೂ ಸಂಡೂರು ಬೆಟ್ಟಗಳ ನಡುವೆ ಕಣಿವೆ ಪ್ರದೇಶವಿದ್ದು ವ್ಯವಸಾಯಕ್ಕೆ ಅನುಕೂಲವಾಗಿದೆ. ಅಲ್ಲದೆ ಫಲವತ್ತಾದ ಭೂಮಿಯನ್ನು ಹೊಂದಿದೆ. ನೀರಾವರಿಯಿಂದಾಗಿ ಹಸಿರು ಕಂಗೊಳಿಸುತ್ತಿದೆ. ದರೋಜಿ ಬೆಟ್ಟಗಳ ಉತ್ತರಕ್ಕೆ ಕಂಪ್ಲಿ ಬೆಟ್ಟಗಳ ಸಾಲುಗಳಿವೆ. ಈ ಎರಡೂ ಬೆಟ್ಟಗಳ ಸಾಲಿನ ನಡುವಿನ ಭೂಪ್ರದೇಶದ ಕಣಿವೆಯಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯಿದೆ. ಕಂಪ್ಲಿ ಬೆಟ್ಟಗಳ ಸಾಲಿನಂತೆ ಇನ್ನೊಂದು ಬೆಟ್ಟಗಳ ಸಾಲು ಕುರುಗೋಡು ಪ್ರದೇಶದಲ್ಲಿ ಕಂಡುಬರುತ್ತದೆ. ಇವುಗಳನ್ನು 'ಕುರುಗೋಡು ಬೆಟ್ಟಗಳು' ಎಂದು ಕರೆಯಲಾಗುತ್ತದೆ. ಇದು ಉತ್ತರ ಪೂರ್ವದಿಕ್ಕಿಗಿದೆ. ಈ ಬೆಟ್ಟಗಳ ಸಾಲು ಸ್ವಲ್ಪ ದೂರದವರೆಗೆ ಮಾತ್ರ ಹರಡಿದೆ. ಅದೇ ರೀತಿ ಬಳ್ಳಾರಿಯಲ್ಲಿರುವ ಬೆಟ್ಟಗಳ ಸಾಲು ಎತ್ತರವಾಗಿ ಕಂಡುಬರುತ್ತವೆ. ಅಲ್ಲದೆ ಇವು ಈ ಮೇಲಿನ ಬೆಟ್ಟಗಳ ಗುಂಪುಗಳ ರೀತಿಯಲ್ಲಿದ್ದು ಸಾಲಾಗಿ ಜೋಡಿಸಿಟ್ಟಂತಿವೆ.

ಕುರುಗೋಡು ಪ್ರದೇಶವು ಸಹ ಹಲವು ಬೆಟ್ಟ ಗುಡ್ಡಗಳಿಂದ ಕೂಡಿದೆ. ಇಲ್ಲಿನ ಅತಿ ಗರಿಷ್ಠವಾದ ಬೆಟ್ಟದ ಎತ್ತರ ೫೯೯ ಮೀ.ಗಳು ಇಡೀ ಬೆಟ್ಟಗಳು ಗ್ರಾನೈಟಿಕ್ ನೈಸ್ ಶಿಲೆಗಳಿಂದ ಕೂಡಿವೆ. ಇದರಲ್ಲಿ ಕೋಳಿಗುಡ್ಡದ ಕಲ್ಲಿನಸಮೂಹ ಒಂದು ಗೊತ್ತಾದ ರೀತಿ ಹರಡಿದೆ. ಇಲ್ಲಿನ ಪ್ರತಿ ಬೆಟ್ಟಕ್ಕೂ ಒಂದೊಂದು ಹೆಸರಿದೆ. ಅವುಗಳನ್ನು ಕಂದಾಯ ಇಲಾಖೆಯ ದಾಖಲೆಯಲ್ಲಿ ಜಿಲಿಲಿಕೊಂಡ, ಹನುಮನಕೊಂಡ, ನಿಶಾನಿಕೊಂಡ, ಅಲಬಾವೀಕೊಂಡ ರಾಮನಕೊಂಡ,

ಬೆಂಕನಕೊಂಡ, ಬೈರಿಕಲ್ಲು ಮುಂತಾಗಿ ಗುರುತಿಸಲಾಗಿದೆ.[೩೬] ಬೆಟ್ಟಗಳ ನಡುವೆ ಅಲ್ಲಲ್ಲಿ ಸಣ್ಣ ಬಯಲು ಪ್ರದೇಶವಿದೆ. ಅಲ್ಲಿಯ ತಗ್ಗು ಸಮೂಹವನ್ನು ಅತಿ ಎತ್ತರದಿಂದ ಸುಮಾರು ೧೦೦೦೦ ಅಡಿಯಿಂದ ನೋಡಿದರೆ ಪೂರ್ವಾಭಿಮುಖವಾಗಿ ಕುಳಿತ ಬಸವನ ರೀತಿ ಕಾಣುತ್ತದೆ.

ಸಂಡೂರು ಬೆಟ್ಟಗಳಲ್ಲಿ ಮಲ್ಲಪ್ಪನ ಗುಡ್ಡ ಮತ್ತು ಕಲ್ಲ ಹಲಿಗುಂದ ಧಾರವಾಡ ಶಿಸ್ಟ್ ಶಿಲಾ ಶ್ರೇಣಿಯನ್ನು ಹೊಂದಿದೆ. ದರೋಜಿ ಕಂಪ್ಲಿ ಕುರುಗೋಡು ಹಂಪಿಯ ಬೆಟ್ಟಗಳನ್ನು ಸೇರಿಸಿಕೊಂಡು ಎಲ್ಲವೂ ಗ್ರಾನೈಟ್ ಶಿಲೆಗಳನ್ನು ಹೊಂದಿವೆ. ಇಲ್ಲಿನ ನಿಶ್ಚಾ ಶಿಲಾವರ್ಗದ ಶ್ರೇಣಿಗಳಲ್ಲಿ ಎತ್ತರದ ಕೋಡು ಬೆಟ್ಟಗಳನ್ನು ಕಾಣಬಹುದು. ಅದರೊಡನೆ ದೊಡ್ಡ ಕೋರಕಲ್ಲಿನ ಕಣಿವೆಗಳು ಇರುವವು. ಸಾಮಾನ್ಯ ಈ ಗ್ರಾನೈಟ್ ಬೆಟ್ಟಗಳಲ್ಲಿ ಕಲ್ಲುಗಳ ಕುಪ್ಪಿಗಳು ದೊಡ್ಡ ದೊಡ್ಡ ರಾಶಿಯಾಗಿದ್ದು ಇಲ್ಲಿ ಬೆಟ್ಟಗಳ ಗುಂಪನ್ನು ಕಾಣಬಹುದಾಗಿದೆ. ಈ ರೀತಿಯ ಬೆಟ್ಟಗಳ ಗುಂಪನ್ನು ರಾಯಚೂರು–ಚಿತ್ರದುರ್ಗ ಮತ್ತು ಬಳ್ಳಾರಿಯ ಕೆಲವು ಪ್ರದೇಶಗಳಲ್ಲಿ ಕಾಣಬಹುದು. ಈ ಬೆಟ್ಟಗಳ ವಿಶೇಷತೆ ಈ ಬೆಟ್ಟಗಳು ಅಸಾಮಾನ್ಯ ಕಂದು ಇಲ್ಲವೆ ಬೂದು ವರ್ಣದ ಈಗಾಗಲೇ ತಿಳಿಸಿರುವ ಗ್ರಾನೈಟ್ ಶಿಲಾವರ್ಗಕ್ಕೆ ಸೇರಿವೆ.[೩೭] ಈ ಪ್ರದೇಶದಲ್ಲಿ ಸಾಮಾನ್ಯವಾಗಿ ದೊಡ್ಡ ಬಂಡೆಗಳು ಸೀಳಿವೆ ಹೀಗೆ ಬಿರುಕು ಬಿಟ್ಟು ಸೀಳಿದವುಗಳಲ್ಲಿ ಕೆಲವು ಮುಂಚಾಚಿ ಕಲ್ಲಾಸರೆಗಳಾದರೆ ಕೆಲವು ಗುಹೆಗಳಾಗಿವೆ. ಸಹಸ್ರಾರು ವರ್ಷಗಳ ನಿರಂತರವಾದ ಸವಕಳಿಯಿಂದ ಗುಹೆಗಳು ಹೆಚ್ಚಾಗಿ ಕಂಡುಬಂದಿವೆ. ಇವು ಆದಿಮಾನವನ ವಸತಿಗೆ ಆಸರೆಯಾಗಿದ್ದವು.

ಈ ಬೆಟ್ಟ ಗುಡ್ಡಗಳಲ್ಲಿನ ಗುಹೆಗಳು, ಕಲ್ಲಾಸರೆಗಳು ಆದಿಮಾನವನ ವಾಸಕ್ಕೆ ಒಂದಡೆ ಸಹಕಾರಿಯಾದರೆ ಇನ್ನೊಂದಡೆ ಇಲ್ಲಿನ ಶಿಲೆ ಅವನು ತನಗೆ ಅಗತ್ಯವಾದ ಆಯುಧೋಪಕರಣಗಳನ್ನು; ಜೊತೆಗೆ ಕಾಡು ದಟ್ಟವಾಗಿದ್ದರಿಂದ ಕೃಷಿ ಉಪಕರಣಗಳನ್ನು ತಯಾರಿಸಿಕೊಳ್ಳಲು ಸಹಕಾರಿಯಾಗಿದ್ದರಿಂದ ಈ ಪರಿಸರದಲ್ಲಿ ಅಂದಿನ ಮಾನವ ನೆಲೆ ನಿಲ್ಲಲು ಸಹಕಾರಿಯಾಯಿತು.

೫. ಮಣ್ಣು ಮತ್ತು ಖನಿಜ ಸಂಪತ್ತು

ಈ ಪ್ರದೇಶದಲ್ಲಿ ಮರಳು ಮಿಶ್ರಿತ ಕೆಂಪುಮಣ್ಣು ಮತ್ತು ಫಲವತ್ತಾದ ಜೇಡಿಮಣ್ಣು ಹರಡಿದೆ. ಮರಳು ಮಿಶ್ರಿತ ಕೆಂಪುಮಣ್ಣು ಸಾಮಾನ್ಯವಾಗಿ ತಂಗಭದ್ರಾ–ಹಗರಿ ನದಿ ಪ್ರದೇಶಗಳಲ್ಲಿ ಕಂಡುಬರುತ್ತದೆ. ಕಪ್ಪು ಜೇಡಿಮಣ್ಣು ಹಡಗಲಿ, ಕೊಪ್ಪಳ, ಗಂಗಾವತಿ ತಾಲೂಕುಗಳ ವಿವಿಧ ಪ್ರದೇಶಗಳಲ್ಲಿದೆ. ಈ ಭಾಗದಲ್ಲಿ ಹೇರಳವಾದ ಖನಿಜ ಸಂಪತ್ತು ದೊರೆಯುತ್ತದೆ. ಈ ಭೂಭಾಗವನ್ನು "ಖನಿಜಗಳ ನಿಧಿ" ಎಂದರೂ ತಪ್ಪಲ್ಲ. ಖನಿಜಗಳಲ್ಲೆಲ್ಲಾ ಅತಿ ಮುಖ್ಯವಾದುದೆಂದರೆ, ಕಬ್ಬಿಣದ ಅದಿರು ಪ್ರಾಚೀನ ಕಾಲದಿಂದಲೂ ಇದರ ಉಪಯೋಗದಿಂದ ಮಾನವನು ನಗರೀಕೃತ ಸಂಸ್ಕೃತಿಯೆಡೆಗೆ ಹೆಜ್ಜೆ ಹಾಕಿದನು. ಇಲ್ಲಿ ದೊರೆಯುವ ವಿವಿಧ ಬಗೆಯ ಖನಿಜಗಳ ವಿವರ ಇಂತಿದೆ: ಹಂಪಿಯಲ್ಲಿ ಪ್ರಧಾನವಾಗಿ ಗ್ರಾನೈಟ್ ಶಿಲೆ ದೊರೆಯುತ್ತದೆ. ನಾಗಲಾಪುರ, ರಾಜಾಪುರ, ಗಾದಿಗನೂರು, ಅಂಕಮನಾಳ, ರಾಮದುರ್ಗ, ಕಡೆಬಾಗಿಲು.[೩೮] ಇಲ್ಲಿ ಬೆಣಚುಕಲ್ಲು

ದೊರೆಯುತ್ತದೆ. ದೇವಗೊಂಡನಹಳ್ಳಿಯಲ್ಲಿ ವಜ್ರ ಮತ್ತು ರೆಡ್ ಓಕರ್; ಜಾನೆಕುಂಟೆ, ಜಂಬುನಾಥನಹಳ್ಳಿ, ವ್ಯಾಸನಕೆರೆ, ಕರಡಿಕೊಳ್ಳ, ಸಂಡೂರು, ನಂದಿಹಳ್ಳಿ, ಹೊಸಪೇಟೆ ಸುತ್ತಮುತ್ತ ಕಬ್ಬಿಣದ ಅದಿರು ಸಿಗುತ್ತದೆ. ಮೆಟ್ರಿ ಬಳಿ ಸತು; ತಾಳೂರು, ಉತ್ತನೂರು, ಹಿರೇಹಡಗಲಿ, ಚಿನ್ನಹಳ್ಳಿಗಳಲ್ಲಿ ಜೆಪ್ಸಮ್; ಹಲವಾಗಲು, ಸುಬ್ರಾಯನಹಳ್ಳಿ, ಯರನಹಳ್ಳಿ, ಬೆನಕಲ್, ತುಂಬರಗುದ್ದಿ, ಮತ್ತಿತರ ಕಡೆ ಜೇಡಿಮಣ್ಣು; ತಮರಿ, ರಾಮಘಡ, ಬಲದಗುಡ್ಡಗಳಲ್ಲಿ ಹಳದಿ ಓಕರ್; ತಿಮ್ಮಾಪುರದಲ್ಲಿ ಬಸಾಲ್ಟ್‌ಶಿಲೆ; ರಾಮಘಡ, ದೇವಗಿರಿ, ಸುಬ್ರಾಯನಹಳ್ಳಿ ಮ್ಯಾಂಗನೀಸ್ ಮತ್ತು ಬಂಗಾರದ ಅದಿರು ಶೃಂಗಮರಡಿ, ಬೆಟಗೇರಿ, ತಾರಾನಗರ, ಕಂಚೂರುಗಳಲ್ಲಿ ದೊರೆಯುತ್ತದೆ.[೩೯] ತಾಮ್ರವು ಹರಪನಹಳ್ಳಿ, ಚಿನ್ನಾಪುರ, ರಾಮಘಡ ಪರ್ವತಗಳಲ್ಲಿ ಸಿಗುತ್ತದೆ. ಅದೇ ರೀತಿ ಮ್ಯಾಗ್ನಸೈಟ್ ಅದಿರು ತೋರಣಗಲ್ಲಿನಲ್ಲಿ; ಸುಣ್ಣದಕಲ್ಲು ತೋರಣಗಲ್ಲು, ಮೆಟ್ರಿ, ಉಬ್ಬಲಗಂಡಿ, ದೇವಲಾಪುರ, ಮಲ್ಲಪ್ಪನಗುಡ್ಡಗಳಲ್ಲಿ ದೊರೆಯುತ್ತದೆ. ಹಾಗೆಯೇ ಮಿನರಲ್ ವಾಟರ್ ಹರಿಶಂಕರ, ಜೋಗಿಕೊಳ್ಳಗಳಲ್ಲಿ; ಬಳಪದ ಕಲ್ಲು ಅರಸಾಪುರ, ನೀಲಗುಂದಗಳಲ್ಲಿ ದೊರೆಯುತ್ತದೆ.

ಈ ಮೇಲಿನ ರೀತಿಯ ಮಣ್ಣು ಅವನು ಕೃಷಿ ಚಟುವಟಿಕೆಗಳನ್ನು ಮಾಡಲು ಸಹಕಾರಿಯಾಯಿತು. ಅದೇ ಇಲ್ಲಿ ದೊರೆಯುವ ಖನಿಜ ಸಂಪತ್ತು ಅಂದಿನಿಂದ ಇಂದಿನವರೆಗೆ ವಿವಿಧ ರೀತಿಯಲ್ಲಿ ಅಂದರೆ ಮಾನವ ಸಂಸ್ಕೃತಿಯ ವಿಕಾಸದಲ್ಲಿ ಉಪಯುಕ್ತವಾಗಿದೆ. ಇದರಿಂದಾಗಿ ಬಳ್ಳಾರಿ ಜಿಲ್ಲೆಯಲ್ಲಿ ಹಲವು ಬಗೆಯ ಗಣಿಗಾರಿಕೆ ಹೆಚ್ಚಾಗಿದ್ದುದು ಕಾಣಬಹುದಾಗಿದೆ.

೬. ಕೃಷಿ ಉತ್ಪನ್ನಗಳು

ಇಲ್ಲಿನ ಬಹುತೇಕ ಜನರ ಮುಖ್ಯ ಉದ್ಯೋಗ ಕೃಷಿಯಾಗಿದೆ. ತುಂಗಭದ್ರಾ ಮತ್ತು ಅದರ ಉಪನದಿಗಳ ಹಾಗೂ ಹಳ್ಳ, ಕೆರೆಗಳ ನೀರನ್ನು ಬಳಸಿಕೊಂಡು ಇಲ್ಲವೆ ಮಳೆಯಾಶ್ರಿತ ನೀರಿನ ಸಹಾಯದಿಂದ ಕೃಷಿಕರು ವ್ಯವಸಾಯ ಕೈಗೊಂಡಿದ್ದಾರೆ. ಈ ಪರಿಸರದ ರೈತರು ನೀರಾವರಿಗಳಲ್ಲಿ ಮುಖ್ಯವಾಗಿ ವಾಣಿಜ್ಯ ಬೆಳೆಗಳಾದ ಕಬ್ಬು, ಭತ್ತ, ಹತ್ತಿ, ಬಾಳೆಗಳನ್ನು ಬೆಳಯುತ್ತಾರೆ. ಅಲ್ಲದೇ ಮಳೆಯಾಶ್ರಿತ ಭೂಮಿಯಲ್ಲಿ ಗೋಧಿ, ಜೋಳ, ಗೋವಿನ ಜೋಳ, ರಾಗಿ, ತೊಗರಿ, ಕಡಲೆ ಮೊದಲಾದ ಧಾನ್ಯಗಳನ್ನು ಸಹ ಬೆಳೆಯುತ್ತಾರೆ.[೪೦]

ಈ ರೀತಿಯ ಎಲ್ಲ ಸವಲತ್ತುಗಳು ಈ ಭೂಭಾಗದಲ್ಲಿ ಇದ್ದಿದ್ದರಿಂದ ಹಂಪಿ, ಆನೆಗೊಂದಿ ಸುತ್ತಮುತ್ತಲಿನ ಸ್ಥಳಗಳಾದ ನಿಟ್ಟೂರು, ತೆಕ್ಕಲಕೋಟೆ, ಸಂಗನಕಲ್ಲು, ಕಪಗಲ್ಲ, ಕುಡತಿನಿ, ಕಾಕುಬಾಳ, ಹಿರೆಬೆಣಕಲ್ಲು, ಮಲ್ಲಾಪುರ ಮೊದಲಾದ ಸ್ಥಳಗಳಲ್ಲಿ ಆದಿಶಿಲಾಯುಗದಿಂದ ಆದಿಮಾನವನು ವಾಸಿಸಿದ್ದಾನೆ. ಅಲ್ಲದೆ ಮುಂದೆ ಅಂದರೆ ಚಾರಿತ್ರಿಕ ಕಾಲದಲ್ಲಿ ವಿಜಯನಗರ ಸೇರಿದಂತೆ ಇತರೆ ಪ್ರಬಲ ರಾಜ್ಯಗಳನ್ನು ಕಟ್ಟಲು ಇಲ್ಲಿನ ಭೌಗೋಳಿಕ ಪರಿಸರವು ಸಹಕಾರಿಯಾಯಿತು. ಇದರಿಂದಾಗಿಯೇ ಹಂಪಿ-ಆನೆಗುಂದಿ ಮುಂತಾದ ನೆಲೆಗಳಲ್ಲಿ ಮನುಷ್ಯ ಪ್ರಾಗೈತಿಹಾಸಿಕ ಕಾಲದಿಂದ ಇತಿಹಾಸಕಾಲದಲ್ಲೂ ವಾಸಿಸುತ್ತ ಆ ಪರಂಪರೆ ಇಂದಿಗೂ ಮುಂದುವರಿಯಲು ಕಾರಣವಾಗಿದೆ.

ಬೆಟ್ಟಗಳಿಂದ ಸುತ್ತುವರಿದ ಎತ್ತರವಾದ ಈ ಭೂ ಪ್ರದೇಶ ಪ್ರಕೃತಿದತ್ತ ಸುರಕ್ಷತೆಯನ್ನು ನೀಡಿವೆ. ಇಂತಹ ಬೆಟ್ಟಗಳ ಸಾಲಿನಲ್ಲಿ ನದಿ, ಸಣ್ಣನದಿ, ಹಳ್ಳಗಳು ಹರಿಯುವುದು ಸಾಮಾನ್ಯ ಈ ನೀರಿನ ಪ್ರದೇಶದ ಆಸುಪಾಸಿನಲ್ಲಿ ಇರುವ ಫಲವತ್ತಾದ ಮಣ್ಣಿನಿಂದಾಗಿ ಕೃಷಿಗೆ ಯೋಗ್ಯವಾದ ಪ್ರದೇಶ ದೊರಕಿದೆ. ಮಣ್ಣು ಫಲವತ್ತಾದರೂ ಇಲ್ಲಿ ಮಳೆ ಕಡಿಮೆಯಾದದ್ದರಿಂದ ಇತ್ತೀಚಿನವರೆಗೂ ಈ ಪ್ರದೇಶ ಒಣ ಬೇಸಾಯಕ್ಕೆ ಒಳಪಟ್ಟಿತ್ತು. ಆದರೆ ತುಂಗಭದ್ರಾ ಆಣೆಕಟ್ಟು ನಿರ್ಮಾಣದಿಂದ ತೋಡಿದ ಕಾಲುವೆಗಳಿಂದಾಗಿ ಇಂದು ನೀರಾವರಿ ಭೂಮಿಯಾಗಿದೆ. ಇಲ್ಲಿಯ ಭೂ ಭೌತಿಕ ಸ್ವರೂಪ ಇಲ್ಲಿ ದೊರೆಯುವ ಅದಿರು, ಖನಿಜ, ಸಿಲಾಸ್ತೋಮ, ಮಣ್ಣು, ಸಸ್ಯಗಳು ಮಾನವನಿಗೆ ಸಹಕಾರಿಯಾಗಿದ್ದವು. ಇದುವೇ ಪ್ರಾಚೀನ ಮನುಷ್ಯ ಒಕ್ಕಲು ಸಂಸ್ಕೃತಿ ಆರಂಭಿಸಲು ಪ್ರೇರಣೆಯಾಯಿತು.

ಭೌಗೋಳಿಕವಾಗಿ ಇದು ಪ್ರಾಚೀನ ಪ್ರದೇಶವಾಗಿದ್ದು, ವಿಶಾಲವಾಗಿ ಹರಡಿಕೊಂಡಿದೆ. ಇಲ್ಲಿ ಹರಿಯುವ ತುಂಗಭದ್ರಾ ಹಲವು ರೀತಿಯಲ್ಲಿ ಜನಜೀವನದ ಮೇಲೆ ಪ್ರಭಾವ ಬೀರಿದೆ. ಅಲ್ಲದೆ, ಅನೇಕ ಸಂಸ್ಕೃತಿಗಳ ಏಳ್ಗೆಗೂ ಕಾರಣವಾಗಿದೆ. ಇಲ್ಲಿನ ಬೆಟ್ಟಗುಡ್ಡಗಳಲ್ಲಿ ದೊರೆಯುವ ನೀರನ್ನು ಆಧರಿಸಿ ಆದಿಮಾನವ ಈ ಸ್ಥಳವನ್ನು ಆಯ್ಕೆ ಮಾಡಿಕೊಂಡನು. ವ್ಯವಸಾಯದ ಕಸುಬನ್ನು ಆತ ಕರಗತ ಮಾಡಿಕೊಂಡ ನಂತರ ಈ ಸ್ಥಳಗಳಲ್ಲಿದ್ದ ಉತ್ತಮವಾದ ಭೂಮಿ ವ್ಯವಸಾಯಕ್ಕೆ ಆಸರೆಯಾಯಿತು. ಇದು ಮುಂದೆ ಹಲವು ಸಂಸ್ಕೃತಿಗಳ ಉಗಮಕ್ಕೆ ಕಾರಣವಾಯಿತು. ಫಲವತ್ತಾದ ಭೂಮಿ, ದೊಡ್ಡದೊಡ್ಡ ಬಂಡೆಗಳನ್ನು ಹೊತ್ತ ಬೆಟ್ಟಗಳು, ನಿಸರ್ಗ ನಿರ್ಮಿತ ಮತ್ತು ಕೊರೆದು ತಯಾರಿಸಿದ ಗವಿಗಳು, ತಾಮ್ರ, ಕಬ್ಬಿಣ, ಚಿನ್ನದ ಅದಿರು, ತುಂಗಭದ್ರಾ ಮತ್ತು ಅದರ ಉಪನದಿಗಳ ನೀರಿನ ಸರಬರಾಜು, ಕಾಡು ಮೊದಲಾದ ಭೌಗೋಳಿಕ ಅನುಕೂಲತೆಗಳಿಂದ ಪ್ರಾಗೈತಿಹಾಸ ಕಾಲದಿಂದಲೂ ಮಾನವನ ವಾಸಸ್ಥಾನವಾಗುವುದಕ್ಕೆ ಈ ಪ್ರದೇಶ ಕಾರಣವಾಯಿತು ಎಂದು ಹೇಳಬಹುದು.

ಒಟ್ಟಿನಲ್ಲಿ ಹೇಳುವುದಾದರೆ, ತುಂಗಭದ್ರಾ ನದಿಯ ಬಲದಂಡೆಯ ಮೇಲೆ ಕಂಡುಬರುವ ಒಂದು ಪುಟ್ಟಗ್ರಾಮ ಹಂಪಿ. ಇದು ಜಾಗತಿಕ ಇತಿಹಾಸ ಪರಂಪರೆಯಲ್ಲಿ ಮಹತ್ವದ ಸ್ಥಾನ ಪಡೆದುಕೊಂಡಿದೆ. ದಕ್ಷಿಣ ಭಾರತದ ಇತಿಹಾಸದಲ್ಲಿ ತನ್ನ ಸಾಂಸ್ಕೃತಿಕ ವೈಭವದ ಉತ್ತುಂಗ ಶಿಖರವನ್ನೇರಿ ಮೆರೆದ ವಿಜಯನಗರ ಸಾಮ್ರಾಜ್ಯ, ಮೂಲತಃ ಹುಟ್ಟಿ ಬೆಳೆದು ಬಾಳಿದ್ದು ಈ ನೆಲದಲ್ಲಿ. ಬೃಹತ್ ಏಕಶಿಲಾ ಬೆಟ್ಟಗಳು, ದೊಡ್ಡದೊಡ್ಡ ಗ್ರಾನೈಟ್ ಕಲ್ಲುಗುಂಡಗಳ ರಾಶಿಯನ್ನು ಹೊದ್ದುಕೊಂಡಿರುವ ಬೆಟ್ಟಸಾಲುಗಳ ಪ್ರವೇಶ ಇದಾಗಿದೆ. ನಿಸರ್ಗ ನಿರ್ಮಿತವಾದ ಬೃಹತ್ ಗವಿಗಳು, ಕಂದರಗಳು, ಏಕಶಿಲಾ ಬೆಟ್ಟಗಳು ಬಂಡೆಗಳ ಕಡಿದಾದ ಇಳಿಜಾರುಗಳು ಇಲ್ಲಿನ ನಿಸರ್ಗ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸಿವೆ. ಬೆಟ್ಟಗುಡ್ಡಗಳ ನಡುವೆ ನುಸುಳಿ ಹರಿಯುವ ತುಂಗಭದ್ರಾ ನದಿ. ಈ ಪ್ರದೇಶಕ್ಕೆ ಮತ್ತೊಂದು ವರದಾನವೂ ಆಗಿದೆ. ಈ ಪ್ರದೇಶದ ಜನರ ಜೀವನದಿ ಕೂಡ ಆಗಿದೆ. ಈ ನದಿಯ ಎಡಬಲ ದಂಡೆಗಳ ಹಲವು ಸ್ಥಳಗಳಲ್ಲಿ ಆದಿಮ

ಸಂಸ್ಕೃತಿಯ ನೆಲೆಗಳನ್ನು ಗುರುತಿಸಲಾಗಿದೆ. ಅದಕ್ಕೆ ಸಂಬಂಧಿಸಿದ ಹಲವಾರು ಸಾಕ್ಷ್ಯಾಧಾರಗಳು ದೊರಕಿವೆ. ಅಲ್ಲದೆ ತುಂಗಭದ್ರಾ ನದಿ ಜನ ಸಾಮಾನ್ಯರಲ್ಲಿ ಹಲವಾರು, ಪುರಾಣ, ಪುಣ್ಯಕತೆ, ಐತಿಹ್ಯ, ಕಾವ್ಯ, ಮಹಾಕಾವ್ಯವನ್ನು ಬಿತ್ತಿ ಬೆಳೆಸಿದೆ. ಹಾಗಾಗಿ ವಿಜಯನಗರ ಸಾಮ್ರಾಜ್ಯ ಹಾಗೂ ಮೂಲದೈವ ವಿರೂಪಾಕ್ಷನಿಗಿಂತ ಇಲ್ಲಿನ ಜನಪದರಲ್ಲಿ ತುಂಗಭದ್ರಾ ನದಿ ಮಹತ್ವದ ಸ್ಥಾನ ಪಡೆದುಕೊಂಡಿದೆ. ಹಂಪಿಯು ಪೂರ್ವ ಪಶ್ಚಿಮ ಹಾಗೂ ಉತ್ತರ ದಕ್ಷಿಣ ದಿಕ್ಕುಗಳಲ್ಲಿ ರಾಶಿರಾಶಿ ಬಂಡೆಗಳ ಬೆಟ್ಟಸಾಲುಗಳಿಂದ ಆವೃತ್ತವಾಗಿದ್ದು, ನಿಸರ್ಗವೇ ನಿರ್ಮಿಸಿದ ಕೋಟೆಯಂತೆ ಕಂಡುಬರುತ್ತದೆ. ಅಲ್ಲದೆ, ಅಲ್ಲಲ್ಲಿ ಕಂಡುಬರುವ ಅಲ್ಪಸ್ವಲ್ಪ ಸಮತಟ್ಟಾದ ಮೈದಾನ ಪ್ರದೇಶ ವ್ಯವಸಾಯಕ್ಕೆ ಯೋಗ್ಯವಾದ ಫಲವತ್ತಾದ ಮಣ್ಣನ್ನು ಹೊಂದಿದೆ. ಈ ಕಾರಣದಿಂದ ವಿಜಯನಗರದ ಅರಸರು ತಮ್ಮದೇ ಆದ ಪಾರಂಪರಿಕ ತಂತ್ರಜ್ಞಾನವನ್ನು ಬಳಸಿ ತುಂಗಭದ್ರಾ ನದಿಗೆ ಅಣೆಕಟ್ಟುಗಳನ್ನು ನಿರ್ಮಿಸಿ ಈ ಪ್ರದೇಶದಲ್ಲಿ ಕೆರೆ ಹಾಗೂ ಕಾಲುವೆ ನೀರಾವರಿಯನ್ನು ಬಳಕೆಗೆ ತರುವುದರ ಮೂಲಕ ಮಹತ್ತರ ಕಾರ್ಯನಿರ್ವಹಿಸಿದ್ದಾರೆ. ಕೃಷಿ ಸಂಬಂಧಿಯಾದ ಇದರ ಅಣೆಕಟ್ಟೆ ಹಾಗೂ ಕಾಲುವೆಗಳು ಇಂದಿಗೂ ಸುಸ್ಥಿತಿಯಲ್ಲಿರುವುದು ಅವರ ಪಾರಂಪರಿಕ ತಂತ್ರಜ್ಞಾನಕ್ಕೆ ಹಿಡಿದ ಕನ್ನಡಿಯಂತಿವೆ.

ಇಂದಿಗೂ ಈ ಪ್ರದೇಶದಲ್ಲಿ ಹಲವಾರು ಅಪರೂಪದ ಪ್ರಾಣಿವರ್ಗ ಹಾಗೂ ಸಸ್ಯವರ್ಗ ಕಂಡುಬರುತ್ತದೆ. ಈ ಪ್ರದೇಶದಲ್ಲಿ ಹಲವಾರು ಸಾಧು ಸಂತರು ಜನಪದ ವೈದ್ಯಪದ್ಧತಿಯನ್ನು ಇಂದಿಗೂ ಮುಂದುವರಿಸಿಕೊಂಡು ಬಂದಿದ್ದಾರೆ. ಇಲ್ಲಿ ಹಲವಾರು ಅಪರೂಪದ ಗಿಡಮೂಲಿಕೆಗಳು ಇರುವುದಾಗಿ ಹಲವಾರು ದೇಶವಿದೇಶಗಳ ಔಷಧತಜ್ಞರು ಹಾಗೂ ಸಂಶೋಧಕರು ದೃಢಪಡಿಸುತ್ತಾರೆ. ಇಂದಿಗೂ ಆ ಕೆಲಸ ನಿರಂತರವಾಗಿ ಇಲ್ಲಿ ನಡೆದಿದೆ.

ಇಲ್ಲಿನ ಭೌಗೋಳಿಕ ಪರಿಸರವೂ ಸಹ ವಿವಿಧ ಸಮುದಾಯಗಳು ಈ ಪ್ರದೇಶದಲ್ಲಿ ನೆಲೆ ನಿಲ್ಲಲು ಮುಖ್ಯಕಾರಣವಾಗಿದೆ. ಕಾರಣ ಈ ಪ್ರದೇಶವು ನದಿಬಯಲಿನ ಪ್ರದೇಶವಾದ್ದರಿಂದ ಪಶುಸಂಗೋಪನಾ ವೃತ್ತಿಯ ಕುರುಬರು, ಗೊಲ್ಲರು, ವಿಶೇಷವಾಗಿ ಈ ಪ್ರದೇಶದಲ್ಲಿ ಕಂಡುಬರುತ್ತಾರೆ. ಬೇಟೆಯಾಡಲು ಅನುಕೂಲವಾದ ಅರಣ್ಯ ಪ್ರದೇಶ ಹಾಗೂ ಪ್ರಾಣಿವರ್ಗ ಇಲ್ಲಿ ಹೆಚ್ಚಾಗಿದ್ದುದರಿಂದ ಬೇಡರು, ಅಡವಿಚುಂಚರು, ಮ್ಯಾಸ ಬೇಡರು, ಹಕ್ಕಿಪಿಕ್ಕಿಗಳು, ಕೊರಚರು ಮುಂತಾದ ಬುಡಕಟ್ಟು ಸಮುದಾಯಗಳು ಈ ಪ್ರದೇಶದಲ್ಲಿ ನೆಲೆನಿಂತ ಸಮುದಾಯಗಳಾಗಿವೆ.

ಜಾಗತಿಕ ಇತಿಹಾಸ ಪರಂಪರೆಯಲ್ಲಿ ಹಂಪೆ ತನ್ನದೇ ಆದ ಮಹತ್ವವಾದ ಸ್ಥಾನಹೊಂದಿದೆ. ವಿರೂಪಾಕ್ಷನ ಹೇಮಕೂಟ, ಹರಿಹರ ರಾಘವಾಂಕಾದಿಗಳ ಸಾಹಿತ್ಯ ಸಂಪತ್ತು, ವಿಜಯನಗರ ಸಾಮ್ರಾಜ್ಯಗಳಿಂದಾಗಿ ಈ ಮಾಹಿತಿ ಪ್ರಾಪ್ತವಾಗಿದೆ. 'ಹಂಪೆ', 'ಪಂಪಾಕ್ಷೇತ್ರ', 'ಪಂಪಾಪುರ' ಹಾಗೂ 'ದಕ್ಷಿಣಕಾಶಿ' ಇತ್ಯಾದಿ ಹೆಸರುಗಳಿಂದ ಕರೆಯಲಾದ ಹಂಪಿಯ ದಕ್ಷಿಣಕ್ಕೆ ಕಮಲಾಪುರ, ಉತ್ತರಕ್ಕೆ ತುಂಗಭದ್ರಾ ನದಿ, ಪೂರ್ವಕ್ಕೆ ಕಂಪ್ಲಿ ಹಾಗೂ ಪಶ್ಚಿಮಕ್ಕೆ ಹುಲಿಗಿ ಪ್ರದೇಶಗಳು

ಕಂಡುಬರುತ್ತವೆ. ಈ ಪುಣ್ಯಕ್ಷೇತ್ರದ ಪೂರ್ವಕ್ಕೆ ಕಿನ್ನರೇಶ್ವರ(ರಾಮಸಾಗರ ಸಮೀಪ), ಪಶ್ಚಿಮಕ್ಕೆ ಸೋಮನಾಥ(ಈಗಿನ ಕೊಪ್ಪಳ ಜಿಲ್ಲೆಯ ಶಿವಪುರದ ಸಮೀಪ), ದಕ್ಷಿಣಕ್ಕೆ ಜಂಬುನಾಥ (ಹೊಸಪೇಟೆ ಸಮೀಪ) ಹಾಗೂ ಉತ್ತರಕ್ಕೆ ವಾಣಿಭದ್ರೇಶ್ವರ(ಗಂಗಾವತಿಯ ಸಮೀಪ)ಗಳು ಗಡಿಗಳಂತಿದ್ದು ಕೇಂದ್ರದಲ್ಲಿ ವಿರೂಪಾಕ್ಷನಿದ್ದಾನೆ.

ಈಗಿನ ಹಂಪಿಯು ಪಾಳುಬಿದ್ದಿರುವ ಒಂದು ಪುರಾತನ ಮಹಾನಗರ. ಅದರ ಅವಶೇಷಗಳು ಅನೇಕ ಮತ್ತು ಬಹುವಿಧಗಳಿಂದ ಕೂಡಿವೆ. ಈ ಅವಶೇಷಗಳಿಗೆ ಇಲ್ಲಿನ ಬೆಟ್ಟಗುಡ್ಡಗಳ ಪರಿಸರವೇ ಒಂದು ವೈಶಿಷ್ಟ್ಯ. ಇಲ್ಲಿನ ಬೋಳು ಬಂಡೆಗಳ ವಿಚಿತ್ರ ಜೋಡಣೆಗಳನ್ನು ನೋಡಿದರೆ ಒಂದಾನೊಂದು ಕಾಲದಲ್ಲಿ ಹೇಗೋ, ಏಕೋ, ಬಾಹ್ಯಾಕಾಶದಿಂದ ಅತಿಮಾನವ ಜೀವಿಗಳು ಬಂದು ನಲಿದು ಚಲ್ಲಾಟವಾಡಿ ತಮ್ಮ ಆಟಿಕೆಗಳನ್ನು ಬಿಟ್ಟುಹೋದಂತೆ ಭ್ರಮೆಯಾಗುತ್ತದೆ. ದಕ್ಷಿಣ ಭಾರತದ ಇತಿಹಾಸದಲ್ಲಿ ಎಂದೂ ಕಾಣದ ರಾಜಕೀಯ ವಿಪ್ಲವದ ದುರಂತಗಳನ್ನೂ, ದೌರ್ಜನ್ಯಗಳನ್ನು ಅನುಭವಿಸಿದ ಜನತೆ ತನ್ನ ಸ್ವಾತಂತ್ರ್ಯವನ್ನೂ, ಧರ್ಮಪರಂಪರೆಯನ್ನೂ ರಕ್ಷಿಸಿಕೊಂಡು ಬರಬೇಕೆಂಬ ಪಾತ್ರ ಸಂಕಲ್ಪವನ್ನು ಕಾರ್ಯಗತಮಾಡಿದ ವೀರಭೂಮಿ ಇದು. ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರದೆ ಇಡೀ ದಕ್ಷಿಣ ಭಾರತದಲ್ಲಿ ವಿಧರ್ಮೀಯರ ಪೀಡಕ ಪ್ರಭುತ್ವವನ್ನು ಶೌರ್ಯದಿಂದ ಕೊನೆಗಾಣಿಸಿ, ಸುಮಾರು ಎರಡೂವರೆ ಶತಮಾನಗಳವರೆಗೆ ಜನಸಾಮಾನ್ಯರಿಗೆ ಶಾಂತಿ ಸಂರಕ್ಷಣೆ ನೀಡಿದ ಕರ್ಮಭೂಮಿ, ಗಂಡುಗಲಿಗಳ ತವರುಮನೆ.

ಸುಮಾರು ಏಳು ಶತಮಾನಗಳ ಹಿಂದೆ ಬೆಟ್ಟಗುಡ್ಡದ ಈ ಭೌಗೋಳಿಕ ಪರಿಸರದಲ್ಲಿ ಒಂದಾನೊಂದು ದಿನ ಉಜ್ವಲಸಾಮ್ರಾಜ್ಯ ವೈಭವದ ಕೇಂದ್ರವು ಅವತರಿಸಬಹುದೆಂಬ ಭಾವನೆ ಯಾರಿಗೂ ಸ್ವಪ್ನದಲ್ಲಿಯೂ ಹೊಳೆದಿರಲಾರದು. ಈ ಕಲ್ಲು ಬಂಡೆಗಳು ಅನೇಕ ಶೌರ್ಯ ಪ್ರತಾಪ ಹಾಗೂ ತ್ಯಾಗದ ಘಟನೆಗಳನ್ನು ಪ್ರಕಾಶಪಡಿಸಿಯೂ ಇವೆ; ಮರೆಸಿಯೂ ಇವೆ. ಇಲ್ಲಿನ ಅವಶೇಷಗಳ ಎಪ್ಪತ್ತು ಕಿಲೋಮೀಟರ್ ಚೌಕದ ವ್ಯಾಪ್ತಿಯು ಈಗ ನಮ್ಮ ಪಾಲಿಗೆ ವಿಜಯನಗರದ ಒಂದು ಬೃಹತ್ ಸ್ಮಾರಕವಾಗಿ ಉಳಿದಿದೆ. ಈ ದುರ್ಗದ ವಾತಾವರಣದಲ್ಲಿ ಇತಿಹಾಸವು ಅಂಕುರಿಸಿ, ಬೆಳೆದು ಬಹುಕಾಲ ರಾರಾಜಿಸಿ ಕ್ಷಣಮಾತ್ರದಲ್ಲಿ ಬಲಿಯಾಯಿತು. ಇನ್ನೂರ ಮೂವತ್ತು ವರ್ಷಗಳ ಸಾಮ್ರಾಜ್ಯ ವೈಭವದ ಕೇಂದ್ರವು ೧೫೬೫ರಲ್ಲಿ ಕೊನೆಗೊಂಡಿತು. ಹೀಗಾಗಿ ಮರುಭೂಮಿಯಂತಾಯಿತು ಎಂಬುದು ಇಂದಿಗೆ ಇತಿಹಾಸವಾಗಿದೆ.

ಇಲ್ಲಿನ ಬೆಟ್ಟಗಳ ಕಲ್ಲು ಬಂಡೆಗಳ ನಡುವೆ ನುಸುಳಿ ಹರಿಯುತ್ತಿರುವ ತುಂಗಭದ್ರಾ ನದಿ ಈ ಪ್ರದೇಶಕ್ಕೆ ಮತ್ತೊಂದು ನಿಸರ್ಗದ ಕಾಣಿಕೆಯೇ ಸರಿ. ಈ ಎಲ್ಲಾ ಕಾರಣಗಳಿಂದಾಗಿ ಹಂಪೆ ಕರ್ನಾಟಕದ ನಾಗರಿಕತೆಯ ತೊಟ್ಟಿಲಾಗಿ ರೂಪಪಡೆದಿರುವುದನ್ನು ಕಾಣಬಹುದಾಗಿದೆ. "ಹಂಪಿಯ ಪರಿಸರದಲ್ಲಿ ತುಂಗಾಭದ್ರನದಿಯ ಎಡ ಹಾಗೂ ಬಲದಂಡೆಗಳ ಮೇಲೆ ಗುರುತುಗೊಂಡಿರುವ ಆದಿಮ ಸಂಸ್ಕೃತಿಯ ನೆಲೆಗಳು ಈ ಪ್ರದೇಶದಲ್ಲಿ ಮಾನವ ಬದುಕಿ ಬಾಳಿದ ಪ್ರಾಚೀನತೆಯ ಕುರುಹುಗಳಾಗಿ ಕಂಡುಬರುತ್ತವೆ."[೧]

□□□

ಕೊನೆ ಟಿಪ್ಪಣಿಗಳು

೧) ಓಂ ಶ್ರೀ ಗುರು ಸಿದ್ಧಲಿಂಗೇಶ್ವರ ಸ್ವಾಮಿಗಳು, ಪಂಪಾ ಮಹಾತ್ಮೆ ಪುಟ. ೨೯.

೨) ಎಂ.ಚಿದಾನಂದ ಮೂರ್ತಿ ಹೊಸತು ಹೊಸತು, ಪುಟ. ೪೫೬.

೩) ಎಂ.ಎಸ್.ಶಿವಶಂಕರ್ ಮತ್ತು ಸಿ.ಎಸ್.ಪಾಟೀಲ(ಸಂ.) ವಿಜಯನಗರ ಅಧ್ಯಯನ ಸಂ.೩ ಪುಟ.೮೯.

೪) ದೇವರ ಕೊಂಡಾರೆಡ್ಡಿ ಮತ್ತು ಇತರರು (ಸಂ.) ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–೩ ಹಂಪಿ ಶಾಸನಗಳು ಶಾಸನ ಸಂ. ೫೫, ಪುಟ. ೪೪, ೪೫.

೫) ಅದೇ ಶಾಸನ ಸಂ. ೫೪ ಪುಟ. ೪೦.

೬) ಅದೇ ಶಾಸನ ಸಂ. ೫೩ ಪುಟ. ೩೪.

೭) ಅದೇ ಶಾಸನ ಸಂ. ೧೪೫ ಪು. ೧೧೭.

೮) ಅದೇ ಶಾಸನ ಸಂ. ೫೪ ಪುಟ. ೧೧೭.

೯) ಅದೇ ಶಾಸನ ಸಂ. ೫೪ ಪುಟ. ೩೯.

೧೦) ಅದೇ ಶಾಸನ ಸಂ. ೧೫೫ ಪುಟ. ೧೨೨.

೧೧) ಅದೇ ಶಾಸನ ಸಂ. ೩೨೭ ಪುಟ. ೨೪೧.

೧೨) ಅದೇ ಶಾಸನ ಸಂ. ೩೨೮ ಪುಟ. ೨೪೨.

೧೩) ಅದೇ ಶಾಸನ ಸಂ. ೩೫೦ ಪುಟ. ೨೫೫.

೧೪) ಅದೇ ಶಾಟನ ಸಂ. ೩೯೮ ಪುಟ. ೨೮೪

೧೫) ಅದೇ ಶಾಸನ ಸಂ. ೩೨೧ ಪುಟ. ೨೩೨.

೧೬) ಅದೇ ಶಾಸನ ಸಂ. ೧೧೧ ಪುಟ. ೯೫.

೧೭) ಅದೇ ಶಾಸನ ಸಂ. ೮೩ ಪುಟ. ೮೩.

೧೮) ಅದೇ ಶಾಸನ ಸಂ. ೫೩ ಪುಟ. ೩೪.

೧೯) ಅದೇ ಶಾಸನ ಸಂ. ೬೯ ಪುಟ. ೬೨.

೨೦) ಅದೇ ಶಾಸನ ಸಂ. ೫೬ ಪುಟ. ೪೭.

೨೧) ಬಿ.ಎ. ವಿವೇಕ ರೈ (ಸಂ.) ರಾಘವಾಂಕ ಸಮಗ್ರ ಕಾವ್ಯ, ಪು.೧

೨೨) ಎಚ್.ದೇವಿರಪ್ಪ (ಸಂ.) ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ.

೨೩) ಅದೇ ಪುಟ. ೪೩೨.

೨೪) ಅದೇ. ಪುಟ. ೪೩೫.

೨೫) ಸಂ.ಶಿ.ಭೂಸನೂರಮಠ (ಸಂ.) ಲಿಂಗಲೀಲಾ ವಿಲಾಸ ಚರಿತ್ರೆ, ಪುಟ.೨.

೨೬) ಬಿ.ಶಿವಮೂರ್ತಿಶಾಸ್ತ್ರಿ (ಸಂ.) ಪಂಪಾಸ್ಥಾನ ವರ್ಣಕಂ, ಪುಟ.೦೧.

೨೭) ಅದೇ ಪುಟ. ೪,೫.

೨೮) ಅದೇ ಪುಟ. ೧೩

೨೯) ಹಾ.ಮಾ.ನಾಯಕ (ಸಂ), ಕನ್ನಡ ವಿಷಯ ವಿಶ್ವಕೋಶ, ಪುಟ.೯೮೬೫-೯೭.

೩೦) ಬಳ್ಳಾರಿ ಮತ್ತು ರಾಯಚೂರು ಜಿಲ್ಲಾ ಗ್ಯಾಸಟಿಯರ್.

೩೧) Subba Rao B., Stone age Culture of Bellary and Sankalia H.D.Mesolithic and premesolithic Industries from Excavations at Sanganakalu, Bellary.

೩೨) Gazetteer of India, Bellary District

೩೩) ಅದೇ ಪುಟ.

೩೪) ಚಿತ್ರದುರ್ಗ ಗ್ಯಾಸೆಟೀಯರ, ಪುಟ.೬-೧೭.

೩೫) S.I.I.IX(i), ೧೦೪, ೧೦೪೬.

೩೬) ನಾಯಕ ಹಾ.ಮಾ. (ಸಂ), ಕನ್ನಡ ವಿಷಯ ವಿಶ್ವಕೋಶ, ಪುಟ. ೯೭.

೩೭) Gazetteer of India, Bellary District. ಪೂರ್ವೋಕ್ತ.

೩೮) ಚಂದ್ರಶೇಖರ ಟಿ.ಆರ್., ಬಳ್ಳಾರಿ ಜಿಲ್ಲೆಯ ನಿಸರ್ಗ ಸಂಪತ್ತು, ಪುಟ.೪೭-೪೮.

೩೯) ರಾಯಚೂರು ಜಿಲ್ಲಾ ಗ್ಯಾಸೆಟಿಯರ್. ಪು.೮-೧೨.

೪೦) ಸಂಡೂರು ತಾಲೂಕು ದರ್ಶನ, ಪುಟ.೩.

೪೧) ಎಚ್.ತಿಪ್ಪೇಸ್ವಾಮಿ. ಮಧ್ಯಕಾಲೀನ ಮಹಾನಗರ ಹಂಪಿ, ಪುಟ.೧೭.

ಅಧ್ಯಾಯ ಮೂರು

ಹಂಪಿ ಪರಿಸರದ ಚಾರಿತ್ರಿಕ ಹಿನ್ನೆಲೆ

೩.೧. ಪ್ರಾಗೈತಿಹಾಸಿಕ ಕಾಲ

೩.೧.೧. ಹಳೇ ಶಿಲಾಯುಗ ಸಂಸ್ಕೃತಿ

೩.೧.೨. ಸೂಕ್ಷ್ಮ ಶಿಲಾಯುಗ ಸಂಸ್ಕೃತಿ

೩.೧.೩. ನೂತನ ಶಿಲಾಯುಗ ಸಂಸ್ಕೃತಿ

೩.೧.೪. ಶಿಲಾ ತಾಮ್ರ ಯುಗ ಸಂಸ್ಕೃತಿ

೩.೧.೫. ಕಬ್ಬಿಣಯುಗ ಅಥವಾ ಬೃಹತ್ ಶಿಲಾಯುಗ ಸಂಸ್ಕೃತಿ

೩.೨. ಚಾರಿತ್ರಿಕ ಕಾಲ

೩.೨.೧. ಪ್ರಾಚೀನ ಕಾಲ

೩.೨.೨. ಮಧ್ಯಕಾಲೀನ ಕಾಲ

೩.೨.೩. ಆಧುನಿಕ ಕಾಲ

ಅಧ್ಯಾಯ ಮೂರು

ಹಂಪಿ ಪರಿಸರದ ಚಾರಿತ್ರಿಕ ಹಿನ್ನೆಲೆ

ಪ್ರಸ್ತಾವನೆ

ಭೂಮಿಯ ಹುಟ್ಟು ಸುಮಾರು ೪೫೦ ಮಿಲಿಯನ್(ದಶಲಕ್ಷ ಮತ್ತು ೪.೫ ಬಿಲಿಯನ್/ಶತಕೋಟಿ) ವರ್ಷಗಳಷ್ಟು ಹಿಂದೆ ಆಯಿತು. ನಂತರ ಮೊದಲ ಜೀವಿ ಸು.೩೫೦–೪೦೦ ಮಿಲಿಯನ್/೩.೫–೪ ಬಿಲಿಯನ್ ವರ್ಷಗಳ ಹಿಂದೆ ಸಂಭವಿಸಿರಬಹುದಾದ ಊಹೆ ಇದೆ.[೧] ಮಾನವ ಈ ಜೀವ ವಿಕಾಸದ ಏಣಿಯಲ್ಲಿ ಎತ್ತರಕ್ಕೆ ಏರಿರುವ ಒಂದು ಜೀವಿ. ಈ ದೀರ್ಘಾವಧಿ ಭೂ ಇತಿಹಾಸಕ್ಕೆ ಹೋಲಿಸಿದರೆ ಮಾನವನ ಪೂರ್ವಜರ ಹುಟ್ಟು ಕೇವಲ ೬೫ ಮಿಲಿಯನ್ ವರ್ಷಗಳ ಹಿಂದಷ್ಟೇ ಆಗಿರುವ ದಾಖಲೆ ಸಿಗುತ್ತದೆ. ಪ್ರಾಗೈತಿಹಾಸಿಕ ಮಾನವನ ಉಗಮವಾಗಿ ಸರಿ ಸುಮಾರು ೧೪ ಮಿಲಿಯನ್ ವರ್ಷಗಳಾಗಿದ್ದರೆ ಆಧುನಿಕ ಮಾನವನ ಉಗಮ ಕೇವಲ ೨ ಮಿಲಿಯನ್ ವರ್ಷಗಳ ಹಿಂದಷ್ಟೇ ಆಗಿದೆ ಎನ್ನಬಹುದು.[೨] ಮಾನವ ಕೋತಿ, ವಾನರನ್ನೊಳಗೊಂಡ ಪ್ರೈಮೋಟ ಗಣಕ್ಕೂ, ಸಸ್ತನಿ ವರ್ಗಕ್ಕೂ ಸೇರಿದ್ದಾನೆ. ಇಡೀ ಪ್ರಾಣಿ ಜಗತ್ತಿನಲ್ಲಿ ಮಾನವನಿಗೆ ಒಂದು ವ್ಯವಸ್ಥಿತ ಸ್ಥಾನವಿದೆ.

ಮಾನವ ಪ್ರಾಗೈತಿಹಾಸಿಕ ಹಂತದಿಂದ ನಾಗರಿಕ ಹಂತಕ್ಕೆ ತಲುಪುವವರೆಗಿನ ಕಾಲವನ್ನು ಇಲ್ಲವೇ ಮಾನವ ಅಕ್ಷರ ಜ್ಞಾನವನ್ನು ಕಂಡುಕೊಳ್ಳದೆ ಇದ್ದ ಕಾಲವನ್ನು ಪ್ರಾಗೈತಿಹಾಸಿಕ ಕಾಲವೆಂದು ಅಥವಾ ಇತಿಹಾಸ ಪೂರ್ವಕಾಲವೆಂದು ಕರೆಯುತ್ತಾರೆ. ಮಾನವ ಅಕ್ಷರ ಜ್ಞಾನವನ್ನು ಕಂಡುಕೊಂಡ ನಂತರದ ಕಾಲವನ್ನು ಚಾರಿತ್ರಿಕ ಕಾಲ ಎನ್ನುತ್ತಾರೆ. ಹಂಪಿ ಮತ್ತು ಅದರ ಸುತ್ತಲಿನ ಪ್ರದೇಶಗಳ ವ್ಯಾಪ್ತಿಯಲ್ಲಿ ಕೆಲವು ಪ್ರಾಗೈತಿಹಾಸಿಕ ನೆಲೆಗಳು ಕಂಡುಬಂದಿವೆ. ಅವುಗಳಲ್ಲಿ ಪ್ರಾಗೈತಿಹಾಸಿಕ ಕಾಲದ ಮನುಷ್ಯ ಉಪಯೋಗಿಸಿ ಬಿಟ್ಟು ಹೋದ ಕೆಲವು ಅವಶೇಷಗಳು ಹಂಪಿಯಲ್ಲಿ ದೊರೆತಿವೆ. ಹಂಪಿ ಮತ್ತು ಅದರ ಸುತ್ತಲಿನ ಪ್ರದೇಶಗಳ ವ್ಯಾಪ್ತಿಯಲ್ಲಿ ಹಲವು ರಾಜಮನೆತನಗಳು ಹಾಗೂ ಸಾಮಂತರು ಆಳ್ವಿಕೆ ನಡೆಸಿದ್ದಾರೆ. ಇವರು ತಮ್ಮದೇ ಆದ ವಿಶಿಷ್ಟ ಸ್ಥಾನಗಳನ್ನು ಗಳಿಸಿಕೊಂಡಿದ್ದಾರೆ. ಅಲ್ಲದೆ ಅನೇಕ ಪ್ರಜಾಹಿತ ಕಾರ್ಯಗಳನ್ನು ಕೈಗೊಂಡು ಚರಿತ್ರೆಯಲ್ಲಿ ಚಿರಸ್ಥಾಯಿಯಾಗಿದ್ದಾರೆ. ಇದನ್ನು ಇದೆಲ್ಲವನ್ನು ಒಳಗೊಂಡಂತೆ ಈ ಕೆಳಗಿನ ಶಿರೋನಾಮೆಗಳ ಅಡಿಯಲ್ಲಿ ವಿವರಿಸಲಾಗಿದೆ.

೩.೧. ಪ್ರಾಗೈತಿಹಾಸಿಕ ಕಾಲ

ಪ್ರಾಗೈತಿಹಾಸಿಕ ಕಾಲದ ಮಾನವನ ಸುದೀರ್ಘ ಇತಿಹಾಸದ ಈ ಕಾಲಘಟ್ಟವನ್ನು ಶಿಲಾಯುಗ(ಸ್ಟೋನೇಜ್) ಲೋಹಯುಗ(ಮೇಟಲ್ ಏಜ್) ಎಂಬ ಎರಡು ಪ್ರಧಾನ ವಿಭಾಗಗಳನ್ನಾಗಿ ಮಾಡಲಾಗಿದೆ. ಲೋಹದ ಬಳಕೆ ಆರಂಭವಾಗುವವರೆಗೆ ಮಾನವ ಶಿಲೆಯನ್ನೇ ಅವಲಂಬಿಸಿದ್ದ ಈ ಕಾಲಾವಧಿಯನ್ನು ಶಿಲಾಯುಗ(ಸ್ಟೋನೇಜ)ಎಂದು ಕರೆಯುತ್ತಾರೆ. ಈ ಎರಡು ಯುಗಗಳನ್ನು ಹಳೇ ಶಿಲಾಯುಗ(ಪೆಲಿಯೋಲಿಥಿಕ್), ಸೂಕ್ಷ್ಮಶಿಲಾಯುಗ(ಮೆಸೋಲಿಥಿಕ್), ನವಶಿಲಾಯುಗ (ನಿಯೋಲಿಥಿಕ್), ಶಿಲಾತಾಮ್ರಯುಗ (ಚಾಲ್ಕೋಲಿಥೀಕ್), ಬೃಹತ್ ಶಿಲಾಯುಗ (ಮೆಗಾಲಿಥಿಕ್/ ಕಬ್ಬಿಣಯುಗ) ಎಂದು ವಿಭಾಗಿಸಲಾಗಿದೆ.[೩] ಸುಮಾರು ೫ ಲಕ್ಷ ವರ್ಷಗಳ ಹಿಂದಿನಿಂದ ಪ್ರಾಗೈತಿಹಾಸಿಕ ಇತಿಹಾಸ ಕಾಲದವರೆಗಿನ ಬೆಳವಣಿಗೆಯನ್ನು ಕರ್ನಾಟಕ ಅದರ ನೆರೆಯ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡುಗಳಲ್ಲಿಯ ಕ್ಷೇತ್ರ ಶೋಧನೆ ಮತ್ತು ಉತ್ಖನನಗಳಲ್ಲಿ ದೊರೆತ ಅವಶೇಷಗಳು ದೃಢಪಡಿಸಿವೆ. ಇವುಗಳ ಆಧಾರದ ಮೇಲೆ ಕೆಲವರು ಈ ಕಾಲಗಳನ್ನು ಏಳು ಘಟ್ಟಗಳಾಗಿ ವಿಭಾಗಿಸಿದ್ದಾರೆ.[೪]

ಭಾರತದಲ್ಲಿ ಪ್ರಾಗೈತಿಹಾಸಿಕ ಕಾಲದ ವಿವಿಧ ಕಾಲಘಟ್ಟಗಳಲ್ಲಿ ಮಾನವ ಜೀವಿಸಿದ್ದಕ್ಕೆ ಹಲವಾರು ಉದಾಹರಣೆಗಳು ದೊರೆತಿವೆ. ಕರ್ನಾಟಕವು ಇದಕ್ಕೆ ಹೊರತಾಗಿಲ್ಲ. ದಖನ್ ಪ್ರಸ್ಥಭೂಮಿಗೆ ಸೇರಿದ ಕರ್ನಾಟಕವು ಭೌಗೋಳಿಕವಾಗಿ ಆಯಕಟ್ಟಿನ ಭಾಗದಲ್ಲಿದ್ದು, ಇಲ್ಲಿನ ಪರಿಸರವು ಮಾನವನ ವಾಸಕ್ಕೆ ಅತ್ಯಂತ ಅನುಕೂಲಕರವಾಗಿದೆ. ಆದ್ದರಿಂದ ಅತೀ ಪ್ರಾಚೀನ ಕಾಲದಿಂದಲೂ ಇವನ ಜೀವನೋಪಾಯದ ಚಟುವಟಿಕೆಗಳು ಇಲ್ಲಿ ಆರಂಭವಾಗಿರುವುದನ್ನು ಗುರುತಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಪುರಾತತ್ವ ಇಲಾಖೆ ಹಾಗೂ ಕರ್ನಾಟಕ, ಮೈಸೂರು, ಬೆಂಗಳೂರು, ಕನ್ನಡ ವಿಶ್ವವಿದ್ಯಾಲಯಗಳಲ್ಲಿನ ಸಂಶೋಧಕ ವಿದ್ವಾಂಸರು ಮತ್ತು ಕೆಲ ಸಂಘ ಸಂಸ್ಥೆಗಳು. ಹವ್ಯಾಸಿ ಸಂಶೋಧಕರು, ವಿದ್ವಾಂಸರು ನಡೆಸಿದ ಉತ್ಖನನ, ಅನ್ವೇಷಣಾ ಕಾರ್ಯದಿಂದ ಕರ್ನಾಟಕದಲ್ಲಿ ಹಲವಾರು ಪ್ರಾಗೈತಿಹಾಸಿಕ ಮಾನವನ ನೆಲೆಗಳು ಬೆಳಕಿಗೆ ಬಂದಿವೆ.

ಹಂಪಿ ಮತ್ತು ಅದರ ಸುತ್ತಲಿನ ಪ್ರಾಕೃತ ಪರಿಸರವನ್ನು ಅಧ್ಯಯನ ಮಾಡಿದಾಗ ಇದೊಂದು ಶಿಲಾಯುಗದ ಮಾನವನ ಕಾರ್ಯ ಚಟುವಟಿಕೆಗಳಿಗೆ ಬಹುಮುಖ್ಯವಾದ ತಾಣಗಳಲ್ಲಿ ಒಂದಾಗಿತ್ತು ಎಂಬುದನ್ನು ತಿಳಿಯಬಹುದಾಗಿದೆ. ಇಲ್ಲಿ ೧೮೭೨ ರಿಂದಲೇ ಸಂಶೋಧನೆಗಳು ಆರಂಭವಾಗಿವೆ. ಕ್ರಿ.ಶ.೧೮೮೪ರಲ್ಲಿ ರಾಬರ್ಟ್ ಬ್ರೂಸ್ ಫೂಟ ಎಂಬ ಆಂಗ್ಲ ಅಧಿಕಾರಿಯು ಬಳ್ಳಾರಿ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ವ್ಯವಸ್ಥಿತ ರೀತಿಯಲ್ಲಿ ಭೌಗೋಳಿಕ ಸರ್ವೇಕ್ಷಣಾ ಕಾರ್ಯವನ್ನು ನಡೆಸಿದನು. ಆ ಸಮಯದಲ್ಲಿ ಸು. ೭೭ ಶಿಲಾಯುಗ ಕಾಲದ ಮಾನವನ ನಿವೇಶನಗಳನ್ನು ಆತನು ಗುರುತಿಸಿದನು. ಅವುಗಳಲ್ಲಿ ಹಂಪೆಯೂ ಒಂದು.

ಜೊತೆಗೆ ಹಂಪೆಗೆ ಅನತಿ ದೂರದಲ್ಲಿ ಎಂದರೆ ಸುಮಾರು ೨೦ ಕಿ.ಮೀ. ಅಂತರದೊಳಗೆ, ಇನ್ನುಳಿದ ಅಂತಹ ೮ ನಿವೇಶನಗಳ ಪಟ್ಟಿಯನ್ನು ಮಾಡಿರುತ್ತಾನೆ. ಅವುಗಳಲ್ಲಿ ದರೋಜಿಗುಡ್ಡ, ಗಾದಿಗನೂರು, ಕಾಕುಬಾಳು ಗುಡ್ಡ, ಮಲ್ಲಾಪುರ, ನಾಗಲಾಪುರ, ನಿಂಬಾಪುರ, ತಿಮ್ಮಲಾಪುರ, ತೋರಣಗಲ್ಲು ಮುಂತಾದವು. ಈ ಗ್ರಾಮಗಳ ಹತ್ತಿರ ಕಾಣಬರುವ ಶಿಲಾಯುಗದ ನಿವೇಶನಗಳಲ್ಲಿ ಶಿಲಾಯುಗದ ಮಾನವನು ಬಳಸುತ್ತಿದ್ದನೆಂದು ಹೇಳಬಹುದಾದ ಕಲ್ಲಿನಿಂದ ಮಾಡಿದ ಆಯುಧಗಳು, ಮಡಿಕೆಗಳ ಚೂರುಗಳು ಮತ್ತಿತರ ಸಲಕರಣೆಗಳನ್ನು ಆತ ಮೊದಲ ಬಾರಿಗೆ ಪತ್ತೆಹಚ್ಚಿದರು. ಅವರೇ ಕುಡತಿನಿ ಮತ್ತು ಹಂಪಿಯ ಆಚೆ ದಡದಲ್ಲೂ ಈ ಸಂಸ್ಕೃತಿಗೆ ಸೇರಿದ ಆಯೋಧೋಪಕರಣಗಳನ್ನು ಗುರುತಿಸಿದರು.[೫]

ಹಂಪೆ ಮತ್ತು ಅದರ ಸುತ್ತಲಿನ ಪ್ರದೇಶಗಳನ್ನು ಶಿಲಾಯುಗದ ಮಾನವನು ತನ್ನ ನಿವಾಸಕ್ಕಾಗಿ ಆರಿಸಿಕೊಳ್ಳುವಲ್ಲಿ ಪ್ರಮುಖ ಕಾರಣಗಳು: ಒಂದು–ಇಲ್ಲಿಯ ನಿಸರ್ಗದತ್ತ ಪರಿಸರವೇ ಮುಖ್ಯಕಾರಣ. ಎರಡು–ಹಂಪೆಯ ಭೌಗೋಳಿಕ ವೈಶಿಷ್ಟ್ಯವನ್ನು ಪರೀಕ್ಷಿಸಿದಲ್ಲಿ ಶಿಲಾಯುಗದ ಮಾನವನಿಗೆ ಇಲ್ಲಿ ಅನುಕೂಲಕರವಾಗಿಯೂ ಹಾಗೂ ಪ್ರೋತ್ಸಾಹದಾಯಕವೂ ಆಗಿತ್ತು. ಮೂರು– ಈಗಲೂ ಇಲ್ಲಿನ ಭೂ–ಭಾಗವೂ ದೊಡ್ಡ, ಸಣ್ಣ ಬಂಡೆಗಳು, ಗುಡ್ಡಗಳು, ಗುಡ್ಡ, ಬೆಟ್ಟಗಳು, ವಿಸ್ತಾರವಾದ ಹಾಸು ಬಂಡೆಗಳ ನಡುವೆ ಗುಳಿಗಳಿದ್ದು, ಶಿಲಾಯುಗದ ಮಾನವನಿಗೆ ಅನುಕೂಲಕರವಾದ ನೆರಳಾಶ್ರಯವನ್ನು ಒದಗಿಸಿದ್ದವು. ನಾಲ್ಕು– ಎಂದೂ ಬತ್ತದೆ ಸತತವಾಗಿ ಹರಿಯುವ ಇರುವ ತುಂಗಭದ್ರಾ ನದಿ ಮತ್ತು ಅದನ್ನು ಕೂಡಿಕೊಳ್ಳುವ ಚಿಕ್ಕ–ಚಿಕ್ಕ ಹಳ್ಳ, ತೊರೆಗಳು ಅವರ ಜೀವನಾವಶ್ಯಗಳಲ್ಲೊಂದಾದ ನೀರನ್ನು ಒದಗಿಸುತ್ತಿದ್ದವು. ಐದು–ಇವೆಲ್ಲವುಗಳಿಂದ ಉಂಟಾದ ಹಳ್ಳ, ಕೊಳ್ಳ, ಕಣಿವೆ, ಗುಡ್ಡ ಗುಹೆ ಮುಂತಾದವುಗಳಲ್ಲಿ ಬಳ್ಳಿ, ಎಲೆ, ಗಡ್ಡೆ, ಗೆಣಸು, ಹಣ್ಣು, ನೀರು ಮುಂತಾದವುಗಳು ವಿಪುಲವಾಗಿ ಹಾಗೂ ಸುಲಭವಾಗಿ ದೊರೆಯುತ್ತಿದ್ದಿರಬೇಕು. ಆರು–ತನ್ನ ಉಪಯೋಗಕ್ಕೆ ಬೇಕಾದ ಕಲ್ಲಿನ ಆಯುಧಗಳನ್ನು ನಿರ್ಮಿಸಲು ಸರಿಯಾದ ಗಟ್ಟಿಯಾದ ಕಲ್ಲುಗಳು ಬೆಣಚುಕಲ್ಲುಗಳು ಮುಂತಾದವುಗಳು ಹೇರಳವಾಗಿ ಇದೇ ಸ್ಥಳದಲ್ಲಿಯೇ ಲಭಿಸುತ್ತಿದ್ದವು. ಏಳು– ಅಲ್ಲಲ್ಲಿ ಕಾಣಬರುವ ಗುಹೆಗಳು ಛಾವಣಿ ಇರುವ ಬಂಡೆಗಳು ಅವನನ್ನು ಮಳೆ, ಗಾಳಿ, ಬಿಸಿಲುಗಳಿಂದ ರಕ್ಷಿಸುತ್ತಿದ್ದವು ಮತ್ತು ವಿಶ್ರಾಂತಿ ಸಮಯದ ಚಟುವಟಿಕೆಗಳಿಗೆ ಅನುಕೂಲ ತಾಣಗಳಾಗಿದ್ದವು ಈ ಎಲ್ಲಾ ಕಾರಣಗಳಿಂದಾಗಿ ಹಂಪೆ ಮತ್ತು ಅದರ ಸುತ್ತಮುತ್ತಲಿನ ಪ್ರದೇಶವು ಶಿಲಾಯುಗದ ಮಾನವನ ಚಟುವಟಿಕೆಗಳ ಆಶ್ರಯ ತಾಣವಾಯಿತು.

ಹಂಪಿಯಿಂದ ಸುಮಾರು ೮೩ ಕಿ.ಮೀ.ದೂರದಲ್ಲಿನ ಬಳ್ಳಾರಿ ಜಿಲ್ಲೆಯ ನಿಟ್ಟೂರು ಹಾಗೂ ೮೫ ಕಿ.ಮೀ. ದೂರದ ಸಂಗನಕಲ್ಲುಗಳಲ್ಲಿನಡೆದ ಉತ್ಖನನಗಳಿಂದ ಇವು ನವ ಶಿಲಾಯುಗಕ್ಕೆ ಪೂರ್ವದ ನೆಲೆಗಳೆಂದು ತಿಳಿದು ಬಂದಿದೆ. ಚಕ್ಕೆ, ಅಲಗುಗಳು[೬] ಹಾಗೂ

ಮೊನಚುಗಳು, ಹೆರೆಯುವ ಚಕ್ಕೆಗಳು, ತಿರಳಗಲ್ಲು ಚಕ್ಕೆಗಳು ಸೂಕ್ಷ್ಮ ಶಿಲಾಯುಗದ ಸಂಸ್ಕೃತಿಗೆ ಸೇರಿವೆ.[೬] ಇವುಗಳನ್ನು ದೊರೆತ ಸ್ಥಾನದಲ್ಲಿಯೇ ತಯಾರಿಸಿದ ಸೂಚನೆಗಳಿವೆ. ಬಹಳಷ್ಟು ಉಪಕರಣಗಳನ್ನು ಕ್ವಾರ್ಟ್‌ಜ್‌ಶಿಲೆಯಿಂದ ತಯಾರಿಸಿದ್ದರೂ ಚರ್ಟ್‌ನಿಂದ ಮಾಡಿದ ಉಪಕರಣಗಳು ಸಹ ಇಲ್ಲಿ ದೊರೆತಿವೆ. ಇದೇ ರೀತಿ ಹಂಪಿ ಮತ್ತು ಅದರ ಸುತ್ತಲಿನ ಪ್ರದೇಶಗಳಲ್ಲಿ ಪ್ರಾಗೈತಿಹಾಸಿಕ ಕಾಲದ ಕುರುಹುಗಳು ನಮಗೆ ದೊರತಿವೆ. ಅವುಗಳನ್ನು ಆಧಾರವಾಗಿಟ್ಟುಕೊಂಡು ಪ್ರಾಗೈತಿಹಾಸಿಕ ಕಾಲದ ಜನ ಜೀವನದ ಮೇಲೆ ಬೆಳಕು ಚೆಲ್ಲಬಹುದು. ಹಂಪಿ ಮತ್ತು ಕರ್ನಾಟಕದಲ್ಲಿ ಪ್ರಾಗೈತಿಹಾಸಿಕ ಮಾನವ ಸಂಸ್ಕೃತಿ ಹೇಗೆ ಬೆಳವಣಿಗೆ ಹೊಂದಿತು ಎಂಬುದನ್ನು ಈ ಮುಂದಿನಂತೆ ಚರ್ಚಿಸಲಾಗಿದೆ.

೩.೧.೧.ಹಳೇ ಶಿಲಾಯುಗ ಸಂಸ್ಕೃತಿ(ಪ್ಯಾಲಿಯೋಲಿಥಿಕ್ ಕಲ್ಚರ್)

ಮಾನವನ ರೀತಿ ನೀತಿಗಳೂ ಸಾಕಷ್ಟು ಸುಧಾರಿಸದೇ ಇನ್ನು ಆದಿಮ ಹಂತದಲ್ಲಿ ಇದ್ದಿದ್ದರಿಂದ ಈ ಕಾಲಘಟ್ಟವನ್ನು ಹಳೇ ಶಿಲಾಯುಗ ಸಂಸ್ಕೃತಿ (ಪ್ಯಾಲಿಯೋಲಿಥಿಕ್ ಕಲ್ಚರ್) ಎಂದು ಕರೆಯಲಾಗುತ್ತದೆ. ಅಧ್ಯಯನದ ಅನುಕೂಲಕ್ಕಾಗಿ ಪ್ರಾಗೈತಿಹಾಸಿಕ ಮಾನವನ ಈ ಜೀವನ ಕ್ರಮವನ್ನು ಇಲ್ಲಿ ಮೂರು ಭಾಗಗಳಾಗಿ ಈ ಮುಂದಿನಂತೆ ವಿಭಾಗಿಸಿಕೊಳ್ಳಲಾಗಿದೆ.

೧. ಆದಿ ಹಳೇ ಶಿಲಾಯುಗ(ಅಪ್ಪರ್ ಪ್ಯಾಲೋಲಿಥಿಕ್)–(೭ಲಕ್ಷ ಅಥವಾ ಅದಕ್ಕೂ ಮುಂಚೆ)

೨. ಮಧ್ಯ ಹಳೇ ಶಿಲಾಯುಗ(ಮಿಡಲ್ ಪ್ಯಾಲೋಲಿಥಿಕ್)–(ಕಿ.ಪೂ. ೭೦,೦೦೦ ೩೦,೦೦೦)

೩. ಅಂತ್ಯ ಹಳೇ ಶಿಲಾಯುಗ(ಲೋವರ್ ಪ್ಯಾಲೋಲಿಥಿಕ್)–(ಕ್ರಿ.ಪೂ. ೪೦,೦೦೦ ೧೦,೦೦೦)

೩.೧.೧.೧. ಆದಿ ಹಳೇ ಶಿಲಾಯುಗ (ಅಪ್ಪರ್ ಪ್ಯಾಲೋಲಿಥಿಕ್)–(೭ಲಕ್ಷ ಅಥವಾ ಅದಕ್ಕೂ ಮುಂಚೆ)

ಸುಮಾರು ೭ ಲಕ್ಷದಿಂದ ೧.೨೫ ಲಕ್ಷವರ್ಷಗಳಷ್ಟು ಹಳೆಯದೆಂದು ಗುರುತಿಸಲಾದ ಆದಿ ಹಳೇ ಶಿಲಾಯುಗದ ಅವಶೇಷಗಳು ಭಾರತದಾದ್ಯಂತ ಅನೇಕ ಸ್ಥಳಗಳಲ್ಲಿ ಕಂಡುಬಂದಿವೆ. ಕರ್ನಾಟಕದಲ್ಲಿ ಈ ಸಂಸ್ಕೃತಿಗೆ ಸೇರಿದ ಸ್ಥಳಗಳು ವಿವಿಧೆಡೆ ದೊರೆಕಿವೆ. ಅವುಗಳಲ್ಲಿ ಕೃಷ್ಣಾ ಮೇಲ್ದಂಡೆ ಮತ್ತು ಘಟಪ್ರಭಾದ ೧೫ ಸ್ಥಳಗಳಲ್ಲಿ ಹಾಗೂ ಕಲಾದಗಿ, ಅನಗವಾಡಿ, (ಬಿಜಾಪುರ) ಗುಲಬಾಳ್ ಕಿಬ್ಬನಹಳ್ಳಿ (ತುಮಕೂರು ಜಿಲ್ಲೆ) (ಸುರಪುರ ತಾಲೂಕ್ ಗುಲಬರ್ಗಾ ಜಿ.) ನಿಟ್ಟೂರ್ (ಸಿರುಗುಪ್ಪ ತಾ., ಬಳ್ಳಾರಿ.ಜಿ.) ಹುಣಸಗಿ(ಸುರಪುರ ತಾ. ಗುಲಬರ್ಗಾ ಜಿ.) ನೆಲೆಗಳು ಪ್ರಮುಖವಾಗಿವೆ. ಹಂಪಿ ಪರಿಸರದ ಬಾದನಹಟ್ಟಿಗುಡ್ಡ, ಬಳ್ಳಾರಿ, ಬೆಳಗಲ್ಲು (ಬಳ್ಳಾರಿ ತಾ.) ದರೋಜಿ, ಕಮಲಾಪುರ, ಗಾದಿಗನೂರು (ಹೊಸಪೇಟೆ ತಾ.), ಕುರೆಕುಪ್ಪ, ಜೋಗ, ಮಲ್ಲಾಪುರ(ಸಂಡೂರು ತಾ.), ಕುರುವತ್ತಿ (ಹಡಗಲಿ ತಾ.) ಮೊದಲಾದ ಸ್ಥಳಗಳಲ್ಲಿ ಈ ಕಾಲಘಟ್ಟದಲ್ಲಿ ಮಾನವನು ಬಳಸಿ ಬಿಟ್ಟು ಹೋದ ಶಿಲಾ ಉಪಕರಣ ಮತ್ತು ಇತರೆ ಅವಶೇಷಗಳು ಕಂಡುಬಂದಿವೆ.[೮]

ಕಮಲಾಪುರದಲ್ಲಿ ಡಾಲರೈಟ್ ಶಿಲೆಯಲ್ಲಿ ತಯಾರಿಸಿದ ಹೆರೆಗತ್ತಿ ಮಚ್ಚುಗತ್ತಿಗಳನ್ನು ಶೋಧಿಸಲಾಗಿದೆ.[೯] ತುಂಗಭದ್ರಾ ನದಿ ದಡದ ನಿಟ್ಟೂರು ಇನ್ನೊಂದು ಪ್ರಮುಖ ನೆಲೆ. ಇಲ್ಲಿ ಕಪ್ಪು, ಹಸಿರು ಶಿಲೆಯಿಂದ ತಯಾರಿಸಿದ ಏಕಮುಖ ಹಾಗೂ ದ್ವಿಮುಖ ಮಚ್ಚುಗತ್ತಿ ದುಂಡುಕಲ್ಲನ್ನು ಬಳಸಿ ಅದರಲ್ಲಿ ಬುಡದಿಂದ ಮೇಲ್ಮುಖವಾಗಿ ಚಕ್ಕೆಗಳನ್ನು ಎಬ್ಬಿಸುವ ಉಪಕರಣಗಳು ಕೈಕೊಡಲಿ ಸೀಳುಗತ್ತಿಗಳು ಮೊದಲಾದ ವಿಶೇಷ ಆಯುಧಗಳು ಇಲ್ಲಿ ದೊರೆತಿವೆ. ಅಲ್ಲದೇ ಸಸ್ತನಿ ಪ್ರಾಣಿಗಳಾದ ಆಕಳು ಎತ್ತುಗಳ ಆನೆಗಳ ಪಡೆಯಚ್ಚುಗಳು ಇಲ್ಲಿ ದೊರೆತಿರುವುದು ವಿಶೇಷ. ಇಲ್ಲಿ ದೊರೆತ ಎರಡು ಪ್ರಕಾರದ ಆಯುಧಗಳು– ದಕ್ಷಿಣ ಭಾರತದ ಕೈಗೊಡಲಿ ಮತ್ತು ಹರೆಯುವ ಉಪಕರಣಗಳ ವರ್ಗಕ್ಕೆ ಸೇರಿದ್ದು, ಈ ಉಪಕರಣಗಳೊಂದಿಗೆ ಅಪರೂಪಕ್ಕೆ ಬಾಸ್‌ನೊಮಡಿಸ್ ಎಂಬ ಪ್ರಾಣಿಯ ಪಳಿಯುಳಿಕೆ ಕೂಡಾ ದೊರೆತಿದೆ.[೧೦] ಈ ಮೇಲಿನ ನೆಲೆಗಳಲ್ಲಿ ದೊರೆತ ಆಯುಧೋಪಕರಣಗಳು ಫ್ರಾನ್ಸ್, ದಕ್ಷಿಣ ಆಫ್ರಿಕಾದ ವಿವಿಧ ನೆಲೆಗಳಲ್ಲಿ ಮತ್ತು ಮಹಾರಾಷ್ಟ್ರ(ಚರ್ಕಿ) ಮತ್ತು ಪಂಜಾಬಿನ(ಸೋನಾರಗಾಂ) ವಿವಿಧ ನೆಲೆಗಳಲ್ಲಿ ದೊರೆತ ಆಯುಧಗಳಿಗೆ ಹೋಲಿಕೆಯಾಗುತ್ತವೆ. ಈ ಉಪಕರಣಗಳನ್ನು ವಿವಿಧ ಕೆಲಸ ಕಾರ್ಯಗಳಿಗಾಗಿ ಪ್ರಾಗೈತಿಹಾಸಿಕ ಮಾನವ ಉಪಯೋಗಿಸಿಕೊಂಡಿದ್ದಾನೆ. ಈ ಕಾಲದ ಮಾನವ ನಿಸರ್ಗದಲ್ಲಿ ದೊರೆಯುವ ಆಹಾರ ಸಂಪಾದನೆಯ ಹಂತದಲ್ಲಿದ್ದರೂ ನೈಸರ್ಗಿಕ ಗವಿ ಮುಂತಾದ ರಕ್ಷಣೆಯ ಸ್ಥಳಗಳಲ್ಲಿ ಇರುತ್ತಿದ್ದರೆಂಬುದು ಮಾತ್ರ ತಿಳಿದುಬಂದಿದೆ. ಅವರ ನಡುವಿನ ಜೀವನ ಕ್ರಮದ ಬಗ್ಗೆ ಇದುವರೆಗೂ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಈ ಹಂತದ ಮಾನವನ ದೈನಂದಿನ ಕಾರ್ಯ ಚಟುವಟಿಕೆಯನ್ನು ಆಹಾರ ಸಂಗ್ರಹಣೆ ಮತ್ತು ಬೇಟೆಗಾರಿಕೆ ಸಂಸ್ಕೃತಿಯೆಂದು ಕರೆಯಲಾಗಿದೆ.

೩.೧.೧.೨. ಮಧ್ಯ ಹಳೇ ಶಿಲಾಯುಗ(ಮಿಡಲ್ ಪ್ಯಾಲೋಲಿಥಿಕ್)–(ಕಿ.ಪೂ. ೭೦,೦೦೦ ೩೦,೦೦೦)

ಮಧ್ಯ ಹಳೇ ಶಿಲಾಯುಗಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಕೃಷ್ಣ, ತುಂಗಭದ್ರಾ ಪ್ರದೇಶಗಳಲ್ಲಿ ಈ ಸಂಸ್ಕೃತಿಗೆ ಸೇರಿದ ನಿವೇಶನಗಳು ದೊರೆತಿವೆ. ಅವುಗಳಲ್ಲಿ ಸಂಗನಕಲ್ಲು, ಬ್ರಹ್ಮಗಿರಿ, ನಿಟ್ಟೂರು, ಸಾಲ್ವಡಗಿ, ಮಟಕದೇವನಹಳ್ಳಿ(ಬುಡಪನಹಳ್ಳಿ) ಮತ್ತು ಕೂಚುಬಾಳು, ಕೋವಳ್ಳಿ(ಮುದ್ದೇಬಿಹಾಳು ತಾಲೂಕು ಈಗ ಬಾಗಲಕೋಟೆ ಜಿಲ್ಲೆ) ಮೊದಲಾದೆಡೆ ದೊರೆತಿವೆ.[೧೧] ಈ ಕಾಲದಲ್ಲಿ ಆದಿ ಹಳೇ ಶಿಲಾಯುಗಕಾಲಕ್ಕಿಂತಲೂ ಭಿನ್ನವಾದ ಉತ್ತಮ ಜಾತಿಯ ಜಾಸ್ಪರ್, ಚರ್ಟ್ ಮೊದಲಾದ ಶಿಲೆಗಳನ್ನು ಬಳಸಿ ವಿವಿಧ ಆಯುಧೋಪಕರಣಗಳನ್ನು ತಯಾರಿಸಲಾಗಿದೆ. ಸ್ವಲ್ಪ ದಪ್ಪನಾದ ಸಣ್ಣ ಚಕ್ಕೆಗಳನ್ನು ಉಪಕರಣಗಳನ್ನಾಗಿ ರೂಪಿಸಲಾಗಿದೆ. ಹೆರೆಯುವ ಚಕ್ಕೆಗಳು ಮೊನೆಯಿರುವ ತೂತು ಮಾಡುವಂತ ಉಪಕರಣಗಳು ಹೆಚ್ಚಿನ ಅಂಚುಗಳಿಂದ ಹೆರೆಯಬಹುದಾದ ಬಹೂಪಯೋಗಿ ಚಕ್ಕೆಗಳು ಇದರಲ್ಲಿ ಮುಖ್ಯವಾಗಿವೆ. ಈ

ಕಾಲದ ಪ್ರಾಗೈತಿಹಾಸಿಕ ಮಾನವ ನದಿಯಂಚಿನಲ್ಲಿ ಅಷ್ಟೇ ಅಲ್ಲದೆ, ಬಯಲುಗಳಲ್ಲಿ ವಾಸ ಮಾಡಲು ರೂಢಿಸಿಕೊಂಡನು.

೩.೧.೧.೩. ಅಂತ್ಯ ಹಳೇ ಶಿಲಾಯುಗ(ಲೋವರ್ ಪ್ಯಾಲೋಲಿಥಿಕ್)- (ಕ್ರಿಪೂ. ೪೦,೦೦೦ ೧೦,೦೦೦)

ಹಳೇ ಶಿಲಾಯುಗ ಸಂಸ್ಕೃತಿಯ ಕೊನೆಯ ಹಂತವೇ ಅಂತ್ಯ ಹಳೆಯ ಶಿಲಾಯುಗ. ಮೊಟ್ಟ ಮೊದಲಿಗೆ ೧೯೫೯ ರಲ್ಲಿ ಸಾಳವಾಡಗಿಯಲ್ಲಿ ಉಪಕರಣ ಉತ್ಪಾದನಾ ನೆಲೆಯನ್ನು ಅ.ಸುಂದರ ಅವರು ಗುರುತಿಸಿದರು. ಇದೇ ನಿವೇಶನದಲ್ಲಿ ಸಂಗ್ರಹಿಸಿದ ಉಪಕರಣಗಳ ವಿಷಯವಾಗಿ ಎಂ.ಶೇಷಾದ್ರಿಯವರು ವಿವರಣಾತ್ಮಕ ಅಧ್ಯಯನವನ್ನು ಮಾಡಿದ್ದಾರೆ. ಮಾಂಜ್ರಾ, ದೋಣಿ, ಕೃಷ್ಣ, ತುಂಗಾ, ಶಿಂಷಾ ಹಾಗೂ ಪನ್ನಾರ್ ನದಿ ಕೊಳ್ಳಗಳಲ್ಲಿ ಈ ನೆಲೆಗಳು ಹೆಚ್ಚಾಗಿ ಕಂಡು ಬಂದಿವೆ. ನೀಳ ಅಲಗುಗಳು ಹೆರೆಯುವ ವಿವಿಧ ಮಾದರಿಗಳು, ಮೊನೆ ಹೊಂದಿರುವ ಮಾದರಿಗಳು, ಚೂರಿ ತರಹದ ಚೆಕ್ಕೆ, ಪೊರೆಯುಳಿ, ಕೊರಗ ಮೊದಲಾದ ಮಾದರಿಯ ಆಯುಧಗಳು ಈ ಹಂತದ ವೈಶಿಷ್ಟ್ಯ ಉಪಕರಣಗಳಾಗಿವೆ. ಇವುಗಳಲ್ಲಿ ಆಲಗು, ಮೊನೆ, ಹೆರೆಯುವ ಮಾದರಿ ಉಪಕರಣಗಳು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಕೇವಲ ಶಿಲಾಯುಧಗಳೇ ಅಷ್ಟೆ ಅಲ್ಲದೇ ಎಲುಬು, ದಂತ ಮತ್ತು ಜಿಂಕೆಯ ಕವಲು ಕೊಂಬು ಮೊದಲಾದವುಗಳಿಂದ ಉಪಕರಣಗಳನ್ನು ತಯಾರಿಸಿ ಬಳಸಿದ ಉದಾಹರಣೆಗಳಿವೆ. ಈ ಹಂತದಲ್ಲಿ ಮೂರು ತಂತ್ರಗಳನ್ನು ಅಳವಡಿಸಿಕೊಂಡು ಉಪಕರಣಗಳನ್ನು ತಯಾರಿಸುತ್ತಿದ್ದರು. ಅವುಗಳೆಂದರೆ, ೧) ಪರೋಕ್ಷ ಒತ್ತಡ ತಂತ್ರ ೨) ವ್ಯಕ್ಷ ಸ್ಥಳ ಒತ್ತಡ ೩) ನೇರ ಒತ್ತಡ ತಂತ್ರ ಈ ಹಂತದ ಉಪಕರಣಗಳ ಗಾತ್ರ ಚಿಕ್ಕದು. ಈ ಉಪಕರಣಗಳನ್ನು ಹಲವು ಕಾರ್ಯಗಳಿಗಾಗಿ ಬಳಸುವಂತೆ ರೂಪಿಸಿಕೊಳ್ಳಲಾಗುತ್ತಿತ್ತು. ಈ ಹಂತದ ತಂತ್ರಜ್ಞಾನವು ಹೆಚ್ಚು ಸುದಾರಿಸಿತ್ತು.ಈ ಕಾಲಕ್ಕೆ ಸೇರಿದ ಅವಶೇಷಗಳನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇಂಗಾಲ- ೧೪ ಪರೀಕ್ಷೆಯಂತೆ ಈ ಹಂತದ ಕಾಲಮಾನವು ಇಂದಿಗೆ ಸುಮಾರು ೧೦,೦೦೦ ವರ್ಷಗಳಿಂದ ೨೫,೦೦೦ ವರ್ಷಗಳಷ್ಟು ಪೂರ್ವದಲ್ಲಿ ಇದ್ದಿತೆಂದು ತಿಳಿಯುತ್ತದೆ.[೨]

೩.೧.೨. ಸೂಕ್ಷ್ಮ ಶಿಲಾಯುಗ ಸಂಸ್ಕೃತಿ (ಮೆಸೋಲಿಥಿಕ್ ಕಲ್ಚರ್)-(ಕ್ರಿಪೂ ೭,೦೦೦ ೩,೦೦೦)

ಮಾನವ ಶಿಲೆಯಿಂದ ಬಹಳ ಸೂಕ್ಷ್ಮ ಉಪಕರಣಗಳನ್ನು ತಯಾರಿಸಿಕೊಂಡು ಅವುಗಳನ್ನು ತನ್ನ ಬಳಕೆಗೆ ಬಳಸಿಕೊಂಡಿದ್ದರಿಂದ ಈ ಕಾಲಘಟ್ಟವನ್ನು 'ಸೂಕ್ಷ್ಮ ಶಿಲಾಯುಗ ಸಂಸ್ಕೃತಿ' (ಮೆಸೋಲಿಥಿಕ್ ಕಲ್ಚರ್) ಎಂದು ಕರೆಯಲಾಗುತ್ತದೆ. ಮಾನವ ಜೀವನದ ಸಾಂಸ್ಕೃತಿಕ ಮುನ್ನಡೆಯಲ್ಲಿ ಈ ಹಂತದ ಪಾತ್ರ ಗಮನಾರ್ಹವಾದುದು. ಈ ಅವಧಿಯಲ್ಲಿ ಮಾನವನು ತನ್ನ ಅಲೆಮಾರಿ ಜೀವನ ಕೈಬಿಟ್ಟು, ಆತ ಒಂದೆಡೆ ನೆಲೆನಿಂತಿನು. ಅಲ್ಲದೆ ಬೇಟೆಯಾಡುವುದು,

ಮೀನು ಹಿಡಿಯುವುದು. ಆಹಾರ ಸಂಗ್ರಹಣೆ ಜೀವನದ ವ್ಯವಸ್ಥೆ ಇದ್ದಿತು. ಇದರಲ್ಲಿ ಮುಖ್ಯ ಬೆಳವಣಿಗೆಯೆಂದರೆ ಬೇಸಾಯ ಮಾಡುವುದು(ಆಹಾರೋತ್ಪಾದನೆ), ಇದು ನಂತರದ ನೂತನ ಶಿಲಾಯುಗದಲ್ಲಿ ಅಭಿವೃದ್ಧಿಯಾಯಿತು. ಈ ಸಂಸ್ಕೃತಿಯ ಶಿಲೋಪಕರಣಗಳು ಸುರಪುರ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿವೆ. ದಕ್ಷಿಣ ಕನ್ನಡ ಜಿಲ್ಲೆಯ ಮಾಣಿ ಮತ್ತು ಉಪ್ಪಿನಂಗಡಿ, ಬೀದರ್ ಜಿಲ್ಲೆಯ ಮಾಂಜ್ರ ಮತ್ತು ಕಾರಂಜಾಕಣಿವೆ ಪ್ರದೇಶ ಮಲೆನಾಡು ಮತ್ತು ಅರೆಮಲೆನಾಡು ಪ್ರದೇಶದ ಬಳ್ಳಾರಿ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆ ಹಾಗೂ ತುಮಕೂರು ಜಿಲ್ಲೆಯ ಶಿಂಷಾ ಮತ್ತು ಪನ್ನಾರ್ ನದಿ ಪ್ರಾಂತಗಳಲ್ಲಿ ದೊರೆತಿರುವ ನೆಲೆಗಳು ಈ ಸಂಸ್ಕೃತಿಯ ವಿಸ್ತೃತ ಬೆಳವಣಿಗೆಗೆ ಹಾಗೂ ಪ್ರಸರಣದ ಬಗೆಗೆ ತಿಳಿಯಲು ಸಹಾಯಕವಾಗಿವೆ.[೧೩] ಈ ಹಂತದ ಶೀಲೋಪಕರಣಗಳು ಅತಿ ಕಿರುಗಾತ್ರದವುಗಳಾಗಿವೆ. ಇಲ್ಲಿ ನೀಳಚಕ್ಕೆ ಮಾದರಿ ಹೆರಚಕ್ಕೆ ಮಾದರಿ ಮೊನೆಮಾದರಿ, ಬಾಣದ ಮೊನೆ, ಕೊರಗ ಕೊರೆಯುಳಿ, ಅರ್ಧ ಚಂದ್ರಾಕೃತಿ, ದಬ್ಬಳ ಮೊದಲಾದ ಉಪಕರಣಗಳು ಕಂಡುಬಂದಿವೆ. ಈ ಸಂಸ್ಕೃತಿಯು ಇಂದಿಗೆ ಸುಮಾರು ೨೫೦೦ ವರ್ಷದಿಂದ ೧೦೦೦೦ ವರ್ಷಗಳಷ್ಟು ಪೂರ್ವದಲ್ಲಿದ್ದಿತೆಂದು ತಿಳಿಯುತ್ತದೆ.

ಹಂಪಿ ಪರಿಸರದ ಕುಡತಿನಿ, ಸಂಗನಕಲ್ಲು (ಬಳ್ಳಾರಿ ತಾ.) ಕಾರಿಗನೂರು, ಗಾದಿಗನೂರು, ತಿಮ್ಮಲಾಪುರ ಡಣಾಪುರ, ಭುವನಹಳ್ಳಿ, ಹಂಪಿ (ಹೊಸಪೇಟೆ ತಾ.) ಅಪ್ಪಲಾಪುರ, ಅಯ್ಯನಹಳ್ಳಿ, ಕುರೆಕುಪ್ಪ, ಕೋಡಾಲು, ತೋರಣಗಲ್ಲು, ಮಲ್ಲಾಪುರ, ಮಾದರಹಳ್ಳಿ, ಯಶವಂತಪುರ, ರಾಜಾಪುರ, ರಾಂಪುರ(ಸೊಂಡೂರು ತಾ.) ಮಾಡಲಗೆರಿ(ಹರಪನಹಳ್ಳಿ ತಾ.) ಮುಂತಾದ ಸ್ಥಳಗಳಲ್ಲಿ ಈ ಹಂತದ ನೆಲೆಗಳಿವೆ.[೧೪] ೧೯೬೫ರಲ್ಲಿ ಪುಣೆ ಡೆಕ್ಕನ್ ಕಾಲೇಜಿನ ತಂಡದವರು ಸಂಗನಕಲ್ಲು ನೆಲೆಯಲ್ಲಿ ಉತ್ಖನನ ಕೈಗೊಂಡರು.[೧೫] ಇದರಿಂದ ಉಪಕರಣಗಳನ್ನು ತಯಾರಿಸುತ್ತಿದ್ದ ಕಾರ್ಯಾಗಾರವು ಬೆಳಕಿಗೆ ಬಂತು. ಅಲ್ಲದೆ ಇದೆ ತಂಡ ಬಳ್ಳಾರಿ ಮೊಕ ರಸ್ತೆಯಲ್ಲಿರುವ ಬಂಗಲೆ ತೋಟದ ಹತ್ತಿರ ನಡೆಸಿದ ಉತ್ಖನನದಲ್ಲಿ ಚರ್ಟ್, ಕ್ವಾರ್ಟ್ಜ್, ವೈಟ್ ಕ್ವಾರ್ಟ್ಜ್ ಶಿಲೆಯಲ್ಲಿ ತಯಾರಿಸಿದ ಉಪಕರಣ ಮತ್ತು ಇವುಗಳ ತಯಾರಿಕೆಗಾಗಿ ಬಳಸಿದ ಶಿಲಾಗಟ್ಟಿಗಳು ಕಂಡುಬಂದವು. ಭುವನಹಳ್ಳಿಯಲ್ಲಿ ವಿವಿಧ ಮಾದರಿಯ ಉಪಕರಣಗಳನ್ನು ಚರ್ಟ್‌ಶಿಲೆಯಲ್ಲಿ ತಯಾರಿಸಲಾಗಿದೆ. ಅವುಗಳಲ್ಲಿ ಸಮಾನಾಂತರ ಅಂಚುಗಳುಳ್ಳ ಅಲಗುಗಳು, ಚಿಕ್ಕ ಅಲಗುಗಳು, ಬಾಗಿದ ಅಲಗುಗಳು, ಮೊನೆಗಳು ಸಣ್ಣ ಬೈರಿಗೆಗಳು, ಆಹಾರ ಕತ್ತರಿಸುವ ಚಿಕ್ಕ ಮಚ್ಚುಗಳು ಮೊದಲಾದವು ಪ್ರಮುಖವಾಗಿವೆ. ಈ ಸಂಸ್ಕೃತಿಯ ಕುರಿತು ಹೆಚ್ಚಿನ ಅಧ್ಯಯನಗಳಾದಲ್ಲಿ ಹೆಚ್ಚಿನ ಮಾಹಿತಿ ದೊರಕುತ್ತದೆ. ಅದೇ ರೀತಿ ಹಂಪಿಯಲ್ಲಿ ಈ ಕಾಲಕ್ಕೆ ಸೇರಿದ ಕೆಲವು ವರ್ಣಚಿತ್ರಗಳು ಮತ್ತು ಮಡಿಕೆಗಳು ದೊರೆತಿದ್ದು, ಅಂದಿನ ಜನಜೀವನ ಅರಿಯಲು ಸಹಾಯಕವಾಗಿದೆ.

೩.೧.೩. ನೂತನ ಶಿಲಾಯುಗ ಸಂಸ್ಕೃತಿ (ನಿಯೋಲಿಥಿಕ್ ಕಲ್ಚರ್) (ಕ್ರಿ.ಪೂ.೩೦೦೦-೧೫೦೦)

ಈ ಹಂತದಲ್ಲಿ ಮನುಷ್ಯ ಜೀವನದ ರೀತಿ ನೀತಿಗಳು ಸಾಕಷ್ಟು ಬದಲಾದವು. ಈ ಕಾಲಘಟ್ಟದಲ್ಲಿ ಶಿಲಾಯುಧಗಳನ್ನು ಉಜ್ಜಿ ನಯಗೊಳಸಿ ತಯಾರಿಸುತ್ತಿದ್ದರಿಂದಾಗಿ ಈ ಯುಗವನ್ನು 'ನೂತನ ಶಿಲಾಯುಗ ಸಂಸ್ಕೃತಿ' (ನಿಯೋಲಿಥಿಕ್ ಕಲ್ಚರ್) ಎಂದು ಕರೆಯಲಾಗುತ್ತದೆ. ಈ ಸಂಸ್ಕೃತಿಯ ಹಂತವನ್ನು ಗುರುತಿಸುವಾಗ ಉಜ್ಜಿ ನಯಗೊಳಿಸಿದ ಮೇಲ್ಮೈಯುಳ್ಳ ಕೊಡಲಿಗಳು ಹಾಗೂ ಬೂದುವರ್ಣದ ಮಡಿಕೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಅಲ್ಲದೆ ಈ ಹಿಂದಿನ ಕಾಲದಲ್ಲಿ(ಸೂಕ್ಷ್ಮಶಿಲಾಯುಗ) ಆರಂಭವಾಗಿದ್ದ ಪಶುಪಾಲನೆ ಮತ್ತು ಕೃಷಿ ಪದ್ದತಿಗಳು ಈ ಕಾಲದಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದಿದವು. ಬೂದುವರ್ಣದ ಪಾತ್ರೆಗಳ ತಯಾರಿಕೆ, ವ್ಯವಸ್ಥಿತವಾದ ವಾಸದ ಮನೆಗಳ ನಿರ್ಮಾಣ ಈ ಕಾಲದ ನವೀನತೆಗಳಾಗಿವೆ. ಈ ಕಾರಣಕ್ಕಾಗಿಯೇ ಈ ಎಲ್ಲ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡ ಗೋರ್ಡಾನ್ ಚೈಲ್ಡ್ ಮತ್ತು ಬ್ರೈನ್ ಎಂ.ಪ್ರಾಗನ್ ರವರು ಈ ಕಾಲಘಟ್ಟವನ್ನು "ಕ್ರಾಂತಿಕಾರಕ ಕಾಲ ಘಟ್ಟ" (ಎ ರೆವಲೂಷನರಿ ಪಿರಿಯಡ್) ಎಂದು ಕರೆದಿದ್ದಾರೆ.[೧೬]

ಕರ್ನಾಟಕದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಕುರಿತು ಇಲ್ಲಿ ನಡೆದ ಹಲವು ಉತ್ಖನನಗಳು ಮಹತ್ವದ ವಿವರಗಳನ್ನು ಒದಗಿಸುತ್ತವೆ. ಅವುಗಳೆಂದರೆ: ಬ್ರಹ್ಮಗಿರಿ, ಮಸ್ಕಿ, ಪಿಕ್ಲೆಹಾಳ್,ತೆಕ್ಕಲಕೋಟೆ, ಹಳ್ಳೂರು, ಕುಪ್ಪಗಲ್, ಟಿ.ನರಸೀಪುರ, ಕೊಡೆಕಲ್, ಹೆಮ್ಮಿಗೆ ಹಾಗೂ ಇತ್ತೀಚೆಗೆ ನಡೆದ ಕೋಲಾರ ಜಿಲ್ಲೆಯ ಬನಹಳ್ಳಿ, ಮಂಜ್ರಾ, ಕಾರಂಜಾ ನದಿ ಕಣಿವೆಗಳ ಕ್ಷೇತ್ರ ಕಾರ್ಯದಿಂದ ನೂತನ ಶಿಲಾಯುಗದ ನೆಲೆಗಳನ್ನು ಗುರುತಿಸಲಾಗಿದೆ. ಮಲೆನಾಡು ಅರೆಮಲೆನಾಡಿನ ದಾವಣಗೆರೆ, ಶಿವಮೊಗ್ಗ, ಚಿಕ್ಕಮಂಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿಯೂ ಕೆಲವು ನೆಲೆಗಳು ಕಂಡುಬಂದಿವೆ. ಪನ್ನಾರ್ ನದಿಪಾತ್ರವು ನೂತನ ಶಿಲಾಯುಗ ಸಂಸ್ಕೃತಿಯ ನೆಲೆಯಾಗಿದ್ದಿತೆಂದು ತಿಳಿಯುತ್ತದೆ.[೧೭] ನೂತನ ಶಿಲಾಯುಗ ಸಂಸ್ಕೃತಿಯ ಶೀಲೋಪಕರಣಗಳಲ್ಲಿ ವೈವಿಧ್ಯತೆಯಿದ್ದು ಕೊಡಲಿ, ಬಾಚಿ, ಉಳಿ, ಸುತ್ತಿಗೆ, ಕೆತ್ತುಳಿ, ಉಜ್ಜುಗ ಅಥವ ಅರೆಯುವ ಕಲ್ಲು, ಕವಣೆಕಲ್ಲು ಮತ್ತು ಉಂಗುರ ಕಲ್ಲು ಮೊದಲಾದುವು ಪ್ರಮುಖವಾದವುಗಳಾಗಿವೆ. ಇವುಗಳನ್ನು ಡೈಕ್, ಡಾಲರೈಟ್, ಕಣಶಿಲೆ ಮತ್ತು ಬಳಪದ ಕಲ್ಲುಗಳನ್ನು ಬಳಸಿ ತಯಾರಿಸಲಾಗುತ್ತಿತ್ತು.

ಹಂಪಿ ಪರಿಸರದ ಕಕ್ಕಬೇವಿನಹಳ್ಳಿ, ಕುಡತಿನಿ, ಕಪಗಲ್ಲು, ಬೆಳಗಲ್ಲು, ಸಂಗನಕಲ್ಲು, ಹಳಕುಂದಿ, ಹಳೇ ನೆಲ್ಲುಡಿ(ಬಳ್ಳಾರಿ ತಾ) ಇಂಗಳಗಿ, ಕಾಕುಬಾಳ, ಗಾದಿಗನೂರು, ತಿಮ್ಮಲಾಪುರ, ಡಣಾಪುರ, ಬೆಳಗೋಡುಹಾಳ, ವೆಂಕಟಾಪುರ (ಹೊಸಪೇಟೆ ತಾ.) ಕೊಂಚಗೇರಿ, ಕೋಟೆಕಲ್ಲು ದುರ್ಗ, ತೆಕ್ಕಲಕೋಟೆ, ನಿಟ್ಟೂರು, ಶ್ರೀನಿವಾಸಪುರ, ಹಚ್ಚೊಳ್ಳಿ(ಸಿರುಗುಪ್ಪ ತಾ) ಇಂಗಳ್ಗಿ,

ಕುರೆಕುಪ್ಪಗುಡ್ಡ, ತೋರಣಗಲ್ಲು, ದರೋಜಿ, ರಾಜಾಪುರ, ಲಿಂಗದಹಳ್ಳಿ (ಸಂಡೂರು ತಾ.) ಬೆಳಗಟ್ಟಿ, ರಾಮದುರ್ಗ(ಕೂಡ್ಲಿಗಿ ತಾ.) ಅಲ್ಲಿಪುರ, ಮಾಗಳ, ಮೈಲಾರ, ರಾಜವಾಳ (ಹೂವಿನ ಹಡಗಲಿತಾ.), ಮಾಡಲಗೇರಿ(ಹರಪನಹಳ್ಳಿತಾ.) ಆನೆಗೊಂದಿ, ಚಿಕ್ಕರಾಂಪುರ, ಕಮ್ಮಟದುರ್ಗ, ಹೀರೆಬೆನಕಲ್, ಮಲ್ಲಾಪುರ, ಕಡೆಬಾಗಿಲು(ಗಂಗಾವತಿ ತಾ.) ಮೊದಲಾದೆಡೆ ಈ ಸಂಸ್ಕೃತಿಯ ಕುರುಹುಗಳು ಪತ್ತೆಯಾಗಿವೆ.[೧೮] ಇಲ್ಲಿಯ ಕುಡತಿನಿ, ಕಪ್ಪಗಲ್ಲು, ಸಂಗನಕಲ್ಲು, ಕತ್ತಳಿ ತೆಕ್ಕಲಕೋಟೆ, ನಿಟ್ಟೂರು, ದರೋಜಿ, ಕುರುಗೋಡು, ಕಾಕುಬಾಳು, ತಿಮ್ಮಾಪುರ, ಬೆಳಗಟ್ಟಿ ಮೊದಲಾದ ನೆಲೆಗಳಲ್ಲಿ ಉಜ್ಜಿ ನಯಗೊಳಿಸಿದ ಶಿಲಾ ಉಪಕರಣಗಳು ಕಂಡುಬಂದಿವೆ. ಸಂಗನಕಲ್ಲು, ಕಾಕುಬಾಳುಗಳಲ್ಲಿ ಇವುಗಳೊಂದಿಗೆ ಬೂದುವರ್ಣದ ಮಡಿಕೆಗಳು, ಬೆಳ್ಳಿಗಟ್ಟಿಯಲ್ಲಿ ಅರೆಯುವ ಕಲ್ಲು, ಹೆರೆಚಕ್ಕೆ ಶಂಖದ ಆಭರಣಗಳು ದೊರೆತಿವೆ.

ಇತ್ತೀಚೆಗೆ ಸಂಗನಕಲ್ಲು, ಕುರುಗೋಡು, ಕಾಕುಬಾಳು ನೆಲೆಗಳಲ್ಲಿ ತಿಪ್ಪೇಸ್ವಾಮಿ.ಎಚ್., ವಾಸುದೇವ ಬಡಿಗೇರ, ಸೋಮಶೇಖರ ಮೊದಲಾದ ವಿದ್ವಾಂಸರ ಕ್ಷೇತ್ರಕಾರ್ಯ ಕೈಗೊಂಡು ಅನೇಕ ಉಪಕರಣಗಳನ್ನು ಸಂಗ್ರಹಿಸಿದ್ದಾರೆ. ಸಂಗ್ರಹಿತ ಅವಶೇಷಗಳಲ್ಲಿ ಒಂದು ಅಪರೂಪದ ಕೈಗೊಡಲಿಯನ್ನು ಸಂಗನಕಲ್ಲು ನೆಲೆಯಲ್ಲಿ ಬಡಿಗೇರರವರು ಗುರುತಿಸಿದ್ದಾರೆ. ಇದನ್ನು ಕಪ್ಪು ಬಿಳಿ ಮಿಶ್ರಿತ ಶಿಲೆಯಲ್ಲಿ ತಯಾರಿಸಲಾಗಿದ್ದು, ಅದರ ಮೂರ್ತಿ ೧೨.೫ ಸೆಂ.ಮೀ. ಇದೆ. ಇಂಥ ದೊಡ್ಡ ಆಯುಧವನ್ನು ಮಾನವನು ಗಿಡಗಳನ್ನು ಕಡಿಯಲು ಇಲ್ಲವೆ ಬಲಿಷ್ಟ ಪ್ರಾಣಿಗಳನ್ನು ಬೇಟೆಯಾಡಲು ಬಳಸಿಕೊಂಡಿರಬೇಕು. ಹಂಪಿಯ ಭರಮದೇವರ ಬಂಡೆ, ಪ್ರಕಾಶನಗರ, ಗಾಯತ್ರಿಪೀಠ. ವಿರೂಪಾಕ್ಷ ದೇವಾಲಯದ ಹಿಂಬದಿಯ ಬೆಟ್ಟ ಮತ್ತು ಕೃಷ್ಣ ದೇವಾಲಯದ ಮುಂಬದಿಯ ಬೆಟ್ಟದಲ್ಲಿ ಈ ಸಂಸ್ಕೃತಿಯ ಕಲೆಯ ನಲೆಗಳು ಮತ್ತು ಆಯುಧೋಪಕರಣಗಳು ದೊರೆತಿವೆ. ಈ ಹಿನ್ನೆಲೆಯಲ್ಲಿ ಈ ಸಂಸ್ಕೃತಿ ಇಲ್ಲಿತ್ತೆಂದು ಹೇಳಬಹುದು.[೧೯]

೩.೧.೪. ಶಿಲಾ ತಾಮ್ರಯುಗ ಸಂಸ್ಕೃತಿ(ಕ್ರಿ.ಪೂ. ೨೨೦೦-೮೦೦)

ನೂತನ ಶಿಲಾಯುಗದ ಒಂದು ಘಟ್ಟದಿಂದ ತಾಮ್ರದ ಬಳಕೆ ಆರಂಭವಾಯಿತು. ತಾಮ್ರದ ಅದಿರಿನಿಂದ ಲೋಹವನ್ನು ತಯಾರಿಸಿ ಅದರಿಂದ ಆಭರಣ, ಗೊಂಬೆ, ಆಯುಧ, ಮೊದಲಾದವುಗಳನ್ನು ಮಾಡಲಾಗುತ್ತಿತ್ತು. ಈ ಹಂತದ ಜನಜೀವನದಲ್ಲಿ ಕಾಣುವ ಖಚಿತ ಬೆಳವಣಿಗೆಯೆಂದರೆ ಶಿಲಾಯುಧಗಳ ಜೊತೆಗೆ ತಾಮ್ರ ಅಥವಾ ಕಂಚಿನ ಉಪಕರಣಗಳ ನಿರ್ಮಾಣ. ಆದ್ದರಿಂದ ಈ ಸಂಸ್ಕೃತಿಯನ್ನು 'ಶಿಲಾ ತಾಮ್ರ ಯುಗ'(ಚಾಲ್ಕೋಲಿಥಿಕ್ ಪಿರಿಯಡ್) ಎಂದು ಕರೆಯಲಾಗುತ್ತದೆ.

ಭಾರತಾದ್ಯಂತ ಇಂಥ ಅನೇಕ ನೆಲೆಗಳು ಕಂಡುಬಂದಿವೆ. ಹರಪ್ಪ ಸಂಸ್ಕೃತಿಯಲ್ಲಿ ತಾಮ್ರದಿಂದ ತಯಾರಿಸಿದ ವಿವಿಧ ನಮೂನೆಯ ಆಯುಧೋಪಕರಣಗಳು ದೊರೆತಿವೆ. ಕರ್ನಾಟದಲ್ಲಿ ಕೆಲವು ಕಡೆ ಈ ಸಂಸ್ಕೃತಿಯ ಕುರುಹುಗಳು ದೊರೆತಿದ್ದು, ಈ ಅಧ್ಯಯನಕ್ಕೆ

ಯೋಗ್ಯವಾಗಿವೆ. ತಾಮ್ರದ ಅದಿರಿನಿಂದ ಲೋಹವನ್ನು ತೆಗೆದು ಅದರಿಂದ ವಿವಿಧ ಉಪಕರಣಗಳನ್ನು ಮಾಡುತ್ತಿದ್ದರು. ಅತಿ ಕಡಿಮೆ ಪ್ರಮಾಣದಲ್ಲಿ ಕಂಡುಬಂದಿರುವ ಈ ಆಯುಧಗಳಲ್ಲಿ ತಾಮ್ರ ಇಲ್ಲವೆ ಕಂಚಿನ ಚಪ್ಪಟೆ ಕೊಡಲಿ, ತಂತಿ, ನೀರಿನಗಾಳ ಮತ್ತು ತೆಳ್ಳನೆ ಬಾಯುಳ್ಳ ಅಲಗಿನ ಉಪಕರಣಗಳು ಕೃಷ್ಣಾನದಿ ಪ್ರದೇಶದ ಕೆಲವು ನೆಲೆಗಳಲ್ಲಿ ದೊರೆತಿವೆ. ದಕ್ಷಿಣ ಭಾರತದ ಅತ್ಯಂತ ಗಮನಾರ್ಹವಾದ ಉಪಕರಣವೆಂದರೆ ರಾಯಚೂರು ಹತ್ತಿರ ಕಲ್ಲುರು ಗ್ರಾಮದಲ್ಲಿ ಶಿಲಾತಾಮ್ರ ಯುಗದ ನೆಲೆಯಲ್ಲಿ ದೊರೆತ ಉದ್ದನೆಯ ಖಡ್ಗಗಳು ಪ್ರಮುಖವಾದವು. ಇದೇ ರೀತಿ ಸಣ್ಣ ಮಾದರಿಯ ಕಠಾರಿಯಂಥ ಉಪಕರಣ ಭೀಮಾನದಿ ಉಗಮ ಪ್ರದೇಶದ ಚಂದೋಳಿ ಗ್ರಾಮದಲ್ಲಿ ಮತ್ತು ಬ್ರಹ್ಮಗಿರಿಯಲ್ಲಿ ಒಂದು ಚಿಕ್ಕ ಚಾಕು ದೊರೆತಿವೆ.[೨೦]

ನೂತನ ಶಿಲಾಯುಗದ ಸಂಸ್ಕೃತಿಯು ನಂತರ ವಿಕಸನಗೊಂಡ ಈ ಹಂತದಲ್ಲಿ ತಾಮ್ರದ ಆಯುಧಗಳ ಬಳಕೆ, ಸುಟ್ಟ ಮಣ್ಣಿನ ಪಾತ್ರೆಗಳ ಬಳಕೆ, ಸುಧಾರಿಸಿದ ಬೇಸಾಯ ಪದ್ಧತಿಯ ಅಳವಡಿಕೆ ಈ ಸಾಂಸ್ಕೃತಿಕ ಹಂತದ ಮುಖ್ಯ ಲಕ್ಷಣಗಳು. ಕರ್ನಾಟಕಕ್ಕೆ ಸಂಬಂಧಿಸಿದಂತೆ ಸುಧಾರಿತ ಮಣ್ಣಿನ ಪಾತ್ರೆಗಳ ಬಳಕೆ, ಅದರೊಂದಿಗೆ ಅಲ್ಪ ಪ್ರಮಾಣದ ಲೋಹದ ಬಳಕೆ ಜೊತೆಗೆ ಶಿಲೋಪಕರಣಗಳನ್ನು ಬಳಸಿಕೊಂಡಿರುವುದನ್ನು ವಿಶೇಷವಾಗಿ ಗಮನಿಸಬಹುದಾಗಿದೆ. ಮಡಿಕೆಯ ಮಾದರಿಯು ವಿಶಿಷ್ಟವಾಗಿದ್ದು ಕಂಡು ಬರುತ್ತದೆ. ಇವುಗಳಲ್ಲಿ ವರ್ಣರೇಖಾ ಚಿತ್ರಮಯವಾದ ಪಾತ್ರೆಗಳು ಕಂಡು ಬಂದಿವೆ. ಕೆಲವೊಮ್ಮೆ ಪ್ರಾಣಿಗಳ ಚಿತ್ರಗಳನ್ನು ಬಿಡಿಸಲಾಗಿದೆ. ಇಂತಹ ಮಣ್ಣಿನ ಪಾತ್ರೆಗಳನ್ನು ಜೋರ್ವೆ ಮತ್ತು ಸಾವಳದ ಮಡಿಕೆ ಮಾದರಿಗಳೆಂದು ಕರೆಯಲಾಗುತ್ತದೆ.

ಶಿಲಾ ತಾಮ್ರಯುಗದ ಜನರು ಸೌಂದರ್ಯಪ್ರಜ್ಞೆಯುಳ್ಳವರಾಗಿದ್ದರೆಂದು ಅವರ ಮಣ್ಣಿನ ಗೊಂಬೆ ಹಾಗೂ ದೊರೆತ ವರ್ಣಚಿತ್ರಗಳಿಂದ ತಿಳಿಯಬಹುದಾಗಿದೆ. ರಾಯಚೂರು, ಬಳ್ಳಾರಿ, ಚಿತ್ರದುರ್ಗ ಪ್ರದೇಶದಲ್ಲಿಯ ಬೆಟ್ಟಗಳಲ್ಲಿ ಹಾಗೂ ಬಯಲು ಬಂಡೆಗಳ ಮೇಲೆ ಚಿತ್ರಗಳು ದೊರೆತಿವೆ. ನೂತನ ಶಿಲಾಯುಗ, ಶಿಲಾ-ತಾಮ್ರಯುಗ ಅಥವಾ ಬೃಹತ್ ಶಿಲಾಯುಗ ಸಂಸ್ಕೃತಿಯ ಹಂತಕ್ಕೆ ಸೇರಿದವುಗಳೆಂದು ತಿಳಿಯುವ ಬೂದಿ ದಿಬ್ಬಗಳು, ಕರ್ನಾಟಕದ ಉತ್ತರ ಭಾಗಗಳಲ್ಲಿ ಹೆಚ್ಚಾಗಿಯೂ ನಂತರದ ಭಾಗದಲ್ಲಿ ಪ್ರಾತಿನಿಧಿಕವಾಗಿಯೂ ಇರುವುದು ಕಂಡುಬರುತ್ತವೆ. ಈ ಸಂಸ್ಕೃತಿಯ ಕಾಲಮಾನವನ್ನು ಕರ್ನಾಟಕದ ವಿವಿಧ ಭಾಗಗಳಲ್ಲಿ ವಿವಿಧ ಕಾಲಮಾನವೆಂದು ನಿರ್ಧರಿಸಲಾಗಿದೆ. ಅದರಂತೆ ಕೃಷ್ಣಾಮೇಲ್ದಂಡೆಯ ಶಿಲಾ ತಾಮ್ರಯುಗ ಸಂಸ್ಕೃತಿಯು ಸುಮಾರು ಕ್ರಿ.ಪೂ.೨೩೦೦-೧೦೦೦ ಎಂದು ತಿಳಿಯಲಾಗಿದೆ. ಭೀಮಾ ಮತ್ತು ಕೃಷ್ಣಾ, ತುಂಗಭದ್ರಾ ಪ್ರದೇಶಕ್ಕೆ ಪ್ರಸರಿಸಿದ ಜೋರ್ವೆ ಮಾದರಿಯ ಕಪ್ಪು ವರ್ಣ ಚಿತ್ರದ ಮೃತ್ ಪಾತ್ರೆಗಳುಳ್ಳ ಶಿಲಾತಾಮ್ರಯುಗ ಸಂಸ್ಕೃತಿಯ ಕಾಲಮಾನವು ಸುಮಾರು ಕ್ರಿ.ಪೂ. ೧೩೦೦-೮೦೦ ಎಂದು ನಿರ್ಧರಿಸಲಾಗಿದೆ.

ಹಂಪಿ ಪರಿಸರದಲ್ಲಿ ಕುಡಿತಿನಿ, ಸಂಗನಕಲ್ಲು, ಕಪ್ಪಗಲ್ಲು, ಕುರುಗೋಡು, ಬಳ್ಳಾರಿ (ಬಳ್ಳಾರಿ ತಾ.), ಗಾದಿಗನೂರು, ಗುಡಿ ಓಬಳಾಪುರ, ಹಂಪಿ(ಚಕ್ರತೀರ್ಥ), ನಿಂಬಾಪುರ, ಬೆಳಗಲ್ಲು, ಬೆಳಗೋಡಹಾಳು, ವೆಂಕಟಾಪುರ, ಹಳಕುಂಡಿ (ಹೊಸಪೇಟೆ ತಾ.), ತೆಕ್ಕಲಕೋಟೆ (ಸಿರುಗುಪ್ಪ ತಾ.), ದರೋಜಿ ಭೈರನಾಯಕನಹಳ್ಳಿ, ರಾಜಾಪುರ(ಸೊಂಡೂರು ತಾ.), ಅಪ್ಪೇನಹಳ್ಳಿ (ಕೂಡ್ಲಿಗಿ ತಾ.), ಹಂಪಸಾಗರ(ಹಗರಿಬೊಮ್ಮನಹಳ್ಳಿ ತಾ.), ಅಲ್ಲಿಪುರ (ಹೂವಿನಹಡಗಲಿ), ಚಿಕ್ಕರಾಂಪುರ, ಆನೆಗೊಂದಿ, ಹಿರೇಬೆನಕಲ್(ಗಂಗಾವತಿ ತಾ.) ಮೊದಲಾದಡೆ ಈ ಸಂಸ್ಕೃತಿಯ ಕೆಲ ಕುರುಹುಗಳು ದೊರೆತಿದ್ದು, ಅವುಗಳ ಆಧಾರದ ಮೇಲೆ ಅಂದಿನ ಜನಜೀವನ ಅರಿಯಬಹುದಾಗಿದೆ.[೨೧] ಕುಡತಿನಿ, ಕಪ್ಪಗಲ್ಲು ನೆಲೆಗಳಲ್ಲಿ ಸೂಕ್ಷ್ಮ ಶಿಲೋಪಕರಣಗಳು, ಚಕ್ಕೆ ಕಲ್ಲಿನ ಮೂಲ ಶಿಲಾಗಟ್ಟಿಗಳು ಮತ್ತು ಇವುಗಳೊಂದಿಗೆ ಮಸುಕಾದ ಕೆಂಪುವರ್ಣದ ಮಡಿಕೆ ಅವಶೇಷಗಳು ಅಲ್ಲಿಪುರದಲ್ಲಿ ಕಂಡುಬಂದಿವೆ. ಇದಕ್ಕೆ ಆನೆಗೊಂದಿ ಸಮೀಪದ ಚಿಕ್ಕರಾಂಪುರದಲ್ಲಿ ಕೆಂಪುವರ್ಣದ ಮಡಿಕೆಗಳು ಆಭ್ರಕ ಮಿಶ್ರಣಗೊಂಡಿವೆ. ಹೊಸಕೇರಿಯಲ್ಲಿ ಕಂದುವರ್ಣದ ಮಡಿಕೆಗಳೊಂದಿಗೆ ನೀಳಚಕ್ಕೆ ಹಾಗೂ ಹಿರೆಬೆಣಕಲ್ಲಿನಲ್ಲಿ ಕಂದು ಚಿತ್ರಿತ ಕೆಂಪು ಮಡಿಕೆ ಭಾಗ ಮತ್ತು ನೀಳಚಕ್ಕೆ, ಗೆರೆಗಳುಳ್ಳ ಮೂಲಶಿಲಾಗಟ್ಟಿಗಳು ದೊರೆತಿದ್ದು, ಈ ಅಧ್ಯಯನಕ್ಕೆ ಯೋಗ್ಯವಾಗಿವೆ. ನವ್ಯ ಶಿಲಾಯುಗಕ್ಕೆ ಸಂಬಂಧಿಸಿದ ಬೂದಿಗುಡ್ಡಗಳನ್ನು ಕುಡತಿನಿ ಗ್ರಾಮದ ಹತ್ತಿರ ಶೋಧಿಸಲಾಗಿದೆ. ಈ ಬೂದಿಕಣಿವೆಯ ಆಕಾರದಿಂದಲೂ ಹಾಗೂ ಅಲ್ಲಿ ದೊರೆತ ನವಶಿಲಾಯುಗದ ಅವಶೇಷಗಳಿಂದಲೂ, ಮುಖ್ಯವಾದುದಾಗಿದೆ. ಈ ಬೂದಿಗುಡ್ಡಗಳ ಮೇಲೆ ಕಾಲ-ಕಾಲಾಂತರದಲ್ಲಿ ಬಿದ್ದ ಮಳೆಯ ನೀರು ಹರಿಯುವುದರಿಂದ ಉಂಟಾದ ಕ್ವಾರಿಕಲ್ಲುಗಳಲ್ಲಿ ನವಶಿಲಾಯುಗದ ಆಯುಧಗಳು ದೊರೆತಿವೆ. ಇದೇ ರೀತಿ ಹಂಪೆಯಲ್ಲಿ ತುಂಗಭದ್ರಾ ನದಿಯ ಆಚೆಯ ದಡದ ಮೇಲೆ ಸಹ ಅನೇಕ ಶಿಲಾಯುಗದ ಅವಶೇಷಗಳು ದೊರೆತಿವೆ. ಇವುಗಳ ಆಧಾರದ ಮೇಲೆ ಹಂಪಿ ಮತ್ತು ಅದರ ಸುತ್ತಲಿನ ನೆಲೆಗಳು ನವಶಿಲಾಯುಗ ಮತ್ತು ತಾಮ್ರ ಶಿಲಾಯುಗ ಕಾಲದ ಮನುಷ್ಯನ ಅವಾಸ ತಾಣವಾಗಿತ್ತೆಂದು ಹೇಳಬಹುದಾಗಿದೆ.

೩.೧.೫. ಕಬ್ಬಿಣಯುಗ ಅಥವಾ ಬೃಹತ್ ಶಿಲಾಯುಗ ಸಂಸ್ಕೃತಿ (ಕ್ರಿ.ಪೂ.೧೨೦೦-೨೦೦)

ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ಕುತೂಹಲಕರವಾದ ವಿವಿಧ ಮಾದರಿಯ ಬೃಹತ್ ಕಲ್ಗೋರಿ (ಶಿಲಾಗೋರಿ)ಗಳನ್ನು ನಿರ್ಮಿಸುತ್ತಿದ್ದರಿಂದ ಈ ಸಂಸ್ಕೃತಿಯನ್ನು ಬೃಹತ್ ಶಿಲಾಯುಗ ಸಂಸ್ಕೃತಿ(ಮೆಗಾಲಿಥಿಕ್ ಏಜ್)ಎಂದು ಕರೆಯಲಾಗುತ್ತಿದೆ. ಜೊತೆಗೆ ಈ ಹಂತದಲ್ಲಿ ಕಬ್ಬಿಣದ ಬಳಕೆ ಆರಂಭಗೊಂಡಿದ್ದರಿಂದ ಈ ಕಾಲವನ್ನು 'ಕಬ್ಬಿಣಯುಗ'ವೆಂತಲೂ (ಐರನ್ ಏಜ್) ಕರೆಯಲಾಗುತ್ತದೆ.

ಭಾರತದಲ್ಲಿ ಇತರ ಸಂಸ್ಕೃತಿಗಳಂತೆ ಬೃಹತ್ ಶಿಲಾಯುಗ ಸಂಸ್ಕೃತಿಯು ಸವಿಸ್ತಾರವಾಗಿ

ಹರಡಿದ್ದು ವಿವಿಧ ಕಾಲಘಟ್ಟಗಳಲ್ಲಿ ಅನೇಕ ಪ್ರಾದೇಶಿಕ ಲಕ್ಷಣಗಳನ್ನೊಳಗೊಂಡು ಪ್ರಸಾರವಾಗಿದೆ. ಕರ್ನಾಟಕದಲ್ಲಿ ಈ ಸಂಸ್ಕೃತಿಯು ವಿಶಿಷ್ಟವಾಗಿರುವುದನ್ನು ಕಾಣಬಹುದು. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕಲ್ಗೋರಿಗಳು ಮತ್ತು ವಸತಿ ನೆಲೆಗಳು ಕಂಡುಬಂದಿವೆ. ಹಲವು ನೆಲೆಗಳ ಉತ್ಖನನವೂ ನಡೆದಿದೆ. ಬ್ರಹ್ಮಗಿರಿ, ನುಂಕೆಮಲೆ, ಜಟ್ಟಿಂಗರಾಮೇಶ್ವರ, ಕಪ್ಪಗಲ್ಲು, ಸಂಗನಕಲ್ಲು, ಹಿರೇಬೆನಕಲ್, ಕುಮತಿ, ಹುಲಿಕುಂಟೆ, ವಟಗಲ್ ಮೊದಲಾದವು ಈ ಕಾಲದ ಪ್ರಮುಖ ನೆಲೆಗಳಾಗಿವೆ. ದಕ್ಷಿಣ ಕರ್ನಾಟಕದ ನೆಲೆಗಳಿಗೆ ಹೋಲಿಸಿದರೆ ಉತ್ತರ ಕರ್ನಾಟಕದ ನೆಲೆಗಳು ಅಧ್ಯಯನಕ್ಕೆ ಆಶಾದಾಯಕವಾಗಿವೆ. ಶವಸಂಸ್ಕಾರದ ಈ ಕಲ್ಗೋರಿಗಳಲ್ಲಿ ದಾರಿಕೋಣೆ, ಕಂಡಿಕೋಣೆ, ಆಯಾತಾಕಾರದ ಕೊರೆದು ತಯಾರಿಸಿದ ಶವಕುಣಿಗಳು, ಮಡಿಕೆಯ ಶವಪೆಟ್ಟಿಗೆಗಳುಳ್ಳ ದುಂಡುವೃತ್ತಗಳು,ನಿಲಿಸುಗಲ್ಲುಗಳು, ಶಿಲಾವೃತ್ತ, ಶವ ಕುಳಿ, ಆಸ್ತಿಪಾತ್ರೆ, ಕಲ್ಲುಗುಂಪೆ ಮೊದಲಾದ ಪ್ರಕಾರಗಳನ್ನು ವಿದ್ವಾಂಸರು ಗುರುತಿಸಿ ಬೆಳಕಿಗೆ ತಂದಿದ್ದಾರೆ.[೨೨]

ಕರ್ನಾಟಕದಲ್ಲಿನ ಅತಿ ಹೆಚ್ಚು ಸಂಖ್ಯೆಯ ನೆಲೆಗಳು ಇದೇ ಸಾಂಸ್ಕೃತಿಕ ಹಂತಕ್ಕೆ ಸೇರಿದವುಗಳಾಗಿವೆ. ಈ ಹಂತದಲ್ಲಿ ಕಬ್ಬಿಣದ ಜೊತೆಗೆ ಅತಿ ಹೆಚ್ಚು ಪ್ರಮಾಣದಲ್ಲಿ ಕಪ್ಪು ವರ್ಣದ, ಪೂರ್ಣ ಕಪ್ಪು ಮತ್ತು ಪೂರ್ಣ ಕೆಂಪು ವರ್ಣದ ಮಡಿಕೆಗಳ ಉಪಯೋಗವಿದ್ದುದನ್ನು ಗುರುತಿಸಲಾಗಿದೆ. ಹಂಪಿ ಪರಿಸರದಲ್ಲಿ ಕಪಗಲ್ಲು, ಕುರುಗೋಡು, ಸಂಗನಕಲ್ಲು(ಬಳ್ಳಾರಿ ತಾ.), ಹಳಕುಂಡಿ, ಹಂಪಿ(ಹೊಸಪೇಟೆ ತಾ.), ನಿಟ್ಟೂರು(ಸಿರುಗುಪ್ಪ ತಾ.), ಮಲ್ಲಾಪುರ(ಸೊಂಡೂರು ತಾ.), ಅಯ್ಯಪ್ಪನಹಳ್ಳಿ, ಕುಮತಿ, ಹಳಸಗ್ರಾಮ, ಹುಲಿಕುಂಟೆ (ಕೂಡ್ಲಿಗಿ ತಾ.), ಕೋಗಳಿ (ಹಗರಿಬೊಮ್ಮನಹಳ್ಳಿ.ತಾ.) ಅಲ್ಲೀಪುರ, ಕೊಟ್ನಕಲ್ಲು, ನವಲಿ, ಮೈಲಾರ, ರಾಜವಾಳ, ಹುಲಿಗುಡ್ಡ (ಹೂವಿನ ಹಡಗಲಿ ತಾ.), ತೆಲಗಿ, ನೀಲಗುಂದ ಮಾಡಲಗೇರಿ(ಹರಪನಹಳ್ಳಿ ತಾ.) ಗಂಗಾವತಿ ತಾಲೂಕಿನ ಹಿರೆಬೆನಕಲ್, ಚಿಕ್ಕಬೆನಕಲ್, ಕಡೆಬಾಗಿಲು, ರಾಮದುರ್ಗ ಮೊದಲಾದೆಡೆ ಈ ಸಂಸ್ಕೃತಿಯ ಕುರುಹುಗಳು ದೊರೆತಿವೆ. ಈ ಸಂಸ್ಕೃತಿಯ ಮೇಲೆ ಹೆಚ್ಚಿನ ಬೆಳಕು ಬೀರಿವೆ.[೨೩]

೩.೨. ಚಾರಿತ್ರಿಕ ಕಾಲ

ಮಧ್ಯಯುಗೀನ ಇತಿಹಾಸದಲ್ಲಿ ಹಂಪಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯವು ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ಮಹತ್ವದ್ದಾಗಿದೆ. ವಿಜಯನಗರ ಸಾಮ್ರಾಜ್ಯ ವೈಭವದ ಆಳ್ವಿಕೆ ಇಂದು ದೇಶ–ವಿದೇಶಿಯರ ಗಮನವನ್ನು ಸೆಳೆದಿದೆ. ಒಂದು ಕಾಲದಲ್ಲಿ ವೈಭವದಿಂದ ಮರೆದಿದ್ದ ವಿಜಯನಗರ ಸಾಮ್ರಾಜ್ಯವು ಇಂದು ಹಾಳು ಹಂಪೆಯಾಗಿ ಉಳಿದಿದೆ. ಹಂಪಿ ಮತ್ತು ಅದರ ಸುತ್ತಲಿನ ಇಂದಿನ ಬಳ್ಳಾರಿ ಜಿಲ್ಲೆಯ ಪ್ರದೇಶವು ವಿಜಯನಗರದ ರಾಜರಿಗಿಂತಲೂ ಮೊದಲು ಕರ್ನಾಟಕವನ್ನು ಆಳಿದ ಅವರ ಪೂರ್ವದ ರಾಜಮನೆತನಗಳಾದ ಮೌರ್ಯ, ಶಾತವಾಹನ, ಕದಂಬ, ರಾಷ್ಟ್ರಕೂಟ ಮೊದಲಾದ ರಾಜಮನೆತನಗಳ ಅಧೀನಕ್ಕೆ ಒಳಗಾಗಿತ್ತು. ಈ ಹಿನ್ನೆಲೆಯಲ್ಲಿ ದೊರೆತಿರುವ ಲಭ್ಯ ಆಧಾರಗಳ

ಮೇಲೆ ಈ ಪ್ರದೇಶವನ್ನು ಆಳ್ವಿಕೆ ಮಾಡಿದ ವಿವಿಧ ರಾಜವಂಶೀಯರ ಚರಿತ್ರೆಯನ್ನು ಈ ಮುಂದಿನಂತೆ ವಿಭಾಗಿಸಿಕೊಂಡು ಸ್ಥೂಲವಾಗಿ ಅಧ್ಯಯನ ಮಾಡಲಾಗಿದೆ.

೩.೨.೧ ಪ್ರಾಚೀನ ಕಾಲ

೩.೨.೨ ಮಧ್ಯಕಾಲೀನ ಕಾಲ

೩.೨.೩ ಆಧುನಿಕ ಕಾಲ

೩.೨.೧ ಪ್ರಾಚೀನ ಕಾಲ

ಮೌರ್ಯರಿಂದ ಬಾದಾಮಿ ಚಾಲುಕ್ಯರ ಅವನತಿಯವರೆಗಿನ (ಇತಿಹಾಸ ಆರಂಭ ಕಾಲದಿಂದ ಕ್ರಿ.ಶ.ಸು. ೧೧ನೇ ಶತಮಾನದ ಆರಂಭದವರೆಗಿನ) ಕಾಲಘಟ್ಟವನ್ನು ನಾವು ಪ್ರಾಚೀನ ಕಾಲ ಎಂದು ಕರೆಯಬಹುದು. ಈ ಕಾಲಾವಧಿಯಲ್ಲಿ ಮೌರ್ಯ, ಶಾತವಾಹನರು, ಕದಂಬರು, ಗಂಗರು, ರಾಷ್ಟ್ರಕೂಟರು, ಚಾಲುಕ್ಯರು ಆಳ್ವಿಕೆ ಮಾಡಿದ್ದಾರೆ. ಹಂಪಿಯು ಸುಮಾರು ಕ್ರಿ.ಶ. ೧ನೇ ಶತಮಾನದಿಂದ ಇತ್ತು ಎಂದು ಶಾಸನಗಳ ಹಿನ್ನೆಲೆಯಲ್ಲಿ ಹೇಳಬಹುದಾಗಿದೆ.

ಅ) ಮೌರ್ಯರ ಆಳ್ವಿಕೆ

ಕರ್ನಾಟಕದಲ್ಲಿ ಬ್ರಹ್ಮಗಿರಿ, ಸಿದ್ಧಾಪುರ, ಜಟ್ಟಿಂಗ ರಾಮೇಶ್ವರ (ಚಿತ್ರದುರ್ಗ ಜಿಲ್ಲೆ) ಮಸ್ಕಿ, ಕೊಪ್ಪಳ (ರಾಯಚೂರು ಜಿಲ್ಲೆ) ಉದೆಗೊಳ್ಳಂ, ನಿಟ್ಟೂರು (ಬಳ್ಳಾರಿ ಜಿಲ್ಲೆ) ಹಾಗೂ ಸನ್ನತಿ(ಗುಲಬರ್ಗಾ ಜಿಲ್ಲೆ)ಯಲ್ಲಿ ಅಶೋಕನ ಕಾಲದ ಶಾಸನಗಳು ದೊರತಿವೆ. ಇವುಗಳಿಂದ ಗುಲಬರ್ಗಾ, ರಾಯಚೂರು, ಬಳ್ಳಾರಿ ಮತ್ತು ಚಿತ್ರದುರ್ಗ ಪ್ರದೇಶಗಳು, ಮೌರ್ಯ ಸಾಮ್ರಾಜ್ಯದ ಅಧೀನದಲ್ಲಿದ್ದವೆಂದು ಹೇಳಬಹುದು. ಕುಂತಲವು ಅಶೋಕನ ಆಳ್ವಿಕೆಗೆ ಮೊದಲೇ ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ್ದಿತೆಂಬುದು ನಿರ್ವಿವಾದವಾದ ವಿಷಯವಾಗಿದೆ.[೨೪] ಕುಂತಲ ಸೀಮೆಯು ಭೀಮ ಮತ್ತು ವೇದಾವತಿ ನದಿಗಳ ಮಧ್ಯದಲ್ಲಿದ್ದು ಪಶ್ಚಿಮ ಘಟ್ಟಗಳನ್ನು ಸರಹದ್ದನ್ನಾಗಿ ಹೊಂದಿದ್ದಿತು. ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ, ಧಾರವಾಡ, ಬಿಜಾಪುರ ಮೊದಲಾದ ಪ್ರದೇಶಗಳು ಕುಂತಲದಲ್ಲಿ ಸೇರಿದ್ದವು. ಹಂಪಿ ಮತ್ತು ಅದರ ಸುತ್ತಲಿನ ಪ್ರದೇಶಗಳು ಸಹ ಮೌರ್ಯರ ಅಧೀನಕ್ಕೊಳಗಾಗಿದ್ದವೆಂದು ಹೇಳಬಹುದು. ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಯ ಉತ್ತರ ಭಾಗದಲ್ಲಿ ದೊರೆತಿರುವ ಅಶೋಕನ ಶಾಸನಗಳು ಮೌರ್ಯರ ಆಳ್ವಿಕೆಯನ್ನು ಅಧಿಕೃತವಾಗಿ ಸ್ಪಷ್ಟಪಡಿಸುವ ಆಧಾರಗಳಾಗಿವೆ.

ಅಶೋಕನ ಶಾಸನಗಳು (ಎರಡು ಮತ್ತು ಹದಿಮೂರನೆಯ) ದಕ್ಷಿಣದ ರಾಜ್ಯಗಳ ಹೆಸರುಗಳನ್ನು ತಿಳಿಸುತ್ತವೆ. ಬ್ರಹ್ಮಗಿರಿ, ಸಿದ್ಧಾಪುರ ಮತ್ತು ಜಟ್ಟಿಂಗ ರಾಮೇಶ್ವರ ಎಂಬಲ್ಲಿಯ ಮೌರ್ಯ ಚಕ್ರವರ್ತಿ ಅಶೋಕನ ಶಾಸನಗಳು ಅವನ ಸಾಮ್ರಾಜ್ಯದ ಗಡಿಗಳನ್ನು ಸೂಚಿಸುವ

ಗುರುತುಗಳಾಗಿವೆ.[೨೫] ಇತ್ತೀಚೆಗೆ ನಡೆದ ಸಂಶೋಧನೆಗಳಿಂದ ಮೌರ್ಯ ಸಾಮ್ರಾಜ್ಯವು ಬಳ್ಳಾರಿ ಜಿಲ್ಲೆಯ ಸಿರುಗುಪ್ಪ, ಬಳ್ಳಾರಿ ತಾಲೂಕುಗಳ ಕೆಲವು ಭಾಗಗಳಲ್ಲದೆ; ಈಗಿನ ಹಂಪಿ ಸುತ್ತಲಿನ ಕೆಲ ಭಾಗಗಳನ್ನು ಒಳಗೊಂಡಿದ್ದುದಾಗಿ ತಿಳಿದು ಬಂದಿದೆ. ಇಲ್ಲಿಗೆ ಸಮೀಪದ ಹಿರೇಬೆನಕಲ್ ಮೊದಲಾದೆಡೆ ದೊರೆಯುವ ಬೃಹತ್ ಶಿಲಾಯುಗದ ಸಮಾಧಿಗಳನ್ನು ಜನರು ಮೋರಿಯರ ಮನೆ ಅಥವಾ ಮೌರ್ಯರ ಮನೆ ಎಂದು ಕರೆಯುತ್ತಿರುವುದು ಅರ್ಥಪೂರ್ಣವಾಗಿದೆ. ಸಂಗಂ ಸಾಹಿತ್ಯ ಕೃತಿಗಳಲ್ಲಿಯೂ ಮೌರ್ಯರು ದಕ್ಷಿಣ ಭಾರತದೊಂದಿಗೆ ಸಂಪರ್ಕವಿರಿಸಿಕೊಂಡಿದ್ದರ ಪ್ರಸ್ತಾಪವು ಬರುತ್ತದೆ.[೨೬] ಅಶೋಕನ ಮರಣಾನಂತರ ಮೌರ್ಯಸಾಮ್ರಾಜ್ಯವು ಕ್ಷೀಣವಾಗತೊಡಗಿತು. ದಕ್ಷಿಣಭಾರತದಲ್ಲಿ ಮೌರ್ಯಸಂತತಿಯ ಅರಸರು ಹಲವಾರು ಶತಮಾನಗಳ ಕಾಲ ಆಳಿದರು. ಕೊಂಕಣದ ಮೌರ್ಯರು ಕ್ರಿ.ಶ. ಏಳನೆಯ ಶತಮಾನದವರೆಗೂ ಆಳಿದರು.

ಹಂಪಿಯ ಉತ್ಖನನದಲ್ಲಿ ಮತ್ತು ಆನೆಗೊಂದಿಗಳಲ್ಲಿ ಬೌದ್ಧರಿಗೆ ಸಂಬಂಧಪಟ್ಟ ಜಾತಕ ಕಥೆಯ ಫಲಕಗಳು, ಕೆಲ ಶಿಲ್ಪಗಳು ದೊರೆತಿರುವುದರಿಂದ ಹಂಪಿ ಮತ್ತು ಅದರ ಸುತ್ತಲಿನ ಪ್ರದೇಶಗಳು ಮೌರ್ಯಸಾಮ್ರಾಜ್ಯದ ಭಾಗವಾಗಿದ್ದು, ಅವರ ದಕ್ಷ ಆಡಳಿತ ಪದ್ಧತಿಯಿಂದ ಪ್ರಯೋಜನ ಹೊಂದಿದವು ಎನ್ನಬಹುದು. ಜೊತೆಗೆ ಅವರ ಸಾಂಸ್ಕೃತಿಕ ಪರಂಪರೆಯ ವ್ಯಾಪ್ತಿಗೆ ಒಳಗಾದವು. ಹಂಪಿ ಭಾರತದ ಪ್ರಬಲ ಧರ್ಮಗಳಲ್ಲಿ ಒಂದಾದ ಬೌದ್ಧ ಧರ್ಮದ ನೆಲೆಯಾಗಿತ್ತು ಎಂದು ಹೇಳಲು ಇಲ್ಲಿ ದೊರೆತ ಕೆಲವು ಕುರುಹುಗಳು ಇಲ್ಲಿ ಸಾಕ್ಷಿಯಾಗಿವೆ. ಕ್ರಿ.ಶ.೧-೨ನೇ ಶತಮಾನಕ್ಕೆ ಸೇರಿದ ಮಹಾನವಮಿ ದಿಬ್ಬದ ಮುಂದೆ ದೊರೆತ ಶಿಲ್ಪ ಪಟ್ಟಿಯಲ್ಲಿ "ತರಸ ಪುತನ-ದಾನಂ" ಎಂದು ದಾಖಲೆಯು ಬ್ರಾಹ್ಮಿಲಿಪಿಯನ್ನು ಹೊಂದಿದೆ.[೨೭] ಪ್ರಾಕೃತದಿಂದಲೂ ಕೂಡಿ ತರಸುಪುತ್ರನ ದಾನವನ್ನು ಉಲ್ಲೇಖಿಸುತ್ತದೆ. ಹಾಗೂ ಬುದ್ಧದೇವನ ಜೀವನ ಚಿತ್ರಣದ ಶಿಲ್ಪ ಕಲಾಕೃತಿಗಳು ಹಾಗೂ ಸಮಕಾಲೀನ ವಾಸ್ತು-ಶಿಲ್ಪ ಅವಶೇಷಗಳು ತಿಳಿ ಹಸಿರು ಬಣ್ಣದ ಕಲ್ಲಿನಿಂದ ನಿರ್ಮಿತವಾದವುಗಳಾಗಿವೆ.[೨೮]

ಮೌರ್ಯಸಾಮ್ರಾಟ ಅಶೋಕನ 'ಬ್ರಹ್ಮಗಿರಿ ಶಾಸನ'ವು 'ಇಸಿಲ' ಸ್ಥಳವನ್ನು ಹೆಸರಿಸಿದ್ದು, ಇದು ಮೌರ್ಯ ಸಾಮ್ರಾಜ್ಯದ 'ಸುವರ್ಣಗಿರಿ' ಘಟಕದ ಆಡಳಿತ ಕೇಂದ್ರವಾಗಿತ್ತು. ಇದಕ್ಕೆ ಅನತಿ ದೂರದಲ್ಲಿರುವ ಹಂಪಿ ಅಂದು ಕಬ್ಬಿಣದ ಅದಿರು ಹೊಂದಿರುವ ಬೆಟ್ಟಸಾಲುಗಳ ಪರಿಸರದಲ್ಲಿರುವ ಪ್ರಮುಖ ಕೇಂದ್ರವಾಗಿತ್ತು. ಕ್ರಿ.ಶ.೧-೨ನೆಯ ಶತಮಾನದಲ್ಲಿ ಕಬ್ಬಿಣದ ಉತ್ಪಾದನೆ ಈ ಪರಿಸರದಲ್ಲಿ ಹೇರಳವಾಗಿ ನಡೆಯುತ್ತಿತ್ತು.

ಈ ರೀತಿಯಲ್ಲಿ ಹಂಪಿ ಹಾಗೂ ಅದರ ಸುತ್ತಲಿನ ಪ್ರದೇಶಗಳಲ್ಲಿ ಮೌರ್ಯರ ಶಾಸನ ಮತ್ತಿತರ ಅವಶೇಷಗಳು ಹೆಚ್ಚು ದೊರೆಯದೆ ಹೋದರೂ ಸಹ ಆ ಸಾಮ್ರಾಟರ ಧಾರ್ಮಿಕ, ಸಾಂಸ್ಕೃತಿದ ಪರಂಪರೆಯೂ ಮುಂದುವರೆಯಿತೆಂದು ಹೇಳಲು ಪಕ್ಕದ ಬಳ್ಳಾರಿ, ಕೊಪ್ಪಳ

ಮತ್ತು ಚಿತ್ರದುರ್ಗ ಪ್ರದೇಶದಲ್ಲಿ ಹೇರಳವಾಗಿ ಶಾಸನಗಳು, ಅವಶೇಷಗಳು ದೊರೆತಿವೆ. ಇದರಿಂದಾಗಿ ಹಂಪಿ ಪ್ರಾಂತ್ಯವು ಹಲವು ಶತಮಾನಗಳ ಕಾಲ ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಹೇಳಬಹುದು.

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಆ) ಶಾತವಾಹನ ಆಳ್ವಿಕೆ (ಕ್ರಿ.ಪೂ.೨೨೦-ಕ್ರಿ.ಶ.೨೩೦)

ಮೌರ್ಯ ಸಾಮ್ರಾಜ್ಯ ಪತನವಾದ ನಂತರ ಕ್ರಿ.ಪೂ.೨೨೦ ರಿಂದ ಕ್ರಿ.ಶ.ಸು.೨೩೦ರ ವರೆಗೆ ಅಂದರೆ ಸುಮಾರು ೪೫೦ ವರ್ಷಗಳ ದೀರ್ಘಕಾಲ ಶಾತವಾಹನರು ಭಾರತದಲ್ಲಿ ರಾಜ್ಯವಾಳಿದರು. ಸುಕುಂಥಕರ್‌ರವರು 'ಶಾತವಾಹನರ ಕುಟುಂಬ ಕನ್ನಡ ಪ್ರದೇಶದಿಂದ ಬಂದಿದೆ' ಎಂದು ಹೇಳಿದ್ದಾರೆ. ರಾಜಶೇಖರನ ಕಾವ್ಯ ಮೀಮಾಂಸೆಯಲ್ಲಿ, ವಾತ್ಸ್ಯಾಯನನ 'ಕಾಮಸೂತ್ರ'ದಲ್ಲಿ, ಹಾಲ ರಾಜನ ಪ್ರಾಕೃತದ ಗಥಾಸಪ್ತಸತಿಯಲ್ಲಿ 'ಹಾಲ' ಕುಂತಲದ ರಾಜನೆಂದು ತಿಳಿಸಿದೆ. ಪುರಾಣದಲ್ಲಿ ಗೌತಮಿಪುತ್ರ ಶಾತಕರ್ಣಿ ಕುಂತಲ ಪ್ರದೇಶವನ್ನು ಆಳುತ್ತಿದ್ದ ಬಗ್ಗೆ ಗೊತ್ತಾಗುತ್ತದೆ. ಕರ್ನಾಟಕದ ಬಹುಭಾಗವನ್ನಾಳಿದ ಮೊಟ್ಟಮೊದಲನೆಯ ಪ್ರಮುಖ ರಾಜವಂಶದವರಾದ ಈ ಶಾತವಾಹನರು ತಮ್ಮನ್ನು 'ಕುಂತಳ ಸ್ವಾಮಿ'ಗಳೆಂದು ಕರೆದುಕೊಂಡದ್ದುಂಟು.(ಇವರಿಗೆ ಆಂಧ್ರರು, ಆಂಧ್ರ ಭೃತ್ಯರು, ಶಾತಕರ್ಣಿಗಳು ಎಂದು ಕರೆಯಲಾಗಿದೆ). ಸುಮಾರು ಮೂವತ್ತುಮಂದಿ ದೊರೆಗಳಿದ್ದ ಈ ಮನೆತನದ ಬಗ್ಗೆ ಇದುವರೆಗೆ ದೊರೆತಿರುವ ಶಾಸನಗಳು ಅತ್ಯಲ್ಪ.

131992

ಹಂಪಿಯಲ್ಲಿ ಶಾತವಾಹನರ ಆಳ್ವಿಕೆ ಇತ್ತೆ? ಎಂಬುದರ ಬಗ್ಗೆ ಹೆಚ್ಚು ಶಾಸನಗಳು ದೊರೆತಿಲ್ಲ. ಆದರೆ ಬಳ್ಳಾರಿ ಜಿಲ್ಲೆಯ ಹೀರೆಹಡಗಲಿ ಮತ್ತು ಮ್ಯಾಕೆದೋಣಿಯಲ್ಲಿ ದೊರೆತ ಪುಲಮಾಯಿಯ ತಾಮ್ರ ಶಾಸನಗಳಿಂದ ಶಾತವಾಹನರ ಕೊನೆಯ ಅರಸರು ತಮ್ಮ ಆಳ್ವಿಕೆಯನ್ನು ಇಲ್ಲಿಯವರೆಗೆ ವಿಸ್ತರಿಸಿದ್ದರೆಂದು ಹೇಳಬಹುದು.[೨೯] ಪುರಾತಾತ್ವಿಕ ಆಧಾರಗಳಾದ ನಾಣ್ಯಗಳು, ಕೋಟೆಗಳು, ದೇವಾಲಯಗಳು, ಅಲಂಕಾರಿಕ ವಸ್ತುಗಳು ಇತ್ಯಾದಿಗಳು ನಮಗೆ ದೊರೆತಿದ್ದರಿಂದ ಹಾಗೂ ಈಗಿನ ಚಿತ್ರದುರ್ಗ ಜಿಲ್ಲೆಯಲ್ಲಿ ಎರಡು ಕಡೆ ನಡೆದ ಭೂಶೋಧನೆಗಳಿಂದ ಶಾತವಾಹನರ ಬಗೆಗೆ ಅನೇಕ ಮಹತ್ವದಾಯಕ ಅಂಶಗಳು ಹೊರಬಿದ್ದಿವೆ. ಈ ಹಿನ್ನಲೆಯಿಂದ ತುಲನಾತ್ಮಕ ಅಧ್ಯಯನ ಮಾಡಿ ಶಾತವಾಹನರ ಚರಿತ್ರೆಯನ್ನು ನಿರೂಪಿಸಬಹುದು.

ಇ) ಕದಂಬರ ಆಳ್ವಿಕೆ

ಕರ್ನಾಟಕದ ಚರಿತ್ರೆಯಲ್ಲಿ ಇತರೆ ರಾಜವಂಶಗಳಂತೆ ಕದಂಬರು ಕ್ರಿ.ಶ.೪ ರಿಂದ ೬ನೇ ಶತಮಾನದವರೆಗೆ ಆಳ್ವಿಕೆ ನಡೆಸಿ, ತಮ್ಮದೇ ಆದ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಇಲ್ಲಿ ಮುಖ್ಯವಾಗಿ ಚರ್ಚೆಗೆ ಗ್ರಾಸವಾಗಬೇಕಿರುವುದು ಬಳ್ಳಾರಿ ಜಿಲ್ಲೆಯ ಹಂಪಿಯವರೆಗೆ ಇವರ

ಆಳ್ವಿಕೆ ವಿಸ್ತರಿಸಿತ್ತೆಂಬುದು. ಇದಕ್ಕೆ ಆಧಾರಗಳೆಂಬಂತೆ ಇಲ್ಲಿ ಶಾಸನಗಳು ದೊರೆತಿವೆ. ಹಾಗೆಯೇ ಇವುಗಳಿಗೆ ಪೂರಕವೆಂಬಂತೆ ಕೆಲ ಸ್ಮಾರಕಗಳು ಸಹ ಉಳಿದುಕೊಂಡಿವೆ. ಹಾಗಾಗಿ ಲಭ್ಯ ಆಧಾರಗಳನ್ನು ಅನುಸರಿಸಿ, ಇವರ ಚರಿತ್ರೆಯನ್ನು ರಚಿಸುವುದು ಅನಿವಾರ್ಯವಾಗಿದೆ.

ಶಾತವಾಹನರ ಆಳ್ವಿಕೆ ೩ನೇ ಶತಮಾನದ ಹೊತ್ತಿಗೆ ಮುಕ್ತಾಯಗೊಂಡು ಅವರ ಸಾಮ್ರಾಜ್ಯ ಹರಿದು ಹಂಚಿ ಹೋಗುತ್ತಿದ್ದ ಹಾಗೆಯೇ ಈ ಸಾಮ್ರಾಜ್ಯದ ದಕ್ಷಿಣ ಮತ್ತು ಪಶ್ಚಿಮ ಭಾಗಗಳ ಒಡೆತನವು ಆಗತಾನೆ ತಲೆ ಎತ್ತಿದ ಕದಂಬರ ವಶವಾಯಿತು. ಹೀಗೆ ಕದಂಬರ ಅಧೀನಕ್ಕೊಳಪಟ್ಟ ಭಾಗಗಳಲ್ಲಿ ಹಂಪಿ ಪರಿಸರ ಮತ್ತು ಬಳ್ಳಾರಿ ಜಿಲ್ಲೆಯೂ ಒಂದು ಎನ್ನಬಹುದು. ಈ ಮೊದಲು ಬಳ್ಳಾರಿ ಜಿಲ್ಲೆಗೆ ಸೇರಿದ್ದ ಹರಪನಹಳ್ಳಿಯಿಂದ ಆಗ್ನೇಯ ದಿಕ್ಕಿಗೆ ಸುಮಾರು ೨೮ ಕಿ.ಮೀ. ದೂರದಲ್ಲಿ ಉಚ್ಚಂಗಿದುರ್ಗವಿದೆ.[೩೦] ಇದು ಒಂದು ಪರ್ವತದ ಕೋಟೆಯಾಗಿದೆ. ಇದು ಅಂದು ಬನವಾಸಿ–೧೨೦೦೦ ಎಂದು ಖ್ಯಾತವಾಗಿತ್ತು. ಅದೇ ಕದಂಬರ ರಾಜಧಾನಿಯಾಗಿರಬೇಕೆಂದು ಅಂಬೆಯ ಆಶ್ರಿತರಾದ ಕದಂಬರು ಅಂಬೆಯ ನಿವಾಸವಾದ ಹರಪನಹಳ್ಳಿ ತಾಲೂಕು ಉಚ್ಚಂಗಿದುರ್ಗದವರು ಎಂದೂ, 'ಗಿರಿನಾಥ' ಎಂಬ ಬಿರುದು ಅವರಿಗೆ ಸಲ್ಲತಕ್ಕದ್ದೆಂದು, ಕುಂಬಾಸರವರು ಇತಿಹಾಸ ದರ್ಶನದ ತಮ್ಮ ಲೇಖನವೊಂದರಲ್ಲಿ ಹೇಳಿದ್ದಾರೆ.

ಈ ದುರ್ಗವನ್ನು ಆಳಿ ಕದಂಬರ ಶಾಸನಗಳು ಇಲ್ಲಿಯೇ ದೊರೆತಿವೆ. ಉಚ್ಚಂಗಿಯಲ್ಲಿ ಆಳುತ್ತಿದ್ದ ವಿಜಯ ಪಾಂಡ್ಯನ ಸಾಮಂತನಾದ ನಾಗತಿಯರಸ ಎಂಬ ಮತ್ತೊಬ್ಬ ಕದಂಬ ರಾಜನ ಹೆಸರು ನಂದಿಕಂಬ ಗ್ರಾಮದಲ್ಲಿ ದೊರೆತ ಶಾಸನದಲ್ಲಿ ಕಂಡು ಬರುತ್ತದೆ. ಈ ನಾಗತ್ಯರಸನು (ನಾಗತಿಯರಸ) ಕದಂಬ ಚಕ್ರವರ್ತಿ ಮಯೂರವರ್ಮನ ವಂಶದವನೆಂದೂ, ಉಚ್ಚಂಗಿ ಗಿರಿನಾಥನೆಂದೂ ವರ್ಣಿತನಾಗಿದ್ದಾನೆ. ಸಾವಿರ ನಾಡಿಗೆ ಮನ್ನೆಯನಾಗಿದ್ದನು. ಇವನ ತಂದೆ ಕೇತರಸ, ತಾಯಿ ಕನಕಬ್ಬೆಯರಸಿ. ಇವನ ಕಿರಿ ಆಯ್ಯಂದಿರು ಹಂಪರಸ ಮತ್ತು ಸತ್ತಿ ಅರಸ. ತಮ್ಮ ಹರಿಯರಸ ಮತ್ತು ಮಕ್ಕಳು ಕೇತರಸ ಮತ್ತು ಮಾಚರಸರು, ಈತನು ಶಂಕರ ನಾರಾಯಣ ಪಾದ ಪಂಕಜ ಭ್ರಮರನಾಗಿದ್ದು. ಹರಿಹರದ ಹರಿಹರೇಶ್ವರ ದೇವರಿಗೆ ಕ್ರಿ.ಶ. ೧೧೨೧ರಲ್ಲಿ ಕೆಲವು ದತ್ತಿಗಳನ್ನು ಬಿಟ್ಟಿದ್ದಾನೆ. ಈ ಉಚ್ಚಂಗಿ ಪರ್ವತದ ಪಶ್ಚಿಮಕ್ಕೆ ಜಾಲಿಯ ಮರದಡಿಯಲ್ಲಿ ಅತ್ಯಂತ ಪ್ರಾಚೀನ ಕಾಲದ ಶಾಸನ ದೊರೆತಿದ್ದು, ಅದರ ಪ್ರಕಾರ ಕದಂಬ ರಾಜರಲ್ಲಿ ಒಂದನೇ ಕೃಷ್ಣನು ಅಶ್ವಮೇಧಯಾಗ ಮಾಡಿದ್ದು ತಿಳಿದು ಬರುತ್ತದೆ. ಹಂಪಿ ಸಮೀಪದಲ್ಲಿರುವ ಸಂಡೂರು ತಾಲೂಕಿನ ಕುಡತಿನಿಯಲ್ಲಿರುವ ಇವರ ಕಾಲದ ದೇವಾಲಯಗಳು ಮತ್ತು ಸಂಡೂರು ಸಮೀಪದ ಕುಮಾರಸ್ವಾಮಿ ಮತ್ತು ಪಾರ್ವತಿ ದೇವಾಲಯಗಳು ಇವರ ಕಾಲದ ವಾಸ್ತುವನ್ನು ಹೋಲುತ್ತವೆ. ಕದಂಬರ ಆಳ್ವಿಕೆಯನ್ನು ನಿರ್ವಚಿಸುವಾಗ ಈ ಪ್ರದೇಶವು ಕದಂಬರ ಅಧೀನಕ್ಕೊಳಪಟ್ಟಿತ್ತೆಂಬುದನ್ನು ಇತಿಹಾಸ ನಿರೂಪಿಸುತ್ತದೆ.

ಶಿಖರವೂ ಸೇರಿದಂತೆ ಸಂಪೂರ್ಣ ಕಟ್ಟಡವನ್ನು ಕಲ್ಲುಗಳಿಂದಲೇ ನಿರ್ಮಿಸಿರುವುದು. ಮಧ್ಯಭಾಗಕ್ಕೆ ರಂಗಮಂಟಪ ಅಂಟಿಕೊಂಡಂತೆ ಇರುವ ಒಂದು, ಎರಡು, ಮೂರು ಗರ್ಭಗೃಹಗಳಿಂದ ಕೂಡಿದ್ದು, ಶಿಖರವು ಕದಂಬ ನಾಗರ ಶೈಲಿಯಲ್ಲಿ ಪಿರಾಮಿಡ್ ಆಕರದಲ್ಲಿ ಮೆಟ್ಟಿಲುಗಳ ಸರಣಿಯನ್ನು ಹೊಂದಿರುವಂತಹದ್ದು. ಇವೆಲ್ಲವು ಕದಂಬರ ವಾಸ್ತುಶೈಲಿಯ ಪ್ರಮುಖ ಲಕ್ಷಣಗಳಾಗಿವೆ. ಹಂಪಿ ಮತ್ತು ಸಮೀಪದ ಆನೆಗೊಂದಿಯಲ್ಲಿರುವ ಕೆಲ ಸ್ಮಾರಕಗಳಲ್ಲಿ ಕದಂಬರ ಈ ವಾಸ್ತುಶೈಲಿಯ ಪ್ರಭಾವವನ್ನು ಗುರುತಿಸಬಹುದು. ಅವುಗಳಲ್ಲಿ ಹಂಪಿಯ ಗಾಣಗಿತ್ತಿ ದೇವಾಲಯ, ಹೇಮಕೂಟದಲ್ಲಿರುವ ದೇವಾಲಯಗಳು, ಸೀತೆಸೆರಗಿನ ಪೂರ್ವದಲ್ಲಿರುವ ದೇವಾಲಯ ಮತ್ತು ಮಠಗಳು ಮುಖ್ಯವಾಗಿದ್ದು ಅವುಗಳನ್ನು ಇದೇ ಶೈಲಿಯಲ್ಲಿ ನಿರ್ಮಿಸಲಾಗಿದೆ. ಇವುಗಳ ಆಧಾರದ ಮೇಲೆ ಹಂಪಿ ಪ್ರದೇಶವು ಕದಂಬರ ಆಳ್ವಿಕೆಗೆ ಒಳಪಟ್ಟಿತ್ತೆಂದು ಹೇಳಬಹುದಾಗಿದೆ.[೩೧]

ಈ) ಬಾದಾಮಿ ಚಾಲುಕ್ಯರ ಆಳ್ವಿಕೆ

ಕನ್ನಡ ನಾಡಿನ ಘನವತೆವೆತ್ತ ಅರಸುಮನೆತನಗಳಲ್ಲಿ ಚಾಲುಕ್ಯ ಮನೆತನವು ಒಂದು. ದಕ್ಷಿಣ ಭಾರತದಲ್ಲಿ ಚಾಲುಕ್ಯ ಮನೆತನದ ಪ್ರಭಾವವು ಗಣನೀಯವಾದುದಾಗಿದೆ. ಕ್ರಿ.ಶ. ೬ನೇ ಶತಮಾನದಿಂದ ಕ್ರಿ.ಶ. ೮ನೇ ಶತಮಾನದವರೆಗೂ, ಪುನಃ ಕ್ರಿ.ಶ. ೧೦ನೇ ಶತಮಾನದಿಂದ ಕ್ರಿ.ಶ.೧೨ನೆಯ ಶತಮಾನದವರೆಗೂ ಇವರು ಆಳಿದರು. ಬಾದಾಮಿಯ ಚಾಲುಕ್ಯರು, ಕಲ್ಯಾಣಿ ಚಾಲುಕ್ಯರು ಮತ್ತು ವೆಂಗಿಯ ಚಾಲುಕ್ಯರು ಎಂಬ ಮೂರು ಶಾಖಾಮನೆತನಗಳು ಚಾಲುಕ್ಯರಲ್ಲಿ ಕಾಣಬರುತ್ತವೆ. ಅಖಂಡ ಕರ್ನಾಟಕದ ಪ್ರಪ್ರಥಮ ಚಕ್ರವರ್ತಿಗಳಾಗಿ ಬಾದಾಮಿಯ ಚಾಲುಕ್ಯರು ಇನ್ನೂರು ವರ್ಷಗಳ ಕಾಲ ವೈಭವದಿಂದ ಆಳಿದರು. ರಾಷ್ಟ್ರಕೂಟ ದೊರೆ ೨ನೆಯ ಕರ್ಕನನ್ನು ಚಾಲುಕ್ಯ ವಂಶದ ಇಮ್ಮಡಿ ತೈಲಪನು ಅಧಿಕಾರದಿಂದ ಕೆಳಗಿಳಿಸಿ, ಚಾಲುಕ್ಯ ವಂಶವನ್ನು ಪುನಃ ಸ್ಥಾಪಿಸಿ ಅದರ ವೈಭವವನ್ನು ಮತ್ತೆ ಕಾಣುವಂತೆ ಮಾಡಿದನು. ಕಲ್ಯಾಣಿಯನ್ನು ರಾಜಧಾನಿಯನ್ನಾಗಿಟ್ಟುಕೊಂಡು ಆಳಿದುದರಿಂದ ಇವರನ್ನು ಕಲ್ಯಾಣಿಯ ಚಾಲುಕ್ಯರೆಂದು ಕರೆಯುತ್ತಾರೆ. ಇವರೂ ಸಹ ರಾಷ್ಟ್ರಕೂಟರಂತೆ ಎರಡು ಶತಮಾನಗಳ ಮೇಲ್ಪಟ್ಟು ರಾಜ್ಯವನ್ನಾಳಿದರು.

ಬಾದಾಮಿ ಚಾಲುಕ್ಯರು ತಮ್ಮ ಆಳ್ವಿಕೆಯ ಅವಧಿಯಲ್ಲಿ ಹಂಪಿ ಮತ್ತು ಬಳ್ಳಾರಿ ಜಿಲ್ಲೆಯ ಕೆಲವು ಪ್ರದೇಶಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರೆಂಬುವುದನ್ನು ಇಲ್ಲಿನ ಶಾಸನಗಳಿಂದ ತಿಳಿಯಬಹುದು. ಈ ಮನೆತನದಲ್ಲಿ ಅನೇಕ ಶ್ರೇಷ್ಠ ಅರಸರು ಆಳ್ವಿಕೆ ಮಾಡಿದ್ದಾರೆ. ಅವರಲ್ಲಿ ಇಮ್ಮಡಿ ಪುಲಕೇಶಿ ಅತಿ ಮುಖ್ಯ ಅರಸನಾಗಿದ್ದ. ಇತನ ಮರಣದ ನಂತರ ಈತನ ಮಗ ಒಂದನೇ ವಿಕ್ರಮಾದಿತ್ಯನು(ಕ್ರಿ.ಶ.೬೫೫ ರಿಂದ ೬೮೧) ಆಳ್ವಿಕೆ ನಡೆಸಿ, ಚಾಲುಕ್ಯ ಮನೆತನದ ಕೀರ್ತಿ ಮತ್ತು ಪ್ರತಿಷ್ಠೆಗಳನ್ನು ಪುನಃ ಉಳಿಸಿಕೊಂಡನು.[೩೨] ಇವನ ನಂತರ ವಿನಯಾದಿತ್ಯನು (ಕ್ರಿ.ಶ.೬೮೧ ರಿಂದ ೬೯೬) ಅಧಿಕಾರಕ್ಕೆ ಬಂದನು. ಕ್ರಿ.ಶ.೬೮೯ರ ವಿನಯಾದಿತ್ಯನ ಕಾಲದ

ಶಾಸನವೊಂದು ಹಂಪೆಯನ್ನು "ಪಂಪಾತೀರ್ಥ" ಎಂದು ಕರೆದಿದೆ. ಹಾಗೆಯೇ ಅವನ 'ಪಂಪಾತೀರ್ಥ' ವಾಸದ ಉಲ್ಲೇಖವಿದೆ. ಈತನ ಕ್ರಿ.ಶ. ೯೧೧ರ ತೆಗರ್ಚೆಡು ಮತ್ತೊಂದು ತಾಮ್ರಶಾಸನವು ಈತ ಹಂಪೆಗೆ ಬಂದಿದ್ದ ಸಂಗತಿಯನ್ನು ಮತ್ತು ಹಂಪಿಯಲ್ಲಿ ದಾನ ನೀಡಿದ್ದನ್ನು ಉಲ್ಲೇಖಿಸಿದೆ. ಪ್ರಾಚೀನ ಕಾಲದಿಂದಲೂ ಹಂಪಿಯು ವಿದ್ಯಾ ಮತ್ತು ಧಾರ್ಮಿಕ ಕೇಂದ್ರವಾಗಿತ್ತೆನ್ನಬಹುದು. ಹಂಪಿ ಸಮೀಪದ ಕುರುಗೋಡು ಶಾಸನದಿಂದ ಇಮ್ಮಡಿ ಪುಲಕೇಶಿ ಮತ್ತು ಆತನ ಮಕ್ಕಳಾದ ಆದಿತ್ಯವರ್ಮ ಮತ್ತು ಚಂದ್ರಾದಿತ್ಯವರ್ಮರು ಈ ಭಾಗದಲ್ಲಿ ಆಳ್ವಿಕೆ ಮಾಡಿದ್ದು ತಿಳಿದುಬರುತ್ತದೆ. "ಆದಿತ್ಯವರ್ಮನ ಮಗ ಅಭಿನವ ಆದಿತ್ಯ ಪಂಪಾತೀರ್ಥದ ಬಳಿ (ಹಂಪಿ) ತನ್ನ ಸೈನ್ಯವನ್ನು ಬೀಡುಬಿಟ್ಟು, ನಂತರ ಅಲ್ಲಿ ನಡೆದ ಯುದ್ಧದಲ್ಲಿ ವಿಜಯ ಪ್ರಾಪ್ತವಾದ ನೆನಪಿಗಾಗಿ ಉಚ್ಚಂಗಿ ವಿಷಯದ ನೆಟ್ಟಕುಂದ ಎನ್ನುವ ಹಳ್ಳಿಯನ್ನು ಮತ್ತು ಕೆಲ ಭೂಮಿ ದಾನಕೊಟ್ಟ" ಬಗ್ಗೆ ಈತನ ಕಾಲದ ಕ್ರಿ.ಶ.೬೮೧–೯೨ರ ಶಾಸನವೊಂದು ವಿವರಿಸುತ್ತದೆ.[೩೩]

ಬಾದಾಮಿ ಚಾಲುಕ್ಯರ ಪೂರ್ವದಲ್ಲಿಯೇ ಇಲ್ಲಿನ ನದಿ, ಪಂಪಾಸರೋವರ ಎಂದು ಹೆಸರು ಪಡೆದಿತ್ತು. ಬಾದಾಮಿ ಚಾಲುಕ್ಯ ಅರಸ ವಿನಯಾದಿತ್ಯನ ಕ್ರಿ.ಶ. ೬೮೬ರ ತಾಮ್ರಪಟದಲ್ಲಿ 'ಪಂಪಾತಟ ಮಧಿವಸಾತಿ ವಿಜಯ ಸ್ಕಂಧಾವರೆ' ಎಂದು ಉಲ್ಲೇಖ ಬರುತ್ತದೆ. ಅಂದರೆ ಚಾಲುಕ್ಯರು ವಿಜಯದ ಬಿಡಾರವನ್ನು ಪಂಪಾನದಿಯ ದಂಡೆಯ ಮೇಲೆ ಬಿಡಲಾಗಿತ್ತೆಂದು ತಿಳಿಯುತ್ತದೆ. ಈ ಮೇಲಿನ ಶಾಸನಗಳ ಆಧಾರದಿಂದ ಮತ್ತು ಬಾದಾಮಿ ಚಾಲುಕ್ಯರ ಕೆಲವು ವಾಸ್ತು ಕುರುಹುಗಳು ಮಾತ್ರ ಹಂಪಿಯ ಹೇಮಕೂಟ ಬೆಟ್ಟದಲ್ಲಿವೆ. ಬಾದಾಮಿ ಚಾಲುಕ್ಯರ ಆಳ್ವಿಕೆಯು ಈಗಿನ ಹಂಪಿ ಮತ್ತು ಬಳ್ಳಾರಿ ಜಿಲ್ಲೆಯವರೆಗೆ ವಿಸ್ತರಿಸಿತ್ತು ಎಂದು ಹೇಳಬಹುದು. ಒಟ್ಟಿನಲ್ಲಿ ಕ್ರಿ.ಶ.೮ನೇ ಶತಮಾನದವರೆಗಿನ ಕಾಲದವರೆಗೂ ಹಂಪಿ ಬಾದಾಮಿ ಚಾಲುಕ್ಯರ ಚಟುವಟಿಕೆಯ ತಾಣಗಳಲ್ಲಿ ಒಂದಾಗಿತ್ತು ಎನ್ನಬಹುದಾಗಿದೆ.

ಉ) ರಾಷ್ಟ್ರಕೂಟರ ಆಳ್ವಿಕೆ

ಎಂಟನೆಯ ಶತಮಾನದ ಮಧ್ಯಭಾಗದ ವೇಳೆಗೆ ದಖ್ಖನ್ನಿನ ಅಧಿಪತ್ಯವು ಚಾಲುಕ್ಯರ ತತ್ತರಿಸುವ ಕೈಗಳಿಂದ ಜಾರಿ ರಾಷ್ಟ್ರಕೂಟರ ಕೈಸೇರಿತು. ಅವರ ಪ್ರಾಬಲ್ಯವು ಸುಮಾರಾಗಿ ಹತ್ತನೆಯ ಶತಮಾನದ ಕೊನೆಯವರೆಗೂ ಮುಂದುವರಿದಿತ್ತು. ವಿಂಧ್ಯದ ಉತ್ತರ ಮತ್ತು ದಕ್ಷಿಣಗಳ ಅಸ್ಥಿರ ರಾಜಕೀಯದಲ್ಲಿ ನಿರ್ಣಾಯಕ ಪಾತ್ರವನ್ನು ನಿರ್ವಹಿಸಿದರು. ರಾಷ್ಟ್ರಕೂಟ ಮನೆತನಗಳಲ್ಲಿ ಮಳಖೇಡದ ಶಾಖೆ ಪ್ರಮುಖವಾದುದು.[೩೪] ಬಳ್ಳಾರಿ ಜಿಲ್ಲೆಯಲ್ಲಿ ರಾಷ್ಟ್ರಕೂಟರ ಆಳ್ವಿಕೆ ಸುಮಾರು ಕ್ರಿ.ಶ.೭೯೮ ರಿಂದ ಕ್ರಿ.ಶ.೯೮೨ರ ವರೆಗೆ ಇದ್ದಿತೆಂದು ಈ ಜಿಲ್ಲೆಯ ವಿವಿಧ ಕಡೆ ದೊರೆತ ಶಾಸನಗಳು ದೃಢಪಡಿಸಿವೆ.

ಚಾಲುಕ್ಯ ಕುಟುಂಬದ ಎರಡನೇ ತೈಲಪನಿಂದ ರಾಷ್ಟ್ರಕೂಟರ ಅರಸ ಎರಡನೇ

ಕರ್ಕನು ಯುದ್ಧದಲ್ಲಿ ಸೋತು ರಾಜ್ಯ ಕಳೆದುಕೊಂಡನು. ಕ್ರಿ.ಶ.೯೯೫ರ ಬಾಗಳಿ ಶ್ರೀ ಕಲ್ಲೇಶ್ವರ ದೇವಾಲಯದ ಒಂದು ಶಾಸನದ ಪ್ರಕಾರ ಚಾಲುಕ್ಯರ ಸಾಮಂತ ಅರಸ ರಾಷ್ಟ್ರಕೂಟರ ಮೂರನೇ ಕೃಷ್ಣ (ಕ್ರಿ.ಶ.೯೩೯–೯೬೭) ಕೋಗಳಿ–೫೦೦ಕ್ಕೆ ಒಡೆಯನಾಗಿದ್ದನು. ಕೋಗಳಿಪ್ರದೇಶ ಈಗಿನ ಹರಪನಹಳ್ಳಿ ಮತ್ತು ಬಳ್ಳಾರಿಜಿಲ್ಲೆಯ ಹಡಗಲಿ ತಾಲೂಕು ಪ್ರದೇಶಗಳನ್ನು ಒಳಗೊಂಡಿತ್ತು. ಇದೇ ದೇವಾಲಯದ ಕ್ರಿ.ಶ.೯೭೨–೯೭೩ರ ಶಾಸನವು ಈ ವಂಶದ ಖೊಟ್ಟಿಗನ ವಿಚಾರವನ್ನು ತಿಳಿಸುತ್ತದೆ. ಕುಡತಿನಿ ಶಾಸನವು ಈ ಇಬ್ಬರು ಅರಸರ ಬಗ್ಗೆ ವಿವರಿಸುತ್ತದೆ. ಕ್ರಿ.ಶ.೯೭೨–೭೩ರ ವರೆಗೆ ಭೂತುಗದೇವನು ಖೊಟ್ಟಗನ ಸಾಮಂತನಾಗಿ ಕೋಗಳಿಗೆ ರಾಜ್ಯಪಾಲನಾಗಿದ್ದನು. ಗಂಗರ ಸಾಮಂತ ಅರಸನಾದ ಪಾಂಚಾಲ ದೇವನು ಭೂತುಗನನ್ನು ಯುದ್ಧದಲ್ಲಿ ಸೋಲಿಸಿ ಕೋಗಳಿಯಿಂದ ಹೊರಹಾಕಿದನು. ತರುವಾಯ ಚಾಲುಕ್ಯರ ಎರಡನೇ ತೈಲಪನು ಭೂತುಗನ ಸಹಾಯ ಪಡೆದು ಪಾಂಚಾಲ ದೇವನನ್ನು ಯುದ್ದದಲ್ಲಿ ಸೋಲಿಸಿ ಬಳ್ಳಾರಿ ಪ್ರದೇಶವನ್ನು ಚಾಲುಕ್ಯರ ಅಧೀನಕ್ಕೆ ಒಳಪಡಿಸಿದನು. ಎರಡನೇ ತೈಲಪನಿಗೆ ಅಹಮಲ್ಲನೆಂಬ ಬಿರುದಿದ್ದಿತು. ಆಗ ಭೂತುಗ ದೇವನನ್ನು ಎರಡನೇ ತೈಲಪನು ತೋರುಗಲ್ಲಿಗೆ ರಾಜ್ಯಪಾಲನನ್ನಾಗಿ ನೇಮಿಸಿದನು. ನಂತರ ಕದಂಬರ ಆರ್ಯವರ್ಮ ಮತ್ತು ಆದಿತ್ಯವರ್ಮರು ಕೋಗಳಿಯ ರಾಜ್ಯಪಾಲರಾಗಿದ್ದರು. ಹರಪನಹಳ್ಳಿ ತಾಲೂಕು ಚಿರಸ್ತಹಳ್ಳಿ ಗ್ರಾಮದ ಶಂಕರಸ್ವಾಮಿಗುಡಿಯ ಶಾಸನದ ಪ್ರಕಾರ ಕ್ರಿ.ಶ.೯೩೧ರಿಂದ ೯೩೭ರಲ್ಲಿ ಯುದ್ಧ ಭಟನಾದ ಪಾಡಿಗನೊಳಂಬ ಎನ್ನುವವನು ಬೇರೆಯವರ ಆಕ್ರಮಣದ ವಿರುದ್ಧ ಹೋರಾಡಿ ಮಡಿದನು. ಆಗ ರಾಷ್ಟ್ರಕೂಟರ ಆಳ್ವಿಕೆಗೊಳಪಟ್ಟ ಈ ಪ್ರದೇಶದಲ್ಲಿ ಮೃತನ ಕುಟುಂಬಕ್ಕೆ ಕೆಲ ನೀರಾವರಿ ಮತ್ತು ಒಣಭೂಮಿಯನ್ನು ಅಯ್ಯಪ್ಪ ದೇವನು ಕೊಟ್ಟಿದ್ದು ತಿಳಿದುಬರುತ್ತದೆ. ಹಂಪಿ, ಕುಡತಿನಿ, ಕುರುಗೋಡು, ಕಂಪ್ಲಿ, ಕುಮಾರಸ್ವಾಮಿ ಬೆಟ್ಟಗಳಲ್ಲಿ ಇವರ ಶೈಲಿಯನ್ನು ಹೋಲುವ ದೇವಾಲಯಗಳು ಕಂಡು ಬಂದಿವೆ. ಸಂಡೂರಿನ ಕಾರ್ತಿಕೇಯ ದೇವಾಲಯಕ್ಕೆ ೨ನೇ ಕೃಷ್ಣನ ಆದೇಶದಂತೆ ಅವನ ಸಾಮಂತ ಅರಸ ಕನ್ನನು ದತ್ತಿ ನೀಡಿದ ವಿವರ ಅಲ್ಲಿನ ಪಾರ್ವತಿ ದೇವಾಲಯದ ಶಾಸನದಿಂದ ತಿಳಿದುಬರುತ್ತದೆ. ಅಲ್ಲದೇ ಸ್ವತಃ ೨ನೇ ಕೃಷ್ಣನು ಅದೇ ಕುಮಾರಸ್ವಾಮಿ ದೇವಾಲಯಕ್ಕೆ ಅಂದು 'ತಟಾಕ' (ಬಹುಶ: ಅದು ಇಂದಿನ ತಾರಾನಗರವೇ ಇರಬೇಕು) ಎಂದು ಕರೆಯಲಾಗುತ್ತಿದ್ದ ಕೆರೆಯಪಳ್ಳಿಯನ್ನು ಶ್ರೀ ಸ್ವಾಮಿಯ ಸೇವೆಗಾಗಿ ದತ್ತಿ ನೀಡಿದನು.[೩೫] ಇವುಗಳ ಆಧಾರದಿಂದಲೂ ರಾಷ್ಟ್ರಕೂಟರು ನೇರವಾಗಿ ಇಲ್ಲವೇ ತಮ್ಮ ಸಾಮಂತ ಅಧೀನಾಧಿಕಾರಿಗಳ ಮುಖೇನ ಈಗಿನ ಬಳ್ಳಾರಿ ಜಿಲ್ಲೆಯ ಹಂಪಿ ಹಾಗೂ ಅದರ ಆಸುಪಾಸಿನ ಪ್ರದೇಶಗಳಲ್ಲಿ ಅನೇಕ ಪ್ರಜಾಹಿತ ಕಾರ್ಯಗಳನ್ನು ಕೈಗೊಂಡು ಜನರಿಂದ ಮೆಚ್ಚುಗೆ ಗಳಿಸಿದ್ದರೆಂದು ಹೇಳಬಹುದು. ಹಂಪಿಯಲ್ಲಿ ರಾಷ್ಟ್ರಕೂಟರ ಶಾಸನ ದೊರೆತಿಲ್ಲವಾದರೂ, ಈ ಪರಿಸರದ ಸಂಡೂರು ಕುಮಾರಸ್ವಾಮಿಬೆಟ್ಟ, ಕುಡಿತಿನಿ, ಕೊಳಗಲ್ಲು ಮುಂತಾದ ಸ್ಥಳಗಳಲ್ಲಿ ಅವರ ವಾಸ್ತು ರಚನೆಗಳೊಂದಿಗೆ ಶಾಸನಗಳೂ ಲಭ್ಯವಾಗಿವೆ.

ಆದರೆ ಅವರ ಅಧೀನ ಆಡಳಿತಕ್ಕೊಳಪಟ್ಟ ಇಲ್ಲಿನ ಮನ್ಮಥ ತೀರ್ಥದ ಬಳಿಯ ದುರ್ಗಾ ದೇವಾಲಯದ ಸಮೀಪದಲ್ಲಿ ರಾಷ್ಟ್ರಕೂಟರ ವಾಸ್ತು ಲಕ್ಷಣಗಳುಳ್ಳ ಹಲವು ದೇವಾಲಯಗಳು ನಿರ್ಮಾಣವಾಗಿವೆ. ಅವುಗಳಲ್ಲಿ ಮಲ್ಲಿಕಾರ್ಜುನ, ದುರ್ಗಾ, ಕಾಲಭೈರವ, ವಿರೂಪಾಕ್ಷ, ಹಂಪಾದೇವಿ ಮತ್ತು ಚಕ್ರತೀರ್ಥದ ಬಳಿಯ ಕೆಲವು ದೇವಾಲಯಗಳು ಮುಖ್ಯವಾಗಿವೆ. ಇವು ಅವರ ಕಾಲಘಟ್ಟದಲ್ಲಿಯೇ ನಿರ್ಮಾಣವಾಗಿವೆ ಎಂದು ಅವರ ವಾಸ್ತು ಶೈಲಿಯ ಆಧಾರದಿಂದ ಹೇಳಬಹುದು.

ಊ) ಕಲ್ಯಾಣಿ ಚಾಲುಕ್ಯರು

ಕಲ್ಯಾಣಿಯನ್ನು ರಾಜಧಾನಿಯನ್ನಾಗಿಟ್ಟುಕೊಂಡು (ಕ್ರಿ.ಶ.೯೭೩-೧೧೯೮) ಆಳ್ವಿಕೆ ಮಾಡಿದ ಇವರನ್ನು ಕಲ್ಯಾಣಿ ಚಾಲುಕ್ಯರೆಂದು ಕರೆಯಲಾಗುತ್ತದೆ. ರಾಷ್ಟ್ರಕೂಟ ದೊರೆ ೨ನೇ ಕರ್ಕನನ್ನು ಚಾಲುಕ್ಯ ವಂಶದ ಇಮ್ಮಡಿ ತೈಲಪನು ಅಧಿಕಾರದಿಂದ ಕೆಳಗಿಳಿಸಿ ಈ ವಂಶವನ್ನು ಸ್ಥಾಪಿಸಿದನು. ೨ನೇ ತೈಲಿನ ಶಾಸನಗಳು ಹಂಪಿಗೆ ಸಮೀಪದ ಹರಪನಹಳ್ಳಿ ತಾಲೂಕಿನ ಬಾಗಳಿ ಮತ್ತು ಕೋಗಳಿಯ ದೇವಾಲಯ ಮತ್ತು ಬಸದಿಗಳಲ್ಲಿ ದೊರಕುತ್ತವೆ. ೫ನೇ ವಿಕ್ರಮಾದಿತ್ಯ ಅರಸನು ಕ್ರಿ.ಶ.೧೦೦೮ರಂದ ೧೦೧೫ರವರೆಗೆ ನೊಳಂಬವಾಡಿ ೩೨೦೦ವನ್ನು ಕೋಗಳಿ ೫೦೦ ಬಲಕುಂದಿ ೩೦೦ ಕುರುಗೋಡು ಮುಖ್ಯಪಟ್ಟಣ ಮತ್ತು ಇತರ ಪ್ರದೇಶಗಳನ್ನು 'ಯಿರಿವ ನೊಳಂಬಾಧಿರಾಜ'ನೆಂಬ ಸಾಮಂತ ಅರಸನಿಂದ ಆಳುತ್ತಿದುದ್ದು ಬಾಗಳಿಯ ಎರಡು ಶಾಸನಗಳಿಂದ ಗೊತ್ತಾಗುತ್ತದೆ. ಜಯಸಿಂಹನ ಮಗನೇ ಮೊದಲನೇ ಸೋಮೇಶ್ವರ (ಕ್ರಿ.ಶ.೧೦೪೨-ಕ್ರಿ.ಶ.೧೦೬೮) ತೈಲಪನ ತರುವಾಯ ಕಾಣಬರುವ ಶಕ್ತದೊರೆ. ಈತ ಕೋಗಳಿಯಿಂದ ಆಳ್ವಿಕೆ ಮಾಡಿದ ಕುರಿತು ಅಲ್ಲಿ ದೊರೆತ ಶಾಸನಗಳು ವಿವರಿಸುತ್ತವೆ. ಮುಂದೆ ವಿರೂಪಾಕ್ಷ ಹಂಪಿಯ ಪ್ರಮುಖ ದೇವತೆಯಾಗಿ, ಕಲ್ಯಾಣ ಚಾಲುಕ್ಯ, ಕಲಚೂರಿಗಳ ಕಾಲದಲ್ಲಿ ಈ ದೇವಾಲಯ ಜೀರ್ಣೋದ್ಧಾರ ಮತ್ತು ವಿಸ್ತಾರ ರೂಪವನ್ನು ಪಡೆದುಕೊಂಡಿತು.

ಪ್ರಾರಂಭದಲ್ಲಿ ಸೋಮೇಶ್ವರನು ಚೋಳರ ಮೇಲೆ ಜಯ ಪಡೆದಾಗ್ಯೂ ಕಡೆಯಲ್ಲಿ ಅವರಿಂದ ಪರಾಜಿತನಾಗಬೇಕಾಯಿತು. ಆದರೂ ಚಾಲುಕ್ಯ ರಾಜ್ಯದ ಪ್ರದೇಶಗಳು ಇವನ ಕೈಬಿಡದೆ ಭದ್ರವಾಗಿದ್ದವು. ಕ್ರಿ.ಶ.೧೦೬೮ರಲ್ಲಿ ಪ್ರಥಮ ಸೋಮೇಶ್ವರ ಚಕ್ರವರ್ತಿಬಳ್ಳಾರಿ ಜಿಲ್ಲೆಯ "ಪೊಸವಾಡಂಗಲಿ"ಯಲ್ಲಿ ಕೆಲ ಕಾಲ ವಾಸವಾಗಿದ್ದನು. ಈ ವೇಳೆ ಚೋಳರ ರಾಜೇಂದ್ರಚೋಳ ಕಂಪ್ಲಿಯ ಮೇಲೆ ಧಾಳಿಮಾಡಿ ಅದನ್ನು ನಾಶಪಡಿಸಿದ. ಆ ನಂತರ ಸೋಮೇಶ್ವರನು ಇದೇ ಜಿಲ್ಲೆಯ ಹಡಗಲಿ ತಾಲೂಕಿನ ಹಿರೇಕುರುವತ್ತಿ ಬಳಿ ಹರಿವ ತುಂಗಭದ್ರ ನದಿಯಲ್ಲಿ ಸ್ವ-ಪ್ರೇರಣೆಯಿಂದ ಹಾರಿ ಜಲ ಸಮಾಧಿಯನ್ನು ಹೊಂದಿದನು. ಅವನಿಗೆ ಗುಣಮುಖವಾಗದ ಖಾಯಿಲೆಯೂ ಇತ್ತೆಂದು ಹೇಳಲಾಗಿದೆ.[೫೬] ಕ್ರಿ.ಶ.೧೦೭೨ರಲ್ಲಿ ಪ್ರಥಮ ಸೋಮೇಶ್ವರ ಚಕ್ರವರ್ತಿಯ ಪುತ್ರನಾದ ಜಯಸಿಂಹನು ಕೋಗಳಿ, ಬಲ್ಲಕುಂದೆ(ಬಹುಶಃ ಬೆಲಕುಂದಿ ಹಗರಿಬೊಮ್ಮನಹಳ್ಳಿ),

ನೊಳಂಬವಾಡಿಗಳ ಆಡಳಿತವನ್ನು ನಡೆಸಿದಂತೆ ತೋರುತ್ತದೆ. ಸೋಮೇಶ್ವರನ ಮಕ್ಕಳಲ್ಲೊಬ್ಬನಾದ ವಿಷ್ಣುವರ್ಧನನು (ಕ್ರಿ.ಶ.೧೦೬೮ ರಿಂದ ಕ್ರಿ.ಶ.೧೦೬೬) ನೊಳಂಬವಾಡಿ ಪ್ರಾಂತ್ಯವನ್ನಾಳುತ್ತಿದ್ದನೆಂದು ಅದಕ್ಕೆ ಸಂಬಂಧಿಸಿದ ದೊರೆತ ಶಾಸನಗಳಿಂದ ತಿಳಿದುಬರುತ್ತದೆ. ಅಲ್ಲದೆ ಕ್ರಿ.ಶ.೧೦೬೪ ರಲ್ಲಿ ಚಾಲುಕ್ಯರ ಯುವರಾಜ ವಿಷ್ಣುವರ್ಧನ ವಿನಿಯಾದಿತ್ಯ (೧ನೇ ಸೋಮೇಶ್ವರನ ಪುತ್ರ) ಕಂಪಿಲಿ ನೆಲೆವೀಡಿನಿಂದ ನೊಳಂಬವಾಡಿಯನ್ನು ಆಳ್ವಿಕೆ ಮಾಡಿದ ವಿವರ ದೊರೆಯುತ್ತದೆ.

ಕಲ್ಯಾಣಿ ಚಾಲುಕ್ಯ ವಂಶದಲ್ಲಿ ಶ್ರೇಷ್ಠನಾದ ೬ನೇ ವಿಕ್ರಮಾದಿತ್ಯನು (ಕ್ರಿ.ಶ. ೧೦೭೬-೧೧೨೬) ೫೦ವರ್ಷಗಳ ವರೆಗೆ ದಕ್ಷತೆಯಿಂದ ಆಳಿದನು. ಇವನಿಗೆ ವಿಕ್ರಮಾಂಕ ತ್ರಿಭುವನಮಲ್ಲ ಎಂಬ ಬಿರುದುಗಳಿದ್ದವು ಎಂಬುದನ್ನು ಬಾಗಳಿ ಮತ್ತು ಕುಡತಿನಿ, ಅಂಬಳಿಗಳಲ್ಲಿ ದೊರೆತ ಶಾಸನಗಳು ವಿವರಿಸುತ್ತವೆ. ಚೋಳರೊಡನೆ ಕೈಗೊಂಡ ಯುದ್ಧಗಳಲ್ಲಿ ಸಾಮಂತ ಅರಸರಾದ ಉಚ್ಚಂಗಿಯ ಪಾಂಡ್ಯರು ಇವನಿಗೆ ಹೆಚ್ಚಿನ ಸಹಾಯ ನೀಡಿದರು.

ಆರನೇ ವಿಕ್ರಮಾದಿತ್ಯನ ನಂತರ ಸಿಂಹಾಸನಕ್ಕೆ ಬಂದ ಅವನ ಮಗ ಮುಮ್ಮಡಿ ಸೋಮೇಶ್ವರನು (ಕ್ರಿ.ಶ.೧೧೨೬-ಕ್ರಿ.ಶ.೧೧೩೮) ಶಾಂತರೀತಿಯಲ್ಲಿ ಆಳ್ವಿಕೆ ನಡೆಸಿದನು. ಇವನಾದ ಮೇಲೆ ಅಧಿಕಾರಕ್ಕೆ ಬಂದ ಎರಡನೇ ಜಗದೇಕಮಲ್ಲನ (ಕ್ರಿ.ಶ.೧೧೩೮- ಕ್ರಿ.ಶ.೧೧೫೧) ಬಗ್ಗೆ ಉಲ್ಲೇಖಿಸಿರುವ ಕೆಲವು ಶಾಸನಗಳು ಈ ಜಿಲ್ಲೆಯಲ್ಲಿವೆ. ಕ್ರಿ.ಶ.೧೧೪೩ರ ಶಾಸನವೊಂದು ಇವನು ಚೋಳರನ್ನು ರಾಜ್ಯದಿಂದೋಡಿಸಿದನೆಂದೂ, ಹೊಯ್ಸಳ ದೊರೆ ಮೊದಲನೇ ನರಸಿಂಹನ ಮೇಲೆ ದಾಳಿ ಮಾಡಿದನೆಂದೂ ಹೇಳುತ್ತದೆ. ಕುರಗೋಡು ಬಳಿಯ ಉರುವಾಯಿ ಶಾಸನವು ಇವರಿಗೂ ಮತ್ತು ಚೋಳರಿಗೂ ಯುದ್ಧ ನಡೆಯುತ್ತಿದ್ದ ವಿವರವನ್ನು ದಾಖಲಿಸಿದೆ.

ವಿಕ್ರಮಾದಿತ್ಯ ಮತ್ತು ಸೋಮೇಶ್ವರ ದೊರೆಗಳ ಕಾಲದಲ್ಲಿ ವೀರ ಪಾಂಡ್ಯನು ನೊಳಂಬನಾಡಿಗೆ ಮಂಡಲೇಶ್ವರನಾಗಿದ್ದನು. ಕ್ರಿ.ಶ.೧೦೬೧ರ ೩ನೇ ಜಗದೇಕಮಲ್ಲನ ಶಾಸನದಲ್ಲಿ ಮಂಡಿಯಾನಹಟ್ಟಿಯನ್ನು(ಈಗಿನ ಹರಪನಹಳ್ಳಿ ತಾಲೂಕಿನ ಮಾಡಲಗೇರಿ) ಅಮೇಕ ಗ್ರಾಮದ ಕನ್ನಗೌಡನು ತನ್ನ ಬಂಧು ವರ್ಗದಿಂದ ಕ್ರಯವಾಗಿ ಪಡೆದುಕೊಂಡು, ಈಶ್ವರ ದೇವರಿಗೆ ಭೂ-ದಾನ ಬಿಟ್ಟ ಹಾಗು ಗ್ರಾಮಸ್ಥರು ಎಲ್ಲೇರಿ ದೇವೇಶ್ವರ ದೇವರನ್ನು ಪ್ರತಿಷ್ಠಾಪನೆ ಮಾಡಿ ಭೂ-ದತ್ತಿ ಬಿಡುತ್ತಾರೆ.[೩೭]

ಕ್ರಿ.ಶ.೧೧೫೫ ರಿಂದ ಕ್ರಿ.ಶ.೧೧೮೫ರವರೆಗಿನ ಕಾಲಾವಧಿಯಲ್ಲಿ ವಿಜಯಪಾಂಡ್ಯನು ಮಹಾಮಂಡಕೇಶ್ವರನಾಗಿ ಉಚ್ಚಂಗಿಯನ್ನು ರಾಜಧಾನಿಯನ್ನಾಗಿ ನೊಳಂಬವಾಡಿಯನ್ನು ಆಳುತ್ತಿದ್ದನೆಂದು ಹೇಳಲಾಗಿದೆ. ಇವನು ಅಪ್ರತಿಮನೆನಿಸಿ ಅನೇಕ ಶಾಸನಗಳನ್ನು ಈ ಜಿಲ್ಲೆಯಲ್ಲಿ ಬಿಟ್ಟು ಹೋಗಿದ್ದಾನೆ. ಚಾಲುಕ್ಯ ದೊರೆಗಳಿಂದ ಪೂರ್ಣ ಸ್ವಾತಂತ್ರ ಪಡೆದುಕೊಳ್ಳಲು ನಾಲ್ವಡಿ ಸೋಮೇಶ್ಚರನ ವಿರುದ್ಧ ಇವನು ದಂಗೆ ಎದ್ದನೆಂಬುದಾಗಿಯೂ ಶಾಸನಗಳಿಂದ ತಿಳಿದುಬರುತ್ತದೆ.

ಬಳ್ಳಾರಿ ಶಾಸನ ಒಂದರಲ್ಲಿ ವಿಕ್ರಮಾದಿತ್ಯ ತ್ರಿಭವನ ಮಲ್ಲನು ರಾಷ್ಟ್ರಪತಿ, ವಿಷಯಾಪತಿ, ಗ್ರಾಮ ಕೂಟಕ, ಆಯುಕ್ತಕ, ನಿಯುಕ್ತಕ, ಅಧಿಕಾರಿ, ಮಹತ್ತರ ಮತ್ತಿತರಿಗೆ ಆಜ್ಞಾಪಿಸಿದುದ್ದನ್ನು ಹೇಳಲಾಗಿದೆ. ಇವರೆಲ್ಲರೂ ಕೆಳ ದರ್ಜೆಯ ಅಧಿಕಾರಿಗಳಾಗಿರಬಹುದೆಂದು ತೋರುತ್ತದೆ. ಈ ಮೇಲಿನ ವಿವರಗಳಿಂದ ಹಂಪಿಯವರೆಗೆ ಇವರ ಆಡಳಿತ ವಿಸ್ತರಿಸಿತ್ತೆಂದು ಹೇಳಬಹುದು.

ಋ) ನೊಳಂಬರ ಆಳ್ವಿಕೆ

ಗಂಗ, ಕಲ್ಯಾಣಿ ಚಾಲುಕ್ಯ, ರಾಷ್ಟ್ರಕೂಟ, ಚೋಳ ಮತ್ತು ಹೊಯ್ಸಳರ ಮಹಾಸಾಮಂತರಾಗಿ ಆಳಿದ ನೊಳಂಬರು ಖ್ಯಾತಿವೆತ್ತ ಸಾಮಂತ ಕುಲದವರು. ಇವರು ಆಳುತ್ತಿದ್ದ ಒಟ್ಟು ಪ್ರದೇಶವನ್ನು ನೊಳಂಬವಾಡಿ ಅಥವಾ ನೊಳಂಬವಾಡಿ ೩೨೦೦ ನಾಡು ಎಂದು ಕರೆಯುತ್ತಿದ್ದರು. ಬಳ್ಳಾರಿ ಜಿಲ್ಲೆಯು ಇದರ ಒಂದು ಭಾಗವಾಗಿತ್ತು. ಉಚ್ಚಂಗಿದುರ್ಗ, ಆಂಧ್ರದ ಮಡಕಶಿರಾ ತಾಲೂಕಿನ ಹೆಂಜೇರು, ಹೊಸಪೇಟೆ ತಾಲೂಕಿನ ಹಂಪಿ ಸಮೀಪದ ಕಂಪ್ಲಿಗಳು ಅಂದಿನ ಪ್ರಮುಖ ಪಟ್ಟಣಗಳಾಗಿದ್ದವು. ಅಲ್ಲದೇ ಹಂಪಿಗೆ ಸಮೀಪದಲ್ಲಿರುವ ಕೋಗಳಿ(ಹಡಗಲಿ ತಾಲೂಕು) ಮತ್ತು ಕಣೆಕಲ್ಲು (ಆಂಧ್ರದ ರಾಯದುರ್ಗ ತಾಲೂಕು) ನೊಳಂಬವಾಡಿಯ ಎರಡು ಮುಖ್ಯ ಆಡಳಿತದ ವಿಭಾಗಗಳಾಗಿದ್ದವು. ನೊಳಂಬ ಮನೆತನದ ಅರಸರಿಗೆ ನೊಳಂಬ ಪಲ್ಲವರೆಂದು ಹೆಸರು. ಇದರಿಂದ ಇವರದು ಪಲ್ಲವ ಭಿನ್ನ ಶಾಖೆಯೆಂಬುವುದು ವ್ಯಕ್ತವಾಗುವುದು. ಮುಖ್ಯ ರಾಜಧಾನಿಯಾದ ಹೇಮಾವತಿ ಅಥವಾ ಹೆಂಜೇರುವಿನ ಸ್ತಂಭ ಶಾಸನದಲ್ಲಿ ಇವರ ವಂಶವೃಕ್ಷವಿದೆ. ಇವರು ಈಶ್ವರಿ ವಂಶದವರೆಂದೂ, ಕಂಚಿಯ ಪಲ್ಲವ ರಾಜ ತ್ರಿಣಯನು ಈ ವಂಶದ ಸ್ಥಾಪಕ. ಬಳ್ಳಾರಿ ಮತ್ತು ಚಿತ್ರದುರ್ಗ ಮತ್ತು ಇತರ ಭಾಗಗಳಲ್ಲಿ ಇವರ ಕಾಲದ ಶಾಸನಗಳು ದೊರೆತಿವೆ.

ಪಲ್ಲವರ ಮಹಾರಾಣಿಯೊಬ್ಬಳು ಹಂಪೆಯ ಪಂಪಾಪತಿಗೆ ಭೂದಾನ ನೀಡಿದ ವಿಷಯ ಕ್ರಿ.ಶ.೧೦೧೩ರ ಗೋಣಿಹಾಳು ಶಾಸನದಲ್ಲಿದೆ. ಇವರ ಮೊದಲನೆಯ ಶಾಸನವು ಜಗತ್ತುಂಗ ಪ್ರಭು ವರ್ಷ ಪ್ರತಾಪವಲೋಕ ಶ್ರೀವಲ್ಲಹ ತನ್ನ ಚಕ್ರಾದಿಪತ್ಯವನ್ನಾಳುತ್ತಿರಲು, ಪರಮೇಶ್ವರ ಪಲ್ಲವಾಧಿ ನೊಳಂಬಾಳಿಗೆ ೧೦೦೦ ಮತ್ತು ನಿರ್ಗುಂದ ೩೦೦ ನಾಡುಗಳನ್ನು ಸಾಮಂತನಾಗಿ ಆಳುತ್ತಿದ್ದು, ಪರಮೇಶ್ವರನ ರಾಣಿ ಗಾವಗನಬ್ಬೆ ಸಂಕ್ರಾಂತಿಯಂದು ವಿಷ್ಣುವನ್ನು ಭಜಿಸಿದುದನ್ನು ಮತ್ತು (ನಾಗಮಾರಬ್ಬೆ ಪ್ರಾಯಶಃ ಪರಮೇಶ್ವರನ ಮತ್ತೊಬ್ಬ ರಾಣಿ) ಶಿವಾಲಯಕ್ಕೆ ನೀಡಿದ ಭೂ ದತ್ತಿಯನ್ನು ತಿಳಿಸುವುದು. ನಿಟ್ಟೂರು ಕಲ್ಲೇಶ್ವರ ದೇವಾಲಯದ ಕ್ರಿ.ಶ.೧೦೩೫ ರ ಶಾಸನವು ಪಲ್ಲವ ಕುಲಾಭರಭ ಉದಯಾದಿತ್ತಯ ದೇವ ನೊಳಂಬ ಪಲ್ಲವ ಪೆರ್ಮಾಡಿ ದೇವ ಚಾಲುಕ್ಯ ಜಯಸಿಂಹ ದೇವನ ಸಾಮಂತನಾಗಿ ಆಳುತ್ತಿದ್ದನೆಂದು ಉಲ್ಲೇಖಿಸುತ್ತದೆ.[೩೮] ಇದೇ ಶಾಸನದಿಂದ ಕಂಪ್ಲಿಯು ಈತನ ರಾಜಧಾನಿಯಾಗಿತ್ತೆಂದು ತಿಳಿದುಬರುತ್ತದೆ. ಜಗದೇಕಮಲ್ಲ

ಇಮ್ಮಡಿ ನೊಳಂಬ ಪಲ್ಲವ-ಪೆರ್ಮಾಡಿಯು ಚಾಲುಕ್ಯರ ಸಾಮಂತಾಧಿಕಾರಿಯಾಗಿ ಆಳುತ್ತಿದ್ದನೆಂದು ಶಾಸನವೊಂದರಿಂದ ತಿಳಿದು ಬರುವುದು. ಕ್ರಿ.ಶ. ೧೦೨೨ರ ಕಂಪ್ಲಿ ಶಾಸನವು ಈತನು ಕಂಪ್ಲಿಯಿಂದ ಆಳ್ವಿಕೆ ಮಾಡುತ್ತಿದ್ದನೆಂಬುದನ್ನು ದೃಢಪಡಿಸಿದೆ. ಕ್ರಿ.ಶ. ೧೦೧೮ರಲ್ಲಿ ನೊಳಂಬ ಪಲ್ಲವ ಅರಸ ಉದಯಾದಿತ್ಯ ಕಂಪಿಲಿಯ ಸ್ಥಳದಿಂದ ಆಳ್ವಿಕೆ ಮಾಡುತ್ತಿದ್ದ. ಉತ್ತರಾಯಣ ಸಂಕ್ರಾಂತಿ ಪುಣ್ಯಕಾಲದಂದು ಪಂಪಾತೀರ್ಥಕ್ಕೆ ಬಂದು ಸೋಮಸಿಂಗ (ಘ) ಭಳಾರರ ಪಾದ ತೊಳೆದು ಬಾಗಳಿಯ ಕಲಿದೇವರಿಗೆ ದಾನ ಕೊಡುತ್ತಾನೆ. ಉದಯಾದಿತ್ಯದೇವನ ಆದೇಶದ ಮೇರೆಗೆ ಪೆರ್ಗಡೆ ನರಸಿಂಘಯ್ಯನು ಕಾಳಾಮುಖ ಪಂಡಿತ ಸೋಮಸಿಂಘ ಭಳಾರರೊಂದಿಗೆ ಬಾಗಳಿಗೆ ಬಂದು, ಅಲ್ಲಿಯ ಮಹಾಜನರ ಅಧ್ಯಕ್ಷತೆಯಲ್ಲಿ ಪಂಪಾಪುರತೀರ್ಥದಲ್ಲಿ ಅರಸನು ಮಾಡಿದ ದಾನವನ್ನು ಸ್ಥಳೀಯರ ಸಮ್ಮುಖದಲ್ಲಿ ಕೊಡುತ್ತಾನೆ.[೩೯]

ಕ್ರಿ.ಶ. ೧೦೪೬ರ ಮೊರಗೇರಿ ಶಾಸನದಲ್ಲಿ ತ್ರೈಲೋಕ್ಯಮಲ್ಲ ನನ್ನಿನೊಳಂಬ ಪಲ್ಲವ ಪೆರ್ಮಾಡಿ ದೇವನ ದಂಡನಾಯಕ ತಿಕಣ್ಣ ಮತ್ತು ಲೆಂಕಸಾಸಿರ್ವರು ಕಾರ್ತಿಕ ಹುಣ್ಣಿಮೆ ಸೋಮಗ್ರಹಣದ ದಿನ ಮೊರಗೇರಿಯಲ್ಲಿಯ ಭೂಮಿಯನ್ನು ಬಲ್ಲವರಸರಿಂದ ಪಡೆದು, ವಿರೂಪಾಕ್ಷದೇವರ ಸಮಕ್ಷಮದಲ್ಲಿ ನೊಳಂಬೇಶ್ವರ ದೇವರಿಗೆ ವಿದ್ಯಾಭ್ಯಾಸ ಮುಂತಾದವುಕ್ಕೆ ಸೋಮೇಶ್ವರ ದೇವರ ಕಾಲು ತೊಳೆದು ಕೊಡುತ್ತಾರೆ. ಹಂಪಿ ಮತ್ತು ಅದರ ಸುತ್ತಲಿನ ಭಾಗಗಳಲ್ಲಿ ನೊಳಂಬರು(ಕ್ರಿ.ಶ.೧೦೪೮- ೧೦೫೪) ಆಳ್ವಿಕೆಯನ್ನು ನಡೆಸಿದರೆಂದು ಇಲ್ಲಿನ ಶಾಸನಗಳಿಂದ ವ್ಯಕ್ತವಾಗುತ್ತದೆ.

ನೊಳಂಬವಾಡಿ ೩೨೦೦೦ರಲ್ಲಿ ಉಚ್ಚಂಗಿದುರ್ಗ ಒಂದು ಮುಖ್ಯ ಪಟ್ಟಣವಾಗಿತ್ತು. ಅಂದು ಈಗಿನ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಕೋಗಳಿ ಮತ್ತು ಕಣೇಕಲ್ಲುಗಳು ನೊಳಂಬವಾಡಿಯ ಎರಡು ಮುಖ್ಯ ವಿಭಾಗಗಳಾಗಿದ್ದವು. ರಾಷ್ಟ್ರಕೂಟರ ಅರಸ ಮೂರನೇ ಕೃಷ್ಣನು ನನ್ನಿಗನ ಪುತ್ರ ಅನ್ನಿಗನನ್ನು ಯುದ್ಧದಲ್ಲಿ ಸೋಲಿಸಿ ಚೋಳರ ವಿರುದ್ಧ ಯುದ್ಧ ಮಾಡಲು ನೇಮಿಸಿದನೆಂದು ತಿಳಿದುಬರುತ್ತದೆ. ತರುವಾಯ ನೊಳಂಬರು ಕಲ್ಯಾಣಿ ಚಾಲುಕ್ಯರ ಸಾಮಂತ ಅರಸರಾಗಿ ಹಂಪಿ ಸಮೀಪದ ಕಂಪಲಿ ಮುಖ್ಯ ಪಟ್ಟಣದಿಂದ ರಾಜ್ಯವಾಳಿದ್ದು ಗೊತ್ತಾಗುತ್ತದೆ. ಗೊನಹಾಳಿನ ತ್ರುಟಿತ ಶಾಸನದಲ್ಲಿ ಚಾಲುಕ್ಯರ ಮಹಾಮಂಡಲೇಶ್ವರನಾಗಿದ್ದ ನೊಳಂಬಾಧಿ ರಾಜನು ಪಂಪಾ(ತೀರ್ಥದ) ಮಹಾಬಲೇಶ್ವರ ದೇವರಿಗೆ ದಾನಕೊಟ್ಟ ಉಲ್ಲೇಖವಿದೆ. ಅಲ್ಲದೆ "ಕ್ರಿ.ಶ.೧೦೧೮ರ ಚಾಲುಕ್ಯ ಜಯಸಿಂಹನ ಕಾಲದ ಬಾಗಳಿ ಶಾಸನದಲ್ಲಿ ನೊಳಂಬ ಉದಯಾದಿತ್ಯ ಪಂಪಾತೀರದ ತೀರ್ಥಕ್ಕೆ ಬಿಜಯಂಗೆಯ್ದು, ಬಾಗಳಿ ಕಲ್ಲೇಶ್ವರ ದೇವರಿಗೆ ದಾನ ನೀಡಿದ ವಿವರವಿದೆ. ಮತ್ತು ಕ್ರಿ.ಶ. ೧೦೫೩ರ ಒಂದನೇ ಸೋಮೇಶ್ವರನ ಪುರದ ಶಾಸನದಲ್ಲಿ 'ಹಂಪೆಯ ತೀರ್ಥ'ದಲ್ಲೂ ಎಂದು ಉಲ್ಲೇಖಿಸಿದ್ದು, ಪಂಪಾತೀರ್ಥವು ದೂರದವರೆಗೆ ಪ್ರಖ್ಯಾತಿ ಪಡೆದಿತ್ತೆಂದು ಇದರಿಂದ ತಿಳಿದುಬರುತ್ತದೆ. ಈ ಎಲ್ಲಾ ಶಾಸನಗಳ ಪ್ರಕಾರ ಈ ಪ್ರದೇಶವು

ನೊಳಂಬವಾಡಿ ೩೨೦೦೦ ಪ್ರಾಂತ್ಯಕ್ಕೆ ಸೇರಿತ್ತು. ಅದರ ರಾಜಧಾನಿ ಕಂಪಿಲೆಗೆ ಸಮೀಪದಲ್ಲಿತ್ತು.[೫೦] ಹಂಪಿ ಪರಸರದಲ್ಲಿ (ಬಳ್ಳಾರಿ ಜಿಲ್ಲೆಯಲ್ಲಿ) ಆಳ್ವಿಕೆ ನಡೆಸಿದ ನೊಳಂಬರು ಕರ್ನಾಟಕ ಸಾಮಂತ ರಾಜಮನೆತನಗಳಲ್ಲೇ ವಿಶಿಷ್ಟ ಸ್ಥಾನ ಪಡೆದಿದ್ದಾರೆ. ತಮ್ಮ ಸಾಮಂತಿಕೆಯ ಅವಧಿಯೊಳಗೆ ತಮ್ಮ ಪ್ರಭುಗಳ ಸಾರ್ವಭೌಮತ್ವದ ಬಿರುದುಗಳನ್ನು ಧರಿಸಿಕೊಂಡು ಮೆರೆದರು. ಇವರ ಕಾಲದ ಕೆಲ ದೇವಾಲಯಗಳು ಹಂಪಿಯಲ್ಲಿ ನಿರ್ಮಾಣವಾಗಿವೆ. ಅಲ್ಲದೆ ಈ ಮೇಲೆ ಉಲ್ಲೇಖಿಸಿದ ಶಾಸನಗಳ ಸಹಾಯದಿಂದ ಈ ಪ್ರದೇಶ ನೊಳಂಬರ ಆಳ್ವಿಕೆಗೆ ಒಳಪಟ್ಟಿತ್ತೆಂದು ದೃಢಪಡಿಸಬಹುದಾಗಿದೆ.

೩.೨.೨ ಮಧ್ಯಕಾಲೀನ ಕಾಲ

ಕಲ್ಯಾಣದ ಕಲಚೂರಿಗಳಿಂದ (ಕ್ರಿ.ಶ. ೧೧ನೇ ಶತಮಾನ)ವಿಜಯನಗರದ ಅವನತಿವರೆಗಿನ (ಕ್ರಿ.ಶ.೧೫೬೫ ರವರೆಗೆ) ಕಾಲವನ್ನು ನಾವು ಮದ್ಯಕಾಲೀನ ಕಾಲ ಎಂದು ಕರೆಯಬಹುದು. ಈ ಕಾಲಾವಧಿಯಲ್ಲಿ ದೇವಗಿರಿಯ ಯಾದವರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು ಮತ್ತು ವಿಜಯನಗರದ ಅರಸರು ಹಾಗು ಪಾಳೇಯಗಾರರು ಪ್ರಮುಖವಾಗಿ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದರು. ಆ ಕುರಿತ ಸ್ಥೂಲ ರಾಜಕೀಯ ಇತಿಹಾಸವನ್ನು ಈ ಇಲ್ಲಿ ವಿಶ್ಲೇಷಿಸಲಾಗಿದೆ.

ಅ) ಕಲ್ಯಾಣದ ಕಲಚೂರಿಗಳು

ಸಾಮಂತರಲೊಬ್ಬನಾದ ಕಳಚೂರ್ಯ ವಂಶದ ೨ನೆಯ ಬಿಜ್ಜಳನು ಕ್ರಿ.ಶ.೧೧೫೩ರಲ್ಲಿ ಸ್ವತಂತ್ರನಾಗಿ ಚಾಲುಕ್ಯ ದೊರೆ ಮುಮ್ಮಡಿ ತೈಲಪನನ್ನು ಬಂಧಿಸಿ, ಕಲ್ಯಾಣ ನಗರದಲ್ಲಿ ಕಳಚೂರ್ಯ ವಂಶವನ್ನು ಸ್ಥಾಪಿಸಿದನು. ಕಳಚೂರ್ಯರ ಕಾಲವಧಿಯಲ್ಲಿ ಪ್ರಮುಖ ಧಾರ್ಮಿಕ ಕ್ರಾಂತಿ ಉಂಟಾಯಿತಾದರೂ, ಅವರಿಗೆ ಸಂಬಂಧಪಟ್ಟ ಮಾಹಿತಿಗಳು ಅಷ್ಟೇನು ಗಮನಾರ್ಹವಾದವುಗಳಲ್ಲ. ಈ ವಂಶದ ೪ನೇ ಸೋಮೇಶ್ವರನು(ಕ್ರಿ.ಶ.೧೧೫೮–೧೧೯೪) ಹಂಪಿ ಸಮೀಪದ ಕುರುಗೋಡುವಿನಲ್ಲಿ ನೆಲೆಸಿ, ಹೊಯ್ಸಳರನ್ನು ಮತ್ತು ಸೆವುಣರನ್ನು ಗೆದ್ದನು. ಈತ ರಾಜ್ಯವಾಳುತ್ತಿದ್ದಾಗ ಸಿಂಧವಾಡಿ ರಾಚಮಲ್ಲನು ಕುರುಗೋಡು ಕೋಟೆಯಿಂದ ಬಲ್ಲಕುಂದೆ ರಾಜ್ಯವನ್ನು ಆಳುತ್ತಿದ್ದನೆಂದು ಕುರುಗೋಡಿನ ಕ್ರಿ.ಶ.೧೧೮೧–೮೨ ರ ಶಾಸನ ವಿವರಿಸುತ್ತದೆ. ಈ ಮೇಲಿನ ವಿವರಗಳು ಈ ಪರಿಸರದಲ್ಲಿ ಕಲ್ಯಾಣದ ಕಲಚೂರಿಗಳು ಆಳ್ವಿಕೆ ನಡೆಸಿದ್ದನ್ನು ದೃಢಪಡಿಸಿವೆ.[೫೧] ಕ್ರಿ.ಶ.೧೧೬೩ರ ಶಾಸನದ ಪ್ರಕಾರ ಕಳಚೂರಿ ಅರಸರ ಬಿಜ್ಜಳನು ಶ್ರೀ ವಿರೂಪಾಕ್ಷನ ಸನ್ನಿಧಿಯಲ್ಲಿ ಮಹಾದಾನಗಳನ್ನು ನೀಡುತ್ತಿದ್ದನು. ಇವನ ಕಾಲಕ್ಕೆ ಸೇರಿದ ಶಾಸನವೊಂದು ಹರಿಹರದಲ್ಲಿ ದೊರೆತಿದೆ.[೫೨]

ಕ್ರಿ.ಶ.೧೧೬೩ರಲ್ಲಿ ಕಲಚೂರಿ ಅರಸ ಬಿಜ್ಜಳನು ಹಂಪಿಯ ವಿರೂಪಾಕ್ಷನ ಸನ್ನಿದಾನದಲ್ಲಿ ಮಹಾದಾನಗಳನ್ನು ಮಾಡುತ್ತಿದ್ದ ಸಂದರ್ಭದಲ್ಲಿ ಬೆಳ್ವಲನಾಡು ಮತ್ತು ವತ್ಸೆಯನಾಡಿನ

ಅಧಿಕಾರಿ ದಂಡನಾಯಕ ಅಮ್ಮಣಯ್ಯನು ಅರಸನ ಅನುಮತಿ ಪಡೆದು ಎಡೆಯಹಳ್ಳಿಯನ್ನು ಕುಕನೂರ ಮಲ್ಲಿಕಾರ್ಜುನ ದೇವರಿಗೆ ದಾನವಾಗಿ ಕೊಟ್ಟನು. ಕಲಚೂರಿಗಳು ಹಾಗೂ ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯಗಳ ಅಂತ್ಯದೊಂದಿಗೆ ಕರ್ನಾಟಕದಲ್ಲಿ ಸೇವುಣ ಮತ್ತು ಹೊಯ್ಸಳರು ಅಧಿಕಾರಕ್ಕೆ ಬಂದರು.

ಆ) ಕುರಗೋಡು ಸಿಂದರು

ಸಿರುಗುಪ್ಪ ತಾಲೂಕು ಕೇಂದ್ರದಿಂದ ಸು. ೧೨ಕಿ.ಮೀ. ದೂರದಲ್ಲಿರುವ ಕುರುಗೋಡು ಸಿಂದರ ವಂಶಸ್ಥರ ಆಳ್ವಿಕೆಗೆ ಒಳಪಟ್ಟಿತ್ತು. ಇವರ ಆಳ್ವಿಕೆಯ ಕಾಲ ಕ್ರಿ.ಶ.ಸು.೯೦೦ ರಿಂದ ೧೨೩೯ರವರೆಗೆ. ಕುರುಗೋಡು ಸಿಂದರು ತಮ್ಮ ಮೂಲ ಪುರುಷ ನಿಡುದೋಳ ಸಿಂದನೆಂದು ಒಪ್ಪಿಕೊಂಡಿದ್ದಾರೆ. ಇವರು ತಮ್ಮನ್ನು 'ಕರಹಾಟ' ಪಯರವರಾಧೀಶ್ವರ'ರೆಂದು ಕರೆದುಕೊಂಡಿದ್ದಾರೆ. ಬಹುಶಃ ಈ ವಂಶದವರು ಮೊದಲಿನ 'ಕರಹಾಟ' ಅಂದರೆ ಇಂದಿನ ಮಹಾರಾಷ್ಟ್ರದ 'ಕರಹಾಡ'ದಲ್ಲಿ ವಾಸಿಸುತ್ತಿದ್ದು, ಮುಂದೆ ರಾಜಕೀಯ ಸ್ಥಿತ್ಯಂತರದಿಂದಾಗಿ ಬೆಳಗಿತ್ತಿ ಪ್ರದೇಶದಲ್ಲಿ ಬಂದು ನೆಲೆಸಿರಬೇಕು. ಅವರು ತಮ್ಮ ಮೂಲ ನೆಲೆಯನ್ನು ಸೂಚಿಸಲು 'ಕರಹಾಟಪುರವರಾಧೀಶ್ವರ'ರೆಂದು ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಕುರಗೋಡು ಮನೆತನದ ಮೊದಲ ಐತಿಹಾಸಿಕ ವ್ಯಕ್ತಿ ಯಾರು ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಎಡವಟ್ಟಿ ನಾಡ ಬೆಳಗುತ್ತಿ ಸಿಂದರ ಆಳ್ವಿಕೆಗೆ ಒಳಪಟ್ಟಿದ್ದರಿಂದ ಇಲ್ಲಿಯ ಸಿಂದದ ದೇವನೇ ಈ ವಂಶದ ಮೊದಲ ಐತಿಹಾಸಿಕ ವ್ಯಕ್ತಿ ಎಂದು ಹೇಳಬಹುದು. ಸಿಂದರದೇವ (ಸುಮಾರು೯೦೦), ವಿಕ್ರಮಾದಿತ್ಯ(೯೨೪), ನಾಗಯ್ಯ, ಬಂದಿಯಣ್ಣ, ನನ್ನಿಯ ಸಿಂದರ(೬೬೭), ಪಿರಿಯ ಚಟ್ಟರಸ, ಅಯ್ಯಣ ಜೋಗರಸ (೧೦೬೦-೧೦೯೦), ಎರಡನೆಯ ಚಟ್ಟರಸ (೧೦೯೦-೧೧೨೦), ಒಂದನೆಯ ಈಶ್ವರದೇವ, ಮಾಚರಸ, ಮಲ್ಲಿದೇವ (೧೧೨೦-೧೧೪೦), ಐಹರಸ(೧೧೪೦-೧೧೫೫), ಎರಡನೆಯ ಈಶ್ವರದೇವ(೧೧೫೫-೧೧೮೫), ಪಾಂಡ್ಯದೇವ(೧೧೮೫-೧೨೦೫), ಎರಡನೆಯ ಮಲ್ಲಿದೇವ, ರಾಯರಸ, ವಿಜಯ, ಮೂರನೆಯ ಈಶ್ವರದೇವ (೧೨೦೫-೧೨೨೯), ಕೇಶವದೇವ (೧೨೨೯-೧೨೩೯) ಇವರು ಈ ವಂಶದಲ್ಲಿ ಆಳ್ವಿಕೆ ಮಾಡಿದ ಅರಸರಾಗಿದ್ದಾರೆ. ಕ್ರಿ.ಶ. ೧೧೯೯ರ ಕಲಿದೇವನ ಹಂಪಿಯ ಶಾಸನದಿಂದ ತಿಳಿಯುವುದೇನೆಂದರೆ ಕುರುಗೋಡು ಸಿಂಧರು ಹಂಪಿಯ ಮೇಲೆ ಹಿಡಿತ ಹೊಂದಿದ್ದರೆಂದು ತಿಳಿದು ಬರುತ್ತದೆ. ಈ ಶಾಸನವು ನಮಗೆ ಕಾಣಸಿಗುವುದು ವಿರೂಪಾಕ್ಷ ದೇವಾಲಯದ ಆವರಣದ ಉತ್ತರಕ್ಕಿರುವ ದುರ್ಗಾ ದೇವಾಲಯದಲ್ಲಿದೆ. ಈ ಶಾಸನದಲ್ಲಿ ವಿರೂಪಾಕ್ಷ ತೀರ್ಥವನ್ನು ರಕ್ಷಿಸಲು ಅರಸ ಮತಂಗ ಪರ್ವತದ ಬೀಡಿನಲ್ಲಿ ಸೈನ್ಯವನ್ನು ನೆಲೆಗೊಳಿಸಿದ್ದರ ವಿವರವಿದೆ. ಈ ರಕ್ಷಣೆಯ ಜವಾಬ್ದಾರಿಯನ್ನು ಸಾಮಂತ ಮಾದೆಯ ನಾಯಕ ವಹಿಸಿದ್ದನು. ಅಲ್ಲದೆ ಇದರಲ್ಲಿ ಇನ್ನೊಂದು ವಿಚಾರವು ಅಡಗಿದೆ. ಮಾದೆಯನ ಕೆಳಗಿದ್ದ ಇವನ ಮೈದುಕನ

ಚೌಡಯ್ಯನೆಂಬುವವನು ವಿರೂಪಾಕ್ಷ ಮತ್ತು ಹಂಪಾದೇವಿಗೆ ದಾನನೀಡಿದ ವಿವರ ಉಂಟು ಈ ಶಾಸನ ಇಮ್ಮಡಿ ರಾಚಮಲ್ಲನ ಮಗ ಕಲಿದೇವನ ಕಾಲದ್ದೆಂದು ಹೇಳಲಾಗುತ್ತದೆ.[೪೩] ಕಲ್ಯಾಣ ಚಾಲುಕ್ಯರ ಕಾಲದಲ್ಲಿ 'ಹೇಮಕೂಟ'ದಲ್ಲಿ ಅನೇಕ ದೇವಾಲಯಗಳ ಸಮೂಹ ನಿರ್ಮಾಣವಾಯಿತು. ಹಂಪಿಯನ್ನೊಳಗೊಂಡು ಈ ಪ್ರದೇಶಕ್ಕೆ ಅಧಿಕಾರಿಗಳಾಗಿದ್ದ ಸಿಂದರು ತಮ್ಮ ರಾಜಧಾನಿ ಕುರುಗೋಡಿನಲ್ಲಿ 'ಹೇಮಕೂಟ'ದಲ್ಲಿರುವ ದೇವಾಲಯಗಳ ವಾಸ್ತು ಲಕ್ಷಣಗಳುಳ್ಳ ಅನೇಕ ದೇವಾಲಯಗಳನ್ನು ನಿರ್ಮಿಸಿದರು. ಹಂಪಿಗೆ ವಿರೂಪಾಕ್ಷನೇ ಒಡೆಯನಾಗಿದ್ದನು. ಆದರೆ ಅಧಿಕಾರಿಗಳು ಅದನ್ನು ಪ್ರತಿಪಾದಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವಂತೆ ಶಾಸನದಲ್ಲಿ ಹೇಳಿಕೊಂಡಿದ್ದಾರೆ. ಈ ಮೇಲಿನ ಅಂಶಗಳ ಆಧಾರದಿಂದ ಹಂಪಿ ಪ್ರದೇಶವು ಇವರ ಆಳ್ವಿಕೆಗೊಳಪಟ್ಟಿತ್ತೆಂದು ನಿಸ್ಸಂಶಯವಾಗಿ ಹೇಳಬಹುದು. ಒಟ್ಟಿನಲ್ಲಿ ಕರಗೂಡು ಸಿಂಧ್ ವಂಶವು ಹತ್ತನೆಯ ಶತಮಾನದ ಆರಂಭದಿಂದ ಹದಿಮೂರನೆಯ ಶತಮಾನದ ಮಧ್ಯಭಾಗದವರೆಗೆ ಆಳ್ವಿಕೆ ನಡೆಸಿ, ಅಂದಿನ ರಾಜಕೀಯ ಸ್ಥಿರತೆಗೆ ತಮ್ಮದೇ ಆದ ವಿಶಿಷ್ಟ ಕೊಡುಗೆ ಸಲ್ಲಿಸಿದ್ದಾರೆ.

ಇ) ಉಚ್ಚಂಗಿ ಪಾಂಡ್ಯರು

ಕರ್ನಾಟಕ ಮುಖ್ಯವಾದ ಮಾಂಡಲೀಕ ರಾಜರಲ್ಲಿ ಉಚ್ಚಂಗಿ ಪಾಂಡ್ಯರು ಒಬ್ಬರಾಗಿದ್ದಾರೆ. ಇವರು ತಮ್ಮನ್ನು ಚಂದ್ರವಂಶೀಯರೆಂದೇ ಹೇಳಿಕೊಂಡಿದ್ದಾರೆ. ಬಳ್ಳಾರಿ ಜಿಲ್ಲೆಯ ಈಶಾನ್ಯಕ್ಕಿರುವ ಗಿರಿದುರ್ಗವಾದ ಉಚ್ಚಂಗಿಯಿಂದ ಇವರು ಆಳ್ವಿಕೆ ಮಾಡಿದ್ದರಿಂದ ಇವರನ್ನು ಆ ಹೆಸರಿನಿಂದ ಕರೆಯಲಾಗುತ್ತದೆ. ಈ ಪಾಂಡ್ಯರು ನೊಳಂಬವಾಡಿ ಮೂವತ್ತೆರಡು ಸಾವಿರದ ನಾಡಿನ ಅರಸರಾಗಿದ್ದರು. ಮಂಗಯ್ಯ ಇಲ್ಲವೇಆದಿತ್ಯದೇವ ಎಂಬುವನು ಪಾಂಡ್ಯ ಕುಲದ ಸ್ಥಾಪಕ. ಅವನ ಮಗ ಚೇದಿರಾಜ, ಚೇದಿರಾಜನ ಮಗ ಪಾಂಡ್ಯ. ಈ ಪಾಂಡ್ಯ ಈ ಪಾಂಡ್ಯನು ಚೇದಿಕುಲದ ಅರಸರನ್ನು ಸದೆಬಡಿದವನೆಂಬ ಪ್ರತೀತಿ ಇದೆ. ತ್ರಿಭುವನಮಲ್ಲ ಪಾಂಡ್ಯನು ಚಾಲುಕ್ಕ ತ್ರಿಭುವನಮಲ್ಲನ ಮಾಂಡಲೀಕನಾಗಿ ಕ್ರಿ.ಶ.೧೦೮೩ರಲ್ಲಿ ನೊಳಂಬವಾಡಿಯನ್ನು ಆಳುತ್ತಿದ್ದನು.[೪೪] ಕ್ರಿ.ಶ. ೧೧೦೧ರಲ್ಲಿ ಬಲ್ಲಕುಂದೆ ೩೦೦ ನಾಡಿಗೂ ಮಾಡಂಲೀಕನಾಗಿದ್ದನು. ನಂತರ ಬಂದ ರಾಯಪಾಂಡ್ಯನಿಗೆ ಪಂಡಿತ ಪಾಂಡ್ಯ, ವೀರ ಪಾಂಡ್ಯ ವಿಜಯ ಪಾಂಡ್ಯ ಇಲ್ಲವೇ ರಾಮದೇವ ಎಂಬ ಮೂವರು ಮಕ್ಕಳಿದ್ದರು. ವೀರ ಪಾಂಡ್ಯನು ಉಚ್ಚಂಗಿಯನ್ನು ರಾಜಧಾನಿಯಾಗಿ ಮಾಡಿಕೊಂಡನು. ಇವನು ನೊಯ್ಯೇಶ್ವರ ದೇವರನ್ನು ಪ್ರತಿಷ್ಠಾಪಿಸಿ, ದಾನದತ್ತಿಗಳನ್ನು ನೀಡಿದನು. ಮುಂದಿನ ಅರಸನಾದ ವಿಜಯ ಪಾಂಡ್ಯನಿಗೆ ಇವನಿಗೆ ಉಚ್ಚಂಗಿಯೇ ಪ್ರಮುಖ ಕೇಂದ್ರವಾಗಿತ್ತು. ಇವನು ಕ್ರಿ.ಶ. ೧೧೪೮ರಿಂದ ಕ್ರಿ.ಶ. ೧೧೮೭ರವರೆಗೆ ನೊಳಂಬವಾಡಿ ಪ್ರಾಂತ್ಯದಿಂದ ಉಚ್ಚಂಗಿದುರ್ಗವನ್ನು ಆಳಿದನು.[೪೫]

ಕಲ್ಯಾಣ ಚಾಲುಕ್ಯರು ಆಳ್ವಿಕೆ ಮಾಡುವಾಗ ಇದು ನೊಳಂಬವಾಡಿ ಮುವತ್ತೆರಡು ಸಾವಿರ ಆಡಳಿತದ ಒಂದು ಘಟಕವಾಗಿತ್ತು. ಇದರಲ್ಲಿ ಕದಂಬಳಿಗೆ ಸಾವಿರ, ಸಿಂದವಾಡಿ

ಸಾವಿರ, ಕೋಗಳಿ ಐದುನೂರು ಇತ್ಯಾದಿ ಉಪ ಆಡಳಿತ ವಿಭಾಗಗಳಿದ್ದವು. ನೊಳಂಬವಾಡಿ ಮುವತ್ತೆರಡು ಸಾವಿರಕ್ಕೆ ಉಚ್ಚಂಗಿದುರ್ಗವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಪಾಂಡ್ಯರು ಆಳ್ವಿಕೆ ಮಾಡಿದಂತೆ ಶಾಸನಗಳಿಂದ ತಿಳಿದುಬರುತ್ತದೆ. ತ್ರಿಭುವನಮಲ್ಲ ಪಾಂಡ್ಯ, ರಾಯಪಾಂಡ್ಯ, ವೇರಪಾಂಡ್ಯ ಮತ್ತು ವಿಜಯಪಾಂಡ್ಯರು ಉಚ್ಚಂಗಿಯನ್ನು ಕೇಂದ್ರವನ್ನಾಗಿ ಮಾಡಿಕೊಂಡು, ನೊಳಂಬವಾಡಿ ಮೂವತ್ತೆರಡು ಸಾವಿರದಲ್ಲಿ ಆಳ್ವಿಕೆ ನಡೆಸಿದರು.[೪೬] ನೊಳಂಬವಾಡಿಯನ್ನು ತ್ರಿಭುವನಮಲ್ಲ ರಾಯಪಾಂಡ್ಯನು ಆಳುತ್ತಿರುವಾಗ ಆತನಿಗೆ 'ಪರಿಚ್ಛೇದ ಗಂಡ'ನೆಂಬ ಬಿರುತ್ತೆಂದು ಕ್ರಿ.ಶ.೧೦೮೩ ಮತ್ತು ಕ್ರಿ.ಶ.೧೧೧೨ರ ಶಾಸನಗಳಿಂದ ತಿಳಿದುಬರುತ್ತದೆ.[೪೭] ಚಾಲುಕ್ಯ ರಾಜನಾದ ನಾಲ್ಕನೆಯ ಸೋಮೇಶ್ವರನ ವಿರುದ್ಧ ಕ್ರಾಂತಿ ಕಹಳೆ ಊದಿ, ಸ್ವತಂತ್ರ ಅರಸನಾಗಲು ವಿಜಯ ಪಾಂಡ್ಯ ಯತ್ನಿಸಿದನು. ಆನೆಗಳಂತೆ ಇದ್ದ ಪಾಂಡ್ಯರಿಗೆ ಸಿಂಹವಾಗಿದ್ದ(ದಿ ಲಯನ್ ಟು ದಿ ಎಲೆಫೆಂಟ್ ಪಾಂಡ್ಯ) ಎಂಬ ಬಿರುದನ್ನು ಧರಿಸಿದನ್ನು ನಾಲ್ಕನೇ ಸೋಮೇಶ್ವರನಂಥ ಪ್ರಬಲ ಅರಸನ ವಿರುದ್ಧ ತಿರುಗಿ ಬಿದ್ದ, ವಿಜಯ ಪಾಂಡ್ಯನ ಸಾಹಸ ಶ್ಲಾಘನೀಯ. ಹಂಪಿ ಮತ್ತು ಅದರ ಸುತ್ತಲಿನ ಅನೇಕ ಭಾಗಗಳು ಅವರ ನೇರ ಆಳ್ವಿಕೆಗೆ ಒಳಗಾಗಿದ್ದವು. ಸಂಡೂರಿನ ಕಾರ್ತಿಕೇಯ ದೇವಾಲಯದ ಪ್ರದೇಶವು "ದೋರವಾಡಿ" ನಾಡಿನ ಕೇಂದ್ರವಾಗಿದ್ದು, ಈ ಭಾಗವು ಪಾಂಡ್ಯರ ಆಡಳಿತಕ್ಕೆ ಒಳಗಾಗಿತ್ತೆಂದು ಶಾಸನಗಳು ವಿವರಿಸುತ್ತವೆ. ಉಚ್ಚಂಗಿಯ ಪಾಂಡ್ಯರಲ್ಲಿ ಖ್ಯಾತನಾದ ವಿಜಯಪಾಂಡ್ಯನು ಆಳ್ವಿಕೆ ನಡೆಸುತ್ತಿರುವಾಗ ಕ್ರಿ.ಶ.೧೧೭೭ರಲ್ಲಿ ಹೊಯ್ಸಳರ ೩ನೇ ಬಲ್ಲಾಳನು ತುಂಬಾ ಪರಿಶ್ರಮದಿಂದ ಆಕ್ರಮಣ ಮಾಡಿ, ಕೊನೆಗೆ ವಿಜಯ ಪಾಂಡ್ಯನನ್ನು ಸೋಲಿಸಿ, ಉಚ್ಚಂಗಿ ದುರ್ಗವನ್ನು ವಶಪಡಿಸಿಕೊಂಡನು. ಮುಂದೆ ಕಾಲಾಂತರದಲ್ಲಿ ಉಚ್ಚಂಗಿದುರ್ಗವು ಹೊಯ್ಸಳರಲ್ಲೇ ಉಳಿಯಿತು.

ಉಚ್ಚಂಗಿಯ ಪಾಂಡ್ಯರೆಂದೇ ಕರೆಸಿಕೊಡ ಇವರು ಸುಮಾರು ೧೩೭ ವರ್ಷಗಳ ಕಾಲ ಉಚ್ಚಂಗಿ ನೆಲೆವೀಡಿನಿಂದ ನೊಂಬವಾಡಿ ೩೨೦೦೦ದಲ್ಲಿ ಆಳ್ವಕೆಯನ್ನು ಮಾಡಿದರು. ಚಾಲುಕ್ಯರ ನಂತರ ಈ ನಾಡು ಹೊಯ್ಸಳರಿಗೆ ಹಸ್ತಾಂತರವಾಯಿತು. ಇದರಿಂದಾಗಿ ಒಂದು ಪ್ರಬಲವಾದ ಕರ್ನಾಟಕದ ರಾಜ ಸಂತತಿಯಾದ ಚಾಲುಕ್ಯರ ಪತನದ ಹಾದಿ ಮತ್ತು ಅವರ ರಾಜ್ಯದಲ್ಲಿ ಹೊಯ್ಸಳರ ಪ್ರವೇಶವು ಪ್ರಮುಖ ಘಟ್ಟವೊಂದು ರೂಪು ಪಡೆಯಿತು.

ಈ) ಸೇವುಣರ ಆಳ್ವಿಕೆ

ಕ್ರಿ.ಶ.ಸು.೮೩೫-೧೩೧೩ರ ವರೆಗೆ ಆಳಿದ ಕರ್ನಾಟಕದ ಸೇವುಣರು ವಿಶೇಷವಾಗಿ ದೇವಗಿರಿಯಾದವರಿಂದಲೇ ಭಾರತದ ಇತಿಹಾಸದಲ್ಲಿ ಪ್ರಸಿದ್ದರಾಗಿದ್ದಾರೆ. ಮಹಮ್ಮದೀಯ ಚರಿತ್ರೆಕಾರರಾದ ಅಮೀರ್‌ಖುಸ್ರು, ಫೆರಿಸ್ತ, ಬರೊನಿ ಮುಂತಾದವರು ಅವರನ್ನು ಯಾದವರೆಂದೇ ಕರೆದಿದ್ದಾರೆ. ಇದನ್ನೇ ಅನುಸರಿಸಿದ ಫ್ಲೀಟ್‌ರವರು ತಮ್ಮ 'ಡೈನಾಸ್ಟಿಕ್ ಆಫ್ ಕೆನಾರಿಸ್ ಡಿಸ್ಟ್ರಿಕ್ಟ್ಸ್ ಆಫ್ ಬಾಂಬೆ ಪ್ರೆಸಿಡೆನ್ಸಿ' ಎಂಬ ಗ್ರಂಥದಲ್ಲಿ ಸೇವುಣರನ್ನು ದೇವಗಿರಿಯ ಯಾದವರೆಂದೇ

ಕರೆದಿದ್ದಾರೆ. ತದನಂತರದ ಚರಿತ್ರೆಕಾರರು ಇದನ್ನೇ ಅನುಸರಿಸುತ್ತಾ ಬಂದಿದ್ದಾರೆ.

ಹೇಮಾದ್ರಿಯ 'ರಾಜಪ್ರಶಸ್ತಿ'ಯು ಈ ರಾಜವಂಶದ ಎರಡನೆಯ ದೊರೆ ಸೇವುಣ ಚಂದ್ರನಿಂದ ಈ ವಂಶಕ್ಕೆ ಸೇವುಣವಂಶವೆಂದು ಹೆಸರು ಬಂದಿತೆಂದು ತಿಳಿಸುತ್ತದೆ. ಹೊಯ್ಸಳರು, ಚಾಲುಕ್ಯರು, ಕಾಕತೀಯರು ಅವರನ್ನು ಸೇವುಣರೆಂದೇ ಕರೆದಿದ್ದಾರೆ. ಅಂದರೆ ಸಮಕಾಲೀನ ರಾಜರುಗಳು ಇವರನ್ನು ಸೇವುಣರೆಂಬ ಹೆಸರಿನಿಂದ ಕರೆಯುತ್ತಿದ್ದರು.[೪೮]

ದೇವಗಿರಿಯ ಸೇವುಣರನ್ನು ಕುರಿತ ಶಾಸನಗಳು ಮತ್ತು ಅವರು ಕಟ್ಟಿಸಿದ ದೇವಾಲಯಗಳು ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ದೊರೆತಿವೆ. ಬಳ್ಳಾರಿ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಇವರ ಶಾಸನಗಳು ದೊರೆತಿರುವುದರಿಂದ ಈ ಜಿಲ್ಲೆಯ ಕೆಲವು ಭಾಗಗಳು ಅವರ ಅಧೀನಕ್ಕೊಳಪಟ್ಟಿದ್ದವೆಂಬುದು ಸ್ಪಷ್ಟವಾಗುತ್ತದೆ. ಸೇವುಣ ರಾಜ್ಯವು ಚಿತ್ರದುರ್ಗ, ಶಿವಮೊಗ್ಗ, ಹಾಸನ, ಧಾರವಾಡ, ಬಿಜಾಪುರ, ರಾಯಚೂರು, ಬೀದರ ಮತ್ತು ಬಳ್ಳಾರಿ ಜಿಲ್ಲೆಗಳ ಪ್ರದೇಶಗಳನ್ನೊಳಗೊಂಡಿತ್ತು.[೪೯]

ಸೇವುಣ ಸಿಂಘಣ (ಕ್ರಿ.ಶ. ೧೨೧೦-ಕ್ರಿ.ಶ.೧೨೪೭) ಈ ಮನೆತನದ ಪ್ರಸಿದ್ಧ ಹಾಗು ಸಮರ್ಥ ದೊರೆಗಳಲ್ಲೊಬ್ಬ, ಹೊಯ್ಸಳರೊಂದಿಗೆ ಸತತ ಹೋರಾಟದಲ್ಲಿ ತೊಡಗಿದ್ದು ಈ ಮನೆತನದವರು ಹೊಯ್ಸಳಾಧಿಪತಿ ಇಮ್ಮಡಿ ಬಲ್ಲಾಳನ (ಕ್ರಿ.ಶ.೧೧೭೩-೧೨೨೦) ಆಳ್ವಿಕೆಯಲ್ಲಿ ಅವನತಿಯ ಪಥವನ್ನು ಹಿಡಿಯಬೇಕಾಯಿತು. ಕೃಷ್ಣಾ ನದಿಯಿಂದಾಚೆಯವರೆಗೂ ಇವರು ಹೊಯ್ಸಳರಿಂದ ದೂಡಲ್ಪಟ್ಟರು. ಆದರೂ ಕ್ರಮೇಣ ಬಲಗೊಂಡ ಸೇವುಣರು ಹೊಯ್ಸಳರನ್ನು ತುಂಗಭದ್ರ ನದಿಯವರೆಗೂ ಹಿಮ್ಮೆಟ್ಟಿಸಿ, ತಮ್ಮ ವಿಜಯಪತಾಕೆಯನ್ನು ಹಾರಿಸಿದರು. ಬಹುಶಃಇಮ್ಮಡಿ ಬಲ್ಲಾಖನ ಮರಣಾನಂತರ ಹೊಯ್ಸಳ ಸೋಮೇಶ್ವರನ ಕಾಲಕ್ಕೆ (ಕ್ರಿ.ಶ.೧೨೩೫-೧೨೫೪) ಸೇವಣ ಸಂಘಣನು ದಕ್ಷಿಣ ಭಾರತದಲ್ಲಿ ತನ್ನ ರಾಜ್ಯವನ್ನು ವಿಸ್ತರಿಸಿದನೆಂದು ತಿಳಿದುಬರುತ್ತದೆ.[೫೦] ಈ ಕನ್ನರದೇವನ ತಮ್ಮ ಮಹಾದೇವ ಪಾಂಡವಾದ್ಯನನ್ನು ಶಾಸನದಲ್ಲಿ ಯುಧಿಷ್ಠಿರನಿಗೆ ಹೋಲಿಸಿವೆ. ರಾಯ-ದಂಡನಾಥ, ಪೆಸಾನಿ ಹನುಮನೆಂಬ ಬಿರುದುಗಳನ್ನು ಪಡೆದ ಸೇವುಣ ದೊರೆಯಾದ ರಾಮಚಂದ್ರನ ಸೇನಾಪತಿ ಚಾವುಂಡರಸನು ಇಲ್ಲಿನ ಮುಮ್ಮಡಿ ಸಿಂಘೇ ನಾಯಕನೊಡನೆ ಕುರುಗೋಡುನಾಡಿನ ದೂರೆವಡೆ ಎಂಬಲ್ಲಿ ನಡೆದ ಯುದ್ಧದಲ್ಲಿ ಹೋರಾಡಿ ಕ್ರಿ.ಶ.೧೨೮೦ರಲ್ಲಿ ವೀರಮರಣ ಹೊಂದಿದನು. ಆತನ ಶವವನ್ನು ಲಿಂಗಾಯತ ಧರ್ಮದ ವಿಧಿಯಂತೆ ಸಂಸ್ಕಾರ ಮಾಡಲಾಯಿತೆಂದು ಚನ್ನಗಿರಿಯ ೨೪ನೇ ಶಾಸನ ವಿವರಿಸುತ್ತದೆ. ಒಟ್ಟಾರೆಯಾಗಿ ಸೇವುಣ ಅರಸರು ಹಂಪಿ ಹಾಗೂ ಅದರ ಸುತ್ತಲಿನ ಪ್ರದೇಶಗಳಲ್ಲಿ ಮತ್ತು ಬಳ್ಳಾರಿ ಜಿಲ್ಲೆಯೊಳಗಡೆ ಆಳ್ವಿಕೆ ಹಲವು ಪ್ರಜಾಹಿತ ಕಾರ್ಯಗಳನ್ನು ಕೈಗೊಂಡಿದ್ದರೆಂಬುದನ್ನು ಮರೆಯುವಂತಿಲ್ಲ.

ಉ) ಕಂಪ್ಲಿ ಅರಸರು (ಕಮ್ಮಟದುರ್ಗದ ನಾಯಕರು)

ಸ್ವತಂತ್ರ ರಾಜ್ಯವಾಗಿದ್ದ ಕಂಪ್ಲಿ ಚಾಲುಕ್ಯರ ಪ್ರಾಂತೀಯ ಮುಖ್ಯ ಪಟ್ಟಣವಾಗಿತ್ತು. ಇದು ಇಂದಿನ ಬಳ್ಳಾರಿ, ಕೊಪ್ಪಳ, ರಾಯಚೂರು, ಚಿತ್ರದುರ್ಗ, ಧಾರವಾಡ ಮತ್ತು ಆಂಧ್ರದ ಅನಂತಪುರ ಜಿಲ್ಲೆಯ ಕೆಲಭಾಗಗಳನ್ನು ಒಳಗೊಂಡಿತ್ತು. ಜಗದೇಕಮಲ್ಲ ಇಮ್ಮಡಿ ನೊಳಂಬ ಪಲ್ಲವ-ಪೆರ್ಮಾಡಿಯು ಚಾಲುಕ್ಯರ ಸಾಮಂತಾಧಿಕಾರಿಯಾಗಿ ಇಲ್ಲಿಂದ ಆಳುತ್ತಿದ್ದನೆಂದು ಶಾಸನವೊಂದರಿಂದ ತಿಳಿದುಬರುವುದು. ಕ್ರಿ.ಶ.೧೦೨೨ರ ಕಂಪ್ಲಿ ಶಾಸನವು ಈತನು ಕಂಪ್ಲಿಯಿಂದ ಆಳ್ವಿಕೆ ಮಾಡುತ್ತಿದ್ದನೆಂಬುದನ್ನು ದೃಢಪಡಿಸಿದೆ. ಕ್ರಿ.ಶ.೧೦೪೬ರಲ್ಲಿ ಚೋಳರ ಅರಸ ರಾಜರಾಜ ಚೋಳ ಈ ಪಟ್ಟಣದ ಮೇಲೆ ದಾಳಿಮಾಡಿದ್ದನ್ನು ಸ್ಥಳೀಯ ಶಾಸನವೊಂದು ಉಲ್ಲೇಖಿಸಿದೆ. ಅಲ್ಲದೆ ಇಲ್ಲಿಂದ ಚಾಲುಕ್ಯ ವಿಜಯಾದಿತ್ಯ ನೊಳಂಬವಾಡಿಯನ್ನು ಆಳುತ್ತಿದ್ದನೆಂದು ತಿಳಿದು ಬರುತ್ತದೆ. ಹೊಯ್ಸಳರ ಖ್ಯಾತ ದೊರೆ ವಿಷ್ಣುವರ್ಧನನು ಇಲ್ಲಿಗೆ ಸಮೀಪದಲ್ಲಿರುವ ಕುಮ್ಮಟದುರ್ಗವನ್ನು ಜಯಿಸಿದ ವಿವರವನ್ನು ಕ್ರಿ.ಶ.೧೧೭೮ರ ಶಾಸನ ವಿವರಿಸುತ್ತದೆ. ಸ್ವತಂತ್ರ ರಾಜ್ಯವಾಗಿದ್ದ ಕಂಪ್ಲಿಯನ್ನು ವಶಪಡಿಸಿಕೊಂಡು ತನ್ನ ಅಧೀನಕ್ಕೆ ಸೇರಿಸಿಕೊಳ್ಳುವಂತೆ ಗುಜರಾತಿನ ರಾಜ್ಯಪಾಲ ಮಲ್ಲಿಕಾಜಾದ ಮತ್ತು ದೇವಗಿರಿಯ ರಾಜ್ಯಪಾಲನಾದ ಮಾಜಿರ್ ಅಬುರಿಜರಿಗೆ ದೆಹಲಿ ಸುಲ್ತಾನರು ಆದೇಶಿಸಿದ್ದರು. ಇದರಂತೆ ಇವರಿಬ್ಬರು ಎರಡು ಬಾರಿ ಕಂಪ್ಲಿ ಮೇಲೆ ಯುದ್ಧ ಕೈಗೊಂಡು ಸೋಲನ್ನು ಅನುಭವಿಸಿದರು. ಆದರೆ ಮೂರನೇ ಬಾರಿ ಮಲ್ಲಿಕಾಜಾದನು ಕಂಪ್ಲಿ ಗೆಲ್ಲುವಲ್ಲಿ ಯಶಸ್ವಿಯಾದನು.[೫೧] ಆಗ ಕಂಪ್ಲಿದೇವ ಆನೆಗೊಂದಿಯಲ್ಲಿ ಆಶ್ರಯ ಪಡೆದನು. ಸುಲ್ತಾನನ ಸೈನ್ಯ ಆ ಕೋಟೆಯನ್ನು ತನ್ನ ರಕ್ಷಣೆಯಲ್ಲಿ ಇರಿಸಿಕೊಂಡಿತು. ಸೋತ ಕಂಪ್ಲಿ ದೇವ ಮತ್ತು ಆತನ ಅಧಿಕಾರಿ ಹಾಗೂ ಅನುಯಾಯಿಗಳನ್ನು ಸುಲ್ತಾನನ ಸೈನಿಕರು ಸೆರೆಹಿಡಿದು ದೆಹಲಿಗೆ ಕರೆದೊಯ್ದರು. ಅವರಲ್ಲಿ ವಿಜಯನಗರ ಸ್ಥಾಪಕರಾದ ಹಕ್ಕ ಮತ್ತು ಬುಕ್ಕರು ಸೇರಿದ್ದರೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಅಲ್ಲಿಂದ ತಪ್ಪಿಸಿಕೊಂಡು ಬಂದ ಇವರು ಮುಂದೆ ೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದರೆಂಬ ಪ್ರತೀತಿ ಇದೆ. ೧೩೨೭ರಲ್ಲಿ ಕಂಪ್ಲಿ ದೇವ ಕಾಲವಾದ ಮೇಲೆ ಅವನ ಪುತ್ರ ರಾಮನಾಥ(ಕುಮಾರ ರಾಮ) ಇಲ್ಲಿ ಅಧಿಕಾರ ನಡೆಸಿದನು. ಆತ ತನ್ನ ತಾಯಿ ಮಹಾನಾಯಕಿ ಮತ್ತು ತಂದೆ ಸಿಂಘಯನಾಯಕನಿಗೆ ಮತ್ತು ಮತ್ತೊಬ್ಬ ನಾಯಕನಾದ ಪೆರುಮಾಯನಾಯಕನ ನೆನಪಿಗೋಸ್ಕರ ಹಂಪಿಯಲ್ಲಿ ಶಿವ ದೇವಾಲಯವನ್ನು ನಿರ್ಮಿಸಿ ಅದರಲ್ಲಿ ಶಿವಲಿಂಗ ಸ್ಥಾಪಿಸಿದ ವಿಷಯವನ್ನು ಹಂಪಿಯ ಶಾಸನ ದಾಖಲಿಸಿದೆ. ಕುಮ್ಮಟದುರ್ಗದ ನಾಯಕರು ಹೊಯ್ಸಳರಿಗೆ ಅಧೀನರಾಗಿ ಆಡಳಿತ ನಡೆಸುತ್ತಿದ್ದರು. ಈ ಮನೆತನದ ಮುಮ್ಮಡಿ ಸಿಂಗೆನಾಯಕನ ಮಗ ವೀರಕಂಪಿಲರಾಯನು ಶಿವಾಲಯವನ್ನು ಕಟ್ಟಿಸಿ ಮೂರು ಲಿಂಗಗಳನ್ನು ಪ್ರತಿಷ್ಠಾಪನೆ ಮಾಡಿದ ಉಲ್ಲೇಖ ಹೇಮಕೂಟದ ಕಂಪಿಲರಾಯ ದೇವಾಲಯದ ಕಂಬದ ಮೇಲಿರುವ ಶಾಸನದಲ್ಲಿದೆ.[೫೨]

ಇದರಿಂದ ಕಮ್ಮಟದುರ್ಗದ ಅರಸರ ಆಳ್ವಿಕೆಗೆ ಹಂಪಿಯು ಒಳಪಟ್ಟಿತ್ತು. ಅಲ್ಲದೆ

ಹಂಪಿಯ ಪಕ್ಕದಲ್ಲಿರುವ ಕಂಪಿಲೆಯು ಕುಮ್ಮಟದುರ್ಗ ಅರಸರ ರಾಜಧಾನಿಯಾಗಿತ್ತು ಮತ್ತು ಹಂಪಿಯು ಈ ಅರಸರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಹೇಳಬಹುದಾಗಿದೆ.

ಊ) ಹೊಯ್ಸಳರ ಆಳ್ವಿಕೆ

ಕರ್ನಾಟಕ ರಾಜ ಮನೆತನಗಳಲ್ಲಿ ಕ್ರಿ.ಶ.೧೦೦೦-೧೩೪೬ರವರೆಗೆ ಆಳ್ವಿಕೆ ಮಾಡಿದ ಹೊಯ್ಸಳರ ಸ್ಥಾನ ಮಹತ್ವವಾದುದ್ದು. ಇವರು ತಮ್ಮ ಸಮಕಾಲೀನ ರಾಜಮನೆತನ ಹಾಗೂ ಸಾಮಂತ ಕುಲಗಳಿಗಿಂತಲೂ ಹೆಚ್ಚು ಪ್ರಸಿದ್ಧರಾಗಿದ್ದರು. ಕ್ರಿ.ಶ.೧೧ನೇ ಶತಮಾನದಿಂದ ೧೪ನೇ ಶತಮಾನದ ಮಧ್ಯಕಾಲದವರೆಗೆ ಕರ್ನಾಟಕ ಮಾತ್ರವಲ್ಲದೇ, ದಕ್ಷಿಣ ಭಾರತದಲ್ಲಿ ಆಳ್ವಿಕೆ ನಡೆಸಿದರು. ಚಾಲುಕ್ಯರ ನಂತರ ಹಿಂದೂ ಸಾಮ್ರಾಜ್ಯವನ್ನು ಬೆಳೆಸಿ, ಪೋಷಿಸಿಕೊಂಡು ಬಂದವರು ಹೊಯ್ಸಳರು. ಅದೇ ಹಾದಿಯಲ್ಲಿ ಮುಂದುವರಿಯುವಂತೆ ತಮ್ಮ ನಂತರ ಸ್ಥಾಪಿತಗೊಂಡ ವಿಜಯನಗರ ಸಾಮ್ರಾಜ್ಯಕ್ಕೆ ಇವರೇ ಪ್ರೇರಕ ಶಕ್ತಿಯಾದರು. ಪ್ರಸ್ತುತ ಹಂಪಿ ಪರಿಸರದಲ್ಲಿ ಹೊಯ್ಸಳರ ಆಳ್ವಿಕೆಯನ್ನು ಗುರುತಿಸಲು ಇಲ್ಲಿನ ಶಾಸನಗಳು ಸಹಾಯಕವಾಗಿವೆ.

ಹೊಯ್ಸಳರು ಚಾಲುಕ್ಯರ ಸಾಮಂತರಾಗಿದ್ದಾಗಲೇ ನೊಳಂಬವಾಡಿಯು, ಅಂದರೆ ಚಿತ್ರದುರ್ಗ, ಬಳ್ಳಾರಿ ಪ್ರದೇಶಗಳು ಗಮನ ಸೆಳೆದಿದ್ದವು. ಕ್ರಿ.ಶ.೧೦೬೩ರಿಂದ ಆಳಿದ ಎರೆಯಂಗನು ಪಾಂಡ್ಯರಾಜ ಇರುಕ್ಕವೇಲನ ಮಗಳನ್ನು ಮದುವೆಯಾಗಿದ್ದನು. ಅನಂತರ ಅವನ ಮಗ ಒಂದನೆಯ ಬಲ್ಲಾಳನು ತನ್ನ ಸಹೋದರ ಬಿಟ್ಟಿದೇವನೊಡನೆ ಉಚ್ಚಂಗಿ ಪಾಂಡ್ಯರ ಮೇಲೆ ಯುದ್ಧಮಾಡಿ ಅವರ ಸಮಸ್ತ ಸಂಪತ್ತನ್ನು ಸೂರೆ ಮಾಡಿದನಂತೆ. ಅವನು ದುಮ್ಮಿಯ ಬಳಿ ನಡೆದ ಯುದ್ಧದಲ್ಲಿ ಉಚ್ಚಂಗಿ ಪಾಂಡ್ಯರನ್ನು ಸೋಲಿಸಿ 'ನೊಳಂಬವಾಡಿಗೊಂಡ' ಎಂಬ ಬಿರುದಿಗೆ ಪಾತ್ರನಾದನು.

ಇಮ್ಮಡಿ ಬಲ್ಲಾಳನ ತರುವಾಯ ಅವನ ಮಗ ಇಮ್ಮಡಿ ನರಸಿಂಹನು (ಕ್ರಿ.ಶ.೧೨೨೦-೧೨೩೫) ಸಿಂಹಾಸನಕ್ಕೆ ಏರಿದನು. ಆತ ಕ್ರಿ.ಶ.೧೨೩೪ರಲ್ಲಿ ಮೃತನಾಗಲು ಅವನ ಮಗ, ಸೋಮೇಶ್ವರನು (ಕ್ರಿ.ಶ.೧೨೩೪-೧೨೫೬) ಪಟ್ಟಕ್ಕೆ ಬಂದನು. ಹಂಪಿಯ ಕ್ರಿ.ಶ. ೧೧೯೯ರ ಶಾಸನದಲ್ಲಿ 'ಪಂಪಾತೀರ್ಥ', 'ಪಂಪಾವರಕ್ಷೇತ್ರ', 'ವಿರೂಪಾಕ್ಷತೀರ್ಥ' ಮತ್ತು 'ಹಂಪಾತೀರ್ಥ'ವೆಂದು ಉಲ್ಲೇಖಿಸಿ, ಅದು ಗಂಗಾನದಿಯಿಂದ ಹಲವು ತೀರ್ಥಗಳಿಂದ, ಉತ್ತಮವಾದ ದೇವಾಲಯ, ಸಮಾಂದ ಹಾಗೂ ತಪಸ್ವಿಗಳಿಂದ ಕೂಡಿತ್ತೆಂದು ವರ್ಣಿಸಿದೆ. ಇಂಥ ಪವಿತ್ರ ಕ್ಷೇತ್ರದ ವಿರೂಪಾಕ್ಷ ತೀರ್ಥದ ರಕ್ಷಣಾರ್ಥವಾಗಿ ಸಾಮಂತ ಮಾದೆನಾಯಕನು, ಮತಂಗ ಪರ್ವತವನ್ನು ಪ್ರತಿಪಾಳಿಸುತ್ತಿದ್ದನು. ಇವನ ಕೈಕೆಳಗಿದ್ದ ಮೈದುನ ಚೌಡಯ್ಯನೆಂಬುವವನು ಪಂಪಾದೇವಿಗೆ ಚೆಂಬೊನ್ನನ ಕಳಸವನ್ನು ಮಾಡಿಸಿ ವಿರೂಪಾಕ್ಷ, ಪಂಪಾದೇವಿ ಮತ್ತು ಭೈರವ ಗೃಹಗಳಿಗೆ ಸುಣ್ಣ ಬಳಸಿ, ಈ ದೇವಗೃಹಗಳಿಗೆ ಘಂಟೆ, ಅಡ್ಡಣಿಗೆ, ಆರತಿ, ಧೂಪಘಟ, ಪರ್ಯಾಣ, ಕಳಶ, ತಿಳಿವಟ್ಟಲು, ಚಂದನ, ಸುಗಂಧದ ಸಿಪುಗಳಲ್ಲದೆ ಅನೇಕ ವಸ್ತ್ರಭೂಷಣಗಳನ್ನು ಕೊಟ್ಟನು. ವಿರೂಪಾಕ್ಷದೇವರ ಮತ್ತು ಪಂಪಾದೇವಿಯರ ನೈವೇದ್ಯಕ್ಕೆ ಅಕ್ಕಿ, ವಿರೂಪಾಕ್ಷದೇವರ

ಛತ್ರದಲ್ಲಿ ೧೦ ಜನ ಬ್ರಾಹ್ಮಣರ ಭೋಜನಕ್ಕೆ ಹಾಗೂ ಪಂಪಾತೀರ್ಥದ ದೇವರುಗಳಿಗೆ ಅಡಿಕೆ, ಎಲೆ, ದಾನ ನೀಡಿದ್ದಾನೆ.[೩೩]

ಅನಂತರ ಅಧಿಕಾರಕ್ಕೆ ಬಂದ ಮುಮ್ಮಡಿ ಬಲ್ಲಾಳನ ಆಳ್ವಿಕೆಯಲ್ಲಿ ಅನೇಕ ಸಂಕಷ್ಟಗಳನ್ನು ಎದುರಿಸಬೇಕಾಯಿತು. ದೆಹಲಿ ಸುಲ್ತಾನರು ಕ್ರಿ.ಶ.೧೩೧೦ರಲ್ಲಿ ರಾಜ್ಯದ ಮೇಲೆ ದಾಳಿ ಮಾಡಿ ೩ನೇ ಬಲ್ಲಾಳನನ್ನು ಬಂಧಿಸಿದನು. ದೆಹಲಿ ಸುಲ್ತಾನರ ದಾಳಿಗಳನ್ನು ಎದುರಿಸಬೇಕಾಯಿತು. ಇಡೀ ದಕ್ಷಿಣ ಭಾರತದ ರಾಜಕೀಯ ಪರಿಸ್ಥಿತಿ ಅಸ್ತವ್ಯಸ್ತವಾಯಿತು. ಮುಸ್ಲಿಮರ ದಾಳಿಯ ರಕ್ಷಣೆಗೋಸ್ಕರ ದೋರ ಸಮುದ್ರದಿಂದ ತಿರುವಣ್ಣಾ ಮಲೈಗೆ ರಾಜಧಾನಿಯನ್ನು ಬದಲಾಯಿಸಿಕೊಂಡರು. ಆನಂತರ ಕ್ರಿ.ಶ.೧೩೨೦ರಲ್ಲಿ ದೊರವಾಡಿಯ ಕುಮ್ಮಟರ ಮೇಲೆ ದಾಳಿ ಜಯಗಳಿಸಿದನು. ಈ ವಿಜಯದ ನಂತರ ಮೂರನೇ ಬಲ್ಲಾಳ ಹೊಯ್ಸಳ ಸಾಮ್ರಾಜ್ಯದ ಉತ್ತರ ಗಡಿ ಪ್ರಾಂತ್ಯಗಳ ರಕ್ಷಣೆಗೆ ಇನ್ನೊಂದು ಹೊಸ ರಾಜಧಾನಿಯನ್ನು ಸ್ಥಾಪಿಸಲು ಸೂಕ್ತ ಸ್ಥಳ ಹುಡುಕುತ್ತಿದ್ದನು. ವಿರೂಪಾಕ್ಷ ಹೊಸಪಟ್ಟಣ, ಮುಮ್ಮಡಿ ಬಲ್ಲಾಳ ಹೊಸಪಟ್ಟಣ, ವಿರೂಪಾಕ್ಷಪಾದ, ಹೊಸದುರ್ಗ, ವಿರೂಪಾಕ್ಷ ಮುಂತಾದ ಹೆಸರುಗಳಿಂದ ಕರೆಯಲಾಗುವ ಹೊಸ ರಾಜಧಾನಿಯನ್ನು ಮಾಡಿಕೊಂಡು ಆಳುತ್ತಿದ್ದನು ಎಂದು, ಕ್ರಿ.ಶ.೧೩೨೫ರ ಅನಂತರದ ಶಾಸನಗಳು ವಿವರಿಸುತ್ತವೆ. ಈ ಹೊಸಪಟ್ಟಣ ನಿರ್ಮಾಣವಾಗಿದ್ದು ವಿರೂಪಾಕ್ಷ ದೇವಾಲಯದ ಆಗ್ನೇಯ ದಿಕ್ಕಿನಲ್ಲಿ. ಅರಸರ ಅರಮನೆ ಮುಂತಾದ ಭಗ್ನಾವಶೇಷಗಳು ಹರಡಿರುವ ಸಮತಟ್ಟಾದ ವಿಶಾಲ ಬಯಲು ಪ್ರದೇಶದಲ್ಲಿ ನಿರ್ಮಿತವಾಗಿರುವ ಹೊಸಪಟ್ಟಣ ಮತ್ತು ಹಂಪಿ ಅವಳಿ ಪ್ರದೇಶಗಳಾಗಿವೆ. ಹೊಯ್ಸಳರು ತಮ್ಮ ಅರಮನೆ ಮತ್ತು ಆಡಳಿತ ಕಛೇರಿಗಳನ್ನು ನಿರ್ಮಿಸುವುದಕ್ಕಾಗಿ ಈ ಸ್ಥಳವನ್ನು ಆಯ್ಕೆ ಮಾಡಿ ಇದನ್ನು ಹೊಸಪಟ್ಟಣವೆಂದು ಕರೆದರು. ಬಹುಶಃ ಇಲ್ಲಿ ಮುಮ್ಮಡಿ ಬಲ್ಲಾಳ ಐದು ಸುತ್ತಿನ ಕೋಟೆ ಇಲ್ಲಿ ನಿರ್ಮಿಸಿರಬೇಕು. ವೀರಬಲ್ಲಾಳನ ನಂತರ ಆ ರಾಜ್ಯದ ಉತ್ತರಾಧಿಕಾರಿಯಾಗಿ ಸಂಗಮ ಸಹೋದರರು ಅಧಿಕಾರಕ್ಕೆ ಬಂದರು. ಈ ಹೊಸಪಟ್ಟಣವೇ ಸಂಗಮರ ರಾಜಧಾನಿಯಾಗಿತ್ತೆಂಬುದಕ್ಕೆ ಕ್ರಿ.ಶ.೧೩೫೭ ರಿಂದ ೧೩೬೮ರ ನಡುವಿನ ಒಂದನೇ ಬುಕ್ಕನ ಶಾಸನಗಳು ಉಲ್ಲೇಖಿಸುತ್ತವೆ.[೩೪]

ತುಂಗಭದ್ರಾ ನದಿಯವರೆಗೆ ವಿಸ್ತಾರಗೊಂಡಿದ್ದ ಹೊಯ್ಸಳರ ಸಾಮ್ರಾಜ್ಯಕ್ಕೆ ಹಂಪಿಯೂ ಸೇರಿತ್ತು. ಹೊಯ್ಸಳ ಅರಸ ಸೋಮೇಶ್ವರ ಕ್ರಿ.ಶ.೧೨೩೬ರಲ್ಲಿ ಪಂಪಾಕ್ಷೇತ್ರದ ವಿರೂಪಾಕ್ಷನ ಆರಾಧನೆಗಾಗಿ ಒಂದು ಹಳ್ಳಿಯನ್ನು ದಾನಕೊಟ್ಟಿದ್ದಾನೆ. ಇದೇ ಅರಸನ ಕಾಲದ ಕ್ರಿ.ಶ. ೧೨೩೮ರ ಹಾಸನ ಜಿಲ್ಲೆಯ ಯಲ್ಲೇಶ್ವರದ ಶಾಸನದಲ್ಲಿ ಭೀಮ್ಮಣ್ಣನೆಂಬುವನನ್ನು ಹೇಮಕೂಟದ ವಿರೂಪಾಕ್ಷದೇವರ ಪಾದಪದ್ಮಾಧಾರಕನೆಂದು ಸ್ತುತಿಸಲಾಗಿದೆ. ಹೊಯ್ಸಳರ ರಾಜ್ಯವು, ದೆಹಲಿ ಸುಲ್ತಾನರ ದಾಳಿಯಿಂದ ನಾಶವಾದ ಮೇಲೆ ಹಂಪಿಗೆ ಬಂದು ಆಶ್ರಯ ಪಡೆದುಕೊಳ್ಳುತ್ತದೆ. ಪ್ರಾಯಶಃ ಅವರು ಆರಂಭದಲ್ಲಿ ಹಂಪಿಯ ಕೋಟೆಯನ್ನು ನಿರ್ಮಾಣಮಾಡಿರಬೇಕೆಂಬದು

ವಿದ್ವಾಂಸರ ಅಭಿಪ್ರಾಯ. ಕ್ರಿ.ಶ. ೧೩೩೧ರಲ್ಲಿ ಮೂರನೆಯ ಬಲ್ಲಾಳನು ಹಂಪಿಯನ್ನು ವಿರೂಪಾಕ್ಷ ಹೊಸದುರ್ಗವೆಂದು ಕರೆದು ಆಳ್ವಿಕೆ ಮಾಡುತ್ತಿದ್ದುದನ್ನು ಗುಬ್ಬಿ ಶಾಸನ ಉಲ್ಲೇಖಿಸುತ್ತದೆ. ಇವನ ಮಗನ ಹೆಸರು ವಿರೂಪಾಕ್ಷ ಬಲ್ಲಾಳ. ಈತನ ಯುವರಾಜ ಪಟ್ಟಾಭಿಷೇಕವೂ ಹಂಪಿಯಲ್ಲಿ ನಡೆಯಿತು. ಆರಂಭದಲ್ಲಿ ಹೊಯ್ಸಳರ ಆಡಳಿತ ಕೇಂದ್ರವಾದ ಹಂಪಿ ೧೩೩೬ರಲ್ಲಿ ವಿಜಯನಗರ ಅರಸರ ರಾಜಧಾನಿಯಾಗಿ ಇಡೀ ದಕ್ಷಿಣ ಭಾರತದಲ್ಲಿಯೇ ಹೆಸರುವಾಸಿಯಾಯಿತು.[೫೫]

ಹಂಪಿಯ ಕ್ರಿ.ಶ.೧೧೯೯ರ ದುರ್ಗಾ ದೇವಾಲಯದ ಶಾಸನವೊಂದು ಹಂಪೆಯನ್ನು 'ಹಂಪಾತೀರ್ಥ', 'ವಿರುಪಾಕ್ಷತೀರ್ಥ' ಎಂದು ಕರೆದಿದೆ. ಹೊಯ್ಸಳ ಸೋಮೇಶ್ವರನ ಕಾಲದ ಶಾಸನವೊಂದು ಆತ ವಿರುಪಾಕ್ಷದೇವಾಲಯಕ್ಕೆ ನೀಡಿದ ದಾನದ ವಿವರವನ್ನು ದಾಖಲಿಸಿದೆ. ಹೊಯ್ಸಳ ವೀರಬಲ್ಲಾಳನು ಕ್ರಿ.ಶ.೧೩೩೯ರಲ್ಲಿ ವೀರ ವಿಜಯಪುರಕ್ಕೆ(ಹಂಪಿಗೆ) ಭೇಟಿ ನೀಡಿ ತನ್ನ ಮಗ ವಿರುಪಾಕ್ಷ ಬಲ್ಲಾಳನನ್ನು ಹಂಪಿಯ ಒಡೆಯನನ್ನಾಗಿ ನೇಮಿಸಿ, ಹಂಪಿಯನ್ನು ವಿರುಪಾಕ್ಷ 'ಹೊಸಪಟ್ಟಣ'ವೆಂದು ಕರೆದನು. ಇದೇ ಪ್ರದೇಶವನ್ನು ಪಂಪಾದೇವಿಯ ನೆಲೆಯೆಂದೂ, ದಕ್ಷಿಣಕಾಶಿಯೆಂದೂ ಇಂದಿಗೂ ಕರೆಯುವ ಪ್ರತೀತಿ ಇದೆ.

ಸೋಮೇಶ್ವರನು ಕ್ರಿ.ಶ.೧೨೬೮ರಲ್ಲಿ ಮರಣ ಹೊಂದುವ ಮೊದಲೇ ಕ್ರಿ.ಶ.೧೨೫೪ರಲ್ಲಿ ಅವನ ಮಗ ಮುಮ್ಮಡಿ ನರಸಿಂಹನು ಯುವರಾಜನಾಗಿ ಪಟ್ಟಾಭಿಷಿಕ್ತನಾಗಿ, ಕ್ರಿ.ಶ.೧೨೫೪ರಲ್ಲಿ ಆಡಳಿತದ ಹೊಣೆಯನ್ನು ಹೊತ್ತುಕೊಂಡನು. ವಿರೂಪಾಕ್ಷ ದೇವಾಲಯದಲ್ಲಿರುವ ಒಂದು ಶಾಸನ ಕ್ರಿ.ಶ.೧೯೯೯ ವಿರೂಪಾಕ್ಷ ಮತ್ತು ಪಂಪಾದೇವಿಯರಿಗೆ ದಾನ ನೀಡಿದ ಸಂಗತಿಯನ್ನು ತಿಳಿಸುತ್ತದೆ. ವಿರೂಪಾಕ್ಷ ದೇವಾಲಯದ ಉತ್ತರ ದಿಕ್ಕಿನ ಗೋಪುರದಲ್ಲಿರುವ ಶಾಸನವು ಕ್ರಿ.ಶ.೧೨೩೭ ಹೊಯ್ಸಳ ಸೋಮೇಶ್ವರನು ವಿರೂಪಾಕ್ಷನಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಕ್ರಿ.ಶ.೧೦೭೬ರ ದಾನಶಾಸನದ ಪ್ರಕಾರ ಮಹಾಪ್ರಧಾನ ದಂಡನಾಯಕ ಚಚ್ಚೋಪಾಧ್ಯಾಯನು ಪುರಾಣ ಪ್ರವಚನಕಾರರಿಗೆ ಸಲಿಯಾನಾ ೮೦ ಲೊಕ್ಕಿ ಗದ್ಯಾಣಗಳನ್ನು ನೀಡುತ್ತಿದ್ದನು. ೧೧ನೇ ಶತಮಾನದ ಒಂದು ಶಾಸನದಲ್ಲಿ ವಿರೂಪಾಕ್ಷನನ್ನು ಮಹಾಕಾಲನೆಂದು ಕರೆಯಲಾಗಿದೆ. ಕೆಲವೆಡೆ ವಿಜಯ ವಿರೂಪಾಕ್ಷಪುರವೆಂದು ಕರೆಯಲಾಗಿದೆ.

ಈಗಿನ ಹರಪನಹಳ್ಳಿ ತಾಲೂಕಿಗೆ ಸೇರಿದ ಉಚ್ಚಂಗಿದುರ್ಗವು ಆಗಿನ ಕಾಲದಲ್ಲಿ ಪ್ರಮುಖ ಗಿರಿದುರ್ಗವಾಗಿತ್ತು. ವೀರಬಲ್ಲಾಳನ ಜೀವನದಲ್ಲಿ ಈ ಕೋಟೆಯನ್ನು ಪುನಃ ಪಾಂಡ್ಯ ಅರಸ ಕಾಮದೇವನಿಗೆ ಕೊಟ್ಟು ಅವನನ್ನು ತನ್ನ ಸಾಮಂತ ಅರಸನನ್ನಾಗಿ ನೇಮಿಸಿದನು. ಇನ್ನೊಂದು ಶಾಸನದ ಪ್ರಕಾರ ವೀರಬಲ್ಲಾಳನು ಉಚ್ಚಂಗಿಯನ್ನು ತನ್ನ ರಾಜ್ಯದ ಪ್ರಾಂತ್ಯವೊಂದರ ಮುಖ್ಯ ಪಟ್ಟಣವಾಗಿ ಮಾಡಿಕೊಂಡು ರಾಜ್ಯವಾಳಿದ್ದುದಾಗಿ ತಿಳಿದುಬರುತ್ತದೆ. ಇವನ ಕಾಲದ ಶಾಸನಗಳು ಬಾಗಳಿ ಮತ್ತಿತರ ಕಡೆ ದೊರೆತಿರುವುದರಿಂದ ಇವನ ಆಳ್ವಿಕೆಯು

ಇಲ್ಲಿಯವರೆಗೆ ವಿಸ್ತರಿಸಿತ್ತೆಂದು ಹೇಳಬಹುದು. ಎರಡನೆಯ ವಿನಯಾದಿತ್ಯನ ಮರಣಾನಂತರ ಅವನ ಮೊಮ್ಮಗನಾದ ಒಂದನೇ ಬಲ್ಲಾಳನು ಪಟ್ಟಕ್ಕೆ ಬಂದನು. ಇವನು ಕ್ರಿ.ಶ.೧೧೦೦ ರಿಂದ ೧೧೦೮ರವರೆಗೆ ರಾಜ್ಯವಾಳಿದನು. ಇವನು ಕೂಡ ಚಾಲುಕ್ಯರ ಚಕ್ರವರ್ತಿ ಆರನೇ ವಿಕ್ರಮಾದಿತ್ಯನ ಸಾಮಂತನಾಗಿದ್ದನು. ಬಲ್ಲಾಳನು ತನ್ನ ತಮ್ಮ ಬಿಟ್ಟಿದೇವನೊಂದಿಗೆ ಉಚ್ಚಂಗಿಯ ಪಾಂಡ್ಯರ ಮೇಲೆ ದಂಡೆತ್ತಿ ಹೋಗಿ ಆ ರಾಜ್ಯದ ಅಪಾರ ಐಶ್ವರ್ಯವನ್ನು ಸೂರೆಗೊಂಡನು. ಬಲ್ಲಾಳನು ಚೆಂಗಾಳ್ವರಿಗಿಂತಲೂ ಹೆಚ್ಚಿನ ತೊಂದರೆಯನ್ನು ಉಚ್ಚಂಗಿಯ ಪಾಂಡ್ಯರಿಂದ ಎದುರಿಸಬೇಕಾಯಿತು. ಉಚ್ಚಂಗಿ ಕೋಟೆಯನ್ನು ವಶಪಡಿಸಿಕೊಳ್ಳಲು ಬಲ್ಲಾಳನು ನಿರ್ಧರಿಸಿ, ಅಪಾರ ಸೈನ್ಯದೊಂದಿಗೆ ಹೋಗಿ, ಪಾಂಡ್ಯರ ರಾಜ ಕಾಮದೇವನನ್ನು ಸೋಲಿಸಿ ದುರ್ಗವನ್ನು ವಶಪಡಿಸಿಕೊಂಡನು. ಸೋತ ಕಾಮದೇವನು ಬಲ್ಲಾಳನಲ್ಲಿ ಕ್ಷಮಾದಾನ ಕೇಳಲು, ಅವನ ರಾಜ್ಯವನ್ನು ಅವನಿಗೆ ಹಿಂತಿರುಗಿ ಕೊಟ್ಟನು. ಈ ವಿಜಯದಿಂದ ಬಲ್ಲಾಳನು ಅನೇಕ ಬಿರುದುಗಳನ್ನು ಧರಿಸಿದನು. ಶ್ರೀಪೃಥ್ವಿ ವಲ್ಲಭ ಮಹಾರಾಜಾಧಿರಾಜ, ರಾಜ ಪರಮೇಶ್ವರ, ಯಾದವ ಕುಳಂಬರ ದ್ಯುಮಣಿ, ಸರ್ವಜ್ಞ ಚೊಡಾಮಣಿ, ಮಲೆರಾಜ, ರಾಜ ಮಲಪರೊಳು ಗಂಡ, ಗಂಡು ಭೇರುಂಡ, ಕದನ ಪ್ರಚಂಡ, ಶೂರ, ಏಕಾಂಗಿ ವೀರ, ಶನಿವಾರ ಸಿದ್ಧಿ, ಗಿರಿದುರ್ಗ ಮಲ್ಲ, ಛಲಂದಕರಾಮ ಎಂದಿದ್ದವು. ಹೊಯ್ಸಳರು ಉಚ್ಚಂಗಿದುರ್ಗ ಗೆದ್ದಿದ್ದರಿಂದ ಅವರಿಗೆ ಶನಿವಾರ ಸಿದ್ಧಿ, ಗಿರಿದುರ್ಗ ಮಲ್ಲ, ಎಂಬ ಬಿರುದು ಬಂದವೆಂಬ ಸಾಮಾನ್ಯ ಅಭಿಪ್ರಾಯವಿದೆ. ಆದರೆ ಹೊಯ್ಸಳರಿಗಿಂತ ಮೊದಲೇ ಈ ಬಿರುದು ಬಂದಿದೆ ಎಂಬುದನ್ನು ಕೆಲ ಶಾಸನಗಳು ಉಲ್ಲೇಖಿಸುತ್ತವೆ.[೫೬] ಈ ಮೇಲಿನ ಶಾಸನಗಳ ಸಹಾಯದಿಂದ ಹಂಪಿ ಹೊಯ್ಸಳರ ಅಧೀನದಲ್ಲಿತ್ತೆಂದು ಹೇಳಬಹುದಾಗಿದೆ.

ಋ) ವಿಜಯನಗರ ಅರಸರ ಆಳ್ವಿಕೆ

ಹೊಯ್ಸಳ ಸಾಮ್ರಾಜ್ಯವು ಪತನ ಹೊಂದಿದ ತರುವಾಯ ಹಿಂದೂ ಧರ್ಮ ರಕ್ಷಣೆಗೆಂದು ವಿಜಯನಗರ ಸಾಮ್ರಾಜ್ಯವು ಅಸ್ತಿತ್ವಕ್ಕೆ ಬಂದಿತು. ಕ್ರಿ.ಶ.೧೩೩೬ರಿಂದ ಕ್ರಿ.ಶ.೧೫೬೫ರ ವರೆಗೆ ಆಳ್ವಿಕೆ ನಡೆಸಿದ ಇದನ್ನು 'ಮರೆತುಹೋದ ಹಾಗೂ 'ಎಂದೆಂದೂ ಮರೆಯಲಾಗದ ಮಹಾಸಾಮ್ರಾಜ್ಯ' ಎಂದು ವಿದ್ವಾಂಸರು ಬಣ್ಣಿಸಿದ್ದಾರೆ.[೫೭] ಹಿಂದೂ ಧರ್ಮದ ಸಂಸ್ಥಾಪನೆ ಹಾಗೂ ರಕ್ಷಣೆಗಾಗಿ ಸ್ಥಾಪಿತವಾದ ಸಾಮ್ರಾಜ್ಯವೇ ಕ್ರಿ.ಶ.೧೩೩೬ ರಲ್ಲಿ ಸ್ಥಾಪಿಸಲ್ಪಟ್ಟ ವಿಜಯನಗರ ಸಾಮ್ರಾಜ್ಯ. ಇದು ಹಂಪಿಯಲ್ಲಿ ಸ್ಥಾಪನೆಯಾದದ್ದು, "ಕ್ರಿ.ಶ.೧೩೭೫ರ ಹಂಪಿ ಶಾಸನವು "ವಿಜಯ" ಎಂಬ ಹೆಸರಿನ ಪಟ್ಟಣದಲ್ಲಿ ೧ನೇಯ ಹರಿಹರ ಮತ್ತು ಬುಕ್ಕನು ಆಳುತ್ತಿದ್ದರೆಂದು ಅದು ಇಂದ್ರನ ಅಮರಾವತಿಯಂತೆ" ಇತ್ತೆಂದು ವರ್ಣಿತವಾಗಿದೆ.[೫೮] ಹರಿಹರ ಮತ್ತು ಬುಕ್ಕರಾಯನ ರಾಜಧಾನಿಯು ಪಂಪಾ ಕ್ಷೇತ್ರದ ಬಳಿಯಿದ್ದ ವಿಜಯ ಎಂಬ ಪಟ್ಟಣವೆಂದಾಗಿ ಅಲ್ಲದೆ ಇದು ಹೊಸದಾಗಿ ನಿರ್ಮಿಸಲ್ಪಟ್ಟಿದ್ದರಿಂದ ಹೊಸ ಪಟ್ಟಣವೆಂದು ಕರೆಯಲಾಗಿದೆ. ಅಲ್ಲದೆ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಮೂಲ ಪ್ರೇರಕರು ಯಾರು ಕಾರಣಕರ್ತರು ಯಾರು

ವಿದ್ಯಾರಣ್ಯರೋ ಅಥವಾ ಕ್ರಿಯಾಶಕ್ತಿ ಗುರುಗಳೋ ಎಂದು ಅನೇಕ ವಿವಾದಗಳಿವೆ. ಇದಕ್ಕೆ ತೆರೆ ಎಳೆದಂತೆ ಹಂಪಿಗೆ "ಸಮೀಪದ ಕುಕನೂರಿನ ಕ್ರಿ.ಶ. ೧೪೭೦ರ ಶಾಸನದಲ್ಲಿ ಶ್ರೀಮದ್ರಾಜಗುರು ಮಹಿಮಂಡಲಾಚಾರ್ಯ ಶ್ರೀ ಮದ್ವಾಣಿವಿಲಾಸ ಶ್ರೀ ಕ್ರಿಯಾಶಕ್ತಿ ಗುರು" ಎಂದು ಉಲ್ಲೇಖದಿಂದ ಶ್ರೀ ಕ್ರಿಯಾಶಕ್ತಿ ಗುರುವೇ ಸಾಮ್ರಾಜ್ಯ ಸ್ಥಾಪನೆಗೆ ಕಾರಣ ಎಂದು ಅಲ್ಲದೆ ಇವರ ಕುರಿತು ಎರಡು ಶಾಸನಗಳು ಹಂಪಿಯಲ್ಲಿ ದೊರಕುತ್ತವೆ.

ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿ ಅದನ್ನು ಆಳಿದ ಮೊದಲ ಅರಸು ಮನೆತನವೆಂದರೆ ಸಂಗಮ ವಂಶ. ಇದರ ನಂತರ ಸಾಳುವ ವಂಶ, ತುಳುವ ಹಾಗೂ ಅರವೀಡು ವಂಶಸ್ಥರು ಆಳಿದರು. ಹಕ್ಕ–ಬುಕ್ಕರು ಸಂಗಮ ವಂಶಸ್ಥರಾಗಿದ್ದು, ಇವರು ವಿಜಯನಗರ ರಾಜ್ಯ ಸ್ಥಾಪನೆಗೆ ಕಾರಣರಾದರು. ಇವರು ಯಾವ ವಂಶಕ್ಕೆ ಸೇರಿದವರೆಂಬ ಜಿಜ್ಞಾಸೆಗೆ ಹಂಪಿಯ ಕ್ರಿ.ಶ.೧೩೪೬ರ ಶಾಸನ (ಕನಕಗಿರಿ ಗೋಪುರದಲ್ಲಿ ಪೂರ್ವಕ್ಕಿರುವ ಈ ಶಾಸನ) ಮತ್ತು ಕ್ರಿ.ಶ.೧೪೧೦ರ ಕಡಲೆಕಾಳು ಗಣೇಶನ ಗುಡಿಯ ಮುಂಭಾಗದ ಮಂಟಪದಲ್ಲಿರುವ ಶಾಸನ ಹಾಗೂ ಕ್ರಿ.ಶ. ೧೪೨೬ರ ಶಾಸನ ಆನೆ ಸಾಲಿನ ಹಿಂದೆ ಇರುವ ಜೈನ ಬಸದಿಯ ಗೋಡೆಯಲ್ಲಿರುವ ಶಾಸನ ಸಂಗಮರು 'ಯದುವಂಶ'ದವರು ಎಂದು ಉಲ್ಲೇಖಿಸುತ್ತದೆ.

ಅಲ್ಲದೆ ಸಂಗಮ ವಂಶದ ದೊರೆ ಸಂಗಮನೇ ಇರಬೇಕು ಅದಕ್ಕೆಂದೇ ಈ ವಂಶಕ್ಕೆ ಸಂಗಮ ವಂಶವೆಂದು ಹೆಸರು ಬಂದಿರಬಹುದು. ಚಾಮರಾಜನಗರ ತಾಲೂಕಿನ ಹೊಮ್ಮ ಶಾಸನದ ಪ್ರಕಾರ ಇವನ ತಂದೆ ಹೆಸರು ಬುಕ್ಕ ಬೂಪಾಲನೆಂದು, ಸಂಗಮನ ಹೆಂಡತಿ ಕಾಮಾಯಿ. ಈಕೆಗೆ ೫ಜನ ಮಕ್ಕಳು. ಹರಿಹರ, ಕಂಪಣ, ಬುಕ್ಕ, ಮುದ್ದಪ ಮತ್ತು ಮಾರಪ ಎಂಬುವವರು. ಇವರಿಗೆ ಸಂಬಂಧಿಸಿದಂತೆ ಸುಮಾರು ೨೦ ಶಾಸನಗಳು ದೊರೆತರು, ಇವರು ವಿಜಯನಗರದಲ್ಲಿ ರಾಜ್ಯಭಾರ ಆರಂಭಿಸುವುದಕ್ಕೆ ಮೊದಲು ಎಲ್ಲಿ ಆಳ್ವಿಕೆ ನಡೆಸುತ್ತಿದ್ದರೆಂಬ ಉಲ್ಲೇಖ ದೊರೆಯುವುದಿಲ್ಲ.[೫೯]

ಒಂದನೇ ಹರಿಹರ: ಇವನು ಸಂಗಮನ ಹಿರಿಯ ಮಗನಾಗಿದ್ದು, ಹೊಯ್ಸಳ ಸಾಮ್ರಾಜ್ಯದ ಮಹಾಮಂಡಳೇಶ್ವರನಾಗಿದ್ದನು. ಮುಸಲ್ಮಾನರು ಕರ್ನಾಟಕದಲ್ಲಿ ಪ್ರಭಾವಿಶಾಲಿ ಮನೆತನವಾಗುತ್ತಿದ್ದ ಸಂದರ್ಭ ಹಾಗೆಯೇ ಹೊಯ್ಸಳರ ಅವನತಿಯ ಸಂದರ್ಭದ ಕಾಲದಲ್ಲಿ ತನ್ನ ತಮ್ಮಂದಿರ ಸಹಾಯ ಹಸ್ತದಿಂದ ಹೊಯ್ಸಳ ರಾಜ್ಯದ ಉತ್ತರ ಭಾಗದಲ್ಲಿ ಆನೆಗೊಂದಿ, ಹಂಪಿಯನ್ನು ಕೇಂದ್ರವಾಗಿರಿಸಿಕೊಂಡು ಆಡಳಿತ ನಡೆಸಿದನೆಂದು ತಿಳಿದು ಬರುತ್ತದೆ. ಇವನು ಕ್ರಿ.ಶ.೧೩೩೬ ರಿಂದ ಕ್ರಿ.ಶ. ೧೩೫೬ರವರೆಗೆ ಆಳ್ವಿಕೆ ನಿರ್ವಹಿಸುತ್ತಾನೆ ಎಂಬುದು ಸ್ಪಷ್ಟವಾಗುತ್ತದೆ.[೬೦]

ಒಂದನೇ ಬುಕ್ಕರಾಯ: ಸಂಗಮ ವಂಶದ ಒಂದನೇ ಹರಿಹರನ ನಂತರದಲ್ಲಿ ಬರುವ ಅರಸನೇ ಒಂದನೇ ಬುಕ್ಕರಾಯ ಈತನು ಪಟ್ಟಕ್ಕೆ ಬರುವ ಮುಂಚೆ ಇವನ ಹಿರಿಯ ಸಹೋದರ (ಅಣ್ಣ) ಕಂಪಣ ಹತನಾಗಿದ್ದ. ಹರಿಹರನ ಜೊತೆ ನೇರ ರಾಜ್ಯಭಾರ ನಡೆಸಿದರು.

ಇವನ ಕಾಲದಲ್ಲಿಯೇ ಕೇವಲ ೩ ಶಾಸನಗಳು ನಮಗೆ ದೊರೆಯುತ್ತವೆ.

ವೀರ ಬುಕ್ಕಣ್ಣ ಒಡೆಯನು ಹಸ್ತಿನಾವತಿ (ಆನೆಗೊಂದಿ) ಯಿಂದ ಆಳುತ್ತಿದ್ದಂತೆ. ಕ್ರಿ.ಶ. ೧೩೬೬ರ ಬುಕ್ಕರಾಯನ ಶಾಸನವು ಪ್ರಸನ್ನ ವಿರೂಪಾಕ್ಷ ದೇವಾಲಯದ ನೈರುತ್ಯಕ್ಕೆ ನಾಗೇಶಪ್ಪನವರ ಹೊಲದಲ್ಲಿ ದೇವಾಲಯ ಸಮೀಪ ದೊರೆಯುತ್ತದೆ. ಈ ಶಾಸನವನ್ನು ಒಂದನೇ ಬುಕ್ಕರಾಯನ ಮಹಾಪ್ರಧಾನ ಬಸವೆದಣ್ಣಾಕನ ಉಲ್ಲೇಖ ಮಾಡುತ್ತದೆ.[೬೧] ಹಾಗೆಯೇ ಕ್ರಿ.ಶ. ೧೩೭೯ರ ಕನಕಗಿರಿ ಗೋಪುರದ ಕೆಳಗಿರುವ ಶಾಸನವು ರಾಮಾಯಣದಲ್ಲಿ ಬರುವ ದಶರಥನಿಗೆ ಸುಮಂತ್ರ ಹೇಗಿದ್ದನೋ ಹಾಗೆಯೇ ಹರಿಹರನಿಗೆ-ಬುಕ್ಕರಾಯನಿದ್ದ ಎಂಬಂತೆ ಹೊಗಳಿದೆ ಅಲ್ಲದೆ ಸಂಗಮ ವಂಶದ ವಂಶಾವಳಿಯನ್ನೂ ನೀಡಿದೆ.[೬೨] ಹರಿಹರ ಹಾಗೂ ಬುಕ್ಕರೂ ತುಂಗಾಭದ್ರಾ ನದಿಗೆ ಸೇತುವೆ ಕಟ್ಟಿ ಕಾಲುವೆಗಳನ್ನು ತೋಡಿಸಿದ್ದರೆಂದು ತಿಳಿದು ಬರುತ್ತದೆ. ಹಾಗೆಯೆ ಇನ್ನೊಂದು ಶಾಸನವು "ವೀರ ಬುಕ್ಕರಾಯನ ವಿಜಯನಗರ ಪಟ್ಟಣದ ಸೋಮಯ ದೇವರ ಕೊತ್ತಳವನ್ನು ಉಲ್ಲೇಖಿಸುತ್ತದೆ.೬೩ ಒಟ್ಟಾರೆ ೧ನೇ ಬುಕ್ಕರಾಯನ ಕಾಲ ಕ್ರಿ.ಶ. ೧೩೫೭ ರಿಂದ ಕ್ರಿ.ಶ. ೧೩೭೯ ರವರೆಗೆ ಆಡಳಿತದ ಕಾಲಾವಧಿ ಇತ್ತೆಂದು ತಿಳಿದು ಬರುತ್ತದೆ.

"ಇಮ್ಮಡಿ ಹರಿಹರ ಈತನು ಒಂದನೇ ಬುಕ್ಕನ ಮಗನು. ಒಂದನೇ ಬುಕ್ಕನ ನಂತರ ಅಧಿಕಾರಕ್ಕೆ ಬಂದವನೇ ಇಮ್ಮಡಿ ಹರಿಹರ. ಈತನಿಗೆ ಇರುವ ಇನ್ನೊಂದು ಹೆಸರು ವೀರ ಹರಿಹರನೆಂದು. ಬುಕ್ಕನ ತಮ್ಮಂದಿರಾದ ಮಾದಪ್ಪ ಮತ್ತು ಮುದ್ದಪ್ಪರು ಇವರು ವಿಜಯನಗರ ಸಿಂಹಾಸನದಿಂದ ದೂರವೇ ಉಳಿದರೆಂದು ತಿಳಿಯುತ್ತದೆ. ಬಹುಶಃ ಬುಕ್ಕನ ಮರಣಾದ ತರುವಾಯ ಮುದ್ದಪನು ಹಂಪೆಗೆ ಬಂದು ವಿರೂಪಾಕ್ಷ ದೇವರಿಗೆ ದಾನ ನೀಡಿದ ಉಲ್ಲೇಖ ಮಾತ್ರ ಶಾಸನದಿಂದ ತಿಳಿದುಬರುತ್ತದೆ."[೬೪]

ಇಮ್ಮಡಿ ಹರಿಹರನ ಕಾಲದ ೭ ಶಾಸನಗಳು ದೊರೆಯುತ್ತವೆ. "ಕ್ರಿ.ಶ. ೧೩೭೯ ರಲ್ಲಿ ಹೊರಡಿಸಿದ ನದಿ ದಂಡೆಯ ಬಳಿಯ ನರಸಿಂಹ ದೇವಾಲಯದ ಪೂರ್ವಕ್ಕಿರುವ ಬಂಡೆಯ ಮೇಲಿನ ಶಾಸನ ನಲಾನು ಚಕ್ರವರ್ತಿ ನರಸಿಂಹ ದೇವಾಲಯ ಕಟ್ಟಿಸಿದಾಗ ಹರಿಹರನ ಸಂಗಡ ಚಿಕ್ಕ ಒಡೆಯ. ಸಾಯಣ ಅಯ್ಕ, ಅಕ್ಷುದನಾಥ ಒಡೆಯರು ಎಂಬ ದಣ್ಣಾಯಕರು ಇದ್ದರೆಂದು ತಿಳಿಸುತ್ತದೆ."[೬೫]

ಇಮ್ಮಡಿ ಹರಿಹರನನ್ನು ಕುರಿತು ಹಲವು ಶಾಸನಗಳು ಅಲ್ಲಲ್ಲಿ ಕಾಣಸಿಗುತ್ತವೆ. "ಕ್ರಿ.ಶ.೧೩೯೦ರ ಶಾಸನವು ಇಮ್ಮಡಿ ಹರಿಹರನನ್ನು ಉಲ್ಲೇಖಿಸದೆ ಕ್ರಿಯಾ ಒಡೆಯನನ್ನು ಉಲ್ಲೇಖಿಸುತ್ತದೆ. ಇದು ಸದ್ಯಕ್ಕೆ ಗಾಯಿತ್ರಿ ಪೀಠದ ದಕ್ಷಿಣಕ್ಕಿರುವ ದಾರಿಯ ಪಕ್ಕದಲ್ಲಿರುವ ಗುಂಡಿನ ಮೇಲೆ ಈ ಶಾಸನವನ್ನು ಬರೆಯಲಾಗಿದೆ."[೬೬] ಹಾಗೆಯೇ ನದಿ ದಂಡೆಯ ಹತ್ತಿರ ಇರುವ ದೇವಾಲಯ ಬಳಿ ಕ್ರಿ.ಶ.೧೩೮೩ರ ಶಾಸನವು "ಬುಕ್ಕ ರಾಯನ ಮಗ ವೀರ ಹರಿಹರನ ಆಳ್ವಿಕೆಯಲ್ಲಿ ಸಂನಂಜೆನಾಥನ ಶಿವಾಲಯ ಕಟ್ಟಿಸಿದ್ದನ್ನು ದಾಖಲಿಸುತ್ತದೆ."[೬೭]

"ಇದೇ ಕಾಲಘಟ್ಟದ ಗಾಣಗಿತ್ತಿ ಬಸದಿಯ ಶಾಸನವು ಕುಂಥು ಜಿನಾಲಯವನ್ನು ಶಿಲೆಯಲ್ಲಿ ನಿರ್ಮಿಸಿದ್ದರ ಬಗ್ಗೆ ಮತ್ತು ಜೈನ ಮುನಿಗಳ ಪಟ್ಟಾವಳಿಯನ್ನು ದಾಖಲಿಸುತ್ತದೆ."[೬೮]

ಇಮ್ಮಡಿ ಹರಿಹರನ ಕುರಿತು ಇನ್ನೂ ಹಲವು ಶಾಸನಗಳು ದೊರೆಯುತ್ತವೆ. "ಹೇಮಕೂಟದ ಹಿಂದೆ ಇರುವ ಬಂಡೆಯ ಮೇಲಿನ ಶಾಸನ ಕ್ರಿ.ಶ. ೧೩೯೭ ಕ್ಕೆ ಸೇರಿದ ಹರಿಹರನ ಶಾಸನವು ವೀರ ಹರಿಹರನ ಪತ್ನಿ ಬುಕ್ಕನೇ ಎಂದಿದೆ. ಹಾಗೂ ಬುಕ್ಕನೆಯು ಭಾಸ್ಕರ ದೇವಯ್ಯನ ಶಿಷ್ಯೆಯಾಗಿದ್ದಳೆಂದಿದೆ".[೬೯] ಈ ಕಾಲದ ಉಲ್ಲೇಖವಿಲ್ಲದ ಮಾತಂಗ ಪರ್ವತ ಶಾಸನವು ವೀರ ಹರಿಹರನನ್ನು ಉಲ್ಲೇಖಿಸುತ್ತದೆ."[೭೦] ಹಜಾರ ರಾಮ ದೇವಾಲಯದ ಹಿಂದೆ ಪಾಳು ಬಿದ್ದ ನಿವೇಶನದಲ್ಲಿರುವ ವಿಗ್ರಹ ಪೀಠದಲ್ಲಿರುವ ಶಾಸನವು "ವೀರ ಹರಿಹರ ರಾಯನ ಮನೆಯ ಹೆಗ್ಗಡತಿ ಚೌಡಾಯಿಯನ್ನೂ"[೭೧] ಹೀಗೆಲ್ಲ ಇಮ್ಮಡಿ ಹರಿಹರನ ಶಾಸನಗಳು ನಮಗೆ ಈ ಎಲ್ಲಾ ಮಾಹಿತಿಯನ್ನು ನೀಡುತ್ತವೆ. ಈತನ ಆಳ್ವಿಕೆ ಕಾಲವು ಕ್ರಿ.ಶ. ೧೩೭೮ ರಿಂದ ಕ್ರಿ.ಶ. ೧೪೦೪ ರವರೆಗೆ ಆಳ್ವಿಕೆ ನಡೆಸಿದ್ದನ್ನೂ ಕಾಣಬಹುದು.

ಇಮ್ಮಡಿ ಹರಿಹರನ ನಂತರ ಈತನ ಮಗನಾದ ೧ನೇ ದೇವರಾಯ ಅಧಿಕಾರಕ್ಕೆ ಬರುತ್ತಾನೆ. ಈತನ ಆಳ್ವಿಕೆ ಕುರಿತಾದ ಕೇವಲ ಒಂದು ಶಾಸನ ಮಾತ್ರ ದೊರೆಯುತ್ತದೆ. ಕಡಲೇಕಾಳು ಗಣೇಶದ ಗುಡಿಯ ಮುಂಭಾಗದ ಮಂಟಪದಲ್ಲಿ ನಿಲ್ಲಿಸಿರುವ "ಕ್ರಿ.ಶ. ೧೪೧೦ ರ ಶಾಸನವು ಸಂಗಮದಿಂದ ಹಿಡಿದು ಒಂದನೇ ದೇವರಾಯನವರೆಗೆ ವಿಜಯನಗರವನ್ನಾಳಿದ ಅರಸರ ವಂಶಾವಳಿಯನ್ನು ಹೇಳುತ್ತದೆ. ಈ ಸಂಗಮ ಅರಸರ ಮೂಲವು ಚಂದ್ರನಿಂದ ಆರಂಭಿಸಿ ಯಯಾತಿಯ ವರೆಗೆ ಹೇಳಿ ಯದುವಂಶದ ಸೋಮಾನ್ವಯದಲ್ಲಿ ಸಂಗಮನೆಂಬುವನು ಉದಯಿಸಿದನೆಂದು ಹೇಳಲಾಗಿದೆ. ಅಷ್ಟೆ ಅಲ್ಲದೆ ದೇವರಾಯನನ್ನು ಯಾದವ ವಂಶ ಪ್ರದೀಪನೆಂದು ಕರೆಯಲಾಗಿದೆ. ಈ ದೇವರಾಯನ ಮಂತ್ರಿ ಲಕ್ಷ್ಮೀಧರನೆಂದು, ಇವನು ಮೌಲ್ಯವಂತ ಸಹಜ ಗುಹೆಯೊಂದರಲ್ಲಿ ಮಹಾಶಕ್ತಿ ಗಣಪತಿಯನ್ನು ಸ್ಥಾಪಿಸುತ್ತಾನೆ."[೭೨] ಈ ಮೌಲ್ಯವಂತ ರಜತಗಿರಿ ಪರ್ವತವಾಗಿ ನಂತರ ಇದು ರಘುನಾಥ ಬೆಟ್ಟಕ್ಕೆ ಹೋಗಿದೆ ಎಂದು ತಿಳಿದು ಬರುತ್ತದೆ. ಒಟ್ಟಾರೆ ಒಂದನೇ ದೇವರಾಯನು ಕ್ರಿ.ಶ. ೧೪೦೪ ರಿಂದ ಕ್ರಿ.ಶ. ೧೪೨೨ ರವರೆಗೆ ಆಳ್ವಿಕೆ ನಡೆಸಿದನೆಂದು ತಿಳಿಯುತ್ತದೆ.

ಕ್ರಿ.ಶ. ೧೪೨೪ ರಿಂದ ಕ್ರಿ.ಶ. ೧೪೪೬ ರವರೆಗೆ ಆಡಳಿತ ಮಾಡಿದ ಮಹಾನೀಯನೆಂದರೆ ಇಮ್ಮಡಿ ದೇವರಾಯ ಅಥವಾ ಪ್ರೌಢದೇವರಾಯ. ಈತನು ೧ನೇ ದೇವರಾಯನ ನಂತರ ಆತನ ಮಕ್ಕಳಾದ ರಾಮಚಂದ್ರ ಮತ್ತು ವಿಜಯ ಬುಕ್ಕರಾಯನು ಅಲ್ಪಕಾಲ ಆಡಳಿತ ನಡೆಸಿದರೂ ಅವರ ಕಾಲದ ಯಾವ ಶಾಸನವು ದೊರೆಯದು. ಆದರೆ ೧ನೇ ದೇವರಾಯನ ಮೊಮ್ಮಗ ವಿಜಯ ಬುಕ್ಕರಾಯನ ಮಗನೇ ಇಮ್ಮಡಿ ದೇವರಾಯ ಅಥವಾ ಪ್ರೌಢದೇವರಾಯ ಅಧಿಕಾರದ ಚುಕ್ಕಾಣಿ ಹಿಡಿಯುತ್ತಾನೆ. ಈತನ ಕುರಿತಾದ ೩ ಶಾಸನಗಳು ನಮಗೆ ದೊರೆಯುತ್ತವೆ.

ಅದರಲ್ಲಿ ಒಂದು ಶಾಸನವು ಗಜಶಾಲೆಯ ಹಿಂದೆ ಇರುವ ಜೈನ ಬಸದಿಯ ಜೊತೆಯಲ್ಲಿರುವ ಕ್ರಿ.ಶ. ೧೪೨೬ರ ಶಾಸನವು "ದೇವರಾಯನು ವಿಜಯನಗರದಲ್ಲಿ ರಾಜ್ಯವಾಳುತ್ತಿದ್ದನೆಂದು ಹೇಳಿ, ವಿಜಯನಗರ ಅರಸರ ವಂಶಾವಳಿ ನೀಡುವುದರ ಜೊತೆಗೆ ಅದು ಯಾದವ ಅನ್ವಯದ ಬುಕ್ಕನಿಂದ ಆರಂಭಿಸಿ ವೀರದೇವರಾಯನ (ಪ್ರೌಢದೇವರಾಯ)ವರೆಗೆ ಆಳ್ವಿಕೆ ನಡೆಸಿದ ಅರಸರ ವಿವರ ನೀಡುತ್ತದೆ. ಅಲ್ಲದೆ ಪಾರ್ಶ್ವ ಚೈತ್ಯಾಲಯವನ್ನು ನಿರ್ಮಿಸಿದ್ದರ ಕುರಿತು ಹೇಳುತ್ತದೆ."[೭೩] ಹಾಗೆಯೇ ಕ್ರಿ.ಶ. ೧೪೩೯ರ ಅಹಮ್ಮದ್ ಖಾನ್ ಧರ್ಮಶಾಲೆಯ ಮುಂಭಾಗದ ತೊಲೆಯ ಮೇಲಿನ ಶಾಸನವು "ದೇವರಾಯ ಮಹಾರಾಯನ ಕಟ್ಟಿಗೆ ಸೇವೆಯ ಅಹಮ್ಮದ್ ಖಾನರು ರಾಜನಿಗೆ ಧರ್ಮವಾಗಬೇಕೆಂದು ಧರ್ಮ ಶಾಲೆ ಮತ್ತು ಬಾವಿ ಕಟ್ಟಿಸಿದ್ದನ್ನು ದಾಖಲಿಸುತ್ತವೆ."[೭೪] ಹಾಗೆಯೇ ಈ ಕಾಲದ ಉಲ್ಲೇಖವಿಲ್ಲದ ಹಜಾರರಾಮ ದೇವಾಲಯದ ಪೂರ್ವಭಾಗದ ಅಧಿಷ್ಠಾನದಲ್ಲಿರುವ ಶಾಸನವು "ಕಾಳಿಕಾದೇವಿಯು ವಿಕ್ರಮಾರ್ಕನನ್ನೂ ಆಶೀರ್ವದಿಸಿದಂತೆ, ಪಂಪಾದೇವಿಯು ದೇವರಾಯನನ್ನು ಆಶೀರ್ವದಿಸಲಿ" ಎಂದು ದಾಖಲಿಸಿದೆ.[೭೫] ಇವೇ ಮೂರು ಶಾಸನಗಳ ಹೊರತಾಗಿ ಮತ್ತಾವ ಶಾಸನಗಳು ಪ್ರೌಢದೇವರಾಯನ ಕುರಿತಾಗಿ ಶಾಸನ ಕಂಡುಬಂದಿಲ್ಲ. ಇದು ಆ ಕಾಲದ ಆಳ್ವಿಕೆಯ ಸಂಖ್ಯೆತವಾಗಿಯೂ ಕಾಣುತ್ತದೆ. ಈತನ ತರುವಾಯ ಸಿಂಹಾಸನವೇರಿದವನು ಈತನ ಮಗ ಮಲ್ಲಿಕಾರ್ಜುನ(ಕ್ರಿ.ಶ. ೧೪೪೯-೧೪೬೫). ಈತನು ಆಳ್ವಿಕೆ ನಡೆಸಿದರೂ ಇವನ ಕಾಲದ ಯಾವ ಶಾಸನಗಳು ಹಂಪಿಯಲ್ಲಿ ಲಭ್ಯವಿಲ್ಲ.

ಮಲ್ಲಿಕಾರ್ಜುನರಾಯನ ನಂತರ ವಿಜಯನಗರ ಸಿಂಹಾಸನಕ್ಕೆ ಬಂದವನೇ ವಿರೂಪಾಕ್ಷರಾಯನು. ಕ್ರಿ.ಶ. ೧೪೬೫ ಕ್ರಿ.ಶ. ೧೪೮೫ ರವರೆಗೆ ಅಧಿಕಾರದಲ್ಲಿದ್ದನು. ಈತನ ಕಾಲದ ಒಂದು ಶಾಸನ ಮಾತ್ರ ದೊರೆತಿದ್ದು, ಹಂಪಿಯ ತುರ್ತು ಕಾಲುವೆ ಆಣೆಕಟ್ಟಿನಿಂದ ೬.೨ ಕಿ.ಮೀ. ಕಾಲುವೆಯ ಬಲಗುಂಡಿನ ಮೇಲೆ ಇರುವ ಕಾಲದ ಉಲ್ಲೇಖವಿಲ್ಲದ ಶಾಸನವು "ವಿರೂಪಾಕ್ಷನ ಆಜ್ಞೆಯಂತೆ ಹೆಗ್ಗಡೆ ಹಿತ್ತಲ ಬಾಗಿಲ ಬಸವಣ್ಣ ಅಣ್ಣನು ಪೊದೆ ಗುಂಡನ್ನು ಹೊಡೆದು ನಾಲೆಯನ್ನು ಮಾಡಿದ ದಾಖಲೆಯಿದೆ".[೭೬]

ವಿಜಯನಗರ ಸಾಮ್ರಾಜ್ಯವನ್ನು ನಂತರ ಆಳಿದ ಮನೆತನವೆಂದರೆ, ಸಾಳುವ ವಂಶದ ಅರಸರು. ಇವರ ೨೦ ವರ್ಷಗಳ ಆಡಳಿತದ ಅವಧಿಯಲ್ಲಿ ಸಾಳುವ ನರಸಿಂಹ, ಸಾಳುವ ತಿಮ್ಮ, ಸಾಳುವ ವೀರ ನರಸಿಂಹ ಪ್ರಮುಖವಾಗಿ ಆಳ್ವಿಕೆ ಮಾಡಿದರು. ಆದರೆ ಇವರ ಕುರಿತು ಯಾವ ಶಾಸನಗಳು ಹಂಪಿಯಲ್ಲಿ ದೊರೆಯುವುದಿಲ್ಲ.

ವಿಜಯನಗರ ಸಾಮ್ರಾಜ್ಯವನ್ನು ಆಳಿದ ೩ನೇ ಅರಸು ಮನೆತನವೆಂದರೆ ತುಳುವ ಅರಸು ಮನೆತನ. ಈ ವಂಶದ ಪ್ರಮುಖ ಅರಸರು ಎಂದರೆ, ಮೊದಲ ದೊರೆ ತುಳುವ ನರಸಿಂಹನಾಯಕ, ಕೃಷ್ಣದೇವರಾಯ, ಅಚ್ಯುತರಾಯ ಮತ್ತು ಸದಾಶಿವರಾಯ. ಈ ವಂಶವು

ವಿಜಯನಗರ ಸಾಮ್ರಾಜ್ಯವನ್ನು ಕ್ರಿಶ ೧೫೦೫ ರಿಂದ ೧೫೬೫ರ ವರೆಗೆ ಅಂದರೆ ೬೦ ವರ್ಷಗಳವರೆಗೆ ಆಳ್ವಿಕೆಯನ್ನು ನಡೆಸಿತು.

ತುಳುವ ವಂಶದ ಮೊದಲ ಅರಸನೆಂದರೆ ನರಸನಾಯಕ. ಈತನ ಕಾಲದ ೨ ಶಾಸನಗಳು ಹಂಪಿಯಲ್ಲಿ ದೊರೆಯುತ್ತವೆ. ಕಡ್ಡಿರಾಂಪುರದ ಹತ್ತಿರ ಮುಸ್ಲಿಂ ಗೋರಿಗಳ ಸಮೀಪದಲ್ಲಿ ಗುಂಡಿನ ಮೇಲೆ ಇರುವ ಕ್ರಿ.ಶ. ೧೫೦೫ರ ಶಾಸನವು "ವಿಜಯನರಸಿಂಹ ರಾಯನ ಆಳ್ವಿಕೆಯ ಕಾಲದಲ್ಲಿ ಕಡೆ ಕಾಮಲಪುರದಲ್ಲಿನ ಕನ್ನೆಕಟ್ಟೆ ಬಳಿ ಹರಳು ತಿಪ್ಪೆ ಗುಡ್ಡದಲ್ಲಿ ಸೈದುಪೀರು ಅಲಿ ಎಂಬುವನು ಗುಮ್ಮಟವನ್ನು ಕಟ್ಟಿಸಿದಂತೆ ದಾಖಲೆಯಿದೆ."[೭೭] "ಕ್ರಿ.ಶ.೧೫೧೦ರ ಶಾಸನ ವಿರೂಪಾಕ್ಷ ದೇವಾಲಯದ ರಂಗಮಂಟಪದ ಒಳಗೆ ಪೂರ್ವಗೋಡೆಯಲ್ಲಿದ್ದು, ಇದು 'ನರಸನಾಯಕನ ತಾಯಿ ಬುಕ್ಕಾಜಿ ಅಮ್ಮನು ಹಂಪಿಯ ವಿರೂಪಾಕ್ಷ ದೇವರ ನೈವೇದ್ಯಕ್ಕಾಗಿ ಭೂದಾನ ಮಾಡಿದ್ದನ್ನು ತಿಳಿಸುತ್ತದೆ."[೭೮] ಉಳಿದಂತೆ ಬೇರಾವ ಶಾಸನಗಳು ನರಸನಾಯಕನು ಕುರಿತು ಯಾವ ಮಾಹಿತಿಯನ್ನು ನೀಡುವುದಿಲ್ಲ. ಈತನು ಕ್ರಿ.ಶ.೧೫೦೫ ರಿಂದ ಕ್ರಿ.ಶ. ೧೫೦೯ರ ವರೆಗೂ ಅಧಿಕಾರ ನಿರ್ವಹಿಸಿದ್ದಾನೆ.

ಕೃಷ್ಣದೇವರಾಯ ಇಡೀ ವಿಜಯನಗರ ಸಾಮ್ರಾಜ್ಯದಲ್ಲಿಯೇ ಅತ್ಯಂತ ಪ್ರಖ್ಯಾತ ಹಾಗೂ ಈತನ ಆಳ್ವಿಕೆಯು ಸುವರ್ಣಾಕ್ಷರದಲ್ಲಿ ಬರೆದಿಡುವಂತಹ ಆಳ್ವಿಕೆ ಎಂದು ಇತಿಹಾಸವು ಸಾರಿ ಹೇಳುತ್ತದೆ. ತುಳುವ ವಂಶದ ಅತ್ಯಂತ ಪ್ರಬಲ ಹಾಗೂ ಚತುರ ರಾಜನೆಂದರೆ ಕೃಷ್ಣದೇವರಾಯನೇ. ಇವನು ನರಸನಾಯಕನ ಮಲ ತಮ್ಮನಾಗಿದ್ದಾನೆ. ಇವನ ಕುರಿತು ಇಲ್ಲಿ ೨೦ ಶಾಸನಗಳು ದೊರೆಯುತ್ತವೆ. ಕ್ರಿ.ಶ. ೧೫೧೦ರ ಶಾಸನವು ಇದು ವಿರೂಪಾಕ್ಷ ದೇವಾಲಯದ ರಂಗಮಂಟಪದ ಪ್ರದೇಶದ ಎದುರುಗಡೆ ನಿಲ್ಲಿಸಿರುವ ಈ ಶಾಸನವು "ತುಳುವ ವಂಶಾವಳಿಯನ್ನು ಪೌರಾಣಿಕ ವ್ಯಕ್ತಿ ಚಂದ್ರನಿಂದ ಆರಂಭಿಸಿ ಕೃಷ್ಣದೇವರಾಯನವರೆಗೆ ನೀಡುತ್ತದೆ. ಅಲ್ಲದೆ ಕೃಷ್ಣದೇವರಾಯನು ತನ್ನ ಪಟ್ಟಾಭಿಷೇಕದ ದಿನ ವಿರೂಪಾಕ್ಷ ದೇವರಿಗೆ ದಾನ ನೀಡಿದ್ದನ್ನು ದಾಖಲಿಸುತ್ತದೆ."[೭೯] ಇದೇ ವಿಷಯವನ್ನು ಅದೇ ದೇವಸ್ಥಾನದ ಬಿಷ್ಟುಪ್ಪಯ್ಯನ ಗೋಪುರದ ಹಿಂಬದಿಯ ಶಾಸನ ಹೇಳುತ್ತದೆ. ಇದೇ ದೇವಾಲಯದ ದಕ್ಷಿಣ ಪ್ರವೇಶದ್ವಾರದ ಎರಡು ಬದಿಯಲ್ಲಿ ಇರುವ ಕ್ರಿ.ಶ. ೧೫೧೩ರ ಶಾಸನವು "ಕೃಷ್ಣದೇವರಾಯ ತನ್ನ ತಂದೆ ನರಸಣ್ಣನಾಯಕ ತಾನು ನಾಗಜಿಯವರಿಗೆ ಪುಣ್ಯವಾಗಲೆಂದು ವಿರೂಪಾಕ್ಷ ದೇವರಿಗೆ ನೈವೇದ್ಯ ಉತ್ಸವಕ್ಕೆ ಕೆಲವು ಗ್ರಾಮಗಳನ್ನು ಪೂಜಾ-ಪರಿಕರಗಳನ್ನು ದಾನ ನೀಡಿದ್ದನೆಂದು ತಿಳಿಸಲಾಗಿದೆ."[೮೦]

ಕ್ರಿ.ಶ. ೧೫೧೦ ಕಾಲಕ್ಕೆ ಸೇರಿದ ಕೃಷ್ಣಸ್ವಾಮಿ ದೇವಾಲಯದ ಮುಂದಿನ ಕಲ್ಲಿನಲ್ಲಿರುವ ಶಾಸನವು ಕೃಷ್ಣದೇವರಾಯನನು ಉದಯಗಿರಿಯಿಂದ ತಂದ ಬಾಲಕೃಷ್ಣ ದೇವರ ವಿಗ್ರಹವನ್ನು ಪ್ರತಿಷ್ಠಾಪಿಸಿದನು. ಆ ದೇವರ ಕಾರ್ಯಕ್ಕೂ ಹಾಗೂ ಬ್ರಾಹ್ಮಣರಿಗೂ ದಾನನೀಡಿದ ವಿವರವಿದೆ. ಹಾಗೆಯೇ ವಿಠ್ಠಲ ದೇವಾಲಯದ ರಂಗಮಂಟಪದ ದಕ್ಷಿಣ ಪ್ರವೇಶದ್ವಾರದ ಬಲಭಾಗದಲ್ಲಿರುವ

ಇದೇ ಕಾಲದ ಶಾಸನವು "ಕೃಷ್ಣದೇವರಾಯ ತನ್ನ ತಂದೆ-ತಾಯಿಗಳಿಗೆ ಪುಣ್ಯವಾಗಬೇಕೆಂದು ವಿಠಲ ದೇವರಿಗೆ ನೈವೇದ್ಯಕ್ಕಾಗಿ ಕೆಲವು ಗ್ರಾಮಗಳನ್ನು ದಾನನೀಡಿರುವ ವಿಷಯ ತಿಳಿಸುತ್ತದೆ."[೮೧] ಇದೇ ದೇವಾಲಯದ ಸಭಾ ಮಂಟಪದ ಪ್ರವೇಶದ ಬಾಗಿಲ ಬಲಕ್ಕಿರುವ ಇದೇ ಕಾಲದ ಶಾಸನವು "ಕೃಷ್ಣದೇವರಾಯ ವಿಠಲ ದೇವರ ಪೂಜಾ ದಿನಗಳಿಗೆಕೆಲವು ಗ್ರಾಮಗಳನ್ನು ದಾನ ನೀಡಿದ್ದು ಮತ್ತು ಆತನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲದೇವಿಯರು ವಿಠಲದೇವರಿಗೆ ಗೋಪುರ ಕಟ್ಟಿಸಿ ದೇವರ ಪೂಜಾ ಪರಿಕರಗಳನ್ನು ದಾನ ನೀಡಿದ ವಿಷಯ ತಿಳಿಸುತ್ತದೆ. ಹಾಗೆಯೇ ವಿಜಯ ವಿಠಲ ದೇವಾಲಯ ಪರಿಸರದ ಶಾಸನಗಳು ವಿಠಲ ದೇವರಿಗೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತವೆ."[೮೨]

ಕಡ್ಡಿರಾಂಪುರದ ನೈರುತ್ಯಕ್ಕೆ ಸುಮಾರು ೧/೨ ಕಿ.ಮೀ. (ಅರ್ಧ ಕಿ.ಮೀ.) ದೂರದಲ್ಲಿ ಶಿಥಿಲವಾದ ಅನಂತಶಯನ ದೇವಾಲಯದ ಹತ್ತಿರ ಬಂಡೆಗಲ್ಲಿನ ಮೇಲೆ ಇರುವ ಕ್ರಿ.ಶ. ೧೫೧೩ರ ಶಾಸನವು "ಕೃಷ್ಣದೇವರಾಯನು ಪ್ರಸನ್ನ ವಿರೂಪಾಕ್ಷ ದೇವರ ಪೂಜೆ ಮತ್ತು ಉತ್ಸವಗಳಿಗೆ ಕಂನಕಿಯ ಕಟ್ಟೆ ಗ್ರಾಮವನ್ನು ದಾನ ಮಾಡಿದ ವಿಷಯ ತಿಳಿಸುತ್ತದೆ."[೮೩] ಅಲ್ಲದೆ ಹಜಾರರಾಮ ದೇವಾಲಯದ ಉತ್ಸವ ಮಂದಿರದ ದಕ್ಷಿಣ ಗೋಡೆಯಲ್ಲಿನ ಇದೇ ಕಾಲದ ಶಾಸನವು "ಕೃಷ್ಣದೇವರಾಯನು ರಾಮಚಂದ್ರ ದೇವರ ಸೇವೆಗಾಗಿ ಕೆಲವು ಗ್ರಾಮಗಳನ್ನು ದಾನ ನೀಡಿರುವುದಾಗಿ ಉಲ್ಲೇಖಿಸುತ್ತವೆ."[೮೪]

ಹಾಗೆಯೇ ಕ್ರಿಶ ೧೫೧೫ ರ ಶಾಸನವು "ಕೃಷ್ಣದೇವರಾಯ ಉದಯಗಿರಿಯಿಂದ ತಂದೆ ಬಾಲಕೃಷ್ಣದೇವರನ್ನು ಪ್ರತಿಷ್ಠಾಪನೆ ಮಾಡಿ ಅದರ ಪಂಚಕರ್ಮಗಳಿಗೆ ಅನೇಕ ದಾನಗಳನ್ನು ಹಾಗೂ ದೇವರ ಪೂಜೆಗೆಂದು ಹಲವಾರು ಗ್ರಾಮಗಳನ್ನು ಹಾಗೂ ಬ್ರಾಹ್ಮಣರಿಗೆ ಮನೆಗಳನ್ನು, ಗದ್ದೆಗಳನ್ನು ದಾನ ನೀಡುತ್ತಾನೆಂದು ತಿಳಿಸುತ್ತದೆ. ಈ ಶಾಸನದಲ್ಲಿ ಕ್ರಿಶ ೧೫೧೪ ಅಲ್ಲದೆ ಕ್ರಿ.ಶ. ೧೫೧೭, ಕ್ರಿ.ಶ. ೧೫೧೯, ಕ್ರಿಶ ೧೫೨೨ ಮತ್ತು ಕ್ರಿ.ಶ. ೧೫೨೫ರ ಅವಧಿಯಲ್ಲಿ ದಾನ ಬಿಟ್ಟಿರುವ ವಿಷಯವಿದೆ."[೮೫] ವಿಠಲ ದೇವಾಲಯದ ೩ ಶಾಸನಗಳು (ಕ್ರಿ.ಶ. ೧೫೧೬) "ಕೃಷ್ಣದೇವರಾಯ ವಿಠಲ ದೇವರಿಗೆ ನೂರು ಕಂಬಗಳ ಮಂಟಪ ಕಟ್ಟಿಸಿದ್ದನ್ನು ತಿಳಿಸುತ್ತದೆ."[೮೬] ಹಜಾರರಾಮಸ್ವಾಮಿ ದೇವಾಲಯದ ದಕ್ಷಿಣ ಗೋಡೆಯಲ್ಲಿನ ಕ್ರಿಶ ೧೫೨೦ರ ಶಾಸನವು "ಕೃಷ್ಣದೇವರಾಯ ಆಳ್ವಿಕೆಯ ಕಾಲದಲ್ಲಿ ಮಹಾಮಂಡಳೇಶ್ವರ ಚಿಕ್ಕ ತಿಮ್ಮದೇವನ ಮಗ ತಿಮ್ಮರಾಜನು ರಾಮಚಂದ್ರದೇವರ ಭಂಡಾರಕ್ಕೆ ಕೆಲವು ದಾನಗಳನ್ನು ನೀಡಿದ್ದನ್ನು ದಾಖಲಿಸುತ್ತದೆ."[೮೭]

ಕಡ್ಡಿರಾಂಪುರ-ಹಂಪಿ ರಸ್ತೆಯ ಪೂರ್ವಕ್ಕೆ ತುರ್ತು ಕಾಲುವೆಯ ಉತ್ತರಕ್ಕಿರುವ ವೈಷ್ಣವ ದೇವಾಲಯದ ಎದುರಿನ ಕಲ್ಲಿನಲ್ಲಿರುವ ಕ್ರಿ.ಶ. ೧೫೨೪ರ ಶಾಸನವು "ಹಿರಿಯ ಕಾಲುವೆಯ ರಘುನಾಥದೇವರ ನೈವೇದ್ಯಕ್ಕೆ ಕೃಷ್ಣದೇವರಾಯ ಕೆಲವು ದಾನ ಬಿಟ್ಟಿದ್ದನ್ನು ದಾಖಲಿಸುತ್ತದೆ."[೮೮]

ಕ್ರಿ.ಶ. ೧೫೨೮ರ ತುಂಡು ಶಾಸನವು ಇದನ್ನು ಕೃಷ್ಣಸ್ವಾಮಿ ದೇವಾಲಯದ ಆವರಣದಲ್ಲಿ ಇರಿಸಲಾಗಿದೆ. ಇದು "ಕೃಷ್ಣರಾಯ ಮಹಾರಾಯನನ್ನು ಹಾಗೂ ಕೃಷ್ಣದೇವರಾಯನ ಆಳ್ವಿಕೆಯನ್ನು ದಾಖಲಿಸುತ್ತದೆ."[೪೯] ೭೫ ಈ ಶಾಸನವು ರಾಣಿ ಸ್ನಾನಗೃಹದ ನೈರುತ್ಯ ದಿಕ್ಕಿಗೆ ಶಿಥಿಲವಾದ ದೇವಾಲಯದ ಹತ್ತಿರ ಹುಣಸೆ ಮರದ ಕೆಳಗಿರುವ ಕಲ್ಲಿನ ಮೇಲೆ ಕೆತ್ತಲಾಗಿದೆ. ಉಗ್ರ ನರಸಿಂಹ ದೇವರ ಎದುರು ಎಡಕ್ಕೆ ನಿಲ್ಲಿಸಿರುವ ಕ್ರಿ.ಶ. ೧೫೨೮ರ ಶಾಸನವು "ಕೃಷ್ಣದೇವರಾಯ ಕೃಷ್ಣಾಪುರದಲ್ಲಿ ಶ್ರೀ ಲಕ್ಷ್ಮಿನರಸಿಂಹ ದೇವರನ್ನು ಪ್ರತಿಷ್ಠಾಪಿಸಿ, ಆ ದೇವರ ಪೂಜೆಗೆ ಕೆಲವು ಗ್ರಾಮಗಳನ್ನು ದಾನ ಬಿಟ್ಟ ವಿಷಯ ತಿಳಿಸುತ್ತದೆ."[೫೦] ಹೀಗೆ ಹಂಪಿಯ ಕೃಷ್ಣದೇವರಾಯನ ಶಾಸನಗಳು ವಿರೂಪಾಕ್ಷ, ವಿಜಯವಿಠಲ,ರಾಮಚಂದ್ರ ಮುಂತಾದ ದೇವರಿಗೆ ನೈವೇದ್ಯಕ್ಕೆ ದಾನ ಬಿಟ್ಟಿದ್ದು, ಬಾಲಕೃಷ್ಣ, ಲಕ್ಷ್ಮಿನರಸಿಂಹ ದೇವರನ್ನು ಪ್ರತಿಷ್ಠಾಪಿಸಿ ದೇವರ ಪೂಜೆಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಕೃಷ್ಣದೇವರಾಯ ಕ್ರಿ.ಶ.೧೫೦೯ ರಿಂದ ೧೫೨೯ ರವರೆಗೆ ಆಳ್ವಿಕೆ ಮಾಡಿದ್ದಾನೆ.

ಅಚ್ಯುತ ದೇವರಾಯ ಕೃಷ್ಣದೇವರಾಯನ ನಂತರ ಆಡಳಿತದ ಚುಕ್ಕಾಣಿ ಹಿಡಿದವನೇ ಅಚ್ಯುತ ದೇವರಾಯ. ಈತನು ಕೃಷ್ಣದೇವರಾಯನ ಮಲ ಸಹೋದರ. ಅಚ್ಯುತದೇವರಾಯ ಈತನಿಗೆ ಸಂಬಂಧಿಸಿದ ಶಾಸನಗಳು ಹಲವಾರು ಇವೆ. ದಕ್ಷಿಣ ಅದಿಷ್ಠಾನದಲ್ಲಿರುವ "ಕ್ರಿ.ಶ.೧೫೧೮ರ ಶಾಸನವು ಅಚ್ಯುತ ದೇವರಾಯನು ವಿಠಲದೇವರ ನಿತ್ಯಪೂಜೆಗೆ ಗ್ರಾಮಮೊಂದನ್ನು ಸಮರ್ಪಿಸಿದಂತೆ ಶಾಸನ ಹೇಳುತ್ತದೆ."[೫೧] ಕಾಮಾಪುರದಲ್ಲಿರುವ ಕೇಂದ್ರ ಪ್ರಾಚ್ಯವಸ್ತು ಸಂಗ್ರಹಾಲಯ ರಾಯನ ಆಳ್ವಿಕೆಯ ಸಾಳುವ ದಣ್ನಾಯಕನ ತನ್ನ ಆಡಳಿತದಲ್ಲಿದ್ದ ಕಾಮಲಾಪುರ ಸ್ಥಳದ ಕೊಂಡಮಾರಯ್ಯ ಪಾಳಯದ ಭೂಮಿಯನ್ನು ನರಸಿಂಹದೇವರ ದೀಪಾರಾಧನೆಗೆ ದಾನ ನೀಡಿದ ವಿಷಯ ತಿಳಿಯುತ್ತದೆ."[೫೨]

ಕೃಷ್ಣಸ್ವಾಮಿ ದೇವಾಲಯದ ದಕ್ಷಿಣ ಗೋಡೆಯಲ್ಲಿನ "ಕ್ರಿ.ಶ.೧೫೩೨ರ ಶಾಸನವು ಅಚ್ಯುತ ದೇವರಾಯನು ಬಾಲಕೃಷ್ಣದೇವರಿಗೆ ಕೃಷ್ಣಾಪುರ ಪೇಟೆ ದವಸದ ಅಂಗಡಿಗಳಲ್ಲಿ ಬರುತ್ತಿದ್ದ ಆದಾಯವನ್ನು ಸಮರ್ಪಿಸಿದ್ದನ್ನು ದಾಖಲಿಸಲಾಗಿದೆ. ಇದೇ ಕಾಲಕ್ಕೆ ಸೇರಿದ ಮಾತಂಗ ಪರ್ವತದ ಶಾಸನವು ಅಚ್ಯುತ ದೇವರಾಯನ ಆಳ್ವಿಕೆಯ ಕಾಲದಲ್ಲಿ ವಿಜಯನಗರದ ಎಲೆಯ ಮಹಾನಾಡ ಹಲವಾರು ಸೇರಿ ಮಾತಂಗ ಪರ್ವತದ ವಿರೂಪಾಕ್ಷ ದೇವರ ಪುತ್ರ ವೈಭೋಗಕ್ಕೆ ದಾನ ನೀಡಿದ್ದನ್ನು ಉಲ್ಲೇಖಿಸಿದ್ದಾರೆ."[೫೩] ವಿಠಲ ದೇವಾಲಯದ ಗರ್ಭಗೃಹದ ಪಶ್ಚಿಮದ ಅದಿಷ್ಠಾನದಲ್ಲಿ ಇವರ ಕಾಲಕ್ಕೆ ಸೇರಿದ ಮತ್ತೊಂದು ಶಾಸನವು ಅಚ್ಯುತ ದೇವರಾಯನ ಆಳ್ವಿಕೆಯಲ್ಲಿ ತಿರುಮಲಯ್ಯನು ವಿಠಲ ದೇವರಿಗೆ ಕೆಲವು ಗ್ರಾಮಗಳನ್ನು ದತ್ತಿ ನೀಡಿದ್ದನ್ನು ಉಲ್ಲೇಖಿಸುತ್ತವೆ."[೫೪]

ರಾಯಗೋಪುರದ ಎಡಗೋಡೆಯ ಮೇಲೆ ಇರುವ ಕ್ರಿ.ಶ. ೧೫೩೩ರ ಶಾಸನವು

ಅಚ್ಯುತ ದೇವರಾಯನು ಆಳುತ್ತಿದ್ದಾಗ ವಿಠಲೇಶ್ವರ ಸನ್ನಿಧಿಯಲ್ಲಿ ಅವನು ಮಾಡಿದ ಸುವರ್ಣ ಮೇರುದಾನದ ಬಗ್ಗೆ ಓದುವ/ಮೋದುವ ತಿರುಮಲಮ್ಮನು ಶ್ಲೋಕ ರಚಿಸಿದ್ದನ್ನು ಉಲ್ಲೇಖಿಸುತ್ತದೆ."[೯೫] ಅಚ್ಯುತ ನಾರಾಯಣಸ್ವಾಮಿ ದೇವಾಲಯದ ಎದುರುಗಡೆಗೆ ಕ್ರಿ.ಶ. ೧೫೩೪ರ ಶಾಸನವು "ಅಚ್ಯುತ ದೇವರಾಯ ಆಡಳಿತ ನಡೆಸುತ್ತಿದ್ದು" ಅವನ ಮಂಡಳೇಶ್ವರನಾದ ಹಿರಿಯ ತಿರುಮಲ ರಾಜ ಒಡೆಯನು ತುಂಗಭದ್ರಾ ತೀರದಲ್ಲಿ ತಿರುಮಲನಾಥ ದೇವರನ್ನು ಮಾಡಿಸಿದ ಅಚ್ಯುತ ದೇವರಾಯ ದೇವರಿಗೆ ಆಭರಣಗಳನ್ನು ಪೂಜಕ್ಕೆ ಚೋರನೂರು ಗ್ರಾಮವನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ."[೯೬] ವಿಠಲ ದೇವಾಲಯದ ಗರ್ಭಗೃಹದ ಉತ್ತರ ಅಧಿಷ್ಠಾನದಲ್ಲಿರುವ ಕ್ರಿ.ಶ. ೧೫೪೦ರ ಅದೇ ಕಾಲಕ್ಕೆ ಸೇರಿದ ಶಾಸನವು ಅಚ್ಯುತರಾಯನು ಆಳುತ್ತಿದ್ದಾಗ ವಿಠಲ ದೇವಾಲಯದ ಆವರಣದಲ್ಲಿ ಉತ್ತರ ದಿಕ್ಕಿನಲ್ಲಿ ಕಟ್ಟಿದ್ದ ನಾಲ್ಕು ಅಂಕಣದಲ್ಲಿ ಗಂಧದ ತಿಪ್ಪಿಸೆಟ್ಟಿ ೧೩ ಆಳ್ ಮರದ ವಿಗ್ರಹವನ್ನು ಅಚ್ಯುತ ದೇವರಾಯನಿಗೆ ಚಿಕ್ಕರಾಯನಿಗೂ ಪುಣ್ಯವಾಗಲೆಂದು ವಿಠಲ ದೇವರ ನಿತ್ಯ ನೈವೇದ್ಯಕ್ಕೆ ದೇವರ ಭಂಡಾರಕ್ಕೆ ಪಟ್ಟ ವರಹಗಳನ್ನು ದಾನ ನೀಡಿದ್ದನ್ನು ಉಲ್ಲೇಖಿಸಿದೆ."[೯೭]

ವಿಠಲ ದೇವಾಲಯದ ಸಭಾ ಮಂಟಪದ ಪ್ರವೇಶದ ಬಲಭಾಗದಲ್ಲಿ ನಿಲ್ಲಿಸಿರುವ ಕ್ರಿ.ಶ. ೧೫೩೫ ಶಾಸನವು "ಅಚ್ಯುತ ದೇವರಾಯನ ಆಳ್ವಿಕೆಯ ಕಾಲದಲ್ಲಿ ಅವನ ಮಹಾಮಂಡಳೇಶ್ವರ ಅಲ್ಲು ಭೀಮರಾಯನ ಮಗ ಗೋಪಾಲರಾಜನಿಗೆ ಹಾಗೂ ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಬೇಕೆಂದು ಚಿಕ್ಕ ತಿಮ್ಮಪ್ಪನು ವಿಠಲ ದೇವರ ಸನ್ನಿದಾನದಲ್ಲಿ ನಡೆಯುವ ಕೆಲಸಕ್ಕೆ ೨೦೦ರ ಘಟ್ಟಿ ವರಹಗಳನ್ನು ದಾನ ನೀಡಿದ್ದನ್ನು ಉಲ್ಲೇಖಿಸಿದೆ."[೯೮] ತುರ್ತು ಕಾಲುವೆಯ ಬಲಗಡೆ ಗಂಗಮ್ಮನ ಗುಡಿಯ ಕಂಬದ ಮೇಲೆ ಇರುವ ಕ್ರಿ.ಶ.೧೫೩೬ರ ಶಾಸನವು ಪೆನುಗೊಂಡೆಯ ವಿರೂಪಣ್ಣನು ಅಚ್ಯುತರಾಯನಿಗೆ ಪುಣ್ಯವಾಗಲೆಂದು ವಿರೂಪಾಕ್ಷ ದೇವರ ಸೇವೆಗೆ ಭೂಮಿದಾನ ಮಾಡಿದ್ದನ್ನು ಉಲ್ಲೇಖಿಸಿದೆ."[೯೯] ಇದೇ ಕಾಲಕ್ಕೆ ಸೇರಿದ ವಿಠಲದೇವಾಲಯದ ಗರ್ಭಗೃಹದ ದಕ್ಷಿಣ ಅಧಿಷ್ಠಾನದಲ್ಲಿರುವ ಶಾಸನವು ಮಲ್ಲಪ್ಪನಾಯಕರು ಅಚ್ಯುತರಾಯನ ಆಳ್ವಿಕೆಯಲ್ಲಿ ಕಾಲದಲ್ಲಿ ಅಚ್ಯುತ ರಾಯನಿಗೂ ಚಿಕ್ಕರಾಯನಿಗೂ ಪುಣ್ಯವಾಗಬೇಕೆಂದು ವಿಠಲ ದೇವರ ಅವಸರದ ನೈವೇದ್ಯಕ್ಕಾಗಿ ದೇವರ ಭಂಡಾರಕ್ಕೆ ೨೦೦ ಘಟ್ಟಿ ವರಹಗಳನ್ನು ಸಮರ್ಪಿಸುತ್ತಾನೆ."[೧೦೦] ಇದೇ ಸ್ಥಳದಲ್ಲಿರುವ ಇದೇ ಕಾಲದ ಮತ್ತೊಂದು ಶಾಸನವು ಅಚ್ಯುತ ದೇವರಾಯನ ಆಳ್ವಿಕೆಯನ್ನು ಸೂಚಿಸುತ್ತದೆ."[೧೦೧]

ಉದಯಗಿರಿ ಬಾಗಿಲಿನ ಉತ್ತರಕ್ಕೆ ಕೋಟೆಯ ಹೊರಗೆ ಹೊಲದಲ್ಲಿರುವ ಕ್ರಿ.ಶ. ೧೫೩೬ರ ಶಾಸನವು" ಅಚ್ಯುತ ದೇವರಾಯ ಕೃಷ್ಣದೇವರಾಯನ ಹೆಸರಿನಲ್ಲಿ ಕೊಟ್ಟ ದಾನವನ್ನು ದಾಖಲಿಸುತ್ತದೆ."[೧೦೨] ಹಾಗೆಯೇ ವಿಠಲ ದೇವರಾಲಯದ ಉತ್ತರ ಗೋಪುರದಲ್ಲಿನ ಕ್ರಿ.ಶ. ೧೫೩೮ರ ಶಾಸನವು 'ಅಚ್ಯುತ ದೇವರಾಯನು ಆಳುತ್ತಿದ್ದಾಗ, ವಿಠಲ ದೇವರ ಉತ್ತರದ

ಗೋಪುರಕ್ಕೆ ಬರುವ ರಘುವಪ್ಪನಾಯಕರು ಕಳಸವನ್ನು ಇಡಿಸಿದ ವಿಷಯ ಹೊಂದಿದೆ."[೧೦೩] ಇಲ್ಲಿಯೇ ಇರುವ ಇದೇ ಕಾಲಕ್ಕೆ ಸೇರಿದ ಮತ್ತೊಂದು ಶಾಸನವು ಇದೇ ಚಪರದ ರಘುವಪ್ಪನು ಅಚ್ಯುತದೇವರಾಯನ ಆಳ್ವಿಕೆಯ ಕಾಲದಲ್ಲಿ ಇದೇ ದೇವಾಲಯದ ಪೂರ್ವ ದಿಕ್ಕಿನ ಗೋಪುರಕ್ಕೆ ಸುವರ್ಣ ಕಳಸವನ್ನಿಡಿಸಿದಂತೆ ತಿಳಿಸುತ್ತದೆ."[೧೦೪]

ಕೃಷ್ಣಸ್ವಾಮಿ ದೇವಾಲಯ ಗೋಪುರದ ಬಲಭಾಗದಲ್ಲಿರುವ ಕ್ರಿ.ಶ. ೧೫೩೯ರ ಶಾಸನವು "ಅಚ್ಯುತ ದೇವರಾಯನು ಬ್ರಾಹ್ಮಣರಿಗೆ ಆನಂದನಿಧಿ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಇದೇ ವಿವರವನ್ನು ದಾಖಲಿಸುವ ಇನ್ನೂ ಐದು ಶಾಸನಗಳು ಸಿಗುತ್ತವೆ. 'ಅಚ್ಯುತೇಂದ್ರನಿಗೆ ಜಯವಾಗಲಿ' ಎಂದು ಹರಸುತ್ತಿದೆ."[೧೦೫] ಕಾಮಲಾಪುರ ಹಂಪಿ ರಸ್ತೆಯ ಕುದುರೆಕಲ್ಲು ಗಂಡಿನ ಎದುರಿನ ಬಾಗಿಲಲ್ಲಿ ಕಾಲದ ಉಲ್ಲೇಖವಿಲ್ಲದ ಶಾಸನವು 'ಅಚ್ಯುತದೇವರಾಯನನ್ನು ಹೊಗಳಿದ್ದು ಅವನನ್ನು ಓದಾಂಬಿಕಾ ಮತ್ತು ನರಸನ ಮಗನೆಂದು ಹೇಳಿದೆ."[೧೦೬] ರಾಣಿ ವಾಸದ ಪಶ್ಚಿಮಕ್ಕೆ ವೈಷ್ಣವ ದೇವಾಲಯದಲ್ಲಿಯ ಮಂಟಪದ ಉತ್ತರ ಗೋಡೆಯ ಮೇಲಿರುವ ತ್ರುಟಿತ ಶಾಸನವು 'ಅಚ್ಯುತ ದೇವಮಹಾರಾಯ'ನನ್ನು ಹೆಸರಿಸಿದೆ. ಕ್ರಿ.ಶ.೧೫೩೦-ಕ್ರಿ.ಶ.೧೫೪೨ರವರೆಗೆ ವಿಜಯನಗರವನ್ನಾಳಿದ ಅಚ್ಯುತ ದೇವರಾಯನ ಶಾಸನಗಳಲ್ಲಿ ವಿರೂಪಾಕ್ಷ ದೇವರಿಗೆ, ವಿಠಲ, ಬಾಲಕೃಷ್ಣ, ಅಚ್ಯುತರಾಯಣ, ಮತಂಗದ ವೀರಭದ್ರ, ಇನ್ನು ಮುಂತಾದ ದೇವರಿಗೆ ಗ್ರಾಮಗಳನ್ನು ಪೂಜಾ ಪರಿಕರಗಳನ್ನು ದಾನ ಕೊಟ್ಟ ವಿಷಯ ಹಾಗೂ ಬ್ರಾಹ್ಮಣರಿಗೆ ಆನಂದ ನಿಧಿ ದಾನ ನೀಡಿರುವುದನ್ನು ಕಾಣಬಹುದು.

ಅಚ್ಯುತ ದೇವರಾಯನ ನಂತರದಲ್ಲಿ ವಿಜಯನಗರ ಸಿಂಹಾಸನವೇರಿದವನು ಅಚ್ಯುತದೇವರಾಯನ ಅಣ್ಣ ರಂಗನ ಮಗ ಸದಾಶಿವರಾಯ. ಈತ ಜೀವನವಿಡೀ ಬಂಧಿಯಾಗಿದ್ದು ಹೆಸರಿಗೆ ಮಾತ್ರ ರಾಜನಾಗಿದ್ದನು. ಶ್ರೀಕೃಷ್ಣದೇವರಾಯನ ಅಳಿಯ ರಾಮರಾಯ ಕಾರ್ಯತಃ ಸಾರ್ವಭೌಮನಾಗಿದ್ದನು. ಸದಾಶಿವರಾಯ ಕ್ರಿ.ಶ. ೧೫೪೨ ರಿಂದ ಕ್ರಿ.ಶ. ೧೫೬೫ರವರೆಗೆ ಆಳ್ವಿಕೆ ನಡೆಸಿದನು. ಈ ಅವಧಿಯ ಶಾಸನಗಳು ಹಂಪಿಯಲ್ಲಿ ೨೦ ಕ್ಕೂ ಹೆಚ್ಚು ಶಾಸನಗಳು ದೊರೆಯುತ್ತವೆ.

ವಿಠಲ ದೇವಾಲಯದ ಗರ್ಭಗೃಹದ ದಕ್ಷಿಣ ಅಧಿಷ್ಠಾನದಲ್ಲಿರುವ ಕ್ರಿ.ಶ. ೧೫೪೨ರ ಶಾಸನವು ಸದಾಶಿವರಾಯನು ರಾಜ್ಯಭಾರ ಮಾಡುತ್ತಿದ್ದಾಗ ವಿಠಲ ದೇವರ ನೈವೇದ್ಯಕ್ಕೆ ತಿರುವೆಂಗಳಾಚಾರ್ಯರಿಗೆ ಸದಾಶಿವರಾಯರಿಂದ ಬಂದ ದಾನವನ್ನು ದೇವರಿಗೆ ಸಮರ್ಪಿಸುವ ಎಂದು ಉಲ್ಲೇಖಿಸುತ್ತದೆ. ಚಂಡಿಕೇಶ್ವರ ದೇವಾಲಯದಲ್ಲಿ ಮುರಿದು ಬಿದ್ದಿರುವ ಕ್ರಿ.ಶ. ೧೫೪೫ರ ಶಾಸನವು "ಸದಾಶಿವರಾಯ ವಿದ್ಯಾನಗರದಲ್ಲಿ ಆಳುತ್ತಿದ್ದಾಗ ದಳವಾಯಿ ಜಂಗಮಯ್ಯ ಸದಾಶಿವರಾಯನಿಗೂ, ರಾಮರಾಯನಿಗೂ ಮತ್ತು ಪ್ರಧಾನಿ ಎರತಿಮ್ಮರಾಯನಿಗೂ

ಪುಣ್ಯವಾಗಬೇಕೆಂದು ಕೃಷ್ಣಾಪುರ ಪೇಟೆಯ ಹಿರಿಯ ಕಾಲುವೆಯ ಛತ್ರದ ಬಳಿ ದೇವಾಲಯ ಕಟ್ಟಿಸಿ ದೇವರಿಗೆ ದಾನ ಬಿಟ್ಟ ವಿಷಯ ತಿಳಿಯುತ್ತದೆ."[೧೦೭] ಉದ್ದಾನ ವೀರಭದ್ರ ದೇವಾಲಯದ ಪಶ್ಚಿಮಕ್ಕಿರುವ ಇದೇ ಕಾಲದ ೭ ಶಾಸನಗಳು "ಸದಾಶಿವರಾಯನ ಆಳ್ವಿಕೆಯ ಕಾಲದಲ್ಲಿ ದಳವಾಯಿ ಜಂಗಮಯ್ಯ ಕೃಷ್ಣಾಪುರ ಪೇಟೆಯ ಹಿರಿಯ ಛತ್ರದ ಬಳಿ ಮಧುವೀರಣ್ಣನನ್ನು ಪ್ರತಿಷ್ಠಾಪನೆ ಮಾಡಿಸಿ, ದೇವರಿಗೆ ಆಭರಣ ಹಾಗೂ ಪೂಜಾ ಪರಿಕರಗಳನ್ನು ನೀಡಿರುವ ವಿಷಯ ತಿಳಿದುಬರುತ್ತದೆ."[೧೦೮] ವಿಠಲ ದೇವಾಲಯದ ಗರ್ಭಗೃಹದ ಮುಂದಿನ ಮಂಟಪದ ದಕ್ಷಿಣ ಅಧಿಷ್ಠಾನದಲ್ಲಿರುವ ಕ್ರಿ.ಶ. ೧೫೪೫ರ ಶಾಸನವು "ಸದಾಶಿವರಾಯ ಆಳುತ್ತಿದ್ದಾಗ ತೋನೇಟಿ ತಿಮ್ಮರಾಯನು ತನ್ನ ತಂದೆಗೆ ಪುಣ್ಯವಾಗಬೇಕೆಂದು ವಿಠಲ ದೇವರಿಗೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ."[೧೦೯] ಇಲ್ಲೇ ಇರುವ ಇದೇ ಕಾಲದ ಮತ್ತೊಂದು ಶಾಸನವು ಸದಾಶಿವರಾಯನ ಆಳ್ವಿಕೆ ಕಾಲದಲ್ಲಿ ಜಂಬಲದಿನ್ನೆಯ ಚಿಕ್ಕರಾಜನು ವಿಠಲ ದೇವಾಲಯದಲ್ಲಿನ ಲಕ್ಷ್ಮೀನಾರಾಯಣ ಪೆರುಮಾಳ್ ದೇವರ ಭಂಡಾರಕ್ಕೆ ದಾನ ನೀಡಿದ್ದನ್ನು ದಾಖಲಿಸುತ್ತದೆ.

"ರಂಗಸ್ವಾಮಿ ದೇವಾಲಯದ ಉತ್ತರಕ್ಕಿರುವ ಕ್ರಿ.ಶ. ೧೫೪೫ರ ಶಾಸನವು ಸದಾಶಿವರಾಯನ ಆಳ್ವಿಕೆಯ ಕಾಲದಲ್ಲಿ ಮಾಂಡಳಿಕ ತಿಮ್ಮರಾಜನು ದೊಡ್ಡ ಅಂಗಡಿ ಬೀದಿಯ ಪಶ್ಚಿಮಕ್ಕೆ ಇರುವ ಮಾಧವ ದೇವರಿಗೆ ೨೫ ಅಂಕಣಗಳ ರಂಗಮಂಟಪ ಕಟ್ಟಿಸಿದ್ದನ್ನು ದಾಖಲಿಸುತ್ತದೆ."[೧೧೦] ಸೋಮವಾರ ಬಾಗಿಲಿನ ಪಕ್ಕದ ಬೆಟ್ಟದ ಮೇಲಿನ ದೇವಾಲಯದ ಮುಂದೆ ನಿಲ್ಲಿಸಿರುವ ಕ್ರಿ.ಶ.೧೫೪೮ರ ಶಾಸನವು "ಸದಾಶಿವರಾಯನ ಆಳ್ವಿಕೆಯ ಕಾಲದಲ್ಲಿ ಗದಿಕೇರಿ ರಘುನಾಥ ದೇವರಿಗೆ ದಾನ ಮಾಡಿದ್ದನ್ನು ತಿಳಿಸುತ್ತದೆ."[೧೧೧] ವಿಠಲಸ್ವಾಮಿ ದೇವಾಲಯದ ಹತ್ತಿರದ ವೈಷ್ಣವ ದೇವಾಲಯದ ಉತ್ತರ ಗೋಡೆಯ ಮೇಲಿನ ಶಾಸನವು "ಸದಾಶಿವರಾಯನ ಆಡಳಿತದ ಕಾಲದಲ್ಲಿ ಪುಟಪರ್ತಿಯ ಲಿಂಗಾಭಟರ ಮಗ ಶಂಭು ಕಾಮದೀಕ್ಷಿತರಿಗೆ ಕ್ರಯ ಪತ್ರ ಮಾಡಿದ್ದನ್ನು ಉಲ್ಲೇಖಿಸುತ್ತದೆ."[೧೧೨]ವಿಠಲ ದೇವಾಲಯದ ಗರ್ಭಗೃಹದ ಮುಂದಿನ ಮಂಟಪದ ಉತ್ತರ ಅಧಿಷ್ಠಾನದಲ್ಲಿರುವ ಕ್ರಿ.ಶ. ೧೫೫೪ರ ಶಾಸನವು "ಸದಾಶಿವರಾಯನು ಆಳುತ್ತಿದ್ದಾಗ ಉದಯಗಿರಿ ತಿಮ್ಮ ರಾಜಯದೇವ ಮಹಾ ಅರಸನು ತನ್ನ ತಂದೆ ಕೋವೇಟಯ್ಯರಿಗೆ ಪುಣ್ಯವಾಗಬೇಕೆಂದು ವಿವಿಧ ಉತ್ಸವಗಳನ್ನು ನಡೆಸಬೇಕೆಂದು ವಿಠಲ ದೇವರಿಗೆ ದಾನ ನೀಡಿದ್ದನ್ನು ದಾಖಲಿಸುತ್ತದೆ."[೧೧೩] ಇಲ್ಲೇ ಇರುವ ಇದೇ ಕಾಲದ ಇನ್ನೊಂದು ಶಾಸನವು "ಸದಾಶಿವರಾಯನ ಆಳ್ವಿಕೆ ಕಾಲಕ್ಕೆ ಮುಸಲಿ ಮಡುವಿನ ವೀರ ರಾಮರಾಜ ತಿಮ್ಮರಾಜನ ಮಗನು ಉದಯಗಿರಿ ಬಾಗಿಲಮುಂದೆ ಇರುವ ಅನಂತಪುರ ಗ್ರಾಮವನ್ನು ಸದಾಶಿವದೇವರಾಯನ ಕೈಯಲ್ಲಿ ಧಾರೆಯೆರಿಸಿ ಕೊಟ್ಟ ವಿಷಯ ತಿಳಿಸುತ್ತದೆ."[೧೧೪]

"ಸದಾಶಿವರಾಯನ ಮಹಾಮಂಡಲೇಶ್ವರ ರಾಮರಾಜು ತಿರುಮಲ ರಾಜನ ಮಗ ರಘುನಾಥ ರಾಜನು ಕತಾಲಪೌಲ್ಯಂದಲ್ಲಿ ಅಲಮೇಲ ಮಂಗಮ್ಮನ ದೇವಾಲಯವನ್ನು ಕಟ್ಟಿಸಿ

ಈ ದೇವಾಲಯ ದೀಪಾರಾಧನೆಗಾಗಿ ಅಂಗಡಿಗಳನ್ನು ದಾನ ಬಿಟ್ಟಿರುವ ವಿಷಯ ತಿಳಿಸುತ್ತದೆ."[೧೧೫] ಪಹರೆಯವರ ಕಟ್ಟಡದ ಹಿಂಭಾಗದಲ್ಲಿ ನಿಂತಿರುವ ಕಲ್ಲಿನ ಮೇಲೆ ಈ ಶಾಸನವಿದೆ. ಕೋದಂಡರಾಮ ದೇವಾಲಯದ ಹಿಂಬದಿಯ ವಿಷ್ಣು ದೇವಾಲಯದ ಪ್ರವೇಶದ ಎರಡೂ ಕಡೆಯಲ್ಲಿನ ಕ್ರಿ.ಶ.೧೫೫೬ರ ಶಾಸನವು "ಪಾಪಿಶೆಟ್ಟಿ ಮತ್ತು ಪಾಟಮ್ಮನ ಮಗ ತಿರುಮಳ ಶೆಟ್ಟಿಯ ಸದಾಶಿವರಾಯನ ಆಳ್ವಿಕೆ ಕಾಲದಲ್ಲಿ ಮಾಡಿದ ಸೇವೆಯನ್ನು ದಾಖಲಿಸುತ್ತದೆ."[೧೧೬] ಇದೇ ಕಾಲಕ್ಕೆ ಸೇರಿದ ವಿಠಲಸ್ವಾಮಿ ದೇವಾಲಯದ ಪಶ್ಚಿಮಕ್ಕೆ ದೇವಾಲಯದ ಉತ್ತರ ಗೋಡೆಯ ಮೇಲೆ ಇರುವ ಶಾಸನವು "ಸದಾಶಿವರಾಯನ ಆಳ್ವಿಕೆಯ ಕಾಲದಲ್ಲಿ ಮಹಾಮಂಡಳೇಶ್ವರ ರಾಮರಾಜ ತೋನೇಟಯ್ಯನ ಮಗನಾದ ಅವುಗಳ ಮಹಾರಾಜನು ವಿಠಲೇಶ್ವರ ದೇವಾಲಯದ ಪ್ರಕಾರದ ಒಳಗೆ ವಾಯುವ್ಯದಲ್ಲಿ ತಿರುಮಂಗೈಯಾಳ್ವರಿಗೆ ಗರ್ಭಗೃಹ, ಶುಕನಾಸಿ, ಅಂತರಾಳ, ರಂಗಮಂಟಪ ಮುಂತಾದವನ್ನು ಕಟ್ಟಿಸಿ, ಅದರ ಪೂಜೆಗಾಗಿ ಕೆಲವು ಗ್ರಾಮಗಳನ್ನು ದಾನ ಬಿಟ್ಟಿರುವ ವಿಷಯ ತಿಳಿಯುತ್ತದೆ."[೧೧೭]

ಗಾಣಿಗಿತ್ತಿ ಬಳಿ ಬಿದ್ದಿರುವ ಕ್ರಿ.ಶ.೧೫೫೭ರ ಶಾಸನವು "ಸದಾಶಿವರಾಯನ ಆಳ್ವಿಕೆಯ ಕಾಲದಲ್ಲಿ ಮಹಾಮಂಡಳೇಶ್ವರ ರಂಗರಾಜ ರಾಮರಾಜ ಅಯ್ಯನು ಚಿಕ್ಕದೇವರ ಶಾಂತಿನಾಥಬಸದಿಗೆ ದೀವಟಿಗೆಗಾಗಿ ಅಂಗಡಿಯನ್ನು ದಾನವಾಗಿ ನೀಡಿದ್ದನ್ನು ದಾಖಲಿಸುತ್ತದೆ."[೧೧೮] ವಿಠ್ಠಲ ದೇವಾಲಯದ ಗರ್ಭಗೃಹದ ಪಶ್ಚಿಮ ಅಧಿಷ್ಠಾನದಲ್ಲಿರುವ ಕ್ರಿ.ಶ.೧೫೪೯ರ ಶಾಸನವು ವಿಠ್ಠಲರ ನಮ್ಮೂಳವಾರನು ಸದಾಶಿವರಾಯನು ವಿದ್ಯಾನಗರದಲ್ಲಿ ಆಳುತ್ತಿದ್ದಾಗ ಪರಾಂಕುಶ ಮಂಟಪದಲ್ಲಿ ವಿಠ್ಠಲದೇವರ ಉತ್ಸವ ಮತ್ತು ಪೂಜಾ ಕಾರ್ಯಗಳಿಗಾಗಿ ಭೂದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ."[೧೧೯] ಹಸ್ತಗಿರಿ ರಂಗನಾಥ ದೇವಾಲಯದ ಎದುರು ಬಂಡೆಯ ಮೇಲೆ ಇರುವ ಕ್ರಿ.ಶ.೧೫೬೦ರ ಶಾಸನವು ಸದಾಶಿವರಾಯನ ಆಳ್ವಿಕೆಯಲ್ಲಿ ಮೂರ್ತಿರಾಜು, ವಿಠಲರಾಜು ಎಂಬುವವನು ತನ್ನ ತಾಯಿಯ ಪುಣ್ಯ ತಿಥಿಯ ಕಾರಣವಾಗಿ ವಿಠಲ ದೇವರ ನೈವೇದ್ಯಕ್ಕೆ ಬ್ರಾಹ್ಮಣರ ಭೋಜನಕ್ಕೆ ಹರಿಹರಪುರವನ್ನು ದಾನ ನೀಡಿರುವುದನ್ನು ದಾಖಲಿಸುತ್ತದೆ."[೧೨೦]

ವಿಠ್ಠಲ ದೇವಾಯದ ಸಭಾಮಂಟಪದ ಪೂರ್ವದ ಗೋಡೆಯಲ್ಲಿರುವ ಕ್ರಿ.ಶ.೧೫೬೧ರ ಶಾಸನವು "ಸದಾಶಿವರಾಯನ ಆಡಳಿತದ ಕಾಲದಲ್ಲಿ ಕೊನೇಟಿ ಕೊಂಡರಾಜಯ್ಯನು ತಮ್ಮ ತಂದೆಗೆ ಪುಣ್ಯವಾಗಲೆಂದು ವಿಠ್ಠಲ ದೇವರ ನೈವೇದ್ಯಕ್ಕೆ ಕೆಲವು ದತ್ತಿಗಳನ್ನು ಬಿಟ್ಟ ವಿಷಯ ತಿಳಿದು ಬರುತ್ತದೆ."[೧೨೧] ಇದೇ ದೇವಾಲಯದ ವಾಯುವ್ಯಕ್ಕೆ ಇರುವ ದೇವಾಲಯದ ಪೂರ್ವ ಗೋಡೆಯ ಮೇಲೆ ಇರುವ ಇದೇ ಕಾಲದ ಶಾಸನವು "ಸದಾಶಿವರಾಯನು ಆಳುತ್ತಿದ್ದಾಗ ಶ್ರೀರಂಗರಾಜನು ತಿರುಮಂಗಯಾಳ್ವರಿಗೆ ತೋಟವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ."[೧೨೨] ಹಂಪಾದೇವಿ ದಿಡ್ಡಿಯ ಪಶ್ಚಿಮಕ್ಕೆ ಇರುವ ಇದೇ ಕಾಲದ ಶಾಸನವು "ಸದಾಶಿವರಾಯನ ಆಡಳಿತವನ್ನು ದಾಖಲಿಸುತ್ತದೆ."[೧೨೩] ವಿಠ್ಠಲ ದೇವಾಲಯದ ಗರ್ಭಗೃಹದ ಉತ್ತರ ಅಧಿಷ್ಠಾನದಲ್ಲಿರುವ

ಕ್ರಿ.ಶ. ೧೫೬೩ರ ಶಾಸನವು "ಸದಾಶಿವರಾಯನ ಆಳ್ವಿಕೆಯ ಕಾಲದಲ್ಲಿ ನಮ್ಮಾಳ್ವರರು ವಿಠಲ ದೇವರ ಭಂಡಾರಕ್ಕೆ ೬೦ ಘಟ್ಟಿ ವರಹಗಳನ್ನು ಸಮರ್ಪಿಸುತ್ತಾನೆಂದು ಹೇಳುತ್ತದೆ."[೧೨೪]

ಇಡೀ ದೇವಾಲಯದ ರಂಗಮಂಟಪದ ಪೂರ್ವ ದಿಕ್ಕಿನ ಗೋಡೆಯಲ್ಲಿರುವ ಕ್ರಿ.ಶ.೧೫೬೪ರ ಶಾಸನವು "ಸದಾಶಿವರಾಯನ ಆಳ್ವಿಕೆಯ ಕಾಲದಲ್ಲಿ ವಿಠಲ ದೇವರ ಪೂಜಾ ಕಾರ್ಯಕ್ಕೆ ಶ್ರೀನಿವಾಸ ಆಚಾರ್ಯ ಅಯ್ಯ, ಅರವೀಡಿನ ಕಂದನ ವಳಲನ ರಾಮರಾಜನ ಮೊಮ್ಮಗ ಹಾಗೂ ರಾಮದೇವರ ಉತ್ಸವಕ್ಕೆ ಜಗ್ಗರಾಜ, ರಾಮರಾಜ, ಕೊಂಡರಾಜ ಕ್ರಮವಾಗಿ ಕೆಲವು ಗ್ರಾಮಗಳನ್ನು ದಾನ ಬಿಟ್ಟಿರುವುದನ್ನು ತಿಳಿಸುತ್ತದೆ."[೧೨೫] ಕೃಷ್ಣಸ್ವಾಮಿ ದೇವಾಲಯದ ಉತ್ತರ ಗೋಡೆಯಲ್ಲಿನ ಕಾಲದ ಉಲ್ಲೇಖವಿಲ್ಲದ ಶಾಸನವು "ಸದಾಶಿವರಾಯನ ಆಳ್ವಿಕೆಯ ಕಾಲದಲ್ಲಿ ಪಾತ್ರದ ಬೆಂಪಾಯಿ ಎಂಬುವವಳು ಬಾಲಕೃಷ್ಣದೇವರ ನೈವೇದ್ಯಕ್ಕೆ ೩ ಕೊಳಗ ಹೊಲವನ್ನು ದಾನ ಬಿಟ್ಟಿರುವುದನ್ನು ದಾಖಲಿಸುತ್ತದೆ."[೧೨೬] ಹಾಗೆಯೇ ಸಿಂಘಾರದ ಹೆಬ್ಬಾಗಿಲಿನ ಉತ್ತರಕ್ಕೆ ದಶಾವತಾರ ಮಂಟಪದ ಕೆಳಬಂಡೆಯ ಮೇಲೆ ಕಾಲದ ಉಲ್ಲೇಖವಿಲ್ಲದ ಶಾಸನವು "ಸದಾಶಿವರಾಯನಿಗೆ ಪುಣ್ಯವಾಗಲೆಂದು ನರಸಿಂಹ ದೇವರಿಗೆ ಭೂಮಿ ದಾನ ಮಾಡಿದ್ದನ್ನು ದಾಖಲಿಸುತ್ತದೆ."[೧೨೭] ಇದರ ಪಕ್ಕದಲ್ಲಿರುವ ಇನ್ನೊಂದು ಶಾಸನವು ಇದೇ ವಿಚಾರ ತಿಳಿಸುತ್ತದೆ. ಹೀಗೆ ಸದಾಶಿವರಾಯನ ಶಾಸನಗಳು ಸದಾಶಿವರಾಯ, ಮಹಾಮಂಡಳೇಶ್ವರರು, ಸಾಮಂತರು ಸಾಮಾನ್ಯ ಜನರು, ವಿಠಲ ದೇವರಿಗೆ, ಕೋದಂಡರಾಮ, ಬಾಲಕೃಷ್ಣದೇವರಿಗೆ ಪೂಜೆ, ನೈವೇದ್ಯಕ್ಕಾಗಿ ಪೂಜಾ ಪರಿಕರಗಳನ್ನು, ಹೊಲಗದ್ದೆಗಳನ್ನು, ಗ್ರಾಮಗಳನ್ನು ದಾನ ನೀಡಿದ್ದು ತಿಳಿಸುತ್ತದೆ. ಅದಲ್ಲದೆ ಕೆಲವು ದೇವರಿಗೆ ರಂಗಮಂಟಪ ಗೋಪುರಗಳನ್ನು ಕಟ್ಟಿಸಿ ಅವುಗಳಿಗೆ ದಾನ ಕೊಟ್ಟಿರುವ ವಿಷಯವನ್ನು ತಿಳಿಸುತ್ತದೆ.

ಮಹಾಪ್ರಬಂಧದ ಅತಿವ್ಯಾಪ್ತಿಯ ದೃಷ್ಟಿಯಿಂದ ಇಲ್ಲಿ ಕೇವಲ ಕೆಲವು ಪ್ರಮುಖ ಅರಸು ಮತ್ತು ಸಾಮಂತ ಅರಸು ಮನೆತನಗಳನ್ನು ತೆಗೆದುಕೊಂಡು ಅವರು ತಮ್ಮ ಆಡಳಿತದ ಅವಧಿಯಲ್ಲಿ ಹಂಪಿಯ ವಿವಿಧ ದೇವರಿಗೆ ನೀಡಿದ ದಾನ–ದತ್ತಿ, ಜೀರ್ಣೋದ್ಧಾರಕ್ಕೆಗೊಂಡ ವಿಷಯಗಳನ್ನು(ರಾಜರ ಸಾಮಂತರನ್ನೊಳಗೊಂಡಂತೆಯು) ಶಾಸನಗಳ ಹಿನ್ನೆಲೆಯಲ್ಲಿ ಇಲ್ಲಿ ದಾಖಲಿಸಿ ವಿಶ್ಲೇಷಿಸಲಾಗಿದೆ. ಆ ಮೂಲಕ ಹಂಪಿಯ ಚಾರಿತ್ರಿಕ ಮಹತ್ವವನ್ನು, ಅದರ ಅಂದಿನ ರಾಜಕೀಯ ವ್ಯವಸ್ಥೆಯನ್ನು ಅರಿಯುವ ಒಂದು ಪ್ರಯತ್ನ ಇಲ್ಲಿ ಮಾಡಲಾಗಿದೆ.

೧೩೫೬–೫೭ರ ಮುಂಚೆಯೇ ಹೊಸಪಟ್ಟಣದಿಂದ ವಿಜಯನಗರವೆಂದು ಬದಲಾಗಿತ್ತು. ಆದರೆ ಕ್ರಿ.ಶ.೧೩೬೮ರ ನಂತರ ಹೊಸಪಟ್ಟಣದ ಹೆಸರು ಶಾಸನಗಳಲ್ಲಿ ಕಡಿಮೆಯಾಗಿ ಬಳಕೆಯಲ್ಲಿದ್ದ ವಿಜಯನಗರ ಹೆಸರೇ ಹೆಚ್ಚಾಗಿ ಕಂಡುಬರುತ್ತದೆ. ಈ ರೀತಿ ವಿಜಯನಗರ ಎಂಬ ಹೆಸರು ಸಂಗಮರ ಆಳ್ವಿಕೆಯಲ್ಲಿ ಕಂಡುಬಂದಿದ್ದು, ಈ ಹೊಸಪಟ್ಟಣದ ಬದಲಿಗೆ

ವಿಜಯನಗರವೆಂದು ಪ್ರಸಿದ್ಧಿ ಪಡೆಯಿತು. ಈ ನಾಲ್ಕು ವಂಶಗಳ ಆಳ್ವಿಕೆಯನ್ನು ವಿಜಯನಗರ ಸಾಮ್ರಾಜ್ಯವೆಂದು ಕರೆಯಲಾಗಿದೆ.

೩.೨.೩. ಆಧುನಿಕ ಕಾಲ

ಕ್ರಿ.ಶ.೧೫೬೫ರಲ್ಲಿ ವಿಜಯನಗರದ ಅವನತಿಯ ಅನಂತರ ಭಾರತ ಸ್ವಾತಂತ್ರ್ಯ ಪಡೆಯುವ ವರೆಗಿನ ಕಾಲಘಟ್ಟವನ್ನು 'ಆಧುನಿಕ ಕಾಲ' ಎಂದು ಕರೆಯಬಹುದು. ಪಾಳೇಯಗಾರರ ಅವನತಿ, ಬ್ರಿಟಿಷರ ಆಗಮನ, ಅವರ ಆಳ್ವಿಕೆ ಹಾಗೂ ಭಾರತದ ಸ್ವತಂತ್ರ್ಯ ಈ ಕಾಲದ ಪ್ರಮುಖ ರಾಜಕೀಯ ವಿದ್ಯಮಾನಗಳಾಗಿವೆ. ಈ ಕುರಿತಂತೆ ಈ ಇಲ್ಲಿ ವಿವರಿಸಲಾಗಿದೆ. ವಿಜಯನಗರದ ಅವನತಿಯ ತರುವಾಯ ಪಾಳೇಗಾರರ ಅಧೀನಕ್ಕೆ ಹಂಪಿ ಒಳಪಟ್ಟಿತು. ನಂತರ ಆನೆಗೊಂದಿ ರಾಜವಂಶಸ್ಥರ ಅಧೀನದಲ್ಲಿ ಉಳಿಯತು. ಕಾಲಕ್ರಮೇಣ ಮೈಸೂರು ಒಡೆಯರು ಹಾಗು ಹೈದರ್ ಮತ್ತು ಟಿಪ್ಪುಸುಲ್ತಾನನ ಅಧೀನಕ್ಕೆ ಹಂಪಿ ಒಳಗಾಯಿತು. ಮುಂದೆ ಭಾರತ ಸ್ವಾತಂತ್ರ್ಯ ಆಗುವವರೆಗೆ ಹಂಪಿ ಬ್ರಿಟಿಷರ ಹಿಡಿತಕ್ಕೆ ಒಳಪಟ್ಟಿತು. ಆ ಕುರಿತ ವಿವರಗಳು ಇಲ್ಲಿ ವಿವರಿಸಲಾಗಿದೆ.

ವಿಜಯನಗರ ಸಾಮ್ರಾಜ್ಯದ ಅವನತಿ ನಂತರ ವಿಜಾಪುರ ಸುಲ್ತಾನರು, ಮರಾಠರು, ಮೊಗಲರು, ಸ್ಥಳೀಯ ಪಾಳೆಗಾರರಲ್ಲದೆ ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಈ ಭಾಗದಲ್ಲಿ ಆಳ್ವಿಕೆ ನಡೆಸಿದ್ದು ಗಮನಾರ್ಹ. ವಿಜಯನಗರದ ಕೊನೆಯರಸ ಪೆನುಗೊಂಡೆಯಲ್ಲಿದ್ದ ವೆಂಕಟಪತಿ ದೇವನು(೧೫೮೬-೧೬೧೪), ಈ ಭಾಗವನ್ನು ಹರಪನಹಳ್ಳಿ ಪಾಳೆಯಗಾರರಿಗೆ ಬಿಟ್ಟುಕೊಟ್ಟನು. ಮೂಲತಃ ಇವರು ನಾಡತಳವಾರರು. ಈ ಪಾಳೆಯಗಾರ ವಂಶದ ಸ್ಥಾಪಕರು ದಾದಯ್ಯನಾಯಕ ಮತ್ತು ರಂಗನಾಯಕ. ಇವನ ಪೂರ್ವ ಪ್ರದೇಶದ ಉಪರಾಜಧಾನಿ ಹೊಸಪೇಟೆಯಾಗಿತ್ತು.[೨೮] ೧೫೯೨ ರಲ್ಲಿ ಅರಸ ಮಡಿದ ತರುವಾಯ ಸುಮಾರು ೧೦ ಮಂದಿ ಅರಸರು ಕಾಲಾನುಕ್ರಮದಲ್ಲಿ ಈ ಪಾಳೆಯಗಾರರ ವಂಶದಲ್ಲಿ ಆಳ್ವಿಕೆ ನಡೆಸಿದ್ದಾರೆ.[೨೯] ಕ್ರಿ.ಶ. ೧೬೭೭-೭೮ರಲ್ಲಿ ಈ ಪ್ರದೇಶವನ್ನು ಮರಾಠರ ಶಿವಾಜಿ ವಶಪಡಿಸಿಕೊಂಡನು. ಬಿಜಾಪುರದ ೧ನೇ ಆಲಿ ಆದಿಲ್ ಷಾ ಮರಾಠರಿಗೆ ಉಳಿದ ಪ್ರದೇಶ ಬಿಟ್ಟು ಕೊಟ್ಟಾಗ, ಇಲ್ಲಿನ ಸ್ಥಳೀಯ ಪಾಳೆಯಗಾರರು ಮರಾಠರಿಗೆ ವಿಧೇಯರಾಗಿ 'ಚೌತ್' ಎನ್ನುವ ಕಪ್ಪಕಾಣಿಕೆಯನ್ನು(ತೆರಿಗೆ) ಸಲ್ಲಿಸಿ, ನಿಷ್ಠೆ, ಪ್ರಾಮಾಣಿಕತೆ ತೋರಿಸುತ್ತಿದ್ದರು. ೧೬೮೦ ರಲ್ಲಿ ಶಿವಾಜಿಯ ಮರಣದ ತರುವಾಯ ಮೊಘಲ್ ಬಾದಷಹ ಔರಂಗಜೇಬ್‌ನ ವ್ಯಾಪ್ತಿಗೊಳಪಟ್ಟಿತು. ೧೭೦೭ರಲ್ಲಿ ಔರಂಗಜೇಬ್‌ನ ಮರಣದ ನಂತರ ಹೈದರಾಬಾದಿನ ನಿಜಾಮನು ಏಳಿಗೆಯಾದನು.

ರಾಯದುರ್ಗ, ಗುತ್ತಿ, ಸೊಂಡೂರು, ಜರಿಮಲೆ, ಗುಡೇಕೋಟೆ ಮತ್ತು ಹರಪನಹಳ್ಳಿ ಇತರ ಸಂಸ್ಥಾನಗಳು ಆಳ್ವಿಕೆ ನಡೆಸಲು ತಮ್ಮ ತಮ್ಮಲ್ಲಿಯೇ ಸಂಘರ್ಷ ನಡೆಸುತ್ತಿದ್ದವು. ಬಳ್ಳಾರಿ

ಪ್ರದೇಶದ ಸೊಂಡೂರು, ಜರಿಮಲೆಯ ಪಾಳೆಯಗಾರರ ವಶದಲ್ಲಿತ್ತು. ೧೭೧೩ರಲ್ಲಿ ಸಿದ್ದೋಜಿ ಘೋರ್ಪಡೆ ಮರಾಠರ ಸಾಮಾನ್ಯ ಪ್ರಮುಖನೆಂದು ಘೋಷಿಸಿಕೊಂಡನು. ಹೈದರಾಬಾದಿನಲ್ಲಿ ಮೊಘಲರ ರಾಜ್ಯಪಾಲ ಅಸಫ್ಜಾನೇ ಪ್ರಮುಖನೆಂದು ಘೋಷಿಸಿಕೊಂಡನು. ನಂತರ ೧೬೭೩ರಲ್ಲಿ ಈ ಪ್ರದೇಶದ ಮೇಲೆ ಅಧಿಕಾರ ಹೊಂದಲು ಪ್ರಯತ್ನಿಸಿ ವಿಫಲನಾದನು. ೧೭೬೨ರಲ್ಲಿ ಹೈದರಾಲಿಯೂ ಹರಪನಹಳ್ಳಿ ಮತ್ತು ರಾಯದುರ್ಗಕ್ಕೆ ದಂಡೆತ್ತಿ ಬಂದು ಕಪ್ಪಕಾಣಿಕೆ ಪಡೆಯುತ್ತಾನೆ. ಅನಂತರ ೧೭೬೨ರಲ್ಲಿ ಈ ಪ್ರದೇಶ ಹೈದರನ ಆಳ್ವಿಕೆಗೆ ಒಳಗಾಯಿತು. ಕ್ರಿ.ಶ. ೧೭೬೮ರಲ್ಲಿ ಮತ್ತೊಮ್ಮೆ ಹೈದರಾಲಿ ಬಳ್ಳಾರಿ ಪ್ರದೇಶದ ಮೇಲೆ ಧಾಳಿ ಮಾಡಿ ಬಸಲತ್‌ಜಂಗ್ ಎಂಬ ಪಾಳೆಯಗಾರರನ್ನು ಸೋಲಿಸಿದನು. ಅನಂತರ, ಈ ಪ್ರದೇಶವನ್ನೆಲ್ಲಾ ಮೈಸೂರು ಸಂಸ್ಥಾನಕ್ಕೆ ಸೇರಿಸಿಕೊಂಡನು. ಪುನಃ ನಡೆದ ಯುದ್ಧದಲ್ಲಿ ಬಳ್ಳಾರಿ, ಆದೋನಿ ಪಾಳೆಯಗಾರರು ಹೈದರನನ್ನು ಸೋಲಿಸಿ ಹಿಮ್ಮೆಟ್ಟಿಸುತ್ತಾರೆ. ಹೈದರಾಲಿ ಎರಡು ವರ್ಷಗಳ ಕಾಲ ಮರಾಠರ ಮತ್ತು ನಿಜಾಮನ ವಿರೋಧಿಯಾಗಿದ್ದನು.

"ಕ್ರಿ.ಶ. ೧೭೬೭ರಲ್ಲಿ ಮೈಸೂರು ರಾಜ್ಯ ಛಿದ್ರವಾಗಿತ್ತು. ಹೈದರಾಲಿ ವಶದಲ್ಲಿದ್ದ ಪ್ರದೇಶಗಳು ನಿಜಾನಿಗೆ ಕಂದಾಯ ಕೊಡಬೇಕಾಯಿತು. ಬಳ್ಳಾರಿ, ಆದೋನಿಗಳು ೧೭೭೪ರಲ್ಲಿ ನಿಜಾಮನಾದ ಬಸಲತ್‌ಜಂಗನಿಗೆ ಕಂದಾಯ ಕೊಡಬೇಕಾಯಿತು. ಈ ಭಾಗದ ಹರಪನಹಳ್ಳಿ ಪಾಳೆಯಗಾರನಾದ ಸೋಮಶೇಖರನು ತನ್ನ ಆಳ್ವಿಕೆಯಲ್ಲಿ ೧೨,೦೦೦ ಪಗೋಡಗಳನ್ನು ಹೈದರಾಲಿಗೆ ಕೊಡುತ್ತಿದ್ದನು."[೧೩೦] ಕ್ರಿ.ಶ.೧೭೭೦ ರ ನಂತರ ಅಧೀನರಾದ ಪಾಳೆಯಗಾರರಲ್ಲಿ ಗುತ್ತಿ, ಬಳ್ಳಾರಿ, ಆದೋನಿಗಳಿಂದ ಸೈನ್ಯ ಕಪ್ಪಕಾಣಿಕೆ ಕೊಡಲು ಹೈದರಾಲಿ ಆಜ್ಞಾಪಿಸಿದನು. ೧೭೭೪ರಲ್ಲಿ ಬಳ್ಳಾರಿ ಪಾಳೆಯಗಾರ ನಿಜಾಮನಿಗೆ ಕೊಡಬೇಕಾದ ಹಣವನ್ನು ಕೊಡದೆ, ಸೈನ್ಯವನ್ನು ಯುದ್ಧಕ್ಕೆ ಕಳುಹಿಸಿದನು. ಹೈದರಾಲಿಯ ಬಸಲತ್‌ಜಂಗ್ ಅರಸನನ್ನು ಬಳ್ಳಾರಿ ಹತ್ತಿರ ಸೋಲಿಸಿದನು. ಅಲ್ಲದೆ, ಗುತ್ತಿಯನ್ನು ಮೂರನೇ ಬಾರಿಗೆ ಟಿಪ್ಪು ಪಡೆದನು. ಆಗ ಅಲ್ಲಿ ಗವರ್ನರ್ ಮರಾಠರ ವಿರೋಧಿಯಾಗಿ ತನ್ನ ಅಧೀನದಲ್ಲಿದ್ದ ಮಡಕಶಿರಾ, ಕಾಕಿಕೊಂಡ, ಹಿಂದೂಪುರ, ಹರಪನಹಳ್ಳಿ ಮತ್ತು ರಾಯದುರ್ಗವನ್ನು ಟಿಪ್ಪು ಸುಲ್ತಾನನಿಗೆ ಬಿಟ್ಟುಕೊಟ್ಟನು. ಇದರೊಂದಿಗೆ ಹಂಪಿ ಟಿಪ್ಪುವಿನ ಅಧೀನಕ್ಕೊಳಗಾಯಿತು. ಕ್ರಿ.ಶ.೧೭೯೨ ರಲ್ಲಿ ಟಿಪ್ಪುವಿನ ವಿರುದ್ಧ ಒಪ್ಪಂದವನ್ನು ಗವರ್ನರ್ ಲಾರ್ಡ್ ಕಾರ್ನ್‌ವಾಲೀಸ್, ಮರಾಠರು ಮತ್ತು ನಿಜಾಮನು ಮಾಡಿಕೊಂಡರು. ಇದೇ ವರ್ಷ ಟಿಪ್ಪು ಪರಾಜಯ ಹೊಂದಿದಾಗ ಸೊಂಡೂರಿಗೆ ಮರಾಠ ಸೇನಾಧಿಪತಿಯೇ ಒಡೆಯನಾದನು. ನಂತರ ೧೭೯೯ ಮೇ ೪ ರಂದು ಟಿಪ್ಪು ಮಡಿದಾಗ ಅವನ ಸಾಮ್ರಾಜ್ಯದ ಹಂಚಿಕೆಯಲ್ಲಿ ಸಮಸ್ಯೆಯುಂಟಾಯಿತು. ಟಿಪ್ಪುವಿನ ರಾಜ್ಯವನ್ನು ಮರಾಠರು, ನಿಜಾಮ ಮತ್ತು ಇಂಗ್ಲಿಷರು ಮೂರು ಭಾಗಗಳಾಗಿ ಹಂಚಿಕೊಂಡರು. ರಾಯದುರ್ಗಕ್ಕೆ ಗೋಪಾಲನಾಯಕ ಮುಖ್ಯಸ್ಥನಾದನು. ಹರಪನಹಳ್ಳಿಯನ್ನು ಅದೇ ವಂಶದವರಿಗೆ ಕೊಡಲು

ನಿರಾಕರಿಸಿದರಲ್ಲದೆ, ಉಳಿದ ಭಾಗವೆಲ್ಲ ನಿಜಾಮನಿಗೆ ಸೇರಿತು. ಈ ಪ್ರದೇಶದ ಜವಾಬ್ದಾರಿ, ಬೆಳವಣಿಗೆ ರೂಪಿಸಲು ಕರ್ತವ್ಯ ನಿಜಾಮನಿಗೆ ಒದಗಿತು. ಈ ಸಂದರ್ಭದಲ್ಲಿ ಮೈಸೂರು ಪ್ರಾಂತ್ಯ, ಇತರ ಕೆಲವು ಪ್ರದೇಶಗಳಲ್ಲಿ ಆಂಗ್ಲರ ಆಡಳಿತವಿತ್ತು. ನಿಜಾಮ ಸುತ್ತಲೂ ಆವರಿಸಿಕೊಂಡಿದ್ದ ಬ್ರಿಟಿಷ್ ಸಂಸ್ಥಾನಗಳ ಕಿರುಕುಳ ಮುಂದೆ ಆಗಬಹುದೆಂದು ಆಲೋಚಿಸಿ ಬ್ರಿಟಿಷರೊಡನೆ ವಿರುದ್ಧವಾಗಿದ್ದು ನಷ್ಟ ಅನುಭವಿಸುವುದಕ್ಕಿಂತ, ಸ್ನೇಹದಿಂದ ಲಾಭ ಗಳಿಸಲು ಹವಣಿಸಿದನು. ಅನಂತರ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿ ಅವರೊಂದಿಗೆ ಒಪ್ಪಂದ ಮಾಡಿಕೊಂಡನು. ಈ ಮೊದಲು ಕೊಟ್ಟಂತಹ ಬಳ್ಳಾರಿ ಪ್ರದೇಶವನ್ನು ಮರಳಿ ಅವರಿಗೆ ದತ್ತಿಯಾಗಿ ಬಿಟ್ಟುಕೊಟ್ಟನು. ಆಗಿನಿಂದ ಈ ಭಾಗವನ್ನು ದತ್ತಿಮಂಡಲವೆಂದು (ಬಳ್ಳಾರಿ, ಅನಂತಪುರ, ಕಡಪ ಮತ್ತು ಕರ್ನೂಲು) ಕರೆಯಲಾಯಿತು. ಕ್ರಿ.ಶ.೧೮೦೦ ಡಿಸೆಂಬರ್‌ನಲ್ಲಿ ನಿಜಾಮನು ಬಳ್ಳಾರಿಯನ್ನು ಬ್ರಿಟಿಷರಿಗೆ ಬಿಟ್ಟುಕೊಟ್ಟನು. ದತ್ತಿಮಂಡಲ (ಸೀಡೆಡ್ಡಿಸ್ಟ್ರಿಕ್ಟ್ಸ್)ದಲ್ಲಿ ಬಳ್ಳಾರಿ ನಾಲ್ಕನೆಯದು. ಆಂಗ್ಲರು ಇಲ್ಲಿಗೆ ೧೭೯೪ರಲ್ಲಿ ಬಂದರೂ, ಅಧಿಕೃತವಾಗಿ ಆಡಳಿತ ೧೮೦೦ರಿಂದ ಪ್ರಾರಂಭಿಸಿದನು. ಅವರು ಇದನ್ನು ತಮ್ಮ ಮದ್ರಾಸ್ ಪ್ರಾಂತ್ಯದ ಆಡಳಿತದ ವ್ಯಾಪ್ತಿಗೊಳಪಡಿಸಿದರು. ಮದ್ರಾಸ್ ಸಂಸ್ಥಾನದ ವಾಯುವ್ಯ ದಿಕ್ಕಿಗಿರುವ ಬಳ್ಳಾರಿ ಜಿಲ್ಲೆಯು ತನ್ನದೇ ಆದ ಭೌಗೋಳಿಕ ಲಕ್ಷಣಗಳನ್ನು ಹೊಂದಿತ್ತು. ಈ ಜಿಲ್ಲೆಯನ್ನು ಉತ್ತರ ಭಾಗದಲ್ಲಿ ಹರಿಯುವ ತುಂಗಭದ್ರಾ ನದಿ ಪಶ್ಚಿಮಕ್ಕೆ ಧಾರವಾಡ, ಉತ್ತರಕ್ಕೆ ರಾಯಚೂರು ಜಿಲ್ಲೆಗಳನ್ನು ಪ್ರತ್ಯೇಕಿಸಿತ್ತು. ದಕ್ಷಿಣಕ್ಕೆ ಮೈಸೂರು ಸಂಸ್ಥಾನವಿದ್ದು, ಚಿತ್ರದುರ್ಗ ಜಿಲ್ಲೆ ಗಡಿ ಪ್ರದೇಶವಾಗಿತ್ತು. ಹಂಪಿ ಒಳಗೊಂಡಂತೆ ಬಳ್ಳಾರಿ ಜಿಲ್ಲೆಯ ಈ ಪ್ರದೇಶವನ್ನು ಒಂದು ರೆವೆನ್ಯೂ ಜಿಲ್ಲೆಯಾಗಿ ವಿಭಾಗಿಸಿಕೊಂಡು, ಅದರಲ್ಲಿ ಹಲವು ತಾಲ್ಲೂಕು ಮತ್ತು ಫಿರ್ಕಾಗಳನ್ನಾಗಿ ವಿಂಗಡಿಸಿಕೊಂಡು ತಮ್ಮ ಆಡಳಿತ ಪ್ರಾರಂಭಿಸಿದರು. ಸರ್.ಥಾಮಸ್ ಮನ್ರೋ ಈ ಪ್ರದೇಶಗಳಿಗೆ ಪ್ರಥಮ ಕಲೆಕ್ಟರನಾಗಿ ಬಂದನು. ಈ ಹಿಂದೆ ಬೆಳಗಾವಿ, ಧಾರವಾಡ ಜಿಲ್ಲೆಗಳು ಸಹ ಬಳ್ಳಾರಿ ಜಿಲ್ಲೆಗೆ ಸೇರಿದ್ದವೆಂದು ತಿಳಿಯುತ್ತದೆ. ಕ್ರಮೇಣ ಅವು ಮುಂಬೈ ಪ್ರಾಂತ್ಯಕ್ಕೆ ಸೇರಿ ಹೋದವು. ೧೯೪೭ರಲ್ಲಿ ಸ್ವಾತಂತ್ರ್ಯ ಪಡೆದಾಗ ಬಳ್ಳಾರಿ ಜಿಲ್ಲೆ ಭೌಗೋಳಿಕವಾಗಿ ಮತ್ತು ಚಾರಿತ್ರಿಕವಾಗಿ ಸಾಕಷ್ಟು ಬದಲಾಗಿತ್ತು.

ಬಳ್ಳಾರಿ ಜಿಲ್ಲೆಯ ಚದುರಂಗದಾಟದಲ್ಲಿ ರಾಜಕೀಯ ಅಧಿಕಾರವು ಒಬ್ಬರಿಂದ ಮತ್ತೊಬ್ಬರಿಗೆ ವರ್ಗಾವಣೆಯಾದಾಗ ಸಹಜವಾಗಿಯೇ ಹಂಪಿ ಭಾಗವು ಅವರ ಹಿಡಿತಕ್ಕೆ ಒಳಪಡುತ್ತಿತ್ತು. ಈ ರೀತಿ ಅಂತಿಮವಾಗಿ ಅದು ಬ್ರಿಟಿಷರ ಅಧೀನಕ್ಕೆ ಒಳಗಾಯಿತು. ಇಲ್ಲಿ ಅಧಿಕಾರ ಮಾಡಿದ ಹಲವು ಕಲೆಕ್ಟರುಗಳು ಇಲ್ಲಿ ಹಲವು ಜನಪರ ಕಾರ್ಯಕ್ರಮಗಳನ್ನು ಕೈಗೊಂಡರು. ಅವರು ಅನೇಕ ಕಡೆ ಕೆರೆ, ಬಾವಿಗಳನ್ನು ತೋಡಿಸಿದರು. ಅನೇಕ ಕಡೆ ಶೈಕ್ಷಣಿಕ ಕೇಂದ್ರಗಳನ್ನು ಸ್ಥಾಪಿಸಿದರು. ಇವುಗಳೊಂದಿಗೆ ಇಲ್ಲಿನ ಅವಸಾನದಂಚಿನಲ್ಲಿದ್ದ ಅಸಂಖ್ಯಾತ ಸ್ಮಾರಕಗಳಲ್ಲಿ

ಕೆಲವನ್ನು ಸಂರಕ್ಷಣೆ ಮಾಡಿದರು. ಆದರೆ ಇಡೀ ರಾಷ್ಟ್ರದಾದ್ಯಂತ ಬ್ರಿಟಿಷ್ ಆಡಳಿತದ ವಿರುದ್ಧ ವ್ಯಾಪಕ ಪ್ರತಿಭಟನೆ ವ್ಯಕ್ತವಾದಾಗ ಇಲ್ಲಿಯೂ ಅದರ ಛಾಯೆಗಳು ಕಂಡು ಬಂದವು. ಕಾಲ ಕ್ರಮೇಣ ಅಂದರೆ ೧೯೪೭ ಆಗಸ್ಟ್ ೧೫ ರಂದು ಭಾರತ ಬ್ರಿಟಿಷರಿಂದ ಮುಕ್ತವಾದಾಗ, ಭಾರತದ ಇತರೆ ಪ್ರದೇಶಗಳಂತೆ ಹಂಪಿಯೂ ಸಹ ಸ್ವತಂತ್ರವಾಯಿತು. ಸ್ವತಂತ ಭಾರತದ ನಿರ್ಮಾಣಕ್ಕೆ ಮತ್ತು ಕರ್ನಾಟಕದ ಏಕೀಕರಣಕ್ಕೆ ಹಂಪಿ ಸ್ಫೂರ್ತಿ ನೀಡಿತು. ಅಲ್ಲದೆ, ಇಲ್ಲಿ ಆಳಿ ಅಳಿದು ಹೋದ ವಿಜಯನಗರ ಸಾಮ್ರಾಜ್ಯ ಅವರಿಗೆ ಪ್ರೇರೆಪಣೆ ಮತ್ತು ಶಕ್ತಿ ನೀಡಿತು. ಅದು ಅನೇಕ ಹೋರಾಟಗಾರರಿಗೆ, ಬರಹಗಾರರಿಗೆ ಕೇಂದ್ರವಾಯಿತು. ಕ್ರಮೇಣ ಇಲ್ಲಿನ ತಾಯಿ ಭುವನೇಶ್ವರಿ ಕನ್ನಡಿಗರ ಅಧಿದೈವವಾಗಿ, ಇಲ್ಲಿನ ವಿಜಯನಗರ ಸಾಮ್ರಾಜ್ಯ 'ಕನ್ನಡಿಗರ ಸಾಮ್ರಾಜ್ಯ' ಎಂದು ಕರೆಯಲ್ಪಟ್ಟು ಕನ್ನಡನಾಡಿನ ಏಕೀಕರಣ ಚಳುವಳಿಗೆ ರಹದಾರಿ ನಿರ್ಮಿಸಿಕೊಟ್ಟಿತು. ಇದರೊಂದಿಗೆ ಹಂಪಿ ಕನ್ನಡಿಗರ ಹೆಮ್ಮೆಯ ಸಾಂಸ್ಕೃತಿಕ ರಾಜಧಾನಿ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

❑❑❑

ಕೊನೆ ಟಿಪ್ಪಣಿಗಳು

೧. ಎಲ್. ಶ್ರೀನಿವಾಸ್, ಹಂಪಿ ಪರಿಸರದ ಆದಿ ಮಾನವನ ನೆಲೆಗಳು, ಪುಟ.೧

೨. ಅದೇ ಪುಟ. ೨.

೩. ಪಪ್ಪುಆರ್.ಎಸ್, 'ಪ್ರಾಚೀನತಮ ಮಾನವ ಸಂಸ್ಕೃತಿಗಳು, ವಿಕಸನದ ಹಂತಗಳು', ಕರ್ನಾಟಕ ಚರಿತ್ರೆ ಸಂಪುಟ. ೧, ಪುಟ.೯೫.

೪. Gazetteer of India, Bellary District.

೫. ನಾಗರಾಜರಾವ್, ಎಂ.ಎಸ್.,**ಪ್ರೋಟೋ ಹಿಸ್ಟಾರಿಕ್ ಕಲ್ಚರಿಕ್ ಆಫ್ ದಿ ತುಂಗಭದ್ರಾ ವ್ಯಾಲಿ,** ಪು.೧೪-೧೫.

೬. ಅನ್ಸಾರಿ ಝಡ್,ಎ. **'ಪೆಬಲ್ ಟೂಲ್ಸ್ ಫ್ರಂ ನಿಟ್ಟೂರ್' (ಮೈಸೂರ್ ಸ್ಟೇಟ್) ಇಂಡಿಯನ್ ಆಂಟಿಕ್ವೇರಿ,** (ಹೊಸ ಮಾಲಿಕೆ) ಸಂ,೪,ಪು.೧-೮೭.

೭. ಸಂಕಾಲಿಯಾ, ಎಚ್.ಡಿ. **ಮೆಸೋಲಿಥಿಕ್ ಆಂಡ್ ಪ್ರೀ ಮೆಸೋಲಿಥಿಕ್ ಕಲ್ಚರ್ಸ್ ಇನ್ ಸಂಗನಕಲ್**,ಪುಟ.೧೬.

೮. Foot R.B., Indi, Pre-Proto Ant. P.೭೭-೭೮, ೯೪ and I.A.R., ೧೯೮೭-೮೮, P.೩೩.

೯. I.A.R., ೧೯೭೬-೭೭, P.೨೪

೧೦.ಕುರುವತ್ತಿ : Foot R.B., Indi, Pre-Proto Ant. P.೭೭-೭೮,

೧೧. Ansari Z.D. Indian Antiquary 3rd Series and Sankalia, H.D. Prehistory and Prothistory of India and Pakistan

೧೨. ಪಪ್ಪು,ಆರ್.ಎಸ್, ಪೂರ್ವೋಕ್ತ.

೧೩.ಅದೇ.

೧೪.ಕೊಟ್ರೇಶ್, ಎಂ, ಮಾಡಲಗೇರಿ, ನಾಗರಾಜ್, ಎಂ. ಈ., ಕೃಷ್ಣಮೂರ್ತಿ. ಪಿ.ವಿ., (ಸಂ) ಇತಿಹಾಸ ದರ್ಶನ, ೧೩, ೧೯೯೮, ಪುಟ. ೧೭-೨೦.

೧೫. Foot R.B., Ind Pre-Prot. Ant. P.42-56, P.77-78 and Allchin F.R., Neolithic Cattle- Keepns of South India, P.79-80

೧೬. ಎಚ್.ತಿಪ್ಪೇಸ್ವಾಮಿ, ೨೦೧೩, ಆದಿಮ, ಪು.೧-೧೦

೧೭. A.I.A.R.1993-94, P.56-61 &I.A.R., 1993-94, P.56-61 & 1976-77, P.24-25 &I.A.R. 1965-66, P.33, 1984-84, P.24-25, Foot R.B., Ind. Pre-Proto. Ant., Allchin F.R., Neolithic Cattle-Keepns of South India, P-52 ಸುಂದರ ಅ., ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ, ಪು.೬೭-೬೯

೧೮. ತೆಕ್ಕಲಕೋಟೆ ಇ.ದ., ೧೧, ಪುಟ.೨೩-೨೪

೧೯. ಎಚ್.ತಿಪ್ಪೇಸ್ವಾಮಿ, ಹಂಪಿ ಪ್ರಾಧಿಕಾರ ವ್ಯಾಪ್ತಿಯ ಸ್ಮಾರಕಗಳು, ಸಂ.೨,ಪುಟ.೧೯-೯೭

೨೦. I.A.R., ೧೯೮೭-೮೮, P.೩೩ ಮತ್ತು ಸುಂದರ ಅ., ಅದೇ. ೬೭-೬೯

೨೧. ಅದೇ. ೩೪

೨೨. ಎಲ್. ಶ್ರೀನಿವಾಸ್, ಅದೇ.ಪುಟ.೨೯.

೨೩. I.A.R., ಅದೇ ಪುಟ. ೬೮

೨೪. ಎಪಿಗ್ರಾಫಿಯಾ ಕರ್ನಾಟಿಕಾ, ಸಂ.೭.ಭಾಗ೧, ಶಾ.ಸಂ.-೧೮.

೨೫. ಷೇಕ್ ಆಲಿ ಮತ್ತು ಸುಂದರ,ಅ(ಸಂ) **ಕರ್ನಾಟಕ ಚರಿತ್ರೆ**,ಸಂ.-೧೯೯೭,ಪುಟ.೩೫.

೨೬. ಎಫಿಗ್ರಾಫಿಯಾ ಕರ್ನಾಟಿಕ, ಸಂ.-೭,ಹೊನ್ನಾಳಿ ಶಾ.ಸಂ.೧೩.

೨೭. ದೇವರಕೊಂಡಾರೆಡ್ಡಿ, (ಸಂ), ಕನ್ನಡ ವಿ.ವಿ.ಶಾಸನ ಸಂಪುಟ-೩ ಹಂಪಿ ಶಾಸನಗಳು ಶಾ.ಸಂ. ೩೯೯, ಪು ೨೮೬

೨೮. ಬಸವರಾಜ ಮಲಶೆಟ್ಟಿ (ಸಂ.) , ಪೂರ್ವೋಕ್ತ, ಪು.೮೨೨೭.

೨೯. ದೇವರಕೊಂಡಾರೆಡ್ಡಿ, (ಸಂ), ಕನ್ನಡ ವಿ.ವಿ.ಶಾಸನ ಸಂಪುಟ–೨, ಬಳ್ಳಾರಿ ಜಿಲ್ಲೆ. ಈಗ ಇದು ದಾವಣಗೆರೆ ಜಿಲ್ಲೆಯಲ್ಲಿದೆ.

೩೦. ದೇವರಕೊಂಡಾರೆಡ್ಡಿ, (ಸಂ), ಕನ್ನಡ ವಿ.ವಿ.ಶಾಸನ ಸಂಪುಟ–೩, ಹಂಪಿಶಾಸನಗಳು, ಅದೇ ಪುಟ. ೨೨೯.

೩೧. ಏಪಿಗ್ರಾಫಿಯಾ ಕರ್ನಾಟಿಕ,೧೧, ಶಾ.ಸಂ.೧೬೮

೩೨. ಕುಂಬಾಸ.ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ,ಪು.೨

೩೩. ಕ.ಇ.vi, ೪,೯೨೪,ಡಿಸೆಂಬರ್ ೨೦

೩೪. ಕುಂಬಾಸ, ಅದೇ.

೩೫. ದೇವರಕೊಂಡಾರೆಡ್ಡಿ, (ಸಂ), ಕನ್ನಡ ವಿ.ವಿ.ಶಾಸನ ಸಂಪುಟ–೨, ಶಾ.ಸಂ.೧೫೪

೩೬. ಸೌಥ್ ಇಂಡಿಯನ್ ಇನ್ಸ್ಕ್ರಿಪ್ಷನ್, ಸಂ.೬, ಸಂ.೫೭೨

೩೭. ಎಫಿಗ್ರಾಫಿಯಾ ಕರ್ನಾಟಿಕಾ, ಸಂ.೨.ಶಾ.ಸಂ.೪೩

೩೮. ಕುಂಬಾಸ, ಅದೇ. ಪು. ೧೨೯

೩೯. ದೇವರಕೊಂಡಾರೆಡ್ಡಿ, (ಸಂ), ಕನ್ನಡ ವಿ.ವಿ. ಶಾಸನ ಸಂಪುಟ–೩ ಹಂಪಿ ಶಾಸನಗಳು, ಪು. XXV (ಪ್ರಸ್ತಾವನೆ)

೪೦. ಕರ್ನಾಟಕ ಇತಿಹಾಸ ದರ್ಶನ, ಅಧೀನ ರಜಕುಲಗಳು, ಪು.೨೧೩.

೪೧. ಎಫಿಗ್ರಾಫಿಯಾ ಕರ್ನಾಟಿಕ, ೧೧, ಶಾ.ಸಂ.೧೬೮

೪೨. ದೇವರಕೊಂಡಾರೆಡ್ಡಿ, (ಸಂ), ಅದೇ, ಶಾ.ಸಂ. ೫೫. ಪು. ೪೫

೪೩. ಸೌಥ್ ಇಂಡಿಯನ್ ಇನ್ಸ್ಕ್ರಿಪ್‌ಷನ್, ಸಂ.೬,ಶಾ.ಸಂ.೫೭೨

೪೪. ಚಿತ್ರದುರ್ಗ ಜಿಲ್ಲಾ ಗೆಜಟಿಯರ್ (ವಿಜಯ ಪಾಂಡ್ಯ)ಪು.೪೧

೪೫. ಎಫಿಗ್ರಾಫಿಯ ಕರ್ನಾಟಿಕಾ, ಸಂ೧೧, ಚಳ್ಳಕೆರೆ, ಶಾ.ಸಂ.೨೯

೪೬. ಅದೇ, ದಾವಣಗೆರೆ, ಶಾ.ಸಂ. ೭೧

೪೭. ಕರ್ನಾಟಕ ಚರಿತ್ರೆ ಸಂ.೩, ಪುಟ.

೪೮. ಅದೇ ಪುಟ.

೪೯. ಎಫಿಗ್ರಾಫಿಯಾ ಕರ್ನಾಟಿಕಾ, ಚನ್ನಗಿರಿ, ಶಾ,ಸಂ. ೨೧

೫೦. ಕುಂಬಾಸ, ಅದೇ. ಪು. ೧೨೯

೫೧. ದೇವರಕೊಂಡಾರೆಡ್ಡಿ, (ಸಂ), ಅದೇ, ಶಾ.ಸಂ. ೧೯೩ ಪುಟ.೧೪೯.

೫೨. ಅದೇ, ಶಾ.ಸಂ. ೧೯೭ ಪುಟ. ೧೫೩.

೫೩. ನೋಡಿ–ಡಾ.ದೇವರಕೊಂಡಾರೆಡ್ಡಿ, (ಸಂ), ಅದೇ,

೫೪. ಅದೇ ಶಾ.ಸಂ. ೧೯೪ ಪುಟ. ೧೫೦.

೫೫. ಎಫಿಗ್ರಾಫಿಯಾ ಕರ್ನಾಟಿಕಾ, ದಾವಣಗೆರೆ, ಶಾ.ಸಂ.೧೨೯

೫೬. ಬಾಲಸುಬ್ರಮಣ್ಯ (ಅನು) ಮರೆಯಲಾಗದ ಮಹಾ ಸಾಮ್ರಾಜ್ಯ, ಪುಟ.೧

೫೭. ದೇವರಕೊಂಡಾರೆಡ್ಡಿ, (ಸಂ), ಅದೇ, ಶಾ.ಸಂ. ೫೩ ಪು. ೩೪

೫೮. ಅದೇ ಪು. XXVIII (ಪ್ರಸ್ತಾವನೆ)

೫೯. ಅದೇ ಶಾ.ಸಂ. ೨೫೧ ಪು ೧೯೩

೬೦. ಅದೇ ಶಾ.ಸಂ. ೫೩ ಪು ೩೩

೬೧. ಅದೇ ಶಾ.ಸಂ. ೩೨೮ ಪು ೨೪೨

೬೨. ಅದೇ ಪು. XXIX(ಪ್ರಸ್ತಾವನೆ)

೬೩. ಅದೇ ಶಾ.ಸಂ. ೧೪೫ ಪು ೧೧೬

೬೪. ಅದೇ ಶಾ.ಸಂ. ೩೬೫ ಪು ೨೬೨

೬೫. ಅದೇ ಶಾ.ಸಂ. ೧೪೭ ಪು ೧೧೮

೬೬. ಅದೇ ಶಾ.ಸಂ. ೩೫೦ ಪು ೨೫೪–೨೫೫

೬೭. ಅದೇ ಶಾ.ಸಂ. ೫೭ ಪು ೪೯

೬೮. ಅದೇ ಶಾ.ಸಂ. ೧೧೪ ಪು ೬೭

೬೯. ಅದೇ ಶಾ.ಸಂ. ೨೭೪ ಪು ೯೭

೭೦. ಅದೇ ಶಾ.ಸಂ. ೨೩೪ ಪು ೧೮೩

೭೧. ಅದೇ ಶಾ.ಸಂ. ೬೯ ಪು ೫೮–೫೯

೭೨. ಅದೇ ಶಾ.ಸಂ. ೩೨೭ ಪು ೨೪೧

೭೩. ಅದೇ ಶಾ.ಸಂ. ೨೬೧ ಪು ೨೦೧

೭೪. ಅದೇ ಶಾ.ಸಂ. ೩೦೨ ಪು ೨೨೦

೭೫. ಅದೇ ಶಾ.ಸಂ. ೨೨೮ ಪು ೧೭೮

೭೬. ಅದೇ ಶಾ.ಸಂ. ೩೪ ಪು ೧೯

೭೭. ಅದೇ ಶಾ.ಸಂ. ೩೩ ಪು ೧೭

೭೮. ಅದೇ ಶಾ.ಸಂ. ೭೩ ಪು ೬೬–೬೯

೭೯. ಅದೇ ಶಾ.ಸಂ. ೧೮೧ ಪು ೧೩೧–೧೩೨

೮೦. ಅದೇ ಶಾ.ಸಂ. ೧೮೨ ಪು ೧೩೩–೧೩೪

೮೧. ಅದೇ ಶಾ.ಸಂ. ೨೩೫ ಪು ೧೮೪

೮೨. ಅದೇ ಶಾ.ಸಂ. ೨೬೫ ಪು ೨೦೩

೮೩. ಅದೇ ಶಾ.ಸಂ. ೭೪ ಪು ೭೧–೭೫

೮೪. ಅದೇ ಶಾ.ಸಂ. ೨೦೬–೨೦೭ ಪು ೧೬೧–೧೬೨, ೧೭೫

೮೫. ಅದೇ ಶಾ.ಸಂ. ೨೫೭ ಪು ೧೯೮–೧೯೯

೮೬. ಅದೇ ಶಾ.ಸಂ. ೨೨೯ ಪು ೧೭೯–೧೮೦

೮೭. ಅದೇ ಶಾ.ಸಂ. ೭೯ ಪು ೭೮–೭೯

೮೮. ಅದೇ ಶಾ.ಸಂ. ೨೫೩ ಪು ೧೯೫

೮೯. ಅದೇ ಶಾ.ಸಂ. ೮೧ ಪು ೮೦–೮೧

೯೦. ಅದೇ ಶಾ.ಸಂ. ೨೯೨ ಪು ೧೪೮

೯೧. ಅದೇ ಶಾ.ಸಂ. ೩೨೨ ಪು ೨೩೪

೯೨. ಅದೇ ಶಾ.ಸಂ. ೭೭ ಪು ೭೭

೯೩. ಅದೇ ಶಾ.ಸಂ. ೧೧೧ ಪು ೯೫

೯೪. ಅದೇ ಶಾ.ಸಂ. ೧೯೦ ಪು ೧೪೪–೧೪೫

೯೫. ಅದೇ ಶಾ.ಸಂ. ೫೦ ಪು ೨೮

೯೬. ಅದೇ ಶಾ.ಸಂ. ೧೩೨ ಪು ೧೦೮–೧೦೭

೯೭. ಅದೇ ಶಾ.ಸಂ. ೧೮೯ ಪು ೧೪೩–೧೪೪

೯೮. ಅದೇ ಶಾ.ಸಂ. ೨೧೧ ಪು ೧೬೯

೯೯. ಅದೇ ಶಾ.ಸಂ. ೦೨ ಪು ೦೨

೧೦೦.ಅದೇ ಶಾ.ಸಂ. ೧೯೫ ಪು ೧೫೦

೧೦೧.ಅದೇ ಶಾ.ಸಂ. ೩೮೩ ಪು ೨೭೦

೧೦೨.ಅದೇ ಶಾ.ಸಂ. ೧೯೮ ಪು ೧೫೪

೧೦೩.ಅದೇ ಶಾ.ಸಂ. ೭೫ ಪು ೬೬

೧೦೪.ಅದೇ ಶಾ.ಸಂ. ೧೩೧ ಪು ೧೦೫

೧೦೫.ಅದೇ ಶಾ.ಸಂ. ೨೫೨ ಪು ೧೯೪

೧೦೬.ಅದೇ ಶಾ.ಸಂ. ೨೭೯ ಪು ೨೦೮

೧೦೭. ಅದೇ ಶಾ.ಸಂ. ೧೯೬ ಪು ೧೫೧-೧೫೨

೧೦೮. ಅದೇ ಶಾ.ಸಂ. ೮೩ ಪು ೮೩

೧೦೯. ಅದೇ ಶಾ.ಸಂ. ೮೪ ಪು ೮೪-೮೫

೧೧೦. ಅದೇ ಶಾ.ಸಂ. ೨೦೧ ಪು ೧೫೬

೧೧೧. ಅದೇ ಶಾ.ಸಂ. ೨೦೫ ಪು ೧೬೦

೧೧೨. ಅದೇ ಶಾ.ಸಂ. ೨೮೯ ಪು ೨೧೩

೧೧೬. ಅದೇ ಶಾ.ಸಂ. ೧೮೭ ಪು ೧೪೧-೧೪೨

೧೧೭. ಅದೇ ಶಾ.ಸಂ. ೨೮೮ ಪು ೨೧೨

೧೧೮. ಅದೇ ಶಾ.ಸಂ. ೧೩೬ ಪು ೧೧೦-೧೧೧

೧೧೯. ಅದೇ ಶಾ.ಸಂ. ೨೦೯ ಪು ೧೬೫-೧೬೬

೧೨೦. ಅದೇ ಶಾ.ಸಂ. ೩೫೦ ಪು ೨೫೬

೧೨೧. ಅದೇ ಶಾ.ಸಂ. ೧೯೧ ಪು ೧೪೬-೧೪೭

೧೨೨. ಅದೇ ಶಾ.ಸಂ. ೧೩೮ ಪು ೧೧೨-೧೧೩

೧೨೩. ಅದೇ ಶಾ.ಸಂ. ೧೮೩ ಪು ೧೩೫-೧೩೬

೧೨೪. ಅದೇ ಶಾ.ಸಂ. ೨೧೪ ಪು ೧೭೧ ಮತ್ತು ಶಾ.ಸಂ. ೨೦೪ ಪು. ೧೫೮-೧೫೯

೧೨೫. ಅದೇ ಶಾ.ಸಂ. ೨೪೧ ಪು ೧೮೭ ಮತ್ತು ಶಾ.ಸಂ. ೭೮ ಪು. ೭೮

೧೨೬. ಅದೇ ಶಾ.ಸಂ. ೧೮೫ ಪು ೧೩೮ ಮತ್ತು ಶಾ.ಸಂ. ೩೩೮ ಪು. ೨೪೭

೧೨೭. ಕರ್ನಾಟಕ ಪರಂಪರೆ, ಸಂ.೨, ೧೯೯೨, ಪು.೨೦೫

೧೨೮. ಡಬ್ಲ್ಯೂ. ಫ್ರಾನ್ಸಿಸ್, ೧೯೯೨, ಬಳ್ಳಾರಿ ಜಿಲ್ಲಾ ಗ್ಯಾಸೆಟಿಯರ್, ಪು.೪೫

೧೨೯. ವಿರೂಪಾಕ್ಷಿ ಪೂಜಾರಹಳ್ಳಿ, ಬಳ್ಳಾರಿ ಜಿಲ್ಲೆಯ ಪಾಳೆಯಗಾರರು, ಪು.೧೦೦

೧೩೦. ವಿರೂಪಾಕ್ಷಿ ಪೂಜಾರಹಳ್ಳಿ, ವಸಾಹತುಕಾಲೀನ ಬಳ್ಳಾರಿ ಜಿಲ್ಲೆ, ಪು.೧೨

ಅಧ್ಯಾಯ ನಾಲ್ಕು

ದೇಶಿಯರ ದೃಷ್ಟಿಯಲ್ಲಿ ಹಂಪಿ

೪.೧. ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ಹಂಪಿ

೪.೧.೧. ಕನ್ನಡ ಜಾನಪದ ಸಾಹಿತ್ಯದ(ಮೌಖಿಕ ಸಾಹಿತ್ಯ)ಹಿನ್ನೆಲೆಯಲ್ಲಿ ಹಂಪಿ

೪.೧.೧.೧. ಐತಿಹ್ಯ

೪.೧.೧.೨. ಗಾದೆಗಳು

೪.೧.೧.೩. ಕಾಲಜ್ಞಾನ ಸಾಹಿತ್ಯ

೪.೧.೨. ಕನ್ನಡ ಶಿಷ್ಟಸಾಹಿತ್ಯದ ಹಿನ್ನೆಲೆಯಲ್ಲಿ ಹಂಪಿ

೪.೧.೨.೧.ಆಧುನಿಕಪೂರ್ವ ಸಾಹಿತ್ಯ ಕೃತಿಗಳ ಹಿನ್ನೆಲೆಯಲ್ಲಿ ಹಂಪಿ

೧.ಲಕ್ಕಣ್ಣ ದಂಡೇಶ ೨.ಹರಿಹರ ೩.ರಾಘವಾಂಕ ೪.ನಂಜುಂಡಕವಿ

೪.೧.೩.ಆಧುನಿಕ ಕನ್ನಡ ಕವಿಗಳ/ಲೇಖಕರ ಕೃತಿಗಳಲ್ಲಿ ಹಂಪಿ

೪.೧.೩.೧. ಕಾವ್ಯ

೪.೧.೩.೨. ಕಾದಂಬರಿ

೪.೧.೩.೩. ನಾಟಕ

೪.೧.೩.೪. ಪ್ರವಾಸ ಸಾಹಿತ್ಯ

೪.೨ ದೇಶಿ ಪ್ರವಾಸಿಗರ ದೃಷ್ಟಿಯಲ್ಲಿ

೪.೩ ದೇಶಿ ವಿದ್ವಾಂಸರ ದೃಷ್ಟಿಯಲ್ಲಿ

ಅಧ್ಯಾಯ ನಾಲ್ಕು

ದೇಶಿಯರ ದೃಷ್ಟಿಯಲ್ಲಿ ಹಂಪಿ

ಪ್ರಸ್ತಾವನೆ

ಹಂಪಿ ಪೌರಾಣಿಕ ಮತ್ತು ಚಾರಿತ್ರಿಕವಾಗಿ ಅತಿ ಮಹತ್ವ ಪಡೆದ ಒಂದು ತಾಣವಾಗಿದೆ. ಇದು ಕೇವಲ ಧಾರ್ಮಿಕವಾಗಿ ಅಷ್ಟೇ ಅಲ್ಲದೆ, ಆಡಳಿತಕ್ಕೆ, ಪ್ರವಾಸಿಗರಿಗೆ, ತೀರ್ಥಯಾತ್ರೆಗೆ ಕೇಂದ್ರವಾಗಿ ಪ್ರಾಚೀನ ಕಾಲದಿಂದಲೂ ಮಹತ್ವ ಪಡೆದಿದೆ. ಇದೊಂದು ಪವಿತ್ರ ಮತ್ತು ಪುಣ್ಯ ಕ್ಷೇತ್ರವಾಗಿದ್ದರಿಂದ ತಮ್ಮ ಮನಸ್ಸಿನ ದುಗುಡ, ದುಮ್ಮಾನಗಳನ್ನು ದೂರಮಾಡಿಕೊಳ್ಳಲು ಮತ್ತು ಬದುಕಿನ ನೆಮ್ಮದಿಯನ್ನು ಕಂಡುಕೊಳ್ಳಲು ಜನರು ತಮ್ಮ ಸ್ವ-ಇಚ್ಛೆಯಿಂದ ಬಹು ಪ್ರಾಚೀನ ಕಾಲದಿಂದಲೂ ಹಂಪಿಗೆ ಭೇಟಿ ನೀಡಿದ್ದಾರೆ. ಅದೇ ಪರಂಪರೆ ಇಂದಿನ ಆಧುನಿಕ ದಿನಗಳಲ್ಲೂ ಮುಂದುವರೆದಿರುವುದನ್ನು ನಾವು ಕಾಣಬಹುದು. ಹಂಪಿಯ ಕುರಿತಂತೆ ಅನೇಕ ಕವಿಗಳು ತಮ್ಮ ಸಾಹಿತ್ಯ ಕೃತಿಗಳಲ್ಲಿ ಹಂಪಿಯ ವೈಶಿಷ್ಟ್ಯವನ್ನು ದಾಖಲಿಸಿದ್ದಾರೆ. ಅದೇ ರೀತಿ ತಮ್ಮ ಬದುಕಿಗೆ ಮುಕ್ತಿಯನ್ನು ಕಂಡುಕೊಳ್ಳಲು ಹಂಪಿಗೆ ಭೇಟಿ ನೀಡಿದ ಹಲವು ಯಾತ್ರಿಕರ ವಿವರವನ್ನು ಮತ್ತು ಪ್ರವಾಸಿಗರ ವಿವರವನ್ನು ಇಲ್ಲಿನ ಶಾಸನಗಳು ದಾಖಲಿಸಿವೆ. ಅಲ್ಲದೆ ಹಂಪಿಯ ಕುರಿತಂತೆ ನಮ್ಮ ದೇಶೀಯ ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು, ಅಲೋಚನಾಕ್ರಮವನ್ನು ತಮ್ಮ ಕೃತಿಗಳಲ್ಲಿ ದಾಖಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಹಂಪಿಯ ಕುರಿತಂತೆ ಕನ್ನಡನಾಡಿನ ಪ್ರಮುಖ ಕೃತಿಕಾರರು ಸಾಹಿತ್ಯ ಕೃತಿಗಳು ಹಂಪಿಯನ್ನು ದಾಖಲಿಸಿದ್ದಾರೆ. ಇದಕ್ಕೆ ಸಂಬಂಧಿಸಿದ ಶಾಸನಗಳು ದೇಶಿ ಯಾತ್ರಿಕರನ್ನು/ಪ್ರವಾಸಿಗರನ್ನು ದಾಖಲಿಸಿವೆ. ಈ ಈ ಹಿನ್ನೆಲೆಯಲ್ಲಿ ಚರ್ಚಿಸುವುದು ಈ ಅಧ್ಯಯನದ ಉದ್ದೇಶವಾಗಿದೆ. ಆದ್ದರಿಂದ ಅಧ್ಯಯನದ ಅನುಕೂಲಕ್ಕಾಗಿ ಈ ಅಧ್ಯಾಯವನ್ನು ಈ ಮುಂದಿನಂತೆ ವಿಭಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ.

೪.೧. ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ಹಂಪಿ

೪.೨. ದೇಶಿ ಪ್ರವಾಸಿಗರ ದೃಷ್ಟಿಯಲ್ಲಿ ಹಂಪಿ

೪.೩. ದೇಶಿ ವಿದ್ವಾಂಸರ ದೃಷ್ಟಿಯಲ್ಲಿ ಹಂಪಿ

೪.೧. ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ಹಂಪಿ

ಭಾಷೆ ದೃಷ್ಟಿಯಿಂದ ಕನ್ನಡ ಸಾಹಿತ್ಯಕ್ಕೆ ಒಂದು ವಿಶಿಷ್ಠ ಸ್ಥಾನಮಾನವಿದೆ. ಇದು ಕವಿರಾಜಮಾರ್ಗಕಾರನಿಂದ ಮೊದಲ್ಗೊಂಡು ಇಂದಿನ ಗಣಕಯಂತ್ರದ ಯುಗದಲ್ಲೂ ತನ್ನದೇ ಆದ ಛಾಪು ಮೂಡಿಸಿದೆ.

ಪ್ರಾಚೀನ ಕನ್ನಡ ಸಾಹಿತ್ಯ (ಕ್ರಿ.ಶ.೩-೪ ರಿಂದ ಕ್ರಿ.ಶ.೮ನೇ ಶತಮಾನದವರೆಗೆ), ಹಳಗನ್ನಡ ಸಾಹಿತ್ಯ (ಕ್ರಿ.ಶ.೮ ರಿಂದ ಕ್ರಿ.ಶ.೧೦ನೇ ಶತಮಾನದವರೆಗೆ), ನಡುಗನ್ನಡ ಸಾಹಿತ್ಯ (ಕ್ರಿ.ಶ.೧೦ ರಿಂದ ಕ್ರಿ.ಶ.೧೪ನೇ ಶತಮಾನದವರೆಗೆ), ಹೊಸಗನ್ನಡ ಸಾಹಿತ್ಯ (ಕ್ರಿ.ಶ.೧೪ ರಿಂದ ಕ್ರಿ.ಶ.೧೫ನೇ ಶತಮಾನದವರೆಗೆ), ಆಧುನಿಕ ಕನ್ನಡ ಸಾಹಿತ್ಯ (ಕ್ರಿ.ಶ.೧೫ ರಿಂದ ಇತ್ತೀಚಿನವರೆಗೆ) ಹಂತದಲ್ಲಿ ವಿವಿಧ ಭಾಗಗಳನ್ನಾಗಿ ಅಧ್ಯಯನದ ಅನುಕೂಲಕ್ಕಾಗಿ ವಿಭಾಗಿಸಲಾಗಿದೆ. ಕನ್ನಡ ಸಾಹಿತ್ಯ ಹೇರಳವಾಗಿ ಬೆಳೆದು ಭಾಷಾಲೋಕಕ್ಕೆ ಒಂದು ಹಿರಿಮೆ ಮತ್ತು ಗರಿಮೆಯನ್ನು ತಂದು ಕೊಟ್ಟಿದೆ. ಈ ಮೇಲೆ ಉಲ್ಲೇಖಿಸಿದ ವಿವಿಧ ಕಾಲಘಟ್ಟದಲ್ಲಿ ರಚನೆಯಾದ ಹಲವು ಕನ್ನಡ ಕೃತಿಗಳು ಹಂಪಿಯ ವೈಶಿಷ್ಟ್ಯವನ್ನು, ಅದರ ಪ್ರಾಚೀನತೆಯನ್ನು, ಅದರ ಮಹತ್ವವನ್ನು ದಾಖಲಿಸುವಲ್ಲಿ ಯಶಸ್ವಿಯಾಗಿವೆ. ಕಾಲಾನುಕ್ರಮದ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ನಾವು ಹಂಪಿಯ ಉಲ್ಲೇಖವನ್ನು ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಅಧ್ಯಯನದ ಅನುಕೂಲಕ್ಕಾಗಿ ಕನ್ನಡ ಜಾನಪದ ಸಾಹಿತ್ಯ(ಮೌಖಿಕ ಸಾಹಿತ್ಯ)ದ ಹಿನ್ನೆಲೆಯಲ್ಲಿ ಹಂಪಿ, ಕನ್ನಡ ಶಿಷ್ಟಸಾಹಿತ್ಯದ ಹಿನ್ನೆಲೆಯಲ್ಲಿ ಹಂಪಿ ಎಂದು ಎರಡು ವಿಭಾಗಗಳನ್ನಾಗಿ ಮಾಡಿಕೊಳ್ಳಲಾಗಿದೆ.

೪.೧.೧. ಕನ್ನಡ ಜಾನಪದ ಸಾಹಿತ್ಯದ (ಮೌಖಿಕ ಸಾಹಿತ್ಯ) ಹಿನ್ನೆಲೆಯಲ್ಲಿ ಹಂಪಿ.

ಸಾಹಿತ್ಯ ಜನಜೀವನದ ಪ್ರತಿಬಿಂಬ. ಇದು ಮಾನವನ ಬದುಕಿನ ರೀತಿ-ನೀತಿಗಳ ಅನುಭವಿಸಿದ ನೋವು-ನಲಿವುಗಳ ಸಾರವತ್ತಾದ ಸಂಗ್ರಹವಾಗಿರುತ್ತದೆ. ಇಂತಹ ಬದುಕಿನ ವಿವಿಧ ಮುಖಗಳ ವಿಭಿನ್ನ ಸಂಸ್ಕೃತಿಯ ಮೊತ್ತವನ್ನು ವಿಸ್ತರಿಸುವುದು ಅತಿ ಮುಖ್ಯವಾಗುತ್ತದೆ. ಮನುಷ್ಯ ತಾನು ನೆಲೆಸಿದ ಪ್ರದೇಶದ ಸಂಸ್ಕೃತಿಯ ವಾಹಕನಾಗಿ, ಮೌಖಿಕ ದಾಖಲೆಗೆ ನಾಂದಿ ಹಾಡುತ್ತಾನೆ. ಜಾನಪದ ಸಾಹಿತ್ಯದ ಬೇರು. ಅದನ್ನು ಅವಲಂಬಿಸಿಯೇ ಇಲ್ಲಿಯ ಉಳಿದ ಸಾಹಿತ್ಯ ತನ್ನ ಬೆಳವಣಿಗೆಯನ್ನು ಹೊಂದಿದೆ. ಜನರ ಬಾಯಿಂದ ಬಾಯಿಗೆ ತನ್ನ ಪರಂಪರೆ ಮತ್ತು ಸಂಸ್ಕೃತಿಯನ್ನು 'ಜಾನಪದ' ವರ್ಗಾಯಿಸುತ್ತದೆ. ಹಂಪಿಯನ್ನು ಮೌಖಿಕ ಪರಂಪರೆಯಲ್ಲಿ ನೋಡುವ ಹಲವು ಅಂಶಗಳಿವೆ. ಅವುಗಳಲ್ಲಿ ಕೋಲಾಟ, ಜನಪದ ಗೀತೆ, ಗಾದೆ, ನುಡಿಗಟ್ಟು, ಒಗಟು, ಐತಿಹ್ಯ ಮುಂತಾದವುಗಳಲ್ಲಿ ಹಂಪಿಯ ಸೊಬಗು ವ್ಯಕ್ತವಾಗಿದೆ. ಜನಪದ ಪರಂಪರೆಯು ಜೀವ ಸಂಸ್ಕೃತಿಯಾಗಿದ್ದು, ಅದು ಅಂದಿನ ಜನ-ಜೀವನದ ಪ್ರತಿಬಿಂಬಕವಾಗಿದೆ. ಈ ಹಿನ್ನೆಲೆಯಲ್ಲಿ ಹಂಪಿಯ ಕುರಿತಾದ 'ಜಾನಪದೀಯ ಅಂಶಗಳನ್ನು' ಮತ್ತು ಮೌಖಿಕ ಪರಂಪರೆಯ ಸಂಸ್ಕೃತಿಯನ್ನು ಅವಲೋಕಿಸುವುದು ಅವಶ್ಯಕ ಎನಿಸುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಹಂಪಿ ವಿಜಯನಗರದ ಕೇಂದ್ರವಾಗಿ, ಧಾರ್ಮಿಕ ಕ್ಷೇತ್ರವಾಗಿ, ಐತಿಹಾಸಿಕ ಕ್ಷೇತ್ರವಾಗಿ, ಕಲೆ-ಸಾಹಿತ್ಯ ಸಾಂಸ್ಕೃತಿಕ ಪರಂಪರೆಯ ಕನ್ನಡ ನಾಡು-ನುಡಿಗೆ ಘನತೆಯನ್ನು ತಂದುಕೊಟ್ಟಿದೆ. ಅದರಂತೆ ಈ ಭಾಗದಲ್ಲಿರುವ ಜನಪದರ ಕಥೆ, ಕಾವ್ಯ, ಒಗಟುಗಳು, ಐತಿಹ್ಯಗಳು ಇಲ್ಲಿನ ಸಂಸ್ಕೃತಿಯನ್ನು ಪರಿಚಯಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಈ ಹಿನ್ನೆಲೆಯಲ್ಲಿ ಕೆಲವು ಜನಪದೀಯ ಅಂಶಗಳಲ್ಲಿ ಹಂಪಿಯನ್ನು ನೋಡಿರುವ ದೃಷ್ಟಿಕೋನವನ್ನು ಇಲ್ಲಿ ಚರ್ಚಿಸಲಾಗಿದೆ.

೪.೧.೧.೧. ಐತಿಹ್ಯಗಳು

ಮೌಖಿಕ ಸಂಪ್ರದಾಯದಲ್ಲಿ ಉಳಿದುಕೊಂಡು ಬಂದ ಜನಪದ ಪುರಾಣವನ್ನು ಐತಿಹ್ಯ ಎನ್ನಲಾಗುತ್ತದೆ. ಅಂದರೆ ಹಿಂದೆ ನಡೆದು ಹೋಗಿರುವ ಘಟನೆಯೊಂದಕ್ಕೆ ಕಲಾತ್ಮಕತೆಯನ್ನು ಬಡ್ತಿಕೊಟ್ಟು ಹೊಂದಿರಬಹುದಾದ ಜನಪದ ಸಾಹಿತ್ಯದ ಒಂದು ಪ್ರಕಾರ. ಇದಕ್ಕೆ ಪರಂಪರೆಯಿಂದ ಬಂದಿರುವುದು ಎಂಬರ್ಥವಿದೆ.[೧೧] ಅಂದರೆ 'ಐತಿಹ್ಯ' ಸಹ ಒಂದು ನಿರ್ದಿಷ್ಟತೆಯ ದೃಷ್ಟಿಯಿಂದ ಜನಪದ ಸಂಪ್ರದಾಯದಲ್ಲಿ ಐತಿಹ್ಯವು ಮಹತ್ವದ ಸಂಗತಿಯಾಗುತ್ತದೆ. ಅಲ್ಲದೆ ಪರಂಪರೆಯ ಅನುಸರಣೆಯಾಗಿ ನಿಲ್ಲುತ್ತಿದೆ. ಹಂಪಿ ಭಾಗದಲ್ಲಿರುವ ಐತಿಹ್ಯಗಳನ್ನು ಸ್ಥಳ ಪ್ರಧಾನ ಮತ್ತು ಘಟನಾ ಪ್ರಧಾನ ಮತ್ತು ವ್ಯಕ್ತಿ ಪ್ರಧಾನ ಐತಿಹ್ಯಗಳೆಂದು ವಿಭಾಗಿಸಿಕೊಂಡು ಅಧ್ಯಯನ ಮಾಡಬಹುದಾಗಿದೆ.

ಅ) ಸ್ಥಳ ಪ್ರಧಾನ ಐತಿಹ್ಯಗಳು

ಹಂಪಿಯಲ್ಲಿರುವ ಮತ್ತು ಅದಕ್ಕೆ ಹೊಂದಿಕೊಂಡಿರುವ ಹಲವಾರು ಪ್ರದೇಶಗಳ ಕುರಿತಂತೆ ಇಲ್ಲಿನ ಜನಪದರಲ್ಲಿ ಹಲವಾರು ವಿಭಿನ್ನ ಐತಿಹ್ಯಗಳಿದ್ದು, ಅವುಗಳಲ್ಲಿ ಮುಖ್ಯವಾದವುಗಳನ್ನು ಇಲ್ಲಿ ಅವಲೋಕಿಸಲಾಗಿದೆ.

♦ **ಋಷ್ಯಮುಖ ಪರ್ವತ:** ಹಂಪಿಯಲ್ಲಿರುವ ಸ್ಥಳ ಪ್ರಧಾನ ಐತಿಹ್ಯಗಳಲ್ಲಿ ಋಷ್ಯಮುಖ ಪರ್ವತ ಮುಖ್ಯವಾದದು. ಹಂಪೆಯ ತುಂಗಭದ್ರಾ ನದಿ ದಂಡೆಗೆ ಮತ್ತು ವಿರೂಪಾಕ್ಷ ದೇವಾಲಯದ ಎಡಭಾಗಕ್ಕೆ ಇರುವ ಪರ್ವತವೇ 'ಋಷ್ಯಮುಖ' ಪರ್ವತ. ಈ ಪರ್ವತದಲ್ಲಿ ಸಪ್ತಋಷಿಗಳು ತಪಸ್ಸು ಮಾಡಿ ಜ್ಞಾನ ಪಡೆದರಂತೆ ಅದಕ್ಕೆ ಈ ಪರ್ವತವು ಋಷಿಯ ಮುಖದಂತೆ ಹೋಲಿಕೆ ಇದೆ ಎಂಬ ಕಲ್ಪನೆ ಜನಪದರದ್ದಾಗಿದೆ. ಅದಕ್ಕೆ 'ಋಷ್ಯಮುಖ' ಎಂಬ ನಾಮ ಅನ್ವರ್ಥಕವಾಗುತ್ತದೆ. ಮತ್ತೆ ಈ ಪರ್ವತದಲ್ಲಿ ಇರುವ ಗವಿ, ಗುಹೆಗಳಲ್ಲಿ ಸಾಧು, ಸಂತರು ವಾಸ ಮಾಡುತ್ತಿರುವುದು ಕಂಡುಬರುತ್ತದೆ.

♦ **ಮತಂಗ ಪರ್ವತ:** ಹಂಪಿಯಲ್ಲಿರುವ ಸ್ಥಳಪ್ರಧಾನ ಐತಿಹ್ಯಗಳಲ್ಲಿ ಮತಂಗ ಪರ್ವತವೂ ಒಂದು. ಹಂಪಿಯ ಹೇಮಕೂಟದ ಎದುರಿನ ಪರ್ವತಕ್ಕೆ ಮಾತಂಗ ಇಲ್ಲವೇ ಮತಂಗ ಪರ್ವತವೆಂದು ಹೆಸರು. ಹಿಂದೆ ಶ್ರೀ ಮಾತಂಗ ಮಹಾಮುನಿಗಳು ಇಲ್ಲಿ ನೆಲೆಸಿದ್ದರೆಂದು ಹೇಳಲಾಗುತ್ತದೆ. ರಾಮಾಯಣ ಕಾಲದಲ್ಲಿನ ಶಬರಿ ಇವರ ಪರಮ ಭಕ್ತೆಯಾಗಿದ್ದಳು. ಇವರ ಭವಿಷ್ಯ ವಾಣಿಯಂತೆಯೇ ಶ್ರೀ ರಾಮನು ಈಕೆಗೆ ದರ್ಶನ ನೀಡಿ ಆಕೆಯನ್ನು ಪುನೀತ ಗೊಳಿಸಿದ. ವಾಲಿಗೆ ಶಾಪ ನೀಡಿದ್ದು ಇವರ ತಪೋಬಲಕ್ಕೆ ಸಾಕ್ಷಿಯಾಗಿದೆ. ಆಂಜನೇಯನ ತಾಯಿಯಾದ ಆಂಜಲಿ ದೇವಿಯು ಸಹಾ ಇಲ್ಲಿನ ಮತಂಗ ಆಶ್ರಮದ ಪರಮ ಭಕ್ತೆಯಾಗಿದ್ದು, ಆಕೆಗೂ ಪುತ್ರಸಂತಾನದ ವರ ನೀಡಿದ ಮಹಾನ್‌ಯೋಗಿಗಳು ಇವರು. ಮಹಾನ್ ಜ್ಞಾನಿಯಾದ ಇವರು 'ಬೃಹದ್ದೇಶಿ' ಎನ್ನುವ ಪ್ರಸಿದ್ಧ ಕೃತಿಯನ್ನು ರಚಿಸಿ ಅದರಲ್ಲಿ ಸಂಗೀತಕ್ಕೆ ಸಂಬಂಧಿಸಿದ

ವಿನೂತನ ಆಯಾಮಗಳನ್ನು ಪರಿಚಯಿಸಿದ್ದಾರೆ. ಅದಕ್ಕಾಗಿ ಅವರನ್ನು 'ಸಂಗೀತ ಶಾಸ್ತ್ರದ ಪಿತಾಮಹ' ಎಂದು ಸಹ ಕರೆಯಲಾಗುತ್ತದೆ. ಇವರ ಅಪೇಕ್ಷೆಯಂತೆ ಪಾರ್ವತಿ ದೇವಿಯೇ ಇವರ ಮಗಳಾಗಿ ಮಾತಂಗಿ ಎನ್ನುವ ಹೆಸರಿನಿಂದ ಜನಿಸಿದಳು ಎನ್ನುವ ಮತ್ತೊಂದು ಐತಿಹ್ಯವಿದೆ. ಒಮ್ಮೆ ಮತಂಗ ಋಷಿ ಉಗ್ರ ತಪಸ್ಸನ್ನಾಚರಿಸಿ ಶಿವನನ್ನು ಒಲಿಸಿಕೊಂಡನು. ಪ್ರತ್ಯಕ್ಷನಾದ ಶಿವನನ್ನು ಕುರಿತು ನಿನ್ನಂಥ ಒಬ್ಬ ಮಗನನ್ನು ನನಗೆ ದಯಪಾಲಿಸೆಂದು ಕೇಳಿ ಕೊಂಡರು. ಅದಕ್ಕೆ ಶಿವನು 'ನಿನಗೆ ಮೂಢನಾದ ಒಬ್ಬ ಮಗ ಹುಟ್ಟುತ್ತಾನೆ' ಎಂದನು. ಆಗ ಮತಂಗನು ಹಾಗಾದರೆ ಪಾರ್ವತಿಯ ಅಂಶದಿಂದ ಅಪೂರ್ವ ಸುಂದರಳಾದ ಒಬ್ಬ ಮಗಳು ನನಗೆ ಹುಟ್ಟಲಿ ಮತ್ತು ಅವಳಿಗೆ ನೀನೇ ಪತಿಯಾಗಬೇಕೆಂದು ಕೇಳಿಕೊಂಡರಂತೆ. ಅದರಂತೆ ಕಾಲಕ್ರಮೇಣ ಶಿವನ ವರದಿಂದ ಮಾತಂಗನಿಗೆ ಮಾತಂಗಿ ಎನ್ನುವ ರೂಪವತಿಯಾದ ಮಗಳು ಹುಟ್ಟಿದಳು. ಅವಳು ಯೌವ್ವನಕ್ಕೆ ಬಂದಾಗ ಶಿವನು ಕಿನ್ನರೇಶ್ವರನೆಂಬ ಹೆಸರಿನಿಂದ ಬಂದು ಅವಳನ್ನು ವರಿಸಿದನು. ಈಕೆಯನ್ನೇ ಮಹಾಕವಿ ಕಾಳಿದಾಸನು ಸಹ ಮಾತಂಗಿಯೆಂದು ಕರೆದಿದ್ದಾನೆ. ಇಲ್ಲಿ ಕೆಲ ಅಧಿಕಾರಿಗಳು ಆಡಳಿತ ನಡೆಸಿದ್ದಕ್ಕೆ ಮತ್ತು ಅವರು ಈ ಪರ್ವತವನ್ನು ತಮ್ಮ ಅಧೀನಕ್ಕೆ ಒಳಪಡಿಸಿಕೊಂಡಿದ್ದರೆನ್ನುವುದಕ್ಕೆ ಕೆಲ ಶಾಸನಗಳು ಸಾಕ್ಷಿಯಾಗಿವೆ. ಅವುಗಳಲ್ಲಿ ಹಂಪಿಯಲ್ಲಿ ದೊರೆತ ಶಾಸನವೊಂದು "ವಿರೂಪಾಕ್ಷತೀರ್ಥದ ರಕ್ಷಾಣಾರ್ಥವಾಗಿ ಸಾಮಂತ ಮಾದೆನಾಯಕನು, ಮತಂಗ ಪರ್ವತವನ್ನು ಪ್ರತಿಪಾಳಿಸುತ್ತಿದ್ದ. ಇವನ ಕೈಕೆಳಗಿದ್ದ ಮೈದುನ ಚೌಡಯ್ಯನೆಂಬುವವನು ಪಂಪಾದೇವಿಗೆ ಚೆಂಬೊನ್ನಿನ ಕಳಸವನ್ನು ಮಾಡಿಸಿ ವಿರೂಪಾಕ್ಷ, ಪಂಪಾದೇವಿ ಮತ್ತು ಭೈರವ ಗೃಹಗಳಿಗೆ ಸುಣ್ಣ ಬಳಸಿ, ಈ ದೇವ ಗೃಹಗಳಿಗೆ ಘಂಟೆ, ಅಡ್ಡಣಿಗೆ, ಆರತಿ, ಧೂಪಘಟ, ಪರ್ಯಾಣ, ಕಳಶ, ತಿಳಿವಟ್ಟಲು, ಚಂದನ, ಸುಗಂಧಗಳಲ್ಲದೆ ಅನೇಕ ವಸ್ತ್ರ ಭೂಷಣಗಳನ್ನು ಕೊಟ್ಟನು. ವಿರೂಪಾಕ್ಷ ದೇವರ ಮತ್ತು ಪಂಪಾದೇವಿಯರ ನೈವೇದ್ಯಕ್ಕೆ ಅಕ್ಕಿ, ವಿರೂಪಾಕ್ಷ ದೇವರ ಛತ್ರದಲ್ಲಿ ೧೦ ಜನ ಬ್ರಾಹ್ಮಣರ ಭೋಜನಕ್ಕೆ ಹಾಗೂ ಪಂಪಾ ತೀರ್ಥದ ದೇವರುಗಳಿಗೆ ಅಡಿಕೆ, ಎಲೆ, ದಾನ ನೀಡಿದ ವಿವರವನ್ನು ದಾಖಲಿಸಿದೆ.[೨] ಮಾದಿಗ ಮತ್ತು ಅದರ ಉಪಜಾತಿಯಾದ ದಕ್ಕಲರಿಗೆ ಈ ಪರ್ವತ ಪವಿತ್ರ ಸ್ಥಳವಾಗಿದೆ. ಅವರು ಇಲ್ಲಿ ಅವರ ಆರಾಧ್ಯ ದೈವಗಳಾದ ಶ್ರೀ ಮಾತಂಗ ಮತ್ತು ಮಾತಂಗಿಯರು ನೆಲೆಸಿದ್ದರೆಂದು ನಂಬಿದ್ದಾರೆ.

◆ **ಚಕ್ರ ತೀರ್ಥ:** ಹಂಪಿಯ ರಾಮ-ಲಕ್ಷ್ಮಣ ದೇವಾಲಯದ ಸಮೀಪ ತುಂಗಾಭದ್ರಾ ನದಿ ಉತ್ತರಕ್ಕೆ ತಿರುಗಿ ಹರಿಯುವ ಪ್ರದೇಶವನ್ನು ಚಕ್ರ ತೀರ್ಥ ಎಂದು ಕರೆಯಲಾಗುತ್ತದೆ. ಇದರ ಸಮೀಪವೇ ನೈಸರ್ಗಿಕ ಬಂಡೆಯ ಮೇಲೆ ನೂರಾರು ಲಿಂಗಗಳನ್ನು ಕೊರೆಯಲಾಗಿದೆ. ಇವುಗಳನ್ನು ಕೋಟಲಿಂಗ ಎನ್ನಲಾಗುತ್ತದೆ. ಇವುಗಳು ದಕ್ಕಲರಿಗೆ ಪವಿತ್ರ ಎಂದು ಹೇಳಲಾಗುತ್ತದೆ.

◆ **ಬಂಗಾರದ ಗುಂಡು ಮತ್ತು ಬೆಳ್ಳಿ ಗುಂಡು:** ಹಂಪಿಯ ವಿರುಪಾಕ್ಷ ದೇವಾಲಯದ ವಾಯುವ್ಯ ಭಾಗದ ತುಂಗಭದ್ರಾ ನದಿಯ ವಾಟರ್ ಫಾಲ್ಸ್ ಎಂದು ಕರೆಯುವ ಜಾಗದಲ್ಲಿರುವ

ದೊಡ್ಡ ಗಾತ್ರದ ವೃತ್ತಾಕಾರದ ಎರಡು ಕಲ್ಲುಗಳಿಗೆ ಈ ಹೆಸರಿದೆ. ರಾತ್ರಿ ಯಾರಾದರೂ ಈ ಕಲ್ಲುಗಳನ್ನು ಅದಲಿ ಬದಲಿ ಮಾಡಿ ಬಂದರೆ ಅವುಗಳು ಬೆಳಗಾಗುವುದರೊಳಗೆ ತಮ್ಮ ಸ್ವ ಸ್ಥಾನಕ್ಕೆ ಬರುತ್ತವೆ ಎಂದು ನಂಬಲಾಗಿದೆ. ಇದರ ಸಮೀಪವೇ ಕೋಣನ ದರಿ ಎನ್ನುವ ಮತ್ತೊಂದು ಸ್ಥಳವಿದ್ದು, ಇಲ್ಲಿ ಬಲಿಷ್ಠ ಕೋಣವೊಂದು ನದಿಯಲ್ಲಿ ಮುಳುಗಿ ಹೋಗಿದ್ದು, ಇನ್ನು ಬಂದಿಲ್ಲ ಎಂದು ಜನರು ನಂಬಿದ್ದಾರೆ. ಅದೇ ರೀತಿ ಹಂಪಿಯಲ್ಲಿರುವ ಅಕ್ಕ-ತಂಗಿ ಗುಂಡು, ಸೀತೆ ಸೆರಗು, ಏಡಿಗುದ್ದು ಮೊದಲಾದ ಸ್ಥಳಗಳಿಗೆ ಸಂಬಂಧಿಸಿದಂತೆ ಹಲವಾರು ಐತಿಹ್ಯಗಳು ಜನಪದರಲ್ಲಿ ರೂಢಿಯಲ್ಲಿವೆ. ಇವು ಹಂಪಿಯ ಐತಿಹ್ಯವೆನಿಸಿವೆ.

♦ **ಕಡ್ಡಿ ರಾಂಪುರ:** ಹೊಸಪೇಟೆಯಿಂದ ಹಂಪೆಗೆ ಹೋಗುವ ಮಾರ್ಗಮಧ್ಯದಲ್ಲಿ ಕಡ್ಡಿ ರಾಂಪುರ ಎಂಬ ಊರು ಇದೆ. ಆ ಊರಿಗೆ ಈ ಹೆಸರು ಬರಲು ಕಾರಣ ವಿಜಯನಗರ ಕಾಲದಲ್ಲಿ ಈ ಪ್ರದೇಶದಲ್ಲಿ ಯುದ್ಧಕ್ಕೆ ಬೇಕಾದ ಖಡ್ಗಗಳನ್ನು ಈ ಸ್ಥಳದಲ್ಲಿ ತಯಾಸುತ್ತಿದ್ದರಂತೆ. ಅದಕ್ಕಾಗಿ ಇದನ್ನು ಖಡ್ಗರಾಯಪುರ ಎಂದು ಹೆಸರಾಯಿತು ಎಂಬುದು ಜನಪದರ ಐತಿಹ್ಯ. ಕಾಲಕ್ರಮೇಣ ಇದು ಜನರ ಬಾಯಿಯಲ್ಲಿ ಅದು ಕಡ್ಡಿರಾಮಪುರ ಎಂದಾಯಿತು. ಅದುವೇ ಇಂದಿನ ಕಡ್ಡಿರಾಂಪುರ ಎನ್ನುತ್ತಾರೆ ಇಲ್ಲಿನ ಸ್ಥಳೀಯರು.[೩]

ಹೀಗೆ ಹಂಪಿಯಲ್ಲಿ ಸ್ಥಳ ಐತಿಹ್ಯಗಳು ಹೆಚ್ಚಾಗಿರುವುದು ಕಂಡುಬರುತ್ತದೆ. ಅವುಗಳಲ್ಲಿ 'ಪಂಪ ಸರೋವರ', 'ಕೋಟಿಲಿಂಗ', 'ಸುಗ್ರೀವನ ಗುಹೆ' ಮುಂತಾದವುಗಳನ್ನು ಹೆಸರಿಸಬಹುದಾಗಿದೆ. ಈ ಎಲ್ಲಾ ಮಾದರಿಗಳು 'ಹಂಪಿಯ'ನ್ನು ಜನಪದರು ಐತಿಹ್ಯಗಳ ಮೂಲಕ ಗುರುತಿಸಿರುವ ಕ್ರಮವಾಗಿದೆ. ಇವು ಇಲ್ಲಿನ ದೇಸಿಯರು ಅಂದರೆ ಅಂದಿನ ನಾಡವರ್ಗ ತಾವು ಅನುಸರಿಸಿಕೊಂಡು ಬಂದ ಮೌಖಿಕ ಪರಂಪರೆಯ ಸೂಚಕಗಳಾಗಿವೆ.

ಆ) ವ್ಯಕ್ತಿ ಪ್ರಧಾನ ಐತಿಹ್ಯಗಳು

ಹಂಪಿಯ ವಿಷಯವಾಗಿ ವ್ಯಕ್ತಿ ಪ್ರಧಾನ ಐತಿಹ್ಯಗಳನ್ನು ಕುರಿತು ಅವಲೋಕಿಸುವುದು ಈ ಸಂದರ್ಭದಲ್ಲಿ ಸೂಕ್ತವೆನಿಸುತ್ತದೆ. "ಯಾವ ವ್ಯಕ್ತಿ ಅಸಾಮಾನ್ಯ ಸಾಧನೆಗಳನ್ನೇ ಸಾಗಿರುತ್ತಾನೋ, ತನ್ನ ತಾಳ್ಮೆ, ಸನ್ನಡತೆಗಳಿಂದಾಗಿ ಯಾರು ಪ್ರಖ್ಯಾತ ಅಥವಾ ಕುಖ್ಯಾತರಾಗಿರತ್ತಾರೋ ಅಂಥವರ ಮೇಲೆ ಒಂದಿಲ್ಲಾದರೊಂದು ಐತಿಹ್ಯ ಹುಟ್ಟಿಕೊಳ್ಳುತ್ತದೆ. ಸಮಾಜಸೇವೆ ಪರೋಪಕಾರ, ಸಾಹಸ ಕಾರ್ಯ ಶೌರ್ಯಪ್ರದೇಶದ ಮೊದಲಾದ ಕಾರ್ಯಗಳನ್ನೆಸಗಿ ಪ್ರಖ್ಯಾತರಾದವರ ಬಗೆಗೂ, ಕಳ್ಳತನ, ಕೊಲೆ, ಸುಲಿಗೆ, ದರೋಡೆ, ವಿಧ್ವಂಸಕ ಕೃತ್ಯಗಳು ಇತ್ಯಾದಿಗಳನ್ನೆಸಗಿ ಕುಖ್ಯಾತರೆನಿಸಿದವರ ಬಗೆಗೂ ಐತಿಹ್ಯಗಳು ಹುಟ್ಟಿಕೊಳ್ಳುವುದು ಸ್ವಾಭಾವಿಕ."[೪] ಹೀಗೆ ವ್ಯಕ್ತಿ ಪ್ರಧಾನ ಐತಿಹ್ಯಗಳು ಆ ವ್ಯಕ್ತಿಯ ಗುಣಸ್ವಭಾವಗಳನ್ನು ತಿಳಿಸುವಲ್ಲಿ ಮಹತ್ತರವಾಗಿ ನಿಲ್ಲುತ್ತವೆ. ಹಂಪಿ ಪರಿಸರದ ವ್ಯಕ್ತಿಪ್ರಧಾನ ಐತಿಹ್ಯಗಳಲ್ಲಿ ಸರ್ವೆ ಸಾಮಾನ್ಯವಾಗಿ ಅಸಾಮಾನ್ಯ ವ್ಯಕ್ತಿಯೊಬ್ಬನ ಸಾಧನೆಯ ಪ್ರತೀಕವಾದ ನಿರೂಪಣೆ ಇದ್ದು, ಅಲ್ಲಿ ಐತಿಹ್ಯದ ವಿವರಣೆಗಳು ಆ ವ್ಯಕ್ತಿಯ ಸಾಧನೆಗೆ ಸಹಕಾರಿಯಾಗಿ ನಿಲ್ಲುತ್ತವೆ. ಇಲ್ಲಿ ಆ ವ್ಯಕ್ತಿಯ ಹಂಪಿ ಪರಿಸರದ ಪ್ರತೀಕದಂತೆ ಇದ್ದಾಗ್ಯೂ

ಅವರ ವ್ಯಕ್ತಿತ್ವವು ಆ ಪರಿಸರಕ್ಕೆ ಹೆಚ್ಚುಗಾರಿಕೆಯನ್ನು ಕಟ್ಟಕೊಡುತ್ತದೆ. ಹಂಪಿಯನ್ನು ಪೌರಾಣಿಕ ವ್ಯಕ್ತಿ ಪ್ರಧಾನ ಐತಿಹ್ಯಗಳಲ್ಲಿ ಕುರಿತು ವಿವೇಚಿಸುವುದು ಇಲ್ಲಿ ಔಚಿತ್ಯವಾಗಿದೆ. ಜನಪದರು ತಮ್ಮ ಬದುಕಿನ ಭವಣೆಗಳನ್ನು ತೊಲಗಿಸಲು ಐತಿಹಾಸಿಕ ವ್ಯಕ್ತಿಗಳನ್ನು ದೇವರಂತೆ ಆರಾಧಿಸುವುದು; ಆ ದೇವರಿಗೆ ದೇವಾಲಯಗಳನ್ನು ನಿರ್ಮಿಸುವ ಪರಿಪಾಠವನ್ನು ಹಾಕಿಕೊಂಡಿರುವುದು ಕಂಡುಬರುತ್ತದೆ. ಇದಕ್ಕೆ ಹಂಪಿಯು ಸಹ ಹೊರತಾಗಿಲ್ಲ. ಅಲ್ಲಿಯೂ ಸಹ ಅವರ ಶಕ್ತಿ ದೇವರುಗಳು ಅಲ್ಲಿ ಗಟ್ಟಿಯಾಗಿ ನೆಲೆ ನಿಲ್ಲಲು ಅವರನ್ನು ಪೌರಾಣಿಕ ವ್ಯಕ್ತಿಯನ್ನಾಗಿಸಿ ಚಿತ್ರಿಸಲಾಗಿದೆ. ಅಂತಹ ಪೌರಾಣಿಕ ವ್ಯಕ್ತಿ ಪ್ರಧಾನ ಐತಿಹ್ಯಗಳಲ್ಲಿ ಜನಪದರ ಆಶಯಗಳ ಹಿನ್ನೆಲೆಯಲ್ಲಿ ಅವಲೋಕಿಸುವುದು ಸೂಕ್ತವೆನಿಸುತ್ತದೆ. ಆದ್ದರಿಂದ ಹಂಪಿ ಪರಿಸರದಲ್ಲಿನ ಕೆಲ ಪ್ರಮುಖ ಐತಿಹಾಸಿಕ, ಪೌರಾಣಿಕ ವ್ಯಕ್ತಿ ಪ್ರಧಾನ ಐತಿಹ್ಯಗಳ ಕುರಿತು ಮುಂದೆ ವಿಶ್ಲೇಷಿಸಲಾಗಿದೆ.

♦ **ದಾದಪಾಡ್:** ಹಂಪಿಯ ಮುಸ್ಲಿಂ ಸಂತನಾದ ದಾದಪಾಡ್ ಬೇರೆಡೆಯಿಂದ ಬಂದು ಇಲ್ಲಿ ನೆಲೆಸಿದ ಮತ್ತು ಅವರ ಸಮಾಧಿ ಸ್ಥಳ ಇದಾಗಿದೆ. ಇದು ಅಹಮ್ಮದ್ ಖಾನ್ ಛತ್ರದ ಉತ್ತರ ದಿಕ್ಕಿನ ಬೆಟ್ಟದ ತುದಿಯಲ್ಲಿದೆ. ಇಲ್ಲಿ ಈಗ ಹಿಂದೂ ಮುಸ್ಲಿಂರೆನ್ನದೆ ನಡೆದುಕೊಳ್ಳುತ್ತಾರೆ. ದೆವ್ವ, ಭೂತ ಹಿಡಿದವರು ದೀರ್ಘಕಾಲದ ಖಾಯಿಲೆಗಳಿಂದ ಬಳಲುತ್ತಿರುವವರು ಇಲ್ಲಿಗೆ ಬಂದರೆ ಗುಣಮುಖರಾಗುತ್ತಾರೆಂದು ಜನರು ನಂಬಿಕೆ. ಇದು ದಾದಪಾಡ್ ಕಾಲದಲ್ಲಿಯೂ ನಡೆದಂತಿದೆ.

♦ **ಪಟ್ಟಣದ ಎಲ್ಲಮ್ಮ:** ಹಂಪಿಯ ಹಜಾರ ರಾಮಚಂದ್ರ ದೇವಸ್ಥಾನದ ಮುಂಭಾಗದಲ್ಲಿರುವ ಹಳೆಯ ಪಟ್ಟಣದ ದೇವತೆಯೇ ಪಟ್ಟಣದ ಎಲ್ಲಮ್ಮ. ಈಕೆಯ ಬಗೆಗೆ ಬೇರೆ ಬೇರೆ ರೀತಿಯ ಕತೆಗಳಿವೆ. ಒಂದು–ವಿಜಯನಗರ ಅರಸರು ಬೇರೆ ರಾಜ್ಯಗಳನ್ನು ವಶಪಡಿಸಿಕೊಳ್ಳಲು ಯುದ್ಧಕ್ಕೆ ಹೊರಡುವ ಮುನ್ನ ಈಕೆಯ ಅಪ್ಪಣೆ ಪಡೆದು ವಿಜಯ ತಾಂಬೂಲ ಪಡೆದು ಹೋಗುತ್ತಿದ್ದರು. ಎರಡು–ಈಕೆ ವಿಜಯನಗರ ಪಟ್ಟಣದ ಮುಖ್ಯ ದೈವವಾಗಿದ್ದು, ಪಟ್ಟಣವನ್ನು ರಕ್ಷಿಸುತ್ತಿದ್ದಳು. ಹೀಗೆ ಜನಪದರ ನಂಬಿಕೆಗಳಲ್ಲಿ ಪಟ್ಟಣವನ್ನು ರಕ್ಷಣೆಯನ್ನು ಕುರಿತಾದ ಎಲ್ಲಮ್ಮನ ದೈವತ್ವವನ್ನು ಹಂಪಿಯಲ್ಲಿನ ಪಟ್ಟಣದ ಎಲ್ಲಮ್ಮನ ದೇವಾಲಯವಾಗಿ ಪ್ರಸ್ತುತವಾಗಿರುವುದನ್ನು ಕಾಣಬಹುದು. ಈ ದೇವಿಗೆ, ಕೋಣ, ಕುರಿ, ಕೋಳಿ, ಮೇಕೆಗಳನ್ನು ಬಲಿ ಕೊಡುವ ಪದ್ಧತಿ ಬೆಳೆದುಕೊಂಡು ಬಂದಿದೆ.

ಈ ಮೇಲಿನ ರೀತಿಯೇ ಇನ್ನು ಹಲವು ವ್ಯಕ್ತಿ ಪ್ರಧಾನ ಐತಿಹ್ಯಗಳು ಹಂಪಿಯ ಪರಿಸರದಲ್ಲಿ ಸಾಕಷ್ಟು ಕಂಡುಬರುತ್ತವೆ. ಅವುಗಳಲ್ಲಿ 'ಹನುಮನ ಸಳೆವು', ಅಗಸಗಿತ್ತಿ ಮಹಾಲ್, ಚಿತ್ರಾಂಗಿ, ರತ್ನಂಗಿ ಮಹಲ್, ಹೊಸೂರಮ್ಮದೇವಿ (ರೇಣುಕೆ), ಉಗ್ರ ನರಸಿಂಹ, ಉದ್ದಾನವೀರಭದ್ರ, ಹನುಮನಪಾದ ಇತ್ಯಾದಿಗಳು ಸಹ ಪ್ರಮುಖವೆನಿಸಿವೆ.

೩. ಘಟನಾ ಪ್ರಧಾನ ಐತಿಹ್ಯಗಳು

ಹಂಪಿಯಲ್ಲಿ ಕೆಲವು ಚಾರಿತ್ರಿಕ ಘಟನೆಗಳನ್ನು ನಿರೂಪಿಸುವ ಸ್ಥಳಗಳಿವೆ. ಅವುಗಳ ಸುತ್ತ

ಹಲವಾರು ಐತಿಹ್ಯಗಳು ಹುಟ್ಟಿಕೊಂಡಿವೆ. ಅವುಗಳಲ್ಲಿ ವಾಲಿಕಾಷ್ಠ, ಬಿಷ್ಟಪ್ಪಯ್ಯ ಗೋಪುರ, ಮಹಾನವಮಿ ದಿಬ್ಬ ಇನ್ನು ಮೊದಲಾದವುಗಳು ಪ್ರಮುಖವಾಗಿವೆ.

♦ **ವಾಲಿಕಾಷ್ಠ:** ಹಂಪಿಯ ನಿಂಬಾಪುರದ ಬಳಿಯ ಬೂದಿ ದಿಬ್ಬವನ್ನು ಮತ್ತು ಆನೆಗೊಂದಿಯ ನದಿ ಭಾಗದ ಬೆಟ್ಟವನ್ನು ವಾಲಿಕಾಷ್ಠ ಎಂದು ಕರೆಯಲಾಗುತ್ತದೆ. ಈ ಸ್ಥಳಗಳಲ್ಲಿ ರಾಮಾಯಣ ಕಾಲದ ವಾಲಿಯನ್ನು ಸಂಹರಿಸಲಾಗಿದೆ ಎಂದು ಜನರು ನಂಬಿದ್ದಾರೆ. ಇದು ಹಂಪಿ ಪರಿಸರದಲ್ಲಿರುವುದರಿಂದ ಹಂಪಿಯ ಒಂದು ಭಾಗವಾಗಿದೆ.

♦ **ಬಿಷ್ಟಪ್ಪಯ್ಯ ಗೋಪುರ:** ಹಂಪಿಯ ವಿರೂಪಾಕ್ಷ ದೇವಾಲಯದ ಮುಖ್ಯ ಗೋಪುರವನ್ನು ವಿಜಯನಗರದ ಅರಸನಾದ ೨ನೇ ದೇವರಾಯನ ಕಾಲದಲ್ಲಿ ಆತನ ಮಂತ್ರಿ ಪ್ರೋಲಗಂಟಿ ತಿಪ್ಪ ಎನ್ನುವವನಿಂದ ನಿರ್ಮಿತವಾಗಿದೆ. ಈ ಗೋಪುರವನ್ನು ಸ್ಥಳೀಯರು ಬಿಷ್ಟಪ್ಪಯ್ಯ ಗೋಪುರ ಎಂದು ಕರೆಯಲಾಗುತ್ತದೆ. ಕಾರ್ಮಿಕರು ತುಂಬಾ ದಿನದಿಂದಲೂ ಇದರ ಕಟ್ಟಡದ ಕಾಮಗಾರಿ ಮುಗಿಸಲು ಪ್ರಯತ್ನ ಮಾಡುತ್ತಿದ್ದಾಗ ಅದು ನಿಲ್ಲದೆ ಪದೇ ಪದೇ ಬಿದ್ದು ಹೋಗುತ್ತಿತ್ತು. ತುಂಬು ಗರ್ಭಿಣಿಯನ್ನು ಬಲಿ ನೀಡಿದರೆ ಮಾತ್ರ ಈ ಕೆಲಸ ಪೂರ್ಣವಾಗುತ್ತದೆ ಎಂದು ತಿಳಿದ ಬಿಷ್ಟಪ್ಪಯ್ಯ ತನ್ನ ಹಿರಿ ಸೊಸೆಯನ್ನು ಬಲಿ ನೀಡಿ ಈ ಕಟ್ಟಡ ಪೂರ್ಣಗೊಳಿಸಿದನು. ಆ ಕಾರಣಕ್ಕಾಗಿ ಇದನ್ನು ಬಿಷ್ಟಪ್ಪಯ್ಯ ಗೋಪುರ ಎಂದು ಕರೆಯಲಾಗುತ್ತದೆ ಎಂದು ಸ್ಥಳೀಯರು ಹೇಳುತ್ತಾರೆ.

♦ **ಮಹಾನವಮಿ ದಿಬ್ಬ:** ಹಂಪಿಯಲ್ಲಿ ಸ್ಥಳ ಪ್ರಧಾನ ಸ್ಥಳಗಳಲ್ಲಿ ಮಹಾನವಮಿ ದಿಬ್ಬವೂ ಸಹ ಮುಖ್ಯವಾಗಿದೆ. ಮಹಾನವಮಿಯ ದಿಬ್ಬ ಎಂದರೆ ಎತ್ತರವಾದ ಸಭಾಪೀಠವನ್ನು ಹೊಂದಿರುವ ಸ್ಥಳ. ಇದು ರಾಜಪ್ರಾಂಗಣ ಸ್ಥಳದಲ್ಲಿ ಕಂಡುಬರುತ್ತದೆ. ಕೃಷ್ಣದೇವರಾಯನು ಉದಯಗಿರಿಯ ದಿಗ್ವಿಜಯದ ಸ್ಮರಣಾರ್ಥವಾಗಿ ಇದನ್ನು ೧೫೧೩ರಲ್ಲಿ ಕಟ್ಟಿಸಿದನೆಂದು ತಿಳಿದು ಬರುತ್ತದೆ. ಇಲ್ಲಿ ವಿಜಯನಗರ ಕಾಲಕ್ಕೆ ಮಹಾನವಮಿ ಹಬ್ಬವನ್ನು ಬಹಳ ವಿಜೃಂಭಣೆಯಿಂದ ೯ ದಿನಗಳ ಕಾಲ ಆಚರಿಸುತ್ತಿದ್ದರು. ಇದು ಅವರಿಗೆ ನಾಡ ಹಬ್ಬವಾಗಿತ್ತು.[೫] ಈ ಮಹಾನವಮಿಯ ದಿಬ್ಬದ ಮೇಲೆ ರಾಜನು ಕುಳಿತು ಎದುರಿನಲ್ಲಿ ನಡೆಯುತ್ತಿದ್ದ. ಕುಸ್ತಿ, ಆನೆಗಳ ಕಾಳಗ, ನೃತ್ಯ ಇತ್ಯಾದಿ ಕ್ರೀಡಾ ಉತ್ಸವಗಳನ್ನು ವೀಕ್ಷಿಸುತ್ತಿದ್ದನು. ಈ ಸಭಾ ಮಂಟಪಕ್ಕೆ ವಿವಿಧ ಹೆಸರುಗಳಿಂದ ಕರೆಯಲಾಗುತ್ತಿತ್ತು. ವಿಜಯಸೌಧ, ವಿಜಯ ಮಂಟಪ ಮಹಾನವಮಿಯ ದಿಬ್ಬ ಇತ್ಯಾದಿ.

೪.೧.೧.೨. ಗಾದೆಗಳು

'ಗಾದೆ' ಎಂದರೆ ಅನುಭವಿಕರ ರಸವತ್ತಾದ ಮಾತು. ಇದು ಅನುಭವದಿಂದ ಮೂಡಿ ಬಂದಿರುವ ಒಂದು ವಿಶಿಷ್ಟ ರೂಪವಾಗಿದೆ. ಇವುಗಳನ್ನು ಮನುಷ್ಯನ ಅಲೋಚನೆ ಫಲವೆಂದು ಹಾಗೂ ಅವರವರ ಅನುಭವಗಳ ಸಾರವತ್ತಾದ ಮೊತ್ತವೆಂದು ಗುರುತಿಸಲಾಗಿದೆ. ಅನುಭವದ ಮಾತುಗಳು ಎಂದು ಸುಳ್ಳಾಗಲು ಸಾಧ್ಯವಿಲ್ಲ. ಅದಕ್ಕಾಗಿಯೇ 'ವೇದ ಸುಳ್ಳಾದರೂ ಗಾದೆ

ಸುಳ್ಳಾಗದು' ಎನ್ನುವ ಮಾತು ಇಂದಿಗೂ ಪ್ರಚಲಿತದಲ್ಲಿದೆ. ಜನಪದರ ಬದುಕಿನ ಉಸಿರಾಗಿ ಹೊರಹೊಮ್ಮಿದ ರೂಪಗಳಲ್ಲಿ 'ಗಾದೆ'ಯು ಮಹತ್ವದ್ದಾಗಿದೆ. ಈ ಗಾದೆಗಳ ಹಿನ್ನೆಲೆಯಲ್ಲಿ ಹಂಪಿಯನ್ನು ನಮ್ಮ ಜನಪದರು ಕಂಡ ಬಗೆ ಮತ್ತು ಅವರ ದೃಷ್ಟಿಕೋನ ಅರಿಯುವ ನೋಟ ಇಲ್ಲಿದೆ.

ಯಾವುದೇ ಗಾದೆಗೆ ಒಂದು ಘಟನೆ ಅಥವಾ ಸ್ಥಳ, ವ್ಯಕ್ತಿತ್ವ ವೈಶಿಷ್ಟ್ಯತೆಯನ್ನು ಒಳಗೊಂಡಿರುವುದನ್ನು ಕಾಣಬಹುದಾಗಿದೆ. ಹಂಪಿ ಕ್ಷೇತ್ರವನ್ನೇ ಕುರಿತು ರಚಿತವಾಗಿರುವ ಗಾದೆಗಳು ಆ ಕ್ಷೇತ್ರದ ಮಹತ್ವ ಹಾಗೂ ಆ ವಿಷಯಕ್ಕೆ ಸಂಬಂಧಿಸಿದ ವಸ್ತುಗಳು ಜೀವಂತವಾಗಿರಲು ಸಾಕ್ಷಿಯಾಗಿವೆ.

೧) ಉಜ್ಜನಿ ಒಳಗೆ ನೋಡು, ಹಂಪೆ ಹೊರಗೆ ನೋಡು

೨) ಹಂಪೆಗೆ ಹೋಗುವುದಕ್ಕಿಂತ ನಮ್ಮ ಕೊಂಪೆಯಲ್ಲಿ ಇರುವುದು ಲೇಸು

೩) ಕಣ್ಣಿದ್ದರೆ ಕನಕಗಿರಿ ನೋಡು, ಕಾಲು ಇದ್ದರೆ ಹಂಪೆ ನೋಡು

೪) ಪಡೆದವರಿಗೆ ಫಲಪೂಜೆದತ್ತಗೇಡಿಗೆ(ಪಾಪಿಗೆ) ಹಂಪಿ ಜಾತ್ರೆ

೫) ಹಂಪೆಗೆ ಹರದಾರಿ ಕೊಂಪಿಗೆ ಸುಳಿದಾರಿ

೬) ಕಲ್ಲಿದ್ದಲ್ಲಿ ಹಕ್ಕಿ ಇಲ್ಲ, ಹಂಪಿಯಲ್ಲಿ ಕಾಗೆ ಇಲ್ಲ

೭) ಗೆದ್ದರೆ ಅರಮನೆ ಸೋತರೆ ಅರಮನೆಯೊಂದು ಮಂಟಪ

೮) ಕಲ್ಲಿನ ಕೋಳಿ ಕೂಗಬೇಕು, ಮುಲ್ಲಾ ಆ ಕೋಳಿನ ಕೊಯ್ಯಬೇಕು ಆಗ ಹಂಪಿಗೆ ಕೊನೆ

೯) ಮೂರು ಮುಕ್ಕಾಲು ಗಳಿಗೆ ಮತ್ತು ರತ್ನದ ಮಳೆ ಹಂಪೀಲಿ ಬಂತು

೧೦) ಅರೆದರೆ ಆರು ಘಳಿಗೆ, ಮುರಿದರೆ ಮೂರು ಘಳಿಗೆ

ಈ ಮೇಲೆ ತಿಳಿಸಲಾದ ಐತಿಹ್ಯಕೃತವಾದ 'ಗಾದೆಗಳು' ಮಾತಿನಲ್ಲಿಯ ಅನುಭವಜನ್ಯ ವಾಗಿರುವುವುಗಳಾಗಿವೆ. ಇವು ಕಲ್ಪನೆಯಿಂದಾಗಿರದೆ ಅನುಭವ ಪೂರ್ಣವಾಗಿ ಮೂಡಿಬಂದವುಗಳಾಗಿವೆ. ಜನಪದರಲ್ಲಿಯ ಬೌದ್ಧಿಕವಾದ ಅತಿಸೂಕ್ಷ್ಮವಾದ ಕಲಾಪ್ರಜ್ಞೆ ಇತ್ತು ಎಂದು ಅರ್ಥವಾಗುತ್ತದೆ. ಈ ಮೇಲಿನ ಗಾದೆಯ ಭಾವವನ್ನು ಅವಲೋಕಿಸುವುದಾಗಿದೆ. ಆ ಕಾಲದ ವಾಸ್ತುಶಿಲ್ಪ, ಕಲೆ, ಸಂಸ್ಕೃತಿಯ ಸೌರಭದ ಸೂಕ್ಷ್ಮತೆಯನ್ನು ನೋಡುವ; ತಿಳಿಯುವ ಔಚಿತ್ಯ ಪ್ರಜ್ಞೆಯು ಜನಪದರಲ್ಲಿ ಗಟ್ಟಿಗೊಂಡಿರುವುದನ್ನು ಈ ಗಾದೆಗಳ ಮೂಲಕ ತಿಳಿಯುತ್ತದೆ. ಈ ಗಾದೆಗಳು ಹಂಪಿ ಸೀಮೆಯ ಸ್ಥಳಗಳ ಭಾಗಗಳಾಗಿಯೇ ಇವೆ.

೪.೧.೧.೩. ಕಾಲಜ್ಞಾನ ಸಾಹಿತ್ಯ

ಸಾಮಾನ್ಯವಾಗಿ ಕಾಲಜ್ಞಾನ ಸಾಹಿತ್ಯವೆಂದರೆ ಭವಿಷತ್ತಿನ ಕಾಲದಲ್ಲಿ ಜರುಗಬಹುದಾದ ಘಟನೆಗಳನ್ನು ನಿರೂಪಿಸುವ ಸಾಹಿತ್ಯವೇ ಕಾಲಜ್ಞಾನ ಸಾಹಿತ್ಯ ಎಂದು ಕರೆಯಬಹುದು.

ಕಾಲಜ್ಞಾನವನ್ನು ಕುರಿತು ವಿ.ಶಿವಾನಂದ ಅವರು ತಮ್ಮ 'ಸಾಧನೆ' ಎನ್ನುವ ಗ್ರಂಥದಲ್ಲಿ "ಮನುಷ್ಯನಿಗೆ ಹಿಂದಿನ ಜೀವಿತದ ಘಟನೆಗಳನ್ನು ಸ್ಮೃತಿಗೆ ತಂದುಕೊಟ್ಟು, ಮುಂದಿನ ಜೀವನದ ಅಸ್ಥಿತ್ವಕ್ಕೆ ಭರವಸೆ ಹುಟ್ಟಿಸುವಲ್ಲಿ ನೆರವಾಗುವ ಜ್ಞಾನವೇ ಕಾಲಜ್ಞಾನ ಸಾಹಿತ್ಯ"ವೆಂದು ಅಭಿಪ್ರಾಯಪಡುತ್ತಾರೆ. ಬಹುಪಾಲು ಕಾಲಜ್ಞಾನ ಕವಿಗಳು ಜನಸಮುದಾಯದ ಮಧ್ಯೆಯಲ್ಲಿ ಇದ್ದುಕೊಂಡು ಈ ಸಾಹಿತ್ಯವನ್ನು ರಚಿಸುವರು. ಇವು ಜನಪದ ಧಾಟಿಯಲ್ಲಿರುತ್ತವೆ. ಜನರು ಆಡುವ ಮಾತಿನ ಶೈಲಿಯಲ್ಲಿರುತ್ತವೆ. ಇವು ಇದರ ಲಕ್ಷಣಗಳಾಗಿವೆ. ಇವುಗಳ ಗುರಿ-ಧರ್ಮೋದ್ಧಾರ, ಸಮಾಜದ ಅಭ್ಯುದಯ ಮತ್ತು ಮಾನವ ಕಲ್ಯಾಣ. ಹೀಗಿದ್ದರೂ ಕೂಡ ಈ ಸಾಹಿತ್ಯದಲ್ಲಿ ಸಮಕಾಲೀನ ಚಾರಿತ್ರಿಕ ಅಂಶಗಳನ್ನು ಉದ್ಧರಿಸುತ್ತವೆ.

ಈ ಸಾಹಿತ್ಯವು ೧೨ನೇ ಶತಮಾನದಿಂದ ೧೭ನೇ ಶತಮಾನದವರೆಗೆ ಸೃಷ್ಟಿಯಾಗಿದ್ದರೂ, ಅದರ ಸಮೃದ್ಧವಾದ ಸಾಹಿತ್ಯ ಬೆಳೆದದ್ದು ೧೫-೧೭ನೇ ಶತಮಾನಗಳಲ್ಲಿ ಹುಟ್ಟಿಕೊಂಡಿರುವ ಸೂಚನೆಗಳಿವೆ. ಹಂಪೆ, ಕೊಡೇಕಲ್ಲು ಮತ್ತು ತಿಂಥಿಣಿಗಳು ಕಾಲಜ್ಞಾನ ಸಾಹಿತ್ಯದ ಪ್ರಮುಖ ಪ್ರಸಾರ ನೆಲೆಗಳಾಗಿವೆ. ಕ್ರಮವಾಗಿ ಎಮ್ಮೆ ಬಸವ, ಕೊಡೇಕಲ್ಲು ಬಸವ, ತಿಂಥಿಣಿ ಮೋನಪ್ಪಯ್ಯ ಈ ನೆಲೆಗಳ ಪ್ರಧಾನ ನಾಯಕರು ಆಗಿದ್ದಾರೆ. ಇವರು ಬಸವೋತ್ತರ ಯುಗದ ವಿಜಯನಗರ ಸಾಮ್ರಾಜ್ಯ ಉದಯದ ಕಾಲದಲ್ಲಿ ಇದ್ದ ಕವಿಗಳಿಗೆ ಆಕರಗಳಾಗಿದ್ದವರು.

ವಿಜಯನಗರ ಸಾಮ್ರಾಜ್ಯಕ್ಕೂ ಮತ್ತು ಕಾಲಜ್ಞಾನ ಸಾಹಿತ್ಯಕ್ಕೂ ವಿಶೇಷವಾದ ಕೊಡು ಕೊಳೆ ಸಂಬಂಧವಿದೆ. ಏಕೆಂದರೆ ಈ ಸಾಹಿತ್ಯ ಹೆಚ್ಚಾಗಿ ಜನಪ್ರಿಯಗೊಂಡದ್ದು ವಿಜಯನಗರದಲ್ಲಿ ಎನ್ನವುದು ಈಗಾಗಲೇ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಸಾಹಿತ್ಯ ವ್ಯಾಪಕಗೊಂಡದ್ದು ಹಂಪೆ(ವಿಜಯನಗರ) ಮೂಲಕವೇ. ಬಸವೋತ್ತರ ಕಾಲದ ಕಾಲಜ್ಞಾನ ಕವಿಗಳು ಸಾಮಾನ್ಯವಾಗಿ ಈ ಸಾಮ್ರಾಜ್ಯದ ಚಾರಿತ್ರಿಕ ಘಟನೆಗಳನ್ನು, ಅಂದಿನ ಸಾಮಾಜಿಕ ಪರಿಸರವನ್ನು ತಮ್ಮ ಸಾಹಿತ್ಯದ ಮೂಲಕ ನಿರೂಪಿಸಿದ್ದಾರೆ.

ಇಲ್ಲಿ ಮುಖ್ಯವಾಗಿ ಎಮ್ಮೆ ಬಸವ ಮುಖ್ಯನಾಗಿದ್ದಾನೆ. ಈತ ಮೂಲತಃ ಹಂಪಿಯವನು. ವಿಜಯನಗರ ಅವಸಾನಗೊಳ್ಳುವ ಪರಿಯನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾನೆ. ಹುಯ್ಯಲೊ ಡಂಗುರವ ಎಂದು ಪ್ರಾರಂಭವಾಗುವ ಕಾಲಜ್ಞಾನ ಪದಗಳಲ್ಲಿ ಮುಸ್ಲಿಮ ಅರಸರು ಅಚ್ಯುತ ಕೃಷ್ಣನ ಅರಮನೆ ಸುಟ್ಟ ಬಗೆಗೆ ಹೇಳುವ ಪದವನ್ನು ಎಫ್.ಟಿ.ಹಳ್ಳಿಕೇರಿಯವರು ಸಂಪಾದಿಸಿದ 'ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯ'ದಲ್ಲಿ ಕಾಣಬಹುದು.

ಅಚ್ಯುತನ ವಂಶವು ಮೊದಲೆದ್ದು ಹೋಯಿತು

ಬೈಚಿಟ್ಟ ಭಾಗ್ಯವು ಬಯಲೆದ್ದು ಹೋಯಿತು

ಮುಸುಲ್ಮಾನರು ಅಚ್ಯುತರಾಯ ಕೃಷ್ಣರಾಯರ

ಅರಮನೆಗಳನ್ನು ಸುಟ್ಟಾರು

ನರಸಿಂಗರಾಯನ ಹಿರಿಯ ಕುಮಾರನು ಹುಯ್ಯಲೊ ಡಂಗುರವ

ಅರಸುತನಕೆ ಇನ್ನು ಕಡೆಗಾಲವಾದೀತು

ವಿಜಯನಗರದಲ್ಲಿ ಗಜಬಜವಾದಾವು

ನೆಚ್ಚಿನ ಮಂತ್ರಿಗಳು ಹುಚ್ಚೆದ್ದು ಹೋದಾರು

ಎಚ್ಚರ ತಪ್ಪ್ಯಾರು ಮುಂದಿನ್ನು ಬಂದೀತು

ಎಂದು ವಿಜಯನಗರ ಸಾಮ್ರಾಜ್ಯದಲ್ಲಿದ್ದ ರಾಜಕೀಯ ಅಸ್ಥಿರತೆಯನ್ನು ಎಮ್ಮೆ ಬಸವನು ಚಿತ್ರಿಸಿರುವುದನ್ನು ಇಲ್ಲಿ ಕಾಣಬಹುದು. ವೀರನರಸಿಂಹ(೧೫೦೬–೧೫೦೯), ಶ್ರೀಕೃಷ್ಣದೇವರಾಯ (೧೫೦೯–೧೫೨೯), ಅಚ್ಯುತರಾಯ (೧೫೩೦–೧೫೪೨) ಮುಂತಾದ ಅರಸರನ್ನು ಕಾಲಜ್ಞಾನ ಸಾಹಿತ್ಯದಲ್ಲಿ ಉಲ್ಲೇಖಗೊಂಡಿರುವುದು ಕಾಣಸಿಗುತ್ತದೆ.

ಎಮ್ಮೆ ಬಸವನ ಪತ್ನಿಯಾದ ನೀಲಮ್ಮನು ತನ್ನ ಕಾಲಜ್ಞಾನ ಸಾಹಿತ್ಯದಲ್ಲಿ ವಿಜಯನಗರ ಕಾಲದ ಸಾಮಾಜಿಕ ಪರಿಸರ, ರಾಜಕೀಯ ಪರಿಸರವನ್ನು ಈ ರೀತಿಯಾಗಿ ಚಿತ್ರಿಸಿದ್ದಾಳೆ:

ಗುಡಿಗೋಪುರಗಳ ಹೊಡೆವಾರು ತುರುಕರು

ಲಿಂಗ ವಿರೂಪಾಕ್ಷನ ರಂಗಮಂಟಪದ ಮುಂದೆ

ಲಿಂಗದ ಕಣಜವ ಹೊಡೆವಾರು ಸುವ್ವಿ

ಹಂಪಿ ಈ ಮೇಲಿನ ರೀತಿ ಮೌಖಿಕ ಪರಂಪರೆಯಲ್ಲಿ ಅರಳಿ ನಿಂತ ಕಮಲದಂತೆ ಕಂಗೊಳಿಸುತ್ತದೆ. ಅಲ್ಲದೆ ಅದು ಜನಪದರ ಮೂಲ ಆಶಯವಾದ ಗಾದೆ, ಐತಿಹ್ಯಗಳಿಂದ, ಕೆಲವೊಂದು ಕಥೆಗಳಲ್ಲಿ, ಕಾಲಜ್ಞಾನ ಸಾಹಿತ್ಯಗಳಲ್ಲಿ ಹಂಪೆ ನೆಲೆ ನಿಂತಿರುವುದನ್ನು (ತಿಳಿಯದ) ಗುರುತಿಸಬಹುದಾಗಿದೆ.

೪.೧.೨. ಕನ್ನಡ ಶಿಷ್ಟ ಸಾಹಿತ್ಯದ ಹಿನ್ನೆಲೆಯಲ್ಲಿ ಹಂಪಿ

ಸಾಹಿತ್ಯ ಜನಜೀವನದ ಅವಿಭಾಜ್ಯ ಅಂಗ. ಹಾಗೂ ಜನರ ಭಾವನೆಗಳ ಸಮ್ಮಿಲನ ಭಾಷೆ, ಸಂಸ್ಕೃತಿಯ ಪ್ರತೀಕವೇ ಸಾಹಿತ್ಯದ ತಿರುಳಾಗಿದೆ. ಜನಪದ ಸಾಹಿತ್ಯವು ಮಾನವನ ವಿಶಿಷ್ಟ ಲಕ್ಷಣವಾಗಿದ್ದು, ಅದು ಅಂದಿನ ನಾಗರಿಕತೆಯ ಜೀವಂತ ಸಂಸ್ಕೃತಿಯಾಗಿದೆ. ಇಂತಹ ಸಾಹಿತ್ಯದಲ್ಲಿ ಮಾನವನ ಸಮೃದ್ಧಿ ಸಂಸ್ಕೃತಿಯ ಗಣಿ ಎಂದರೆ ಜನಪದ ಸಾಹಿತ್ಯ. ಇದೇ ಮುಂದೆ ಅಕ್ಷರ ರೂಪ ಪಡೆದ ಸಾಹಿತ್ಯ ಮೌಖಿಕ ಪರಂಪರೆಯಿಂದ ಹೊಸ ಮನ್ವಂತರಕ್ಕೆ ಸಾಕ್ಷಿಯಾಗಿರುವುದು ಸಾಹಿತ್ಯ ಚರಿತ್ರೆ ತಿಳಿಸುತ್ತದೆ. ಮನುಷ್ಯ ಬಾಯಿ ಮಾತಿನಿಂದ ಮೂಡಿ ಬಂದ ಭಾವನೆಗಳ ರೂಪವಾದ ಹಾಡು, ಗಾದೆ, ಒಗಟು, ಲಾವಣಿಗಳು, ಕಥೆಗಳು ಇತ್ಯಾದಿ ಇವುಗಳಿಗೆ ಅಂದಿನ ಸಂಸ್ಕಾರದ ಒಳಹುಗಳನ್ನು ಸಾಂದರ್ಭಿಕ ಹಾಗೂ ಸಾರ್ವತ್ರಿಕತೆಯ

ಸತ್ಯವನ್ನು ಕಟ್ಟಿಕೊಡುವ ಸತ್ವವನ್ನು ಕಾಣಬಹುದು ಹಾಗೂ ಅನುಭವ ವೈದ್ಯಜ್ಞಾನ ಸಂಪಾದನೆ ಅಲ್ಲಿ ಮೈವೆತ್ತಿರುವುದನ್ನು ಕಂಡ ಜನರು ಅಕ್ಷರ ರೂಪಕ್ಕೆ ಇಳಿಸಲು ಮುಂದಾದರು. ಅದು ಮುಂದಿನ ಮಾನವ ಜನಾಂಗಕ್ಕೆ ಕೊಂಡೊಯ್ಯುವ ಲಿಖಿತ ರೂಪದಲ್ಲಿ ತಂದಿದ್ದು ವಿಶೇಷವೇ ಆಗಿದೆ. ಜನಜೀವನದ ಅಶೋತ್ತರಗಳನ್ನು ಪ್ರತಿಬಿಂಬವಾಗಿಸುವ ವ್ಯವಸ್ಥಿತ ಅಧ್ಯಯನವೇ ಶಿಷ್ಟಸಾಹಿತ್ಯವಾಗಿದೆ. ಬದುಕನ್ನು ಸಾಗಿಸಲು ನಾವಿನ್ಯತೆಯ ಘಟ್ಟಕ್ಕೆ ಸೀಮಿತವಾದ ಮನುಷ್ಯ ಸಾಹಿತ್ಯ ವಾಹಕವಾಗಲು ಲಿಖಿತವಾಗಿ ಸಂಗ್ರಹಿಸುವ ಕಾರ್ಯಕ್ಕೆ ಮುಂದಾದ. ಅದನ್ನು ವ್ಯವಸ್ಥಿತವಾಗಿ ಶಾಸ್ತ್ರೋಕ್ತವಾಗಿ, ವಿಮರ್ಶಾತ್ಮಕವಾಗಿ, ತಾರ್ಕಿಕವಾಗಿ ಹೀಗೆ ಹಲವು ಆಯಾಮಗಳಲ್ಲಿ ಕಂಡುಕೊಳ್ಳಲು ಮುಂದಾಗಿ, ಅದನ್ನು ಪೋಷಿಸುವುದಕ್ಕೆ ನಾಂದಿಯಾಯಿತು. ಶಿಷ್ಟ ಸಾಹಿತ್ಯದ ಪ್ರಕಾರಗಳಾದ ಕಥೆ, ಕಾದಂಬರಿ, ನಾಟಕಗಳಲ್ಲಿ ಹಂಪಿಯ ಚಿತ್ರಣ ಹೇಗೆ ಮೂಡಿ ಬಂದಿದೆ ಎನ್ನುವುದನ್ನು ಅವಲೋಕಿಸುವುದು ಮುಖ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಹಂಪಿ ಮತ್ತು ವಿಜಯನಗರ ಕುರಿತ ಚಿತ್ರಣಗಳು ಕನ್ನಡ ಸಾಹಿತ್ಯದಲ್ಲಿ ಕಂಡು ಬಂದ ಬಗೆಯನ್ನು ಇಲ್ಲಿ ಚರ್ಚಿಸಲಾಗಿದೆ.

೪.೧.೨.೧. ಕನ್ನಡ ಆಧುನಿಕ ಪೂರ್ವ ಸಾಹಿತ್ಯ ಕೃತಿಗಳ ಹಿನ್ನೆಲೆಯಲ್ಲಿ ಹಂಪಿ

ಹಂಪಿಯು ವಿವಿಧ ರಾಜ ಮನೆತನಗಳ ಕೇಂದ್ರವಾಗಿ ನಮ್ಮ ನಾಡಿನ ಭವ್ಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದೆ. ಇಲ್ಲಿ ಆಳ್ವಿಕೆ ನಡೆಸಿದ ವಿವಿಧ ರಾಜರುಗಳು ಈ ನಾಡಿನ ಸಾಹಿತ್ಯ-ಭಾಷೆ ಸಮೃದ್ಧಿಗೆ, ಮೌಲ್ಯಭರಿತವಾದ ಸಾಹಿತ್ಯ ಸೃಷ್ಟಿಗೆ ಕಾರಣೀಭೂತರಾಗಿದ್ದಾರೆ. ಇಲ್ಲಿ ದಾಸ ಶ್ರೇಷ್ಠರಾದ ಕನಕದಾಸರು, ಪುರಂದರದಾಸರು, ಕವಿಗಳಾದ ಚಾಮರಸ, ಸರ್ವಜ್ಞ, ಹರಿಹರ, ರಾಘವಾಂಕ, ಕುಮಾರ ವಾಲ್ಮೀಕಿ, ಲಕ್ಷ್ಮೀಶ, ಶ್ರೀಪಾದರಾಯ, ವ್ಯಾಸರಾಯ, ಇತ್ಯಾದಿ ಕವಿಪುಂಗವರೂ ಹಂಪಿಯಲ್ಲಿ ನಿಂತು ತಮ್ಮ ಜ್ಞಾನದೀವಿಗೆಯನ್ನು ಕನ್ನಡ ಸಾಹಿತ್ಯದ ಪ್ರಕಾರಗಳಾದ ಕಾವ್ಯ, ಕೀರ್ತನೆಗಳ ಮುಖಾಂತರ ಅನನ್ಯ ಕೊಡುಗೆಯನ್ನು ನೀಡಿದರು. ಕನ್ನಡದ ಪ್ರಾಚೀನ ಕವಿಗಳ ಕೃತಿಗಳಲ್ಲಿ ಈ ಪ್ರದೇಶವನ್ನು 'ಹಂಪಿ' ಎಂದೇ ಉಲ್ಲೇಖಗೊಂಡಿದೆ.

ಮಹಾಕವಿ ಹರಿಹರ ತನ್ನ ಎಲ್ಲಾ ಕಾವ್ಯಗಳಲ್ಲಿ 'ಪಂಪಾಪುರದರಸ', ಹಂಪೆಯಾಳ್ದನೆಂದು ಇಲ್ಲಿನ ಅಧಿದೈವ ವಿರೂಪಾಕ್ಷನನ್ನು ಸ್ತುತಿಸಿದ್ದಾನೆ. ಆತ ಹಂಪೆಯನ್ನು 'ಪಂಪಾಪುರ', 'ಹಂಪೆ' ಎಂದು ಕರೆದಿದ್ದಾನೆ. ಅದೇ ರೀತಿ ರಾಘವಾಂಕನೂ ಕೂಡ 'ಹಂಪೆಯ ಹರೀಶ್ವರನ ವರಸುತ' ಎಂದು ತನ್ನೆಲ್ಲ ಕಾವ್ಯಗಳಲ್ಲಿ ಹೇಳಿಕೊಂಡಿದ್ದಾನೆ. ಹರಿಶ್ಚಂದ್ರ ಕಾವ್ಯದಲ್ಲಿ ವಿರೂಪಾಕ್ಷನನ್ನು 'ಪಂಪಾಪತಿ', 'ಪಂಪಾಧಿಪತಿ' ಎಂದೂ ಹಂಪಿಯನ್ನು ಪಂಪಾ, ಹಂಪೆ ಎಂದು ಕರೆದಿದ್ದಾನೆ.

ಕಲ್ಮಠದ ಪ್ರಭುದೇವ ತನ್ನ 'ಲಿಂಗಲೀಲಾ ವಿಲಾಸ ಚಾರಿತ್ರ್ಯ'ದಲ್ಲಿ 'ವಿದ್ಯಾನಗರ' ವೆಂದೂ ಚಂದ್ರಶೇಖರ ಕವಿ ತನ್ನ 'ಪಂಪಾಸ್ಥಾನ ವರ್ಣನಂ' ಕಾವ್ಯದಲ್ಲಿ 'ಪಂಪೆಯ ವಿರೂಪಾಕ್ಷಂ" ಹಂಪೆಯಾಳ್ದ, 'ಪಂಪಾ ಮಹಾಕ್ಷೇತ್ರ', 'ಪಂಪಾಕ್ಷೇತ್ರ' ಹಾಗೂ 'ಪಂಪಾಪುರಿ' ಎಂದು ಕರೆದಿದ್ದಾನೆ. ಇದೆಲ್ಲವೂ ಹೇರಳವಾದ ಕನ್ನಡ ಸಾಹಿತ್ಯ ಸೃಷ್ಟಿಯಾಗಿರುವುದನ್ನು

ಸೂಚಿಸುತ್ತದೆ. ಇಂತಹ ಸಾಹಿತ್ಯದಲ್ಲಿ ಕಾಲ ಘಟನೆಗಳು, ಚರಿತ್ರೆಯ ಒಳಮುಖದಲ್ಲಿ ಸಾಗಿ, ನೆಲೆನಿಂತು, ಅಂದಂದಿನ ಸಂಸ್ಕೃತಿಯ ವಾಹಕವಾಗಿ ಇಂದು ನಮ್ಮ ಮುಂದೆ ಅನಾಥವಾಗಿ ನಿಂತಿವೆ. ಇಲ್ಲಿ 'ಹಂಪಿ' ವಿವಿಧ ಕಾಲಘಟ್ಟಗಳಲ್ಲಿ ತನ್ನ ವಿಭಿನ್ನ ಸಂಸ್ಕೃತಿ, ಕಲೆ, ಭಾಷೆ, ಸಾಹಿತ್ಯ, ಧರ್ಮ, ಭಾವೈಕ್ಯತೆಯನ್ನು ಸಾರುವ ಮತ್ತು ಅವುಗಳ ಪೋಷಣೆಯ ಕೇಂದ್ರವಾಗಿ ಮೆರೆದಿರುವುದನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಹಂಪಿಗೆ ಸಂಬಂಧಿಸಿದ ಉಲ್ಲೇಖಗಳು ಆಧುನಿಕಪೂರ್ವ ಕನ್ನಡ ಕವಿಗಳ ಕೃತಿಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

೧. ಲಕ್ಕಣ್ಣ ದಂಡೇಶ

ಲಕ್ಕಣ್ಣ ದಂಡೇಶನು ವಿಜಯನಗರದ ಪ್ರೌಢದೇವರಾಯನ ದಣ್ಣಾಯಕನಾಗಿ, ಮಹಾಪ್ರಧಾನಾಗಿದ್ದನು (ಕ್ರಿ.ಶ.೧೪೧೦–೧೪೫೦). ಈತನ ಜನ್ಮಸ್ಥಳ ವಿರೂಪಾಕ್ಷಪುರ. ಹೆಗ್ಗಡೆದೇವ ಮತ್ತು ಪೊಮ್ಮಾಯಮ್ಮ ಈತನ ತಂದೆ ತಾಯಿ. ಅಂದಿನ ಮಹತ್ವದ ಕವಿ ಎಂದು ಬಣ್ಣಿತನಾದ ಈತನು, ಪ್ರೌಢದೇವರಾಯನ ಕಾಲದಲ್ಲಿದ್ದನು. ಕನ್ನಡನಾಡಿನ ಹನ್ನೆರಡು ಶಾಸನಗಳಲ್ಲಿ ತಮಿಳುನಾಡಿನ ನಾಲ್ಕು ಶಾಸನಗಳಲ್ಲಿ ಈತನನ್ನು ಹೆಸರಿಸಲ್ಪಟ್ಟಿದೆ. "ವಿಜಯನಗರದ ಕಾಲದಲ್ಲಿ ಈತನ ಅಂಕಿತವಿರುವ ನಾಣ್ಯಗಳು ಚಲಾವಣೆಯಲ್ಲಿದ್ದವು. ಅವುಗಳ ಒಂದು ಮುಖದ ಮೇಲೆ ಆನೆಯ ಚಿತ್ರವು ಇನ್ನೊಂದು ಮುಖದಲ್ಲಿ 'ಲ(ಖ)ಮಣ ದಣ್ಣಾಯಕ' ಎಂಬ ಕನ್ನಡ ಅಕ್ಷರಗಳೂ ಇವೆ" ಇದು ಅವನೆಷ್ಟು ಪ್ರಬಲನಾಗಿದ್ದ ಎಂಬುದಕ್ಕೆ ಸಾಕ್ಷಿಯಾಗಿದೆ.[೬]

ಈತನ ಪ್ರಸಿದ್ಧವಾದ ಕೃತಿ 'ಶಿವತತ್ವ ಚಿಂತಾಮಣಿ'. ಇದರಲ್ಲಿ ೫೪ ಸಂಧಿಗಳಿವೆ. ಒಟ್ಟು ೭೭೭೧ ವಾರ್ಧಕ ಷಟ್ಪದಿಗಳಿವೆ. ಇದರಲ್ಲಿ ೧೮ ಅಂಗಗಳಿವೆ. ಗ್ರಂಥದ ಆರಂಭದಲ್ಲಿ ಶ್ರೀವಿರೂಪಾಕ್ಷನನ್ನು ಸ್ತುತಿಸಿ, ಮಲ್ಲಿಕಾರ್ಜುನ ಗುರು ಅಲ್ಲಮಪ್ರಭು ಬಸವಣ್ಣನವರು ಚೆನ್ನಬಸವಣ್ಣನವರು ಇವರನ್ನು ಮಾತ್ರ ಸ್ಮರಿಸಿ ಆ ಕೂಡಲೆ ತನ್ನ ಪರಿಚಯನ್ನು ತನ್ನ ಗ್ರಂಥದ ಹಿರಿಮೆಯನ್ನು ಹೇಳಿ ಪರಿವಿಡಿಯನ್ನು ಹೇಳಿದ್ದಾನೆ. ಪ್ರೌಢದೇವರರಾಯನಿಗೆ ಉಂಟಾದ ಅನೇಕ ಕಷ್ಟದ ಸಂದರ್ಭಗಳಲ್ಲಿ ಲಕ್ಕಣ್ಣ ದಂಡೇಶ ಊರುಗೋಲಾಗಿ ನಿಂತನು. ಕಷ್ಟಗಳಿಂದ ಅವನನ್ನು ಪಾರುಮಾಡಿದ್ದನು. ಅನೇಕ ಯುದ್ಧಗಳಲ್ಲಿ ಭಾಗಿಯಾಗಿದ್ದನು. "ಇವನು ಅನೇಕ ದೇವಮಂದಿರಗಳನ್ನು ತಟಾಕ ಆರಾಮಗಳನ್ನು ನಿರ್ಮಿಸಿ ಪ್ರಸಿದ್ಧಿವೆತ್ತುದನ್ನು ಹಲವಾರು ಶಾಸನಗಳು ಹೇಳುತ್ತವೆ".(ವಿದ್ವಾನ್ ಮತ್ತು ಪಂಡಿತ ಎಸ್.ಬಸಪ್ಪ(ಸಂ): 'ಶಿವತತ್ವ ಚಿಂತಾಮಣಿ' ಪ್ರಸ್ತಾವನೆ, ಉಪೋದ್ಘಾತ ಮತ್ತು ಅನುಬಂಧ ೨ರಲ್ಲಿ ನೋಡಿ)'ಮೂರುರಾಯರ ಗಂಡ ಗಜವೇಂಟೆಕಾರ ದೇವೇಂದ್ರ ಭೂವರನ ಮಹದೈಶ್ವರ್ಯಶರಧಿಚಂದ್ರೋದಯ', 'ಸಪ್ತಾಂಗರಾಜ್ಯವರ್ಧನ ಕಳಾಧರ' ಮುಂತಾಗಿ ತನ್ನನ್ನು ಕುರಿತು 'ಶಿವತತ್ವ ಚಿಂತಾಮಣಿ'ಯಲ್ಲಿ ಲಕ್ಕಣ್ಣ ದಂಡೇಶ ಹೇಳಿಕೊಂಡಿದ್ದಾನೆ.

ಕನ್ನಡ ಸಾಹಿತ್ಯವು ಪ್ರೌಢದೇವರಾಯನ ಕಾಲದಲ್ಲಿ ಉನ್ನತಮಟ್ಟದಲ್ಲಿತ್ತು. ಜಕ್ಕಣಾರ್ಯ, ಮಹಾಲಿಂಗದೇವ, ಚಾಮರಸ, ಮಗ್ಗೆಯ ಮಾಯಿದೇವ, ಚಂದ್ರಶೇಖರಕವಿ(ಚಂದ್ರಕವಿ) ಮುಂತಾದ

ಪ್ರಸಿದ್ಧ ವೀರಶೈವ ಕವಿಗಳು, ಶಾಸ್ತ್ರವೇತ್ತರು ಇವನ ಕಾಲದಲ್ಲಿ ಇದ್ದರು. ಅದರಲ್ಲಿ ಲಕ್ಕಣ್ಣ ದಂಡೇಶನು ಮುಖ್ಯವಾಗುತ್ತಾನೆ. ತನ್ನ ಕೃತಿಯಾದ 'ಶಿವತತ್ವ ಚಿಂತಾಮಣಿ'ಯಲ್ಲಿ ಪ್ರೌಢದೇವರಾಯನ ರಾಜಧಾನಿಯನ್ನು ವಿಜಯನಗರವನ್ನು/ಹಂಪೆಯನ್ನು 'ವಿಜಯ ಕಲ್ಯಾಣ', 'ವಿಜಯ ನಗರ', 'ವಿದ್ಯಾನಗರ', 'ವಿಜಯ ಕಲ್ಯಾಣಪುರ', 'ವಿಜಯ ಕಲ್ಯಾಣ ಪಟ್ಟಣ', 'ಪಂಪಾಕ್ಷೇತ್ರ', 'ಪಂಪಾಪುರ' ಎಂಬಿತ್ಯಾದಿಯಾಗಿ ಹಂಪಿಯ ವಿವಿಧ ಹೆಸರುಗಳು ತನ್ನ ಕೃತಿಯಲ್ಲಿವೆ. ಆತನಾಡುವ ಸಾತ್ವಿಕ ಸೊಬಗನ್ನು, ೧೫ ಶತಮಾನದ ವಿಜಯನಗರದ ವೈಭವವನ್ನು ಆ ನಗರದಲ್ಲಿ ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಸಮಾರಂಭಗಳನ್ನು ಅನೇಕ ವಿದೇಶಿ ಪ್ರವಾಸಿಗರು ಬಣ್ಣಿಸಿದ್ದಾರೆ. ಆ ಕಾಲದ ಕನ್ನಡ ಕವಿಗಳೂ ವರ್ಣಿಸಿದ್ದಾರೆ. ಹೀಗೆ ವರ್ಣಿಸಿದವರಲ್ಲಿ ಲಕ್ಕಣ್ಣ ದಂಡೇಶ ಪ್ರಮುಖನು. ಈ ಕೆಳಗಿನ ಪದ್ಯದಲ್ಲಿ ಹೀಗೆ ಹೇಳಿದ್ದಾನೆ:

'ಪರಹಿತದ ಬೀಡು ಸತ್ಯದ ನುಡಿಯ ನಡುನಾಡು

ಕರುಣಾಬ್ದಿಯಿಕ್ಕೆ, ಕಾಮಿತ ಸುಖದ ತೆಕ್ಕೆ ಶಶಿ

ಧರನ ಸಾಮರ್ಥ್ಯದಾಗರ, ಸದಾಚಾರ ಸದ್ಭಕ್ತಿಗಳ ಜನ್ಮಭೂಮಿ

ಪರತರ ಶಿವಾನುಭಾವಿಗಳ ಪರಿಮಿತಗೃಹಂ

ಪರಕಿ ಪರಿಗಿದು 'ವಿಜಯ ಕಲ್ಯಾಣ'ವಾದುದೀ

ಧರೆಯರಿಯೆ ದೇವರಾಜೇಂದ್ರಪುರವೆಂಬವರ ಚರಣಾಂಬುಜಕ್ಕೆ ಶರಣು. (ಸಂಧಿ ೩೮, ಪದ್ಯ ೨೦೫) ಎಂದು ಉಲ್ಲೇಖಿಸಿದ್ದಾನೆ.

ಲಕ್ಕಣ್ಣಾ ದಂಡೇಶನು ವಿಜಯನಗರಕ್ಕೆ ಆ ಹೆಸರು ಹೇಗೆ ಬಂದಿತು ಎನ್ನುವುದಕ್ಕೆ ಕೊಡುವ ಕಾರಣ ವಿಚಾರಶೀಲರು ಒಪ್ಪುವಂತೆ ಹೇಳಿದ್ದಾನೆ. ದೇವರಾಯನು ಮತ್ತು ಶ್ರೀವಿರೂಪಾಕ್ಷನಿಗೂ ಇರುವ ಸಾಮ್ಯತೆಯನ್ನು ಇಲ್ಲಿ ಈ ರೀತಿಯಾಗಿದೆ:

ನಿಜಭುಜ ಪರಾಕ್ರಮದಿ ಮೂರುರಾಯರೆನಿಪ್ಪ

ಗಜಘಟೆಗಳಂ ವಿದಾರಿಸಿ ಪಂಚಮುಖನಾಗಿ

ಸುಜನರಂ ಪರಿರಕ್ಷಿಸುತ ಶಿವಾರ್ಚಕರಿಗನಿಶಂ ಸಮಾಧಾನವಿತ್ತು

ವೃಜನಹರ ಪಂಪಾವಿರೂಪಾಕ್ಷ ಚರಣಮಂ

ಭಜಿಸುತಂ ವಿಜಯ ಕಲ್ಯಾಣ ಪುರದೊಳು ಮೆರೆವ

ವಿಜಯನೆನೆ ದೇವರಾಜೇಂದ್ರನಿರವರುವವರ ಚರಣಾಂಬುಜಕ್ಕ ಶರಣು(೩೮-೨೪೯)

ಸಿದ್ಧಾಂತ ಗ್ರಂಥವಾದರೂ ಅದರಲ್ಲಿ ಅಷ್ಟಾದಶ ವರ್ಣನೆಗಳು ಹುದುಗಿವೆ. ಪುರವರ್ಣನೆ, ದೇಶವರ್ಣನೆಗಳಿವೆ. ಕಲ್ಯಾಣ ಪಟ್ಟಣದ ಮತ್ತು ಶ್ರೀಶೈಲ ಪ್ರಾಂತಗಳ ವರ್ಣನೆಗಳಿವೆ.

ಬಸವಣ್ಣನವರ ಜನನವೃತ್ತಾಂತ, ಬಿಜ್ಜಳನ ಗುಣಶೀಲಾದಿಗಳನ್ನು ಹೇಳಲಾಗಿದೆ. ಬಿಜ್ಜಳನ ರಾಜಧಾನಿಯಾಗಿದ್ದ ಕಲ್ಯಾಣದ ವರ್ಣನೆ, ಅವರ ಆಸ್ಥಾನದ ಸವಿವರದ ಚಿತ್ರಣ, 'ನೃಪವರ್ಣನೆ' ಬೇಟೆಗೆ ಕಿರಾತಲೀಲೆಗಳನ್ನು ಕಾಣಬಹುದಾಗಿದೆ.

ವಿರೂಪಾಕ್ಷ ದೇವಾಲಯವೆಂಬ ಶಿವನ ಅರಮನೆಯನ್ನೊಳಗೊಂಡ ಹಂಪೆ ಹಾಗೂ ಅರಸನ ಅರಮನೆ ರಾಜಬೀದಿ ಅಂಗಡಿ ಪೇಟೆಗಳನ್ನೊಳಗೊಂಡ ರಾಜಧಾನಿ ಇವು ವಸ್ತುತಃ ಬೇರೆ ಬೇರೆಯಾಗಿದ್ದರೂ ಒಂದನ್ನು ಬಿಟ್ಟು ಇನ್ನೊಂದಿಲ್ಲ ಎನ್ನುವ ಮಟ್ಟಿಗೆ ಅವರೆಡರ ಸಂಬಂಧವನ್ನು 'ಶಿವತತ್ವ ಚಿಂತಾಮಣಿ' ನಿರೂಪಿಸುತ್ತದೆ. ವಿಜಯನಗರದ ಅಂದಿನ ಜನಜೀವನವನ್ನು ಬಹುಮಟ್ಟಿಗೆ ಪ್ರತಿಬಿಂಬಿಸಲಾಗಿದೆ. ಅನೇಕ ಐತಿಹಾಸಿಕ ಅಂಶಗಳನ್ನು ಒಳಗೊಂಡಿರುವ ಈ ಕೃತಿಯಲ್ಲಿ ವಿಜಯನಗರದ ಸಂಸ್ಕೃತಿಯ ಸೊಗಡು, ಶೈವ ಸಂಸ್ಕೃತಿಯ ಸಾರವಿದೆ. ಲಕ್ಕಣ್ಣ ದಂಡೇಶನು ವಿಜಯನಗರಿಯ ಪವಿತ್ರ ಸ್ಥಳಗಳನ್ನು ಪಂಪಾವಧೂ-ವರರನ್ನು, ಅಂದಿನ ಮಠಮಾನ್ಯಗಳನ್ನು ಮತ್ತು ಬಜಾರುಗಳ ಪಾತ್ರವನ್ನು ಬಹು ಸಂಭ್ರಮದಿಂದ ಬಣ್ಣಿಸಿದ್ದಾನೆ. ಲಕ್ಕಣ್ಣನು ನೂತನ ಶರಣರನ್ನು ಹೊಗಳುವ ಸಂದರ್ಭದಲ್ಲಿ ಕೆಲವು ಊರುಗಳ ವರ್ಣನೆಯನ್ನು ಸಹ ಮಾಡುವನು. ಒಂದೊಂದು ಊರು ಶರಣ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ರನ್ನಗನ್ನಡಿಯ ವಿವರಗಳು ಸಿಗುತ್ತವೆ.

ಮುಂದೆ ಸಿದ್ಧಶಬರಿ, ಮಾಲ್ಯವಂತ ಪರ್ವತ, ಅಂಜನಾದ್ರಿ, ಮತಂಗಾಚಲಗಳಲ್ಲಿದ್ದ ಚರಲಿಂಗಮೂರ್ತಿಗಳನ್ನು ಕುರಿತು(ಪದ್ಯ ೨೨೦ ರಿಂದ ೨೨೩) ಲಕ್ಕಣ್ಣ ದಂಡೇಶ ಹೇಳುತ್ತಾನೆ. ನೂತನ ಗಣಂಗಳ ಕಥೆಗಾಗಿ ಲಕ್ಕಣ್ಣ ದಂಡೇಶ ೨೫೬ ಪದ್ಯಗಳ ಇಡೀ ಒಂದು ಸಂಧಿಯನ್ನೇ(ಸಂಧಿ ೩೮) ಬಳಸಿದ್ದಾನೆ. ಹಾಗೆಯೇ ವಿಜಯನಗರಿಯ ಭಕ್ತಗಣತತಿಯ ವರ್ಣನೆಗೆ ಐದಾರು ಪದ್ಯಗಳಲ್ಲಿ(ಸಂಧಿ ೩೮, ಪದ್ಯ ೨೦೬-೨೧೦) ಲಕ್ಕಣ್ಣ ಮೀಸಲಿರಿಸಿದ್ದಾನೆ. ಗುಡ್ಡವ್ವೆ, ರಾಗಿಸೆಟ್ಟಿ, ನಾಗೋಬಾಯಿ, ದೇಶಾರಾವುತಯ್ಯ, ಮಲಿಯಕ್ಕ, ಸೊಣ್ಣಪ್ಪ, ಬಸವಾಯಿತಾಯಿ, ವರದಾನ್ಯದಮ್ಮ, ದೇಮಾಯಿತಾಯಿ ಮೊದಲಾದ ವ್ಯಕ್ತಿ ಹೆಸರುಗಳನ್ನು 'ಶಿವತತ್ವ ಚಿಂತಾಮಣಿ'ಯ ಅನುಬಂಧದಲ್ಲಿ ನೋಡಬಹುದಾಗಿದೆ.

ಲಕ್ಕಣ್ಣ ವಿಜಯನಗರವನ್ನು ವಿಜಯಕಲ್ಯಾಣ ಪುರವೆಂದೂ(ಸಂಧಿ ೩೮, ಪದ್ಯ ೨೧೧, ೨೧೩-೨೧೫), ವಿಜಯಕಲ್ಯಾಣವೆಂದೂ(ಸಂಧಿ ೩೮, ಪದ್ಯ ೨೧೨, ೨೧೭-೨೧೯), ವಿಜಯಕಲ್ಯಾಣ ಪಟ್ಟಣವೆಂದೂ(ಸಂಧಿ ೩೮, ಪದ್ಯ ೨೧೬), ವಿಜಯನಗರ(ಸಂಧಿ ೩೮, ೨೦೭, ೨೧೦) ಎಂದು ಕರೆದಿದ್ದಾನೆ.

ಪ್ರೌಢದೇವರಾಯನ ಕಾಲದಲ್ಲಿ ವಿಜಯನಗರವು ಕೇವಲ ವಿಜಯನಗರವಾಗಿ ಉಳಿಯದೇ ಕನ್ನಡ ಜನಾಂಗದ ಸಮಷ್ಟಿ ಕಲ್ಯಾಣವನ್ನು ಬಯಸಿದ ವಿಜಯನಗರ ಕಲ್ಯಾಣ ಎನ್ನುವ ಕೀರ್ತಿಯನ್ನು ಪಡೆಯಿತು. ಕವಿ ಲಕ್ಕಣ್ಣನನ್ನು ಅಂದು ವಿಜಯನಗರಕ್ಕೆ ಭೇಟಿ ನೀಡಿದ

ಪರ್ಷಿಯಾದ ರಾಯಭಾರಿ ಅಬ್ದುಲ್ ರಜಾಕ್‌ನು ಮನದುಂಬಿ ಹೊಗಳಿದ ವಿವರಗಳನ್ನು ವಿದ್ವಾಂಸರು ಹೇಳಿದ್ದಾರೆ.

ಇದು ಶ್ರೀಕೃಷ್ಣದೇವರಾಯನ ಆಶ್ರಯ ಪಡೆದ ಕವಿ ಗುಬ್ಬಿ ಮಲ್ಲಣಾರ್ಯ ಹಾಗೂ ಚಾಮರಸ, ವಿರುಪಾಕ್ಷ ಪಂಡಿತರ ಮಂತಾದ ಅನೇಕ ವೀರಶೈವ ಕವಿಗಳಿಗೆ ಈ ಗ್ರಂಥವು ಸ್ಫೂರ್ತಿ ಎಂದು ಹೇಳಬಹುದು. ಉನ್ನತ ಮಟ್ಟದ ಗ್ರಂಥವಾಗಿರುವ ಇದರಲ್ಲಿ ಲೌಕಿಕ ಮತ್ತು ಪಾರಮಾರ್ಥಿಕ ವಿಚಾರಗಳೆರಡರ ವಿವರವಿದೆ.[೬]

೨. ಹರಿಹರ (೧೧೮೦–೧೨೨೦)

ಕನ್ನಡ ಸಾಹಿತ್ಯದ ನೂತನ ಯುಗ ಪ್ರವರ್ತಕನೆಂದು ಕೀರ್ತಿ ಪಡೆದಿರುವ ಹರಿಹರನು ಹುಟ್ಟಿದುದು ಹಂಪೆಯಲ್ಲಿ. ಮಹಾದೇವಭಟ್ಟ, ಶರ್ವಾನಿ ಎಂಬ ಶೈವ ಬ್ರಾಹ್ಮಣರು ಆತನ ತಂದೆ–ತಾಯಿಯರು. ರುದ್ರಾಣಿ ಎಂಬುವಳು ತಂಗಿ, ಹರಿಹರನು ಮಾಯಿದೇವರೆಂಬ ಗುರುಗಳಲ್ಲಿ ವಿದ್ಯಾಭ್ಯಾಸ ಮಾಡಿದ್ದನು. ಜೀವನಕ್ಕಾಗಿ ದ್ವಾರಸಮುದ್ರ ಹೊಯ್ಸಳರಾಜ ೨ನೇ ನರಸಿಂಹಬಲ್ಲಾಳನಲ್ಲಿ ಕರಣಿಕನಾಗಿದ್ದನು. ಆಧ್ಯಾತ್ಮಿಕ ಒಲುಮೆ ಜಾಸ್ತಿಯಾಗಿ ಈ ವೃತ್ತಿಯನ್ನು ಬಿಟ್ಟನು ಎನ್ನಲಾಗುತ್ತದೆ. ಹರಿಹರನು ಶಿವನೇ ತನ್ನ ಸರ್ವಸ್ವವೆಂದು ಶಿವಶರಣರ ಸಂಕುಲವೇ ತನ್ನ ಬಳಗವೆಂದು ಭಾವಿಸಿ ಹಂಪೆಯ ವಿರೂಪಾಕ್ಷನ ಸನಿಹದಲ್ಲಿ ಉಪಜೀವನ ನಡೆಸಿದ ಮಹಾಮೇದಾವಿ. ಈತನು 'ಪಂಪಾಶತಕ', 'ರಕ್ಷಾಶತಕ', 'ಮುಡಿಗೆಯ ಅಷ್ಟಕ', 'ಗಿರಿಜಾಕಲ್ಯಾಣ', 'ಶಿವಶರಣರ ರಗಳೆಗಳು' ಎನ್ನುವ ಮಹತ್ವದ ಕೃತಿಗಳನ್ನು ರಚಿಸಿದ್ದಾನೆ.

ಹರಿಹರ ಮಹಾಕವಿಯು ತನ್ನ ರಗಳೆಯಲ್ಲಿ ಹಂಪಿಯನ್ನು 'ಪಂಪಾಕ್ಷೇತ್ರ' ಎಂದಿದ್ದಾನೆ. ಈ ಪಂಪಾಪುರಕ್ಕೆ ನಾಲ್ಕು ಬಾಗಿಲುಗಳಿವೆ. ಯೋಜನೆ ಪ್ರಮಾಣದ ಸುತ್ತಳೆಯ ವಿಸ್ತಾರ ಈ ಪುರಕ್ಕೆ ಇದೆ. ಇದರ ಮೂಡಣ ದಿಕ್ಕಿನ ಬಾಗಿಲಿಗೆ ಕಿನ್ನರೇಶ್ವರ, ತೆಂಕಣ ಬಾಗಿಲಲ್ಲಿ ಜಂಬುಕೇಶ್ವರ, ಪಶ್ಚಿಮ ದ್ವಾರದಲ್ಲಿ ಸೋಮನಾಥೇಶ್ವರ, ಉತ್ತರ ದ್ವಾರದಲ್ಲಿ ವಾಣಿಭದ್ರೇಶ್ವರರು ನೆಲೆಸಿದ್ದಾರೆ. ಇದರ ಮಧ್ಯದಲ್ಲಿ ಶ್ರೀ ವಿರುಪಾಕ್ಷ ರಾಜನಂತೆ ಶೋಭಿಸುತ್ತಿದ್ದ ಎಂದು ವರ್ಣಿಸುತ್ತಾನೆ. ಅನೇಕ ತೀರ್ಥಕ್ಷೇತ್ರಗಳಿಂದ, ಶಿವಭಕ್ತರಿಂದ ತುಂಬಿದ ಪಂಪಾಪುರವು ಭೂಮಿಯ ಆಭರಣವೆನಿಸುವುದು. ವಾರಣಾಸಿಗಿಂತಲೂ ಮಿಗಿಲೆನಿಸಿದ ಪಂಪಾಪುರದ ಹೆಸರು ಉಸಿರಿದರೆ ಸಾಕು ಪಾಪ ಪರಿಹಾರವಾಗುವುದು. ಭವದ ಭಯವನ್ನು ದುರಿತ ಕಷ್ಟವನ್ನು ಪರಿಹರಿಸುವುದು. ಪಂಪಾಪುರದ ಪುಣ್ಯಕ್ಷೇತ್ರ, ಸಕಲ ಮುಕ್ತಿಯೆನ್ನೀವದು ಶಿವಪುರಗಳಲ್ಲಿಯೇ, ಶ್ರೇಷ್ಠವಾದುದು. ಇಂತಹ ಕ್ಷೇತ್ರದಲ್ಲಿ ನೆಲೆಸಿದರು ಪಂಪಾ ವಿರೂಪಾಕ್ಷ ಹೀಗೆಯೇ ಹರಿಹರನ ರಗಳೆಯಲ್ಲಿ ಪಂಪಾಕ್ಷೇತ್ರದ ಶ್ರೇಷ್ಠತೆ ಸಿಗುತ್ತದೆ.[೮]

ಶ್ರೀ ಮಚ್ಛೈಲೇಂದ್ರಪುತ್ರೀ ಗುರುತರಹೃದಯಕ್ಷೀರಾವಾರಾಶಿ ಚಂದ್ರಂ

ವ್ಯೋಮಾರ್ಕೇಂದು ಕ್ಷಮಾತ್ಮಾನಲಜಲ ತಪಮಾನಾಷ್ಟಮೂರ್ತಿ ಪ್ರಸಿದ್ಧಂ ।

ಪ್ರೇವಂಬೆತ್ತೀಗೆ ಸದ್ಭಕ್ತಿಯನವಮಗಮರಾನೀಕ ಮಾಣಿಕ್ಯ ಮೌಳಿ

ಸ್ತೋಮಂಘ್ರಿದ್ಯೋತಿ ಪಂಪಾಪುರದರಸ ವಿರೂಪಾಕ್ಷನಾನಂದಿಂದಂ ॥

(ಹೈಮವತಿಯ ಪ್ರೇಮಲ ಹೃದಯವೆಂಬ ಪಾಲ್ಗಡಲಿಗೆ ಚಂದ್ರನೂ, ನೆಲ,ನೀರು, ಬೆಂಕಿ, ಗಾಳಿ, ಬಯಲು, ರವಿ, ಶಶಿ ಮತ್ತು ಒಡೆಯರೆಂಬ ಎಂಟು ತನುಮೂರ್ತಿಗಳಿಂದ ಪ್ರಸಿದ್ಧ ಸ್ವರೂಪನೂ, ಸಕಲ ದೇವತೆಗಳ ಮಣಿಮಯ ಕಿರೀಟಗಳ ಕಾಂತಿಗಳಿಂದ ಬೆಳಗುವ ಪಾದಕಮಲವುಳ್ಳವನೂ ಆದ ಪಂಪಾಪುರದರಸ ಶ್ರೀವಿರೂಪಾಕ್ಷಸ್ವಾಮಿಯು ಎಲ್ಲರಿಗೂ ಒಲಿದು ಸದ್ಭಕ್ತಿಯನ್ನು ಕರುಣಿಸಲಿ)

ಈ ಮೇಲಿನ ಪದ್ಯ ಭಾಗವು ಶರಣಕವಿ ಹಂಪೆಯ ಹರಿಹರದೇವನ ಮೇರುಕೃತಿಯಾದ 'ಗಿರಿಜಾ ಕಲ್ಯಾಣ' ಕೃತಿಯ ಆರಂಭದಲ್ಲಿ ಕಂಡುಬರುವ ಮೊದಲನೇ ಪದ್ಯ ಇದಾಗಿದೆ. ಅತಿ ಪ್ರಾಚೀನ ಕಾಲದಿಂದಲೂ ಮತ್ತು ಶತಮಾನಗಳಿಂದಲೂ ಒಂದು ಧಾರ್ಮಿಕ ಹಾಗೂ ಪವಿತ್ರ ಕ್ಷೇತ್ರವೆಂದು ಪ್ರಸಿದ್ಧಿಯಾಗಿರುವ ಹಂಪೆಯ ಅಧಿದೇವತೆಯಾದ ಪಂಪಾವಿರೂಪಾಕ್ಷನನ್ನು ಕವಿಯು ಕೊಂಡಾಡಿರುವನು.

'ಗಿರಿಜಾ ಕಲ್ಯಾಣ'ವು ಹಂಪೆಯ ಸ್ಥಳ ಪುರಾಣಕ್ಕೆ ಒಂದು ಸಾಹಿತ್ಯಾಧಾರಿತ ಚಿತ್ರಣವನ್ನು ಒದಗಿಸುತ್ತದೆ. ಈ ಚಿತ್ರಣವೇ ಮುಂದೆ ಶಿಲ್ಪಿಗಳಿಗೂ, ಚಿತ್ರಕಲಾವಿದರಿಗೂ ಪ್ರೇರಣೆಯಾಗಿ, ಅವರಿಂದಲೂ ಉತ್ತಮವಾದ ಕೃತಿರಚನೆಗೆ ಕಾರಣವಾಗಬಹುದಾದ ಆಧಾರ ಇದಾಗಿದೆ. ಹರಿಹರನ ಕಾವ್ಯದ ವಿಷಯದ ಜನಪ್ರಿಯತೆಯೂ ತಿಳಿಯಬಹುದಾಗಿದೆ. ಹಂಪೆಯ ವಿರೂಪಾಕ್ಷಸ್ವಾಮಿಯ ದೇವಾಲಯದ ಮಹಾರಂಗಮಂಟಪದ ಛಾವಣಿಯ ಮೇಲೆ, 'ಗಿರಿಜಾಕಲ್ಯಾಣ'ವನ್ನು ವಿವರಿಸು ವರ್ಣಚಿತ್ರವು ಬಹು ಸೊಗಸಾದುದಾಗಿದೆ.

ಹರಿಹರನು ತನ್ನ 'ಪಂಪಾಶತಕ'ದಲ್ಲಿ ೧೦೩ ಪದ್ಯಗಳಿಂದ ಕೂಡಿದ ಶತಕವಾಗಿದೆ. ಇದರ ಕೊನೆಯಲ್ಲಿ ಹರಿಹರನು ಹಂಪೆಯ ವಿರೂಪಾಕ್ಷನನ್ನು ನೆನೆಯುತ್ತಾನೆ. 'ಪಂಪಾಪುರಾಧೀಶ್ವರಾ', 'ಹಂಪೆಯಾಳ್ದನೇ', 'ವಿರೂಪಾಕ್ಷನೇ' ಹೀಗೆ ಹಲವು ವಿಧವಾಗಿ ಬಣ್ಣಿಸುತ್ತಾನೆ. ಇಲ್ಲಿ ಹರಿಹರನ ಅತಿಯಾದ ಭಕ್ತಿಯಿದೆ. ಜನರಿಗೆ ಹಂಪೆಯ ವಿರೂಪಾಕ್ಷನನ್ನು ನೆನೆಯುವ ವಿಧಾನವನ್ನು ಬಳಸಿದ್ದಾನೆ.

'ರಕ್ಷಾಶತಕ'ದ ೧೦೧ ಪದ್ಯದಲ್ಲಿಯೂ ಹರಿಹರನು ಪದ್ಯದ ಕೊನೆಯಲ್ಲಿ 'ಪಂಪಾಪುರದರಸ ವಿರೂಪಾಕ್ಷನೇ' ನನ್ನನ್ನು ಕಾಪಾಡು ಎನ್ನುವ ಮಾತುಗಳು ಬರುತ್ತವೆ. ಅದಕ್ಕೆ ನಿದರ್ಶನ :

ಕರ್ತಾರಂ ನೀನೆ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ

ಭರ್ತಾರಂ ನೀನೆ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ

ಹರ್ತಾರ ನೀನೆ ಪಂಪಾಪುರದರಸ ವಿರೂಪಾಕ್ಷ ರಕ್ಷಿಪುದೆನ್ನಂ

ಕೂರ್ತಿಂತೋರಂಗೆ ಪಂಪಾಪುರದರಸ ರಕ್ಷಿಪ್ಪುದೆನ್ನಂ (ಪದ್ಯ-೯೯)

(ಪಂಪಾಪುರದರಸನಾದ ವಿರೂಪಾಕ್ಷನೇ, ನೀನೆ ಕರ್ತಾರ, ನೀನೆ ಒಡೆಯ(ಪೋಷಕ), ನೀನೆ ಹರ್ತಾರ(ಸಂಹಾರಕ), (ಆದುದರಿಂದ) ನನ್ನನ್ನು ಪ್ರೀತಿಯಿಂದ ಕಾಪಾಡು) ಇಂತಹ ಮಾತುಗಳು ಪದ್ಯದುದ್ದಕ್ಕೂ ಉಲ್ಲೇಖಗೊಳ್ಳುತ್ತವೆ.

೩. ರಾಘವಾಂಕ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹಂಪಿಯನ್ನು ಶಕ್ತಿಕೇಂದ್ರವನ್ನಾಗಿಟ್ಟುಕೊಂಡು ಕಾವ್ಯ ರಚಿಸಿದ ಇಬ್ಬರು ಮಹತ್ವದ ಶ್ರೇಷ್ಠಕವಿಗಳು ಹರಿಹರ ಮತ್ತು ರಾಘವಾಂಕ. ಸು.೧೨ನೇ ಶತಮಾನದ ಕೊನೆ ಮತ್ತು ೧೩ನೇ ಶತಮಾನದ ಆದಿಯಲ್ಲಿ ಕ್ರಿಯಾಶೀಲನಾಗಿ ಬರೆಯುತ್ತಿದ್ದ ಕವಿ ರಾಘವಾಂಕ. ಮುಖ್ಯವಾಗಿ ಪಂಪಾವಿರೂಪಾಕ್ಷನ ಪರಮ ಭಕ್ತನಾಗಿದ್ದನು. ವಾರ್ಧಕ ಷಟ್ಪದಿಯನ್ನು ತನ್ನ ಕಾವ್ಯ ಮಾಧ್ಯಮವನ್ನಾಗಿ ಮಾಡಿಕೊಂಡು ನಡುಗನ್ನಡ ಕಥನಕಾವ್ಯ ಪರಂಪರೆಗೆ ಹೊಸ ಆಯಾಮವೊಂದನ್ನು ತಂದುಕೊಟ್ಟ ಕವಿ ರಾಘವಾಂಕ. ರಾಘವಾಂಕನು ಹಂಪಿಯ ಮಹಾದೇವಭಟ್ಟ ಮತ್ತು ರುದ್ರಾಣಿ ಎಂಬ ದಂಪತಿಗಳ ಸುಪುತ್ರನಾಗಿದ್ದಾನೆ. ತನ್ನ ಎಲ್ಲ ಗ್ರಂಥಗಳನ್ನು ಸಹಜ ದೇಸಿ ರೂಪ ಭೇದವಾದ ಷಟ್ಪದಿಯಲ್ಲಿಯೇ ಕಾವ್ಯ ರಚಿಸಿದ್ದಾನೆ. ರಾಘವಾಂಕ ಹರಿಹರನ ಸೋದರಳಿಯ ಹಾಗೂ ಪಟ್ಟಶಿಷ್ಯನಾಗಿದ್ದನು. ಈತನಿಗೆ 'ಚತುರ ಕವಿರಾಯ' "ಹಂಪೆಯ ಹರೀಶ್ವರನ ವರಸುತನು, 'ಷಟ್ಪದಿಯಬ್ರಹ್ಮ' ಎಂಬ ಬಿರುದು/ ಅನ್ವರ್ಥಗಳಿದ್ದವು."[೯] ರಾಘವಾಂಕನು ಒಟ್ಟು ೬ ಕೃತಿಗಳನ್ನು ರಚಿಸಿದ್ದಾನೆ. ಅವುಗಳಲ್ಲಿ 'ಸೋಮನಾಥ ಚರಿತೆ', 'ಹರಿಶ್ಚಂದ್ರ ಕಾವ್ಯ', 'ವೀರೇಶ ಚರಿತ್ರೆ', 'ಸಿದ್ಧರಾಮ ಪುರಾಣ' ಈ ನಾಲ್ಕು ಕೃತಿಗಳು ಉಪಲಬ್ಧವಾಗಿವೆ. 'ಶರಭ ಚರಿತ್ರೆ' ದೊರೆತಿದ್ದು ಪ್ರಕಟವಾಗಿಲ್ಲ. ಹರಿಹರ ಮಹಾತ್ಮೆ ಇದುವರೆಗೂ ಲಭ್ಯವಾಗಿಲ್ಲ. ರಾಘವಾಂಕನು ತನ್ನದೇ ಆದ ಸ್ವಂತಿಕೆಯನ್ನು ಕಾವ್ಯ ಶೈಲಿ, ನಾಟಕೀಯತೆ, ಅಚ್ಚಗನ್ನಡ ಛಂದಸ್ಸಿನಿಂದ ಮೆರೆದಿದ್ದಾನೆ. ರಾಘವಾಂಕನು ಷಟ್ಪದಿ ರೂಪದಲ್ಲಿ ಪ್ರಮುಖವಾದ ಸ್ಥಾನ ನೀಡಿದ್ದಾನೆ ಹಾಗೂ ಅಚ್ಚಗನ್ನಡದ ಛಂದಸ್ಸಿನಲ್ಲಿ ಕೃತಿಗಳನ್ನು ರಚಿಸಿ ಹಂಪೆ ಕ್ಷೇತ್ರದಲ್ಲಿ ಖ್ಯಾತನಾಗಿ ಹಂಪೆಯ ಹರೀಶ್ವರನ ವರಸುತನು ಎಂಬ ಕೀರ್ತಿಗೆ ಪಾತ್ರನಾಗಿದ್ದಾನೆ. ಇದರೊಂದಿಗೆ ವಿಜಯನಗರದ ಚರಿತ್ರೆಯು ಸಾಹಿತ್ಯದ ಮೂಲಕ ಜೀವಂತವಾಗಿ ಉಳಿಯುವಂತೆ ಮಾಡಿದ್ದಾನೆ.[೧೦]

ರಾಘವಾಂಕನು ಹಂಪೆಯರಸನನ್ನು ಮೊಗಳ್ವ ನಾಲಗೆಯೊಳನ್ಯ ದೈವದ ಭವಿಗಳನ್ನು ಕೀರ್ತಿಸುವವನಲ್ಲ. ಜತೆಗೆ ಪಂಪಾಂಬಿಕೆಯರಸನಿಗೊಪ್ಪುವ 'ಕಾವ್ಯಕನ್ನಿಕೆ'ಯನ್ನು ನಿರ್ಮಾಣ ಮಾಡಬೇಕೆಂಬ ಆಕಾಂಕ್ಷೆ ಅವನಿಗಿತ್ತು. ಇವೆರಡೂ ತನ್ನ 'ಹರಿಶ್ಚಂದ್ರ ಕಾವ್ಯ'ದಲ್ಲಿ ಕವಿ ಉದ್ದೇಶಕ್ಕಿಂತಲೂ ಅಧಿಕವಾಗಿ ಸಿದ್ಧಿಸಿವೆ. ಹಾಗೆಯೇ 'ಹರನೆಂಬುದೇ ಸತ್ಯ ಸತ್ಯವೆಂಬುದು ಹರನು' ಎನ್ನುವ ಮಹಾವಾಕ್ಯವು ಇವನನ್ನು ಉತ್ಕ್ರಾಂತಿಯ ಉನ್ನತ ಪೀಠಕ್ಕೆ ಹೊಯ್ದಿದ್ದು. ಹೀಗಾಗಿ ರಾಘವಾಂಕನು ಹಂಪಿಯ ತನ್ನ 'ಹರಿಶ್ಚಂದ್ರ ಕಾವ್ಯ'ದಲ್ಲಿ ಉಲ್ಲೇಖ ಬರುತ್ತದೆ.

ಅಯೋಧ್ಯೆಯ ರಾಜನ ಕಥೆಯನ್ನು ಹೇಳುತ್ತ ಕವಿ ವಶಿಷ್ಠರ ಆಶ್ರಮವನ್ನು ಪಂಪಾಕ್ಷೇತ್ರದಲ್ಲಿ ತಂದಿರಿಸುತ್ತಾನೆ. ಅವನ ಪಾವನ ಪುಣ್ಯ ನದಿ ಗಂಗೆಯಲ್ಲ, ತುಂಗಭದ್ರೆ, ಇದಕ್ಕೆ ಪೂರಕವಾದ ಈ ಪದ್ಯವನ್ನು ಗಮನಿಸಬಹುದು.

ನೆರೆದ ವೇದಂಗಳುಗ್ಗಡವುಪನಿಷತ್ತುಗಳ

ಗರವಟಿಗೆಯಣಿಮಾದಿಗಳ ಬೊಬ್ಬೆ ಧರ್ಮದ

ಬ್ಬರ ಘನಜ್ಞಾನ ಪ್ರದೀಪ್ತಿಗಳು ಹರಿಬ್ರಹ್ಮಾದಿ ಸುರರ ಕಾಹು ॥

ಪುರುಷಾರ್ಥ ನಾಲ್ಕರೊಳು ಸಲುಗೆ ಪುಣ್ಯದ ಮುಂದೆ

ಸಿರಿ ಸರಸ್ವತಿಯರೆಡೆಯಾಟವೆಳೆದಿರೆ ಜಗ

ದ್ಗುರುವಿರೂಪಾಕ್ಷನಿಲ್ಲಿಯೆ ಸುಖದೊಳಿಪ್ಪ ಪಂಪಾಕ್ಷೇತ್ರವಿದೆಯೆಂದನು ॥

ಬಿಡದೊಮ್ಮೆ ಕಂಡಜೀವರ ಭವವ್ರಜದ ಬೆಂ

ಬಡಿಗೆ ಪಾತಕಕೋಟಿಯಾ ಕತ್ತಿ ದುಷ್ಕರ್ಮ

ದೆಡೆಗೊರಳ ಕತ್ತರಿಸಿ ಸಮಸ್ತರೋಗಂಗಳೆಡೆಗೊಡ್ಡಿ ದಲಗಜ್ಞಾನದ ॥

ನೆಡುದಲೆಯ ಗರಗಸಂ ಮಲೆವ ಮಾಯೆಯ ಬಸುರ

ನೊಡೆಹೊಯ್ವ ಶೂಲವಿನ್ನುಳಿದ ದುರಿತವನುರುಹಿ

ಸುಡುವ ಕಿಚ್ಚೆಂದನಿಪ ತುಂಗಭದ್ರಾ ನದಿಯನವನೀಶ ನೋಡೆಂದನು॥

ರಾಘವಾಂಕನ 'ಗಿರಿಜಾ ಕಲ್ಯಾಣ'ದಲ್ಲಿ ಹಂಪಿಗೆ ಸಂಬಂಧಿಸಿದ ಇಂತಹ ಅನೇಕ ಉಲ್ಲೇಖಗಳು ಸಾಕಷ್ಟು ಸಿಗುತ್ತವೆ. ರಾಘವಾಂಕನು ತನ್ನ 'ಹರಿಶ್ಚಂದ್ರಕಾವ್ಯ'ದಲ್ಲಿಯೂ ಹಂಪಿಯನ್ನು ಹೀಗೆ ಉಲ್ಲೇಖಿಸುತ್ತಾನೆ.

'ದಾಯಕಂ ಹರಿವಿರಿಂಚ್ಯಾದಿಪ್ರಮುಖದೇವ

ರಾಯ ಪಂಪಾವಿರೂಪಾಕ್ಷನೆಮಗೀಗೆ ಭಕ್ತಿ ಜ್ಞಾನಸಂಪದವನು' (ಪ್ರಥಮ ಸ್ಥಲ, ಪದ್ಯ-೮)

೪. ನಂಜುಂಡ ಕವಿ

ಈತನ ಕಾಲ ಸುಮಾರು ೧೫೨೫ ಆಗಿದ್ದು, ಮೊದಲು ಜೈನನಾಗಿದ್ದು ಅನಂತರ ಶೈವಧರ್ಮಿಯನಾದಂತೆ ಕಂಡುಬರುತ್ತದೆ. ಈತನಿಂದ ರಚಿತವಾದ ಕುಮಾರರಾಮನ ಸಾಂಗತ್ಯ ರೂಪದ ಕೃತಿಯಾಗಿದ್ದು, ಕನ್ನಡದ ಮೊದಲ ಐತಿಹಾಸಿಕ ಮಹಾಕಾವ್ಯವಾಗಿದೆ. ಕುಮಾರರಾಮನ ವ್ಯಕ್ತಿ ಕತೆಯನ್ನೊಳಗೊಂಡ ಈ ಕೃತಿಯು ರಾಮನ ಧೀರ-ವೀರತ್ವಗಳ ಪ್ರದರ್ಶನವೇ ಕಾವ್ಯದ ಮುಖ್ಯ ಉದ್ದೇಶವಾಗಿದೆ. 'ಕಂಪಿಲ' ದುರ್ಗದ ದೊರೆ ಕಂಪಿಲನಾಯನ ಮಗನೇ ಕುಮಾರರಾಮ.

ಪುರಾಣದ ಅಲೌಕಿಕದೊಡನೆ ಭಾರತ ಕಥೆಯ ಪ್ರಧಾನ ಘಟನೆಗಳ ಸಂಯೋಜನೆ ಮತ್ತು ಸಮಕಾಲೀನ ಬದುಕಿನ ಸೊಗಸಾದ ಚಿತ್ರಣ, ವಿಷಮ ದಾಂಪತ್ಯದ ದುಷ್ಪರಿಣಾಮ ಇತ್ಯಾದಿ ಪರಿಕರಗಳ ಸಂಗ್ರಹವಿದೆ.[೧೯] ಈ ಕಾವ್ಯದಲ್ಲಿ ಬರುವ ಪ್ರಮುಖ ಪಾತ್ರಗಳು ಹರಿಹರ ದೇವ. ಕುಮಾರದೇವ, ಕಂಪಿಲದೇವ, ರತ್ನಾಜಿ ಮಾತಂಗಿ, ಭಟ್ಟಂಗಿರಾಮ, ಡೆಲ್ಲಿ ಸುಲ್ತಾನನ ಮಗಳು, ಬೈಚಪ್ಪ, ಕಂಪಿಲರಾಮ ಕುಮಾರರಾಮನ ಕುದುರೆ' ಇಂದ್ರನ ಕುದುರೆ ಉಚ್ಚೈಶ್ರವಸ್‌ಗೆ ಸರಿಸಾಟಿಯಾದುದೆಂಬ ಕಲ್ಪನೆಯನ್ನು ಈ ಕಾವ್ಯದಲ್ಲಿ ಮೂಡಿಸಲಾಗಿದೆ. ಇದರಲ್ಲಿ ರತ್ನಾಜಿ ತನ್ನ ಮಲಮಗನನ್ನು ಪ್ರೇಮಿಸುವ ವಿಕೃತ ಸ್ಥಿತಿ ಇದೆ. ಆತ ತಿರಸ್ಕರಿಸಿದಾಗ ಕಂಪಿಲರಾಯನಲ್ಲಿ ದೂರಿ ಶಿಕ್ಷೆಯನ್ನು ವಿಧಿಸುವ ಸಂದರ್ಭ, ಮಾನವ ಸಂಬಂಧದ ವಿವಿಧ ನೆಲೆಗಳ ಸಂಯಮ ಚಿತ್ರಣ ಈ ಕಾವ್ಯದಲ್ಲಿದೆ.

ಪ್ರಮುಖವಾಗಿ ಈ ಮೇಲಿನ ಕೃತಿಗಳಲ್ಲಿ ಉಲ್ಲೇಖ ಮಾಡಿರುವುದನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ. ಆದರೂ ಮೇಲಿನ ಕೃತಿಕಾರರಲ್ಲದೆ ಹಂಪಿಯನ್ನು ಮತ್ತು ಅಂದಿನ ವಿಜಯನಗರ ಪಟ್ಟಣದ ವೈಭವವನ್ನು ಅಂದಿನ ಸಮಕಾಲೀನ ಕವಿಗಳು ತಮ್ಮ ಕವಿತಾ ಗ್ರಂಥಗಳಲ್ಲಿ ನಿರೂಪಿಸಿದ್ದಾರೆ. ಅವರಲ್ಲಿ 'ಜೈಮಿನಿಭಾರತ' ಬರೆದ ಕವಿ ಲಕ್ಷ್ಮೀಶ(ಸು.ಕ್ರಿ.ಶ.೧೩೪೭), 'ಧರ್ಮನಾಥ ಪುರಾಣ' ರಚಿಸಿದ ಬಾಹುಬಲಿ ಪಂಡಿತ(ಸು.ಕ್ರಿ.ಶ.೧೩೫೨), 'ಪದ್ಮರಾಜ ಪುರಾಣ' ಬರೆದ ಪದ್ಮಣಾಂಕ(ಸು.ಕ್ರಿ.ಶ.೧೩೮೫), 'ಸೊಬಗಿನಸೋನೆ'ಯ ಕವಿ ದೇಪರಾಜ(ಸು.ಕ್ರಿ.ಶ. ೧೪೧೦) ಮತ್ತು 'ಜೀವಂಧರಚರಿತೆ' ಬರೆದ ಕವಿ ಭಾಸ್ಕರ(ಸು. ಕ್ರಿ.ಶ. ೧೪೨೪), ಪ್ರೌಢರಾಯನ ಕಾವ್ಯಬರೆದ ಅದೃಶ್ಯ ಕವಿ(ಸು. ಕ್ರಿ.ಶ. ೧೪೩೩), 'ಜ್ಞಾನಚಂದ್ರಾಭ್ಯುದಯ' ಕೃತಿ ಬರೆದ ಕಲ್ಯಾಣ ಕೀರ್ತಿ(ಸು. ಕ್ರಿ.ಶ.೧೪೩೯), 'ಭರತೇಶ ವೈಭವ' ಕೃತಿಯ ರತ್ನಾಕರವರ್ಣಿ(ಸು.ಕ್ರಿ.ಶ. ೧೪೫೭) ಹಾಗೂ 'ಸಮ್ಯುಕ್ತ ಕೌಮುದಿ'ಯ ಕವಿ ಬೊಮ್ಮರಸ(ಸು. ಕ್ರಿ.ಶ.೧೫೦೯), 'ರಾಮನಾಥ ಚರಿತೆ' ಬರೆದ ನಂಜುಂಡ ಕವಿ(ಸು. ಕ್ರಿ.ಶ. ೧೫೨೫), 'ಮೋಹನ ತರಂಗಿಣಿ' ರಚನೆಕಾರ ಕನಕದಾಸ (ಸು. ಕ್ರಿ.ಶ. ೧೫೫೦), 'ವಿಜಯಕುಮಾರಿ ಚರಿತೆ' ಬರೆದ ಶೃತಕೀರ್ತಿ(ಸು. ಕ್ರಿ.ಶ. ೧೫೬೭), 'ಚನ್ನಬಸವ ಪುರಾಣ' ಬರೆದ ವಿರೂಪಾಕ್ಷ ಪಂಡಿತ (ಸು. ಕ್ರಿ.ಶ. ೧೫೮೫), 'ಕಂಠೀರವ ನರಸರಾಜ ವಿಜಯ' ರಚಿಸಿದ ಕವಿ ಗೋವಿಂದವೈದ್ಯ(ಸು. ಕ್ರಿ.ಶ. ೧೬೪೮) ಮೊದಲಾದವರು ಪ್ರಮುಖರಾಗಿದ್ದಾರೆ. ಅವರು ತಮ್ಮ ಕೃತಿಗಳಲ್ಲಿ ಅಂದಿನ ವಿಜಯನಗರದ ವರ್ಣನೆಯನ್ನು ಮಾಡಿದ್ದಾರೆ. ಅವರು ವಿಶೇಷವಾಗಿ ರಾಜರ ಅರಮನೆಗಳು, ಅವುಗಳ ಉಪವಿಭಾಗಗಳ((auxiliary structures) ವೈಭವ, ವಿವಿಧೋದ್ದೇಶ, ಉಪಯುಕ್ತತೆ ಮುಂತಾದ ವಿಷಯಗಳನ್ನು ಕುರಿತು ವಿಪುಲವಾಗಿ ವಿವರಿಸಿದ್ದಾರೆ. ಕೆಲವರು ಕೇಳಿ ತಿಳಿದುಕೊಂಡ ವಿವರಗಳನ್ನು ಇಲ್ಲವೇ ತಾವೇ ಕಣ್ಣಾರೆ ಕಂಡ ಘಟನೆಗಳನ್ನು ತಮ್ಮ ಕೃತಿಗಳಲ್ಲಿ ವಿಶ್ಲೇಷಿಸಿದ್ದಾರೆ. ಚಾಮರಸ, ತಿಮ್ಮಣಕವಿ, ವಿರೂಪಾಕ್ಷ ಪಂಡಿತ, ಮುಕ್ಕು ತಿಮ್ಮಯ್ಯ, ಮಲ್ಲಯ್ಯ ಮುಂತಾದ ಕವಿಗಳು ವಿಜಯನಗರ ಪಟ್ಟಣದಲ್ಲಿ(ಹಂಪಿ)ವಾಸವಾಗಿದ್ದುಕೊಂಡೇ ತಮ್ಮ ಕೃತಿಗಳನ್ನು ರಚಿಸಿದರು.[೨೦]

ಆ ಕವಿಗಳು ತಾವು ಕಂಡ ಅಂದಿನ ವೈಭವವನ್ನು ತಮ್ಮ ಕೃತಿಗಳಲ್ಲಿ ಯಾವ ರೀತಿ ದಾಖಲಿಸಿದ್ದಾರೆ ಎನ್ನುವುದನ್ನು ಈ ಮುಂದೆ ವಿವರಿಸಲಾಗಿದೆ.

ಅ. ವಿಜಯನಗರದ ರಾಜಾಲಯ ಸಂಕೀರ್ಣದಲ್ಲಿದ್ದ ಮುಖ್ಯ ಕಟ್ಟಡಗಳ ವರ್ಣನೆ

ಅಂದಿನ ವಿಜಯನಗರ ಪಟ್ಟಣದ ರಾಜಾಲಯದ ಅಂತರಂತರದಲ್ಲಿ ಅನೇಕ ಹಾಗೂ ವಿವಿಧೋಪಯೋಗಿ ಸೌಧಗಳು ಸಾಲುಸಾಲಾಗಿ ಕಾಣಬರುತ್ತಿದ್ದವು ಎಂದು ಚನ್ನಬಸವ ಪುರಾಣ(ಸಂ.೧೧,ಪುಟ.೪೯) ಮತ್ತು ಇತರೆ ಕೃತಿಗಳು ದಾಖಲಿಸಿವೆ. ಅವುಗಳೆಂದರೆ: ದೊರೆಗಳ ನಿವಾಸಗಳು, ಅರಸು ಮಕ್ಕಳ ಗೃಹಗಳು, ವರಮಂತ್ರಿ ವರ್ಗದವರ ಆಲಯಗಳು, ಕರಣಿಕ ಜೋಯಿಸರ ವಾಸಸ್ಥಳಗಳು, ಮುಂತಾದವುಗಳು ಅಲ್ಲದೆ ರಾಜನಿಗೆ ಸೇರಿದ ಗಜಶಾಲೆ, ಹಯಶಾಲೆ, ಆಯುಧಶಾಲೆ, ಸಕಲ ಭಂಡಾರದ ಶಾಲೆ ಮುಂತಾದವುಗಳು ಸಹ ಅರಮನೆಯ ಪರಿಸರದಲ್ಲಿಯೇ ನಿರ್ಮಾಣವಾಗಿರುತ್ತಿದ್ದವು. ಅಲ್ಲದೆ ಕರಣಶಾಲೆ(Secretariat) ಎಂದು ಕರೆಯಲ್ಪಡುತ್ತಿದ್ದ, ರಾಜ್ಯಾಡಳಿತಕ್ಕೆ ಸಂಬಂಧಿಸಿದ ಕಾರ್ಯಾಲಯವು ಸಹ ಆ ಸಂಕೀರ್ಣದಲ್ಲಿಯೇ ಕಾಣಬರುತ್ತಿತ್ತು. ಅಲ್ಲಿ ಹದಿನಾರು ವಿಭಾಗಗಳ ಕರಣದವರು(ಕರಣಿಕರು) ತಮಗೆ ವಹಿಸಲಾದ ವಿವಿಧ ರಾಜ್ಯ ಕಾರ್ಯಗಳಲ್ಲಿ ನಿರತರಾಗಿರುತ್ತಿದ್ದರು. ಅಲ್ಲದೆ ವಾಸ್ತುಶಾಸ್ತ್ರಜ್ಞರಿಂದ ಬಹು ಕುಶಲತೆಯಿಂದ ಹಾಗೂ ವಾಸ್ತುಶಾಸ್ತ್ರಕ್ಕನುಗುಣವಾಗಿ ನಿರ್ಮಿಸಲಾಗಿದ್ದ ಸ್ನಾನಗೃಹ, ಅಡುಗೆಶಾಲೆ, ಭೋಜನಶಾಲೆ, ಮಂತ್ರಾಲೋಚನೆಯ ಗೃಹ, ಶಯನಗೃಹ, ವಸ್ತ್ರಭಂಡಾರ, ಓಲಗಶಾಲೆ, ನರ್ತನಶಾಲೆ, ಸಂಗೀತದ ಶಾಲೆ, ಖಜಾನೆ ಭಂಡಾರಗೃಹ, ತೈಲ, ತುಪ್ಪ ಇತರ ರಸಭಾಂಡಗಳ, ದವಸ ಧಾನ್ಯಗಳ ಉಗ್ರಾಣಗಳು ಮುಂತಾದ ಅವಶ್ಯವಿದ್ದ ಕಟ್ಟಡಗಳು ಅಲ್ಲಿಯೇ ಇದ್ದವು..[೨೧] ಮೇಲಿನ ಅಂಶಗಳನ್ನು ವಿವರಿಸುವ ಪದ್ಯಭಾಗಗಳು ಈ ಕೆಳಗಿನಂತಿವೆ:

ಪೇಳಲಚ್ಚರಿಯಾದುದರಮನೆಯದಾ ವಿಶ್ವಕರ್ಮನಿರ್ಮಿತದಂತಿರೆ ॥ ೪೮ ॥

ಎಸೆದುವಲ್ಲಲ್ಲಿ ವಾಸ್ತುಕ್ರಮಂಬಿಡಿದು ರಂ

ಜಿಸುವ ಮಜ್ಜನಶಾಲೆಯುಂ ಸೂಪಶಾಲೆ ಶೋ

ಭಿಸುವ ಭೋಜನಶಾಲೆಯುಂ ಮಂತ್ರಶಾಲೆ ನರ್ತನಶಾಲೆ ವಸ್ತ್ರಶಾಲೆ

ಮಿಸುಪ ಹಯಶಾಲೆ ಗಜಶಾಲೆಯೋಲಗಶಾಲೆ

ಪೋಸಗೀತಶಾಲೆಯೊಪ್ಪುವ ಶಯನಶಾಲೆ ಭಾ

ವಿಸಲರಸುಱೀವಿಗುಳ್ಳನಿತು ಶಾಲೆಗಳೊಪ್ಪಿದುವು ..... ॥ ೪೯ ॥

ಸಕಲ ಕೋಶದ ಗೃಹಂಗಳ ತೈಲ ಘೃತಗುಡ

ಪ್ರಕರ ರಸಭಾಂಡದುಗ್ರಾಣದೊಳ್ವನೆಗಳು

ಸುಕರ ಧಾನ್ಯದ ಕಣಜಗಳ ...... ॥ ೫೦ ॥

ಆ ಅರಮನೆಗೆ ಹೇಮಮಯವಾಗಿದ್ದ ದ್ವಾರಬಾಗಿಲುಗಳಿದ್ದವು. ಅವುಗಳ ಮೇಲೆ ಎತ್ತರಕ್ಕೆ ಮಣಿಖಚಿತವಾದ ಉಪ್ಪರಿಗೆಗಳು (ಗೋಪುರಗಳು) ಕಾಣುತ್ತಿದ್ದವು.[೨೨] ಮೇಲಿನ ವಿಷಯಾಂಶಗಳನ್ನೇ ಸಮರ್ಥಿಸುತ್ತಾ ಭಾಸ್ಕರ ಕವಿಯು ಹೇಳುವಂತೆ, ಪುರದ ಮಧ್ಯದ ವಜ್ರದ ಹೊಂಗೋಟೆಯ ಮಧ್ಯದಲ್ಲಿ ಕನಕಮಯವಾದ ಉಪ್ಪರಿಗೆಗಳಿಂದ ಕೂಡಿದ ಅರಮನೆಯ ಸಂಕೀರ್ಣವು ರಂಜಿಸುತ್ತಿತ್ತು. ಆ ಸಂಕೀರ್ಣದಲ್ಲಿ ಸಚಿವರ ಮನೆಗಳು, ಶಸ್ತ್ರಶಾಲೆ, ಹಯಶಾಲೆ, ಅರಸಿಯರ ಮಂದಿರಗಳು, ದೇವತಾರ್ಚನೆಯ ಮಂದಿರ, ದೊಡ್ಡ ಮಂಟಪ (ಒಲಗಶಾಲೆ) ಉದ್ಯಾನಗಳು ಮುಂತಾದವುಗಳು ರಂಜಿಸುತ್ತಿದ್ದವು.[೨೩] ಆ ರಾಜಾಲಯವು ಒಂದರ ಮೇಲೊಂದರಂತೆ ಏಳು ಮಹಡಿಗಳಿಂದ ನಿರ್ಮಿತವಾದುದಾಗಿತ್ತು (ಸಪ್ತಕಕ್ಷಾ ಸಮೇತ..... ಏಳು ನೆಲೆಗಳ ಮಾಡಂಗಳಿಂದಂ.....') ಮತ್ತು ಅದು ಉನ್ನತವಾದ ಶಿಖರಗಳಿಂದ, ಅವುಗಳ ಮೇಲೆ ರತ್ನಖಚಿತವಾದ ಕಲಶಗಳಿಂದ ಅಲಂಕೃತವಾಗಿದ್ದುದಲ್ಲದೆ, ಆ ಅರಮನೆಯನ್ನು, ಅದರೊಳಗಿದ್ದ ಸಭಾಸದನವನ್ನು ಬಹುವಿಧವಾಗಿ ಸಿಂಗರಿಸಲಾಗಿತ್ತು. ರಾಣಿಯರ ವಾಸದ ಮನೆಗಳೂ ಸಹ ಅದೇ ಸಂಕೀರ್ಣದಲ್ಲಿಯ ಮಹಡಿಗಳಲ್ಲಿ ವಿಶೇಷ ಅಲಂಕಾರಗಳಿಂದ ಶೋಭಿಸುತ್ತಿದ್ದುವು.[೨೪] ಅಲ್ಲದೆ, ಆ ನರನಾಥನ ಚಾರುಗೇಹಂ ಬಳಸಿರ್ಕುಂ ಹಯಶಾಲೆ, ಗಜಶಾಲೆ, ಶಸ್ತ್ರಾಗಾರ ಮುಂತಾದವುಗಳು ಆ ಅರಮನೆಯ ಹಿಂದಿದ್ದ ಹಿತ್ತಲಿನಲ್ಲಿ ನೀರಿನ ಬಾವಿಗಳ ಏರ್ಪಾಡು ಇತ್ತು. ಮತ್ತು ಆ ರಾಜಭವನದೇಕ (ಏಕಾಂತ) ಪ್ರದೇಶದಲ್ಲಿ ಒಂದು ದೇಹಾರ ಗೃಹಂ (ಪೂಜಾಗೃಹವೂ) ಇತ್ತು.[೨೫] ಅದೇ ಸಂಕೀರ್ಣದಲ್ಲಿ ಮತ್ತೊಂದೆಡೆಯೊಳಗೆ, ನಾನಾ ರತ್ನಗಳನ್ನು ಶೇಖರಿಸಿಡಲಾಗಿದ್ದ 'ಬಂಡಾರಾಲಯಮಾ ನರಪ ನಿವಾಸದಲ್ಲಿ ರಂಜಿಸುತ್ತಿತ್ತು'.[೨೬] ನಂಜುಂಡ ಕವಿಯು ಮೇಲೆ ವಿವರಿಸಿದ ಉಪನಿವೇಶನಗಳಲ್ಲದೆ ಬೇರೆ ಕೆಲವು ಅಸ್ತಿತ್ವದಲ್ಲಿದ್ದ ವಿಷಯವನ್ನು ಹೇಳುತ್ತಾ ಅವುಗಳನ್ನು ನಾಟಕಶಾಲೆ, ಚಿತ್ರಶಾಲೆ, ಮಂತಣಶಾಲೆ, ವಿದ್ಯಾಮಂಟಪ, ಮೋಹನ ಮಂಟಪ, ಭದ್ರಮಂಟಪ, ಎತ್ತರವಾದ ಶಿಖರಗಳಿಂದ ಕೂಡಿದ ಉಪ್ಪರಿಗೆ ಮನೆಗಳು, ಪರಿಣಯ ಮಂಟಪ, ಹಜಾರ, ದಿವಾಣ ಚಾವಡಿ, ಮುಂತಾದ ಹೆಸರುಗಳಿಂದ ತಿಳಿಸಿರುತ್ತಾನೆ. ಅಲ್ಲದೆ ಅವುಗಳಲ್ಲಿ ಕಾಣಬರುತ್ತಿದ್ದ ವಿವಿಧ ಹಾಗೂ ವೈಭವಯುಕ್ತ ಅಲಂಕಾರಗಳನ್ನು ರಂಜನೀಯವಾಗಿ ವರ್ಣಿಸಿರುತ್ತಾನೆ.[೨೭] ಮೇಲಿನಂತೆ ವಿವಿಧೋಪಯೋಗಿ ಮಂಟಪ–ಶಾಲೆಗಳಲ್ಲದೆ, ವಿಶೇಷವಾದ ಅಲಂಕಾರಗಳಿಂದ ಕೂಡಿದ ಲಕ್ಷ್ಮೀವಿಲಾಸ, ದುರ್ಗಾಮಂಟಪ, ಶಾರದಾಮಂಟಪ, ಇಂದಿರಾಮಂದಿರ, ಎಂಬ ದೇವಿಯರ ಹೆಸರಿನ ಮಂಟಪಗಳ ಇರುವಿಕೆಯನ್ನು ಕವಿಯು ಹೇಳಿದ್ದಾನೆ. ಆತನೆ ಅಲ್ಲಿ ಬಂಗಾರ ಚೌಕಿ, ಮಣಿಮಯ ಭವನ, ನಾಟಕ ಭವನಗಳಿದ್ದುದಾಗಿಯೂ ಮತ್ತು ರಾಜನ ಸ್ವಂತ ಉಪಯೋಗಕ್ಕಾಗಿ, ಅರಮನೆಯ ಸಂಕೀರ್ಣದಲ್ಲಿಯೇ ಭೋಜನಶಾಲೆ, ಪಾಕಗೃಹ, ರಾಜಭಂಡಾರ, ಉಗ್ರಾಣ, ಆಯುಧ ಶಾಲೆ, ಗರಡಿಮನೆ, ಅರಮನೆಯೊಳಗಡೆಯೇ ಹರಿಯುವ ನೀರಿನ ಕಾಲುವೆ, ವಿಧವಿಧವಾದ ಹೂವುಗಳಿಂದ ಕಂಗೊಳಿಸುತ್ತಿದ್ದ ಶೃಂಗಾರೋದ್ಯಾನ ಮುಂತಾದವುಗಳೂ ಕಾಣಬರುತ್ತಿದ್ದವು ಎನ್ನುವುದನ್ನು ಕಂಠೀರವ ನರಸರಾಜ ವಿಜಯದ ಕವಿಯಾದ ಗೋವಿಂದ ವೈದ್ಯ ದಾಖಲಿಸಿದ್ದಾನೆ.

ಆ. ವಿಜಯನಗರದ ಅರಮನೆಯ ವರ್ಣನೆ

ರಾಜನ ವಾಸಸ್ಥಳವು 'ರಾಜಾಲಯ', 'ಅರಮನೆ', 'ರಾಜಭವನ' ಎಂದು ಮುಂತಾಗಿ ಅಂದು ಕರೆಯಲ್ಪಡುತ್ತಿದ್ದು, ಅದು ಒಳಕೋಟೆಯ ಮಧ್ಯದಲ್ಲಿ ಕಾಣಬರುತ್ತಿತ್ತು. ಅದು 'ಪುರವನಿತೆಯ ಮುಖ ಬಿಂಬದಂತೆ' ಕೇಂದ್ರ ಪ್ರದೇಶದಲ್ಲಿದ್ದು ಪ್ರಮುಖ ಹಾಗೂ ಆಕರ್ಷಕ ಕಟ್ಟಡವಾಗಿತ್ತು. ಅದರೊಳಗೆ ರಾಜನು ತನ್ನ ಪರಿವಾರ ಸಮೇತ 'ಸಕಲ ಸೌಭಾಗ್ಯದಿಂದಿರುತಿರ್ದನು'[28] ಲಕ್ಷ್ಮೀಶ ಕವಿಯು ರಾಜನ ಅರಮನೆಯನ್ನು (ನೃಪಾಗಾರವನ್ನು) ಚಲುವಿನ ನಾರಿಯಂತಿರ್ದ ಆ ಮಹಾನಗರದ ಮುಖಾಂಬುಜವೆಂದು ವರ್ಣಿಸಿರುತ್ತಾರೆ.[29] ಗೋವಿಂದ ವೈದ್ಯನು ರಾಜನ ಅರಮನೆ ಸಂಕೀರ್ಣವು ಒಂದು ಭದ್ರವಾದ ಒಳಕೋಟೆ, ವಜ್ರದ ಕೋಟೆಯಂತೆ ಇತ್ತೆಂದು ಹೇಳುತ್ತಾ, ಅದನ್ನು 'ಲಕ್ಷ್ಮೀ ಬಿಡಾರ'ವೆಂದೂ ಹೊಗಳಿರುತ್ತಾರೆ.[30] ಕವಿ ಕನಕದಾಸನು ರಾಯನರಮನೆಯನ್ನು, ಸುಂದರವಾದ ಒಂದು ತಾವರೆ ಹೂವಿನ ಮಧ್ಯದಲ್ಲಿ ಆಕರ್ಷಕವಾಗಿ ಕಾಣಬರುತ್ತಿದ್ದ ಕರ್ಣಿಕೆಯಂತೆ ಶೋಭಿಸುತ್ತಿತ್ತು ಎಂದು ವರ್ಣಿಸಿರುತ್ತಾನೆ.[31] ಕಲ್ಯಾಣ ಕೀರ್ತಿಯ ವರ್ಣನೆಯ ಪ್ರಕಾರ, ರಾಜನ ಅರಮನೆಯು ಮೂರು ಸುತ್ತುಗಳ ಒಳಕೋಟೆಗಳ ಮಧ್ಯದಲ್ಲಿ ನಿರ್ಮಿತವಾಗಿತ್ತು. ಆ ಕೋಟೆಗೋಡೆಗಳಲ್ಲಿ ಅಲ್ಲಲ್ಲಿ ಸೂಕ್ತ ರೀತಿಯಲ್ಲಿ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ಗೋಪುರದ್ವಾರಗಳು, ಹೆಬ್ಬಾಗಿಲುಗಳು, ಬಾಗಿಲುಗಳನ್ನೊದಗಿಸಲಾಗಿತ್ತು. ಅಲ್ಲಿ ಅನೇಕ ಕೊಠಡಿಗಳು ಕಾಣಬರುತ್ತಿದ್ದುವಲ್ಲದೆ, ಗಾಳಿ ಬೆಳಕುಗಳಿಗಾಗಿ ಸರಿಯಾದ ವ್ಯವಸ್ಥೆಗಳನ್ನೂ ಮಾಡಲಾಗಿತ್ತು. ಆ ಅರಮನೆಯ ಸಂಕೀರ್ಣದ ಮೇಲೆ ಮಿನುಗುವ ಕಲಶಗಳು ಹಾಗೂ ಹಾರಾಡುವ ಧ್ವಜ ಪತಾಕೆಗಳು ಕಂಗೊಳಿಸುತ್ತಿದ್ದವು. ಹಾಗಾಗಿ, ಕವಿಯ ಮಾತಿನಲ್ಲಿ ಆ ಅರಮನೆಯು ಸುರಲೋಕದಿಂದ ಭೂಮಿಗೆ ಇಳಿದು ಬಂದಿರುವ ವಿಮಾನೋಪಾದಿಯಲ್ಲಿ ಶೋಭಿಸುತ್ತಿತ್ತು.[32] ಆ ಅರಮನೆ ಹೆಚ್ಚಿನ ಭಿನ್ನಾಣದಿಂದ ನಿರ್ಮಿತವಾದ ಹೊನ್ನ ಕುರುಮಾಡವಾಗಿದ್ದು, ಅದರ ಸುತ್ತಲೂ ಎತ್ತರದಲ್ಲಿ ಅನೇಕ ರಾಜಪತಾಕೆಗಳು ಅಲ್ಲಲ್ಲಿ ಹಾರಾಡುತ್ತಿದ್ದವು.[33] ಅರಮನೆ ಸೇರಿದಂತೆ ಅಲ್ಲಿಯ ಸಂಕೀರ್ಣದ ಕಟ್ಟಡಗಳು ಸಹ ಬಹು ಸುಂದರ ಹಾಗೂ ಉನ್ನತವಾದ ಕಟ್ಟಡಗಳಾಗಿದ್ದು ಮತ್ತು ಎತ್ತರದಲ್ಲಿ ಹಾರಾಡುತ್ತಿದ್ದ ರಾಜಧ್ವಜ, ಪತಾಕೆಗಳಿಂದಾಗಿ, ಅದು ಒಂದು ಕ್ರಮಾನುಸಾರವಾಗಿ ನಿರ್ಮಿಸಲಾದ ಬೃಹತ್ ಹಡಗವೇನೋ ಮತ್ತು ಅದನ್ನು ಮಹಾಪಟ್ಟಣವೆಂಬ ಸಮುದ್ರದ ಮಧ್ಯದಲ್ಲಿ ಲಂಗರು ಹಾಕಿ ನಿಲ್ಲಿಸಿರುವರೇನೋ ಎಂಬಂತೆ ಭಾಸವಾಗುತ್ತಿತ್ತು.[34] ಆ ಉನ್ನತವಾದ ಸೌಧಗಳ ಶಿಖರಗಳನ್ನು ಕಣ್ಣುಕೊರೈಸುವಂತೆ ಹೊಳೆಯುತ್ತಿದ್ದ ಮಣಿಖಚಿತವಾದ ಕಲಶಗಳಿಂದಲೂ ಅಲಂಕರಿಸಲಾಗಿತ್ತು.[35] ಆ ಪುರದ ಮಧ್ಯದ ಮಣಿಮಯದ ಹೊಂಗೋಟೆಯೊಳಗೆ, ಸುರಗಿರಿಯ ಮೇಲೆ ಆತುಳ ಗಿರಿಗಳನ್ನು ಇರಿಸಿರುವಂದದಿ ಅಲ್ಲಿಯ ಕನಕಮಯವಾದ ಉಪ್ಪರಿಗೆ ಮನೆಗಳು ರಂಜಿಸುತ್ತಿದ್ದವು ಮತ್ತು ಅಲ್ಲಿಯ ಪ್ರಮುಖವಾದ ಮಹಾಮಂದಿರದೊಳಗೆ ಮಹೀಪಾಲನು ಒಲವಿಂದಿರ್ದನು.[36] ಆ ರಾಜಾಲಯದ ನಾಲ್ಕು ಮೂಲೆಗಳ ಮೇಲೆ ನಾಲ್ಕು ಮತ್ತು ಮಧ್ಯದಲ್ಲಿ ಒಂದರಂತೆ ಬಹು ಉನ್ನತವಾದ ಶಿಖರಗಳು

ಶೋಭಿಸುತ್ತಿದ್ದವು. ಅವುಗಳನ್ನು ರಾಜನಿಗೆ ಒಲಿದಿದ್ದ ಜಯಸಿರಿ, ಶಾರದೆ, ಲಕ್ಷ್ಮೀ, ಧೈರ್ಯಲಕ್ಷ್ಮೀಯರ ಹೆಸರುಗಳಿಂದ ಸಂಬೋಧಿಸಲಾಗುತ್ತಿತ್ತು.[೩೭] ಅರಮನೆಯ ಸಂಕೀರ್ಣದಲ್ಲಿಯೇ ಅಥವಾ ಅದರ ಸಮೀಪವೇ ಅಂದು ರಾಜನ ಪೂಜಾಗೃಹವು ರಚಿತವಾಗಿರುತ್ತಿತ್ತೆಂದು ಸಮಕಾಲೀನ ಕೃತಿಗಳಿಂದ ತಿಳಿಯುತ್ತದೆ. ಅದು ಪೂಜಾಸಾಮಾಗ್ರಿಗಳನ್ನು ರಾಜನು ಸ್ವತಃ ಹಿಡಿದುಕೊಂಡು ನಡೆದುಹೋಗಿ ತಲುಪುವಂತೆ ಅನತಿದೂರದಲ್ಲಿರುತ್ತಿತ್ತು. ಕವಿಯು ವಿವರಿಸಿರುವಂತೆ, ಒಂದು ದಿನ ಬೆಳಗಿನ ವೇಳೆ ಮಹಾರಾಜ ಸ್ನಾನಾದಿ ವಿಧಾನಗಳನ್ನು ತೀರಿಸಿದ ನಂತರ' ..... ದೇವತಾರ್ಚನಾಯೋಗ್ಯ ದ್ರವ್ಯ ಸಂಸೇವ್ಯಂಗಳಪ್ಪ ರಜತ ಮಹಾ ರಜತಾದಿ ವಿರಚಿತ ಪಾಂತ್ರಂಗಳಂ ಪಿಡಿದು...... ಚೈತ್ಯಾಲಯಂ..... ಪೊಕ್ಕಿ ... ಭೂತಳಪತಿ ಪೂಜಿಸಿದಂ .....'[೩೮]

ಇ. ಬೀದಿ ಮತ್ತು ರಾಜೋದ್ಯಾನಗಳ ವರ್ಣನೆ

ಅರಮನೆಯ ಸಂಕೀರ್ಣವನ್ನು ಕೇಂದ್ರವನ್ನಾಗಿರಿಸಿಕೊಂಡು, ನೇರವಾದ ಬೀದಿಗಳು, ದಿಕ್ಕುದಿಕ್ಕುಗಳಲ್ಲಿ ಹರಡಿಕೊಂಡಿರುತ್ತಿದ್ದವು. ಅವುಗಳನ್ನು ಸೋಮವೀದಿ, ಸೂರ್ಯವೀದಿಗಳೆಂದು ಕರೆಯುತ್ತಿದ್ದರು. [ವಿ.ಚ., ಸಂ.೧ ಪ ೭೮] ವಿರೂಪಾಕ್ಷ ಪಂಡಿತನ ಪ್ರಕಾರ ಆ ಮಹಾನಗರದಲ್ಲಿ ಸೂರ್ಯಬೀದಿಗಳು ೧೨೦ ಮತ್ತು ಶಶಿಬೀದಿಗಳು ೧೨೦ ಇದ್ದವು. ರಾಜನ ಅರಮನೆಯ ಮುಂದಿನಿಂದ ಹೋಗುತ್ತಿದ್ದ ಮುಖ್ಯ ಬೀದಿಯೇ 'ರಾಜಬೀದಿ' ಅದನ್ನು 'ರಾಜಮಾರ್ಗ'ವೆಂದೂ ಕರೆಯಲಾಗುತ್ತಿತ್ತು.[೩೯] ಪೂರ್ವ-ಪಶ್ಚಿಮವಾಗಿದ್ದ ಬೀದಿಗಳನ್ನು ಸೂರ್ಯಬೀದಿಗಳೆಂದೂ ಮತ್ತು ಉತ್ತರ-ದಕ್ಷಿಣವಾಗಿರುತ್ತಿದ್ದ ಬೀದಿಗಳನ್ನು ಶಶಿಬೀದಿಗಳೆಂದೂ ಕರೆಯುವುದು ರೂಢಿಯಲ್ಲಿತ್ತು. ಅವುಗಳಲ್ಲದೆ, ರಾಜಸೌಧಾವಳಿಗಳ ಹತ್ತಿರವೇ 'ಸರ್ವ ವಿನಿಯೋಗದವರಿಪ್ಪ ಚಾವಡಿಗಳೂ' ಇದ್ದುವು ಮತ್ತು ರಾಜ ಹಾಗೂ ಆತನ ಪರಿವಾರದವರ ವಿನೋದ ವಿಹಾರಗಳಿಗಾಗಿ ರಾಜೋದ್ಯಾನವು ಸನಿಹದಲ್ಲಿಯೇ ಇರುತ್ತಿತ್ತು. ಅಲ್ಲಿ ತರತರದ ಗಿಡ, ಮರ, ಬಳ್ಳಿಗಳನ್ನು ಬೆಳೆಯಿಸುತ್ತಿದ್ದರಲ್ಲದೇ ರತ್ನಗಳಿಂದ ಅಲಂಕರಿಸಲಾಗಿದ್ದ ಜಗಲಿಗಳು, ಮಂಟಪಗಳು, ಕೃತಕವಾದ ಗುಡ್ಡ, ದಿಣ್ಣೆ, ನೀರಿನಿಂದ ತುಂಬಿದ ಕೊಳಗಳು, ಕಾಲುವೆಗಳು ಮುಂತಾದವುಗಳನ್ನೂ ಏರ್ಪಡಿಸಿರುತ್ತಿದ್ದರು ಎನ್ನುವ ಅಂಶವನ್ನು ಚನ್ನಬಸವ ಪುರಾಣ ದಾಖಲಿಸಿದೆ. ಅಲ್ಲದೆ ಕವಿ ಕನಕದಾಸ, ರಾಜೋದ್ಯಾನವನ್ನು ಕುರಿತು ಹೆಚ್ಚು ಕುತೂಹಲಕಾರಿ ವಿವರಗಳನ್ನು ಒದಗಿಸಿರುತ್ತಾನೆ. ಮೇಲಿನಂತೆಯೇ, ಅರಮನೆ ಪ್ರದೇಶಕ್ಕೆ ಹೊಂದಿಕೊಂಡು ಒಂದು ರಾಜೋದ್ಯಾನವೂ ಇದ್ದು, ಅಲ್ಲಿ ಸುಂದರವಾದ ಗಿಡ, ಮರ, ಬಳ್ಳಿಗಳನ್ನು ಬೆಳೆಯಿಸಿದ್ದರಲ್ಲದೆ ಅನೇಕ ಕ್ರೀಡಾಕೊಳದ ಹೊಂಡಗಳೂ ನಿರ್ಮಿತವಾಗಿದ್ದುವು. ರಾಜ ದಂಪತಿಗಳು, ಅವರ ಪರಿವಾರದ ದಂಪತಿ ಜೋಡಿಗಳು, ಬೇರೆ ಬೇರೆಯಾಗಿ, ಏಕ ಕಾಲದಲ್ಲಿ ಬೇರೆ ಬೇರೆ ಕೊಳಗಳಲ್ಲಿ ಜಲಕ್ರೀಡೆಯಲ್ಲಿ ತೊಡಗಿ ಅವರವರ ಇಚ್ಛಾನುಸಾರ ಮನರಂಜನೆ ಪಡೆಯಲು ಅವುಗಳು ವ್ಯವಸ್ಥಿತವಾಗಿ ರಚಿತವಾಗಿದ್ದುವು. ಅವುಗಳೂ ಸಹ ಚಂದ್ರಕಾಂತ ಶಿಲೆಗಳಿಂದ ನಿರ್ಮಿತವಾಗಿದ್ದವು. ಅವುಗಳನ್ನು ಆಗಾಗ್ಗೆ ಶುದ್ಧವಾದ ನೀರಿನಿಂದ ತುಂಬಿಸಲು ಮತ್ತು ನೀರಿನ ಆಳವನ್ನು ನಿಯಂತ್ರಿಸಲು

ಅನುಕೂಲವಾಗುವಂತೆ ಅವಶ್ಯವಿದ್ದ ದೊಡ್ಡ ಗಾಲಿಗಳ ತೊಂಬುಗಳನ್ನು (ಪೆರ್‌ಗಾಲಿ ತೊಂಬು) ಅಳವಡಿಸಿದ್ದರು. ಅವುಗಳನ್ನು ಊಳಿಗದ ಹೆಂಗಸರೇ ನಿಭಾಯಿಸುತ್ತಿದ್ದರು. ಅದರಿಂದಾಗಿ ಆ ಕ್ರೀಡಾ ನಿರತ ಹೆಂಗಳೆಯರು ತಮಗೆ ಅನುಕೂಲವಾದ ಪ್ರಮಾಣದವರೆಗೆ ನೀರನ್ನು ತುಂಬಿಸಿಕೊಂಡ ನಂತರ ನೀರಾಟದಲ್ಲಿ ತೊಡಗುತ್ತಿದ್ದರು. ನೀರು ಬೀಳಲು ಏರ್ಪಡಿಸಿದ್ದ ಕಲ್ಲಿನ ಹರಿನಾಳಿಗೆಗಳು ಕೂಡ ಆನೆಯ ಸೊಂಡೆಯಾಕಾರಗಳಲ್ಲಿದ್ದು ನಿರ್ಮಾಪಕರ ಸುಂದರ ಭಾವನೆಗಳಿಗೆ ನಿದರ್ಶನಗಳಾಗಿದ್ದವು. ಮತ್ತು ಆ ಪರಿಸರದಲ್ಲಿಯೇ ಒಂದು ಸುಂದರವಾಗಿ ಅಲಂಕರಿಸಲ್ಪಟ್ಟ ಮಂಟಪವೂ ಕಾಣಬರುತ್ತಿತ್ತು. ಆ ಮಂಟಪದ ಸ್ತಂಭಗಳಿಗೆ ಮಾನವ ಪ್ರಮಾಣದ, ನೃತ್ಯದ ವಿವಿಧ ಭಾವ ಭಂಗಿಗಳನ್ನು ಪ್ರತಿನಿಧಿಸುವಂತೆ ನಿಂತಿದ್ದ ನವಯೌವ್ವನದ ನೃತ್ಯಗಾರ್ತಿಯರ ಪುತ್ಥಳಿಗಳನ್ನು ಜೋಡಿಸಿ, ಉತ್ತಮ ಕಲಾರಸಿಕತೆಯನ್ನು ಪ್ರದರ್ಶಿಸಲಾಗಿತ್ತು. ಆ ಮಂಟಪವನ್ನು ಬಣ್ಣಬಣ್ಣಗಳ ವಸ್ತ್ರಗಳಿಂದ, ಹೂವಿನ ಹಾರ, ಗೊಂಡೆಗಳಿಂದ ವಿಶೇಷವಾದ ಅಭಿರುಚಿಯಿಂದ ಅಲಂಕರಿಸಲಾಗಿತ್ತು. ಅಷ್ಟಲ್ಲದೆ, ಹತ್ತಿರದಲ್ಲಿಯೇ ವಿಹಾರಾರ್ಥಿಗಳ ಮನರಂಜನೆಗಾಗಿ ಅನೇಕ ಉಯ್ಯಾಲೆಗಳನ್ನೂ ಒದಗಿಸಿದ್ದರು. ಅವುಗಳಲ್ಲಿ ಕೆಲವು ಯಾಂತ್ರಿಕ ಕುಶಲತೆಯಿಂದ ತಯಾರಿಸಲಾಗಿದ್ದ 'ರಾಟಾಳದ ಉಯ್ಯಾಲೆ'ಗಳಾಗಿದ್ದವು ಎಂದು ಕನಕದಾಸರು ಹೇಳಿದ್ದಾರೆ.[೪೦] ಅದೇ ರೀತಿಯ ರಾಣಿಯರ ಮಹಲು ಮತ್ತು ಅರಮನೆಗಳ ಬಳಿ ಅವರಿಗಾಗಿಯೇ ಪ್ರತ್ಯೇಕ ಉದ್ಯಾನವನಗಳು ಇರುತ್ತಿದ್ದವೆಂದು ಕೆಲವು ಕವಿಗಳು ಉಲ್ಲೇಖಿಸಿದ್ದಾರೆ. ರಾಣಿಯರಿಗಾಗಿಯೇ ಅವರ ವಾಸದ ಮನೆಯ ಹಿತ್ತಲಿಗೆ ಹೊಂದಿಕೊಂಡು, 'ಪ್ರಮೋದವನ'ವೆಂದು ಕರೆಯಲಾಗುತ್ತಿದ್ದ ಒಂದು ಉದ್ಯಾನವನವಿರುತ್ತಿತ್ತು. ಅಲ್ಲಿ ವಿಧವಿಧವಾದ ಹೂ, ಹಣ್ಣುಗಳನ್ನು ಕೊಡುತ್ತಿದ್ದ, ಗಿಡ, ಮರ, ಬಳ್ಳಿಗಳನ್ನು ಬೆಳೆಯಿಸಿರುತ್ತಿದ್ದರು. ಲತಾಮಂಟಪಗಳು, ಜಲಕ್ರೀಡೆಗಾಗಿ ಉಪಯುಕ್ತವಿದ್ದ ನೀರಿನ ಕೊಳಗಳೂ ಅಲ್ಲಿ ಕಾಣಬರುತ್ತಿದ್ದವು. ಅದೇ ಉದ್ಯಾನದಲ್ಲಿ ಒಂದು ದೊಡ್ಡ ಮಾವಿನ ಮರವನ್ನು ಬೆಳೆಯಿಸಲಾಗಿತ್ತು. ಆಗಾಗ, ರಾಣಿಯು ತನ್ನ ಪರಿವಾರದವರನ್ನು ಕೂಡಿಕೊಂಡು ಅಲ್ಲಿಗೆ ಹೋಗಿ, ಆ ಮರದ ನೆರಳಲ್ಲಿ ವಿಶ್ರಮಿಸುತ್ತಿದ್ದಳು. ಅಲ್ಲದೆ, ಅವರ ಮನರಂಜನೆಗಾಗಿ ಆ ಉದ್ಯಾನದಲ್ಲಿ ವಿಧವಿಧವಾದ ಪಕ್ಷಿಗಳನ್ನು, ಮೃಗಗಳನ್ನೂ ಸಾಕಿದ್ದರು.[೪೧]

ಈ. ರಾಣೀವಾಸದ ಮಹಲುಗಳ ವರ್ಣನೆ

ವಿಜಯನಗರದ ಅರಮನೆಯ ಸಂಕೀರ್ಣದಲ್ಲಿ, ಅಂದು ರಾಣಿಯರಿಗಾಗಿಯೇ ೧೨೦ ಗೃಹಗಳಿದ್ದುದಾಗಿ ಕವಿಯೊಬ್ಬ ಹೇಳಿರುತ್ತಾನೆ.[೪೨] ರಾಜಾಲಯಗಳಿಗೆ ಹೊಂದಿಕೊಂಡು ವಿವಿಧೋಪಯೋಗಿ ಕಟ್ಟಡಗಳನ್ನು ನಿರ್ಮಿಸಿದ್ದ ಪ್ರಕಾರವೇ ರಾಣೀವಾಸದವರ ಉಪಯೋಗಕ್ಕಾಗಿ ಪ್ರತ್ಯೇಕವಾಗಿ ಬೇರೆ ಬೇರೆ ಭಾಗಗಳಿದ್ದುದನ್ನು ಕವಿಗಳು ತಿಳಿಸಿರುತ್ತಾರೆ. ಎಂದರೆ, ರಾಣಿಯರ ಉಪಯೋಗಕ್ಕಾಗಿ, ಪ್ರತ್ಯೇಕವಾದ ಓಲಗಶಾಲೆ, ಮಂತಣಶಾಲೆ, ನಾಟಕಶಾಲೆ, ಬಿನದಶಾಲೆ, ಚಂದ್ರಶಾಲೆ, ಸುಚಿತ್ರಶಾಲೆ, ಮೋಹನ ಮಂಟಪ, ಲಕ್ಷ್ಮೀ ಮಂಟಪ, ಮಲಗುವ ಮನೆ ಮುಂತಾದವುಗಳಿದ್ದವು [ರಾ.ಚ.,] ಅವುಗಳನ್ನು ವಿವರಿಸಿದ ನಂಜುಂಡ ಕವಿಯು, ಪ್ರೇಮ

ಜ್ವಾಲೆಯಿಂದ ವಿಹ್ವಲಳಾದ ರಾಣಿಯೊಬ್ಬಳ ತಾಳುಮೆಗೆಟ್ಟ ಸ್ಥಿತಿಯನ್ನು ವಿವರಿಸುವ ಸಂದರ್ಭದಲ್ಲಿ ಆ ರಾಣಿಯ ಉಪಯೋಗಕ್ಕೆಂದೇ ನಿರ್ಮಿಸಲಾಗಿದ್ದ ಇನ್ನೂ ಹಲವು ಕಟ್ಟಡಗಳನ್ನು ತಿಳಿಸಿರುತ್ತಾನೆ. ಹೆಸರುಗಳೇ ಸೂಚಿಸುವಂತೆ, ಅವುಗಳ ಸ್ವರೂಪ, ಉಪಯೋಗ ವೇದ್ಯವಾಗುತ್ತವೆ. ಅವುಗಳೆಂದರೆ, ಶಯ್ಯಾಗೃಹ, ಮಾಳಿಗೆಯ ಮೇಲಿದ್ದ ಚಂದ್ರಶಾಲೆ, ಚಿತ್ರಶಾಲೆ, ನಾಟಕಶಾಲೆ, ಓಲಗಶಾಲೆ, ವಿನೋದಶಾಲೆ, ಶೈತ್ಯಶಾಲೆ, ಭದ್ರಮಂಟಪ, ಲತಾ ಮಂಟಪ, ಮೋಹನ ಮಂಟಪ, ಮೇಲ್ಮಾಳಿಗೆಯಮನೆ ಮುಂತಾದವುಗಳು ಮುಖ್ಯವಾಗಿವೆ.[೪೩] ಕವಿ ಲಕ್ಷ್ಮೀಶನು ಸಹ ಮದನತಾಪದಿಂದ ಪೀಡಿತೆಯಾಗಿದ್ದ ರಾಜಕುಮಾರಿಯೋರ್ವಳು ನೆಮ್ಮದಿಯನ್ನರಸುತ್ತಾ ರಾಣೀವಾಸದ ವಿವಿಧ ಮಂಟಪಗಳಿಗೆ, ಸ್ಥಳಗಳಿಗೆ ಹೋಗುತ್ತಿದ್ದ ಸಂದರ್ಭವನ್ನು ವಿವರಿಸುವಾಗ ಅವುಗಳ ಹೆಸರುಗಳನ್ನು ಈ ರೀತಿ ಹೇಳುತ್ತಾನೆ. ಅವಳು ಮೊದಲಿಗೆ ಒಂದು ತಂಪಾದ ಮಂಟಪಕ್ಕೆ ಹೋಗುತ್ತಾಳೆ. ಅಲ್ಲಿ ಜಲಜಂತ್ರಗಳ ಸಹಾಯದಿಂದ ನೀರು ತುಂತುರು ತುಂತುರಾಗಿ ಮೇಲಿನಿಂದ ಬೀಳುತ್ತಿರುವಂತೆ, ಮತ್ತು ಅದೇ ಸಮಯದಲ್ಲಿ ತಂಗಾಳಿಯು ತೀಡಿ ಬೀಸುತ್ತಿರುವಂತೆ ಏರ್ಪಾಡುಗಳಿದ್ದವು. ಅವಳು ಸಂದರ್ಶಿಸಿದ ಇತರ ಸ್ಥಳಗಳೆಂದರೆ, ತಳಿರ ಹಾಸಿಗೆ ಇದ್ದ ತಾಣ, ಶಶಿಕಾಂತ ಶಿಲೆಯಿಂದ ನಿರ್ಮಿತವಾಗಿದ್ದ ವೇದಿಕೆ, ಲತೆಗಳಿಂದ ಮುಚ್ಚಲ್ಪಟ್ಟಿದ್ದ ಮಂಟಪ, ಹರಡಿದ್ದ ಮರಳು ಮತ್ತು ಮರಗಳ ನೆರಳಿನಿಂದಾಗಿ ತಂಪಾಗಿದ್ದ ಕೊಳದ ದಂಡೆ ಹಾಗೂ ತುದಿಯ ಉಪ್ಪರಿಗೆಯ ಮೇಲಿದ್ದ ಚಂದ್ರಶಾಲೆ, ಕೊನೆಯಲ್ಲಿ ಅವಳು ಅರಮನೆಯ ಮೇಲಿದ್ದ ಏಳನೆಯ ಮಹಡಿಗೆ ಹೋಗಿ ತನ್ನ ಪ್ರೇಮಿಯು ಬರುವ ಮಾರ್ಗವನ್ನು ನಿರೀಕ್ಷಿಸುತ್ತಾ ನಿಲ್ಲುತ್ತಾಳೆ.[೪೪] ರಾಣಿಯರ ಉಪಯೋಗಕ್ಕಾಗಿಯೇ ಅವರ ಅಂತಃಪುರದೊಳಗೆ ಅಥವಾ ಅದಕ್ಕೆ ಹೊಂದಿಕೊಂಡು ನಿರ್ಮಿತವಾಗಿದ್ದ ಉಪಭಾಗಗಳು (auxiliary structures) ಅಂದು ಇದ್ದವು. ಅವುಗಳಲ್ಲಿ ಮುಖ್ಯವಾದ ಸ್ನಾನದ ಮನೆ, ಶೃಂಗಾರಶಾಲೆ, ಪೂಜಾಗೃಹ, ಸೂತಿಕಾ ನಿಲಯ, ಶಯನ ಗೃಹಗಳನ್ನು ಕುರಿತು ವಿವರಗಳು ಲಭಿಸುತ್ತವೆ. ರಾಣಿಯೋರ್ವಳ ಸ್ನಾನಗೃಹವು ಚಿನ್ನಮಯವಾಗಿದ್ದು (ಜಾಂಬೂನದ), ಅದರ ಮಧ್ಯದಲ್ಲಿ (ನಟ್ಟನಡುವೆ) ನುಣುಪಾದ ಮತ್ತು ಹೊಳೆಯುತ್ತಿದ್ದ ಅಮೃತಶಿಲೆಯ ಬಂಡೆಗಲ್ಲುಗಳನ್ನು ಉಪಯೋಗಿಸಿ ನಿರ್ಮಿಸಲಾಗಿದ್ದ ಚೌಕಾಕಾರದ ತೊಟ್ಟಿಯಿತ್ತು. ಮತ್ತು ಸ್ನಾನದ ಸಮಯದಲ್ಲಿ ಉಪಯೋಗಿಸುವುದಕ್ಕಾಗಿ ಬಂಗಾರದಿಂದ ಮಾಡಿದ ನೀರಿನ ಪಾತ್ರೆಗಳನ್ನು, ಕುಂಭಗಳನ್ನು ಒದಗಿಸಿಟ್ಟಿದ್ದರು.[೪೫] ಇನ್ನು ರಾಣಿಯ ಶೃಂಗಾರ ಗೃಹವು (ಶೃಂಗಾರಾಗರ) ಸನಿಹದಲ್ಲಿಯೇ ಇದ್ದಿರಬೇಕು. ಏಕೆಂದರೆ, ರಾಣಿಯೋರ್ವಳು ಸ್ನಾನಮಾಡಿದ ನಂತರ ಶೃಂಗಾರಾಗರಕ್ಕೆ ತೆರಳಿ, ಅಲ್ಲಿ ಉಡುಗೆ ತೊಡುಗೆ, ಶೃಂಗಾರ ಸಾಧನಗಳಿಂದ ಅಲಂಕರಿಸಿಕೊಳ್ಳುವುದರಲ್ಲಿ ನಿರತಳಾಗುತ್ತಾಳೆ. ತದನಂತರ ಆ ರಾಣಿಯೇ ಪೂಜಾಗೃಹಕ್ಕೂ ಹೋಗಿ ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಾಳೆ ಅವೂ ಕೂಡ ರಾಣಿಯ ಉಪಯೋಗಕ್ಕಾಗಿ ಹತ್ತಿರದಲ್ಲಿಯೇ ನಿರ್ಮಾಣವಾಗಿದ್ದುವೆಂದು ತಿಳಿಯಬೇಕಾಗುತ್ತದೆ. ಅನಂತರ ಆ ರಾಣಿಯು ಊಟ ಮಾಡಿ, ಮಲಗುವ ಮನೆಗೆ ಹೋಗುತ್ತಾಳೆ.[೪೬] ರಾಣಿಯರ ಅಂತಃಪುರಕ್ಕೆ ಹೊಂದಿಕೊಂಡು ಇದ್ದ ಇನ್ನೊಂದು ಪ್ರತ್ಯೇಕ ಭಾಗವೇ ಸೂತಿಕಾಲಯ, ಅಲ್ಲಿ ಗರ್ಭಿಣಿಯರಾಗಿದ್ದ ರಾಣಿಯರಿಗೆ,

ಪ್ರಸವ ಸಮಯದಲ್ಲಿ ಅವಶ್ಯಕವಿರುತ್ತಿದ್ದ ಎಲ್ಲಾ ವ್ಯವಸ್ಥೆಗಳೂ ಇರುತ್ತಿದ್ದವು.[೪೭]

ಉ. ರಾಜಮಾತೆಯ ಅರಮನೆ ಮತ್ತು ಇತರೆ ಅರಮನೆಗಳ ವರ್ಣನೆ

ರಾಜನ ತಾಯಿಗಾಗಿಯೇ ಪ್ರತ್ಯೇಕವಾದ ಕಕ್ಷ ಅಥವಾ ಮನೆ ಇದ್ದ ವಿಷಯವೂ ಒಂದು ಸಂದರ್ಭದಲ್ಲಿ ತಿಳಿದು ಬರುತ್ತದೆ. ರಾಜನು, ಒಂದು ಪಾರಾಯಣದ ದಿನ ತನ್ನ ರಾಣಿಯರನ್ನು ತನ್ನ ತಾಯಿಯ ಮನೆಗೆ ಹೋಗೆಂದು ಹೇಳುತ್ತಾನೆ. ಆಗ 'ಅನುರಾಗದಿಂದ (ಆ) ಹೆಣ್ಣುಗಳು (ರಾಣಿಯರು) ತಮ್ಮತ್ತೆಯ ಮನಗೈದರು; ನೃಪನು, ಅತ್ತ ಮುನಿಗಳನ್ನು 'ಬೀಳ್ಕೊಟ್ಟು ವನಿತೆಯರೊಡಗೂಡಿ ಬರುತ್ತಿದ್ದನಮ್ಮನ ಮನೆಗಾಗ' ಎಂಬ ಪದ್ಯ ಭಾಗಗಳಿಂದ ಮೇಲಿನ ವಿಷಯವು ವೇದ್ಯವಾಗುತ್ತವೆ.[೪೮] ಇವುಗಳಲ್ಲದೆ ಅಸಾಧಾರಣ ಸಂದರ್ಭಗಳಲ್ಲಿ ಭೂಗತ ಅರಮನೆಗಳನ್ನು ನಿರ್ಮಿಸುವ ಪದ್ಧತಿಯೂ ಇದ್ದುದಾಗಿ ಕೆಲವು ಕೃತಿಗಳಿಂದ ತಿಳಿದು ಬರುತ್ತದೆ. ಒಮ್ಮೆ, ಕಥಾ ಸಂದರ್ಭಕ್ಕನುಗುಣವಾಗಿ, ರಾಜಕುಮಾರನೊಬ್ಬನು ಗೋಪ್ಯವಾದ ಜೀವನವನ್ನು ನಡೆಯಿಸಬೇಕಾಗಿ ಬರುತ್ತದೆ. ಆಗ ಸಹಾಯಕ್ಕೆ ನಿಂತ ಗುಣವಂತ ಮಂತ್ರಿಯು, ಆ ರಾಜಕುಮಾರನಿಗಾಗಿ ಒಂದು ಭೂಗತ ಅರಮನೆಯನ್ನೇ ಸೂಕ್ತ ನಿವೇಶನದಲ್ಲಿ ನಿರ್ಮಿಸುತ್ತಾನೆ. ಆಗಲೂ ಅದರೊಳಗೆ, ರಾಜಕುಮಾರನಿಗೆ ಯೋಗ್ಯವಾದ ರೀತಿಯಲ್ಲಿ ಏರ್ಪಾಡುಗಳನ್ನು ಕಲ್ಪಿಸಲಾಗಿತ್ತು. ಎಂದರೆ ಆ ಗೂಢ ರಾಜಾಲಯದೊಳಗೆ ಪ್ರಮುಖವಾದ ಒಂದು ಮಂಟಪ, ಮೊಗಸಾಲೆ, ವಿದ್ಯಾಭವನ, ಮಲಗುವ ಮನೆ, ಮಜ್ಜನ ಗೃಹ, ಭೋಜನಾಲಯ ಮುಂತಾದವುಗಳನ್ನೂ ಒದಗಿಸಲಾಗಿತ್ತು. ಆ ಭೂಗತ ರಾಜಗೃಹದ ಸನಿಹದಲ್ಲಿಯೇ ರಾಜಕುಮಾರನ ಸಹಾಯಕರು ಹಾಗೂ ವೀರಭಟರಿಗಾಗಿಯೂ ಅವಶ್ಯವಿದ್ದ ಭವನಗಳನ್ನು ನಿರ್ಮಿಸಲಾಗಿತ್ತು. ರಾಜಕುಮಾರನ ಅನುಕೂಲಕ್ಕಾಗಿ ಅವಶ್ಯ ವಸ್ತುಗಳನ್ನು ಸಲಕರಣೆಗಳನ್ನೂ ಅಲ್ಲಿ ಒದಗಿಸಿದ್ದರು. ಅವನ ಶಯ್ಯಾಗೃಹದಲ್ಲಿಯೇ ಐದು ತರಹೆಯ ಮಂಚಗಳನ್ನು ಅಳವಡಿಸಿದ್ದರು. ಯಥಾಪ್ರಕಾರ, ಅಲಂಕಾರಕ್ಕಾಗಿ, ಸಕಲವಿಧದ ರತ್ನಗಳನ್ನುಪಯೋಗಿಸಿ ರಾರಾಜಿಸುವಂತೆ ನಿರ್ವಹಿಸಲಾಗಿತ್ತು.[೪೯]

ಊ. ವಿಜಯನಗರದ ಉಪ್ಪರಿಗೆ ಮನೆಗಳ ವರ್ಣನೆ

ಅರಮನೆ ಮತ್ತು ಸಂಕೀರ್ಣದ ಇತರ ಮನೆಗಳು ಉಪ್ಪರಿಗೆಗಳಿಂದ ಕೂಡಿದವುಗಳೆಂದು ಕೆಲ ಕೃತಿಗಳು ದಾಖಲಿಸಿವೆ. ರಾಣಿಯೋರ್ವಳು ರಾಜನನ್ನು ಭೋಜನಕ್ಕೆ ಆಮಂತ್ರಿಸುವಾಗ' .... ಭೋಜನಕ್ಕಿನ್ನು ವೇಳೆ ವೇಗ್ಗಳಿಸಿದೆ ದೇವ ಮೇಲಣ ನೆಲೆಯ ಮಾಳಿಗೆಗೆ ಚಿತ್ತೈಸಿಸೆ ಬಿನ್ನವಿಸಿದಳು' ಮತ್ತು ರಾಜನು ಭೋಜನ ಮಾಡಿದ ನಂತರ ಇನ್ನೂ ಮೇಲಿನ ಉಪ್ಪರಿಗೆ ಮನೆಗೆ ಹೋಗುತ್ತಾನೆ, ... ಆರೋಗಿಸಿದ ಮೇಲ್ನೆಲೆಯಿಂದ ಮೇಲಕೆ ಸೇರಿದ ಸೋಪಾನವಿಡಿದು ಆರೋಹಿಸಿದನಾ ಹೂವಿನುಪ್ಪರಿಗೆಗೆ ನಾರಿಯ ಕೈಲಾಗುವಿಡಿದು..... ಆ ಹೂವಿನ ಉಪ್ಪರಿಗೆಯ ಮನೆಯಾದರೋ ರಾಜನಿಗಾಗಿ ನಿರ್ಮಿಸಲಾಗಿದ್ದ ಗೂಢವಾದ ಶಯನಮಂದಿರವಾಗಿತ್ತು ಮತ್ತು ಅಲ್ಲಿ ಶಕುನಿ ಮಂಚದ ವ್ಯವಸ್ಥೆಯೂ ಇತ್ತೆಂದು ಭರತೇಶ ವೈಭವ ದಾಖಲಿಸಿದೆ.[೫೦] ಕವಿ ಕನಕದಾಸನು ಸಹ ಅಂತಹ ವ್ಯವಸ್ಥೆಯನ್ನು ದೃಢೀಕರಿಸುವಾಗ, ರಾಜಕುಮಾರಿಯೋರ್ವಳು'...

ಚಂದ್ರನ ನೋಡಪೋಪಂತೆ ನೆಲೆನೆಲೆಗಡರ್ದಳಾ ಕುವರಿ.... ಎಂದು ವರ್ಣಿಸಿರುತ್ತಾನೆ. ಎಂದರೆ, ಆ ನಿವೇಶನಗಳು ಬಹು ಉನ್ನತವಾದ ಉಪ್ಪರಿಗೆಗಳಿಂದ ಕೂಡಿದವುಗಳಾಗಿದ್ದುವು. ಅಂತಹ ಮಹಡಿಗಳ ನಿವೇಶನಗಳಲ್ಲಿ, ರಾಜಕುವರಿ, ಮಂತ್ರಿಯ ಮಗಳು ಮುಂತಾದ ಸಖಿಯರು, ಸೇವಕಿಯರೊಡಗೂಡಿ ಬಗೆ ಬಗೆಯ ವಿನೋದಾವಳಿಗಳಲ್ಲಿ, ಆಟಗಳಲ್ಲಿ ಸಮಯ ಕಳೆಯುತ್ತಿದ್ದರು ಎಂದೂ ವಿವರಿಸಲಾಗಿದೆ. ಮತ್ತು ಆ ಮಹಡಿಗಳ ಮೇಲೆ ಉನ್ನತವಾದ ಬುರುಜುಗಳೂ ಅಥವಾ ಗೋಪುರ ಶಿಖರಗಳೂ, ಅವುಗಳೊಳಗೆ ಪ್ರಾಂಗಣ ಅಥವಾ ಸಭಾಂಗಣಗಳಿದ್ದು, ಹೆಂಗಳೆಯರಿಗೆ ಸಮಯ ಕಳೆಯಲು ಅನುಕೂಲವಾಗಿದ್ದವು. ಕೆಲವು ಬಾರಿ ರಾಜನೂ ಸಹ ಅಂತಹ ಉಪ್ಪರಿಗೆ ಮನೆಗಳಲ್ಲಿದ್ದ ಸಭಾಂಗಣಗಳಿಗೆ ಹೋಗಿ ರಾಣಿವಾಸದವರ ಜೊತೆಯಲ್ಲಿ ವಿನೋದಾವಳಿಗಳಲ್ಲಿ ಭಾಗವಹಿಸುತ್ತಿದ್ದನು. ಈ ಅಂಶವನ್ನು ವಿವರಿಸುವ ಪದ್ಯಭಾಗಗಳು ಇಂತಿವೆ.,.... ಮಹೀನಾಥನ್, ... ಇದು ಕಾಂತ ಶಿಲಾಮಯವಾದ..... ಅಗ್ರಸೌಧ ಶಿಖರಾಗ್ರದೊಳ್ .....ಮೇಳದ ವಿಳಾಸಿನೀಕಳಾಪದೊಡಗೂಡಿ ಲೀಲೆಯಿಂದೋಲಗಂಗೊಟ್ಟಿರ್ದು...' ಮತ್ತು '.....ಹುಣ್ಣಿಮೆಯಲ್ಲಿ ಚಂದ್ರಮುಖಿಯರ್ (ರಾಣೀವಾಸದವರು) ನೆಲೆಮಾಡದ ಚೂಳಿಕಾಗ್ರದೊಳ್....."ಎಂದು ಮುಂತಾಗಿ ವರ್ಣಿಸುತ್ತಾರೆ.[೫೧] ಹಂಪೆಯಲ್ಲಿ ಈಗಲೂ ಕಾಣಬರುತ್ತಿರುವ 'ಕಮಲಮಹಲು', ಅದರ ಸನಿಹದಲ್ಲಿಯೇ ಇರುವ ನಾಲ್ಕು ಹಾಗೂ ಮೂರು ಹಂತಗಳಿಂದ ಕೂಡಿರುವ 'ಕಾವಲು ಗೋಪುರ' ಮತ್ತು ಚಂದ್ರಗಿರಿಯಲ್ಲಿರುವ 'ರಾಜಾಮಹಲು', 'ರಾಣೀ ಮಹಲು'ಗಳನ್ನು ಇದಕ್ಕೆ ಉದಾಹರಣೆಗಳೆಂಬಂತೆ ಸ್ಮರಿಸಿಕೊಳ್ಳಬಹುದು. ಇಲ್ಲಿ 'ಧರ್ಮನಾಥ ಪುರಾಣ'ದಲ್ಲಿರುವ ವರ್ಣನೆಯನ್ನೂ ಗಮನಿಸಬಹುದು. ಅದರ ಪ್ರಕಾರ, ಆ ರಾಜಾಲಯದ ಕಟ್ಟಡಗಳು, ಒಂದರ ಮೇಲೆ ಒಂದರಂತೆ ಪೇರಿಸಿಟ್ಟ ಪಾತ್ರೆಗಳಂತೆ, ಏಳು ಹಂತಗಳಲ್ಲಿ ಬಹು ವಿಧ ಅಲಂಕಾರ ಸಹಿತವಾಗಿ ನಿರ್ಮಿತವಾದವುಗಳಾಗಿದ್ದವು. ಅದನ್ನು ವಿವರಿಸುವ ಪದ್ಯಭಾಗವೂ ಹೀಗಿದೆ: '..... ಅಡಕಿಲ್ಗೊಂಡೊಪ್ಪು ವೇಳುಂ ನೆಲೆಗಳ ಮಣಿ ಮಾಡಂಗಳಿಂದಂ ರಾಜಾಲಯಮುಖಿಳನುತಂ ಸಪ್ತಕಕ್ಷಾ ಸಮೇತಂ.....' ಅದೇ ಕವಿಯು ಮುಂದುವರಿದು, ಕುತೂಹಲಕಾರಿ ವಿಷಯವನ್ನು ಬಹಿರಂಗ ಪಡಿಸಿರುತ್ತಾನೆ. ಎಂದರೆ, ರಾಜರು ಮತ್ತು ಕೆಲವು ಬಾರಿ ರಾಜರಾಣಿಯರು ಜೊತೆಯಾಗಿ ಆ ಉಪ್ಪರಿಗೆ ನಿವೇಶನದಲ್ಲಿದ್ದು ಸಭಾಮಂಟಪಗಳಲ್ಲಿ ಒಡ್ಡೋಲಗಗಳನ್ನು ಸಕಲ ಪರಿಹಾರ ಸಮೇತರಾಗಿ ಜರುಗಿಸುತ್ತಿದ್ದರು.[೫೨]

೩. ರಾಜ–ರಾಣಿಯರ ಓಲಗ ಶಾಲೆಗಳ ವರ್ಣನೆ

ರಾಜಾಲಯ ಮತ್ತು ಅದರ ಸಂಕೀರ್ಣದಲ್ಲಿ ಕಾಣಬರುತ್ತಿದ್ದ ನಿವೇಶನಗಳೆಲ್ಲವುಗಳಿಗಿಂತ ಬಹು ಪ್ರಮುಖವಾದ ಹಾಗೂ ಪ್ರಧಾನ ಸ್ಥಾನವು ರಾಜನ ಒಡ್ಡೋಲಗ ಮಂಟಪ ಅಥವಾ ಆಸ್ಥಾನ ಮಂಟಪಕ್ಕೆ ಇತ್ತು. ಆಗಲೇ ತಿಳಿಸಿರುವಂತೆ, ಕವಿಗಳು ಅದನ್ನು ಬೇರೆ ಬೇರೆ ಹೆಸರುಗಳಿಂದ ಸಂದರ್ಭೋಚಿತವಾಗಿ ಕರೆದಿರುತ್ತಾರೆ. ಆ ಓಲಗಶಾಲೆಯು ಅರಮನೆಯ ಮುಂಭಾಗದ ಹಜಾರದಲ್ಲಿದ್ದು, ಅದನ್ನು 'ದಿವಾನ ಚಾವಡಿ'ಯೆಂದೂ ಕರೆಯಲಾಗುತ್ತಿತ್ತು.

ಅದರಿಂದಾಚೆಗೆ ಮುಂದೆ ಅರಮನೆಯ ಪ್ರಮುಖದ್ವಾರ ಅಥವಾ ಹೆಬ್ಬಾಗಿಲಿದ್ದು, ಅದು ಸದಾ ಚಟುವಟಿಕೆಗಳ ತಾಣವಾಗಿತ್ತು ಎಂದು ರಾಮನಾಥ ಚರಿತೆ ದಾಖಲಿಸಿದೆ[೫೨]. ಆ ಮಹಾಸ್ಥಾನ ಮಂಟಪವು ಬಹು ವಿಶಾಲವಾದುದಾಗಿತ್ತು. ಅದು ಹತ್ತು ಸಾವಿರ ಕಂಭಗಳ ಮಂಟಪವಾಗಿತ್ತೆಂದು ಕವಿತಾ ಶೈಲಿಯಲ್ಲಿ ಹೇಳಲಾಗಿದೆ.[೫೩] ಕೆಲವು ಬಾರಿ ರಾಜಸಭೆಯನ್ನು ಸೂರ್ಯಾಸ್ತ ನಂತರವೂ ಕರೆಯಲಾಗುತ್ತಿತ್ತು. ಅದಕ್ಕಾಗಿ ಸೂಕ್ತ ಬೆಳಕಿನ ಏರ್ಪಾಟುಗಳನ್ನು ಮಾಡಲಾಗಿರುತ್ತಿತ್ತು. ಅಲ್ಲಿ ಸೇರುತ್ತಿದ್ದ ರಾಜಸಭೆಗಳಲ್ಲಿ, ರಾಜ್ಯಕ್ಕೆ ಸಂಬಂಧಿಸಿದ ಮಹತ್ವದ, ಪ್ರಮುಖವಾದ ಹಾಗೂ ವಿವಿಧ ವಿಷಯಗಳು ಪರಿಶೀಲನೆಗೊಳಗಾಗುತ್ತಿದ್ದವು. ಹಾಗಾಗಿ ಅಂತಹ ರಾಜಸಭೆಗಳಲ್ಲಿ ಪ್ರಧಾನರು, ಮಂತ್ರಿಗಳು, ಸರದಾರರು ಮುಂತಾದ ಮುಖ್ಯ ಅಧಿಕಾರಿಗಳಲ್ಲದೆ ಸಾಮಂತರಾಜರು, ಮಾಂಡಲೀಕರು, ರಾಜಕುಮಾರರು, ಗಣ್ಯನಾಗರಿಕರು, ಶಾಸ್ತ್ರಕೋವಿದರು, ವಿದ್ವಾಂಸರು, ಪುರೋಹಿತರು, ಧಾರ್ಮಿಕ ಆಚಾರ್ಯರು, ಹಲವು ಬಾರಿ ಪರ ರಾಜ್ಯಗಳಿಂದ ಬಂದ ರಾಜ ಪ್ರತಿನಿಧಿಗಳು, ರಾಯಭಾರಿಗಳು, ರಾಜನ ಊಳಿಗದವರು, ಕಲಾವಿದರು ಮುಂತಾದವರು ಉಪಸ್ಥಿತರಾಗಿರುತ್ತಿದ್ದರು.[೫೪] ಆ ಕಾರಣಗಳಿಂದಾಗಿ ಆ ಓಲಗಶಾಲೆಗೆ ಹೆಚ್ಚಿನ ಪ್ರಾಧಾನ್ಯತೆ ಇತ್ತು. ಆದುದರಿಂದ ಅಲ್ಲಿಯ ವ್ಯವಸ್ಥೆಗಳಿಗೆ, ಅಲಂಕರಣಗಳಿಗೆ ಹೆಚ್ಚಿನ ಗಮನಕೊಟ್ಟು ನಿರ್ವಹಿಸುತ್ತಿದ್ದರು. ಹಾಗಾಗಿ ರಾಜನ ಓಲಗಶಾಲೆಯು 'ಸೌಭಾಗ್ಯ ಲಕ್ಷ್ಮಿಯ ದಿವ್ಯ ಸದನವೋ, ಮಧುನೃಪನ ನಿಳಯವೋ, ಶಾರದೆಯ ಮಂಟಪವೋ' ಎಂಬಂತೆ ಇದು ಮೆರೆಯುತ್ತಿತ್ತು ಎಂದು ಗೋವಿಂದ ವೈದ್ಯನು ವರ್ಣಿಸಿರುತ್ತಾನೆ.[೫೫] ಇಲ್ಲಿ ಕವಿ ಲಕ್ಷ್ಮೀಶನು ತನ್ನ ಗ್ರಂಥವಾದ 'ಜೈಮಿನಿ ಭಾರತ'ದಲ್ಲಿ ನಿರೂಪಿಸಿರುವ ವಿವರಣೆಗಳನ್ನೂ ಪರಿಗಣಿಸಬಹುದು. ಅವು, ರಾಜನ ಓಲಗ ಮಂಟಪವನ್ನು ಕುರಿತು ಬಹು ಚಿತ್ತಾಕರ್ಷಕ, ಕುತೂಹಲಕಾರಿ ಹಾಗೂ ಸ್ವಾರಸ್ಯಕರ ಚಿತ್ರವನ್ನು ನಮ್ಮ ಮುಂದಿರಿಸುವುದರೊಂದಿಗೆ ವಿಸ್ಮಯವನ್ನುಂಟುಮಾಡುತ್ತವೆ. "ಆ ರಾಜಸಭಾಂಗಣವು ಹತ್ತು ಸಾವಿರ ಕಂಭಗಳಿಂದ ಕೂಡಿದ ಒಂದು ಬಹು ವಿಶಾಲವಾದ ಆಸ್ಥಾನ ಮಂಟಪವಾಗಿತ್ತು (ಇಲ್ಲಿ ಹಂಪೆಯಲ್ಲಿ ಈಗಲೂ ಕಾಣಬರುವ ನೂರುಕಂಬಗಳನ್ನು ಹೊಂದಿದ್ದ ವಿಶಾಲ ಸಭಾಮಂಟಪ(**audience hall**) ಸ್ಮಾರಕ ಕಟ್ಟಡ(**monument**)ವನ್ನು ಜ್ಞಾಪಿಸಿಕೊಳ್ಳಬಹುದು) ಅದರ ನೆಲೆಗಟ್ಟನ್ನು ಅಮೃತಶಿಲೆಯಿಂದ ನಿರ್ಮಿಸಲಾಗಿತ್ತು. ಜಗುಲಿಯನ್ನು ಮರಕತಗಳಿಂದ. ಗೋಡೆಗಳನ್ನು ನೀಲರತ್ನಗಳಿಂದ, ಕಂಬಗಳನ್ನು ವಜ್ರಗಳಿಂದ, ಮದನ ಕೈಗಳನ್ನು (ನಾಗಂದಿಗೆಗಳನ್ನು)ಹೊಳೆಯುವ ವೈಢೂರ್ಯಗಳಿಂದ, ಬೋದಿಗೆಗಳನ್ನು ಗೋಮೇದಿಕ ರತ್ನಗಳಿಂದ, ತೊಲೆಗಳನ್ನು ಪುಷ್ಯರಾಗಗಳಿಂದ, ಲೋವೆಗಳನ್ನು ಮಾಣಿಕ್ಯಗಳಿಂದ ಅಲಂಕರಿಸಲಾಗಿತ್ತು. ಬಂಗಾರದ ತಗಡಿನಿಂದ ಹೊದಿಸಲಾಗಿದ್ದ ಆ ಚಾವಡಿ ಮಂಟಪದ ನಾಲ್ದೆಸೆಗಳಲ್ಲಿ, ಅಲ್ಲಲ್ಲಿಗೆ ಮುತ್ತುಗಳ ಗೊಂಡೆ, ಗೊಂಚಲು, ಗುಚ್ಛಗಳಿಂದ ಶೃಂಗರಿಸಿದ್ದರು. ಅಲ್ಲದೆ ಅಲ್ಲಲ್ಲಿ ಹವಳಗಳಿಂದ ಅಲಂಕಾರ ಹೊಂದಿದ್ದ ಪುತ್ಥಳಿಗಳನ್ನೂ ಅಳವಡಿಸಿದ್ದರು."[೫೬] ಅಷ್ಟಲ್ಲದೆ, ಆ ಓಲಗಮಂಟಪದಲ್ಲಿ, ಸಜೀವವಾಗಿವೆಯೇನೋ ಎಂಬಂತೆ ಕಾಣಬರುತ್ತಿದ್ದ ನವರತ್ನ ಖಚಿತವಾದ ಪುತ್ಥಳಿಗಳನ್ನು ಅಲ್ಲಲ್ಲಿಗೆ, ಬಹುಶಃ ಗೋಡೆಗಳಿಗೆ, ಕಂಭಗಳಿಗೆ ಹೊಂದಿಕೊಂಡಂತೆ, ನಿಲ್ಲಿಸಿ ಪ್ರದರ್ಶಿಸಿದ್ದರು.

ಅವುಗಳೋ ವಿವಿಧ ಕ್ರಿಯೆ, ಭಾವ, ಭಂಗಿ, ಅಭಿನಯಗಳನ್ನು ನಿರೂಪಿಸುವ ಆಕರ್ಷಕ ಸ್ತ್ರೀ ರೂಪದ ಕಲಾಕೃತಿಗಳಾಗಿದ್ದವು. ಅದೇ ಸಭಾಭವನದಲ್ಲಿ, ಆ ಪುತ್ಥಳಿಗಳು ಮಾತ್ರವಲ್ಲದೆ ಬಹು ಕುಶಲತೆಯಿಂದ ತಯಾರಿಸಲಾದ(ಬಹುಶಃ ಎರಕಹೊಯ್ದು ತಯಾರಿಸಲಾದ) ವಿವಿಧ ಪಕ್ಷಿಗಳ ಮತ್ತು ಮೃಗಗಳ ಪ್ರತಿಕೃತಿಗಳೂ ಅಲ್ಲಲ್ಲಿ ಕಾಣಬರುತ್ತಿದ್ದವು. ಅವುಗಳು ಮಾತ್ರವಲ್ಲದೆ, ಬಹು ಮನೋಹರವಾಗಿದ್ದ ನಾನಾದೇಶಗಳ (ಪ್ರಪಂಚಗಳ) ಚಿತ್ರಪಟಗಳೂ ಅಲ್ಲಿ ಪ್ರದರ್ಶಿತವಾಗಿದ್ದುವು. 'ವಿರಿಂಚಿ ಸೃಷ್ಟಿಯೊಳುಳ್ಳ ಮೂಜಗದ ಪ್ರಪಂಚಗಳ ಚಿತ್ರಪತ್ರಂಗಳೆಸೆದಿರ್ದುವಾ ಸಭೆಯೊಳ್ಮನೋಹರಮೆನೆ' ಮತ್ತು ಅದೇ ಸಭಾಮಂಟಪದಲ್ಲಿ ಅವಶ್ಯವಿದ್ದ ಬೆಳಕಿನ ವ್ಯವಸ್ಥೆಯನ್ನೂ ಬಹು ಜಾಣ್ಮೆ ಹಾಗೂ ವೈಚಾರಿಕತೆಯಿಂದ ಏರ್ಪಡಿಸಲಾಗಿತ್ತು. ಆ ಉದ್ದೇಶವನ್ನು ಸಾಧಿಸುವುದಕ್ಕಾಗಿ, ನಾನಾ ಜಾತಿಯ ಮತ್ತು ವಿವಿಧ ಬಣ್ಣ, ಹೊಳಪು ಅಥವಾ ಪ್ರಕಾಶಗಳನ್ನು ಹೊಂದಿದ್ದ ವಜ್ರಗಳು ಮುಂತಾದ ಅಮೂಲ್ಯ ಮಣಿರತ್ನಗಳನ್ನು ಉಪಯೋಗಿಸಿ, ಜೋಡಿಸಿ ವ್ಯವಸ್ಥೆಗೊಳಿಸಲಾಗಿತ್ತು. ಆ ವ್ಯವಸ್ಥೆಯು ಎಷ್ಟು ಪರಿಣಾಮಕಾರಿಯಾಗಿತ್ತೆಂದರೆ, ಅಲ್ಲಿ ಏರ್ಪಡಿಸಲಾಗಿದ್ದ ಆಹ್ಲಾದಕರವಾದ ಬೆಳಕಿನಲ್ಲಿ ಹಗಲಾವುದು ರಾತ್ರಿ ಯಾವುದೆಂಬ ಭೇದವೇ ತಿಳಿಯದಂತಿತ್ತು.'...... ದಿವಾರಾತ್ರಿಯುಂಟೆಂಬ ಕಾಲಭೇದವನರಿಯದಾ ಮಹಾಸಭೆ......' ಮತ್ತು ಹೆಚ್ಚಿನ ವ್ಯವಸ್ಥೆಯೆಂದರೆ, ಆ ಸಭಾಗೃಹದಲ್ಲಿ ವಿವಿಧ ಸುವಾಸಿತ ದ್ರವ್ಯಗಳನ್ನೂ, ಕರ್ಪೂರ ತೈಲದ ದೀಪಗಳನ್ನೂ ಉಪಯೋಗಿಸುತ್ತಿದ್ದರು. ಹೀಗೆ ಸಕಲ ಸೌಭಾಗ್ಯಗಳಿಂದ ಒಪ್ಪುತ್ತಿದ್ದ ಆ ಮಹಾಸಭಾಭವನವು ಇಂದ್ರನ ಓಲಗ ಮಂಟಪದ ಸೌಭಾಗ್ಯಕ್ಕಿಂತ ಎಂಟು ಮಡಿ ಹೆಚ್ಚಾಗಿತ್ತೆಂದು ಅದೇ ಕವಿಯು ವರ್ಣಿಸಿರುತ್ತಾನೆ. ಮೇಲಿನ ವಿವರಗಳನ್ನೆಲ್ಲಾ ಪರಿಗಣಿಸಿ, ಆ ಒಡ್ಡೋಲಗ ಶಾಲೆಯು ಒಂದು ಕುತೂಹಲಕಾರಿಯಾದ ಕಲಾ ಪ್ರದರ್ಶನ ಶಾಲೆಯ(meseum) ಹಾಗೆ, ಕ್ರಿ.ಶ.೧೪ನೇ ಶತಮಾನದಲ್ಲಿಯೇ ವ್ಯವಸ್ಥೆಗೊಂಡು ರಂಜಿಸುತ್ತಿತ್ತೆಂದು ಹೇಳಬಹುದಾಗಿದೆ.

ಬಹುಮುಖ್ಯವಾದ, ಬೃಹತ್ ಪ್ರಮಾಣದಲ್ಲಿ ಆಚರಿಸಬೇಕಾಗಿದ್ದ ಹಬ್ಬಗಳ, ಸಾರ್ವಜನಿಕ ಸಮಾರಂಭಗಳ ವೈಭವಯುಕ್ತ ಆಚರಣೆಯ ಸಂದರ್ಭಗಳಲ್ಲಿ, ಅರಮನೆಯ ಸಂಕೀರ್ಣದ ಮುಂದೆ ಇರುತ್ತಿದ್ದ ವಿಶಾಲ ಪ್ರಾಂಗಣವನ್ನುಪಯೋಗಿಸುವುದು ಪರಿಪಾಠವಾಗಿತ್ತು. ಕವಿ ರತ್ನಾಕರವರ್ಣಿಯ ವಿವರಣೆಯ ಪ್ರಕಾರ, ಮಹಾನವಮಿ ಹಬ್ಬದ ಆಚರಣೆಯನ್ನು ಅರಮನೆಯ ಮುಂದಿನ ಕಡೆಯ ಹಜಾರದೊಳ್, ವಾರಣವೈರಿ ಪೀಠವನೇರಿ (ಸಿಂಹಾಸನವನ್ನೇರಿ) ಓಲಗಗೊಟ್ಟು' ನಡೆಯಿಸುತ್ತಿದ್ದನು ಎಂದು ಭರತೇಶ ವೈಭವದ ಕವಿ ದಾಖಲಿಸಿದ್ದಾನೆ.[೫೭] ಅಲ್ಲದೆ ಪಟ್ಟದರಾಣಿಯರಿಗಾಗಿ ಪ್ರತ್ಯೇಕವಾದ ಓಲಗ ಶಾಲೆಗಳಿರುತ್ತಿದ್ದುವೆಂದು ಕವಿಗಳು ಹೇಳಿರುತ್ತಾರೆ. ಅಲ್ಲಿ ರಾಣಿಯರು ನಡೆಯಿಸುತ್ತಿದ್ದ ಒಡ್ಡೋಲಗಗಳಲ್ಲಿ ಸ್ತ್ರೀಯರು ಮಾತ್ರವೇ ಭಾಗವಹಿಸುತ್ತಿದ್ದರೆಂಬ ಅಂಶ ಧರ್ಮನಾಥ ಪುರಾಣದಿಂದ ತಿಳಿದುಬರುತ್ತದೆ. ಅಂತಹ ಸಮಯಗಳಲ್ಲಿ, ರಾಣಿಯು ಓಲಗಸಭೆಯ ಮಧ್ಯದಲ್ಲಿ ಸಿಂಹಾಸನದಲ್ಲಿ ಆಸೀನಳಾಗಿರುತ್ತಿದ್ದರೆ, ಇತರ 'ಭೂಪಾಳಕರರಸಿಯರ ನಿಕರಮುಂ, ಕ್ಷತ್ರಿಯ ಕುಮಾರಿಯರ ಮೊತ್ತಮುಂ ಸೇವಾ ವಿನೋದ ನಿಮಿತ್ತಂ ಬಂದು

ಸುತ್ತಲು ಕಿಕ್ಕಿರಿಗಿರಿದು ಕುಳ್ಳಿರುತ್ತಿದ್ದರೆಂದು ವರ್ಣಿಸಲಾಗಿದೆ. ಇನ್ನೊಂದೆಡೆ ಆ ವಿಷಯವನ್ನೇ ಹೇಳುತ್ತಾ ರಾಣಿಯ ಓಲಗಶಾಲೆಯು ಮೇಗಣ ನೆಲೆಯ ಉಪ್ಪರಿಗೆಯ ಮನೆ ಭಾಗದಲ್ಲಿದ್ದುದಾಗಿ ಕವಿಯು ತಿಳಿಸುತ್ತಾನೆ. ಒಂದು ದಿನ, ರಾಜನು ತನ್ನ ದಿನ ನಿತ್ಯದ ಕಾರ್ಯಗಳನ್ನು ಮುಗಿಸಿ ಅರಮನೆಗೆ ಹಿಂತಿರುಗಿ ಬಂದು, ರಾಜಾಂಗಣದಲ್ಲಿ ಅರಸು ಮಕ್ಕಳನ್ನು ಬೀಳ್ಕೊಟ್ಟ ನಂತರ, 'ಮೇಗಣ ನೆಲೆಯ ಉಪ್ಪರಿಗೆಯ ಕಳಕಳರವಮಂ ಕೇಳ್ದು ಪಟ್ಟಮಾದೇವಿಯೋಲಗ ಶಾಲೆಗಭಿಮುಖನಾಗಿ ನರನಾಥಂ ಬಂದು ಪೊಕ್ಕಂ ನಿಜಸತಿಯ ಸಭಾಗೇಹಂ' ಎಂದು ವಿವರಿಸುವ ಪದ್ಯಭಾಗದಿಂದ ವೇದ್ಯವಾಗುತ್ತದೆ.[೫೮]

ಈ ಮೇಲಿನ ವಿವರಣೆಗಳನ್ನು ಗಮನಿಸಿದರೆ ಹಂಪಿ ಮತ್ತು ಹಂಪಿಯ ಕುರುಹುಗಳಾಗಿರುವ ಹಲವು ದೇವಸ್ಥಾನಗಳನ್ನು ಆ ದೇವಸ್ಥಾನಗಳ ಕಂಬ ಮಂಟಪಗಳನ್ನು ಕವಿಗಳು, ತಮ್ಮ ಕೃತಿಗಳಲ್ಲಿ ವಿವರಿಸಿದ್ದಾರೆ. ಈ ಮೂಲಕ ಕವಿಗಳಿಗೆ ಹಂಪಿಯ ಭೌಗೋಳಿಕ ಆಯಾಮವನ್ನು ಸಾಹಿತ್ಯದಲ್ಲಿ ಪ್ರಸ್ತುತಪಡಿಸಿರುವುದನ್ನು ಕಾಣಬಹುದು.

ಋ. ಶೃಂಗಾರತೋಟ ಮತ್ತು ಜಲಕ್ರೀಡಾ ಸರೋವರ

ರಾಜರ ಮತ್ತು ಅವರ ಪರಿವಾರದವರ ವಿಹಾರ ವಿನೋದಗಳಿಗಾಗಿ ಒಂದು ರಾಜೋದ್ಯಾನವಿರುತ್ತಿತ್ತು. ಅದು 'ಶಿಂಗಾರದೋಟ'ವೆಂದಾಗಿದ್ದು, ಮಹಾನಗರದ (ರಾಜಧಾನಿಯ) ಹೊರವಲಯದಲ್ಲಿ ಸ್ವಲ್ಪ ದೂರದಲ್ಲಿರುತ್ತಿತ್ತು. ಅದನ್ನು ನೋಡುವುದಕ್ಕಾಗಿಯೇ ರಾಜನಿಂದ ನಿಯೋಜಿತರಾದ ನುರಿತ ವನಪಾಲಕರೂ ಇರುತ್ತಿದ್ದರು. ಪ್ರತಿ ವರ್ಷ ವಸಂತ ಋತುವಿನ ಕಾಲದಲ್ಲಿ, ವನಪಾಲಕನು ಅರಮನೆಗೆ ಹೋಗಿ, ವಿಹಾರಾರ್ಥವಾಗಿ ರಾಜನನ್ನು ರಾಜೋದ್ಯಾನಕ್ಕೆ ಆಮಂತ್ರಿಸುವುದು ಒಂದು ಸಂಪ್ರದಾಯ.

ಒಮ್ಮೆ ವಸಂತ ಕಾಲದಲ್ಲಿ, ವನಪಾಲಕನ ಭಿನ್ನಹದ ಮೇರೆಗೆ ರಾಜನು ತನ್ನ ಸಕಲ ಪರಿಹಾರ ಸಮೇತ ರಾಜೋದ್ಯಾನಕ್ಕೆ ವಿಹಾರಾರ್ಥವಾಗಿ ಹೋಗುತ್ತಾನೆ. ಆತನು, ಆತನ ರಾಣಿಯೂ ಪಟ್ಟದಾನೆಯನ್ನು ಏರಿ ಹೋಗುತ್ತಾರೆ. ರಾಣಿಯರ ಸಖಿಯರು, ಊಳಿಗದವರು, ರಾಜಕುಮಾರರು ಮುಂತಾದವರು ಇತರ ಆನೆಗಳನ್ನೇರಿ ರಾಜನನ್ನು ಹಿಂಬಾಲಿಸುತ್ತಾರೆ. ಎಂದರೆ ರಾಜೋದ್ಯಾನವು, ಮಹಾನಗರದ ಹೊರವಲಯದಲ್ಲಿ ಸ್ವಲ್ಪದೂರದಲ್ಲಿತ್ತೆಂದು ತಿಳಿಯುತ್ತದೆ.[೫೯] ದಟ್ಟವಾಗಿ ಬೆಳೆಸಲಾಗಿದ್ದ ವಿವಿಧ ಗಿಡ, ಮರ, ಬಳ್ಳಿಗಳಿಂದ ಬಹು ಸುಂದರವಾಗಿ ಕಾಣುತ್ತಿದ್ದ ಆ ಶೃಂಗಾರದೋಟದ ಮಧ್ಯದ ಬಯಲಿನಲ್ಲಿ 'ವಸಂತ ಮಂಟಪ'ವೆಂಬ ಒಂದು ಬಹು ವಿಧದಲ್ಲಿ ಅಲಂಕರಿಸಿಟ್ಟ, ತಂಪಾದ ಕ್ರೀಡಾ ವಿನೋದ ಮಂಟಪವು ಶೋಭಿಸುತ್ತಿತ್ತು.[೬೦] ಆ ವನದಲ್ಲಿಯೇ, ಮತ್ತೊಂದೆಡೆಯಲ್ಲಿ ವನಲಕ್ಷ್ಮಿಯ ನಾಭಿಯಂತೆ, 'ಜಲಕ್ರೀಡಾ ಸರೋವರ'/ 'ಲೀಲಾಸರೋವರ'ವೂ ವ್ಯವಸ್ಥೆಗೊಂಡಿರುತ್ತಿತ್ತು. ಅದರ ನಾಲ್ಕು ಪಕ್ಕಗಳಲ್ಲಿ ಚಂದ್ರಕಾಂತ ಶಿಲೆ ಮತ್ತು ಮಣಿರತ್ನಗಳಿಂದ ಅಲಂಕರಿಸಲಾಗಿದ್ದ ಸೋಪಾನಗಳ ಪಂತಿಗಳನ್ನು ನಿರ್ಮಿಸಿದ್ದರು. ಆ

ಸೋಪಾನಗಳೋ, ಅಲ್ಲಿ ಭಾಗವಹಿಸುತ್ತಿದ್ದ ರಾಜಪರಿವಾರದ ಹೆಂಗಳೆಯರಿಗೆ ಶ್ರಮವಾಗದಿರಲೆಂಬ ಉದ್ದೇಶದಿಂದ, 'ಸೂಖಾರೋಹಣಾವರೋಹಣ' ಒದಗಿಸುವಂತೆ ರೂಪಿತವಾಗಿದ್ದ ಸೋಪಾನಗಳ ಪಂಕ್ತಿಗಳಾಗಿದ್ದುವು ಮತ್ತು ಆ ತಟಾಕದ ಸುತ್ತಲೂ ದಡಗಳ ಮೇಲೆ ಬೆಳ್ಳಿಯಿಂದ ತಯಾರಿಸಲಾದ ದೊಡ್ಡ ದೊಡ್ಡ ಪಾತ್ರೆಗಳನ್ನಿರಿಸಿ, ಅವುಗಳಲ್ಲಿ ಕಸ್ತೂರಿ, ಕರ್ಪೂರ, ಚಂದನ, ಕುಂಕುಮ ಮಿಶ್ರಿತ ನೀರನ್ನು ಶೇಖರಿಸಿಟ್ಟು, ಕ್ರೀಡಾಸಮಯದಲ್ಲಿ ಉಪಯೋಗಿಸಲು ಅನುಕೂಲವಾಗುವಂತೆ ವ್ಯವಸ್ಥೆಗೊಳಿಸಿದ್ದರು.[೬೧] ಕವಿ ವಿರೂಪಾಕ್ಷ ಪಂಡಿತನು, ರಾಜನ ಕೇಳೀ ವನವನ್ನು 'ಚೈತ್ರರಥ'ವೆಂದು ಹೇಳುತ್ತಾ ಅದು ನಗರದ ತಪ್ಪಲೊಳಗೆ ಸಹಸ್ರ ಯೋಜನದಷ್ಟು ವಿಸ್ತಾರವಾಗಿತ್ತೆಂದು ವಿವರಿಸಿರುತ್ತಾನೆ. ಮುಂದುವರೆದು, ಅದು ತರತರದ ಹೂ, ಮೊಗ್ಗು, ಹಣ್ಣು ಹಂಪಲುಗಳಿಂದ ಭರಿತವಾದ. ಗಿಡ, ಮರ, ಬಳ್ಳಿಗಳಿಂದ ಮತ್ತು ತಂಪಾದ ನೀರಿನ ಕೊಳಗಳಿಂದ ಶೋಭಿಸುತ್ತಿತ್ತೆಂದು ವರ್ಣಿಸಿರುತ್ತಾನೆ./ ಅಲ್ಲದೆ, ಅಲ್ಲಿ ತಳಿರ ಮನೆಗಳು, ತಳಿರ ಚಪ್ಪರಗಳು, ಚಾವಡಿಗಳು, ಮಲಗುವ ಮಾಡಗಳು, ತಳಿರ ಉಯ್ಯಾಲೆಗಳು, ನಿರಂತರ ಹರಿವ ನೀರಿನ ಕಾಲುವೆಗಳು, ಪರಿಮಳಯುಕ್ತ ಜಲವನ್ನು 'ಜೀರ್ಕೊಣವಿಯಿಂದೆಸೆವ ಪೂಗಳ ಬೊಂಬೆಗಳ ಸಾಲುಗಳು' ಮುಂತಾದವು ವನವಿಹಾರಾರ್ಥಿಗಳ ವಿನೋದ, ಮನರಂಜನೆಗಾಗಿ ಏರ್ಪಾಡಾಗಿದ್ದುವು. ಮತ್ತು ಅಲ್ಲಿ ಸುಂದರವಾಗಿ ನಿರ್ಮಿಸಲಾಗಿದ್ದ ಒಂದು ವಿಶಾಲವಾದ ಅಂತರಂತರದಲ್ಲಿ ಕ್ರಮಬದ್ಧವಾದ ಸೋಪಾನಗಳಿಂದ ಕೂಡಿದ್ದ ಸರೋವರವೂ ಇತ್ತು. ರಾಜನ ಮತ್ತು ಅವನ ಪರಿವಾರದವರ ಜಲಕ್ರೀಡೆಗಳಿಗೆ ಸೂಕ್ತವಾಗಿ ನಿರ್ಮಾಣವಾಗಿತ್ತು.[೬೨] ಇನ್ನೊಬ್ಬ ಕವಿಯು, ಅದನ್ನು 'ರಾಜನ ಬಾಹ್ಯೋಪವನ'ವೆಂದು ಕರೆದು, ಅಲ್ಲಿ ವಿಹಾರಾರ್ಥಿಗಳ ಮನರಂಜನೆಗಾಗಿ, ಸಸ್ಯ ಸಂಪದವಲ್ಲದೆ, ಕೃತಕ ಗಿರಿ, ಕಂದರ, ಕಣಿವೆ, ಗವಿಗಳನ್ನೂ ನಿರ್ಮಿಸಿದ್ದರೆಂದು ವಿವರಿಸುತ್ತಾನೆ ಮತ್ತು ಚಂದ್ರಕಾಂತ ಶಿಲೆಯಿಂದ ರಚಿಸಲಾಗಿದ್ದ ಸುಂದರವಾದ ಸೋಪಾನಗಳನ್ನು ಹೊಂದಿದ್ದ ಸರಸಿಯೊಂದು ಇದ್ದುದಾಗಿ ಹೇಳುತ್ತಾನೆ.[೬೩] ಭಾಸ್ಕರ ಕವಿಯು ವಿವರಿಸಿರುವಂತೆ, ಮೇಲಿನ ವ್ಯವಸ್ಥೆಗಳಲ್ಲದೆ, ರಾಜೋದ್ಯಾನದಲ್ಲಿ ಒಂದು ವನಮಂಟಪವಿತ್ತು. ರಾಜನ ಪರಿವಾರವು ಆನೆ, ಕುದುರೆಗಳ ಮೇಲೆ ಮತ್ತು ರಥಗಳಲ್ಲಿ ಪ್ರಯಾಣ ಮಾಡಿ ಆ ವನವನ್ನು ತಲುಪುತ್ತಾರೆ. ಮೊದಲಿಗೆ ವಸಂತನ ಪೂಜೆಯನ್ನು ನೆರವೇರಿಸಿ ಅನಂತರ ವನ ವಿಹಾರ, ಜಲಕ್ರೀಡೆ, ಉಯ್ಯಾಲೆಯಾಟ ಮುಂತಾದ ಮನರಂಜನಾ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ. ಹೀಗೆ ಆ ಪರಿವಾರವು ಒಂದು ತಿಂಗಳ ಪರಿಯಂತ ಆ ಉದ್ಯಾನದಲ್ಲಿ ವಿವಿಧ ರೀತಿಯಲ್ಲಿ ಆನಂದಿಸುತ್ತಾರೆ.[೬೪] ಅದೇ ರೀತಿ 'ಮೋಹನ ತರಂಗಿಣಿ'ಯಲ್ಲಿ ಆ ಶೃಂಗಾರ ವನವು ಪುರದ ಹೊರಗೆ ನಿರಂತರವಾಗಿ ನೀರಿನಿಂದ ತುಂಬಿ ಹರಿಯುತ್ತಿದ್ದ ನದಿ ದಂಡೆಯ ಮೇಲೆ ಬಹು ಸುಂದರವಾಗಿ ಕಂಗೊಳಿಸುತ್ತಿತ್ತೆಂದು ಹೇಳಲಾಗಿದೆ.[೬೫] ಪದ್ಮಣಾಂಕ ಕವಿಯು ವಿವರಿಸಿರುವ ಪ್ರಕಾರ, ಆ ರಾಜೋದ್ಯಾನದಲ್ಲಿ ಒಂದಕ್ಕಿಂತಲೂ ಹೆಚ್ಚಾಗಿ ಜಲಕ್ರೀಡಾ ಕೊಳಗಳಿದ್ದುವು. ರಾಜ, ರಾಣಿಯರು, ಅವರ ಪರಿವಾರದವರು ಬೇರೆ ಬೇರೆಯಾಗಿ ಆ ಕೊಳಗಳಲ್ಲಿ ಕ್ರೀಡಾಮನರಂಜನೆಗಳಲ್ಲಿ

ನಿರತರಾಗುವಂತೆ ಅವುಗಳು ನಿರ್ಮಿತವಾಗಿದ್ದವು. ವಿನೋದದ ಸಮಯದಲ್ಲಿ, ಆ ಕೊಳಗಳ ನೀರಿಗೆ ಸುವಾಸನಾಯುಕ್ತ ದ್ರವ್ಯಗಳಾದ ಚಂದನದ ಹುಡಿ, ಕಸ್ತೂರಿ, ಕುಂಕುಮ ಹಾಗೂ ವಿವಿಧ ಬಣ್ಣ, ಸುವಾಸನೆಗಳಿಂದ ಕೂಡಿದ್ದ ಹೂವಿನ ದಳಗಳು, ಎಲೆಗಳು, ಬೇರುಗಳು ಮುಂತಾದವುಗಳನ್ನು ಸೇರಿಸುತ್ತಿದ್ದರು.[೬೬] ಸನಿಹದಲ್ಲಿಯೇ ಕ್ರೀಡಾ ನಂತರ ವಿಶ್ರಮಿಸುವುದಕ್ಕಾಗಿ ಸುಸಜ್ಜಿತವಾದ ಲತಾಮಂಟಪವು ಹಾಗೂ ಪೂಜಾಕಾರ್ಯಗಳನ್ನು ನೆರವೇರಿಸಲು ಅನುಕೂಲವಾಗುವಂತೆ ದೇವಮಂದಿರವೂ ಇದ್ದುವು.[೬೭]

ಏ. ಅರಮನೆಗಳಲ್ಲಿನ ಶಯನ ಗೃಹಗಳ ವರ್ಣನೆ

ಅಂದಿನ ವಿಜಯನಗರ ಪಟ್ಟಣದ ರಾಜ, ರಾಣಿಯರ ಶಯನಗೃಹಗಳ ನಿರ್ಮಾಣದ ವಿವರಗಳನ್ನು ಕೆಲ ಸಮಕಾಲೀನ ಕೃತಿಗಳು ಈ ಮುಂದಿನಂತೆ ದಾಖಲಿಸಿವೆ. 'ಭರತೇಶ ವೈಭವ' ಕಾವ್ಯ ಗ್ರಂಥದಲ್ಲಿ, ರಾಜ ಶಯ್ಯಾಗೃಹಕ್ಕೆ, 'ಪುಷ್ಕರಾವತಿ' ಎಂಬ ಹೆಸರಿದ್ದುದಾಗಿ ಕವಿಯು ಹೇಳಿರುತ್ತಾನೆ. ಮತ್ತು ರಾಜನ ಸೆಜ್ಜೆಮನೆಯು ಒಂದು ಭಾಗದಲ್ಲಿ, ಬಹುಶಃ ಚೌಕಾದ ಪ್ರಾಂಗಣದ ನಟ್ಟನಡುವೆ ಇದ್ದು, ರಾಣಿಯರ ಸೆಜ್ಜೆ ಮನೆಗಳು ಅದರ ಸುತ್ತಲೂ ನಾಲ್ಕು ದೆಸೆಗಳಲ್ಲಿ ನೇರವಾದ ಸಾಲುಗಳಲ್ಲಿ ನಿರ್ಮಿತವಾಗಿದ್ದುವು. ಆ ರಾಜನಿಗೆ ಅನೇಕ ರಾಣಿಯರಿದ್ದುದರಿಂದಾಗಿ ಆ ರೀತಿಯ ಏರ್ಪಾಟನ್ನು ಮಾಡಿದ್ದಿರಬೇಕು. ಈ ಎಲ್ಲಾ ರಾಣಿಯರ ಸಾಲು ಸೆಜ್ಜೆವನಗಳ ಮುಂದಿದ್ದ ಮೊಗಸಾಲೆಯಲ್ಲಿ (corridor) ಮದನಕೈಗಳಿಂದ ನೇತಾಡುತ್ತಿದ್ದ ಸಾಲುಗಳಲ್ಲಿ ದೀಪಗಳ ಸರಣಿಯನ್ನೇರ್ಪಡಿಸಲಾಗಿತ್ತು. ಆ ಮನೆಗಳೆಲ್ಲವೂ ಬಂಗಾರ, ನವರತ್ನಗಳಿಂದ ವಿಶೇಷವಾಗಿ ಅಲಂಕೃತವಾಗಿದ್ದುವೆಂಬುದು ಸಾಮಾನ್ಯ. ಅಲ್ಲಿ ಮಾತನಾಡುವ ಸಾಕಿದ ಗಿಳಿಗಳೂ ಇದ್ದವು. ರಾಜನ ಶಯ್ಯಾಗೃಹದಲ್ಲಿ ಒದಗಿಸಲಾಗಿದ್ದ ರಾಜ ಮಂಚಕ್ಕೆ 'ಸಿಂಹವಾಹಿನಿ' ಎಂಬ ಹೆಸರಿತ್ತು.[೬೮] ಕವಿ ಕನಕದಾಸ ವರ್ಣಿಸಿರುವಂತೆ, ಅರಮನೆಯಲ್ಲಿ ಸೆಜ್ಜೆಮನೆಯಿದ್ದಲ್ಲಿಗೆ ಹೋಗಲು ಇದ್ದ ಒಳಪಥದ (inner passage) ಉದ್ದಕ್ಕೂ ಅಲ್ಲಲ್ಲಿಗೆ ಕೈಗಳಲ್ಲಿ ದೀಪಗಳನ್ನು ಹಿಡಿದುಕೊಂಡಿದ್ದ ಸುಂದರ ಪುತ್ಥಳಿಗಳು ಮತ್ತು ಅಳಮಕಾರಿಕ ಹೂಗಳ ಹಾರಗಳನ್ನು ಹಿಡಿದುಕೊಂಡಿದ್ದ ಮದನಕೈಗಳನ್ನೂ ಅಳವಡಿಸಲಾಗಿತ್ತು. ಆ ಸೆಜ್ಜೆ ಮನೆಯ ಒಳಗಡೆಯಲ್ಲೂ ಅಲ್ಲಲ್ಲಿಗೆ ದೀಪಗಳನ್ನು ಪ್ರದರ್ಶಿಸುತ್ತಿದ್ದ ಸ್ತ್ರೀ ರೂಪದ ಬಂಗಾರದ ಶಿಲ್ಪಮೂರ್ತಿಗಳನ್ನು ಜೋಡಿಸಲಾಗಿತ್ತು. ಮತ್ತು ಅಲ್ಲಿಯ ಗೋಡೆಗಳನ್ನು ಬಹುಕುಶಲತೆ ಮತ್ತು ಅಭಿರುಚಿಯಿಂದ ಚಿತ್ರಿಸಲಾಗಿದ್ದ ವರ್ಣಚಿತ್ರಗಳಿಂದ ಸಿಂಗರಿಸಲಾಗಿತ್ತು. ಅವುಗಳು, ರತಿ ಮತ್ತು ಮದನ ಅವರ ಶೃಂಗಾರ, ಕ್ರೀಡಾವಿನೋದಗಳನ್ನು ವಿಧವಿಧವಾಗಿ ಪ್ರತಿನಿಧಿಸುತ್ತಿದ್ದುವು. ಆ ಶಯ್ಯಾಗೃಹದ ಮಧ್ಯದಲ್ಲಿ ಅತಿ ವೈಭವದಿಂದ ಅಲಂಕರಿಸಲಾಗಿದ್ದ ಚಪ್ಪರಮಂಚ ಮತ್ತು ಅದರ ಮೇಲೆ ಮೆತ್ತನೆಯ ಸುಪ್ಪತ್ತಿಗೆಯನ್ನು ಇರಿಸಿದ್ದರು.[೬೯] ರಾಣಿಯರಿಗಾಗಿಯೂ ಪ್ರತ್ಯೇಕವಾದ ಶಯ್ಯಾಗೃಹಗಳಿರುತ್ತಿದ್ದುವೆಂಬುದನ್ನು ಮೇಲೆ ತಿಳಿಸಿಯಾಗಿದೆ. ಅವುಗಳೂ ಸಹಾ ಯಥಾರೀತಿ ವೈಭವವನ್ನು ಪ್ರದರ್ಶಿಸುವ ಅಲಂಕಾರಗಳಿಂದ ಕೂಡಿದ್ದುವು. ಒಂದೆಡೆ ಕವಿಯು ಹೇಳುವಂತೆ, ರಾಣಿಯೊಬ್ಬಳ ಸೆಜ್ಜೆ ಮನೆಯಲ್ಲಿ ನಾಲ್ಕು

ವಿಧವಾದ ರತ್ನ ಖಚಿತವಾದ ಶಯ್ಯಾ ಮಂಚಗಳನ್ನೇರ್ಪಡಿಸಲಾಗಿತ್ತು; ಅವುಗಳ ಹೆಸರುಗಳು ಚಪ್ಪರಮಂಚ, ಸೆಳೆಮಂಚ, ಶಕುನಿಮಂಚ ಮತ್ತು ತೂಗುಮಂಚ ಎಂದಾಗಿದ್ದುವು. ಅಲ್ಲದೆ ಅಲ್ಲಿ ವಿವಿಧ ಸುವಾಸನೆಯುಕ್ತ ದ್ರವ್ಯಗಳಿಂದ ತುಂಬಿದ್ದ ಭರಣಿಗಳನ್ನು ಮತ್ತಿತರ ಅಗತ್ಯ ವಸ್ತುಗಳನ್ನೂ ಒದಗಿಸಲಾಗಿತ್ತು.ಮತ್ತೊಂದು ಕಡೆ, ಅನೇಕ ಬಗೆಯ ಸುವಾಸನಾದ್ರವ್ಯಗಳನ್ನು ರಾಣಿಯ ಸೆಜ್ಜೆಮನೆಯಲ್ಲಿ ಹರಡಿ, ಸಿಂಪಡಿಸಿರುತ್ತಿದ್ದರು. ಅಲ್ಲದೆ ಆ ಶಯನ ಮಂದಿರದಲ್ಲಿ ಸುವಾಸನಾಯುಕ್ತ ಲಾಳದಬೇರುಗಳಿಂದ ತಯಾರಿಸಲಾದ ತಡಕೆತೆರೆಗಳನ್ನುಪಯೋಗಿಸಿ, ಅವುಗಳ ಮೂಲಕ ಪನ್ನೀರು, ವಾಸನಾಯುಕ್ತ ತಂಗಾಳಿಯು ಒಳಗೆ ಹರಡುವ ವ್ಯವಸ್ಥೆಯನ್ನು ಮಾಡಲಾಗಿತ್ತು.[೨೦] ಕವಿ ಕನಕದಾಸರು, ಕಥಾ ಸಂದರ್ಭದಲ್ಲಿ ಬರುವ ಶೋಭನ ಪ್ರಸ್ತದ ಚಾವಡಿಯೂ ಸಹ ಮೇಲಿನಂತೆ ಸುಂದರವಾಗಿಯೂ, ಮನೋಹರವಾಗಿಯೂ, ಭವ್ಯವಾಗಿಯೂ ಸಿಂಗರಿಸಲಾಗಿತ್ತೆಂದು ತಿಳಿಸುತ್ತಾನಲ್ಲದೆ, ಆ ಚಾವಡಿಯು ಅನೇಕ ಕಂಬಗಳಿಂದ ಕೂಡಿದುದಾಗಿತ್ತು ಮತ್ತು ಅಲ್ಲಿಯ ವಾಸ್ತು ಭಾಗಗಳಿಗೆಲ್ಲ ಅಮೂಲ್ಯ ಮಣಿರತ್ನಗಳನ್ನು ಕೂಡಿಸಿ ಅಲಂಕರಿಸಲಾಗಿತ್ತೆಂದು ಹೇಳುತ್ತಾನೆ.[೨೧] ಕವಿ ದೇಪರಾಜನ ವಿವರಣೆಯ ಪ್ರಕಾರ ರಾಜಕುಮಾರಿಯೋರ್ವಳ ಶಯ್ಯಾಗೃಹವು, ಮಹಡಿಯ ತುತ್ತತುದಿಯಲ್ಲಿದ್ದುದಾಗಿ ತಿಳಿಯುತ್ತದೆ. ಕುರುವಾಡದ ಅಗ್ರಶಾಲೆಯೊಳು) ಅದರೊಳಗೆ ಮಣಿಖಚಿತವಾದ ಮಂಚ, ಹಂಸ ತುಪ್ಪಳಗಳಿಂದ ತಯಾರಿಸಲಾದ ಮೆತ್ತನೆಯ ಹಾಸಿಗೆ, ಬೀಸಣಿಗೆ, ನೀರಿನ ಪಾತ್ರೆ, ಕರ್ಪೂರ, ಮತ್ತಿತರ ಸುಗಂಧ ದ್ರವ್ಯಗಳ ಭರಣಿಗಳು, ವೀಣೆ, ದಂಡಿಗೆ, ಮುಂತಾದ ಸಂಗೀತವಾದ್ಯ ವಿಶೇಷಗಳು, ಸಾಕಿದ ಮುದ್ದಿನ ಪಕ್ಷಿ ಪ್ರಾಣಿಗಳು, ತಾಂಬೂಲ ವೀಳೆಯಗಳ ಸಂಬಳಿಗೆಗಳು ಮುಂತಾದ ಸಲಕರಣೆಗಳನ್ನು ವ್ಯವಸ್ಥೆಗೊಳಿಸಲಾಗಿತ್ತು.[೨೨]

ಐ. ನಾಟಕ ಮತ್ತು ಅವಲೋಕನಾ ಶಾಲೆಗಳ ವರ್ಣನೆ

ಅಂದು ಅಂತಃಪುರದ ಸಂಕೀರ್ಣದಲ್ಲಿ ಮತ್ತೊಂದು ಆಕರ್ಷಕ ಕಟ್ಟಡ ಭಾಗವಿತ್ತು. ಅದು ನಾಟಕಶಾಲೆಯಾಗಿತ್ತು ಎನ್ನುವ ವಿವರಗಳನ್ನು ಸಮಕಾಲೀನ ಕೃತಿಕಾರರು ತಮ್ಮ ಕೃತಿಗಳಲ್ಲಿ ದಾಖಲಿಸಿದ್ದಾರೆ. ಅದು ರಾಜ, ರಾಣಿಯರ ವಿನೋದಕ್ಕಾಗಿ, ಮನೋರಂಜನೆಗಾಗಿ ರಾಣಿಯ ಓಲಗಶಾಲೆಗೆ ಹತ್ತಿರವೇ ಇರುತ್ತಿತ್ತು. ಸಾಮಾನ್ಯವಾಗಿ ಅಲ್ಲಿಯ ಕಾರ್ಯಕ್ರಮಗಳಲ್ಲಿ ರಾಜನೂ ಉಪಸ್ಥಿತನಾಗಿರುತ್ತಿದ್ದನು. ಹಲವು ಬಾರಿ ಆತನ ಪರಿವಾರದವರೂ ಜೊತೆಯಲ್ಲಿರುತ್ತಿದ್ದರು. ಅಲ್ಲಿ ಹಾಡುಗಾರಿಕೆ, ಸಂಗೀತ, ವಾದ್ಯ ಸಂಗೀತ, ನೃತ್ಯ, ಜನಪದ ನೃತ್ಯ, ಭಾರತ, ರಾಮಾಯಣ, ಭಾಗವತ ಮುಂತಾದ ಕಾವ್ಯಗಳ ವಾಚನ ಮತ್ತಿತರ ಮನರಂಜನಾ ಕಾರ್ಯಗಳು ವಿದ್ವತ್ಪೂರ್ಣವಾಗಿ ಜರುಗುತ್ತಿದ್ದವು.[೨೩] ಇನ್ನೊಂದು ವಿವರಣೆಯ ಪ್ರಕಾರ ಆ ಮನೋರಂಜನಾ ಶಾಲೆಯು ಅಮೃತ ಶಿಲೆಗಳಿಂದ ನಿರ್ಮಿತವಾಗಿತ್ತು. 'ಮಹೀನಾಥನು ಒಂದು ದಿನ ಇಂದುಕಾಂತ ಶಿಲಾಮಯವಾದ ಅಗ್ರಸೌಧ ಶಿಖರಾಗ್ರದೊಳ್..... ಮೇಳದ ವಿಳಾಸಿನೀ ಕಳಾಪದೊಡಗೂಡಿ ಲೀಲೆಯಿಂದ ಓಲಗಗೊಟ್ಟಿರ್ದ.....' ಮತ್ತು ಅದು ಉಪ್ಪರಿಗೆ ಮನೆಯ ಮೇಲಿನ ಮಹಡಿಯಲ್ಲಿ ರಚಿತವಾಗಿತ್ತು.[೨೪] ಕವಿ ರತ್ನಾಕರವರ್ಣಿಯ ನಾಟಕಶಾಲೆಯನ್ನು ಕುರಿತು ಹೇಳಿರುವ ಹೃದಯಂಗಮ ವರ್ಣನೆಯು ಮುಂದಿನ ವಿವರಗಳಿಂದ ವೇದ್ಯವಾಗುತ್ತದೆ. ರಾಜನು ಒಂದು ದಿನ ರಾಣಿಯಿಂದ

ನಿಯೋಜಿತಳಾದ ಪರಿಚಾರಿಕೆಯೊಬ್ಬಳ ವಿನಂತಿಯ ಮೇರೆಗೆ, ಆ ದಿನದ ಮನರಂಜನಾ ಕಾರ್ಯಕ್ರಮಗಳನ್ನು ವೀಕ್ಷಿಸಲು ಅರಮನೆಯಿಂದಿಳಿದು 'ನಾಟಕಶಾಲೆ'ಗೆ ಹೋಗಿ ಅಲ್ಲಿ ಒದಗಿಸಲಾಗಿದ್ದ ಸಿಂಹಾಸನದಲ್ಲಿ ಆಸೀನನಾಗುತ್ತಾನೆ. ಆ ನಾಟಕ ಶಾಲೆಯು ಬಹುವಿಧ ಅಲಂಕಾರಗಳಿಂದ ಸಿಂಗರಿಸಲ್ಪಟ್ಟಿದ್ದು ಅದರ ಭವ್ಯ ವರ್ಣನೆಯನ್ನು 'ಕರ್ಣಾಟಿಸಿ ಪೇಳಲಾನರಿಯೆ' ಎಂದು ಹೇಳಿ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿ, ಅದು ಕೋಟಿರತ್ನಗಳಿಂದ ಕೂಡಿದ 'ಸುರರ ವಿಮಾನಕೆ ಸಾಟಿ'ಯೆಂದು ಸಂಕ್ಷಿಪ್ತವಾಗಿ ಹೇಳಿದ್ದಾನೆ. ಆ ನಾಟಕಶಾಲೆಯ ಗೋಡೆಗಳ ಮೇಲೆ, ವಿವಿಧ ಭಂಗಿ, ಭಾವನೆ, ಕ್ರಿಯೆ, ವಿನೋದಾವಳಿಗಳಲ್ಲಿ ನಿರತರಾಗಿರುವುದು ಮುಂತಾದವುಗಳನ್ನು ಭಿತ್ತರಿಸುವಂತೆ ಚಿತ್ರಿತವಾದ ಹೆಣ್ಣು ಗಂಡುಗಳ ಬಹು ಆಕರ್ಷಕ ವರ್ಣ ಚಿತ್ರಗಳೂ ರಂಜಿಸುತ್ತಿದ್ದುವು. ಅದು ಧರೆಗೆ ವಿಸ್ಮಯವಾದ ನಾಟಕ ಶಾಲೆಯದಾಗಿತ್ತು.[೭೫] ಆ ನಾಟಕ ಶಾಲೆಗೆ 'ವರ್ಧನಾವತಿ' ಎಂಬ ಹೆಸರಿದ್ದುದಾಗಿ ಇನ್ನೊಂದೆಡೆ ಹೇಳಿದ್ದಾನೆ. ಮತ್ತೊಂದು ಸಂದರ್ಭದಲ್ಲಿ, ಅಂತಃಪುರದ ರಾಜನ ಹೆಂಡತಿಯರಿಗೆ ವಿವಿಧ ವಿಷಯಗಳಲ್ಲಿ ಅಭ್ಯಾಸ ಮಾಡಿಸುತ್ತಿದ್ದು 'ಪಂಡಿತೆ' ಎಂಬ ಸೇವಕಳು (ರಾಯನ ಪೆಂಡಿರಿಗೋದಿಸಿದವಳು) ಆ ದಿನದ ಅಂತಃಪುರದ ಮನರಂಜನಾ ಕಾರ್ಯಕ್ರಮಗಳಿಗೆ ರಾಜನನ್ನು ಆಮಂತ್ರಿಸುತ್ತಾಳೆ. ರಾಜನ ಸಮ್ಮತಿಸಿದುದನ್ನು ತಿಳಿದ ರಾಣಿಯರೆಲಲಾ 'ಮೇರು ಸೌಧ'ವೆಂಬ ನಾಮದ ಉಪ್ಪರಿಗೆಯ ಮಂಟಪಕ್ಕೆ ತವಕದಿಂದ ಹೋಗುತ್ತಾರೆ ಎಂದರೆ, ಅಂತಃಪುರದ ಮನೋರಂಜನಾ ಮಂಟಪ ಅಥವಾ ನಾಟಕ ಶಾಲೆಯನ್ನು ಬಹು ಎತ್ತರದಲ್ಲಿ ಉಪ್ಪರಿಗೆಯಲ್ಲಿ ವ್ಯವಸ್ಥೆಗೊಳಿಸಿರುತ್ತಿದ್ದರು. ಅಲ್ಲಿ ವಿಧವಿಧವಾದ ವಿನೋದಾವಳಿ, ಹಾಡುಗಾರಿಕೆ, ವಾದ್ಯ ಸಂಗೀತ, ನೃತ್ಯ, ನಾಟಕ, ಕಾವ್ಯವಾಚನ, ಮುಂತಾದವುಗಳು ಜರುಗುತ್ತಿದ್ದುವೆಂಬುದನ್ನು ವಿವರಿಸುವುದಕ್ಕಾಗಿ ಕವಿಯು ಆರು ಸಂಧಿಗಳನ್ನೇ ಮುಡುಪಾಗಿರಿಸಿದ್ದಾನೆ.[೭೬]

ಅರಮನೆಯ ಸಂಕೀರ್ಣದ ಉದ್ಯಾನದಲ್ಲಿಯೇ ಶಿಖರಪ್ರಾಯವಾದ, ಉನ್ನತವಾದ ಏಳು ಮಹಡಿಗಳಿಂದ ಕೂಡಿದ ಕಟ್ಟಡವಿತ್ತು. ಅದರ ಏಳನೆಯ ಹಂತವನ್ನು, ರಾಜ ಮತ್ತು ಆತನ ಪರಿವಾರದವರು ಅವಲೋಕನಾ/ದಿಶಾವಲೋಕನಾ ಸ್ಥಳವನ್ನಾಗಿ ಉಪಯೋಗಿಸುತ್ತಿದ್ದರು. ಆ ಸ್ಥಳದಿಂದ ಎಲ್ಲಾ ದಿಕ್ಕುಗಳಲ್ಲಿ ಸುಂದರವಾಗಿರುವುದನ್ನು ವೀಕ್ಷಿಸಿ ಸಂತೋಷಪಡುತ್ತಿದ್ದರು ಆಪ್ರಾಸಾದದೊಳಗೆಯೇ ಒಂದು ಸಭಾಂಗಣವಿರುತ್ತಿದ್ದು, ಅಲ್ಲಿ ರಾಜ, ರಾಣಿ, ಪರಿವಾರದವರಿಗಾಗಿ ನೃತ್ಯ ಮುಂತಾದ ಕಲಾ ಪ್ರದರ್ಶನಾ ಕಾರ್ಯಗಳೂ ಜರುಗುತ್ತಿದ್ದುವೆಂದು ಕವಿಯು ವರ್ಣಿಸಿರುತ್ತಾನೆ. ಇಲ್ಲಿಯ ಸಂದರ್ಭದಲ್ಲಿ "ವಸಂತಮಾಲೆ ಮತ್ತು ಕಾಮಲತೆ ಎಂಬ ಇಬ್ಬರು ನೃತ್ಯ ಪ್ರವೀಣೆಯರು 'ವಸಂತ ವಿಹರಣಂ' ಎಂಬ ನೃತ್ಯನಾಟಕವನ್ನು ಪ್ರದರ್ಶಿಸಿ, ವಸಂತ ಕಾಲದ ವನವಿಹರಣ ವಿನೋದಕ್ಕೆ ದಯಮಾಡಿಸಬೇಕೆಂದು ಸೂಚ್ಯವಾಗಿ ರಾಜನನ್ನು ಆಮಂತ್ರಿಸುತ್ತಾನೆ" ಎನ್ನುವ ವಿವರಗಳು ಇದನ್ನು ದೃಢಪಡಿಸುತ್ತವೆ.[೭೭]

೭. ಅರಮನೆಯ ಭೋಜನಶಾಲೆಯ ವರ್ಣನೆ

ರಾಜ ಮತ್ತು ಆತನ ಪರಿವಾರದವರಿಗಾಗಿ ಪ್ರತ್ಯೇಕವಾದ ಭೋಜನ ಶಾಲೆ ಇರುತ್ತಿತ್ತು. ದಿನದ ಕಾರ್ಯಕಲಾಪಗಳು, ಒಡ್ಡೋಲಗ ಮುಗಿದ ನಂತರ, ರಾಜನು ತನ್ನ ಮಂತ್ರಿಗಳು, ದಳಪತಿಗಳು ಹಾಗೂ ಇತರ ಉನ್ನತ ಅಧಿಕಾರಿಗಳು ಮತ್ತು ಗಣ್ಯ ಬಂಧು ಜನರೊಡಗೂಡಿ ಆ ಭೋಜನ ಶಾಲೆಯಲ್ಲಿ ಪಂತಿಯೊಳು ಕಳಿತು ಭೋಜನ ಮಾಡುತ್ತಿದ್ದನು. ಅಲ್ಲಿ ರಾಜನಿಗಾಗಿ ನವರತ್ನಗಳಿಂದ ಖಚಿತವಾದ ಪೀಠವಿರುತ್ತಿತ್ತು. ಊಟದ ಸಮಯದಲ್ಲಿ ಅನುಕೂಲವಾಗಿರುವಂತೆ ಸಾಲು ದೀಪಗಳನ್ನು ವ್ಯವಸ್ಥೆಗೊಳಿಸಿರುತ್ತಿದ್ದರು. ಊಟದ ಸಲಕರಣೆಗಾಗಿ ಬಂಗಾರದಿಂದ ತಯಾರಿಸಲಾದ ಹರಿವಾಣ, ಬಟ್ಟಲು ಅಡ್ಡಣಿಗೆ ಮುಂತಾದ ಉಪಕರಣಗಳೂ ಇದ್ದುವು ಮತ್ತು ವಿಧವಿಧವಾದ ಸ್ವಾದಿಷ್ಟ ಭೋಜನ ಪದಾರ್ಥಗಳನ್ನು ಉಣಬಡಿಸುವವರು ಅರಮನೆ ಊಳಿಗದ ತರುಣಿಯರಾಗಿದ್ದರು.[೨೮]

೪.೧.೩. ಆಧುನಿಕ ಕನ್ನಡ ಕವಿಗಳ/ಲೇಖಕರ ಕೃತಿಗಳಲ್ಲಿ ಹಂಪಿ

೪.೧.೩.೧.ಕಾವ್ಯ

ಹಂಪಿ ಮತ್ತು ವಿಜಯನಗರ ಸಾಮ್ರಾಜ್ಯವನ್ನು ಕುರಿತು ಪ್ರತ್ಯೇಕವಾದ ಕವನ ಸಂಕಲನಗಳು ಹೊರಬಂದಿಲ್ಲ. ಆದರೆ ಹಲವು ಬಿಡಿಗವನಗಳು ಮಾತ್ರ ಬರೆಯಲ್ಪಟ್ಟಿವೆ. ಅವು ಪತ್ರಿಕೆಗಳಲ್ಲಿ, ಸ್ಮರಣ ಸಂಚಿಕೆಗಳಲ್ಲಿ ಬಿಡಿಬಿಡಿಯಾಗಿ ಪ್ರಕಟವಾಗಿವೆ. ವಿಜಯನಗರವನ್ನು ಕುರಿತು ಬರೆದಿರುವ ಕವನಗಳು ಅಂದಿನ ವೈಭವವನ್ನು ಸಾರುವುದರ ಜೊತೆಗೆ, ಮತ್ತೆ ಅಂತಹ ವೈಭವದ ನಾಡನ್ನು ನಾವು ಕಾಣಬೇಕಾಗಿದೆ ಎನ್ನುವ ಆಶಯವನ್ನು ಬಹುತೇಕ ಕವನಗಳಲ್ಲಿ ವ್ಯಕ್ತಗೊಂಡಿವೆ. ಇದೇ ಆಶಯ ಹೊತ್ತು ಕಾವ್ಯ ರಚಿಸಿದವರಲ್ಲಿ ಕುವೆಂಪು, ಬೇಂದ್ರೆ, ವಿ.ಕೃ.ಗೋಕಾಕ, ಗೋಪಾಲಕೃಷ್ಣ ಅಡಿಗ ಮೊದಲಾದವರು ಪ್ರಮುಖರಾಗಿದ್ದಾರೆ. ಈ ಆಧುನಿಕ ಕವಿಗಳ ಚಿಂತನೆಯ ಮೂಸೆಯಲ್ಲಿ ಹಂಪಿಯ ಚಿತ್ರಣ ಹೇಗೆ ಮೂಡಿ ಬಂದಿದೆ ಎನ್ನುವುದನ್ನು ಇಲ್ಲಿ ಚರ್ಚಿಸಲಾಗಿದೆ.

ಅ. ಬಿ.ಎಂ.ಶ್ರೀ.

ಬಿ.ಎಂ.ಶ್ರೀಯವರ 'ಕನ್ನಡತಾಯಿ ನೋಟ' ಕವನವು ವಿಜಯನಗರ ೬೦೦ನೇ ವರ್ಷದ ಆಚರಣೆಯ ಸಂದರ್ಭದಲ್ಲಿ ಬರೆದ ಕವಿತೆಯಿದು. ಶ್ರೀಯವರು ಕನ್ನಡ ನಾಡನ್ನೆಲ್ಲ ಸುತ್ತುತ್ತಾ ಕನ್ನಡ ನಾಡಿನ ಸೀಮೆಯನ್ನು, ಸೊಬಗನ್ನು, ಹಿರಿಮೆಯನ್ನು ಸಾರುತ್ತಾ ಹಂಪಿಗೆ ಬರುತ್ತಾರೆ. ಅಲ್ಲಿಗೆ ಬಂದ ಕೂಡಲೇ ಕನ್ನಡತಾಯಿಯನ್ನು ಆ ಐತಿಹಾಸಿಕ ಸ್ಥಳದಲ್ಲಿ ಕಾಣುತ್ತಾರೆ. ಅದು ಹೇಗೆಂದರೆ 'ತುಂಗಭದ್ರೆಯ ತಡಿಯ ಚೆದರಿರುವ ಮೊರಡಿಗಳ ಕೊರಕಲಿನ ಬಿಸಿಲ ಬೇಗುದಿಯ ಬಿರುಕಿನಲಿ ಮುಳ್ಳೆಡೆಯ ಕಲ್ಲು ಹೂವಿದಿಡಿದರೆಯ? ಮೇಲೆ ಕುಳಿತಿದ್ದಳಾ ತಾಯಿ, ಕೈಮೇಲೆ ತಲೆಯೂರಿ, ಅಳಿನಾಳದಲಿ'. ಇಲ್ಲಿ ನೀನು ಕುಳಿತಿರುವುದಾದರೂ ಯಾತಕ್ಕೆ? ಎನ್ನುವಂತೆ ಪ್ರಶ್ನಿಸುತ್ತಾ:

ಕೇಳಣ್ಣ, ನಾನೊಬ್ಬ ಹಳೆಯ ಮತ್ತೈದೆ-ಹಿರಿದಾಗಿ ಬಾಳಿದವಳೊಮ್ಮೆ;

ಈಗ ಬಡತನ, ಬಡವೆ, ಬಡವಾದೆ: ಬದಲಾದ ಮಕ್ಕಳನು ನೋಡಿ,

ಬತ್ತಿ, ಮತ್ತೆಯಮ್ಮಡಿಯ ಸೊರಗಿನಲಿ ಬಡವಾದೆ-ಸಾವಿಲ್ಲ ನನಗೆ। ಎನ್ನುತ್ತಾಳೆ.[೬]

ಕನ್ನಡ ನಾಡನ್ನೆಲ್ಲ ಸುತ್ತಾಡಿ ಬಂದು ಹಂಪೆಯಲ್ಲಿ ಕನ್ನಡ ತಾಯಿಯನ್ನು ಕಂಡುದು ಆಕೆಯ ಕೊರಗಿನ ಕಾರಣಗಳು ಕವಿಯಲ್ಲಿ ಚಿಂತನೆಯ ರೂಪವನ್ನು ತಾಳಿವೆ. ಆ ಚಿಂತನೆಯ ರೂಪ ಕರ್ನಾಟಕದ ಏಕೀಕರಣದ ಒಳಸುಳಿಯಾಗಿದೆ. ಕವಿಗೆ ಕನ್ನಡ ನಾಡಿನ ಮೇಲಿದ್ದ ಅಭಿಮಾನಾದರಗಳು ಈ ಕವನಕ್ಕೆ ಪ್ರೇರಕವಾಗಿವೆ. ಹಿಂದೆ ಸಿರಿ ಸಮೃದ್ಧಿಯಿಂದ ಬೆಳಗಿದ ಈ ನಾಡು ಇಂದು ಬಡವಾಗಿ ಹೋಗಿದೆ. ಆದರೆ ಪಕ್ಕದ ರಾಷ್ಟ್ರಗಳು ಮಾತ್ರ ಈಗಲೂ ಹಬ್ಬದ ಸವಿಯನ್ನು ಸವಿಯುತ್ತಾ ಸೊಗಸಿನಿಂದಿವೆ. ಆದರೆ ಈ ನಾಡ ತಾಯಿಗೆ, ಅವಳ ಮಕ್ಕಳಾದ ಕನ್ನಡಿಗರಿಗೆ, ಭಾರತೀಯರಿಗೆ ಮಾತ್ರ ಹಬ್ಬವಿಲ್ಲ.

ನಮಗಿಲ್ಲ ಬಾಳು

ಎಲ್ಲರೂ ಬಾಳುವೆಡೆ ನಮಗೆ ಸಾವೆ?

ಎಲ್ಲರೂ ನಲಿವ ಕಡೆ ನಮಗೆ ನೋವೆ?

ಏನು ಕವಿಯಿತೊ ಮಂಕು, ಮಕ್ಕಳಿಗೆ! ಯಾರೆರಚಿದರೊ ಬೂದಿ, ಕಾಣೆ

ನನ್ನನೊಲ್ಲರು ನನ್ನ ಮಕ್ಕಳೇ! ತಾವ್ ಬಾಳಿ, ತಾಯ ಬಾಳಿಸರು.

ಹೆರರ ನುಡಿ, ಹೆರರ ನುಡಿ, ಹೆರರ ಕೂಗೇ ಕೂಗು; ಹರೆರದೇ ಹೆಮ್ಮೆ!

ಹಿಂದೆ ಸಮೃದ್ಧಿಯ ಬಾಳನ್ನು ಬಾಳಿದ ನಾನು ಈಗ ಅನಾಥೆಯಾಗಿದ್ದರೂ ನನ್ನ ಮಕ್ಕಳು ಎನಿಸಿಕೊಂಡವರು ಸುಮ್ಮನಿದ್ದಾರಲ್ಲ. ಒಂದು ಕಾಲಕ್ಕೆ ವೀರತ್ವದಿಂದ ಮೆರೆದ ಇವರು ಇಂದೇಕೆ ಮಂಕಾಗಿದ್ದಾರೆ. ಇವರ ಮಂಕುತನದಿಂದಾಗಿಯೇ ಇಂದು ನಾಡಿನಲ್ಲಿ ಪರರ ದಬ್ಬಾಳಿಕೆ ಮುಂದುವರೆದಿದೆಯಲ್ಲ ಎನ್ನುವಂತಹ ಮಾತಿನ ಮೂಲಕ, ಸಲುಹಿದ ತಾಯಿಯನ್ನು ಉಳಿಸಿಕೊಳ್ಳಲು ಪ್ರೇರಣೆ ನೀಡುತ್ತಾರೆ. ಮಕ್ಕಳ ಮೇಲೆ ಮುನಿಸಿಕೊಂಡ ತಾಯಿಗೆ ಕವಿ ಹೇಳುವ ಸಾಂತ್ವನವು ಮತ್ತೆ ನಾವು ಹೊಸ ನಾಡನ್ನು ಕಟ್ಟಿಕೊಳ್ಳುತ್ತೇವೆ ಎಂಬ ಅಭಿಮಾನದಂತಿದೆ.

ನಮ್ಮ ಪ್ರಾಚೀನ ಕವಿಗಳು ಕಂಡು ಹೊಗಳಿದ ಕನ್ನಡಿಗರ ಆ ಶಕ್ತಿ ಮತ್ತೆ ಈಗ ಚೇತನಗೊಂಡಿದೆ. ನಿನ್ನನ್ನು (ರಾಷ್ಟ್ರವನ್ನು) ಉಳಿಸಿಕೊಳ್ಳಲು ನಿನ್ನ ಮಕ್ಕಳು ಎಚ್ಚೆತ್ತುಕೊಳ್ಳುತ್ತಿದ್ದಾರೆ. ಹಳೆಯದನ್ನು ಮತ್ತೆ ಮತ್ತೆ ನೆನೆದುಕೊಳ್ಳುತ್ತ ವೈಭವವನ್ನು ಕಾಣಬೇಕೆಂಬ ತವಕದಿಂದ ಹೊಸ ನಾಡನ್ನು ಕಟ್ಟಲು ಸಿದ್ಧರಾಗಿದ್ದಾರೆ ಎನ್ನುವ ಮೂಲಕ ಸಮಕಾಲೀನ ಸಂದರ್ಭದಲ್ಲಿನ ಹೋರಾಟದ ಸ್ವರೂಪವನ್ನು ಕವನ ತಿಳಿಸುತ್ತದೆ. ಇಲ್ಲಿ ಶ್ರೀಯವರು ಹೊಸದಾಗಿ ಕಟ್ಟಬೇಕಾದ

ನಾಡಿನ ರೂಪುರೇಷೆಯನ್ನು ಹೇಳುತ್ತಾರೆ. ನಾವು ಕಟ್ಟುವ ನಾಡು ಸಾಮಾನ್ಯದ್ದಲ್ಲ; ಸಮೃದ್ಧವಾದುದು. ಇಲ್ಲಿ ಕವಿಗಳು, ಕಲಿಗಳು, ಋಷಿಗಳು ಎಲ್ಲರೂ ಇರುವರು. ಸತ್ಯ ಧರ್ಮ, ನ್ಯಾಯ, ನೀತಿ, ಶಾಂತಿ, ಪ್ರೇಮ, ಸ್ವಾತಂತ್ರ್ಯದ ಬಾಳು ಇಲ್ಲಿ ಸೃಷ್ಟಿಯಾಗಿದೆ. ತಾಯಿಯೇ ನಮ್ಮನ್ನು ಹರಸು. ನಿನ್ನ ಹರಕೆಯೇ ನಮ್ಮ ಬದುಕಿಗೆ ಬೆಳಕನ್ನು ನೀಡುವುದು ಎನ್ನುತ್ತಾರೆ ಕವಿಗಳು. ಇಂತಹ ನಾಡನ್ನು ಕಟ್ಟಿದಾಗ ಮಾತ್ರ ಆ ತಾಯಿಗೆ ಸಂತೋಷ್ವ ಅಷ್ಟಿಷ್ಟಲ್ಲ ಎನ್ನುವುದನ್ನು ಈ ಮುಂದಿನ ಸಾಲುಗಳಲ್ಲಿ ಸ್ಪಷ್ಟಪಡಿಸಿದ್ದಾರೆ:

"ನಕ್ಕಳಾ ತಾಯಿ.

ಮುದುಕಿ ಎಳೆಯವಳಾಗಿ, ಮಾಸು-ಮಿಂಚೆಳೆಯಾಗಿ, ಸವೆದ ಮೈ ತುಂಬಿ,

ಕಡಲ ತೆರೆಗಳನುಟ್ಟು, ಬೆಟ್ಟ ಬಯಲನು ತೊಟ್ಟು, ಅರಿಲ ಮುಡಿಗಿಟ್ಟು,

ಮುಗುಳ್-ನಗೆಯ ನಸುನಕ್ಕಳಾ ತಾಯಿ, ನನ್ನ ತಲೆಯಲಿ ಕಯ್ಯ

ತಾವರೆಯನ್ನಿಟ್ಟು"[೨]

ಹಿಂದಿನವರು ಕಟ್ಟಿದ್ದ ಸುಂದರ ನಾಡು ಹಾಳಾಗಿಲ್ಲ; ಅವರು ನಾಡನ್ನು ಕಟ್ಟಿದ್ದಕ್ಕೆ ಅವರಿಗೆ ಋಣಿಯಾಗಬೇಕು. ಅವರು ಮುಂದಿನವರಿಗೆ ಮಾದರಿಯಾಗಿರುವಂತೆ ಗಣಿಯಾಗಬಲ್ಲ ನಾಡನ್ನು ಕಟ್ಟಿ ಹೋಗಿದ್ದಾರೆ. ಆ ಗಣಿಯಲ್ಲಿಯೇ ಅಗೆದು ಮುಂದಿನ ನಾಡೊಂದನ್ನು ಕಟ್ಟಬೇಕಾದ ಜರೂರತೆಯಿದೆ. ಅದು ಹೇಗಾಗಬೇಕೆಂದರೆ ಸದಾ ಬಯಸಿದ್ದನ್ನು ನೀಡುವ ಕಲ್ಪವೃಕ್ಷದಂತಿರಬೇಕು. ನೀರಿದ್ದಡೆ ಮಾತ್ರ ಹೊರಹೊಮ್ಮುವ ಒರತೆಯಂತಾಗದೆ ಮರುಭೂಮಿಯಲ್ಲೂ ಚಿಮ್ಮುವ ಓಯಸಿಸ್ಸಿನಂತಾಗಬೇಕು ಎನ್ನುವ ಧೋರಣೆ ಇಲ್ಲಿ ಎದ್ದುಕಾಣುತ್ತದೆ.

ನಿಜವಲ್ಲ ನಿನ್ನಳಿವು ಮರೆಯಾದೆಯಷ್ಟೆ ।

ಏಳು ಬೀಳಿನ ಧರ್ಮ ತೋರಿದೆಯಷ್ಟೆ ।

ನಿನ್ನದವನತಿಯದತ್ಯುನ್ನತಿಯಷ್ಟೆ ।

ನಿನಗಳಿವೆ ಚಿರಂಜೀವಿ ಹೇ ವಿಜಯನಗರ॥[೩]

ಈ ಸಾಮ್ರಾಜ್ಯ ಎಂದೋ ಮರೆಯಾಗಿ ಹೋಗಿದ್ದರೂ ಅದರ ನಿರಂತತೆಯನ್ನು ಕವಿ ಮನ ಕಾಣುತ್ತದೆ. ಅದಕ್ಕೆ ಕೊನೆಯಿಲ್ಲ. ಅದು ನಿತ್ಯನೂತನವಾದುದು. ಸ್ಫೂರ್ತಿಯ ಸೆಲೆಯಾದುದು ಎಂದು ಕವಿ ಮನತುಂಬಿ ಹಾಡುತ್ತಾನೆ.

ಆ. ಶಾಂತಕವಿ

ಶ್ರೀ ವಿದ್ಯಾರಣ್ಯ ಕೀರ್ತನೆ (೧೯೧೮) ಎನ್ನುವ ಕೀರ್ತನಾ ಗ್ರಂಥ ರಚಿಸಿದ ಶಾಂತಕವಿಗಳು ಕನ್ನಡದ ಉಳಿವಿಗಾಗಿ ಹಗಲಿರುಳು ಪರಿತಪಿಸಿದವರು. ಬಹುಶಃ ಆಗಿನ ಕಾಲದ ಮರಾಠಿ

ಪ್ರಭಾವವನ್ನು ತಡೆಯುವುದಕ್ಕಾಗಿ ಕನ್ನಡ ನಾಟಕಗಳನ್ನು ಬರೆದು ರಂಗದ ಮೇಲೆ ತಂದವರು. 'ಬೇಡಲು ಬಂದಿಹನು ಕನ್ನಡದ ದಾಸಯ್ಯ' ಎಂದು ಮನೆಮನೆಗೆ ತೆರಳಿ ಕನ್ನಡ ಕಟ್ಟುವ ಕೆಲಸವನ್ನು ಮಾಡಿದ ಧೀಮಂತರು. ಅವರು ವಿದ್ಯಾರಣ್ಯರ ವಿಶೇಷತೆಯನ್ನು ತಮ್ಮ ಗ್ರಂಥದಲ್ಲಿ ವಿವರಿಸುವುದರ ಜೊತೆಗೆ ಆ ಸಂದರ್ಭದ ನಾಡಿನ ಸ್ಥಿತಿಗತಿಯನ್ನು ವಿವರಿಸಿದ್ದಾರೆ. ಆರಂಭದಲ್ಲಿ ಇಷ್ಟದೇವತಾ ಭಜನೆಯ ನಂತರ ನಾಡಿನ ವರ್ಣನೆಯಿದೆ. ಈ ನಾಡು ಸೌಖ್ಯದ ಬೀಡು, ಕೀರ್ತಿಯ ನಾಡು, ಅದು ಆತ್ಮಸ್ಫೂರ್ತಿಯ ತೇಜ, ಜ್ಞಾನದ ಕ್ಷಿತಿಜ. ಅದನ್ನು ಒಮ್ಮೆ ಕಣ್ಣಾರೆ ನೋಡಿದೆಯೆಂದರೆ ಮುಖದಲ್ಲಿ ಕಳೆ, ಮನಸ್ಸಿನಲ್ಲಿ ಧೃತಿ, ಮೈಯಲ್ಲಿ ಬಲ, ಇದಕ್ಕಿಂತಲೂ ಮಿಗಿಲಾಗಿ ಧರ್ಮಾರ್ಥ ಕಾಮ ಮೋಕ್ಷಗಳು ದೊರೆಯುತ್ತವೆ. ಇದಕ್ಕಿಂತ ಇನ್ನೇನು ಬೇಕು. ಅಂತಹ ನಾಡಿನಲ್ಲಿ ನಮ್ಮ ಜೀವನ ಪಾವನವಾಗುತ್ತದೆ ಎಂದು ಹೇಳುತ್ತಾರೆ.

ಈ ಕೀರ್ತನೆಯಲ್ಲಿ ಲೇಖಕರು ತನ್ನ ಊರು, ತನ್ನ ದೇಶ. ಈ ದೇಶ ಭರತಭೂಮಿ ಎಂಥದೆಂದು ಹೇಳುತ್ತಾ ಈ ದೇಶವು ಪೂರ್ವ ಪಾಠಶಾಲೆಯಿದ್ದಂತೆ, ಅಂಧಕಾರದಲ್ಲಿದ್ದ ಲೋಕವನ್ನು ಎಚ್ಚರಿಸುವ ಶಕ್ತಿ ಈ ದೇಶಕ್ಕಿದೆ. ಶಿಕ್ಷಿತರು ಹೇಳಿದ ಪದ್ಧತಿಗಳು, ಸದಾಭಿಮಾನ, ಶೌರ್ಯ, ಉತ್ಸಾಹದ ನಾಡಿದು. ಇದು ಭಾಗ್ಯದ ನಿಧಿ ಎಂದು ಹೇಳುತ್ತಾರೆ. ಇದೇ ನಿನ್ನ ವಸ್ತುವು. ಇದರ ಬಗ್ಗೆ ನೀನು ಲಕ್ಷ್ಯ ಕೊಡು ಎಂದು ಹೇಳುತ್ತಾರೆ. ಅಲ್ಲದೆ ಕಾವೇರಿಯಿಂದ ಗೋದಾವರಿಯವರೆಗೆ ವಿಸ್ತರಿಸಿರುವ ಈ ನಾಡನ್ನು ಅನೇಕ ರಾಜಮನೆತನಗಳು ಆಳ್ವಿಕೆ ಮಾಡಿವೆ. ವಿದ್ಯಾರಣ್ಯರು ತಾಯಿ ಭುವನೇಶ್ವರಿಯ ಸೂಚನೆಯಂತೆಯೇ ಸಂನ್ಯಾಸಿಗಳಾಗಿ ಈ ನಾಡನ್ನು ಕಟ್ಟಿದ ಬಗೆಯನ್ನು ಮತ್ತು ಇಂತಹ ಪವಿತ್ರ ನಾಡು ಅನ್ಯರ ದಾಳಿಯಿಂದ ಅಧೋಗತಿಗೆ ಹೋಗುತ್ತಿದೆ. ಅದನ್ನು ಪುನಃ ಕಟ್ಟಲಿಕ್ಕೆ ವಿದ್ಯಾರಣ್ಯ ಸಿದ್ಧರಾಗುತ್ತಾರೆ ಎನ್ನುವುದನ್ನು ಮುಂದಿನ ಕಾವ್ಯದ ಸಾಲು ವ್ಯಕ್ತಪಡಿಸುತ್ತದೆ.

ಏಳು ಸಾಯಣ ಕಟ್ಟು ಗ್ರಂಥವ

ನೇಳು ಪಂಪಾಕ್ಷೇತ್ರಕೆ

ಗಾಳಿಗಂಟುಗಳೋದಿದೇತಕೆ

ಏಳು ಕ್ಷಣ ಈ ಮಾತ್ರಕೆ

ಎಂದು ತಮ್ಮ ಸಾಯಣನೊಂದಿಗೆ ಪಂಪಾಕ್ಷೇತ್ರಕ್ಕೆ ಬಂದು. ಅಲ್ಲಿ ಹೊಸ ಸಾಮ್ರಾಜ್ಯವನ್ನು ಕಟ್ಟಲಿಕ್ಕೆ ತಯಾರಾಗುತ್ತಾರೆ. ಅಲ್ಲದೆ ನಾನು ಪಾರತಂತ್ರ್ಯದಿಂದ ಬಿಡುಗಡೆಗೊಂಡಾಗ ಮಾತ್ರ ಮೋಕ್ಷ ಸಾಧನೆ ಸಾಧ್ಯ ಎಂದು ಕೀರ್ತನೆಯಲ್ಲಿ ಹೇಳಿದ್ದಾರೆ. ಲಕ್ಷಶಾಸ್ತ್ರಗಳನ್ನು ಓದಿದರೇನು, ಲಕ್ಷ ಸೂತ್ರಗಳನ್ನು ನೋಡಿದರೇನು, ಮೋಕ್ಷ ಸಾಧನೆಗೆ ಪರತಂತ್ರದಿಂದ ಮುಕ್ತಿ ಬೇಕು. ಮೊದಲು ಸ್ವ-ತ್ವವನ್ನು ಕಾಪಾಡಿಕೊಳ್ಳದಿದ್ದರೆ ಜೀವನ ನಿಃಸತ್ವವಾಗುತ್ತದೆ. ಅದಕ್ಕಾಗಿ ಹಂಪೆಗೆ ಬಂದು ರಾಜ್ಯ ಸ್ಥಾಪಿಸಿಕೊಳ್ಳಬೇಕೆನ್ನುತ್ತಾರೆ. ಅದಕ್ಕೆ ಕೊರತೆಯೇನು ಇಲ್ಲ. ಸ್ವಭೂಮಿ ಇದೆ,

ಭಾಷೆಯಿದೆ, ಸ್ವಾಭಿಮಾನದ, ಸ್ವಧರ್ಮವಿದೆ, ವಿದೇಶ ಬಾಂಧವರಿದ್ದಾರೆ, ಸ್ವಧೈರ್ಯವಿದೆ, ಸ್ವದೇಹವಿದೆ, ಸ್ವದೈವಗಳೂ ಇವೆ. ಇವೆಲ್ಲವುಗಳ ಸಹಾಯದಿಂದ ಸ್ವರಾಜ್ಯವನ್ನು ಕಟ್ಟಿಕೊಳ್ಳಲಾಗದೆ, ನಿಶ್ಚಿತವಾಗಿ ನಾಡನ್ನು ಕಟ್ಟಬೇಕೆಂದು ಸಿದ್ಧರಾಗುತ್ತಾರೆ. ತುಂಗಭದ್ರಾ ತೀರಕೆ ಬಂದು ಅಲ್ಲಿ ಲಕ್ಷಣೋತ್ತಮವಾದ ರಾಜಧಾನಿಯನ್ನು ಕಟ್ಟುತ್ತಾರೆ. ದೇವಿಯನ್ನು ಬೇಡಿಕೊಂಡಾಗ ಅಲ್ಲಿ ಹೊನ್ನಿನ ಮಳೆ ಸುರಿಯುತ್ತದೆ. ಮುಂದೆ ಈ ಸಾಮ್ರಾಜ್ಯ ಸುಂದರವಾಗಿ ರೂಪುಗೊಳ್ಳುತ್ತದೆ. ವಿದ್ಯಾರಣ್ಯರು ಹರಿಹರನಿಗೆ:

ಇದುಕೋ ಕರ್ಣಾ

ಟದ ಸಿಂಹಾಸನ

ವಿದನೇರೈ ಹರಿಹರ ರಾಜಾ!

ಇದರಿಂ ಪರಮಾ–

ಭ್ಯುದಯ ದೇಶಕೆ

ಸ್ವಧರ್ಮಕಂ ರಾಜರ ರಾಜಾ![೭೪]

ಎಂದು ರಾಜಧರ್ಮದ ವಿಧಿವಿಧಾನಗಳನ್ನೇಳಿ, ಇನ್ನು ಮೇಲೆ ಈ ಸಾಮ್ರಾಜ್ಯವನ್ನು ಸುವ್ಯವಸ್ಥಿತವಾಗಿ ನೋಡಿಕೊಂಡು ಹೋಗುವಂತೆ ಉಪದೇಶಿಸುತ್ತಾರೆ. ವಿದ್ಯಾರಣ್ಯರ ಈ ಕೀರ್ತನೆಯು ವಿದ್ಯಾರಣ್ಯರು ವಿಜಯನಗರವನ್ನು ಕಟ್ಟಿದ್ದನ್ನು ಕುರಿತು ಹೇಳಿದ್ದಾದರೂ, ಅದರ ಅಂತರ್ಯದ ಧ್ವನಿಯು ಕವಿಗಳು ತಮ್ಮ ಸಮಕಾಲೀನ ಸಂದರ್ಭದಲ್ಲಿ ಕರ್ನಾಟಕತ್ವ ಮತ್ತು ಭಾರತತ್ವವನ್ನು ಈ ನಾಡಿನ ಜನ ಬೆಳೆಸಿಕೊಂಡಾಗ ಮಾತ್ರ ಸ್ವತಂತ್ರವಾದ ದೇಶವನ್ನು ಕಟ್ಟಿಕೊಳ್ಳಬಹುದು ಎನ್ನುತ್ತದೆ. ಹಾಗೆಯೇ ಶಾಂತಕವಿಗಳು ಅನ್ಯ ಭಾಷೆಯ ಪರಿಣಾಮವನ್ನು ಇಲ್ಲಿ ವಿಶ್ಲೇಷಿಸಿದ್ದಾರೆ. ಶಾಂತಕವಿಗಳು ವೃತ್ತಿರಂಗಭೂಮಿಗೂ ತಮ್ಮ ಅನೇಕ ನಾಟಕಗಳನ್ನು ಬರೆದು ಕೊಟ್ಟವರು. ಮೂಲತಃ ಅವರು ಶಾಲಾ ಮಾಸ್ತರರು. ಗದಗ ಸೀಮೆಯವರಾದರೂ ಹಂಪಿಯ ಕಥನವನ್ನು ಅರಿತು ಈ ಪದ್ಯದಲ್ಲಿ ಬರೆದಂತಿದೆ. ಕವಿಗಳು ಕನ್ನಡತ್ವ, ಭಾಷೆಯ ವಿಚಾರದಲ್ಲಿ ತುಸು ಮುಂಚೂಣಿಯಲ್ಲಿರುತ್ತಿದ್ದವರು. ಈ ಹಿನ್ನೆಲೆಯಲ್ಲಿ ಕನ್ನಡ ನಾಡುನುಡಿಯ ನೆಪದಲ್ಲಿಯಾದರೂ ಹಂಪಿಯ ವಿಶಿಷ್ಟತೆಯನ್ನು ಎತ್ತಿಹಿಡಿದಿದ್ದಾರೆ.

ಇ. ಸಾಲಿರಾಮರಾಯರು

ಸಾಲಿರಾಮಚಂದ್ರರಾಯರ 'ವಿಜಯ ದುಂದುಬಿ' ಕವನವು ಅನ್ಯರ ಆಕ್ರಮಣದಿಂದ ನಲುಗಿ ಹೋದ ನಾಡನ್ನು ಕಟ್ಟಿಕೊಳ್ಳುವುದಕ್ಕಾಗಿ ಜನರನ್ನು ಪ್ರೇರೇಪಿಸುತ್ತದೆ. ನಾಡೆಲ್ಲ ಮಸಣವಾಗಿ, ಬೇಗೆ ಬಲಿತು ಹರಿದಂತಹ ಕಪ್ಪು ಹೊಗೆಯನ್ನು ಎತ್ತಲು, ತೂರಲು, ಮುದುಡಿ ಹೋದಂತಹ ಉತ್ಸಾಹವನ್ನು, ಕಂದಿದ ಸಂಪತ್ತನ್ನು ಬರಡಾಗಿರುವ ಜೀವಲತೆಯನ್ನು ಹೊಂದಿದ ನಾಡು ಭಾಗ್ಯವನ್ನು ಕಳೆದುಕೊಂಡಿದೆ. ಉರಿಯುವ ಜ್ವಾಲೆಗೆ ಸಿಲುಕಿದ ಜನ ದಾರಿ ಕಾಣದೆ

ವಿಚಲಿತರಾಗಿದ್ದಾರೆ. ಅಭಿಮಾನ ಕುಂದಿ ಹೋಗಿದೆ. ವೈರಿಗೆ ಅಂಜಿ ನಿನ್ನ ಸಂಸ್ಕೃತಿ, ಧರ್ಮವನ್ನು ಅವರಿಗೆ ಮಾರಿ ಬದುಕುವುದು ಜೀವನವೇ. ಶರಣೆಂದು ಬಂದವರಿಗೆ ಆಶ್ರಯ ನೀಡುವುದು ನಿನ್ನ ಧರ್ಮ. ಆದರೆ ಅವರಿಗೆ ನೀನೇ ಶರಣೆಂದು ಬದುಕುವುದು ಉಚಿತವೇ? ದೇಶವು ಅವನತಿ ಅಂಚಿಗೆ ಬಂದು ನರಳುತ್ತಿರುವಾಗ, ಶತ್ರುಗಳಿಗಂಜಿ ಬದುಕುವುದು ಇದ್ದೂ ಸತ್ತಂತಲ್ಲವೇ? ಎಂದು ಜನರನ್ನು ಕವಿ ಬಡಿದೆಚ್ಚರಿಸುತ್ತಾರೆ.

ಜನನಿ ಭೂಜನನಿ ಭಾರತಜನನಿ ಘೋರವೇ

ದನೆಯಿಂದ ಬಳಲುತಿರೆ, ರಿಪುವತ್ತಲವಳ ಜೀ

ವನವನೇ ಪಿಳಿದು ಪೀರಲ್ ಬಗೆದು ಬಂದನುದ್ದಂಡನತಿದರ್ಪದಿಂದೆ

ತನಗಾವ ಗಂಡುಸಿದಿರೆನುತೆ! ಕರುನಾಡಿಗೀ–

ತನ ಸೊರ್ಕಿನುರಿ ಸೋಂಕೆ, ದಾಹಾತ್ಮಕಂ ತೇಜ–

ಮನುಪಮಂ ಪ್ರಕಟಮಾದತ್ತು ದುರ್ಮದಮದಪ್ರಧ್ವಂಸಿ ದಿವ್ಯಶಕ್ತಿ![೭೫]

ದೇಶವು ಪರಕೀಯರ ಕೈಯಲ್ಲಿದ್ದಾಗ ಸಂರಕ್ಷಕನಂತೆ ಬಂದವರು ವಿದ್ಯಾರಣ್ಯರು. ತಮ್ಮ ಚೈತನ್ಯಸ್ಫೂರ್ತಿಯಿಂದ ಹೊಸ ನಾಡು ಉದಯಿಸಲು ಕಾರಣರಾದರು. ಆಗ ನಾಡಿನ ಜನರು ಸಾವಿಗಂಜದೆ ಅಭಿಮಾನದಿಂದ, ವೀರತ್ವದಿಂದ ಹೋರಾಡಿದರು. ವಜ್ರದೇಹಿಗಳಾದ ಅವರಿಗೆ ಎದುರು ನಿಲ್ಲುವವರಾರು, ತಮ್ಮ ಪ್ರತಾಪದಿಂದ ನಾಡಿನ ಉಜ್ವಲ ತೇಜವನ್ನು ಬೆಳಗಿಸಿದರು. ಆ ಮೂಲಕ ಹೊಸನಾಡನ್ನು ಕಟ್ಟಿಕೊಂಡರು. ಅವರು ಕಟ್ಟಿದ ಆ ನಾಡು (ವಿಜಯನಗರ) ದಶದಿಕ್ಕುಗಳಿಗೂ ತನ್ನ ಜಯಧ್ವಜವನ್ನು ಹಾರಿಸಿತು ಎನ್ನುವ ಸಂಗತಿಗಳು ಹಿಂದೂ ರಾಷ್ಟ್ರೀಯತೆಯನ್ನು ಬಲಪಡಿಸಲು ಪ್ರೋತ್ಸಾಹಿಸುವಂತಿವೆ.

ವಿಜಯನಗರವು ತುಂಗೆಯ ತಟದ ಆ ಮಂಗಳದ ಅಂಗಳದಲ್ಲಿ, ಗಿರಿಗಂವ್ವರಗಳ ತಾಣದಲ್ಲಿ, ಶ್ರೀರಾಮಚಂದ್ರನು ಪಾದಸ್ಪರ್ಶ ಮಾಡಿದ ಪುಣ್ಯ ಭೂಮಿಯಲ್ಲಿ, ಹಿಂದೂ ಧರ್ಮದ ನೆಲೆವೀಡಾಗಿದ್ದ ಪ್ರದೇಶದಲ್ಲಿ ಈ ಸಾಮ್ರಾಜ್ಯ ಉದಯವಾಯಿತು. ಆದರೆ ಈಗಿನ ಸ್ಥಿತಿ ಮಾತ್ರ ಚಿಂತಾಜನಕ. ನಮ್ಮದನ್ನು ನಮ್ಮದೆಂದು ಹೇಳಲು ಬಾರದ ಸಂಕಟಮಯ ಪರಿಸ್ಥಿತಿ. ನಮ್ಮತನವನ್ನು ನಾವು ಕಳೆದುಕೊಂಡಿದ್ದ ಅತಂತ್ರ ಸ್ಥಿತಿ. ಕಗ್ಗತ್ತಲೆಯಲ್ಲಿ ಮುಳುಗಿ ಹೋಗಿದ್ದ ನಮ್ಮತನದ, ನಮ್ಮ ಸ್ವಾಭಿಮಾನದ ಸಂಕೇತವಾಗಿ ಈ ಸಾಮ್ರಾಜ್ಯ ಹುಟ್ಟಿಕೊಂಡಿತು.

ಎತ್ತೋ ಹೋಗಿತ್ತು ಹಿಂದೂ ಜನರೆದೆಯೊಳಗಿಂದಾಗಲೇ ತಾನೆಯಾ ಸ್ವಾ

ಯತ್ತಪ್ರಾಜ್ಯಾರ್ಯ ಸಾಮ್ರಾಜ್ಯದ ರಚನೆಯ ಸಂಕಲ್ಪವಾಪತ್ತು ಮುತ್ತಿ॥

ಟ್ಟಿತ್ತಾ ಕಗ್ಗತ್ತಲಲ್ಲೇ ವಿಜಯನಗರದಲ್ಲೆದ್ದು ಮೂಡಿತ್ತು ಕರ್ಣಾ।

ಟೋತ್ತುಂಗ ಸ್ವರ್ಣಸಿಂಹಾಸನ ದಿನಮಣಿಯಾ ಮಾಧವಾಚಾರ್ಯರಿಂದ॥[೭೬]

ಅಂಧಕಾರದಲ್ಲಿ ಮುಳುಗಿ ದಾರಿ ಕಾಣದೆ ಪರಿತಪಿಸುತ್ತಿದ್ದ ಈ ನಾಡಿಗರಿಗೆ ದಾರಿ ತೋರಿಸಿ ಅವರ ಬಾಳನ್ನು ಬೆಳಗಿದ ಕೀರ್ತಿ ವಿದ್ಯಾರಣ್ಯರಿಗೆ ಸಲ್ಲುತ್ತದೆ. ಬಹುಶಃ ಹಿಂದೂಸ್ತಾನದ ಬಹುಭಾಗವನ್ನು ಆಕ್ರಮಿಸಿಕೊಂಡು ತಮ್ಮ ದರ್ಪದ ಆಡಳಿತದಿಂದ ಜನರ ಬದುಕನ್ನು ಅಲ್ಲೋಲಕಲ್ಲೋಲ ಮಾಡಿದ್ದ ಯವನರ ವಿರುದ್ಧ ಒಂದು ಸಬಲ ಸಾಮ್ರಾಜ್ಯವನ್ನು ಕಟ್ಟುವ, ಆ ಮೂಲಕ ಧರ್ಮವನ್ನು ರಕ್ಷಿಸಿಕೊಳ್ಳಬೇಕೆಂಬ ಉತ್ಕಟೇಚ್ಛೆಯಿಂದ ಶ್ರೀ ವಿದ್ಯಾರಣ್ಯರು ಹರಿಹರ ಬುಕ್ಕರ ಮೂಲಕ ಈ ಸಾಮ್ರಾಜ್ಯ ಸ್ಥಾಪಿಸಿದರು. ನಾಡನ್ನು ಅಥವಾ ದೇಶವನ್ನು ರಕ್ಷಿಸಿಕೊಳ್ಳಬೇಕೆಂದರೆ ಮೊದಲು ಧರ್ಮವನ್ನು ರಕ್ಷಿಸಿಕೊಳ್ಳಬೇಕು ಎಂಬ ಸಂಕಲ್ಪದ ಫಲವಾಗಿಯೇ ಈ ಮಹಾಸಾಮ್ರಾಜ್ಯದ ಸ್ಥಾಪನೆಯಾಯಿತು. ೨೦ನೆಯ ಶತಮಾನದ ಆರಂಭ ಕಾಲ ಘಟ್ಟದಲ್ಲಿ ಇಂಡಿಯಾದಲ್ಲಿ ಆರಂಭಗೊಂಡ ರಾಷ್ಟ್ರೀಯ ಪ್ರಜ್ಞೆಗೆ ಇಂತಹ ಸ್ವಧರ್ಮದ, ಸ್ವಾಭಿಮಾನದ ಸಾಮ್ರಾಜ್ಯಗಳು ಮಾದರಿಯಾದವು. 'ಹಿಂದಣ ಹೆಜ್ಜೆಯನರಿದಲ್ಲದೆ ಮುಂದಣ ಹೆಜ್ಜೆಯನರಿಯಬಾರದು' ಎನ್ನುವಂತೆ ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ಆಗಿಹೋದ ಸ್ಮರಣೀಯ ಸಾಮ್ರಾಜ್ಯವೇ ಇಂದು ನಮಗೆ ಸ್ಫೂರ್ತಿಯಾಗಿದೆ ಎಂದು ಕವಿಗಳು ಹಾಡಿ ಹೊಗಳಿದ್ದಾರೆ.

ಎಂದಿಗೂ ನೀನಾಳು ನಮ್ಮ ಹೃದಯದಲಿ ।

ನಿನ್ನ ಕೀರ್ತಿ ಜ್ಯೋತಿ ಬೆಳಗುತಿರಲಲ್ಲಿ ।

ನಿನ್ನಾತ್ಮ ಬಲದೆಮ್ಮ ನೆಚ್ಚರಿಸುತಿರಲಿ ।

ನಿನ್ನ ಸಿರಿ ಮರಳಿತರೆ ಜಯ ವಿಜಯನಗರ ॥[೭೭]

ಯವನರ ದುಷ್ಕೃತ್ಯಗಳಿಂದಾಗಿ ನಮ್ಮ ಪೂರ್ವಿಕರು ಅನುಭವಿಸುತ್ತಿದ್ದ ಯಾತನೆಯ ಬದುಕನ್ನು ಅಳಿಸಿ ಹಾಕಿ, ಜತನದ ಬಾಳನ್ನು ಬಾಳಲಿಕ್ಕೆ ರಕ್ಷಾ ಕೋಟೆಯಂತೆ ನಿಂತದ್ದು ವಿಜಯನಗರ ; ಯಾರ ಅಮಾನವೀಯ ಕೃತ್ಯಗಳಿಗೆ ನಮ್ಮ ಮಣ್ಣಿನ ಜನರ ಮಾನವೀಯತೆ ಮಣ್ಣುಗೂಡಿ ಹೋಗುತ್ತಿತ್ತೋ ಅಂತವರ ಕಪಿಮುಷ್ಟಿಯಿಂದ ಬಿಡುಗಡೆಗೊಳಿಸಿದ್ದು ವಿಜಯನಗರ; ಅನ್ಯರ ದಾಸ್ಯಕ್ಕೆ ಸಿಲುಕಿ ನಮ್ಮ ಸ್ವಾಭಿಮಾನ ಸತ್ತು ಹೋಗುತ್ತಿದ್ದಾಗ ಅದಕ್ಕೆ ಮತ್ತೆ ಜೀವ ನೀಡಿದ್ದು ವಿಜಯನಗರ; ಧೀರರ ನಾಡಿನಲ್ಲಿ ಹುಟ್ಟಿದ ಹುಟ್ಟುಗುಣಕ್ಕೆ ಪೆಟ್ಟು ಬಿದ್ದಾಗ ಅದಕ್ಕೆ ಪಟ್ಟ ಕಟ್ಟಿದ್ದು ವಿಜಯನಗರ; ಮಾನವಂತ ಮಾನಿನಿಯರ ಬದುಕು ಮಾಯವಾಗುತ್ತಿದ್ದಾಗ ಮಾನ ಉಳಿಸಿದ್ದು ವಿಜಯನಗರ; ಕಲಿಗಳ ಕೈಗಳು ಕೈ ಸೋತು ಕೂತಾಗ ಚೇತನ ನೀಡಿದ್ದು ವಿಜಯನಗರ; ಕವಿಗಳು ಲೆಖ್ಖಣಿಕೆ ಕದಲದೆ ನಿಂತಾಗ ಆದ ಕದಲಿಸಿದ್ದು ವಿಜಯನಗರ:

ತುರುಕರು ಭಾರತೀಯರಸುವಾದ ಸುಧರ್ಮಗಳನ್ನು ಮಾನವ।

ನ್ನರಸುಗಳನ್ನು ದೇಗುಲಗಳನ್ನಳಿಸುತ್ತದೊ ಕನ್ನಡಕ್ಕೆ ಬಂ॥

ದೆರಗಿದರೆಂದು ನೊಂದು ಹೊಸಗನ್ನಡಗದ್ದುಗೆಗೇರಿ ಹೂರಣ।

ನ್ನಿರಿದನು ಕನ್ನಡಕ್ಕೆ ಗೆಲವಿತ್ತನು ಕೆಚ್ಚೆದೆ ಗಂಡು ಬುಕ್ಕನು॥[೭೮]

ಎಂತಹ ಆಪತ್ಕಾಲದಲ್ಲಿ ಈ ವಿಜಯನಗರ ಉದಯಿಸಿತಲ್ಲ ! ಆಧ್ಯಾತ್ಮಿಕ ಜೀವಿಗಳಾದ ಹಿಂದೂಗಳಿಗೆ ಒಂದೆಡೆ ತನ್ನಾತ್ಮದ ಕುರಿತಾದ ಹುಡುಕಾಟವಾದರೆ, ಮತ್ತೊಂದೆಡೆ ತನ್ನ ಬದುಕಿನ ಅಸ್ಥಿರತೆಯಿಂದಾಗಿ ಬದುಕು ಬಸವಳಿದು ಹೋಗಿತ್ತು. ಮೊದಲು ಬದುಕಿಗೆ ಆಶ್ರಯ ಸಿಕ್ಕರಲ್ಲವೆ ನಂತರ ಭವ ಬಂಧನದ ಚಿಂತೆ. ಅಂತಹ ಬದುಕನ್ನು ರೂಪಿಸಿಕೊಳ್ಳಲು ಅನುವು ಮಾಡಿಕೊಟ್ಟದ್ದಲ್ಲವೇ ಈ ಮಹಾ ಸಾಮ್ರಾಜ್ಯ. ಅಂತಹ ಸಾಮ್ರಾಜ್ಯದ ಧ್ಯೇಯವನ್ನು ನಾವಿಂದು ಮುಂದುವರೆಸಿಕೊಂಡು ಹೋಗಬೇಕಾಗಿದೆ ಎನ್ನುತ್ತದೆ ಇನ್ನೊಂದು ಕವಿಮನ.

ಆರ್ಯ ವೀರರೆ ಕಾರ್ಯ ವೀರರೆ

ಆರ್ಯ ಮಾತೆಯ ತೇಜವ

ತೂರ್ಯತಾನದಿ ಕಾರ್ಯರೂಪದಿ

ಆರ್ಯ ರೂಪದಿ ತೋರಿರಿ.

ಆರ್ಯವಿಶ್ವವೊ ವಿಶ್ವವಾರ್ಯವೊ

ಆರ್ಯವಿಶ್ವವಗೈಯಿರಿ.[೭೯]

ಪರಧರ್ಮೀಯರ ಆಡಳಿತದ ಮುಷ್ಟಿಗೆ ಸಿಕ್ಕು ನಲುಗುತ್ತಿರುವ ಆರ್ಯರೇ, ನೀವು ನಿಮ್ಮ ಧರ್ಮವನ್ನು ಉಳಿಸಿಕೊಳ್ಳಬೇಕು; ಬಳಸಿಕೊಳ್ಳಬೇಕು. ಅದಕ್ಕಾಗಿ ಕಂಕಣಬದ್ಧರಾಗಿ ನಿಲ್ಲಬೇಕು. ಆರ್ಯವನ್ನು ಕೇವಲ ನಮ್ಮನಮ್ಮಲ್ಲಿಯೇ ಉಳಿಸಿಕೊಳ್ಳದೆ ಅದನ್ನು ಜಗತ್ತಿನಾದ್ಯಂತ ಪಸರಿಸುವಂತೆ ಮಾಡಬೇಕಾಗಿದೆ. ಎಲ್ಲರನ್ನೂ ಒಂದೇ ಭಾವದಿಂದ ಕಾಣುವಂತಹ ಇಂತಹ ಧರ್ಮವನ್ನು ಅವನತಿಯ ಹಂಚಿಗೆ ಹೋಗಲು ಬಿಡಬಾರದೆಂಬ ಕಳಕಳಿ ಮೇಲಿನ ಕವನದಲ್ಲಿ ಕಾಣಬಹುದು.

ಕಳೆದ ಶತಮಾನದ ಆರಂಭದ ದಶಕದಲ್ಲಿ ನಮ್ಮವರಲ್ಲಿ ರಾಷ್ಟ್ರೀಯ ಪ್ರಜ್ಞೆಯು ಕುಡಿಯೊಡೆಯಿತು. ಭಾವಾತಿರೇಕ, ಕನಸುಗಾರಿಕೆ ಮತ್ತು ವಸ್ತುಸ್ಥಿತಿಯನ್ನು ಮರೆತ ಆದರ್ಶಪ್ರಿಯತೆ ಇವು ಆಗಿನ ರಾಷ್ಟ್ರೀಯತೆಯಲ್ಲಿ ಒಡೆದು ಕಾಣುವ ಆಯಾಮಗಳು. ಭಾವಾತಿರೇಕ, ಕನಸುಗಾರಿಕೆ ಮತ್ತು ವಸ್ತುಸ್ಥಿತಿಯನ್ನು ಮರೆತ ಆದರ್ಶಪ್ರಿಯತೆ ಈಗ ನಮಗೆ ಸೌಲಭ್ಯಗಳಾಗಿ ಕಂಡರೆ ಆಗ ಇವೇ ಶಕ್ತಿಗಳಾಗಿದ್ದವು. ಇಂತಹ ಶಕ್ತಿಯೇ ಆಗಿನವರ ದೇಶಪ್ರೇಮದ ಜೀವಾಳವಾಯಿತು. ಯಾವುದೇ ಪ್ರದೇಶದ ಮಣ್ಣಿನಲ್ಲಿ ಹುಟ್ಟಿ, ಅಲ್ಲಿನ ಮಣ್ಣಿನ ಸೊಗಡನ್ನು ಮೈಗೂಡಿಸಿಕೊಂಡು ಬೆಳೆದ ಪ್ರತಿಯೊಬ್ಬ ವ್ಯಕ್ತಿಗೂ ಒಂಬತ್ತು ತಿಂಗಳು ಹೊತ್ತು ಹೆತ್ತ ತಾಯಿಯಷ್ಟೇ ಬದುಕು ರೂಪಿಸುವ ನೆಲದಾಯಿ (ಜನ್ಮಭೂಮಿ)ಯೂ ಮುಖ್ಯಳಾಗುತ್ತಾಳೆ. ಹೆತ್ತ ತಾಯಿ ಶಾರೀರಿಕವಾದ ಬಾಹ್ಯ ರೂಪಕ್ಕೆ ಕಾರಣಳಾದರೆ, ಜನ್ಮಭೂಮಿಯು ಅಂತರಂಗದ ರೂಪಕ್ಕೆ ಕಾರಣಳಾಗುತ್ತಾಳೆ. ಜನ್ಮ ಕೊಟ್ಟವಳಿಗೆ ಮಾತ್ರ ಪ್ರಾಧಾನ್ಯತೆಯನ್ನು ನಾಡು-ನುಡಿಯ ಮೇಲೆ ಮಮತೆಯಿದ್ದವನಿಗೆ

ಪ್ರೇಮಭಾವ ಉಕ್ಕಿ ಹರಿಯುತ್ತದೆ. ಆ ಪ್ರೇಮಭಾವಕ್ಕೆ ಧಕ್ಕೆಯಾದಾಗ, ಅವನನುಭವಿಸುವ ಆ ರಸಾನಂದಕ್ಕೆ ಆಭಾಸವಾದಾಗ ಆತ ಕ್ರೋಧನಾಗುತ್ತಾನೆ, ವೀರನಾಗುತ್ತಾನೆ. ವೀರಾವೇಶದಲಿ ತನ್ನದನ್ನು ಉಳಿಸಿಕೊಳ್ಳುವುದಕ್ಕಾಗಿ ಪಣತೊಡುತ್ತಾನೆ.

ಕನ್ನಡ ನಾಡಿನ ಮನ್ನಣೆ ಕೆಣಕಲು

ಯವನರು ಬಂದಿಹರ ।

ಕನ್ನಡಬಂಟರ ಕಬ್ಬಿಣದೆದೆಗಳ

ನವರೇ ಕೆಣಕಿಹರ ।

ಅಲ್ಲಿಂದಲ್ಲಿಗೆ ಓಡಿಸದಿರುವೆನೆ ?

ಮುಕ್ಕಿಪೆ ಹುಡಿಯನ್ನು ।

ನೋಡಬಾರಲೆ ! ಕುರುಬರ ಕುವರಿ

ಕನ್ನಡ ಪಡೆಯನ್ನು ।

ಕೇಳಲಾರೆಯ? ಮೋಹರದಬ್ಬರ

ಮುತ್ತಿಗೆ ಮುಗಿಲನ್ನು ॥[೮೦]

ಎಂದು ವೀರಾವೇಶದಿಂದ ನಾಡನ್ನು ರಕ್ಷಿಸಲು ಗಂಡ ಹೋಗುತ್ತಾನೆ. ಅವನನ್ನು ಕಳಿಸುವುದು ಹೆಂಡತಿಯ ಧರ್ಮ. ಪತಿಯನ್ನು ಯುದ್ಧಕ್ಕೆ ಕಳುಹಿಸುವುದು ಯಾವ ಗರತಿಗಾದರೂ ಕಷ್ಟ. ಆದರೆ ಪ್ರೇಮಕ್ಕಾಗಿ ಮನೆಯಲ್ಲಿಟ್ಟುಕೊಂಡರೆ ಆತನನ್ನು ಷಂಡನನ್ನಾಗಿಸಿದಂತೆ. ಒಂದೆಡೆ ತಾನು ಗರತಿಯ ಬಾಳನ್ನು ಬಾಳಬೇಕಾದರೆ ತನ್ನ ಗಂಡನನ್ನು ಉಳಿಸಿಕೊಳ್ಳಬೇಕು. ಆದರೆ ಈ ಹೆಣ್ಣು ಯಾರು? ಕನ್ನಡದವಳು! ಕನ್ನಡದೆಣ್ಣು ಯಾವತ್ತೂ ಷಂಡರಿಗೆ ಹಾರ ಹಾಕಿದವಳಲ್ಲ.

ಅಂತವಳು ಯುದ್ಧಕ್ಕೆ ಬೇಡ ಎನ್ನುವುದುಂಟೆ. ಯುದ್ಧದಲ್ಲಿ ಜಯಶಾಲಿಯಾಗಿ ಬಾ ಎಂದು ಗಂಡನನ್ನು ಕಳುಹಿಸುವುದಕ್ಕಿಂತ ಸಂತೋಷ ಬೇರೇನಿದೆ. ನಾಡು ಸೌಖ್ಯವಾಗಿದ್ದರೆ ತಾನೇ ತಾವು ಸಂತೋಷದಿಂದಿರುವುದು. ನಾಡೇ ನರಕವಾದಾಗ ಬಾಳು ಬರಡಾಗಲಾರದೆ ಎನ್ನುವ ಧ್ವನಿ ಈ ಕವನದಲ್ಲಿ ಮನೋಜ್ಞವಾಗಿ ಮೂಡಿ ಬಂದಿದೆ.

ವಿಜಯನಗರ ಸಾಮ್ರಾಜ್ಯವು ಕೇವಲ ಸ್ವಾರ್ಥತೆಗಾಗಿ ಹುಟ್ಟಿದ್ದಲ್ಲ. ಆ ಸಾಮ್ರಾಜ್ಯಕ್ಕೆ ಅದರದೇ ಆದ ಪ್ರಮುಖ ಕರ್ತವ್ಯಗಳಿದ್ದವು. ಮುಖ್ಯವಾಗಿ ಮುಸ್ಲಿಮರ ದಾಳಿಯಿಂದ ಬೆಂದು ಬಸವಳಿದಿದ್ದ ಹಿಂದೂ ಧರ್ಮಕ್ಕೆ ಪುನಃಶ್ಚೇತನ ನೀಡುವುದು. ಕನ್ನಡ ಮಣ್ಣಿನ ಮಕ್ಕಳ ಬಾಳನ್ನು ಹಸನುಗೊಳಿಸುವುದು ಕಲೆ, ಸಾಹಿತ್ಯ,ಸಂಸ್ಕೃತಿಯ ಸಮೃದ್ಧಿಗೆ ಪ್ರೋತ್ಸಾಹ ನೀಡುವುದು. ಇಂತಹ ಆಸೆಗಳನ್ನೆಲ್ಲ ಆ ಸಾಮ್ರಾಜ್ಯ ಲಾಲಿಸದೆ, ಪೋಷಿಸಿದೆ; ಬೆಳೆಸಿದೆ. ಅದಕ್ಕಾಗಿ ಕವಿ ಮನ

ಈ ಸಾಮ್ರಾಜ್ಯವನ್ನು ಕೊಂಡಾಡುತ್ತದೆ.

ವಿದ್ಯಾರಣ್ಯರು ಕಟ್ಟಿದ ನಾಡು ।

ಐಸಿರಿಯಿಂದಲಿ ಬಲವನು ಹೊಂದಿ,

ಧರ್ಮದ ಪಥದಲಿ ನಡೆಯುತ ಬಂದು,

ಆಶ್ರಯಹೊಕ್ಕರಿಗಾಶ್ರಯವಿತ್ತು,

ಆರ್ಯಧರ್ಮಕೆ ಮೇಲ್ಮೆಯನಿತ್ತು,

ಬೆಳೆದುದು ಸತ್ಯಕೆ ಮೈತೆತ್ತು।

ನ್ಯಾಯ, ನೀತಿ, ಧರ್ಮಕ್ಕೆ ತಲೆಬಾಗಿ ನಡೆದದ್ದು ವಿಜಯನಗರ. ಆದುದರಿಂದಲೇ ಅದು ಅಷ್ಟೊಂದು ಸಮೃದ್ಧಿಯ ನಾಡಾಗಿತ್ತು. ವಿದ್ಯಾರಣ್ಯರಂತಹ ಮಹಾಮುನಿಗಳ ಮಾರ್ಗದರ್ಶನದಿಂದಲ್ಲವೇ ಇದು ಬೆಳೆದದ್ದು. ಹರಿಹರ ಬುಕ್ಕರಂತಹ ಮಹಾನ್ ವೀರರಿಂದಲ್ಲವೆ ಸ್ಪಷ್ಟ ರೂಪ ಪಡೆದುಕೊಂಡದ್ದು. ಇವೆಲ್ಲವಕ್ಕೆ ವಿರುದ್ಧವಾಗಿ ಬಾಳಲು ಹೇಗೆ ಸಾಧ್ಯ. ಈ ಎಲ್ಲ ಗುಣಗಳನ್ನು ಮೈಗೂಡಿಸಿಕೊಂಡೇ ಆ ಸಾಮ್ರಾಜ್ಯ ಬಾಳಿ ಬದುಕಿದ್ದು. ಆದರೆ ಈ ಧರ್ಮದ ನಾಡಿಗೆ ಒದಗಿದ ಸ್ಥಿತಿ ಎಂತಹದ್ದು. ದುರ್ಭರ! ಭೀಕರವಲ್ಲವೆ. ಅಂದಿನ ಆ ವೈಭವ ಈಗ ಕೇವಲ ಕನಸು ಮಾತ್ರ. ಅದನ್ನು ನೆನೆಯುವುದರ ಮೂಲಕ ಇಂದು ನಾವು ಮಾಡಬೇಕಾದುದೇನು? ಎನ್ನುವುದಕ್ಕೆ ಕವಿ ಮುಂದುವರೆದು:

ಧರ್ಮಕೆ ಮೈಗೊಡು। ಮೈತ್ರಿಯ ಗಳಿಸು

ನಾಡಿನ ನಲ್ಮೆಯ ಕಳೆಯದೆ ಉಳುಹು।

ಸ್ವಾತಂತ್ರ್ಯಕೆ ದುಡಿ। ಸಂತೃಪ್ತಿಯಲಿ।

ಬಾಳಿಲೆ ಜೀವವೆ, ಧರ್ಮದ ನೆಲೆಯಲಿ।

ಕಾಣುವೆ ನಾಕವ ಲೋಕದೊಳೆ

ಅಮೃತತೆ ಸೌಖ್ಯವ ಬಾಳಿನೊಳೆ।

ಮೆರೆಯಲಿ ವಿದ್ಯಾನಗರವು ಸಿರಿಮರಳಿ।

ಸುಗತಿಯನ್ನೈದಲಿ ಕಾಲವು ಹೊರಳಿ।[೮೧]

ತನ್ನ ಸಮಕಾಲೀನ ಸಂದರ್ಭದ ಸ್ವಾತಂತ್ರ್ಯ ಹೋರಾಟವನ್ನು ಎದುರಿಸಿ, ಆ ಮೂಲಕ ಹಿಂದಿನ ನಾಡಿನ ಸಿರಿಯನ್ನು ನಾವು ಮತ್ತೆ ಪಡೆದುಕೊಳ್ಳಬೇಕಾಗಿದೆ ಎಂದು ಕವಿ ಇಲ್ಲಿ ಕರೆಕೊಟ್ಟಿದ್ದಾರೆ.

ಹಿಂದೆ ಆಂಗ್ಲರ ಆಡಳಿತದಲ್ಲಿ ಸಿಕ್ಕು ದಾಸ್ಯದ ಬಾಳನ್ನು ಬಾಳುತ್ತಿದ್ದ ಸಂದರ್ಭದಲ್ಲಿ, ಅವರ ಆಡಳಿತದಿಂದ ಬಿಡುಗಡೆಗೊಂಡು ಸ್ವಾತಂತ್ರ್ಯದ ಬಾಳನ್ನು ಬಾಳಬೇಕು ಎಂಬ ಆಶಯ ಎಲ್ಲರದಾಗಿತ್ತು. ಬ್ರಿಟಿಷರ ಒಡೆದು ಆಳುವ ನೀತಿಯ ಹುನ್ನಾರದಿಂದಾಗಿ ಭಾರತೀಯರ ರಾಷ್ಟ್ರೀಯತೆಗೆ ಭಂಗವುಂಟಾಗಿತ್ತು. ಭಾರತ ವಾಸಿಗಳೆಲ್ಲರೂ ಒಂದೇ ರೀತಿಯ ಮನೋಭಾವ, ದೃಢವಾದ ಸಂಕಲ್ಪ ಹೊಂದಿ ನಾವೆಲ್ಲರೂ ಒಂದೇ ನಾಡಿನವರು. ಈ ನಾಡಿನ ಔನ್ನತ್ಯಕ್ಕಾಗಿಯೇ ಇರುವವರು ಎನ್ನುವಂತಹ ಭಾವನೆಯನ್ನು ಮೂಡಿಸುವುದು ಆಗಿನ ಸಂದರ್ಭದಲ್ಲಿ ಮುಖ್ಯವಾಗಿತ್ತು. ಅದಕ್ಕಾಗಿ ನಿಸ್ತೇಜರಾಗಿದ್ದ ಜನತೆಯಲ್ಲಿ ಚೇತನವನ್ನು ತುಂಬುವ ಕೆಲಸವನ್ನು ನೇತ್ಯಾತ್ಮಕ ವಿಧಾನದಿಂದ ಆಗಿನ ಕವಿಗಳು ಮಾಡಿದ್ದಾರೆ. ಏನೇ ಆದರೂ ಕವಿಯು ಎಷ್ಟೇ ಆಗಲಿ ಕವಿ ಜನಮನದ ಪ್ರತಿನಿಧಿ ಎನ್ನುವುದನ್ನು ಆ ಮೂಲಕ ತೋರಿಸಿಕೊಟ್ಟಿದ್ದಾರೆ. 'ರಾಮರಾಜನ ರಣಸಂದೇಶ' ಎನ್ನುವ ಕವನದಲ್ಲಿ ಇದೇ ಕೂಗು ಇದೆ.

ಶತ್ರುಸೈನ್ಯವನು ಸದೆಬಡೆದೋಡಿಸಿ ।

ಸಿಂಹಗಳಂದದೆ ಗರ್ಜಿಸಿರಿ ॥

ರಣೋತ್ಸಾಹವನು ತೋರಿಸಿರಿ ।

ಖಡ್ಗಗಳನು ಖಣಗುಟ್ಟಿಸಿರಿ ।

ಭುವನೇಶ್ವರಿಯನು ವಂದಿಸಿರಿ ।

ಭುವನದಿಕೀರ್ತಿಯಗಳಿಸಿಡಿರಿ॥[೮೨]

ತಾಳಿಕೋಟೆಯ ಯುದ್ಧದಲ್ಲಿ ವಿಜಯನಗರ ಸೈನ್ಯವು ಸೋತು ಸಾಮ್ರಾಜ್ಯ ದಾಳಿಗೀಡಾಯಿತು. ಈ ಕಾಲಗರ್ಭದಲ್ಲಿ ಯಾವುದೂ ಸ್ಥಿರವಲ್ಲ. ಒಮ್ಮೆ ವೈಭವದಿಂದಿದ್ದದ್ದು ಮತ್ತೊಮ್ಮೆ ವಿನಾಶವಾಗಬಹುದು. ವಿನಾಶವಾದಲ್ಲಿ ಹೊಸದೊಂದು ಉದಯಿಸಬಹುದು. ಇದು ಕಾಲನ ಸಹಜ ಕ್ರಿಯೆ. ಅದನ್ನು ತಪ್ಪಿಸಲಾಗದು ಎನ್ನುವುದು ಕನ್ನಡಿಗರ ಮನಃಸ್ಥಿತಿಯಾಗಿತ್ತು. ಆದರೆ ಇದ್ದುದನ್ನಾದರೂ ಉಳಿಸಿಕೊಳ್ಳಬೇಕಲ್ಲ. ಅದಕ್ಕೆ ಯಾವ ದೈವಲೀಲೆಯೂ ಬೇಕಿಲ್ಲ. ನಮ್ಮ ಪ್ರಯತ್ನವೇ ಅದಕ್ಕೆ ಮುಖ್ಯ. ಮಹಾಸಾಮ್ರಾಜ್ಯವೊಂದು ಮರೆಯಾಗಿಹೋಗಿದೆ. ಆದರೆ ಅದೇ ನೆಲದಲ್ಲಿಯೇ ನಾವು ನಾಡೊಂದನ್ನು ಕಟ್ಟಬೇಕಾಗಿದೆ.

ಕನ್ನಡದ ಕೀರ್ತಿಕಳೆಯಾದಿವರ ಶೌರ್ಯದಲಿ

ಹೆಮ್ಮೆಯಿಲ್ಲವೆ ನಿನಗೆ ?ಜಡನೆ ನೀನು ?

ಅವರೆತ್ತಿದೊಂದೊಂದು ಅಸಿಯಲಗಿನೊಸಗೆಯಲಿ

ಝುರ್ಝುರಿತವಾಯ್ತೆನ್ನ ನಾಳನಾಳಂ

ಅವರ ಬಿಲ್ಲಿಂದೊಗೆದ ಕಣೆಗಳೊಂದೊಂದರಲಿ

ಕುದಿದು ಚಿಮ್ಮದೆ ನಿನ್ನ ಹೃದಯ ರಕ್ತಂ ?

ಇದುವೆ ಮಡಿದರ ಗೆಲುವು,

ಬದುಕಿದರ ಸೋಲುವೀರದಿವಿಗೇರ್ವುದಕೆ ಮೆಟ್ಟಲಿನ ಸಾಲು.[೮೩]

ಎಂದು ಹಿಂದೆ ನಾಡಿಗಾಗಿ ಹೋರಾಡಿ ಮಡಿದ ವೀರರು ಮುಂದೆ ಕಟ್ಟಿಕೊಳ್ಳಬೇಕಾದ ನಾಡಿಗೆ ಸ್ಫೂರ್ತಿಯಾಗಿದ್ದಾರೆ. ಆ ವೀರರೆಲ್ಲರೂ ಉಸಿರಿರುವವರೆಗೆ ನಾಡಿನ ಪತಾಕೆ ಹಿಡಿದು ಹೋರಾಡಿದರು. ಮಹಾಭಾರತ ಯುದ್ಧದಲ್ಲಿ ನಿರ್ವೀರ್ಯನಾದ ಅರ್ಜುನನಿಗೆ ಕೃಷ್ಣ ಬೋಧಿಸಿದ ಗೀತೆ ಅವನೊಳಗಿನ ವಿವೇಕವನ್ನು ಎಚ್ಚರಿಸುವುದರ ಮೂಲಕ ಚೈತನ್ಯ ನೀಡಿತೋ, ಹಾಗೆಯೇ ಏಕೀಕರಣ ಹಾಗೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಂದ ಇಂತಹ ಗೀತೆಗಳು ಸಮಕಾಲೀನ ಸಂದರ್ಭದಲ್ಲಿದ್ದ ಜನರನ್ನು ಎಚ್ಚರಿಸುವ ಪ್ರಯತ್ನ ಮಾಡಿವೆ. 'ಪ್ರಳಯದಲಿ ಸೃಷ್ಟಿಯಿದೆ ಅದಕಾಗಿ ನೀ ಸಾಗು ಮುಂದೆ' ಎಂದು ಕವಿ ಹೇಳುತ್ತಾನೆ. ವಿದ್ಯಾರಣ್ಯ ಮುನಿಗಳು ಈ ನೆಲದಲ್ಲಿ ಕಟ್ಟಿದ ವಿಜಯನಗರವು ಇಡೀ ಜಗತ್ತೇ ತಿರುಗಿ ನೋಡುವಂತೆ ಬೆಳೆದಿತ್ತು. ಇಂದು ಅದು ಹಾಳಾಗಿ ಹೋಗಿದೆ. ಮತ್ತೆ ನೀನು ಅವತರಿಸಿ ಈ ನಾಡಿನ ಅಭ್ಯುದಯಕ್ಕೆ ಕಾರಣನಾಗಲಾರೆಯಾ ಎಂದು ಕವಿ ಪ್ರಶ್ನಿಸುತ್ತಾನೆ.

ಅಯ್ಯೋ, ಆ ಧವನ ಕೀರ್ತಿಯುತ ಧರ್ಮಧ್ವಜಮಿಂದು

ಕೊಂಕಿಹುದು! ಇದುವೆ ಕರ್ನಾಟಕ ಕೀರ್ತಿಲತೆಯ!

ಮುನಿದೇವ! ಗಂಭೀರ ಮೌನತೆಯನೆ ತಳೆದು,

ನೀನಾವ ತಪಮಾಚರಿಪೆ? ಇದು ಯೋಗಸಾಧನೆ–

ಯೇ? ಮೇಣ್, ಮಾತೆಯನುದ್ಧರಿಪ ನಿವೃತಿಯ ಸಿದ್ಧಿಯೇ?

ಅವುದುದು? ಮುನಿವರ್ಯ ಸಾಧನೆಯೋ? ಮೋಚನೆಯೋ?[೮೪]

ಯಾರ ಉಪಟಳದಿಂದ ನೊಂದು ಕರ್ನಾಟಕವನ್ನು ಕಟ್ಟಿದೆಯೋ, ಈ ನಾಡಿನಲ್ಲಿ ಮತ್ತೆ ಅಂತವರ ಉಪಟಳಗಳು ಹೆಚ್ಚಾಗಿವೆ. ಕಂಗೊಳಿಸುತ್ತಿದ್ದ ಸೊಬಗು ಕಾಣದಾಗಿದೆ. ನೀನೊಮ್ಮೆ ಬಾ ಮತ್ತೆ ನಾಡು ಕಟ್ಟಲಿಕೆ ಸ್ಫೂರ್ತಿಯನು ನೀಡು ಎನ್ನುತ್ತಾ ಕವಿಯ ಸ್ವಸ್ಫೂರ್ತಿಯನ್ನು ತುಂಬಿಕೊಳ್ಳುತ್ತಿದ್ದಾನೆ.

ಈ. ಕುವೆಂಪು

ನವೋದಯದ ಸಂದರ್ಭದ ಕವಿಗಳಲ್ಲಿ ಪ್ರಮುಖರಾದ ಕುವೆಂಪು ಅವರ ಕವಿತೆಯ ಮೇಲೆ ಪಶ್ಚಿಮದ ರೊಮ್ಯಾಂಟಿಕ್‌ನ ಪ್ರಭಾವವಿದೆ. ಕುವೆಂಪುರವರು ತಮ್ಮ 'ಹಂಪೆಯ ಭೀಮ' ಎನ್ನುವ ಕವಿತೆಯಲ್ಲಿ ದೇಶಿಯ ಪರಂಪರೆಯನ್ನು ಕುರಿತು ಹೇಳಿರುವುದು ಕಂಡು ಬರುತ್ತದೆ.

ಮುಸ್ಲಿಮರ ದಾಳಿಯಿಂದ ಸಂಪದ್ಭರಿತವಾದ, ವೈವಿಧ್ಯಮಯವಾದ ಹಂಪೆಯೆಲ್ಲ ಹಾಳಾಗಿ ಹೋಗಿದೆ. ಹಂಪೆಯ ದ್ವಾರಬಾಗಿಲಿನಲ್ಲಿ ನೀನು ಇಲ್ಲೇಕೆ ನಿಂತು ಕಾಯುತ್ತಿರುವೆ ಎಂದು ಕವಿ ಪ್ರಶ್ನಿಸುವಲ್ಲಿ, ಹಾಳಾದ ಹಂಪೆಯನ್ನು ಉದ್ಧರಿಸುವುದು ಬಿಟ್ಟು ಅದನ್ನು ಕಾಯ್ದರೆ ಏನು ಪ್ರಯೋಜನ ಎನ್ನುವ ಮಾತುಗಳು ನಿಸ್ತೇಜವಾದ ಕನ್ನಡಿಗರ ಸಂಸ್ಕೃತಿಯನ್ನು ಪುನರ್ ಸ್ಥಾಪಿಸುವುದಕ್ಕೆ ಮುನ್ನುಗ್ಗುವಂತೆ 'ಹಂಪೆಯ ಭೀಮ' ಎನ್ನುವ ಕವನದಲ್ಲಿ ಕರೆ ಕೊಡುತ್ತಾರೆ. ರನ್ನ ಪಂಪಾದಿ ಕವಿಗಳ ಕಾವ್ಯದಲ್ಲಿ ನಾನು ಶೂರನಾದ, ಧೀರನಾದ ಭೀಮನನ್ನು ಕಂಡಿದ್ದೆ, ವೀರೋತ್ಸಾಹದ ಕಲಿ ಭೀಮನನ್ನು ಅಲ್ಲಿ ಕಂಡೆ, ಆದರೆ! ಇಂದು ಹಾಳಾದ ಹಂಪೆಯ ಬಾಗಿಲಲಿ ನೀ ನಿಂತು ರೋಧಿಸುತ್ತಿರುವುದು ಕಂಡು ನಾನು ಆಶ್ಚರ್ಯಗೊಂಡಿದ್ದೇನೆ ಎಂದು ಹೇಳುವರು. ಕವಿಯು ಕನ್ನಡ ನಾಡಿನ ವೀರತ್ವದ ಸಂಕೇತವಾಗಿ ಹುಟ್ಟಿಕೊಂಡಿದ್ದ ಮಹಾಸಾಮ್ರಾಜ್ಯ ಮುಸ್ಲಿಮರ ದಾಳಿಯಿಂದ ಅವನತಿಗೀಡಾಯಿತು. ಅವನತಿ ಹೊಂದಿರುವ ಸ್ಥಳದಲ್ಲಿರುವ ವೀರ ಕನ್ನಡಿಗರೇ ಹಿಂದಿನ ಸಾಹಿತ್ಯದಲ್ಲಿ ನಾನು ಕನ್ನಡಿಗರ ಶೌರ್ಯವನ್ನು, ಸಾಹಸವನ್ನು ಕಂಡಿದ್ದೇನೆ. ಈ ರೀತಿ ಕೈಕಟ್ಟಿ ಕೂತು ಚಿಂತಾಕ್ರಾಂತರಾಗಿರುವವರನ್ನು ನೋಡಿರಲಿಲ್ಲ. ಅದೂ ವೀರ ಕನ್ನಡಿಗರ ಲಕ್ಷಣವೂ ಅಲ್ಲ ಎಂದು ಹೇಳುತ್ತಾ ಕನ್ನಡ ನಾಡನ್ನು ಕಟ್ಟಿಕೊಳ್ಳಬೇಕಾದ ಸಮಕಾಲೀನ ಸಂದರ್ಭದಲ್ಲಿನ ಹೋರಾಟಕ್ಕೆ ಜನರನ್ನು ಸನ್ನದ್ಧರಾಗುವಂತೆ ಈ ಮುಂದಿನಂತೆ ಕರೆಕೊಡುತ್ತಾರೆ.

"ರನ್ನ ಪಂಪರ ಮಹಾಕಾವ್ಯ ರಸರಂಗದಲಿ

ಭಾರತದ ಕೊಳುಗುಳದಿ ನಿನ್ನ ನೋಡಿಹೆನು?

ಕಂಬನಿಯ ಕರೆವ ಭೀಮನನಲ್ಲಿ ಕಂಡಿಲ್ಲ,

ಜಯಮತ್ತ ರುದ್ರ ಮಾರುತಿಯ ಕಂಡೆ!

ನಮಿಸುವ ಹಿಮಾಲಯದ ಕಂಡು ವಿಸ್ಮಿತನಾದೆ,

ಹಂಪೆಯಲಿ, ಭೀಮ, ನೀನಳುವುದನು ಕಂಡೆ !"[೮೫]

ಎನ್ನುವುದು ಒಂದು ಕಾಲದಲ್ಲಿ ಆ ನಿನ್ನ ಗದೆಯಿಂದ ಯಾವ ರೀತಿ ದುಷ್ಟ ಶಕ್ತಿಯನ್ನು ಶಿಕ್ಷಿಸಿದೆಯೋ, ಹಾಗೆಯೇ ಇಂದು ಅಂದಿನಂತೆ ದುಷ್ಟ ಶಕ್ತಿಯನ್ನು ಸದೆಬಡಿಯಬೇಕಾಗಿದೆ. ಇಲ್ಲಿಗೆ ಬಂದು ಮಸಣದಂತಿರುವ ಹಂಪೆಯನ್ನು ಕಂಡ ಯಾತ್ರಿಕರಿಗೆ ಆ ನಿನ್ನ ಗದೆಯು ಸ್ಫೂರ್ತಿಯನ್ನು ನೀಡಲಿ. ಆ ಮೂಲಕ ಅವರು ಕಳೆದುಹೋದ ಈ ನಾಡಿನ ವೈಭವವನ್ನು, ಮಂಕು ಹಿಡಿದ ಸಂಸ್ಕೃತಿಯಲ್ಲಿ ಚೈತನ್ಯವನ್ನು ತುಂಬಿಕೊಳ್ಳುವ ಶಕ್ತಿಯನ್ನು ತುಂಬು, ಎನ್ನುತ್ತಾ ದೇಶ ಮತ್ತು ನಾಡನ್ನು ಕಟ್ಟಿಕೊಳ್ಳಲು ಬೇಕಾದ ಸಾಮರ್ಥ್ಯ ಕನ್ನಡಿಗರಲ್ಲಿ ಬರಲಿ ಎಂದು ಆಶಿಸುತ್ತಾರೆ.

ಉ. ದ.ರಾ.ಬೇಂದ್ರೆ

ಬೇಂದ್ರೆಯವರ 'ಹಂಪಿ–ವಿಜಯನಗರ ದರ್ಶನ' ಎನ್ನುವ ಪದ್ಯಕ್ಕೆ ವ್ಯಕ್ತವಾಗಿರುವುದನ್ನು ಈ ಕೆಳಗೆ ಉದಾಹರಿಸಬಹುದು.

"ತಾಳವಿಲ್ಲದಂತೆ ಬೇತಾಳನಂದದಿ ಕುಣಿತ

ಕಾಳ ನರ್ತಕನ ಕಾಲ್ಕೆಳಗೆ ತೊತ್ತುಳಿಗೊಂಡು

ಹಾಳಾಗಿ ಹುಡಿಗೂಡಿ ಹೋದ ಕನ್ನಡ ನಾಡಿಗಿದಿರಾಗಿ ಬಂದು ನಿಂದು

ಹಾಳುಗಳ ಹೊರವೊಳಗೆ ಹಾಳುಗಳ ಸಾಲುಗಳು

ಬೀಳುಗಳ ಬದಿಬದಿಗೆ ಬೀಳುಗಳ ಬಾಳುಗಳು

ಕಾಳ ರಕ್ಕಸನ ಕಡೆಕೂಳು–ಬಾಳಕವಾದ ನಾಡ ನಡುಮನೆಯ ಕಂಡೆ

೨

ಕನಸೆನಲೊ, ಕಾಡು ಪಾಲಾದ ಭೂಪಾಲಕನ

ಮನಸೆನಲೊ, ಮೋಡದೊಳು ಮೂಡಿ ಮಸುಳುವ ಚಿತ್ರ

ವೆನಲೋ, ಕಂಪಡಗಿ ಪೆಂಪುಡುಗಿ ಬಣ್ಣವು ಕೆಟ್ಟ ನಿರ್ಮಾಲ್ಯ ಮಾಲೆಯೆನವೋ?

ನೆನಸಿ ಕೃತಕರ್ಮ ಪಶ್ಚಾತ್ತಾಪದಿಂ ಬೆಂದು

ಜನಿಸಿ ಸುಜ್ಞಾನ; 'ಉದ್ಧಾರ ಮಾಡಿರಿ' ಎಂದು

ಮನಸಿನಿಂದೆರಗಿರುವನೆನಲೊ–ಪಾತಕಿ ಬಂದು

ಪಾವನನ ಚರಣಗಳಿಗೆ.

೩

ಬಿದ್ದ ರಾಜ್ಯವಿದಲ್ಲ ಉದ್ಬುದ್ಧವಾಗಿದ್ದು

ಎದ್ದ ರಾಜ್ಯದ ಮೊಳಕೆಯಿದು, ಇದರ ಬಳಿಯಲ್ಲಿ

ಇದ್ದ ಸಂಜೀವನದ ಜಪಿಸುವಂತಹ ಯೋಗಿ

ಕೊಂಪೆ ಹಂಪೆಯ ಇದಲ್ಲ"[೮೭]

ಹೀಗೆ ಬೇಂದ್ರೆಯವರು ಹಂಪೆಯ ದರ್ಶನದಲ್ಲಿ ಅಂದು ಬೆಳೆದ ಕನ್ನಡನಾಡುವೈರಿಗಳ ಕುತಂತ್ರದಿಂದ ಕೊಂಪೆಯಾದ ಸ್ಥಿತಿಯನ್ನು ತಿಳಿಸುತ್ತದೆ. ಹಂಪೆಯನ್ನು ನೋಡುವ ದೃಷ್ಟಿ ಬೇಂದ್ರೆಯವರ ಈ ಕವನದಲ್ಲಿ ವಿಶಿಷ್ಟವಾಗಿ ಚಿತ್ರಿಸಿದ್ದಾರೆ.

ಹಂಪಿಯನ್ನು ನೋಡಿದ ವರಕವಿ ಬೇಂದ್ರೆಯವರು ಒಂದು ಸಂದರ್ಭದಲ್ಲಿ ಮೆರೆದು ಮಾಯವಾದ ಸಾಮ್ರಾಜ್ಯವನ್ನು ಕುರಿತು ವಿಜಯನಗರವು ಕರ್ನಾಟಕದ ಕೇಂದ್ರ ಸ್ಥಳವಾಗಿತ್ತು. ಹಂಪೆಯು ಹಾಳಾಗಿ ಹೋಗಿದ್ದರೂ ಅದು ನಾಡಿನ ನಡುಮನೆಯಂತೆ ಇತ್ತು. ನಡುಮನೆಯ ಎಷ್ಟೇ ಹಾಳಾಗಿದ್ದರೂ ಅದಕ್ಕೆ ತನ್ನದೇ ಆದ ಮಹತ್ವವಿರುವಂತೆ, ವಿಜಯನಗರಕ್ಕೂ ತನ್ನದೇ ಆದ ಮಹತ್ವವಿದೆ. ಸಾಂಸ್ಕೃತಿಕ ಕರ್ನಾಟಕ ಎಂದು ಗುರುತಿಸಿದ ಪ್ರದೇಶದ ಕೇಂದ್ರಸ್ಥಳವದು. ಆ ಸಂದರ್ಭದಲ್ಲಿ ಅಖಂಡ ಕರ್ನಾಟಕದ ಕಲ್ಪನೆಯನ್ನು ಹೊತ್ತು ಹೊರಟ್ಟಿದ್ದವರಿಗೆ ಹಂಪಿಯು ಪ್ರೇರಕವಾಯಿತು. ಆ ಸ್ಥಳದಲ್ಲಿಯೇ ಕರ್ನಾಟಕ ಏಕೀಕರಣದ ಹೋರಾಟ ತೀವ್ರಗೊಳ್ಳತೊಡಗಿತು.ಈ ಸಾಮ್ರಾಜ್ಯವು ಅನ್ಯರ ದಾಳಿಯಿಂದ ಅವನತಿ ಹೊಂದಿದ್ದರೂ, ಕವಿಯ ಆ ನೆಲದ ಮೇಲಿನ ಪ್ರೇಮ ಅದನ್ನು ಒಪ್ಪುತ್ತಿಲ್ಲ. ಈ ಸಾಮ್ರಾಜ್ಯ ಇಲ್ಲಿಯೇ ಇದೆ; ಇದು ನಾಶವಾಗಿಲ್ಲ; ಮತ್ತೆ ಹುಟ್ಟುವ ಶಕ್ತಿಯನ್ನು ಹೊಂದಿದೆ. ಇದು ಒಂದು ರೀತಿಯಲ್ಲಿ ಸಂಜೀವಿನಿಯಂತಹದ್ದು ಎಂದು ಕವಿಗಳು ಎನ್ನುತ್ತಾರೆ. ಬೇಂದ್ರೆಯಂತಹ ಕವಿಗಳಿಗೆ ವಿಜಯನಗರವು ಬರಡಲ್ಲ; ಅದು ತುಂಗೆಯಂತೆ ಸದಾ ಹೊಸದರೊಂದಿಗೆ ಉದಯಿಸುವ ನಾಡಾಗಿ ಕಾಣುತ್ತದೆ. ಅಂದರೆ ಅಂತಹ ಸಾಮ್ರಾಜ್ಯದ ಸ್ಫೂರ್ತಿ ಇಂದು ನಮಗಾಗಿ, ಆ ಮೂಲಕ ನಾವು ಅಂತಹ ನಾಡೊಂದನ್ನು ಕಟ್ಟಿಕೊಳ್ಳಬೇಕಾಗಿದೆ ಎನ್ನುವುದು ಕವಿಯ ಅಂತರಾಳದ ತುಡಿತ, ಮಿಡಿತಗಳು ಇಲ್ಲಿ ಮೂಡಿ ಬಂದಿವೆ. ಅಲ್ಲದೆ ಅವರೇ ತಮ್ಮ 'ದೊಡ್ಡವರು' ಕವನದಲ್ಲಿ ಕನ್ನಡ ನಾಡಿನ ಶಿಲ್ಪಕಲೆಯ ಸೌಂದರ್ಯವನ್ನು ವರ್ಣಿಸುತ್ತಾ ವಿಜಯನಗರದ ಸಾಸಿವೆ ಗಣಪ, ಹಂಪಿಯ ವಿಠ್ಠಲನ ದೇವಸ್ಥಾನದ ಸಪ್ತಸ್ವರ ನುಡಿಯುವ ಕಂಬಗಳು ಮತ್ತು ಶಾಸನ ಇವೆಲ್ಲವುಗಳು ಕನ್ನಡಿಗರ ನಾಡಿನ ಭವ್ಯ ಪರಂಪರೆಯ ಸಂದೇಶವನ್ನು ಹೊತ್ತು ನಿಂತಂತವು. ಹಾಗೆಯೇ ಈ ನಾಡಿನ ಸಂಸ್ಕೃತಿಯ ಪ್ರತೀಕಗಳು ಹೌದು. ಸಮಾಧಿಯಂತಿರುವ ಈ ಶಿಲೆಗಳಿಗೆ ಜೀವ ತುಂಬಬೇಕಾಗಿದೆ ಎನ್ನುವುದನ್ನು ಮಾರ್ಮಿಕವಾಗಿ ಕವಿ ಬೇಂದ್ರೆಯವರು ಇಲ್ಲಿ ಹಂಪಿಯ ಮತ್ತು ಅಲ್ಲಿನ ಕೆಲ ಪ್ರೇಕ್ಷಣೀಯ ಸ್ಥಳಗಳನ್ನು ಚಾರಿತ್ರಿಕವಾಗಿ ದಾಖಲಿಸಿದರೂ ಸಾಹಿತ್ಯಕವಾಗಿ ಹಂಪಿಯನ್ನು ನೋಡುವ ದೃಷ್ಟಿಕೋನ ವಿಶಿಷ್ಟವಾಗಿದೆ.

ಊ. ವಿ.ಕೃ.ಗೋಕಾಕ್

ವಿ.ಕೃ.ಗೋಕಾಕರು ತಮ್ಮ ಕವನದಲ್ಲಿ ಭವ್ಯ ಸಂಸ್ಕೃತಿಯನ್ನು ಎತ್ತಿ ಇಡೀ ಜಗತ್ತಿಗೆ ಸಾರಿದ ವಿಜಯನಗರ ಸಾಮ್ರಾಜ್ಯ ಸರ್ವಧರ್ಮಗಳ ಸಾಂಕೇತಿಕವಾದ ನಾಡು ಪರಕೀಯ ದಾಳಿಯಿಂದ ಮಸಣದ ಬೀಡಾಗಿರುವುದನ್ನು ಕವಿಗಳು ಇಲ್ಲಿ ವ್ಯಕ್ತಪಡಿಸಿರುವುದನ್ನು ಕಾಣಬಹುದಾಗಿದೆ. ಇಂತಲ್ಲ! ಹೊಸತೊಂದು ಸ್ಫೂರ್ತಿಯದು ಜನಿಸುವುದು. ಇಲ್ಲಿ ವಿ.ಕೃ.ಗೋಕಾಕ್‌ರವರು ಕನ್ನಡಿಗರ ಹೃದಯವು ಈ ನಾಡಿನ ಭವ್ಯತೆಗೆ ಪಡಿಮಿಡಿಯುತ್ತಿರುವುದರಿಂದ ಈ ನಾಡಿಗೆ ಧಕ್ಕೆಯಾಗಲಾರದು ಹಾಗೂ ನಾಶವಾಗಿರುವ ಈ ವಿಜಯನಗರ ಸೃಷ್ಟಿಯ ಸಹಜಕ್ರಿಯೆ ಆಗಿದೆ. ಆದ್ದರಿಂದ ನಾವು ಸದಾ ಕಾಲ ಸನ್ನದ್ಧರಾಗಿ ಇದ್ದು, ಅಂತಹ

ಸಾಮ್ರಾಜ್ಯವನ್ನು ಕಟ್ಟಿಕೊಳ್ಳುವ ಭರವಸೆ; ಆಕಾಂಕ್ಷೆಯನ್ನು ಇಟ್ಟುಕೊಳ್ಳುವ ಮಾತು ಧ್ಯೇಯವಂತಿಕೆಯ ಪ್ರತೀಕವಾಗಿದೆ. ಅದಕ್ಕಾಗಿ ಗೋಕಾಕರು ನಾಡಿನಾದ್ಯಂತ ಸಂಚಾರ ಮಾಡಲು ಇನ್ನೊಂದು ಕವನದಲ್ಲಿ ವ್ಯಕ್ತವಾಗಿದೆ.

"ಅದಕಂತೆ ಕರುನಾಡ ತುಂಬ ಸಂಚರಿಸುವೆನು

ಹಿಂದಿನವರೆನಕ ತಣಿಸದಿಹ ಚೆಂತರರಂತೆ;

ಇಂದಿನವರನು ಕನಸಿನಲಿ ಹೋಗಿ ಹರಸುವೆನು;

ಅವರೆದೆಯು ಪುಟಿಯುವದ ನೋಡಿ ತುಂತುರದಂತೆ

ಹಿಂದಿನವರನು ನೆನೆದು ಮುಂದಿಹುದ ಸ್ಮರಿಸುವೆನು;

ಕಂಡುಬರುತಿಹದೊಂದು ಯುಗ ಯುಂಗಾಂತರದಂತೆ!"[೮೭]

ಇಲ್ಲಿ ಕವಿ ಗೋಕಾಕರು ನಾಡನ್ನು ಕಟ್ಟಿದ ಹಿಂದಿನವರ ಶ್ರೇಯಸ್ಸಿಗೆ ನಾವೆಲ್ಲರೂ ಋಣಿಯಾಗಬೇಕೆಂದು, ಮುಂದಿನವರು ಏನು ಮಾಡಬೇಕು ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅಂದರೆ ಮುಂದಿನ ಪೀಳಿಗೆಗೆ ಕಾಮಧೇನು ಕಲ್ಪವೃಕ್ಷದಂತೆ, ಅದು ವರವಾಗಿರಬೇಕು ಎಂಬ ಭಾವ ಇಲ್ಲಿದೆ.

೩. ಗೋಪಾಲಕೃಷ್ಣ ಅಡಿಗ

ಗೋಪಾಲಕೃಷ್ಣ ಅಡಿಗರ 'ವಿಜಯನಗರದ ನೆನಪು' ಕವನದಲ್ಲಿ ವಿಜಯನಗರ ಸಾಮ್ರಾಜ್ಯದ ಉನ್ನತಿ ಮತ್ತು ಅವನತಿಯ ಚಿತ್ರಣವನ್ನು ನೀಡುವುದರೊಂದಿಗೆ, ಭಾಷೆಗಾಗಿ ಹೋರಾಡುವಂತೆ ಇಲ್ಲಿ ವ್ಯಕ್ತಪಡಿಸಲಾಗಿದೆ.

"ಆರ್ನೂರು ವರ್ಷಗಳ ಜವನಿಕೆಯ ತೆರೆದುನ

ಮ್ಮಾ ರಾಜ್ಯದಾ ವಿಭವದುನ್ನತಿಯ ನೋಡು;

ಧೀರಗಂಭೀರತೆಯ, ತತ್ವಸತ್ವೋನ್ನತಿಯ

ವಾರಿನಿಧಿಯಲಿ ಮಿಂದು ಬಳಿಕ ಮುಂದೋಡು ।

....

ನಮ್ಮ ಹೆಮ್ಮೆಯ ಮಕುಟ ಗಂಡುತನದೇರಾಟ

ನಮ್ಮ ಸಂಸ್ಕೃತಿಕಲೆಗಳೊಂದು ಸವಿಯೂಟ;

ನಮ್ಮ ಬೆಳ್ವಸದ ಗಾದೆ, ಸಾಹಸದ ತುತ್ತತುದಿ

ನಮ್ಮ ಸ್ವತ್ವದ ಸತ್ವದುರಿ ವಿಜಯನಗರಿ।"[೮೮]

ಇಲ್ಲಿ ವ್ಯಕ್ತವಾಗಿರುವುದು ಸ್ವಾಭಿಮಾನ ಪ್ರಶ್ನೆ. ಯಾವಾಗ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗುತ್ತದೆಯೋ ಆಗ ಸ್ವಾಭಿಮಾನವುಳ್ಳ ಪ್ರತಿಯೊಬ್ಬನಲ್ಲಿ ಇದು ಕಾಣಿಸಿಕೊಳ್ಳುತ್ತದೆ. ಆಗ ಅದನ್ನು ನನ್ನದು ಎನ್ನುವ ಹಕ್ಕೊತ್ತಾಯದ ಮೂಲಕ ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಎನ್ನುವ ಅಡಿಗರು ಸ್ವಾಭಿಮಾನದ ಮಹತ್ವವನ್ನು ಹಾಗೂ ಅದನ್ನು ಬೆಳೆಸಿಕೊಳ್ಳುವ ಪರಿಯನ್ನು ಹಾಗೆಯೇ ಕನ್ನಡ ನಾಡಿನ ಸಂಸ್ಕೃತಿಯನ್ನು ಈ ಕವನದಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದಾಗಿದೆ.

ಎ. ಎ.ಲಕ್ಷ್ಮಣರಾವ್

ವಿ.ಲಕ್ಷ್ಮಣರಾವ್ ಅವರು 'ಹಂಪೆಗೆ' ಎನ್ನುವ ಪದ್ಯದಲ್ಲಿ ೧೪ನೇ ಶತಮಾನದಲ್ಲಿ ಜನ್ಮತಾಳಿ ಹಿಂದೂ ಸಾಮ್ರಾಜ್ಯಕ್ಕೆ ಸುವರ್ಣ ಯುಗವೆಂದು ಬಿರುದಿತ್ತ ವಿಜಯನಗರ ಸಾಮ್ರಾಜ್ಯ ಕನ್ನಡ ನಾಡಿನ ಐಸಿರಿಯನ್ನು ಬೆಳಗಿಸಿದ್ದು ಕಂಡು ಕವಿ ಲಕ್ಷಣರಾವ್. 'ಹಂಪೆಗೆ' ಎನ್ನುವ ಪದ್ಯದಲ್ಲಿ ತಮ್ಮ ಭಾವನೆಯನ್ನು ಈ ರೀತಿ ತೋಡಿಕೊಂಡಿದ್ದಾರೆ.

"ನಿದ್ದೆ ಬಾರದು ಇನ್ನೂ ಈ ಜನ್ಮಕೆ

ಬಿದ್ದ ಹಂಪೆಯ ಕಂಡು ಕಂಗೆಟ್ಟನು

ಕನ್ನಡದ ತಾಯ್ ಬೇರು ನೀರಡಿಸಿದೆ

ಹೊನ್ನನು ಹೊಳೆ ಅದರ ಬಳಿ ತಾಳೊಣಗಿದೆ

ಚೆನ್ನು ಚೆಲುವಿನ ಹಂಪೆ ಹೆಳವಾಗಿದೆ

ಎನ್ನ ತಾಯ್‌ಮನೆ ತಾನು ಬರಡಾಗಿದೆ.

ತುಂಗಭದ್ರೆಯ ಕೂಸಿನುಸಿರಡಗಿದೆ

ಮಂಗಳದ ಆ ಹೆಸರು ಹದಗೆಟ್ಟಿದೆ

ಸಂಗಡಲೆ ಬನ್ನಿರೈ ! ಕನ್ನಡಿಗರೈ !

ಹಿಂಗದಿರೆ ! ಪ್ರೇಮದೊರೆ ಕನ್ನಡಿಗರೆ

ಶತಮಾನ ನಾಲ್ಕಾಯ್ತು ವಿಜಯನಗರಿ

ಅತಿನಿದ್ದೆ ಗತಿಹೊಂದಿ ಅವರ ನಗರಿ ಮತಿಯಿತ್ತು ಧೃತಿಯಿತ್ತು ಕನ್ನಡಿಗರೆ

ಗತಿಸಿರುವ ಕೀರ್ತಿಪದ ಗಳಿಸಿಕೊಳಿರಿ

ಗಾಯವನೆ ಮಾಡಿದನು ಮುಸಲಬಂಧು

ಕಾಯದಲೆ ಕೊಲ್ಲಿಸಿದ ಕನ್ನಡಿಗನೆಂದು ತಾಯೆ ಈ ನುಡಿಸಲ್ಲ ! ಬಲ್ಲ ವಿಧಿಯು ! ಈ ಯುಗಕೆ

ಅವರನ್ನು ಮನ್ನಿಸವ್ವ ಭಿನ್ನಮೂರ್ತಿಗಳನ್ನು ನಿನ್ನಂಕದಲ್ಲಿ ಇನ್ನೆಷ್ಟು ದಿನವಿಟ್ಟು ಗೋಳಾಡವಿ ಮುನ್ನಿನಾ ನೆನಹಿನಲಿ ಹೊನ್ನು ಹೊಳೆಯು ಕನ್ನಡಿಗ ಹರಿಸುವನು ಕಣ್ಣೊರಸಿಕೆ”[೮೯]

ಇಲ್ಲಿ ಕವಿ ಲಕ್ಷಣರಾವ್ ಅವರ ಹಂಪೆಯು ಹಾಳಾಗಿರುವುದನ್ನು ಕಂಡು ನನಗೆ ನಿದ್ದೆಬಾರದು ಎನ್ನುವಲ್ಲಿ ಕವಿಯ ನೋವು ವ್ಯಕ್ತವಾಗಿದೆ. ಕನ್ನಡನಾಡಿನ ತಾಯಿಬೇರು ನೀರಡಿಸಿದೆ ಎನ್ನುವಲ್ಲಿ ಆ ಸಾಮ್ರಾಜ್ಯದ ವೈಭವವು ಹೊನ್ನ ಹೊಳೆಯಂತೆ ಹರಿದು ಇಂದು ಒಣಗಿದೆ. ಕವಿಗಳು ಸುಂದರವಾದ ಹಂಪೆ ಬಡವಾಗಿದೆ; ಬರಡಾಗಿದೆ ಎಂದು ಹೇಳುತ್ತಾರೆ. ಇನ್ನು ಮುಂದುವರೆದು ತುಂಗಭದ್ರೆಯ ನದಿಯ ದಂಡೆಯಲ್ಲಿ ಬೆಳೆದ ಈ ಹಂಪೆ ಹೆಸರು ಕಟ್ಟಿದೆ. ಅದಕ್ಕಾಗಿ ಕೂಡಲೇ ಕನ್ನಡಿಗರೆ ಪ್ರೇಮ ದೊರೆಗಳೇ ಬನ್ನಿರಿ ಎಂದು ಕರೆಯುವಲ್ಲಿ ಕವಿಯ ಮನೋಧರ್ಮ ಅರ್ಥಗರ್ಭಿತವಾಗಿದೆ ವಿಜಯನಗರ ಸಾಮ್ರಾಜ್ಯ ಅಮರನಗರವಾಗಿ ಹಾಳಾಗಿ ಹೋಗಿದ್ದನ್ನು ಕಂಡು ಹಿಂದೆ ಪಡೆದ ಕೀರ್ತಿಯನ್ನು ಪಡೆದುಕೊಳ್ಳೋಣವೆಂದು ಕರೆಯುತ್ತಾರೆ. ಮುಸ್ಲಿಂರು? ಬಾದು ಮೋಸದಿಂದ ಬಂದು ಕೊಲ್ಲಿಸಿದ್ದು ನಾಚಿಕೆಗೇಡು ರಣರಂಗದಲ್ಲಿ ಕಾದದೆ ಎನ್ನುವಲ್ಲಿ ಮೋಸಕ್ಕೆ ಬಲಿಯಾಯ್ತು ಎನ್ನುವ ನೋವು ಇಲ್ಲಿದೆ ವಿವಿಧ ಮೂರ್ತಿಗಳನ್ನು ನಿನ್ನಲ್ಲಿಟ್ಟುಕೊಂಡು ಇನ್ನೆಷ್ಟು ಗೋಳಾಡಿರಿ ಎಂದು ಪ್ರಶ್ನಿಸಿ ಕಳೆದ ಆ ದಿನಗಳ ಸ್ಮರಣೆಯಲ್ಲಿ ಹೊನ್ನಿನ ಹೊಳೆಯನ್ನು ಕನ್ನಡಿಗರ ಮತ್ತೆ ಸ್ಪುರಿಸುವನು ಕಣ್ಣೊರಿಸಿಕೋ ಎಂದು 'ಹಂಪೆಗೆ' ಕವಿ ಭಿನ್ನವತ್ತಿಕೊಳ್ಳುತ್ತಾನೆ. ಹೀಗೆ ಹಂಪಿಯು ವಿಜಯನಗರ ಸಾಮ್ರಾಜ್ಯದ ವೈಭವ ಹಾಗೂ ಅವನತಿಯ ಸ್ಥಿತಿ-ಗತಿಗಳನ್ನು ಕವಿಗಳು ಕವಿತೆಗಳಲ್ಲಿ ವ್ಯಕ್ತಪಡಿಸಿರುವುದನ್ನು ಕಾಣಬಹುದಾಗಿದೆ.

ಏ. ಜೋಳದರಾಶಿ ದೊಡ್ಡನಗೌಡ

ಜೋಳದರಾಶಿ ದೊಡ್ಡನಗೌಡರು ತಮ್ಮ 'ವಿದ್ಯಾರಣ್ಯ' ಎನ್ನುವ ಕವನದಲ್ಲಿ ವಿಜಯನಗರ ಸ್ಥಾಪನೆಯ ಕಾಲಕ್ಕೆ ಎದೆಗುಂದಿದ ಹಕ್ಕ ಬುಕ್ಕರಿಗೆ ಚೇತನವಿತ್ತು, ಉತ್ಸಾಹ ತುಂಬಿ ಹೊಸ ಸಾಮ್ರಾಜ್ಯದ ಉದಯಕ್ಕೆ ಹೇಗೆ ಕಾರಣನಾಗಿದ್ದೆಯೋ, ಹಾಗೆಯೇ ಇಂದು ಅಂತಹ ಚೇತನ ಶಕ್ತಿಯಾಗಿ ಮತ್ತೆ ಈ ನೆಲದಲ್ಲಿ ಹುಟ್ಟಿ ಬಾ ಎನ್ನುತ್ತಾರೆ. ನಿನ್ನ ತಪಶ್ಶಕ್ತಿಯಿಂದ, ಕಲಿಗಳ ಶೌರ್ಯದ ಸಹಾಯದಿಂದ, ದೈವದ ಒಲುಮೆ ಈ ಮೂರರ ಮುಪ್ಪುರಿಗೆಯಿಂದ ಚೆಲುವಾದ ನಾಡನ್ನು ಕಟ್ಟಿರುವೆ. ಚೆಂದದ ಅಂದಿನ ಹಂಪೆ ಇಂದು ಹಾಳು ಕೊಂಪೆಯಾಗಿದೆ. ಅದಕ್ಕಾಗಿ ನಿನ್ನ ಮಾರ್ಗದರ್ಶನ ನಮಗೆ ಬೇಕು ಎನ್ನುತ್ತಾ:

ಈ ತೆರೆದ ಸಾಮ್ರಾಜ್ಯ ಸಿರಿಯಂ

ಪ್ರೀತಿಯಿಂದೆಮಗಿತ್ತು ನೀಂ ಮರೆ-

ಯಾದೆ ನಿಸ್ವಾರ್ಥದಲಿಯಮ್ಮಂತೊರೆದು ಅಂದಿನದಿ

ಅದರೇನದೆ ಕಳೆದುಕೊಂಡವು

ದಾತ ನಿನ್ನಂ ಶರಣು ಪೊಕ್ಕೆವು

ಬಾ ತಿರುಗಿ ಮತ್ತೊಮ್ಮೆ ವಿದ್ಯಾರಣ್ಯ ಗುರುಮೂರ್ತಿ![೧೦]

ಹಂಪಿಯು ಒಬ್ಬೊಬ್ಬ ಅರಸರ ಕಾಲದಲ್ಲಿ ಒಂದೊಂದು ರೂಪತಾಳಿ ನಿಂತಿತಲ್ಲ. ಕೆಲ ಅರಸರ ಕಾಲದಲ್ಲಿ ವೈಭವದಿಂದ ಮೆರೆದು ಕೊನೆಗೆ ರಾಮರಾಯನ ಕಾಲದಲ್ಲಿ ನಾಶವಾಗಿ ಹೋಯಿತು. ವಿಜಯಗುಡಿ ತೋರಣ ಕಾಣುತ್ತಿಲ್ಲ. ದ್ವಿಜರ ಮಂತ್ರೋಚ್ಚಾರಣೆಯಿಲ್ಲ. ಮರೆಯಲಾಗದ ಹಂಪಿ ಮರೆತು ಹೋಯಿತಲ್ಲ! ಎಂದು ಕವಿ ಮನ ಮಮ್ಮಲ ಮರುಗಿದೆ. ಪರಮೇಶ್ವರರ 'ಪಂಪಾಸರೋವರ' ಕವನವು ಹಂಪಿಯ ಪರಿಸರದ ಮಹತಿಯನ್ನು ಸಾರುತ್ತದೆ. ಇಲ್ಲಿನ ಪರಿಸರಕ್ಕೆ ಪ್ರಾಚೀನ ಕಾಲದಿಂದಲೂ ಚರಿತ್ರೆಯಿದೆ. ರಾಮನು ಸೀತಾನ್ವೇಷಣೆಯ ಸಮಯದಲ್ಲಿ ಇಲ್ಲಿಗೆ ಬಂದದ್ದು, ಪಾಂಡವರು ಕಿಷ್ಕಿಂದೆಗೆ ಬಂದದ್ದು, ಮಹರ್ಷಿ ವಾಲ್ಮೀಕಿಯು ಸಂದರ್ಶಿಸಿದ್ದು ಈ ಸ್ಥಳದ ಪುರಾತನತೆಯನ್ನು ತಿಳಿಸುತ್ತದೆ. ಮಹಾಮಹಿಮರ ಪಾದಸ್ಪರ್ಶದ ಈ ಭೂಮಿ ಋಷಿವರ್ಯರಿಗೆ ತಪೋಭೂಮಿಯೂ ಹೌದು. ಸಿದ್ಧಿಸಾಧನೆಯ ಮುಕುಟಮಣಿಯೂ ಹೌದು.

ಯುಗಯುಗಾಂತರಗಳ ಅನಂತ ಚಿರನಿದ್ರೆಯಲಿ

ನಿಷ್ಪಂದ ಮೂಕತೆಯ ಜಲಸಮಾಧಿಯೊಳಿಲ್ಲಿ

ಸ್ತಬ್ಧವಾಗಿದೆ ಸರೋವರ ದೇಹಿ-ದಡದಲ್ಲಿ

ರಾಮಾಯಣದ ಮಹಾಸ್ವಪ್ನ ಚಿನ್ಮುದ್ರೆಯಲಿ[೧೧]

ತಪಸ್ವಿಗಳು ಅಮರಾವಣಿ ನುಡಿದ ಸ್ಥಳವಿದು. ರಾಮಾಯಣ ಕಾವ್ಯವನ್ನು ಬರೆಯುವುದರ ಮೂಲಕ ಭಾರತೀಯ ಮಹಾಕಾವ್ಯ ಪರಂಪರೆಗೆ ನಾಂದಿ ಹಾಡಿದ ಮಹಾಕವಿ ವಾಲ್ಮೀಕಿಯು ಇಲ್ಲಿ ಕಾವ್ಯಾಂದ ಮೋಹದಲಿ ಮಲಗಿಹನು. ಅವನ ನಲ್ಮೆಯ ನುಡಿಯನ್ನು ಕೇಳಲೋಸುಗ ಮನಸ್ಸು ಕಾತರತೆಯನ್ನುತಹತಹಿಸುತ್ತಿದೆ. ಎಂತಹ ಅದ್ಭುತ ತಾಣವಿದು. ಈ ನೆಲದಲ್ಲಿ ಹುಟ್ಟಿದ್ದೇ ಪುಣ್ಯದ ಫಲ ಎನ್ನುವಂತೆ ಕವಿ ಚಿತ್ರಿಸುತ್ತಾನೆ. ಹಂಪಿಯ ಪಾರಂಪರಿಕ ಹಿರಿಮೆ ಗರಿಮೆಗಳನ್ನು ನೆನೆದ ಕವಿ ಅಭಿಮಾನಗೊಂಡು ಉಲ್ಲಸಿತನಾಗುತ್ತಾನೆ. ಶ್ರೀಮಂತ ಪರಂಪರೆ ಹೊಂದಿರುವ ಹಂಪೆಯನ್ನು ಹಾಡಿ ಹೊಗಳುವುದರೊಂದಿಗೆ ಕವಿ ಧನ್ಯತೆಯನ್ನು ಕಾಣುತ್ತಾನೆ. ಇಂತಹ ಪ್ರಕೃತಿರಮ್ಯವಾದ ತಾಣ ಒಂದು ಧರ್ಮಕ್ಕೆ ಒಂದು ನಾಡಿನ ಜನತೆಗೆ ಅದೆಷ್ಟು ಕಾಲ ಆಶ್ರಯವನ್ನಿತ್ತು ಸಲುಹಿತು. ಮತ್ತೆ ಅಲ್ಲಿ ಅಂತಹದೇ ನಾಡನ್ನು ಕಟ್ಟಿಕೊಳ್ಳಬೇಕಾಗಿದೆ. ಎನ್ನುವ ಬಯಕೆ ಕವಿಯದು.

'ಶ್ರೀ ವಿದ್ಯಾರಣ್ಯರ ವಾಣಿ' ಕವಿತೆಯಲ್ಲಿ ವಿಜಯನಗರ ಆರಂಭಕ್ಕೆ ಮುನ್ನ ವಿದ್ಯಾರಣ್ಯರು ಹರಿಹರ ಬುಕ್ಕರಿಗೆ ಪ್ರೋತ್ಸಾಹಿಸಿದಂತೆ ಕವಿ ಹೇಳಿದ್ದಾನೆ.

ಕನ್ನಡದ ಭಾಗ್ಯ-ಭಾಸ್ಕರನುದಯವಹಹ! ಇ-

ನ್ನಾಗಲಿದೆ; ಸಿರಿ-ಸರಸ್ವತಿಯರೊಂದೆಡೆ ಕುಳಿತ

ಮಣಿ-ಮಂಚದುಯ್ಯಾಲೆ ತೂಗಲಿದೆ; ರಸದೇವಿ
ಯುನ್ಮತ್ತ ನೃತ್ಯ ಕೇಲಿಗೆ ಮತ್ತೆ ಕವಿ ಹೃದಯ-
ರಂಗ ಸಜ್ಜಾಗಲಿದೆ; ವೀರ್ಯ-ಕೀರ್ತಿಯ ಭೇರಿ
ಗುಡುಗಲಿದೆ; ಆರ್ಯ-ಧರ್ಮಸುಗಂಧವಿಡಗಲಿದೆ.[೫೨]

ತುಂಗಭದ್ರೆಯ ತೀರದ ಆ ಸುಂದರವಾದ ಪ್ರಕೃತಿಯ ಮಡಿಲಲ್ಲಿ, ಯೋಗಿಗಳ ಸಿದ್ಧಿಯ ನೆಲದಲ್ಲಿ ಈ ನೆಲದ ಜನರ ಸ್ವಾಭಿಮಾನದ ಸಂಕೇತವಾದ ಸಾಮ್ರಾಜ್ಯವೊಂದು ಉದಯವಾಗುತ್ತದೆ. ಅಲ್ಲಿ ಕಲೆ, ಸಾಹಿತ್ಯ, ಧರ್ಮ(ಆರ್ಯ), ಸಂಸ್ಕೃತಿಗಳು ಉನ್ನತ ಸ್ಥಾನದಲ್ಲಿದ್ದು, ಅಲ್ಲಿನ ರಾಜರ, ವೀರರ ಕೀರ್ತಿ ಅಜರಾಮರವಾಗಿರುತ್ತದೆ. ಅಂತಹ ನಾಡೊಂದು ಉದಯವಾಗಲಿದೆ. ಕನ್ನಡದ ವೀರಕೇಸರಿ ಹರಿಹರನೇ ಏಳು, ಆ ಮಹಾಸಾಮ್ರಾಜ್ಯದ ಪಟ್ಟಾಭಿಷಕ್ತನಾಗು ಎಂದು ವಿದ್ಯಾರಣ್ಯರ ವಾಣಿ ನುಡಿಯಿತು. ಅಂತೆಯೇ ಆಯಿತು ಎಂದು ಕವಿ ಹೇಳುತ್ತಾರೆ. ಪ್ರಾಚೀನ ಕಾಲದಿಂದಲೂ ಕಲೆ, ಸಾಹಿತ್ಯ, ಸಂಸ್ಕೃತಿಗಳಿಗೆ ವಿಶಿಷ್ಟವಾದ ಕೊಡುಗೆಯನ್ನು ನೀಡಿದ ಈ ನಾಡಿನ ಪೂರ್ವ ಪರಂಪರೆಯಿಂದ ಕವಿಗೆ ಹೊರಬರಲಾಗಿಲ್ಲ. ಹಾಗಾಗಿ ತನ್ನ ಸಮಕಾಲೀನ ಸಂದರ್ಭದ ಸಾಂಸ್ಕೃತಿಕ ಮತ್ತು ರಾಜಕೀಯ ಒತ್ತಡವನ್ನು ಎದುರಿಸುವಲ್ಲಿ ಕವಿ ಆ ಪರಂಪರೆಗೆ ಮೊರೆ ಹೋಗುತ್ತಾನೆ. ಅದರ ಉಪಾಸಕನಾಗುತ್ತಾನೆ. ವಿಜಯನಗರದ ವೈಭವವನ್ನು ಹೊಗಳದ ಕವಿಯಿಲ್ಲ. ಅದರ ಸೊಬಗೇ ಅಂಥದ್ದು.

ಮೇಲೆ ಉಲ್ಲೇಖಿಸಲಾಗಿರುವ ಕವನಗಳಲ್ಲಿ ಕನ್ನಡನಾಡು, ನುಡಿ, ದೇಶ, ಸಂಸ್ಕೃತಿ, ಧರ್ಮದ ಬಗೆಗಿರುವ ಅಕ್ಕರೆ ಅಭಿಮಾನಗಳು ವ್ಯಕ್ತಗೊಂಡಿವೆ. ಅಂದ ಮಾತ್ರಕ್ಕೆ ಕವನಗಳು ಇತಿಹಾಸವನ್ನು, ಜನರ ಜೀವನ ವಿಧಾನವನ್ನು ಹೇಳಿವೆ ಎಂದಲ್ಲ. ನಾಡನ್ನು ಹಾಡಿ ಹೊಗಳುವ ಕವಿಗಳು ಅಲ್ಲಿನಚಾರಿತ್ರಿಕ ಪರಂಪರೆಯೊಂದಿಗೆ ಸಮಕಾಲೀನ ಬದುಕಿನ ವಾಸ್ತವ ಚಿತ್ರಣವನ್ನು ಕಟ್ಟಿಕೊಡುತ್ತವೆ. ಈ ಕವನಗಳು ಭೂತದ ಮೂಲಕ ವರ್ತಮಾನವನ್ನು ಎದುರಿಸಿ, ಭವಿಷ್ಯತ್ತನ್ನು ರೂಪಿಸಿಕೊಳ್ಳಲು ಸಾಧ್ಯ ಎನ್ನುವುದನ್ನು ನಿರೂಪಿಸುತ್ತವೆ.

ಈ ಕವನಗಳಲ್ಲಿ ನಾಡನ್ನು ಅಭಿಮಾನದಿಂದ ಉದಾರವಾಗಿ ಚಿತ್ರಿಸಿರುವುದು ಕಂಡುಬರುತ್ತದೆ. ಸ್ವ-ದ ನಿರ್ವಚನಕ್ಕೆ ವಿಜಯನಗರದ ಚಾರಿತ್ರಿಕ ನೆನಪುಗಳು ಇಪ್ಪತ್ತನೆಯ ಶತಮಾನದ ಆರಂಭ ಕಾಲದ ಕವಿಗಳಿಗೆ ವಸ್ತುಗಳಾಗಿವೆ. ವಿದ್ಯಾರಣ್ಯರು, ಹರಿಹರ ಬುಕ್ಕರಾದಿ ರಾಜರುಗಳ ಕಾಲದ ದೇವಾಲಯಗಳು, ಅರಮನೆಗಳು, ಸೈನಿಕ ವ್ಯವಸ್ಥೆ, ವೈದಿಕ ಧರ್ಮಕ್ಕೆ ಪ್ರೋತ್ಸಾಹ, ಕವಿಕಲಾವಿದರಿಗೆ ಆಶ್ರಯ, ಮುಂತಾದವು ಕಳೆದ ಶತಮಾನದಲ್ಲಿ ಆದರ್ಶ ಎಂದು ಪರಿಗಣಿಸಿರುವುದು ಕಂಡು ಬರುತ್ತದೆ. ಈ ಕಾರಣದಿಂದಾಗಿಯೇ ವಿಜಯನಗರವನ್ನು ಕೇಂದ್ರವಾಗಿರಿಸಿಕೊಂಡು ರಚಿಸಿರುವ ಕವಿತೆಗಳಲ್ಲಿ ವೈಭವದ ಸಾಮ್ರಾಜ್ಯವಾಗಿ ಪ್ರತಿನಿಧೀಕರಣಕೊಂಡಿದೆ. ಈ ಮೊದಲೇ ಉಲ್ಲೇಖಿಸಿರುವಂತೆ ಆ ಸಂದರ್ಭದ ಕವಿಗಳಿಗೆ ಚಾರಿತ್ರಿಕವಾಗಿ ಬರೆಯುವುದು ಅನಿವಾರ್ಯವೂ ಆಗಿತ್ತು. ಆಂಗ್ಲರ ಆಡಳಿತವನ್ನು ವಿರೋಧಿಸುವುದು, ಕನ್ನಡ (ನಾಡು) ಹಾಗೂ ಭಾರತದ ಬಗ್ಗೆ ಅಭಿಮಾನವನ್ನು,

ಸ್ವಾಭಿಮಾನವನ್ನು, ಇದರ ಜೊತೆಗೆ ಹೋರಾಟದ ಮನೋಭಾವನೆ ಬೆಳೆಸಬೇಕಾಗಿತ್ತು. ಆ ನಾಡನ್ನು ಪರತಂತ್ರದಿಂದ ವಿಮುಕ್ತಿಗೊಳಿಸುವ ಧ್ಯೇಯವು ಅಂದಿನ ಕವಿಗಳದಾಗಿತ್ತು.

೪.೧.೩.೨. ಕಾದಂಬರಿ

ಕಾದಂಬರಿ ಕನ್ನಡ ಸಾಹಿತ್ಯದ ಬಹುಮುಖ್ಯ ಪ್ರಕಾರಗಳಲ್ಲಿ ಒಂದು. ಕಾವ್ಯ ನಾಟಕಗಳಂತೆ ಅನಿವಾರ್ಯವಾಗಿ ಪಾಲಿಸಬೇಕಾದ ನಿಯಮಗಳು ಅದಕ್ಕಿಲ್ಲ. ಹಾಗಾಗಿಯೇ ಕಾದಂಬರಿಯ ಹರವು ವಿಸ್ತಾರವಾದುದು. ವಿಭಿನ್ನವಾದುದು. ಕಾದಂಬರಿಯ ವಸ್ತು ಖಗೋಳಶಾಸ್ತ್ರದಿಂದ ಹಿಡಿದು ವ್ಯಕ್ತಿಯೊಬ್ಬನ ಅಂತರಂಗದ ವಿಶ್ಲೇಷಣೆಯವರೆಗೆ ಏನು ಬೇಕಾದರೂ ಆಗಬಹುದು. ನಿರ್ದಿಷ್ಟವಾದ ಆಕಾರ ರಹಿತತೆಯೇ ಕಾದಂಬರಿಯ ಲಕ್ಷಣ.

ಚಾರಿತ್ರಿಕ ವಸ್ತುವನ್ನು ಆಯ್ದುಕೊಂಡು ಅದನ್ನು ಕಾದಂಬರಿ ರೂಪದಲ್ಲಿ ಹೆಣೆದ ಕಾದಂಬರಿಗಳು ಕನ್ನಡದಲ್ಲಿ ವಿಪುಲವಾಗಿ ದೊರೆಯುತ್ತವೆ. ರಾಷ್ಟ್ರೀಯ ಹೋರಾಟ ಪ್ರಮುಖವಾಗಿದ್ದ ಸ್ವಾತಂತ್ರ್ಯಪೂರ್ವದ ದಿನಗಳಲ್ಲಿ ಏಕೀಕರಣದ ಆಶಯವನ್ನು ಹೊತ್ತು ಹುಟ್ಟಿಕೊಂಡ ಕಾದಂಬರಿಗಳು ಚಾರಿತ್ರಿಕ ಘಟನೆಗಳನ್ನು ಪ್ರತಿಬಿಂಬಿಸುತ್ತವೆ. ಅಂತಹ ಸಂದರ್ಭದಲ್ಲಿ ಕನ್ನಡ ಕಾದಂಬರಿಕಾರರನ್ನು ವಿಜಯನಗರದ ಚರಿತ್ರೆ ಬಹುಮುಖ್ಯವಾಗಿ ಆಕರ್ಷಿಸಿತು.

ಶ್ರೀ ವಿದ್ಯಾರಣ್ಯರ ಪ್ರೇರಣೆ ಮತ್ತು ಹರಿಹರ-ಬುಕ್ಕರ ಸಾಹಸದಿಂದ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯ ಕನ್ನಡಿಗರ ರತ್ನ ಸಿಂಹಾಸನದ ಕಲ್ಪನೆಯಾಗಿದೆ. ಈ ಬಗೆಯ ವಿಚಾರಗಳು ಕನ್ನಡ ಕಾದಂಬರಿಯಲ್ಲಿ ಹೇರಳವಾಗಿವೆ. ಏಕೀಕರಣ ಪೂರ್ವದ ಸಂದರ್ಭದಲ್ಲಿ ವಿವಿಧ ಸಂಸ್ಥಾನಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡ ಪ್ರದೇಶಗಳ ಎಲ್ಲ ಜನರಿಗೂ ಈ ಸಂಕೇತಗಳು ಅಭಿಮಾನದ, ಗತವೈಭವದ ಹೆಮ್ಮೆಯ ಸಂಗತಿಗಳಾಗಿದ್ದವು. ಇತರೆ ರಾಜಮನೆತನಗಳು ಐತಿಹಾಸಿಕವಾಗಿ ಮಹತ್ವ ಪಡೆದಿದ್ದರೂ ಈ ಮೂಲಕ ಕಾದಂಬರಿಗಳು ಕನ್ನಡಿಗರನ್ನು ಜಾಗೃತಗೊಳಿಸಿದ್ದವು. ವಿಜಯನಗರ ಸಾಮ್ರಾಜ್ಯಕ್ಕೆ ಹೆಚ್ಚಿನ ಆದ್ಯತೆ ಸಿಕ್ಕಿತು. ಬಹುಶಃ ಇದಕ್ಕೆ ಕಾರಣ ಈ ಸಾಮ್ರಾಜ್ಯವು ಕನ್ನಡಿಗರ ಸಾಂಸ್ಕೃತಿಕ ವಿಚಾರಗಳಿಗೆ ಮೂಲ ಕೇಂದ್ರವಾಗಿದ್ದುದು ವಿಶೇಷ. ಹಾಗೆಯೇ ತನ್ನ ಆಡಳಿತದ ವ್ಯಾಪ್ತಿಯಲ್ಲಿ ಕನ್ನಡಿಗರನ್ನಷ್ಟೇ ಅಲ್ಲದೆ ಅನ್ಯ ಭಾಷಿಕ ಪ್ರದೇಶಗಳನ್ನು ತೆಗೆದುಕೊಂಡಿತ್ತು. ಅಲ್ಲದೆ ಸಾಮ್ರಾಜ್ಯಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರು ಚಿತ್ರಿಸಿದ ವರ್ಣನಾತ್ಮಕ ಚಿತ್ರಣಗಳು ಮಹತ್ವದವು. ಇದಲ್ಲದೆ ಅನ್ಯ ಧರ್ಮೀಯರ ಉಪಟಳದಿಂದ ಹಿಂದೂ ಧರ್ಮವು ಅವನತಿಯತ್ತ ಸಾಗಿದ ಸಂದರ್ಭದಲ್ಲಿ ವಿಜಯನಗರ ಸಾಮ್ರಾಜ್ಯವು ಉದಯವಾಯಿತು.

ಧರ್ಮದ ರಕ್ಷಣೆಯ ಮಹತ್ತರವಾದ ಜವಾಬ್ದಾರಿಯನ್ನು ಹೊತ್ತು ಸಾಗಿದ ಈ ಸಾಮ್ರಾಜ್ಯವು ಪ್ರಸ್ತುತ ಸಂದರ್ಭದಲ್ಲಿ ಅಂದರೆ ರಾಷ್ಟ್ರೀಯ ಹೋರಾಟದ ಅವಧಿಯಲ್ಲಿ ಅನ್ಯರಾದ ಬ್ರಿಟಿಷರಿಂದ ಹಿಂದೂ ಸಾಂಸ್ಕೃತಿಕ ಬದುಕನ್ನು ರಕ್ಷಿಸಿಕೊಳ್ಳಬೇಕೆಂದ ಮಹದಾಸೆಗೆ ಪ್ರೇರಣೆಯಾಯಿತು. ಇಂತಹ ಕಾರಣಗಳಿಂದಾಗಿ ಅನೇಕ ಕಾದಂಬರಿಕಾರರು ಈ ಸಾಮ್ರಾಜ್ಯವನ್ನು ಒಂದು ಆದರ್ಶವನ್ನಾಗಿ

ಇಟ್ಟುಕೊಂಡು ಅಂದರೆ ಸುವರ್ಣ ಯುಗದ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಕಾದಂಬರಿಗಳನ್ನು ರಚಿಸಿದರು. ಈ ಸಾಮ್ರಾಜ್ಯದ ಕುರಿತು ರಚನೆಗೊಂಡಿರುವ ಕಾದಂಬರಿಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ. ಈ ಮೊದಲೇ ಹೇಳಿರುವಂತೆ ವಿಜಯನಗರದ ಐತಿಹಾಸಿಕ ವಿಚಾರಧಾರೆಗಳ ಕುರಿತು ಹಲವು ಬಗೆಯ ಅಧ್ಯಯನಗಳು ನಡೆದಿವೆ, ನಡೆಯುತ್ತಿವೆ. ಪ್ರಸ್ತುತ ಅಧ್ಯಯನದಲ್ಲಿ ವಿಜಯನಗರವನ್ನಾಧರಿಸಿ ರೂಪುಗೊಂಡಿರುವ ಕಾದಂಬರಿಗಳಲ್ಲಿ ಕನ್ನಡ, ಭಾರತ (ರಾಷ್ಟ್ರ), ಹಿಂದೂ ಅಸ್ಮಿತೆಗೆ ಸಂಬಂಧಿಸಿದ ವಿಚಾರಗಳು ಹೇಗೆ ಪ್ರತಿನಿಧೀಕರಣಗೊಂಡಿವೆ ಎನ್ನುವುದನ್ನು ವಿಶ್ಲೇಷಣೆ ಮಾಡಿ ಇಲ್ಲಿ ಚರ್ಚಿಸಲಾಗಿದೆ.

ಅ. ಗಳಗನಾಥರ ಕುಮುದಿನಿ (೧೯೧೩)

ಗಳಗನಾಥರು ಬರೆದ ಈ ಕಾದಂಬರಿ, ವಿಜಯನಗರ ಸಾಮ್ರಾಜ್ಯವು ಸುಲ್ತಾನರ ದಾಳಿಯಿಂದ ಅವನತಿ ಹೊಂದಿದ ೫೦ ವರ್ಷಗಳ ನಂತರ ಅಲ್ಲಿನ ರಾಜವಂಶೀಯರು ಚಂದ್ರಗಿರಿಯನ್ನು ಕೇಂದ್ರವಾಗಿಸಿಕೊಂಡು ಆಡಳಿತ ನಡೆಸುತ್ತಿದ್ದ ಘಟನೆಯು ಈ ಕಾದಂಬರಿಯ ಮುಖ್ಯ ಕಥಾವಸ್ತು ಆಗಿದೆ. ಆನೆಯಂತಹ ವಿಜಯನಗರ ಸಾಮ್ರಾಜ್ಯ ಕಳೆದುಕೊಂಡು, ಬಾಲದಂಥ ಚಂದ್ರಗಿರಿ ಸಂಸ್ಥಾನಕ್ಕೆ ಬಡಿದಾಡಿದ ಈ ಕಥೆಯನ್ನು ಇಲ್ಲಿ ಬಳಸಿಕೊಂಡಿರುವುದರಿಂದ ಇದಕ್ಕೆ 'ಬಾಲಕ್ಕೆ ಬಡಿದಾಟ' ಎಂದು ಕರೆದಿದ್ದೇನೆ ಎಂದು ಗಳಗನಾಥರು ಈ ಕಾದಂಬರಿಯ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಇದೇ ವಸ್ತುವನ್ನಿಟ್ಟುಕೊಂಡು ಗರುಡ ಸದಾಶಿವರಾಯರು 'ಯಚ್ಚಮನಾಯಕ' ಎನ್ನುವ ನಾಟಕವನ್ನು, ನಾಗೇಶ ಅವರು 'ಎಚ್ಚಮ ನಾಯಕ' ಎನ್ನುವ ಕಾದಂಬರಿಯನ್ನು ರಚಿಸಿದ್ದಾರೆ. ಈ ಮೂರು ಪಠ್ಯಗಳ ಅನೇಕ ಸಂಗತಿಗಳಲ್ಲಿ ಸಾಮ್ಯತೆಗಳಿವೆ. ಈಗಾಗಲೇ ಅವುಗಳನ್ನು ವಿಸ್ತೃತವಾಗಿ ಚರ್ಚಿಸಿರುವುದರಿಂದ ಈ ಕಾದಂಬರಿಯಲ್ಲಿನ ಕೆಲ ಅಂಶಗಳನ್ನು ಮಾತ್ರ ಇಲ್ಲಿ ವಿಶ್ಲೇಷಿಸಲಾಗಿದೆ.

ವೆಂಕಟಪತಿರಾಯನ ಮರಣದ ನಂತರ ಆ ಸಿಂಹಾಸವನ್ನು ಅವನ ಸಹೋದರನ ಮಗ ಚಿಕ್ಕರಾಯ ಅಲಂಕರಿಸಿದ. ಬ್ರಾಹ್ಮಣ ಪುತ್ರರೋರ್ವನನ್ನು ತನ್ನ ಮಗುವೆಂದು ಹೇಳಿದ್ದ ಬಾಯಮ್ಮನಿಗೆ ಇದು ಸಹಿಸದಾಯಿತು. ಜಗರಾಯನು ಕುತಂತ್ರ ನಡೆಸಿ ರಾಜನನ್ನು ಸೆರೆಯಲ್ಲಿಟ್ಟು ಬಾಯಮ್ಮ ತನ್ನ ಮಗನೆಂದು ಹೇಳಿದವನನ್ನು ಪಟ್ಟಕ್ಕೆ ಕೂರಿಸಿದ. ಇದರಿಂದ ಎಚ್ಚಮ ನಾಯಕನು ಕೋಪಗೊಂಡನು. ಪರಮಪವಿತ್ರವಾದ ಆ ಸಿಂಹಾಸನಕ್ಕೆ ಅನ್ಯ ಜಾತಿಯವನನ್ನು ತಂದು ಕೂರಿಸುವುದು ಅವನಿಗೆ ಸರ್ವತಾ ಇಷ್ಟವಿರಲಿಲ್ಲ. ಸೆರೆಯಲ್ಲಿದ್ದ ಅರಸ ಮತ್ತು ಅವರ ಪರಿವಾರವನ್ನು ಬಿಡಿಸಲು ಪ್ರಯತ್ನ ಮಾಡಿದ. ಅಗಸನ ಸಹಾಯದಿಂದ ರಾಜಕುಮಾರನನ್ನು ಮಾತ್ರ ಸೆರೆಯಿಂದ ಬಿಡಿಸಲು ಯಶಸ್ವಿಯಾದನು. ಸೆರೆಮನೆಯಲ್ಲಿದ್ದ ರಾಜಪರಿವಾರವನ್ನೆಲ್ಲ ಕೊಲ್ಲಲು ಆಜ್ಞೆ ಮಡಲಾಯಿತು. ಚಿನ್ನ ಓಬಲರ ಒತ್ತಾಯಕ್ಕೆ ಮಣಿದ ರಾಜ ತನ್ನ ಪರಿವಾರವನ್ನು ತಾನೇ ಕೊಂದು, ತಾನೂ ಆತ್ಮಹತ್ಯೆ ಮಾಡಿಕೊಂಡನು. ಎಚ್ಚಮ ನಾಯಕನು ಜಗರಾಯನ ಸೈನ್ಯವನ್ನು ಸೋಲಿಸಿ ಚಿಕ್ಕರಾಯನ ಮಗನಿಗೆ ಪಟ್ಟ ಕಟ್ಟಿದ. ಸಾಮ್ರಾಜ್ಯನಿಷ್ಠ ಸೇವಕನಾದ ಎಚ್ಚಮ ನಾಯಕನ ಶೌರ್ಯ, ಸಾಹಸಗಳು ಈ ಕಾದಂಬರಿಯಲ್ಲಿ ಮೂಡಿ ಬಂದಿದೆ. ಎಚ್ಚಮನನ್ನು ಕಥಾನಾಯಕನನ್ನಾಗಿ ಮಾಡಿಕೊಂಡು,

ಅವನಿಗೆ ತಕ್ಕುದಾದ ಕುಮುದಿನಿಯನ್ನು ಕಾದಂಬರಿಕಾರರು ಸೃಷ್ಟಿಸಿದ್ದಾರೆ. ಕುಮುದಿನಿಯು ಎಚ್ಚಮ ನಾಯಕನೊಂದಿಗೆ ಸೇರಿಕೊಂಡಾಗಿನಿಂದ ಕಾದಂಬರಿಯ ಕೊನೆಯವರೆಗೆ ಒಂದಿಲ್ಲೊಂದು ಕಡೆಯಿಂದ ಸಹಾಯಕಳಾಗಿ ನಿಲ್ಲುತ್ತಾಳೆ. ವಿಜಯನಗರದ ಸಂಪತ್ತು ಅನ್ಯ ರಾಜರನ್ನು ಮಾತ್ರವಲ್ಲ; ರಾಜವಂಶೀಯರಲ್ಲಿ ಕೂಡ ಆಸೆಯನ್ನು ಹುಟ್ಟಿಸಿತ್ತು. ಅದರ ಆಕರ್ಷಣೆಯಿಂದಾಗಿಯೇ ಈ ಸಾಮ್ರಾಜ್ಯದಲ್ಲಿ ಅಂತಃಕಲಹಗಳು ಹುಟ್ಟಿಕೊಂಡವು ಎನ್ನುವ ಅಂಶ ಈ ಕಾದಂಬರಿಯಲ್ಲಿ ಕಂಡು ಬರುತ್ತದೆ. ಚಂದ್ರಗಿರಿಗೆ ವಿಜಯನಗರ ಸಂಪತ್ತನ್ನು ತೆಗೆದುಕೊಂಡು ಹೋದದ್ದು ಕಡಿಮೆಯೇನಲ್ಲ. ಅಲ್ಲಿನ ಅಪಾರವಾದ ಸಂಪತ್ತೇ ಜಗರಾಯನಂಥವರನ್ನು ಆಕರ್ಷಿಸಿತು. ಸಂಪತ್ತಿನ ಮೇಲಿನ ಮೋಹದಿಂದಾಗಿ ಎಂತಹ ರಾಜದ್ರೋಹ ಕಾರ್ಯಕ್ಕೂ ಕೈ ಹಾಕಲು ಅವರು ಮುಂದಾದರು. ಇಂತಹ ಸಂದರ್ಭದಲ್ಲಿ ಸಾಮ್ರಾಜ್ಯನಿಷ್ಠ ಎಚ್ಚಮನಾಯಕರ ಮತ್ತು ಆತನ ಸಹಚರರ ಕೆಚ್ಚೆದೆಯ ಸಾಹಸವು ಕನ್ನಡಿಗರ ಅನನ್ಯತೆಯನ್ನು ಹೇಳುವಲ್ಲಿ ಸಹಕಾರಿಯಾಗುತ್ತವೆ.

ಆ. ಗಳಗನಾಥರ ಮಾಧವ ಕರುಣಾ ವಿಲಾಸ (೧೯೨೩)

ವಿಜಯನಗರ ಸಾಮ್ರಾಜ್ಯದ ಆರಂಭದ ಇತಿಹಾಸವನ್ನು ಹೇಳುವುದರೊಂದಿಗೆ ವಿದ್ಯಾರಣ್ಯರ ಮಹತ್ವವನ್ನು ಪರಿಚಯಿಸುವ ೬೦ ಪ್ರಕರಣಗಳ ಬೃಹತ್ ಕಾದಂಬರಿ ಇದಾಗಿದೆ. ರಾಷ್ಟ್ರವನ್ನು ಪರತಂತ್ರದಿಂದ ಬಿಡಿಸಿಕೊಳ್ಳಬೇಕಾದ ಸಂದರ್ಭದಲ್ಲಿ ಜನರನ್ನು ಜಾಗ್ರತರನ್ನಾಗಿಸಲು ಮಾಡಿರುವ ಪ್ರಯತ್ನದ ಫಲವಾಗಿ ಈ ಕಾದಂಬರಿ ಮೂಡಿಬಂದಿದೆ. ಈ ಬೃಹತ್ ಕಾದಂಬರಿಯ ಕುರಿತು ಹಲವಾರು ಜನ ವಿಮರ್ಶಕರು, ಸಂಶೋಧಕರು ವಿಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಕೀರ್ತಿನಾಥ ಕುರ್ತಕೋಟಿಯವರು "ವಿಜಯನಗರ ಸಾಮ್ರಾಜ್ಯದ ಸಂಸ್ಥಾಪನೆಯಾದಂಥ ವಸ್ತು ಸಹಜವಾಗಿಯೇ ಆಕರ್ಷಿಸಬಹುದಾಗಿತ್ತು. ಆದರೆ ಕಥಾವಸ್ತು ಗಳಗನಾಥರ ಶಕ್ತಿಯನ್ನು ಮೀರಿ ದೊಡ್ಡದಾಯಿತೋ ಅಥವಾ ತತ್ವ ಧರ್ಮಗಳ ಮೇಲಿನ ದೀರ್ಘ ಚರ್ಚೆಗಳಿಂದ ಅವರೇ ಅದನ್ನು ದೊಡ್ಡದಾಗಿಸಿದರೋ ಹೇಳುವುದು ಬಿಗಿಯಾಗಿದೆ" ಎಂದು ಅಭಿಪ್ರಾಯಪಡುತ್ತಾರೆ.[೯೩]

ಗಳಗನಾಥರು 'ಐತಿಹಾಸಿಕ ನಿರೂಪಣೆಯನ್ನು ಕಲ್ಪನೆಗೆ ಒಗ್ಗಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ' ಎಂದು ಗುರುತಿಸಿದ್ದಾರೆ. ಕೃಷ್ಣಮೂರ್ತಿ ಕಿತ್ತೂರ ಅವರು "ಗಳಗನಾಥರ ಈ ಕಾದಂಬರಿಯ ಕುರಿತು–ಇದರಲ್ಲಿ ಇತಿಹಾಸಕ್ಕಿಂತ ಲೇಖಕರ ಕಲ್ಪನೆಯೇ ಪ್ರಧಾನವಾಗಿ ಕಾದಂಬರಿಯನ್ನು ರೂಪಿಸಿದೆ. ಅಲ್ಲದೆ ಇದರಲ್ಲಿ ನಿರೂಪಿತವಾದ ಅನೇಕ ಐತಿಹಾಸಿಕ ಘಟನೆಗಳೂ ಕೂಡ ಖಚಿತವಾಗಿ ನಿರ್ಣೀವಾದ ಐತಿಹಾಸಿಕ ಸತ್ಯಘಟನೆಗಳಲ್ಲ" ಎಂದು ಹೇಳಿದ್ದಾರೆ.[೯೪] ಈ ಕಾದಂಬರಿಯಲ್ಲಿ ಉಕ್ತವಾಗಿರುವ ವಿಚಾರಗಳನ್ನು ಗಮನಿಸಿದಾಗ ಕಿತ್ತೂರರ ಅಭಿಪ್ರಾಯ ಸಮಂಜಸವಾದುದೆನಿಸುತ್ತದೆ.

"ಗಳಗನಾಥರ ವೈದಿಕ ಶ್ರದ್ಧೆ, ಪುನರುತ್ಥಾನವಾದೀ ಆಶಯ ಮತ್ತು ಈ ಬಗೆಯ ಕಾದಂಬರಿ ರೂಪಕ್ಕೆ ಸಂಬಂಧವಿದೆ. ಈ ಮೂರು ಅಂಶಗಳು ಇಲ್ಲಿ ಪ್ರಧಾನವಾಗಿವೆ.

೧. ವರ್ಣಾಶ್ರಮ ಧರ್ಮದ ಪಾಲನೆ

೨. ಕರ್ನಾಟಕ ಜಾಗೃತಿ

೩. ಧಾರ್ಮಿಕ ಸಂವಿಧಾನವನ್ನು ವಿಚಲಿತಗೊಳಿಸದೇ ಒಗ್ಗಟ್ಟಿನ ಸಾಧನೆ"

ಎಂದು ಶಿವರಾಮ ಪಡಿಕ್ಕಲ್ ಅಭಿಪ್ರಾಯಪಟ್ಟಿದ್ದಾರೆ.[೫] ವೈದಿಕ ಧರ್ಮದ ನೆರಳಿನಲ್ಲಿ ಅರಳಿದ ಈ ಕಾದಂಬರಿಯು ಧರ್ಮದ ಚೌಕಟ್ಟಿನಲ್ಲಿಯೇ ಮುಂದುವರೆದು ಆ ಮೂಲಕ ನಾಡಿನ ನಿರ್ಮಾಣದ ಗುರುತನ್ನು ಹುಡುಕುವ ಪ್ರಯತ್ನ ಮಾಡಿರುವುದನ್ನು ಇವರು ಗುರುತಿಸಿದ್ದಾರೆ. ಜಿ.ಎಚ್.ನಾಯಕರು 'ಮಾಧವ ಕರುಣಾವಿಲಾಸದಲ್ಲಿನ ಧರ್ಮದ ಬಗೆಗಿನ ದೀರ್ಘವಾದ ಚರ್ಚೆ, ಜಾತೀಯತೆಯ ಬಗ್ಗೆ ನಡೆಯುವ ಚರ್ಚೆ, ಉಪದೇಶಗಳು ಕಾದಂಬರಿಗೆ ಪೋಷಕವಾಗಿಲ್ಲ' ಎಂದು ಹೇಳಿದ್ದಾರೆ. ಶ್ರೀನಿವಾಸ ಹಾವನೂರರು 'ಒಂದು ಅರ್ಥದಲ್ಲಿ ಈ ಕಾದಂಬರಿ ಮಹಾಭಾರತವೇ ಆಗಿದೆ' ಎನ್ನುತ್ತಾರೆ. ಸಾಲಿ ರಾಮಚಂದ್ರರಾಯರು 'ಕನ್ನಡಿಗರು ತಮ್ಮನ್ನೇ ಮರೆತಿದ್ದ ಸಂದರ್ಭದಲ್ಲಿ ಬಂದ ಈ ಕಾದಂಬರಿಯು ಕನ್ನಡಿಗರಲ್ಲಿ ಜಾಗ್ರತೆಯನ್ನು ಉಂಟು ಮಾಡಿದ್ದು' ಎಂದಿದ್ದಾರೆ. ಹೀಗೆ ಹಲವು ವಿದ್ವಾಂಸರು ಮಾಧವ ಕರುಣಾವಿಲಾಸದ ಕಲ್ಪಿತ ಇತಿಹಾಸ ಹಾಗೂ ತತ್ವಮಥನವನ್ನು ಕುರಿತು ಹೇಳಿದ್ದಾರೆ. ಆದರೂ ಈ ಅಧ್ಯಯನಕ್ಕೆ ಪೂರಕವಾಗುವ ಅಂಶಗಳ ಹಿನ್ನೆಲೆಯಲ್ಲಿ ಕಾದಂಬರಿಯಲ್ಲಿ ವ್ಯಕ್ತವಾಗಿರುವ ಅಂಶಗಳನ್ನು ಇಲ್ಲಿ ಗುರುತಿಸಲಾಗಿದೆ.

ಒಂದು ರಾಷ್ಟ್ರ ನಿರ್ಮಾಣ ಕಾರ್ಯವು ಕೇವಲ ಒಂದು ವರ್ಗದಿಂದಾಗುವ ಕಾರ್ಯವಲ್ಲ. ಅದಕ್ಕೆ ಎಲ್ಲ ವರ್ಗಗಳು ಒಂದಾಗಬೇಕು. ಒಗ್ಗಟ್ಟಿನ ಬೆನ್ನಲ್ಲಿ ರಾಷ್ಟ್ರ ಉದಯವನ್ನು ಗಳಗನಾಥರು ಕಾಣುತ್ತಾರೆ. ಮಾಧವನ ಪ್ರೇರಣೆಯಿಂದಾಗಿ ಎಲ್ಲ ವರ್ಗದ ಜನರು ಒಗ್ಗೂಡಿದರು ಎಂದು ಹೇಳುತ್ತಾರೆ. ತಾವು ಬ್ರಾಹ್ಮಣರು, ತಾವು ಲಿಂಗವಂತರು, ತಾವು ಕ್ಷತ್ರಿಯರು, ತಾವು ವೈಶ್ಯರು, ತಾವು ಶೂದ್ರರು, ತಾವು ಅತೀ ಶೂದ್ರರು ಎಂಬ ಭೇದಭಾವ ಮರೆತುಬಿಟ್ಟರು... ಪ್ರತಿಯೊಬ್ಬರ ಕಣ್ಣೆದುರಿಗೆ ದೇಶೋದ್ಧಾರದ ಕಾರ್ಯವೊಂದು ಕಟ್ಟಿಬಿಟ್ಟಿದ್ದರಿಂದ ಒಕ್ಕಟ್ಟಿಗೆ ಬಾಧೆ ತರುವ ಅವರ ಕ್ಷುದ್ರ ಭೇದಭಾವದ ವಿಚಾರಗಳೆಲ್ಲ ಅಳಿದು ಹೋಗಿ, ಅವರೆಲ್ಲರು 'ತಾವು ದೇಶಬಾಂಧವರು ಕರ್ನಾಟಕ ಭೂಮಾತೆಯ ಮಕ್ಕಳು. ನಮ್ಮನ್ನು ಅನ್ಯಾಯದಿಂದ ತುಳಿದು ನೆಲಕ್ಕೊರಿಸಬಂದ ವೈರಿಗಳ ಮಗ್ಗಲು ಮುರಿಯುವವರು' ಎಂಬ ವಿಚಾರಗಳು ಮುಪ್ಪುರಿಯ ಬಲವಾದ ಒಂದೇ ಹಗ್ಗದಿಂದ ಗಟ್ಟಿಮುಟ್ಟಾಗಿ ಕಟ್ಟಲ್ಪಟ್ಟವರು. ಜಾತಿ, ಮತ, ಲಿಂಗ ವಯಸ್ಸಿನ ಅಂತರವನ್ನು ಮರೆತು ಎಲ್ಲರೂ ಒಂದಾಗಿ ಮಾಧವನ ಮಾತಿಗೆ ಓಗೊಟ್ಟು ಮಹಾಸಾಮ್ರಾಜ್ಯವೊಂದರ ನಿರ್ಮಾಣಕ್ಕೆ ಕಾರಣಕರ್ತರಾದರು. ಕಾದಂಬರಿಕಾರರು ತಮ್ಮ ಸಮಕಾಲೀನ ಸಂದರ್ಭದಲ್ಲಿ ಕಟ್ಟಿಕೊಳ್ಳಬೇಕಾದ ನಾಡಿನ ಕಾರ್ಯಕ್ಕೆ ಈ ಬಗೆಯ ಒಗ್ಗಟ್ಟು ಅಗತ್ಯ ಎನ್ನುವುದನ್ನು ವಿಜಯನಗರದ ಚರಿತ್ರೆಯ ಮೂಲಕ ಸಮೀಕರಿಸಿ ಹೇಳಿದ್ದಾರೆ. ಧರ್ಮ ಜಾಗೃತಿ ಹಾಗೂ ರಾಷ್ಟ್ರ ಜಾಗೃತಿಗಾಗಿ ವೈದಿಕ ಧರ್ಮದ ಯಾವ ಜಾತಿಯವರೇ ಆಗಲಿ ಉದ್ದೇಶವರಿತು ವಿವೇಕದಿಂದ ನಡೆದುಕೊಳ್ಳಬೇಕು ಎಂದು ಹೇಳುತ್ತಾರೆ. ಹಾಗೆಯೇ ಅನ್ಯರ ಆಳ್ವಿಕೆಗೆ ಒಳಪಟ್ಟಿರುವ ನಮ್ಮ ನಾಡನ್ನು ನಾವು ಪಡೆಯಲು ಅವರು ಕರೆ ಕೊಡುವ ರೀತಿ ಹೀಗಿದೆ: "ಶೂರರಾದ ಕನ್ನಡಿಗರೇ, ಏಳಿರಿ ಟೊಂಕ ಕಟ್ಟಿರಿ; ನಮ್ಮ

ಸ್ವಾತಂತ್ರ್ಯವನ್ನು ನಷ್ಟಪಡಿಸಬಂದ ಮುಸಲ್ಮಾನರನ್ನು ಹೊಡೆದೋಡಿಸುವುದಕ್ಕಾಗಿ ಸಡ್ಡು ಹೊಡೆದು ನಿಂತುಕೊಳ್ಳಿರಿ. ಮಂದಿಯ ಸ್ವಾತಂತ್ರ್ಯ ಹರಣ ಮಾಡುವುದು ಪಾತಕವಾಗಿದ್ದರೆ, ತನ್ನ ಸ್ವಾತಂತ್ರ್ಯವನ್ನು ತಾನೇ ನಷ್ಟಪಡಿಸಿಕೊಳ್ಳುವುದು ಮಹಾಪಾತಕವಾಗಿರುವುದು."[೬] ಈ ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಬ್ಬನೂ ಸ್ವತಂತ್ರನು. ಆದರೆ ಶಕ್ತ್ಯಾನುಸಾರವಾಗಿ ಆ ಸ್ವಾತಂತ್ರ್ಯವನ್ನು ಪಡೆಯುವವರು ಪಡೆಯುತ್ತಾರೆ. ಇಲ್ಲದವರು ಕಳೆದುಕೊಳ್ಳುತ್ತಾರೆ. ಕಳೆದುಕೊಂಡವನು ಹೇಡಿಯಾಗುತ್ತಾನೆ. ಆದರೆ ವೀರಾಧಿವೀರರು ಆಗಿಹೋದ ಮಣ್ಣಿನಲ್ಲಿ ಜನಿಸಿದ ನಾನು ನಮ್ಮ ವೀರತ್ವದಿಂದ ನಮ್ಮ ಪಾಲಿನ ಸ್ವಾತಂತ್ರ್ಯವನ್ನು ನಾವು ಪಡೆದುಕೊಳ್ಳೋಣ ಎನ್ನುವ ಆಶಯವನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ.

ಈ ಕಾದಂಬರಿಯಲ್ಲಿ ಗಣಗನಾಥರು ವಿದ್ಯಾರಣ್ಯರ, ಬ್ರಾಹ್ಮಣತ್ವದ ಕುರಿತ ಅನೇಕ ವಿಚಾರಗಳು ಹೆಣೆಯಲ್ಪಟ್ಟಿರುವುದು ಕಂಡುಬರುತ್ತದೆ. ಹತ್ತೊಂಬತ್ತನೆಯ ಶತಮಾನದ ಸುಧಾರಣಾವಾದಿ ವಿಚಾರಗಳೆಲ್ಲವೂ ವಿದ್ಯಾರಣ್ಯರ ಕಾಲಕ್ಕಾಗಲೇ ಪ್ರಚಲಿತವಾಗಿದ್ದವು ಎನ್ನುವಂತೆ ಚಿತ್ರಿಸಿರುವುದು ಓದುಗರಲ್ಲಿ ಗೊಂದಲಗಳನ್ನು ಉಂಟು ಮಾಡುತ್ತದೆ. ಜಾತ್ಯತೀತ ವಿಚಾರಗಳನ್ನು ಹೇಳುವ ಸಂದರ್ಭದಲ್ಲಿ ಮಾದಿಗರ ದುರುಗಪ್ಪನ ಮಾತುಗಳನ್ನು ಇಲ್ಲಿ ಗಮನಿಸಬೇಕಾಗುತ್ತದೆ. ದುರುಗಪ್ಪನಿಗೆ ನೀನು ಬೇರೆಯವನಲ್ಲ ನಮ್ಮ ಮಗನೇ ಇದ್ದೀಯ ಎಂದು ಮಾಧವರು ಹೇಳುತ್ತಾರೆ. ಪರಂಪರಾಗತವಾಗಿ ಬಂದ ನಂಬಿಕೆಗಳಿಗನುಗುಣವಾಗಿ ದುರುಗಪ್ಪ ತಾನು ಎಷ್ಟಿದ್ದರೂ ಕೀಳು ಕುಲದವನೇ ಎಂದಾಗ ಲೇಖಕರು ಅದನ್ನು ಸಮರ್ಪಕ ಮಾತು ಎಂದು ಕರೆಯುತ್ತಾರೆ. ಒಂದೆಡೆ ಸಮಾನತಾ ತತ್ವದ ಮೇಲೆ ರಾಷ್ಟ್ರದ ನಿರ್ಮಾಣ ಸಾಧ್ಯ ಎನ್ನುತ್ತ, ಮತ್ತೊಂದೆಡೆ, ಇಂತಹ ಜಾತಿ ವಿಚಾರಗಳನ್ನು ಹೇಳುವುದು ಗೊಂದಲವಾಗಿ ತೋರುತ್ತದೆ. ಇಂತಹ ಹಲವು ಸಂಗತಿಗಳು ಕಾದಂಬರಿಯಲ್ಲಿ ಕಾಣಿಸುತ್ತವೆ.

ಏನೇ ಇದ್ದರೂ ಕರ್ನಾಟಕ ಏಕೀಕರಣ ಹಾಗೂ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕಲ್ಪಿತ ಹಾಗೂ ಬೋಧನಾತ್ಮಕ ವಿಚಾರಗಳಿಗೆ ಮನ್ನಣೆ ಇದ್ದಿತು. ಅಂತಹ ಸಂದರ್ಭದಲ್ಲಿ ಗಳಗನಾಥರು ವಿಜಯನಗರ ಚರಿತ್ರೆಯ ಘಟನೆಯನ್ನಾಧರಿಸಿ ಅದಕ್ಕೆ ತಮ್ಮ ಕಲ್ಪನೆಯ ನೀರನ್ನೆರೆದು ಜನರೆದುರಿಗೆ ಇಟ್ಟರು. ಆ ಮೂಲಕ ಜನರಲ್ಲಿ ನಾಡು-ನುಡಿಯ ಮೇಲಿನ ಅಭಿಮಾನವು ಹುಟ್ಟಿ, ಜನ ಜಾಗೃತರಾಗಿ ಅನ್ಯರ ಆಕ್ರಮಣದ ವಿರುದ್ಧ ಹೋರಾಡುವಂತೆ ಕರೆ ನೀಡಿದರು.

ಇ. ಶಂಕರ ಅಣ್ಣಾಜಿ ಕುಲಕರ್ಣಿಯವರ ಕರ್ನಾಟಕ ಸಿಂಹಾಸನ ಸ್ಥಾಪನೆ (೧೯೩೭)

ವಿಜಯನಗರಕ್ಕೆ ಸಂಬಂಧಿಸಿದಂತೆ ರಚನೆಗೊಂಡ ಕಾದಂಬರಿಗಳಲ್ಲಿ ಶಂಕರ ಅಣ್ಣಾಜಿ ಕುಲಕರ್ಣಿ ಇವರು ಬರೆದಿರುವ 'ಕರ್ನಾಟಕ ಸಿಂಹಾಸನ ಸ್ಥಾಪನೆ'ಯು ಒಂದು. ಈ ಕಾದಂಬರಿಯ ಪ್ರಸ್ತಾವನೆಯಲ್ಲಿ ಲೇಖಕರು ವಿಜಯನಗರ ಸಾಮ್ರಾಜ್ಯದ ಹಿರಿಮೆಯನ್ನು ಕುರಿತು ರಾಬರ್ಟ್ ಸಿವೆಲ್‌ರು ಬರೆದ 'ಮರೆತುಹೋದ ಸಾಮ್ರಾಜ್ಯ' ಮತ್ತು ಸೂರ್ಯನಾರಾಯಣ ರಾವ್ ಅವರ 'ಎಂದು ಮರೆಯದ ಸಾಮ್ರಾಜ್ಯ' ಕೃತಿಗಳಲ್ಲಿನ ಕೆಲ ಸಂಗತಿಗಳನ್ನು ಆಯ್ದುಕೊಂಡು ಅದಕ್ಕೆ ಕಾಲ್ಪನಿಕತೆಯನ್ನು ನೀಡಿ ಕೃತಿ ರಚಿಸಿರುವುದಾಗಿ ಹೇಳಿದ್ದಾರೆ. ಹಾಗೆಯೇ "ಐತಿಹಾಸಿಕ ಕಾದಂಬರಿಯು

ಇತಿಹಾಸವಲ್ಲ; ಇತಿಹಾಸ ಕಲ್ಪನೆಯ ಸಮ್ಮಿಶ್ರಣವು" ಎಂದು ಹೇಳಿರುವಲ್ಲಿ ಲೇಖಕರು ತಾವು ಕಾದಂಬರಿ ರಚಿಸಿರುವ ವಿಧಾನವನ್ನು ಹೇಳಿದಂತಿದೆ. ಈ ಕಾದಂಬರಿಯು ರಚಿತಗೊಂಡಿರುವ ಮುಖ್ಯ ಉದ್ದೇಶವು ೨೦ನೆಯ ಶತಮಾನದ ಆದಿಭಾಗದಲ್ಲಿನ ವಸಾಹತುಶಾಹಿ ಆಡಳಿತದಿಂದ ಉಂಟಾದ ಪರಿಣಾಮಗಳ ವಿರುದ್ಧವಾಗಿ ಕನ್ನಡಿಗರಲ್ಲಿ ಜಾಗೃತಿಯನ್ನು ಉಂಟು ಮಾಡುವ ಸಲುವಾಗಿ ೧೪ನೆಯ ಶತಮಾನದಲ್ಲಿ ಉದಯವಾದ ವಿಜಯನಗರ ಸಾಮ್ರಾಜ್ಯದ ಐತಿಹಾಸಿಕ ನೆನಪುಗಳ ಮೂಲಕ ತಮ್ಮ ಅಸ್ಮಿತೆಯನ್ನು ನಿರ್ಮಾಣ ಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

ಕಾದಂಬರಿ ಪ್ರಾರಂಭವಾಗುವುದು ವಿಜಯನಗರ ಸಾಮ್ರಾಜ್ಯ ಉದಯಿಸುವ ಪೂರ್ವದಲ್ಲಿನ ಚಾರಿತ್ರಿಕ ಸಂಗತಿಗಳನ್ನಾಧರಿಸಿಯೇ. ಇಲ್ಲಿ ಕಾದಂಬರಿಕಾರರು ಎತ್ತುವ ಬಹುಮುಖ್ಯವಾದ ಪ್ರಶ್ನೆ ಧರ್ಮ ಮತ್ತು ನಾಡು ಯಾಕೆ ಪರಾಧೀನವಾದವು ಎನ್ನುವುದು. ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವಾದ ಸಾಂಸ್ಕೃತಿಕ ಚರಿತ್ರೆಯೊಂದನ್ನು ಕಟ್ಟಿಕೊಂಡು, ದೇಶೀಯವಾದ ಸಾಂಸ್ಕೃತಿಕ ಮಾದರಿಯನ್ನು ಅವರು ತಮ್ಮ ಕೃತಿಯಲ್ಲಿ ವಿಶ್ಲೇಷಿಸುತ್ತಾರೆ. ಸಮಾಜವನ್ನು ಸಂಘಟಿಸುವ ಮೌಲ್ಯಗಳ ಅಧಃಪತನದಿಂದಾಗಿ ಧರ್ಮ ಮತ್ತು ನಾಡು ಪರಾಧೀನವಾಯಿತು ಎಂದು ಗ್ರಹಿಸಿ; ಸಂಸ್ಕೃತಿಯನ್ನು ಪುನಃ ಚೈತನ್ಯಶೀಲವನ್ನಾಗಿ ಮಾಡಬಲ್ಲ ಮೌಲ್ಯವನ್ನು ಮಂಡಿಸಲು ಪ್ರಯತ್ನಿಸುತ್ತಾರೆ. ಈ ಕಾರ್ಯ ನಡೆಯುವುದು ಪರ್ಯಾಯವಾಗಿಯೇ ಹೊರತು ನೇರವಾಗಿ ಅಲ್ಲ ಎನ್ನುವುದು ಮುಖ್ಯ. ಇಂದು ಭಾರತ ಎಂದು ಗುರುತಿಸುವ ಭೌಗೋಳೀಕ ಪ್ರದೇಶಕ್ಕೆ ಹಿಂದಿನಿಂದಲೂ ಬೇರೆ ಬೇರೆ ದೇಶಗಳಿಂದ ವಿವಿಧ ಜನಾಂಗದವರು ಬಂದು, ಇಲ್ಲಿ ಬಹುಕಾಲ ನೆಲೆಸಿ, ಇಲ್ಲಿನ ಸಂಸ್ಕೃತಿಯನ್ನು ಸ್ವೀಕರಿಸಿ ಅದರಲ್ಲಿ ಬೆರೆತು ಹೋಗಿದ್ದಾರೆ. ಕೆಲವರು ಇಲ್ಲಿನ ಸಂಪತ್ತನ್ನು ಲೂಟಿಕೊಂಡು ತಮ್ಮ ದೇಶಕ್ಕೆ ಹಿಂದಿರುಗಿದ್ದಾರೆ. ಮತ್ತೆ ಕೆಲವರು ಇಲ್ಲಿನ ಪ್ರದೇಶಗಳಲ್ಲಿ ಆಡಳಿತ ನಡೆಸಿ ಇಲ್ಲಿಯೇ ನೆಲೆನಿಂತಿದ್ದಾರೆ. ಅಂತಹವರಲ್ಲಿ ಮುಸ್ಲಿಮರು ಪ್ರಮುಖರು. ವಾಯುವ್ಯಭಾಗದಿಂದ ನಮ್ಮ ದೇಶಕ್ಕೆ ಬಂದು ಉತ್ತರ ಭಾರತದಲ್ಲಿ ನೆಲೆ ನಿಂತ ಈ ಮುಸ್ಲಿಂ ದೊರೆಗಳು ದಕ್ಷಿಣ ಭಾರತದ ಮೇಲೆ ಅನೇಕ ಸಾರಿ ದಾಳಿ ಮಾಡಿ, ಸಂಪತ್ತನ್ನು ದೋಚಿಕೊಂಡು, ಅಲ್ಲಿ ತಮ್ಮ ಗುಲಾಮರನ್ನು ಅರಸರನ್ನಾಗಿ ಮಾಡಿ ಉತ್ತರ ಭಾರತಕ್ಕೆ ಹಿಂದಿರುಗಿದ್ದಾರೆ. ಹೀಗೆ ಮುಸ್ಲಿಮರ ದಾಳಿಗೆ ತುತ್ತಾದ ಸಂಸ್ಥಾನಗಳಲ್ಲಿ ಆನೆಗುಂದಿಯೂ ಒಂದು. ಈ ಸಂಸ್ಥಾನವು ಹಿಂದೂ ಧಾರ್ಮಿಕ ಪರಂಪರೆಯನ್ನು ಹೊಂದಿತ್ತು ಎನ್ನುವುದಕ್ಕೆ ಆನೆಗುಂದಿಯನ್ನು ಮಹಾಭಾರತ ಕಾಲದಲ್ಲಿ ದಕ್ಷಿಣ ಹಸ್ತಿನಾವತಿ ಎಂದು ಕರೆಯಲಾಗಿದೆ. ಹಾಗೆಯೇ ರಾಮಾಯಣ ಕಾಲದಲ್ಲಿ ಬಲಾಢ್ಯ ಅರಸನಾದ ವಾಲಿಯು ಕಿಷ್ಕಿಂದೆಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ್ದಾರೆ ಎನ್ನುವ ಪ್ರತೀತಿ ಇದೆ. ಒಟ್ಟಾರೆಯಾಗಿ ಹೇಳುವುದಾದರೆ ಬಹುಕಾಲದಿಂದಲೂ ಆನೆಗುಂದಿಯು ಹಿಂದೂ(ವೈದಿಕ) ಧರ್ಮದ ನೆಲೆವೀಡಾಗಿತ್ತು ಎನ್ನುವುದನ್ನು ಕಾದಂಬರಿಕಾರರು ನಿರೂಪಿಸಿದ್ದಾರೆ.

ಈ ಕಾದಂಬರಿಯ ಇನ್ನೊಂದು ಪ್ರಮುಖ ಅಂಶವೆಂದರೆ, ನಮ್ಮ ಅಸ್ಮಿತೆಯನ್ನು ಕಳೆದುಕೊಳ್ಳಲು ಕಾರಣವಾದ ಸಾಂಸ್ಕೃತಿಕ ಅಂಶಗಳು ಯಾವುವು ಎನ್ನುವುದನ್ನು ಚಿತ್ರಿಸುವುದಾಗಿದೆ. ವಿಜಯನಗರ

ಸ್ಥಾಪನೆಗೊಳ್ಳುವ ಪೂರ್ವದಲ್ಲಿ ಮಹಾಸಾಮ್ರಾಜ್ಯವೆಂದು ಕರೆಯಿಸಿಕೊಳ್ಳುವ ಯಾವುದೊಂದು ಸಾಮ್ರಾಜ್ಯವು ಹಿಂದೂಸ್ತಾನದಲ್ಲಿ ಇರಲಿಲ್ಲ. ಆ ಸಂದರ್ಭದಲ್ಲಿ ಅನೇಕ ಸಣ್ಣ ಪುಟ್ಟ ಸಂಸ್ಥಾನಗಳಾಗಿ ವಿಭಜನೆಗೊಂಡಿದ್ದವು. ಅವುಗಳಲ್ಲಿ ಮುಖ್ಯವಾದವು. ಇವು ಮೇಲ್ನೋಟಕ್ಕೆ ಹಿಂದೂ ಸಂಸ್ಥಾನಗಳೆಂದು ಕಂಡುಬಂದರೂ ಅವುಗಳಲ್ಲಿ ಪರಸ್ಪರ ಹೊಂದಾಣಿಕೆಯೆಂಬುದು ಇರಲಿಲ್ಲ. ಒಂದು ರಾಜ್ಯದ ಉನ್ನತಿಯನ್ನು ಮತ್ತೊಂದು ರಾಜ್ಯ ಸಹಿಸುತ್ತಿರಲಿಲ್ಲ. ಸಮೀಪದ ಸಂಸ್ಥಾನಿಕರು ಹಾಳಾದರೆ ತಮಗೆ ಲೇಸೆಂದು ಉಳಿದವರು ತಿಳಿದಿದ್ದರು.

ಕನ್ನಡಿಗರ ಹಾಗೂ ಹಿಂದೂಗಳ ಉದಾರತೆಯ ತಮ್ಮ ಅವನತಿಗೆ ಕಾರಣವಾಗಿದೆ ಎನ್ನುವ ಅಂಶಗಳು ಇಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಬಾದಶಹನ ಅಣ್ಣನ ಮಗನಾದ ಬಾಹುದ್ದೀನನು ಬಂಗಾಲದ ಸುಭೇದಾರನಾಗಿದ್ದನು. ಈ ಸಂದರ್ಭದಲ್ಲಿ ಬಾಹುದ್ದೀನನು ತನ್ನನ್ನು ತಿರಸ್ಕರಿಸಿದನೆನ್ನುವ ಫಕೀರರ ಮಾತನ್ನು ನಂಬಿದ ಬಾದಶಹನು ಅವನನ್ನು ಶಿಕ್ಷಿಸುವ ಸಲುವಾಗಿ ಬಂಗಾಲಕ್ಕೆ ದಂಡೆತ್ತಿ ಬರುತ್ತಾನೆ. ಈ ವಿಷಯವನ್ನು ತಿಳಿದ ಬಾಹುದ್ದೀನನು ಕಂಪಿಲ ಸಂಸ್ಥಾನದ ರಾಯನ ಸಹಾಯ ಯಾಚಿಸುತ್ತಾನೆ. ಕಂಪಿಲೆಯ ರಾಯನು ತನ್ನ ಸೈನ್ಯವು ಬಾದಶಹನ ಸೈನ್ಯವನ್ನು ಎದುರಿಸುವ ಶಕ್ತಿಯನ್ನು ಹೊಂದಿಲ್ಲ ಎನ್ನುವುದನ್ನು ಅರಿತಿದ್ದರೂ ಸಹ ತನ್ನನ್ನು ಅರಸಿ ಬಂದವರನ್ನು ಕಾಪಾಡುವುದು ಹಿಂದೂಗಳ ಮುಖ್ಯ ಕರ್ತವ್ಯವೆಂದು ಭಾವಿಸುತ್ತಾನೆ. ಇಂತಹ ತ್ಯಾಗ ಗುಣವೇ ಹಿಂದೂಗಳ ನಿಜವಾದ ಧರ್ಮ ಎಂದು ಹೇಳುತ್ತಾನೆ. ಇಂತಹ ಆದರ್ಶ ಗುಣಗಳಿಂದಾಗಿಯೇ ಮುಂದೊಂದು ದಿನ ಕಂಪಿಲ ಸಂಸ್ಥಾನವು ಎದುರಿಸಿದ ಪರಿಣಾಮವನ್ನು ಕಾದಂಬರಿಕಾರರು ಕನ್ನಡಿಗರ ಮನಃ ಕರಗುವಂತೆ ಚಿತ್ರಿಸಿದ್ದಾರೆ. ಫಕೀರನ ವೇಷಧರಿಸಿ ಬಾದಶಹನ ದರಬಾರಿಗೆ ಭೇಟಿ ನೀಡಿ ಅಲ್ಲಿನ ಎಲ್ಲ ವಿಷಯಗಳನ್ನು ಬಲ್ಲ ಬುಕ್ಕನು ಸನ್ಯಾಸಿ ವೇಷದಲ್ಲಿ ಕಂಪಿಲರಾಯನಲ್ಲಿಗೆ ಬಂದು ಬಾಹುದ್ದೀನನಿಗೆ ಆಶ್ರಯ ನೀಡುವುದಕ್ಕೆ ಅವಕಾಶ ಕೊಡಬೇಡವೆಂದು ಹೇಳಿದರೂ ಸಹ ಕಂಪಿಲರಾಯ ಶರಣು ಬಂದವರನ್ನು ರಕ್ಷಿಸುವುದೇ ಹಿಂದೂಗಳ ಶ್ರೇಷ್ಠ ಧರ್ಮವೆಂದು ಹೇಳಿ ಬಾಹುದ್ದೀನನಿಗೆ ಆಶ್ರಯ ನೀಡುತ್ತಾನೆ.

ಕಾದಂಬರಿಕಾರರ ಮಾತುಗಳು ಹಿಂದೂಗಳ ಔದಾರ್ಯವನ್ನು ಕುರಿತದ್ದಾಗಿದೆ. ಇದರಿಂದಾಗಿ ಉಂಟಾಗುವ ಪರಿಣಾಮವನ್ನು ಕೂಡ ಕಾದಂಬರಿಕಾರರು ವಿವರಿಸುತ್ತಾರೆ. ಕಂಪಿಲರಾಯನು ತಾನು ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಸಲುವಾಗಿ ತನ್ನ ಸಂಸ್ಥಾನದ ಪ್ರಜೆಗಳು ಅನುಭವಿಸುವ ಘೋರವಾದ ಪರಿಣಾಮವನ್ನು ಕಾದಂಬರಿಕಾರರು ಮನಮುಟ್ಟುವಂತೆ ವಿವರಿಸುತ್ತಾರೆ. ಆ ಕಾಲದ ಜನರು ಸತೀತ್ವ ರಕ್ಷಣೆಗೆ ಮಹತ್ವ ಕೊಟ್ಟವರು ಹಾಗೂ ಪಾತಿವ್ರತ್ಯದ ಪವಿತ್ರತೆಗೆ ಹೆಚ್ಚಿನ ಮಾನ್ಯತೆ ನೀಡಿದವರಾಗಿದ್ದರಿಂದ ಅಪಮಾನಕ್ಕಿಂತ ಸಾಯುವುದೇ ಲೇಸೆಂದು ಬಗೆದು, ವಿರೋಧಿಗಳ ಕೈಗೆ ಹೆಂಡಿರು, ಮಕ್ಕಳು, ತಾಯಂದಿರನ್ನು ಕೊಡದೆ ಅಗ್ನಿಗಾಹುತಿ ನೀಡಿದರು. ಒಂದೆಡೆ ಗ್ರಾಮದ ದೇವಸ್ಥಾನದ ಪ್ರಾಂಗಣದಲ್ಲಿ ನಿರ್ಮಿಸಿದ ಚಿತೆಗೇರಿ ತಮ್ಮ ಆತ್ಮಾಹುತಿಗಾಗಿ ನೂರಾರು ಮುತ್ತೈದೆಯರು ಸಾಲುಗಟ್ಟಿ ನಿಂತಿದ್ದರೆ, ಮತ್ತೊಂದೆಡೆ ತಮ್ಮ ಮಾತಾಸುತೆಯರ ಕಡೆಯ ಅಪ್ಪಣೆಯನ್ನು ಹೊಂದಿ, ಸತಿಯರ ಕಡೆಯ ತಾಂಬೂಲವನ್ನು ಸ್ವೀಕರಿಸಿ, ಹಳದೀ ವಸ್ತ್ರಗಳನ್ನು ಧರಿಸಿ ರಣಾಂಗಣಕ್ಕೆ

ದೇಹವನ್ನರ್ಪಿಸುವುದಕ್ಕೆ ಸಿದ್ಧರಾಗಿ ನಿಂತಿದ್ದ ವೀರರ ದಂಡು. ಹೀಗೆ ಪರರ ಕೈಯಲ್ಲಿ ಹೀನಾಯವಾಗಿ ಸಾಯದೆ, ವೀರತ್ವದಿಂದ, ಪಾತಿವ್ರತ್ಯದಿಂದ ಜೀವನವನ್ನು ಮುಕ್ತಿಗೊಳಿಸಬೇಕೆಂದು ಕೂಡ ಕಂಪಿಲ ಸಂಸ್ಥಾನದ ಹಿಂದೂ ಪ್ರಜೆಗಳ ಮನದಿಚ್ಛೆ ಕಾದಂಬರಿಯಲ್ಲಿ ಮಡುಗಟ್ಟಿ ನಿಂತಿದೆ.

ಹೀಗೆ ಕಾದಂಬರಿಕಾರರು ಸಂಸ್ಥಾನಗಳಲ್ಲಿನ ಲೋಪದೋಷಗಳು ಅನ್ಯರಿಗೆ ಹೇಗೆ ಸಹಕಾರಿಯಾಗಿದ್ದವು ಎನ್ನುವುದನ್ನು ಕಂಪಿಲೆ ಮತ್ತು ಆನೆಗುಂದಿ ಸಂಸ್ಥಾನಗಳ ನಿದರ್ಶನಗಳ ಮೂಲಕ ವಿವರಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಹಿಂದೂಗಳು ತಮ್ಮ ಸಾಮ್ರಾಜ್ಯವನ್ನು ಕಟ್ಟಿಕೊಳ್ಳಬೇಕೆಂಬ ಹಂಬಲವನ್ನು ಹೊತ್ತು, ಅಂತಹ ಸಾಮ್ರಾಜ್ಯವನ್ನು ನಿರ್ಮಾಣ ಮಾಡಿಕೊಳ್ಳಲು ಪ್ರಯತ್ನಿಸಿದ ಸಂಗತಿ ಈ ಕಾದಂಬರಿಯಲ್ಲಿ ಮೈದಾಳಿ ನಿಂತಿದೆ.

ಈ. ಶ್ರೀನಾಗೇಶ ಅವರ ಎಚ್ಚಮ ನಾಯಕ (೧೯೩೬)

ವಿಜಯನಗರ ಸಾಮ್ರಾಜ್ಯವು ಯವನರ ದಾಳಿಯಿಂದ ಅವನತಿ ಹೊಂದಿ, ಅಲ್ಲಿನ ರಾಜಪರಿವಾರದವರು ಅಲ್ಲಿಂದ ಪೆನುಗೊಂಡಕ್ಕೆ ಬಂದು ನೆಲೆ ನಿಂತರು. ತರುವಾಯ ತಿರುಮಲನ ನಂತರ ಆತನ ಮಗ ಶ್ರೀರಂಗರಾಯ ಪಟ್ಟಕ್ಕೆ ಬಂದ. ಅವನ ನಂತರ ಅವನ ತಮ್ಮನಾದ ವೆಂಕಟಪತಿದೇವನು ಪಟ್ಟಾಭಿಷಕ್ತನಾದನು. ಆತನ ಆಡಳಿತಾವಧಿಯಲ್ಲಾದ ಘಟನೆಗಳನ್ನು ಇಟ್ಟುಕೊಂಡು ಶ್ರೀನಾಗೇಶ ಅವರ 'ಎಚ್ಚಮ ನಾಯಕ' ಕಾದಂಬರಿಯು ಆರಂಭಗೊಂಡು, ಮುಮ್ಮಡಿ ಶ್ರೀರಂಗರಾಯನ ಆಡಳಿತವನ್ನೊಳಗೊಂಡು ರಾಮರಾಯನು ಪಟ್ಟಾಭಿಷೇಕದೊಂದಿಗೆ ಕಾದಂಬರಿ ಮುಕ್ತಾಯಗೊಳ್ಳುತ್ತದೆ. ಈ ಕಾದಂಬರಿಗೆ ದೇಸಾಯಿ ಪಾಂಡುರಂಗ ಅವರು ಬರೆದ 'ವಿಜಯನಗರ ಸಾಮ್ರಾಜ್ಯ' ಎನ್ನುವ ಚಾರಿತ್ರಿಕ ಕೃತಿಯೇ ಆಧಾರವಾಗಿದೆ ಎಂದು ಸ್ವತಃ ಲೇಖಕರೇ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಈ ಕಾದಂಬರಿಯನ್ನು ವಿಜಯನಗರ ಸ್ಥಾಪನೆಯಾದ ಆರುನೂರು ವರ್ಷಗಳ ನಂತರ (೧೯೩೬ರಲ್ಲಿ) ಜರುಗಿದ ವಿಜಯನಗರ ಸಾಮ್ರಾಜ್ಯದ ಮೊದಲನೇ ಜಯಂತ್ಯೋತ್ಸವದ ಸಂದರ್ಭದಲ್ಲಿ ಲೋಕಾರ್ಪಣೆ ಮಾಡಲಾಯಿತು.

ಈ ವೇಳೆಗಾಗಲೇ ಭಾರತದಲ್ಲಿ ಬ್ರಿಟಿಷರ ಆಡಳಿತದಿಂದ ಮುಕ್ತರಾಗಬೇಕೆಂಬ ಹಂಬಲದಿಂದ ರಾಷ್ಟ್ರೀಯ ಹೋರಾಟ ತೀವ್ರ ಸ್ವರೂಪವನ್ನು ಪಡೆದಿತ್ತು. ಹಾಗೆಯೇ ಪ್ರಾಂತೀಯ ಮಟ್ಟದಲ್ಲಿ ಭಾಷಿಕ ಪ್ರದೇಶಗಳು ಒಂದೇ ಆಡಳಿತದ ಅಡಿಯಲ್ಲಿರಬೇಕೆಂಬ ಉದ್ದೇಶದಿಂದ ಹಲವು ಚಳುವಳಿಗಳು ಆರಂಭಗೊಂಡಿದ್ದವು. ಅಂತಹ ಸಂದರ್ಭದಲ್ಲಿ ಕರ್ನಾಟಕದಲ್ಲಿಯೂ ಏಕೀಕರಣ ಚಳುವಳಿಯು ತನ್ನ ಹೋರಾಟದ ಸ್ವರೂಪವನ್ನು ತೀವ್ರಗೊಳಿಸಿತ್ತು. ಆಗ ಜನರಲ್ಲಿ ನಾಡು ನುಡಿಯ ಬಗೆಗೆ ಅಭಿಮಾನ ಮೂಡಿಸುವುದರ ಜೊತೆಗೆ ರಾಷ್ಟ್ರೀಯ ಪ್ರಜ್ಞೆಯನ್ನು ಬೆಳೆಸುವುದಕ್ಕಾಗಿ ಚಳುವಳಿಗಾರರ, ಪತ್ರಿಕೆಗಳ ಸಾಧನೆ ಸ್ಮರಣೀಯ. ಆ ಸಂದರ್ಭದಲ್ಲಿ ಬಂದ ಸಾಹಿತ್ಯ ಕೃತಿಗಳೂ ಸಹಿತ ಇಂತಹ ಉದ್ದೇಶದಿಂದಲೇ ರಚಿತಗೊಂಡಂತವು. ಹೀಗೆ ರೂಪುಗೊಂಡ ಕೃತಿಗಳು ವರ್ತಮಾನದ ಊನತೆಯನ್ನು ತುಂಬಿಕೊಳ್ಳಲು ಗತಕಾಲದ ಸ್ಮರಣೀಯ ಘಟನೆಗಳನ್ನು ಮರುಪೋಣಿಸುವುದರ ಮೂಲಕ ಜನರಲ್ಲಿ ನಾಡು, ನುಡಿ, ರಾಷ್ಟ್ರ ಮತ್ತು ಧರ್ಮದ ಪ್ರಜ್ಞೆಯನ್ನು ಬೆಳೆಸಲು ಪ್ರಯತ್ನಿಸಿದರು.

ಇಂತಹ ಸಂದರ್ಭದಲ್ಲಿ ನಮ್ಮ ಸಾಹಿತಿಗಳಿಗೆ ಸಿಕ್ಕ ಗಣಿ ವಿಜಯನಗರದ ಚರಿತ್ರೆ. ಹಿಂದೂ ಧರ್ಮದ ನೆಲೆವೀಡಾಗಿ, ಕನ್ನಡಿಗರ ಆದರ್ಶವಾಗಿ ರಾಜ್ಯವಾಗಿ ಮೆರೆದು ಮಾಯವಾಗಿದ್ದ ವಿಜಯನಗರದ ಚಾರಿತ್ರಿಕ ನೆನಪುಗಳ ಮುಖೇನ ಜನರನ್ನು ಅಂದಿನ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ ಮಹಾಹೋರಾಟಗಳಿಗೆ ಅಣಿಗೊಳಿಸುವುದಾಗಿತ್ತು. ಈ ಹಿನ್ನೆಲೆಯಲ್ಲಿ ಈ ಕಾದಂಬರಿ ಚಿತ್ರಿತವಾಗಿದೆ.

ವಿಜಯನಗರ ಸಾಮ್ರಾಜ್ಯ ಅವನತಿ ಹೊಂದಿದ ನಂತರ ಯಾವುದೊಂದು ಮಹಾಸಾಮ್ರಾಜ್ಯ ಉದಯಿಸಲಿಲ್ಲ. ಅನೇಕ ಸಣ್ಣ ಪುಟ್ಟ ರಾಜರ ಆಡಳಿತ ಶಾಖೆಗಳು ತಲೆಯೆತ್ತಿದ್ದವು. ಅವುಗಳೆಂದರೆ, ವೆಲ್ಲೂರು, ಮಧುರೆ, ತಂಜಾವೂರು ಮುಂತಾದವು. ಹೀಗೆ ಉದಯಿಸಿದ ರಾಜ್ಯಗಳಲ್ಲಿ ಅಧಿಕಾರಕ್ಕಾಗಿ ಅನೇಕ ಆಂತರಿಕ ಕಚ್ಚಾಟಗಳು, ಒಳಸಂಚುಗಳು ಮುಂತಾದ ಸಮಸ್ಯೆಗಳು ಉಲ್ಬಣಗೊಂಡಿದ್ದವು. ಹಾಗೆಯೇ ಈ ಸಂದರ್ಭದಲ್ಲಿ ಭಾರತಕ್ಕೆ ವ್ಯಾಪಾರಕ್ಕೆಂದು ಬಂದ ಪರಕೀಯರು ಈ ದೌರ್ಬಲ್ಯಗಳನ್ನು ಬಳಸಿಕೊಂಡು ತಮ್ಮ ಅಧಿಪತ್ಯವನ್ನು ಸ್ಥಾಪಿಸುವ ಹುನ್ನಾರದಲ್ಲಿದ್ದರು ಎಂಬುದನ್ನು ಕಾದಂಬರಿಕಾರರು ಎಚ್ಚಮ ನಾಯಕನ ಮೂಲಕ ಅಭಿವ್ಯಕ್ತಿಸಿದ್ದಾರೆ.

ಈ ಸಂದರ್ಭದಲ್ಲಿ ಇನ್ನಷ್ಟು ಅಂಶಗಳನ್ನು ಕಾದಂಬರಿಯಲ್ಲಿ ವ್ಯಕ್ತವಾದ ಸಂಗತಿಗಳೊಂದಿಗೆ ವಿಸ್ತರಿಸಿಕೊಳ್ಳುವುದು ಸೂಕ್ತವೆನಿಸುತ್ತದೆ. ಕಾದಂಬರಿಕಾರರು ವಿಜಯನಗರ ಸಾಮ್ರಾಜ್ಯವನ್ನು ಕನ್ನಡಿಗರ ಸಾಮ್ರಾಜ್ಯವೆಂದು ಕರೆಯುತ್ತಾರೆ. ಅಲ್ಲಿನ ಸಾಮ್ರಾಟನನ್ನು ಕರ್ನಾಟಕ ಸಿಂಹಾಸನ ಸಾಮ್ರಾಟನೆಂದು ಕರೆಯುತ್ತಾರೆ. ವಿಜಯನಗರ ಸಾಮ್ರಾಜ್ಯವು ಯವನರ ದಾಳಿಯಿಂದ ಅವನತಿ ಹೊಂದಿದ ತರುವಾಯ ವೆಂಕಟಪತಿರಾಯನು ಪೆನುಗೊಂಡ, ಚಂದ್ರಗಿರಿ, ವೆಲ್ಲೂರುಗಳನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದರೂ ಆ ರಾಜ್ಯಗಳನ್ನು ಒಟ್ಟಾರೆಯಾಗಿ ವಿಜಯನಗರ ಸಾಮ್ರಾಜ್ಯ ಎಂದೇ ಕರೆಯುತ್ತಾರೆ. ವಿಜಯನಗರವನ್ನು ಕರ್ನಾಟಕ ಸಾಮ್ರಾಜ್ಯ ಎಂದು ಕರೆದುಕೊಳ್ಳಲು ಮುಖ್ಯವಾಗಿ ಮಹಮದೀಯರ ದಾಳಿಗಳೇ ಎಂಬುದು ತಿಳಿದುಬರುತ್ತದೆ. ಏಕೆಂದರೆ ಮಹಮದೀಯರ ದಾಳಿಯಿಂದ ತತ್ತರಿಸಿ ಹೋಗಿ ಧರ್ಮದ ಹಾಗೂ ನಾಡಿನ ಉಳಿವಿಗಾಗಿ ನಮ್ಮದೇ ಸುಭದ್ರವಾದ ಸಾಮ್ರಾಜ್ಯವನ್ನು ಕಟ್ಟಿಕೊಳ್ಳಬೇಕೆಂಬ ಹಂಬಲದಿಂದಲೇ ವಿಜಯನಗರ ನಿರ್ಮಾಣವಾದದ್ದು. ಹಾಗೆಯೇ ಇದರ ಅಂತ್ಯವು ಕೂಡ ಮಹಮ್ಮದೀಯರ ದಾಳಿಯಿಂದಲೇ ಆಗಿದೆ. ಈ ಕಾರಣಕ್ಕಾಗಿ ಆ ಸಂದರ್ಭದಲ್ಲಿ ಬಲಶಾಲಿಯಾದ ಹಿಂದೂ ಸಾಮ್ರಾಜ್ಯವೊಂದು ಈ ನಾಡಿನಲ್ಲಿ ಇರಲಿಲ್ಲ. ಇದರಿಂದಾಗಿ ನಾವು ಕಂಡ ಮಹಾಸಾಮ್ರಾಜ್ಯವೊಂದು ನಶಿಸಿ ಹೋದಾಗ ಅದರ ಕಾರ್ಯವೈಖರಿ ಹಾಗೂ ಆ ಸಾಮ್ರಾಜ್ಯ ಧರ್ಮಕ್ಕಾಗಿ ಕೈಗೊಂಡ ಕಾರ್ಯಗಳನ್ನು ಗಮನಿಸಿ ಮತ್ತು ವಿಜಯನಗರ ಅವನತಿ ಹೊಂದಿದ ನಂತರ ಸ್ವಲ್ಪ ಕಾಲದಲ್ಲಿಯೇ ನಮ್ಮ ದೇಶದ ಮೇಲಾದ ಪರಕೀಯರ ದಾಳಿಗಳಿಂದ ನಾಡು ಮತ್ತು ಧರ್ಮ ಬಲವಾದ ಪೆಟ್ಟು ತಿಂದವು. ಆದುದರಿಂದ ನಮ್ಮದೇ ಎಂದು ಹೇಳಿಕೊಳ್ಳಲಿಕ್ಕೆ ಒಂದು ಸಾಮ್ರಾಜ್ಯವಾದರೂ ಇರಲಿಲ್ಲ. ಇದ್ದ ಮೈಸೂರು ಸಂಸ್ಥಾನವು ಒಡೆಯರ ಆಡಳಿತದಲ್ಲಿದ್ದರೂ ಅದು ಬ್ರಿಟಿಷರ ಆಳ್ವಿಕೆಯ ಸಂದರ್ಭದಲ್ಲಿ ಅವರ ನಿರ್ದೇಶನದಡಿಯಲ್ಲಿ ಆಡಳಿತ ನಡೆಸುತ್ತಿತ್ತು.

ಅವರ ದುರಾಡಳಿತದಿಂದಾಗಿ ಸ್ವಾಭಿಮಾನಿಗಳೆನಿಸಿಕೊಂಡ ಕನ್ನಡಿಗರಿಗೆ ಸ್ವಾಭಿಮಾನದ ಪ್ರಶ್ನೆ ಬಹುಮುಖ್ಯವಾಗಿ ಕಾಡಿ ಆಗ ಕರ್ನಾಟಕ ಎಂಬ ನಾಡನ್ನು ರೂಪಿಸಿಕೊಳ್ಳಬೇಕೆಂಬ ಅಭಿಲಾಷೆಯುಂಟಾದಂತಿದೆ. ಅದಕ್ಕಾಗಿಯೇ ಆ ಸಂದರ್ಭದ ಜನ ಕನ್ನಡಿಗರ ಹಾಗೂ ಹಿಂದೂಗಳ ಸಮೃದ್ಧಿಯ ಸಂಕೇತವಾದ ವಿಜಯನಗರವನ್ನು ಆದರ್ಶವಾಗಿಟ್ಟುಕೊಂಡು ಆ ಮೂಲಕ ತಮ್ಮತನವನ್ನು ಗುರುತಿಸಿಕೊಳ್ಳುವ ಪ್ರಯತ್ನ ಮಾಡಿದರು. ವಿಜಯನಗರ ಸಾಮ್ರಾಜ್ಯವು ವೈಭವಶಾಲಿಯಾದ ರಾಷ್ಟ್ರವೆಂದು, ಬಲಸಮೃದ್ಧಿಯಾದ ರಾಜ್ಯವೆಂದು ಪರಿಭಾವಿಸಲಾಗಿದೆ. ಅಂತಹ ಸಾಮ್ರಾಜ್ಯದ ಆಡಳಿತವನ್ನು ಆದರ್ಶವೆಂದು ಅನುಕರಿಸುತ್ತಾರೆ. ಅಂತಹ ಆದರ್ಶ ಸಾಮ್ರಾಜ್ಯ ನಿರ್ಮಾಣ ಕಾರ್ಯದಲ್ಲಿ ವೆಂಕಟಪತಿರಾಯನು ತೊಡಗುತ್ತಾನೆ. ಈ ಸಂದರ್ಭದಲ್ಲಿ ರಾಜ್ಯದಲ್ಲಿ ಸ್ವಾರ್ಥ ಸಾಧನೆಗಾಗಿ ಅಧಿಕಾರದ ದಾಹದಿಂದ ರಾಜ್ಯ ವಿದ್ರೋಹಿ ಕಾರ್ಯದಲ್ಲಿ ತೊಡಗಿದವರನ್ನು ರಾಜನಿಷ್ಠ ಸೇವಕರು, ಅಧಿಕಾರಿ ವರ್ಗದವರು ಹೇಗೆ ಕಾಪಾಡಿಕೊಂಡರೆಂಬುದು ಕಾದಂಬರಿಯ ಮುಖ್ಯ ಆಶಯ.

ಕಾದಂಬರಿಯಲ್ಲಿ ಇನ್ನೊಂದು ಮುಖ್ಯ ಅಂಶವೆಂದರೆ ಒಂದು ಸಾಮ್ರಾಜ್ಯದ ಅಧಿಪತಿಯಾಗಬೇಕಾದರೆ ಅವನು ಹಿಂದೂ ಧರ್ಮದ ಸಂಪ್ರದಾಯದ ಪ್ರಕಾರ ಕ್ಷತ್ರಿಯನೇ ಆಗಿರಬೇಕು. ಆದರೆ ಪೆನುಗೊಂಡದಲ್ಲಿ ಆರು ಜನ ಮಡದಿಯರನ್ನು ಹೊಂದಿದ್ದ ವೆಂಕಟಪತಿರಾಯನಿಗೆ ಪುತ್ರ ಸಂತಾನವಿರಲಿಲ್ಲ. ಆಗ ಅವನ ಹೆಂಡತಿ ಒಬಮ್ಮಾಂಬಿಕೆಯು ಸಾಮ್ರಾಜ್ಯದಲ್ಲಿ ತನ್ನ ಪ್ರತಿಷ್ಠೆಯು ಬೆಳೆಯಬೇಕೆಂದು, ರಾಯನ ಪ್ರೇಮಾದರಗಳು ತನ್ನಲ್ಲಿ ಹೆಚ್ಚಾಗಬೇಕೆಂದು ಯೋಚಿಸಿ, ಚಂದ್ರಗಿರಿ ರಾಜಧಾನಿಯೊಳಗಿನ ಒಬ್ಬ ಬ್ರಾಹ್ಮಣ ಮಹಿಳೆಯಿಂದ ಮಗುವನ್ನು ಪಡೆದು ಅದು ತನ್ನ ಮಗುವೆಂಬಂತೆ ಹೇಳಿಕೊಂಡು ಅವನನ್ನೇ ಕರ್ನಾಟಕ ಸಾಮ್ರಾಜ್ಯದ ಯುವರಾಜನನ್ನಾಗಿ ಬಿಂಬಿಸತೊಡಗಿದಳು. ಆದರೆ ಈ ಸತ್ಯವನ್ನು ಅರಿತ ಎಚ್ಚಮ ನಾಯಕನು ಕರ್ನಾಟಕ ಸಿಂಹಾಸನವನ್ನು ಅಲಂಕರಿಸಲು ಕ್ಷತ್ರಿಯನೇ ಅರ್ಹ, ಅನ್ಯ ಕುಲದವನು ಅದಕ್ಕೆ ಅರ್ಹನಲ್ಲ. ಆ ಮನೆತನದಲ್ಲಿ ಪುತ್ರ ಸಂತಾನವಿಲ್ಲದಾಗ ಇದೇ ವಂಶಸ್ಥರು ರಾಜ ಪದವಿಯನ್ನು ಅಲಂಕರಿಸುವಂತೆ ನೋಡಿಕೊಳ್ಳುತ್ತಾನೆ. ಈ ಅಂಶವನ್ನು ಗಮನಿಸಿದಾಗ ಸಿಂಹಾಸನದ ಪವಿತ್ರತೆಯನ್ನು, ಆ ಕಾಲದ ಸಾಮಾಜಿಕ ಮೌಲ್ಯವನ್ನು ಉಳಿಸಿಕೊಳ್ಳಲು ಅಂದಿನ ವೀರರು ಮಾಡಿದ ಹೋರಾಟವು ಕನ್ನಡಿಗರು ತಮ್ಮ ಧಾರ್ಮಿಕ ಅಸ್ಮಿತೆಯನ್ನು ಸ್ಥಾಪಿಸಿಕೊಳ್ಳಲು ಪ್ರೇರೇಪಿಸುತ್ತದೆ. ಇಂತಹ ಧಾರ್ಮಿಕ ನಂಬಿಕೆಗಳನ್ನು ನಮ್ಮ ಪೂರ್ವಜರು ಹೊಂದಿದ್ದರು. ಆದರೆ ಇಂದು ನಾವು ಅನ್ಯಧರ್ಮೀಯರಷ್ಟೇ ಅಲ್ಲ; ಅನ್ಯ ದೇಶಿಯರೂ ಆದವರನ್ನು ನಮ್ಮ ಒಡೆಯರೆಂದು ಒಪ್ಪಿಕೊಂಡರೆ ನಮ್ಮ ಧಾರ್ಮಿಕ ಆಶಯಗಳನ್ನು ಧಿಕ್ಕರಿಸಿದಂತಾಗುತ್ತದೆ ಎಂದು ಹೇಳುವುದರ ಮೂಲಕ ಕಾದಂಬರಿಕಾರರು ಅಂದಿನ ಕನ್ನಡ, ಭಾರತ (ರಾಷ್ಟ್ರೀಯ) ಹೋರಾಟಕ್ಕೆ ದೈವಸಂಭೂತರಾದ ಕನ್ನಡಿಗರನ್ನು ಜಾಗೃತಗೊಳಿಸಿದ್ದಾರೆ.

೭. ಗಳಗನಾಥರ ಕನ್ನಡಿಗರ ಕರ್ಮಕಥೆ (೧೯೧೬)

ರಾಬರ್ಟ್ ಸಿವೆಲ್ ಅವರ 'A Forgotten Empire' ಕೃತಿಯ ೧೪ ಮತ್ತು ೧೫ನೆಯ

ಪ್ರಕರಣಗಳನ್ನಿಟ್ಟುಕೊಂಡು ಹರಿನಾರಾಯಣ ಆಪ್ಟೆಯವರು ಮರಾಠಿಯಲ್ಲಿ 'ವಜ್ರಾಘಾತ' ಎನ್ನುವ ಕಾದಂಬರಿಯನ್ನು ಬರೆದರು. ಅದನ್ನೇ ಕನ್ನಡಕ್ಕೆ ಗಳಗನಾಥರು ೩೩ ಪ್ರಕರಣಗಳಲ್ಲಿ 'ಕನ್ನಡಿಗರ ಕರ್ಮಕಥೆ' (೧೯೧೬) ಎಂದು ಅನುವಾದಿಸಿದ್ದಾರೆ. ವಿಜಯನಗರ ಸಾಮ್ರಾಜ್ಯ ಅವನತಿಯು ಹರಿನಾರಾಯಣರಿಗೆ 'ವಜ್ರಾಘಾತ'ವಾದರೆ ಗಳಗನಾಥರಿಗೆ ಅದು 'ಕನ್ನಡಿಗರ ಕರ್ಮಕತೆ'ಯಾಗಿ ಕಂಡಿದೆ.

ರಾಮರಾಯನು ಮುಸಲ್ಮಾನ ಯುವತಿ ಮೇಹರಜಾನಳ ರೂಪಕ್ಕೆ ಮನಸೋತು ಅವಳಲ್ಲಿ ಮೋಹಿತನಾಗುತ್ತಾನೆ. ಮದುವೆಯಾಗುವುದಾಗಿ ವಚನ ನೀಡುತ್ತಾರೆ. ಆದರೆ ಕೃಷ್ಣದೇವರಾಯನ ಮಗಳನ್ನು ಮದುವೆಯಾದರೆ ಅಧಿಕಾರ ದೊರೆಯುತ್ತದೆಯಲ್ಲ ಎಂಬ ಆಸೆಯಿಂದ, ಪ್ರೇಯಸಿಗೆ ಕೊಟ್ಟ ಮಾತಿನಂತೆ ನಡೆದುಕೊಳ್ಳುವಲ್ಲಿ ವಿಫಲನಾಗುತ್ತಾನೆ. ಆಗಲೇ ಗರ್ಭಿಣಿಯಾಗಿದ್ದ ಮೋಹರ ಜಾನಳು ತನ್ನನ್ನು ಅಧಿಕಾರಾಕಾಂಕ್ಷೆಯಿಂದ ರಾಮರಾಯ ಕೈಬಿಟ್ಟನಲ್ಲ ಎಂದು ದುಃಖಿಸುತ್ತಾಳೆ. ಆ ದುಃಖವೇ ದ್ವೇಷವಾಗಿ ಮುಂದೆ ರಾಮರಾಯನ ನಾಶಕ್ಕೆ ಕಾರಣವಾಗುತ್ತದೆ. ರಾಮರಾಯನ ನಾಶದೊಂದಿಗೆ ಇಡೀ ವಿಜಯನಗರವೇ ವಿನಾಶವಾಗುತ್ತದೆ. ಕಾದಂಬರಿಯ ರಚನೆಯ ಕಾಲದಲ್ಲಿ ವಿಜಯನಗರವು ಕನ್ನಡಿಗರ ಸಾಮ್ರಾಜ್ಯದ ಪ್ರತೀಕವೆಂದು ಭಾವಿಸಲಾಗಿದ್ದರಿಂದಲೇ ಅದು ಕನ್ನಡಿಗರ ಕಥೆಯಾಗಿದೆ; ವ್ಯಥೆಯೂ ಆಗಿದೆ.

ರಾಮರಾಯನಿಗೆ ಮುಸ್ಲಿಮರಷ್ಟೇ ಅಲ್ಲ, ಸ್ವಜನರಲ್ಲಿ ಬಹುಜನರು ವೈರಿಗಳಿದ್ದರು. ಸದಾಶಿವನನ್ನು ಹೆಸರಿಗೆ ಮಾತ್ರ ರಾಜನನ್ನಾಗಿ ಮಾಡಿ ಸೆರೆಯಲ್ಲಿಟ್ಟು ತಾನೇ ಕಾರಭಾರವನ್ನು ನಡೆಸುತ್ತಿದ್ದ. ವರ್ಷಕ್ಕೊಂದು ಬಾರಿ ಮಾತ್ರ ಸದಾಶಿವನನ್ನು ಸಿಂಹಾಸನದ ಮೇಲೆ ಕೂಡಿಸಿ ಅರಸುತನದ ಮರ್ಯಾದೆಯನ್ನು ಕೊಡುತ್ತಿದ್ದ. ಈ ಕಾರಣದಿಂದಾಗಿ ವಿಜಯನಗರದಲ್ಲಿಯೇ ಇವನ ವಿರೋಧಿಗಳು ಹುಟ್ಟಿಕೊಂಡಿದ್ದರು. ಹಾಗೆಯೇ ರಾಮರಾಯನ ಸೈನ್ಯದಲ್ಲಿದ್ದವರು ಕೇವಲ ಹಿಂದೂಗಳಲ್ಲ. ಅಲ್ಲಿ ಮುಸ್ಲಿಮರು, ಅರಬರು, ಪಠಾಣರು, ತುರ್ಕರು, ತಾಬೂಲದ ಪಾಠಣರು ಹೀಗೆ ಬೇರೆ ಬೇರೆ ಭಾಷೆಯವರಿದ್ದರು. ಅವರು ಹಿಂದೂರಾಜ್ಯವನ್ನು ಉಳಿಸುವುದಕ್ಕಿಂತ ಮುಖ್ಯವಾಗಿ ಸೌಲಭ್ಯ ಆಕಾಂಕ್ಷಿಗಳಾಗಿ ಯುದ್ಧ ಮಾಡುತ್ತಿದ್ದರು. ಈ ಎಲ್ಲ ಅಡೆತಡೆಗಳ ನಡುವೆಯೂ ವೃದ್ಧ ರಾಮರಾಯನು ಅತ್ಯುತ್ಸಾಹದಿಂದ ಯುದ್ಧಕ್ಕೆ ಮುನ್ನುಗ್ಗುತ್ತಿದ್ದ.

"ಶ್ರೀ ವಿಜಯವಿಠ್ಠಲನು, ನಮಗೆ ಅತ್ಯುತ್ತಮ ಪ್ರಸಂಗವನ್ನು ಒದಗಿಸಿಕೊಟ್ಟಿರುತ್ತಾನೆ. ಈ ಪ್ರಸಂಗದಲ್ಲಿ ನಾವು ಭಾರತೀಯ ವೀರರಂತೆ ಯುದ್ಧ ಮಾಡಿದರೆ, ಭರತಖಂಡದ ತುಂಬ ನಮ್ಮ ಸಾಮ್ರಾಜ್ಯವಾಗಬಹುದು"[೯೬] ಎನ್ನುವ ರಾಮರಾಯನ ಮಾತುಗಳಲ್ಲಿನ 'ಭಾರತೀಯರ ವೀರರಂತೆ' ಎಂದಿರುವಲ್ಲಿ ಮೊದಲು ನಮ್ಮ ನಾಡು (ಕನ್ನಡ) ಆ ಮೂಲಕ ರಾಷ್ಟ್ರ (ಭಾರತ)ವನ್ನು ಕಟ್ಟಿಕೊಳ್ಳುವ ಕರೆ ಇದೆ. ಹೀಗೆ ಹಿಂದೂ(ವೈದಿಕ) ಸೈನಿಕರನ್ನು ಯುದ್ಧಕ್ಕೆ ಸನ್ನದ್ಧರನ್ನಾಗಿಸುತ್ತಿದ್ದ. ಹಾಗೆಯೇ– ವೀರರೇ, ಶತ್ರುಗಳು ಈಗ ಮೈಮೇಲೆ ಏರಿಬಂದರೆ ಅವರನ್ನು ಹಿಂದಕ್ಕೆ ದೂಡುತ್ತ ದೂಡುತ್ತ

ವಿಜಾಪುರದವರೆಗೆ ಹೋಗಿ ಆ ಪಟ್ಟಣವನ್ನು ಕೈವಶಮಾಡಿಕೊಳ್ಳಬೇಕೆಂಬ ಮಾತನ್ನು ಲಕ್ಷದಲ್ಲಿಟ್ಟು, ನೀವು ಯುದ್ಧ ಮಾಡತಕ್ಕದ್ದು. ವಿಜಾಪುರವು ಕೈವಶವಾದ ಬಳಿಕ ಅದನ್ನು ಸುಲಿಯುವುದಕ್ಕಾಗಿ ನಿಮಗೆ ಐದು ದಿವಸಗಳವರೆಗೆ ಪರವಾನಿಗೆಯನ್ನು ಕೊಡುವೆವು. ಆ ಸುಲಿಗೆಯಲ್ಲಿ ಅವರವರಿಗೆ ಸಿಕ್ಕ ಪದಾರ್ಥಗಳು ಅವರವರೇ ಎಂದು ತಿಳಿಯಲಾಗುವುದು ಎಂದು ನಿಮ್ಮ ನಿಮ್ಮ ಜನರೊಳಗೆ ತಿಳಿಸತಕ್ಕದ್ದು. ರಾಮರಾಯನ ಮಾತುಗಳನ್ನು ಗಮನಿಸಿದಾಗ, ಒಂದು ಸಾಮ್ರಾಜ್ಯದ ದೊರೆ ಇನ್ನೊಂದು ಸಾಮ್ರಾಜ್ಯದ ಮೇಲೆ ದಾಳಿ ಮಾಡಿ ಅದನ್ನು ವಶಪಡಿಸಿಕೊಂಡಾಗ, ಅಲ್ಲಿ ಸುಲಿಗೆ ಮಾಡುವುದು ಆ ಕಾಲದಲ್ಲಿ ಸಹಜವಾಗಿದ್ದಂತೆ ತೋರುತ್ತದೆ.

ಹೀಗೆ ರಾಮರಾಯನು ವೃದ್ಧಾಪ್ಯದಲ್ಲಿಯೂ ಉತ್ಸಾಹದಿಂದ ಯುದ್ಧಕ್ಕೆ ಸನ್ನದ್ಧನಾದನು. ಆದರೆ ರಣಮಸ್ತಖಾನನ ಕುತಂತ್ರದ ಮುಂದೆ ಇವನ ಶೌರ್ಯ, ಪರಾಕ್ರಮ, ಸಾಹಸಗಳೆಲ್ಲ ವ್ಯರ್ಥವಾಗಿ ಹೋದವು. ರಣಮಸ್ತ ಖಾನನು ಆದಿಲ್‌ಶಾಹಿಗಳಿಗೆ ಸಹಾಯಕವಾಗುವಂತೆ ವಿಜಯನಗರದ ದೊಡ್ಡ ಸೈನ್ಯವನ್ನು ಮೂರು ತುಕಡಿಗಳಾಗಿ ವಿಭಾಗಿಸಿ ವಿಜಯನಗರ ಸೈನ್ಯವನ್ನು ದಿಕ್ಕುತಪ್ಪುವಂತೆ ಮಾಡಿದ. ಈ ಎಲ್ಲ ಅನುಕೂಲತೆಯನ್ನು ಪಡೆದ ಮುಸಲರ ಸೈನ್ಯವು ವಿಜಯನಗರ ಸೈನ್ಯವನ್ನು ಯುದ್ಧರಂಗದಿಂದ ಹಿಮ್ಮೆಟ್ಟಿಸಿತು. ಕೊನೆಗೆ ಅಸಹಾಯಕ ಸ್ಥಿತಿಯಲ್ಲಿದ್ದ ರಾಮರಾಯನನ್ನು ನೂರ್‌ಜಹಾನಳನ್ನು ಪಡೆದುಕೊಳ್ಳುವುದಕ್ಕಾಗಿ ರಣಮಸ್ತನು ತಂದೆಯೆನ್ನುವುದರನ್ನು ಅರಿಯದಿದ್ದರೂ ಚಿಂತೆಯಿಲ್ಲ; ತನ್ನನ್ನು ಮಗನಂತೆ ಗೌರವಿಸಿ ಅತ್ಯಂತ ಆದರ ಪ್ರೀತಿಯಿಂದ ಕಂಡು ತನ್ನ ಏಳ್ಗೆಯನ್ನೇ ಬಯಸಿದ ಆಪ್ತನೆಂದೂ ಭಾವಿಸದೇ, ಕಿಂಚಿತ್ತು ಕರುಣೆ ತೋರದೆ ನಿರ್ದಾಕ್ಷಿಣ್ಯವಾಗಿ ಕೊಲಗೈದ. ಇನ್ನೇನು ತನಗೆ ಬೇಕಾದ ನೂರ್‌ಜಹಾನಳನ್ನು ಪಡೆಯುವುದಕ್ಕಾಗಿ ರಾಮರಾಯನ ರುಂಡವನ್ನು ತೆಗೆದುಕೊಂಡು ಕುಂಜವನಕ್ಕೆ ಬಂದ. ಅಲ್ಲಿ ತನ್ನ ತಾಯಿಯಿಂದ ರಾಮರಾಯನು ತನ್ನ ತಂದೆ ಎಂಬುದನ್ನು ತಿಳಿದು ದಿಙ್ಮೂಢನಾದನು. ಕೊನೆಗೆ ತನ್ನ ತಾಯಿ ಹಾರಿದ ಪುಷ್ಕರಿಣಿಯಲ್ಲಿ ನೂರ ಜಹಾನಳೊಂದಿಗೆ ಪುಷ್ಕರಣಿಗೆ ಹಾರಿದನು. ಇತ್ತ ರಣರಂಗದಿಂದ ಪಾರಾಗಿ ಬಂದ ತಿರುಮಲರಾಯನು ಸೆರೆಯಲ್ಲಿದ್ದ ಸದಾಶಿವರಾಯನನ್ನು ಬಿಡಿಸಿಕೊಂಡು ಇದ್ದ ಬದ್ದ ಸಂಪತ್ತನ್ನೆಲ್ಲ ಏರಿಕೊಂಡು ರಾಜಧಾನಿಯಿಂದ ಹೊರಟುಹೋದನು.

> **ಪ್ರತ್ಯಕ್ಷ ಸೇನಾಪತಿಯೇ ಹೀಗೆ ಓಡಿಹೋದ ಬಳಿಕ ಉಳಿದವರು ಏನು ಮಾಡಬೇಕು? ಯಾವನ ಕೈಗೆ ಏನು ಸಿಕ್ಕಿತೋ ಅದನ್ನು ತಕ್ಕೊಂಡು ಜನರು ರಾಜಧಾನಿಗೆ ಶರಣು ಹೊಡೆದು ನಡೆಯಹತ್ತಿದರು. ಪಟ್ಟಣದೊಳಗಿನ ಶೆಟ್ಟರು–ಸಾಹುಕಾರರು ಮಾತ್ರ ಎಲ್ಲಿಗೂ ಹೋಗಲಿಕ್ಕೆ ಬಾರದಾಯಿತು... ಅವರು ತಮ್ಮ ಸಂಪತ್ತನ್ನೆಲ್ಲ ಹೂಳಿಕೊಂಡು ಕೂತರು... ಈ ಅರಾಜಕ ಸ್ಥಿತಿಯಲ್ಲಿ ಲಮಾಣಿಗಳು, ಕೊರಚರು ಮುಂತಾದ ಕಾಡುಜನರು ಹಗಲುಹಾಡೆ ಸಾವುಕಾರರ ಮನೆಗೆ ದಲವಡೆಗಳನ್ನಿಕ್ಕ ಹತ್ತಿದರು.[೯]**

ಹೀಗೆ ವಿಜಯನಗರ ಸಂಪತ್ತು ಕೇವಲ ಮುಸಲ್ಮಾನರ ವಶವಾಗದೆ ಸ್ಥಳೀಯರ ವಶವೂ ಆಯಿತು. ನಂತರ ಬಂದ ಮುಸ್ಲಿಮರು ಇದ್ದಬದ್ದದ್ದನ್ನೆಲ್ಲಾ ಸುಲಿಗೆ ಮಾಡಿ, ದೇವಾಲಯಗಳನ್ನು, ಮೂರ್ತಿಗಳನ್ನು ಹಾಳು ಮಾಡಿದರು. ಹೀಗೆ ಎಂದೂ ಮರೆಯದ ಕನ್ನಡಿಗರ ಮಹಾಸಾಮ್ರಾಜ್ಯ ಅಸ್ತಂಗತವಾಯಿತು. ಇವೇ ಕೇಂದ್ರಗಳಾಗಿದ್ದವು. ವಿಜಯನಗರ ಹಾಗೂ ಮುಸಲ್ಮಾನ ರಾಜ್ಯಗಳ ಮೇರೆಯಲ್ಲಿದ್ದ ವಿಜಯನಗರವು ಯಾವುದನ್ನು ಆದರ್ಶ ಎಂದು ಪರಿಗಣಿಸಿತೋ ಅದೇ ಅದಕ್ಕೆ ಮುಳುವಾಯಿತು. ಮಸೀದಿ ಮಂದಿರಗಳ ನಿರ್ಮಾಣ, ಆದರ್ಶದ ಹಿನ್ನೆಲೆಯಲ್ಲಿ ನಿರ್ಮಾಣಗೊಂಡ ಈ ಮಸೀದಿ ಮಂದಿರಗಳಲ್ಲಿ ಆಯಾ ಧರ್ಮೀಯರು ತಮ್ಮ ಆಚರಣೆಯಲ್ಲಿ ಪೂರೈಸಿಕೊಳ್ಳಲು ಎನ್ನುವುದು ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ಸರಿಯೆನಿಸಬಹುದು. ಆದರೆ ಇಲ್ಲಿಂದಲೇ ಆಯಾ ಸಮುದಾಯಗಳು ಒಟ್ಟುಗೂಡುವುದು ಮತ್ತು ಧರ್ಮದ ಹಿನ್ನೆಲೆಯಲ್ಲಿ ಪಿತೂರಿಯನ್ನು ಹೂಡಲು ಸಂಗನಪಲ್ಲಿ ದರ್ಗವೇ ಇದಕ್ಕೆ ನಿದರ್ಶನ.

ಮಧ್ಯಯುಗದಲ್ಲಿ ಅತ್ಯಂತ ಉಜ್ವಲಾದ ಕೀರ್ತಿ ಪತಾಕೆಯಿಂದ ಬೆಳಗಿದ ವಿಜಯನಗರ ಸಾಮ್ರಾಜ್ಯವು, ರಾಜ್ಯತ್ವಕ್ಕಾಗಿ ನಡೆದ ಆಂತರಿಕ ಕಲಹಗಳು, ಪರಸ್ಪರ ದ್ವೇಷ ಅಸೂಯೆಗಳು, ಮೋಸ ವಂಚನೆಗಳು, ನಂಬಿಕೆ ದ್ರೋಹಿಗಳಾದ ಅನ್ಯ ಧರ್ಮೀಯ ಸೈನಿಕರು. ಅಸಮರ್ಥ ರಾಜರ ಆಡಳಿತ, ಅಹಂಭಾವದಿಂದ ಕನ್ನಡ ಸೈನಿಕರು, ಎಲ್ಲಕ್ಕೂ ಮಿಗಿಲಾಗಿ ಸ್ತ್ರೀಲೋಲುಪತೆ ಮತ್ತು ವಿಲಾಸಿಪ್ರಿಯತೆ ಇವುಗಳೆಲ್ಲವೂ ಈ ಸಾಮ್ರಾಜ್ಯದ ವಿನಾಶಕ್ಕೆ ಹೇಗೆ ಕಾರಣವಾದವು ಎಂಬುದನ್ನು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಈ ಎಲ್ಲ ಸಮಸ್ಯೆಗಳ ಪರಿಹಾರವೇ ಒಂದು ಸಮೃದ್ಧವಾದ ಸಮಗ್ರ ರಾಷ್ಟ್ರ ನಿರ್ಮಾಣಕ್ಕೆ ಸಾಧ್ಯ ಎನ್ನುವಂತೆ ಅವುಗಳನ್ನು ಇಲ್ಲಿ ವಿವೇಚಿಸಲಾಗಿದೆ. ಚರಿತ್ರೆಯಲ್ಲಾದ ಇಂತಹ ತಪ್ಪುಗಳನ್ನು ಸಮಕಾಲೀನ ಸಂದರ್ಭದಲ್ಲಿ ಮರುಕಳಿಸದಂತೆ ನೋಡಿಕೊಳ್ಳಬೇಕು. ಹಾಗೆಯೇ ಇವು ಭವಿಷ್ಯತ್ತನ್ನು ರೂಪಿಸಿಕೊಳ್ಳಲು ಪಾಠಗಳಾಗಬೇಕೆಂಬ ಆಶಯವು ಕಾದಂಬರಿಯ ಉದ್ದಕ್ಕೂ ಗೋಚರಿಸುತ್ತದೆ.

೬. ಆನಂದಕಂದರ ರಾಜಯೋಗಿ (೧೯೩೪)

ರಾಜಯೋಗಿ ಕಾದಂಬರಿಯು ಆನಂದ ಕಂದರಿಂದ ರಚಿತಗೊಂಡಿದೆ. ಇದು ವಿಜಯನಗರ ಸಂಗಮ ವಂಶದ ಆಡಳಿತದ ಸಂಧ್ಯಾಕಾಲದ ಘಟನೆಗಳ ವಸ್ತುವನ್ನು ಒಳಗೊಂಡಿದೆ. ಲೇಖಕರು ಐತಿಹಾಸಿಕ ಕಾದಂಬರಿ ರಚನೆಯ ಬಗ್ಗೆ ಹೀಗೆ ಹೇಳಿದ್ದಾರೆ: "ನ್ಯೂನೀಜ್ ಎಂಬ ವಿದೇಶಿ ಯಾತ್ರಿಕನೊಬ್ಬನು ವಿಜಯನಗರಕ್ಕೆ ಸಂಬಂಧಿಸಿದ ವರದಿಯಲ್ಲಿ ಮೂಡಿನಿಂತಿರುವ ಏಳೆಂಟು ಪಂಕ್ತಿಗಳಲ್ಲಿ ಅಡಕವಾಗಿರುವ ಚಿಕ್ಕ ಸಂಗತಿಯೊಂದರ ಆಧಾರದಿಂದ ರಾಜಯೋಗಿ, ಅಶಾಂತಿಪರ್ವ ಇವರೆಡು ಕಾದಂಬರಿಗಳು ರಚನೆಗೊಂಡಿವೆ" ಎಂದು ಎಂದಿದ್ದಾರೆ. ಈ ಮೇಲಿನ ಮಾತುಗಳನ್ನು ಗಮನಿಸಿದಾಗ ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ನಿರ್ಮಾಣ ಮಾಡಿಕೊಳ್ಳಲು ವಿಜಯನಗರ ಸಾಮ್ರಾಜ್ಯದ ಆಡಳಿತದ ಅವಧಿಯಲ್ಲಿ ನಿರ್ಮಾಣವಾದ ಸ್ಮಾರಕಗಳು, ಶಾಸನಗಳು, ನಾಣ್ಯಗಳು ಮತ್ತು ಸಾಹಿತ್ಯ ಕೃತಿಗಳು ಮುಂತಾದ ಆಕರಗಳು ಸಾಕಷ್ಟಿವೆ. ಆದರೆ ವಿಜಯನಗರದ ವೈಭವದ

ಇತಿಹಾಸವನ್ನು ಓದುವವರು ಇಲ್ಲವೇ ಯಾರಾದರೂ ಹೇಳುವುದನ್ನು ಕೇಳಿದರೆ ಕೆಲವರು ಉತ್ಪ್ರೇಕ್ಷೆ, ಅತಿಶಯೋಕ್ತಿಯ ಮಾತು, ಕಟ್ಟು ಕತೆ ಎಂದು ಹೇಳಬಹುದು. ಏಕೆಂದರೆ ರಾಜರ ಆಡಳಿತ ಅವಧಿಯಲ್ಲಿ ರೂಪುಗೊಂಡ ಈ ಆಕರಗಳು ಅವರ ಪರವಾದ ಸಂಗತಿಗಳನ್ನು ಒಳಗೊಂಡಿವೆ ಎನ್ನುವ ವಿಚಾರಗಳಿಗೆ ದಾರಿ ಮಾಡಿಕೊಡುತ್ತವೆ ಎನ್ನುವ ಆತಂಕ ಲೇಖಕರಿಗಿದ್ದಂತೆ ತೋರುತ್ತದೆ.ಆದ್ದರಿಂದ ಅವರು ವಿಜಯನಗರದ ಘನತೆಯ ಕಾಲದಲ್ಲಿ ನಮ್ಮ ನಾಡಿಗೆ ಬಂದಿದ್ದ ಪಾಶ್ಚಾತ್ಯ ಪ್ರವಾಸಿಗರು, ರಾಯಭಾರಿಗಳು ತಮ್ಮ ಕಣ್ಣಿನಿಂದ ನೋಡಿ ಅನುಭವಿಸಿದ ಅನೇಕ ಸಂಗತಿಗಳನ್ನು ವಿಷದವಾಗಿ ವರ್ಣಿಸಿದ್ದಾರೆ. ಆ ಸಂಗತಿಗಳೇ ಕಾದಂಬರಿಗೆ ಆಕರವೆಂದಿರುವುದು ವಿಜಯನಗರದ ಐತಿಹಾಸಿಕ ಮಹತ್ವವನ್ನು ಒತ್ತಿ ಹೇಳಲು ಪ್ರಯತ್ನಿಸಿದೆ.

ಸಂಗಮವಂಶದ ಸುಸಂಸ್ಕೃತ ರಾಜನೆಂದು, ಉತ್ತಮ ಆಡಳಿತಗಾರನೆಂದು ಪ್ರಸಿದ್ಧಿ ಪಡೆದ ಮಲ್ಲಿಕಾರ್ಜುನನ ತರುವಾಯ ಆತನ ಮಕ್ಕಳು ಅಪ್ರಾಪ್ತ ವಯಸ್ಸಿನವರಾಗಿದ್ದರಿಂದ ಆತನ ತಮ್ಮನಾದ ವಿರೂಪಾಕ್ಷನು ಸಿಂಹಾಸನಾಧಿಕಾರಿಯಾಗುತ್ತಾನೆ. ಆತನ ಆಡಳಿತಾವಧಿಯಲ್ಲಿನ ಘಟನೆಗಳನ್ನು ಈ ಕಾದಂಬರಿ ಒಳಗೊಂಡಿದೆ. ಮಲ್ಲಿಕಾರ್ಜುನ ದೊರೆಯಲ ಅಳಿದುಳಿದ ಇಬ್ಬರ ಮಕ್ಕಳಲ್ಲಿ ಹಿರಿಯನಾದ ರಾಜಶೇಖರ ಕಾದಂಬರಿಯ ನಾಯಕನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಾನೆ. ಕಿರಿಯನಾದ ಪೆದ್ದರಾಯ ಮತ್ತು ಸಾಳುವ ನರಸಿಂಹ ಸಹನಾಯಕನ ಪಾತ್ರಗಳಾಗಿವೆ. ದುರಂತ ಪ್ರತಿನಾಯಕನಾದ ವಿರೂಪಾಕ್ಷರಾಯನು ಐತಿಹಾಸಿಕ ವ್ಯಕ್ತಿಗಳಾಗಿದ್ದಾರೆ. ಉಳಿದ ಪೋಷಕ ಪಾತ್ರಗಳು ಕಾದಂಬರಿಕಾರರ ಕಲ್ಪನೆಯಿಂದ ಮೂಡಿಬಂದಿದೆ. ಲೇಖಕರು ಈ ಐತಿಹಾಸಿಕ ಕಾದಂಬರಿಯನ್ನು ತಮ್ಮ ಕಾಲದ ಸಾಂಸ್ಕೃತಿಕ ಸನ್ನಿವೇಶಗಳಿಗೆ ಅನುಗುಣವಾಗಿ ಹಲವಾರು ಸನ್ನಿವೇಶಗಳನ್ನು ಕಲ್ಪನಾ ಲೋಕದಿಂದ ಚಿತ್ರಿಸಿದರೂ ಪ್ರತಿಯೊಂದು ಸನ್ನಿವೇಶವೂ ಇತಿಹಾಸದ ನೈಜ ಘಟನೆಯಂತೆ ಕಾಣಿಸುವುದನ್ನು ಗಮನಿಸಿದಾಗ ಈ ಕಾದಂಬರಿಯ ಘನತೆ ಗೋಚರಿಸದೇ ಇರದು.

ಕಾದಂಬರಿಕಾರರು ಮಲ್ಲಿಕಾರ್ಜುನ ದೊರೆಯ ನಂತರ ರಾಜ್ಯಾಧಿಕಾರ ವಹಿಸಿಕೊಂಡ ವಿರೂಪಾಕ್ಷರಾಯನ ಕಾಲದ ಆಡಳಿತಾವಧಿಯಲ್ಲಿ ಉಂಟಾದ ಸಮಸ್ಯೆಗಳನ್ನು ತಮ್ಮ ಸಮಕಾಲೀನ ಸಂದರ್ಭದೊಂದಿಗೆ ಸಮೀಕರಿಸಿದ್ದಾರೆ. ಆಂದರೆ ಬ್ರಿಟೀಷರ ಆಡಳಿತಾವಧಿಯಲ್ಲಿ ನಾಯಕತ್ವದ ಕೊರತೆ, ರಾಜ್ಯ ಮತ್ತು ರಾಷ್ಟ್ರದ ಬಗೆಗಿನ ಅಭಿಮಾನವಾಗಲಿ, ಸೇವಾ ಮನೋಭಾವನೆ ಇಲ್ಲದಿರುವುದರಿಂದ ಉಂಟಾಗಬಹುದಾದ ಪರಿಣಾಮಗಳಾವುವು, ಅಂತಹ ಸಂದರ್ಭದಲ್ಲಿ ಸಾಮ್ರಾಜ್ಯಕ್ಕೆ ಒದಗಿದ ಆಪತ್ತುಗಳನ್ನು ಸಾಮ್ರಾಜ್ಯನಿಷ್ಠರು, ಧರ್ಮಾಭಿಮಾನಿಗಳು ರಾಷ್ಟ್ರ ಸೇವಕರು ಸಾಮ್ರಾಜ್ಯದ ಉಳಿವಿಗಾಗಿ ಮಾಡಿದ ತ್ಯಾಗ ಬಲಿದಾನಗಳಂತಹ ಸಂಗತಿಗಳನ್ನು ಹೇಳುವುದರ ಮೂಲಕ ಕನ್ನಡಿಗರನ್ನು ಒಂದು ಗೂಡಿಸುವುದು. ರಾಷ್ಟ್ರವನ್ನು ಪಾರತಂತ್ರ್ಯದ ಆಡಳಿತದಿಂದ ಮುಕ್ತಿಗೊಳಿಸಲು ಜನರಲ್ಲಿ ರಾಜ್ಯ ಮತ್ತು ರಾಷ್ಟ್ರ ಕುರಿತಾದ ಸೇವಾ ಮನೋಭಾವನೆಯನ್ನು ಮೂಡಿಸುವುದಾಗಿದೆ. ಕಾದಂಬರಿಯುದ್ದಕ್ಕೂ ವಿಜಯನಗರ ಸಾಮ್ರಾಜ್ಯವನ್ನು ಕನ್ನಡಿಗರ ಸಾಮ್ರಾಜ್ಯವೆಂದು, ವೈದಿಕ ಧರ್ಮದ ಸಾಮ್ರಾಜ್ಯ ಎನ್ನುವ ಉಲ್ಲೇಖಗಳು ಸಿಗುತ್ತವೆ. ರಾಜಶೇಖರ

ಮತ್ತು ಪೆದ್ದರಾಯರು ಸಾಮ್ರಾಜ್ಯದ ಕುರಿತು ಮಾತನಾಡುತ್ತಿರುವಾಗ, ಚಿಕ್ಕಪ್ಪನು ತನ್ನ ಸಾಮ್ರಾಜ್ಯವೆಂಬಂತೆ ವರ್ತಿಸುತ್ತಿದ್ದಾನೆ. ಇಂತಹದರಲ್ಲಿ ನಮ್ಮದೇನಿದೆ ಈ ಸಾಮ್ರಾಜ್ಯದಲ್ಲಿ ಎಂಬ ಪೆದ್ದರಾಯನ ಪ್ರಶ್ನೆಗೆ, ರಾಜಶೇಖರನು "...ನನ್ನ ಸಾಮ್ರಾಜ್ಯ, ನಿನ್ನ ಸಾಮ್ರಾಜ್ಯ, ಪ್ರತಿಯೊಬ್ಬ ಕನ್ನಡಿಗರ ಸಾಮ್ರಾಜ್ಯ! ವೈದಿಕ ಧರ್ಮಾಭಿಮಾನಿಗಳೆಲ್ಲರದೂ ಸಾಮ್ರಾಜ್ಯ! ಆ ಧರ್ಮ ರಕ್ಷಣೆಗಾಗಿಯೇ ಕೈಯೆತ್ತಿನಿಂದ ಶ್ರೀಪಂಪಾಪತಿಯ ಸಾಮ್ರಾಜ್ಯ!" ಎಂದು ಹೇಳುತ್ತಾನೆ.[೧೦೦] ಅಂದರೆ ಒಂದು ಸಾಮ್ರಾಜ್ಯವೆನ್ನುವುದು ಯಾರ ಸ್ವತ್ತೂ ಅಲ್ಲ. ಅದು ಇರುವುದೇ ಪ್ರಜೆಗಳಿಗಾಗಿ. ಅದು ರಾಜನ ಐಹಿಕ ಸುಖಕ್ಕಾಗಿ ಮಾತ್ರವಲ್ಲ; ನಾಡಿನ ಜನತೆಯ ಹಿತರಕ್ಷಣೆಗಾಗಿ. ಸದ್ಧಸದಾಚಾರಗಳನ್ನು ಅಳವಡಿಸಿಕೊಂಡು, ಶಾಂತಿ ನೆಲೆಗೊಳಿಸುವಂತೆ ಮಾಡುವುದೇ ನಿಜವಾದ ನಾಡ ಸೇವೆ. ಅದನ್ನು ಅಧಿಕಾರಿಯಷ್ಟೇ ಮಾಡಬೇಕಿಲ್ಲ. ಅಭಿಮಾನವಿರುವ ಪ್ರತಿಯೊಬ್ಬ ಪ್ರಜೆ ಮಾಡಬಹುದು. ಪ್ರತಿಫಲಾಪೇಕ್ಷೆಯಿಲ್ಲದೆ ನಾಡಿಗಾಗಿ ಸೇವೆ ಸಲ್ಲಿಸಬೇಕಾದ ಅನಿವಾರ್ಯತೆ ಕಾದಂಬರಿಕಾರರು ಸಮಕಾಲೀನ ಸಂದರ್ಭದ ಪರಿಸ್ಥಿತಿಗನುಗುಣವಾಗಿ ವಿವರಿಸಿದ್ದಾರೆ. ದೇಹ ಚೇತನಕ್ಕೆ ಉಸಿರಾಟವು ಎಷ್ಟು ಸಹಜವೋ ನಾಡ ಅಭಿಮಾನವೋ ಅಷ್ಟೇ ಸಹವಾಗಿರಬೇಕೆಂಬುದನ್ನು ಒತ್ತಿ ಹೇಳಿದ್ದಾರೆ.

ಪ್ರಜಾಪೀಡಕನಾಗಿದ್ದ ವಿರೂಪಾಕ್ಷರಾಯನ ಬಗ್ಗೆ 'ರಾಜಯೋಗಿ'ಯಾದ ರಾಜಶೇಖರನಿಗೆ ಅಸಮಾಧಾನ. ಅತೃಪ್ತಿ ಇತ್ತು. ರೋಷನಾರಾ ಎಂಬ ಮುಸ್ಲಿಂ ನರ್ತಕಿಯ ಮೋಹಕ್ಕೆ ಬಿದ್ದು ಅವಳನ್ನು ನಾಷೀರ್‌ಖಾನ್‌ನ ಸಹಾಯದಿಂದ ವಿವಾಹವಾಗಲು ರಾಯ ತಯಾರಿ ನಡೆಸುತ್ತಾನೆ. ಈ ಅನೀತಿಯುಕ್ತ ವರ್ತನೆ ಕಂಡು ರಾಜಶೇಖರ ಚಿಕ್ಕಪ್ಪನನ್ನು ಕೊಲೆ ಮಾಡುತ್ತಾನೆ. ರಾಜಯೋಗಿಯು ಹೇಡಿ, ಅಸಹಾಯಕ, ಅಸಮರ್ಥವಲ್ಲ; ಕ್ಷಾತ್ರಧರ್ಮದ ಪಾಲನೆಗಾಗಿ ಯೋಗಿಯೂ ಕ್ರಾಂತಿಕಾರಕನಾಗಿ, ಕರ್ತವ್ಯಪರತೆಯನ್ನೂ ಮೆರೆಯಬೇಕಾದದ್ದು 'ಧರ್ಮಕಾರಣ' ರಾಜಶೇಖರ ಎಂದುಕೊಳ್ಳುತ್ತಾನೆ. ಪಿತೃಹತ್ಯಾ ದೋಷ ಹೊತ್ತು ಭಾವಸತ್ಯದ ಚಿತ್ರಣ; 'ರಾಜಯೋಗಿ'ಯ ಸಂಕಲ್ಪದಿಂದ; ಬಹಮನಿ ಸುಲ್ತಾನನ ಸಂಚಿನ ದಾಳಿ ವಿಫಲವಾಗಿ ಕರ್ನಾಟಕ ಸಾಮ್ರಾಜ್ಯದ ಸುರಕ್ಷೆ ಸಾಧ್ಯವಾಗುವುದು" ಎನ್ನುವುದು ಕಾದಂಬರಿಯ ಆಶಯವಾಗಿದೆ.

೩೫. ಆನಂದಕಂದರ ಅಶಾಂತಿ ಪರ್ವ (೧೯೫೩)

ಆನಂದಕಂದ ಅವರಿಂದ 'ಅಶಾಂತಿಪರ್ವ' ಕಾದಂಬರಿಯು ರಚಿತವಾಗಿದೆ. ರಾಜಯೋಗಿ ಕಾದಂಬರಿಯ ಮುಂದುವರೆದ ಭಾಗವಾಗಿವೇ ಅಶಾಂತಿಪರ್ವದಲ್ಲಿ ಮೂಡಿ ಬಂದಿದೆ. ವಿರೂಪಾಕ್ಷರಾಯನ ಹತ್ಯೆಯ ನಂತರ ಸಾಳ್ವ ನರಸಿಂಹನು ಸಿಂಹಾಸನವನ್ನಲಂಕರಿಸುವ ಸಂದರ್ಭದ ನಡುವಿನ ಅವಧಿಯಲ್ಲಿ ಘಟಿಸಿದ ವಿಜಯನಗರದ ಚಿತ್ರಣವನ್ನು ಈ ಕಾದಂಬರಿ ಮುಖ್ಯವಾಗಿ ಚಿತ್ರಿಸುತ್ತದೆ.

ವಿರೂಪಾಕ್ಷರಾಯನ ಕೊಲೆಯ ನಂತರ ಯಾರು ಅರಸರಾಗಬೇಕೆಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಸಾಮ್ರಾಜ್ಯದಲ್ಲಿನ ಮಂತ್ರಿಗಳು, ಸಾಮಂತರ ರಾಜರು, ಪ್ರಜೆಗಳೆಲ್ಲರ ಅಭಿಪ್ರಾಯವು ರಾಜಶೇಖರನೇ ರಾಜನಾಗಬೇಕೆನ್ನುತ್ತಾರೆ. ಆದರೆ ರಾಜಶೇಖರ ರಾಜ ಪದವಿಯನ್ನು ನಿರಾಕರಿಸುತ್ತಾನೆ. ಗತಿಸಿದ

ವಿರೂಪಾಕ್ಷರಾಯ ರಾಜಶೇಖರನಿಗೆ ಚಿಕ್ಕಪ್ಪನಾಗಬೇಕಲ್ಲವೇ? ಸಾಮ್ರಾಜ್ಯದ ಹಿತಕ್ಕಾಗಿಯೇ ಆಗಲಲ್ಲೊದೇಕೆ, ಚಿಕ್ಕಪ್ಪನ ಕೊಲೆ ಮಾಡಿದುದರಿಂದ ಪಿತೃವಧೆಯ ಪಾತಕ ತನಗೆ ತಗುಲಿಕೊಂಡಿತಂತೆ. ಅದಕ್ಕಾಗಿ ತಾನು ದೊರೆಯಾಗಿ, ಕರ್ನಾಟಕ ಸಾಮ್ರಾಜ್ಯದ ಪವಿತ್ರವಾದ ಸಿಂಹಾಸನಕ್ಕೆ ಆ ಪಾತಕದ ಮೈಲಿಗೆಯನ್ನು ಸೋಂಕಿಸಲಾರೆನೆಂದನು. ಕರ್ನಾಟಕದ ಸಿಂಹಾಸನವು ಪವಿತ್ರವಾದುದು. ಆ ಸ್ಥಾನದಲ್ಲಿ ಕೂಡಲು ಅರ್ಹತೆ ಬೇಕು. ಆದರೆ ಇಂದು ಅಂತಹ ಸಿಂಹಾಸನದ ಮೇಲೆ ಅರ್ಹ ವ್ಯಕ್ತಿಗಳಿಲ್ಲದೆ ಸಾಮ್ರಾಜ್ಯದಲ್ಲಿ ಅಶಾಂತಿಯುಂಟಾಗಿದೆ ಎನ್ನುತ್ತಾನೆ.

ಇದರರ್ಥ ಪರ ಧರ್ಮೀಯರಿಂದ ಕರ್ನಾಟಕವನ್ನಷ್ಟೇ ಅಲ್ಲದೆ ಸಮಗ್ರ ಭಾರತವನ್ನು ಮುಕ್ತಿಗೊಳಿಸಿ, ಹೊಸ ರಾಜ್ಯ ಮತ್ತು ರಾಷ್ಟ್ರ ನಿರ್ಮಾಣ ಮಾಡಿಕೊಳ್ಳಬೇಕಾದ ಒತ್ತಾಸೆಯನ್ನು ಅಭಿವ್ಯಕ್ತಿಸಿರುವುದು ಇಲ್ಲಿ ಕಂಡು ಬರುತ್ತದೆ. ಅಂದರೆ ನಾಡು ಸುಖವಾಗಿದ್ದರೆ ನಾವು ಸುಖವಾಗಿರುತ್ತೇವೆ ಎನ್ನುವ ಮಾತು ಈ ಕಾದಂಬರಿಯಲ್ಲಿ ಕಾಣಿಸಿಕೊಳ್ಳುತ್ತದೆ. "ಸಾಮ್ರಾಜ್ಯವು ನಿಷ್ಕಂಟಕವಾಗಿ ಸಾಗಲು ತೊಡಗಿತೆಂದರೆ ನಾವೆಲ್ಲರೂ ತಾಯತೊಡೆಯಲ್ಲಿ ಮಲಗಿದ್ದ ಹಸುಮಗುವಿನಂತೆ ಈ ಕನ್ನಡತಾಯ ತೊಡೆಮಡಿಲಲ್ಲಿ ಹಾಯಾಗಿ ಮಲಗಿಕೊಂಡಿರಬಹುದು!"

ಯಾವ ಆಪತ್ತಿಗೂ ಒಳಗಾಗದಂತೆ ನಾವು ನಮ್ಮ ನಾಡದೇವಿಯನ್ನು ಕಾಪಾಡಿದರೆ, ನಮಗೂ ಯಾವ ಆಪತ್ತುಗಳು ಬರುವುದಿಲ್ಲ. ಅಂತಹ ಆಪತ್ತುಗಳು ಒದಗದಂತೆ ಮುನ್ನೆಚ್ಚರಿಕೆ ವಹಿಸಿಕೊಳ್ಳಬೇಕೆಂಬುದೇ ಕಾದಂಬರಿಕಾರರ ಅನಿಸಿಕೆಯಾಗಿದೆ. ಹಾಗೆಯೇ ನಾಡಿನ ಕುರಿತಂತೆ ರಾಜಶೇಖರನು ಪೆದ್ದರಾಯನ ಪಟ್ಟಾಭಿಷೇಕದ ಸಂದರ್ಭದಲ್ಲಿ ಹೇಳುವ ಹೀಗಿವೆ: ನಮ್ಮ ಕನ್ನಡ ಸಾಮ್ರಾಜ್ಯವು ಭಾರತದ ಬೇರೆ ಬೇರೆ ದೇಶದ ರಾಜ್ಯಗಳಿಗೆ ಆದರ್ಶವಾಗಿರಬೇಕೆಂಬ ಮಾತು, ರಾಜಪ್ರಜೆಗಳಿಬ್ಬರ ಹೃದಯದಲ್ಲಿಯೂ ಬೇರೂರಿ ನಿಲ್ಲಬೇಕು! ಹಾಗೆ ಆದಾಗಲೇ 'ದೊರೆಯು ದೇವ ದೇವನ ಪ್ರತಿನಿಧಿ!' ಪ್ರಜೆಗಳು ಆತನ ಪ್ರಾತಿನಿಧ್ಯವನ್ನು ಒಪ್ಪಿ ನಡೆಯುವವರು ಎಂಬಂತಾಗಿ, ಶಾಂತಿ ಸಮಾಧಾನಗಳು ಅಖಂಡವಾಗಿ ನೆಲೆಗೊಳ್ಳುವವು. ಈ ಮಾತುಗಳೂ ಮೇಲಿನ ವಿಚಾರಕ್ಕೆ ಪೂರಕವಾದವುಗಳಾಗಿವೆ. ರಾಜ ಮತ್ತು ಪ್ರಜೆಗಳು ತಮ್ಮ ಪಾಲಿನ ಕರ್ತವ್ಯಗಳನ್ನು ನಿರ್ವಹಿಸಿದಾಗ ನಾಡಿನ ಏಳಿಗೆಯಾಗುತ್ತದೆ. ಈ ಎರಡೂ ಕಾರ್ಯಗಳು ಸರಿಯಾಗಿ ನಡೆಯಬೇಕಾದರೆ ನಾಡಿನ ಏಳಿಗೆಯಾಗುತ್ತದೆ. ಈ ಎರಡೂ ಕಾರ್ಯಗಳು ಸರಿಯಾಗಿ ನಡೆಯಬೇಕಾದರೆ ನಮ್ಮ ನಾಡನ್ನು ನಾವು ಆಳಬೇಕು. ಪರಕೀಯತೆಯೆನ್ನುವುದು ನಮ್ಮಿಂದ ದೂರವಾಗಬೇಕು ಎನ್ನುವ ಆಶಯವಿಲ್ಲಿದೆ.

ಪಟ್ಟಧಾರಿಯಾದ ಪೆದ್ದರಾಯನು ಸಾಮ್ರಾಜ್ಯದ ಕುರಿತು ಹೇಳುವ ಮಾತುಗಳು ಹೀಗಿವೆ: 'ಸಾಮ್ರಾಜ್ಯದ ಪ್ರೇಮಿಗಳಾದ ನನ್ನ ಕನ್ನಡ ವೀರಬಂಧುಗಳೇ ಸಿಂಹಾಸನವನ್ನು ಏರಿ ಕುಳಿತವನು ಅನುಸರಿಸಬೇಕಾದ ಕರ್ತವ್ಯಗಳ ಜಾಗೃತಿಯು ನನ್ನಲ್ಲಿಯೂ ಇದೆಯೆಂದು ನಾನು ಭಾವಿಸುತ್ತೇನೆ. ಕನ್ನಡ ಜನರೆಲ್ಲರೂ ಸೌಖ್ಯವಾಗಿ ಇರಬೇಕೆಂದು ನನ್ನ ಮನಃಪೂರ್ವಕವಾದ ಆಶೆಯಿದೆ. ಎಲ್ಲೆಲ್ಲಿಯೂ ಯಾರೋ ಒಬ್ಬ ರಾಜನು ಮಾಡಿದ ತಪ್ಪಿಗೆ ಒಂದು ಸಮುದಾಯವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದು ತಪ್ಪು. ಯಾರೋ ಮಾಡಿದ ತಪ್ಪಿಗೆ ಮತ್ತ್ಯಾರೋ ತಲೆದಂಡ ತೆರುವುದು ಸರಿಯಲ್ಲ

ಎಂದು ರಾಜಶೇಖರ ಹೇಳುತ್ತಾನೆ. ಆದರೆ ಪೆದ್ದರಾಯನು ರಾಜಶೇಖರನ ಮಾತುಗಳನ್ನು ತಿರಸ್ಕರಿಸುತ್ತಾನೆ. ಮುಸ್ಲಿಮರ ಪರವಾದ ರಾಜಶೇಖರನನ್ನು ಕೊಲೆ ಮಾಡಲಾಗುತ್ತದೆ. ಇದು ಪೆದ್ದರಾಯನ ಸ್ವಂತದ ನಿರ್ಣಯವಲ್ಲ. ಅಧಿಕಾರದ ದಾಹಕ್ಕಾಗಿ ಈಶ್ವರನಾಯಕನು ರೂಪಿಸಿದ ಕುತಂತ್ರ. ಇದರ ಅರಿವಾದಾಗ ಪೆದ್ದರಾಯ ರಾಜ್ಯವನ್ನೇ ತ್ಯಜಿಸಿಬಿಡುತ್ತಾನೆ. ಚಂದ್ರಗಿರಿಯಿಂದ ಬಂದ ಸಾಳ್ವ ನರಸಿಂಹನು ಅಧಿಕಾರರೂಢನಾಗುತ್ತಾನೆ. ಇಲ್ಲಿಯವರೆಗಿದ್ದ ಅಶಾಂತಿ ವಾತಾವರಣವನ್ನು ಬದಲಿಸಲು ನರಸಿಂಹನು ಅಧಿಕಾರಾರೂಢನಾಗುತ್ತಾನೆ. ಇಲ್ಲಿಯವರೆಗಿದ್ದ ಅಶಾಂತಿ ವಾತಾವರಣವನ್ನು ಬದಲಿಸಲು ನರಸಿಂಹನು ಸಿದ್ಧನಾಗುತ್ತಾನೆ. ಇಲ್ಲಿಗೆ ಇದುವರೆಗಿದ್ದ ಅಶಾಂತಿಪರ್ವ ಮುಕ್ತಾಯವಾಗುತ್ತದೆ. ವಿಜಯನಗರ ಹೊಸ ಬದಲಾವಣೆಯ ಹೊಸ್ತಿಲಲ್ಲಿ ಬಂದು ನಿಲ್ಲುತ್ತದೆ ಎನ್ನುವುದನ್ನು ಪ್ರಸ್ತುತ ಕಾದಂಬರಿಯಲ್ಲಿ ಕಾಣಬಹುದಾಗಿದೆ.

ನಮ್ಮ ವೈದಿಕ ಧರ್ಮವು ತಲೆಯೆತ್ತಿ ನಿಲ್ಲಬೇಕೆಂದು ನನ್ನ ಅಂತರಂಗದ ಅಪೇಕ್ಷೆಯಿದೆ. 'ಕನ್ನಡಿಗರೆಲ್ಲರೂ ವೀರರು, ಧೀರರು, ಸಾಹಸಿಗಳು, ಗಂಡೆದೆಯವರು' ಎಂದು ನಮಗೆ ವೈರಿಗಳಾಗಿದ್ದವರೂ ನಮ್ಮನ್ನು ಹಾಡಿಹೊಗಳುವಂತೆ ಮಾಡಬೇಕೆಂದು, ನಿರಂತರವೂ ನನ್ನ ಹೃದಯವು ತಾಂಡವವಾಡುತ್ತಲಿದೆ. ತಮ್ಮೆಲ್ಲರ ತೋಳ ನೆರವು ನನಗೆ ಇದ್ದುದಾದರೆ ಅಂತಹ ಕಾಲವು ನಮ್ಮನ್ನು ಬೇಗನೆ ಸಮೀಪಿಸುವಂತೆ ಮಾಡಬೇಕೆಂಬ ಆತುರವು ನನ್ನ ಅಂಗಾಂಗಳನ್ನೂ ಸ್ಫುರಣಗೊಳಿಸುತ್ತಲಿದೆ. ಶಕ್ತಿಧಾತ್ರಿಯಾದ ಭುವನೇಶ್ವರಿಯ ದಯೆಯು ದೃಷ್ಟಿ... ನನಗೆ... ತಮ್ಮೆಲ್ಲರಿಗೆ ನಿಲ್ಲಬೇಕು... ಅಷ್ಟೆ!'. ಅಂದರೆ ಕನ್ನಡ ಭಾಷಿಕರೆಲ್ಲರೂ ಒಂದಾದರೆ ನಮ್ಮನ್ನು ಯಾವ ಶಕ್ತಿಯೂ ಎದುರಿಸಲಾರದು ಎನ್ನುವುದಕ್ಕೆ ಲೇಖಕರು ಚರಿತ್ರೆಯನ್ನು ನಿದರ್ಶನವಾಗಿ ಹೇಳುತ್ತಾ ಹೋಗುತ್ತಾರೆ. ಕನ್ನಡಿಗರ ವೀರತ್ವವನ್ನು ಹೇಳುತ್ತ ಮತ್ತೆ ಎಚ್ಚತ್ತುಕೊಂಡು ಅನ್ಯರ ಆಳ್ವಿಕೆಯಲ್ಲಿರುವ ನಮ್ಮ ನಾಡದೇವಿ ಭುವನೇಶ್ವರಿಯನ್ನು ಬಂಧಮುಕ್ತಳನ್ನಾಗಿ ಮಾಡಿಕೊಳ್ಳಬೇಕೆಂದು ಹೇಳುತ್ತಾರೆ.

ಈಶ್ವರನಾಯಕನ ದುರ್ಬೋಧನೆಗೆ ಕಿವಿಗೊಟ್ಟ ಪೆದ್ದರಾಯನು ವಿಜಯನಗರದಲ್ಲಿರುವ ಮುಸ್ಲಿಮರೆಲ್ಲರೂ ರಾಜ್ಯ ಬಿಟ್ಟು ಹೋಗಬೇಕೆಂದು ರಾಜಾಜ್ಞೆ ಹೊರಡಿಸುತ್ತಾನೆ. ಈ ವಜ್ರಾಘಾತದ ಆಜ್ಞೆಯಿಂದ ನೊಂದ ಮುಸ್ಲಿಮರು ರಾಜಶೇಖರಲ್ಲಿಗೆ ಹೋಗಿ ತಮ್ಮ ಅಳಲನ್ನು ತೋಡಿಕೊಳ್ಳುತ್ತಾರೆ. ರಾಜಶೇಖರನು ಇದು ತಪ್ಪು ಎಂದು ಪೆದ್ದರಾಯನಿಗೆ ಹೇಳಿದಾಗ ಆತನ ಉತ್ತರ ಹೀಗಿದೆ. ಉತ್ತರ ಭಾರತದಲ್ಲಿ ಮಹಮ್ಮದೀಯ ದೊರೆಗಳು, ವೈದಿಕ ಧರ್ಮದ ಬಡಬಗ್ಗರಿಂದಲೂ ತೆಗೆದುಕೊಳ್ಳುತ್ತಿದ್ದ ತಲೆದಂಡದಲ್ಲಿ, ದಯೆ-ದಾಕ್ಷಿಣ್ಯಗಳನ್ನೇನಾದರೂ ತೋರಿಸುತ್ತಾರೆಯೇ? ಮಹಮ್ಮದ್ ಬಿನ್ ತುಘಲಕ್‌ನ ಚರಿತ್ರೆಯನ್ನು ಕೇಳಿಲ್ಲವೆ ನೀವು? ಭಾರತೀಯರನ್ನು ಪಶುಗಳಂತೆ ಬೇಟೆಯಾಡುತ್ತಿದ್ದನಂತೆ! ಮುಯ್ಯಿಗೆ ಮುಯ್ಯಿ ತೀರಲೇಬೇಕು ! ಮಾಡಿದವರು ಉಣ್ಣಬೇಕು ಮನದಂತಹ ಕಡುಬು!

ಆನಂದಕಂದರ ಈ ಎರಡೂ ಕಾದಂಬರಿಗಳು ಇತರ ಕಾದಂಬರಿಕಾರರಿಗಿಂತ ಭಿನ್ನವಾಗಿ ಕಾಣಿಸುತ್ತವೆ. ಬಹುತೇಕ ಕಾದಂಬರಿಕಾರರು ವಿಜಯನಗರ ಆರಂಭದ ಅಥವಾ ಅಂತಿಮ ಕಾಲದ

ಇತಿಹಾಸವನ್ನು ಆಧರಿಸಿದರೆ, ಆನಂದಕಂದರು ಸಂಗಮ ವಂಶದ ಅರಸರ ಕಾಲದ ವಿಜಯನಗರದ ಘಟನೆಯನ್ನು ಆಧರಿಸಿ ಕಾದಂಬರಿಗಳನ್ನು ರಚಿಸಿದ್ದಾರೆ. ಬ್ರಿಟಿಷರ ಆಡಳಿತವನ್ನು ವಿರೋಧಿಸಲು ಇಲ್ಲಿ ಮುಸ್ಲಿಮರನ್ನು ಸಂಕೇತವಾಗಿಟ್ಟುಕೊಂಡಿದ್ದರೂ, ಎಲ್ಲ ಮುಸ್ಲಿಮರು ಅಪರಾಧಿಗಳಲ್ಲ ಎನ್ನುವ ನಿಲುವನ್ನು ತಾಳುತ್ತಾರೆ. ಆ ಮೂಲಕ ಕೋಮು ಸೌಹಾರ್ದತೆಗೆ ಸಹಾಯಕವಾಗುವಂತೆ ಹಲವು ಅಂಶಗಳನ್ನು ಕಾದಂಬರಿಯಲ್ಲಿ ಅಭಿವ್ಯಕ್ತಿಸಿದ್ದಾರೆ.

ಎ. ಆರ್.ಟಿ.ಕರ್ಪೂರರ ಕನ್ನಡಿಗರ ಕಾರಸ್ಥಾನ (೧೯೨೭)

ಆರ್.ಟಿ.ಕರ್ಪೂರ ಅವರಿಂದ ರಚಿತಗೊಂಡು 'ಕನ್ನಡಿಗರ ಕಾರಸ್ಥಾನ' ಕಾದಂಬರಿಯು ಆರಂಭಗೊಳ್ಳುವುದು ವಿಜಯನಗರವು ಘನತೆಗೇರಿದ ಕಾಲದಲ್ಲಿ. ಅಂದರೆ ಶ್ರೀಕೃಷ್ಣದೇವರಾಯನ ಆಡಳಿತಾವಧಿಯಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿಗಳು ಉತ್ಕೃಷ್ಟತೆಯಿಂದ ಕೂಡಿದ್ದವು. ಕನ್ನಡ ವೀರರು, ಮುತ್ಸದ್ಧಿಗಳು, ಮಂತ್ರಿಗಳು ಪ್ರಪಂಚವೇ ತಿರುಗಿ ನೋಡುವಂತಹ ಕಾರ್ಯಪ್ರವರ್ತಕರಾಗಿದ್ದ ಕಾಲವದು. ಹೀಗೆ ಹಿಂದೂ ಸಾಮ್ರಾಜ್ಯವೆನಿಸಿಕೊಂಡ ವಿಜಯನಗರವು ಸಮೃದ್ಧಿಯ ತುತ್ತತುದಿಯಲ್ಲಿತ್ತು. ಹೀಗೆ ಅಬ್ಬರದಿಂದ ಕನ್ನಡಿಗರಿಗೆ ವಿಷಯಾಂಧರಾದ ಮುಸಲ್ಮಾನರು ಕೊಟ್ಟ ಉಪದ್ರವವನ್ನು ಕನ್ನಡಿಗರು ಬಗ್ಗು ಬಡಿದ ರೀತಿಯನ್ನು ಈ ಕಾದಂಬರಿ ವಿವರಿಸುತ್ತದೆ. ಕನ್ನಡಿಗರ ದೇಹ ಸಾಮರ್ಥ್ಯ ಮತ್ತು ಬುದ್ಧಿ ಸಾಮರ್ಥ್ಯ ಎಂತಹದೆಂಬುದನ್ನು ಇಲ್ಲಿ ಪ್ರಕಟಿಸಲಾಗಿದೆ.

ವಿಜಯನಗರವನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾದ ಈ ಕಾದಂಬರಿಯು ಕೊಂಡಪಲ್ಲಿ, ಉದಯಗಿರಿ, ಬಿಜಾಪೂರ, ರಾಯಚೂರು, ಬೀದರ್ ಸಂಸ್ಥಾನಗಳವರೆಗೂ ತನ್ನ ವ್ಯಾಪ್ತಿಯನ್ನು ಚಾಚಿಕೊಂಡಿದೆ. ಕರ್ನಾಟಕ ಏಕೀಕರಣ ಮತ್ತು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಟದ ಕಾಲವದು. ಹೋರಾಟಕ್ಕೆ ಜನರನ್ನು ಅಣಿಗೊಳಿಸುವ ಉದ್ದೇಶವಿತ್ತು. ಅದಕ್ಕಾಗಿ ಹಿಂದೆ ಮುಸ್ಲಿಮರ ಪ್ರಭುತ್ವದ ಕಾಲದಲ್ಲಿಯೂ ಸ್ವತಂತ್ರವಾಗಿ ತಲೆಯೆತ್ತಿ ನಿಂತು, ಹಿಂದೂ ಧರ್ಮದ ರಕ್ಷಣೆಯ ಹೊಣೆಯನ್ನು ಹೊತ್ತಿದ್ದ ವಿಜಯನಗರವನ್ನು ಕಾದಂಬರಿಕಾರರು ಹಿನ್ನೆಲೆಯಾಗಿ ತೆಗೆದುಕೊಂಡು ಆ ಮೂಲಕ ಇಂದಿನ ಕನ್ನಡಿಗರ ಹೆಗ್ಗುರುತುಗಳನ್ನು ಹೇಳಲು ಪ್ರಯತ್ನಿಸಿದ್ದಾರೆ. ಈ ಅಂಶಗಳು ಕಾದಂಬರಿಯಲ್ಲಿ ನೇರವಾಗಿ ದೊರೆಯದಿದ್ದರೂ ಇಂದಿನ ಕರ್ನಾಟಕದ ಪ್ರದೇಶಗಳಾದ ಬಿಜಾಪುರ, ರಾಯಚೂರು, ಬೀದರ್‌ಗಳನ್ನು ಈ ಕಾದಂಬರಿಯಲ್ಲಿ ಕನ್ನಡಿಗರ ಪ್ರದೇಶಗಳೆಂದು ಗುರುತಿಸದೆ, ಅವು ಮುಸಲ್ಮಾನರ ಪ್ರದೇಶಗಳೆಂಬ ಹಣೆಪಟ್ಟಿ ಇದನ್ನು ಖಚಿತಪಡಿಸುತ್ತದೆ. ವಿಜಯನಗರ ಸಾಮ್ರಾಜ್ಯವನ್ನು ಕನ್ನಡಿಗರ ಸಾಮ್ರಾಜ್ಯವೆಂದು, ಹಿಂದೂ ಧರ್ಮದ ಸಾಮ್ರಾಜ್ಯವೆಂದು ಗುರುತಿಸುವ ಅಂಶಗಳು ಕಾದಂಬರಿಗಳು ದೊರೆಯುತ್ತವೆ.

ಕೊಂಡಪಲ್ಲಿ ಎಂಬ ದುರ್ಗದಲ್ಲಿ ವೀರನಾರಾಯಣ ಗಜಪತಿಯಂಬೊಬ್ಬ ಪಾಳೇಗಾರನು ಆಳುತ್ತಿದ್ದ. ಈತನು ಮಹಾತ್ವಾಕಾಂಕ್ಷಿಯಾಗಿದ್ದನು. ರಾಯಚೂರು ಕೋಟೆಯನ್ನು ವಶಪಡಿಸಿಕೊಳ್ಳುವ ಸಲುವಾಗಿ ವಿಜಯನಗರದ ಸೈನ್ಯದ ಸಹಾಯವನ್ನು ಪಡೆಯುವುದಕ್ಕಾಗಿ ವಿಜಯನಗರಕ್ಕೆ ತನ್ನ ಮುಕ್ಕಾಲು ಪಾಲು ಸೈನ್ಯವನ್ನು ಕಳಿಸಿದನು. ಈ ವಿಷಯ ತಿಳಿದ ರಾಯಚೂರಿನ ದುರ್ಗಾಧಿಪತಿಯಾದ

ದಾವಲ್‌ಖಾನನು ಕೊಂಡಪಲ್ಲಿಯ ಮೇಲೆ ದಾಳಿ ಮಾಡುತ್ತಾನೆ. ಆ ಸಂದರ್ಭದಲ್ಲಿ ಅವನ ದಾಳಿಯನ್ನು ಎದುರಿಸಲು ಕೊಂಡಪಲ್ಲಿಯಲ್ಲಿ ಸೈನ್ಯವಿರಲಿಲ್ಲ. ಚಾಣಾಕ್ಷನಾದ ಮಂತ್ರಿ ಸದಾಶಿವನು ವೇಷ ಬದಲಿಸಿ ಖಾನ್‌ನ ಪಕ್ಷ ವಹಿಸುವಂತೆ ನಟಿಸಿ ವಿಜಯನಗರದಿಂದ ಸೈನ್ಯವನ್ನು ತರಿಸಿಕೊಂಡು ಕೊಂಡಪಲ್ಲಿಯನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಾನೆ. ಆದರೆ ಈ ಪ್ರಯತ್ನ ಫಲಿಸುವುದಿಲ್ಲ.ಖಾನ್‌ನು ವೀರನಾರಾಯಣ ಗಜಪತಿಯ ರಾಣಿಯಾದ ಪದ್ಮಿನಿಯನ್ನು ಅಪಹರಿಸಿಕೊಂಡು ಬರುತ್ತಾನೆ. ಈ ವಿಷಯವನ್ನು ತಿಳಿದ ಸದಾಶಿವನು ವಿಜಯನಗರ ಸಾಮ್ರಾಜ್ಯದ ಅಮಾತ್ಯರಾದ ತಿಮ್ಮರಸರೊಂದಿಗೆ ಚರ್ಚಿಸಿ ರಾಣಿಯನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಖಾನ್‌ನು ಅಪಹರಿಸಿದ್ದು ತಪ್ಪು ಎಂದು ಭಾವಿಸುವುದಾದರೆ, ಇದೇ ಕಾದಂಬರಿಯಲ್ಲಿ ಶ್ರೀ ಕೃಷ್ಣದೇವರಾಯನು ಉದಯಗಿರಿಯ ರಾಜ್ಯದ ಮೇಲೆ ದಾಳಿ ಮಾಡಿ ಅಲ್ಲಿನ ರಾಜಕುಮಾರಿಯನ್ನು ತಂದು ಆನೆಗುಂದಿಯಲ್ಲಿಟ್ಟ ಪ್ರಸ್ತಾಪ ಬರುತ್ತದೆ. ಆದರೆ ಇಲ್ಲಿ ಮುಖ್ಯವಾದ ವಿಷಯವೆಂದರೆ ಇತರರು ಮಾಡಿದ್ದು ತಪ್ಪು ಎಂದು ಗುರುತಿಸಿದರೆ ಇಲ್ಲಿ ವಿಜಯನಗರದವರು ಮಾಡಿದ್ದು ತಪ್ಪೆಂದು ಪರಿಗಣಿಸದೆ ಅದನ್ನು ರಾಜಧರ್ಮ ಎಂದು ಪರಿಗಣಿಸಲಾಗುತ್ತದೆ. ಇಂತಹ ದ್ವಂದ್ವ ನಿಲುವಿನ ಸಂಗತಿಗಳು ಕಾದಂಬರಿಯಲ್ಲಿ ಕಾಣಸಿಗುತ್ತವೆ.

ಈ ಕಾದಂಬರಿಯಲ್ಲಿ ಮೂಡಿ ಬಂದ ಪ್ರಮುಖ ಅಂಶಗಳೆಂದರೆ: ಒಂದು– ರಾಜ್ಯವನ್ನು ಗೆದ್ದ ನಂತರ ಅಲ್ಲಿನ ರಾಣಿಯರನ್ನಾಗಲಿ ರಾಜಕುಮಾರಿಯನ್ನಾಗಲಿ ಅಪಹರಿಸಿಕೊಂಡು ಬರುವುದು ಒಂದು ರೀತಿಯಲ್ಲಿ ರಾಜಧರ್ಮ ಎಂದೆನಿಸಿಸದರೂ; ಅಪಹರಿಸಿ ತಂದ ಮಹಿಳೆಯರನ್ನು ಗೌರವಯುತವಾಗಿ ಕಾಣುವುದು ಮತ್ತು ತಮ್ಮ ರಾಜ್ಯದಿಂದ ಅಪಹರಿಸಲ್ಪಟ್ಟ ಸ್ತ್ರೀಯರನ್ನು ಉಳಿಸಿಕೊಳ್ಳುವ ಸಲುವಾಗಿ ವಿಜಯನಗರ ಸಾಮ್ರಾಜ್ಯದಲ್ಲಿನ ಸೈನಿಕರು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿ ಸ್ತ್ರೀಯರಿಗೆ ಉಂಟಾಗುವ ಅವಮಾನವನ್ನು ತಡೆಯಲು ಮಾಡಿದ ಪ್ರಯತ್ನಗಳು ಕಾದಂಬರಿಯಲ್ಲಿ ಮನಕರಗುವಂತೆ ಚಿತ್ರಿತವಾಗಿವೆ. ಎರಡು– ಅಪಹರಿಸಲ್ಪಟ್ಟ ಮಹಿಳೆಯರ ಗೌರವ ಕಾಪಾಡುವುದು ಹಿಂದೂ ಧರ್ಮದ ಆದರ್ಶದ ಪ್ರತೀಕವೂ ಹೌದು ಎನ್ನುವುದರ ಹಿನ್ನೆಲೆಯಲ್ಲಿ ಹಿಂದೂ ಧರ್ಮದ ಪ್ರತಿನಿಧೀಕರಣವಾಗಿದ್ದ ವಿಜಯನಗರವು ಇಂತಹ ಕಾರ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ ಅಂಶ ಗೋಚರವಾಗುತ್ತದೆ.

ಹೀಗೆ ಹೊಸಗನ್ನಡ ಸಾಹಿತ್ಯದ ಹೊಸ ಪ್ರಭೇದವಾಗಿದ್ದ ಕಾದಂಬರಿ ಬಹುಬಗೆಯ ಓದುಗರನ್ನು ಆಕರ್ಷಿಸಿತ್ತು. ಇದನ್ನು ಅರಿತ ಅನೇಕ ಬರಹಗಾರರು ಈ ಪ್ರಕಾರದಲ್ಲಿ ಸಾಹಿತ್ಯ ಕೃಷಿ ಮಾಡಿದರು. ಸ್ವಾತಂತ್ರ್ಯಪೂರ್ವದ ಸಂದರ್ಭದಲ್ಲಿ ಕನ್ನಡದಲ್ಲಿ ಬಂದ ಅನೇಕ ಕಾದಂಬರಿಗಳು ಚಾರಿತ್ರಿಕ ವಸ್ತುವನ್ನಿಟ್ಟುಕೊಂಡು ಸಮಕಾಲೀನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಬಗೆಯನ್ನು ವಿವರಿಸುತ್ತವೆ. ವಿಜಯನಗರ ಸ್ಥಾಪನೆಯಿಂದ ಅದರ ಅವನತಿಯವರೆಗಿನ ವಿವಿಧ ಕಾಲಘಟ್ಟದ ಸಂಗತಿಗಳನ್ನು ಒಳಗೊಂಡು ಅನೇಕ ಕಾದಂಬರಿಗಳು ರಚನೆಗೊಂಡಿವೆ. ಹೀಗೆ ರಚನೆಗೊಂಡ ಕಾದಂಬರಿಗಳಲ್ಲಿ ವೈದಿಕ ಧರ್ಮವನ್ನು, ವಿದ್ಯಾರಣ್ಯರನ್ನು ಹೆಚ್ಚು ವೈಭವೀಕರಿಸಲಾಗಿದೆ. ವಿದ್ಯಾರಣ್ಯರ ತಪಸ್ಸಿನ

ಫಲದಿಂದ ಉದಯಿಸಿದ ಈ ಸಾಮ್ರಾಜ್ಯವು ಅನೇಕ ಏಳು ಬೀಳುಗಳನ್ನು ಕಂಡಿದೆ.

ಇದಕ್ಕೆ ಅಂದಿನ ರಾಜಕೀಯ ವ್ಯವಸ್ಥೆಯಲ್ಲಿನ ಆಂತರಿಕ ಕಲಹಗಳು, ರಾಜರ ವಿಲಾಸ ಪ್ರಿಯತೆ, ಮೇಲಿಂದ ಮೇಲೆ ಕೈಗೊಂಡ ಯುದ್ಧಗಳು, ಜಗತ್ತೇ ತಿರುಗಿ ನೋಡುವಂತಹ ಅಲ್ಲಿನ ಸಂಪತ್ತು, ವಿಧರ್ಮೀಯ ಸೈನಿಕರ ವಿಶ್ವಾಸ ಘಾತುಕನ ಮುಂತಾದವು ಕಾರಣವಾಗಿವೆ. ಇಂತಹ ಸಂದಿಗ್ಧ ಸಂದರ್ಭದಲ್ಲಿ ಸಾಮ್ರಾಜ್ಯನಿಷ್ಠರು ತೋರಿಸಿದ ಸಾಹಸ, ನಾಡಿನ ಮೇಲಿನ ಅವರ ಅಭಿಮಾನ, ಅವನತಿಯ ಹಾದಿ ಹಿಡಿದ ಸಾಮ್ರಾಜ್ಯವನ್ನು ಕಾಪಾಡಿಕೊಂಡ ಬಗೆ–ಇವು ಅನುಕರಣೀಯವಾದವು ಎನ್ನುವುದನ್ನು ಮೇಲಿನ ಹಲವು ಕಾದಂಬರಿಗಳಲ್ಲಿ ನೋಡಬಹುದಾಗಿದೆ. ಇಂತಹ ಘಟನೆಗಳನ್ನು ಆದರ್ಶ ಮೌಲ್ಯಗಳೆಂದು ಹೇಳುವ ಮೂಲಕ ಜನರಲ್ಲಿ ತಮ್ಮ ಗುರುತನ್ನು ಕಟ್ಟಿಕೊಳ್ಳಬೇಕಾದ ಅಗತ್ಯತೆಯನ್ನು ಒತ್ತಿ ಹೇಳುತ್ತವೆ. ಹೀಗಾಗಿ ಕನ್ನಡ ಮತ್ತು ಹಿಂದೂ ಗುರುತುಗಳನ್ನು ರೂಪಿಸಿಕೊಳ್ಳಲು ನೀಡಿದ ಪ್ರೇರಣೆಗಳು; ಹಿಂದೂ ರಾಷ್ಟ್ರೀಯತೆಯನ್ನು ರೂಪಿಸಿಕೊಳ್ಳಲು ಪ್ರೇರಕವಾದ ಅಂಶಗಳು ಕಾಣಿಸಿಗುತ್ತವೆ.

೪.೧.೩.೩.ನಾಟಕ

ನಾಟಕ ಎನ್ನುವುದು ಹಲವು ಕಲೆಗಳ ಸಂಗಮವಾದ ವಿಶಿಷ್ಟ ಕಲೆಯಾಗಿದೆ. ಅದರಲ್ಲಿ ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ, ಅಭಿನಯ, ನೃತ್ಯ ಈ ಮುಂತಾದ ಕಲೆಗಳು ಸೇರಿವೆ. ಕಾಳಿದಾಸನು 'ಶಾಂತಂ ಕ್ರತುಂ ಚಾಕ್ಷುಸಂ' ಎಂದು ಹೇಳಿರುವುದು ಈ ಕಾರಣಕ್ಕಾಗಿಯೇ. ಪ್ರೇಕ್ಷಕರಿಗೆ ಒಂದೇ ಸಮಯದಲ್ಲಿ ವಿಭಿನ್ನವಾದ ರಸಾನುಭವ ನೀಡುವ ನಾಟಕವು ಸಹಜವಾಗಿಯೇ ಜನಾಕರ್ಷಣೆಯನ್ನು ಪಡೆದಿದೆ. ಈ ಹಿನ್ನೆಲೆಯಲ್ಲಿ ಸಾಹಿತ್ಯದಲ್ಲಿ ನಾಟಕಕ್ಕೆ ಪ್ರಮುಖ ಸ್ಥಾನ ಸಂದಿದೆ. ಕಾದಂಬರಿ ಕೇವಲ ಓದಲು ಬರುವವನಿಗೆ ಮಾತ್ರ ಅರ್ಥವಾದರೆ ನಾಟಕ ಪ್ರಕಾರ ಓದಲು ಬಾರದ ಪ್ರೇಕ್ಷಕರನ್ನು ಬಹು ಬೇಗನೆ ತಲುಪುತ್ತದೆ. ಆ ಕಾರಣಕ್ಕಾಗಿ ನಾಟಕಗಳು ಅತಿ ಮುಖ್ಯವಾಗಿವೆ. ನಾಟಕಗಳಲ್ಲಿ ಹಲವಾರು ಪ್ರಕಾರಗಳಿವೆ. ಅವುಗಳಲ್ಲಿ ಐತಿಹಾಸಿಕ ನಾಟಕಗಳು ಎನ್ನುವ ಪ್ರಕಾರ ಒಂದು. ಆ ಐತಿಹಾಸಿಕ ನಾಟಕವನ್ನು ಕುರಿತಂತೆ ಶಾಮರಾಯರು ಈ ರೀತಿ ಹೇಳುತ್ತಾರೆ. "ಚರಿತ್ರೆಯೆಂಬುದು ಒಂದು ಒದ್ದೆಮುದ್ದೆಯಾದ ಒರಟು ವಿಗ್ರಹವಾದರೆ, ಅದರ ಅಂಕು ಡೊಂಕುಗಳನ್ನು ಸವರಿ, ಕೈಕಾಲುಗಳನ್ನು ಬಿಡಿಸಿ, ಕೆತ್ತನೆಯ ಕುಸುರಿ ಕೆಲಸದಿಂದ ದಿವ್ಯಾಭರಣ ಭೂಷಿತೆಯಾಗಿರುವ ಒಂದು ಕಲಾಕೃತಿಯಂತಿರುವುದು ಐತಿಹಾಸಿಕ ನಾಟಕ".[೧೦೧] ಭಾರತದ ರಾಷ್ಟ್ರೀಯತೆ, ಕರ್ನಾಟಕತ್ವದ ನಿರ್ಮಾಣದಲ್ಲಿ ನಾಟಕ ಸಾಹಿತ್ಯ ಅತ್ಯಂತ ಪ್ರಮುಖ ಪಾತ್ರವಹಿಸಿದೆ. ಕನ್ನಡ ರಂಗಭೂಮಿಯಲ್ಲಿ ಹಂಪಿ ಅಂದರೆ ವಿಜಯನಗರ ಸಾಮ್ರಾಜ್ಯ ಎಂದು ಭಾವಿಸಲಾಗಿದೆ. ವಿಜಯನಗರ ಸಾಮ್ರಾಜ್ಯದ ವಸ್ತುವನ್ನಿಟ್ಟುಕೊಂಡು ಹಲವು ನಾಟಕಗಳು ಕನ್ನಡದಲ್ಲಿ ರಚನೆಗೊಂಡಿವೆ. ಅವುಗಳಲ್ಲಿ ಅಮಾತ್ಯಮಾಧವ (೧೯೨೬) ಯಚ್ಚಮನಾಯಕ (೧೯೨೯) ತಾಳಿಕೋಟೆ (೧೯೧೬) ನಾಗರಿಕ (೧೯೩೦) ಮುಂತಾದವು ಪ್ರಮುಖವಾಗಿವೆ. ಈ ಹಿನ್ನೆಲೆಯಲ್ಲಿ ಹಂಪಿ ಮತ್ತು ವಿಜಯನಗರವನ್ನು ವಸ್ತುವಾಗಿರಿಸಿಕೊಂಡು

ವಿವಿಧ ಕಾಲಘಟ್ಟಗಳಲ್ಲಿ ರಚಿತವಾದ ಕೆಲವು ಕನ್ನಡ ನಾಟಕಗಳನ್ನು ಇಲ್ಲಿ ಚರ್ಚಿಸಲು ಯತ್ನಿಸಲಾಗಿದೆ.

ಕನ್ನಡ, ಕರ್ನಾಟಕದ ಪುನರ್ ನಿರ್ಮಾಣದ ಉತ್ಸಾಹದಲ್ಲಿ ಐತಿಹಾಸಿಕ ನಾಟಕಗಳನ್ನು ಬರೆದ ಪ್ರಮುಖ ನಾಟಕಕಾರರಲ್ಲಿ 'ಸಂಸ'ರು ಮೊದಲಿಗರಾಗಿದ್ದಾರೆ. "ಆಧುನಿಕ ಕನ್ನಡ ನಾಟಕದಲ್ಲೂ 'ಹಂಪಿ' ಮತ್ತು 'ವಿದ್ಯಾರಣ್ಯ'ರ ಥೀಮ್‌ಗಳು ಬಹಳ ಮಹತ್ವ ಪಡೆದಿವೆ. ಇದಕ್ಕೆ ಮುಖ್ಯ ಕಾರಣ ಕನ್ನಡಿಗರ ಭಾವನಾತ್ಮಕ ಮತ್ತು ಸಾಂಸ್ಕೃತಿಕ ಚಿಂತನೆಗಳು. ಬೇರೆ ಪ್ರಾಂತೀಯ ಭಾಷೆಗಳಲ್ಲಿ ತಮ್ಮದೇ ಆದ ಪ್ರೇರಕಶಕ್ತಿ-ಸಂಕೇತಗಳು ಇರುವಂತೆ ಕನ್ನಡದಲ್ಲಿ ಹಂಪಿಯ ವಿಜಯನಗರ ಸಾಮ್ರಾಜ್ಯ, ವಿದ್ಯಾರಣ್ಯರ ವಿಚಾರಗಳು, ಭುವನೇಶ್ವರಿಯ ಕಲ್ಪನೆ ಹಾಗೂ ಕರ್ನಾಟಕ ಸಿಂಹಾಸನಗಳು ಪ್ರಚುರಗೊಂಡಿವೆ. ಇವು ಕನ್ನಡಿಗರ ಸಾಂಸ್ಕೃತಿಕ ಪ್ರೇರೇಪಣೆಯ ಹಾಗೂ ಏಕೀಕರಣ ಚಿಂತನೆಯಲ್ಲಿ ಜಾಗೃತಿ ಮೂಡಿಸುವ ವಿಚಾರಗಳು" ಎಂದು ಚರಿತ್ರೆ ವಿದ್ವಾಂಸರಾದ ಸಿ. ಆರ್. ಗೋವಿಂದರಾಜು ಅವರು ಹೇಳಿರುವುದು ಸಂದರ್ಭೋಚಿತವಾಗಿದೆ.[೧೦೨] ರಾಷ್ಟ್ರೀಯತೆ ಮತ್ತು ಪ್ರಾಂತಾಭಿಮಾನ ಅರ್ಥಾತ್ ನಾಡು-ನುಡಿಯ ಸೇವೆಯಲ್ಲಿ ಸಾಹಿತ್ಯಿಕ ನಾಟಕಗಳಲ್ಲದೆ ವೃತ್ತಿರಂಗಭೂಮಿಯ ನಾಟಕಗಳೂ ಮುಖ್ಯ ಪಾತ್ರ ವಹಿಸಿದವು. ವಿಜಯನಗರ ಸಾಮ್ರಾಜ್ಯದ ಇತಿಹಾಸವನ್ನು ತಮ್ಮ ಕಥಾವಸ್ತುವನ್ನಾಗಿ ಹೊಂದಿದ್ದ ಈ ಐತಿಹಾಸಿಕ ನಾಟಕಗಳು ಕನ್ನಡದ ಏಕೀಕರಣದ ವೇಳೆ ಜನರಭಾವನೆಯನ್ನು ಪ್ರಚೋದಿಸಲು, ಅವರಲ್ಲಿ ಐಕ್ಯತೆ ಭಾವನೆ ಉಂಟು ಮಾಡಲು ಶ್ರಮಿಸಿದವು. ವಿಜಯನಗರ ಮತ್ತು ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳನ್ನು ವಸ್ತುವಾಗಿರಿಸಿಕೊಂಡು ಅನೇಕರು ನಾಟಕಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಮುಖ್ಯವಾಗಿರುವ ಕೆಲ ನಾಟಕಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಅ) ಗರುಡ ಸದಾಶಿವರಾಯರ ಯಚ್ಚಮನಾಯಕ ಅಥವಾ ಕನ್ನಡದ ಕಡುಗಲಿ(೧೯೨೯)

ಗರುಡ ಸದಾಶಿವರಾಯರು 'ಯಚ್ಚಮನಾಯಕ ಅಥವಾ ಕನ್ನಡದ ಕಡುಗಲಿ' ಎನ್ನುವ ನಾಟಕವನ್ನು ರಚಿಸಿದರು. ವಿಜಯನಗರ ಸಾಮ್ರಾಜ್ಯ ತಾಳೀಕೋಟೆ ಯುದ್ಧದಲ್ಲಿ ಸೋತ ಮೇಲೆ ಅಲ್ಲಿನ ರಾಜವಂಶೀಯರು ಪೆನುಗೊಂಡಕ್ಕೆ ಹೋಗಿ ರಾಜ್ಯಭಾರ ಮಾಡುತ್ತಾರೆ. ಆ ಸಂದರ್ಭದಲ್ಲಿ ನಡೆದ ಘಟನಾವಳಿಗಳೇ ಈ ನಾಟಕದ ಮುಖ್ಯ ಕಥಾವಸ್ತು. ದೊರೆ ವೆಂಕಟಪತಿರಾಯನಿಗೆ ಪುತ್ರ ಸಂತಾನವಿಲ್ಲದ್ದರಿಂದ ಅವನು ರಾಜ್ಯಾಧಿಕಾರ ಬೇರೆಯವರ ಕೈಗೆ ಹೋಗಬಾರದೆಂಬ ಉದ್ದೇಶದಿಂದ, ಜಗರಾಯನು ತನ್ನ ಮಗಳು(ವೆಂಕಟಪತಿರಾಯನ ಹೆಂಡತಿ) ಗರ್ಭವತಿ ಎಂದು ಹೇಳಿ ಅವಳನ್ನು ಒಂಬತ್ತು ತಿಂಗಳು ಹೊರಗೆ ಬರಲಾರದಂತೆ ನೋಡಿಕೊಂಡು, ಅಗಸರ ಮಗುವೊಂದನ್ನು ತಂದು ತನ್ನ ಮಗಳ ಮಗನೆಂದು ಹೇಳಿ ಮುಂದೆ ಅವನನ್ನೇ (ಚಿಕ್ಕರಾಯ) ಆ ರಾಜ್ಯದ ರಾಜನನ್ನಾಗಿ ಮಾಡುತ್ತಾನೆ. ಆದರೆ ವೆಂಕಟಪತಿರಾಯನು ಸಾವಿನ ಸಂದರ್ಭದಲ್ಲಿ ಆ ಮಗು ತನ್ನದಲ್ಲ ಎಂದು ಸತ್ಯ ಸಂಗತಿಯನ್ನು ಹೇಳಿ, ಆ ಸಂಸ್ಥಾನಕ್ಕೆ ತನ್ನ ತಮ್ಮನ ಮಗನಾದ ಶ್ರೀರಂಗರಾಯನೇ ನಿಜವಾದ ಹಕ್ಕುದಾರ

ಎಂದು ಹೇಳಿ ಸ್ವರ್ಗಸ್ಥನಾಗುತ್ತಾನೆ. ಆಗ ರಾಜನಿಷ್ಠ ಸೇವಕನಾದ ಯಚ್ಚಮನಾಯಕನು ಕ್ಷತ್ರಿಯರ ಅರಸರಿಂದ ರಾರಾಜಿಸಬೇಕಾದ ಸ್ಥಾನದಲ್ಲಿ ಅನ್ಯ ಜಾತಿಯವನೊಬ್ಬ ಆ ಸ್ಥಾನದಲ್ಲಿ ಕೂಡಬಾರದೆಂದು ಅನೇಕ ಸಾಹಸದ ಮೂಲಕ ಕೊನೆಗೆ ಅದೇ ವಂಶದ ಶ್ರೀರಂಗರಾಯನ ಮಗನಾದ ರಾಮರಾಯನನ್ನು ರಾಜನನ್ನಾಗಿ ಮಾಡುತ್ತಾನೆ.

ಯಚ್ಚಮನಾಯಕನು ಇಲ್ಲಿ ನಿಷ್ಠಾವಂತ ರಾಜಸೇವಕನಾಗಿ, ಉದಾತ್ತ ನಾಯಕನಾಗಿ ಕಂಡುಬರುತ್ತಾನೆ. ಕ್ಷತ್ರಿಯರಲ್ಲದೆ ಬೇರೊಬ್ಬನು ಆ ಸಿಂಹಾಸನವನ್ನು ಅಲಂಕರಿಸುವುದರ ವಿರುದ್ಧ ಹೋರಾಡುತ್ತಾನೆ. ಈ ಅಂಶಗಳನ್ನು ಗಮನಿಸಿದಾಗ ಊಳಿಗಮಾನ್ಯ ವ್ಯವಸ್ಥೆಯ ಪ್ರೋತ್ಸಾಹಿಸುವುದರ ಮೂಲಕ ವೈದಿಕ ಪರಂಪರೆಯನ್ನು ಮತ್ತು ಆನುವಂಶೀಯ ವ್ಯವಸ್ಥೆಯನ್ನು ಮುಂದುವರೆಸುವಂತಿದೆ. ಪ್ರಜಾಪ್ರಭುತ್ವದ ನೆಲೆಯಲ್ಲಿ ನಿಂತು ನೋಡಿದಾಗ ಇಂತಹ ವಿಚಾರಗಳು ವಿರುದ್ಧ ದಿಕ್ಕಿನಲ್ಲಿ ನಿಲ್ಲುತ್ತವೆ. ಈ ನಾಟಕದಲ್ಲಿ ಅಧಿಕಾರದ ವ್ಯಾಮೋಹದಿಂದಾಗಿ ಜಗರಾಯ ಹಲವು ತಂತ್ರಗಳನ್ನು ಎಣೆದು ಶ್ರೀರಂಗರಾಯ ಮತ್ತು ಅವನ ಕುಟುಂಬದವರನ್ನು, ಸಹಚರರನ್ನು ರಾಜ್ಯದ್ರೋಹದ ಆರೋಪದ ಮೇಲೆ ಶೂಲಕ್ಕೇರಿಸುವ ವಿವರಗಳಿವೆ.

ಆ) ಕಂದಗಲ್ಲ ಹಣಮಂತರಾಯರ ವರಪ್ರದಾನ(೧೯೩೭)

ವಿಜಯನಗರ ಸ್ಥಾಪನೆಯ ವಸ್ತುವಿಷಯವನ್ನು ಇಟ್ಟುಕೊಂಡು ಕಂದಗಲ್ಲ ಹಣಮಂತರಾಯರು 'ವರಪ್ರದಾನ' ಅರ್ಥಾತ್ 'ವಿಜಯನಗರ ಸಾಮ್ರಾಜ್ಯ' ಎನ್ನುವ ನಾಟಕವನ್ನು ರಚಿಸಿದ್ದಾರೆ. ಮಾಧವಾಚಾರ್ಯರ ಪ್ರೇರಣೆಯಿಂದ ಹರಿಹರನು ವಿಜಯನಗರ ಸ್ಥಾಪನೆ ಮಾಡಿದುದು ನಾಟಕದ ವಸ್ತು. ವಿಜಯನಗರ ಸ್ಥಾಪನೆಯ ಪೂರ್ವದಲ್ಲಿ ನಡೆಯುವ ಸಂಗತಿಗಳು ನಾಟಕದಲ್ಲಿ ಪ್ರಾಸಂಗಿಕವಾಗಿ ಬರುತ್ತವೆ. ಪ್ರತಿಯೊಂದು ಧರ್ಮದ ಮೂಲಮಂತ್ರ ಮತ್ತು ಮಾನವೀಯತೆ ಮೂಲ ಸೆಲೆ ಒಂದೇ ಎನ್ನುವುದನ್ನು ಬಾವುದ್ದೀನನ ಮೂಲಕ ನಾಟಕದಲ್ಲಿ ಈ ರೀತಿ ಹೇಳಿಸುತ್ತಾರೆ. "ಸತ್ವವನ್ನು ಹಾಳು ಮಾಡಿದಿ. ರಾಜದ್ರೋಹಿಯೇ, ದೇಶದ್ರೋಹಿಯೇ ಸುಲ್ತಾನರ ಸಿಂಹಾಸನಕ್ಕೆ ಸ್ವಾಮಿ ನಿಷ್ಠೆಯನ್ನು ತೋರಿಸುವ ನೀನು ನಿನ್ನ ರಾಕ್ಷಸಿ ಮಹತ್ವಾಕಾಂಕ್ಷೆಗೆ ನಾಳೆ ಸುಲ್ತಾನರ ಮೇಲೆ ಕೈ ಮಾಡಲು ಹೇಸಲಾರೆ"[೧೦೩] ಈ ಮಾತುಗಳನ್ನು ಗಮನಿಸಿದಾಗ ಬಾಹುದ್ದೀನನು ಮುಸ್ಲಿಮರಾದರೂ ಅವನ ರಾಜಭಕ್ತಿ ಮಾತ್ರ ಧರ್ಮಾತೀತವಾದುದು ಎನ್ನುವುದನ್ನು ಧ್ವನಿಸುತ್ತವೆ. ಇದೇ ನಾಟಕದಲ್ಲಿ ಕನ್ನಡ ನಾಡನ್ನು ಕಟ್ಟಿಕೊಳ್ಳಬೇಕಾದ ಅಂಶವನ್ನು ರೌದ್ರದಾಮ ಮತ್ತು ಹುಕ್ಕರ ಸಂಭಾಷಣೆಯಲ್ಲಿ ಒತ್ತಿ ಹೇಳುವುದು ಸಹ ಸ್ಪಷ್ಟವಾಗುತ್ತದೆ. ಕರ್ನಾಟಕದ ಏಕೀಕರಣ ಮತ್ತು ಭಾರತ ರಾಷ್ಟ್ರ ನಿರ್ಮಾಣಕ್ಕೆ ಪಣ ತೊಡಲು ಜನರನ್ನು ಕಂಕಣಬದ್ಧರಾಗುವಂತೆ ಮಾಡುವುದು ಲೇಖಕರ ಬಹು ಮುಖ್ಯ ಆಶಯವಾಗಿದೆ ಎನ್ನುವುದು ನಾಟಕದ ಈ ಸಂಭಾಷಣೆಗಳಲ್ಲಿ ವ್ಯಕ್ತವಾಗುತ್ತದೆ.

ಈ ನಾಟಕಕಾರರ ಇನ್ನೊಂದು ಮುಖ್ಯ ಸಂಗತಿಯೆಂದರೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಸಂದರ್ಭದಲ್ಲಿ ಮಲ್ಲಿಕನು ಅಲ್ಲಿಯೇ ಇದ್ದು, ರಾಜನನ್ನು ಹಾರೈಸುವುದು ಮತ್ತು

ಅದಕ್ಕೆ ತಮ್ಮ ಪ್ರೋತ್ಸಾಹವಿದೆಯೆಂದು ಎನ್ನುವಂತೆ ಚಿತ್ರಿಸುವ ಹೊಸ ಪ್ರಯೋಗಕ್ಕೆ ಕೈ ಹಾಕಿದ್ದಾರೆ. ನಾಡೊಂದನ್ನು ರೂಪಿಸುವ ಕಾರ್ಯದಲ್ಲಿ ಸ್ತ್ರೀಯರೂ ಪಾಲ್ಗೊಳ್ಳಬೇಕೆಂಬ ಅಂಶವನ್ನು ನಾಟಕದಲ್ಲಿ ಲಲಿತೆಯ ಪಾತ್ರದ ಮೂಲಕ ವಿವಿಧ ಸನ್ನಿವೇಶಗಳಲ್ಲಿ ಚಿತ್ರಿಸಿದ್ದಾರೆ ಇದು ಲೇಖಕರ ಬರಹ ಕೌಶಲ್ಯಕ್ಕೆ ಸಾಕ್ಷಿಯಾಗಿದೆ.

ಇ) ಮಾಸ್ತಿವೆಂಕಟೇಶ ಅಯ್ಯಂಗಾರರ ತಾಳಿಕೋಟೆ(೧೯೧೯)

ಹಂಪಿಯ ಕುರಿತು ವಿಷಯ ವಸ್ತುವನ್ನು ಒಳಗೊಂಡಿರುವ ನಾಟಕಗಳಲ್ಲಿ 'ತಾಳಿಕೋಟೆ' ನಾಟಕವು ಒಂದಾಗಿದೆ. ಮಾಸ್ತಿಯವರು ಅಮೇಚೂರು ನಾಟಕ ಮಂಡಳಿಯ ಸ್ಪರ್ಧೆಗಾಗಿ ರಚಿಸಿದ್ದರು. ಇದನ್ನು ಆರು ವರ್ಷಗಳ ತರುವಾಯ ದತ್ತಾತ್ರೇಯ ಕೃಷ್ಣಭಾರದ್ವಾಜರು ತಮ್ಮ 'ರಂಗಭೂಮಿ' ಪತ್ರಿಕೆಯಲ್ಲಿ ಪ್ರಕಟಿಸಿದರು. ನಾಟಕವು ವಿಜಯನಗರ ಸಾಮ್ರಾಜ್ಯದ ನಾಶವನ್ನು ತಿಳಿಸುವುದು. "ಯೌವನದ ಭರದಲ್ಲಿ ಅಳಿಯ ರಾಮರಾಯ ಮಾಡಿದ ಒಂದು ತಪ್ಪು ಇಡೀ ಸಾಮ್ರಾಜ್ಯವನ್ನೇ ನಾಶದ ಅಂಚಿಗೆ ಒಯ್ಯುತ್ತದೆ. ನಾಟಕದಲ್ಲಿ ಹಿಂದೂ-ಮುಸ್ಲಿಂ ದ್ವೇಷಕ್ಕಿಂತ ಒಂದು ಹೆಣ್ಣಿಗಾಗಿ ನಡೆಸುವ ವೈಯಕ್ತಿಕ ದ್ವೇಷವೇ ಮುಖ್ಯವಾಗುತ್ತದೆ. ಮಾನವೀಯತೆ, ಮಾತೃ ಹೃದಯಗಳ ದರ್ಶನವನ್ನು ನಾಟಕದಲ್ಲಿ ಕಾಣುತ್ತೇವೆ. ನಾಟಕದಲ್ಲಿ ಎಲ್ಲಿಯೂ, ಸ್ವಾತಂತ್ರ್ಯ, ಕನ್ನಡನಾಡು, ನುಡಿ, ಭಾಷಾ ಸಮಸ್ಯೆ, ಯಾವೊಂದರ ಪ್ರಸ್ತಾಪವೂ ಇಲ್ಲ. ಸನ್ನಿವೇಶಕ್ಕೆ ಎಷ್ಟು ಉಚಿತವೋ ಅಷ್ಟೇ ಸಂಭಾಷಣೆ ಮಾತ್ರ ಉಂಟು. ಮನುಷ್ಯನ ಅಸೂಯೆ, ದ್ವೇಷಗಳು ಒಂದು ನಾಡನ್ನೇ ಹೇಗೆ ನಾಶಕ್ಕೆ ಒಯ್ದು ಬಿಡಬಲ್ಲದು ಎಂಬುದನ್ನು ನಾಟಕ ತುಂಬಾ ಮಾರ್ಮಿಕವಾಗಿ ಪ್ರಕಟಿಸುತ್ತದೆ. ಇಲ್ಲಿಯ ಪ್ರತಿಯೊಂದು ಕ್ರಿಯೆಯೂ ದೈವ ನಿರ್ಣಯದಂತೆ ನಡೆಯುತ್ತದೆ. ಮಾನವ ಇಲ್ಲಿ ಅಸಹಾಯಕ ಪಾತ್ರ ಮಾತ್ರ ಎಂಬುದು ನಾಟಕಕಾರನ ನಂಬಿಕೆ, ಅದನ್ನೇ ತನ್ನ ಸೃಷ್ಟಿಯ ನಾಟಕದಲ್ಲಿಯೂ ಪ್ರಕಟಿಸಿದ್ದಾನೆ."[೧೦೪] ಈ ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯದ ಅಧಃಪತನ ಜೊತೆಗೆ ಪ್ರೀತಿ, ಕರುಣೆಗಳು ನೆಲೆನಿಂತಿದೆ.

ಈ) ರಂ.ಶ್ರೀ.ಮುಗಳಿಯವರ ವಿಜಯ ಸಾಮ್ರಾಜ್ಯ(೧೯೩೬)

ರಂ.ಶ್ರೀ.ಮುಗಳಿಯವರು ಈ ನಾಟಕವನ್ನು ರಚಿಸಿದ್ದಾರೆ. ಇದು ೧೯೩೬ರಲ್ಲಿ 'ವಿಜಯನಗರ ಸ್ಮರಣೋತ್ಸವ ಸಂಚಿಕೆ'ಯಲ್ಲಿ ಮತ್ತು 'ಅರುಣೋದಯ' ಪತ್ರಿಕೆಯ ವಿಶೇಷ ಸಂಚಿಕೆಯಲ್ಲಿ ಒಂದಂಕದ ನಾಟಕ ರೂಪದಲ್ಲಿ ಪ್ರಕಟವಾಯಿತು. ನಂತರ ಇದೇ ನಾಟಕ ೧೯೪೮ರಲ್ಲಿ ಮೂರಂಕದ ನಾಟಕವಾಗಿ ಬೆಳಗಾವಿಯ ವಿಜಯ ಗ್ರಂಥಮಾಲೆಯಲ್ಲಿ ಪ್ರಟಕಗೊಂಡಿತು. ಲೇಖಕರು ಕ್ರಿ.ಶ.೧೩೩೬ ರಿಂದ ೧೩೪೬ರವರೆಗೆ ವಿಜಯನಗರ ಸಾಮ್ರಾಜ್ಯದಲ್ಲಿ ನಡೆದ ಮುಖ್ಯ ಸಂಗತಿಗಳನ್ನು ನಾಟಕದಲ್ಲಿ ಅಳವಡಿಸಿದ್ದಾರೆ.

ವಿಜಯನಗರ ಸ್ಥಾಪನೆಗೆ ಸಂಬಂಧಿಸಿದಂತೆ ಚರಿತ್ರೆಯಲ್ಲಿರುವ ಭಿನ್ನಾಭಿಪ್ರಾಯಗಳನ್ನು

ಮುಗಳಿಯವರು ತಮ್ಮ ವಿಮರ್ಶಾ ದೃಷ್ಟಿಕೋನದಿಂದ ಸೂಕ್ಷ್ಮವಾಗಿ ಅವಲೋಕಿಸಿ ತಾವು ಕಂಡುಕೊಂಡ ನೈಜ ಆಕರಗಳನ್ನಾಧರಿಸಿ ಈ ನಾಟಕವನ್ನು ರಚಿಸಿದ್ದಾರೆ. ಕನ್ನಡ ನಾಡಿನ ಇತಿಹಾಸದಲ್ಲಿ ಅತ್ಯಂತ ಉಜ್ವಲವಾದ ಒಂದು ಕಾಲ ಖಂಡವನ್ನು ಕಣ್ಣಮುಂದೆ ನಿಲ್ಲಿಸುವ ಅಂಥದೇ ಒಂದೇ ಪರಿಸ್ಥಿತಿಯಲ್ಲಿ ಇಂದು ಆ ಮೂಲಕ ನಾವೆಲ್ಲರೂ ಒಂದೇ ಎನ್ನುವ ಭಾವನಾತ್ಮಕ ಬೆಸುಗೆಯನ್ನು ಬೆಸೆದು, ನಾಡಿನ ನಿರ್ಮಾಣದೊಂದಿಗೆ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಸಕ್ರಿಯವಾಗಿ ಜನರನ್ನು ಭಾಗವಹಿಸುವಂತೆ ಮಾಡಲು ಪ್ರೇರೇಪಣೆ ನೀಡುವುದನ್ನು ಇದರಲ್ಲಿ ಗುರುತಿಸಬಹುದಾಗಿದೆ.

ಉ) ವೀರಭದ್ರಪ್ಪ ಬಸಪ್ಪಾ ಅವರ ಹರಿಹರರಾಯ ಅಥವಾ ವಿಜಯನಗರ ಸಾಮ್ರಾಜ್ಯವು(೧೯೦೮)

ವಿಜಯನಗರವನ್ನು ವಸ್ತುವಾಗಿರಿಸಿಕೊಂಡು ಹುಟ್ಟಿದ ಆಧುನಿಕ ನಾಟಕಗಳಲ್ಲಿ 'ವಿಜಯನಗರ ಸಾಮ್ರಾಜ್ಯವು' ಎನ್ನುವ ನಾಟಕವೇ ಮೊದಲಿನದು ಎನಿಸುತ್ತದೆ. ಇದನ್ನು ಬೆಳಗಾವಿಯ ಆಕ್ಟಿಂಗ್ ಜಾಯಿಂಟ್ ಸಬ್‌ಜಡ್ಜ್‌ರಾದ ವೀರಭದ್ರ ಬಸಪ್ಪಾ ಎನ್ನುವವರು ಸಂಗ್ರಹಿಸಿದರು (ಪ್ರಾಯಶಃ ಲೇಖಕರು ಇವರೇ ಇರಬಹುದು) ಈ ನಾಟಕವು ೧೯೦೮ಕ್ಕಿಂತ ಹಿಂದೆಯೇ ರಚಿತಗೊಂಡಿರಬೇಕು ಎನಿಸುತ್ತದೆ.[೧೦೫]

ಈ ನಾಟಕದಲ್ಲಿ ದುರ್ಬಲನೊಬ್ಬ ಅಧಿಕಾರಕ್ಕೆ ಬಂದರೆ ಏನು ಅನಾಹುತವಾಗಬಲ್ಲದು ಎಂಬುದನ್ನು ನಾಟಕಕಾರರು ಸಮರ್ಥವಾಗಿ ತೋರಿಸಿದ್ದಾರೆ. ದುರ್ಬಲನೂ, ಸ್ತ್ರೀ ಲೋಲುಪನೂ ಆದ ಮುದಿ ಅರಸು ಹರೆಯದ ರಾಣಿಯ ಮಾತಿಗೆ ಕಟ್ಟುಬಿದ್ದು ಸರ್ವನಾಶಕ್ಕೊಳಗಾಗುತ್ತಾನೆ. ಹಾಗೇ ಅವನನ್ನು ನಂಬಿದ ಸಾಮ್ರಾಜ್ಯದ ನಾಶಕ್ಕೂ ಕಾರಣನಾಗುತ್ತಾನೆ. ರಾಜನ ಅಸಹಾಯಕತೆಯ ಲಾಭ ಪಡೆಯುವವನು ದೇವರಾಯ (ಮಂತ್ರಿ) ರಾಣಿಯ ಅಣ್ಣನಾದ ದೇವರಾಯ ಅರಸನ ಮಗಳಾದ ಪದ್ಮಿನಿಯನ್ನು ವಿವಾಹವಾಗುವ ಮೂಲಕ ರಾಜ್ಯವನ್ನು ತನ್ನ ಕೈವಶಕ್ಕೆ ತೆಗೆದುಕೊಳ್ಳುವ ದುರಾಲೋಚನೆ ಮಾಡುತ್ತಾನೆ. ಪದ್ಮಿನಿ ತನಗೆ ದೊರೆಯಲಾರಳು ಎಂಬುದು ಖಾತರಿಯಾದ ತಕ್ಷಣ ಇಸ್ಲಾಂ ಅರಸರೊಂದಿಗೆ ಸಂಚು ನಡೆಸಿ ಆನೆಗೊಂದಿ ಸಂಸ್ಥಾನ ಪರರ ವಶವಾಗುವಂತೆ ಮಾಡುತ್ತಾನೆ. ಪರರ ವಶವಾಗದ ಹಿಂದೂ ಸ್ತ್ರೀಯರು ಮಾನವಂತರು ಎಂಬುದನ್ನು ಪದ್ಮಿನಿ ಹಾಗೂ ಆಕೆಯ ಸಂಗಡಿಗರು ಅಗ್ನಿದೇವನಿಗೆ ಆಹುತಿಯಾಗಿ ಪ್ರಾಣತ್ಯಾಗ ಮಾಡುವ ಮೂಲಕ ಸಾಬೀತು ಪಡಿಸುತ್ತಾರೆ. ಆನೆಗೊಂದಿಯ ನಾಶದೊಂದಿಗೆ ಹರಿಹರ, ಬುಕ್ಕರು ವಿದ್ಯಾರಣ್ಯರ ಸಮಕ್ಷಮದಲ್ಲಿ ಪಂಪಾಪತಿ ನೆಲೆಯಲ್ಲಿ ಹೊಸ ಸಾಮ್ರಾಜ್ಯದ ಹುಟ್ಟಿಗೆ ಅಂಕುರಾರ್ಪಣೆ ಮಾಡುವ ಮೂಲಕ ನಾಟಕ ಮುಕ್ತಾಯಗೊಳ್ಳುತ್ತದೆ.

ನಾಟಕದಲ್ಲಿ ಬಹುಭಾಗವು ವಿಜಯನಗರ ಸ್ಥಾಪನೆಯ ಪೂರ್ವದಲ್ಲಿದ್ದ ಆನೆಗೊಂದಿ ಸಂಸ್ಥಾನ ಹಾಗೂ ಅದರ ಅವನತಿಯ ಚಿತ್ರಣವನ್ನೇ ಕೊಡುತ್ತದೆ. ಸಂಸ್ಥಾನದ ಅರಸರ ಅಳಿಯಂದಿರಾದ ಹರಿಹರ-ಬುಕ್ಕರು ಆನೆಗುಂದಿ ಸಂಸ್ಥಾನದಲ್ಲಿ ಐಶ್ವರ್ಯ ಪಡೆದಿದ್ದನ್ನು

ತಿಳಿಸುತ್ತದೆ. ಆನೆಗೊಂದಿಯು ಅವನತಿಯ ನಂತರ ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ಹೊಸ ರಾಜ್ಯವನ್ನು ಹರಿಹರ-ಬುಕ್ಕರು ಕಟ್ಟುವರು ಎಂಬುದನ್ನು ನಾಟಕ ಸೂಚಿಸುತ್ತದೆ. ನಾಟಕದಲ್ಲಿ ಕನ್ನಡಿಗರ ಶೋಚನೀಯ ಸ್ಥಿತಿಯನ್ನು ಹೇಳುತ್ತ ಅದರ ಅನನ್ಯತೆಯನ್ನು ಗುರುತಿಸುವ ಪ್ರಯತ್ನ ನಾಟಕ ರಚನಾಕಾರರು ಮಾಡಿದ್ದಾರೆ. ಕೆಲವು ಸ್ಥಳೀಯರ ಕುಟಿಲತೆ, ದುರಾಶೆಗಳೇ ಕನ್ನಡಿಗರನ್ನು ಪಾರತಂತ್ರ್ಯಕ್ಕೆ ಒಳಗಾಗಲು ಕಾರಣವಾಗಿದೆ ಎಂಬುದನ್ನು ನಾಟಕವು ಸೂಚಿಸುತ್ತದೆ. ಅಲ್ಲದೆ ಆರ್ಯಧರ್ಮ ಎಂದು ಕರೆಯುವ ಭಾರತೀಯ ಧರ್ಮದಲ್ಲಿರುವ ಲೋಪಗಳನ್ನು ಎತ್ತಿ ತೋರಿಸಿ ನಾಟಕಕಾರರು ಹಿಂದೂ ಧರ್ಮದಲ್ಲಿರುವ ಲೋಪಗಳನ್ನು, ಬ್ರಾಹ್ಮಣದಲ್ಲಿರುವ ಧಾರ್ಮಿಕ ಢಾಂಬಿಕತೆಯನ್ನು ಬಹು ಸೂಕ್ಷ್ಮವಾಗಿ ವಿಡಂಬಿಸಿದ್ದಾರೆ.

ಋ) ನರಸಿಂಗ ಲಕ್ಷ್ಮಣ ಹೆಗ್ಡೆಯವರ ಸಂಗೀತ ಕರ್ನಾಟಕ ಸಿಂಹಾಸನ ನಾಟಕವು ಅಥವಾ ಅಮಾತ್ಯ ಮಾಧವ(೧೯೨೬)

ಹಂಪಿ ಮತ್ತು ವಿಜಯನಗರ ಕುರಿತು ಮಾಹಿತಿ ನೀಡುವ ನಾಟಕಗಳಲ್ಲಿ ಈ ನಾಟಕವು ಒಂದಾಗಿದೆ. ನರಸಿಂಗ ಲಕ್ಷ್ಮಣ ಹೆಗ್ಡೆಯವರು ಆ ಸಂದರ್ಭದಲ್ಲಿ ಕನ್ನಡಾಭಿಮಾನವನ್ನು ಬೆಳೆಸುವುದರ ಜೊತೆಗೆ ನಮ್ಮನ್ನಾಕ್ರಮಿಸಿದ್ದ ಅನ್ಯರ ದಬ್ಬಾಳಿಕೆಯ ವಿರುದ್ಧ ಹೋರಾಡಲು ಅಣಿಗೊಳಿಸುವುದರ ಮೂಲಕ ನಮ್ಮ ಅಸ್ಮಿತೆಯನ್ನು ಸ್ಥಾಪಿಸಿಕೊಳ್ಳುವ ಅಗತ್ಯತೆಯನ್ನು ಇಲ್ಲಿ ಲೇಖಕರು ಒತ್ತಿ ಹೇಳಿದ್ದಾರೆ.

ವಿಜಯನಗರ ಸ್ಥಾಪನೆಯ ಕನಸನ್ನು ಹೊತ್ತು ಮಾಧವನು ಕುರುಬರಾದ ಹಕ್ಕ (ಹರಿಹರ) ಬುಕ್ಕರ ಸಹಾಯದಿಂದ, ಭುವನೇಶ್ವರಿಯ ಅನುಗ್ರಹದಿಂದ 'ಕನ್ನಡಿಗರನ್ನು ಏಕೀಕರಿಸುವ' ಉದ್ದೇಶದಿಂದ ವಿಜಯನಗರ ಸಾಮ್ರಾಜ್ಯವನ್ನು ಹಂಪಿಯಲ್ಲಿ ಸ್ಥಾಪಿಸಿದುದೇ ನಾಟಕದ ವಸ್ತುವಾಗಿದೆ. ಹಿಂದೊಮ್ಮೆ ಕದಂಬ, ಚಾಲುಕ್ಯ, ರಾಷ್ಟ್ರಕೂಟರ ಅವಧಿಯಲ್ಲಿ ಸಂಪದ್ಭರಿತ ನಾಡಾಗಿದ್ದ ಕರ್ನಾಟಕದಲ್ಲಿ ಇಂದು ಪರಕೀಯ ಸಂಸ್ಕೃತಿಯ ಜ್ವಾಲೆಯು ಕಾಡ್ಗಿಚ್ಚಿನಂತೆ ಹಬ್ಬಿದೆ. ಕೊಡುಗೈ ಕನ್ನಡಿಗರು ಬೇಡುಗೈ ಬಡವರಾಗಿದ್ದಾರೆ. ಆತ್ಮ ಶೋಧನಕ್ಕಾಗಿ ಹೆಣಗಾಡುತ್ತಿದ್ದ ಭರತವರ್ಷಿಣಿಯರು ಅನ್ನ ಶೋಧನೆಗಾಗಿ ದಣಿಯಬೇಕಾಗಿದೆ. ಇಂತಹ ಪರಿಸ್ಥಿತಿ ನಿರ್ಮಾಣಗೊಳ್ಳಲು ಅನ್ಯರ ಆಡಳಿತ ವ್ಯವಸ್ಥೆಯೇ ಕಾರಣ ಎಂದರಿತ ನಾಟಕಕಾರರು ಮತ್ತೆ ವೈಭವಯುತವಾದ ನಾಡನ್ನು ಕಟ್ಟಿಕೊಳ್ಳಬೇಕಾದ ಹೊಣೆ ನಮ್ಮದಾಗಿದೆ"[೧೦೬] ಇಲ್ಲಿ ವಿವಿಧ ಪಾತ್ರಗಳ ಸಂಭಾಷಣೆಯಲ್ಲಿ ಹೇಳಿರುವುದನ್ನು ಗುರುತಿಸಬಹುದು. ಅಲ್ಲದೆ ನಾಟಕದಲ್ಲಿ ಬ್ರಾಹ್ಮಣ ಮತ್ತು ಅಂತ್ಯಜರ ನಡುವಿನ ತಾರತಮ್ಯವನ್ನು ಶ್ರೀ ವಿದ್ಯಾರಣ್ಯ ಮತ್ತು ಮಾಚಯ್ಯ ಪಾತ್ರಗಳ ಮೂಲಕ ಮಾರ್ಮಿಕವಾಗಿ ಚಿತ್ರಿಸಲಾಗಿದೆ. ಭಾಷಿಕ ಆಧಾರದ ಮೇಲೆ ನಾವೆಲ್ಲರೂ ಒಗ್ಗಟ್ಟಾಗಿ ನಮ್ಮದೇ ಆದ ಆದರ್ಶ ರಾಜ್ಯವನ್ನು ನಿರ್ಮಾಣ ಮಾಡಿಕೊಳ್ಳುವುದರಿಂದ ಮತ್ತೊಮ್ಮೆ ವಿಜಯನಗರದಂತಹ ವೈಭವವನ್ನು ಕಾಣಲು ಸಾಧ್ಯ ಎನ್ನುವುದನ್ನು ಈ ಮೇಲಿನ ಮಾತುಗಳು ಪರ್ಯಾಯವಾಗಿ ಧ್ವನಿಸುತ್ತವೆ.

ಎ) ಡಿ.ವಿ.ಜಿ.ಯವರ ಶ್ರೀವಿದ್ಯಾರಣ್ಯ ವಿಜಯ(೧೯೪೧)

ಡಿ.ವಿ.ಜಿ.ಯವರಿಂದ ರಚಿತವಾದ ಈ ನಾಟಕ ರೂಪಕ ಛಾಯೆಯನ್ನು ಒಳಗೊಂಡಿದ್ದು, ಹಂಪಿ ಮತ್ತು ವಿಜಯನಗರದ ಕುರಿತ ಕಥಾವಸ್ತುವನ್ನು ಈ ನಾಟಕ ಒಳಗೊಂಡಿದೆ. ನಾಟಕದ ಬಹುಭಾಗ ನಡೆಯುವುದು ವಿದ್ಯಾರಣ್ಯರ (ಮಾರುಣ ಮಾಧವ) ಮಾರ್ಗದರ್ಶನದಲ್ಲಿ. ವಿಜಯನಗರ (ವಿದ್ಯಾನಗರ) ಸ್ಥಾಪನೆಯಾದ ವಿಚಾರವನ್ನು ನಾಟಕ ತಿಳಿಸುತ್ತದೆ. ಹಾಗೇ ಅದಕ್ಕೆ ಪೂರ್ವದಲ್ಲಿ ಹಕ್ಕಬುಕ್ಕರು ಆಶ್ರಯ ಪಡೆದ ಆನೆಗೊಂದಿ ಸಂಸ್ಥಾನದ ಸ್ಥಿತಿಗತಿಗಳು, ಆ ಸಂಸ್ಥಾನದಲ್ಲಿ ಸಹೋದರರೀರ್ವರು ನಡೆಸಿದ ಕಾರ್ಯದ ವಿವರಗಳು ಬರುತ್ತವೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಯಾವ ರೀತಿಯ ಭೂಮಿಕೆಯಂತಾಯಿತೆಂಬುದನ್ನು ತಿಳಿಸುವುದೇ ನಾಟಕದ ಉದ್ದೇಶ. ಹಿಂದೂ ವೈರಿಗಳಾದ ಮುಸ್ಲಿಂ ಅರಸರು (ತುರುಷ್ಕರು) ಚೀನ ಹಾಗೂ ಬೇರೆ ದೇಶಗಳ ಮೇಲೆ ದಂಡೆತ್ತಿ ಹೋಗುತ್ತಿರುವುದೂ ದಕ್ಷಿಣ ಭಾರತದತ್ತ ಅವರ ಗಮನ ಕಡಿಮೆಯಾಗಿರುವುದಾಗಿಯೂ, ಅದೇ ಸಂದರ್ಭವೇ ಸೂಕ್ತವೆಂದು ವಿಜಯನಗರ ಸ್ಥಾಪನೆಗೆ ಕಾರಣಕರ್ತರಾಗುತ್ತಾರೆ. ನಾಟಕದಲ್ಲಿ ಬ್ರಾಹ್ಮಣ, ಹಿಂದೂ ಎಂಬ ಪದಗಳು ಮತ್ತೆ ಮತ್ತೆ ಬರುತ್ತವೆ. ಬ್ರಾಹ್ಮಣರ ರಾಷ್ಟ್ರೀಕರಣವು, ಅಂದರೆ ಧರ್ಮದ ರಾಷ್ಟ್ರೀಕರಣವಾಗಬೇಕಾದರೆ ವಿಜಯನಗರ ಸ್ಥಾಪನೆ ಅವಶ್ಯಕ ಎನ್ನುವ ಮಾತುಗಳು ನಾಟಕದಲ್ಲಿ ಕಾಣಿಸುತ್ತವೆ. ನಾಟಕದಲ್ಲಿ ತುಂಬಾ ಶೌರ್ಯದಿಂದ ಮೆರೆದಾಡಿದ ಹರಿಹರರಾಯನಿಗೂ ದುಃಖವೆಂಬುದು ತಪ್ಪಿದ್ದಲ್ಲ ಎನ್ನುವುದನ್ನು ಅವನ ಮಗ ಸೋಮಪ್ಪನ ಸಾವಿನ ಮೂಲಕ ಲೇಖಕರು ತಿಳಿಸಿದ್ದಾರೆ. ಅಷ್ಟೇ ಅಲ್ಲ, ಯಾರು ಎಷ್ಟೇ ಹೋರಾಟ ಮಾಡಲಿ, ಅವರೂ ಒಂದು ದಿನ ಕೊನೆಯಾಗಲೇಬೇಕು ಎಂಬ ಸಂದೇಶವನ್ನು ಹರಿಹರನ ಸಾವಿನ ಮೂಲಕ ತಿಳಿಸಿದ್ದಾರೆ. ಅಲ್ಲದೆ ಭುವನೇಶ್ವರಿ ತಾಯಿಯ ಅನಾದಿಯಂತೆ ಅವರು ಮುಂದುವರೆಯುವವು. ದೈವ ಶಕ್ತಿಯಿಂದಲೇ ಪ್ರತಿಯೊಂದು ಕಾರ್ಯವೂ, ಸೋಲು-ಗೆಲುವು, ಸಂತೋಷ-ದುಃಖ, ಸಾವು-ನೋವು ನಡೆಯುತ್ತದೆ ಎಂಬುದನ್ನು ಲೇಖಕರು ನಾಟಕದಲ್ಲಿ ವಿವರವಾಗಿ ವ್ಯಕ್ತಪಡಿಸಿದ್ದಾರೆ.

ಹಿಂದುಗಳೇ ಶ್ರೇಷ್ಠರು, ಮುಸ್ಲಿಂರು ದುಷ್ಟರು ಎನ್ನುವುದನ್ನು ಈ ಮುಂದಿನ ಪ್ರಸಂಗದ ಮೂಲಕ ನಿರೂಪಿಸಿದ್ದಾರೆ. "ತುರುಷ್ಕರ ಸುದ್ದಿ ನಿಮಗೆ ತಿಳಿಯದು. ಅಯ್ಯೋ ಮೂರ್ಖರೆ, ಅವರು ಧನಲೋಭ, ರಾಜ್ಯಲೋಭಗಳಿಂದ ಮಾತ್ರವೇ ಬರತಕ್ಕವರಲ್ಲ. ವೇದ ಶಾಸ್ತ್ರಗಳನ್ನು ನಿರ್ನಾಮ ಮಾಡಬೇಕೆಂಬುದೇ ಅವರ ಪ್ರತಿಜ್ಞೆ ಇದಕ್ಕಾಗಿ ಅವರು ಎಷ್ಟೋ ಹಳ್ಳಿ, ಪಟ್ಟಣಗಳನ್ನು ಕೊಳ್ಳೆ ಹೊಡೆದು, ಮಠ ಮಂದಿರಗಳನ್ನು ಧ್ವಂಸ ಮಾಡಿ, ಸ್ತ್ರೀ ಶಿಶುಗಳನ್ನು ಕೊಂದು, ಜಾತಿ ನೀತಿಗಳನ್ನು ಹಾಳು ಮಾಡಿದವರೆಂದು ನೀವು ಕೇಳಿಲ್ಲವೇ ? ಅವರು ಋಷಿ ಮತಕ್ಕೆ ರಾಕ್ಷಸ ಸ್ವರೂಪರು; ಶ್ರುತಿ ಸ್ಮೃತಿಗಳಿಗೆ ಮೃತ್ಯುಪ್ರಾಯರು ನಾವು ಅವರನ್ನಿದುರಿಸಿ ನಿಂತು, ಧೈರ್ಯದಿಂದ ಕಾದಿ, ದಿವ್ಯದೇಶವನ್ನು ಕಾಪಾಡಿದರೆ ಆಗ ನಮ್ಮ ಭಕ್ತಿ ನಿಜವೆನಿಸುವುದು."[೧೦೭]

ಲೇಖಕರು ನಾವು ಮುಖ್ಯವಾಗಿ ಕಾಪಾಡಿಕೊಳ್ಳಬೇಕಾಗಿದದ್ದು ಧರ್ಮ. ಏಕೆಂದರೆ "ಧರ್ಮೋ ರಕ್ಷತಿ ರಕ್ಷಿತಾ" ಎನ್ನುವಂತೆ ನಾವು ಧರ್ಮವನ್ನು ಕಾಪಾಡಿದರೆ, ಅದು ನಮ್ಮನ್ನು ಕಾಯಬಲ್ಲದು ಎನ್ನುವ ಅಂಶ ಇಲ್ಲಿ ಗೋಚರವಾಗುತ್ತದೆ. ಮೊದಲು ಧರ್ಮ ಅನಂತರ ರಾಜ್ಯ ಅಥವಾ ದೇಶ. ಅದಕ್ಕಾಗಿ ಧರ್ಮದ ರಕ್ಷಣೆಯೇ ನಮ್ಮ ಮುಖ್ಯ ಧ್ಯೇಯ. ಆ ಧ್ಯೇಯದೊಂದಿಗೆ ನಾವು ಮುನ್ನುಗ್ಗಬೇಕು. ಅಂದರೆ ಧರ್ಮಕ್ಕೆ ಯಾರಿಂದ ಆಪತ್ತು ಬರಲಿದೆಯೋ ಅವರನ್ನು ಎದುರಿಸಿ ನಿಲ್ಲಬೇಕು. ಆಗ ಮಾತ್ರ ನಾವು ಧರ್ಮವನ್ನು ಕಾಪಾಡಿಕೊಳ್ಳುವುದರ ಜೊತೆಗೆ ನಮ್ಮತನವನ್ನು ಉಳಿಸಿಕೊಳ್ಳಬಹುದು ಹಾಗೂ ಪಾರಂಪರಿಕವಾಗಿ ಬಂದ ಸನಾತನದ ಹೆಗ್ಗುರುತನ್ನು ಮುಂದುವರಿಸಬಹುದು ಎನ್ನುವ ಅಂಶಗಳ ಕಡೆಗೆ ಗಮನ ಹರಿಸಿದ್ದಾರೆ.

ಒಂದು ನಾಡಿನ ಸಂಸ್ಕೃತಿಯ ಮುಂದುವರಿಕೆಗೆ ಆ ನಾಡಿನಲ್ಲಿ ರಚಿತವಾದ ಧರ್ಮ ಗ್ರಂಥಗಳು, ವ್ಯಾಕರಣ ಶಾಸ್ತ್ರಗಳು ಬಹುಮುಖ್ಯವಾದವು. ಅವುಗಳನ್ನು ಉಳಿಸುವುದಷ್ಟೇ ಅಲ್ಲಿ ಮುಖ್ಯ ಅಲ್ಲ, ಅದನ್ನು ಮುಂದಿನ ತಲೆಮಾರಿಗೆ ಸಾಗಿಸುವವರನ್ನೂ ರಕ್ಷಿಸಬೇಕು. ವೈದಿಕರನ್ನು ಕಾಪಾಡುವ ಮೂಲಕ ಧರ್ಮವನ್ನು ಕಾಪಾಡುವ ಹಾಗೂ ಅನ್ಯರಿಂದ ಆಪತ್ತಿಗೀಡಾಗುವ ಧರ್ಮದ ಅನನ್ಯತೆಯನ್ನು ಕಾಯುವ ಕೆಲಸ ಮಾಡಬೇಕಾಗಿದೆ. ಅಂತಹ ಕೆಲಸವನ್ನು ವಿದ್ಯಾರಣ್ಯರು ಮಾಡಿದ್ದಾರೆ. ಅದರಂತೆ ಕನ್ನಡಿಗರು ಈ ನಾಡಿನ ಉಳಿವಿಗೆ ಪಣತೊಡಬೇಕೆಂಬುದನ್ನು ನಾಟಕದಲ್ಲಿ ವಿಶೇಷವಾಗಿ ಪ್ರಸ್ತಾಪಿಸಲಾಗಿದೆ.

ಲೇಖಕರಾದ ವೆಂಕಟಸುಬ್ಬಯ್ಯನವರು "ಅದೊಂದು ಗಂಭೀರವಾದ ಗದ್ಯ ನಾಟಕ. ಹಂಪಿಯ ರಾಜಧಾನಿಯಾಗಿ ವಿಜಯನಗರವು ಸ್ಥಾಪಿತವಾಗಿ ಕನ್ನಡ ಭುವನೇಶ್ವರಿ ವೈಭವದಿಂದ ಬಾಳುವ ಕಾಲದ ಚಿತ್ರ. ಆದರೆ ಇದೂ ಕೂಡ ರಂಗದ ಮೇಲೆ ಪ್ರಕಾಶಿಸಲು ಸಮರ್ಥವಾಗಿಲ್ಲ. ಓದಲು ಮಾತ್ರ ಬಹಳ ಪ್ರಭಾವಯುತವಾಗಿ ಕಾಣುತ್ತದೆ. ಈ ನಾಟಕದಲ್ಲಿ ಕನ್ನಡ ಸಂಸ್ಕೃತಿಯ ಉದ್ಧಾರಕ್ಕೆ ಬೇಕಾದ ಎಲ್ಲ ತಿಳುವಳಿಕೆಯೂ ನಿರ್ದೇಶಿತವಾಗಿದೆ"[೧೦೮] ಎಂದು ಈ ನಾಟಕದ ಕುರಿತು ಹೇಳಿರುವುದು ಸಮಂಜಸವಾಗಿದೆ.

ಏ) ಎಂ.ಆರ್.ಶ್ರೀಯವರ ನಾಗರಿಕ(೧೯೩೦)

ಎಂ.ಅರ್.ಶ್ರೀಯವರಿಂದ ರಚಿತವಾದ ಈ ನಾಟಕವು, ನಾಶ ಹೊಂದಿದ ವಿಜಯನಗರದ ಕುರಿತು ತಿಳಿಸುತ್ತದೆ. ಇದು ವಿಜಯನಗರದ ವಾಸ್ತುಶಿಲ್ಪ (ಪಳೆಯುಳಿಕೆ)ವನ್ನು, ಅದರ ವೈಭವವನ್ನು, ವಿಜಯನಗರ ಗತಿಸಿದ ರೀತಿಯನ್ನು ತಿಳಿಸುವ ಚಿಕ್ಕ ರೂಪಕ ಶೈಲಿಯ ನಾಟಕ.

ಎಂ.ಆರ್.ಶ್ರೀಯವರು ಹಂಪಿಯ ಯಾತ್ರೆಯನ್ನು ಕೈಗೊಂಡು ಅಲ್ಲಿ ಇಸ್ಲಾಂ ಅರಸರ ದಾಳಿಯಿಂದಾಗಿ ನಾಶ ಹೊಂದಿದ ಭಗ್ನಾವಸ್ಥೆಯಲ್ಲಿನ ಸ್ಮಾರಕಗಳನ್ನು ನೋಡಿ ಬಂದ ನಂತರ ಆರುನೂರು ವರ್ಷಗಳ ಹಿಂದೆ ಹುಟ್ಟಿ, ವೈಭವಯುತವಾಗಿ ಮೆರೆದ ಸಾಮ್ರಾಜ್ಯವನ್ನು ವಾಸ್ತವಕ್ಕೆ ತಂದ ನಿರೂಪಣೆ ಈ ನಾಟಕದಲ್ಲಿ ರೂಪ ತಾಳಿದೆ. ಇಲ್ಲಿನ ನಾಗರಿಕ ಪಾತ್ರವು ಹಂಪಿಯಲ್ಲಿನ

ಕಲ್ಲು ಮೂರ್ತಿಗಳ ಮುಂದೆ ನಿಂತು ವ್ಯಕ್ತಪಡಿಸುವ ಅಭಿಪ್ರಾಯಗಳು ಒಂದು ಕಾಲದಲ್ಲಿ ವೀರಧೀರರಿಂದ ಬೆಳಗಿದ ಈ ನಾಡು, ಇಂದು ಕೇವಲ ಕಲ್ಲುಮೂರ್ತಿಗಳನ್ನು ಪೂಜಿಸುವ ಸ್ಥಿತಿಗೆ ಬಂದಿದೆ. ಕೇವಲ ಮೂರ್ತಿಗಳನ್ನು ಪೂಜಿಸಿದರೆ ನಮ್ಮ ಹಿಂದಿನ ವೈಭವವು ಮರುಕಳಿಸಲಾರದು. ಅದನ್ನು ಪಡೆಯಲಿಕ್ಕೆ ವಿಜಯನಗರವನ್ನು ಸ್ಥಾಪಿಸಿದ ವಿದ್ಯಾರಣ್ಯರಂತವರ ಮಾರ್ಗದರ್ಶನ ಮುಖ್ಯ. ಜೊತೆಗೆ ಇಲ್ಲಿ ನಾವೆಲ್ಲರೂ ನಮ್ಮ ಜೀವನದ ಧ್ಯೇಯವು ರಾಷ್ಟ್ರಕ್ಕಾಗಿ ಎಂದು ತಿಳಿದಾಗ ಮಾತ್ರ ನಾವಿಂದು ಇಟ್ಟುಕೊಂಡಿರುವ (ಲೇಖಕರು ಈ ನಾಟಕ ರಚಿಸಿದ ಕಾಲಘಟ್ಟದ ಸಂದರ್ಭದಲ್ಲಿದ್ದ ನಾಡಿನ ಏಕೀಕರಣ ಮತ್ತು ರಾಷ್ಟ್ರ ನಿರ್ಮಾಣದ ಉದ್ದೇಶ) ಧ್ಯೇಯವನ್ನು ಸಾಧಿಸಲು ಸಾಧ್ಯ ಎನ್ನುವುದನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ.

ಪರತಂತ್ರದ ಆಳ್ವಿಕೆಗೆ ಸಿಕ್ಕು ನಮ್ಮ ಬದುಕು ನರಕ ಯಾತನೆಯಾಗಿದೆ. ಇದರಿಂದ ನಾವು ಅನೇಕ ಕಷ್ಟಗಳನ್ನು ಅನುಭವಿಸುತ್ತಿದ್ದೇವೆ ಎನ್ನುವುದನ್ನು ಈ ಮುಂದಿನ ಮಾತುಗಳ ಮೂಲಕ ನಾಟಕಕಾರರು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಧರ್ಮದ ಹೆಸರಿನಲ್ಲಿ ಪೂಜೆ-ಪುನಸ್ಕಾರ, ಯಜ್ಞ-ಯಾಗ, ಜಪ-ತಪಾದಿಗಳನ್ನು ಮಾಡುತ್ತಿರುವುದಾದರೂ ಯಾತಕ್ಕಾಗಿ? ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆಯ ಉಪಸ್ಕರಿಸುವುದಕ್ಕಾಗಿಯೋ ಸರ್ವರಲ್ಲಿ ದೇವನು ವಾಸಿಸುತ್ತಾನೆಂದು ಹೇಳುತ್ತಿರುವುದು. ಇವೆಲ್ಲವುಗಳಿಂದ ನಾಡು ಉಳಿಯುವುದಾದಲ್ಲಿ ಏಕೆ ಅನ್ಯರಿಂದ ನಮ್ಮ ಆರ್ಯ ಧರ್ಮಕ್ಕೆ ಹೊಡೆತ ಬಿತ್ತು? ಸತ್ಯದ ಅರಿವನ್ನು ತಿಳಿದು ಧರ್ಮದ ಮಾರ್ಗದಲ್ಲಿ ನಡೆದ ನಮ್ಮ ಸಾಮ್ರಾಜ್ಯಗಳೇಕೆ ನಾಶವಾದವು? ಸುಂದರದೇಗುಲಗಳನ್ನು ನಿರ್ಮಿಸಿ, ನಿತ್ಯ ದೀಪೋತ್ಸವ ಮಾಡಿದ ಮೂರ್ತಿಗಳೇಕೆ ನಮ್ಮವರನ್ನು ಕಾಯಲಿಲ್ಲ? ಕೇವಲ ದೇವರು ನಮ್ಮಲ್ಲಿದ್ದಾನೆಂದು ಭಾವಿಸಿ ಅವನ ಜಪದಲ್ಲಿಯೇ ಕಾಲ ಕಳೆದರೆ ಏನು ಉಪಯೋಗ? ಅದಕ್ಕಾಗಿ ನಾವು ಮಾಡಬೇಕಾದ್ದೇನು ಎನ್ನುವುದನ್ನು ನಮ್ಮ ಸ್ವಪ್ರಯತ್ನದಿಂದಲೇ ನೆರವೇರಿಸಿಕೊಳ್ಳಬೇಕು. ದೇವರ ಮೂರ್ತಿ ಇಲ್ಲಿ ಮುಖ್ಯವಲ್ಲ. ನಮಗೆ ಬೇಕಾದುದು ವಿದ್ಯಾರಣ್ಯರಂಥ ಸಾಕಾರ ಮೂರ್ತಿ. ಹೇಗೆ ಒಂದು ಮಹಾಸಾಮ್ರಾಜ್ಯಕ್ಕೆ ಆ ಮಹಾಶಯ ಅಡಿಗಲ್ಲಾಕಿಸಿದನೋ ಅಂತವರು ನಮಗೆ ಬೇಕು. ನಾವು ಕೂಡ ಹರಿಹರ ಬುಕ್ಕರಂತಾಗಬೇಕು. ಅಂದಾಗ ಮಾತ್ರ ನಮ್ಮ ಸ್ವಾಭಿಮಾನದ, ಸ್ವಪ್ರತಿಷ್ಠೆಯ ನಾಡನ್ನು ಕಟ್ಟಿಕೊಳ್ಳಲು ಸಾಧ್ಯ ಎನ್ನುವ ಅಂಶಗಳು ಈ ನಾಟಕದಲ್ಲಿ ವ್ಯಕ್ತವಾಗಿವೆ.

ನಾಗರಿಕನಿಗೆ ವಿದ್ಯಾರಣ್ಯರ ದರ್ಶನವಾಗಿ ಅವರು ಐಂದ್ರಿಜಾಲಿಕವಾಗಿ ವಿಜಯನಗರದ ಹಿಂದಿನ ಘಟನೆಗಳನ್ನು ವಿಜಯನಗರದಲ್ಲಿನ ಮಹಾನವಮಿಯ ಸನ್ನಿವೇಶ, ಅರಸರಿಗೆ ಸಾಮಂತರು ಕಪ್ಪ ಕಾಣಿಕೆಗಳನ್ನು ಒಪ್ಪಿಸುತ್ತಿರುವ ದೃಶ್ಯ, ಅರಮನೆಯ ರಾಣಿಯರ ವೈಭವ, ರಾಮರಾಯನು ಯುದ್ಧಕ್ಕೆ ಹೋಗುವ ದೃಶ್ಯ, ತಿರುಮಲಾಂಬೆ ರಾಮರಾಯನ ವಿಜಯಕ್ಕಾಗಿ ಪೂಜೆ ಸಲ್ಲಿಸುತ್ತಿರುವುದನ್ನು ತೋರಿಸುತ್ತಾರೆ. ಯುದ್ಧಕ್ಕೆ ಹೊರಟ ವಿಜಯನಗರ ಸೈನ್ಯದಲ್ಲಿ ನಾಗರಿಕನು ತಾನೂ ಸೈನ್ಯದೊಂದಿಗೆ ಹೋಗುತ್ತಿರುವಂತೆ ಪರಿಭಾವಿಸುವ ಅವನ ಮನಃಸ್ಥಿತಿ,

ಹಿಂದಿನವರಂತೆ ನಾವು ಇಂದು ನಮ್ಮನ್ನಾವರಿಸಿರುವ ಪರಕೀಯತೆಯಿಂದ ಕಳಚಿಕೊಳ್ಳಲು ಹೋರಾಟಕ್ಕೆ ಸಿದ್ಧರಾಗಬೇಕು ಎಂದು ನಾಟಕಕಾರರು ಕರೆ ನೀಡಿದ್ದಾರೆ. ಹಾಗೆಯೇ ವಿದ್ಯಾರಣ್ಯರು ಇಲ್ಲಿ ಯಾವುದೂ ಶಾಶ್ವತವಲ್ಲ. ಇಂದು ಇದ್ದುದು ನಾಳೆ ನಾಶವಾಗುವುದು. ಅದೆಲ್ಲಾ ಮಾಯೆಯಿಂದಾಗುವ ಕಾರ್ಯ. ಆದರೆ ಇರುವುದು ಮಾತ್ರ ಹಾಗೆಯೇ ಇರುತ್ತದೆ. ಅದನ್ನು ನಾವು ಪಡೆದುಕೊಳ್ಳಬೇಕಷ್ಟೆ ಎಂದು ವಿವಿಧ ಪಾತ್ರಗಳ ಮೂಲಕ ನಾಟಕಕಾರರು ಪ್ರಸ್ತಾಪಿಸಿದ್ದಾರೆ.

ಈ ನಾಟಕದಲ್ಲಿನ ನಾಗರಿಕನ ಹುಡುಕಾಟವು ತನ್ನ ಅಸ್ಮಿತೆಯ ಹುಡುಕಾಟವಾಗಿ ಮೂಡಿಬಂದಿದೆ. ವಿಜಯನಗರ ಸಾಮ್ರಾಜ್ಯವು ಹುಟ್ಟಿ ಬೆಳೆದು, ಅದು ಪಡೆದ ಮನ್ನಣೆಯನ್ನು ಸ್ಮರಿಸುತ್ತಾ, ವಾಸ್ತವ ಸಂದರ್ಭದಲ್ಲಿ ನಮ್ಮ ಮುಂದಿರುವ ಸಮಸ್ಯೆಗಳನ್ನು ಎದುರಿಸಿ ನಾವು ಕಟ್ಟಿಕೊಳ್ಳಬೇಕಾದ ನಾಡಿನ ಪೂರ್ವ ತಯಾರಿಗಾಗಿ ಸಿದ್ಧಪಡಿಸಿಕೊಳ್ಳಬೇಕಾದ ಅಂಶಗಳತ್ತ ನಾಟಕಕಾರರು ಗಮನಹರಿಸಿರುವುದು ವಿಶೇಷವಾಗಿದೆ. ಈ ಮೇಲಿನ ನಾಟಕಗಳಲ್ಲಿ ವಿಜಯನಗರ ಅಥವಾ ಹಂಪಿಯನ್ನು ವಸ್ತುವನ್ನಾಗಿ ಇಟ್ಟುಕೊಂಡು ಪಾತ್ರಗಳ ಮೂಲಕ, ಸ್ಥಳಗಳ ಮೂಲಕ, ಮುಖ್ಯವಾದ ಸನ್ನಿವೇಶಗಳ ಮುಖೇನ ವಿಶ್ಲೇಷಿಸಲಾಗಿದೆ. ಕನ್ನಡ ನಾಡು ನುಡಿ ಚಿಂತನೆ ಸ್ವರೂಪ ಇಲ್ಲಿ ಕಂಡುಬಂದಿದೆ.

೪.೧.೩.೪. ಪ್ರವಾಸ ಸಾಹಿತ್ಯ

ಆಧುನಿಕ ಸಾಹಿತ್ಯ ಪ್ರಕಾರದಲ್ಲಿ ಪ್ರವಾಸ ಕಥನ ಅಥವಾ ಪ್ರವಾಸಿ ಸಾಹಿತ್ಯ ಮಹತ್ವದ್ದಾಗಿದೆ. ಈ ಹಿನ್ನೆಲೆಯಲ್ಲಿ ಲೇಖಕರು ತಾವು ಸ್ವತಃ ಪ್ರವಾಸ ಕೈಗೊಂಡಾಗ ಅವರಿಗೆ ಉಂಟಾದ ಅನುಭವಗಳನ್ನು ಬರವಣಿಗೆಯ ಮೂಲಕ ಹರೆದಿಡುವ ಪ್ರಯತ್ನ ಮಹತ್ತರವಾದುದು. ಇಲ್ಲಿ ಕವಿಯ ಮನೋಧರ್ಮ. ಉದ್ದೇಶ ಹಾಗೂ ಸಾಹಿತ್ಯ ಚಾರಿತ್ರಿಕ, ಧಾರ್ಮಿಕ ಸಾಂಸ್ಕೃತಿಕ ವಿಷಯಗಳ ಸಮ್ಮಿಲನವನ್ನು ಕಂಡಿರಿಸಿರುತ್ತಾರೆ. ಇಂತಹ ಪ್ರವಾಸ ಕಥನ ಆ ಪ್ರದೇಶದ ಸಾಧನೆ, ವೇದನೆಗಳ ಮೊತ್ತವನ್ನು ಹೃದಯ ಮನಕ್ಕೆ ಒದಗಿಸುವಲ್ಲಿ ಸಾರ್ಥಕತೆಯನ್ನು ಕಂಡುಕೊಳ್ಳುತ್ತಾರೆ. ಕನ್ನಡದ ಪ್ರಕಟಿತ ಪ್ರವಾಸ ಕಥನಗಳ ಪೈಕಿ ೧೮೯೦ರಲ್ಲಿ ಪ್ರಕಟಗೊಂಡ 'ದಕ್ಷಿಣಯಾತ್ರಾ ಚರಿತ್ರೆ' ಎಂಬುದು ಪ್ರವಾಸಿ ಕೈಪಿಡಿ ಯಾವುದಿರಬಹುದು? ಮೇಲೆಯೇ ಹೇಳಿದಂತೆ, ವಿ.ಸೀ. ಅವರ 'ಪಂಪಾಯಾತ್ರೆ'ಯೇ ಪ್ರಥಮ ಕೃತಿಯೆಂಬ ಅಭಿಪ್ರಾಯವಿದೆ. ಇದನ್ನು ರಚಿಸಿದವನು ಉತ್ತರ ಕನ್ನಡ ಜಿಲ್ಲೆಗೆ ಸೇರಿದ ಹಾಗೂ 'ಧೀರ ಪತ್ರಿಕೋದ್ಯಮಿ', 'ಆದ್ಯ ಸಾಮಾಜಿಕ ನಾಟಕಕಾರ'ನೆನಿಸಿದ ಕರ್ಕಿ ವೆಂಕಟರಮಣಶಾಸ್ತ್ರಿ ಸೂರಿ (ಸು. ೧೮೫೨–೧೮೫೨). ಇದು ಈತನ ಮೊತ್ತಮೊದಲ ಕೃತಿಯೂ ಹೌದು. ಈ ಕೃತಿಯಲ್ಲಿ ಉಡುಪಿಯಿಂದ ಗುರುವಾಯೂರುಗಳವರೆಗಿನ ಕ್ಷೇತ್ರಗಳನ್ನು ಒಂದೋ ಎರಡೋ ಪದ್ಯಗಳಲ್ಲಿ ವರ್ಣಿಸಲಾಗಿದೆ. ೩೭ ಪದ್ಯಗಳ, ಅಂಗೈಯಗಲದ ಪುಸ್ತಕವಿದು.ಆದರೆ ವಿಮರ್ಶಕರು ವಿ.ಸೀ.(ವಿ.ಸೀತಾರಾಮಯ್ಯ) ಅವರ 'ಪಂಪಾಯಾತ್ರೆ'ಯನ್ನೇ ಕನ್ನಡದ ಮೊತ್ತಮೊದಲ ಪ್ರವಾಸಕಥನವೆಂದು ಭಾವಿಸಿರುವುದುಂಟು. ಇದು ೨೦ನೇ ಶತಮಾನಕ್ಕಷ್ಟೇ ಸಂಬಂಧಿಸಿದ ಹೇಳಿಕೆಯೆಂದರೂ ಕನ್ನಡದ ಪ್ರವಾಸ ಸಾಹಿತ್ಯ ಕೃತಿಗಳ ಚರಿತ್ರೆಯನ್ನು ೧೯ನೇ ಶತಮಾನದ

ಕೊನೆಯ ದಶಕದಿಂದಲೇ ಗುರುತಿಸುವ ಪ್ರಯತ್ನ ನಡೆದಿದೆ. ಇಂಥ ಚರಿತ್ರೆಯಲ್ಲಿ ಸ್ಥೂಲವಾಗಿ ಮೂರು ಘಟ್ಟಗಳಲ್ಲಿ ವಿಂಗಡಿಸಿರುವ ವಿಮರ್ಶಕರು, ಆರಂಭದಿಂದ ವಿ.ಸೀ. ಅವರ ಕೃತಿ ಪ್ರಕಟವಾಗುವವರೆಗಿನ ಕಾಲಾವಧಿಯನ್ನು ಮೊದಲನೇ ಘಟ್ಟವೆಂತಲೂ ವಿ.ಸೀ. ಅವರ ನಂತರ ಸುಮಾರು ೧೯೫೦ರ ವರೆಗಿನ ಕಾಲಾವಧಿಯನ್ನು ಎರಡನೇ ಘಟ್ಟವೆಂತಲೂ ಆ ನಂತರದ್ದು ಮೂರನೇ ಘಟ್ಟವೆಂತಲೂ ಕರೆದಿದ್ದಾರೆ. ಮೊದಲನೇ ಘಟ್ಟದಲ್ಲಿ ಕಂಡು ಬರುವ ಕೃತಿಕಾರರ ಕರ್ಕಿ ವೆಂಕಟರಮಣಶಾಸ್ತ್ರಿ ಸೂರಿ, ಜೆ.ಕೃಷ್ಣಮೂರ್ತಿ, ಕರವೀರಪ್ಪ ಅಂದಾನೆಪ್ಪ ಕುಲಕರ್ಣಿ ಇಂಥವರು. ಸದ್ಯಕ್ಕಂತೂ ಕನ್ನಡದ ಮಟ್ಟಿಗೆ ಹಾಗೂ ವಿಮರ್ಶಕರ ಮಟ್ಟಿಗೆ, ಕರ್ಕಿ ವೆಂಕಟರಮಣಶಾಸ್ತ್ರಿ ಸೂರಿಯೇ ಪ್ರಥಮ ಪ್ರವಾಸಿ ಸಾಹಿತ್ಯ ಕೃತಿಯ ಕರ್ತೃ. ನಂತರ ಶ್ರೀರಾಮಸ್ವಾಮಿ ಅಯ್ಯಂಗಾರ್ ಎಂಬುವರು ೧೯೧೬ರಲ್ಲಿ ಬರೆದ 'ಜೀರ್ಣ ವಿಜಯನಗರ ದರ್ಶನ' ಎಂಬುದು ಆಧುನಿಕ ವಿದ್ವಾಂಸ ಲೇಖಕರೊಬ್ಬರು ಬರೆದ ಮೊದಲ ಪ್ರವಾಸಿ ಗ್ರಂಥವಾಗಿದೆ. ಅಲ್ಲದೆ ೧೯೩೧ರಲ್ಲಿ ಬೆಳಗಾವಿಯ ಶ್ರೀ ಪಿ.ಕುಲಕರ್ಣಿ ಅವರು ಬರೆದ 'ಹಾಳು ಹಂಪೆ' ಎಂಬ ಚಿಕ್ಕ ಪುಸ್ತಕ ಮತ್ತೊಂದು ಪ್ರಮುಖ ಕೃತಿಯಾಗಿದೆ. ಈ ಎರಡೂ ಗ್ರಂಥಗಳು 'ಹಾಳು ಹಂಪಿ'ಯನ್ನೂ ಅದರ ಹಿಂದಿನ ಗತವೈಭವವನ್ನೂ ಹೇಳುವ ಗ್ರಂಥಗಳಾಗಿವೆ. ಆನಂತರ ೧೯೩೭ರಲ್ಲಿ ಪ್ರಕಟವಾದ ವಿ.ಸೀ. ಅವರ 'ಪಂಪಾಯಾತ್ರೆ' ಆಧುನಿಕ ಪ್ರವಾಸ ಕಥನಗಳಲ್ಲಿ ಬಹು ಮುಖ್ಯವಾದುದು. ಈ ಕೃತಿಯಲ್ಲಿರುವ ಇತಿಹಾಸದ ನೋವು, ವರ್ತಮಾನದ ಸಂಕಟಗಳು ನಮ್ಮ ಮನಸ್ಸನ್ನು ಸೆಳೆಯುತ್ತವೆ. ಸಾಹಿತ್ಯಿಕ ದೃಷ್ಟಿಯಿಂದ, ಪ್ರವಾಸ ಕಥನದ ವಿಶಿಷ್ಟತೆಯಿಂದ, ಈ ಕೃತಿಗೆ ಅನನ್ಯವಾದ ಸ್ಥಾನವಿದೆ. ಅಂತಹ ಪ್ರವಾಸ ಕಥನವನ್ನು ವಿ.ಸೀತಾರಾಮಯ್ಯನವರು ಕನ್ನಡ ಪ್ರವಾಸ ಕಥನದಲ್ಲಿ ಗುರುತಿಸಿಕೊಂಡಿದ್ದಾರೆ. ಅವರ 'ಪಂಪಾಯಾತ್ರೆ' ವಿಜಯನಗರ ಸಾಮ್ರಾಜ್ಯದ ಬಗ್ಗೆ ಕುರಿತದ್ದಾಗಿದೆ.[೧೯]

ಅ. ವಿ.ಸೀತಾರಾಮಯ್ಯ (ವಿ.ಸೀ.) ಅವರ ಪಂಪಾಯಾತ್ರೆ(೧೯೨೬)

ಪಡೆದಿರುವ ಹಂಪಿ ಸ್ಮಾರಕಗಳನ್ನು ಕುರಿತು ಕನ್ನಡದಲ್ಲಿ ಪ್ರಥಮ ಪ್ರಕಟಿತ ಹಂಪಿ ಕುರಿತು ಮೊತ್ತ ಮೊದಲ ಪ್ರವಾಸಕಥನವೆಂದು ಸಾಮಾನ್ಯವಾಗಿ ಎಲ್ಲ ವಿಮರ್ಶಕರು ಎಲ್ಲ ವಿಮರ್ಶಕರು ಹೇಳುತ್ತಾ ಬಂದಿದ್ದಾರೆ. ಈ ಕೃತಿಯು ಹಂಪಿ ಮತ್ತು ಕರ್ನಾಟಕಯಾತ್ರೆಯ ದಿಕ್ಕಿನಲ್ಲಿ ಮೊದಲನೇ ಕೃತಿ ಮಾತ್ರವಲ್ಲದೆ, ಕರ್ನಾಟಕದಲ್ಲಿ ಪ್ರವಾಸ ಸಾಹಿತ್ಯ ಪ್ರಾರಂಭಗೊಂಡ ಕಾಲಕ್ಕೆ ಹೆಸರಿಸಬಹುದಾದ ಬಹುದೊಡ್ಡ ಕೃತಿಯೆಂತಲೂ ಪರಿಗಣಿಸಲ್ಪಟ್ಟಿದೆ. ಈ ಕೃತಿಯ ಶೀರ್ಷಿಕೆಯೇ ಸೂಚಿಸುವಂತೆ, ಇದು ಕೇವಲ ಹಂಪಿ ಮತ್ತು ಪರಿಸರ ಕುರಿತು ವರ್ಣನಾತ್ಮಕ ವಿವರಗಳುಳ್ಳದ್ದು. ಇದು ಈಗಾಗಲೇ ದೃಢಪಟ್ಟಿರುವ ಸಂಗತಿಯೂ ಹೌದು. ಇದು ೧೯೨೬ರಲ್ಲಿ ಕನ್ನಡದಲ್ಲಿ ಪ್ರಕಟಗೊಳ್ಳುವ ವೇಳೆಗೆ, ಹಂಪಿ ವೀಕ್ಷಣೆಗೆಂದು ಬರುತ್ತಿದ್ದ ಪ್ರಜ್ಞಾವಂತ ಪ್ರವಾಸಿಗರು ಅವಲಂಬಿಸಿದ್ದು ಎ.ಹೆಚ್.ಲಾಂಗ್‌ಹರ್ಸ್ಟ್ ಅವರ 'ಹಂಪಿ ರೂಯಿನ್ಸ್' ಎಂಬ ಆಂಗ್ಲಭಾಷಾ ಕೈಪಿಡಿಯನ್ನು. ಇದು 'ಪಂಪಾಯಾತ್ರೆ' ಪ್ರಕಟಗೊಳ್ಳುವ ಒಂಬತ್ತು ವರುಷ ಮೊದಲು, ಅಂದರೆ ೧೯೧೭ರಲ್ಲಿ ಕೋಲ್ಕತ್ತಾದಿಂದ ಪ್ರಕಟಗೊಂಡಂಥಾದ್ದು. ವಿ.ಸೀ. ಹಾಗೂ ಅವರ ತಂಡದವರು ಹಂಪಿ ವೀಕ್ಷಣೆಗೆ ಇದೇ ಕೃತಿಯನ್ನು

ಅವಲಂಬಿಸಿದ್ದಂತೆ ತೋರುತ್ತದೆ. 'ಹಂಪೆಯ ಹಾಳುಗಳ ಪುಸ್ತಕವೊಂದನ್ನು ಕೈಲಿ ಹಿಡಿದುಕೊಂಡು ಹೊರಟ' ಸೂಚನೆಯನ್ನು ತಮ್ಮ ಪ್ರವಾಸಕಥನದಲ್ಲಿ ಕೊಡುತ್ತಾರೆ ವಿ.ಸೀ. ಇಲ್ಲಿ ನಾವು ಗಮನಿಸಬೇಕಾದ ಸಂಗತಿಯೆಂದರೆ, ವಿ.ಸೀ. ಅವರ 'ಪಂಪಾಯಾತ್ರೆ' ಕೃತಿಯು ಪ್ರವಾಸಿ ಕೈಪಿಡಿಯಂತಿರದೆ ಪ್ರವಾಸಕಥನ ಸ್ವರೂಪದಲ್ಲಿದೆ ಹಾಗೂ ಪ್ರವಾಸ ಸಾಹಿತ್ಯ ಪ್ರಕಾರಕ್ಕೆ ಸಂಬಂಧಿಸಿದೆ.

ವಿ.ಸೀ. ಅವರು ಅಪರೂಪದ ವಿದ್ವಾಂಸರು ಕವಿ, ನಾಟಕಕಾರ, ವಿಮರ್ಶಕ, ಪ್ರಬಂಧಕಾರ ಹೀಗೆ ಅವರದು ಚದುರಿದ ಪ್ರತಿಭೆ, ಸೂಕ್ಷ್ಮ ಸಂವೇದನೆಯ ವಿ.ಸೀತಾರಾಮಯ್ಯನವರು ತಮ್ಮನ್ನು ಮುಕ್ತವಾಗಿ ತೆರೆದುಕೊಂಡಿದ್ದ ಅವರು ಹಲವು ಕ್ಷೇತ್ರದಲ್ಲಿ ಆಸಕ್ತಿ ಹೊಂದಿದವರಾಗಿದ್ದರು. ಅವರು ವಿಜಯನಗರ ಸಾಮ್ರಾಜ್ಯದ ಬಗ್ಗೆ ಒಂದು ಪ್ರವಾಸ ಕಥನವನ್ನು ರಚಿಸಿದ್ದಾರೆ. ಪಂಪಾಕ್ಷೇತ್ರವನ್ನು ಅವರು ವೀಕ್ಷಿಸಿದ್ದರಿಂದ "ಪಂಪಾಯಾತ್ರೆ" ಎಂಬ ಶಿರೋನಾಮೆಯಲ್ಲಿ ಪ್ರವಾಸ ಕಥನವನ್ನು ರಚಿಸಿ ಅದರಲ್ಲಿ ಹಂಪೆ ಕ್ಷೇತ್ರದ ಕಲೆ, ಶಿಲ್ಪಕಲೆ, ಸಾಹಿತ್ಯದ ಹಿನ್ನೆಲೆಯನ್ನು ವಿಶ್ಲೇಷಿಸಿದ್ದಾರೆ.

೧೯೨೫ರಲ್ಲಿ ವಿ.ಸೀ.ಯವರು ತಮ್ಮ ಹಿರಿಯ ಲೇಖಕರೊಂದಿಗೆ ಬೆಳಗಾವಿ ಸಾಹಿತ್ಯ ಸಮ್ಮೇಳನದಿಂದ ಹಿಂತಿರುಗಿ ಬರುವಾಗ ಹಂಪೆಯನ್ನು ಸಂದರ್ಶಿಸಿದ ತಮ್ಮ ಒಂದು ದಿನದ ಅನುಭವವನ್ನು ಈ ಕೃತಿಯಲ್ಲಿ ಅವರು ವಿವರಿಸಿದ್ದಾರೆ. ಅವರು ಈ ಕಥನವನ್ನು ರಚಿಸುವ ಸಮಯದಲ್ಲಿ ಅವರಿಗೆ ೨೭ ವರ್ಷಗಳು ಮಾತ್ರ. ಆಗ ಅವರೊಂದಿಗೆ ಹಿರಿಯ ಲೇಖಕ ಮಿತ್ರರು, ಹಿರಿಯ ವಿದ್ವಾಂಸರು ಇದ್ದರು. ಅವರಲ್ಲಿ ಕವಿಗಳು ಆದ ಡಿ.ವಿ.ಗುಂಡಪ್ಪನವರು ಹಿರಿಯರಾದ ಬೆಳ್ಳಾವೆ ವೆಂಕಟನಾರಾಣಪ್ಪನವರು, ಟಿ.ಎಸ್.ವೆಂಕಣ್ಣಯ್ಯನವರು, ಎಂ.ಆರ್.ಶ್ರೀನಿವಾಸ ಮೂರ್ತಿಗಳು ಹಾಗೂ ವಿ.ಸೀತಾರಾಮಯ್ಯನವರು ಸಹ ಯಾತ್ರಿಕರಾಗಿದ್ದರಿಂದ ಈ ಪ್ರವಾಸಕಥನ ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ. ಅವರು ಇಲ್ಲಿನ ಸ್ಮಾರಕಗಳ ದುಸ್ಥಿತಿ, ಅವುಗಳಿಗೆ ಕಾರಣ ಮತ್ತು ಅವುಗಳ ಇತಿಹಾಸ, ಇಲ್ಲಿ ನೋಡಬಹುದಾದ ಪ್ರಮುಖ ಸ್ಥಳಗಳು ಮೊದಲಾದ ವಿವರಗಳನ್ನು ಈ ಕೃತಿಯಲ್ಲಿ ದಾಖಲಿಸಿದ್ದಾರೆ.[೧೧೦] ಅಲ್ಲದೆ ಇದೇ ಕೃತಿಯಲ್ಲಿ ಇತಿಹಾಸ, ಪುರಾಣಗಳ ನಡುವೆ ಅತ್ಯಂತ ಜೀವಂತವಾಗಿ ಚಿತ್ರಿತವಾಗಿರುವ ಪಾತ್ರ ಚೆನ್ನಯ್ಯ. ಈತ ಅವರಿಗೆ ಮಾರ್ಗದರ್ಶಿ; ಆಪ್ತಸ್ನೇಹಿತ. ಈ ಕಥನದಲ್ಲಿ ಬರುವ ಆಲೆಯಮನೆಯ ಚಿತ್ರ, ಚನ್ನಯ್ಯ ವಿಠಲಸ್ವಾಮಿಯ ಗುಡಿಯ ಬಾಗಿಲ ಜಗುಲಿಯ ಮೇಲೆ ಹುಳಿ ಮಾವಿನಕಾಯಿ ತಿನ್ನುತ್ತ ಅದನ್ನು ಕಪಿಗಳ ಜೊತೆ ಹಂಚಿಕೊಳ್ಳುವುದು, ಮಳೆಯ ಆರ್ಭಟದಲ್ಲಿ ಅವರು ಪಡುವ ಅವಸ್ಥೆ, ಕತ್ತಲಿನಲ್ಲಿ ಚನ್ನಯ್ಯ ಸೇದುತ್ತಿದ್ದ ಬೀಡಿಯ ಬೆಳಕೇ ಮಾರ್ಗ ತೋರಿಸುವ ಎಲ್ಲಾ ವಿವರಗಳು ಇಲ್ಲಿ ಅನಾವರಣವಾಗಿವೆ. ಈ ಕೃತಿಯನ್ನು ಒಂದು ಪ್ರವಾಸಕಥನವೆಂಬಂತೆ ನೋಡದೆ ಅದನ್ನು ಒಂದು ಸಾಂಸ್ಕೃತಿಕ ಪಠ್ಯವಾಗಿ ನೋಡಿದಾಗ ವಿ.ಸೀತಾರಾಮಯ್ಯನವರ ಪಂಪಾಯಾತ್ರೆಯ ಪ್ರವಾಸ ಕಥನ ಸೃಜನಶೀಲ ಪ್ರತಿಭೆಯು ಅರ್ಥಪೂರ್ಣವಾಗಿ ವ್ಯಕ್ತವಾಗಿದೆ ಎನಿಸುವುದು. ಅಂತೆಯೇ ಹಂಪಿಯ ಕೇಂದ್ರಬಿಂದುವಾದ ಕೃತಿ ಹಂಪಿಯ ಭಾಗವಾಗಿ ರಚಿತವಾಗಿದೆ.

ಆ. ಕೆ.ರಾಮಸ್ವಾಮಯ್ಯಂಗಾರ್ ಅವರ ಜೀರ್ಣವಿಜಯನಗರಾದರ್ಶಂ(೧೯೧೬)

ಹಂಪಿ ಕುರಿತ ಆರಂಭದ ಕೈಪಿಡಿಯೆಂದರೆ 'ಜೀರ್ಣವಿಜಯನಗರಾದರ್ಶಂ' ಇದು ಪ್ರಕಟಗೊಂಡದ್ದು ೧೯೧೬ರಲ್ಲಿ; ಅಂದರೆ, 'ಪಂಪಾಯಾತ್ರೆ' ಪ್ರಕಟಗೊಳ್ಳುವುದಕ್ಕೆ ಹತ್ತು ವರುಷ ಮೊದಲು. ಈ ಕೈಪಿಡಿಯನ್ನು ರಚಿಸಿದ ಕೆ.ರಾಮಸ್ವಾಮಯ್ಯಂಗಾರ್ ಅವರು ಬೆಂಗಳೂರು ಡಿಸ್ಟ್ರಿಕ್ಟ್ ತ್ಯಾಮಗೊಂಡ್ಲು ಎ.ವಿ.ಸ್ಕೂಲ್ ಮುಖ್ಯಗುರುಗಳು ಆಗಿದ್ದವರು. ಮೈಸೂರಿನ ಕರ್ನಾಟಕ ಗ್ರಂಥಮಾಲಾ ಪತ್ರಿಕೆಯಲ್ಲಿ ಇದು ಮೊದಲು ಧಾರಾವಾಹಿಯಾಗಿ ಪ್ರಕಟವಾಗಿ ಅನಂತರ ಅದೇ ಸರಣಿಯಲ್ಲಿ ೭೪ನೇ ಕೃತಿಯಾಗಿ ಇದು ಪ್ರಕಟವಾಗಿದೆ. ಈ ಕೈಪಿಡಿಯನ್ನು 'ಪೂರ್ವಭಾಗ' ಮತ್ತು 'ಉತ್ತರಭಾಗ' ಎಂದು ಲೇಖಕರು ವಿಂಗಡಿಸಿದ್ದಾರೆ. ಪೂರ್ವಭಾಗವು ೩೧ ಪುಟಗಳಷ್ಟು ವಿಸ್ತಾರವಾಗಿದ್ದು, ಈ ಭಾಗದಲ್ಲಿ ವಿಜಯನಗರ ಚರಿತ್ರೆಯನ್ನು ಆದಿಯಿಂದ ಅಂತ್ಯದವರೆಗೆ, ಅಂದರೆ ೧೩೩೬ ರಿಂದ ೧೫೬೫ರವರೆಗೆ ನಿರೂಪಿಸಲಾಗಿದೆ. ಲೇಖಕರು ೧೫೬೫ರಲ್ಲಿ ತಾಳಿಕೋಟೆ ಬಳಿ ನಡೆದ ನಿರ್ಣಾಯಕ ಯುದ್ಧದ ನಂತರ ವಿಜಯನಗರವು 'ವಿಜನಸ್ಥಾನ'ವಾಗಿ ಮಾರ್ಪಟ್ಟು 'ಶಿಥಿಲವಿಜಯನಗರ' ಎಂದು ಕರೆಸಿಕೊಂಡುದನ್ನು ಸಂಕ್ಷಿಪ್ತವಾಗಿ ವಿವರಿಸಿರುವರು. ಇದರ ಪೂರ್ವಭಾಗದಲ್ಲಿ ಲೇಖಕರು ಕೇವಲ ರಾಜಕೀಯ ಘಟನೆಗಳನ್ನಷ್ಟೇ ಅಲ್ಲದೆ, ಸಾಹಿತ್ಯಿಕ-ಸಾಂಸ್ಕೃತಿಕ-ಸಾಮಾಜಿಕ ಸಂದರ್ಭಗಳನ್ನೂ ಕುರಿತು ಪ್ರಸ್ತಾಪಿಸಿದ್ದಾರೆ.

ವಿಜಯನಗರ ಅರಸರಲ್ಲಿ ಪ್ರಸಿದ್ಧನಾದ ಕೃಷ್ಣದೇವರಾಯನ ಆಸ್ಥಾನ ವೈಭವದ ಜತೆಯಲ್ಲಿ ಸಾಹಿತ್ಯಿಕ ಅದರಲ್ಲೂ ತೆಲುಗು ಸಾಹಿತ್ಯದಲ್ಲಿ ಹೊಂದಿದ್ದ ಅಭಿರುಚಿಯನ್ನು ಹಾಗೂ ಆತನು ಆಂಧ್ರದವನೆಂದು ಅಭಿಮಾನಪೂರ್ವಕ ಪ್ರಸ್ತಾಪಿಸುವುದು ಆಶ್ಚರ್ಯವನ್ನುಂಟು ಮಾಡದೆ ಇರದು. ಅಲ್ಲದೆ, ಲೇಖಕರು ಕೃಷ್ಣದೇವರಾಯನನ್ನು 'ಆಂಧ್ರದೇಶಕ್ಕೂ ಆಂಧ್ರರಾಜರಿಗೂ ಆಂಧ್ರಭಾಷೆಗೂ ಒಪ್ಪವಿಟ್ಟವನಾಗಿದ್ದನೆಂದು' ಕೊಂಡಾಡಿದ್ದಾರೆ. ರಾಜರುಗಳ ಆಳ್ವಿಕೆಯ ಕಾಲಮಾನವನ್ನು ಗುರುತಿಸುವಾಗ ಕೆಲವು ತೇದಿಗಳ ವ್ಯತ್ಯಾಸ ಕಂಡುಬರುತ್ತದೆ. ಉದಾಹರಣೆಗೆ, ಕೃಷ್ಣದೇವರಾಯನು ಪಟ್ಟಾಭಿಷಿಕ್ತನಾದುದು. '೧೪೩೦ ಶುಕ್ಲ ಸಂವತ್ಸರ ಮಾಘ ಶುದ್ಧ ೧೪, ಅಂದರೆ ಕ್ರಿ.ಶ.೧೫೦೬ ಫೆಬ್ರವರಿ ೪ರಂದು' ಎಂದಿದ್ದಾರೆ. ಲೇಖಕರು. ಆದರೆ ಈ ತೇದಿ ಸರಿಯಾದುದಲ್ಲ; ಇದು ಕ್ರಿ.ಶ.೧೫೧೦ ಜನವರಿ ೨೪ಕ್ಕೆ ಸರಿಹೊಂದುತ್ತದೆ.[೧೧] ಈಚಿನ ಅಧ್ಯಯನಗಳು ಸಹ ಇದೇ ತೇದಿಯನ್ನು ದೃಢಪಡಿಸಿವೆ. ಹಾಗೆಯೇ, ವಿರೂಪಾಕ್ಷ ದೇವಾಲಯದ ಉತ್ತರದಲ್ಲಿ, ಅಂದರೆ ಹೇಮಕೂಟದಲ್ಲಿ, ಕೆಲವು ಜೈನ ದೇವಾಲಯಗಳಿವೆಯೆಂಬ ಲೇಖಕರ ಹೇಳಿಕೆ ಸಹ ವಾಸ್ತವಾಂಶದಿಂದ ಕೂಡಿದುದಲ್ಲ. ಅವು ಜೈನ ದೇವಾಲಯಗಳಾಗಿರದೆ, ೧೪ನೇ ಶತಮಾನದಲ್ಲಿ ನಿರ್ಮಾಣಗೊಂಡ ಶೈವ ದೇವಾಲಯಗಳೆಂಬುದು ದೃಢಪಟ್ಟಿದೆ. ಬಹುಮನಿ ರಾಜ್ಯವನ್ನು ಲೇಖಕರು 'ಭಾಮಿನೀ ರಾಜ್ಯ'ವೆಂದು ಕರೆದಿರುವುದು ಗಮನಾರ್ಹ.

'ಉತ್ತರಭಾಗ' ಅಥವಾ ಜೀರ್ಣ/ಶಿಥಿಲ ವಿಜಯನಗರದ ಸ್ಮಾರಕಗಳ ವಿವರಣೆಯುಳ್ಳ ಭಾಗವು ಪುಟ ೩೨ ರಿಂದ ೬೨ರವರೆಗೆ, ಅಂದರೆ ೩೦ ಪುಟಗಳಷ್ಟು ದೀರ್ಘವಾಗಿ ಸಾಗಿದೆ. ಈ ಭಾಗದ

ಆರಂಭದಲ್ಲಿ ಅಂದರೆ ೭ ಪುಟಗಳಲ್ಲಿ ಕಂಡುಬರುವುದು ವಿದೇಶಿ ಪ್ರವಾಸಿಗರು ಕಂಡ ವಿಜಯನಗರ ವೈಭವ, ಹಬ್ಬ-ಉತ್ಸವಾದಿಗಳ ಯಥಾವತ್ತಾದ ವರ್ಣನೆ. ಇನ್ನುಳಿದ ೨೪ ಪುಟಗಳು ಹಂಪಿಯ ವಿವಿಧ ಸ್ಮಾರಕಗಳ ವಿವರಣೆಯನ್ನೊಳಗೊಂಡಿವೆ. ಈ ಕೈಪಿಡಿಯ ಕರ್ತೃ ಕೆ.ರಾಮಸ್ವಾಮಯ್ಯಂಗಾರ್ ಅವರು ಸುಶಿಕ್ಷಿತರೂ ಶಿಕ್ಷಕರೂ ಲೇಖಕರೂ ಆಗಿರುವುದರಿಂದ ಹಂಪಿಯ ಪ್ರಸಿದ್ಧ ಚಾರಿತ್ರಿಕ ಅವಶೇಷಗಳ ನಿವೇಶನವನ್ನು ಕಾಣುವಲ್ಲಿ, ಅರ್ಥೈಸುವಲ್ಲಿ ವಹಿಸಿರುವ ಕಾಳಜಿ ಅವರ ಇಲ್ಲಿಯ ವಿವರಣೆಯಲ್ಲಿ ವ್ಯಕ್ತಪಟ್ಟಿದೆ. ಕೇವಲ ಪ್ರಮುಖ ಸ್ಮಾರಕ/ಸಂಗತಿಗಳೇ ಅಲ್ಲದೆ ಆಯಾ ಪರಿಸರದಲ್ಲಿಯ ಸೂಕ್ಷ್ಮ ಮಾಹಿತಿಯೂ ಇವರ ನಿರೂಪಣೆಯಲ್ಲಿ ಇಣಿಕಿಹಾಕಿದೆ. ವಿದ್ಯಾರ್ಥಿಗಳಿಗೂ ಜನಸಾಮಾನ್ಯರಿಗೂ ಆಸಕ್ತರಿಗೂ ಉಪಯುಕ್ತವಾದೊಂದು ಉತ್ತಮ ಕೈಪಿಡಿ ಒದಗಿಸಿಬೇಕೆನ್ನುವ ಮನೋಭಾವ ರಾಮಸ್ವಾಮಯ್ಯಂಗಾರ್ ಅವರು ಹೊಂದಿದ್ದಂತೆ ತೋರುತ್ತದೆ. ಅವರ ಕನ್ನಡ ಬರವಣಿಗೆ ಸರಳ ಹಾಗೂ ಶುದ್ಧ. ಅದು ಕೇವಲ ಮಾಹಿತಿಪ್ರಧಾನವಾಗಿರದೆ, ಅಲ್ಲಲ್ಲಿ ರಸವತ್ತಾದ ಸನ್ನಿವೇಶಗಳನ್ನು ಒಳಗೊಂಡಿದೆ. ಅವುಗಳಲ್ಲಿ ಮತಂಗಪರ್ವತ/ಮಾತಂಗನ ಬೆಟ್ಟದಿಂದ ಕಾಣಬರುವ ಹಂಪಿ ಸುತ್ತಮುತ್ತಲ ಪ್ರಾಕೃತಿಕ ಪರಿಸರದ ವರ್ಣನೆ, ವಿಠ್ಠಲಸ್ವಾಮಿ ದೇವಾಲಯದ ಶಿಲ್ಪಕಲಾ ವರ್ಣನೆ ಹಾಗೂ ವಿಷಾದರೂಪದಲ್ಲಿರುವ ಅವರ 'ಉಪಸಂಹಾರ' ಭಾಗಗಳನ್ನು ಇಲ್ಲಿ ಉದಾಹರಿಸಬಹುದು.[೧೧೨] ಲೇಖಕರು ಹಂಪಿ ವೀಕ್ಷಣೆಯನ್ನು ಸ್ವಯಂ ಕೈಗೊಂಡಿರುವುದು ಹಾಗೂ ಹಂಪಿ ವೀಕ್ಷಿಸಲು ಇಚ್ಛಿಸುವ ಪ್ರವಾಸಿಗರಿಗೆ ಈ ಮುಂದಿನ ಮೂರು ಹಂತದ ಮಾರ್ಗಗಳನ್ನು ಇಲ್ಲಿ ಸೂಚಿಸಿದ್ದಾರೆ.

೧. ಹೊಸಪೇಟೆಯಿಂದ ಹೊರಟು ಅನಂತಶಯನಗುಡಿ, ಮಲಪನಗುಡಿ, ಇದರ ಸಮೀಪದಲ್ಲಿರುವ ಗುಂಡಾಗಿರುವ ಬಾವಿ (ಮಾಳಿಗೆ-ಕೂಪ-ಆರಾಮ) ಹಾಗೂ ಕಮಲಾಪುರದ ಪಟ್ಟಾಭಿರಾಮ ದೇವಾಲಯಗಳ ವೀಕ್ಷಣೆ.

೨. ಕಮಲಾಪುರದಿಂದ ಹಾಳುಪಟ್ಟಣ(ಹಂಪಿ)ದೆಡೆಗೆ ಹೊರಟು ಚಂದ್ರಶೇಖರಮಠ (ದೇವಾಲಯ), ಅಂತಃಪುರದ (ರಾಣಿಯರ) ಸ್ನಾನಗೃಹ, ವಿಜಯದಶಮಿಯ ಸಿಂಹಾಸನ (ಮಹಾನವಮಿದಿಬ್ಬ), ಈಶಾನ್ಯದಿಕ್ಕಿನ ರಂಗಸ್ವಾಮಿ (ರಂಗನಾಥ) ದೇವಾಲಯ; ಸಭಾಭವನ (ಕಮಲ್ ಮಹಲ್), ಜನಾನಾ, ಗಜಶಾಲೆ, ನಾಟ್ಯಶಾಲೆ ಮೊದಲಾದವುಗಳನ್ನೊಳಗೊಂಡ ರಾಜಾಂತಃಪುರಾವಣ (ರಾಜಪ್ರಾಂಗಣ)ಗಳ ವೀಕ್ಷಣೆ; ಹಾಗೂ ಮತಂಗಪರ್ವತಾ ರೋಹಣ ಮತ್ತು ಪರಿಸರ ವೀಕ್ಷಣೆ.

೩. ವಿಜಯದಶಮಿ ಸಿಂಹಾಸನ (ಮಹಾನವಮಿದಿಬ್ಬ)ದಿಂದ ಮತ್ತೆ ಮುಂದುವರೆದು ಹಜಾರ ರಾಮಚಂದ್ರಾಲಯ (ಹಜಾರರಾಮ ದೇವಾಲಯ), ನೆಲಮಾಳಿಗೆ, ಪಾತಾಳೇಶ್ವರ ದೇವಾಲಯ, ಉದ್ದಾನ ವೀರಭದ್ರಾಲಯ, ಚಂಡಿಕೇಶ್ವರ (ಚಂಡೇಶ್ವರ) ದೇವಾಲಯ, ಉಗ್ರನರಸಿಂಹ (ಲಕ್ಷ್ಮೀ ನರಸಿಂಹ), ದೊಡ್ಡಲಿಂಗ(ಶಿವದೇವಾಲಯ), ಕೃಷ್ಣ(ಸ್ವಾಮಿ) ದೇವಾಲಯ, (ಸಾಸಿವೆಕಾಳು) ಗಣೇಶಾಲಯ, ವಿಘ್ನೇಶ್ವರ(ಕಡಲೆಕಾಳು ಗಣೇಶ) ಆಲಯ, ವಿರೂಪಾಕ್ಷ ದೇವಾಲಯ, ಕೋದಂಡ ರಾಮಸ್ವಾಮಿ ದೇವಾಲಯ, ಚಕ್ರತೀರ್ಥ, ವಿಠ್ಠಲಸ್ವಾಮಿ ದೇವಾಲಯ, ತಳವಾರನ ಕಟ್ಟೆ (ತಳವಾರಗಟ್ಟ),

ಒಂಬತ್ತು ಋಷಿಗಳ ಸಮಾಧಿ (ನರವೃಂದಾವನ), ಆನೆಗೊಂದಿ ರಂಗನಾಥಸ್ವಾಮಿ ದೇವಾಲಯ, ಗವಿರಂಗನಾಥ, ಪಂಪಾಸರೋವರ ಮುಂತಾದವುಗಳ ವೀಕ್ಷಣೆ ಹಾಗೂ ಸಮೀಪಮಾರ್ಗದ ಮೂಲಕ (ತೆಪ್ಪದ ಸಹಾಯದಿಂದ ನದಿಯನ್ನು ದಾಟಿ) ಹಂಪಿಯ ಪ್ರವೇಶ; ಅಲ್ಲಿಂದ ಕಮಲಾಪುರ ಸತ್ರಕ್ಕೆ ವಾಪಾಸ್ ಬರಬಹುದು ಎನ್ನುವುದನ್ನು ತಮ್ಮ ಕೃತಿಯಲ್ಲಿ ಸೂಚಿಸಿದ್ದಾರೆ. ಈ ಮೇಲಿನ ಸ್ಮಾರಕಗಳ ವೀಕ್ಷಣೆಗೆಂದು ಲೇಖಕರು ತಮ್ಮ ಕೈಪಿಡಿಯಲ್ಲಿ ಸೂಚಿಸಿರುವ ಮಾರ್ಗಸೂಚಿಯಾದರೂ ಅಲ್ಪಸ್ವಲ್ಪ ಬದಲಾವಣೆಯೊಡನೆ ಇಂದಿಗೂ ಎಲ್ಲ ಪ್ರವಾಸಿಗರೂ ಅನುಸರಿಸುತ್ತಿರುವ ಮಾರ್ಗಸೂಚಿಯಂತೆಯೇ ಇದೆ. ಇವರು ಪ್ರವಾಸಿಗರಿಗಾಗಿ ತಮ್ಮ ಕೈಪಿಡಿಯಲ್ಲಿ ಸಂಗ್ರಹಿಸಿರುವ ಹಾಗೂ ಸೂಚಿಸಿರುವ ಕೆಲವು ವಿಶೇಷ ಅಂಶಗಳನ್ನು ಹೀಗೆ ಸಂಗ್ರಹಿಸಬಹುದು:

೧. ಹಂಪಿಮಾರ್ಗದಲ್ಲಿ ಮಲಪನಗುಡಿಯ ಹೊರವಲಯದಲ್ಲಿರುವ 'ಗುಂಡಾಗಿರುವ ಬಾವಿ', ಅಂದರೆ 'ಮಾಳಿಗೆ–ಕೂಪ–ಆರಾಮ'ವೆಂದು ವಿಜಯನಗರ ಕಾಲದಲ್ಲಿ ಬಾವಿತೋಟದಿಂದೊಡಗೂಡಿದ ವಿಶ್ರಾಂತಿಧಾಮ. ಲೇಖಕರು ಇದನ್ನು ವೀಕ್ಷಿಸುವ ವೇಳೆಗೆ ಅದಿನ್ನೂ ಸುಸ್ಥಿತಿಯಲ್ಲಿದ್ದಿತು. "ಇದು ಪುರಾತನ ಕಟ್ಟಡವಾದರೂ ನೋಡು ನೋಡುತ್ತಾ ಕಣ್ಣುಗಳಿಗೆ ಸೊಬಗನ್ನು ಬೀರುವುದು. ಇದರಲ್ಲಿನ ಇದರಲ್ಲಿನ ನೀರು ಬಹು ಶೀತಲವಾಗಿರುವುದರಿಂದ ದೇಹದ ಬಳಲಿಕೆಯನ್ನು ತೀರಿಸಿ ಆರೋಗ್ಯವನ್ನುಂಟು ಮಾಡತಕ್ಕದ್ದಾಗಿರುವುದು" (ಪು.೪೪) ಎಂದಿರುವುದು ಗಮನಾರ್ಹ.

೨. ಮಲಪನಗುಡಿಯ ಪೂರ್ವದಿಕ್ಕಿನ ಹೊಲವೊಂದರಲ್ಲಿ ದೇವರಾಯನ ಕ್ರಿ.ಶ.೧೪೧೨ರ (ಲೇಖಕರು ಇದನ್ನು ೧೪೧೦ ಎಂದು ತಪ್ಪಾಗಿ ಉಲ್ಲೇಖಿಸಿದ್ದಾರೆ.) ದಾನಶಾಸನದ ಕಲ್ಲೊಂದು ಮಲಗಿರುವುದೆಂಬ ಮಾಹಿತಿ ಸಂಗ್ರಹಿಸಿದ ಲೇಖಕರು, ಅದರ ಶೋಧನೆಗೆ ಮುಂದಾದುದು ಕುತೂಹಲಕಾರಿ ಸಂಗತಿ. ಅವರೇ ಬರೆದಿರುವಂತೆ, 'ಆದರೆ ಎಲ್ಲೆಲ್ಲಿ ನೋಡಿದರೂ ಇದು ಕಾಣಬಂದಿಲ್ಲವಾದುದರಿಂದ ನೆಲದಲ್ಲಿ ಹೂತುಹೋಗಿರಬಹುದೆಂಬ ಸಂಶಯವುಂಟಾಗಿರುವುದು. ಮುಂದೆ ಯಾತ್ರಿಕರಿಗೆ ದೊರೆತರೆ ಅದರ ನಿಜವಾದ ಸ್ಥಾನವನ್ನು ತಿಳಿಯಬಹುದು'. ಆದರೆ ಈ ಶಾಸನಕಲ್ಲು ಕಾಣೆಯಾಗಿರದೆ ಅದನ್ನು ಮಲಪನಗುಡಿ ಈಶ್ವರ ದೇವಾಲಯದ ಮುಂದೆ ಈಗ ಇರಿಸಲಾಗಿದೆಯೆಂಬುದನ್ನು ಇಲ್ಲಿ ಪ್ರಸ್ತಾಪಿಸಬಹುದು.

೩. ಕಮಲಾಪುರದ ಸತ್ರವೊಂದರ ಬಗೆಗೆ ಲೇಖಕರು ಪ್ರಸ್ತಾಪಿಸುತ್ತಾರೆ. ಇದು ಯಾವ ಸತ್ರವೆಂಬುದು ನಿಖರವಿಲ್ಲ. ಅವರು ಬರೆಯುವಂತೆ, "ಈ ಕಮಲಾಪುರದಲ್ಲಿ ಪ್ರಯಾಣಿಕರು ಇಳಿಯುವುದಕ್ಕೆ ಒಂದು ಸತ್ರವಿರುವುದು. ಇದು ಪೂರ್ವಕಾಲದಲ್ಲಿ ಒಂದು ಪ್ರಾಚೀನ ಮಂಟಪವಾಗಿತ್ತು. ಬಳ್ಳಾರಿಯಲ್ಲಿ ಕಲೆಕ್ಟರಾಗಿ ಇದ್ದ ಮಾನ್ವಿರ್ ಸಾಹೇಬರು ಈ ಮಂಟಪವನ್ನು ಸತ್ರವಾಗಿ ಮಾರ್ಪಡಿಸಿ ಲೋಕಲ್ ಬೋರ್ಡಿನವರ ವಶಕ್ಕೆ ಕೊಟ್ಟರು. ಮತ್ತು ಈ ಗ್ರಾಮದಲ್ಲಿ ಒಂದು ಪೋಸ್ಟ್ ಆಫೀಸೂ, ಒಂದು ಪೋಲೀಸ್ ಸ್ಟೇಷನೂ ಇರುವುವು. ಇಲ್ಲಿಯ ಭಾಷೆ ಕನ್ನಡ. ಜೀರ್ಣವಿಜಯನಗರವನ್ನು ನೋಡಲಪೇಕ್ಷಿಸುವವರು ಈ ಸತ್ರವನ್ನು ಬಿಡದಿಮನೆಯಾಗಿ ಮಾಡಿಕೊಂಡರೆ ಮುಂದೆ ಹೇಳುವ ನಾಶನಸ್ಥಳಗಳನ್ನು ನೋಡಲು ಅನುಕೂಲಕರವಾಗಿರುವುದು." ಲೇಖಕರು ಮುಂದುವರೆದು ಹೇಳುವಂತೆ,

"ಸತ್ರದಿಂದ ಉತ್ತರ ದಿಕ್ಕಿಗೆ ಊರಹೊರಗೆ ಹೊರಟು ಅಲ್ಲಿಂದ ಪೂರ್ವದಿಕ್ಕಿಗೆ ಸುಮಾರು ಒಂದುವರೆ ಮೈಲು ದೂರ ಹೋದರೆ ಅಲ್ಲಿ ಪಟ್ಟಾಭಿರಾಮಸ್ವಾಮಿ ದೇವಾಲಯವು ಕಾಣಬರುವುದು" ಅಲ್ಲದೆ, "ಸತ್ರದಿಂದ ಉತ್ತರಕ್ಕೆ ಡಿ.ಪಿ.ಡಬ್ಲ್ಯೂ ಇನ್‌ಸ್ಪೆಕ್ಷನ್ ಬಂಗಲೆಯೂ ಇದೆ. ಮುಂದುಗಡೆ ಹೋಗುವ ಸೊಟ್ಟಯಾದ ಮಾರ್ಗದ ಮೂಲಕ 'ಹಾಳುಪಟ್ಟಣ ಎಂದು ಈಗ ಕರೆಯಲ್ಪಡುವ ನಗರ ಮಧ್ಯಕ್ಕೆ ಹೋಗಬಹುದು" ಎಂತಲೂ ಸೂಚಿಸಿರುವರು. ಈ ವಿವರಣೆ ಹಾಗೂ ದಿಕ್ಕು-ನಿರ್ದೇಶಗಳನ್ನು ಗಮನಿಸಿದರೆ, ಆಗ ಕಮಲಾಪುರದಲ್ಲಿ ಪ್ರವಾಸಿಗರು/ಅತಿಥಿಗಳು ತಂಗಲು ಎರಡು ತಂಗುಸ್ಥಳಗಳಿದ್ದವು.

೪. ಹೊಸಪೇಟೆಯಿಂದ ಕಂಪಿಲಿಗೆ ಹೋಗುವ ಬಸ್‌ಮಾರ್ಗದಲ್ಲಿ ಕಮಲಾಪುರವನ್ನು ಪ್ರವೇಶಿಸುತ್ತಿದ್ದಂತೆಯೇ ಬಲಬದಿಯಲ್ಲಿ ಕಂಡುಬರುವ ಹಳೆಯ ಕಲ್ಲುಕಟ್ಟಡವೇ ಹಿಂದಿನ ಸತ್ರ/ಛತ್ರ. ಇದನ್ನು ಇಂದಿಗೂ ದಾದಾಪೀರ್ ಛತ್ರವೆಂತಲೇ ಕರೆಯಲಾಗುತ್ತದೆ. ರಾಮಸ್ವಾಮಯ್ಯಂಗಾರ್ ಅವರು ಪ್ರಸ್ತಾಪಿಸುವ ಸತ್ರವೆಂದರೆ ಇದೇ. ಹಿಂದೆಲ್ಲ ವಿಜಯನಗರ ಕುರಿತು ಅಧ್ಯಯನ ಕೈಗೊಂಡ ವಿದ್ವಾಂಸರು ತಂಗುತ್ತಿದ್ದುದು ಇದೇ ಸತ್ರದಲ್ಲಿ. ಹಂಪಿ ವೀಕ್ಷಣೆಗೆಂದು ಬರುತ್ತಿದ್ದ ಪ್ರವಾಸಿಗರ ವಸತಿ ಇಲ್ಲಿಯೇ ಆಗುತ್ತಿದ್ದಿತು. ಹಿಂದೂ-ಮುಸ್ಲಿಂ ವಾಸ್ತುಶೈಲಿಯ ಈ ಕಟ್ಟಡ ಈಗ ತುಂಬಾ ನಿರ್ಲಕ್ಷ್ಯಕ್ಕೊಳಗಾಗಿದೆ. ೧೮೩೩ರಲ್ಲಿ ಈ ಸತ್ರ ನಿರ್ಮಾಣಗೊಳ್ಳಲು ಕಾರಣನಾದವನು ದಾದಾಪೀರ್ (ಸೈಯದ್ ಶಂಸುದ್ದೀನ್ ಖಾದ್ರಿ). ಈತನ ವಂಶಸ್ಥರು ಗುರುಪರಂಪರೆಯಂತೆ ನಡೆದು ಬಂದವರೆಂತಲೂ ಪರಂಪರೆಯಲ್ಲಿ ಈತ ೧೨ನೇ ಗುರುವೆಂತಲೂ ವ್ಯಕ್ತಪಡುತ್ತದೆ. ಬಡವಬಲ್ಲಿದರಿಗಾಗಿ ಹಾಗೂ ಭಕ್ತರಿಗಾಗಿ ಕಟ್ಟಿಸಲಾದ ಈ ಸತ್ರದ ನಿರ್ಮಾಣದಲ್ಲಿ ದಾದಾಪೀರ್ ತನ್ನ ಸ್ವಂತ ಹಣವನ್ನೂ ಹಿತೈಷಿಗಳು ನೀಡಿದ ಹಣವನ್ನೂ ಬಳಸಿದ. ಆದರೆ ರಾಮಸ್ವಾಮಯ್ಯಂಗಾರ್ ಅವರು, ಬಳ್ಳಾರಿಯಲ್ಲಿ ಕಲೆಕ್ಟರ್ ಆಗಿದ್ದ ಮಾನ್ರೋ ಸಾಹೇಬರು ಹಿಂದೆ ಇದ್ದ ಹಳೆಯ ಮಂಟಪವನ್ನೇ ಸತ್ರವಾಗಿ ಮಾರ್ಪಡಿಸಿದರೆಂದು ಹೇಳಿರುವರು. ಈ ಲೇಖಕರು ತಾವು ತಂಗಿದ್ದ ದಾದಾಪೀರ್ ಛತ್ರ ಕುರಿತೇ ಈ ಮಾತುಗಳನ್ನು ಬರೆದರೆ? ಹೀಗಿದ್ದಲ್ಲಿ, ಸತ್ರದಿಂದ ಉತ್ತರಕ್ಕೆ ಇರುವ ಇನ್‌ಸ್ಪೆಕ್ಷನ್ ಬಂಗಲೆಯನ್ನು ಸಜ್ಜುಗೊಳಿಸಿದವರಾರು?

೧೮೭೮ರಲ್ಲಿ ಹಂಪಿಯನ್ನು ಸಂದರ್ಶಿಸಿದ ಎಡ್ವರ್ಡ್ ಈಸ್ಟ್‌ವಿಕ್ ಎಂಬ ಆಂಗ್ಲ ಪ್ರವಾಸಿಯು, ಹಂಪಿ ಸ್ಮಾರಕಗಳನ್ನು ಕುರಿತ ತನ್ನ ವಿವರಣೆಯಲ್ಲಿ ಕಮಲಾಪುರದ ಪ್ರವಾಸಿಮಂದಿರದ ಬಗೆಗೂ ಪ್ರಸ್ತಾಪಿಸಿದ್ದಾನೆ. ಈತ ಅಲ್ಲಿ ತಂಗಿದ್ದನೆಂಬುದು ಮುಖ್ಯ. ಹಳೆಯ ದೇವಾಲಯವನ್ನು ಪ್ರವಾಸಿಮಂದಿರವಾಗಿ ಮಾರ್ಪಡಿಸಿ ಅದಕ್ಕೆ ಸುಣ್ಣ ಬಳಿಯಲಾಗಿದೆ; ಅದರಲ್ಲಿ ಶಯನಕ್ಕಾಗಿ ಎರಡು ಕೊಠಡಿಗಳಿವೆ ಹಾಗೂ ದೊಡ್ಡ ಕೊಠಡಿಯು ಭೋಜನಾಲಯವಾಗಿದೆಯೆಂದು ಬರೆಯುತ್ತಾರೆ ಈಸ್ಟ್‌ವಿಕ್. ಸುಮಾರು ೧೯೨೫ರಲ್ಲಿ 'ದಿ ಮದರಾಸ್ ಅಂಡ್ ಸದರ್ನ್ ಮರಾಠಾ ರೈಲ್ವೆ ಕಂಪನಿ'ಯು ಬಿಡುಗಡೆಗೊಳಿಸಿದ ಹಂಪಿ ಕುರಿತ ಪ್ರವಾಸಿ ಕೈಪಿಡಿಯಲ್ಲಿ, ೧೨ ಕಮಲಾಪುರದ ಪ್ರವಾಸಿಮಂದಿರ (ವಸತಿಗೃಹ)ದ ಬಗೆಗೆ ಸ್ವಲ್ಪ ಮಾಹಿತಿಯಿದೆ. ಕಮಲಾಪುರದಲ್ಲಿ ಹಾಳುಬಿದ್ದಿದ್ದ ದೇವಾಲಯವೊಂದನ್ನು ಬಳ್ಳಾರಿ ಜಿಲ್ಲೆಯ ಹಿಂದಿನ ಕಲೆಕ್ಟರ್ ಜೆ.ಹೆಚ್.ಮಾಸ್ಟರ್ ಎಂಬುವವನು ವಸತಿಗೃಹ

(ವಿಶ್ರಾಂತಿಗೃಹ)ವಾಗಿ ಪರಿವರ್ತಿಸಿದ; ಇದು ಸಾರ್ವಜನಿಕರ ಬಳಕೆಗೂ ಲಭ್ಯವಿದೆ ಎಂದು ಅದರಲ್ಲಿ ಬರೆಯಲಾಗಿದೆ. ಹಿಂದಿನ ಕಲೆಕ್ಟರ್ ಒಬ್ಬರು ಕಮಲಾಪುರದಲ್ಲಿ ಹಾಳುಬಿದ್ದಿದ್ದ ವಿಷ್ಣು ದೇವಾಲಯವನ್ನು ಪ್ರವಾಸಿಬಂಗಲೆಯನ್ನಾಗಿ ಪರಿವರ್ತಿಸಿ ವಾಸಯೋಗ್ಯ ಕೊಠಡಿಗಳನ್ನಾಗಿಸಿದರೆಂದು ಡಿ.ದೇವಕುಂಜರಿಯವರು ಹೇಳಿದ್ದಾರೆ. ಈ ಹೇಳಿಕೆಗಳನ್ನು ಗಮನಿಸಿದರೆ, ಸತ್ರ ಮತ್ತು ಇನ್‌ಸ್ಪೆಕ್ಷನ್ ಬಂಗಲೆಗಳ ನಿರ್ಮಾಣದ ಹಿನ್ನೆಲೆ ಒಂದೇ ಅಲ್ಲವೆಂಬುದು ಸ್ಪಷ್ಟ. ಕಮಲಾಪುರದ ಸತ್ರ ಕುರಿತು ಕೆ.ರಾಮಸ್ವಾಮಯ್ಯಂಗಾರ್ ಅವರು ಪ್ರಸ್ತಾಪಿಸಿರುವ ಸಂಗತಿ ಅಸ್ಪಷ್ಟವಾದುದೆನ್ನಬಹುದು.

♦ ಹಂಪಿಸ್ಮಾರಕಗಳ ಸಂರಕ್ಷಣೆ ಸಂಬಂಧದಲ್ಲಿ ಕಲೆಕ್ಟರ್‌ಗಳ ಕಾಲದಿಂದಲೂ ಆಸಕ್ತಿ ವಹಿಸುತ್ತಾ ಬಂದಿರುವುದು ಕಂಡಂತೆಯೇ ಇದೆ. ಆದರೆ ಪೂರ್ವಯೋಚಿತ ಹಾಗೂ ವ್ಯವಸ್ಥಿತ ಕಾರ್ಯವನ್ನು ಕೈಗೊಳ್ಳದಿರುವ ಸಂದರ್ಭದಲ್ಲಿ ಸ್ಮಾರಕಗಳಿಗೋ ಅವುಗಳ ಸಂರಕ್ಷಣೆಯಲ್ಲಿ ತೊಡಗಿದವರಿಗೋ ಕೆಲವು ಬಗೆಯ ತೊಂದರೆಗಳುಂಟಾಗುವುದು ಸಹಜ. ಇಂತಹ ಒಂದು ಉದಾಹರಣೆಯನ್ನು ಕೆ.ರಾಮಸ್ವಾಮಯ್ಯಂಗಾರ್ ಸಂಗ್ರಹಿಸಿಕೊಟ್ಟಿದ್ದಾರೆ. ಅವರು ಮಹಾನವಮಿದಿಬ್ಬ (ವಿಜಯ ದಶಮಿಯ ಸಿಂಹಾಸನ) ವನ್ನು ದರ್ಶಿಸಿದಾಗ ಸಂಗ್ರಹಿಸಿದ ಮಾಹಿತಿ ಇದು. "ಈಗ್ಗೆ ನಾಲ್ಕು ವರುಷಗಳ ಹಿಂದೆ ಈ ದಿಬ್ಬದೊಳಕ್ಕೆ ಹೊರಡುವುದಕ್ಕೆ ಎಲ್ಲಿಯಾದರೂ ದ್ವಾರವಿದೆಯೋ ಏನೋ ನೋಡಬೇಕೆಂದು ಆ ತಿಟ್ಟಿನ ನಾಲ್ಕು ಪಾರ್ಶ್ವಗಳಲ್ಲಿಯೂ ಸುಮಾರು ಹತ್ತು ಅಡಿಗಳ ಆಳದ ತನಕ ಅಗೆದು ನೋಡಿದರೆಂತಲೂ ಆಗ ಕೂಲಿಯವರಲ್ಲಿ ಕೆಲವರು ಅಲ್ಲಿ ಮಡಿದಿದ್ದರಿಂದಲೂ, ದ್ವಾರವೂ ಎಲ್ಲಿಯೂ ಕಾಣಬಾರದ್ದರಿಂದಲೂ, ಆ ಪ್ರಯತ್ನವನ್ನು ಬಿಟ್ಟು, ಆ ಹಳ್ಳವನ್ನು ಮರಳಿ ಹೂತುಬಿಟ್ಟರೆಂತಲೂ ತಿಳಿದುಬಂದಿದೆ." ಈ ಘಟನೆ ನಡೆದುದು ಲೇಖಕರು ಹಂಪಿಗೆ ಭೇಟಿ ನೀಡುವ ಪೂರ್ವದಲ್ಲಿ, ಅಂದರೆ ನಾಲ್ಕು ವರ್ಷಗಳ ಹಿಂದೆ. ವಾಸ್ತವದಲ್ಲಿ, ಲೇಖಕರು ಹಂಪಿಗೆ ಬಂದಿದ್ದ ನಿರ್ದಿಷ್ಟ ಕಾಲಾವಧಿಯೇ ಸದ್ಯಕ್ಕೆ ತಿಳಿಯದ್ದರಿಂದ, ಈ ಘಟನೆ ಯಾವ ವರ್ಷದಲ್ಲಿ ನಡೆಯಿತೆಂಬುದನ್ನು ಹೇಳಲಾಗುವುದಿಲ್ಲ. ಹಾಗೆಯೇ, "ಇದರ (ಮಹಾನವಮಿದಿಬ್ಬದ) ಸುತ್ತಲೂ ಒಂದು ಪ್ರಕಾರದ ಗೋಡೆಯಿದ್ದು ಈಗ ಅದೆಲ್ಲವೂ ಶಿಥಿಲವಾಗಿ ಉತ್ತರದಿಕ್ಕಿನ ಗೋಡೆ ಮಾತ್ರ ನಿಂತಿದೆ" ಎಂಬ ಅವರ ಹೇಳಿಕೆಯೂ ಪರಿಶೀಲನಾರ್ಹ.[೧೧೩] ಏಕೆಂದರೆ, ಒಳಗಿನ ಪಾವಟಿಗೆಯನ್ನು ಮರೆಮಾಡಿದ್ದ ಹೊರಗೋಡೆಯನ್ನು ಭಾರತೀಯ ಪುರಾತತ್ವ ಸರ್ವೇಕ್ಷಣದವರು ೧೯೭೫ರಲ್ಲಿ 'ವಿಜಯನಗರ ಪುನರುತ್ಥಾನ' ಯೋಜನೆಯನ್ನು ಹಮ್ಮಿಕೊಂಡ ಸಂದರ್ಭದಲ್ಲಿ ಕೆಡವಿಹಾಕಿದರೆಂದು ಹಾಗೂ ಈ ಬಗೆಯಲ್ಲಿ ಹಳೆಯ ರಚನೆಗಳನ್ನು ತೆಗೆದುಹಾಕುವ ಕಾರಣಗಳು ಏನಿದ್ದಿರಬೇಕೆಂಬುದು ತಮಗೆ ತಿಳಿಯಲಿಲ್ಲವೆಂದು ವಸುಂಧರಾ ಫಿಲಿಯೋಜಾ ಅವರು ಬರೆದಿರುವುದುಂಟು.[೧೧೪]

♦ ಆನೆಗೊಂದಿ ಕುರಿತು ಕೆ.ರಾಮಸ್ವಾಮಯ್ಯಂಗಾರ್ ಅವರು ನೀಡಿರುವ ಚಿತ್ರಣ ಕುತೂಹಲಕಾರಿಯಾದುದು. ತಳವಾರಘಟ್ಟದಿಂದ(ತಳಾರಿಗಟ್ಟ) ಈ ಗ್ರಾಮದವರೆಗೆ ಒಂದು ಮೈಲಿ ತನಕ ಕಲ್ಲು ಚಪ್ಪಡಿಗಳನ್ನು ಹಾಸಿರುವ ರಸ್ತೆ ಕಾಣುತ್ತಿದ್ದಿತಂತೆ ಈ ಭಾಗದ ನಡುಗಡ್ಡೆಯಲ್ಲಿರುವ ನವ್ವವೃಂದಾವನವನ್ನು ಪರಿಚಯಿಸುವ ಲೇಖಕರು, ಅಲ್ಲಿಯ ಆವರಣದ ಆಚೆ ಹೊಸದಾಗಿ

ಕಟ್ಟಲಾಗಿರುವ ದೇವಾಲಯಕ್ಕೆ ಸಂಬಂಧಿಸಿದ ದುರಂತ ಕಥೆಯೊಂದನ್ನು ಹೇಳುತ್ತಾರೆ. "ಆನೆಗೊಂದಿ ಸಂಸ್ಥಾನದ ಈಚಿನ ರಾಜರುಗಳಲ್ಲೊಬ್ಬನು ವೇಶ್ಯಾಪ್ರಿಯನಾಗಿ ಅವರೊಂದಿಗೆ ಅಲ್ಲಿ ವಾಸಮಾಡಿಕೊಂಡಿದ್ದನಂತೆ. ಆ ಸ್ಥಳವನ್ನು ಬಿಟ್ಟು ಹೋಗೆಂದು ಅವನಿಗೆ ಎಷ್ಟೆಷ್ಟೋ ಕನಸುಗಳು ಬಿದ್ದರೂ ಅವನು ಅವುಗಳನ್ನು ಲಕ್ಷ್ಯಮಾಡದೆ ಅಲ್ಲಿಯೇ ಇದ್ದುಬಿಟ್ಟನಂತೆ. ಒಂದು ದಿನ ಆ ನದಿಯ ಎರಡು ದಡಗಳಲ್ಲಿಯೂ ತುಂಬಿ ನೀರು ಹರಿಯುತ್ತಿರುವಾಗ ಆ ರಾಜನು ತನ್ನ ಪ್ರಿಯಾಂಗನೆಯರೊಂದಿಗೆ ಆಚಿನ ತಡಿಯಲ್ಲಿರುವ ಆನೆಗೊಂದಿಗೆ ಹೋಗುತ್ತಿರುವಾಗ ದೋಣಿಯು ಮುಳುಗಿಹೋಗಿ, ಅದರಲ್ಲಿದ್ದವರೆಲ್ಲರೂ ಜಲಸಮಾಧಿಯನ್ನು ಹೊಂದಿದರಂತೆ!". ಪವಿತ್ರಸ್ಥಳವನ್ನು ಮೋಜಿನ ತಾಣವಾಗಿ ಪರಿವರ್ತಿಸಿಕೊಂಡವರಿಗೆ ಒದಗಿದ ದುರಂತದ ಕಥೆ ಇದು. ತಮ್ಮ ಪ್ರವಾಸದ ಸಂದರ್ಭದಲ್ಲಿ ಇಂಥಾ ಘಟನೆಗಳನ್ನೂ ದಾಖಲಿಸಿಕೊಂಡ ಲೇಖಕರ ಕುತೂಹಲಾಸಕ್ತಿಯನ್ನು ಮೆಚ್ಚಲೇಬೇಕು. ಅವರು ಹೇಳುವಂತೆ, ಆಗ ಆನೆಗೊಂದಿ ಇದ್ದುದು 'ನೈಜಾಮರ ರಾಜ್ಯದಲ್ಲಿ.' "ಇಲ್ಲಿ ಶ್ರೀಕೃಷ್ಣದೇವರಾಯರ ಸಂತತಿಯವರಾಗಿ ಮೃದುಮಧುರಸ್ವರಗಳನ್ನುಳ್ಳ ಶ್ರೀರಾಜರಂಗ ದೇವರಾಯರು ಈಗ ವಾಸವಾಗಿರುವರು"ಎಂದು ಸೂಚಿಸುತ್ತಾರೆ. ಪ್ರಾಯಶಃ ಈ ವ್ಯಕ್ತಿಯನ್ನು ಲೇಖಕರು ಖುದ್ದಾಗಿ ಸಂದರ್ಶಿಸಿರಬಹುದು. ಏನೇ ಇದ್ದರೂ ೧೭೬೦ರ ಹೈದರಾಬಾದ್ ನಿಜಾಮ್ ಮತ್ತು ಮರಾಠಾ ಪೇಶ್ವೆಗಳ ನಡುವೆ ಆದ ಒಪ್ಪಂದದಲ್ಲಿ ಆನೆಗೊಂದಿಯನ್ನು ಜಹಗೀರನ್ನಾಗಿ ರೂಪಿಸಲಾಗಿತ್ತು. ಇಂಗ್ಲಿಷರ ಆಳ್ವಿಕೆಗೆ ಒಳಪಟ್ಟ ನಂತರ ಈ ಮನೆತನದವರಿಗೆ ಗೌರವವೇತನ (ಪಿಂಚಣಿ)ದ ಸಮಸ್ಯೆ ತಲೆದೋರಿದ್ದಿತು. ಇದಕ್ಕೆ ಕಾರಣವೆಂದರೆ, ಆನೆಗೊಂದಿಯು ನೈಜಾಮರ ಆಡಳಿತಕ್ಕೆ ಒಳಪಟ್ಟಿದ್ದುದು. ೧೫ ರಾಮಸ್ವಾಮಯ್ಯಂಗಾರ್ ಅವರು ಪ್ರಸ್ತಾಪಿಸುವ ಶ್ರೀರಾಜರಂಗದೇವರಾಯ ಎಂಬುವರು ೧೯೦೨ ರಿಂದ ೧೯೧೫ರವರೆಗೆ ಆನೆಗೊಂದಿ ದೊರೆಯಾಗಿದ್ದ ರಾಜಾ ಶ್ರೀರಂಗದೇವರಾಯರೇ. ಇವರನ್ನು ಪಂಪಾಪತಿರಾಜು ಎಂತಲೂ ಗುರುತಿಸಲಾಗುತ್ತಿತ್ತು ಎಂದು ಇದೇ ಕೃತಿಯಲ್ಲಿ ವಿವರಿಸಲಾಗಿದೆ.

ಒಟ್ಟಿನಲ್ಲಿ ಈ ಕೈಪಿಡಿಯು ಹಂಪಿಯ ಸ್ಮಾರಕಗಳನ್ನು ಆತ್ಮೀಯವಾಗಿ ಪರಿಚಯಿಸುವ ಗುಣವುಳ್ಳದ್ದು. ಮುಖ್ಯವಾಗಿ, ವಿದ್ಯಾರ್ಥಿಗಳನ್ನೂ, ಜನಸಾಮಾನ್ಯರನ್ನೂ ಗಮನದಲ್ಲಿರಿಸಿಕೊಂಡು ಸಿದ್ಧಗೊಂಡುದು. ಇದನ್ನು ರಚಿಸಿರುವ ಕೆ.ರಾಮಸ್ವಾಮಯ್ಯಂಗಾರ್ ಅವರು ವಿಜಯನಗರ ಇತಿಹಾಸವನ್ನು ಆದ್ಯಂತವಾಗಿ ಅಭ್ಯಾಸ ಮಾಡಿದಂತೆ ತೋರುತ್ತದೆ. ಇಂಥದೊಂದು ಕೈಪಿಡಿಯನ್ನು ರಚಿಸುವ ಪ್ರೇರಣೆ ಅವರಿಗೆ ಒದಗಿದ್ದರೆ, ಅದು ವಿಜಯನಗರ ಇತಿಹಾಸದಲ್ಲಿ ಹುದುಗಿರುವ ಮಹೋನ್ನತ ಸಂಗತಿಗಳಿಂದಲೇ. ಹಿಂದಿನ ಹಾಗೂ ಸಮಕಾಲೀನ ಶಾಸನಸಂಪುಟಗಳು, ಪ್ರಕಟಿತ ಬರಹಗಳ, ಸಂದರ್ಶನ ಮತ್ತು ಕ್ಷೇತ್ರಕಾರ್ಯ ಮಾಹಿತಿ ಇತ್ಯಾದಿಯನ್ನು ಅವರು ತಮ್ಮ ಬರವಣಿಗೆಯಲ್ಲಿ ಬಳಸಿಕೊಂಡಿರುವರು. ಅಲ್ಲದೆ, ಹಂಪಿಯ ಸ್ಮಾರಕಗಳ ಸ್ವಯಂವೀಕ್ಷಣೆಯಿಂದ ಗ್ರಹಿಸಿದ ವಿಚಾರಗಳೂ ಅವರ ಕೈಪಿಡಿಯಲ್ಲಿ ವ್ಯಕ್ತಪಟ್ಟಿವೆ. ತಮಗೆ ದೊರೆತ ಅಲ್ಪ ಕಾಲಾವಧಿಯಲ್ಲೇ ಹಂಪಿಯನ್ನು ಸಮಗ್ರವಾಗಿ ನೋಡಿ ಅಲ್ಲಿಯ ಸ್ಮಾರಕಗಳನ್ನು ಕರಾರುವಕ್ಕಾಗಿ ಹಾಗೂ ಸುಂದರವಾಗಿ ಬಣ್ಣಿಸಿರುವ

ಅವರ ಶ್ರದ್ಧೆ–ಆಸಕ್ತಿಗಳನ್ನು ಗಮನಿಸಿದರೆ, ಜೀವನಪ್ರೀತಿ, ಅಗಾಧ ಉತ್ಸಾಹ ಹಾಗೂ ಬರವಣಿಗೆಯ ಆನಂದಗಳನ್ನು ಹೊಂದಿದ ವ್ಯಕ್ತಿಯಾಗಿ ರಾಮಸ್ವಾಮಯ್ಯಂಗಾರ್ ಅವರು ಕಂಡುಬರುತ್ತಾರೆ.

೪.೨. ದೇಶಿ ಪ್ರವಾಸಿಗರ ದೃಷ್ಟಿಯಲ್ಲಿ ಹಂಪಿ

ಪ್ರವಾಸ ಒಂದು ಚೇತೋಹಾರಿ ಅನುಭವವಾಗಿದೆ. ದೇಶವಿದೇಶಗಳ ಅಪೂರ್ವ 'ತಾಣ'ಗಳನ್ನು ನೋಡಬೇಕೆಂಬುದು ಮನುಷ್ಯನ ಮೂಲಬಯಕೆಗಳಲ್ಲಿ ಒಂದಾಗಿದೆ. ಅಂಥ ಬಯಕೆಯ ಪರಿಣಾಮವಾಗಿ ಬೇರೆ ಬೇರೆ ದೇಶದ ಪ್ರವಾಸಿಗರು ನಮ್ಮ ದೇಶಕ್ಕೂ, ನಮ್ಮ ದೇಶದ ಪ್ರವಾಸಿಗರು ವಿದೇಶಗಳಿಗೂ ಹೋಗಿ ಬರುವುದುಂಟು. ಹೀಗೆ ಹೋಗಿ ಬರುವವರು 'ಪ್ರವಾಸ ಕಥನ'ಗಳನ್ನು ಬರೆಯುತ್ತಾರೆ. ಅವರು ತಮ್ಮ ದಿನಚರಿಯ ಪುಟಗಳಲ್ಲಿ ಚಿತ್ರಣ ಹಾಕಿಕೊಂಡಿದ್ದನ್ನು ವಿವರವಾಗಿ ಬರೆಯುವುದುಂಟು. ಆ ಬಗೆಯ 'ಪ್ರವಾಸ ಕಥನ'ಗಳು ಇತಿಹಾಸದ ದಾಖಲೆಗಾಗಿ ಮಾತ್ರ ಉಳಿದುಕೊಳ್ಳದೆ; ಸಾಂಸ್ಕೃತಿಕ ದಾಖಲೆಗಳಾಗಿಯೂ ಉಳಿಯುತ್ತವೆ. ಹೀಗೆ ಕ್ರಿ.ಶ.೧೫ನೇ ಶತಮಾನದ ಪೂರ್ವಾರ್ಧದಿಂದ ೧೬ನೇ ಶತಮಾನದ ಪೂರ್ವಾರ್ಧದವರೆಗೆ ಹಂಪಿಗೆ ಬಂದು ಹೋದ ಪ್ರವಾಸಿಗರು ಇರುವಂತೆ ಇಪ್ಪತ್ತನೆಯ ಶತಮಾನದ ಮೊದಲೆರಡು ದಶಕಗಳಲ್ಲಿ ಇಲ್ಲಿಗೆ ಬಂದು ಹೋದ ಕೆಲವು ಉದಾಹರಣೆಗಳು ಇವೆ. ಹಂಪಿಯನ್ನು ಸಂದರ್ಶಿಸಿದ ದೇಶಿ ಪ್ರವಾಸಿಗರಲ್ಲಿ ಕೆಲವರು; ಕೆಲ ಪ್ರವಾಸಿ ಕೃತಿಗಳನ್ನು ಸಹ ರಚಿಸಿದ್ದಾರೆ. ಭಾರತೀಯರಿಗೆ ಪ್ರವಾಸದಷ್ಟೇ ಮತ್ತೊಂದು ಹಿತಕರವಾದ ಮತ್ತು ಅವರ ಮನಸ್ಸಿಗೆ ನೆಮ್ಮದಿ ನೀಡುವ ಅಂಶ ಎಂದರೆ ಧಾರ್ಮಿಕ ಯಾತ್ರೆಯಾಗಿದೆ.

೪.೨.೧. ದೇಶಿ ಪ್ರವಾಸಿಗರ/ಯಾತ್ರಿಕರ ಹಿನ್ನೆಲೆಯಲ್ಲಿ ಹಂಪಿ

ಭಾರತೀಯರಿಗೆ ದೈವದಲ್ಲಿ ಹೆಚ್ಚು ನಂಬಿಕೆ, ತಮ್ಮ ಸಫಲತೆ ಮತ್ತು ವಿಫಲತೆಗಳಿಗೆಲ್ಲಾ ದೈವವೇ ಕಾರಣವೆಂದು ಅವರು ನಂಬಿದ್ದಾರೆ. ಆ ಕಾರಣಕ್ಕಾಗಿ ತಮ್ಮ ನೆಚ್ಚಿನ ಮತ್ತು ಭಕ್ತಿಯ ಕೇಂದ್ರಗಳಾದ ದೇವಾಲಯಗಳಿಗೆ ಹಿಂದಿನಿಂದಲೂ ಭೇಟಿ ನೀಡಿ ತಮ್ಮ ಇಷ್ಟ ದೈವದ ದರ್ಶನ ಮಾಡಿ ಕೃತಾರ್ಥರಾದ ಅನೇಕ ಉದಾಹರಣೆಗಳಿವೆ. ತಮ್ಮ ವಿಲಾಸಕ್ಕಾಗಿ ಮತ್ತು ತಮ್ಮ ಮೋಕ್ಷ ಸಾಧನೆಗೆ ಇಲ್ಲವೇ ಯಾತ್ರೆಯ ಉದ್ದೇಶಕ್ಕಾಗಿ, ಇಲ್ಲವೇ ಆಧ್ಯಾತ್ಮಿಕ ಸಿದ್ಧಿ ಸಾಧನೆಗಾಗಿ ಇಲ್ಲವೇ ತಮ್ಮ ಅರಿಕೆಗಳನ್ನು ತೀರಿಸುವ ಮತ್ತು ದೇವರ ದರ್ಶನದಿಂದ ಪುನೀತರಾಗುವ ಉದ್ದೇಶದಿಂದ ಅನೇಕರು ಹಿಂದಿನಿಂದಲೂ ಹಲವು ದೇವಾಲಯಗಳಿಗೆ ಭೇಟಿ ನೀಡುವ ಪರಿಪಾಠವಿದೆ. ಈ ಮೇಲಿನ ಉದ್ದೇಶಗಳಿಂದ ಹಂಪಿಯ ವಿವಿಧ ಭಾಗಗಳಿಗೆ ಭೇಟಿ ನೀಡಿದವರನ್ನು ಇಲ್ಲಿನ ಕೆಲವು ಶಿಲಾ ಶಾಸನಗಳು ದಾಖಲಿಸಿವೆ. ಅದರಂತೆ ಇಲ್ಲಿನ ಕೆಲವು ದೇವಾಲಯಗಳ ಪ್ರವೇಶ ದಾರಿಗಳಲ್ಲಿ ಮತ್ತು ದಾರಿಗೆ ಅಭಿಮುಖವಾಗಿ ನೆಲಹಾಸುಗಲ್ಲಿನ ಮೇಲೆ ಕೆತ್ತಲ್ಪಟ್ಟ ಕೆಲವು ಶಿಲ್ಪಗಳು ಇದ್ದು, ಅವುಗಳನ್ನು ಉಗುಳುಮಾರಿಗಂಡ ಎಂದು ಸ್ಥಳೀಯರು ಕರೆಯುತ್ತಾರೆ.[೧೯] ವಾಸ್ತವವಾಗಿ ಅವು ಇಲ್ಲಿಗೆ ಭೇಟಿ ನೀಡಿ ಮುಕ್ತಿ ಹೊಂದಿದವರ ಶಿಲ್ಪಗಳಾಗಿದ್ದು, ಆ ಶಿಲ್ಪಗಳ ಕೆಳಭಾಗದಲ್ಲಿ ಕೆಲ ವ್ಯಕ್ತಿಯ ಹೆಸರುಗಳನ್ನು ಉಲ್ಲೇಖಿಸುವ ಕೆಲವು ಬರಹಗಳಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಪೂಜ್ಯ ಶ್ರೀ ಮತಂಗ ಮುನಿಗಳ ನೆಲೆಬೀಡಾದ ಹಂಪಿಯ ಮತಂಗ ಪರ್ವತಕ್ಕೆ ಮತ್ತು ಇತರಡೆಗೆ ಪ್ರಾಚೀನ ಕಾಲದಿಂದಲೂ ಅಂದರೆ ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ಅನೇಕ ರಾಜ, ಮಹಾರಾಜರು, ಅಧಿಕಾರಿಗಳು, ಜನರು ಸಹ ಭೇಟಿ ನೀಡಿ ಕೃತಾರ್ಥರಾದರೆಂದು ಇಲ್ಲಿನ ಶಿಲಾ ಶಾಸನಗಳು ದೃಢೀಕರಿಸಿವೆ. ಹಂಪಿಯ ಮತಂಗ ಬೆಟ್ಟದ ವಿವಿಧ ಭಾಗಗಳಲ್ಲಿ ಹಲವು ಶಿಲಾ ಶಾಸನಗಳು ದೊರೆತಿವೆ. ಅವುಗಳಲ್ಲಿ ಕೆಲವನ್ನು ಈಗಾಗಲೇ ಕನ್ನಡ ವಿ.ವಿ. ಹೊರತಂದಿರುವ ಹಂಪಿ ಶಾಸನ ಸಂಪುಟ ಮತ್ತು ಚನ್ನಬಸಪ್ಪ ಎಸ್.ಪಾಟೀಲ್‌ರವರು ಪ್ರಕಟಿಸಿದ ಶಾಸನ ಸಂಪುಟಗಳಲ್ಲಿ ಮತ್ತು ಇತರಡೆ ಪ್ರಕಟಿಸಲಾಗಿದೆ. ಈ ಪರ್ವತದ ಬಳಿ ಮಂಟಪ, ಬಾವಿ, ತೊಟ್ಟಿ ಮಾಡಿದ್ದನ್ನು ಇಲ್ಲವೇ ಮಾಡಿಸಿದ್ದನ್ನು ಮತ್ತು ಅಲ್ಲಿರುವ ದೇವಾಲಯಗಳಿಗೆ ದಾನ ನೀಡಿದ ವಿವರವನ್ನು ಅಥವಾ ದೇವಸ್ಥಾನ ಕಟ್ಟಿಸಿದ ವಿವರವನ್ನು ಇವುಗಳು ದಾಖಲಿಸಿವೆ. ಇದೇ ಶಾಸನಗಳು ವಿವಿಧ ಕಾಲಗಳಲ್ಲಿ ನಾಡಿನ ವಿವಿಧ ಮೂಲೆಗಳಿಂದ ಇಲ್ಲಿಗೆ ದರ್ಶನಾರ್ಥಿಗಳಾಗಿ ಬಂದು, ಇಲ್ಲಿಯ ಬೆಟ್ಟವನ್ನು ಮತ್ತು ಇಲ್ಲಿಯ ದೇವಾಲಯವನ್ನು ದರ್ಶನ ಪಡೆದ ಅನೇಕರ ವಿವರಗಳನ್ನು ಸಹ ದಾಖಲಿಸಿವೆ. ಇವುಗಳಲ್ಲದೆ ನಾನು ಕ್ಷೇತ್ರ ಕಾರ್ಯಕೈಗೊಂಡಾಗ ಇಲ್ಲಿ ಎರಡು ಅಪ್ರಕಟಿತ ಶಾಸನಗಳು ದೊರೆತಿದ್ದು, ಅವು ಸಹ ಇಲ್ಲಿಗೆ ಬಂದ ದರ್ಶನಾರ್ಥಿಗಳ ವಿವರವನ್ನು ಒಳಗೊಂಡಿವೆ. ಅವುಗಳನ್ನು ಪ್ರಕಟಿತ ಮತ್ತು ಆಪ್ರಕಟಿತ ಶಿಲಾ ಶಾಸನಗಳೆಂದು ವಿಭಾಗಿಸಿಕೊಂಡು ಇಲ್ಲಿ ಅಧ್ಯಯನ ಮಾಡಲಾಗಿದೆ.

ಅ) ಪ್ರಕಟಿತ ಶಾಸನಗಳು

ನಮ್ಮ ನಾಡು ಮತ್ತು ಹೊರಗಿನ ನಾಡುಗಳಿಂದ ಹಂಪಿಯ ಮತಂಗೇಶ್ವರನ ದರ್ಶನಕ್ಕಾಗಿ ಬಂದ ಅನೇಕರ ವಿವರಗಳನ್ನು ಹಂಪಿಯ ಮತಂಗ ಬೆಟ್ಟದಲ್ಲಿ ದೊರೆತ ಶಾಸನಗಳು ವಿವರಿಸುತ್ತವೆ. ಇಲ್ಲಿ ದೊರೆತ ಹಲವು ಶಾಸನಗಳಲ್ಲಿ ಸುಮಾರು ೧೩ ಶಾಸನಗಳು ನೇರವಾಗಿ ಶ್ರೀ ಮಾತಂಗ ದೇವರ ಇಲ್ಲವೇ ಮತಂಗಬೆಟ್ಟಕ್ಕೆ ಬಂದ ದರ್ಶನಾರ್ಥಿಗಳ ವಿವರಗಳನ್ನು ಉಲ್ಲೇಖಿಸಿವೆ. ಅದೇ ರೀತಿ ಇಲ್ಲಿರುವ ನಾಲ್ಕು ಶಾಸನಗಳು ಮಾತ್ರ ಮತಂಗ ಪರ್ವತದಿಂದ ಶ್ರೀ ವಿರುಪಾಕ್ಷನನ್ನು ಇಲ್ಲವೇ ಶ್ರೀ ವಿರುಪಾಕ್ಷನ ಕಳಶವನ್ನು ಕಂಡು ದರ್ಶನಾರ್ಥಿಗಳು ಕೃತಾರ್ಥರಾದರು ಎನ್ನುವುದನ್ನು ಪರೋಕ್ಷವಾಗಿ ವಿವರಿಸುತ್ತವೆ. ಈ ಹಿನ್ನೆಲೆಯಲ್ಲಿ ಇಲ್ಲಿ ದೊರೆತ ಪ್ರಕಟಿತ ಶಾಸನಗಳನ್ನು ವಿವರಿಸಲಾಗಿದೆ.

೧. ಮಂತಗ ಪರ್ವತದ ವೀರಭದ್ರ ದೇವಾಲಯದ ಉತ್ತರ ದಿಕ್ಕಿಗೆ ಅನೇಕ ಶಾಸನಗಳುಳ್ಳ ಬಂಡೆಯಲ್ಲಿರುವ ನಾಗರಿ ಶಾಸನದ ಕೆಳ ಭಾಗದಲ್ಲಿರುವ ಶಾಸನ[೧೧೫]

೨. ಸಾಳವಾಹನ ಶಕದ ರಲುದ್ರಿ ಸಂ

೩. ವತ್ಸರದ ಅಸ್ವೀಜ ಸುಧ ೧೧

೪. ಸೋಮವಾರದಲು ಕಲುಸಿಕ

೫. ವಿಸ್ವಾಮಿ ಗೋತ್ರದ ಲೊಂಬೆ

೬. ರಾಜನ ಮಲಪನ ಮಗ ಅ

೭. ನತಪನು ಮತಂಗದೇವರ ದರು

೮. ಶನವಾದನು

ಈ ಮೇಲಿನ ಶಾಸನವು ರೌದ್ರಿಸಂವತ್ಸರದ ಆಶ್ವೀಜ, ಶು.೧ ಸೋಮವಾರದಂದು ವಿಶ್ವಾಮಿತ್ರ ಗೋತ್ರದ ಮಲಪನ ಮಗ ಅನಂತಪನು ಮತ[ಂ]ಗ ದೇವರ ದರ್ಶನವನ್ನು ಮಾಡಿದ್ದನ್ನು ತಿಳಿಸುತ್ತದೆ.

೨) ಮೇಲಿನ ಶಾಸನದ ಹತ್ತಿರದ ಇನ್ನೊಂದು ಬಂಡೆಯ ಮೇಲಿರುವ ಶಾಸನ[೧೧೬]

೧. ಆಂಗಿರಸ ಸಂವತ್ಸರದ ಪುಷ್ಯ ಶು ೬ ಸೋಮ ಸಂಗನು ಕೆತಪ್ಪನ

೨. ಮಗ ಮಾದಂಣನು ಮತಂಗ ಪರ್ವತಕೆ ಬಂದು ವಿರೂಪಾಕ್ಷ

೩. ದೇವರ ಕಂಡು ಕೃತಾರ್ಥನಾದನು(ಪರಿಷ್ಕೃತ ಪಾಠ)

ಈ ಮೇಲಿನ ಶಾಸನವು ಆಂಗೀರಸ ಸಂವತ್ಸರದ ಪುಷ್ಯ, ಶು.೬, ಸೋಮವಾರಂದು ಕೇತಪ್ಪನ ಮಗ ಮಾದಣನು ಮತಂಗ ಪರ್ವತಕ್ಕೆ ಬಂದು (ಅಲ್ಲಿಂದ) ವಿರೂಪಾಕ್ಷ ದೇವರನ್ನು ಕಂಡಂತೆ ತಿಳಿಸುತ್ತದೆ.

೩) ದೇವಾಲಯದ ವಾಯುವ್ಯ ದಿಕ್ಕಿಗೆ ಮೆಟ್ಟಿಲುಗಳ ಪಕ್ಕದ ಗುಂಡಿನ ಮೇಲಿರುವ ಶಾಸನ[೧೧೭]

೧. ಶ್ರೀ

೨. ಪ್ಲವಂಗ ಸಂ ಭಾದ್ರಪದ ಬ ೧ ಲ ಬಾಗಿಯಹ

೩. ಳಿಯ ಹರಿಯಪನ ಮಗ ನಾಗಪ ಬಂದನು

ಈ ಮೇಲಿನ ಶಾಸನವು ಪ್ಲವಂಗ ಸಂವತ್ಸರದ ಭಾದ್ರಪದ, ಬ. ಒಂದು ಎನ್ನುವ ಕಾಲವನ್ನು ಉಲ್ಲೇಖಿಸಿದ್ದು, ಆ ದಿನದಂದು ಬಾಗಿಯ ಹಳ್ಳಿಯ ಹರಿಯಪನ ಮಗ ನಾಗಪನು ಈ ಪರ್ವತಕ್ಕೆ ಬಂದದ್ದನ್ನು ಉಲ್ಲೇಖಿಸುತ್ತದೆ.

೪) ಅದೇ ದೇವಾಲಯದ ಉತ್ತರಕ್ಕಿರುವ ಮೆಟ್ಟಿಲುಗಳ ಪಕ್ಕದ ಬಂಡೆಯ ಮೇಲಿರುವ ಶಾಸನ[೧೧೮]

೧. ರಜದಿರಜ ಪರಮೇಸ್ವರ ಶ್ರೀ ವೀರಪ್ರತಾಪ[ದೇವ]

೨. . . . .ಹಿಸ್ವರ ಸಂವಚರದ ಚತುದೆಸೆ . . ಷ್ಟದಲು ಮತಂಗ ಪರ್ವ . .

೩. ಶ್ರೀ ವೀರಹರಿಹರ ಬದುದವನ . .[ಯ] . . . . ದ ಶ್ರೀ ಗೋಮೂರ್ತಿ . . . .

ವರಂ . . . ವರು ಮಾ

೪. . . . . ಮಾದೇವಿಯರು

ತ್ರುಟಿತವಾಗಿರುವ ಈ ಶಾಸನದಲ್ಲಿ ಉಳಿದಿರುವ ಅಕ್ಷರಗಳ ಆಧಾರದ ಮೇಲೆ ಮತಂಗ 'ಪರ್ವತವನ್ನು ಮತ್ತು ರಾಜನಾದ ವೀರ ಹರಿಹರನು ಬಂದ ವಿವರವನ್ನು ಹೆಸರಿಸುತ್ತದೆ. ಅಲ್ಲದೆ ಈತನೊಂದಿಗೆ ಭೇಟಿ ನೀಡಿದ ಶ್ರೀ ಗೋಮೂರ್ತಿ (ಪ್ರಾಯಶಃ ಆತನ ಗುರು) ಮತ್ತು ಆತನೊಂದಿಗೆ ಮಾದೇವಿಯರು (ಪ್ರಾಯಶಃ ಆತನ ರಾಣಿಯರು) ಇಲ್ಲಿಗೆ ಭೇಟಿ ನೀಡಿದ ವಿವರವನ್ನು ಇದು ಒಳಗೊಂಡಿದೆ.

೫) ಮೇಲಿನ ಶಾಸನದ ಬಳಿ ಇನ್ನೊಂದು ಬಂಡೆಯ ಮೇಲಿರುವ ಶಾಸನ[೧೯]

೧.ಆನಂದ ಸಂವತ್ಸರದ ಸ್ರಾವಣ ಸು ೧ ಬಾ

೨.ರಾಮಾಯ ಮಗ ಪಿರಿಯ ನಗಣ ವಿರೂಪಾ

೩.ಕ್ಷದೇವರ ಸಿಖರಕೆ ನಮ[ಸ್ಕಾರ]ವ ಮಾಡಿ[ಕ್ರು]

೪.ತಾರ್ಥ್ಥ[ೞ] ನಾದ

೫.ಉದಿಯಗಿರೆಯ ಕಂಪಣನ ಮ

೬.ಗ ಮಲಪ ದೇವಯ ಕ್ರುತಾ[ರ್ಥ್ಥ]ನಾದ

ಶಾಸನದಲ್ಲಿ ಆನಂದ ಸಂವತ್ಸರದ ಉಲ್ಲೇಖವಿದ್ದು, ಅದು ಆನಂದ, ಶ್ರಾವಣ, ಸು.೧ ಭಾನುವಾರವೆಂದಿರುತ್ತದೆ. ರಾಮಾಯನ ಮಗ ಪಿರಿಯ ನಗಣನು ವಿರೂಪಾಕ್ಷದೇವರ ಶಿಖರಕ್ಕೆ ನಮಸ್ಕಾರವನ್ನು ಮಾಡಿ ಕೃತಾರ್ಥನಾದಂತೆ ತಿಳಿಯುತ್ತದೆ. ಇದೇ ಶಾಸನ ಮುಂದುವರಿದು ಉದಿಯಗಿರಿಯ ಕಂಪಂಣನ ಮಗ ಮಲಪದೇವನು [ವಿರೂಪಾಕ್ಷಗೋಪುರ ದರ್ಶನ ಮಾಡಿ] ಕೃತಾರ್ಥ್ಥನಾದನೆನ್ನುವ ವಿವರವನ್ನು ಇದು ಉಲ್ಲೇಖಿಸಿದೆ.

೬) ಈ ಮೇಲಿನ ಶಾಸನದ ಕೆಳಗೆ ಇರುವ ಶಾಸನ[೨೦]

೧. ಪಿಂಗಳ ಸಂವತ್ಸರದ ಏಕಾದೆಸೆ ಭಾನುವಾರದಲು ಮಟ್ಟರ

೨. ಸರ ಮಂಗಾಯ ಮಗಳು ರಾಮಾಯಿ ವಿರು[ಪಾ]ಕ್ಷದೇವರ

೩. ಕಳಶವನು ಕಂಡು ನಮಕ್ಸಾರವನು ಮಾಡಿ ಕ್ರುತಾರ್ಥ್ಥ ಅದ[ಳು]

೪. ರಾಯಣ್ಣ ಸು . ಡದ ದೂಭಪ್ಪನ ಮಗ ಮಯನಪ್ಪ ಮಯಿ

೫. ಲಪ್ಪನ ತಾಯಿ ಸಾತಾಯಿ ಸಾತಾಯ ಮಾಂ

೬. ವೂ ಮಲ್ಲಪ ವೂಲಪ ಮಾಯಕ ಮಾಯಕನ ಮಗಳು

೭. ಪೊವಾಯಿ ಕಲ್ಲಾಯಿ ವಿಟಾರ ದೇವಂಣ

ಈ ಮೇಲಿನ ಶಾಸನವು ಪಿಂಗಳ ಸಂವತ್ಸರದ ಏಕಾದಶಿ ಭಾನುವಾರ ಎಂದಿದ್ದು ತಿಂಗಳನ್ನು ಸ್ಪಷ್ಟವಾಗಿ ಹೆಸರಿಸಿಲ್ಲ. ಇದುಮಟ್ಟರಸ ಮತ್ತು ಮಂಗಾಯರ ಮಗಳಾದ ರಾಮಾಯಿಯು ವಿರೂಪಾಕ್ಷದೇವರ ಕಳಸವನ್ನು ಕಂಡು ಕೃತಾರ್ಥಳಾದಳೆಂದು ಉಲ್ಲೇಖಿಸಿದೆ. ಶಾಸನ ಮುಂದುವರಿದು ರಾಯಣ್ಣ, ಧೂಭಪ್ಪನ ಮಗ ಮಯನಪ್ಪ, ಮಯಿಲಪ್ಪನ ತಾಯಿ ಸಾತಾಯಿ, ಮಲ್ಲಪ, ಮಾಯಕ, ಮಾಯಕನ ಮಕ್ಕಳಾದ ಪೂವಾಯಿ, ಕಲ್ಲಾಯಿ, ನಿಟ್ಟೂರ ದೇವರ್ಣ[ವಿರೂಪಾಕ್ಷದೇವರ ಕಳಸವನ್ನು ಕಂಡು] ಕೃತಾರ್ಥರಾದರು ಎನ್ನುವ ಅಂಶವನ್ನು ಸ್ಪಷ್ಟಪಡಿಸಿದೆ.

೭) ಈ ಮೇಲಿನ ಶಾಸನದ ಕೆಳಗೆ ಇರುವ ಶಾಸನ[೨೦]

೧. ಪಿಂಗಳ ಸಂವತ್ಸರದ ಫಾಲ್ಗುಸು ೧೦ ಆ ಸಾಮ

೨. ಣನ ಮಂಚೆಯವೆಯ ಮಗ ಕಮಾಯವ್ಯಗಳ

೩. ಶಿಷ್ಯ ಹಡಡೆ ಸಾಯಂಣನೂ ಮತಂಗ ಪ

೪. ರ್ವ್ವತನಂ ವಿರೂಪಾಕ್ಷದರ್ಷರಾಗಿ

೫. ಕ್ರುತಾರ್ಥ್ಥನಾದ

ಈ ಮೇಲಿನ ಶಾಸನದಲ್ಲಿ ಶಕವರ್ಷದ ಉಲ್ಲೇಖವಿಲ್ಲ. ಆದರೆ ಪಿಂಗಳ, ಫಾಲ್ಗುಣ, ಸು.೧೦, ಆದಿವಾರ ಎನ್ನುವ ಉಲ್ಲೇಖ ಮಾತ್ರವಿದೆ. ಅಂದು ಹಡದೆ ಸಾಯಂಣ ಎಂಬುವವನು ಮತಂಗ ಪರ್ವತದಿಂದ ವಿರೂಪಾಕ್ಷದೇವರ ದರ್ಶನ ಪಡೆದು ಕೃತರ್ಥನಾದ ಎಂದು ಉಲ್ಲೇಖಿಸಿದೆ.

೮) ಈ ಮೇಲಿನ ಶಾಸನದ ಪಕ್ಕದಲ್ಲಿರುವ ಶಾಸನ[೨೧]

೧. ಕಾಳಯುಕ್ತಿ ಸಂವತ್ಸರದ

೨. ಮಾರ್ಗಶಿರ ಶುದ್ಧ ಪೌರ್ಣಮಿ

೩. ಅಲಾಮ . ಹಣ . . . .

೪. ಲಿನ .ದ ನಾಗೋಯಿಗಳ ಪ್ರ

೫. ಮಯಿಲಣನು ಮತಂ

೬. ಗೇಶ್ವರ ದೇವರ ದ[ರ್ಶ]ನವ ಮಾ

೭. ಡಿ ವಿರೂಪಾಕ್ಷದೇವರ ಶಿಖರ

೮. ದರ್ಶನವ ಮಾಡಿ ಕೃತಾರ್ಥನಾ

೯. ದನು

ತ್ರುಟಿತವಾಗಿರುವ ಈ ಶಾಸನವು ಕಾಳಾಯುಕ್ತಿ ಸಂವತ್ಸರ ಸಂವತ್ಸರ ಮಾರ್ಗಶಿರ ಮಾಸ

ಪುಣ್ಣಮಿಯಲ್ಲಿ ನಾಗೋಯಿಗಳ ಪುತ್ರ (?೦ ಮಯಿಲಣನು ಮತಂಗೇಶ್ವರ ದೇವರ ದರ್ಶನ ಮಾಡಿ ನಂತರ ವಿರೂಪಾಕ್ಷ ದೇವರ ಶಿಖರ ದರ್ಶನ ಮಾಡಿ ಕೃತರ್ಥನಾದ ಎನ್ನುವ ವಿವರವನ್ನು ಉಲ್ಲೇಖಿಸುತ್ತದೆ.

೯) ವೀರಭದ್ರ ದೇವಾಲಯಕ್ಕೆ ಹತ್ತುವ ಜಾಗದಲ್ಲಿ ಮೆಟ್ಟಿಲುಗಳ ಮೇಲಿರುವ ಶಾಸನ[೧೨೩]

೧. . . . . ವತ್ಸರದ ಆಸಾಡ ಬ ೧೦ ಆ

೨. . . . . ಧಿರಾಜರಾಜ ಪ

೩. . . . . ರಾಯಸಲ ದಾ

೪. . . . . ರಗಳ ದೋಮ

೫. . . . . ಮತಂಗ ಪ

೬. . . . . ಮಾಡಿ ಕೃತಾರ್ಥ

(ಮುಂದಿನ ಸಾಲು ಮೆಟ್ಟಿಲಿನ ಅಡಿಯಲ್ಲಿದೆ)

ತ್ರುಟಿತವಾಗಿರುವ ಮತ್ತು ಅಲ್ಲಲ್ಲಿ ಅಕ್ಷರಗಳು ಸವೆದಿರುವ ಈ ಶಾಸನದ ಉದ್ದೇಶವನ್ನು ಸ್ಪಷ್ಟವಾಗಿ ಅರ್ಥೈಸುವುದು ಕಷ್ಟ. ಇಲ್ಲಿರುವ ರಾಜಾಧಿರಾಜ ರಾಜ ಪರಮೇಶ್ವರ ಎನ್ನುವ ಸಾಲುಗಳು ಬಹುಶಃ ರಾಜನೋರ್ವ ತನ್ನ ಪರಿವಾರದೊಂದಿಗೆ ಇಲ್ಲಿಗೆ ಭೇಟಿ ನೀಡಿ ಮತಂಗ ದೇವರನ್ನು ದರ್ಶನ ಮಾಡಿ ಕೃತಾರ್ಥನಾದ ಎನ್ನುವ ವಿವರಗಳನ್ನು ಈ ಶಾಸನದಿಂದ ಅರ್ಥ ಮಾಡಿ ಕೊಳ್ಳಬಹುದು.

೧೦) ಮತಂಗದೇವರ ಗುಹೆಯ ಎದುರು ಬಂಡೆಯಲ್ಲಿರುವ ಶಾಸನ[೧೨೪]

೧. . . . . ನಿ

೨. . . . ಣ ತಂದೆ ಪೊಗಳಪ

೩. . . . ನ ಮಗ ರಂಗಪನು ತಾಯಿ

೪. ಬನದಮನು

೫. . . . .

೬. ಮ . . ಮದೇವಿಯ ಮಗ ಬೋಗಣ

೭. ನ ಮಗ ಗೋಪಣನ ತಾಯಿ ಮಾದಮ

ತ್ರುಟಿತವಾಗಿರುವ ಈ ಶಾಸನದಲ್ಲಿ ಪೊಗಳಪ, ರಂಗಪ, ಅವನ ತಾಯಿ ಬನದಮ, ಬೋಗಣ ಮತ್ತು ಮಾದಮನ ಮಗ ಗೋಪಣರ ಉಲ್ಲೇಖಗಳಿದ್ದು, ಪ್ರಾಯಶಃ ಅವರು ಮತಂಗ

ಪರ್ವತಕ್ಕೆ ಭೇಟಿ ನೀಡಿದ್ದರ ಹಿನ್ನಲೆಯಲ್ಲಿ ಈ ಶಾಸನ ಬರೆದಿರಬೇಕೆನಿಸುತ್ತದೆ.

೧೧) ಮತಂಗದೇವರ ಗುಹೆ ಬಳಿಯ ಕೊಳದ ಹತ್ತಿರದಲ್ಲಿರುವ ಬಂಡೆಯ ಮೇಲಿನ ಶಾಸನ[೧೨೫]

೧. ಪರಾಭವ ಸಂವ

೨. ತ್ಸರದ ಆಶ್ವಿಜ ಬ ೯ ಆದಿವಾರದ

೩. ಉ ಭಾರದ್ವಾಜ ಗೋತ್ರದ ಗೊಬುರ ಎ

೪. . . . . ಯ ದೇವಂಣಗಳ

೫. ಮಕಳು ವಿಸಂಣಗಳು

ಈ ಶಾಸನದಲ್ಲಿ ಪರಾಭವ ಸಂವತ್ಸರದ ಆಶ್ವೀಜ, ಬ.೯ ಆದಿವಾರದ ಉಲ್ಲೇಖವಿದ್ದು, ಅಂದು ಗೊಬುರ ದೇವಂಣನ ಮಗ ವಿಸಂಣರು ಇಲ್ಲಿಗೆ ಭೇಟಿ ನೀಡಿದ ನೆನಪಿಗಾಗಿ ಈ ಬರಹವನ್ನು ಬರೆಸಿರಬೇಕೆನಿಸುತ್ತದೆ.

೧೨) ಈ ಮೇಲಿನ ಸ್ಥಳದಲ್ಲಿರುವ ಮತ್ತೊಂದು ಶಾಸನ[೧೨೬]

೧. ರಾಚೆಯನಾಯ್ಕನು

೨. ನಾಗೆನಾಯ್ಕನು

೩. . .ಂಗೆನಾಯ್ಕನು

೪. . . . . . ರಿಗೆಯನಾಯ್ಕನು

೫. ಪರಿ . . . .

೬. ಮಂತಗೇಶ್ವರದೇವರ ದರುಶನವಾಗಿ ಕೃತಾರ್ಥ

೭. ರಾದರು ಶ್ರೀ ರಾಮ

ಲಿಪಿ ಸವೆದಿರುವ ಈ ಶಾಸನವು ರಾಚೆಯನಾಯ್ಕ, ನಾಗೆಯನಾಯ್ಕ, ಮುಂತಾದವರು ಇಲ್ಲಿ ಬಂದು ಮತಂಗೇಶ್ವರ ದೇವರ ದರ್ಶನವನ್ನು ಪಡೆದು ಕೃತಾರ್ಥರಾದಂತೆ ತಿಳಿಸುತ್ತದೆ. ಇದರಲ್ಲಿ ಯಾವುದೇ ಕಾಲದ ಉಲ್ಲೇಖವಿಲ್ಲ. ಶಾಸನದ ಕೊನೆಯಲ್ಲಿ ಶ್ರೀ ರಾಮ ಎನ್ನುವ ಬರಹವಿದ್ದು, ಅದು ಪ್ರಾಯಶಃ ಅದನ್ನು ಬರೆದವನ ಹೆಸರಿರಬೇಕು ಎನಿಸುತ್ತದೆ.

೧೩) ಈ ಮೇಲಿನ ಸ್ಥಳದ ಹತ್ತಿರದಲ್ಲಿರುವ ಇನ್ನೊಂದು ಶಾಸನ[೧೨೭]

೧. ಶ್ರೀ ತ್ರಯಂಬಕದೇವರ ಮಕ್ಕಳು

೨. ಕಾ . . . ಯಕ ಪೆರುಮಾಳೆ ಆದಿಯಕು

೩. . . . . . ತ . . . . . . ವಿರುಪಾ

ಲಿಪಿ ಸವೆದು ಹೋಗಿರುವ ಈ ಶಾಸನ ತ್ರ(ತ್ರಿ)ಯಂಬಕ ದೇವನ ಮಗ ಪೆರುಮಾಳೆ ಮತ್ತು ಇತರರು ಪ್ರಾಯಶಃ ಇಲ್ಲಿಗೆ ಬಂದಿರುವುದನ್ನು ಉಲ್ಲೇಖಿಸುತ್ತದೆ.

ಆ) ಅಪ್ರಕಟಿತ ಶಾಸನಗಳು

ಈ ಪ್ರಬಂಧದ ವಿಷಯಕ್ಕೆ ಸಂಬಂಧಿಸಿದಂತೆ ಕ್ಷೇತ್ರ ಕಾರ್ಯ ಮಾಡುವಾಗ ಶ್ರೀ ಮತಂಗ ಪರ್ವತದ ಪೂರ್ವದಿಕ್ಕಿನ ಗುಂಡಿನ ಮೇಲೆ (ಹತ್ತು ಕೈಯಮ್ಮ ಗುಡಿಯ ಹಿಂಭಾಗದಲ್ಲಿ) ಹಾಗೂ ಆಚ್ಯುತದೇವರಾಯ ಗುಡಿಯಿಂದ ಮಾತಂಗ ಬೆಟ್ಟಕ್ಕೆ ಹತ್ತುವ ಮೆಟ್ಟಿಲ ಬಳಿಯ ಗವಿಯೊಂದರ ದಕ್ಷಿಣ ಭಾಗದಲ್ಲಿ ಇನ್ನೊಂದು ಶಾಸನ ದೊರೆತಿದೆ. ಈ ಎರಡು ಶಾಸನಗಳ ವಿವರ ಈ ಮುಂದಿನಂತಿದೆ.

೧. ಶ್ರೀ ಮತಂಗಪರ್ವತದ ಪೂರ್ವದಿಕ್ಕಿನ ಗುಂಡಿನ ಮೇಲೆ (ಹತ್ತು ಕೈಯಮ್ಮ ಗುಡಿಯ ಹಿಂಭಾಗದಲ್ಲಿ) ಇರುವ ಶಾಸನ

೧. ಕಲಸಪುರದ . . . . . .

೨. ಗಾವುಂಡಗಳ ಮಗ. .

೩. ಪೆದ್ದ ವಿರಣ್ಣನು . . . .ದ

೪. ಬ........ ರಲ್ಲೂ

೫. ಕಂಚು. . . .ಪೇಟೆಯ ಅರ

೬. ವಟಿಗೆಯಂ ಮಾಡಿಸಿ

೭. ಮಂತಗೇಶ್ವರ ದೇವರ ದರುಶನವಾಗಿ

೮. ಕೃತಾರ್ಥನಾದ[೨೮]

ಈ ಮೇಲಿನ ಶಾಸನವು ಕಲ(ಳ)ಸಾಪುರದ ಗಾವುಂಡಗಳ ಮಗ ಪೆದ್ದ ವಿರಣ್ಣನು ಕಂಚು ಪೇಟೆಯ ಅರವಟಿಗೆಯನ್ನು ಮಾಡಿಸಿ ಮತಂಗ ದೇವರ ದರ್ಶನ ಮಾಡಿ ಕೃತರ್ಥನಾದ ವಿವರವನ್ನು ದಾಖಲಿಸಿದೆ.

೨. ಆಚ್ಯುತದೇವರಾಯ ಗುಡಿಯಿಂದ ಮಾತಂಗ ಬೆಟ್ಟಕ್ಕೆ ಹತ್ತುವ ಮೆಟ್ಟಿಲ ಬಳಿಯ ಗವಿಯೊಂದರ ದಕ್ಷಿಣ ಭಾಗದಲ್ಲಿರುವ ಶಾಸನ

೧. ಶ್ರೀ ಮತಂಗೇಶ್ವರನ

೨. ದರುಶನ

೩. ಮಾಡಿದ ಜಾಂ... . ..

೪. ಮಗ. . . . .

೫. ಶ್ರೀ. ಶ್ರೀ. ಶ್ರೀ.

ಮೇಲಿನ ಶಾಸನದ ಮಧ್ಯ ಭಾಗದಲ್ಲಿರುವ ಅಕ್ಷರಗಳು ಸವೆದಿರುವುದರಿಂದ ಇಲ್ಲಿ ಉಲ್ಲೇಖಿಸಿದ ವ್ಯಕ್ತಿಗಳ ಹೆಸರುಗಳು ಸ್ಪಷ್ಟವಾಗುವುದಿಲ್ಲ. ಆದರೂ ವ್ಯಕ್ತಿಯೊರ್ವನು ಮತಂಗೇಶ್ವರನನ್ನು ದರ್ಶನ ಮಾಡಿದ ವಿವರವನ್ನು ಮತ್ತು ಆತ ಈ ಪರ್ವತಕ್ಕೆ ಬಂದದ್ದನ್ನು ಇದು ಉಲ್ಲೇಖಿಸುತ್ತದೆ.

ಇಲ್ಲಿನ ಶಾಸನಗಳಲ್ಲಿ ನಿರ್ದಿಷ್ಟ ಕಾಲದ (ಶಕೆ/ವಿಕ್ರಮ ವರ್ಷಗಳ) ಉಲ್ಲೇಖವಿಲ್ಲ. ಕೇವಲ ಸಂವತ್ಸರ ಮತ್ತು ವಾರ ಹಾಗು ಅಪರೂಪಕ್ಕೆ ತೇದಿಯ ಉಲ್ಲೇಖಗಳು ಮಾತ್ರವಿದ್ದು, ಕೇವಲ ಅವುಗಳ ಆಧಾರದಿಂದ ನಿಖರವಾದ ಕಾಲಗಣನೆ ಕಷ್ಟ ಸಾಧ್ಯ. ಇಲ್ಲಿರುವ ಶಾಸನಗಳ ಭಾಷೆ, ಬರಹ ಮತ್ತು ಲಿಪಿ ಶೈಲಿಗಳನ್ನು ಸೂಕ್ಷ್ಮವಾಗಿ ಅಧ್ಯಯನಮಾಡಿದರೆ ಇವು ಪ್ರಾಯಶಃ ಚಾಲುಕ್ಯ, ವಿಜಯನಗರ, ವಿಜಯನಗರೋತ್ತರ ಶೈಲಿಯಲ್ಲಿದ್ದು, ಅವು ಆ ಕಾಲಘಟ್ಟಕ್ಕೆ ಸೇರಿದ ಶಾಸನಗಳೆಂದು ತಿರ್ಮಾನಿಸಬಹುದಾಗಿದೆ.

ಈ ಶಾಸನಗಳಲ್ಲಿ ನಾವು ಅವಲೋಕಿಸಬೇಕಾದ ಮುಖ್ಯವಾದ ಸಂಗತಿಗಳೆಂದರೆ: ಒಂದು– ಇಲ್ಲಿ ಬಳಕೆ ಮಾಡಲ್ಪಟ್ಟಿರುವ ದರುಶನ ಮಾಡಿದ ಮತ್ತು ಕೃತಾರ್ಥನಾದ ಎನ್ನುವ ಪದಗಳು. ದೈವದ ಮೇಲಿನ ನಂಬಿಕೆಯಿಂದ ಮತ್ತು ತಮ್ಮ ಬಯಕೆಗಳು ತೀರಿದಾಗ ಮುಡಿ, ಕಾಣಿಕೆ ಕೊಟ್ಟು, ತಾವು ಅಂದು ಕೊಂಡಿರುವ ಅರಿಕೆಗಳನ್ನು ತೀರಿಸಿಕೊಂಡು ದೇವರ ದರ್ಶನ ಮಾಡಿ ಪುನೀತರಾದವೆಂದು ಭಾವಿಸುವುದು ಸರ್ವೇ ಸಾಮಾನ್ಯ. ಆದರೆ ಇಲ್ಲಿ ಕೃತಾರ್ಥನಾದ ಎನ್ನುವ ಪದವನ್ನು ಬಳಕೆ ಮಾಡಿರುವುದನ್ನು ಗಮನಿಸಿದರೆ ಪ್ರಾಯಶಃ ಆ ಕಾಲಕ್ಕಾಗಲೇ ಹಂಪಿ ಮತ್ತು ಅಲ್ಲಿನ ಶ್ರೀ ಮತಂಗ ಪರ್ವತ ಪ್ರಸಿದ್ಧವಾದ ಧಾರ್ಮಿಕ ಕೇಂದ್ರವಾಗಿ ಅಸ್ತಿತ್ವಕ್ಕೆ ಬಂದಿರಬೇಕೆನಿಸುತ್ತದೆ. ಎರಡು– ಜನರಲ್ಲಿ ಅದು ಮುಕ್ತಿಯನ್ನು ಕರುಣಿಸುವ, ಸದ್ಗತಿಯನ್ನು ಕಲ್ಪಿಸುವ ಪ್ರಸಿದ್ಧ ಯಾತ್ರಾ ಕೇಂದ್ರವೂ ಆಗಿರಬೇಕೆನಿಸುತ್ತದೆ. ಇಂಥ ಪುಣ್ಯ ಕೇತ್ರಗಳಲ್ಲಿ ಮರಣಹೊಂದಿದರೆ ಸದ್ಗತಿ, ಮುಕ್ತಿ ಹಾಗು ಸ್ವರ್ಗಕ್ಕೆ ಹೋಗುತ್ತಾರೆ ಎಂಬ ನಂಬಿಕೆಗಳು ಆ ಕಾಲದಲ್ಲಿ ಪ್ರಬಲವಾಗಿ ಹುಟ್ಟಿಕೊಂಡಿರಬೇಕು. ಈ ಹಿನ್ನೆಲೆಯಲ್ಲಿ ಜನರು ಇಲ್ಲಿಗೆ ಬಂದು ಸ್ವಇಚ್ಛೆಯಿಂದ ಇಲ್ಲಿ ಪ್ರಾಣತ್ಯಾಗ ಮಾಡಿಕೊಂಡಿರಬಹುದೇ? ಈ ಹಿನ್ನೆಲೆಯಲ್ಲಿ ಅಲ್ಲಿ ಪ್ರಾಣ ಕಳೆದುಕೊಂಡವರ ನೆನಪಿಗಾಗಿ ಈ ರೀತಿಯ ಶಾಸನಗಳನ್ನು ಹಾಕಿರಬಹುದೇ? ಎನಿಸುತ್ತದೆ. ಈ ಕಾರಣಕ್ಕಾಗಿ ಹಂಪಿಗೆ ಭೇಟಿ ನೀಡಿದ ಪ್ರವಾಸಿಗರ ಇಲ್ಲವೇ ಯಾತ್ರಿಕರು ಬಹು ಮುಖ್ಯ ಎನಿಸುತ್ತದೆ. ಜನರನ್ನು ಜಾಗೃತಗೊಳಿಸಲು ಪ್ರಯತ್ನಿಸಿದ್ದಾರೆ.

೪.೩. ದೇಶಿ ವಿದ್ವಾಂಸರ ದೃಷ್ಟಿಯಲ್ಲಿ ಹಂಪಿ

ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಪ್ರಮುಖ ಮಾಧ್ಯಮಗಳೆಂದರೆ ಭಾಷಣಗಳು ಮತ್ತು ಲೇಖನಗಳು. ಇವುಗಳಿಗೆ ರಾಷ್ಟ್ರೀಯ ಹೋರಾಟ ಹಾಗೂ ಕರ್ನಾಟಕ ಏಕೀಕರಣ ಚಳುವಳಿಯ

ಸಂದರ್ಭದಲ್ಲಿ ಮತ್ತಷ್ಟು ಪ್ರಾಮುಖ್ಯತೆ ಲಭಿಸಿತು. ಆಗ ರಾಷ್ಟ್ರೀಯ ಹೋರಾಟ ಹಾಗೂ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದವರು ಈ ಮಾಧ್ಯಮಗಳ ಮುಖೇನ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಸತೊಡಗಿದರು. ಆ ಮೂಲಕ ಜನರಲ್ಲಿ ನಾಡು, ನುಡಿ, ರಾಷ್ಟ್ರದ ಬಗ್ಗೆ ಅಭಿಮಾನ ಮೂಡಿಸುವುದು ಮತ್ತು ಸೇವಾ ಮನೋಭಾವನೆಯನ್ನು ಬೆಳೆಸುವ ಉದ್ದೇಶವನ್ನಿಟ್ಟುಕೊಂಡು ಧಾರ್ಮಿಕ ಕೇಂದ್ರವಾಗಿರುವ ಹಂಪಿಗೆ ಬಹು ಹಿಂದೆ ಅನೇಕ ಪ್ರವಾಸಿಗರು ಮತ್ತು ಯಾತ್ರಿಕರು ಭೇಟಿ ನೀಡಿದ್ದಾರೆ. ಅದರಂತೆ ನಮ್ಮ ನಾಡಿನ ಅನೇಕ ಗಣ್ಯ ವ್ಯಕ್ತಿಗಳು ಚಾರಿತ್ರಿಕ ಸ್ಥಳವಾದ ಹಂಪಿಗೆ ಭೇಟಿ ನೀಡಿದ್ದಾರೆ. ಈ ರೀತಿ ಭೇಟಿ ನೀಡಿದ ಅನೇಕ ಗಣ್ಯರು, ವಿದ್ವಾಂಸರು ನೀಡಿದ ಹೇಳಿಕೆಗಳನ್ನು ಮತ್ತು ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ.

ಕೆಲವರು ಹಂಪಿ ಮತ್ತು ಅದರ ಸುತ್ತಲಿನ ಪರಿಸರವನ್ನು ಕುರಿತಂತೆ ಸಂಶೋಧನೆ ಕೈಗೊಂಡು ಪಿಎಚ್.ಡಿ., ಮತ್ತು ಎಂ.ಫಿಲ್ ಪದವಿಗಳನ್ನು ಪಡೆದಿದ್ದಾರೆ ಇಲ್ಲವೇ ಕೆಲವು ವರದಿಗಳನ್ನು ತಯಾರಿಸಿದ್ದಾರೆ. ಮತ್ತೆ ಕೆಲವರು ಈ ಕ್ಷೇತ್ರದ ಮೇಲೆ ಅಧ್ಯಯನ ಕೈಗೊಂಡು ಮಹತ್ವದ ಕೃತಿಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲಿ ಅವರು ಹಂಪಿಯನ್ನು ಯಾವ ಬಗೆಯಲ್ಲಿ ಕಂಡಿದ್ದಾರೆ? ಅವರು ಹಂಪಿಯನ್ನು ಯಾವ ದೃಷ್ಟಿಯಲ್ಲಿ ಕಾಣಬಯಿಸಿದ್ದಾರೆ ಎನ್ನುವುದನ್ನು ೧. ಲೇಖನಗಳ ಹಿನ್ನೆಲೆಯಲ್ಲಿ ಹಂಪಿ ೨. ಕೃತಿ ಮತ್ತು ಸಂಶೋಧನ ಪ್ರಬಂಧಗಳ ಹಿನ್ನೆಲೆಯಲ್ಲಿ ಹಂಪಿ ೩. ಗಣ್ಯರ ದೃಷ್ಟಿಯಲ್ಲಿ ಹಂಪಿ ಎಂದು ವಿಭಾಗಿಸಿಕೊಂಡು ಇಲ್ಲಿ ಅಧ್ಯಯನ ಮಾಡಲಾಗಿದೆ.

೪.೩.೧. ಲೇಖನಗಳ ಹಿನ್ನೆಲೆಯಲ್ಲಿ ಹಂಪಿ

ಹಂಪಿ ಮತ್ತು ವಿಜಯನಗರ ಸಾಮ್ರಾಜ್ಯದ ಐತಿಹಾಸಿಕ ವಿಷಯವನ್ನೊಳಗೊಂಡು ರಚಿತಗೊಂಡ ಹಲವು ಲೇಖನಗಳಿವೆ. ಇವು ರಾಷ್ಟ್ರೀಯವಾದಿ ಚರಿತ್ರೆಕಾರರ ವಾದದರಿಯಲ್ಲಿ ರೂಪುಗೊಂಡವುಗಳಾಗಿವೆ. ಈ ಲೇಖನಗಳಲ್ಲಿ ಎಲ್ಲಿಯೂ ಸಹ ವಿಜಯನಗರವನ್ನು ಟೀಕಿಸುವುದಾಗಲಿ, ಅಲ್ಲಿನ ಕೊರತೆಗಳನ್ನು ಹೇಳುವುದಾಗಲಿ ಕಂಡುಬರುವುದಿಲ್ಲ. ಅದೊಂದು ಆದರ್ಶ ಸಾಮ್ರಾಜ್ಯವೆಂದು ಪರಿಗಣಿಸಿ ಅಲ್ಲಿರುವುದೆಲ್ಲವೂ ಶ್ರೇಷ್ಠವೆಂದು ಕೆಲವರು ಪರಿಗಣಿಸಿದರೆ ಇನ್ನು ಕೆಲವರು ಅಲ್ಲಿರುವ ಸ್ಮಾರಕಗಳ ಕಲೆ ವಾಸ್ತು ಶಿಲ್ಪ ಮತ್ತು ಅವುಗಳ ಚಾರಿತ್ರಿಕ ಮಹತ್ವ ಕುರಿತಂತೆ ಪುರಾತತ್ವ ಶಾಸ್ತ್ರದ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಹಂಪಿ ಮತ್ತು ವಿಜಯನಗರದ ಕುರಿತು ಪ್ರಕಟವಾಗಿರುವ ಹಲವಾರು ಲೇಖನಗಳಲ್ಲಿ ವ್ಯಕ್ತವಾಗಿರುವ ನಾಡು, ರಾಷ್ಟ್ರ ಹಾಗೂ ಧರ್ಮದ ಕುರಿತ ವಿಚಾರಗಳು ಹೇಗೆ ಪ್ರತಿನಿಧೀಕರಣಗೊಂಡಿವೆ ಮತ್ತು ಇಲ್ಲಿನ ಚಾರಿತ್ರಿಕ ವಿವರಗಳು ಲೇಖನಗಳ ಮೂಲಕ ಹೇಗೆ ವ್ಯಕ್ತವಾಗಿವೆ ಎನ್ನುವುದರ ವಿವರಗಳನ್ನು ಇಲ್ಲಿ ಮುಖ್ಯವಾಗಿ ವಿಶ್ಲೇಷಿಸಲಾಗಿದೆ. ಹಂಪಿಯ ಚರಿತ್ರೆ ಮತ್ತು ಪುರಾತತ್ವ ಕ್ಷೇತ್ರದ ಮೇಲೆ ಮಾತ್ರ ಇಲ್ಲಿಯವರೆಗೆ ಪ್ರಕಟವಾದ ಮುಖ್ಯ ಲೇಖನಗಳ ಪಟ್ಟಿ ಮತ್ತು ಅದಕ್ಕೆ ಸಂಬಂಧಿಸಿದ ವಿಶ್ಲೇಷಣೆಗಳನ್ನು ಇಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ:

೧. ಬಾಲಸುಬ್ರಮಣ್ಯ, ಟೆಂಪಲ್ಸ್ ಅಟ್ ನಾಗೇನಹಳ್ಳಿ, ವಿಜಯನಗರ, ಪ್ರೋಗ್ರೆಸ್ ಆಫ್ ರಿಸರ್ಚ್ ೧೯೮೪-೮೭ ಎಡಿಟ್ಸ್: ದೇವರಾಜ ಡಿ.ವಿ. ಅಂಡ್ ಚನ್ನಬಸಪ್ಪ ಎಸ್. ಪಾಟೀಲ್,

ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಮೈಸೂರು, ೧೯೯೧, ಪುಟ. ೧೮೩-೧೮೬. ದಿಸ್ ಆರ್ಟಿಕಲ್ ಎಕ್ಸ್‌ಪ್ಲೇನ್ಸ್ ದ ರಂಗನಾಥ ಟೆಂಪಲ್ ಅಟ್ ನಾಗೇನಹಳ್ಳಿ, ಒನ್ಸ್ ಎ ಸಬ್‌ರಬ್ ಆಫ್ ಹಂಪಿ. ದ ಡಿಸ್ಕ್ರಿಪ್ಷನ್ ಆಫ್ ದ ಟೆಂಪಲ್, ಇಟ್ಸ್ ಆರ್ಕಿಟೆಕ್ಚರಲ್ ಫ್ಯೂಚರ್ಸ್ ಅಂಡ್ ಪಿಲ್ಲರ್ಸ್ ಆರ್ ಡಿಸ್‌ಕಸ್ಡ್ ಇನ್ ದಿಸ್ ಆರ್ಟಿಕಲ್.

೨. ಬಾಲಸುಬ್ರಮಣ್ಯ, ಜಂಬುಕೇಶ್ವರ ಟೆಂಪಲ್, ಹೊಸಪೇಟೆ, ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್ ೧೯೮೭-೮೮, ಎಡಿಟ್ಸ್: ದೇವರಾಜ ಡಿ.ವಿ. ಅಂಡ್ ಚನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಮೈಸೂರು, ೧೯೯೧, ಪುಟ. ೧೬೮-೧೭೮. ದಿಸ್ ಆರ್ಟಿಕಲ್ ಡೀಲ್ಸ್ ವಿಥ್ ದ ಜಂಬುಕೇಶ್ವರ ಟೆಂಪಲ್ ಲೋಕಟೆಡ್ ಟು ದ ಸೌಥ್ ಈಸ್ಟ್ ಆಫ್ ಹೊಸಪೇಟೆ. ದ ಆರ್ಕಿಟೆಕ್ಚರಲ್ ಡೀಟೆಲ್ಸ್ ಅಂಡ್ ದ ಸ್ಕಲ್ಪುಚರಲ್ ಡೀಟೆಲ್ಸ್ ಆರ್ ಗಿವನ್ ಡೂ ಇಂಪಾರ್ಟೆನ್ಸ್.

೩. ಬಾಲಸುಬ್ರಮಣ್ಯ, ದಿ ಪ್ಲೇಸಸ್ ಆಫ್ ವಿಜಯನಗರ-ಹಂಪಿ, ನ್ಯಾಶನಲ್ ಸೆಮಿನರ್ ಆನ್ ವಿಜಯನಗರ ಎಂಪೈರ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಹೈದರಾಬಾದ್ ಅಂಡ್ ದ ಒಸ್ಮಾನಿಯಾ ಯೂನಿವರ್ಸಿಟಿ, ಹೈದರಾಬಾದ್, ೧೯೯೯, ಪುಟ.೨೪. ದ ಅಬ್ ಸ್ಟ್ರಾಕ್ಟ್ ಆಫ್ ದಿಸ್ ರಿಸರ್ಚ್ ಆರ್ಟಿಕಲ್ ಡೀಲ್ಸ್ ವಿಥ್ ದ ಲೊಕೇಶನ್ ಆಫ್ ದ ಪ್ಲೇಸಸ್, ಮಿನ್ಟ್ ಎನ್‌ಕ್ಲೋಸರ್ಸ್, ನೊಬಲ್ ಮೆನ್ಸ್ ರೆಸಿಡೆನ್ಸಿಸ್ ಅಂಡ್ ದ ಅಂಟಿಕ್ಯುರಿಸ್ ರಿಕವರ್ಡೆಡ್ ಫ್ರಮ್ ಎಕ್ಸ್‌ಕೆವೆಶನ್ಸ್ ಅಟ್ ಹಂಪಿ.

೪. ಬಾಲಸುಬ್ರಮಣ್ಯ, ದಿ ಕೃಷ್ಣ ಟೆಂಪಲ್, ವಿಜಯನಗರ ಪ್ರೊಗ್ರೆಸ್ ಆಫ್ ರಿಸರ್ಚ್ ೧೯೮೮-೯೧, ಎಡಿಟ್ಸ್: ಡಿ.ವಿ.ದೇವರಾಜ ಅಂಡ್ ಚೆನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಮೈಸೂರು, ೧೯೯೬, ಪುಟ.೧೭೫-೧೭೮.ದಿಸ್ ಆರ್ಟಿಕಲ್ ಡಿಸ್ಕ್ರೈಬ್ಸ್ ಅಬೌಟ್ ದ ಕೃಷ್ಣ ಟೆಂಪಲ್ ವಿಚ್ ವಾಸ್ ಕನ್‌ಸ್ಟ್ರಕ್ಟೆಡ್ ಬೈ ಕೃಷ್ಣದೇವರಾಯ ಇನ್ ೧೫೧೩ ಎ.ಡಿ. ದ ಇಮೇಜ್ ಆಫ್ ಬಾಲಕೃಷ್ಣ ಬ್ರಾಟ್ ಬೈ ಉದಯಗಿರಿ ವಾಸ್ ಇನ್‌ಸ್ಟಾಲ್ಡ್ ಬೈ ಕೃಷ್ಣದೇವರಾಯ. ದ ಡಿಫರೆಂಟ್ ಸಿಗ್‌ಮೆಂಟ್ಸ್ ಆಫ್ ದ ಟೆಂಪಲ್ ಅಂಡ್ ದ ಇನ್‌ಸ್ಕ್ರಿಪ್ಷನ್ ಆರ್ ಮೇಂಟೆಡ್ ಇನ್ ದಿಸ್ ಆರ್ಟಿಕಲ್.

೫. ಬಿರಾದಾರ್ ಎಚ್.ಎಸ್.ಸಮ್‌ರಿಲಿಜಿಯಸ್ ಸೆಂಟರ್ಸ್ ಆಫ್ ವಿಜಯನಗರ, ಕ್ವಾರ್ಟರ್ಲಿ ಜನರಲ್ ಆಫ್ ದ ಮೈಥಿಕ್ ಸೊಸೈಟಿ, ವಾಲುಮ್:೭೨, ಎಡಿಟ್ಸ್: ಸೂರ್ಯನಾಥ, ಮೈಥಿಕ್ ಸೊಸೈಟಿ ಬೆಂಗಳೂರು, ೧೯೮೧, ದಿ ಆರ್ಟಿಕಲ್ ಸ್ಪೀಕ್ಸ್ ಇನ್ ಡಿಟೈಲ್ಸ್ ಅಬೌಟ್ ದ ರಿಲೀಜಿಯಸ್ ಕಂಡಿಶನ್ಸ್ ಡೂರಿಂಗ್ ವಿಜಯನಗರ ಪಿರೈಡ್ ಇನ್ ದ ಎಂಪೈರ್. ದ ಆರ್ಟಿಕಲ್ ಆಲ್‌ಸೋ ರೆಫರ್ಸ್ ಪಂಪಾಕ್ಷೇತ್ರ, ಪಂಪಾಸಾರಸು, ಕಿಷ್ಕಿಂದ, ಇತ್ಯಾದಿ.

೬.ಬ್ರುಬಾಕರ್ ಆರ್.ಪಿ. ವಿಎಂಎಸ್-೩೭೦, ಎಂ ಕಂಬಿನೆಡ್ ಫಾರ್ಟಿಫಿಕೇಶನ್ ವಾಲ್

ಅಂಡ್ ರಿಸರ್‌ವಿಯರ್ ಎಂಬ್ಯಾಂಕ್‌ಮೆಂಟ್ ಇನ್ ದ ವಿಜಯನಗರ ಮೆಟ್ರೋಪೊಲಿಟನ್ ರೀಜನ್, ವಿಜಯನಗರ ಪ್ರೊಗ್ರೆಸ್ ಆಫ್ ರಿಸರ್ಚ್ ೧೯೯೧-೯೨, ಎಡಿಟ್ಸ್: ದೇವರಾಜ ಡಿ.ವಿ. ಅಂಡ್ ಪಾಟೀಲ್ ಸಿ.ಎಸ್., ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಮೈಸೂರು.

೭. ಚಂದ್ರಶೇಖರಯ್ಯ ಬಿ.ಎಂ. ವಿಠ್ಠಲ ಟೆಂಪಲ್, ಫ್ಲೋರಲ್ ಮ್ಯಾಗ್ನಿಫಿಕೇಶನ್ಸ್, ಮಾರ್ಚ್ ಆಫ್ ಕರ್ನಾಟಕ, ಎಡಿಟ್: ನರೇಂದ್ರನಾಥ ಆರ್, ಗುರುಪ್ರಸಾದ್ ಡಿ.ವಿ., ಚೀಫ್ ಎಡಿಟ್: ವಾಲ್ಯೂಮ್: ೩೮,ಇಸ್ಸೂ ನಂ.೧, ಜನವರಿ ೨೦೦೦, ಡೈರೆಕ್ಟರೇಟ್ ಆಫ್ ಇನ್‌ಫಾರ್‌ಮೇಷನ್ ಅಂಡ್ ಪಬ್ಲಿಸಿಟಿ ಗವರ್ನಮೆಂಟ್ ಆಫ್ ಕರ್ನಾಟಕ, ಬೆಂಗಳೂರು,೨೦೦೦ ಪುಟ.೧೮-೨೧. ದಿಸ್ ಆರ್ಟಿಕಲ್ ಡಿಸ್ಕ್ರೈಬ್ಸ್ ದ ಆರ್ನೇಟ್ ಕ್ಯಾರೆಕ್ಟರ್ ಆಫ್ ವಿಜಯನಗರ ಟೆಂಪಲ್ಸ್, ಪರ್‌ಫೆಕ್ಷನ್ ಆಫ್ ಆರ್ಟ್ ವಾಸ್ ಅಚೀವ್ಡ್ ಲಾರ್ಜ್ಲಿ ಬೈ ಕವರಿಂಗ್ ದ ಪಿಲ್ಲರ್ಸ್ ಅಂಡ್ ಪೀರ್ಸ್ ಇನ್ ಟು ಕಾಂಪ್ಲಿಕೇಟಡ್ ಕರ್‌ವಿಂಗ್ಸ್ ವಿಥ್ ಹ್ಯೂಮನ್ ಫಿಗರ್ಸ್, ಅನಿಮಲ್ಸ್ ಅಂಡ್ ಡಿವೇನ್ ಅಂಡ್ ಸೆಮಿ-ಡಿವೈನ್ ಬೀಯಿಂಗ್ಸ್ ಡೆಕ್ಷಟೆರೊಸ್ಲಿ ಚಿಸೆಲೆಡ್ ಇನ್ ಸಾಲಿಡ್ ಬ್ಲಾಕ್ ಆಫ್ ಸ್ಟೋನ್. ಇಟ್ ಆಲ್ ಸೋ ರೆಫರ್ಸ್ ಟು ದ ಆರ್ಕಿಟೆಕ್ಚರಲ್ ಫ್ಯೂಚರ್ಸ್ ಆಫ್ ವಿಜಯನಗರ ಅಂಡ್ ಇಸ್ ಸಪೋರ್ಟ್‌ಟೆಡ್ ಬೈ ಫೋಟೋಗ್ರಫಿಸ್ ಆಫ್ ದ ಮೂಮೆಂಟ್ಸ್.

೯. ಚನ್ನಬಸಪ್ಪ ಎಸ್. ಪಾಟೀಲ್, ರಿಮೈನ್ಸ್ ಆಫ್ ಪ್ಯಾಲೇಸ್ ಸ್ಟ್ರಕ್ಚರ್ಸ್, ನಿವ್ ಲೈಟ್ ಆನ್ ಹಂಪಿ ರೀಸೆಂಟ್ ರಿಸರ್ಚರ್ಸ್ ಅಟ್ ವಿಜಯನಗರ, ಎಡಿಟ್ಸ್: ಜಾನ್ ಎಂ.ಫ್ರಿಟ್ಜ್ ಅಂಡ್ ಜಾರ್ಜ್ ಮೈಕೆಲ್, ಮಾರ್ಗ್ಗ ಪಬ್ಲಿಕೇಶನ್ಸ್, ಬಾಂಬಾ, ೨೦೦೧. ಪುಟ.೫೦-೬೧. ಇನ್ ದಿಸ್ ಆರ್ಟಿಕಲ್ ದ ಎಕ್ಸ್‌ಕೇವೆಶನ್ಸ್ ಅಂಡ್ ದ ಅನ್‌ಅರ್ಥಡ್ ಪ್ಯಾಲೇಸ್ ಆರ್ ಡಿಸ್ಕಸ್ಡ್, ದೀಸ್ ಪ್ಯಾಲೇಸ್ ಸ್ಟ್ಯಾಂಡ್ ಇನ್ ದ ಕಂಪೌಂಡ್ಸ್ ಡಿಫೈನ್ಡ್ ಬೈ ಹೈ ಟೇಪರಿಂಗ್ ವಾಲ್ಸ್ ಆಫ್ ಸ್ಟೋನ್ ಆರ್ ಲೇಯರ್ಡ್ ಅರ್ಥ್ ಅಂಡ್ ಆರ್ ಅಪ್ರೋಚ್ಡ್ ಥ್ರೋ ಗೇಟ್‌ವೇಸ್ ವಿಥ್ ಮಲ್ಟಿಪಲ್ ಚಾರ್ಜ್ ಆಫ್ ಡೈರೆಕ್ಷನ್. ದ ಪ್ಲೇಸಸ್ ಅಟ್ ವಾರಿಯರ್ಸ್ ಲೈಕ್ ದ ರಾಯಲ್ ಎನ್‌ಕ್ಲೋಸರ್, ನೊಬಲ್ ಮೆನ್ಸ್ ಕ್ವಾರ್ಟಿಯರ್ಸ್, ಆನ್ ದ ಈಸ್ಟರ್ನ್ ಪಾರ್ಟ್ ಆಫ್ ದ ರಾಯಲ್ ಸೆಂಟರ್ ಆರ್ ಕನ್ಸಿಡರ್ಡ್. ವೈಲ್ ಡೀಲಿಂಗ್ ದ ಲೈಓಟ್ ದ ಸೈಲೆಂಟ್ ಫ್ಯೂಚರ್ಸ್ ಆಫ್ ದ ಪ್ಲೇಸಸ್ ಆರ್ ಡಿಸ್ಕಸ್ಡ್.

೧೦.ಚನ್ನಬಸಪ್ಪ ಎಸ್. ಪಾಟೀಲ್, ಟೆಂಪಲ್ ಆರ್ಕಿಟೆಕ್ಚರಲ್ ಟರ್ಮ್ಸ್ ಇನ್ ವಿಜಯನಗರ ಇನ್ವೆಸ್ಟಿಗೇಶನ್ ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್ ೧೯೮೪-೮೭, ಎಡಿಟ್ಸ್: ದೇವರಾಜ್ ಡಿ.ವಿ. ಅಂಡ್ ಚನ್ನಬಸ್ಸಪ್ಪ, ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಮೈಸೂರು, ೧೯೯೧, ಪುಟ.೧೬೭-೧೭೩. ದಿಸ್ ಆರ್ಟಿಕಲ್ ಡೀಲ್ಸ್ ವಿಥ್ ದ ಆರ್ಕಿಟೆಕ್ಚರಲ್ ಟರ್ಮಿನೊಲೋಜಿ ಯುಸ್ಡ್ ಬೈ ಮೆನಿ ಸ್ಕಾಲರ್ಸ್ ಆಫ್ ಡಿಸ್ಕ್ರೈಬಿಂಗ್ ಡಿಫರೆಂಟ್ ಪಾರ್ಟ್ಸ್ ಆಫ್ ವಿಜಯನಗರ ಟೆಂಪಲ್ಸ್. ದೇರ್ ಇಸ್ ಎ ಟೇಬಲ್ ಆಫ್ ಟೆಂಪಲ್ ಆರ್ಕಿಟೆಕ್ಚರಲ್ ಟರ್ಮ್ಸ್ ಇನ್ ವಿಜಯನಗರ ಇನ್‌ಸ್ಕ್ರಿಪ್ಷನ್ಸ್.

೧೧. ಚಿದಾನಂದಮೂರ್ತಿ ಎಂ.(ಭಾಷಾಂತರ), ಶಮಾರಾವ್, ವಾಸ್ತುಶಿಲ್ಪ ಮತ್ತು ಇತರ ಕಲೆಗಳು (ವಿಜಯನಗರ ಕಾಲದಲ್ಲಿ), ಕರ್ನಾಟಕದ ಪರಂಪರೆ(ಕನ್ನಡ) ವಾಲ್ಯೂ.೨, ಡಿಪಾರ್ಟ್‌ಮೆಂಟ್ ಆಫ್ ಲಿಟರೇಚರ್ ಅಂಡ್ ಕಲ್ಚರ್, ಗವರ್ನಮೆಂಟ್ ಆಫ್ ಮೈಸೂರು, ಬೆಂಗಳೂರು, ೧೯೭೦, ಪುಟ.೧೬೦–೧೭೧. ದ ಆರ್ಟಿಕಲ್ ನರೇಟ್ಸ್ ದ ಡಿಸ್ಟಿಂಕ್ಟ್ ಸ್ಟೈಲ್ ಆಫ್ ಆರ್ಕಿಟೆಕ್ಚರ್, ಬೋಥ್ ಸೆಕ್ಯೂಲರ್ ಅಂಡ್ ರಿಲೀಜಿಯಸ್, ಡೆವಲಪ್‌ಮೆಂಟೆಡ್ ಡೂರಿಂಗ್ ದ ವಿಜಯನಗರ ಪೀರಿಯಡ್ ವಿಥ್ ಪರ್ಟಿಕುಲರ್ ರೆಫರೆನ್ಸ್ ಟು ದ ಮಾನೋಮೆಂಟ್ಸ್ ಫೌಂಡ್ ಅಟ್ ಹಂಪಿ ಅಂಡ್ ಇಟ್ಸ್ ಎನ್ವಿರೊನ್ಸ್.

೧೨. ದೇವಕೊಂಡಾರೆಡ್ಡಿ, ತುಂಗಭದ್ರಾ ಪ್ರದೇಶದ ವಿರೂಪಾಕ್ಷ ದೇವಾಲಯ, ಇತಿಹಾಸ ದರ್ಶನ ವಾಲ್ಯೂಮ್: ೧೩(ಕನ್ನಡ) ಎಡಿಟ್ಸ್: ನಾಗರಾಜ ಎಂ.ಜಿ. ಮತ್ತು ಕೃಷ್ಣಮೂರ್ತಿ ಪಿ.ವಿ.; ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೮, ಪುಟ.೯೮–೧೦೨. ದಿ ಆರ್ಟಿಕಲ್ ಡೀಲ್ಸ್ ವಿಥ್ ವಿರೂಪಾಕ್ಷ ಟೆಂಪಲ್ಸ್ ಆನ್ ದ ಬ್ಯಾಂಕ್ ಆಫ್ ದ ರಿವರ್ ತುಂಗಭದ್ರಾ ಅಟ್ ಹಂಪಿ. ದ ವರ್ಕ್‌ಶಿಪ್ ಆಫ್ ವಿರೂಪಾಕ್ಷ ಅಂಡ್ ವೀರಭದ್ರಾ ಡೂರಿಂಗ್ ವಿಜಯನಗರ ಪೀರೇಡ್ ಇಸ್ ಡಿಸ್ಕಸ್ಡ್. ದ ಸ್ಟಡಿ ಇಸ್ ಬೇಸ್ಡ್ ಆನ್ ದ ಲಿಟರೇಚರ್ ಅಂಡ್ ಸ್ಕಲ್ಪುಚರ್ಸ್ ಫೌಂಡ್ ಅಟ್ ಹಂಪಿ.

೧೩. ದೇವರಕೊಂಡಾರೆಡ್ಡಿ, ಹಂಪಿಯಲ್ಲಿ ಬಾದಾಮಿ ಚಾಲುಕ್ಯ ಕಾಲದ ದೇವಾಲಯ, ವಿಜಯನಗರ ಅಧ್ಯಯನ, ಸಂ.೧.(ಕನ್ನಡ) ಎಡಿಟ್ಸ್: ಡಿ.ವಿ.ದೇವರಾಜ ಅಂಡ್ ಚನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಮೈಸೂರು, ೧೯೯೬, ಪುಟ.೩೮–೪೧. ದ ಆರ್ಟಿಕಲ್ ಡಿಸ್ಕಸಸ್ ದ ಬಾದಾಮಿ ಚಾಲುಕ್ಯ ಟೆಂಪಲ್ಸ್ ಅಟ್ ಹಂಪಿ. ದ ಚಾಲುಕ್ಯನ್ ಟೆಂಪಲ್ಸ್ ನಿಯರ್ ಹೇಮಕೂಟ ಅಂಡ್ ನಿಯರ್ ಮನ್ಮಥಕುಂಡಾ ಅಟ್ ಹಂಪಿ. ದ ಡಿಫರೆಂಟ್ ಪಾರ್ಟ್ಸ್ ಆಫ್ ದ ಟೆಂಪಲ್ ಆರ್ ಕನ್ಸಿಡರ್ಡ್ ಫಾರ್ ಆರ್ಗ್ಯೂಮೆಂಟ್ಸ್.

೧೪. ದೇವರಕೊಂಡಾರೆಡ್ಡಿ, ಕರಸ್ಥಳ ನಾಗಲಿಂಗ ಚರಿತ್ರೆಯಲ್ಲಿ ವಿಜಯನಗರ ಪಟ್ಟಣದ ಉಲ್ಲೇಖ, ವಿಜಯನಗರ ಅಧ್ಯಯನ, ಸಂ.೪(ಕನ್ನಡ) ಸಂಪಾದನೆ:ಎಂ.ವಿ.ಕೃಷ್ಣಪ್ಪ ಅಂಡ್ ಚನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಮೈಸೂರು, ೧೯೯೬, ಪುಟ.೮೮–೮೯. ದ ಕಂಟಂಪರೆರಿ ಲಿಟರೇಚರ್ ಆಫ್ ವಿಜಯನಗರ ಪೀರೆಡ್ ಪೆರ್ಟೈನಿಂಗ್ ಟು ಎ.ಡಿ.೧೬೫೦ ನರೇಟ್ಸ್ ದ ಪ್ಲೇಸಸ್, ದ ಎಲಿಫೆಂಟ್ ಅಂಡ್ ಹಾರ್ಸ್ ಸ್ಟಬೆಲ್ಸ್, ದಿ ಬಜಾರ್ಸ್, ದ ಕಾಸ್ಟೂಮ್ಸ್, ದಿ ಗಣಪತಿ ಫೆಸ್ಟಿಕಲ್ಸ್ ಆರ್ ಮೇಂಟನೇನ್ಸ್ ಇನ್ ದಿಸ್ ಆರ್ಟಿಕಲ್.

೧೫. ಕೊಟ್ರಯ್ಯ ಸಿ.ಟಿ.ಎಂ., ಐಡಿಯೋಲಾಜಿಕಲ್ ಅಂಡರ್ ಪ್ಲಾನಿಂಗ್ ಅಂಡ್ ಡೆವಲಪ್‌ಮೆಂಟ್ ಆಫ್ ಇರ್ರಿಗೇಶನ್ ಇನ್ ವಿಜಯನಗರ, ನಾಗಬಿನಾನಂದನಂ, ನಾಗರಾಜ ರಾವ್ ಎಂ.ಎಸ್., ಫೆಲಿಸಿಟೇಶನ್ ಸಂಪುಟ. ಎಡಿಟ್ಸ್: ಶ್ರೀನಿವಾಸನ್ ಎಲ್.ಕೆ. ಅಂಡ್ ನಾಗರಾಜು ಎಸ್, ಎಂ.ಎಸ್. ನಾಗರಾಜ ರಾವ್ ಫೆಸ್ಟ್‌ಕ್ರಿಫ್ಟ್ಸ್, ಬೆಂಗಳೂರು, ೧೯೯೫, ಪುಟ.೬೫೫–

೬೭. ದ ಆರ್ಟಿಕಲ್ ರೆಫರ್ಸ್ ಇನ್ ಡೀಟೇಲ್ಸ್ ಅಬೌಟ್ ದ ಇರ್ರಿಗೇಶನ್ ಸಿಸ್ಟಮ್ ಡೂರಿಂಗ್ ವಿಜಯನಗರ ಪೀರೆಡ್ ಇನ್ ಜನರಲ್ ವಿಥ್ ಸಮ್ ಫೋಟೋಗ್ರಫಿಸ್ ಆಫ್ ಥಾನ್ಕ್ಸ್, ವೆಲ್ಸ್ ಅಂಡ್ ವಾಟರ್ ರಿಸರ್ವೋರ್ಸ್ ಇತ್ಯಾದಿ.,

೧೬.ಕೊಟ್ರಯ್ಯ ಸಿ.ಟಿ.ಎಂ., ವಿಜಯನಗರ ಕಾಲದ ಅರಮನೆಗಳು, ವಿಜಯನಗರ ಅಧ್ಯಯನ, ಸಂ.೪(ಕನ್ನಡ) ಎಡಿಟ್ಸ್: ಎಂ.ವಿ.ಕೃಷ್ಣಪ್ಪ ಅಂಡ್ ಚೆನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಮೈಸೂರು, ೧೯೯೬, ಪುಟ.೩೨–೪೯. ದಿಸ್ ಆರ್ಟಿಕಲ್ ಸ್ಪೀಕ್ಸ್ ಅಬೌಟ್ ದ ಪ್ಲೇಸಸ್ ಆಫ್ ವಿಜಯನಗರ,ದ ಡಿಸ್ಕ್ರಿಪ್ಶನ್ ಇನ್ ಟ್ರಾವಲೋಜಿಯಸ್ ಅಂಡ್ ದ ಕಂಟಂಪರೆರಿ ಕನ್ನಡ ಲಿಟರೇಚರ್ ಆರ್ ಕ್ವೋಟೆಡ್, ಟು ನರ್ರೇಟ್ ದ ಸ್ಪ್ಲೆಂಡರ್ಸ್ ಆಫ್ ಪ್ಲೇಸಸ್ ಅಟ್ ಹಂಪಿ.

೧೭.ಕೃಷ್ಣಮೂರ್ತಿ ಎಂ.ಎಸ್., ಹಂಪಿಯ ವಿರೂಪಾಕ್ಷ ಸಂಕೀರ್ಣದ ಮಹಿಸಾಮರ್ಧಿನಿ ದೇವಾಲಯ, ವಿಜಯನಗರ ಅಧ್ಯಯನ, ಸಂ.೧(ಕನ್ನಡ) ಎಡಿಟ್ಸ್: ಡಿ.ವಿ.ದೇವರಾಜ ಮತ್ತು ಚನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಮೈಸೂರು, ೧೯೯೬, ಪುಟ.೩೯–೪೨. ದಿಸ್ ಆರ್ಟಿಕಲ್ ಸ್ಪೀಕ್ಸ್ ಅಬೌಟ್ ಮಹಿಸಾಸುರ ಟೆಂಪಲ್ ಇನ್ ದ ಪ್ರಿಸಿಂಟ್ಸ್ ಆಫ್ ಮನ್ಮಥಕೊಂಡ ಟ್ಯಾಂಕ್, ಲೊಕೇಟೆಡ್ ನಿಯರ್ ದ ವಿರೂಪಾಕ್ಷ ಟೆಂಪಲ್ ಅಟ್ ಹಂಪಿ. ದಿಸ್ ಟೆಂಪಲ್ ಇಸ್ ಪಾಪ್ಯುಲರ್ಲಿ ಕಾಲ್ಡ್ ಆ್ಯಸ್ ದುರ್ಗ ಟೆಂಪಲ್, ದ ಆಥರ್ ಓಪನಿಸ್ ದಿಸ್ ಆ್ಯಸ್ ದ ನೊಳಂಬ ಟೆಂಪಲ್.

೧೮.ಕುಲಕರ್ಣಿ ಆರ್ ಎಚ್., ವಿಜಯನಗರ ಕಾಲದಲ್ಲಿ ಗಾರೆಕಲೆ– ಒಂದು ಅವಲೋಕನ, ವಿಜಯನಗರ ಅಧ್ಯಯನ, ಸಂ.೫(ಕನ್ನಡ) ಎಡಿಟ್ಸ್: ಎಂ.ವಿ.ಕೃಷ್ಣಪ್ಪ ಅಂಡ್ ಚೆನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಮೈಸೂರು, ೧೯೯೬, ಪುಟ.೧–೧೮. ದ ಸ್ಟಕ್ಕೊ ಸ್ಕಲ್ಪುಚರ್ ಆಫ್ ವಿಜಯನಗರ, ಇಟ್ಸ್ ಲೊಕೇಶನ್, ಟೆಕ್ನಿಕ್, ದ ಇವಾಲ್ಯೂಶನ್ ಆಫ್ ಸ್ಕಲ್ಪುಚರ್ ಆರ್ ಡಿಯಲ್ಟ್ ಇನ್ ದಿಸ್ ಆರ್ಟಿಕಲ್.

೧೯.ಮಂಜುನಾಥ ಟಿ.ಎಂ., ವಿಜಯನಗರ ಪಟ್ಟಣದಲ್ಲಿ ಆನೆಯಶಾಲೆ, ವಿಜಯನಗರ ಅಧ್ಯಯನ, ಸಂ.೫(ಕನ್ನಡ) ಎಡಿಟ್ಸ್: ಎಂ.ವಿ.ಕೃಷ್ಣಪ್ಪ ಅಂಡ್ ಚೆನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಮೈಸೂರು, ೧೯೯೬, ಪುಟ.೩೭–೪೩. ದಿಸ್ ಆರ್ಟಿಕಲ್ ಡೀಲ್ಸ್ ವಿಥ್ ದ ಎಕ್ಸಕೇವಿಟೆಡ್ ಸ್ಟ್ರಕ್ಚರ್ಸ್ ಅಂಡ್ ಅದರ್ ಫ್ಯೂಚರ್ಸ್, ಟು ಪ್ರೋವ್ ಇಟ್ ಆಸ್ ಎ ಎಲಿಫೆಂಟ್ ಸ್ಟೆಬಲ್. ಚೈನ್ ಫಾರ್ ಟೈಯಿಂಗ್ ಎಲಿಫೆಂಟ್ಸ್, ವಾಟರ್ ಟ್ಯಾಂಕ್ಸ್ ಎಲಿಫೆಂಟ್ ಸ್ಕೆಲಿಟನ್ಸ್ ವರ್ ನೋಟಿಸ್ಡ್ ಇನ್ ದ ಎಕ್ಸಕೇವಿಶನ್.

೨೦.ರಾಜಶೇಖರ ಎಸ್, ಹಂಪಿಯ ವಿರೂಪಾಕ್ಷ ದೇವಾಲಯ ಸಮೂಹ, ಕಾಲಾನುಕ್ರಮದ ಅವಲೋಕನ ಐತಿಹಾಸಿಕ ದರ್ಶನ(ಕನ್ನಡ), ಸಂ.೪ ಎಡಿಟ್: ಸೂರ್ಯನಾಥ ಕಾಮತ್ ಮತ್ತು

ಲಕ್ಷ್ಮಣ ತೆಲಗಾವಿ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೦, ಪುಟ.೭೨-೭೪. ದ ಆರ್ಟಿಕಲ್ ಡೀಲ್ಸ್ ವಿತ್ ದ ವಿರೂಪಾಕ್ಷ ಟೆಂಪಲ್ ಕಾಂಪ್ಲೆಕ್ಸ್. ದ ಡಿಫರೆಂಟ್ ಟೆಂಪಲ್ಸ್, ದ ಪೇಂಟಿಂಗ್ಸ್ ಇನ್ ದ ಮಹಾಮಂಟಪ ಆಫ್ ವಿರೂಪಾಕ್ಷ ಟೆಂಪಲ್ ಆರ್ ಎಕ್ಸ್‌ಪ್ಲೈನ್ಡ್.

೨೧.ಶಾಂತರಾ ಎಸ್.ಎಸ್., ವಿಠ್ಠಲ ಟೆಂಪಲ್ ಅಟ್ ಹಂಪಿ, ಕ್ವಾರ್ಟ್ಲಿ ಜಂಗಲ್ ಆಫ್ ದ ಮೈಥಿಕ್ ಸೊಸೈಟಿ, ಸಂ.೩೧, ದ ಮೈಥಿಕ್ ಸೊಸೈಟಿ, ಬೆಂಗಳೂರು, ೧೯೪೦, ಪುಟ.೧೪೮-೧೪೯. ದ ಆರ್ಟಿಲ್ ರೆಫರ್ಸ್ ಟು ದ ನೇಮ್ ಆಫ್ ಸಾಳ್ವ ಟಿಪ್ಪ ಅಂಡ್ ಟಿಪ್ಪ ವೋಸ್ ನೇಮ್ ಇಸ್ ಮೆಂಟೈನ್ಡ್ ಇನ್ ದ ಹರಿಭಟ್ಟಾಸ್ ನರಸಿಂಹ ಪುರಾಣ ಕನೆಕ್ಟೆಡ್ ವಿತ್ ದ ಕನ್‌ಸ್ಟ್ರಕ್ಷನ್ ಆಫ್ ವಿಠ್ಠಲ ಟೆಂಪಲ್ ಅಟ್ ಹಂಪಿ. ದ ಆಥರ್ ಒಪಿನಿಸ್ ದಟ್ ದ ನೇಮ್ ಆಫ್ ಸಾಳ್ವ ಟಿಪ್ಪ ಮೆಂಟೇನ್ಡ್ ಇನ್ ದ ಇನ್‌ಸ್ಕ್ರಿಪ್ಷನ್ ಇಸ್ ಡಿಫರೆಂಟ್ ಫ್ರಮ್ ದ ನೇಮ್ ಮೇನ್ಟೇನ್ಡ್ ಇನ್ ದ ನರಸಿಂಹ ಪುರಾಣ.

೨೨.ಶರಣಬಸಪ್ಪ ಕೊಲ್ಕರ್, ಹಂಪಿಯ ವಿಠ್ಠಲ ದೇವಾಲಯ: ನಿರ್ಮಾಣ ಕಲಾ ಮತ್ತು ಸಂದ ದನಗಳು ವಿಜಯನಗರ ಅಧ್ಯಯನ, ಸಂ.೪(ಕನ್ನಡ) ಸಂಪಾದನೆ: ಎಂ.ವಿ.ಕೃಷ್ಣಪ್ಪ ಅಂಡ್ ಚನ್ನಬಸಪ್ಪ ಎಸ್.ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಮೈಸೂರು, ೧೯೯೬, ಪುಟ.೨೭-೩೧. ದಿಸ್ ಆರ್ಟಿಕಲ್ ಡೀಲ್ಸ್ ವಿಥ್ ದ ವಿಠ್ಠಲ ಟೆಂಪಲ್ ಅಂಡ್ ದ ಡಿಫರೆಂಟ್ ಸ್ಟೇಜಸ್ ಆಫ್ ಕನ್‌ಸ್ಟ್ರಕ್ಷನ್ ಅಂಡ್ ದ ಗಿಫ್ಟ್ಸ್ ಗಿವನ್ ಟು ಇಟ್ ಓವರ್ ಪಿರೆಡ್ ಆಫ್ ಟೈಮ್.

೨೩.ಶ್ರೀನಿವಾಸ ಎಂ.ವಿ., ವಿಜಯನಗರ ಆರ್ಕಿಟೆಕ್ಚರ್ ಅವಲೋಕನ, ಸಂಪಾದನೆ: ಕೃಷ್ಣಸ್ವಾಮಿ ಅಯ್ಯಂಗಾರ್ ಎಚ್.ಎಸ್., ಡೈರೆಕ್ಟರೇಟ್ ಆಫ್ ಕನ್ನಡ ಅಂಡ್ ಕಲ್ಚರ್, ಬೆಂಗಳೂರು, ೧೯೮೫. ಪುಟ.೧೧೬. ದ ಪೊಲಿಟಿಕಲ್ ಹಿಸ್ಟರಿ, ಇನ್‌ಫ್ಲೂಯನ್ಸ್ ಆಫ್ ಈಯರ್ಲಿಯರ್ ಡೈನೆಸ್ಟಿ ಇನ್ ದ ಫೀಲ್ಡ್ ಆಫ್ ಆರ್ಟ್ ಅಂಡ್ ಆರ್ಕಿಟಕ್ಚರ್ ಆರ್ ಎಕ್ಸ್‌ಪ್ಲೈನ್ಡ್. ದ ಡಿಫರೆಂಟ್ ಟೈಪ್ಸ್ ಆಫ್ ಆರ್ಕಿಟೆಕ್ಚರ್ ಆರ್ ವೆಲ್ ಹೈಲೆಟೆಡ್ ವಿಥ್ ಎಕ್ಸಂಪಲ್ಸ್.

೨೪.ಸುರೇಶ್ ಕೆ.ಎಂ., ಹಂಪಿಯ ರಾಯಗೋಪುರಗಳು, ಹಂಪಿ ಪರಂಪರೆ(ಕನ್ನಡ) ಸಂಪಾದನೆ: ಪರಮೇಶ್ವರಪ್ಪ ಟಿ. ಶ್ರೀವಿದ್ಯಾ ವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್, ಆನೆಗೊಂದಿ, ಹೊಸಪೇಟೆ, ೧೯೯೬, ಪುಟ.೧೦-೧೫. ದ ಆರ್ಟಿಕಲ್ ಎಕ್ಸಮಿನೆಸ್ ದ ವಿವಲೋಶನ್ ಆಫ್ ವಿಜಯನಗರ ಗ್ರೂಫರ್ಸ್ ದಟ್ ಆರ್ ಆ್ಯನ್ ಇಂಟಿಗ್ರಲ್ ಪಾರ್ಟ್ ಆಫ್ ದ ಸೌಥ್ ಇಂಡಿಯನ್ ಟೆಂಪಲ್ ಕಾಂಪ್ಲೆಕ್ಸ್. ಇಟ್ ಫರ್ದರ್ ಮೆನ್‌ಷನ್ಸ್ ಅಬೌಟ್ ದ ಆರ್ಕಿಟೆಕ್ಚರಲ್ ಆಸ್ಪೆಕ್ಟ್ಸ್ ಆಫ್ ವಾರಿಯಸ್ ಗೋಪುರಸ್ ಆಫ್ ದ ಟೆಂಪಲ್ಸ್ ಅಟ್ ಹಂಪಿ.

೨೫.ಸುರೇಶ ಕೆ.ಎಂ., ಬಳ್ಳಾರಿ ಜಿಲ್ಲೆಯ ಪ್ರಮುಖ ವೀರಭದ್ರ ದೇವಾಲಯಗಳು ಮತ್ತು ಶಿಲ್ಪಗಳು, (ಪ್ರಮುಖ) ವೀರಶೈವ ಸ್ಮರಣ ಸಂಚಿಕೆ, ವಾರ್ಷಿಕೋತ್ಸವ ಸಮಿತಿ, ಹೊಸಪೇಟೆ ತಾಲ್ಲೂಕು ವೀರಶೈವ ನೌಕರರ ಸಂಘ ಸಂಚಿಕೆ, ಹೊಸಪೇಟೆ, ೨೦೦೦, ಪುಟ.೫-೮. ದಿಸ್ ಆರ್ಟಿಕಲ್

ನರೇಟ್ಸ್ ದ ವೀರಭದ್ರ ಟೆಂಪಲ್ಸ್ ಅಂಡ್ ಸ್ಕಲ್ಪಚರ್ಸ್ ಇನ್ ಬಳ್ಳಾರಿ ಡಿಸ್ಟ್ರಿಕ್ಟ್. ಹಿಯರ್ ದ ವಈರಭದ್ರ ಟೆಂಪಲ್ಸ್ ಅಂಡ್ ಸ್ಕಲ್ಪಚರ್ಸ್ ಆಫ್ ಹಂಪಿ ಅಂಡ್ ಸರೌಂಡಿಂಗ್ ಏರಿಯಾ ಆರ್ ಸ್ಪಡೀಡ್ ಅಂಡ್ ಡಿಸ್ಕ್ರೈಬ್ಡ್.

೨೬.ತಳವಾಳ ಎಚ್.ಡಿ., ನರಸಿಂಹ ಟೆಂಪಲ್, ವಿಜಯನಗರ ಪ್ರೊಗ್ರೆಸ್ ಆಫ್ ರಿಸರ್ಚ್ ೧೯೮೪-೮೭, ಸಂಪಾದನೆ: ದೇವರಾಜ ಡಿ.ವಿ. ಅಂಡ್ ಚನ್ನಬಸಪ್ಪ ಎಸ್.ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಮೈಸೂರು, ೧೯೯೧, ಪುಟ.೧೭೪-೧೭೬. ದಿಸ್ ಆರ್ಟಿಕಲ್ ಡೀಲ್ಸ್ ವಿಥ್ ದ ನರಸಿಂಹ ಟೆಂಪಲ್ ಲೊಕೇಟೆಡ್ ನಿಯರ್ ದ ಪಾಥವೇ ಲೀಡ್ ಫ್ರಮ್ ವಿರೂಪಾಕ್ಷ ಟೆಂಪಲ್ ಟು ವಿಠ್ಠಲ ಟೆಂಪಲ್. ಒನ್ ಆಫ್ ದ ಮಂಟಪಸ್ ದ ಗಾಡ್ ನರಸಿಂಹ ವಾಸ್ ಕನ್‌ಸ್ಟ್ರಕ್ಟೆಡ್ ಇನ್ ೧೩೭೯ ಎ.ಡಿ. ದ ಲೊಕೇಶನ್ ಅಂಡ್ ದ ವಾರಿಯರ್ಸ್ ಫ್ಯೂಚರ್ಸ್ ಆಫ್ ದ ಟೆಂಪಲ್ ಆರ್ ಎಕ್ಸ್‌ಪ್ಲೈನ್ಡ್.

೨೭.ತಳವಾರ್ ಎಚ್.ಟಿ.ಅಚ್ಯುತಪುರದ ಶಿಲ್ಪಗಳು, ವಿಜಯನಗರ ಅಧ್ಯಯನ, ಸಂ.೧.(ಕನ್ನಡ) ಸಂಪಾದನೆ:ದೇವರಾಜ ಡಿ.ವಿ. ಅಂಡ್ ಚನ್ನಬಸಪ್ಪ ಎಸ್.ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಮೈಸೂರು, ೧೯೯೬, ಪುಟ.೨೬-೨೯. ದಿಸ್ ಆರ್ಟಿಕಲ್ ಡೀಲ್ಸ್ ವಿಥ್ ದ ಸ್ಕಲ್ಪಚರ್ ವೆಲ್ತ್ ಆಫ್ ಅಚ್ಯುತಪುರ, ದ ಡಿಫರೆಂಟ್ ಸ್ಕಲ್ಪಚರ್ಸ್ ಕರ್‌ವರ್ಡ್ ಇನ್ ತಿರುವೆಂಗಲನಾಥ ಟೆಂಪಲ್ ಆರ್ ಹೈಲೆಟೆಡ್.

೨೮.ವೆಂಕಟರಮಣಯ್ಯ ಎನ್., ದ ಡೇಟ್ ಆಫ್ ಕನ್‌ಸ್ಟ್ರಕ್ಷನ್ ಆಫ್ ದ ಹಜಾರ ರಾಮಸ್ವಾಮಿ ಅಂಡ್ ವಿಠ್ಠಲ ಅಟ್ ವಿಜಯನಗರ, ಜರ್ನಲ್ ಆಫ್ ದ ಓರಿಯಂಟಲ್ ರಿಸರ್ಚ್, ಸಂಪುಟ.೧೬, ಪಿಟಿ.೨.ಪುಟ.೮೪-೯೦, ಮದ್ರಾಸ್ ೧೯೪೬-೪೭. ದ ಆರ್ಟಿಕಲ್ ಡಿಸ್ಕಸ್ ದ ಡೇಟ್ಸ್ ಆಫ್ ದ ಟು ಇಂಪಾರ್ಟೆಂಟ್ ಟೆಂಪಲ್ಸ್ ಸಿಚುವೇಟೆಡ್ ಅಟ್ ಹಂಪಿ. ಅಕಾರ್ಡಿಂಗ್ ಟುದ ಸ್ಟೋರಿ ಆಫ್ ಪ್ರಪನ್ನಾಮೂರ್ತಂ, ವಿರೂಪಾಕ್ಷ ೨ ಬಿಲ್ಟ್ ದ ಟೆಂಪಲ್ ಆಫ್ ಹಜಾರರಾಮಸ್ವಾಮಿ, ಪ್ರಾಬಬ್ಲಿ ಆಫ್ಟರ್ ದ ಕಿಂಗ್ ವಿರೂಪಾಕ್ಷ ಅಕ್ಸೆಪ್ಟೆಡ್ ವೈಷ್ಣವಂ ಅಂಡ್ ಬಿಕೇಮ್ ಎ ಡಿವೋಟ್ ಆಫ್ ರಾಮ. ಎ ಶ್ರೈನ್ ಆಫ್ ಪಂಪಾ ಸ್ಟೂಡ್ ಆನ್ ದ ಸೈಟ್ ಆಫ್ ದ ಟೆಂಪಲ್ ಅಟ್ ಹಜಾರ (ಪ್ಲೇಸ್) ಅಬೌಟ್ ದ ವಿಠ್ಠಲ್ ಟೆಂಪಲ್, ದ ಆಥರ್ ಒಪಿನೆಸ್ ದಟ್ ಇಟ್ ವಾಸ್ ಬಿಲ್ಟ್ ಪ್ರಿಯರ್ ಟು ಕೃಷ್ಣದೇವರಾಯ, ಆ್ಯಸ್ ತಲ್ಲಪಕ್ಕಂ ಅಣ್ಣಮಚಾರ್ಯ(೧೪೦೮-೧೫೦೩) ಹ್ಯಾಡ್ ಕಂಪೋಸ್ಡ್ ಸಂಕೀರ್ತನ ಇನ್ ಪ್ರೈಸ್ ಆಫ್ ವಿಠ್ಠಲ ಅಂಡ್ ಹಿಸ್ ಸ್ಪೌಸ್ ರುಕ್ಮಿಣಿ ಅಂಡ್ ಸ್ಟೇಟ್ಸ್ ದಟ್ ಮನಿ ಫೆಸ್ಟಿವೆಲ್ಸ್ ಲೈಕ್ ರಥೋತ್ಸವ, ಪರುವೇಟ, ಇಟಿಸಿ, ವರ್ ಸೆಲೆಬ್ರೆಟೆಡ್. ಆ್ಯಸ್ ದ ಆಥರ್ ಡೈಡ್ ಸಿಕ್ಸ್ ಇಯರ್ಸ್ ಬಿಫೋರ್ ದ ಅಕೇಶಿಯನ್ ಆಫ್ ಕೃಷ್ಣದೇವರಾಯ, ದ ಟೆಂಪಲ್ ವಾಸ್ ಕಂಪ್ಲಿಟೆಡ್ ಪ್ರಿಯರ್ ಟು ದ ಕರೋನೇಷನ್ ಆಫ್ ದ ಕಿಂಗ್. ದ ಇಮೇಜ್ ಆಫ್ ವಿಠ್ಠಲ ವಾಸ್ ಬ್ರಾಟ್ ಫ್ರಮ್ ಎ ಹಿಲ್ ನೇಮ್ಡ್ ವೆಂಕಟ ಇನ್ ಚಿತ್ತೂರ್ ಡಿಸ್ಟ್ರಿಕ್ಟ್ ಆಫ್ ಆಂಧ್ರ ಪ್ರದೇಶ ಅಂಡ್ ನಾಟ್ ಫ್ರಮ್ ಪಂಢರಾಪುರ, ಆ್ಯಸ್ ಪರ್ ದ ಕಂಪೊಸಿಸನ್ ಆಫ್ ಅಣ್ಣಮಚಾರ್ಯ.

೧೯೧೮ರಲ್ಲಿ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ 'ವಿಜಯನಗರ ಸಾಮ್ರಾಜ್ಯವೂ, ಕನ್ನಡಿಗರೂ' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾದ ರಾಮರಾವ ನರಗುಂದಕರ ಲೇಖನದಲ್ಲಿ, ಪೂರ್ವದ ಚರಿತ್ರೆಯನ್ನು ಕಟ್ಟಿಕೊಳ್ಳುವಲ್ಲಿ ಕನ್ನಡಿಗರು ಹಿಂದೆ ಬಿದ್ದಿರುವುದರ ಬಗ್ಗೆ ತಿಳಿಸಲಾಗಿದೆ. ಇಂಗ್ಲಿಷ್ ಶಿಕ್ಷಣದ ಪರಿಣಾಮದಿಂದಾಗಿ ನೆರೆಯ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದವರು ತಮ್ಮ ಚರಿತ್ರೆಯನ್ನು ಯುರೋಪಿನ ಮಾದರಿಯಲ್ಲಿ ಕಟ್ಟಿಕೊಳ್ಳುತ್ತಿದ್ದಾರೆ. ಆ ಭರದಲ್ಲಿ ಅವರು ಕನ್ನಡಿಗರ ಪ್ರದೇಶಗಳನ್ನು ತಮ್ಮವೆಂದು ಹೇಳಿಕೊಂಡಿದ್ದಾರೆ. ಇದನ್ನು ಓದಿದವರು ಅದೇ ಸತ್ಯವೆಂದು ಪರಿಗಣಿಸಿದ್ದಾರೆ. ಅದನ್ನು ಓದಿರುವ ನಮ್ಮವರೂ ಸಹಿತ ನಿಜಸಂಗತಿ ತಿಳಿಯದೆ ಇದ್ದುದರಿಂದ ಅನೇಕ ಮೂಢ ಕನ್ನಡಿಗರು ಅವರ ಲೇಖನಗಳನ್ನು ಓದಿ ಅವು ನಿಜವೆಂದು ಭಾವಿಸಿ 'ಕನ್ನಡಿಗರಿಗೆ ಇತಿಹಾಸವಿಲ್ಲ, ಕನ್ನಡಿಗರಲ್ಲಿ ಶೌರ್ಯವಿಲ್ಲ, ಕನ್ನಡನುಡಿ ನಾಡುನುಡಿ' ಎಂದು ಪ್ರಲಾಪಗಳನ್ನು ಮಾಡಿ ಕರ್ಣಾಟಕ ದೇಶ ದ್ರೋಹವನ್ನು ಮಾಡತೊಡಗಿದ್ದಾರೆ. ವಿಜಯನಗರವು ಇದ್ದ ನಾಡಿನಲ್ಲಿ ಈವತ್ತಿಗೂ ಕೇವಲ ಶುದ್ಧ ಕನ್ನಡ ನುಡಿಯೇ ಪ್ರಚಾರದಲ್ಲಿದೆ. ವಿಜಯನಗರದ ಒಂದು ಭಾಗವಾದ ಹೊಸಪೇಟೆಯ ಹೆಸರು ಕನ್ನಡವೇ. ವಿಜಯನಗರದಲ್ಲಿ ಸದ್ಯಕ್ಕೆ ದೊರೆಯುವ ಶಿಲಾಲಿಪಿಗಳು ಕೇವಲ ಕನ್ನಡದಲ್ಲಿಯೇ ಇರುತ್ತವೆ. ವಿಜಯನಗರದ ಹಾಳು ಪಟ್ಟಣಗಳಲ್ಲಿ ಎತ್ತ ನೋಡಿದರತ್ತ ಕಾಣುವ ಮೂರ್ತಿಗಳೂ ಗುಡಿಗಳೂ ಪೇಟೆಗಳೂ ಈವತ್ತಿಗೂ ಕನ್ನಡ ಹೆಸರನ್ನೇ ಧರಿಸಿರುತ್ತವೆ.[೧೯] ವಿಜಯನಗರವು ಕನ್ನಡದ್ದೇ ಎಂದು ಹೇಳಲು ಏನೆಲ್ಲ ಆಕರಗಳು ಇದ್ದರೂ ಸಹಿತ ದುರಭಿಮಾನದ ಅನ್ಯಭಾಷಿಕರು ಇದನ್ನು ತಮ್ಮದೆಂದು ಹೇಳಿಕೊಳ್ಳುತ್ತಿದ್ದಾರೆ. ಆದ್ದರಿಂದ ಇರುವ ಆಕರಗಳನ್ನೆಲ್ಲಾ ಶೋಧಿಸಿ ಕನ್ನಡನಾಡನ್ನು ಕಟ್ಟಿಕೊಂಡು ಹಿಂದೂಸ್ತಾನದಲ್ಲಿ ನಾವೆಲ್ಲರೂ ಕರ್ನಾಟಕಸ್ಥರೆಂಬ ಭಾವನೆಯನ್ನು ಬೆಳೆಸಿಕೊಳ್ಳಬೇಕಾಗಿದೆ ಎಂದು ಹೇಳುತ್ತಾರೆ.

'ಕರ್ನಾಟಕತ್ವದ ಬೆಳವಣಿಗೆಯಲ್ಲಿ ವಿಜಯನಗರದವರ ಕಾರ್ಯ' ಎನ್ನುವ ಲೇಖನದಲ್ಲಿ ಕುಲಕರ್ಣಿ ಪ್ರಹ್ಲಾದರಾಯರು ಕರ್ನಾಟಕತ್ವದ ಬೆಳವಣಿಗೆಗೆ ಪ್ರಾಚೀನತೆ ಇದೆ ಎಂದು ಪ್ರತಿಪಾದಿಸುತ್ತಾರೆ. ಕರ್ನಾಟಕತ್ವ ಎನ್ನುವುದಕ್ಕೆ ಅವರು ಈ ರೀತಿ ಹೇಳುತ್ತಾರೆ: "ಕರ್ನಾಟಕ ಕನ್ನಡವೆಂಬ ಹೆಸರಿನ ಜನಾಂಗವೊಂದು ರೂಪುಗೊಂಡಿದ್ದಿತೆಂದು ಹೇಳಿದ ಮಾತ್ರಕ್ಕೆ ಅವರಲ್ಲಿ ಕರ್ನಾಟಕತ್ವದ ಕಲ್ಪನೆ ಬಂದಿತ್ತೆಂದು ಹೇಳಲಿಕ್ಕೆ ಬರುವುದಿಲ್ಲ. ಜನಾಂಗವಾಗಿ ರೂಪುಗೊಂಡ ಹಲವು ಪಂಗಡಗಳು ಇಂದಿಗೂ ತಮ್ಮತನದ ಅರಿವಿಲ್ಲದೆ ಇರುತ್ತವೆ. ಜನಾಂಗಗಳಲ್ಲಿ ತಾವಾಡುವಭಾಷೆಗೆ ಮೂರ್ತ ಸ್ವರೂಪ ಕೊಡಬೇಕೆಂಬ, ವ್ಯವಹಾರದ ಭಾಷೆ ಮಾಡಬೇಕೆಂಬ ಕಲ್ಪನೆ ಎಂದು ಬರುವುದೋ ಅಂದೇ ಅವರಲ್ಲಿ ತಮ್ಮತನದ ಹೊಳವು ಬಂದಂತಾಗುವುದು. ಕನ್ನಡಿಗರಲ್ಲಿ ಎಲ್ಲಿಯವರೆಗೆ ತಮ್ಮ ಭಾಷೆಯನ್ನೇ ವ್ಯವಹಾರದ ಭಾಷೆಯನ್ನಾಗಿ ಮಾಡಬೇಕೆಂಬ ಕಲ್ಪನೆಯಿದ್ದಿಲ್ಲವೋ ಅಲ್ಲಿಯವರೆಗೆ ಅವರಲ್ಲಿ ಕರ್ನಾಟಕತ್ವದ, ಕನ್ನಡತನದ ಅರಿವು ಇರಲಿಲ್ಲವೆಂಬುದು ಸ್ಪಷ್ಟತೆ ಇದೆ."[೨೦] ಯಾವುದೇ ವಸ್ತುವೊಂದು ಇದ್ದು ಅದು ತನ್ನದೆಂಬ ತಿಳಿವಳಿಕೆ ಬಂದ ಮೇಲೆ ಅದರ ಮೇಲೆ ಅಭಿಮಾನ ಹುಟ್ಟುತ್ತದೆ. ಅಂತಹ ಅಭಿಮಾನವೇ ಅವರಲ್ಲಿ ತಮ್ಮತನದ ಗುರುತನ್ನು ಹುಟ್ಟಿಸುತ್ತದೆ. ಭಾಷೆಯ

ವಿಷಯದಲ್ಲೂ ಹಾಗೆ, ಕನ್ನಡ ಭಾಷೆ ಎನ್ನುವುದು ಇದೆ. ಆದರೆ ಆ ಭಾಷೆ ತಮ್ಮದೆಂದು ಗುರುತಿಸಿಕೊಳ್ಳುವುದು, ಅದನ್ನು ತಮ್ಮ ವ್ಯವಹಾರಕ್ಕಾಗಿ ಬಳಸಬೇಕೆಂಬ ಇಚ್ಛೆ ಉಂಟಾದಾಗ ಅಲ್ಲಿಯೂ ತಮ್ಮತನದ ಗುರುತು ಹುಟ್ಟಿಕೊಳ್ಳುತ್ತದೆ. ಕನ್ನಡ ಭಾಷೆ ಕೇವಲ ಜನರಾಡುವ ಭಾಷೆಯಾಗಿತ್ತು. ಅದನ್ನು ತಮ್ಮ ಗುರುತೆಂದು ಭಾವಿಸಿಕೊಂಡಾಗ ಅದನ್ನು ಅದು ತಮ್ಮ ಆಡಳಿತ ಭಾಷೆಯಾಗಬೇಕೆಂಬ ಹಂಬಲ ಹುಟ್ಟಿಕೊಂಡಿತು. ಭಾಷೆಯ ಮೇಲಿನ ಈ ಅಭಿಮಾನವೇ ಕನ್ನಡತ್ವವಾಗಿ, ಕನ್ನಡ ಭಾಷೆಯನ್ನಾಡುವ ಪ್ರದೇಶವೇ ಕರ್ನಾಟಕತ್ವವಾಗಿ ರೂಪುಗೊಳ್ಳುತ್ತದೆ.

ಹೀಗೆ ರೂಪುಗೊಂಡ ಕರ್ನಾಟಕತ್ವದ ಪ್ರಾಚೀನತೆಯನ್ನು ಕುರಿತು ಅವರು ಯಾವ ರಾಜಮನೆತನವು ಕನ್ನಡವನ್ನು ಆಡಳಿತದಲ್ಲಿ ಬಳಸಿಕೊಂಡಿತೋ, ಆವಾಗಲೇ ಕರ್ನಾಟಕತ್ವದ ಕಲ್ಪನೆ ಹುಟ್ಟಿತು ಎನ್ನುತ್ತಾರೆ. ಚಾಲುಕ್ಯರು ತಮ್ಮ ಸೈನ್ಯಕ್ಕೆ 'ಕರ್ನಾಟಕ ಸೈನ್ಯ' ಎಂದು ಕರೆದುಕೊಂಡಿದ್ದು ಕನ್ನಡ ಭಾಷೆಯ ಗುರುತಾಗಿಯೆ. ಮುಂದೆ ಬಂದಂತಹ ರಾಷ್ಟ್ರಕೂಟ, ಹೊಯ್ಸಳರ ಕಾಲದಲ್ಲಿ ಸೃಷ್ಟಿಯಾದ ಸಾಹಿತ್ಯವನ್ನು ನೋಡಿದರೆ ಅವರು ಕನ್ನಡ ಭಾಷೆಗೆ ಅಗ್ರಸ್ಥಾನ ನೀಡಿದ್ದರೆಂಬುದಾಗಿ ತಿಳಿದು ಬರುತ್ತದೆ. ಅದೂ ಕೂಡ ಕರ್ನಾಟಕತ್ವದ ಕಲ್ಪನೆ. ಆ ಸಂದರ್ಭದಲ್ಲಿನ ಕನ್ನಡ ಶಾಸನಗಳು ಇರುವುದನ್ನು ನೋಡಿದರೆ ಅಲ್ಲಿನ ಆಡಳಿತ ಭಾಷೆ ಕನ್ನಡವಾಗಿತ್ತು ಎಂದು ಹೇಳಬಹುದಾಗಿದೆ. ಹಾಗೆಯೇ ಈ ಕರ್ನಾಟಕತ್ವದ ಕಲ್ಪನೆಗೆ ಹೆಚ್ಚಿನ ಮೆರಗನ್ನು ನೀಡಿದ್ದು ವಿಜಯನಗರ ಸಾಮ್ರಾಜ್ಯ. ವಿದ್ಯಾರಣ್ಯರಿಗೆ 'ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ' ಎಂಬ ಬಿರುದು ಕರ್ನಾಟಕತ್ವದ ಆಧಾರದ ಮೇಲೆಯೇ ಇದ್ದಂತದ್ದು. ಅದೊಂದು ಕನ್ನಡಿಗರ ಸಾಮ್ರಾಜ್ಯ ಎನ್ನುವ ಕಾರಣಕ್ಕಾಗಿಯೇ ಆ ಬಿರುದು ಕರೆಯಲ್ಪಟ್ಟಿದ್ದು. ಹಾಗೆಯೇ ಆ ಕಾಲದ ಶಾಸನಗಳಲ್ಲಿನ 'ಕರ್ನಾಟಕ ವಿಧಿವಿಲಾಸ', 'ಕರ್ನಾಟಕ ಲಕ್ಷ್ಮೀ', 'ಕನ್ನಡ ರಾಜ್ಯರಮಾರಮಣ' ಎನ್ನುವಂತಹವು ಕನ್ನಡದ ಗುರುತನ್ನೇ ಹೇಳುತ್ತವೆ. ವಿಜಯನಗರದ ರಾಜರು ಕೊಟ್ಟ ದಾನಪತ್ರ ಬೇರೆ ಬೇರೆ ಭಾಷೆಗಳಲ್ಲಿದ್ದರೂ ಸಹ ರಾಜಮುದ್ರೆಯಲ್ಲಿ 'ಶ್ರೀವಿರೂಪಾಕ್ಷ' ಎನ್ನುವುದು ಮಾತ್ರ ಕನ್ನಡದಲ್ಲಿಯೇ ಇದೆ. ಅಂದರೆ ಕನ್ನಡಕ್ಕೆ ಹೆಚ್ಚಿನ ಸ್ಥಾನ ಇಲ್ಲಿತ್ತು ಎನ್ನುವುದು ಈ ಮೇಲಿನ ನಿದರ್ಶನಗಳಿಂದ ಸ್ಪಷ್ಟವಾಗುತ್ತದೆ. ಯಾವ ಭಾಷೆಗೆ ಮನ್ನಣೆ ಸಿಕ್ಕು, ಆ ಭಾಷೆಯನ್ನಾಡುವ ಜನರ ಗುರುತಾಗಿ ಅದು ಕಾಣಿಸಿಕೊಳ್ಳುತ್ತದೆ. ಕನ್ನಡ ಭಾಷೆಗೆ ರಾಜರ ಆಳ್ವಿಕೆಯ ಅವಧಿಯಲ್ಲಿ ಸಿಕ್ಕ ಮಾನ್ಯತೆಯೇ ಕನ್ನಡಿಗರ ಗುರುತು, ಅದೇ ಕರ್ನಾಟಕತ್ವ ಎಂದು ಹೇಳಬಹುದಾಗಿದೆ.

ವಿಜಯನಗರ ಸಾಮ್ರಾಜ್ಯದ ನಾಶ ಕೂಡ ಕನ್ನಡಿಗರಲ್ಲಿ ಕರ್ನಾಟಕತ್ವವೂ ಸುಷುಪ್ತಾವಸ್ಥೆಯಲ್ಲಿದ್ದಿತು. ಅದರ ತರುವಾಯ ಆ ಕರ್ನಾಟಕತ್ವವು ನಡುವೆ ನಡುವೆ ಎಲ್ಲಿಯೋ ಚೇತರಿಸಿಕೊಂತೆ ಕಂಡು ಬರುತ್ತದೆ. ಆದರೆ ಅದು ಸಂಪೂರ್ಣ ಎಚ್ಚರವಲ್ಲ. ಬ್ರಿಟಿಷರ ಆಳ್ವಿಕೆಯಲ್ಲಿ ಕನ್ನಡ ನಾಡು ಹರಿದು ಹಂಚಿ ಹೋಗಿ ಕನ್ನಡಿಗರು ಅತಿ ದೈನ್ಯಾವಸ್ಥೆಗಿಳಿದಿದ್ದಾರೆ. ಅದರ ಫಲವಾಗಿಯೂ ಪಾಶ್ಚಾತ್ಯ ಶಿಕ್ಷಣದ ಫಲವಾಗಿಯೂ ಕನ್ನಡಿಗರಲ್ಲಿ ಇಂದು ಹೊಸ ರೀತಿಯಲ್ಲಿ ಕರ್ನಾಟಕತ್ವವು ತಲೆದೋರಿದೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಬಂದ ಫಲವ ಬೀಜಹೊಸ

ಅಂಕುರದೊಡನೆ ಕಾಣಿಸಿಕೊಂಡಿದೆ. ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಬ್ರಿಟಿಷರ ಆಡಳಿತದಿಂದ ಹರಿದು ಹಂಚಿಹೋದ ಕನ್ನಡ ಪ್ರದೇಶಗಳನ್ನು ಏಕೀಕೃತಗೊಳಿಸುವ ನೆಲೆಯಲ್ಲಿಯೇ ಕರ್ನಾಟಕತ್ವದ ಗುರುತು ಮತ್ತಷ್ಟು ನಿಚ್ಚಳಗೊಂಡಿದೆ.

ಹಿಂದೆ ಕನ್ನಡ ಭಾಷೆಗೆ ಸಿಕ್ಕ ಮಹತ್ವವು ಕರ್ನಾಟಕತ್ವವಾದಂತೆ, ಸಮಕಾಲೀನ ಸಂದರ್ಭದಲ್ಲಿ ಬೇರೆ ಬೇರೆ ಅನ್ಯ ಭಾಷಿಕ ಪ್ರಾಂತಗಳಲ್ಲಿ ಹಂಚಿಹೋಗಿರುವ ಕನ್ನಡಿಗರು ತಮ್ಮ ಭಾಷೆಯ ಮೇಲಿನ ಅರಿವಿನಿಂದ ಎಚ್ಚೆತ್ತುಕೊಂಡಿದ್ದಾರೆ. ಆ ಎಚ್ಚರಿಕೆಯ ಪರಿಣಾಮವಾಗಿಯೇ ಅವರು ಕನ್ನಡ ಭಾಷಿಕರೆಲ್ಲರೂ ಒಂದೇ ವ್ಯಾವಹಾರಿಕ ಭಾಷೆಯಡಿಯಲ್ಲಿರಬೇಕೆಂದು ಒತ್ತಾಯಿಸುತ್ತಿದ್ದಾರೆ. ಆ ಕರ್ನಾಟಕತ್ವ ಎಂಬ ತಮ್ಮ ಗುರುತನ್ನು ಕಟ್ಟಿಕೊಳ್ಳುತ್ತಿದ್ದಾರೆ.

'ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ' ಎನ್ನುವ ಲೇಖನದಲ್ಲಿ ಮಧುರ ಚೆನ್ನರು ಹಾಗೂ ಸಿಂಪಿ ಲಿಂಗಣ್ಣನವರು, ವಿದ್ಯಾರಣ್ಯರನ್ನು ಬಸವಣ್ಣನೊಂದಿಗೆ ಸಮೀಕರಿಸುತ್ತಾರೆ. ೧೨ನೆಯ ಶತಮಾನದಲ್ಲಿ ಬಸವಣ್ಣನವರು ಅಂದಿನ ಸಮಾಜದಲ್ಲಿ ಬೇರೂರಿದ್ದ ಅನಿಷ್ಟ ಪಿಡುಗುಗಳಾದ ಜಾತಿಪದ್ಧತಿ, ಲಿಂಗತಾರತಮ್ಯ, ವರ್ಗಭೇದ, ಢಾಂಬಿಕತೆ ಮುಂತಾದವುಗಳ ವಿರುದ್ಧ ಹೋರಾಡಿ, ಸಾಮಾಜಿಕ ಕ್ರಾಂತಿಯನ್ನೇ ಮಾಡಿದರು. ಹದಿನಾಲ್ಕನೆಯ ಶತಮಾನದಲ್ಲಿ ಪರಧರ್ಮೀಯರಿಂದ ರಾಜ್ಯಕ್ಕೊದಗಿದ, ಧರ್ಮಕ್ಕೊದಗಿದ ಆಪತ್ತನ್ನು ತಪ್ಪಿಸಲು ವಿದ್ಯಾರಣ್ಯರು ಹೊಸ ಸಾಮ್ರಾಜ್ಯದ ಉದಯಕ್ಕೆ ಕಾರಣರಾದದರು. ಇಬ್ಬರೂ ಮಂತ್ರಿವರ್ಯರು; ಇಬ್ಬರೂ ಹುಟ್ಟಿದ್ದು ಬ್ರಾಹ್ಮಣ ಕುಲ; ತೊಟ್ಟದ್ದು ಕನ್ನಡ ಕುಲ. 'ಕುಲ' ಎನ್ನುವ ಪರಿಭಾಷೆಯನ್ನು ಮಾನವಶಾಸ್ತ್ರಜ್ಞರು ತಳಿ, ವಂಶಜರು ಎನ್ನುವ ಅರ್ಥದಲ್ಲಿ ಬಳಸುತ್ತಾರೆ. ಆದರೆ ಇಲ್ಲಿ ಹುಟ್ಟಿದ್ದು ಅವರು ಬ್ರಾಹ್ಮಣ ಕುಲ ತೊಟ್ಟದ್ದು ಕನ್ನಡ ಕುಲ ಎನ್ನುವುದು, ಕನ್ನಡಿಗ ಕುಲ ಎನ್ನುವುದು ವಿಸ್ತೃತ ರೂಪದಲ್ಲಿ ಕನ್ನಡಿಗರ ಕುಲಗುರುಗಳು ಎಂದು ಹೇಳಲಾಗಿದೆ. ಈ ಸಮೀಕರಣವನ್ನು ಗಮನಿಸಿದಾಗ ಇವರಿಬ್ಬರನ್ನು ಕನ್ನಡದ ಮತ್ತು ಬ್ರಾಹ್ಮಣರ ಸಂಕೇತವಾಗಿ ಗುರುತಿಸಲಾಗಿದೆ.

ರಾಷ್ಟ್ರೀಯವಾದಿ ಇತಿಹಾಸಕಾರರು ಯುರೋಪಿನ ಮಾದರಿಯನ್ನು ಅನುಸರಿಸಿ ಇತಿಹಾಸವನ್ನು ವಿಭಾಗಿಸಿದ್ದಾರೆ. ಅದಕ್ಕೆ ಕನ್ನಡವೂ ಹೊರತಲ್ಲ. ಭಾರತದ ಇತಿಹಾಸವನ್ನು ಅಧ್ಯಯನದ ಅನುಕೂಲಕ್ಕಾಗಿ ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಎಂದು ವಿಭಾಗಿಸಲಾಗಿದೆ. ಮಧ್ಯಕಾಲೀನ ಇತಿಹಾಸವು ಮಹಮದೀಯರ ಆಡಳಿತವನ್ನು ಒಳಗೊಂಡಿದೆ. ಅದೇ ಮಾದರಿಯು ಈ ಲೇಖನದಲ್ಲಿಯೂ ಕಂಡುಬರುತ್ತದೆ. ಮಧ್ಯಕಾಲೀನ ಚಾರಿತ್ರಿಕ ಅಂಶಗಳನ್ನು ಇಲ್ಲಿ 'ವಿಚಿತ್ರ ಕಾಲ' ಎಂದು ಕರೆಯಲಾಗಿದೆ. ಮಹಮದೀಯ ಅಕ್ರಮ ಆಡಳಿತವನ್ನು ಜರಿಯಲಾಗಿದೆ. ಅಂದರೆ ಇಡೀ ದಕ್ಷಿಣ ಭಾರತದಲ್ಲಿ ಮಹಮ್ಮದೀಯ ಆಡಳಿತದಿಂದ ಹಿಂದೂ ಧರ್ಮವು ಮೃತ ಹಾದಿಯನ್ನಿಡಿದಿತ್ತು. ಅಂತಹ ಸಂದರ್ಭದಲ್ಲಿ ವಿದ್ಯಾರಣ್ಯರು ಧರ್ಮ ರಕ್ಷಣೆಗಾಗಿ ಏನೆಲ್ಲ ತ್ಯಾಗ ಮಾಡಿದರು ಎನ್ನುವುದನ್ನು ಹೇಳುತ್ತಾ, ವಿದ್ಯಾವ್ಯಾಸಂಗ ಮುಗಿಸಿ ಗೃಹಸ್ಥನಾಗಬೇಕು ಎನ್ನುವ ಹಂಬಲವನ್ನು ಹೊತ್ತಿದ್ದರು. ಆದರೆ ದೈವಲೀಲೆ ಆಗಿರಲಿಲ್ಲ. ಬಡತನದ ಕುಟುಂಬದಲ್ಲಿ ಹುಟ್ಟಿದ ಅವರು ಉಗ್ರವಾದ ತಪಸ್ಸನ್ನು

ಆಚರಿಸಿದರು. ಭುವನೇಶ್ವರಿಯನ್ನು ಒಲಿಸಿಕೊಂಡು ಧರ್ಮ ಮತ್ತು ದೇಶ ಸೇವೆಗಾಗಿ ತಮ್ಮ ಐಹಿಕ ಸುಖಗಳನ್ನು ತ್ಯಾಗ ಮಾಡಿದರು ಎನ್ನುವುದನ್ನು ಭಾವನಾತ್ಮಕವಾಗಿ ಹೇಳಲಾಗಿದೆ.

ಸಂಗಮನ ಮಕ್ಕಳಾದಿ ಹರಿಹರಾದಿ ಸಹೋದರರನ್ನು ಪಂಚಪಾಂಡವರೆಂದು ಕರೆಯುತ್ತಾರೆ. ವಿದ್ಯಾರಣ್ಯರನ್ನು ಕೃಷ್ಣನಿಗೆ ಹೋಲಿಸಿ, ಹರಿಹರನನ್ನು ಅರ್ಜುನನಿಗೆ ಹೋಲಿಸುತ್ತಾರೆ. ಮಹಾಭಾರತ ಯುದ್ಧದಲ್ಲಿ ಅರ್ಜುನನ ಮೂಲಕ ಕೃಷ್ಣನು ಪಾಂಡವರಿಗೆ (ಧರ್ಮಕ್ಕೆ) ಗೆಲುವನ್ನು ತಂದುಕೊಟ್ಟಂತೆ. ವಿದ್ಯಾರಣ್ಯರು ಹರಿಹರನ ಮೂಲಕ ಧರ್ಮ (ವೈದಿಕ) ರಕ್ಷಣೆಗಾಗಿ ರಾಜ್ಯವನ್ನು ಸ್ಥಾಪಿಸಿದರು. 'ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ' ಎನ್ನುವ ಖ್ಯಾತಿಗೆ ಪಾತ್ರರಾದರು. ಇದು ವಾಸ್ತವ ಸಂದರ್ಭದಲ್ಲಿ ಕನ್ನಡ ಮತ್ತು ಕನ್ನಡಿಗರ ಎನ್ನುವ ಗುರುತನ್ನು ರೂಪಿಸಿಕೊಳ್ಳಲು ಪ್ರೇರಣೆಯಾಗಿದೆ.

ವಿಜಯನಗರವು ಸರ್ವಧರ್ಮ ಸಹಿಷ್ಣುತೆಯಿಂದ ಕೂಡಿದ್ದು, ಅದಕ್ಕೆ ಹಲವು ನಿದರ್ಶನಗಳಿವೆ. ಹರಿಹರ ಎನ್ನುವ ಹೆಸರಿನಲ್ಲಿಯೇ ವೈಷ್ಣವ ಮತ್ತು ಶೈವರ ಅನ್ಯೋನ್ಯತೆಯ ಹರಿಹರ ಎನ್ನುವ ಹೆಸರಿನಲ್ಲಿಯೇ ವೈಷ್ಣವ ಮತ್ತು ಶೈವರ ಅನ್ಯೋನ್ಯತೆಯ ಸಂಕೇತವಿದೆ. ಬುಕ್ಕನು ಜೈನರಿಗೂ ಮತ್ತು ವೈಷ್ಣವರಿಗಿದ್ದ ಕಲಹವನ್ನು ಬಗೆಹರಿಸಿ ಅವರಲ್ಲಿ ಒಗ್ಗಟ್ಟು ಮೂಡಿಸಿದ. ವಿಜಯನಗರದ ಧ್ವಜಕ್ಕೆ ಹಂದಿಯ ಚಿತ್ರವನ್ನಿಟ್ಟುಕೊಂಡದ್ದೂ ಕೂಡ ಮಹಮದೀಯರ ವಿರುದ್ಧವಲ್ಲ. ವರಾಹಾವತಾರವು ಪರಮಾತ್ಮನ ಅವತಾರಗಳಲ್ಲೊಂದು ಎಂದು ಹೇಳುವುದು ಸಮಂಜಸವಾದುದು. ಹೀಗೆ ವಿಜಯನಗರವು ಪರಧರ್ಮ ಸಮಾನತೆಯನ್ನು ಹೊಂದಿದ ರಾಜ್ಯವಾಗಿತ್ತೆಂದು ಹೇಳುವಲ್ಲಿ ವಾಸ್ತವದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಒಗ್ಗಟ್ಟು ಮುಖ್ಯ ಎನ್ನುವುದನ್ನು ಪ್ರತಿನಿಧಿಸಲಾಗಿದೆ.

ರಾಜ್ಯವು ಪ್ರಜೆಗಳದು. ಅರಸು ಬೇಕಿಲ್ಲ. ರಾಜ್ಯಾಧಿಕಾರಿಗಳು 'ಜನಸೇವಕರು' ಎಂದು ಹೇಳುವುದು ಆಧುನಿಕ ರಾಷ್ಟ್ರ ಧರ್ಮ. 'ರಾಜ್ಯವು ನನ್ನದೂ ಅಲ್ಲ, ಪ್ರಜೆಗಳದೂ ಅಲ್ಲ ದೇವನದು. ರಾಜನು ಧರ್ಮಸೇವಕ' ಎಂದು ಹೇಳುವುದು ರಾಜಧರ್ಮ. ಈಗ ರಾಷ್ಟ್ರವೇ ದೇವರೆಂದೂ, ಅದರ ಕಲ್ಯಾಣವೇ ತಮ್ಮಕಲ್ಯಾಣವೆಂದೂ ತಿಳಿದಿದ್ದರೆ, ಆಗ ಧರ್ಮವೇ ದೇವರೆಂದೂ, ಅದರ ಅನುಸರಣೆಯೇ ತಮ್ಮ ಕಲ್ಯಾಣವೆಂದು ಭಾವಿಸಿದ್ದರು. ರಾಜ್ಯವು ಪ್ರಜಾಪ್ರಭುತ್ವಕ್ಕೊಳಪಟ್ಟಾಗ ಲೋಕಹಿತದ ಕಾರ್ಯಗಳಾಗುವುದಕ್ಕಿಂತ ಹೆಚ್ಚಾಗಿ, ಋಷಿತುಲ್ಯನಾದ ಮಂತ್ರಿಯ ಆಲೋಚನೆ ಕೇಳುವ ಒಬ್ಬ ಧರ್ಮವಂತ ರಾಜನ ಅಧಿಕಾರಕ್ಕೊಳಪಟ್ಟಾಗ ನ್ಯಾಯ-ಶಾಂತಿಗಳು ಲಭಿಸುತ್ತಿದ್ದರೆ ಪ್ರಜಾಪ್ರಭುತ್ವವೇ ಶ್ರೇಷ್ಠವೆಂದು ಹಠವೇಕೆ? ರಾಜ್ಯವು ಯಾವುದೇ ಮಾದರಿಯಲ್ಲಿರಲಿ ಅದು ಮುಖ್ಯವಲ್ಲ. ಅಲ್ಲಿ ಧರ್ಮ (ನ್ಯಾಯಮಾರ್ಗದಲ್ಲಿ ನಡೆಯುವುದು) ಮುಖ್ಯ. ಎಲ್ಲಿ ನಿಜವಾದ ಧರ್ಮವಿದೆಯೋ, ಅಲ್ಲಿ ನಂಬಿದ ದೇವರಿರುತ್ತಾನೆ. ಅವನ ಆಜ್ಞಾನುಸಾರವೇ ರಾಜ್ಯ ನಡೆಯುತ್ತದೆ. ದೇವರೆನ್ನುವವನು ಇದ್ದಾನೆನ್ನುವುದಾದರೆ ಅಲ್ಲಿ ಅನ್ಯಾಯ, ಅನೀತಿ ನಡೆಯಲು ಸಾಧ್ಯವಿಲ್ಲ. ಅದು ಕೂಡ ಪ್ರಜಾಪ್ರಭುತ್ವಕ್ಕೆ ಸಮಾನವಾದುದು ಎಂದು ಹೇಳುವುದರ ಮೂಲಕ ವಿಜಯನಗರದ ಆಡಳಿತವನ್ನು ಸಮರ್ಥಿಸಿಕೊಂಡಿದ್ದಾರೆ. ಜೊತೆಗೆ ವಿಜಯನಗರದ ಅರಸರ ಆಡಳಿತವು ಪ್ರಜಾಪ್ರಭುತ್ವದ ಮಾದರಿಗೆ ಸಮಾನವಾದುದು" ಎಂದು ಅಭಿಪ್ರಾಯಪಡುತ್ತಾರೆ.[೨೨]

ಈಗಾಗಲೇ ಮರಾಠರು ಶಿವಾಜಿಯನ್ನು ಸಂಕೇತವನ್ನಾಗಿಟ್ಟುಕೊಂಡು ಒಗ್ಗೂಡಿದ್ದಾರೆ. ಲೋಕಮಾನ್ಯ ತಿಲಕ್‌ರಂಥವರು ಶಿವಾಜಿಗೆ ವಿಜಯನಗರ ಸಾಮ್ರಾಜ್ಯವೇ ಮಾದರಿಯಾಗಿತ್ತು ಎಂದು ಗುರುತಿಸಿದ್ದಾರೆ. ಆದರೆ ಕನ್ನಡಿಗರಾದ ನಾವುಗಳೇ ನಮ್ಮ ಪರಂಪರೆಯನ್ನು ಸರಿಯಾಗಿ ಗುರುತಿಸಿಕೊಳುತ್ತಿಲ್ಲ. ಹಿಂದಿನ ವೈಭವದ ವಿಜಯನಗರ ನಮಗೆ ಕಾಣದೆ ಅದು ಹಾಳು ಹಂಪೆಯಾಗಿ ಮಾತ್ರ ಕಾಣಿಸುತ್ತಿದೆ. ವಿಜಯನಗರದ ಸ್ಮಾರಕಗಳು ಹಾಳು ಕೊಂಪೆಯಲ್ಲ. ಅದು ಜಡವಾಗಿಲ್ಲ. ಅಲ್ಲಿ ಭವಿಷ್ಯತ್ತನ್ನು ರೂಪಿಸಿಕೊಳ್ಳಲು ಬೇಕಾದ ಪ್ರೇರಕ ಶಕ್ತಿಯಿದೆ. ಆ ಶಕ್ತಿಯನ್ನು ಬಳಸಿಕೊಂಡು ಕನ್ನಡಿಗರೆಲ್ಲರೂ ಒಂದಾಗಿ ಆ ಮೂಲಕ ತಮ್ಮ ನಾಡನ್ನು ಕಟ್ಟಿಕೊಳ್ಳಬೇಕಾಗಿದೆ ಎಂದು ಸೂಚಿಸುತ್ತಾರೆ.

'ಹಿಂದೂ ಸಂಸ್ಕೃತಿಯು ವಿಜಯನಗರ ರಾಜ್ಯಕ್ಕೆ ಋಣಿಯಾಗಿಲ್ಲವೇ?' ಎನ್ನುವ ಲೇಖನದಲ್ಲಿ ತಮ್ಮಣ್ಣ ಕುಬೇರಪ್ಪ ತುಕೋಳರು ಹಿಂದೂ ಸಂಸ್ಕೃತಿಯನ್ನು ವಿಜಯನಗರವು ಹೇಗೆ ಪೋಷಿಸಿತು, ಅದರ ಮಹತ್ವವನ್ನು ಎತ್ತಿ ಹಿಡಿಯಿತಲ್ಲದೆ, ಅದಕ್ಕೊಂದು ಅನನ್ಯತೆಯನ್ನು ರೂಪಿಸಿಕೊಟ್ಟಿತು ಎನ್ನುವುದನ್ನು ಕುರಿತು ವಿವರಿಸಿದ್ದಾರೆ.

ಕ್ರಿ.ಶ.೧೨೯೪ರಲ್ಲಿ ಮುಸ್ಲಿಂ ದಕ್ಷಿಣ ಭಾರತದ ಮೇಲೆ ದಾಳಿ ಆರಂಭವಾಯಿತು. ಈಗಾಗಲೇ ಘಜ್ನಿ ಮಹಮದನ ಕಾಲಕ್ಕಾಗಲೇ ಹಿಂದೂ ಸಾಮ್ರಾಜ್ಯಗಳ ಮೇಲೆ ದಾಳಿ ಮಾಡುವುದು ಆರಂಭವಾಗಿತ್ತು. ಮೂರ್ತಿ ಪೂಜಕರಾಗಿದ್ದ ಹಿಂದೂಗಳನ್ನು ಸದೆಬಡಿಯುವುದನ್ನು ಧರ್ಮಯುದ್ಧವೆಂದು ಅವನು ಭಾವಿಸಿದ್ದನಂತೆ. ಅವನ ನಂತರ ಬಂದ ಮುಸ್ಲಿಂ ಅರಸರೂ ಸಹ ಅದೇ ಹಾದಿಯನ್ನು ತುಳಿದರು. ಕ್ರಿ.ಶ.೧೩೨೫ರಲ್ಲಿ ಪಟ್ಟಕ್ಕೆ ಬಂದ ಮಹಮದ್-ಬಿನ್-ತುಘಲಕ್‌ನ ಕಾಲದಲ್ಲಿಯಂತೂ ದಕ್ಷಿಣ ಭಾರತದ ಹಿಂದೂ ಸಾಮ್ರಾಜ್ಯಗಳು ಅವನ ಅಮಾನವೀಯ ಕೃತ್ಯಗಳಿಂದ ಜರ್ಝರಿತವಾದವು. ಆ ಸಂದರ್ಭದಲ್ಲಿ ಹಿಂದೂ ಧರ್ಮದ ಸಾಮಾನ್ಯ ಜನರ ಸ್ಥಿತಿ ಒತ್ತಟ್ಟಿಗಿರಲಿ, ಚಿಕ್ಕಮಟ್ಟ ಅರಸರು ಮುಸಲ್ಮಾನ ವೇಷದಲ್ಲಿ ಹೋಗಬೇಕಾಗಿತ್ತು. ಇಷ್ಟಾದರೂ ಮುಸ್ಲಿಮರ ದೌರ್ಜನ್ಯಕ್ಕೆ ತಡೆ ಇರಲಿಲ್ಲ. ತಾವು ಗೆದ್ದ ಸಾಮ್ರಾಜ್ಯದ ರಾಜರ ಚರ್ಮವನ್ನು ಸುಲಿಯುವುದು, ಅವರ ಮಾಂಸಗಳನ್ನು ಅವರ ಹೆಂಡತಿ, ಮಕ್ಕಳು ತಿನ್ನುವಂತೆ ಒತ್ತಾಯಿಸುವುದು, ಈ ಬಗೆಯ ದುಷ್ಕೃತ್ಯಗಳು ನಿರಂತರವಾಗಿ ನಡೆದಿದ್ದವು. ಹಿಂದೂ ಸಂಸ್ಕೃತಿಯಂತೂ ಹಿಂದೂಸ್ಥಾನದಲ್ಲಿ ಉಳಿಯಲಾರದೇನೋ ಎನ್ನುವ ಸ್ಥಿತಿಗೆ ಬಂದಿತ್ತು ಎಂದು ಹೇಳುವ ಮೂಲಕ ವಿಜಯನಗರದ ಅರಸರ ಮತ್ತು ವಿದ್ಯಾರಣ್ಯರ ಘನತೆಯನ್ನು ಹೇಳುವುದಕ್ಕೆ ವೇದಿಕೆಯನ್ನು ನಿರ್ಮಿಸಿಕೊಳ್ಳುತ್ತಾರೆ. ಇಲ್ಲಿ ಮುಸ್ಲಿಮರಿಗೆ ಕೇವಲ ರಾಜರನ್ನು ಸೋಲಿಸುವುದು ಮುಖ್ಯವಾಗಿರಲಿಲ್ಲ. ಅವರಿಗೆ ಹಿಂದೂ ಸಂಸ್ಕೃತಿಯನ್ನು ನಾಶಪಡಿಸುವುದೇ ಮುಖ್ಯವಾಗಿತ್ತು. ಅದಕ್ಕಾಗಿಯೇ ಅವರು ತಾವು ಗೆದ್ದ ಪ್ರದೇಶಗಳಲ್ಲಿ ಹಿಂದೂ ದೇವಾಲಯಗಳನ್ನು ಕೆಡವಿ ಅದೇ ಸ್ಥಳದಲ್ಲಿ, ಅದೇ ಕಲ್ಲುಗಳಿಂದ ಮಸೀದಿಗಳನ್ನು ನಿರ್ಮಾಣ ಮಾಡಿದರು ಎಂದು ಹೇಳುವುದು ಕೇವಲ ಹಿಂದೂ ಧರ್ಮದ, ಹಿಂದೂ ರಾಜರುಗಳ ನಾಶವಲ್ಲ. ಅವುಗಳೊಂದಿಗೆ ಕನ್ನಡಿಗರನ್ನೂ ಕನ್ನಡ ಸಂಸ್ಕೃತಿಯನ್ನೂ ನಾಶ ಮಾಡಿದರು ಎಂದು ಹೇಳುವುದರೊಂದಿಗೆ ಸ್ವಧರ್ಮ ನಿರ್ಮಾಣಕ್ಕಾಗಿ ಮುಸ್ಲಿಮರನ್ನು ಅನ್ಯರಾಗಿ ನೋಡುತ್ತಾರೆ.

ಧರ್ಮ ಮತ್ತು ರಾಜಕಾರಣಕ್ಕೆ ಅನ್ಯೋನ್ಯ ಸಂಬಂಧವಿದೆ. ಆ ಸಂಬಂಧದಿಂದ ಆದರ್ಶ ಸಾಮ್ರಾಜ್ಯ ನಿರ್ಮಾಣ ಮಾಡಿಕೊಳ್ಳಲು ಸಾಧ್ಯ ಎನ್ನುವುದನ್ನು ಸಾಬೀತುಪಡಿಸಲು ಕೆಲವು ಚಾರಿತ್ರಿಕ ನಿದರ್ಶನಗಳನ್ನು ಬಳಸಿಕೊಂಡಿದ್ದಾರೆ. ಹಿಂದೂಸ್ಥಾನದಲ್ಲಿ ರಾಜಕಾರಣ ಮತ್ತು ಧರ್ಮ ಸಂಯೋಜನೆಯಾದುದು ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಅಶೋಕನು ಬೌದ್ಧ ಯತಿಗಳಿಂದ ಸಂಯೋಜನೆ ಪಡೆದುದು, ಗಂಗ ರಾಜ್ಯದ ಉದಯಕ್ಕೆ ಜೈನಯತಿ ಮಾಘನಂದಿಯ ಪ್ರಯತ್ನ, ಹನ್ನೊಂದನೆಯ ಶತಮಾನದಲ್ಲಿ ಹೊಯ್ಸಳರಿಗೆ ಜೈನಯತಿ ಸಹಾಯ ಇವುಗಳೆಲ್ಲ ಧರ್ಮ ಮತ್ತು ರಾಜಕಾರಣದ ಸಂಯೋಜನೆಯಿಂದಾದವುಗಳೇ. ಅಂತೆಯೇ ಪ್ರಸಿದ್ಧಿಯನ್ನೂ ಕೂಡ ಪಡೆದವು. ಅದರಂತೆ ವಿಜಯನಗರ ಸಾಮ್ರಾಜ್ಯವೂ ಈ ಎರಡರ ಸಂಯೋಜನೆಯಿಂದುಂಟಾದದ್ದು. ಆ ಸಂದರ್ಭದಲ್ಲಿ ಹಿಂದೂ ಧರ್ಮಕ್ಕೆ ರಾಜಕಾರಣದ (ಸಾಮ್ರಾಜ್ಯದ) ಅಗತ್ಯತೆಯಿತ್ತು. ಇದಕ್ಕಾಗಿ ಹುಟ್ಟುವ ರಾಜ್ಯಕ್ಕೆ ದೈವಿ ಶಕ್ತಿ(ಧರ್ಮ)ಯ ಅಗತ್ಯತೆಯೂ ಇತ್ತು. ಒಂದು ರಾಜ್ಯ ಹುಟ್ಟಬೇಕೆಂದರೆ ಒಬ್ಬರಿಂದ, ಒಮ್ಮಿಂದೊಮ್ಮೆಲೇ ಆಗುವ ಕೆಲಸವಲ್ಲ. ಅದಕ್ಕೆ ಸಾಂಘಿಕ ಶಕ್ತಿ ಮತ್ತು ಪ್ರಯತ್ನಗಳೆರಡೂ ಬೇಕು. ಈ ಎರಡೂ ದೊರೆಯಲಿಕ್ಕೆ ಬೇಕಾಗುವುದೇ ಧರ್ಮ ಮತ್ತು ರಾಜಕಾರಣ. ವಿಜಯನಗರಕ್ಕೆ ಧರ್ಮದಿಂದ ವಿದ್ಯಾರಣ್ಯರು ದೊರೆತರೆ, ರಾಜಕಾರಣಕ್ಕೆ ಹರಿಹರ ದೊರೆತ. ಇವರಿಬ್ಬರ ಸಮ್ಮಿಳಿತದಿಂದ ಎರಡು ಬಗೆಯ ಅನುಕೂಲವನ್ನೊದಗಿಸುವ ರಾಜ್ಯವೊಂದು ಉದಯವಾಯಿತು ಎಂದು ಹೇಳುವುದರಲ್ಲಿ ಮತ್ತೆ ವೈದಿಕ ಧರ್ಮಾಧಾರಿತ ರಾಜ್ಯ ವನ್ನು ರೂಪಿಸಿಕೊಳ್ಳುವುದಕ್ಕೆ ವಿದ್ಯಾರಣ್ಯರು ಪ್ರೇರೇಪಿಸುತ್ತಾರೆ.

ವಿದ್ಯಾರಣ್ಯರು ರಾಜ್ಯ ವೈಭವವನ್ನು ಅನುಭವಿಸಲು ಗುರುತ್ವವನ್ನು ಕೈಗೊಂಡವರಲ್ಲ; ಆದರೆ ಧರ್ಮಾಲಯದ ಹೊಂಗಳಸವು ಕಳಚುತ್ತಿದ್ದಾಗ, ಕನ್ನಡ ಧ್ವಜಗಳು ಅದಿರು ಹತ್ತಿದಾಗ, ಮೂಗು ಹಿಡಿದುಕೊಂಡು ಕೂಡುವುದು ಅವರಿಗೆ ಯೋಗ್ಯವೆನಿಸಲಿಲ್ಲ. ನಾವು ಕಟ್ಟಿಕೊಳ್ಳಬೇಕಾದ ರಾಜ್ಯವು ಕೇವಲ ವೈಭವಕ್ಕಾಗಿ ಅಲ್ಲ. ಪ್ರಜೆಗಳ ಹಿತಕ್ಕಾಗಿ. ಅನ್ಯರಿಂದ ನಮ್ಮ ಮತ್ತು ನಮ್ಮ ಸಹೋದರರ ಮೇಲೆ ಆಗುತ್ತಿರುವ ಅನ್ಯಾಯಗಳನ್ನು ಕಂಡು ಸುಮ್ಮನೆ ಕೂಡುವುದಕ್ಕೆ ಸಮಯವಲ್ಲ. ಹಿಂದೆ ಇಂತಹ ಸ್ಥಿತಿಯಲ್ಲಿಯೇ ವಿದ್ಯಾರಣ್ಯರು ರಾಜ್ಯ ಸ್ಥಾಪಿಸಿದಂತೆ, ಇಂದು ನಾವು ಅಂತಹದೇ ಸ್ಥಿತಿಯಲ್ಲಿದ್ದೇವೆ, ಅಂತಹ ರಾಜ್ಯವನ್ನು ನಿರ್ಮಾಣ ಮಾಡಿಕೊಳ್ಳಲು ಕರೆ ನೀಡುತ್ತಾರೆ.[೮]

ಬುರ್ಲಿ ಬಿಂದುಮಾಧವಾಚಾರ್ಯರು ವಿಜಯನಗರ ಕುರಿತ ತಮ್ಮ ಲೇಖನದಲ್ಲಿ ಒಂದು ವೇಳೆ ವಿಜಯನಗರ ಸಾಮ್ರಾಜ್ಯವು ಉದಯಿಸದಿದ್ದರೆ ಎಂತಹ ಸ್ಥಿತಿ ನಿರ್ಮಾಣವಾಗುತ್ತಿತ್ತು ಎನ್ನುವ ಪ್ರಶ್ನೆಯನ್ನು ಹಾಕಿಕೊಳ್ಳುತ್ತಾರೆ. ಅದಕ್ಕೆ ಉತ್ತರಿಸುತ್ತಾ, ವೇದ ಧರ್ಮದ ಮೇಲೆ ಆಘಾತಗಳಾಗಿ ಧರ್ಮವು ಜರ್ಝರಿತವಾಗುತ್ತಿತ್ತು. ಆರ್ಯ ಸಂಸ್ಕೃತಿಯು ಜೀವಂತ ಉಳಿಯುವ ಲಕ್ಷಣಗಳಿದ್ದಿಲ್ಲ. ಆರ್ಯ ತತ್ವಜ್ಞಾನವು ಮಲೀನವಾಗಿ ವೇದಾಂತದ ದುರುಪಯೋಗವಾಗುತ್ತಿತ್ತು ಎನ್ನುತ್ತಾರೆ. ವೇದದಲ್ಲಿ ವರ್ಣಿಸಿದ ಬ್ರಹ್ಮತೇಜಸ್ಸೂ ಕ್ಷತ್ರಿಯರ ಬಲವೂ ಕಟ್ಟುಕಥೆಗಳಾಗಿ ಪರಿಣಮಿಸತೊಡಗಿದ್ದವು. ಆರ್ಯ ತತ್ವಜ್ಞಾನವೆಲ್ಲವೂ, ಯಾರೋ ಹುಚ್ಚರು ಬಡಬಡಿಸಿದ ಮಾತುಗಳೇನೋ ಎಂಬ ಭ್ರಮೆಯು

ಮೆಲ್ಲಮೆಲ್ಲನೆ ನೆಲೆಯೂರಲತ್ತಿತ್ತು ಇಂದು ನಮ್ಮ ಪ್ರತೀಕವಾಗಿರುವ ಗುಡಿ ಗೋಪುರಗಳು ಮಾಯವಾಗುತ್ತಿದ್ದವು. ಪುಣ್ಯಕ್ಷೇತ್ರಗಳು ಹಾಳಾಗುತ್ತಿದ್ದವು. ಕಲೆ, ಸಂಸ್ಕೃತಿ, ಸಾಹಿತ್ಯ ಹೇಳ ಹೆಸರಿಲ್ಲದೆ ಹೋಗುತ್ತಿದ್ದವು. ಆರ್ಯ ತತ್ವಜ್ಞಾನದ ಶಾಖೆಗಳಾದ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಟಾದ್ವೈತ, ಜೈನ ಮೊದಲಾದವು ಮುಳುಗಿ ಹೋಗುತ್ತಿದ್ದವು. ಸಮ್ಮಿಶ್ರವಾದ ಮಾನವರ ಗುಂಪು ಕಾಣಿಸದೇ, ದೇಶವೇ ಇಸ್ಲಾಂಮಯವಾಗಿ ಹೋಗುತ್ತಿತ್ತು ಎನ್ನುತ್ತಾರೆ. ಆಗ ಉದಯಿಸಿದ ವಿಜಯನಗರವು ಈ ಎಲ್ಲ ಆಪತ್ತುಗಳನ್ನು ದೂರ ಮಾಡಿತು. ಸಮಕಾಲೀನ ಸಂದರ್ಭದಲ್ಲಿ ಮತ್ತೆ ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕಾಗಿ ಇಂದು ಅಂತಹ ಹೋರಾಟವನ್ನು ಮಾಡಿ ಧರ್ಮವನ್ನು, ಸಂಸ್ಕೃತಿಯನ್ನು ಕಾಪಾಡಿಕೊಳ್ಳಬೇಕು. ಇಲ್ಲದಿದ್ದರೆ ಬ್ರಿಟಿಷರ ಆಡಳಿತದಿಂದ ಇಡೀ ಹಿಂದೂಸ್ಥಾನವೇ ಕ್ರೈಸ್ತಮಯವಾಗುತ್ತದೆ. ಈಗಲಾದರೂ ಭಾರತೀಯರೆಲ್ಲರೂ ಎಚ್ಚೆತ್ತುಕೊಳ್ಳಬೇಕು. ಆದ್ದರಿಂದ ವಿಜಯನಗರವನ್ನು ಆದರ್ಶವಾಗಿಟ್ಟುಕೊಂಡು ಸಮಕಾಲೀನ ಸಮಸ್ಯೆಯನ್ನು ಎದುರಿಸುವ ಕಡೆ ಗಮನಹರಿಸಲು ಕರೆ ಕೊಟ್ಟಿದ್ದಾರೆ.[೧೩೩]

'ಭರತ ಖಂಡದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾನವು' ಎನ್ನುವ ಲೇಖನದಲ್ಲಿ ನಂದಗಡ ಭೀಮರಾಯರು, ವಿಜಯನಗರದ ಮಹತ್ವವನ್ನು ಕುರಿತು ಹೇಳುತ್ತಾರೆ. ಮುಸಲ್ಮಾನರ ದುರಾಡಳಿತದಿಂದ ಅವರ ವಿರುದ್ಧ ಹೋರಾಡಿ ಉತ್ತರ ಹಿಂದೂಸ್ತಾನದವರು ದಣಿದು ಹೋಗಿದ್ದರು. ಆದರೆ ದಕ್ಷಿಣದಲ್ಲಿ ಮುಸ್ಲಿಮರು ದಾಳಿ ನಡೆಸಿದ್ದರೂ ಸಹಿತ ಇಲ್ಲಿ ಜನರ ಪ್ರೇರಕ ಶಕ್ತಿಯು ನಾಶವಾಗಿರಲಿಲ್ಲ. ಆ ಪ್ರೇರಕ ಶಕ್ತಿಯಿಂದಾಗಿಯೇ ವಿಜಯನಗರ ಸಾಮ್ರಾಜ್ಯವು ಉದಯಿಸಿತು ಎಂದು ಹೇಳುತ್ತಾರೆ. ಮುಸ್ಲಿಮರಿಂದ ನೊಂದ ಜನತೆಯನ್ನು ಹೋರಾಟಕ್ಕೆ ಅಣಿಯಾಗಿಸಲು ನಾಯಕರು ಬೇಕಾಗಿದ್ದರು. ಆಗ ವಿದ್ಯಾರಣ್ಯ ಮತ್ತು ಹರಿಹರರು ಕನ್ನಡಿಗರನ್ನು ಒಗ್ಗೂಡಿಸಿ ವೈದಿಕ ಸಾಮ್ರಾಜ್ಯ ಕಟ್ಟಿದರು. ಕನ್ನಡಿಗರು ತಮ್ಮ ಸಾಮ್ರಾಜ್ಯವನ್ನಷ್ಟೇ ಕಟ್ಟಿಕೊಳ್ಳಲಿಲ್ಲ. ಬದಲಾಗಿ ಒಂದು ಧರ್ಮದ ಮಹಾನ್ ಸಾಮ್ರಾಜ್ಯವನ್ನು ಕಟ್ಟಿದರು ಎಂದು ಹೇಳಲು ಹೊರಟಂತಿದೆ.

ಭರತ ಖಂಡದ ಮೇಲೆ ಅಪಘಾತಗಳಾಗುವಾಗಲೇ ೨೦೦-೪೦೦ ವರುಷಗಳಾಗಿದ್ದವು. ೧೩ನೆಯ ಶತಮಾನದ ಅಂತ್ಯದವರೆಗೂ ಉತ್ತರ ಹಿಂದೂಸ್ತಾನವು ಮುಸಲ್ಮಾನರ ಅಪಘಾತಗಳನ್ನು ಸಹಿಸಿತು. ಅದು ಹೋರಾಡಿ ದಣಿದು ಸ್ವಾತಂತ್ರ್ಯ ಪತಾಕೆಯನ್ನು ಕೆಳಗಿಟ್ಟೊಡನೆ ಕನ್ನಡ ಕಡುಗಲಿಗಳು ಅದನ್ನವಚಿ ಸಂಗ್ರಾಮವನ್ನು ಮುಂದೆ ಹಾಗೇ ಸಾಗಿಸದಿದ್ದರೆ, ಭರತ ಖಂಡದ ಅವಸ್ಥೆಯು ಈಗ್ಯೆ ಏನಾಗುತ್ತಿತ್ತು? ಹಿಂದೂಸ್ತಾನಕ್ಕೆ ಬಂದದೊದಗಿದ ಆಪತ್ತನ್ನು ಪರಿಹರಿಸಲು ವಿಜಯನಗರದ ವೀರ ಕನ್ನಡಿಗರು ಹೋರಾಡಿದರು. ಆ ಹೋರಾಟವನ್ನು ಲೇಖಕರು ಸ್ವಾತಂತ್ರ್ಯ ಸಂಗ್ರಾಮವೆಂದು ಕರೆಯುತ್ತಾರೆ. ಆ ಸಂಗ್ರಾಮವನ್ನು ಅವರು ಈ ಮುಂದಿನಂತೆ ವಿವರಿಸುತ್ತಾರೆ.

ಒಳಜಗಳಗಳನ್ನು ಬದಿಗಿಟ್ಟು, ಜಾತಿ ಜಾತಿಗಳೊಳಗಿನ ದುರಭಿಮಾನಗಳನ್ನು ತ್ಯಜಿಸಿ, ಸ್ವಾರ್ಥವನ್ನು ಒದ್ದು ಹಿಂದೂ ಸಮಾಜವೆಲ್ಲವೂ ರಾಷ್ಟ್ರ ರಕ್ಷಣೆಗಾಗಿ ಒಮ್ಮನಸ್ಸಿನಿಂದ ಒಂದಾದ ಸುಸಂಘಟಿತ ಪ್ರತೀಕಾರವನ್ನು ಮಾಡಿದ್ದು ಇದೇ ಮೊದಲು ಅದಕ್ಕೂ ಮೊದಲು ಹಿಂದೂ ರಾಜ್ಯಗಳೆಲ್ಲ

ಒಂದಾಗಿದ್ದರೆ ಈ ದುಸ್ಥಿತಿ ಬರುತ್ತಿರಲಿಲ್ಲ. ತಮ್ಮ ತಮ್ಮಲ್ಲಿನ ಅಸೂಯೆಯೇ ಮುಸ್ಲಿಮರು ದಾಳಿ ಮಾಡಲಿಕ್ಕೆ ಸಹಾಯಕವಾಗಿತ್ತು. ವಿಜಯನಗರದವರು ಹೀಗೆ ಒಂದಾಗಿ ಮುಸ್ಲಿಮರನ್ನು ಎದುರಿಸಿದರೋ, ಅದರಂತೆ ಇಂದು ನಮ್ಮ ನಮ್ಮಲ್ಲಿನ ಆಂತರಿಕ ಸಮಸ್ಯೆಗಳನ್ನು ಬದಿಗಿಟ್ಟು ದೇಶವನ್ನು ಪರರ ದಾಸ್ಯದಿಂದ ಮುಕ್ತಗೊಳಿಸಬೇಕಾಗಿದೆ. ಇಲ್ಲಿ ವಿಜಯನಗರವನ್ನೇ ಸಂಕೇತವಾಗಿಟ್ಟುಕೊಳ್ಳುವುದು ಈ ಬಗೆಯ ಹೋರಾಟ ಮಾಡಿದ ಮೊದಲನೇ ಸಾಮ್ರಾಜ್ಯ ಎನ್ನುವ ಕಾರಣಕ್ಕಾಗಿ ಎನ್ನುವ ಧ್ವನಿಯು ಇಲ್ಲಿ ಕಾಣಸಿಗುತ್ತದೆ.[೧೩೪]

ವಿಜಯನಗರ ಸಾಮ್ರಾಜ್ಯದ ಉದಯದಿಂದಾದ ಪರಿಣಾಮವನ್ನು ಕುರಿತು ಅವರು ಈ ರೀತಿ ಹೇಳುತ್ತಾರೆ. 'ಮೃತಪ್ರಾಯರಾದ ಭಾರತೀಯರಿಗೆ ನಿರಾಶಾಮಯವಾದ ಆಗಸದಲ್ಲಿ ಆಶೆಯ ಮೇಘಕಲಶವೊಂದು ಕಂಡು ಅವರನ್ನು ಬಲಪಡಿಸಿತು. ಜನರ ದೃಷ್ಟಿಗಳೆಲ್ಲ ಅದರೆಡೆಗೆ ನೆಟ್ಟವು. ಭಾರತೀಯರು ಇನ್ನು ಬದುಕುವ ಆಶೆಯುಂಟೆಂದು ಆನಂದಭರಿತರಾದರು. ಆ ಆಶೆಯ ಮೇಘಕಲಶವು ಕರಿ ಮಾಯವಾಗದೆ, ಜಲಪ್ರಪೂರ್ಣವಾಗಿ ದೊಡ್ಡದಾಗಿ ಬೆಳೆಯುತ್ತ ಬೆಳೆಯುತ್ತ ಇಡೀ ದಕ್ಷಿಣಾ ಪಥದಷ್ಟು ಬೆಳೆದು, ಮನದಣಿವಂತೆ ಅಮೃತವನ್ನು ವರ್ಷಿಸಿ, ಭಾರತೀಯರಲ್ಲಿ ಜೀವನ ಕಳೆಯನ್ನು ತುಂಬಿ, ಅವರಿಗೆ ಮತ್ತೆ ಭಾರತೀಯತ್ವವನ್ನು ದೊರಕಿಸಿ ಕೊಟ್ಟಿತು ವಿಜಯನಗರ ಸಾಮ್ರಾಜ್ಯ ಕನ್ನಡಿಗರಷ್ಟೇ ಸೀಮಿತವಾಗಿರಲಿಲ್ಲ. ಅದು ಅನ್ಯರ ಆಕ್ರಮಣದಿಂದ ನಲುಗಿ ಹೋಗಿದ್ದ ದಕ್ಷಿಣ ಭಾರತೀಯರಿಗೆ ೨೫೦ ವರ್ಷಗಳ ಕಾಲ ರಕ್ಷಾ ಕವಚವಾಗಿತ್ತು. ಇದರ ಆಶ್ರಯದಲ್ಲಿದ್ದ ವೈದಿಕ ಧರ್ಮ ಮತ್ತು ಸಂಸ್ಕೃತಿಗಳಿಗೆ ಸುರಕ್ಷಿತವಾಗಿದ್ದು, ಅಭೇದ್ಯವಾದ ಗೋಡೆಯಂತಿತ್ತು'.

ವಿಜಯನಗರ ಸ್ಥಾಪನೆಗಿಂತ ಪೂರ್ವದಲ್ಲಿನ ಸಾಮ್ರಾಜ್ಯಗಳು ಹಿಂದೂ ಧರ್ಮವನ್ನು ಪೋಷಿಸಿದವು. ಆದರೆ ಧರ್ಮಕ್ಕೆ ಗಂಡಾಂತರ ಬಂದಾಗ ಅವುಗಳಿಂದ ಅದನ್ನು ರಕ್ಷಿಸಿಕೊಳ್ಳಲಾಗಲಿಲ್ಲ. ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ವಿದ್ಯಾರಣ್ಯರ ಪ್ರೇರಣೆಯ ಮೇರೆಗೆ ಹರಿಹರ ಬುಕ್ಕರು ವೈದಿಕ ಧರ್ಮಕ್ಕೊದಗಿದ ಗಂಡಾಂತರವನ್ನು ದೂರ ಮಾಡಿದರು. ಅಷ್ಟೇ ಅಲ್ಲ ಅದನ್ನು ರಾಷ್ಟ್ರ ಧರ್ಮವನ್ನಾಗಿ ಮಾಡಿಕೊಂಡಿದ್ದರು ಅಂದ ಮಾತ್ರಕ್ಕೆ ಅವರು ಉಳಿದ ಧರ್ಮಗಳನ್ನು ತಿರಸ್ಕರಿಸಲಿಲ್ಲ, ಬದಲಾಗಿ ಎಲ್ಲ ಧರ್ಮಗಳನ್ನು ಪುರಸ್ಕರಿಸಿದರು. ಅಲ್ಲಿ ಜಾತಿಯಿಂದ ಮೇಲು ಕೀಳು ಎಂದು ಅಳೆಯದೇ, ಅವರ ಕಾರ್ಯವೈಖರಿಯ ಮೂಲಕ ಜನರ ಸ್ಥಾನಮಾನವನ್ನು ಗುರುತಿಸುತ್ತಿದ್ದರು ಎಂದು ಹೇಳಲಾಗಿದೆ.

ಜೈನಧರ್ಮಕ್ಕೂ ವಿಜಯನಗರ ಸಾಮ್ರಾಜ್ಯಕ್ಕೂ ಅವಿನಾಭಾವ ಸಂಬಂಧವಿದೆ. ೧೩೬೮ರ ಶಾಸನದ ಉಲ್ಲೇಖದಂತೆ ೧ನೆಯ ಬುಕ್ಕರಾಯನ ಕಾಲದಲ್ಲಿ ಜೈನರಿಗೂ ಮತ್ತು ವೈಷ್ಣವರಿಗೂ ಉಂಟಾದ ಕಲಹವನ್ನು ಸ್ವತಃ ರಾಜನೇ ಇಬ್ಬರಲ್ಲಿಯೂ ಯಾವ ಭೇದವಿಲ್ಲವೆಂಬುದನ್ನು ಮನವರಿಕೆ ಮಾಡಿಕೊಟ್ಟನು. ಜೈನ ಧರ್ಮಕ್ಕೆ ಹಾನಿ ಅಥವಾ ಅಭ್ಯುದಯವಾದರೆ ವೈಷ್ಣವರು ಅದು ತಮ್ಮ ಧರ್ಮಕ್ಕಾಗಿ ಹಾನಿ ಅಥವಾ ಅಭ್ಯುದಯವೆಂದು ಭಾವಿಸುವಂತೆ ಹೇಳುತ್ತಾನೆ. ಹಾಗೆಯೇ ವಿಜಯನಗರದಲ್ಲಿ ಜೈನ ಬಸದಿಗಳನ್ನು ಕಟ್ಟಿಸಿದ್ದು, ಜೈನ ಬಸದಿಗಳಿಗೆ ದಾನ ಬಿಟ್ಟದ್ದು ಮೊದಲಾದ ಅಂಶಗಳು ಜೈನಧರ್ಮಕ್ಕೆ ನೀಡಿದ್ದ ಪ್ರೋತ್ಸಾಹವನ್ನು ತಿಳಿಸುತ್ತವೆ.

ವಿಜಯನಗರ ಕಾಲದಲ್ಲಿ ವೀರಶೈವ ಧರ್ಮಕ್ಕೆ ಪ್ರೋತ್ಸಾಹವಿತ್ತು ಎನ್ನುವುದಕ್ಕೆ ಆ ಕಾಲಾವಧಿಯಲ್ಲಿ ವೀರಶೈವ ಸಾಹಿತ್ಯಕ್ಕಿದ್ದ ಮನ್ನಣೆಯನ್ನು ನೋಡಬಹುದು. ಅಲ್ಲದೆ ಸ್ವತಃ ಪ್ರೌಢದೇವರಾಯನೇ ಲಿಂಗವನ್ನು ಧರಿಸಿದ್ದನು. ನೂರೊಂದು ವಿರಕ್ತರೂ ಕೂಡ ಅವನ ಕಾಲದಲ್ಲಿಯೇ ಇದ್ದರು. ಲಕ್ಕಣ್ಣದಂಡೇಶ, ಚಾಮರಸ, ಮಗ್ಗಿಯ ಮಾಯಿದೇವ, ಕರಸ್ಥದ ನಾಗೇಂದ್ರ ಮುಂತಾದ « ÃgÀÊ ÀPÀ UÀUÉD ±ÀiÁ« vÀÛC ª ÀjÀ¸Á» vÀPÉ¥É ÀvÁ ¹ zÁgÉ[3.3]

ಕ್ರೈಸ್ತಧರ್ಮದ ಪ್ರಚಾರಾರ್ಥವಾಗಿ ಭಾರತಕ್ಕೆ ಬಂದಿದ್ದ ಥೋಮಸ್‌ನು ಕರ್ನಾಟಕಕ್ಕೆ ಬಂದಿದ್ದನು. ಥೋಮಸ್‌ನ ಸಮಾಧಿಗೆ ಉಂಬಳಿ ನೀಡಿದ ಕ್ರಿ.ಶ.೧೩೬೭ರ ಶಾಸನದಲ್ಲಿ ವಿಜಯನಗರದ ಅರಸ ಬುಕ್ಕರಾಯನ ಹೆಸರಿರುವುದನ್ನು ನೋಡಿದರೆ ಕ್ರೈಸ್ತ ಧರ್ಮದವರನ್ನೂ ಕೂಡ ಅನ್ಯೋನ್ಯತೆಯಿಂದ ಕಂಡಿದ್ದರು ಎನ್ನುವ ಅಂಶ ತಿಳಿದು ಬರುತ್ತದೆ. ಅಷ್ಟೇ ಅಲ್ಲದೆ ಯಾವ ಧರ್ಮದವರ ಉಪಟಳದ ವಿರುದ್ಧ ಈ ಸಾಮ್ರಾಜ್ಯ ಉದಯಿಸಿತ್ತೋ, ಅಂತಹ ಧರ್ಮೀಯರನ್ನೂ ಕೂಡ ವಿಜಯನಗರದ ಅರಸರು ತಿರಸ್ಕರಿಸಲಿಲ್ಲ. ಅವರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟು, ಮಸೀದಿಗಳನ್ನು ನಿರ್ಮಿಸಿಕೊಡುವುದರ ಮೂಲಕ ಸರ್ವಧರ್ಮ ಸಹಿಷ್ಣುಗಳಾಗಿದ್ದರು. ವಿಜಯನಗರ ಸಾಮ್ರಾಜ್ಯದಲ್ಲಿನ ಸೈನಿಕ ವ್ಯವಸ್ಥೆಯು ಸುಸಜ್ಜಿತವಾಗಿದ್ದು, ಬಲಾಢ್ಯವೂ ಆಗಿತ್ತು. ೩೦ ರಿಂದ ೪೦ ಸಾವಿರಗಳವರೆಗೆ ಅಶ್ವಾರೂಢರೂ, ೩ ಸಾವಿರದವರೆಗೆ ಆನೆಗಳೂ, ೧೦ ರಿಂದ ೨೦ ಲಕ್ಷದವರೆಗೆ ಕಾಲಾಳುಗಳಿದ್ದರು. ಇದೊಂದು ಹಿಂದೂ ಸಾಮ್ರಾಜ್ಯವಾಗಿದ್ದರೂ ಸೈನಿಕರು ಹಿಂದೂಗಳಷ್ಟೇ ಇರಲಿಲ್ಲ. ಅನ್ಯ ಧರ್ಮೀಯರು ಕೂಡ ಈ ಸೈನ್ಯದಲ್ಲಿದ್ದರು. ಪೋರ್ಚುಗೀಸ್ ವ್ಯಾಪಾರಸ್ಥರು ಪ್ರತಿವರ್ಷ ೧೩,೦೦೦ ಕುದುರೆಗಳನ್ನು ಪೂರೈಸುತ್ತಿದ್ದರಂತೆ. ಇಷ್ಟೊಂದು ಬಲಾಢ್ಯವಾದ ಸೈನ್ಯ ಹೊಂದಿದ್ದ ವಿಜಯನಗರವು ವಿನಾಶವಾದದ್ದು ಹೇಗೆ? ಆರಂಭದಲ್ಲಿದ್ದಂತ ಸೈನ್ಯದಲ್ಲಿನ ಶಿಸ್ತು ನಂತರ ಕಾಲದಲ್ಲಿ ಶಿಥಿಲವಾಗಿತ್ತು. ಅಂತಹ ಶಿಸ್ತಿನಿಂದ ಹೋರಾಟ ಮಾಡಬೇಕಾದ ಸ್ಥಿತಿ ನಮ್ಮ ಮುಂದಿದೆ ಎನ್ನುವುದನ್ನು ನಾರಾಯಣ ಸುಬ್ರಾವ ಹರಡೀಕರ ಅಭಿಪ್ರಾಯಪಡುವುದು ಹೀಗೆ: ವಿಜಯನಗರದ ಸಾಮ್ರಾಜ್ಯವು ನಮ್ಮ ಒಡಕಿನಿಂದ ಹಾಳಾಯಿತಷ್ಟೇ? ಅದರಿಂದ ನಾವು ಕಲಿಯಬೇಕಾದುದೇನು ಎಂಬುದನ್ನು ಇಂತಹ ಲೇಖನಗಳನ್ನು ಬರೆಯುವ ಮತ್ತು ಓದುವುದರ ಉದ್ದೇಶವು. ಇಂದಿನ ನಮ್ಮ ಸ್ಥಿತಿಯನ್ನು ನಾವು ಸುಧಾರಿಸುವುದಾದರೆ ಎರಡು ಮಾತುಗಳನ್ನು ನಾವು ಮರೆಯದಿರುವುದು ಅವಶ್ಯವಾಗಿದೆ. ೧ನೆಯದೆಂದರೆ ಬೇಕಾದಂತಹ ಪ್ರಗತಿಯನ್ನು ನಾವು ಮಾಡಿಕೊಳ್ಳುವುದು ಸಾಧ್ಯವಿದೆಯೆಂಬುದು. ೨ನೆಯದು ನಮ್ಮಲ್ಲಿ ಅನೈಕ್ಯತೆಯನ್ನು ಹೋಗಲಾಡಿಸಿಕೊಳ್ಳುವುದು. ಆದ್ದರಿಂದ ಈಗಲಾದರೂ ಕನ್ನಡಿಗರು ಚೇತರಿಸಿಕೊಂಡೆದ್ದು ತಮ್ಮಲ್ಲಿ ಸೇರಿ, ಮನೆ ಮಾಡಿದ ದುರ್ಗುಣಗಳನ್ನು ಹೊಡೆದೋಡಿಸಬೇಕಲ್ಲವೆ ? ನಮ್ಮಲ್ಲಿ ಶಿಸ್ತು ಸಂಘಟನೆಗಳ ಮುಖಾಂತರ ಪ್ರಚಂಡ ಶಕ್ತಿಯನ್ನು ಸಂಗ್ರಹಿಸಬೇಕಲ್ಲವೇ? ಇದಕ್ಕೆ ನಮ್ಮ ಪೂರ್ವಜರ ಶೌರ್ಯ ಧೈರ್ಯಾದಿಗಳು ಪ್ರೇರಕವಾಗಲಿ!

ಈ ಮಾತುಗಳನ್ನು ಗಮನಿಸಿದಾಗ ರಾಷ್ಟ್ರೀಯ ಹೋರಾಟ ಮತ್ತು ಏಕೀಕರಣ ಹೋರಾಟಕ್ಕೆ

ಪ್ರಚೋದನೆ ನೀಡುವುದು ಕಂಡುಬರುತ್ತದೆ. ನಮ್ಮ ರಾಜರಲ್ಲಿ ಒಗ್ಗಟ್ಟು ಇಲ್ಲದಿದ್ದರಿಂದಲೇ ಅಲ್ಲವೆ ಹಿಂದೂಸ್ತಾನ ಬ್ರಿಟಿಷರ ಕೈವಶವಾದುದು. ಆಗಲೇ ಐಕ್ಯಮತ್ಯದಿಂದ ಹೋರಾಡಿದ್ದರೆ ಬ್ರಿಟಿಷರನ್ನು ಹಿಮ್ಮೆಟ್ಟಿಸಬಹುದಿತ್ತು. ನಮ್ಮ ರಾಜರಲ್ಲಿನ ಒಳಜಗಳಗಳು, ವೈಷಮ್ಯಗಳ ಲಾಭವನ್ನು ಪಡೆದ ಬ್ರಿಟಿಷರು ಆ ಸಂದರ್ಭವನ್ನು ಸದುಪಯೋಗಪಡಿಸಿಕೊಂಡರು. ಆದರೆ ಅವರನ್ನು ಹೊಡೆದೋಡಿಸಿ ಸ್ವರಾಜ್ಯವನ್ನು ನಿರ್ಮಾಣ ಮಾಡಿಕೊಳ್ಳಲು ಎಲ್ಲರೂ ಒಗ್ಗಟ್ಟಾಗಬೇಕು ಎನ್ನುವ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.”[೧೩೬] ವಿಜಯನಗರ ಕಾಲದಲ್ಲಿ ಕರಕುಶಲ ಕೈಗಾರಿಕೆಗಳು ಪ್ರಸಿದ್ಧವಾಗಿದ್ದವು. ಚಿನ್ನದ ಆಭರಣಗಳು, ಮೃದುವಾದ ರೇಷ್ಮೆಯ ವಸ್ತ್ರಗಳು, ಗೃಹೋಪಯೋಗಿ ವಸ್ತುಗಳ ತಯಾರಿಕೆ ಮುಂತಾದವು ಉತ್ತಮ ದರ್ಜೆಯವುಗಳಾಗಿದ್ದವು. ಶಿಲ್ಪಿಗಳು, ಅಕ್ಕಸಾಲಿಗರು, ನೇಕಾರರು, ಕಾರ್ಪೆಂಟರ್, ಮೇದಾರರು, ಕಂಬಾರರು, ಕುಂಬಾರರು, ಚಮ್ಮಾರರು ಮುಂತಾದವರು ಸಮೃದ್ಧವಾಗಿದ್ದರು. ಅವರು ತಲಾತಲಾಂತರದಿಂದ ತಮ್ಮ ವೃತ್ತಿಯಲ್ಲಿಯೇ ಬದುಕುತ್ತಾ ಬಂದಿದ್ದಾರೆ. ಬ್ರಿಟಿಷರ ವಸಾಹತು ನೀತಿಯಿಂದಾಗಿ ಗೃಹ ಕೈಗಾರಿಕೆಗಳು ನಶಿಸಿ ಹೋಗುತ್ತಿದ್ದಾಗ, ಗಾಂಧೀಜಿಯವರು ಸ್ವದೇಶಿ ಚಳುವಳಿಗೆ ಕರೆ ನೀಡಿದರು. ಇಂತಹ ಸಂದರ್ಭದಲ್ಲಿ ವಿಜಯನಗರದಲ್ಲಿದ್ದ ಕರಕುಶಲಕರ್ಮಿಗಳನ್ನು ನೆನೆದುಕೊಳ್ಳುತ್ತಾ, ಸಮಕಾಲೀನ ಸಂದರ್ಭದಲ್ಲಿ ಅವರ ವೃತ್ತಿಗೆ ಬಂದ ಆಪತ್ತನ್ನು ಎದುರಿಸಲು ಸಿದ್ಧರಾಗಬೇಕು ಎನ್ನುವುದನ್ನು ಹುಯಿಲಗೋಳ ನಾರಾಯಣರಾಯರು ತಮ್ಮ 'ವಿಜಯನಗರದ ಕಾಲದ ಕಲಾಕೌಶಲ್ಯ ಕೈಗಾರಿಕೆಗಳು' ಲೇಖನದಲ್ಲಿ ವಿಜಯನಗರ ಕಾಲದ ಜನಜೀವನದ ಮೂಲಕ ತಿಳಿಸುತ್ತಾರೆ. ವಿಜಯನಗರ ಸ್ಮಾರಕೋತ್ಸವ ಸಂದರ್ಭದಲ್ಲಿ ಲೋಕಾರ್ಪಣೆಯಾದ ಇನ್ನೊಂದು PÈ Vijayanagar Sixth Century Commemoration Volume ಈ ಸ್ಮರಣ ಸಂಚಿಕೆಯಲ್ಲಿ ೩೧ ಲೇಖನಗಳಿವೆ. ಈ ಲೇಖನಗಳು ಬಹುತೇಕ ವಿಜಯನಗರ ಸಾಮ್ರಾಜ್ಯದ ಸಾಮಂತ ರಾಜರುಗಳ ಸಂಸ್ಥಾನಗಳೊಂದಿಗೆ ವಿಜಯನಗರ ಸಾಮ್ರಾಜ್ಯದ ಸಂಬಂಧವನ್ನು ಕುರಿತವುಗಳು. ಕೆಲವು ವಿಜಯನಗರವನ್ನಾಧರಿಸಿ ಬರೆದ ಲೇಖನಗಳಲ್ಲಿ ಈಗಾಗಲೇ ಚರ್ಚಿತವಾದ ವಿಷಯಗಳೇ ಅಭಿವ್ಯಕ್ತಗೊಂಡಿವೆ. ಈ ಮೇಲಿನ ಎಲ್ಲ ಲೇಖನಗಳನ್ನು ಅವಲೋಕಿಸಿದಾಗ ಏಕೀಕರಣ ಮತ್ತು ರಾಷ್ಟ್ರೀಯ ಹೋರಾಟ ಸಂದರ್ಭದಲ್ಲಿ ಚರಿತ್ರೆಯನ್ನು ಸಾಂಕೇತವಾಗಿ ಬಳಸಿಕೊಂಡದ್ದು ಕಂಡುಬರುತ್ತದೆ. ಅವರ ಉದ್ದೇಶವು ವಿಜಯನಗರದ ಚರಿತ್ರೆಗೆ ಸಂಬಂಧಿಸಿದ ದಾಖಲೆಗಳನ್ನಿಟ್ಟುಕೊಂಡು ವಿಜಯನಗರ ಸಾಮ್ರಾಜ್ಯದ ಒಳಿತು ಕೆಡುಕುಗಳನ್ನು ಹೇಳುವುದಲ್ಲ. ಏಕೀಕೃತ ಪ್ರಾಂತವನ್ನು ನಿರ್ಮಾಣ ಮಾಡಿಕೊಳ್ಳುವುದು ಮತ್ತು ಭಾರತವನ್ನು ಸ್ವಾತಂತ್ರ್ಯಗೊಳಿಸಿಕೊಳ್ಳುವುದು ಅವರ ಮುಖ್ಯ ಉದ್ದೇಶವಾಗಿತ್ತು. ಹಾಗಾಗಿ ವಿಜಯನಗರ ಸಾಮ್ರಾಜ್ಯದಲ್ಲಿ ಆಯ್ದ ಪ್ರಮುಖ ಘಟನೆಗಳನ್ನು ವೈಭವೀಕರಣದ ನೆಲೆಯಲ್ಲಿ ವಿವರಿಸುತ್ತಾರೆ. ಆ ಮೂಲಕ ಭಾವನಾತ್ಮಕವಾಗಿ ನಾವೆಲ್ಲರೂ ಒಂದು ಎನ್ನುವ ಸಂಬಂಧವನ್ನು ಬೆಸೆಯಲು ಪ್ರಯತ್ನಿಸುತ್ತಾರೆ.

ಈ ಮೇಲಿನ ಲೇಖನಗಳನ್ನು ಗಮನಿಸಿದಾಗ ಕಂಡುಬರುವ ಮುಖ್ಯ ಸಂಗತಿಗಳೆಂದರೆ,

ಮೊದಲು ಕನ್ನಡಿಗರ ಏಕೀಕರಣ, ಅನಂತರ ಅನ್ಯರ ಆಡಳಿತದಿಂದ ರಾಷ್ಟ್ರವನ್ನು ವಿಮುಕ್ತಿಗೊಳಿಸುವ ಹಂಬಲ. ಈ ಉದ್ದೇಶವನ್ನಿಟ್ಟುಕೊಂಡು ಅದನ್ನು ಚಾರಿತ್ರಾತ್ಮಕ ಸಂಗತಿಗಳ ಮುಖೇನ ಅವುಗಳನ್ನು ಸಾಕಾರಗೊಳಿಸಿಕೊಳ್ಳುವ ಕಾರ್ಯ ಮಾಡಿದರು. ಅನ್ಯರ ವಿರುದ್ಧ ಹೋರಾಟಕ್ಕೆ ಎಲ್ಲರೂ ಒಗ್ಗಟ್ಟಾಗಬೇಕಾದಾಗ ಅಲ್ಲಿ ಧರ್ಮವನ್ನು ಬಳಸಿಕೊಂಡರು. ಧರ್ಮದಿಂದ ತಾವು ಪ್ರೇರಿತವಾಗಿ ಜನರನ್ನೂ ಪ್ರೇರೇಪಿಸುವ ಕೆಲಸ ಮಾಡಿದರು. ನಮ್ಮ ನಾಡಿನ ಅನೇಕ ವಿದ್ವಾಂಸರು ಹಂಪಿಯ ಚಾರಿತ್ರಿಕ ಮತ್ತು ಪೌರಾಣಿಕ ಮಹತ್ವ ಕುರಿತಂತೆ ತಮ್ಮ ಬರಹ ಹಾಗೂ ಭಾಷಣಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

೪.೩.೨. ಕೃತಿ ಮತ್ತು ಸಂಶೋಧನ ಪ್ರಬಂಧಗಳ ಹಿನ್ನೆಲೆಯಲ್ಲಿ ಹಂಪಿ

ಹಂಪಿ ಮತ್ತು ವಿಜಯನಗರ ಕುರಿತಂತೆ ಹಲವು ಸಂಶೋಧನೆಗಳು ಇಲ್ಲಿಯವರೆಗೆ ನಡೆದಿವೆ. ಅನೇಕ ಸಂಶೋಧಕರು ಇದಕ್ಕಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದಾರೆ. ಅವರು ತಮ್ಮ ಸಂಶೋಧನೆಯಲ್ಲಿ ಕಂಡುಕೊಂಡ ವಿವರಗಳನ್ನು ತಮ್ಮ ಸಂಶೋಧನ ಕೃತಿ ಮತ್ತು ಇತರೆ ಕೃತಿಗಳಲ್ಲಿ ಪ್ರಕಟಿಸಿದ್ದಾರೆ. ಅವರಲ್ಲಿ ಮುಖ್ಯರಾದವರೆಂದರೆ ಪಿ.ಬಿ.ದೇಸಾಯಿ, ಸಾಲೆತೊರೆ, ನೀಲಕಂಠಶಾಸ್ತ್ರಿ, ಶಾಮಶಾಸ್ತ್ರಿ, ಮಹಾಲಿಂಗಂ, ಥಾಫರ್, ದೇವಕುಂಜ್ರ, ವೆಂಕಯ್ಯ, ಅ.ಸುಂದರ, ನಾಗರಾಜರಾವ್, ರಾಜಶೇಖರ್.ಎಸ್, ದೇವರಾಜ್, ಕೃಷ್ಣಪ್ಪ, ಸಿ.ಎಸ್.ಪಾಟೀಲ್, ಬಾಲಸುಬ್ರಮಣ್ಯ, ಎಂ.ಎಸ್.ಕೃಷ್ಣಮೂರ್ತಿ, ಎ.ವಿ.ನರಸಿಂಹಮೂರ್ತಿ, ಬಿ.ಆರ್.ಗೋಪಾಲ್, ಎಂ.ವಿ.ಕೃಷ್ಣಪ್ಪ, ಲಕ್ಷ್ಮಣ್ ತೆಲಗಾವಿ, ದೇವರಕೊಂಡಾರೆಡ್ಡಿ, ಟಿ.ಪಿ.ವಿಜಯ್, ಮಹದೇವ.ಸಿ., ಗೋವಿಂದ ರಾಜ್, ಮೋಹನಕೃಷ್ಣ ರೈ, ಸಿ.ಎಸ್.ವಾಸುದೇವನ್, ವಿರುಪಾಕ್ಷಿ ಪೂಜಾರಹಳ್ಳಿ, ಚಿನ್ನಸ್ವಾಮಿ ಸೋಸಲೆ, ಸೋಮಶೇಖರ, ಶ್ರೀರಮೇಶ್ ನಾಯಕ, ವಾಸುದೇವ ಬಡಿಗೇರ, ಶರಣಬಸಪ್ಪ ಮತ್ತು ಎಚ್.ತಿಪ್ಪೇಸ್ವಾಮಿ ಮೊದಲಾದವರು ಪ್ರಮುಖರಾಗಿದ್ದಾರೆ. ಚರಿತ್ರೆ ಮತ್ತು ಪುರಾತತ್ವ ಕ್ಷೇತ್ರದ ಮೇಲೆ ಇಲ್ಲಿಯವರೆಗೆ ಬಂದಿರುವ ಕೆಲ ಮುಖ್ಯ ಪ್ರಬಂಧ ಮತ್ತು ಕೃತಿಗಳ ವಿವರವನ್ನು ಈ ಮುಂದೆ ವಿವರಿಸಲಾಗಿದೆ.

ಪ್ರಮುಖ ಗ್ರಂಥಗಳು

೧.ದೇವಕುಂಜರಿ ಡಿ., ಹಂಪಿ, ರೂಯಿನ್ಸ್, ಆರ್ಕಿಯಾಲಾಜಿ ಸರ್ವೇ ಆಫ್ ಇಂಡಿಯಾ, ನ್ಯೂದೆಲ್ಲಿ ೧೯೯೨. ಒನ್ ಆಫ್ ದ ಮೋಸ್ಟ್ ಥ್ರೋ ಗೈಡ್ ಬುಕ್ಸ್ ಟು ದ ಸೈಟ್.

೨. ದೇವರಾಜ ಡಿ. ಮತ್ತು ಚನ್ನಬಸಪ್ಪ ಎಸ್. ಪಾಟೀಲ್,(ಸಂಪಾದನೆ) ವಿಜಯನಗರ: ಪ್ರೋಗ್ರೆಸ್ ಆಫ್ ರಿಸರ್ಚ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಮೈಸೂರು. ಎ ಸೀರಿಸ್ ಆಫ್ ರಿಪೋರ್ಟ್ ಸ್ಪಾನ್ನಿಂಗ್ ೧೯೮೪-೧೯೯೧ ಪ್ರೆಸೆಂಟಿಂಗ್ ನಿವ್ ಡಿಸ್ಕವರೀಸ್ ಅಟ್ ದ ಸೈಟ್.

೩. ನಾಗರಾಜ ರಾವ್ ಎಂ.ಎಸ್.(ಸಂ), ವಿಜಯನಗರ ಥ್ರೋ ದ ಐಸ್ ಆಫದ ಅಲೆಗ್ಸಾಂಡರ್ ಗ್ರೀನ್‌ಲಾ ೧೮೫೬ ಅಂಡ್ ಜಾನ್ ಗೊಲ್ಲಿಂಗ್ಸ್, ೧೯೮೩, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ

ಅಂಡ್ ಮ್ಯೂಸಿಯಂ, ಮೈಸೂರು,೧೯೮೮. ಥ್ರೋ ಪೂರ್ಲಿ ರಿಪ್ರೊಡ್ಯೂಜ್, ದ ಮ್ಯಾಚಿಂಗ್ ಪೇರ್ಸ್ ಆಫ್ ಓಲ್ಡ್ ಅಂಡ್ ನಿವ್ ಫೋಟೋಗ್ರಾಪ್ಸ್ ಆರ್ ಫೇಸ್ಕನೈಟಿಂಗ್ ಅಂಡ್ ಇನ್ಸ್ಟ್ರಾಕ್ಟಿವ್.

೪. ಪಾಟೀಲ್ ಸಿ.ಎಸ್., ಟೆಂಪಲ್ಸ್ ಆಫ್ ರಾಯಚೂರು ಅಂಡ್ ಬಳ್ಳಾರಿ ಡಿಸ್ಟ್ರಿಕ್ಟ್- ಕರ್ನಾಟಕ (೧೦೦೦-೧೩೨೫ ಎ.ಡಿ.) ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಮೈಸೂರು, ೧೯೯೨, ಪುಟ.೧೨೪-೧೩೭. ದ ಬುಕ್ ಡೀಲ್ಸ್ ವಿಥ್ ದ ಟೆಂಪಲ್ಸ್ ಆಫ್ ಪ್ರೀ-ವಿಜಯನಗರ ಪೇರೆಡ್ ಅಟ್ ಹಂಪಿ, ವಿತ್ ಗ್ರೌಂಡ್ ಪ್ಲಾನ್ಸ್, ಸೆಕ್ಷನ್ಸ್ ಅಂಡ್ ಎಲಿವೆನ್ಸ್. ದೇರ್ ಆರ್ ಫೋಟೋಗ್ರಾಪ್ಸ್ ಆಫ್ ಭುವನೇಶ್ವರಿ ಟೆಂಪಲ್ ಈಟಿಸಿ. ದ ಟೆಂಪಲ್ಸ್ ಆಫ್ ಪ್ರೀ-ವಿಜಯನಗರ ಪೇರೆಡ್ ಇನ್ ರಾಯಚೂರು ಡಿಸ್ಟ್ರಿಕ್ಟ್ ಅಂಡ್ ಬಳ್ಳಾರಿ ಡಿಸ್ಟ್ರಿಕ್ಟ್ ಆರ್ ಎಕ್ಸ್‌ಪ್ಲೇನ್ಡ್.

೫. ರಾಮಣ್ಣ ಎಚ್.ಎಸ್., ಸೌಥ್ ಇಂಡಿಯಾ ಆ್ಯಸ್ ಸೀನ್ ಬೈ ಫಾರೀನ್ ಟ್ರಾವೆಲ್ಲರ್ಸ್ ಎ.ಡಿ.೧೩೦೦-೧೬೦೦, ಪಿಚ್.ಡಿ. ಥೀಸಿಸ್, ಮೈಸೂರು ಯೂನಿವರ್ಸಿಟಿ, ಮೈಸೂರು, ೧೯೭೬. ದ ಥೀಸಿಸ್ ರೆಫರ್ಸ್ ದ ಕ್ರೋನಿಕ್‌ಲೆಸ್ ಆಫ್ ಫಾರಿನ್ ಟ್ರಾವೆಲ್ಲರ್ ವ್ಹೂ ವಿಜಿಟೆಡ್ ವಿಜಯನಗರ ಆರ್ ಡಾಕುಮೆಂಟೆಡ್. ದ ಡೀಟೈಲ್ಡ್ ಅಕೌಂಟ್ಸ್ ಆಫ್ ಸೋಸಿಯಲ್, ಪೊಲಿಟಿಕಲ್ ಅಂಡ್ ಎಕನಾಮಿಕ್ ಕಂಡಿಶನ್ಸ್ ಆಫ್ ವಿಜಯನಗರ ಆರ್ ನರ್ರೆಟೆಡ್. ದ ಕ್ರೋನಿಕ್‌ಲೆಸ್ ಆರ್ ಡಿಸ್ಕಸ್ಡ್ ಇನ್ ಡಿಟೇಲ್ ಅಂಡ್ ಕಂಪೇರ್ಡ್ ವಿಥ್ ಇನ್‌ಸ್ಕ್ರಿಪ್ಸನ್, ಲಿಟರೇಚರ್ ಈಟಿಸಿ. ದ ರಿಚ್‌ನೆಸ್ ಆಫ್ ದ ಕ್ಯಾಪಿಟಲ್ ಮೇಂಟೇನ್ಡ್.

೬.ಸಜ್ಜನ್ ಎಸ್.ಎಸ್., ವಿಜಯನಗರ ಕಾಲದ ಜಾತ್ರೆ ಮತ್ತು ಉತ್ಸವಗಳು, (ಎಂ.ಫಿಲ್. ಥೀಸಿಸ್), ಕರ್ನಾಟಕ ಯುನಿವರ್ಸಿಟಿ, ಧಾರವಾಡ, ೧೯೯೬(ಅಪ್ರಕಟಿತ). ದಿಸ್ ಥೀಸಿಸ್ ನರ್ರೇಟ್ಸ್ ದ ಡಿಫರೆಂಟ್ ಫೆಸ್ಟಿವಲ್ಸ್, ಪರ್ಟಿಕ್ಯುಲರ್ಲಿ ಕಾರ್ ಫೆಸ್ಟಿವೆಲ್ ಆಫ್ ವಿರೂಪಾಕ್ಷ, ಕೃಷ್ಣಜನ್ಮಷ್ಟಮಿ, ನವರಾತ್ರಿ, ದೀಪೋತ್ಸವ, ಶಿವರಾತ್ರಿ ಅಂಡ್ ಅದರ್ ಫೆಸ್ಟಿವಲ್ಸ್, ದ ಸ್ಟಡಿ ಇಸ್ ಬೇಸ್ಡ್ ಆನ್ ದ ಬೇಸಿಕ್ ಆಫ್ ಲಿಟರೇಚರ್, ಇನ್ಸ್‌ಸ್ಕ್ರಿಪ್ಷನ್ಸ್ ಅಂಡ್ ಅಕೌಂಟ್ಸ್ ಆಫ್ ಫಾರಿನ್ ಟ್ರಾವಲ್ಲರ್ಸ್. ಇಟ್ಸ್ ಆಲ್‌ಸೋ ಕಂಟೈನ್ಸ್ ಫೋಟೋಗ್ರಾಪ್ಸ್ ಆಫ್ ಟೆಂಪಲ್ ಅಂಡ್ ಫೆಸ್ಟಿವಲ್ಸ್.

೭.ಸರಸ್ವತಿ ಎಂ.ಎಲ್., ಇರ್ರಿಗೇಶನ್ ಸಿಸ್ಟಮ್ ಸಿಸ್ಟಮ್ ಇನ್ ದ ವಿಜಯನಗರ ಎಂಪೈರ್, ಪಿಎಚ್.ಡಿ. ಪ್ರಬಂಧ, ಇತಿಹಾಸ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೪. ದ ಥೀಸಿಸ್ ಡೀಲ್ಸ್ ವಿಥ್ ದ ಸ್ಟಡಿ ಆಫ್ ಇರ್ರಿಗೇಶನ್ ಸಿಸ್ಟಮ್ ಇನ್ ದ ವಿಜಯನಗರ ಎಂಪೈರ್ ಅಂಡ್ ಸ್ಪೀಕ್ಸ್ ಅಬೌಟ್ ದ ಕನ್ಸ್ಟ್ರಕ್ಷನ್ ಆಫ್ ಟ್ಯಾಂಕ್ಸ್, ವೆಲ್ಸ್, ರಿಸರ್ವೋರ್ಸ್ ಅಂಡ್ ದೇರ್ ಮೇಂಟೆನೆನ್ಸ್, ಟೆಕ್ನಿಕಲ್ ಸ್ಕಿಲ್ ಈಟಿಸಿ. ದ ಆಥರ್ ಕವರ್ಸ್ ಥ್ಯಾಂಕ್ಸ್ ಇನ್ ಅಂಡ್ ಅರೌಂಡ್ ಹಂಪಿ ಏರಿಯಾ. ದ ವರ್ಕ್ ಕವರ್ಸ್ ಫ್ರಮ್ ಇಯರ್ಲಿಸ್ಟ್ ಪೀರಿಯಡ್ ಟು ವಿಜಯನಗರ.

೮.ಸತ್ಯನಾಥನ್ ಆರ್.ಎಸ್., ಅಚ್ಯುತರಾಯ, ಪಿಎಚ್.ಡಿ. ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೭. ದ ಥೀಸಿಸ್ ರೆಫರ್ಸ್ ಟು ದ ಲೈಫ್ ಹಿಸ್ಟರಿ ಆಫ್ ಅಚ್ಯತರಾಯ ರೈಟ್ ಫ್ರಮ್ ಹಿಸ್ ಚೈಲ್ಡ್‌ವುಡ್ ಟು ದ ಎಂಡ್ ಆಫ್ ಹಿಸ್ ರೂಲ್; ವಿಚ್ ಕವರ್ಸ್ ಕೊರೊನೇಶನ್; ಮಿಲಿಟರಿ ಎಕ್ಸ್‌ಪೆಂಡೇನ್ಸ್, ಅಡ್‌ಮಿನಿಸ್ತ್ರೇಶನ್; ಪೊಲಿಟಿಕಲ್, ಸೋಶಿಯಲ್, ರಿಲಿಜಿಯಸ್ ಅಂಡ್

ಎಕನಾಮಿಕ್ ಕಂಡೀಶನ್ಸ್ ಡ್ಯೂರಿಂಗ್ ಹಿಸ್ ಪೀರೆಡ್. ಹಿಸ್ ಪಾಟ್ರೊನೇಜ್ ಟು ಲಿಟರೇಚರ್, ಆರ್ಟ್ ಅಂಡ್ ಆರ್ಕಿಟೆಕ್ಚರ್ ಈಟಿಸಿ., ಆರ್ ಡಿಸ್ಕಸ್ಡ್.

೯. ಶಿವಕುಮಾರ ಬಿ. ಜವಳಗೇರಿ, ಮಿಲಿಟರಿ ಆರ್ಗನೈಜೇಶನ್ ಅಂಡರ್ ವಿಜಯನಗರ ಎಂಪೈರ್, ಎಂ.ಫಿಲ್., ನಿಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೦, ದಿಸ್ ಥೀಸಿಸ್ ಡೀಲ್ಸ್ ವಿಥ್ ದ ಮಿಲಿಟರಿ ಆರ್ಗನೈಜೇಶನ್ ಅಂಡರ್ ವಿಜಯನಗರ. ದೇರ್ ಆರ್ ರೆಫರೆನ್ಸಸ್ ಅಬೌಟ್ ದ ಕ್ಯಾಪಿಟಲ್-ವಿಜಯನಗರ. ದ ವಾಸ್ ಸೆನ್ಸೆಸ್ ಇನ್ ದ ಫ್ರೆಜೆಸ್ ಅಟ್ ಹಜಾರರಾಮ ಸ್ವಾಮಿ ಟೆಂಪಲ್, ಮಹನವಮಿ ಪ್ಲಾಟ್‌ಫಾರಂ ಆರ್ ಟೇಕನ್ ಆ್ಯಸ್ ಎಕ್ಸಂಪಲ್ಸ್ ವೈಲ್ ನರ್‍ರೇಟಿಂಗ್ ದ ವಾರ್.

೧೦. ಶ್ರೀ ರಾಮಸ್ವಾಮಿ ವೈ, ಸ್ಟಡೀಸ್ ಇನ್ ದ ಹಿಸ್ಟರಿ ಆಫ್ ದ ತೆಲುಗು ಕಂಟ್ರಿ ಡ್ಯೂರಿಂಗ್ ದ ವಿಜಯನಗರ ಪೀರೆಡ್, ೧೩೩೬-೧೬೫೦ ಎ.ಡಿ., ಪಿಎಚ್.ಡಿ. ಥೀಸಿಸ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೩. ದಿಸ್ ಥೀಸಿಸ್ ಡೀಲ್ಸ್ ವಿಥ್ ದ ತೆಲುಗು ಸ್ಪೀಕಿಂಗ್ ಏರಿಯಾ ಅಂಡರ್ ದ ಕಂಟ್ರೋಲ್ ಆಫ್ ವಿಜಯನಗರ. ದ ಪೊಲಿಟಿಕಲ್ ಹಿಸ್ಟರಿ ಫ್ರಮ್ ದ ಬಿಗ್ನಿಂಗ್ ಟು ಎಂಡ್ ಆರ್ ನರ್‍ರೇಟೆಡ್. ಇಟ್ ಆಲ್‌ಸೋ ಕವರ್ಸ್ ದ ಜೆನಿಯೋಲಾಜಿ ಆಫ್ ವಿಜಯನಗರ ರೂಲರ್ಸ್, ದೇರ್ ಆರ್ ರೆಫರೆನ್ಸ್ ಅಬೌಟ್ ಹಂಪಿ. ದ ಫೋಟೋಗ್ರಾಫ್ಸ್ ಆಫ್ ವಿಜಯನಗರ ಮಾನೊಮೆಂಟ್ಸ್ ಇನ್ ಆಂಧ್ರಪ್ರದೇಶ, ಮ್ಯಾಪ್ಸ್ ಈಟಿಸಿ. ಆರ್ ಗಿವನ್.

೧೧. ಸುಗಂಧ ಪಾಂಡುರಂಗ, ಹಿಸ್ಟರಿ ಅಂಡ್ ಆರ್ಕಿಯಾಲಾಜಿ ಆಫ್ ಆನೆಗುಂದಿ, ಪಿಎಚ್.ಡಿ. ಪ್ರಬಂಧ, ಡಿಪಾರ್ಟ್‌ಮೆಂಟ್ ಆಫ್ ಆರ್ಕಿಯೋಲಾಜಿ, ಡೆಕ್ಕನ್ ಕಾಲೇಜ್, ಪುಣೆ, ೧೯೮೬. ದಿಸ್ ಥೇರಿ ನರ್‍ರೇಟ್ಸ್ ದ ಆರ್ಕಿಯೋಲಾಜಿ ಆಫ್ ಆನೆಗುಂದಿ, ಇಟ್ಸ್ ಹಿಸ್ಟರಿ, ಆರ್ಟ್ ಅಂಡ್ ಆರ್ಕಿಟೆಕ್ಚರ್ ಆಫ್ ದಟ್ ಪ್ಲೇಸ್. ದ ವಾರಿಯಸ್ ಆರ್ಕಿಟೆಕ್ಚರ್ ಫ್ಯೂಚರ್ಸ್ ವಿಚ್ ಕ್ಯಾನ್ ಬಿ ನೋಟಿಸ್ಡ್ ಆನ್ ದ ಸ್ಟ್ರಕ್ಚರ್ಸ್ ಆರ್ ಸ್ಟಡೀಡ್ ಇನ್ ಡೀಟೈಲ್.

೧೨. ವೀರಭದ್ರ ಶರ್ಮಾ ಕೆ.ಎಂ., ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೩. ದಿಸ್ ಆರ್ಟಿಕಲ್ ಡೀಲ್ಸ್ ವಿಥ್ ದ ವಿಲೇಜ್ ಇನ್ ಬಳ್ಳಾರಿ ಡಿಸ್ಟ್ರಿಕ್ಟ್, ದೇರ್ ಈಸ್ ರೆಫರೆನ್ಸ್ ಅಬೌಟ್ ಹಂಪಿ ವಿಲೇಜ್, ಇಟ್ಸ್ ಆನ್ಟಿಕ್ವಿಟಿ ಅಂಡ್ ಇಂಪಾರ್ಟೆಂಟ್ಸ್. ದ ಟೆಂಪಲ್ಸ್ ಆಫ್ ಹಂಪಿ ಅಂಡ್ ಇಟ್ಸ್ ಎನ್ವಿರೊನ್ಸ್ ಆರ್ ಡಿಸ್ಕ್ರೈಬ್ಡ್.

೧೩.ವಿರೂಪಾಕ್ಷ ಪೂಜಾರಹಳ್ಳಿ, ಬಳ್ಳಾರಿ ಜಿಲ್ಲೆಯಲ್ಲಿ ಕಲೆಕ್ಟರ್‌ಗಳ ಒಂದು ಸಮೀಕ್ಷೆ, ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫. ದಿಸ್ ಥೀಸಿಸ್ ಡೀಲ್ಸ್ ವಿಥ್ ದ ವರ್ಕ್ಸ್ ಆಫ್ ಕಲೆಕ್ಟರ್ಸ್ ಆಫ್ ಬಳ್ಳಾರಿ. ದ ಮೋಸ್ಟ್ ರಿನೋನ್ಡ್ ಕಲೆಕ್ಟರ್-ರಾಬರ್ಟ್ ಸಿವೆಲ್ಸ್ ವರ್ಕ್ ಇನ್ ಕನ್ಸರ್ವಿಂಗ್ ಹಿರಿಯ ಗೋಪುರ ಬೈ ಯುಸ್ಸಿಂಗ್ ಸ್ಟೀಲ್ ಗಿರ್ಡರ್ಸ್ ಇಂಪಾರ್ಟೆಡ್ ಫ್ರಮ್ ಲಂಡನ್ ಆರ್ ರಿಕಾರ್ಡೆಡ್.

೧೪.ಯಾದಪ್ಪ ಪರದೇಶಿ, ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ, ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ.ಹಂಪಿ, ೨೦೦೧, ದ ಥೀಸಿಸ್ ಡೀಲ್ಸ್ ವಿಥ್ ಪೇಯಿಟಿಂಗ್ಸ್ ಆಫ್ ನಾರ್ಥ್ ಕರ್ನಾಟಕ. ಎ ಚಾಪ್ಟರ್ ಇಸ್ ಆನ್ ಪೇಯಿಂಟಂಗ್ಸ್ ಇನ್ ಬಳ್ಳಾರಿ ಡಿಸ್ಟ್ರಿಕ್ಟ್, ರೈಟ್ ಫ್ರಮ್ ಪ್ರೀ ಹಿಸ್ಟೋರಿಕ್ ಟೈಮ್ಸ್ ಟಿಲ್ ವಿಜಯನಗರ ಪೀರೆಡ್. ಹಿಯರ್ ದ ಪೇಯಿಂಟಂಗ್ಸ್ ಆನ್ ದ ಸೀಲಿಂಗ್ ಇನ್ ದ ರಂಗಮಂಟಪ ಆಫ್ ವಿರೂಪಾಕ್ಷ ಟೆಂಪಲ್ ಆರ್ ಡಿಲ್ಟ್ ಇನ್ ಡಿಟೈಲ್.

೧೫.ಯಾಮಿನಿ ಪಾಟೀಲ್, ಸ್ಟ್ರಕ್ಚರಲ್ ಎಲಿಮೆಂಟ್ಸ್ ಆಫ್ ಆ್ಯನ್ ಇಂಡಿಯನ್ ಮೆಡಿವೆಲ್ ಸಿಟಿ ವಿಜಯನಗರ, ಥೀಸಿಸ್ ಫಾರ್ ಡಿಪ್ಲೊಮ ಇನ್ ಆರ್ಕಿಟೆಕ್ಚರ್, ಸ್ಕೂಲ್ ಆಫ್ ಆರ್ಕಿಟೆಕ್ಚರ್, ಅಹಮದಬಾದ್ ೧೯೮೨. ಹಿಯರ್ ಆ್ಯನ್ ಅಟಾಮ್ಟ್ ಇಸ್ ಮೇಡ್ ಸ್ಟಡಿ ದ ಡಿಫರೆಂಟ್ ಸ್ಟ್ರಕ್ಚರ್ಸ್, ಮಾನೊಮೆಂಟ್ಸ್ ಎಕ್ಸಿಸ್ಟಿಂಗ್ ಇನ್ ದ ಲೆಂಥ್ ಅಂಡ್ ಬ್ರೀಡ್ತ್ ಆಫ್ ಹಂಪಿ. ಹಂಪಿ ವಾಸ್ ಆ್ಯನ್ ಅಡ್‌ಮಿರೆಡ್ ಮೆಡಿವಲ್ ಸಿಟಿ, ಇಟ್ಸ್ ಸ್ಟ್ರಕ್ಚರಲ್ ಪಾಸೆಸ್ ವರ್ ನೋಟಿಸ್ಡ್ ಅಂಡ್ ಸ್ಟಡೀಡ್.

ಹೀಗೆ ಹಲವು ಕೃತಿಗಳು ಮತ್ತು ಸಂಶೋಧನ ಕೃತಿಗಳು ಹಂಪಿ ಮತ್ತು ವಿಜಯನಗರ ಸಾಮ್ರಾಜ್ಯದ ಮೇಲೆ ಬೆಳಕು ಚೆಲ್ಲಿವೆ. ಇವು ಇಲ್ಲಿ ಆಕರಗಳಾಗಿ ಬಳಕೆಯಾಗಿರುವುದು ಗಮನಾರ್ಹವಾದುದು. ವಿಜಯನಗರ ಇತಿಹಾಸವನ್ನು ಬರೆಯುವ ವಿದ್ವಾಂಸರಿಗೆ ಇಂತಹ ಕೃತಿಗಳ ಉಲ್ಲೇಖಗಳು ಹೆಚ್ಚು ಪರಿಣಾಮಕಾರಿಯಾಗಿವೆ. ಇಲ್ಲಿ ದೇವರಾಜ ಡಿ. ಮತ್ತು ಚನ್ನಬಸಪ್ಪ ಎಸ್. ಪಾಟೀಲ್ ಅವರು ಸಂಪಾದಿತ ಕೃತಿಗಳು ಕನ್ನಡ ಮತ್ತು ಇಂಗ್ಲಿಷ್ ಕೃತಿಗಳೇ ಆಗಿವೆ. ಇವು ಹಂಪಿಯನ್ನು ಅಥವಾ ವಿಜಯನಗರವನ್ನು ಕುರಿತಾದ ಬರವಣಿಗೆಗಳಾಗಿವೆ. ವಿಜಯನಗರ ಸಾಮ್ರಾಜ್ಯ ಹುಟ್ಟಿದಾಗಿನಿಂದ ಅಂತ್ಯದವರೆಗೆ ಮತ್ತು ಆಜುಬಾಜಿನ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಇವು ಪ್ರಧಾನ ಆಕರಗಳಾಗಿ ಪಾತ್ರವಹಿಸಿವೆ.

೪.೩.೩. ಗಣ್ಯರ ದೃಷ್ಟಿಯಲ್ಲಿ ಹಂಪಿ

ಕನ್ನಡಿಗರ ಸಾಂಸ್ಕೃತಿಕ ರಾಜಧಾನಿ ಎಂದು ಪರಿಗಣಿಸಲ್ಪಟ್ಟಿರುವ ಹಂಪೆಗೆಹಲವು ದೇಶಿಯ ಕವಿ, ಸಾಹಿತಿ, ವಿದ್ವಾಂಸರು, ಇತಿಹಾಸಕಾರರು ಮತ್ತು ರಾಜಕಾರಣಿಗಳು ಭೇಟಿ ನೀಡಿ ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರ ದೃಷ್ಟಿಯಲ್ಲಿ ಹಂಪಿ ಹೇಗಿರಬೇಕು ? ಅದರ ಸಂರಕ್ಷಣೆ ಯಾರು ಮಾಡಬೇಕು ? ಅದರ ಮಹತ್ವ ಏನು ಎಂಬುದನ್ನು ತಮ್ಮದೇ ಶೈಲಿಯಲ್ಲಿ ವ್ಯಕ್ತಪಡಿಸಿದ್ದು, ಆ ವಿವರಗಳು ಈ ಮುಂದಿನಂತಿವೆ.

♦ ೧೯೩೬ರಲ್ಲಿ ಹಂಪಿಯಲ್ಲಿ ನಡೆದ ವಿಜಯನಗರ ಸ್ಮಾರಕೋತ್ಸವದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಶಂಕರಾಚಾರ್ಯರು ಏಕೀಕರಣದ ಆಶಯವನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸುತ್ತಾ ದೇಶ ಸ್ವಾತಂತ್ರ್ಯಕ್ಕೆ ಕರ್ನಾಟಕದ ಪ್ರತಿಕ್ರಿಯೆಯನ್ನು ತಿಳಿಸುತ್ತಾ ಕರ್ನಾಟಕ ಬೇರೆ ಅಲ್ಲ, ಭಾರತ ಬೇರೆ ಅಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ತಮ್ಮ ಜೀವನಕ್ಕೆ ಧಕ್ಕೆ ಬಂದಾಗ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿದ ನೆಲ ಈ ಕರ್ನಾಟಕ. ಇದನ್ನು ಸ್ಮರಿಸಿಕೊಳ್ಳುತ್ತಾ ದೇಶ ಸ್ವಾತಂತ್ರ್ಯಕ್ಕೆ ಸನ್ನದ್ದರಾಗಬೇಕಾದ ಅವಶ್ಯಕತೆ ಇದೆ ಎಂದು ಹೇಳುತ್ತಾ, ಮುಂದುವರೆದು ಅವರು,

'ನನ್ನ ಕಣ್ಣೆದುರಿಗಿರುವ ಹಂಪಿಯ ಈ ಹಳೆಯ ಅವಶೇಷಗಳನ್ನು ನೋಡಿದೊಡನೆ, ರಾಮಾಯಣ ಕಾಲದಿಂದಲೂ ಪ್ರಸಿದ್ಧವಾಗಿರುವ ಪಂಪಾಕ್ಷೇತ್ರದ ನೆನಪಾಗುತ್ತದೆ. ಅಯೋಧ್ಯೆಯ ಶ್ರೀ ರಾಮಚಂದ್ರನೂ, ಕಿಷ್ಕೆಂದೆಯ ಸುಗ್ರೀವನೂ ಇಲ್ಲಿ ಕೂಡಿದ ಚಿತ್ರವು ನನ್ನ ಕಣ್ಣೆದುರಿನಲ್ಲಿ ನಿಲ್ಲುತ್ತದೆ. ಇಬ್ಬರಿಗೂ ಒಂದೇ ತರಹ ದು:ಖ, ದುಷ್ಟರಿಂದಾದ ಪತ್ನಿ ವಿಯೋಗ ಇವರಿಬ್ಬರಲ್ಲಿಯೂ; ಅದಕ್ಕಾಗಿಯೇ ಅವರಲ್ಲಿ ಮೈತ್ರಿ ಬೆಳೆಯಿತು. ಈ ಸ್ನೇಹ ಸಂಬಂಧದಲ್ಲಿ ಶ್ರೀ ರಾಮಚಂದ್ರನಿಗೆ ಯಾವ ತರಹದ ವೈಗುಣ್ಯವೂ ಕಂಡುಬರಲಿಲ್ಲ ತನಗಿಂತ ಕೀಳು ತರಗತಿಯವನೊಡನೆ ತಾನು ಸ್ನೇಹ ಬದ್ಧನಾದನೆಂದು ಅವನಿಗೆ ಅನಿಸಲಿಲ್ಲ ಅವರಿಬ್ಬರ ಏಕೀಕೃತವಾದ ಶಕ್ತಿಗಳು ಜಯವನ್ನು ಪಡೆದವು ಅವರಿಬ್ಬರ ಸ್ನೇಹ ಸಂಬಂಧದಲ್ಲಿ ಶಾಠ್ಯವಿರಲಿಲ್ಲ ಅದೊಂದು ಅತ್ಯಂತ ಪವಿತ್ರ ಸಂಬಂಧವಾಗಿದ್ದಿತು."

♦ ವಚನಕಾರರ ನಂತರದ ಕಾಲಕ್ಕೆ ದಾಸವರೇಣ್ಯರ ಕಾಲಕ್ಕೆ ಹಂಪಿಯು ಕೇಂದ್ರ ಶಕ್ತಿಯಾಗಿತ್ತು, ಸರಸ್ವತಿ ಮಂದಿರವಾಗಿತ್ತು ಅದಕ್ಕಾಗಿಯೇ ಅಖಂಡ ಕರ್ನಾಟಕಕ್ಕೆ ಕೇಂದ್ರ ಸ್ಥಾನವಾಗಿ ಹಂಪಿಯನ್ನು ರೂಪಿಸುವ ಕನಸನ್ನು ಅನೇಕ ಮಹನೀಯರು ಕಂಡರು.ಈ ಕುರಿತಂತೆ ವಿಜಯನಗರ ಸ್ಮಾರಕೋತ್ಸವ ಸಂಚಿಕೆಯ ಪು.೩೪೪ರಲ್ಲಿ ಪ್ರೊ.ಕೆ.ವಿ. ಅಯ್ಯರ್ ಈ ರೀತಿ ಹೇಳುತ್ತಾರೆ. 'ನಾವು ಈಗ ನಿಂತಿರುವ ಸ್ಥಳವು ಪವಿತ್ರವಾದುದು, ಚರಿತ್ರಾರ್ಹವಾದುದು ಕರ್ನಾಟಕವು ಕಳೆದುಕೊಂಡ ತೌರು ತಾಯ್ಮನೆಯ ಭಗ್ನಾವಶೇಷ ಗತವೈಭವವನ್ನು ನೆನಸಿಕೊಂಡು ಕಣ್ಣೀರಿಡುವ ಹೆಣ್ಣೊಡಲಾಗಕೂಡದು ನಾವು, ಕಳೆದ ದಿನಗಳನ್ನು ಕಣ್ಣು ಮುಂದೆ ಕರೆಯಿಸಿಕೊಂಡು ಕನಿಕರ ಪಡಬಾರದು ಕಡುಗಲಿ ಕನ್ನಡಿಗರ ಹೆತ್ತೊಡಲ ಹೆರಿಗೆ ನಿಂತಿಲ್ಲವೆನ್ನಿಸಬೇಕು" ಗತ ವೈಭವವನ್ನು ಪುನರ್ ಸ್ಥಾಪಿಸುವುದು ಎಂದರೆ ಕರ್ನಾಟಕ ಏಕೀಕರಣವಾಗುವುದೆಂದೇ ಅರ್ಥ. ಛತ್ರಪತಿ ಶಿವಾಜಿಗೆ ಪ್ರೇರಣೆಯಾದ ಈ ವಿಜಯನಗರ ಸಾಮ್ರಾಜ್ಯ ನಮಗೇಕೆ ಸ್ಫೂರ್ತಿಯಾಗುತ್ತಿಲ್ಲ. ಇದು ವಿಷಾದನೀಯ ಸಂಗತಿಯಾಗಿದೆ ಎಂದರು. ಅಲ್ಲದೆ ಹಂಪಿಯನ್ನು ಬರೀ ಹಾಳು ಹಂಪೆಯಾಗಿ ಕಾಣುವ ಬದಲು, ಕನ್ನಡಿಗರು ತಮ್ಮ ಗತ ವೈಭವದ ಸ್ಮೃತಿಯಿಂದ ಹೊರ ಬಂದು, ಈ ನಾಡನ್ನು ಕಟ್ಟಲು ಮುಂದಾಗಬೇಕಿದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

♦ ಚಿತ್ರದುರ್ಗ ಜಿಲ್ಲೆಯ ಪ್ರಮುಖ ರಾಜಕಾರಣಿ ಎಸ್.ನಿಜಲಿಂಗಪ್ಪನವರ ಸ್ನೇಹಿತರಾದ ಹೊ.ಚಿ.ಬೋರಯ್ಯನವರು ತಾವು ಸಾರಿಗೆ ಮತ್ತು ಪ್ರವಾಸೋದ್ಯಮ ಸಚಿವರಾಗಿದ್ದಾಗ ಅಂದರೆ ದಿನಾಂಕ ೨೧-೦೨-೧೯೭೦ ರಲ್ಲಿ ಹಂಪಿಗೆ ಭೇಟಿ ನೀಡಿ ಶ್ರೀವಿರೂಪಾಕ್ಷ ದೇವರ ದರ್ಶನ ಪಡೆಯುತ್ತಾರೆ. ಆಗ ಇವರು 'ಈ ಹಿಂದೆ ಹಂಪೆ ಇಷ್ಟು ಸುಧಾರಿಸಿರಲಿಲ್ಲ ಈಗ ಸ್ವಲ್ಪ ಅಭಿವೃದ್ಧಿಯಾಗಿದೆ ಆದರೆ ಇದು ಏನಕ್ಕೂ ಸಾಲದು. ಇದು ಕನ್ನಡಗರ ಸರ್ವಸ್ವ, ನಮ್ಮ ಧರ್ಮದ ತವರು, ಇದನ್ನು ಕಾಪಾಡಿಕೊಳ್ಳಬೇಕಾದ ಅವಶ್ಯಕತೆ ಇದೆ' ಎಂದು ಹೇಳುತ್ತಾರೆ.

♦ ಕನ್ನಡ ಸಾಹಿತ್ಯಲೋಕದಲ್ಲಿ ಜನಪ್ರಿಯರಾದ ಹಿರಿಯ ಸಾಹಿತಿ ನಾಡೋಜ ಪ್ರಶಸ್ತಿ ಪುರಸ್ಕೃತ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದವರು ದೇ.ಜವರೇಗೌಡರು. ಇವರು ದಿನಾಂಕ ೦೧-೦೨-೧೯೭೧ ರಂದು ಹಂಪಿ ವಿರೂಪಾಕ್ಷೇಶ್ವರನ ದರ್ಶನ ಪಡೆದು ಹೋಗಿರುವ ಉಲ್ಲೇಖ

ಸಂದರ್ಶನ ಪುಸ್ತಕದಲ್ಲಿ ದಾಖಲಾಗಿದೆ. 'ಅವರು ನಮ್ಮ ಪರಂಪರೆಯ ಪ್ರತೀಕವಾಗಿರುವ ಹಂಪಿಯನ್ನು ಉಳಿಸಿ ಮುಂದಿನ ಪೀಳಿಗಗೆ ಕೊಡಬೇಕು ಈ ಕೂಡಲೇ ಸರ್ಕಾರ ಇದರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದರು.

♦ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಕುಲಪತಿಯಾಗಿದ್ದ ಆರ್.ಸಿ.ಹಿರೇಮಠ ರವರು ದಿನಾಂಕ ೦೨-೦೨-೧೯೭೫ ಹಂಪೆ ಭೇಟಿ ನೀಡಿದ್ದರು. ಅವರು 'ಸಾಹಿತ್ಯ ಮತ್ತು ಚಾರಿತ್ರಿಕ ಮಹತ್ವ ಇರುವ ಹಂಪಿ ಕರ್ನಾಟಕದ ಹೆಮ್ಮೆ, ಇದು ನಮ್ಮ ಏಕೀಕರಣದ ಸ್ಪೂರ್ತಿಯ ತಾಣ ಈ ಕಾರಣಕ್ಕಾಗಿ ಇದನ್ನು ಅಭಿವೃದ್ಧಿ ಪಡಿಸಬೇಕಾದ ಅಗತ್ಯವಿದೆ' ಎಂದಿದ್ದರು.

♦ ಸನ್ಮಾನ್ಯ ಡಾ. ಎಂ.ವೀರಪ್ಪ ಮೊಯಿಲಿ ಅವರು ಸಹ ದಿನಾಂಕ ೨೯-೦೮-೧೯೮೧ ರಲ್ಲಿ ಹಂಪೆಗೆ ಭೇಟಿ ನೀಡಿದ್ದರು. ಅವರು ಕರ್ನಾಟಕ ಸರಕಾರದ ಅರ್ಥಸಚಿವರಾಗಿದ್ದರು. ಆಗ ಅವರು ಹಂಪೆ ಕ್ಷೇತ್ರದ ಪುನರುಜ್ಜೀವನಗೊಳಿಸಲು ಒತ್ತಾಯಿಸಿದ್ದರು. ಅಳಿದು ಹೋಗುತ್ತಿರುವ ನಾಡಿನ ಸಂಸ್ಕೃತಿಯ ರಕ್ಷಣೆ ಮಾಡುವ ಕಾಳಜಿಯನ್ನು ವಹಿಸಿ ನಾಡು-ನುಡಿಯ ಬಗ್ಗೆ ಅಪಾರ ಅಭಿಮಾನವನ್ನು ಹೊಂದಿದ್ದರು. ಹಾಗೆಯೇ ೧೯೮೪ರಲ್ಲಿ ಕರ್ನಾಟಕ ಸರಕಾರದ ವಿರೋಧ ಪಕ್ಷದ ನಾಯಕರಾಗಿದ್ದ ಸಮಯದಲ್ಲಿಯೂ ಸಹ ಪುನಃ ಹಂಪೆಯನ್ನು ಸಂದರ್ಶಿಸಿ ತಮ್ಮ ಭಾವನೆಗಳನ್ನು ಹಂಚಿಕೊಂಡಿದ್ದರು.

♦ ಪ್ರಖ್ಯಾತಿ ನ್ಯಾಯವಾದಿಯಾಗಿದ್ದ ಸರೋಜಿನಿ ಮಹಿಷಿಯವರು ದಿನಾಂಕ ೨೬-೦೮-೧೯೮೪ ರಂದು ಹಂಪೆಗೆ ಭೇಟಿ ನೀಡಿದ್ದರು. ಅವರು "ಹಂಪಿಯ ಸಂಸ್ಕೃತಿ ಇಡೀ ಜಗತ್ತಿಗೆ ಮಾದರಿಯಾಗಬಲ್ಲದು, ಇಲ್ಲಿನ ಪ್ರತಿ ಸ್ಮಾರಕಗಳು ನಮ್ಮ ಗತವೈಭವವನ್ನು ಮತ್ತು ನಮ್ಮ ಸಂಸ್ಕೃತಿಯನ್ನು ನಮಗೆ ಸಾರಿಹೇಳುತ್ತವೆ" ಎಂದು ಅಭಿಪ್ರಾಯಪಟ್ಟರು.[೧೩೭]

♦ ಕರ್ನಾಟಕ ನಾಡು ಕಂಡ ಅದ್ಭುತ ರಾಜಕಾರಣಿ, ವಿಚಾರವಾದಿ, ಮುಖ್ಯಮಂತ್ರಿಯ ಹುದ್ದೆಯನ್ನು ಅಲಂಕರಿಸಿ ಅರ್ಥಪೂರ್ಣ ಆಡಳಿತವನ್ನು ನೀಡಿರುವ ರಾಮಕೃಷ್ಣ ಹೆಗಡೆ ಅವರು ದಿನಾಂಕ ೦೪-೧೦-೧೯೯೦ ರಂದು ಹಂಪೆಗೆ ಭೇಟಿ ನೀಡಿ ಅವರು ತಮ್ಮ ಅಭಿಪ್ರಾಯವನ್ನು ಸಂದರ್ಶನ ಪುಸ್ತಕದಲ್ಲಿ ಅಭಿವ್ಯಕ್ತಪಡಿಸಿದ್ದಾರೆ. ಅವರ ಅನಿಸಿಕೆ ಈ ರೀತಿಯಾಗಿರುತ್ತದೆ. "ಕನ್ನಡ ನಾಡಿನ ಐತಿಹಾಸಿಕ ಬೈಭವವನ್ನು ಹಂಪೆಯ ಕಲ್ಲು-ಕಲ್ಲು ಕೂಗಿ ಹೇಳುತ್ತದೆ. ಅಂದಿನ ಅಮೂಲ್ಯ ಕಲಾಕೃತಿಗಳನ್ನು ಕಾಪಾಡಿಕೊಳ್ಳುವ ಬುದ್ದಿಯನ್ನಾದರೂ ದೇವರು ನಮಗೆ ಕೊಡಲಿ" ಎಂದು ಹೇಳಿದರು.[೧೩೮] ಗತವೈಭವದ ಬಗ್ಗೆ ಸಂಸ್ಕೃತಿಯ ರಕ್ಷಣೆ ಬಗ್ಗೆ ಅವರಿಗಿದ್ದ ಒಲವು ಕಾಳಜಿ ಎಷ್ಟೆಂಬುವುದು ಅವರು ದಾಖಲಿಸಿರುವ ಮಾಹಿತಿಯಿಂದ ತಿಳಿಯಬಹುದು.

♦ ಕನ್ನಡ ನಾಡಿನ ಪ್ರಖ್ಯಾತ ರಾಜಕಾರಣಿ, ಸಮಾಜವಾದಿ, ಲೋಹಿಯವಾದಿ ಕರ್ನಾಟಕ ಕಂಡ ಮುಖ್ಯಮಂತ್ರಿಯಾಗಿದ್ದವರು ಜೆ.ಎಚ್.ಪಟೇಲ್‌ರು ೦೪-೧೦-೧೯೯೦ ರಂದು ಹಂಪೆಗೆ ಭೇಟಿ ನೀಡಿದರು ಆ ಸಮಯದಲ್ಲಿ ಅವರು ತಮ್ಮ ಅನಿಸಿಕೆಯನ್ನು ಅಭಿವ್ಯಕ್ತಪಡಿಸಿದ್ದು ಹೀಗೆ:

"ವರ್ತಮಾನದ ವೈಭವಗಳಿಗೆ ಹೋಲಿಸಿದರೆ ನಮ್ಮ ದೇಶದಲ್ಲಿ ಮತ್ತು ನಾಡಿನಲ್ಲಿ ಗತವೈಭವಗಳೇ ಹೆಚ್ಚು ಪ್ರಜ್ವಲಿಸುತ್ತವೆ. ಮುಂದೆ ನಮಗೆ ಏನು ಕಾದಿದೆಯೋ ವಿರುಪಾಕ್ಷನೇ ಬಲ್ಲ" ಎಂದಿರುವರು.[೧೯]

ಆ ಸಂದರ್ಭದಲ್ಲಿ ಸಮಾಜ ರಾಜಕೀಯ, ಸಂಸ್ಕೃತಿ ಮೇಲೆ ಬೀರಿದ ಪ್ರಭಾವವನ್ನು ಹಂಪೆಕ್ಷೇತ್ರ ದೈವ ದೇವರ ಮೇಲೆ ಭವಿಷ್ಯದ ಬುತ್ತಿಯನ್ನು ಬಿತ್ತಿದ್ದರು ಎಂದು ನಮಗೆ ತಿಳಿಯುತ್ತೆ. ಇದರಿಂದ ನಾಡಿನ ಪರಂಪರೆ, ಪ್ರಾಚೀನ ಇತಿಹಾಸ, ಸಂಸ್ಕೃತಿ, ಶಿಲ್ಪಕಲೆಗಳ ಬಗ್ಗೆ ನಮ್ಮ ಈ ಕನ್ನಡ ನಾಡಿನಲ್ಲಿ ಎಷ್ಟು ಮಹತ್ವದಾಯಕವಾದದ್ದು ಎಂದು ಚಿಂತಿಸಿದ್ದಾರೆ. ಈ ಮೇಲಿನ ಗಣ್ಯರಲ್ಲದೆ ಇನ್ನು ಅನೇಕ ಗಣ್ಯರು ಹಂಪಿಗೆ ಬೇಟಿ ನೀಡಿ ಆ ಕುರಿತಂತೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅವರಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ಡಾ.ವೀರೇಂದ್ರ ಹೆಗಡೆರವರು ೧೯೮೬ ರಲ್ಲಿ, ಅವರಲ್ಲದೆ ಕರ್ನಾಟಕ ಮತ್ತು ಆಂಧ್ರ ಮತ್ತು ಓರಿಸ್ಸಾ ಉಚ್ಛ ನ್ಯಾಯಾಲಯದ ಜಸ್ಟೀಸ್ ಆಗಿದ್ದ ಸನ್ಮಾನ್ಯ ಶ್ರೀ ಎನ್.ವೈ.ಹನುಮಂತಪ್ಪ ರವರು ೧೯೯೦ ರಂದು ಇಲ್ಲಿಗೆ ಭೇಟಿ ನೀಡಿದವರಲ್ಲಿ ಪ್ರಮುಖರಾಗಿದ್ದಾರೆ.

ಒಟ್ಟಾರೆಯಾಗಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪೆ ಪರಿಸರ, ಸಂಸ್ಕೃತಿ, ಸ್ಮಾರಕಗಳನ್ನು ಕುರಿತು ಭೇಟಿ ನೀಡಿದ ಗಣ್ಯರು, ಚಿಂತಕರು, ಇತಿಹಾಸದ ಬಗ್ಗೆ ಕಾಳಜಿ ಇರುವವರು ಸಂದರ್ಶನ ಮಾಡಿದ್ದಾರೆ. ಹಂಪಿಯನ್ನು ಕುರಿತು ಅನೇಕ ಅಭಿಪ್ರಾಯಗಳನ್ನು ತಮ್ಮದೇ ನಿಲುವಿನಲ್ಲಿ ನೀಡಿದ್ದಾರೆ. ಇವರ ಅಭಿಪ್ರಾಯಗಳು ಇತಿಹಾಸವನ್ನು ಕಟ್ಟುವುದಕ್ಕೆ ಸಹಾಯಕವಾಗಿವೆ. ಇಲ್ಲಿನ ಭಗ್ನಾವಶೇಷಗಳು ಜನರಿಗೆ, ಸಂದರ್ಶಕರಿಗೆ ನೋಡಲು ಪ್ರಸ್ತುತವಾಗಿಯೂ ಸಹ ಸ್ಫೂರ್ತಿಯ ಚಿಲುಮೆಗಳಾಗಿವೆ ಎಂಬುದು ಸಾರ್ವತ್ರಿಕವಾಗಿದೆ.

□□□

ಕೊನೆ ಟಿಪ್ಪಣಿಗಳು

೧. ಎ. ಕರಿಬಸಪ್ಪ, ಬಳ್ಳಾರಿ ಐತಿಹ್ಯಗಳು, ಪುಟ. ೭.

೨. ಅದೇ ಪುಟ. ೮.

೩. ಅಯ್ಯಾಳಿ ಯರಿಸ್ವಾಮಿ, ಹಂಪಿ ಪರಿಸರದ ಐತಿಹ್ಯಗಳು : ಚಾರಿತ್ರಿಕ ವಿಶ್ಲೇಷಣೆ (ಎಂ.ಫಿಲ್. ಪ್ರಬಂಧ) ಪುಟ. ೩೨.

೪. ಅದೇ ಪುಟ. ೧೮.

೫. ಎ. ಕರಿಬಸಪ್ಪ, ಬಳ್ಳಾರಿ ಐತಿಹ್ಯಗಳು, ಪುಟ. ೫೩.

೬. ಫಾಲಾಕ್ಷ, ಕರ್ನಾಟಕ ಇತಿಹಾಸ, ಪುಟ. ೧೬೦, ೧೮೯.

೭. ಹೆಚ್.ದೇವಿರಪ್ಪ, ಶಿವತತ್ವ ಚಿಂತಾಮಣಿ, ಪುಟ. ೭-೯.

೮. ಸದಾನಂದ ಪಾಟೀಲ, ಹರಿಹರ ಕಥಾಕೋಶ, ಪುಟ. ೫೦೮.

೯. ಈತನಿಗೆ 'ಉಭಯ ಕವಿ ಕಮಲ ರವಿ', 'ಕವಿ ಶರಭಭೇರುಂಡ', ಅದಟ ಕವಿ, ನಿಕರಚದಂತ ಇತ್ಯಾದಿ ಬಿರುದುಗಳಿದ್ದವು.

೧೦. ಸಿ.ಚಿ.ನಿಂಗಣ್ಣ, ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ– 'ಹರಿಹರ ಮಹತ್ವ'ದಲ್ಲಿ ಹಂಪೆಯ ವಿರೂಪಾಕ್ಷನ ಮಹಾತ್ಮೆಯ ಬಹುರಂಜಿನ ವರ್ಣನೆ ಇದೆ. ಸಿದ್ಧನಂಜೇಶನ 'ರಾಘವಾಂಕ ಚರಿತ್ರೆ'ಯಲ್ಲಿ ದಾಖಲಿಸಿದ್ದಾನೆ. ಪುಟ. ೪೨.

೧೧. ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಪಾಂಡಿತ್ಯ ಪ್ರಭುತ್ವ ಸಂಪಾದಿಸಿಕೊಂಡಿದ್ದ ನಂಜುಂಡ ಕವಿ ಚಂಗಾಳ್ವ ವಂಶದ ದೊರೆಯು ವೀರಯೋಧನಾಗಿದ್ದನು.

೧೨. ಈ ಗ್ರಂಥಗಳ ಕಾಲ ಮತ್ತು ಅವುಗಳ ಮಹತ್ವಕ್ಕಾಗಿ ನೋಡಿ, ಆರ್.ನರಸಿಂಹಾಚಾರ್, 'ಕರ್ನಾಟಕ ಕವಿ ಚರಿತ್ರೆ'.

೧೩. ವಿಜಯಕುಮಾರಿ ಚರಿತೆ, ಸಂ.೧, ಪು.೮೦, ಮತ್ತು ಚನ್ನಬಸವ ಪುರಾಣ. ಸಂ.೫–೧೧, ಪದ್ಯ.೪೭–೫೦, ಹಾಗು ಪದ್ಮರಾಜ ಪುರಾಣ, ಸಂ.೪, ಪದ್ಯ.೨೩, ೨೪,೨೦. ಚನ್ನಬಸವ ಪುರಾಣ, ಸಂ.೫, ಪದ್ಯ. ೫೨

೧೪. ಜೀವಂಧರ ಚರಿತೆ, ಸಂ.೨, ಪದ್ಯ. ೩೯, ೪೦.

೧೫.'....ರಾಣಿಯರ ಗೇಯಚಯಂ ಬಳಸಿರ್ದುದಂತದಂ.... ನೆಲೆ ಮಾಡಂಗಳ ಚೂಳಿಕಾಗ್ರಮನಡರ್ದೇರಿರ್ದ ಕಾಂತಾಸ್ಯಮಂಡಳಮಂ ನೋಡಿ.....'

೧೬.ಧರ್ಮಪುರಾಣ, ಸಂಧಿ.೧, ಪದ್ಯ, ೧೪೮–೧೫೯, ೧೬೦, ೧೬೩

೧೭.ಧರ್ಮಪುರಾಣ, ಸಂಧಿ.೧, ಪದ್ಯ.೬೪

೧೮.ರಾಮನಾಥ ಚರಿತೆ, ಸಂಧಿ.೧, ಪದ್ಯ.೧–೫

೧೯.ಕಂಠೀರವ ನರಸರಾಜ ವಿಜಯ,ಸಂಧಿ.೭,ಪದ್ಯ.೩೨–೩೪, ಪದ್ಯ.೩೭–೩೮, ಪದ್ಯ.೪೫–೪೯

೨೦.ಚನ್ನಬಸವ ಪುರಾಣ, ಸಂಧಿ ೧೧, ಪದ್ಯ ೪೭, ೪೮

೨೧.ಜೈಮಿನಿ ಭಾರತ ಸಂಧಿ. ೧೭ ಪದ್ಯ.೮

೨೨.ಕಂಠೀರವ ನರಸರಾಜ ವಿಜಯ, ಸಂಧಿ.೭, ಪದ್ಯ, ೨೩

೨೩.ಮೋಹನ ತರಂಗಿಣಿ, ಸಂ.೩, ಪದ್ಯ, ೬೨

೨೪.ಜ್ಞಾನಚಂದ್ರಾಭ್ಯುದಯ, ಸಂ.೬ ಪದ್ಯ.೯೭, ೯೮

೨೫.ಧರ್ಮಪುರಾಣ, ಸಂ. ೪, ಪದ್ಯ.೩೩

೨೬.ರಾಮನಾಥ ಚರಿತೆ, ಸಂ.೫ ಪದ್ಯ.೧

೨೭.ವಿಜಯ ಚರಿತೆ, ಸಂ.೧, ಪದ್ಯ.೭೯

೨೮.ಜೀವಂಧರ ಚರಿತೆ ಸಂ.೨, ಪ.೩೯, ೪೧

೨೯.ಕಂಠೀರವ ನರಸರಾಜ ವಿಜಯ, ಸಂ.೭, ಪದ್ಯ೨೧-೨೫

೩೦.ಧರ್ಮಪುರಾಣ, ಸಂ.೧೫, ಪದ್ಯ.೧೪೩ರ ನಂತರ ವಚನ

೩೧.ಜೈಮಿನಿ ಭಾರತ, ಸಂ.೭, ಪ.೮

೩೨.ಮೋಹನ ತರಂಗಿಣಿ, ಸಂ.೧೪, ಪದ್ಯ.೨೮, ೩೨, ೩೫, ೩೬,೩೮

೩೩.ರಾಮನಾಥ ಚರಿತೆ, ಸಂ.೭, ಪ.೫೬-೫೯ ಮತ್ತು ಸಂ.೩೨, ಪ.೨೩-೨೯

೩೪.ಪ್ರೌಢರಾಯನ ಕಾವ್ಯ, ಸಂ.೨೧, ಪದ್ಯ.೯

೩೫.ರಾಮನಾಥ ಚರಿತೆ,ಸಂ.೨೪, ಪದ್ಯ.೧೬೬; ಸಂ.೨೫, ಪದ್ಯ.೨೩, ಸಂ.೨೬, ಪದ್ಯ೬೭-೭೩, ಸಂ.೩೩,ಪದ್ಯ.೪೧-೪೩

೩೬.ಜೈಮಿನಿ ಭಾರತ, ಸಂ.೩೦, ಪದ್ಯ.೩೬, ೪೧

೩೭.ಧರ್ಮಪುರಾಣ. ಸಂ.೬, ವಚನ ಮತ್ತು ಪದ್ಯ.೧೦೧

೩೮.ಅದೇ, ಸಂ.೬, ವಚನ, ಪದ್ಯ.೧೦೫-೧೧೫

೩೯.ಅದೇ, ಸಂ.೭, ವಚನ, ಪದ್ಯ.೧೬ರ ನಂತರ

೪೦.ಭರತೇಶ ವೈಭವ, ಸಂ.೧೭, ಪ.೨೭-೪೪

೪೧.ರಾಮನಾಥ ಚರಿತೆ, ಸಂ.೩೬, ಪದ್ಯ.೪೪-೫೧, ಸಂ. ೩೭, ಪದ್ಯ.೪೪-೫೧

೪೨.ಮೋಹನ ತರಂಗಿಣಿ, ಸಂ.೨೭, ಪದ್ಯ.೩೦, ೩೧, ೩೨, ಸಂ.೨೮, ಪದ್ಯ.೭, ೨೮

೪೩. ಧರ್ಮಪುರಾಣ,ಸಂ.೪ ಪದ್ಯ.೩೪, ಪದ್ಯ.೫೩ರ ನಂತರ, ಸಂ.೫,ಸಂ.೧ ಪದ್ಯ೧೫೪, ಸಂ.೧೪,ವಚನ, ಪದ್ಯ.೩೭.

೪೪.ರಾಮನಾಥ ಚರಿತೆ, ಸಂ.೫, ಪದ್ಯ.೫, ೬ ಮತ್ತು ಧರ್ಮಪುರಾಣ, ಸಂ.೯, ವಚನ ಪದ್ಯ.೨೭ರ ನಂತರ

೪೫.ಜೈಮಿನಿ ಭಾರತ, ಸಂ.೧೭, ಪುಟ.೨೨

೪೬.ಧರ್ಮಪುರಾಣ, ಸಂ.೬,ಪದ್ಯ.೧-೧೫; ಚನ್ನಬಸವ ಪುರಾ.,ಸಂ.೭ ಪದ್ಯ೬-೧೮; ಮೋಹನ ತರಂಗಿಣಿ, ಸಂ.೨೦,ಪುಟ.೩೧-೪೦

೪೭.ಕಂಠೀರವ ನರಸರಾಜ ವಿಜಯ, ಸಂ.೮, ಪದ್ಯ ೬.

೪೮.ಜೈಮಿನಿ ಭಾರತ, ಸಂ. ೧೭, ಪದ್ಯ ೨೨-೨೭

೪೯.ಭರತೇಶ ವೈಭವ, ಸಂ.೧೮, ಪದ್ಯ.೧೭

೫೦.ಧರ್ಮಪುರಾಣ, ಸಂ.೨, ವಚನ, ಪದ್ಯ.೫೨-೬೯

೫೧.ಅದೇ, ಸಂ.೧೪, ಪ.೩೫-೩೭, ೪೪-೪೮, ವಚನ; ಮತ್ತು ಪ್ರೌಢದೇವರಾಯನ ಕಾವ್ಯ, ಸಂ.೨೧, ಪದ್ಯ೯

೫೨.ಅದೇ, ಸಂ.೧೪, ವಚನ, ಪದ್ಯ.೭೮, ೭೯

೫೩.ಅದೇ, ಸಂ.೧೪, ವಚನ ಪದ್ಯ.೧೨೨ರ ನಂತರ

೫೪.ಚನ್ನಬಸವ ಪುರಾಣ., ಸಂ.೪೫, ಪದ್ಯ.೪-೬, ೧೮, ೪೫, ೫೭-೬೪

೫೫.ರಾಮಚಂದ್ರ ಚರಿತೆ., ಸಂ.೪, ಪದ್ಯ.೩೧, ೫೪, ೫೯; ಸಂ.೩೦, ಪದ್ಯ.೧೨; ಸಂ.೨೯, ಪದ್ಯ.೪೫,೪೮.

೫೬. ಜೀವಂಧರ ಚರಿತೆ, ಸಂ.೧೬, ಪದ್ಯ.೭, ೧೬, ೨೩, ೩೨-೬೨.

೫೭. ಮೋಹನ ತರಂಗಿಣಿ, ಸಂ.೪೨, ಪದ್ಯ.೧೪-೪೮

೫೮. ಪದ್ಮರಾಜ ಪುರಾಣ., ಸಂ.೮, ಪದ್ಯ.೩೮-೪೬

೫೯. ಪದ್ಮರಾಜ ಪುರಾಣ, ಸಂ.೮, ಪದ್ಯ.೫೧-೫೩

೬೦. ಭರತೇಶ ವೈಭವ, ಸಂ.೧೫, ಪ.೧ ಮತ್ತು ೯-೧೫

೬೧. ಮೋಹನ ತರಂಗಿಣಿ, ಸಂ.೨೨, ಪದ್ಯ.೨-೧೨

೬೨. ರಾಮಚಂದ್ರ ಚರಿತೆ., ಸಂ.೩೬, ಪದ್ಯ.೪೭-೪೯

೬೩. ಮೋಹನ ತರಂಗಿಣಿ, ಸಂ.೧೬, ಪದ್ಯ.೧೪-೧೮

೬೪. ಸೊಬಗಿನ ಸೋನೆ, ಸಂ.೨೩, ಪದ್ಯ.೨೪-೩೨

೬೫. ಕಂಠೀರವ ನರಸರಾಜ ವಿಜಯ, ಸಂ.೮, ಪದ್ಯ.೪೯, ೫೩, ೫೫-೮೧

೬೬. ಧರ್ಮಪುರಾಣ, ಸಂ.೫ ವಚನ

೬೭. ಭರತೇಶ ವೈಭವ., ಸಂ.೧೨, ಪ.೩-೫, ಪ.೬-೯, ಸಂ.೧೫, ಪ.೧, ೧೦

೬೮. ಅದೇ, ಸಂ.೫-೭, ಪದ್ಯ.೫, ೧೨-೧೪

೬೯. ಧರ್ಮಪುರಾಣ, ಸಂ.೧೪. ಪದ್ಯ.೩೨ ಮತ್ತು ೩೪ರ ನಂತರದ ವಚನ

೭೦. ಕಂಠೀರವ ನರಸರಾಜ ವಿಜಯ, ಸಂ.೮, ಪದ್ಯ.೮೧-೯೨; ಸಮ್ಯುಕ್ತ ಕೌಮುದಿ, ಸಂ.೪, ಪದ್ಯ೯

೭೧. ಬಿ.ಎಂ.ಶ್ರೀ., ಕನ್ನಡ ತಾಯಿ ನೋಟ ಪುಟ. ೪೩.

೭೨. ಅದೇ ಪುಟ.೪೩-೪೫

೭೩. ಅಶ್ವತ್ಥ, ವಿಜಯನಗರ, ಪುಟ. ೧೦೭.

೭೪. ರಾ.ಯ.ಧಾರವಾಡಕರ(ಸಂ), ಶಾಂತಕವಿಗಳ ಮೂರು ಕೀರ್ತನೆಗಳು, ಪುಟ. ೨೨-೨೯

೭೫. ಸಾಲಿರಾಮಚಂದ್ರರಾಯರ ಸಮಗ್ರಕಾವ್ಯ, ಸಂ: ಸಿದ್ಧಲಿಂಗಣಶೆಟ್ಟಿ, ಪುಟ. ೫.

೭೬. ಪಂ.ಶಂಭುಶರ್ಮ, ೧೯೩೬ : ೬೨

೭೭. ಅಶ್ವತ್ಥ, ೧೯೩೬ : ೧೦೭

೭೮. ಪಂ.ಶಂಭುಶರ್ಮ ವಿಜಯನಗರ ಸ್ಮರಣೆ, ಪುಟ. ೬೩.

೭೯. ಸ.ಪ.ಗಾಂವಕರ, ವಿಜಯದಶಮಿ, ಪು. ೫೯.

೮೦. ಕೃಷ್ಣಮೂರ್ತಿ ಪುರಾಣಿಕ, ಪುಟ. ೨೦೨-೨೦೪

೮೧. ಟಿ.ಎನ್.ಶ್ರೀನಿವಾಸಮೂರ್ತಿ, ೧೯೩೬ : ೧೯೪-೧೧೫

೮೨. ವೇದವ್ಯಾಸ, ೧೯೩೬ : ೧೯೦

೮೩. ಜಿ.ವಾಸುದೇವರಾವ್, ೧೯೩೬ : ೧೧೩

೮೪. ಯಶೋಧಾ ಕುಮಾರ, ೧೯೩೬:೧೭೫

೮೫. ಕುವೆಂಪು, ಹಂಪೆಯ ಭೀಮ, ಪುಟ. ೩೮೩.

೮೬. ದ.ರಾ.ಬೇಂದ್ರೆ ೧೯೩೬ : ೫೩ & ೫೪

೮೭. ಗಾದೆಪ್ಪ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಜಯನಗರದ ಪ್ರತಿನಿಧೀಕರಣ, ಪುಟ. ೧೩೮.

೮೮. ಅದೇ, ೧೪೨.

೮೯. ಎ.ಲಕ್ಷ್ಮಣರಾವ್, ಹಂಪೆಗೆ, ೧೨೯ ಮತ್ತು ಬಿ.ಎಂ.ಶ್ರೀ, ಕನ್ನಡ ಬಾವುಟ, ಕನ್ನಡ ಸಾಹಿತ್ಯ ಪರಿಷತ್ತು, ೨೦೧೧, ಪುಟ. ೧೨೯-೩೦

೯೦. ಜೋಳದರಾಶಿ ದೊಡ್ಡನಗೌಡ, ನಂದೇನಾನೋದಿದೆ, ಪುಟ. ೭೨

೯೧. ಶ್ರೀಪರಮೇಶ್ವರ, ೧೯೩೬, ೧೨೭

೯೨. ಎಸ್.ಆರ್.ಮಳಗಿ, ೧೯೩೬ : ೮೪

೯೩. ಕೀರ್ತಿನಾಥ ಕುರ್ತಕೋಟಿ, ಯುಗಧರ್ಮ ಮತ್ತು ಸಾಹಿತ್ಯ ದರ್ಶನ, ಪುಟ.೧೭೫.

೯೪. ಕೃಷ್ಣಮೂರ್ತಿ ಕಿತ್ತೂರು, ಗಳಗನಾಥರು ಮತ್ತು ಅವರ ಕಾದಂಬರಿಗಳು, ಪುಟ.೨೪೩.

೯೫. ಶಿವರಾಮ ಪಡಿಕ್ಕಲ್, ನಾಡುನುಡಿಯ ರೂಪಕ: ರಾಷ್ಟ್ರ, ಆಧುನಿಕತೆ ಮತ್ತು ಕನ್ನಡದ ಮೊದಲ ಕಾದಂಬರಿಗಳು, ಪುಟ. ೨೦೫.

೯೬. ಗಳಗನಾಥರು, ಮಾಧವಕರುಣ ವಿಲಾಸ, ಪುಟ. ೧೨೯.

೯೭. ಅದೇ, ಪುಟ. ೧೯೫.

೯೮. ಅದೇ, ಪುಟ. ೨೨೩.

೯೯. ಆನಂದಕಂದ, ರಾಜಯೋಗಿ, ಮೊದಲ ಮಾತು

೧೦೦. ಅದೇ, ಪುಟ. ೧೬.

೧೦೧. ತ.ಸು.ಶಾಮರಾಯ, ಕನ್ನಡ ನಾಟಕ, ಪು. ೩೮೨.

೧೦೨. ಸಿ.ಆರ್.ಗೋವಿಂದರಾಜು, ಕರ್ನಾಟಕ ಏಕೀಕರಣ ಚಳುವಳಿ, ಪು. ೧೭೮.

೧೦೩. ಕಂದಗಲ್ಲ ಹಣಮಂತರಾಯ, ವರಪ್ರದಾನ, ಪುಟ. ೯೮.

೧೦೪. ಗಾದೆಪ್ಪ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಜಯನಗರದ ಪ್ರತಿನಿಧೀಕರಣ, ಪುಟ. ೧೦೮.

೧೦೫. ಅದೇ ೯೩.

೧೦೬. ಅದೇ ೧೦೧.

೧೦೭. ಅದೇ ೧೨೦ .

೧೦೮. ಜಿ.ವೆಂಕಟಸುಬ್ಬಯ್ಯ, ಗತಿಪ್ರಜ್ಞೆ, ಪುಟ. ೨೨೯.

೧೦೯. ಲಕ್ಷ್ಮಣ್ ತೆಲಗಾವಿ, ೨೦೦೯, 'ಜೀರ್ಣ ವಿಜಯನಗರ ದರ್ಶನಂ', ಪುಟ. ೧-೫

೧೧೦. ವಿ.ಸೀ., ಪಂಪಾಯಾತ್ರೆ, ಪುಟ. ೨೨.

೧೧೧. ಲಕ್ಷ್ಮಣ್ ತೆಲಗಾವಿ, ಪೂರ್ವೋಕ್ತ, ಪುಟ. ೨೫.

೧೧೨. ಅದೇ. ಪುಟ. ೪೯-೫೮ ಮತ್ತು ಅನುಬಂಧ

೧೧೩. ಅದೇ. ಪುಟ. ೪೪-೫೭.

೧೧೪. Indira Gandhi National Centre For the Arts, New Delhi, India

೧೧೫. ಶಿಲ್ಪಗಳಲ್ಲಿ ಇರುವ ವ್ಯಕ್ತಿಗಳು ಶಾಪಗ್ರಸ್ತರಾಗಿದ್ದು, ಅವರಿಗೆ ಭಕ್ತರ ಪಾದಸ್ಪರ್ಷದಿಂದ ಮುಕ್ತಿಯಿದೆ ಎನ್ನುವ ಅಭಿಪ್ರಾಯ ಜನರಲ್ಲಿದೆ.

೧೧೬. ದೇವರಕೊಂಡಾರೆಡ್ಡಿ, ಹಂಪಿ ಶಾಸನ ಸಂಪುಟ, ಶಾಸನ ಸಂಖ್ಯೆ, ೧೦೮.

೧೧೭. ಅದೇ. ಶಾಸನ ಸಂಖ್ಯೆ ೧೦೯.

೧೧೮. ಅದೇ. ಶಾಸನ ಸಂಖ್ಯೆ ೧೧೧.

೧೧೯. ಅದೇ. ಶಾಸನ ಸಂಖ್ಯೆ ೧೧೪.

೧೨೦. ಅದೇ. ಶಾಸನ ಸಂಖ್ಯೆ ೧೧೫.

೧೨೧. ಅದೇ. ಶಾಸನ ಸಂಖ್ಯೆ ೧೧೬.

೧೨೨. ಅದೇ. ಶಾಸನ ಸಂಖ್ಯೆ ೧೧೭.

೧೨೩. ಅದೇ. ಶಾಸನ ಸಂಖ್ಯೆ ೧೧೮.

೧೨೪. ಅದೇ. ಶಾಸನ ಸಂಖ್ಯೆ ೧೨೧.

೧೨೫. ಅದೇ. ಶಾಸನ ಸಂಖ್ಯೆ ೧೨೩.

೧೨೬. ಅದೇ. ಶಾಸನ ಸಂಖ್ಯೆ ೧೨೭.

೧೨೭. ಅದೇ. ಶಾಸನ ಸಂಖ್ಯೆ ೧೨೯.

೧೨೮. ಅದೇ. ಶಾಸನ ಸಂಖ್ಯೆ ೧೩೦.

೧೨೯. ರಾಮರಾವ ನರಗುಂದಕರ, ಪುಟ. ೧೭೮

೧೩೦. ಪ್ರಹ್ಲಾದರಾಯ ಕುಲಕರ್ಣಿ, ಪುಟ. ೧೦೯.

೧೩೧. ಮಧುರ ಚೆನ್ನ, ಸಿಂಪಿ ಲಿಂಗಣ್ಣ, ಪುಟ. ೩೯.

೧೩೨. ತಮ್ಮಣ್ಣ ಕುಬೇರಪ್ಪ ತುಕೋಲ, ಪುಟ. ೪೬

೧೩೩. ಬುರ್ಲಿ ಬಿಂದುಮಾಧವಾಚಾರ್ಯ, ಪುಟ. ೧೨೮

೧೩೪. ಭೀಮರಾಯ ನಂದಗಡ, ಪುಟ. ೧೬೫-೧೬೬

೧೩೫. ಚೆನ್ನಬಸವಸ್ವಾಮಿ ಹಿರೇಮಠ, ಪುಟ. ೧೬೫.

೧೩೬. ನಾರಾಯಣ ಸುಬ್ರಾವ ಹರಡೀಕರ, ಪುಟ. ೨೪೮.

೧೩೭. Indira Gandhi National Centre For the Arts, New Delhi, India

೧೩೮. ವಿರೂಪಾಕ್ಷಿ ಪೂಜಾರಹಳ್ಳಿ, ಚರಿತ್ರೆ ಅಧ್ಯಯನ-ಸಂಪುಟ-೪, ಸಂಚಿಕೆ-೨ ಪುಟ.೧೨೧.

೧೩೯. ಅದೇ. ಪುಟ. ೧೨೨.

ಅಧ್ಯಾಯ ಐದು

ವಿದೇಶಿಯರ ದೃಷ್ಟಿಯಲ್ಲಿ ಹಂಪಿ

೫.೧ ಪ್ರಮುಖ ವಿದೇಶಿ ಪ್ರವಾಸಿಗರ/ರಾಯಭಾರಿಗಳ ದೃಷ್ಟಿಯಲ್ಲಿ

೫.೧.೧. ಅಬ್ದುಲ್ ರಜಾಕ್

೫.೧.೨. ದುಆರ್ತೆ ಬಾರ್ಬೊಸಾ

೫.೧.೩. ದಾಮಿಂಗೋ ಪಾಯೇಸ್ (ಡುಮಿಂಗೋ ಪೇಯಿಸ್)

೫.೧.೪. ಫೆರ್ನ್ನಾವೋ ನೂನಿಜ್

೫.೧.೫. ನಿಕೊಲೆ–ದೆ–ಕೊಂತಿ(ನಿಕೋಲೋಕಾಂಟಿ)

೫.೧.೬. ಅಥನೇಷಿಯಸ್ ನಿಕಿಟಿನ್

೫.೧.೭. ಸೀಜರ್ ಫ್ರೆಡರಿಕ್

೫.೧.೮. ಲೊಡೊವಿಕೊ ದಿ ವರ್ತೆಮಾ

೫.೧.೯. ಲೆಫ್ಟಿನೆಂಟ್ ಎಮಿಟ್

೫.೧.೧೦.ವಿದೇಶಿ ವಿದ್ವಾಂಸರ ಪ್ರಮುಖ ಕೃತಿಗಳು ಮತ್ತು ಲೇಖನಗಳು

೫.೧.೧೧.ವಿದೇಶಿ ಸಂಶೋಧಕರ ಪ್ರಮುಖ ಸಂಶೋಧನ ಕೃತಿಗಳಲ್ಲಿ ಹಂಪಿ

೫.೨ ಪ್ರಮುಖ ಆಧುನಿಕ ವಿದೇಶಿ ವಿದ್ವಾಂಸರ ದೃಷ್ಟಿಯಲ್ಲಿ ಹಂಪಿ

೫.೨.೧. ಜಾರ್ಜ್ ಮಿಶಲ್

೫.೨.೨. ಜಾನ್ ಫ್ರೀಡ್ಜ್

೫.೨.೩. ಮಿಂಜಾ ಎಂಗ್

೫.೨.೪. ಡೇವಿಡ್ ರೂಬೋ

೫.೨.೫. ಸುಗುಣ ಗೆಹ್ಲೋಟ್

ಅಧ್ಯಾಯ ಐದು

ವಿದೇಶಿಯರ ದೃಷ್ಟಿಯಲ್ಲಿ ಹಂಪಿ

ಪ್ರಸ್ತಾವನೆ

(ವಿಶ್ವವಿಖ್ಯಾತ ಹಂಪಿಯ ವೈಶಿಷ್ಟ್ಯತೆಗಳ ಕುರಿತು ಕೇವಲ ದೇಶಿಯರು ಅಷ್ಟೇ ಅಲ್ಲದೆ ವಿದೇಶಿಯರು ಸಹ ತಮ್ಮದೇ ಆದ ದೃಷ್ಟಿಕೋನದಲ್ಲಿ ಅರ್ಥೈಸಲು ಪ್ರಯತ್ನಿಸಿದ್ದಾರೆ. ಅವರಲ್ಲಿ ವಿದೇಶಿ ಪ್ರವಾಸಿಗರು ಮತ್ತು ವಿದೇಶಿ ವಿದ್ವಾಂಸರು ಪ್ರಮುಖರಾಗಿದ್ದಾರೆ. ಹಂಪಿ ಮತ್ತು ವಿಜಯನಗರ ಸಾಮ್ರಾಜ್ಯಕ್ಕೆ ಅನೇಕ ವಿದೇಶಿ ಯಾತ್ರಿಕರು, ರಾಯಭಾರಿಗಳು, ಪ್ರವಾಸಿಗರು, ವರ್ತಕರು ಭೇಟಿ ನೀಡಿದರು. ಅವರು ವಿಜಯನಗರ ಸಾಮ್ರಾಜ್ಯವನ್ನು ಕಣ್ಣಾರೆ ಕಂಡಿದ್ದು ಅಂದಿನ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಆಡಳಿತ, ಶೈಕ್ಷಣಿಕ, ಸಾಂಸ್ಕೃತಿಕ ಆಚಾರ–ವಿಚಾರ, ಉಡುಗೆ ತೊಡಿಗೆ ಸಂಸ್ಕೃತಿ ಸಂಪ್ರದಾಯ, ಆಹಾರ ಪದ್ಧತಿ, ಹಬ್ಬ–ಹರಿದಿನ, ಜಾತ್ರೆ, ಉತ್ಸವ ಮುಂತಾದ ವಿಷಯಗಳನ್ನು ಕುರಿತು ತಮ್ಮ ಪ್ರವಾಸ ಗ್ರಂಥಗಳಲ್ಲಿ ಅನೇಕ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ) ಅವೇ ಇಲ್ಲಿ ಮುಖ್ಯ ಆಕರಗಳಾಗಿವೆ. ಹಾಗೆಯೇ ವಿಜಯನಗರ ಇತಿಹಾಸವನ್ನು ಸೃಷ್ಟಿಸಲು ಸಹಕಾರಿಯಾಗಿವೆ.

(ಇಲ್ಲಿಗೆ ಭೇಟಿ ನೀಡಿದ ಪ್ರಮುಖ ವಿದೇಶಿ ಪ್ರವಾಸಿಗರಾದ ಅಬ್ದುಲ್ ರಜಾಕ್, ನಿಕೊಲೋಕೊಂಟಿ ಮೊದಲಾದ ವಿದೇಶಿ ಪ್ರವಾಸಿಗರು ಹಂಪಿ ಮತ್ತು ಅದರ ಸುತ್ತಲಿನ ಪರಿಸರದಲ್ಲಿ ತಾವು ಕಣ್ಣಾರೆ ಕಂಡ ಹಲವಾರು ಘಟನೆಗಳನ್ನು ಮತ್ತು ವಿದ್ಯಮಾನಗಳನ್ನು ತಮ್ಮ ಪ್ರವಾಸ ಕಥನಗಳಲ್ಲಿ ಮತ್ತು ತಮ್ಮ ಪ್ರವಾಸ ವರದಿಗಳಲ್ಲಿ ವಿಶ್ಲೇಷಿಸಿದ್ದಾರೆ. ಆದರೆ ವಿದೇಶಿ ವಿದ್ವಾಂಸರು ಇಲ್ಲಿನ ವಿವಿಧ ಆಯಾಮಗಳ ಕುರಿತು ತಮ್ಮ ಕೃತಿ ಮತ್ತು ಸಂಶೋಧನಾ ವರದಿಗಳಲ್ಲಿ ವಿಶೇಷವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯವಸ್ಥಿತವಾಗಿ ದಾಖಲಿಸಿದ್ದಾರೆ) ಈ ಹಿನ್ನೆಲೆಯಲ್ಲಿ ಪ್ರವಾಸಿಗರ ಅಥವಾ ರಾಯಭಾರಿಗಳ ದೃಷ್ಟಿಯಲ್ಲಿ ಹಂಪಿ ಮತ್ತು ಆಧುನಿಕ ವಿದ್ವಾಂಸರು ಅಥವಾ ಕೃತಿಕಾರರ ದೃಷ್ಟಿಯಲ್ಲಿ ಹಂಪಿ ಎಂದು ವಿಭಾಗಿಸಿಕೊಂಡು ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ.

೫.೧ ಪ್ರಮುಖ ವಿದೇಶಿ ಪ್ರವಾಸಿಗರ ಅಥವಾ ರಾಯಭಾರಿಗಳ ದೃಷ್ಟಿಯಲ್ಲಿ ಹಂಪಿ

(ವಿಜಯನಗರ ಸಾಮ್ರಾಜ್ಯಕ್ಕೆ(ಹಂಪಿ) ವಿದೇಶಗಳಿಂದ ಬಂದು ಹೋದವರ ಸಂಖ್ಯೆ ಅಪರಿಮಿತ. ಕ್ರಿ.ಶ.೧೫ನೇ ಶತಮಾನ ಪೂರ್ವಾರ್ಧದಿಂದ ಈ 'ಯಾತ್ರೆ' ಆರಂಭವಾಗಿ ಕಳೆದ ಶತಮಾನದವರೆಗೂ ವಿದೇಶಿ ಪ್ರವಾಸಿಗರು ಬಂದು ಹೋಗಿದ್ದಾರೆ. ಬಂದು ಹೋದವರಲ್ಲಿ

ಕೆಲವರು 'ಪ್ರವಾಸ ಕಥನ'ಗಳನ್ನು ಬರೆದಿಟ್ಟಿದ್ದಾರೆ. ಇನ್ನೆಷ್ಟು ಪ್ರವಾಸ ಕಥನಗಳು ಕಾಲಗರ್ಭದಲ್ಲಿ ಹೂತುಹೋಗಿರುವುದು ತಿಳಿಯದಾಗಿದೆ. ಕೆಲವು ಪ್ರವಾಸಿಗರು ಬರೆದಿಟ್ಟುಕೊಂಡ ದಿನಚರಿಗಳು ಕನ್ನಡಕ್ಕೆ ಬಾರದೆ ಹಾಗೇ ಉಳಿದುಬಿಟ್ಟಿವೆ. ಹೀಗೆ ಉಳಿದುಕೊಂಡ ಪ್ರವಾಸಿಗರ ಪ್ರವಾಸ ಕಥನಗಳಲ್ಲಿ 'ವಿಜಯನಗರ'ದ ಸಾಂಸ್ಕೃತಿಕ ಅನನ್ಯತೆಗಳು, ನಮ್ಮ ಕಣ್ಣ ಮುಂದೆ ಅಪೂರ್ವ ಸಂಗತಿಗಳನ್ನು ಪ್ರದರ್ಶಿಸುತ್ತವೆ. ಇಲ್ಲಿಗೆ ಬಂದು ಹೋದ ನಿಕೊಲೊ ಕೊಂಟಿ, ಅಬ್ದುಲ್ ರಜಾಕ್, ದುಆರ್ತೆ ಬಾರ್ಬೊಸಾ, ಡೊಮಿಂಗೊ ಪ್ಯಾಸ್, ಫರ್ನಾವೂ ನೂನಿಜ್ ಇಬ್-ನ್-ಬತುತಾ, ಅಥನೇಷಿಯಸ್ ನಿಕಿಟಿನ್, ಸೀಜರ್ ಫ್ರೆಡರಿಕ್, ಬ್ಯಾರಡಸ್, ಲಿಫ್ಟಿನೆಂಟ್ ಎಮಿಟ್ ಇವರಂಥ ಅಷ್ಟು ಪ್ರಸಿದ್ಧರಲ್ಲದ ಪ್ರವಾಸಿಗರೂ ಇದ್ದಾರೆ. ಇವರನ್ನು ಅಗತ್ಯಕ್ಕೆ ತಕ್ಕಂತೆ ಅವರ ವರದಿಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. 'ವಿಜಯನಗರ'ದ ಸಾಂಸ್ಕೃತಿಕ ಚರಿತ್ರೆಯನ್ನು ಅಧ್ಯಯನ ಮಾಡುವವರಿಗೆ ಇವರೆಲ್ಲರೂ ನೀಡುವ ಪ್ರವಾಸ ಕಥನದ ವಿವರಗಳು ಮಹತ್ವವಾಗಿವೆ.

ವಿಜಯನಗರ ಮಹಾಸಾಮ್ರಾಜ್ಯಕ್ಕೆ ಕ್ರಿ.ಶ.೧೫ನೇ ಶತಮಾನದ ಪೂರ್ವಾರ್ಧದಿಂದ ೧೬ನೇ ಶತಮಾನದ ಪೂರ್ವಾರ್ಧದವರೆಗೂ ಬಂದು ಹೋದವರ ಪಟ್ಟಿ ದೊಡ್ಡದಿದೆ. ಆದರೆ, ಬಂದು ಹೋದವರೆಲ್ಲ 'ಪ್ರವಾಸ ಕಥನ'ಗಳನ್ನು ಬರೆಯಲಿಲ್ಲ ಎನ್ನುವುದು ಕಂಡುಬರುತ್ತದೆ. ಆದರೆ, ಬರೆದವರ ಸಂಖ್ಯೆ ತೀರ ಕಡಿಮೆಯಿಲ್ಲ. ವಿಜಯನಗರ ಕುರಿತು ಆ ಅವಧಿಯಲ್ಲಿ ಬರೆದವರ ಸಂಖ್ಯೆ ಹನ್ನೆರಡು ಎಂದು ವಿದ್ವಾಂಸರು ಹೇಳಿರುವರು. ಇದು ಸಂಖ್ಯಾ ವಿಶೇಷವಲ್ಲ. ಆದರೆ, ನ್ಯೂನಿಜ್, ಬಾರ್ಬೊಸಾ, ಅಬ್ದುಲ್ ರಜಾಕ್, ಡೊಮಿಂಗೊ ಪ್ಯಾಸ್ ಈ ವಿದೇಶಿ ಮಹಾಶಯರ ಬರೆಹಗಳು ಬಹು ದೀರ್ಘವಾಗಿವೆ ಹಾಗೂ ಅವು ಬಹು ಮಹತ್ವದ ದಾಖಲೆಗಳಾಗಿವೆ. ಅವು ಕೊಡುವ ಚಾರಿತ್ರಿಕ ವಿವರಗಳು ಇತಿಹಾಸಕಾರನ್ನು ಇತಿಹಾಸಕ್ಕೆ ತೆರೆದುಕೊಳ್ಳುವಂತೆ ಮಾಡುತ್ತವೆ. ಈ ವಿವರಗಳಲ್ಲಿರುವ ರಾಜನ ಅಂತಃಪುರದ ಚಿತ್ರಗಳೂ ಸಾಮಾಜಿಕ ಆಚರಣೆಗಳೂ ವಿವಿಧ ಜಾತಿಗಳ ವಿವರಗಳೂ ಹಲವು ಜ್ಞಾನಶಾಖೆಗಳ ವಿದ್ವಾಂಸರಿಗೆ ಬಹು ಉಪಯುಕ್ತವಾಗಿವೆ. ಕೆಲವೊಂದು ವಿದೇಶಿಯರು ಬರೆದ ಕಥನಗಳನ್ನು ಬರೆದಿದ್ದಾರೆ. ಅದರಲ್ಲಿ ಪೋರ್ಚುಗೀಸ್ ಭಾಷೆಯಲ್ಲಿರುವ ಪ್ಯಾಸ್ ಮತ್ತು ನ್ಯೂನಿಜರ ಮೂಲಗ್ರಂಥಗಳನ್ನು ಪ್ರಕಟಿಸಿದವರು ಪ್ರಸಿದ್ಧ ಅರಬ್ಬೀ ವಿದ್ವಾಂಸರಾದ ಡೇವಿಡ್ ಲೋಪ್.

ಇವರು ಕ್ರಿ.ಶ.೧೮೯೭ರಲ್ಲಿ ಪ್ರಕಟಿಸಿದ 'ಡೋಸ್ ರೈಸ್-ದೆಬಿಸ್ನಾಗ' ಎಂಬ ಪುಸ್ತಕದಲ್ಲಿ ಮೇಲೆ ಹೇಳಿದ ಪ್ರವಾಸಿಗಳ ಪೂರ್ಣ ವರ್ಣನೆಯನ್ನು ಕೊಟ್ಟಿದ್ದಾರೆ. ಆ ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ ಅವರು ಹೀಗೆ ಹೇಳಿದ್ದಾರೆ: 'ಇವರು (ಪ್ಯಾಸ್ ಮತ್ತು ನೂನಿಜ್) ಬರೆದಿರುವುದು ಚರಿತ್ರಾ ದೃಷ್ಟಿಯಿಂದಾಗಲೀ ಅಥವಾ ಆ ದೇಶದ, ಅದರಲ್ಲಿಯೂ ರಾಜಧಾನಿಯ, ಅದರ ಉತ್ಪನ್ನ ವಸ್ತುಗಳ, ಅಲ್ಲಿಯ ಪದ್ಧತಿಗಳ ಮತ್ತು ಇತರ ಸಂಗತಿಗಳ ವರ್ಣನೆಯ ದೃಷ್ಟಿಯಿಂದಾಗಲೀ ಯಾವ ಭಾಷೆಯಲ್ಲಿ ಬರೆದಿರುವುದನ್ನಾದರೂ ಮೀರಿಸುತ್ತದೆ. ಇಟಲಿ ದೇಶದ ಪ್ರವಾಸಿಗಳಾದ ನಿಕೊಲೊ-ದೆ-ಕೊಂತಿ, ವರ್ತೆಮಾ ಮತ್ತು ಫ್ರೆಡರಿಕ್ ಇವರುಗಳು ಕಂಡು ಬರೆದ ಚಿತ್ರ

ಇವುಗಳಷ್ಟು ವಿವರವಾಗಿಲ್ಲ. ಈ ಕಾರಣಗಳಿಂದ ಪ್ಯಾಸ್ ಮತ್ತು ನೂನಿಜ್ ವೃತ್ತಾಂತಗಳು ವಿಜಯನಗರ ಸಾಮ್ರಾಜ್ಯ ಸ್ಥಿತಿಗತಿಗಳನ್ನು ಅರಿಯಲು ಬಹು ಸಹಾಯಕವಾಗಿವೆ' ಎನ್ನುತ್ತಾರೆ. ಹಂಪಿ ಮತ್ತು ವಿಜಯನಗರ ಕುರಿತಂತೆ ವಿದೇಶಿ ಪ್ರವಾಸಿಗರು ಯಾವ ಬಗೆಯಲ್ಲಿ ಅಲೋಚಿಸಿದ್ದಾರೆ; ರಾಜನ ರೀತಿರಿವಾಜುಗಳನ್ನು; ಅವರು ನೀಡುವ ಸಾಮ್ರಾಜ್ಯ, ಸಾಮಾಜಿಕ, ಧಾರ್ಮಿಕ ಮತ್ತು ಇತರೆ ವಿವರಗಳನ್ನು ಇಲ್ಲಿ ಚರ್ಚಿಸಲಾಗಿದೆ.

೫.೧.೧. ಅಬ್ದುಲ್ ರಜಾಕ್

ಅಬ್ದುಲ್ ರಜಾಕ್ ಮೂಲತಃ ಪರ್ಷಿಯಾ ದೇಶದವನು. ಈತನು ಹಿಜ್ರಾ ೮೧೬ರಲ್ಲಿ ಅಂದರೆ ಕ್ರಿ.ಶ.೧೪೧೩ರಲ್ಲಿ ಹೆರಾತಿಯಲ್ಲಿ(ಪರ್ಷಿಯಾ ದೇಶ) ಹುಟ್ಟಿದನು. ಇವನ ತಂದೆಯ ಹೆಸರು ಜಲಾಲುದ್ದೀನ್ ಜೊಹಾಕ್. ಈತನು ರುಖ್‌ಷಾನ ಕಾಲದಲ್ಲಿ ಖಾಜಿಯಾಗಿದ್ದನು ಎಂದು ತಿಳಿದುಬರುತ್ತದೆ. ನಂತರ ಕ್ರಿ.ಶ.೧೪೩೭ರಲ್ಲಿ ರಜಾಕನು ರುಖ್‌ಷಾನ ಸೇವೆಗೆ ಸೇರಿಕೊಂಡನು. ಕ್ರಿ.ಶ.೧೪೪೧ರಲ್ಲಿ ಅಬ್ದುಲ್ ರಜಾಕನನ್ನು ರುಖ್‌ಷಾ ವಿಜಯನಗರದ ರಾಜನಾದ ೨ನೇ ದೇವರಾಯನ ಬಳಿಗೆ ತನ್ನ ರಾಯಭಾರಿಯನ್ನಾಗಿ ಕಳುಹಿಸಿಕೊಟ್ಟನು. ಆತನು ಕ್ರಿ.ಶ.೧೪೪೨ರಲ್ಲಿ ಹೆರಾತಿನಿಂದ ಇಂಡಿಯಾ ದೇಶಕ್ಕೆ ಹೊರಟ ರಜಾಕನು, ಕೋಹಿಸ್ತಾನ್ ಮತ್ತು ಕಿರ್ಮಾನ್ ಮಾರ್ಗವಾಗಿ ಓರ್ಮಸ್ಸಿಗೆ ಬಂದು ಅಲ್ಲಿ ಇಂಡಿಯಾ ದೇಶಕ್ಕೆ ಹಡಗು ಹತ್ತಿದನು. ಮೊದಲು ಕಲ್ಲಿಕೋಟೆಯಲ್ಲಿ ಇಳಿದು ಅಲ್ಲಿಯ ಜಾಮೊರಿನ್ ದೊರೆಯನ್ನು ಕಂಡು, ಅಲ್ಲಿಂದ ಮಂಗಳೂರು ಮಾರ್ಗವಾಗಿ ವಿಜಯನಗರದ ಅರಸ ಇಮ್ಮಡಿ ದೇವರಾಯನ ಆಸ್ಥಾನಕ್ಕೆ ರಾಯಭಾರಿಯಾಗಿ ಕ್ರಿ.ಶ.೧೪೪೩ರಲ್ಲಿ ಭೇಟಿ ನೀಡಿದನು. ವಿಜಯನಗರದಲ್ಲಿ 'ಮಹಾನವಮಿ ಉತ್ಸವ'ವನ್ನು ನೋಡಿಕೊಂಡು ಕ್ರಿ.ಶ.೧೪೪೩ನೇ ನವೆಂಬರಿನಲ್ಲಿ ತನ್ನ ಮರು ಪ್ರಯಾಣವನ್ನು ಪ್ರಾರಂಭಿಸಿದನು. ಆತ ಈ ದೇಶದಲ್ಲಿ ಸುಮಾರು ಎರಡು ವರ್ಷಗಳ ಕಾಲ ಇದ್ದನು ಎಂದು ಇತಿಹಾಸದ ವಿದ್ವಾಂಸರು ಹೇಳಿದ್ದಾರೆ. ಅನಂತರ ಹೊನ್ನಾವರದಲ್ಲಿ ಹಡಗು ಏರಿದ ರಜಾಕ್ ಸಮುದ್ರಯಾನ ಮಾಡಿ ಪುನಃ ಓರ್ಮಸ್ಸಿಗೆ ಹಿಂದಿರುಗಿದನು.

ಓರ್ಮಸ್ಸಿನಿಂದ ತನ್ನ ದೇಶಕ್ಕೆ ಹೋದ ರಜಾಕ್ ತನ್ನ ಪ್ರವಾಸವನ್ನು ಕುರಿತು ಮತ್ಲ-ಅಸ್-ಸಾ-ದೈನ್ (Matla-as-sa-dain) ಎಂಬ ಪುಸ್ತಕ ಬರೆದನು. ೧೪೪೬ರಲ್ಲಿ ರಜಾಕನನ್ನು ರಾಯಭಾರದ ಮೇಲೆ ಘಿಲಾನಿಗೆ ಕಳುಹಿಸಲಾಯಿತು. ಅನಂತರ ಅವನಿಗೆ ರಾಯಭಾರಿ ಎಂಬ ಬಿರುದು ದೊರಕಿತು. ಈ ರೀತಿಯ ಬಿರುದಾಂಕಿತನಾಗಿ ಈಜಿಪ್ಟಿಗೆ ಹೋಗಬೇಕೆಂದು ಅವನ ದೊರೆಯ ಅಪ್ಪಣೆಯಾಯಿತು. ಆದರೆ ದೊರೆ ಸತ್ತು ಹೋದದ್ದರಿಂದ ಆ ಪ್ರಯಾಣ ನಿಂತಿತು. ೧೪೬೨ರಲ್ಲಿ ರಜಾಕನನ್ನು ಹೆರಾತಿನಲ್ಲಿದ್ದ ಮಿರ್ಜ ಷಾ ರುಖ್ ಎಂಬ 'ಮುಸಲ್ಮಾನ್ ಮಠದ ಷೇಕನಾಗಿ ಚುನಾಯಿಸಿದರು. ಆ ಸ್ಥಾನದಲ್ಲಿ ಕ್ರಿ.ಶ.೧೪೮೨ರ ವರೆಗೆ ಇದ್ದು ಆ ವರ್ಷ ರಜಾಕ್ ಸ್ವರ್ಗಸ್ಥನಾದನು. ರಜಾಕನು ತನ್ನ ಪ್ರವಾಸ ಕಥನವನ್ನಷ್ಟೇ ಅಲ್ಲದೆ ಷಾ ರುಖ್‌ನ ಮತ್ತು ತೈಮೂರನ ಇತರೆ ಉತ್ತರಾಧಿಕಾರಿಗಳ ಚರಿತ್ರೆಯನ್ನೂ ಬರೆದಿದ್ದಾನೆ."[೧]

ಇವುಗಳಲ್ಲಿ ಹಂಪಿಯನ್ನು ಕುರಿತು ಆತನ ಪ್ರವಾಸ ಕಥನದಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಬಂದ ವಿಷಯವನ್ನು ರಜಾಕ್ ಹೇಳಿರುವುದು ಮುಖ್ಯವಾಗಿದ್ದು ಆ ಕುರಿತ ವಿವರ ಈ ಮುಂದಿನಂತಿದೆ: "ನನ್ನ ದೊರೆ ಖಾಖಾನ್ ಅಪ್ಪಣೆಯಂತೆ ಇಂಡಿಯಾ ದೇಶಕ್ಕೆ ರಂಜಾನ್ ಮೊದಲನೇ ದಿನ ಕೋಹಿಸ್ತಾನ್ ಮಾರ್ಗವಾಗಿ ಕಿರ್ಮಾನ್ ಮುಟ್ಟಿದೆ. ಅಲ್ಲಿಂದ ಓರ್ಮುಜ್ ಬಂದರಿಗೆ ಬಂದೆನು. ಇಲ್ಲಿಗೆ ಎಲ್ಲಾ ದೇಶದ ಪ್ರಯಾಣಿಕರೂ ಬರುತ್ತಾರೆ. ಓರ್ಮುಜ್‌ನಿಂದ ಕಾಲಿಕಟ್‌ಗೆ ಬಂದು ತಲುಪಿದೆ. ಅಲ್ಲಿಂದ ಮುಂದೆ ಸಮೇರಿ ರಾಜನನ್ನು ಭೇಟಿ ಮಾಡಿ ಬೆಂಡಿನಾವೇಶ್ (ಬಹುಶಃ ಕನ್ನಾನೂರು) ದಾಟಿ ಮಂಜಲೋರ್ (ಮಂಗಳೂರು) ಬಂದರನ್ನು ತಲುಪಿದೆ. ಇದು ಬಿಜನಗರ ರಾಜ್ಯದ ಗಡಿ. ಇಲ್ಲಿ ಮೂರು ದಿನ ತಂಗಿದ್ದು ನಂತರ ಭೂಮಿಯ ಮೇಲೆ ನನ್ನ ಪ್ರಯಾಣ ಆರಂಭಿಸಿದೆ" ಎಂದು ಹೇಳಿದ್ದಾನೆ.[೨]

ಅಬ್ದುಲ್ ರಜಾಕನು 'ದಿ ಹಿಸ್ಟರಿ ಆಫ್ ಪರ್ಶಿಯಾ' ಎಂಬ ಕೃತಿಯನ್ನು ರಚಿಸಿ ಅದರಲ್ಲಿ ವಿಜಯನಗರ ಸಾಮ್ರಾಜ್ಯದ ವಿಚಾರಗಳನ್ನು ವ್ಯಕ್ತಪಡಿಸಿರುವನು. ಅವನು "ವಿಜಯನಗರದಂತಹ ಪಟ್ಟಣವನ್ನು ಕಣ್ಣಿಂದ ನೋಡಿಲ್ಲ, ಕಿವಿಯಿಂದ ಕೇಳಿಲ್ಲ. ೨ನೇ ದೇವರಾಯನಂತರ ಸಮರ್ಥ, ಬಲಿಷ್ಠ ಅರಸ ಭಾರತದಲ್ಲಿಲ್ಲ ಎಂದು, ಆತನಿಗೆ ೭೦೦ ರಾಣಿಯರಿದ್ದರೆಂದು, ಇಲ್ಲಿ ಸಂಪತ್ತಿನ ಹೊಳೆ ಹರಿಯುತ್ತಿದೆ. ಗುಲಾಬಿ ಹೂಗಳು, ಮುತ್ತುಗಳ ಮಾರಾಟ ವಿಶೇಷವಿದೆ. ಇಲ್ಲಿನ ಜನರು ಗುಲಾಬಿ ಪ್ರಿಯರು ಅವರಿಗೆ ಅವು ಆಹಾರದಷ್ಟೇ ಅವಶ್ಯವೆನಿಸಿದ್ದವು. ರತ್ನ, ವಜ್ರ, ವೈಢೂರ್ಯಗಳನ್ನು ಇಲ್ಲಿಯ ಪೇಟೆಯ ಬೀದಿಗಳಲ್ಲಿ ಯಾವ ಭಯ ಭೀತಿಯಿಲ್ಲದೆ ಬಹಿರಂಗವಾಗಿ ಮಾರುತ್ತಾರೆ ಎಂದು; ಮುಂದುವರೆದು ಆತ ವಿಜಯನಗರಕ್ಕೆ ಏಳುಸುತ್ತಿನ ಕೋಟೆಯಿದೆ. ಅದನ್ನು ಕಾಯಲು ೧೨೦೦೦ ಸೈನಿಕರಿದ್ದರು. ಇಲ್ಲಿ ೩೦೦ ಬಂದರುಗಳು ಅನೇಕ ಅರಮನೆ, ದೇವಾಲಯಗಳು, ಉದ್ಯಾನವನಗಳು ಮುಂತಾದ ಸ್ಮಾರಕಗಳಿವೆ ಎಂದು ತಿಳಿಸಿದ್ದಾನೆ. ರಾಜನು ಹಸಿರು ಬಣ್ಣದ ಸ್ಯಾಟಿನ ಬಟ್ಟೆಯ ಕವಚ ಧರಿಸುತ್ತಿದ್ದನು. ಮುತ್ತು, ರತ್ನ ಮುಂತಾದ ಅಮೂಲ್ಯವಾದ ಮಣಿಗಳಿಂದ ಪ್ರಜ್ವಲಿಸುವ ಕೊರಳು ಪಟ್ಟಿಯನ್ನು ಧರಿಸುತ್ತಿದ್ದನು. ಅರಸ ತೆಳ್ಳಗೆ ಮತ್ತು ಎತ್ತರವಾಗಿದ್ದು ಗಡ್ಡವಿಲ್ಲದೆ ಮುಖ ಅಂದವಾಗಿ ಕಾಣುತ್ತಿತ್ತು. ನಾನು(ರಜಾಕ್) ದೊರೆಯನ್ನು ಸಂದರ್ಶಿಸಿದಾಗ ಆತ ಅಪಾರವಾದ ಘನತೆ ಗೌರವಗಳಿಂದ ಸಿಂಹಾಸನವನ್ನು ಅಲಂಕರಿಸಿದ್ದನು. ರಾಜನ ಸಿಂಹಾಸನವು ಆ ಸಾಮಾನ್ಯ ಬೆಲೆಯುಳ್ಳ ಮುತ್ತು, ರತ್ನಗಳಿಂದ ಶೋಭಿಸುತ್ತಿತ್ತು. ಅಂದಿನ ಕಾಲದಲ್ಲಿ ಜನಸಾಮಾನ್ಯರು ಸಹ ಆಭರಣಗಳನ್ನು ಹೆಚ್ಚಾಗಿ ಧರಿಸುತ್ತಿದ್ದರು. ಕುಶಲಕಾರ್ಮಿಕರು, ವ್ಯಾಪಾರಗಾರರು ತಮ್ಮದೇ ಆದ ವೃತ್ತಿ ಸಂಘಗಳನ್ನು ಸ್ಥಾಪಿಸಿಕೊಂಡಿದ್ದರು. ರಾಜನ ಸಾಮಾಜ್ಯದ ವಿಸ್ತಾರವು ಸಿಲೋನಿನ ಗಡಿಯಿಂದ ಗುಲ್ಬರ್ಗಾದವರೆಗೆ;ಒರಿಸ್ಸಾದಿಂದ ಮಲಬಾರಿನವರೆಗೆ ಹರಡಿದ್ದಿತ್ತು. ಅರಸನು ನಗರದ ಸಂರಕ್ಷಣೆಗಾಗಿ ೧೨ ಸಾವಿರ ರಕ್ಷಣಾ ಸೈನಿಕರನ್ನು ಹೊಂದಿದ್ದನು" ಎಂದು ದಾಖಲಿಸುತ್ತಾನೆ.

ಅಂದರೆ ಇಲ್ಲಿನ ಅರಸ ಇಮ್ಮಡಿ ದೇವರಾಯನ ಉಡುಪುಗಳನ್ನು, ಅಲ್ಲಿನ ಜನರ

ಅಭಿರುಚಿಯನ್ನು, ಆಭರಣಗಳನ್ನು ರಸ್ತೆಯಲ್ಲಿ ಮಾರುವ ವೈಖರಿಯನ್ನು ವರ್ಣಿಸಲಾಗಿದೆ. ಅಂದಿನ ವಿಜಯನಗರ ಸಾಮ್ರಾಜ್ಯವನ್ನು ಸೈನಿಕರನ್ನು, ಒಟ್ಟೂ ಭೌತಿಕ ಪರಿಸರವನ್ನು ತಿಳಿಸುವಿಕೆಯ ವಿಧಾನವಿದೆ. ಹಾಗೆಯೇ ಸಾಮ್ರಾಜ್ಯದ ವಿಸ್ತರಣೆಯನ್ನು ಜನರ ಆತ್ಮವಿಶ್ವಾಸದ ವಂತಿಕೆಯನ್ನು ನೋಡಿ ಬೆರಗಾದದ್ದನ್ನು ತನ್ನ ಕಥನದಲ್ಲಿ ನಿರೂಪಿಸಿದ್ದಾನೆ.

"ವಿಜಯನಗರವು ಬಹಳ ದೊಡ್ಡದಾದ ಜನವಸತಿಯುಳ್ಳ ಊರು. ರಾಜನ ಖ್ಯಾತಿ ಮತ್ತು ಅವನ ಪ್ರಭುತ್ವ ಮನೋನ್ನತವಾಗಿದೆ. ರಾಜ್ಯ ಸೆರೆನಿದಿಬ್ (ಸಿಂಹಳ) ಗಡಿಯಿಂದ ಕಲ್ಬೆರ್ಗದ ಕೊಟ್ಟ ಕೊನೆಯವರೆಗೆ, ಬಂಗಾಳದ ಮೆಲಿಬಾರ್ (ಮಲಬಾರ್) ಕೊನೆಯವರೆಗೆ (ಕೃಷ್ಣಾನದಿಯಿಂದ ಕೇಪ್ ಕಾಮೊರಿನ್‌ವರೆಗೆ) ಸಾವಿರ ಫರಸಾಂಗುಗಳಷ್ಟು ವಿಸ್ತರಿಸಿದೆ. ದೇಶದ ಬಹುಭಾಗ ಸಾಗುವಳಿಯಲ್ಲಿದ್ದು ಬಹು ಫಲವತ್ತಾಗಿದೆ. ಈ ದೇಶದಲ್ಲಿ ಮುನ್ನೂರು ಬಂದರುಗಳಿವೆ. ಪರ್ವತದೋಪಾದಿಯಲ್ಲಿರುವ ಮತ್ತು ಪೆಡಂಭೂತಗಳಂತಿರುವ ಸಾವಿರಕ್ಕೂ ಮೀರಿದ ಆನೆಗಳನ್ನು ಇಲ್ಲಿ ನೋಡಬಹುದು. ಸೈನ್ಯದಲ್ಲಿ ಹನ್ನೊಂದು ಲಕ್ಷದಷ್ಟು ಯೋಧರಿದ್ದಾರೆ. ಈ ರಾಯನ ಶ್ರೇಷ್ಠತೆಯನ್ನು ಮೀರಿಸುವ ಇಡೀ ಹಿಂದುಸ್ಥಾನದಲ್ಲಿ ಎಲ್ಲಿ ಹುಡುಕಿದರೂ ಸಿಕ್ಕುವುದಿಲ್ಲ. ಹಿಂದೂಸ್ಥಾನದ ರಾಜರುಗಳನ್ನು ರಾಯ್ ಎಂದು ಕರೆಯುತ್ತಾರೆ. ರಾಯ್‌ನನ್ನು ಬಿಟ್ಟರೆ ಬ್ರಾಹ್ಮಣರು ಉಳಿದೆಲ್ಲರಿಗಿಂತ ಶ್ರೇಷ್ಠಸ್ಥಾನವನ್ನು ಪಡೆದಿದ್ದಾರೆ. ಪರ್ಷಿಯಾ ಭಾಷೆಯಲ್ಲಿರುವ ಕಲೀಲ ಮತ್ತು ದಿಮ್ನ ಎಂಬ ಅತಿ ಸುಂದರವಾದ ಗ್ರಂಥದಲ್ಲಿ ಬರುವ ರಾಯ್ ಮತ್ತು ಬ್ರಾಹ್ಮಣನಿಗೆ ಸಂಬಂಧಪಟ್ಟ ಕಥೆಗಳು ಈ ದೇಶದ ಪ್ರತಿಭಾವಂತನೊಬ್ಬ ಹೇಳಿದವುಗಳಾಗಿರಬಹುದು."[೩]

ವಿಜಯನಗರದ ಸಾಮ್ರಾಜ್ಯವನ್ನು ಕುರಿತು ಅವನ ಮಾತುಗಳು ಹೀಗಿವೆ: "ವಿಜಯನಗರದ ಬಾಹ್ಯ ವಿವರಗಳು ನಮ್ಮ ಕಣ್ಣ ಮುಂದೆ ಕಟ್ಟಿಕೊಡುವಂತೆ ಅಬ್ದುಲ್ ರಜಾಕ್ ವಿವರಿಸಬಲ್ಲ. ಅವನು ರಾಜನ ದಿವಾನ್‌ಖಾನೆಗೆ ಎದುರಾಗಿದ್ದ 'ಫಿಲ್‌ಖಾನೆ' ಅರ್ಥಾತ್ ಗಜಶಾಲೆ ಕುರಿತು ಬರೆದ ವಿವರಗಳು ಹೀಗಿವೆ : ಬಿಜನಗರದಂಥ ನಗರವನ್ನು ಕಣ್ಣು ಕಂಡಿಲ್ಲ, ಕಿವಿ ಕೇಳಿಲ್ಲ. ಈ ನಗರವನ್ನು ಹೇಗೆ ನಿರ್ಮಿಸಿದ್ದಾರೆಂದರೆ ಏಳು ದುರ್ಗಗಳೂ ಏಳು ಕೋಟೆಗಳೂ ಒಂದನ್ನೊಂದು ಆವರಿಸಿಕೊಂಡಿವೆ. ಒಂದನೆಯ ದುರ್ಗದ ಸುತ್ತ ಮನುಷ್ಯನ ಎತ್ತರದ ಕಲ್ಲು ಕಂಭಗಳನ್ನು ಭೂಮಿಯಲ್ಲಿ ಅರ್ಧ ಹೂತು ಇನ್ನರ್ಧ ಮೇಲೆ ಕಾಣುವಂತೆ ನೆಟ್ಟಿದ್ದಾರೆ. ಇವುಗಳನ್ನು ಒಂದರ ಪಕ್ಕದಲ್ಲಿ ಒಂದನ್ನು ಹೇಗೆ ಹೂತಿದ್ದಾರೆಂದರೆ, ರಾವುತನಾಗಲೀ ಪದಾತಿಯಾಗಲೀ ಧೈರ್ಯವಾಗಿ ಅಥವಾ ಸುಲಭವಾಗಿ ದುರ್ಗದ ಕಡೆ ಹೋಗುವಂತಿಲ್ಲ. ಈ ಕೋಟೆ ಚಕ್ರಾಕಾರವಾಗಿದೆ. ಇದನ್ನು ಬೆಟ್ಟದ ತುದಿಯ ಮೇಲೆ ಕಲ್ಲು ಮತ್ತು ಗಾರೆಯಿಂದ ಕಟ್ಟಿದ್ದಾರೆ. ಇದರ ಹೆಬ್ಬಾಗಿಲುಗಳು ಬಹು ಬಲವಾಗಿವೆ. ಈ ಹೆಬ್ಬಾಗಿಲುಗಳನ್ನು ಒಂದೇ ಸಮನೆ ಕಾಯುತ್ತಾರೆ. ಯಾರನ್ನೂ ಸಂಪೂರ್ಣ ಪರೀಕ್ಷೆ ಮಾಡದೆ ಒಳಗೆ ಬಿಡುವುದಿಲ್ಲ. ಎರಡನೆಯ ಕೋಟೆ ವಿಶಾಲವಾದ ಜಾಗವನ್ನು ಆಕ್ರಮಿಸಿದೆ. ಇದರಂತೆ ನಾಲ್ಕು, ಐದು ಮತ್ತು

ಆರನೆಯ ಕೋಟೆಗಳಿವೆ. ಎಲ್ಲಾ ಕೋಟೆಗಳ ಮಧ್ಯದಲ್ಲಿರುವ ಏಳನೆಯ ಕೋಟೆ ಆಕ್ರಮಿಸಿಕೊಂಡಿರುವ ಜಾಗ ಹೆರಾತ್ ನಗರದ ಮಾರ್ಕೆಟ್ ಜಾಗದ ಹತ್ತರಷ್ಟು ವಿಶಾಲವಾಗಿದೆ. ಇಲ್ಲಿ ರಾಜನು ವಾಸಮಾಡುವ ಅರಮನೆಯಿದೆ. ಉತ್ತರ ದಿಕ್ಕಿನಲ್ಲಿ ಮೊದಲನೆಯ ಕೋಟೆಯ ಹೆಬ್ಬಾಗಿಲಿನಿಂದ ಹಿಡಿದು ದಕ್ಷಿಣದಲ್ಲಿರುವ ಹೆಬ್ಬಾಗಿಲಿಗೆ ಎರಡು ಪರಲಾಂಗುಗಳಷ್ಟು ದೂರವಿದೆ. ಪೂರ್ವದಿಂದ ಪಶ್ಚಿಮಕ್ಕೂ ಅಷ್ಟೇ ದೂರ. ಮೊದಲನೆಯ ಕೋಟೆಗೂ, ಎರಡನೆಯ ಕೋಟೆಗೂ ಮಧ್ಯೆ ಇರುವ ಜಾಗದಲ್ಲಿ ಅಂದರೆ ಮೂರನೆಯ ಕೋಟೆಯವರೆಗೆ ಇರುವ ಜಾಗದಲ್ಲಿ ಬೇಸಾಯದ ಹೊಲಗಳೂ, ಮನೆಗಳೂ ಮತ್ತು ತೋಟಗಳೂ ಇವೆ. ಮೂರನೆಯ ಕೋಟೆಯಿಂದ ಏಳನೆಯ ಕೋಟೆಯವರೆಗೆ ಅಸಂಖ್ಯಾತ ಜನಗಳನ್ನೂ, ಅನೇಕ ಅಂಗಡಿಗಳನ್ನೂ, ಅಂಗಡಿ ಬೀದಿಗಳನ್ನೂ ನೋಡಬಹುದು. ರಾಜನ ಅರಮನೆಯ ಹೆಬ್ಬಾಗಿಲಿನಲ್ಲಿ ಎದುರುಬದುರಾಗಿ ನಾಲ್ಕು ಅಂಗಡಿ ಬೀದಿಗಳಿವೆ. ಉತ್ತರದಲ್ಲಿ ರಾಯನ ಅರಮನೆಯ ಮಹಾದ್ವಾರವಿದೆ. ಪ್ರತಿಯೊಂದು ಅಂಗಡಿಯ ಸಾಲಿನ ಮೇಲುಗಡೆ ಭವ್ಯವಾದ ಉಪ್ಪರಿಗೆಯುಳ್ಳ ಕಮಾನು ಹಾದಿ ಇದೆ. ಆದರೆ ರಾಯನ ಅರಮನೆಯಲ್ಲಿರುವ ಸಭಾಮಂಟಪವು ಇದೆಲ್ಲಕ್ಕಿಂತಲೂ ಎತ್ತರವಾಗಿದೆ.

ಅಂಗಡಿ ಬೀದಿಗಳು ಬಹು ಉದ್ದವಾಗಿಯೂ ಅಗಲವಾಗಿಯೂ ಇವೆ. ಗುಲಾಬಿ ವ್ಯಾಪಾರಿಗಳು ತಮ್ಮ ಅಂಗಡಿಗಳ ಮುಂದೆ ಎತ್ತರವಾದ ವೇದಿಕೆಗಳನ್ನು ರಚಿಸಿಕೊಂಡಿದ್ದಾರೆ. ಈ ವೇದಿಕೆಗಳ ಎರಡೂ ಕಡೆ ಹೂಗಳನ್ನು ರಾಶಿ ಹಾಕಿ ವ್ಯಾಪಾರ ಮಾಡುತ್ತಾರೆ. ಬೀದಿಗಳಲ್ಲೆಲ್ಲಾ ಗುಲಾಬಿ ಹೂವಿನ ವಾಸನೆಯೋ ವಾಸನೆ! ಹೊಸಗುಲಾಬಿ ಹೂಗಳ ನೋಟವೋ ನೋಟ! ಈ ಜನಗಳು ಗುಲಾಬಿ ಹೂಗಳು ಇಲ್ಲದಿದ್ದರೆ ಬದುಕುವಂತೆಯೇ ಕಾಣುವುದಿಲ್ಲ. ಹೊಟ್ಟೆಗೆ ಹಿಟ್ಟು ಎಷ್ಟು ಅವಶ್ಯಕವೋ ಜುಟ್ಟಿಗೆ ಗುಲಾಬಿಯೂ ಅಷ್ಟೇ ಅವಶ್ಯಕವೆಂದು ಭಾವಿಸುತ್ತಾರೆ. ಬೇರೆ ಬೇರೆ ಕಸುಬಿಗೆ ಸೇರಿದ ವರ್ತಕರ ಅಂಗಡಿಗಳು ಬೇರೆ ಬೇರೆ ಇವೆ. ರತ್ನಪಡಿ ವ್ಯಾಪಾರಿಗಳು ಅಂಗಡಿ ಬೀದಿಗಳಲ್ಲಿ ಬಹಿರಂಗವಾಗಿ ವಜ್ರವೈಢೂರ್ಯಗಳನ್ನೂ ಮುತ್ತುಗಳನ್ನೂ ಮಾರುತ್ತಾರೆ.

ಈ ಮನೋಹರವಾದ ಪ್ರದೇಶದಲ್ಲಿಯೂ, ರಾಜನ ಅರಮನೆಯಲ್ಲಿಯೂ ಸೊಗಸಾಗಿ ಗೆಯ್ದು ಕಲ್ಲಿನಿಂದ ನಿರ್ಮಿಸಿದ ಕಾಲುವೆಗಳಲ್ಲಿ ಹರಿಯುವ ನೀರಿನ ಝರಿಗಳನ್ನು ನೋಡಬಹುದು. ಸುಲ್ತಾನನ (ರಾಜನ) ಅರಮನೆಯ ಮಹಾದ್ವಾರದ ಎಡಗಡೆ ಅರಮನೆಯೋಪಾದಿಯಲ್ಲಿ ಕಾಣುವ ಬಹು ದೊಡ್ಡದಾದ ದಿವಾನ್‌ಖಾನೆಯಿದೆ. ಇದರ ಮುಂದೊಂದು ಹಜಾರವಿದೆ. ಇದು ಮನುಷ್ಯನ ಎತ್ತರದಷ್ಟಿದ್ದು ಮೂವತ್ತು ಗಜ್ ಉದ್ದವೂ ಹತ್ತು ಗಜ್ ಅಗಲವೂ ಇದೆ. ಇಲ್ಲಿ ದಫ್ತರಖಾನೆ ಇದೆ. ಅಲ್ಲದೆ ಇಲ್ಲಿ ಕಾರ್ಖೂನರು ಕುಳಿತುಕೊಳ್ಳುತ್ತಾರೆ. ಈ ಕಾರ್ಖೂನರ ಬರವಣಿಗೆ ಎರಡು ರೀತಿ ಇದೆ. ಕಬ್ಬಿಣದ ಕಲಮ್‌ನಿಂದ ಎರಡು ಗಜ ಉದ್ದ ಮತ್ತು ಎರಡು ಬೆರಳು ಅಗಲವಿರುವ ಇಂಡಿಯಾದ ಕಾಯಿಯ ಗರಿಯ ಮೇಲೆ (ತಾಳೆಯ ಗರಿಯ ಮೇಲೆ ?) ಬರೆಯುವುದು ಒಂದು ರೀತಿ. ಇದರ ಮೇಲೆ ಬರೆದ ಅಕ್ಷರಗಳು ವರ್ಣರಹಿತವಾಗಿರುತ್ತವೆ.

ಅಲ್ಲದೆ ಬಹಳ ದಿವಸ ಉಳಿಯುವುದಿಲ್ಲ. ಬಿಳೀ ಬಣ್ಣದ ಮೇಲ್ಮೈಗೆ ಕಪ್ಪು ಬಣ್ಣ ಹಚ್ಚಿ ಅದರ ಮೇಲೆ ಬಳಪದ ಕಲಮ್‌ನಿಂದ ಬರೆಯುವುದು ಎರಡನೆಯ ರೀತಿ. ಈ ಬರವಣಿಗೆ ಬಹಳ ದಿವಸ ನಿಲ್ಲುತ್ತದೆ. ಇದಕ್ಕೆ ಬಹಳ ಪ್ರಾಶಸ್ತ್ಯವಿದೆ.

ಈ ಅರಮನೆಯ ಮಧ್ಯೆ (ಅಂದರೆ ದಿವಾನಖಾನೆಯ ಮಧ್ಯೆ) ಎತ್ತರವಾದ ವೇದಿಕೆಯ ಮೇಲೆ ದೈಯ್ಯಾಂಗ್ (ಡಣನಾಯಕ ಅಥವಾ ದಿವಾನ) ಎಂದು ಕರೆಯಲ್ಪಡುವ ಒಬ್ಬ ಖೋಜಾ ಕುಳಿತಿರುತ್ತಾನೆ. ಹಜಾರದ ಕೊನೆಯಲ್ಲಿ ಸಾಲಾಗಿ ಚೋಪ್‌ದಾರರು ನಿಂತಿರುತ್ತಾರೆ. ಯಾವ ಕಾರ್ಯನಿಮಿತ್ತವಾಗಿ ಯಾರು ಬಂದರೂ ಚೊಪ್‌ದಾರರ ಎರಡು ಸಾಲುಗಳ ಮಧ್ಯೆ ನಡೆದುಬಂದ ದೈಯ್ಯಾಂಗನಿಗೆ ಕಾಣಿಕೆಯನ್ನರ್ಪಿಸಿ ದೀರ್ಘದಂಡ ನಮಸ್ಕಾರ ಮಾಡಿ ಎದ್ದುನಿಂತು ಆಮೇಲೆ ತಮ್ಮ ಅಹವಾಲನ್ನು ಹೇಳಿಕೊಳ್ಳಬೇಕು. ದೈಯ್ಯಾಂಗನು ಅಹವಾಲನ್ನು ಕೇಳಿ ರಾಜ್ಯದಲ್ಲಿರುವ ನಿಯಮಾನುಸಾರ ತೀರ್ಪು ಕೊಡುತ್ತಾನೆ. ಈ ತೀರ್ಪಿನ ಮೇಲೆ ಅಪೀಲೇ ಇಲ್ಲ.

ದಿವಾನ್‌ಖಾನೆಯಿಂದ ದೈಯ್ಯಾಂಗ್ (ಡಣಾಯಕ ಅಥವಾ ದಿವಾನ) ದರಬ್‌ಖಾನ (ಟಂಕಸಾಲೆ) ಹೊರಟಾಗ ಅವನ ಮುಂದೆ ವಿವಿಧ ಬಣ್ಣಗಳ ಛತ್ರಿಗಳನ್ನು ಹಿಡಿದುಕೊಂಡು ಹೋಗುತ್ತಾರೆ. ವಾದ್ಯಗಳು ಮೊಳಗುತ್ತಿರುತ್ತವೆ. ಅವನ ಅಕ್ಕಪಕ್ಕದಲ್ಲಿ ಹೋಗುವ ಹೊಗಳು ಭಟ್ಟರು ಬಹುಪರಾಕು ಹೇಳುತ್ತಿರುತ್ತಾರೆ. ರಾಜನಿರುವ ಅರಮನೆಯನ್ನು ಮುಟ್ಟುವ ಮುನ್ನ ಏಳು ಬಾಗಿಲುಗಳನ್ನು ದಾಟಿ ಹೋಗಬೇಕು. ಪ್ರತಿಯೊಂದು ಬಾಗಿಲನ್ನೂ ಒಬ್ಬೊಬ್ಬ ದ್ವಾರಪಾಲಕ ಕಾಯುತ್ತಾನೆ. ದೈಯ್ಯಾಂಗನು ಪ್ರತಿ ಬಾಗಿಲಿಗೆ ಬಂದಾಗ ಛತ್ರಿಗಳನ್ನು(?) ಬಿಚ್ಚುತ್ತಾರೆ. ಏಳನೆಯ ಬಾಗಿಲನ್ನು ದೈಯ್ಯಾಂಗನೊಬ್ಬನೆ ಪ್ರವೇಶಿಸಿ ರಾಜನಿಗೆ ಕೇವಲ ಐದು ನಿಮಿಷಗಳಲ್ಲಿ ರಾಜ್ಯದ ಆಡಳಿತದ ವರದಿಯನ್ನೊಪ್ಪಿಸಿ ಹಿಂದಿರುತ್ತಾನೆ. ರಾಜನ ಅರಮನೆಯ ಹಿಂಭಾಗದಲ್ಲಿ ದೈಯ್ಯಾಂಗನ ವಾಸದ ಅರಮನೆಯಿದೆ.

ಅರಮನೆಯ ಎಡಭಾಗದಲ್ಲಿ ದರಬ್‌ಖಾನೆ(ಟಂಕಸಾಲೆ) ಇದೆ. ಈ ದೇಶದಲ್ಲಿ ಮೂರು ತರಹ ನಾಣ್ಯಗಳಿವೆ. ಇವನು ಚಿನ್ನಕ್ಕೆ ಒಂದು ಲೋಹ ಸೇರಿಸಿ ಮಾಡುತ್ತಾರೆ. ಒಂದನ್ನು ವರಾಹ ಎಂದು, ಇನ್ನೊಂದನ್ನು ಪರ್ತಬ್ ಎಂದೂ, ಮತ್ತೊಂದನ್ನು ಫನಂ ಎಂದೂ ಕರೆಯುತ್ತಾರೆ. ವರಹದ ತೂಕ ಒಂದು ಮಿತ್ಕಲ್, ಅಂದರೆ ಎರಡು ದಿನಾರುಗಳಷ್ಟು. ಪರ್ತಬ್ ವರಹದ ಅರ್ಧದಷ್ಟು. ಫನಂ ಪರ್ತಬ್‌ನ ಹತ್ತನೇ ಒಂದು ಭಾಗದಷ್ಟು, ಇವುಗಳಲ್ಲೆಲ್ಲಾ ಫಲಂ ಅತ್ಯಂತ ಉಪಯುಕ್ತವಾದ ನಾಣ್ಯ. ಫನಂನ ಆರನೇ ಒಂದು ಭಾಗವಾದ ತರ್ ಎಂಬ ಅಪ್ಪಟ ಬೆಳ್ಳಿಯ ನಾಣ್ಯವವನ್ನು ಮಾಡುತ್ತಾರೆ. ಇದು ಚಲಾವಣೆಯಲ್ಲಿದ್ದ ಬಹಳ ಉಪಯುಕ್ತವಾದ ನಾಣ್ಯ. ಈ ತರ್ ಎಂಬ ನಾಣ್ಯದ ಮೂರನೆಯ ಒಂದು ಭಾಗದಷ್ಟು ತೂಕದ ನಾಣ್ಯವನ್ನು ಜಿತಲ್ ಎಂದು ಕರೆಯುತ್ತಾರೆ. ಇದು ತಾಮ್ರದ ನಾಣ್ಯ.

ಈ ಚಕ್ರಾಧಿಪತ್ಯದಲ್ಲಿರುವ ಪದ್ಧತಿಗನುಸಾರವಾಗಿ ಎಲ್ಲಾ ಪ್ರಾಂತಗಳೂ ನಿಗದಿಯಾದ ಕಾಲದಲ್ಲಿ ಚಿನ್ನವನ್ನು ಟಂಕಸಾಲೆಗೆ ತರಬೇಕು. ಯಾರಿಗಾದರೂ ಸಂಭಾವನೆಯನ್ನು ಚಿನ್ನದ ರೂಪದಲ್ಲಿ ದೈಯ್ಯಾಂಗ್ ಕೊಡಬೇಕಾಗಿ ಬಂದರೆ ಅದನ್ನು ದರಬ್‌ಖಾನೆಯಲ್ಲಿಯೇ ಕೊಡಬೇಕು. ಸಿಪಾಯಿಗಳಿಗೆ ಸಂಬಳವನ್ನು ನಾಲ್ಕು ತಿಂಗಳಿಗೊಂದು ಸಾರಿ ಪಾವತಿ ಮಾಡುತ್ತಾರೆ. ಯಾವ ಪ್ರಾಂತದ ಆದಾಯದಿಂದಲೂ ಈ ಖರ್ಚುಗಳನ್ನು ಮಾಡುವುದಿಲ್ಲ. ಈ ಚಕ್ರಾಧಿಪತ್ಯದ ಜನಸಂಖ್ಯೆಯ ಅಗಾಧತೆಯನ್ನು ವರ್ಣಿಸಲು ಅಸದಳ. ರಾಜನ ಅರಮನೆಯ ನೆಲಮಾಳಿಗೆಯಲ್ಲಿ ಚಿನ್ನದ ಗಟ್ಟಿಗಳನ್ನು ರಾಶಿ ಹಾಕಿದ್ದಾರೆ. ಈ ದೇಶದ ಪ್ರತಿಯೊಬ್ಬ ನಿವಾಸಿಯೂ, ಅವನು ಮೇಲ್ತರಗತಿಯವನಾಗಿರಲೀ ಅಥವಾ ಸಾಮಾನ್ಯನಾಗಿರಲಿ, ಕೊನೆಗೆ ಅಂಗಡಿ ಬೀದಿಯಲ್ಲಿ ಕೆಲಸ ಮಾಡುವವರೂ ಸಹ, ಕೊರಳು, ತೋಳು ಮತ್ತು ಬೆರಳುಗಳಿಗೆ ಮುತ್ತುಗಳನ್ನೋ ಅಥವಾ ರತ್ನ ಖಚಿತವಾದ ಬೆಲೆಯುಳ್ಳ ಒಡವೆಗಳನ್ನೋ ಧರಿಸಿರುತ್ತಾರೆ.

ದಿವಾನ್‌ಖಾನೆಗೆ ಎದುರಾಗಿ ಫಿಲ್‌ಖಾನೆ (ಗಜಶಾಲೆ) ಇದೆ. ರಾಜನಿಗೆ ಸೇರಿದ ಅನೇಕ ಆನೆಗಳು, ದೇಶದಲ್ಲೆಲ್ಲಾ ಬಹಳ ಭಾರಿಯಾದ ಆನೆಗಳು, ಅರಮನೆಯ ಬಳಿ ಅಂದರೆ ಮೊದಲನೆಯ ಮತ್ತು ಎರಡನೆಯ ಕೋಟೆಗಳ ಮಧ್ಯ ಇರುವ ಉತ್ತರ ಪಶ್ಚಿಮ ಜಾಗದಲ್ಲಿರುತ್ತವೆ. ಈ ಆನೆಗಳು ಗರ್ಭವಾಗಿ ಮರಿ ಹಾಕುತ್ತವೆ. ರಾಜನ ಬಳಿ ಅತ್ಯಂತ ದೊಡ್ಡದಾದ ಬಿಳಿಯ ಆನೆ ಇದೆ. ಈ ಆನೆಯ ಮೈಮೇಲೆ ಅಲ್ಲಲ್ಲಿ ನೀರಿನ ಗುಳ್ಳೆಗಳಂತೆ ಬೂದುಬಣ್ಣದ ಮಚ್ಚೆಗಳಿವೆ. ಪ್ರತಿದಿನ ಬೆಳಗ್ಗೆ ಆನೆಯನ್ನು ರಾಜನ ಮುಂದೆ ತೆಗೆದುಕೊಂಡು ಹೋಗುತ್ತಾರೆ. ಇದರ ದರ್ಶನ ತನಗೆ ಒಳ್ಳೆಯದೆಂದು ರಾಜ ಭಾವಿಸುತ್ತಾನೆ. ಅರಮನೆಯ ಆನೆಗಳಿಗೆ ಕಿಚಡಿಯನ್ನು ತಿನ್ನಿಸುತ್ತಾರೆ. ಇದನ್ನು ತಾಮ್ರದ ಹಂಡೆಗಳಲ್ಲಿ ಬೇಯಿಸಿ ಆನೆಗಳ ಮುಂದೆಯೇ ಹೊರಕ್ಕೆ ತೆಗೆದು, ಹರಡಿ ಅದರ ಮೇಲೆ ಉಪ್ಪನ್ನೂ ಸಕ್ಕರೆಯನ್ನೂ ಎರಚಿ ಚೆನ್ನಾಗಿ ಕಲಿಸುತ್ತಾರೆ. ಹೀಗೆ ಕಲಸಿದ ಮೇಲೆ ಅದನ್ನು ಎರಡು ಮಣದಷ್ಟು ತೂಕದ ಉಂಡೆಗಳನ್ನಾಗಿ ಮಾಡುತ್ತಾರೆ. ಈ ಉಂಡೆಗಳನ್ನು ತುಪ್ಪದಲ್ಲಿ ಅದ್ದಿ ಆನೆಯ ಬಾಯೊಳಗೆ ಇಡುತ್ತಾರೆ. ಕಿಚಡಿಯನ್ನು ಮಾಡುವಾಗ ಯಾವುದಾದರೂ ಸಾಮಾನು ಹಾಕುವುದನ್ನು ಮರೆತರೆ ಆನೆಗಳು ಮಾವಟಿಗನ ಮೇಲೆ ಎರಗುತ್ತವೆ. ಈ ತಪ್ಪಿಗೆ ರಾಜ ಮಾವಟಿಗರಿಗೆ ಕ್ರೂರ ಶಿಕ್ಷೆ ವಿಧಿಸುತ್ತಾನೆ. ದಿನಕ್ಕೆ ಎರಡು ಸಲ ಈ ಕಿಚಡಿಯನ್ನು ಆನೆಗಳಿಗೆ ತಿನ್ನಿಸುತ್ತಾರೆ. ಆನೆಗಳನ್ನು ಕಟ್ಟುವುದಕ್ಕೆ ಒಂದೊಂದು ಆನೆಗೂ ಒಂದೊಂದು ಬೇರೆ ಬೇರೆ ಅಂಕಣವಿದೆ. ಈ ಅಂಕಣದ ಗೋಡೆಗಳು ಬಹಳ ಭದ್ರವಾಗಿವೆ. ಮೇಲ್ಛಾವಣೆಗೆ ಬಹಳ ಗಟ್ಟಿಯಾದ ಮರವನ್ನು ಉಪಯೋಗಿಸುತ್ತಾರೆ. ಆನೆಯ ಕುತ್ತಿಗೆಗೂ ಬೆನ್ನಿಗೂ ಸರಪಣಿಗಳನ್ನು ಬಿಗಿದು ಈ ಸರಪಳಿಗಳ ತುದಿಯನ್ನು ಮೇಲ್ಛಾವಣೆಗೆ ಕಟ್ಟುತ್ತಾರೆ. ಬೇರೆ ಯಾವ ರೀತಿಯಲ್ಲಿ ಕಟ್ಟಿದರೂ ಆನೆಗಳು ಬಿಚ್ಚಿಕೊಳ್ಳುತ್ತವೆ. ಮುಂಗಾಲುಗಳನ್ನು ಸರಪಣಿಗಳನ್ನು ಕಟ್ಟುತ್ತಾರೆ.

ಆನೆಗಳನ್ನು ಹಿಡಿಯುವ ವಿಧಾನ ಈ ರೀತಿ ಇದೆ. ಆನೆ ನೀರು ಕುಡಿಯಲು ಹೋಗುವ ದಾರಿಗೆ ಅಡ್ಡವಾಗಿ ಕಂದಕ ಅಗೆದು ಅದರ ಬಾಯನ್ನು ಹುಸಿಯಾಗಿ ಮುಚ್ಚುತ್ತಾರೆ.

ಇದನ್ನು ಅರಿಯದ ಆನೆ ಕಂದಕದ ಒಳಕ್ಕೆ ಬೀಳುತ್ತದೆ. ಹೀಗೆ ಬಿದ್ದ ಆನೆಯ ಬಳಿಗೆ ಎರಡು ಮೂರು ದಿವಸಗಳು ಯಾರೂ ಹೋಗುವುದಿಲ್ಲ. ಅನಂತರ ಒಬ್ಬನು ಆನೆಯ ಬಳಿಗೆ ಹೋಗಿ ಅದನ್ನು ಕೋಲಿನಿಂದ ಚೆನ್ನಾಗಿ ಹೊಡೆಯುತ್ತಾನೆ. ಆಗ ಮತ್ತೊಬ್ಬನು ಕಾಣಿಸಿಕೊಂಡು ಹೊಡೆಯುತ್ತಿರುವವನನ್ನು ಅಟ್ಟಿಸಿಕೊಂಡು ಹೋಗಿ ಅವನ ಕೈಯಲ್ಲಿರುವ ದೊಣ್ಣೆಯನ್ನು ಕಿತ್ತು ದೂರ ಎಸೆಯುತ್ತಾನೆ. ಹೀಗೆ ಮಾಡಿದ ಮೇಲೆ ಆನೆಗೆ ಸ್ವಲ್ಪ ಮೇವು ಹಾಕಿ ಹೊರಟು ಹೋಗುತ್ತಾನೆ. ಹಲವಾರು ದಿವಸಗಳು ಹೀಗೆ ಒಬ್ಬನು ಆನೆಯನ್ನು ಹೊಡೆಯುವುದೂ ಮತ್ತೊಬ್ಬನು ಅದನ್ನು ತಪ್ಪಿಸುವುದೂ ನಡೆಯುತ್ತದೆ. ಹೀಗೆ ಮಾಡುವುದರಿಂದ ಹೊಡೆತವನ್ನು ತಪ್ಪಿಸಿದವನೊಡನೆ ಆನೆ ಒಗ್ಗಿಕೊಳ್ಳುತ್ತದೆ. ಅವನು ದಿನೇ ದಿನೇ ಆನೆಯ ಬಳಿಗೆ ಬಂದು ಮೈತುರಿಸಿ ಅದಕ್ಕೆ ಇಷ್ಟವಾದ ಹಣ್ಣುಗಳನ್ನು ಕೊಟ್ಟು ಪಳಗಿಸಿದ ಮೇಲೆ ಅದರ ಕೊಳರಳಿಗೆ ಸರಪಳಿಯನ್ನು ಹಾಕುತ್ತಾನೆ.

ಈ ರೀತಿ ಹಿಡಿದ ಒಂದು ಆನೆ ತಪ್ಪಿಸಿಕೊಂಡು ಕಾಡಿಗೆ ಓಡಿಹೋದ ಕಥೆಯೊಂದಿದೆ. ಇದನ್ನು ಅಟ್ಟಿಸಿಕೊಂಡು ಹೋದ ಮಾವುತ ಮತ್ತೊಮ್ಮೆ ಅದನ್ನು ಹಿಡಿಯಬೇಕೆಂದು ದಾರಿಗೆ ಅಡ್ಡವಾಗಿ ಕಂದಕವನ್ನು ಅಗೆದನು. ಈ ಮೋಸವನ್ನು ಅರಿತ ಆನೆ ದೊಡ್ಡ ಮರದ ದಿಮ್ಮಿಯನ್ನು ಸೊಂಡಲಲ್ಲಿ ಹಿಡಿದು ತನ್ನ ಮುಂದೆ ಹೆಜ್ಜೆ ಹೆಜ್ಜೆಗೆ ಇಟ್ಟುಕೊಂಡು ನೆಲವು ಭದ್ರವಾಗಿರುವುದೇ ಇಲ್ಲವೇ ಎಂದು ನಿರ್ಧರಿಸಿಕೊಳ್ಳುತ್ತಾ ನೀರು ಕುಡಿಯುವ ಸ್ಥಳಕ್ಕೆ ಹೋಯಿತು. ಇದನ್ನು ಹೇಗಾದರೂ ಮಾಡಿ ಹಿಡಿಯಬೇಕೆಂದು ಮಾವಟಿಗನು ನಿರ್ಧರಿಸಿದನು. ಆನೆಯು ಹೋಗುವ ದಾರಿಯಲ್ಲಿದ್ದ ಮರವೊಂದರ ಮೇಲೆ ಕುಳಿತು ಅದು ಮರದಡಿಗೆ ಬಂದಾಗ ಆನೆಯ ಮೇಲಕ್ಕೆ ಧುಮುಕಿ ಅದಕ್ಕೆ ಕಟ್ಟಿದ್ದ ಹಗ್ಗಗಳನ್ನು ಭದ್ರವಾಗಿ ಹಿಡಿದುಕೊಂಡನು. ಅವನನ್ನು ಎಸೆಯುವುದಕ್ಕೆ ಆನೆ ಎಷ್ಟೋ ಪ್ರಯತ್ನಪಟ್ಟಿತು. ಎಡಗಡೆ ಆನೆ ಹೊರಳಿದರೆ ಅವನು ಬಲಗಡೆ ಹೊರಳುತ್ತಿದ್ದ ; ಬಲಗಡೆ ಹೊರಳಿದರೆ ಎಡಗಡೆ ಹೊರಳುತ್ತಿದ್ದ. ಈ ಮಧ್ಯೆ ತಲೆಯನ್ನು ಅಂಕುಶದಿಂದ ತಿವಿಯುತ್ತಿದ್ದ. ಕೊನೆಗೆ ಆಸೆ ಸುಸ್ತಾಗಿ ಮಾವಟಿಗನ ಸರಪಳಿಗಳಿಂದ ಬಂಧಿತವಾಯಿತು. ಹೀಗೆ ಬಂಧಿತವಾದ ಆನೆಯನ್ನು ರಾಜನ ಮುಂದೆ ಹಿಡಿದುಕೊಂಡು ಹೋದಾಗ ರಾಜನು ಅವನಿಗೆ ಉದಾರವಾಗಿ ಬಹುಮಾನ ಕೊಟ್ಟನು.

ಹಿಂದೂಸ್ಥಾನದ ರಾಜರುಗಳು ಕೂಡ ಆನೆಯ ಬೇಟೆಯಲ್ಲಿ ಭಾಗವಹಿಸುತ್ತಾರೆ. ತಿಂಗಳುಗಟ್ಟಲೆ ಕಾಡಿನಲ್ಲಿದ್ದುಕೊಂಡು ಆನೆಗಳನ್ನು ಹಿಡಿದು ತಮಗೆ ಬೇಕಾದ ಆನೆ ಸಿಕ್ಕಾಗ ಹೆಮ್ಮೆಪಡುತ್ತಾರೆ. ಅಪರಾಧಿಗಳನ್ನು ಶಿಕ್ಷಿಸಲು ಒಮ್ಮೊಮ್ಮೆ ಅವರನ್ನು ಆನೆ ಕಾಲಕೆಳಕ್ಕೆ ಎಸೆಯುತ್ತಾರೆ. ಆನೆ ಅವರನ್ನು ಕಾಲಿನಿಂದ ಒಸಗಿ ಸೊಂಡಿಲಿನಿಂದ ಹರಿದು ಚಿಂದಿ ಚಿಂದಿ ಮಾಡಿಬಿಡುತ್ತದೆ. ಆನೆಯ ವ್ಯಾಪಾರದಲ್ಲಿ ನಿರತರಾದ ವರ್ತಕರು ಸೆರೆನ್‌ದಿಬ್‌ಗೆ ಹೋಗಿ ಅಲ್ಲಿ ಆನೆಗಳನ್ನು ಕೊಂಡು ನಾನಾ ದೇಶಗಳಿಗೆ ಮಾರುತ್ತಾರೆ. ಆನೆಗೆ ಗಜಕ್ಕೆ ಇಷ್ಟು ಎಂದು ಬೆಲೆ ಕಟ್ಟುತ್ತಾರೆ."[೪]

ಅಬ್ದುಲ್ ರಜಾಕ್ ಸಾಮಾಜಿಕ ಜೀವನವನ್ನು ಮರೆತವನಲ್ಲ, ಅವನು ಅನೇಕ ಸಂಗತಿಗಳನ್ನು ಹೇಳುತ್ತಾನೆ. ತಾಂಬೂಲ ಅಥವಾ ವೀಳೆಯದ ಬಗೆಗೆ ಅವನು ಕೊಡುವ ವಿವರಗಳು ಕುತೂಹಲಕರವಾಗಿವೆ. ಮಧ್ಯಕಾಲೀನ ಸಾಮಾಜಿಕ ಜೀವನವನ್ನು ತಿಳಿಯಲು ಇವು ಪ್ರೇರಕವಾಗಿವೆ. ಅದಕ್ಕೆ ರಜಾಕ್ ಈ ರೀತಿಯಾಗಿ ಹೇಳುವನು: "ದರಬ್‌ಖಾನೆಗೆ ಎದುರಾಗಿ ರಾಜ್ಯಪಾಲನ ಮನೆಯಿದೆ. ಇಲ್ಲಿ ಹನ್ನೆರಡು ಸಾವಿರ ಸೈನಿಕರು ಕಾವಲು ಕಾಯುತ್ತಾರೆ. ಪ್ರತಿಯೊಬ್ಬರಿಗೂ ಒಂದು ದಿನಕ್ಕೆ ಒಂದು ಪನಂ ಸಂಬಳ ಕೊಡುತ್ತಾರೆ. ಈ ಸಂಬಳಕ್ಕೆ ಬೇಕಾದ ಹಣ ವೇಶ್ಯಾಗೃಹಗಳ ಮೇಲೆ ಹಾಕಿದ ತೆರಿಗೆಯಿಂದ ಬರುತ್ತದೆ. ಈ ವೇಶ್ಯಾಗೃಹಗಳ ಭವ್ಯತೆಯನ್ನೂ, ಈ ಗೃಹಗಳಲ್ಲಿರುವ ಯುವತಿಯರ ಸೌಂದರ್ಯವನ್ನೂ, ಅವರ ಹಾವಭಾವ ವಿಲಾಸಗಳನ್ನೂ ವರ್ಣಿಸಲು ಸಾಧ್ಯವಿಲ್ಲ. ಕೆಲವು ವಿಚಾರಗಳನ್ನು ಮಾತ್ರ ನಾನು ಹೇಳುತ್ತೇನೆ. ದರಬ್‌ಖಾನೆಯ ಹಿಂಭಾಗದಲ್ಲಿ ಮುನ್ನೂರು ಗಜಕ್ಕಿಂತಲೂ ಹೆಚ್ಚು ಉದ್ದವಾದ ಇಪ್ಪತ್ತು ಗಜಕ್ಕಿಂತಲೂ ಹೆಚ್ಚು ಅಗಲವಾದ ಒಂದು ತರಹ ಅಂಗಡಿ ಬೀದಿ ಇದೆ. ಇವುಗಳ ಮುಂದೆ ಸಿಂಹಾಸನದೋಪಾದಿಯಲ್ಲಿ ಅಂದವಾದ ಶಿಲೆಗಳಿಂದ ಕಟ್ಟಿದ ಪೀಠಗಳಿವೆ. ಗೃಹಗಳ ಸಾಲಿನ ಎರಡೂ ಕಡೆಯೂ ಸಿಂಹ, ಹುಲಿ, ಚಿರತೆ ಮತ್ತು ಇತರ ಪ್ರಾಣಿಗಳ ಚಿತ್ರಗಳನ್ನು ಚಿತ್ರಿಸಿದ್ದಾರೆ. ಈ ಚಿತ್ರಗಳನ್ನು ಎಷ್ಟು ಚೆನ್ನಾಗಿ ಬರೆದಿದ್ದಾರೆಂದರೆ ಮತ್ತು ಇವು ಎಷ್ಟು ಸ್ವಾಭಾವಿಕವಾಗಿ ಕಾಣುತ್ತವೆ ಎಂದರೆ ಇವು ಜೀವಂತ ಪ್ರಾಣಿಗಳೋ ಎಂದು ಭಾಸವಾಗುತ್ತವೆ. ಮಧ್ಯಾಹ್ನವಾದ ಮೇಲೆ ಭವ್ಯವಾಗಿ ಸಿಂಗರಿಸಿದ ಈ ಗೃಹಗಳ ಮುಂದೆ ವೇಶ್ಯಾಂಗನೆಯರು ಮೇಲೆ ತಿಳಿಸಿದ ಪೀಠಗಳ ಮೇಲೆ ಕುಳಿತುಕೊಳ್ಳುತ್ತಾರೆ. ಈ ವೇಶ್ಯೆಯರು ಬೆಲೆಯಾದ ಮುತ್ತು ಮಾಣಿಕ್ಯಗಳಿಂದಲೂ ವಸ್ತ್ರಗಳಿಂದಲೂ ಅಲಂಕೃತರಾಗಿರುತ್ತಾರೆ. ಇವರು ನವಯೌವ್ವನೆಯರು ಹಾಗೂ ಬಹುರೂಪವತಿಯರು. ಪ್ರತಿಯೊಬ್ಬ ವೇಶ್ಯೆಯ ಬಳಿ ಇಬ್ಬರು ದಾಸಿಯರು ಇದ್ದು ಮನರಂಜನೆಯನ್ನುಂಟು ಮಾಡುತ್ತಾರೆ. ಯಾರು ಬೇಕಾದರೂ ಈ ಬೀದಿಗೆ ಬಂದು ತನಗೆ ಮೆಚ್ಚುಗೆಯಾದ ವೇಶ್ಯೆಯನ್ನು ಆರಿಸಿಕೊಂಡು ಅವಳೊಡನೆ ಕಾಲಕಳೆಯಬಹುದು. ಆತನ ಬಳಿ ಇರುವ ಸಾಮಾನುಗಳನ್ನೆಲ್ಲಾ ಈ ವೇಶ್ಯಾಗೃಹಗಳ ಮೇಲ್ವಿಚಾರಕರ ಬಳಿ ಇಟ್ಟು ಹೋಗಬೇಕು. ಹೀಗೆ ಇಟ್ಟ ಸಾಮಾನುಗಳು ಗೈರುವಿಲೆಯಾದರೆ ಮೇಲ್ವಿಚಾರಕರೇ ಜವಾಬ್ದಾರರು.

ಈ ನಗರದ ಏಳು ಕೋಟೆಗಳಲ್ಲಿಯೂ ಈ ತರಹ ಅನೇಕ ವೇಶ್ಯಾಗೃಹಗಳಿವೆ. ಈ ವೇಶ್ಯಾಗೃಹಗಳ ಮೇಲೆ ಹಾಕಿದ ತೆರಿಗೆಯಿಂದ ಹನ್ನೆರಡು ಸಾವಿರ ಫನಂ ಆದಾಯ ಬರುತ್ತದೆ. ಈ ಹಣವನ್ನು ಪಹರೆಯವರಿಗೆ ಸಂಬಳವಾಗಿ ಕೊಡುತ್ತಾರೆ. ಈ ಪಹರೆಯವರು ಕೋಟೆಯೊಳಗೆ ನಡೆಯುವ ಎಲ್ಲಾ ವಿಚಾರಗಳನ್ನೂ ತಿಳಿದುಕೊಳ್ಳಬೇಕು; ಕಳವುಗಳನ್ನು ಪತ್ತೆ ಹಚ್ಚಿ ವರದಿ ಮಾಡಬೇಕು. ಹಾಗೆ ಮಾಡದೆ ಹೋದರೆ ಆ ಮಾಲಿನ ಬೆಲೆಯನ್ನು ಮಾಲೀಕರಿಗೆ ಕೊಡಬೇಕು. ನನ್ನ ಸಹಪಾಠಿಗಳು ಕೊಂಡುಕೊಂಡಿದ್ದ ಕೆಲವು ಗುಲಾಮರು ಓಡಿಹೋಗಿ

ಬಿಟ್ಟರು. ಈ ವಿಚಾರವನ್ನು ಕೊತ್ವಾಲನಿಗೆ ತಿಳಿಸಿದೆವು. ನಮ್ಮ ಬಿಡಾರಗಳನ್ನು ನೋಡಿಕೊಳ್ಳುತ್ತಿದ್ದ ಪಹರೆ ನಾಯಕನಿಗೆ ತಪ್ಪಿಸಿಕೊಂಡು ಹೋದ ಗುಲಾಮರನ್ನು ಹಿಡಿದು ತರಬೇಕು. ಇಲ್ಲವೆ ಅವರ ಬೆಲೆಯನ್ನು ಕಟ್ಟಿಕೊಡಬೇಕು ಎಂದು ಆತ ಆಜ್ಞೆ ಮಾಡಿದ. ಗುಲಾಮರ ಬೆಲೆ ಎಷ್ಟು ಎಂದು ಪಹರೆಯವರು ತಿಳಿದುಕೊಂಡು ಆ ಬೆಲೆಯನ್ನು ಕೊಟ್ಟುಬಿಟ್ಟರು.

ನಾನು ಚಾಲ್ತಿಜಾ ತಿಂಗಳ ಕೊನೆಯಲ್ಲಿ (ಕ್ರಿ.ಶ.೧೪೪೩ನೇ ಎಪ್ರಿಲ್ ತಿಂಗಳಿನ ಕೊನೆಯಲ್ಲಿ) ಈ ಮಹಾನಗರಕ್ಕೆ ಬಂದೆ. ನನಗೆ ಮೀಸಲಾಗಿಟ್ಟಿದ ಬಹಳ ದೊಡ್ಡ ಮನೆಯೊಂದರಲ್ಲಿ ಬಿಡಾರ ಮಾಡಿದೆ. ಹೆರಾತ್ ನಗರದ ಅರಮನೆಯ ಹೆಬ್ಬಾಗಿಲ ಮೇಲೆ ಕಾಣುವ ಮನೆಯೊಂದರಂತೆ ಇತ್ತು ನನ್ನ ಬಿಡಾರದ ಮನೆ. ಹಲವಾರು ದಿನಗಳು ವಿಶ್ರಾಂತಿ ಪಡೆದು ಪ್ರಯಾಣದ ಆಯಾಸವನ್ನು ಪರಿಹಾರ ಮಾಡಿಕೊಂಡೆ.

ಒಂದು ದಿನ ರಾಜನು ದೂತರ ಮೂಲಕ ನನಗೆ ಪತ್ರ ಕಳುಹಿಸಿದನು. ಅದೇ ದಿನ ಸಾಯಂಕಾಲ ನಾನು ರಾಜನನ್ನು ನೋಡಲು ಹೋದೆ. ನಾನು ರಾಜನಿಗೆ ಸುಂದರವಾದ ಕುದುರೆಗಳನ್ನೂ ಬೆಲೆಯಾದ ಡಮಾಸ್ಕ್ ಮತ್ತು ಸಾಟಿನ್ ಬಟ್ಟೆ ಥಾನುಗಳನ್ನೂ ಅರ್ಪಿಸಿದೆ. ರಾಜನು ಸಭಾಮಂಟಪದಲ್ಲಿ ಕುಳಿತು ಭವ್ಯವಾದ ವೈಭವದೊಡಗೂಡಿ ಒಡ್ಡೈಸುತ್ತಿದ್ದನು. ಅವನ ಎಡಗಡೆ ಮತ್ತು ಬಲಗಡೆ ಚಕ್ರಾಕಾರವಾಗಿ ಅಸಂಖ್ಯಾತ ಜನಸಂದಣಿ ಸೇರಿತ್ತು. ರಾಜನು ಹಸುರು ಬಣ್ಣದ ಸ್ಯಾಟಿನ್‌ಬಟ್ಟೆ ಉಡುಪು ಧರಿಸಿದ್ದನು. ಕೊರಳಿನ ಸುತ್ತ ವಜ್ರ ವೈಢೂರ್ಯಗಳ ಹಾಗೂ ಮುತ್ತುಗಳ ಕೊರಳಪಟ್ಟಿಯನ್ನು ಹಾಕಿಕೊಂಡಿದ್ದನು. ಅವನ ಮೈಬಣ್ಣ ಎಣ್ಣೆಗೆಂಪಾಗಿತ್ತು. ತೆಳ್ಳಗೆ ಸ್ವಲ್ಪ ಉದ್ದವಾಗಿದ್ದನು. ಕೆನ್ನೆಗಳು ಕೊಂಚ ಕುಳಿಯಾಗಿದ್ದವು. ಆದರೆ ಗಡ್ಡ ಬೆಳೆಸಿರಲಿಲ್ಲ. ಅವನ ಮುಖಭಾವ ಸೌಮ್ಯವಾಗಿತ್ತು.

ರಾಜನ ಮುಂದೆ ನನ್ನನ್ನು ಕರೆದುಕೊಂಡು ಹೋಗಲು ನಾನು ತಲೆ ಬಗ್ಗಿಸಿ ಮೂರು ಸಲ ನಮಸ್ಕಾರ ಮಾಡಿದೆ. ರಾಜನು ನನ್ನನ್ನು ಪ್ರೀತಿಯಿಂದ ಸ್ವಾಗತಿಸಿ ತನಗೆ ಬಹು ಸಮೀಪದಲ್ಲಿದ್ದ ಪೀಠದಲ್ಲಿ ಕುಳಿತುಕೊಳ್ಳುವಂತೆ ಅಪ್ಪಣೆ ಮಾಡಿದನು. ನಾನು ನನ್ನ ರಾಜನಿಂದ ತಂದಿದ್ದ ಪತ್ರವನ್ನು ಅವನ ಕೈಗೆ ಕೊಟ್ಟಾಗ ರಾಜ ಅದನ್ನು ತನ್ನ ದುಭಾಷಿಗೆ ಕೊಟ್ಟು 'ದೊಡ್ಡ ರಾಜನೊಬ್ಬ ನಮ್ಮ ಬಳಿಗೆ ರಾಯಭಾರಿಯನ್ನು ಕಳುಹಿಸಿರುವುದು ನಮ್ಮ ಮನಸ್ಸಿಗೆ ನಿಜವಾಗಿಯೂ ಸಂತೋಷವಾಗಿದೆ' ಎಂದನು.

ಸೆಖೆಯಿಂದಲೂ, ಧರಿಸಿದ್ದ ಅನೇಕ ಉಡುಪುಗಳ ಕಾರಣದಿಂದಲೂ ನಾನು ಬೆವೆತು ಒದ್ದೆಯಾಗಿ ಒದ್ದಾಡುತ್ತಿದ್ದುದನ್ನು ನೋಡಿ ರಾಜನು ಕನಿಕರಪಟ್ಟು ತನ್ನ ಕೈಯಲ್ಲಿದ್ದಂಥ ಬೀಸಣಿಗೆಯೊಂದನ್ನು ನನಗೆ ಕೊಡಿಸಿಕೊಟ್ಟನು. ಅನಂತರ ಹರಿವಾಣದಲ್ಲಿ ಎರಡು ಕಟ್ಟು ವೀಳೆಯದೆಲೆ, ಐದುನೂರು ಫನಂ ನಾಣ್ಯಗಳುಳ್ಳ ಚೀಲ ಮತ್ತು ಇಪ್ಪತ್ತು ಮಿತ್‌ಕಾಲ್ ತೂಕದಷ್ಟು ಕರ್ಪೂರವನ್ನಿಟ್ಟು ಸಾಮಾನ್ಯನಾದ ನನ್ನನ್ನು ಗೌರವಿಸಿದನು. ಅನಂತರ ನಾನು ಅನುಮತಿ ಪಡೆದು ಬಿಡದಿಗೆ ಹಿಂದಿರುಗಿದೆ.

ಇಲ್ಲಿಯವರೆಗೆ ನನ್ನ ಬಿಡದಿಯ ಗ್ರಾಸಕ್ಕಾಗಿ ಪ್ರತಿನಿತ್ಯ ಎರಡು ಕುರಿ, ನಾಲ್ಕು ಜೊತೆ ಕೋಳಿ, ಐದು ಮಣ ಅಕ್ಕಿ, ಒಂದು ಮಣ ಬೆಣ್ಣೆ, ಒಂದು ಮಣ ಸಕ್ಕರೆ, ಎರಡು ಚಿನ್ನದ ವರಾಹಗಳನ್ನು ಕೊಡುತ್ತಿದ್ದರು. ಅನಂತರವೂ ಇಷ್ಟನ್ನು ಮುಂದುವರಿಸಿಕೊಂಡು ಹೋಗಲಾಯಿತು. ವಾರಕ್ಕೆ ಎರಡು ಸಲ ಸಂಜೆಯ ಹೊತ್ತು ರಾಜನು ನನಗೆ ಹೇಳಿಕಳುಹಿಸಿ ನನ್ನ ದೊರೆಯಾದ ಖಾಖಾನನ ಬಗ್ಗೆ ಪ್ರಶ್ನೆಗಳನ್ನು ಹಾಕಿ ವಿಚಾರಗಳನ್ನು ತಿಳಿದುಕೊಳ್ಳುತ್ತಿದ್ದನು. ಹೋದಾಗಲೆಲ್ಲಾ ಒಂದುಕಟ್ಟು ವೀಳೆಯದೆಲೆ, ಫನಂ ನಾಣ್ಯಗಳ ಚೀಲ ಮತ್ತು ಒಂದಿಷ್ಟು ಮಿತ್ಕಾಲ್ ಕರ್ಪೂರ ಬಹುಮಾನವಾಗಿ ಸಿಕ್ಕುತ್ತಿತ್ತು. ರಾಜನು ತನ್ನ ದುಭಾಷಿಯ ಮೂಲಕ ನನ್ನನ್ನು ಕುರಿತು 'ನಿಮ್ಮ ರಾಜರುಗಳು ರಾಯಭಾರಿಯನ್ನು ಕರೆದು ಅವನೊಡನೆ ಸಹಭೋಜನ ಮಾಡುತ್ತಾರೆ. ಆದರೆ ನಾವು ನಿಮ್ಮೊಡನೆ ಸಹಭೋಜನ ಮಾಡಬಾರದು. ಆದ್ದರಿಂದ ಅದರ ಬದಲು ಈ ಚಿನ್ನದ ನಾಣ್ಯಗಳ ಚೀಲವೇ ನಾವು ರಾಯಭಾರಿಗಳಿಗೆ ಕೊಡುವ ಸಹಭೋಜನ' ಎಂದು ಹೇಳಿದನು.

ವೀಳೆಯದೆಲೆಯನ್ನು ಹಿಂದೂಸ್ಥಾನ, ಅರಬ್ಬೀದೇಶದ ಬಹುಭಾಗ, ಓರ್ಮಸ್ ರಾಜ್ಯ – ಈ ಕಡೆಗಳ ಜನರು ಬಹಳ ಆಸೆಯಿಂದ ಉಪಯೋಗಿಸುತ್ತಾರೆ. ನಿಜವಾಗಿಯೂ ಅದರಲ್ಲಿ ಒಳ್ಳೆಯ ಗುಣಗಳಿರುವುದರಿಂದ ಅದಕ್ಕೆ ಇಷ್ಟು ಪ್ರಾಶಸ್ತ್ಯ. ಇದನ್ನು ಉಪಯೋಗಿಸುವ ರೀತಿ ಹೀಗಿದೆ : ಸಿಪಾರಿ (ಸುಪಾರಿ) ಎಂದು ಕರೆಯುವ ಅಡಕೆಯನ್ನು ಸ್ವಲ್ಪ ಜಜ್ಜಿ ಬಾಯೊಳಕ್ಕೆ ಹಾಕಿಕೊಳ್ಳುತ್ತಾರೆ. ವೀಳೆಯದೆಲೆಗೆ ಸುಣ್ಣವನ್ನು ಹಚ್ಚಿ ಸುರುಳಿಮಾಡಿ ಬಾಯಲ್ಲಿಟ್ಟು ಅಗಿಯುತ್ತಾರೆ. ಒಂದೊಂದು ಸಲ ನಾಲ್ಕಾರು ಎಲೆಗಳನ್ನು ಒಟ್ಟಿಗೆ ಬಾಯಲ್ಲಿ ಹಾಕಿಕೊಂಡು ಅಗಿಯುವುದುಂಟು. ಕೆಲವು ವೇಳೆ ಪಚ್ಚ ಕರ್ಪೂರ ಸೇರಿಸಿಕೊಳ್ಳುತ್ತಾರೆ. ರಸವನ್ನು ಒಮ್ಮೊಮ್ಮೆ ಉಗಿಯುತ್ತಾರೆ. ಅದು ಕೆಂಪು ಬಣ್ಣಕ್ಕಿರುತ್ತದೆ. ವೀಳೆಯವನ್ನು ಹಾಕಿಕೊಂಡಾಗ ಮುಖವು ಬಣ್ಣವೇರಿ ತೇಜಸ್ಸು ಕಾಣಿಸುತ್ತದೆ. ದ್ರಾಕ್ಷಾರಸವನ್ನು ಕುಡಿದರೆ ಬರುವಂಥ ಅಮಲು ಬರುತ್ತದೆ. ಹೊಟ್ಟೆ ತುಂಬ ಉಂಟಾದಾಗ ಇದನ್ನು ಹಾಕಿಕೊಂಡರೆ ಆಹಾರವನ್ನು ಜೀರ್ಣ ಮಾಡುತ್ತದೆ. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಹಲ್ಲುಗಳಿಗೆ ಶಕ್ತಿ ಕೊಡುತ್ತದೆ. ವೀಳೆಯದೆಲೆ ಎಷ್ಟು ಬಲವರ್ಧಕ, ಎಷ್ಟು ಕಾಮೋತ್ತೇಜಕ ಎಂಬುದನ್ನು ವರ್ಣಿಸಲಾರೆ. ಬಹುಶಃ ಈ ವೀಳೆಯದೆಲೆಯ ಗುಣವೇ ಕಾರಣ ಇರಬೇಕು. ಈ ದೇಶದ ದೊರೆ ತನ್ನ ಅಂತಃಪುರದಲ್ಲಿ ಲೆಕ್ಕವಿಲ್ಲದಷ್ಟು ಸ್ತ್ರೀಯರನ್ನು ಇಟ್ಟುಕೊಂಡಿರುವುದಕ್ಕೆ.

ಜನಗಳು ಹೇಳುವುದು ನಿಜವಾದರೆ, ರಾಜನ ಅಂತಃಪುರದಲ್ಲಿ ಇರುವ ರಾಣಿಯರು ಮತ್ತು ಇಟ್ಟುಕೊಂಡವರು ಏಳುನೂರು ಜನರಿದ್ದಾರೆ. ಅಂತಃಪುರಕ್ಕೆ ಹತ್ತು ವರ್ಷ ಮೀರಿದ ಮಗುವಿಗೆ ಪ್ರವೇಶವಿಲ್ಲ. ಪ್ರತಿಯೊಬ್ಬಳಿಗೂ ಬೇರೆ ಬೇರೆ ವಾಸಗೃಹ. ಇಬ್ಬರನ್ನು ಒಂದೇ ಮನೆಯಲ್ಲಿ ಇಡುವುದಿಲ್ಲ. ಪ್ರತಿಯೊಬ್ಬರಿಗೂ ಬೇರೆ ಬೇರೆ ಊಟೋಪಚಾರ ಇತ್ಯಾದಿ. ದೇಶದಲ್ಲಿ ಎಲ್ಲಿಯಾದರೂ ಸರಿಯೆ, ರೂಪವತಿಯಾದ ಹುಡುಗಿ ಇದ್ದಾಳೆಂದು ಗೊತ್ತಾದರೆ ಆಕೆಯ ತಂದೆ ತಾಯಿಗಳ ಒಪ್ಪಿಗೆ ಪಡೆದ ಕೂಡಲೇ ಆಕೆಯನ್ನು ವೈಭವಯುತವಾಗಿ ಕರೆದು

ತಂದು ಅಂತಃಪುರಕ್ಕೆ ಸೇರಿಸುತ್ತಾರೆ. ಅಂದಿನಿಂದ ಮತ್ಯಾರೂ ಆಕೆಯನ್ನು ನೋಡುವಂತಿಲ್ಲ. ಆದರೆ ಆಕೆಗೆ ಅಂತಃಪುರದಲ್ಲಿ ಅತ್ಯುನ್ನತವಾದ ಗೌರವ ದೊರೆಯುತ್ತದೆ."[೨]

ವಿಜಯನಗರ ಸಾಮ್ರಾಜ್ಯದಲ್ಲಿ ನಡೆಯುವ ಮಹಾನವಮಿ ಹಬ್ಬವನ್ನು ಕುರಿತು ರಜಾಕನು "ಆಡಳಿತ ನಡೆಸುವ ಈ ದೇಶದ ವಿಗ್ರಹಾರಾಧಕರು ತಮ್ಮ ಗೌರವ ಪ್ರತಿಷ್ಠೆ, ತಮ್ಮ ಅಧಿಕಾರ, ತಮ್ಮ ದರ್ಪ ಮತ್ತು ತಮ್ಮ ವೈಭವ ಪ್ರದರ್ಶನಕ್ಕಾಗಿ ಪ್ರತಿ ವರ್ಷವೂ ಮಹಾನದಿ (ಮಹಾನವಮಿ) ಎಂಬ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬ ನಿಜವಾಗಿಯೂ ಒಬ್ಬ ಚಕ್ರವರ್ತಿಗೆ ಯೋಗ್ಯವಾದ ಹಬ್ಬವೇ ಸರಿ. ಇದನ್ನು ಆಚರಿಸುವ ರೀತಿ ಹೀಗಿದೆ: ಬಿಜನಗರದ ರಾಜನ ಅಪ್ಪಣೆಯಂತೆ ಮೂರು ತಿಂಗಳು ಪ್ರಯಾಣದಷ್ಟು ವಿಸ್ತಾರವಾದ ಅವನ ರಾಜ್ಯದ ಎಲ್ಲಾ ಕಡೆಗಳಿಂದ ಮಾಂಡಲಿಕರೂ, ಸರದಾರರೂ ಮತ್ತು ಮುಖ್ಯಸ್ಥರೂ ರಾಜಧಾನಿಗೆ ಬರುತ್ತಾರೆ. ಅವರು ಬರುವಾಗ ಸಾವಿರಾರು ಆನೆಗಳ ಸಮೇತ ಬರುತ್ತಾರೆ. ಹೀಗೆ ಸೇರಿದ ಆನೆಗಳ ಸಮೂಹ ಅಲ್ಲೋಲ ಕಲ್ಲೋಲವಾದ ಸಮುದ್ರವನ್ನು ಅಥವಾ ಬಿರುಗಾಳಿಗೆ ತುತ್ತಾದ ಮೇಘವನ್ನು ಹೋಲುತ್ತದೆ. ಆನೆಗಳಿಗೆ ಸೊಗಸಾದ ಹೊದಿಕೆಗಳನ್ನು ಹೊಂದಿಸಿ ಬೆನ್ನಿಗೆ ಅಂಬಾರಿಗಳನ್ನು ಬಿಗಿದಿರುತ್ತಾರೆ. ಈ ಅಂಬಾರಿಗಳಲ್ಲಿ ದೊಂಬರೂ, ನಾನಾ ಆಟ ಚತುರರೂ ಕುಳಿತುಕೊಳ್ಳುತ್ತಾರೆ. ಆನೆ ಸೊಂಡಿಲು ಮತ್ತು ಕಿವಿಗಳ ಮೇಲೆ ರಸಸಿಂಧೂರ ಮತ್ತು ಇತರ ಬಣ್ಣಗಳನ್ನು ಸೇರಿಸಿ ಅಪೂರ್ವವೂ ಆಶ್ಚರ್ಯವೂ ಆದ ರೀತಿಯಲ್ಲಿ ಅಲಂಕಾರ ಮಾಡುತ್ತಾರೆ.

ರಾಜಬ್ ತಿಂಗಳಲ್ಲಿ ನಿರ್ಧಾರವಾದ ದಿನ ಈ ಆನೆಗಳೂ ನಾನಾ ಕಡೆಯಿಂದ ಬಂದ ಸೇನಾನಾಯಕರುಗಳೂ ಪ್ರಮುಖ ವ್ಯಕ್ತಿಗಳೂ ಪಂಡಿತರಾದ ಬ್ರಾಹ್ಮಣರೂ ಅರಮನೆಯಲ್ಲಿ ನೆರೆಯುತ್ತಾರೆ. ಅರಮನೆಯ ಮುಂದಿರುವ ವೈಭವಯುತವಾಗಿ ಅಲಂಕೃತವಾದ ಮೈದಾನವು ಅಸಂಖ್ಯಾತ ಆನೆಗಳ ಸೇರುವಿಕೆಯಿಂದ ಸಮುದ್ರದ ಅಲೆಗಳಂತೆ ಅಥವಾ ಪುನರುತ್ಥಾನದ ದಿನ ಸೇರುವ ಜನಸಂದಣಿಯಂತೆ ಕಾಣುತ್ತದೆ. ಅರಮನೆಯ ಮುಂದಿನ ವಿಶಾಲವಾದ ಪ್ರದೇಶದಲ್ಲಿ ಮೂರು, ನಾಲ್ಕು ಮತ್ತು ಐದು ಅಂತಸ್ತಿನ ಅನೇಕ ರಂಗಮಂಟಪಗಳನ್ನು ನಿರ್ಮಿಸುತ್ತಾರೆ. ಈ ರಂಗಮಂಟಪಗಳನ್ನು ಮೇಲಿನಿಂದ ಕೆಳಗಿನವರೆಗೆ ನಾನಾ ಚಿತ್ರಗಳಿಂದ ಅಲಂಕರಿಸುತ್ತಾರೆ. ಮನಸ್ಸು ಊಹಿಸಬಹುದಾದ ಎಲ್ಲಾ ಪ್ರಾಣಿಗಳ, ಅಂದರೆ ಮನುಷ್ಯರ, ಕಾಡುಪ್ರಾಣಿಗಳ, ಹಕ್ಕಿಗಳ ಕೊನೆಗೆ ನೊಣ ಮತ್ತು ಹುಳುಹುಪ್ಪಟೆಗಳ ಚಿತ್ರಗಳನ್ನು ಅದ್ಭುತವಾದ ಕಲಾಚತುರೆಯಿಂದ ಚಿತ್ರಿಸುತ್ತಾರೆ. ಕೆಲವು ಮಂಟಪಗಳನ್ನು ಯಾವ ರೀತಿ ನಿರ್ಮಿಸುತ್ತಾರೆಂದರೆ ಅವನ್ನು ಬೇಕೆಂದರೆ ಕ್ಷಿಪ್ರದಲ್ಲಿ ತಿರುಗಿಸಿ ಬೇರೊಂದು ಮುಖ ತೋರಿಸಬಹುದು. ಒಂದೊಂದು ಕ್ಷಣಕ್ಕೆ ಒಂದೊಂದು ತರಹ ಕೋಣೆ ಅಥವಾ ಹಜಾರ ಕಣ್ಣಿಗೆ ಕಾಣಿಸಿಕೊಳ್ಳುತ್ತದೆ.

ಈ ಪ್ರದೇಶದಲ್ಲಿ ಒಂಬತ್ತು ಭವ್ಯಾಲಂಕೃತ ಮಂಟಪಗಳು ಸಿದ್ಧವಾಗುತ್ತವೆ. ಒಂಬತ್ತನೇ ಮಂಟಪದಲ್ಲಿ ರಾಜನ ಸಿಂಹಾಸನವಿರುತ್ತದೆ. ಏಳನೇ ಮಂಟಪದಲ್ಲಿ ಈ ಕಥನ ಹೇಳುವ ಸಾಮಾನ್ಯನಾದ ನನಗೂ, ನನ್ನ ಸಹಪಾಠಿಗಳಿಗೂ ಜಾಗ ಮೀಸಲಾಗಿತ್ತು. ನಮ್ಮನ್ನು ಬಿಟ್ಟು

ಬೇರೆಯವರಿಗೆ ಅವಕಾಶವಿರಲಿಲ್ಲ. ಅರಮನೆಗೂ ಮಂಟಪಗಳಿಗೂ ಮಧ್ಯೆ ಬಹು ಸುಂದರವಾದ ಸ್ಥಳದಲ್ಲಿ ಗಾಯಕರೂ ಕತೆಗಾರರೂ ಹಾಡಯತ್ತಲೂ ಕಥೆ ಹೇಳುತ್ತಲೂ ಇದ್ದರು. ಹಾಡುಗಳನ್ನು ಸಾಮಾನ್ಯವಾಗಿ ಹೆಂಗಸರು ಹಾಡುತ್ತಾರೆ. ಪೂರ್ಣಚಂದ್ರನಂತೆ ತುಂಬಿದ ಕೆನ್ನೆಯ ಮತ್ತು ವಸಂತ ಋತುವಿಗಿಂತಲೂ ಆಹ್ಲಾದಕರವಾದ ಮುಖವುಳ್ಳ ಕೆಲವು ಚಿಕ್ಕ ಹೆಣ್ಣುಮಕ್ಕಳು ಸೊಗಸಾದ ಉಡುಪಿನಲ್ಲಿ ರಾಜನ ಎದುರಿಗಿದ್ದ ಸುಂದರವಾದ ಪರದೆಯ ಹಿಂದೆ ಇದ್ದರು. ಅವರು ಮನಸ್ಸನ್ನಾಕರ್ಷಿಸುವ ಹೊಚ್ಚ ಹೊಸ ಗುಲಾಬಿಯಂತಹ ತಮ್ಮ ಮುಖಭಾವಗಳನ್ನು ಪ್ರದರ್ಶಿಸಿ ನೋಟಕರ ಮನ ಸೆಳೆಯುತ್ತಿದ್ದರು. ಇದ್ದಕ್ಕಿದ್ದಂತೆ ಪರದೆ ಮೇಲೇರಿ ಕೆಳಗಿಳಿಯಿತು. ಹುಡುಗಿಯರು ತಮ್ಮ ಹಾವಭಾವ ವಿಲಾಸಗಳನ್ನು ತೋರಿಸುತ್ತಾ ನರ್ತನಕ್ಕೆ ಸಿದ್ಧರಾದರು. ಅವರ ಹಾವಭಾವ ಎಂಥವರನ್ನೂ ಮುಗ್ಧ ಮಾಡುವಂತಿತ್ತು.

ಡೊಂಬರು ಕೆಲವು ಅದ್ಭುತವಾದ ಚತುರತೆಯ ಆಟಗಳನ್ನು ಆಡಿದರು. ಭಾರಿ ಆನೆಯೊಂದು ಮರದ ತುಂಡಿನ ಮೇಲೆ ನಾಲ್ಕು ಕಾಲುಗಳನ್ನೂ ಒಂದೇ ಕಡೆ ಹಾಕಿ ನಿಂತುಕೊಂಡು ವಾದ್ಯಕ್ಕೆ ತಕ್ಕಂತೆ ತನ್ನ ಸೊಂಡಿಲನ್ನೂ ಮೈಯ್ಯನ್ನೂ ಕುಣಿಸಿತು. ತಕ್ಕಡಿಯೋಪಾದಿಯಲ್ಲಿ ಹತ್ತು ಗಜ್ ಎತ್ತರದಲ್ಲಿ ನೆಟ್ಟ ಸ್ತಂಭವೊಂದಕ್ಕೆ ಒಂದು ಕಡೆ ಆನೆಯ ತೂಕದಷ್ಟು ಕಲ್ಲನ್ನೂ, ಇನ್ನೊಂದು ಕಡೆ ಹಲಗೆಯ ಮೇಲೆ ಆನೆಯನ್ನೂ ನಿಲ್ಲಿಸಿ ಅರ್ಧವೃತ್ತದಷ್ಟು ಅತ್ತಿತ್ತ ಆಡಿಸಿದರು. ಆನೆ ವಾದ್ಯಕ್ಕೆ ತಕ್ಕಂತೆ ಕುಣಿಸುತ್ತಾ ಮೈ ಕುಲುಕುತ್ತಾ ಇತ್ತು. ಗಾಯಕರಿಗೂ, ಪ್ರವಚನಕಾರರಿಗೂ, ಡೊಂಬರಿಗೂ ರಾಜನಿಂದ ಸೊಗಸಾದ ಚಿನ್ನದ ಉಡುಪುಗಳು ಬಹುಮಾನವಾಗಿ ದೊರೆಯುತ್ತವೆ.

ಮೂರು ದಿವಸಗಳೂ ಉರಿಯುವ ಸೂರ್ಯ ಆಕಾಶದಲ್ಲಿ ಮನಮೋಹಕ ಗರಿಗಳನ್ನು ಎತ್ತಿದ ನವಿಲಿನಂತೆ ಕಾಣಿಸುವ ಬೆಳಗಿನಿಂದ ಹಿಡಿದು, ಕಗ್ಗತ್ತಲಿನಲ್ಲಿ ನವಿಲು ತನ್ನ ರೆಕ್ಕೆಗಳನ್ನು ಬಿಚ್ಚು ಇರುಳಿನವರೆಗೆ ಒಂದೇ ಸಮನೆ ವೈಭವದ ಹಬ್ಬವನ್ನು ಆಚರಿಸಲಾಯಿತು. ನಾನಾ ರೀತಿಯ ಬಾಣಬಿರುಸುಗಳು, ಬಾಣ ಬಿರುಸುಗಳನ್ನು ಉಪಯೋಗಿಸುವ ಆಟಪಾಟಗಳು ಮತ್ತಿತರ ಕ್ರೀಡೆಗಳನ್ನು ವಿವರವಾಗಿ ವರ್ಣಿಸಲು ಇಲ್ಲಿ ಸ್ಥಳವಿಲ್ಲ.

ಮೂರನೆಯ ದಿನ ರಾಜನು ಸಿಂಹಾಸನದಿಂದ ಏಳುವಾಗ ನನ್ನನ್ನು ಅವನ ಸಮ್ಮುಖಕ್ಕೆ ಕರೆದುಕೊಂಡು ಹೋದರು. ಬಹುದೊಡ್ಡದಾದ ಆ ಸಿಂಹಾಸವನ್ನು ಚಿನ್ನದಿಂದ ಮಾಡಿ ಅಪಾರ ಬೆಲೆಯ ವಜ್ರ ವೈಡೂರ್ಯಗಳಿಂದ ಅಲಂಕಾರ ಮಾಡಿದ್ದರು. ಸಿಂಹಾಸನದ ರಚನೆ ಸೂಕ್ಷ್ಮತೆಯಲ್ಲಿಯೂ ಬುದ್ಧಿವಂತಿಕೆಯಲ್ಲಿಯೂ ಪರಿಪೂರ್ಣವಾಗಿತ್ತು. ವಜ್ರ ವೈಢೂರ್ಯಗಳನ್ನು ಹದಿಯುವ ಕಲೆ ಈ ದೇಶದಲ್ಲಿರುವಂತೆ ಬಹುಶಃ ಮತ್ತೆಲ್ಲಿಯೂ ಇಲ್ಲವೆಂದು ಕಾಣುತ್ತದೆ.

ಸಿಂಹಾಸನದ ಮುಂದೆ ಚಚ್ಚೌಕವಾದ ಒಂದು ಮೆತ್ತೆಯಿತ್ತು. ಅದರ ಅಂಚಿಗೆ ಮೂರು ಸುತ್ತು ಅತ್ಯಂತ ಸುಂದರವಾದ ಬಿಳಿ ಮುತ್ತುಗಳನ್ನು ಹೆಣೆದಿದ್ದರು. ಮೂರು ದಿನಗಳೂ ರಾಜನು ಸಿಂಹಾಸನದ ಹಿಂದೆ ಈ ಮೆತ್ತೆಯ ಮೇಲೆ ಮಂಡಿಸಿದ್ದನು. ಮಹಾನದಿಯ

(ಮಹಾನವಮಿಯ) ಹಬ್ಬದ ಮುಗಿದ ಮೇಲೆ ಸಾಯಂಕಾಲ ಪ್ರಾರ್ಥನೆಯ ವೇಳೆ ರಾಜನು ನನಗೆ ಹೇಳಿ ಕಳುಹಿಸಿದನು. ನಾನು ಅರಮನೆಗೆ ಹೋದಾಗ ನನ್ನನ್ನು ನಾಲ್ಕು ಮಂಟಪಗಳ ಬಳಿಗೆ ಕರೆದೊಯ್ದರು. ಈ ಮಂಟಪಗಳು ಒಂದೊಂದು ಹತ್ತು ಗಜ್ ಉದ್ದ ಮತ್ತು ಅಷ್ಟೇ ಅಗಲವಾಗಿದ್ದವು. ಇವುಗಳ ಮೇಲ್ಛಾವಣಿಯನ್ನೂ, ಗೋಡೆಯನ್ನೂ ಚಿನ್ನದ ತಗಡುಗಳಿಂದ ಹೊದಿಸಿ ವಜ್ರಗಳಿಂದ ಅಲಂಕರಿಸಿದ್ದರು. ತಗಡು ಕತ್ತಿಯ ಅಲಗಿನಷ್ಟು ಮಂದವಾಗಿತ್ತು. ಚಿನ್ನದ ಮೊಳೆಗಳನ್ನೇ ಉಪಯೋಗಿಸಿ ತಗಡನ್ನು ಜೋಡಿಸಿದ್ದರು. ಮುಂಭಾಗದಲ್ಲಿದ್ದ ವೇದಿಕೆಯ ಮೇಲೆ ಸಿಂಹಾಸನವಿತ್ತು. ಸಿಂಹಾಸನ ಬಹಳ ದೊಡ್ಡದಾಗಿತ್ತು. ಇಂತಹ ಸಿಂಹಾಸನದ ಮೇಲೆ ಕುಳಿತ ರಾಜನ ವೈಭವ ಬಹು ಭವ್ಯವಾಗಿತ್ತು. ನನ್ನನ್ನು ಕುರಿತು ರಾಜನು ನನ್ನ ದೊರೆ ಖಾಖಾನ್, ಅವನ ಅಮೀರರು, ಅವನ ಸೈನ್ಯ ಹಾಗೂ ಕುದುರೆಗಳು ಮತ್ತು ಅವನ ದೇಶದ ದೊಡ್ಡ ನಗರಗಳಾದ ಸಮರ್‌ಕಂಡ್, ಹೆರಾತ್ ಮತ್ತು ಷಿರಾಜ್–ಇವುಗಳ ಬಗ್ಗೆ ಅತ್ಯಂತ ಸ್ನೇಹದ ನುಡಿಗಳನ್ನು ಆಡಿ, ತನ್ನ ಕಡೆಯಿಂದ ಒಬ್ಬ ದಕ್ಷ ರಾಯಭಾರಿಯನ್ನೂ, ಹಲವಾರು ಸಾಲು ಆನೆಗಳನ್ನೂ, ಹದಿನೆಂಟು ಖ್ವಾಜಾಗಳನ್ನೂ ಮತ್ತು ಇತರ ಬಹುಮಾನಗಳನ್ನೂ ಕಳುಹಿಸುವುದಾಗಿ ಹೇಳಿದನು. ರಾಜ ನನಗೆ ವೀಳೆಯವನ್ನೂ ಫನಂ ಹಣದ ಚೀಲಗಳನ್ನೂ ಆತನಿಗೆ ಮೀಸಲಾದ ಹಣ್ಣುಗಳನ್ನೂ ಕೊಟ್ಟು ನನ್ನನ್ನು ಬೀಳ್ಕೊಟ್ಟನು.

ಈ ಭೇಟಿಯ ಕಾಲದಲ್ಲಿ ರಾಜನ ಆಪ್ತನೊಬ್ಬನು ದುಭಾಷಿಯ ಮೂಲಕ ಮೇಲೆ ಹೇಳಿದ ಮಂಟಪಗಳ ಬಗ್ಗೆ 'ನಿಮ್ಮ ದೇಶದಲ್ಲಿ ಇಷ್ಟು ಭವ್ಯವಾದ ಮಂಟಪಗಳನ್ನು ನಿರ್ಮಿಸಬಲ್ಲರೆ? ಎಂದು ಪ್ರಶ್ನೆ ಹಾಕಿದನು. ಅದಕ್ಕುತ್ತರವಾಗಿ ನಾನು ಇಷ್ಟೇ ಸುಂದರವಾಗಿ ಕೆಲಸ ಮಾಡಬಲ್ಲರು. ಆದರೆ ಇದು ಅಲ್ಲಿಯ ಪದ್ಧತಿಯಲ್ಲ' ಎಂದೆ. ನಾನು ಹೇಳಿದ್ದು ರಾಜನಿಗೆ ಮೆಚ್ಚುಗೆಯಾಯಿತು.

ರಾಜನಿಂದ ಸನ್ಮಾನಿತನಾದ ನನ್ನ ವಿಚಾರ ತಿಳಿದು ಮತ್ತು ರಾಜನು ನನ್ನ ದೊರೆಯ ಆಸ್ಥಾನಕ್ಕೆ ರಾಯಭಾರಿಯನ್ನು ಕಳುಹಿಸುವನೆಂಬ ವಿಚಾರ ಕೇಳಿ ಓರ್ಮಸಿನಿಂದ ಬಂದು ಇಲ್ಲಿ ನೆಲಸಿರುವ ಜನರು ನನ್ನ ಬಗ್ಗೆ ಅಸೂಯೆ ಪಟ್ಟರು. ಶಾಂತಿ ಹಾಗೂ ಸ್ನೇಹ ಸೌಧದ ತಳಪಾಯವನ್ನೇ ಕೀಳಲು ಯತ್ನಿಸಿದರು. ನಾನು ಖಾಖಾನನ ಕಡೆಯಿಂದ ಬಂದವನೇ ಅಲ್ಲವೆಂಬ ವದಂತಿ ಹಬ್ಬಿಸಿ ತಮ್ಮ ದುರ್ನಡೆಯನ್ನು ತೋರಿಸಿದರು. ಈ ವಿಚಾರ ದೊರೆಯ ಅಮೀರರ ಹಾಗೂ ವಜೀರರ ಕಿವಿಗೂ ಮುಟ್ಟಿತು.

ನನ್ನ ಬಗ್ಗೆ ತುಂಬಾ ಪ್ರೀತಿ ವಿಶ್ವಾಸಗಳನ್ನು ತೋರಿಸುತ್ತಿದ್ದ ದೈಯ್ಯಾಂಗನು ಈ ಸಮಯದಲ್ಲಿ ಕಲ್ಬೆರ್ಗಾ ಮೇಲೆ ದಂಡೆತ್ತಿ ಹೊರಟನು. ಬಿಜನಗರದಲ್ಲಾದ ಅಲ್ಲೋಲ ಕಲ್ಲೋಲವನ್ನು ತನ್ನ ಅನುಕೂಲಕ್ಕೆ ಉಪಯೋಗಿಸಿಕೊಳ್ಳುವ ಉದ್ದೇಶ ಕಲ್ಬೆರ್ಗಾದ ಸುಲ್ತಾನ್ ಅಲ್ಲಾವುದ್ದೀನ್ ಅಹಮ್ಮದ್ ಷಾ ಏಳು ಲಕ್ಷ ವರಹ ಹಣ ಕೊಡಬೇಕೆಂದೂ, ಹಾಗೆ ಕೊಡದಿದ್ದರೆ ರಾಜ್ಯದ ಮೇಲೆ ಬೀಳುವುದಾಗಿಯೂ ಒಬ್ಬ ರಾಯಭಾರಿಯ ಮೇಲೆ ಬಿಜನಗರದ

ರಾಜನಿಗೆ ಹೇಳಿ ಕಳುಹಿಸಿದನು. ದೇವರಾಯನು ಈ ವಿಚಾರವನ್ನು ಕೇಳಿ ಅಧೀರನಾದರೂ ಧೈರ್ಯ ತಂದುಕೊಂಡನು. ತಾನು ಬದುಕಿರುವುದರಿಂದ ತನ್ನ ಆಪ್ತರು ಸತ್ತರೂ ಚಿಂತೆಯಿಲ್ಲವೆಂದೂ, ಸೂರ್ಯನು ಪ್ರಕಾಶಿಸಿದರೆ ಅಸಂಖ್ಯಾತ ಕಣಗಳನ್ನು ನೋಡಬಹುದೆಂದೂ ಮಾರುತ್ತರ ಕಳುಹಿಸಿದನು.

ಎರಡು ಕಡೆಯ ಸೇನೆಗಳೂ ಯುದ್ಧ ಸನ್ನದ್ಧವಾದವು. ಬಿಜನಗರದ ಕಡೆಯಿಂದ ದೈಯ್ಯಾಂಗನು ಹೊರಡಬೇಕಾಯಿತು. ಅವನ ಸ್ಥಾನದಲ್ಲಿ ರಾಜನು ಕ್ರೈಸ್ತಮತಕ್ಕೆ ಸೇರಿದ ನಿಮೇ ಫಜಿರ್ ಎಂಬುವನನ್ನು ನೇಮಿಸಿದನು. ತಾನು ದೈಯ್ಯಾಂಗನಿಗೇ ಸಮನೆಂದು ಈತ ಭಾವಿಸಿದನು. ಕುಳ್ಳನೂ, ದುರ್ಬುದ್ಧಿಯುಳ್ಳವನೂ, ಹೀನಕುಲಜನೂ, ಸಣ್ಣಬುದ್ಧಿಯನೂ ಆದ ಈತನಲ್ಲಿ ಅತ್ಯಂತ ಹೀನವಾದ ನಡತೆಗಳೆಲ್ಲ ಮನೆಮಾಡಿಕೊಂಡಿದ್ದುವು; ಒಳ್ಳೆಯ ಗುಣವೆಂಬುದು ಒಂದೂ ಇರಲಿಲ್ಲ. ತನಗೆ ಅಧಿಕಾರ ಸಿಕ್ಕಿತೋ ಇಲ್ಲವೋ ನನಗೆ ನಿತ್ಯವೂ ಬರುತ್ತಿದ್ದ ಭತ್ಯವನ್ನು ನಿಲ್ಲಿಸಿಬಿಟ್ಟನು. ಇಂಥ ಅವಕಾಶಕ್ಕಾಗಿ ಕಾಯುತ್ತಿದ್ದ ಓರ್ಮ್ಸಿನ ಜನರು ನನ್ನ ಮೇಲೆ ಸಲ್ಲದ ಚಾಡಿ ಹೇಳಿದರು. ನಾನು ರಾಯಭಾರಿಯೇ ಅಲ್ಲ, ಖಾಖಾನ್ ದೊರೆಯಿಂದ ಒಂದು ಪತ್ರ ತಂದ ವರ್ತಕನಷ್ಟೇ ಎಂದು ಹೇಳಿಬಿಟ್ಟರು. ವಿಗ್ರಹಾರಾಧಕರಲ್ಲಿಯೂ ಸುಳ್ಳು ವಿಚಾರಗಳನ್ನು ತಿಳಿಸಿ ಅವರ ಮನಸ್ಸನ್ನೂ ಕೆಡಿಸಿದರು. ವಿಗ್ರಹಾರಾಧಕರೇ ಇರುವ ದೇಶದಲ್ಲಿ ನನ್ನ ಪರಿಸ್ಥಿತಿ ಬಹಳ ಕಷ್ಟಕ್ಕಿಟ್ಟುಕೊಂಡಿತು. ಹಲವಾರು ದಿವಸಗಳು ನಾನೇನು ಮಾಡಬೇಕೆಂದು ತೋಚದೇ ಸುಮ್ಮನಿದ್ದೆ. ಇಷ್ಟೆಲ್ಲಾ ಆಗಿದ್ದರೂ ರಾಜನು ಹಲವಾರು ಸಲ ನನ್ನನ್ನು ಬೀದಿಯಲ್ಲಿ ಕಂಡಾಗ ನನ್ನ ಕಡೆ ಪ್ರೀತಿಯಿಂದ ನೋಡಿ ನನ್ನ ಯೋಗಕ್ಷೇಮ ವಿಚಾರಿಸುತ್ತಿದ್ದನು. ನಿಜವಾಗಿಯೂ ಈ ರಾಜನು ಮಹಾಗುಣವಂತ ಹಾಗೂ ನಿಷ್ಪಕ್ಷಪಾತಿ.

ದೈಯ್ಯಾಂಗ್ ಕಲ್ಬೆರ್ಗಾ ದೇಶದ ಮೇಲಿನ ಯುದ್ಧವನ್ನು ಮುಗಿಸಿ ಅಲ್ಲಿ ಸಿಕ್ಕ ಹಲವಾರು ಅದೃಷ್ಟಹೀನ ಜನರನ್ನು ಕೈಸೆರೆ ಹಿಡಿದುಕೊಂಡು ಹಿಂದಿರುಗಿದನು. ತಾನಿಲ್ಲದ ವೇಳೆ ನಿಮೇ ಫಜಿರ್ ನನ್ನ ಬಗ್ಗೆ ತೋರಿಸಿದ ತಾತ್ಸಾರಕ್ಕಾಗಿ ಅವನನ್ನು ಬೈದು, ಬಂದ ದಿನವೇ ನನಗೆ ಏಳು ಸಾವಿರ ವರಾಹಗಳನ್ನು ಟಂಕಸಾಲೆಯಿಂದ ಕೊಡುವಂತೆ ಆಜ್ಞೆ ಮಾಡಿದನು.

ಬಿಜನಗರದಲ್ಲಿ ನೆಲೆಸಿದ್ದ ಖ್ವಾಜಾ ಮಸೂದ್ ಮತ್ತು ಖ್ವಾಜಾ ಮೊಹಮ್ಮದ್ ಎಂಬ ಖುರಾಸಾನ್ ದೇಶದವರನ್ನು ರಾಜನು ತನ್ನ ರಾಯಭಾರಿಗಳಾಗಿ ನೇಮಿಸಿ ಅನೇಕ ಬಹುಮಾನದ ವಸ್ತುಗಳನ್ನು ಅವರ ವಶಕ್ಕೆ ಒಪ್ಪಿಸಿದನು. ಖಾಖಾನ್ ದೊರೆಗೆ ಪತ್ರವನ್ನು ಬರೆಸಿ ಅದನ್ನು ರಾಯಭಾರಿಗಳ ವಶಕ್ಕೆ ಕೊಟ್ಟನು. ದಿಲ್ಲಿಯಲ್ಲಿ ಆಳುತ್ತಿದ್ದ ಸುಲ್ತಾನ್ ಫೀರೋಜ್‌ಷಾನ ಉತ್ತರಾಧಿಕಾರಿಗಳಲ್ಲಿ ಒಬ್ಬನಾದ ಫರ್ಮಾ ಖಾಖಾನನೂ ಖ್ವಾಜಾ ಜೆಮಾಲುದ್ದೀನ್ ಎಂಬ ರಾಯಭಾರಿಯನ್ನು ನಮ್ಮ ರಾಜನ ಬಳಿಗೆ ಕಳುಹಿಸಲು ಏರ್ಪಾಡು ಮಾಡಿದನು."[೬]

ನಮ್ಮ ರಾಜನಿಗೆ ಬರೆದ ಪತ್ರದಲ್ಲಿಯೂ ಓರ್ಮ್ಸಿನ ಜನರ ದುರ್ಬೋಧನೆಗೆ ಒಳಗಾಗಿ ಈ ಮಾತುಗಳನ್ನು ಕಾಣಿಸಲಾಗಿತ್ತು : "ನಾವು ತಮಗೆ ತಮ್ಮ ಸ್ಥಾನಮಾನಕ್ಕೆ ತಕ್ಕಂತಹ

ಬಹುಮಾನಗಳನ್ನು ಕೊಟ್ಟು ತಮ್ಮ ಸ್ನೇಹ ಸಂಪಾದಿಸಬೇಕೆಂದಿದ್ದೆವು. ಆದರೆ ಕೆಲವರು ನಮಗೆ ಹೇಳಿರುವ ಪ್ರಕಾರ ಅಬ್ದುಲ್ ರಜಾಕನು ತಮ್ಮ ಆಸ್ಥಾನಕ್ಕೆ ಸೇರಿದವರಲ್ಲವೆಂದು ಗೊತ್ತಾಗುತ್ತದೆ'. ತನ್ನ ಬಗ್ಗೆ ವಿಜಯನಗರದ ರಾಜ ಕೇಳಿಕೊಳ್ಳುತ್ತಾ 'ಈ ರಾಜನಲ್ಲಿ ದೊರೆಯ ವೈಭವೂ, ಪ್ರವಾದಿಗಳ ಪವಿತ್ರತೆಯೂ, ಯೋಗಿಗಳ ಸದ್ಗುಣಗಳೂ ಮಿಳಿತವಾಗಿವೆ" ಎಂದು ತಿಳಿಸಿದನು. ಇಲ್ಲಿಯ ಜನರು ತಿಳಿದುಕೊಂಡಿರುವಂತೆ ಬಿಜನಗರದ ರಾಜ್ಯ ವಿಷುವತ್ತಿನಲ್ಲಿದೆ. (Equinactial line= ಹಗಲು &ರಾತ್ರಿಗಳು ಸಮನಾಗಿರುವ ಭೂಮಧ್ಯ ರೇಖೆ) ಆದ್ದರಿಂದ 'ನೀನೆ ವಿಷುವತ್ತಿನ ಸೂತ್ರಧಾರ; ನಿನ್ನ ಅಧಿಪತ್ಯ ಎಲ್ಲರಿಗೂ ಆಧಾರ' ಎಂಬ ಮಾತು ಸಂಪೂರ್ಣ ಸರಿಯಾಗಿದೆ.

ಬಡ ಲೇಖಕನಾದ ನಾನು ನನ್ನ ರಾಯಭಾರತ್ವದ ಕೆಲಸಗಳನ್ನು ಮುಗಿಸಿಕೊಂಡು ಮರುಪ್ರಯಾಣವನ್ನು ಓಮನ್ (ಅರಬ್ಬೀ) ಸಮುದ್ರದ ಕಡೆಗೆ ಆರಂಭಿಸಿದೆ. ಆಸೆ ತುಂಬಿದ ಮನಸ್ಸಿನಿಂದ ದೇವರ ದಯೆಕೋರಿ ನಾನು ಶಾಬಾನ್ ತಿಂಗಳ ಹನ್ನೆರಡನೇ ದಿನ (೧೪೪೩ನೇ ನವೆಂಬರ್ ೩) ಬಿಜನಗರದ ರಾಯಭಾರಿಗಳ ಸಮೇತ ರಾಜಧಾನಿಯನ್ನು ಬಿಟ್ಟು ನನ್ನ ಮರು ಪ್ರಯಾಣವನ್ನು ಆರಂಭಿಸಿದೆ. ಹದಿನೆಂಟು ದಿನಗಳಕಾಲ ಪ್ರಯಾಣ ಮಾಡಿ ರಂಜಾನ್ ತಿಂಗಳ ಮೊದಲನೇ ದಿನ(೧೪೪೩ನೇ ನವೆಂಬರ್-೨೩) ಓಮನ್ ಸಮುದ್ರದ ತೀರವನ್ನೂ, ಮಂಗನೆರನ್ನೂ (ಮಂಗಳೂರು) ತಲುಪಿದೆ. ಇಲ್ಲಿ ನನಗೆ ಷರೀಫ್ ಎಮೀರ್ ಸೈದ್ ಅಲ್ಲಾವುದ್ದೀನ್‌ಮೆಸ್ಸಿಡಿ ಎಂಬ ನೂರಿಪ್ಪತ್ತೈದು ವರ್ಷ ಯೋಗಿಯ ಸಹವಾಸದ ಯೋಗ ಒದಗಿತು. ಮುಸಲ್ಮಾನರೂ ವಿಗ್ರಹಾರಾಧಕರೂ ಇವನನ್ನು ಭಕ್ತಿಯಿಂದ ಕಾಣುತ್ತಿದ್ದರು. ದೇಶದಲ್ಲೆಲ್ಲಾ ಇವನ ಮಾತಿಗೆ ಬೆಲೆ ಇತ್ತು.

ಬಿಜನಗರದ ರಾಜನ ರಾಯಭಾರಿಗಳಲ್ಲಿ ಒಬ್ಬ ರಾಯಭಾರಿ ಖ್ವಾಜಾ ಮಸೂದ್ ಮಂಗನೂರ್ ನಗರದಲ್ಲಿ ತೀರಿಕೊಂಡ. ಮಂಗನೋರ್‌ನಲ್ಲಿ ರಂಜಾನ್ ಉಪವಾಸದ ನಂತರ ಮಾಡುವ ಹಬ್ಬವನ್ನು ಮುಗಿಸಿಕೊಂಡು ನಾನು ಮನೊರ್ (ಹೊನ್ನಾವರ) ಬಂದರಿಗೆ ಹೋಗಿ ಅಲ್ಲಿ ಒಂದು ಹಡಗನ್ನು ಗೊತ್ತುಮಾಡಿದೆ. ಅದರಲ್ಲಿ ನಲವತ್ತು ದಿನಗಳ ಸಮುದ್ರಯಾವ ಕಾಲದಲ್ಲಿ ಇಪ್ಪತ್ತು ಜನಗಳಿಗೆ ಬೇಕಾಗುವಷ್ಟು ಗ್ರಾಸವನ್ನು ತುಂಬಿಸಿದೆ. ಸಮುದ್ರಯಾನದಲ್ಲಿ ಏನೇನೋ ಕಷ್ಟಗಳು ಒದಗಬಹುದೆಂದು ಹೆದರಿಕೆಯ ಆಯಿತು. ಆದರೂ ದೇವರ ಮೇಲೆ ಭಾರ ಹಾಕಿ ಜುಲ್ಕದ ತಿಂಗಳಿನ ಐದನೇ ದಿನ (೧೪೪೪ನೇ ಜನವರಿ ೨೮) ಹಡಗು ಹತ್ತಿ ಸಮುದ್ರಯಾನವನ್ನು ಆರಂಭಿಸಿದೆ. ಗಾಳಿಯ ಹೊಡೆತದಿಂದ ಹಡಗಿಗೆ ಆಗಿದ್ದ ಹಾನಿಯನ್ನು ಸರಿಮಾಡಿಕೊಂಡು ನಮ್ಮ ಪ್ರಯಾಣವನ್ನು ಮುಂದುವರಿಸಿದೆವು. ನಾನು ಪ್ರಯಾಣವನ್ನು ಮುಂದುವರೆಸಿ ಓರ್ಮಸ್ ಬಂದರಿಗೆ (೧೪೪೪ನೇ ಏಪ್ರಿಲ್ ೨೨) ಹಿಂದಿರುಗಿದೆ. ಮನೋರ್‌ನಿಂದ ಓರ್ಮಸಿಗೆ ಬರಲು ಅರುವತ್ತೈದು ದಿನಗಳಾದುವು"[೭]

ಹೀಗೆ ಅಬ್ದುಲ್ ರಜಾಕನು ಸಮುದ್ರಯಾನದ ಮೂಲಕ ಬಂದು ವಿಜಯನಗರ ಸಾಮ್ರಾಜ್ಯದ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕವಾಗಿ ನಡೆಯುತ್ತಿದ್ದ ಅನೇಕ ಸಂಗತಿಗಳನ್ನು

ತನ್ನ ಕೃತಿಯಲ್ಲಿ ವಿವರಿಸಿದ್ದಾನೆ. ವಿಜಯನಗರ ಸಾಮ್ರಾಜ್ಯದ ವರ್ಣನೆಯನ್ನು ವಿಸ್ತರಿಸಿದ್ದಾನೆ. ಅಲ್ಲಿನ ಜನಪದ ಆಟಗಳನ್ನು ನೋಡಿ ತನ್ನ ಕೃತಿಯಲ್ಲಿ ಉಲ್ಲೇಖಿಸಿದ್ದಾನೆ. ವಿಶಾಲವಾದ ಮೈದಾನ ಅಂಗಡಿಗಳ ಬಗ್ಗೆ ವಿವರಿಸಿದ್ದಾನೆ. ಹಲವು ಪ್ರಾಣಿಗಳ ಚಿತ್ರಗಳನ್ನು ಚಿತ್ರಿಸಿದ್ದಾನೆ. ರಾಜನ ಉಡುಗೆ ತೊಡುಗೆಯ ಬಗ್ಗೆ ಹೇಳಿದ್ದಾನೆ. ವಿಜಯನಗರದ ಒಟ್ಟೂ ದೇವಾಲಯಗಳ ಚಿತ್ರಗಳನ್ನು ಕೊಡುತ್ತಾ ಹೋಗುವನು.

೫.೧.೨. ದುಆರ್ತೆ ಬಾರ್ೊಸಾ

ವಿಜಯನಗರ ಸಾಮ್ರಾಜ್ಯಕ್ಕೆ ಭೇಟಿನೀಡಿದ ವಿದೇಶಿ ಪ್ರವಾಸಿಗರಲ್ಲಿ ದುಆರ್ತೆ ಬಾರ್ೊಸಾ ಮುಖ್ಯನಾಗಿದ್ದಾನೆ. ಈತನು ಭಾರತಕ್ಕೆ ೧೫೦೧ರಲ್ಲಿ ಭಾರತಕ್ಕೆ ಬಂದನು. ಈತನು ಲಿಸ್ಬನ್ನಿನಲ್ಲಿ ೧೫ನೇ ಶತಮಾನದ ಉತ್ತರಾರ್ಧದಲ್ಲಿ ಹುಟ್ಟಿದನು, ಇವನ ತಂದೆಯ ಹೆಸರು ದಿಯಾಗ್ ಬಾರ್ೊಸಾ. ಇವನ ಸಹೋದರ ಅಂದರೆ ದುಆರ್ತೆ ಬಾರ್ೊಸನ ಚಿಕ್ಕಪ್ಪನೊಬ್ಬನಿದ್ದನು. ಅವನ ಹೆಸರು ಗೋನ್ಸ್‌ಕಾಲೊಗಿಲ್ ಬಾರ್ೊಸ ಎಂದು. ಅಲ್ವಾರೀಸ್ ಕಾಬ್ರಾಲನೂ ಅವನ ಪಡೆಯವರೂ ಪೋರ್ಚುಗಲ್‌ನಿಂದ ಹೊರಟು ಆಫ್ರಿಕಾ ದೇಶದ ಪೂರ್ವ ತೀರದಲ್ಲಿರುವ ಸೊಫಾಲ, ಮೊಜಾಂಬಿಕ್, ಕಿಲ್ವಾ, ಮೊಂಬಾಸ, ಮೆಲಿಂದಿ ಎಂಬ ಸ್ಥಳಗಳನ್ನೂ, ಸೊಕೋತ್ರ ದ್ವೀಪವನ್ನೂ, ಕೆಂಪು ಸಮುದ್ರ ಮತ್ತು ಪರ್ಷಿಯಾ ಸಮುದ್ರ ಖಾರಿಯಲ್ಲಿರುವ ಓರ್ಮ್ಸ್‌ಗಳನ್ನೂ ನೋಡಿಕೊಂಡು ಇಂಡಿಯಾ ದೇಶದ ಕ್ಯಾಂಬೆ ಖಾರಿಯಲ್ಲಿರುವ ಗೋಗಾ ಎಂಬ ಊರನ್ನು ಮುಟ್ಟಿ, ಅಲ್ಲಿಂದ ಇಂಡಿಯಾದ ಪಶ್ಚಿಮ ತೀರದಲ್ಲಿಯೇ ಪ್ರಯಾಣ ಮಾಡಿ ಕೊಚ್ಚಿನ್ನಿಗೆ ಬಂದರು. ಚಿಕ್ಕಪ್ಪನೊಡನೆ ಕೊಚ್ಚಿನ್ನಿನಲ್ಲಿ ನಿಂತ ದುಆರ್ತೆ ಬಾರ್ೊಸಾ ಮಲಬಾರ್ ದೇಶದ ಭಾಷೆಯಾದ ಮಲೆಯಾಳಿಯನ್ನು ಬಹಳ ಚೆನ್ನಾಗಿ ಕಲಿತುಕೊಂಡನು. ನಾನಾ ದೃಷ್ಟಿಗಳಿಂದ ಬಾರ್ೊಸನ ವರ್ಣನೆ ವಿಜಯನಗರ ಸಾಮ್ರಾಜ್ಯದ ಇತಿಹಾಸವನ್ನು ರಚಿಸಲು ಉಪಯೋಗವಾಗಿದೆ. ಅದರಲ್ಲಿಯೂ ಭೌಗೋಳಿಕ ಮತ್ತು ಮಾನವ ಕುಲಶಾಸ್ತ್ರ ದೃಷ್ಟಿಯಿಂದ ಇನ್ನೂ ಹೆಚ್ಚು ಉಪಯೋಗವಾಗಿದೆ. ಅವನ ಮುಖ್ಯ ಉದ್ದೇಶ ಚರಿತ್ರೆ ಬರೆಯುವುದಾಗಿರಲಿಲ್ಲ. ದೇಶಗಳ, ಜನಗಳ ಹಾಗೂ ಅವರ ನಡೆನುಡಿಗಳ ವರ್ಣನೆಯೇ ಅವನ ಉದ್ದೇಶವಾಗಿತ್ತು. ಅವನು ಮಾಡುವ ವಿಜಯನಗರ ಹಾಗೂ ಮಲಬಾರ್ ರಾಜ್ಯಗಳ ವರ್ಣನೆ ಮತ್ತು ಜನರ ಆಚಾರ ವಿಚಾರಗಳ ಮತ್ತು ವ್ಯಾಪಾರ ಸಾಪಾರಗಳ ಉಲ್ಲೇಖನ ಬಹಳ ಗಮನಾರ್ಹವಾದವುಗಳು. ಬಾರ್ೊಸಾ ಬರೆದದ್ದು ಪೋರ್ಚುಗೀಸ್ ಭಾಷೆಯಲ್ಲಿ. ಈ ಭಾಷೆಯಿಂದ ಇಟಾಲಿಯನ್, ಸ್ಪೆಯ್ನ್ ಮತ್ತು ಇಂಗ್ಲಿಷ್ ಭಾಷೆಗಳಿಗೆ ಭಾಷಾಂತರವಾಗಿದೆ. ಈತನ ಬರೆಹದಲ್ಲಿರುವ ದೇಶಗಳ, ಜನಗಳ ಹಾಗೂ ಅವರ ನಡೆನುಡಿಗಳ ವಿವರಗಳು ಬಹುಮುಖ್ಯವಾಗಿವೆ. ಈತ ನೀಡುವ 'ವಿಜಯನಗರ' (ಬಿಜನಗರ್)ದ ಚಿತ್ರಣ ಮಾರ್ಮಿಕವಾಗಿದೆ. ಅವನು ಬರೆದದ್ದು ಪೋರ್ಚುಗೀಸ್ ಭಾಷೆಯಲ್ಲಿ. ಭೌಗೋಳಿಕ ಮತ್ತು ಮಾನವಕುಲಶಾಸ್ತ್ರದ ದೃಷ್ಟಿಯಿಂದ ಇವನ ಬರೆಹಗಳು ಮಹತ್ವದವುಗಳಾಗಿವೆ.

ವಿಜಯನಗರ ಸಾಮ್ರಾಜ್ಯದ ವರ್ತಕರನ್ನು ಕುರಿತು ಅಲ್ಲಿನ ಸಾಮ್ರಾಜ್ಯವನ್ನು ಕುರಿತು ಬಾರ್ಬೋಸಾ ಅವನು "ಗೋವಾದಿಂದ ಮುಂದೆ ಹೊರಟು ಮಲಬಾರ್ ಕಡೆಗೆ ಹೋದರೆ ಅಲಿಗಾ ಎಂಬ ನದಿ ಸಿಕ್ಕುತ್ತದೆ. ಈ ನದಿಯೇ ದಖನ್ ಮತ್ತು ನರಸಿಂಗ ರಾಜ್ಯಗಳ ಗಡಿ. ನದಿಯ ಮುಖದಲ್ಲಿ ಗುಡ್ಡದ ಮೇಲೆ ಸಿಂತಕೋಲ ಎಂಬ ದುರ್ಗವಿದೆ. ಇದನ್ನು ದಖನ್ ರಾಜರು ತನ್ನ ರಾಜ್ಯರಕ್ಷಣೆಗಾಗಿ ಕಟ್ಟಿಸಿದ್ದಾನೆ. ಇಲ್ಲಿಗೆ ದಖನ್ ರಾಜ್ಯ ಕೊನೆಯಾಯಿತು. ಅಲಿಗಾ ನದಿಯನ್ನು ದಾಟಿದರೆ ನರಸಿಂಗ ಮಹಾರಾಜ್ಯ ಆರಂಭವಾಗುತ್ತದೆ. ಈ ಮಹಾರಾಜ್ಯದಲ್ಲಿ ಐದು ದೊಡ್ಡ ದೊಡ್ಡ ರಾಜ್ಯಗಳಿವೆ. ಒಂದೊಂದು ರಾಜ್ಯಕ್ಕೂ ಬೇರೆ ಬೇರೆ ಭಾಷೆ. ಒಂದು ರಾಜ್ಯ ಸಮುದ್ರತೀರ ಹೋದಂತೆ ಹೋಗುತ್ತದೆ; ಇದಕ್ಕೆ ತುಳಿನಾಟ್ (ತುಳುನಾಡು) ಎಂದು ಹೆಸರು. ಇನ್ನೊಂದು ರಾಜ್ಯದ ಹೆಸರು ಲೆಗ್ನಿ ಎಂದು; ಇದು ತಿಸಾ(ಒರಿಸ್ಸ) ರಾಜ್ಯಕ್ಕೆ ಹೊಂದಿಕೊಂಡಿದೆ. ಇನ್ನೊಂದು ರಾಜ್ಯದ ಹೆಸರು ಕನರಿ;ಇದರೊಳಗೆ ವಿಜನೇಗರ್ (ವಿಜಯನಗರ) ಇರುವುದು ಮತ್ತೊಂದು ತಮುಳ್(ತಮಿಳ್) ಎಂದು ಕರೆಯುವ ಚೋಮೆಂಡಲ್(ಚೋಳಮಂಡಲ) ನರಸಿಂಗ ರಾಜ್ಯ ಶ್ರೀಮಂತಿಕೆಯಿಂದ ಕೂಡಿದೆ. ಧನಧಾನ್ಯಗಳಿಂದ ಕೂಡಿದ ನಗರಗಳೂ ಪಟ್ಟಣಗಳೂ ಇವೆ. ರಾಜ್ಯವೆಲ್ಲ ಚೆನ್ನಾಗಿ ಸಾಗುಳಿ ಮಾಡುತ್ತಾರೆ. ತುಳಿನಾಟ್ ರಾಜ್ಯದಲ್ಲಿ ಅನೇಕ ನದಿಗಳೂ ಬಂದರುಗಳೂ ಇವೆ. ಬೇಕಾದಷ್ಟು ವ್ಯಾಪಾರ ಸಾಪಾರವೂ, ಹಡಗಿನಲ್ಲಿ ಸಾಮಾನುಗಳ ರವಾನೆಯೂ ಇಲ್ಲಿ ನಡೆಯುತ್ತವೆ. ಈ ರಾಜ್ಯದಲ್ಲಿ ಅನೇಕ ಶ್ರೀಮಂತವರ್ತಕರು ನೆಲೆಸಿದ್ದಾರೆ" ಎಂದು ಹೇಳುತ್ತಾನೆ.[೮]

ಬಾರ್ಬೋಸನು ಅಂದಿನ ಯುದ್ಧವನ್ನು ಕುರಿತು– "ನರಸಿಂಗ ರಾಜ್ಯದಲ್ಲಿ ದ್ವಂದ್ವಯುದ್ಧ ಮಾಡುವುದು ಒಂದು ದೊಡ್ಡ ವಿಧಾನ. ಮಾತೆತ್ತಿದರೆ ಒಬ್ಬರಿಗೊಬ್ಬರು ಸವಾಲು ಹಾಕುತ್ತಾರೆ. ಆಗ ರಾಜ ಅವರಿಗೆ ಶಸ್ತ್ರಾಸ್ತ್ರಗಳನ್ನು ಕೊಟ್ಟು ದ್ವಂದ್ವ ಯುದ್ಧಕ್ಕೆ ಬಿಡುತ್ತಾನೆ. ಅವರಿಗೆ ಸಹಾಯಕರಾಗಿ ದ್ವಿತೀಯರು ಇರುತ್ತಾರೆ. ಆಯುಧಗಳು ಅಳತೆಗೆ ತಕ್ಕಂತೆ ಇರುತ್ತವೆ. ನಿರ್ಧಾರವಾದ ದಿನ ಹೋರಾಳುಗಳು ಬರೇ ಚಡ್ಡಿ ಧರಿಸಿ ನಗು ಮುಖದಿಂದ ಅಖಾಡಕ್ಕೆ ಇಳಿಯುತ್ತಾರೆ. ರಾಜನೂ ಅವನ ಪರಿವಾರವೂ ಈ ಯುದ್ಧವನ್ನು ನೋಡಲು ನೆರೆಯುತ್ತಾರೆ. ಹೋರಾಳುಗಳು ತಮ್ಮ ಇಷ್ಟ ದೇವರನ್ನು ಪ್ರಾರ್ಥಿಸಿದ ಮೇಲೆ, ಕತ್ತಿಗಳನ್ನು ತಾಗಿಸುತ್ತಾರೆ ಅವರು ಬರಿ ಮೈಯ್ಯಲ್ಲಿರುವುದರಿಂದ ಕೆಲವು ಏಟುಗಳಲ್ಲಿಯೇ ಕದನ ಮುಕ್ತಾಯವಾಗುತ್ತದೆ. ದ್ವಿತೀಯರನ್ನು ಬಿಟ್ಟರೆ ಯಾರೂ ತುಟಿ ಪಿಟಕ್ಕೆನ್ನುವುದಿಲ್ಲ. ದ್ವಿತೀಯರು ಮಾತ್ರ ತಮ್ಮ ವಸ್ತ್ರಾದಿಗಳನ್ನು ಹುರಿದುಂಬಿಸುತ್ತಾರೆ" ಎಂದು ಹೇಳುತ್ತಾನೆ.[೯]

ಸಮುದ್ರ ತೀರವನ್ನು ಬಿಟ್ಟು ನರಸಿಂಗನ ರಾಜ್ಯದ ಒಳಭಾಗಕ್ಕೆ ಪ್ರವೇಶಿಸಿದರೆ ಹನ್ನೆರಡು ಅಥವಾ ಹದಿನೈದು ಹರಿದಾರಿ ದೂರದಲ್ಲಿ ಬಹಳ ಎತ್ತರವಾದ ಪರ್ವತಶ್ರೇಣಿ ಇದೆ. ಇದು ಬಹಳ ಕಡಿದಾಗಿದ್ದು ಹತ್ತುವುದಕ್ಕೆ ಕಷ್ಟ. ಈ ಶ್ರೇಣಿ ನರಸಿಂಗನ ರಾಜ್ಯದ ಆರಂಭದಿಂದ ಪ್ರಾರಂಭವಾಗಿ ಮಲಬಾರ್ ದೇಶದ ಆಚೆ ಇರುವ ಕಾಮೊರಿ ರಾಜ್ಯದವರೆಗೆ ಹಬ್ಬಿದೆ. ಮೇಲೆ

ಹೇಳಿದ ತುಳಿನಾಟ್ ಈ ಶ್ರೇಣಿಗೂ ಸಮುದ್ರಕ್ಕೂ ಮಧ್ಯೆ ಶ್ರೇಣಿಯ ಬುಡದಲ್ಲಿದೆ ಇಂಡಿಯನ್ನರು ಹೇಳುವ ಪ್ರಕಾರ: "ಪುರಾತನ ಕಾಲದಲ್ಲಿ ತುಳಿನಾಟ್ ಪ್ರದೇಶವೆಲ್ಲಾ ಸಮುದ್ರದಿಂದ ಆವರಿಸಲ್ಪಟ್ಟಿತ್ತು. ಸಮುದ್ರ ಪರ್ವತಶ್ರೇಣಿಯವರೆಗೆ ಇತ್ತು. ಕಾಲಾಂತರದಲ್ಲಿ ಸಮುದ್ರ ಹಿಂದೆ ಸರಿದು ಬೇರೆ ಭಾಗಗಳನ್ನು ಆಕ್ರಮಿಸಿತು. ಸಮುದ್ರ ಪರ್ವತಶ್ರೇಣಿಯವರೆಗೆ ಹಬ್ಬಿತ್ತು ಎನ್ನವುದಕ್ಕೆ ಕುರುಹುಗಳಿವೆ. ತಗ್ಗು ಪ್ರದೇಶವೆಲ್ಲಾ ಸಮುದ್ರಮಟ್ಟಕ್ಕೆ ಇದೆ.

ಪರ್ವತ ಶ್ರೇಣಿ ಬಹಳ ಹಳ್ಳ ದಿಣ್ಣೆಗಳಿಂದ ಕೂಡಿದೆ. ಮುಗಿಲು ಮುಟ್ಟುವಷ್ಟು ಎತ್ತರವಾಗಿದೆ. ಈ ಶ್ರೇಣಿಯನ್ನು ಹತ್ತುವುದು ಬಹಳ ಕಷ್ಟ. ಕೆಲವು ಕಡೆಗಳಲ್ಲಿ ಮಾತ್ರ ಬಹಳ ಕಷ್ಟಪಟ್ಟು ಹತ್ತಬೇಕು. ಈ ಕಾರಣದಿಂದಲೇ ಮಲಬಾರ್ ಸುರಕ್ಷಿತವಾಗಿರುವುದು. ಇಲ್ಲದಿದ್ದರೆ ನರಸಿಂಗ ರಾಜ್ಯದ ರಾಜ ಅದನ್ನು ಯಾವಾಗಲೋ ಗೆದ್ದುಕೊಂಡು ಬಿಡುತ್ತಿದ್ದ. ಈ ಪರ್ವತ ಶ್ರೇಣಿಯಲ್ಲಿ ಅಲ್ಲಲ್ಲಿ ಒಳ್ಳೊಳ್ಳೆಯ ಪಟ್ಟಣಗಳು ಇವೆ. ತಿಳಿ ನೀರು ರುಚಿಯಾದ ಹಣ್ಣುಗಳೂ ಸಮೃದ್ಧಿಯಾಗಿವೆ. ಕಾಡುಹಂದಿಗಳೂ, ಭಾರಿಯಾದ ಹಾಗೂ ಸುಂದರವಾದ ಜಿಂಕೆಗಳೂ, ಅನೇಕ ಚಿರತೆಗಳೂ, ಹುಲಿ ಕರಡಿಗಳೂ, ಬೆಕ್ಕಿನಂಥ ಪ್ರಾಣಿಗಳೂ ತುಂಬಿವೆ. ಅಲ್ಲದೆ ಕುದುರೆಯಂತೆ ಕಾಣುವ ಬೂದಿ ಬಣ್ಣದ ಒಂದು ತರದ ಪ್ರಾಣಿಗಳೂ ಇವೆ. ಇವು ಬಹಳ ಚುರುಕು; ಹಿಡಿಯುವುದು ಕಷ್ಟ. ರೆಕ್ಕೆ ಇರುವ ಹಾರುವ ಹಾವುಗಳಿವೆ. ಇವು ಬಹಳ ವಿಷ. ಮರದಲ್ಲಿ ಇರುವ ಹಾವುಗಳ ಉಸಿರು ತಾಗಿದರೆ ಅಥವಾ ಕಣ್ಣಿಗೆ ಬಿದ್ದರೆ ಸಾಕು ಸಾವು ಖಂಡಿತ. ಅಲ್ಲದೆ ಈ ಪರ್ವತ ಶ್ರೇಣಿಯಲ್ಲಿ ಕಾಡಾನೆಗಳಿವೆ. ನದಿಗಳಲ್ಲಿ ನೀಲಮಣಿ ಮತ್ತು ಪದ್ಮರಾಗ ಮುಂತಾದ ಬೆಲೆಯಾದ ಹರಳುಗಳು ಸಿಕ್ಕುತ್ತವೆ. ಇವುಗಳನ್ನು ಮಲಬಾರಿಗೆ ತೆಗೆದುಕೊಂಡು ಹೋಗಿ ಮಾರುತ್ತಾರೆ. ಅಲ್ಲಿ ಇವುಗಳನ್ನು ಸಾಣೆ ಹಿಡಿಯುತ್ತಾರೆ.

ಈ ಪರ್ವತ ಶ್ರೇಣಿಯನ್ನು ದಾಟಿದ ಮೇಲೆ ಸಿಕ್ಕುವ ಪ್ರದೇಶ ಹೆಚ್ಚು ಕಡಿಮೆ ಮಟ್ಟವಾಗಿದೆ. ಈ ಮೈದಾನ ಪ್ರದೇಶ ಬಹಳ ಫಲವತ್ತಾಗಿದ್ದು ಇಲ್ಲಿ ಎಲ್ಲವೂ ಸಮೃದ್ಧಿಯಾಗಿ ಸಿಕ್ಕುತ್ತವೆ. ಇದೆಲ್ಲ ನರಸಿಂಗ ರಾಜ್ಯಕ್ಕೆ ಸೇರಿದ್ದು. ಇಲ್ಲಿ ಅನೇಕ ನಗರಗಳೂ, ಗ್ರಾಮಗಳೂ, ಕೋಟೆ ಕೊತ್ತಲಗಳೂ ಇವೆ. ಅನೇಕ ದೊಡ್ಡ ದೊಡ್ಡ ನದಿಗಳು ಹರಿಯುತ್ತದೆ. ರಾಜ್ಯದಲ್ಲಿ ಅಕ್ಕಿ, ತರಕಾರಿ ಹೇರಳವಾಗಿ ಬೆಳೆಯುತ್ತವೆ. ದನ, ಎಮ್ಮೆ, ಹಂದಿ, ಆಡು, ಕುರಿ, ಕತ್ತೆ, ಸಣ್ಣ ಕುದುರೆ ಇವು ತುಂಬಿವೆ. ಇವನ್ನೆಲ್ಲ ಜನ ಉಪಯೋಗಿಸುತ್ತಾರೆ. ಎತ್ತು, ಕೋಣ, ಕತ್ತೆ ಮತ್ತು ಕುದುರೆಗಳ ಮೇಲೆ ಸಾಮಾನು ಹೇರುತ್ತಾರೆ. ಮತ್ತು ಬೇಸಾಯಕ್ಕೂ ಉಪಯೋಗಿಸುತ್ತಾರೆ.

ಹೆಚ್ಚು ಕಡಿಮೆ ಎಲ್ಲಾ ಗ್ರಾಮಗಳಲ್ಲಿ ಜೆಂಟೈಲರೇ ಇರುವುದು. ಇವರಲ್ಲಿ ಕೆಲವರು ಮೂರರಿದ್ದಾರೆ. ಈ ಮೂರರಲ್ಲಿ ಕೆಲವರು ಊರುಗಳ ಅಧಿಪತಿಗಳಾಗಿದ್ದಾರೆ. ನರಸಿಂಗ ರಾಜ ಅವನ್ನು ಅವರಿಗೆ ಕೊಟ್ಟಿದ್ದಾನೆ. ಉಳಿದ ಊರುಗಳು ಅವನಿಗೆ ಸೇರಿದವುಗಳು. ಅಲ್ಲಿ ತನ್ನ ಪರವಾಗಿ ರಾಜ್ಯಪಾಲರುಗಳನ್ನೂ ತೆರಿಗೆ ವಸೂಲಿಕಾರರನ್ನೂ ನೇಮಿಸಿದ್ದಾನೆ.

ಪರ್ವತಗಳಿಂದಾಚೆ ನಲವತ್ತು ಹರಿದಾರಿಗಳು. ಒಳನಾಡಿಗೆ ಹೋದರೆ ಬಿಜನಗರ್

ಎಂಬ ಬಹುದೊಡ್ಡ ನಗರ ಸಿಕ್ಕುತ್ತದೆ. ಈ ನಗರಗಳಲ್ಲಿ ಅಸಂಖ್ಯಾತ ಜನ ವಾಸಮಾಡುತ್ತಾರೆ. ಒಂದೆ ಕಡೆ ಬಹಳ ಒಳ್ಳೆಯ ಕೋಟೆಯೂ, ಇನ್ನೊಂದು ಕಡೆ ನದಿಯೂ, ಮತ್ತೊಂದು ಕಡೆ ಪರ್ವತವೂ ಇವೆ. ನರಸಿಂಗುವ ರಾಜ್ಯದ ರಾಜನು ಯಾವಾಗಲೂ ಇಲ್ಲಿ ವಾಸ ಮಾಡುತ್ತಾನೆ" ಎಂದು ಹೇಳಿದ್ದಾನೆ.[೧೦]

(ಪೋರ್ಚುಗಲ್ ದೇಶದವನಾದ ಈತ, ಕ್ರಿ.ಶ.೧೫೧೫ರಲ್ಲಿ ವಿಜಯನಗರ ಅರಸ ಶ್ರೀಕೃಷ್ಣದೇವರಾಯನ ಆಸ್ಥಾನಕ್ಕೆ ಬಂದಿದ್ದನು. ಶ್ರೀಕೃಷ್ಣದೇವರಾಯ ವಿದೇಶಾಂಗ ನೀತಿಗೆ ಉತ್ತೇಜಿಸಿದ್ದನು. ಮುತ್ತು, ರತ್ನ, ಕುದುರೆ ಮುಂತಾದ ವಸ್ತುಗಳನ್ನು ವಿದೇಶದಿಂದ ಆಮದು ಮಾಡಿಕೊಂಡು, ಔಷಧ, ಕಬ್ಬಿಣ, ಸಾಂಬಾರ ಪದಾರ್ಥಗಳನ್ನು ರಫ್ತು ಮಾಡುತ್ತಿದ್ದರು. ಭಟ್ಕಳ ಇವರ ಪ್ರಮುಖ ಬಂದರಾಗಿದ್ದತ್ತು. ಈ ಬಂದಿರಿನ ಮೂಲಕ ವಿದೇಶಿ ವ್ಯಾಪಾರ ಮಾಡುತ್ತಿದ್ದರು. ರಾಜನು ಪ್ರಜೆಗಳ ಬಗ್ಗೆ ಕರುಣೆಯುಳ್ಳವನಾಗಿದ್ದನು. ಅಂದು ವಿಜಯನಗರ ಸಾಮ್ರಾಜ್ಯವು ಅರಮನೆ ಭವನ, ಉದ್ಯಾನವನಗಳಿಂದ ದೇವಾಲಯಗಳಿಂದ ಕಂಗೊಳಿಸುತ್ತಿತ್ತು. ರಾಜಧಾನಿಯಲ್ಲಿ ಅವಿರತವಾಗಿ ವ್ಯಾಪಾರ ನಡೆಯುತ್ತಿತ್ತು. ರಾಜ್ಯದಲ್ಲಿ ಅನೇಕ ವಜ್ರಗಳು ಕಾಣಸಿಗುತ್ತವೆ. ಏಕೆಂದರೆ ನರಸಿಂಗನ ರಾಜ್ಯದಲ್ಲಿ ವಜ್ರದ ಗಣಿಯೊಂದಿದೆ. ಇನ್ನೊಂದು ಗಣಿಯು ದಖ್ಖನ್ ರಾಜ್ಯದಲ್ಲಿದೆ. ಸಿಲೋನ್ ಪೆಗೆಲ್ ಮುಂತಾದ ದೇಶಗಳಿಂದ ಮುತ್ತು, ರತ್ನಗಳು ಆಮದಾಗುತ್ತಿದ್ದವು. ಮಲಬಾರಿನಿಂದ ಅನೇಕ ಹಡಗುಗಳು ಅಕ್ಕಿಯನ್ನು ತುಂಬಿಕೊಳ್ಳಲು ಇಲ್ಲಿಗೆ ಬರುತ್ತವೆ. ಅವು ಕ್ಯಾಂಬೆಯಿಂದ ಅನೇಕ ಪದಾರ್ಥಗಳನ್ನು ತರುತ್ತವೆ. ತಾಮ್ರ, ಪಾದರಸ, ಕುಂಕುಮ, ಮೆಣಸು ಮತ್ತಿತರ ವಸ್ತುಗಳು, ಈ ಕೋರಮಂಡಲ ಉದ್ದಕ್ಕೂ ಬಹುಪಾಲು ಸಾಂಬಾರ ವಸ್ತುಗಳು ಮತ್ತು ಔಷಧಿಗಳು, ಮಲಷ್ಯಾ, ಚೀನಾ ಮತ್ತು ಬಂಗಾಳಗಳಿಂದ ವಿವಿಧ ಪದಾರ್ಥಗಳು ಬೇರೆ ಬೇರೆ ದೇಶಗಳಿಂದ ನೂರಾರು ಹಡಗುಗಳಲ್ಲಿ ಇಲ್ಲಿಗೆ ಬರುತ್ತವೆ ಎಂದು ತಿಳಿಸಿದನು.)

"ರಾಜ ಜೆಂಟೈಲ. ಇವನನ್ನು ರಾಹೇನಿ (ರಾಯ) ಎಂದು ಕರೆಯುತ್ತಾರೆ. ರಾಜನು ಸುಂದರವಾದ ಹಾಗೂ ದೊಡ್ಡದಾದ ಅರಮನೆಗಳನ್ನು ಕಟ್ಟಿಸಿದ್ದಾನೆ. ಅಲ್ಲಲ್ಲಿ ಅನೇಕಾನೇಕ ಅಂಗಳಗಳಿವೆ. ಈ ಅಂಗಳಗಳಲ್ಲಿ ಆನೆ ದಿಬ್ಬಗಳೂ, ಕೊಳಗಳೂ, ಹೂಗಿಡಗಳೂ ಇವೆ. ಕೊಳಗಳಲ್ಲಿ ಹೇರಳವಾಗಿ ಮೀನು ಸಾಕುತ್ತಾರೆ. ಮರಗಳಿಂದಲೂ ಹೂಗಿಡಗಳಿಂದಲೂ ತುಂಬಿದ ತೋಟಗಳಿವೆ.

ನಗರದಲ್ಲಿ ಶ್ರೀಮಂತ ಸರದಾರರು ವಾಸಮಾಡುವ ಮನೆಗಳೂ ಇವೆ. ಜನಸಾಮಾನ್ಯರ ಮನೆಗಳೆಲ್ಲ ಹುಲ್ಲು ಹೊದಿಸಿದವುಗಳು. ನಗರದ ಬೀದಿಗಳೂ ಚೌಕಗಳೂ ವಿಶಾಲವಾಗಿವೆ. ನಾನಾ ದೇಶದ ಮತ್ತು ನಾನಾ ಜನಾಂಗದ ಜನರು ಈ ಬೀದಿಗಳಲ್ಲಿಯೂ ಚೌಕಗಳಲ್ಲಿಯೂ ತುಂಬಿರುತ್ತಾರೆ. ಏಕೆಂದರೆ ಇಲ್ಲಿ ಅನೇಕ ಮೂರ್ ವರ್ತಕರು ಮತ್ತು ಶ್ರೀಮಂತ ಜೆಂಟೈಲ್ ನಿವಾಸಿಗಳಲ್ಲದೆ ಬೇರೆ ಕಡೆಗಳಿಂದ ಅಸಂಖ್ಯಾತ ಸಂಖ್ಯೆಯಲ್ಲಿ ಇಲ್ಲಿ ಬಂದು ಮುತ್ತಿಕೊಂಡಿರುವ ಜನರಿದ್ದಾರೆ. ಇಲ್ಲಿಗೆ ಬರಬಹುದಾದವರೆಲ್ಲ ಬಂದು ಇಲ್ಲಿದ್ದು ವ್ಯಾಪಾರ ಸಾಪಾರಗಳಲ್ಲಿ

ತೊಡಗಿದ್ದಾರೆ. ಯಾರು ಬೇಕಾದರೂ ಅಡೆತಡೆಗಳಿಲ್ಲದ ಸುರಕ್ಷಿತವಾಗಿ ಇಲ್ಲಿರಬಹುದು. ಯಾರಿಂದಲೂ ಅವರಿಗೆ ತೊಂದರೆ ಇಲ್ಲ. ಎಲ್ಲಿಂದ ಬಂದರೆಂದು ಯಾರು ಕೇಳುವುದಿಲ್ಲ. ಯಾವ ಜನಾಂಗದವರೆಂದು ಪ್ರಶ್ನೆ ಮಾಡುವುದಿಲ್ಲ. ಅವರು ಮೂರರಾಗಿರಬಹುದು ಅಥವಾ ಕ್ರೈಸ್ತರಾಗಿರಬಹುದು. ಎಲ್ಲರೂ ತಮ್ಮ ಮತಧರ್ಮದಂತೆ ಅಥವಾ ತಮ್ಮ ಇಷ್ಟದಂತೆ ಇರಬಹುದು."[೧೧]

(ಶ್ರೀಕೃಷ್ಣದೇವರಾಯ ಕರುಣಾಮಯಿಯಾಗಿದ್ದು, ಆತ ತೀರಿಕೊಂಡಾಗ ೫೦೦ ಸ್ತ್ರೀಯರ ದಹನವಾಯಿತು. ವಿಜಯನಗರದ ಕಾಲದ ಹಿಂದೂಗಳಲ್ಲಿ ಕೆಲವು ಒಳಪಂಗಡಗಳಿದ್ದವು. ಆ ಒಳಪಂಗಡಗಳೆಂದರೆ: ೧) ಕ್ಷತ್ರಿಯರು: ಇವರು ಪ್ರಭುಗಳ ಅಥವಾ ಆಡಳಿತಗಾರರು ಯೋಧರು ಆಗಿದ್ದರು. ೨) ಬ್ರಾಹ್ಮಣರು: ಇವರು ಪುರೋಹಿತರಾಗಿದ್ದುಕೊಂಡು ದೇವಸ್ಥಾನದ ಮೇಲ್ವಿಚಾರಣೆ ಮಾಡುತ್ತಿದ್ದರು. ಸಸ್ಯಹಾರಿಗಳು, ಪಾವಿತ್ರತೆಯಿಂದ ಜೀವನವನ್ನು ಸ್ವೀಕರಿಸುವವರಾಗಿದ್ದರು. ೩) ವೀರಶೈವರು: ಇವರು ಕೊರಳಲ್ಲಿ ತಮ್ಮ ಇಷ್ಟ ದೈವದ ಸಂಕೇತವನ್ನು ಹಾಕಿಕೊಳ್ಳುತ್ತಿದ್ದರು. ಇವರಿಗೆ ಸಾಮಾಜದಲ್ಲಿ ವಿಶೇಷ ಸ್ಥಾನವಿತ್ತು. ಇವರು ಬ್ರಾಹ್ಮಣರ ಹಾಗೆ ಸಸ್ಯಹಾರಿಗಳು ಏಕಪತ್ನಿ ವ್ರತಸ್ಥರೂ ಆಗಿದ್ದರು. ವೀರಶೈವರಲ್ಲಿ ಕೆಲವರು ವರ್ತಕರಾಗಿದ್ದರು. ಸತ್ತವರನ್ನು ಹೂಳುವ ಪದ್ಧತಿ ಇವರ ಪಂಗಡದಲ್ಲಿತ್ತೆಂದು ತಿಳಿಸಿದ್ದಾನೆ. ಈತ ಸ್ತ್ರೀ ಪುರಷರ ಉಡುಗೆ ತೊಡುಗೆ, ಅವರ ಅಲಂಕಾರ, ಸುಗಂಧ ದ್ರವ್ಯಗಳನ್ನು ಬಳಸುತ್ತಿದ್ದುದನ್ನು ತಿಳಿಸಿದ್ದಾನೆ.) ಅಲ್ಲಿನ ಮನೆಗಳು ಹುಲ್ಲು ಹೊದಿಸಿದವುಗಳೇ ಆಗಿದ್ದರೂ ಅವುಗಳು ಅವರವರ ವೃತ್ತಿಗನುಸಾರವಾಗಿ ವಿಂಗಡಿಸಲ್ಪಟ್ಟ ಬೀದಿಯ ಅಕ್ಕಪಕ್ಕದಲ್ಲಿ ಅಗಲವಾದ ಅಂಗಳದಿಂದ ಕೂಡಿದ್ದವು. ಶ್ರೀಕೃಷ್ಣದೇವರಾಯ ದೊರೆಯು ಸುಂದರ ವಿಶಾಲ ಅರಮನೆ ಹಾಗೂ ಇತರೆ ಅನೇಕ ಅರಮನೆಗಳನ್ನು ಹೊಂದಿದ್ದನು. ಶ್ರೀಮಂತರು ಭವ್ಯ ಮಂದಿರಗಳಲ್ಲಿ ಜನಸಾಮಾನ್ಯರು ಹುಲ್ಲು ಹೊದಿಕೆಗಳನ್ನಾಧರಿಸಿದ ಮನೆಗಳಲ್ಲಿ ವಾಸಿಸುತ್ತಿದ್ದರು. ರಾಯನು ಸರ್ವಧರ್ಮಗಳ ಸಹಿಷ್ಣುತಾ ಮನೋಭಾವನೆ ಉಳ್ಳವನಾಗಿದ್ದನು. ರಾಜನು ಜನತೆಗೆ ಮುಕ್ತವಾಗಿ ಅವರವರ ಧರ್ಮಗಳನ್ನು ಆಚರಿಸಲು ಸ್ವಾತಂತ್ರ್ಯಕೊಟ್ಟಿದ್ದನು. ಈತನ ಸಾಮ್ರಾಜ್ಯಕ್ಕೆ ಯಾವುದೇ ದೇಶದ ಯಾವುದೇ ಧರ್ಮದ ಜನರು ಬಂದರೂ ಸಹ ನೀವು ಯಾವ ಧರ್ಮದವರು ಎಂದು ಕೇಳುತ್ತಿರಲಿಲ್ಲ."[೧೨]

"ಈ ನಗರದಲ್ಲಿ ನಡೆಯುವ ವ್ಯಾಪಾರ ಅಗಾಧವಾಗಿದೆ. ರಾಜ್ಯದ ಆಳ್ವಿಕೆಯ ಅಧಿಕಾರವನ್ನು ಹೊತ್ತ ರಾಜ್ಯಪಾಲರುಗಳು ಎಲ್ಲರನ್ನೂ ನ್ಯಾಯನೀತಿಗಳಿಂದ ನೋಡಿಕೊಳ್ಳುತ್ತಾರೆ. ಇಲ್ಲಿ ಪೆಗು ಮತ್ತು ಸೆಲನಿ (ಸಿಲೋನ್) ಗಳಿಂದ ಬಂದ ಅನೇಕ ವಜ್ರ ವೈಡೂರ್ಯಗಳ ಆಭರಣಗಳಿವೆ. ಈ ರಾಜ್ಯದಲ್ಲಿಯೂ ವಜ್ರಗಳು ಸಿಕ್ಕುತ್ತವೆ. ನರಸಿಂಗನ ರಾಜ್ಯದಲ್ಲಿ ಒಂದು ಮತ್ತು ದಖನಿ ರಾಜ್ಯದಲ್ಲಿ ಒಂದು ವಜ್ರದ ಗಣಿಗಳಿವೆ. ಓರ್ಮಸ್ ಮತ್ತು ಕಾಯೆಲ್‌ಗಳಿಂದ ತಂದ ಮುತ್ತುಗಳೂ, ಸಣ್ಣ ಮುತ್ತುಗಳ ಆಭರಣಗಳನ್ನು ಕಂಡರೆ ಬಹಳ ಆಸೆ. ಆದ್ದರಿಂದ ಅವುಗಳನ್ನು ತಂದು ಸುರಿಯುತ್ತಾರೆ. ಚೀನಾ ಮತ್ತು ಅಲೆಕ್ಸಾಂಡ್ರಿಯಾದಿಂದ ಬರುವ ನಾನಾ ತರಹ ರೇಷ್ಮೆ ಮತ್ತು

ಸಾಧಾರಣ ಕಿಂಕಾಪು ಬಟ್ಟೆಗಳನ್ನು ಇಲ್ಲಿರುವ ಜನ ಧರಿಸುತ್ತಾರೆ. ಅಲ್ಲದೆ ಕೆಂಪು ಮತ್ತು ಇತರ ಬಣ್ಣದ ಬಟ್ಟೆಗಳನ್ನೂ ಹೆಚ್ಚಾಗಿ ಉಪಯೋಗಿಸುತ್ತಾರೆ. ಹವಳಗಳನ್ನು ಗುಂಡುಗಳಾಗಿ ಮಾಡಿ ಧರಿಸುತ್ತಾರೆ.

ಬಿಜನಗರಕ್ಕೆ ತಾಮ್ರ, ಪಾದರಸ, ಸಿಂಧೂರ, ಕೇಸರಿ, ಗುಲಾಬಿ ಅತ್ತರು ಅಫೀಮು, ಗಂಧ ಮತ್ತು ಆ್ಯಲೊ ಮರ, ಕರ್ಪೂರ, ಕಸ್ತೂರಿ ಇವು ಬರುತ್ತವೆ. ಕಸ್ತೂರಿ ಮುಂತಾದ ಸುಗಂಧ ವಸ್ತುಗಳನ್ನು ಮೈಕೈಗೆಲ್ಲಾ ಪೂಸಿಕೊಳ್ಳುವುದು ಇಲ್ಲಿಯ ಜನರ ಪದ್ಧತಿ. ಈ ಊರಿನಲ್ಲಿ ಮತ್ತು ಇಡೀ ರಾಜ್ಯದಲ್ಲಿ ಅಗಾಧವಾಗಿ ಮೆಣಸು ಉಪಯೋಗಿಸುತ್ತಾರೆ. ಈ ಮೆಣಸನ್ನು ಮಲಬಾರಿನಿಂದ ಎತ್ತು ಮತ್ತು ಕತ್ತೆಗಳ ಮೇಲೆ ಹೇರಿಕೊಂಡು ಬರುತ್ತಾರೆ.

ಇಲ್ಲಿ ಪೆರ್ದೋ ೧೭ ಎಂಬ ಚಿನ್ನದ ನಾಣ್ಯ ಚಲಾವಣೆಯಲ್ಲಿದೆ. ಇದರ ಬೆಲೆ ಮುನ್ನೂರು ಮರವೆಡಿಗಳು. ಈ ನಾಣ್ಯಗಳನ್ನು ರಾಜ್ಯದ ಕೆಲವು ಊರುಗಳಲ್ಲಿ ಟಂಕ ಒತ್ತುತ್ತಾರೆ. ಇಡೀ ಇಂಡಿಯಾ ದೇಶದಲ್ಲೆಲ್ಲಾ ಈ ನಾಣ್ಯ ಚಲಾವಣೆಯಲ್ಲಿದೆ. ನಾಣ್ಯಕ್ಕೆ ಉಪಯೋಗಿಸುವ ಚಿನ್ನ ಸಾಧಾರಣವಾಗಿದೆ. ನಾಣ್ಯವು ದುಂಡಾಗಿದ್ದು ಅದನ್ನು ಅಚ್ಚಿನಿಂದ ತಯಾರಿಸುತ್ತಾರೆ. ಕೆಲವು ನಾಣ್ಯಗಳ ಒಂದು ಕಡೆ ಇಂಡಿಯಾ ಲಿಪಿಯೂ, ಮತ್ತೊಂದು ಗಂಡು ಹೆಣ್ಣಿನ ಚಿತ್ರವೂ ಇವೆ. ಮತ್ತೆ ಕೆಲವಕ್ಕೆ ಒಂದು ಕಡೆ ಲಿಪಿ ಮಾತ್ರ ಇರುತ್ತದೆ.

ರಾಜನು ದೇಶದ ಆಡಳಿತವನ್ನು ತನ್ನ ರಾಜ್ಯಪಾಲರುಗಳಿಗೆ ವಹಿಸಿ ತಾನು ಯಾವಾಗಲೂ ರಾಜಧಾನಿಯಲ್ಲಿ ಸುಖವಾಗಿ ಇರುತ್ತಾನೆ. ರಾಜನೂ ಈ ಊರಿನ ನಿವಾಸಿಗಳೂ ಜೆಂಟೈಲರು ಇಂದು ಕಂದುಬಣ್ಣಕ್ಕಿದ್ದರೂ ಹೆಚ್ಚು ಕಡಿಮೆ ಬೆಳ್ಳಗಿದ್ದಾರೆ. ತಲೆಕೂದಲು ಕೋಮಲವಾಗಿಯೂ ಕಪ್ಪಾಗಿಯೂ ಇದೆ. ಮೈಕೈ ಸಮಕಟ್ಟುಳ್ಳವರು. ನಮ್ಮಂತೆ ಲಕ್ಷಣವಾಗಿದ್ದಾರೆ. ಹೆಂಗಸರೂ ಸುಂದರವಾಗಿದ್ದಾರೆ.

ಗಂಡಸರು ಸೊಂಟದಿಂದ ಕೆಳಕ್ಕೆ ಪಂಚೆಯನ್ನು ಮಡಿಕೆಯಾಗಿ ಮಾಡಿ ಬಹಳ ಬಿಗಿಯಾಗಿ ಉಡುತ್ತಾರೆ. ಹತ್ತಿ, ರೇಷ್ಮೆ ಅಥವಾ ಸಾಧಾರಣ ಕಿಂಕಾಪಿನಿಂದ ಮಾಡಿದ ಮಂಡಿಯವರೆಗೆ ಬರುವಂತಹ ಅಂಗಿಗಳನ್ನು ತೊಡುತ್ತಾರೆ. ಈ ಅಂಗಿಗಳ ಮುಂಭಾಗ ತೆರೆದಿರುತ್ತದೆ. ತಲೆಗೆ ಸಣ್ಣ ಟೋಪಿಗಳನ್ನು ಹಾಕಿಕೊಳ್ಳುತ್ತಾರೆ. ಕೆಲವರು ರೇಷ್ಮೆ ಅಥವಾ ಕಿಂಕಾಪಿನ ರುಮಾಲು ಸುತ್ತುತ್ತಾರೆ. ತಲೆಯ ಮೇಲೆ ಜುಟ್ಟು ಗಂಟು ಹಾಕುತ್ತಾರೆ. ಕಾಲುಚೀಲ ಹಾಕದೆ ಕಾಲಿಗೆ ಪಾದರಕ್ಷೆಗಳನ್ನು ಧರಿಸುತ್ತಾರೆ. ಭುಜದ ಮೇಲೆ ರೇಷ್ಮೆ ಅಥವಾ ಹತ್ತಿಯ ವಸ್ತ್ರ ಹಾಕಿಕೊಳ್ಳುತ್ತಾರೆ. ಕತ್ತಿ ಹಿಡಿದ ಸೇವಕರು ಅವರ ಹಿಂದೆ ನಡೆದುಕೊಂಡು ಹೋಗುತ್ತಾರೆ.

ಶ್ರೀಗಂಧ, ಗಂಧ, ಪಚ್ಚಕರ್ಪೂರ, ಕಸ್ತೂರಿ, ಕೇಸರಿಗಳನ್ನು ಪನ್ನೀರಿನಲ್ಲಿ ಹಾಕಿ ಸ್ನಾನ ಮಾಡಿದ ಮೇಲೆ ಮೈಗೆ ಪೂಸಿಕೊಳ್ಳುತ್ತಾರೆ. ಈ ಕಾರಣ ಇವರು ಘಮಘಮಿಸುತ್ತಿರುತ್ತಾರೆ. ಕೊರಳಿಗೆ ಚಿನ್ನದ ಸರವನ್ನೂ ಮತ್ತಿತರ ಆಭರಣಗಳನ್ನೂ ಧರಿಸುತ್ತಾರೆ. ತೋಳಿಗೆ ಹರುಳಿನ

ತೋಳುಬಂದಿಗಳನ್ನೂ, ಕೈ ಬೆರಳುಗಳಿಗೆ ಉಂಗುರಗಳನ್ನೂ, ಕಿವಿಗೆ ಮುತ್ತಿನ ಮತ್ತು ವಜ್ರದ ಓಲೆಗಳನ್ನೂ ಧರಿಸುತ್ತಾರೆ. ಮಳೆ ಮತ್ತು ಬಿಸಲಿಗಾಗಿ ಒಬ್ಬ ಸೇವಕನು ಇವರ ಹಿಂದೆ ಛತ್ರಿ ಹಿಡಿದುಕೊಂಡು ಹೋಗುತ್ತಿರುತ್ತಾನೆ. ಈ ಛತ್ರಿಗಳನ್ನು ರೇಷ್ಮೆ ಬಟ್ಟೆಯಿಂದ ಮಾಡಿ ಸೊಗಸಾಗಿ ಅಲಂಕರಿಸುತ್ತಾರೆ. ಇವನ್ನು ಬೇಕೆಂದಾಗ ತೆರೆದು ಮುಚ್ಚಬಹುದು. ಕೆಲವು ಛತ್ರಿಗಳ ಬೆಲೆ ಮುನ್ನೂರು ನಾನೂರ ಚಿನ್ನದ ನಾಣ್ಯಗಳಷ್ಟು. ಶ್ರೀಮಂತಿಕೆಗೆ ತಕ್ಕಂಥ ಛತ್ರಿ ಉಪಯೋಗಿಸುತ್ತಾರೆ. ಸ್ತ್ರೀಯರು ಆರು ಗಜ ಉದ್ದ ನವುರಾದ ರೇಷ್ಮೆ ಅಥವಾ ಹತ್ತಿ ಬಟ್ಟೆಯ ಬಣ್ಣ ಬಣ್ಣದ ಸೀರೆಗಳನ್ನು ಉಡುತ್ತಾರೆ. ಸೀರೆಯ ಒಂದು ಭಾಗವನ್ನು ಸೊಂಟದಿಂದ ಕೆಳಕ್ಕೆ ಉಟ್ಟು, ಮತ್ತೊಂದು ಭಾಗವನ್ನು ಎದೆಯ ಮೇಲೂ ಭುಜದ ಮೇಲೂ ಬರುವಂತೆ ಹಾಕಿಕೊಳ್ಳುತ್ತಾರೆ. ಹೀಗೆ ಉಟ್ಟಾಗ ಒಂದು ತೋಳು ಮತ್ತು ಒಂದು ಭುಜ ಮಾತ್ರ ಕಾಣುತ್ತವೆ. ಕಸೂತಿ ಹಾಕಿದ ಗಿಲೀಟಿನ ಚರ್ಮದ ಪಾದರಕ್ಷೆಗಳನ್ನು ಧರಿಸುತ್ತಾರೆ. ತಲೆಯನ್ನು ಮುಚ್ಚಿಕೊಳ್ಳುವುದಿಲ್ಲ. ಕೂದಲನ್ನು ಬಾಚಿ, ಮುಡಿಕಟ್ಟಿ ಸುವಾಸನೆಯ ಹೂ ಮುಡಿಯುತ್ತಾರೆ. ಮೂಗಿಗೆ ಒಂದು ಕಡೆ ತೂತು ಮಾಡಿ ಮುತ್ತಿನ ಅಥವಾ ಹರಳಿನ ತೂಗು ಮೂಗುತಿಯನ್ನು ಧರಿಸುತ್ತಾರೆ. ಕಿವಿಗಳನ್ನು ಚುಚ್ಚಿಸಿಕೊಂಡು ಓಲೆ ಮುಂತಾದ ಅನೇಕ ಆಭರಣಗಳನ್ನು ಧರಿಸುತ್ತಾರೆ. ಚಿನ್ನ, ವಜ್ರ, ವೈಡೂರ್ಯ, ಹವಳ ಮುಂತಾದವುಗಳಿಂದ ಮಾಡಿದ ಕೊರಳು ಸರಗಳನ್ನೂ, ಪದಕಗಳನ್ನೂ, ತೋಳುಬಂದಿಗಳನ್ನೂ, ಕೈಬಳೆಗಳನ್ನೂ ತೊಡುತ್ತಾರೆ. ತೋಳುಗಳಿಗೆ ಪೋಣಿಸಿದ ಹವಳಗಳನ್ನು ಕಟ್ಟಿಕೊಳ್ಳುತ್ತಾರೆ. ಕೈಬೆರಳುಗಳಿಗೆ ವಜ್ರ ವೈಡೂರ್ಯಗಳ ಉಂಗುರಗಳನ್ನು ಹಾಕಿಕೊಳ್ಳುತ್ತಾರೆ. ವಜ್ರ ವೈಡೂರ್ಯಗಳಿಂದ ಅಲಂಕೃತವಾದ ಡಾಬುಗಳನ್ನು ತೊಡುತ್ತಾರೆ. ಕಾಲಿಗೆ ಚಿನ್ನದ ಬಳೆ ಮತ್ತು ಕಾಲುಂಗುರಗಳನ್ನು ಹಾಕಿಕೊಳ್ಳುತ್ತಾರೆ. ಒಟ್ಟಿನಲ್ಲಿ ಇವರು ಬಹು ಶ್ರೀಮಂತಿಕೆಯ ಒಡವೆ ವಸ್ತ್ರಗಳನ್ನು ಧರಿಸಿದವರಾಗಿರುತ್ತಾರೆ.

ಸ್ತ್ರೀಯರು ನೃತ್ಯದಲ್ಲಿ ಎತ್ತಿದ ಕೈ, ನಾನಾತರ ವಾದ್ಯಗಳನ್ನು ಬಾರಿಸಿಕೊಂಡು ಹಾಡುತ್ತಾರೆ. ಅಲ್ಲದೆ ವಿವಿಧ ಭಂಗಿಗಳ ಆಟಪಾಟಗಳನ್ನು ಆಡಬಲ್ಲವರು. ಸ್ತ್ರೀಯರು ಬಹು ರೂಪವತಿಯರು. ಗಾಂಭೀರ್ಯದಿಂದ ವರ್ತಿಸುತ್ತಾರೆ. ನಮ್ಮಂತೆ ಮದುವೆಯಾಗುತ್ತಾರೆ. ವಿವಾಹದ ಕಾಯಿದೆಕಟ್ಟಲೆಗಳಿವೆ. ಆದರೂ ಕೆಲವರು, ಅದರಲ್ಲಿಯೂ ಸಾಕುವ ಶಕ್ತಿಯುಳ್ಳ ಶ್ರೀಮಂತರು, ಹಲವಾರು ಹೆಂಡತಿಯರನ್ನು ಮದುವೆಯಾಗುತ್ತಾರೆ. ರಾಜನ ಅಂತಃಪುರದಲ್ಲಿ ಅನೇಕ ಜನ ಸ್ತ್ರೀಯರಿದ್ದಾರೆ. ಇವರಲ್ಲದೆ ಇಟ್ಟುಕೊಂಡವರು ಎಷ್ಟೋ ಜನ.

ಅರಮನೆಯ ಊಳಿಗಕ್ಕೆ ಬೇಕಾದ ಹೆಂಗಸರನ್ನು ರಾಜ್ಯದಲ್ಲೆಲ್ಲಾ ಹುಡುಕಿ ಅವರಲ್ಲಿ ರೂಪವತಿಯರನ್ನು ಆರಿಸಿಕೊಳ್ಳುತ್ತಾರೆ. ಅರಮನೆಯ ಎಲ್ಲ ಕೆಲಸವೂ ಸ್ತ್ರೀಯರಿಂದಲೇ ನಡೆಯಬೇಕಾದ್ದರಿಂದ ಅದಕ್ಕೆ ಶುಚಿ ರುಚಿಯನ್ನರಿತ ಸ್ತ್ರೀಯರೇ ಬೇಕು. ಇವರಿಗೆ ಅರಮನೆಯೊಳಗೇ ವಾಸಕ್ಕೆ ಮನೆಗಳನ್ನು ಕಟ್ಟಿ ಬೇಕಾದುದನ್ನೆಲ್ಲ ಒದಗಿಸುತ್ತಾರೆ. ಇವರು ತಮ್ಮ ಗಾಯನ, ನೃತ್ಯ, ಅಭಿನಯ ಮುಂತಾದ ಸಾವಿರಾರು ವಿಧಾನಗಳಿಂದ ರಾಜನ ಮನಸ್ಸಿಗೆ ಆನಂದವನ್ನುಂಟು

ಮಾಡುತ್ತಾರೆ.

ಈ ಹಿಂದೆ ನಾನು ಹೇಳಿದ ಕೊಳಗಳಲ್ಲಿ ಸ್ತ್ರೀಯರೂ ನಿತ್ಯವೂ ಸ್ನಾನಮಾಡಿ, ವಾದ್ಯ ಬಾರಿಸಿ, ಹಾಡಿ ನಲಿಯುತ್ತಾರೆ. ರಾಜನು ಇವರನ್ನು ತನ್ನ ಶಯನಾಗೃಹಕ್ಕೆ ಕರೆಸಿಕೊಳ್ಳುತ್ತಾನೆ. ಮೊದಲ ಗಂಡುಮಗು ರಾಜ್ಯಕ್ಕೆ ಉತ್ತರಾಧಿಕಾರಿ. ಇವನ ಕೃಪಾಕಟಾಕ್ಷಕ್ಕೆ ಪಾತ್ರರಾಗಲು ಈ ಸ್ತ್ರೀಯರಲ್ಲಿ ಪರಸ್ಪರ ಅಸೂಯೆ, ಸ್ಪರ್ಧೆ ಎಷ್ಟಿರುತ್ತೆಯೆಂದರೆ ತಮಗೆ ಬೇಡವಾದವರನ್ನು ಕೊಲ್ಲಿಸುವುದಕ್ಕೂ ಹೇಸುವುದಿಲ್ಲ. ಕೆಲವರು ವಿಷ ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುವುದೂ ಉಂಟು. ರಾಜನು ಪ್ರತ್ಯೇಕವಾದ ಓಲಗಶಾಲೆಯಲ್ಲಿ ತನ್ನ ಶ್ರೀಮಂತ ಸರದಾರರು ಮತ್ತು ಅಧಿಕಾರಿಗಳೊಡನೆ ಕುಳಿತು ರಾಜ್ಯದ ವ್ಯವಹಾರಗಳನ್ನು ಪರಿಶೀಲಿಸುತ್ತಾನೆ. ಇವರು ರಾಜನನ್ನು ನೋಡಲು ಹೋದಾಗ ನಜರು ಒಪ್ಪಿಸಿ ತಮ್ಮ ಗೌರವ ಸೂಚಿಸುತ್ತಾರೆ. ತಪ್ಪಿತಸ್ಥರನ್ನು ರಾಜ ಕ್ರೂರಶಿಕ್ಷೆಗೆ ಗುರಿ ಮಾಡುತ್ತಾನೆ. ಒಳ್ಳೆಯವರಿಗೆ ಬಹುಮಾನಗಳನ್ನೂ ಮೆಚ್ಚುಗೆಯನ್ನೂ ಸೂಚಿಸಿ ಗೌರವಿಸುತ್ತಾನೆ.

ರಾಜ್ಯದ ಶ್ರೀಮಂತ ಸರದಾರರೂ ಅವನ ಸಂಬಂಧಿಗಳೂ ಪಲ್ಲಕ್ಕಿಯಲ್ಲಿ ಕುಳಿತು ಕುದುರೆ ಸವಾರರು ಮತ್ತು ಆಳುಕಾಳುಗಳ ಸಮೇತ ಅರಮನೆಗೆ ಬರುತ್ತಾರೆ. ರಾಜನು ಹೇಳಿ ಕಳುಹಿಸುವವರೆಗೆ ಅರಮನೆಯ ಬಾಗಿಲಿನಲ್ಲಿ ಕಾಯುತ್ತಾರೆ. ಅವರು ತಪ್ಪುಗಳನ್ನು ಮಾಡಿದ್ದಲ್ಲಿ ರಾಜನು ಅವರಿಗೆ ಹೇಳಿಕಳುಹಿಸುತ್ತಾನೆ. ಅವರು ತಪ್ಪನ್ನು ಒಪ್ಪಿಕೊಂಡರೆ ಅವರನ್ನು ಛೀಮಾರಿ ಮಾಡಿ, ಅವರ ಆದಾಯದಲ್ಲಿ ಅರ್ಧವನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಾನೆ. ಇಲ್ಲದಿದ್ದರೆ ಅವರನ್ನು ಬೆತ್ತಲೆಯಾಗಿ ನೆಲದ ಮೇಲೆ ಮಲಗಿಸಿ ಚೆನ್ನಾಗಿ ಹೊಡೆಸುತ್ತಾನೆ. ಅವರು ತನ್ನ ಸಂಬಂಧಿಗಳಾಗಿದ್ದಲ್ಲಿ ಅಥವಾ ಬಹಳ ದೊಡ್ಡವರಾಗಿದ್ದರೆ ರಾಜನೇ ತನ್ನ ಕೈಯಿಂದ ಹೊಡೆಯುತ್ತಾನೆ. ಹೀಗೆ ಹೊಡೆದು ಅರಮನೆಯ ತನ್ನ ಖಾಸಾ ವಸ್ತ್ರ ಶಾಲೆಯಿಂದ ಬೆಲೆಬಾಳುವ ಉಡುಪುಗಳನ್ನು ತರಿಸಿ, ಅವರಿಗೆ ಉಡಿಸಿ, ಪಲ್ಲಕ್ಕಿಗಳಲ್ಲಿ ಕುಳ್ಳಿರಿಸಿ, ವಾದ್ಯ ಸಮೇತ ಅರಮನೆಯಿಂದ ಕಳುಹಿಸುತ್ತಾನೆ.

ಅರಮನೆಯ ಬಾಗಿಲ ಬಳಿ ಯಾವಾಗಲೂ ಅನೇಕ ಪಲ್ಲಕ್ಕಿಗಳೂ ಅಶ್ವಾರೋಹಿಗಳೂ ಇರುವುದನ್ನು ನೋಡಬಹುದು. ರಾಜನ ಒಂಬೈನೂರು ಆನೆಗಳೂ, ಇಪ್ಪತ್ತು ಸಾವಿರ ಕುದುರೆಗಳೂ ಇವೆ. ಇವನ್ನೆಲ್ಲಾ ದುಡ್ಡು ಕೊಟ್ಟು ಕೊಂಡುಕೊಂಡಿದ್ದಾನೆ. ಒಂದೊಂದು ಆನೆಯ ಬೆಲೆ ೧೫೦೦ ರಿಂದ ೨೦೦೦ ಡಕಟ್. ಏಕೆಂದರೆ ಈ ಆನೆಗಳು ಬಹಳ ಭಾರಿಯಾಗಿದ್ದು ಯುದ್ಧಕ್ಕೆ ಬೇಕಾದವುಗಳು ಮತ್ತು ರಾಜನ ದರ್ಬಾರ್ ಕಾಲದಲ್ಲಿ ಉಪಯೋಗಿಸತಕ್ಕಂಥವುಗಳು. ಕುದುರೆಗಳ ಬೆಲೆ ೩೦೦ ರಿಂದ ೬೦೦ ಡಕಟ್ಟುಗಳು. ರಾಜನ ಸ್ವಂತ ಉಪಯೋಗಕ್ಕೆ ಬೇಕಾದ ಕೆಲವು ಕುದುರೆಗಳ ಬೆಲೆ ೯೦೦ ಅಥವಾ ೧೦೦೦ ಡಕಟ್ಟುಗಳು. ಕುದುರೆಗಳನ್ನು ತನ್ನ ಶ್ರೀಮಂತ ಸರದಾರರಿಗೆ ಹಂಚಿಕೊಟ್ಟು ಅವರು ಅವುಗಳನ್ನು ಸಾಕುವ ವ್ಯವಸ್ಥೆ ಮಾಡಿದ್ದಾನೆ. ಒಬ್ಬೊಬ್ಬ ಅಂಗರಕ್ಷಕ ಯೋಧನಿಗೆ ಒಂದು ಕುದುರೆಯನ್ನೂ,

ಕುದುರೆಯ ಮಾಲೀಸು ಮಾಡಲು ಒಬ್ಬ ಆಳನ್ನೂ ಕೊಡುತ್ತಾನೆ. ಅಲ್ಲದೆ ಒಬ್ಬ ಗುಲಾಮೀ ಹುಡುಗಿಯನ್ನೂ ಕೊಡುತ್ತಾನೆ. ನಾಲ್ಕೈದು ಚಿನ್ನದ ಪರ್ದೋಗಳ ಮಾಸಾಶನವನ್ನು ಕೊಡುತ್ತಾನೆ. ಈ ಯೋಧನಿಗೂ, ಆಳು ಮತ್ತು ಕುದುರೆಗಳಿಗೂ ಬೇಕಾದ ಗ್ರಾಸವನ್ನೂ ಕೊಡುತ್ತಾನೆ. ಅರಮನೆಯ ಪಾಕಗೃಹಗಳಿಂದ ಆನೆ ಕುದುರೆಗಳಿಗೆ ಬೇಕಾದ ಆಹಾರ ಒದಗಿಸಲ್ಪಡುತ್ತದೆ. ಪಾಕಗೃಹಗಳು ಬಹಳ ದೊಡ್ಡದಾಗಿವೆ. ಲೆಕ್ಕವಿಲ್ಲದಷ್ಟು ತಾಮ್ರದ ಕಡಾಯಿಗಳಲ್ಲಿ ಅನ್ನವನ್ನು ಬೇಯಿಸುತ್ತಾರೆ. ಅಡುಗೆ ಮಾಡಲು ಅನೇಕ ಜನರಿದ್ದಾರೆ. ಅಕ್ಕಿ, ಹುರುಳಿ, ಕಡಲೆ ತರಕಾರಿಗಳನ್ನು ಬೇಯಿಸಿ ಮಾಡಿದ ಅನ್ನವನ್ನು ಆನೆ ಕುದುರೆಗಳನ್ನು ನೋಡಿಕೊಳ್ಳುವ ಆಳುಗಳು ಬಂದು ತೆಗೆದುಕೊಂಡು ಹೋಗುತ್ತಾರೆ. ಇದೆಲ್ಲಾ ತುಂಬಾ ವ್ಯವಸ್ಥೆ ಹಾಗೂ ಕ್ರಮದಿಂದ ನಡೆಯುತ್ತದೆ.

ಕುದುರೆಯನ್ನು ಒಬ್ಬನು ಸರಿಯಾಗಿ ಸಾಕದಿದ್ದರೆ ಅದನ್ನು ಮತ್ತೊಬ್ಬನಿಗೆ ವಹಿಸಿ, ಅದರ ಬದಲು ಇನ್ನೂ ಬಡಕಲಾದ ಕುದುರೆಯನ್ನು ಕೊಟ್ಟು ಅದನ್ನು ಸಾಕುವಂತೆ ಮಾಡುತ್ತಾರೆ. ಚೆನ್ನಾಗಿ ಸಾಕಿದರೆ ಅದನ್ನು ಹಿಂದೆಗೆದುಕೊಂಡು ಅದಕ್ಕಿಂತ ಉತ್ತಮವಾದ ಕುದುರೆಯನ್ನು ಕೊಡುತ್ತಾರೆ. ಈ ರೀತಿ ಕುದುರೆಗಳನ್ನೂ, ಆನೆಗಳನ್ನೂ ರಾಜನ ಕರ್ಚಿನಲ್ಲಿ ಚೆನ್ನಾಗಿ ಸಾಕು ಸಲಹುತ್ತಾರೆ. ಶ್ರೀಮಂತ ಸರದಾರರೂ ತಮ್ಮ ಅಧೀನರಿಗೆ ಕೊಟ್ಟ ಕುದುರೆಗಳ ಬಗ್ಗೆಯೂ ಇದೇ ರೀತಿ ನಡೆದುಕೊಳ್ಳುತ್ತಾರೆ. ಇಲ್ಲಿ ಕುದುರೆಗಳು ಬಹಳ ದಿನಗಳು ಬದುಕುವುದಿಲ್ಲ. ಈ ದೇಶದಲ್ಲಿ ಕುದುರೆಗಳನ್ನು ಬೆಳೆಸುವುದಿಲ್ಲ. ಓರ್ಮಸ್ ಮತ್ತು ಕ್ಯಾಂಬೆಯಿಂದ ಇಲ್ಲಿಗೆ ಕುದುರೆಗಳನ್ನು ತರಿಸಿ ಸಾಕುತ್ತಾರೆ. ಈ ಕಾರಣ ಇಲ್ಲಿ ಕುದುರೆಗಳಿಗೆ ಬಹಳ ಬೆಲೆ.

ರಾಜನ ಅಶ್ವದಳ ಮತ್ತು ಕಾಲ್ದಳಗಳಲ್ಲಿರುವವರೆಲ್ಲ ಸೇರಿ ಹತ್ತು ಲಕ್ಷ ಜನರಿದ್ದಾರೆ. ಇವರಿಗೆಲ್ಲ ಸಂಬಳ ಉಂಟು. ಐದಾರು ಸಾವಿರ ಸ್ತ್ರೀಯರೂ ಇದ್ದಾರೆ. ಇವರಿಗೂ ಸಂಬಳವುಂಟು. ಯುದ್ಧಕ್ಕೆ ಹೋದಾಗ ಸೈನಿಕರು ಯುದ್ಧ ಮಾಡಲಾರರೆಂದೂ, ಸೈನಿಕರು ಒಮ್ಮತದಿಂದ ಇರಲಾರರೆಂದೂ ಹೇಳುತ್ತಾರೆ. ಈ ಸ್ತ್ರೀಯರು ಬಹು ಸೊಗಸುಗಾರ್ತಿಯರು; ನೃತ್ಯ ಗೀತ ಗಾಯನ ದೊಂಬರಾಟಗಳಲ್ಲಿ ನುರಿತ ಚದುರೆಯರು.

ಸೈನ್ಯಕ್ಕೆ ಯೋಧನನ್ನು ಚುನಾಯಿಸಿಕೊಳ್ಳುವ ಮುನ್ನ ಅವನನ್ನು ಬೆತ್ತಲೆಯಾಗಿ ನಿಲ್ಲಿಸಿ ಅವನ ಮೈಕಟ್ಟು, ಉದ್ದ, ದಪ್ಪ ಇವುಗಳನ್ನು ನೋಡಿ, ಅವನ ಹೆಸರು, ತಂದೆತಾಯಿಗಳ ಹೆಸರು ಇತ್ಯಾದಿ ವಿಚಾರಗಳನ್ನು ತಿಳಿದುಕೊಂಡು ಬರೆದುಕೊಳ್ಳುತ್ತಾರೆ. ಸಂಬಳದ ಬಟವಾಡೆ ಪುಸ್ತಕದಲ್ಲಿ ಅವನ ಈ ವಿವರಗಳೆಲ್ಲಾ ಇರುತ್ತವೆ. ಒಂದು ಸಲ ಸೈನ್ಯಕ್ಕೆ ಸೇರಿದ ನಂತರ ಬಿಟ್ಟು ಹೋಗುವುದು ಕಷ್ಟ. ತಪ್ಪಿಸಿಕೊಂಡು ಹೋಗಿ ಸಿಕ್ಕಿಬಿದ್ದರೆ ಬಹಳ ಕಠಿಣ ಶಿಕ್ಷೆ ಆಗುತ್ತದೆ. ನಾನಾ ಕಡೆಗಳಿಂದ ಬಂದು ಇಲ್ಲಿ ಸೈನ್ಯಕ್ಕೆ ಸೇರಿದ ಸರದಾರರು ತಮ್ಮ ತಮ್ಮ ಮತಾನುಸಾರ ನಡೆದುಕೊಳ್ಳುವುದಕ್ಕೆ ಯಾವ ಅಡ್ಡಿಯೂ ಇಲ್ಲ.

ನರಸಿಂಗನ ರಾಜದ ಜೆಂಟೈಲರಲ್ಲಿ ಮೂರು ಪಂಗಡಗಳಿವೆ. ಪ್ರತಿಯೊಂದು ಪಂಗಡವೂ ತನ್ನದೇ ಆದ ರೀತಿ ನೀತಿ ನಿಯಮಗಳನ್ನು ಪಾಲಿಸುತ್ತದೆ ಮತ್ತು ಬೇರೆ ಪಂಗಡದಿಂದ

ಭಿನ್ನವಾಗಿರುತ್ತದೆ. ಈ ಪಂಗಡಗಳಲ್ಲಿ ಮುಖ್ಯವಾದುದು ರಾಜನ ಹಾಗೂ ಶ್ರೀಮಂತ ಸರದಾರರುಗಳ ಮತ್ತು ಯುದ್ಧ ಮಾಡುವ ಜನರಿಗೆ ಸಂಬಂಧಪಟ್ಟ ಪಂಗಡ. ಇವರು ತಮಗಿಷ್ಟ ಬಂದಷ್ಟು ಹೆಂಗಸರನ್ನು ಮದುವೆಯಾಗಬಹುದು. ಇವರ ಆಸ್ತಿಪಾಸ್ತಿಗೆ ಗಂಡುಮಕ್ಕಳೇ ಉತ್ತರಾಧಿಕಾರಿಗಳು. ಬಾರ್ಬೊಸಾ ಆ ಕಾಲದಲ್ಲಿ ಜೀವಂತವಾಗಿದ್ದ 'ಸಹಗಮನ ಪದ್ಧತಿ'ಯ ವರ್ಣನೆ ಕರುಳು ಇರಿಯುತ್ತದೆ. ಸಹಗಮನಕ್ಕೆ ಒಪ್ಪದವರು ಪಡುವ ಕಷ್ಟವನ್ನು ಕುರಿತು ಬಾರ್ಬೊಸಾ ನೀಡುವ ವಿವರಗಳು ಜೀವಂತವಾಗಿವೆ. ಗಂಡ ಸತ್ತಾಗ ಹೆಂಡತಿ ಗಂಡನೊಡನೆ ಸಹಗಮನ ಮಾಡಲೇಬೇಕು. ಇದನ್ನು ಪತಿಭಕ್ತಿ ಎಂದು ಭಾವಿಸುತ್ತಾರೆ. ಬಡವಳಾದವಳು ತನ್ನ ಆತ್ಮಸಂತೋಷದಿಂದ ಸೀದಾ ಹೋಗಿ ಗಂಡನ ಚಿತೆಯಲ್ಲಿ ಬಿದ್ದು ಸಾಯುತ್ತಾಳೆ. ಅನುಕೂಲಸ್ತಳಾದವಳು ಚಿತೆಗೆ ಬೀಳುವ ಮುನ್ನ ನೆಂಟರಿಷ್ಟರನ್ನೆಲ್ಲಾ ಸೇರಿಸಿ ಊಟೋಪಚಾರ ಮಾಡಿ ಕುದುರೆಯ ಮೇಲೆ ಮೆರವಣಿಗೆ ಹೊರಡುತ್ತಾಳೆ. ಕುದುರೆ ಬೂದು ಬಣ್ಣದ್ದಿರಬೇಕು ಅಥವಾ ಬಿಳೀ ಬಣ್ಣದ್ದಿರಬೇಕು. ಕುದುರೆಯ ಮೇಲೆ ಮೆರವಣಿಗೆ ಹೊರಟು ಗಂಡನ ಚಿತೆ ಇರುವ ಬಳಿಗೆ ಹೋಗುತ್ತಾಳೆ. ಹೊಸದಾಗಿ ದೊಡ್ಡ ಚಿತೆಯನ್ನೇ ಮಾಡುತ್ತಾರೆ. ಸಿದ್ಧವಾದ ಚಿತೆಯ ಬಳಿಗೆ ಹೋಗಿ ಆಕೆ ಪೂರ್ವಾಭಿಮುಖವಾಗಿ ನಿಂತು ಮೂರು ಸಲ ನಮಸ್ಕಾರ ಮಾಡುತ್ತಾಳೆ. ಆ ಮೇಲೆ ತಾನು ತೊಟ್ಟ ಆಭರಣಗಳನ್ನೆಲ್ಲಾ ತನ್ನ ನೆಂಟರಿಷ್ಟರಿಗೆ ಹಂಚಿ ಬಿಡುತ್ತಾಳೆ. ಕೊನೆಗೆ ಸೊಂಟಕ್ಕೆ ಸುತ್ತಿದ ಬಟ್ಟೆ ಮಾತ್ರ ಉಳಿಯುತ್ತದೆ.

ಈ ಸ್ಥಿತಿಯಲ್ಲಿರುವ ಆಕೆ ಗಂಡಸರನ್ನು ಕುರಿತು 'ನೋಡಿ, ಗಂಡನೊಡನೆ ಸಾಯುವ ಹೆಂಗಸಿಗೆ ನೀವೆಷ್ಟು ಕೃತಜ್ಞರಾಗಿರಬೇಕು ಎಂಬುದನ್ನು!' ಎಂದು ಹೇಳುತ್ತಾಳೆ. ಹೆಂಗಸರನ್ನು ಕುರಿತು 'ನಿಮ್ಮ ಪತಿಭಕ್ತಿ ಎಷ್ಟಿರಬೇಕು ಎಂಬುದನ್ನು ನೆನಪಿಸಿಕೊಳ್ಳಿ. ನನ್ನಂತೆ ನೀವೂ ನಿಮ್ಮ ಪತಿಯರನ್ನು ಅನುಸರಿಸಬೇಕು' ಎನ್ನುತ್ತಾಳೆ. ಇಷ್ಟು ಹೇಳಿದ ಮೇಲೆ ಆಕೆಯ ಕೈಗೆ ಎಣ್ಣೆಯ ಗಡಿಗೆಯನ್ನು ಕೊಡುತ್ತಾರೆ. ಆಕೆ ಅದನ್ನು ತಲೆಯ ಮೇಲಿಟ್ಟುಕೊಂಡು ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತಾಳೆ. ಚಿತೆಯನ್ನು ಮೂರು ಸಲ ಪ್ರದಕ್ಷಿಣೆ ಮಾಡಿ ಪೂರ್ವಾಭಿಮುಖವಾಗಿ ನಿಂತು ವಂದನೆಗೈಯ್ಯುತ್ತಾಳೆ. ಆ ಮೇಲೆ ಗಡಿಗೆಯ ಎಣ್ಣೆಯನ್ನು ಉರಿಯುವ ಚಿತೆಗೆ ಸುರಿದು, ಗಡಿಗೆಯನ್ನು ಅದರೊಳಗೆ ಎಸೆದು, ಚಿತೆಯೊಳಕ್ಕೆ ಧುಮುಕುತ್ತಾಳೆ. ನೀರಿನ ಕೊಳಕ್ಕೆ ಧುಮುಕುವಷ್ಟು ಸಂತೋಷದಿಂದ ಅಕೆ ಉರಿಯುವ ಅಗ್ನಿ ಕುಂಡದಲ್ಲಿ ಧುಮುಕಿ ಬಿಡುತ್ತಾಳೆ. ಸುತ್ತ ನೆರೆದ ನೆಂಟರಿಷ್ಟರು ತಮ್ಮ ಕೈಯಲ್ಲಿ ಹಿಡಿದಿರುವ ಎಣ್ಣೆ, ತುಪ್ಪ, ಒಣಸೌದೆಗಳನ್ನು ಆಕೆಯ ಮೇಲೆ ಹಾಕುತ್ತಾರೆ. ಆ ಆಗಾಧ ಜ್ವಾಲೆಯಲ್ಲಿ ಆಕೆ ಒಂದರಗಳಿಗೆಯಲ್ಲಿ ಸುಟ್ಟು ಭಸ್ಮವಾಗಿ ಬಿಡುತ್ತಾಳೆ. ಆಮೇಲೆ ಬೂದಿಯನ್ನು ಹರಿಯುವ ನದಿಗಳಿಗೆ ಬಿಡುತ್ತಾರೆ.

ಸಹಗಮನ ಮಾಡದ ಹೆಂಗಸರನ್ನು ಬಹಳ ಅಗೌರವದಿಂದ ಕಾಣುತ್ತಾರೆ. ಅವರ ತಲೆಯನ್ನು ಬೋಳಿಸಿ ಮನೆತನಕ್ಕೆ ಅಮಂಗಳವೆಂದು ಹೊರಗೆ ಅಟ್ಟುತ್ತಾರೆ. ಹೀಗೆ ಮನೆಯಿಂದ ಅಟ್ಟಲ್ಪಟ್ಟ ವಿಧವೆಯರು ದಿಕ್ಕಿಲ್ಲದೆ ಅಲೆಯುತ್ತಾರೆ. ಅತಿ ಚಿಕ್ಕ ವಯಸ್ಸಿನ ವಿಧವೆಯರ ಬಗ್ಗೆ

ದಯಾದಾಕ್ಷಿಣ್ಯ ತೋರಿಸಿದ ಪಕ್ಷದಲ್ಲಿ, ಅವರನ್ನು ದೇವಸ್ಥಾನಗಳಿಗೆ ಕಳುಹಿಸಿ, ಅಲ್ಲಿ ದೇವಸ್ಥಾನಕ್ಕಾಗಿ ಹಣಗಳಿಸಲು ದೇವದಾಸಿಯರಾಗಿ ಬಿಡುತ್ತಾರೆ. ದೇವದಾಸಿಯರಿರುವ ದೇವಸ್ಥಾನಗಳು ಅನೇಕ ಇವೆ. ಅಲ್ಲಿ ಐವತ್ತರಿಂದ ನೂರು ದೇವದಾಸಿಯರಿರುವುದನ್ನು ನೋಡಬಹುದು. ಮದುವೆಯಾಗದ ಕೆಲವು ಹೆಂಗಸರು ತಮ್ಮ ತಮ್ಮ ಆತ್ಮ ಸಂತೋಷದಿಂದ ದೇವದಾಸಿಯರಾಗಿರುವುದೂ ಉಂಟು. ಇವರು ನಿಗದಿಯಾದ ವೇಳೆ ದೇವರ ಮುಂದೆ ನಿತ್ಯವೂ ಕುಣಿದು ಹಾಡುತ್ತಾರೆ. ಉಳಿದ ವೇಳೆಯನ್ನು ತಮಗಿಷ್ಟ ಬಂದ ರೀತಿಯಲ್ಲಿ ಕಳೆಯುತ್ತಾರೆ೧೩.ರಾಜನು ಸತ್ತರೆ ಅವನ ಅಂತಃಪುರದ ನೂನಾರು ಐನೂರು ಸ್ತ್ರೀಯರೂ ಅವನೊಡನೆ ಚಿತೆಯಲ್ಲಿ ಬೀಳುತ್ತಾರೆ. ಇಷ್ಟು ಜನರ ಅನುಕೂಲಕ್ಕಾಗಿ ಚಿತೆಯ ಗುಂಡಿಯನ್ನೂ ಚಿತಾಗ್ನಿಯನ್ನೂ ಬಹಳ ದೊಡ್ಡದು ಮಾಡಿರುತ್ತಾರೆ. ಶ್ರೀಗಂಧ ಮುಂತಾದ ಮರಗಳನ್ನೂ ಎಣ್ಣೆ ತುಪ್ಪಗಳನ್ನೂ ಹೇರಳವಾರ ಶೇಖರಿಸುತ್ತಾರೆ. ಈ ಚಿತೆಯಲ್ಲಿ ಬೀಳುವುದಕ್ಕೆ ನಾಮುಂದು ತಾಮುಂದು ಎಂದು ನುಗ್ಗುತ್ತಾರೆ. ಅದೊಂದು ಅಪೂರ್ವದೃಶ್ಯ! ರಾಜನ ಅನೇಕ ಅನುಚರರೂ ಇದೇ ರೀತಿ ರಾಜ ಸತ್ತಾಗ ಚಿತೆಯಲ್ಲಿ ಬೀಳುತ್ತಾರೆ.

ಈ ಪಂಗಡದ ಜನರು (ಕ್ಷತ್ರಿಯರು) ಗೋಮಾಂಸವನ್ನು ಬಿಟ್ಟು ಉಳಿದ ಮಾಂಸಗಳನ್ನೂ ಮೀನನ್ನೂ ತಿನ್ನುತ್ತಾರೆ. ಇನ್ನೊಂದು ಪಂಗಡ ಬ್ರಾಹ್ಮಣರದು. ಇವರು ಪುರೋಹಿತರೂ, ದೇವಸ್ಥಾನಗಳಲ್ಲಿ ಅರ್ಚಕರೂ ಆಗಿದ್ದಾರೆ. ಇವರು ಮೀನು ಮಾಂಸ ತಿನ್ನುವುದಿಲ್ಲ. ಏಕಪತ್ನೀ ವ್ರತಸ್ಥರು; ಹೆಂಡತಿ ಸತ್ತರೆ ಇನ್ನೊಬ್ಬಳನ್ನು ಮದುವೆಯಾಗುವುದಿಲ್ಲ. ಮಕ್ಕಳೇ ಆಸ್ತಿಗೆ ಉತ್ತರಾಧಿಕಾರಿಗಳು. ಬ್ರಾಹ್ಮಣರೆಂಬ ಗುರುತಿಗಾಗಿ ಮೂರು ಎಳೆಯ ಜನಿವಾರ ಧರಿಸುತ್ತಾರೆ. ಇವರು ಸಂಪೂರ್ಣ ಸ್ವತಂತ್ರರು. ಏನು ಮಾಡಿದರೂ ಇವರಿಗೆ ಮರಣದಂಡನೆ ಇಲ್ಲ. ನೆಮ್ಮದಿಯಾಗಿ ಜೀವನ ನಡೆಸಿಕೊಂಡು ಹೋಗುತ್ತಾರೆ.

ಬ್ರಾಹ್ಮಣರನ್ನು ಜನರು ಬಹಳ ಗೌರವಿಸುತ್ತಾರೆ. ರಾಜನೂ, ಶ್ರೀಮಂತ ಸರದಾರರೂ, ಇತರ ಗೌರವ ಮನೆತನದವರೂ ಕೊಡುವ ದಾನಧರ್ಮಗಳಿಂದ ಇವರ ಜೀವನ ಸುಖವಾಗಿ ನಡೆಯುತ್ತದೆ. ಕೆಲವರು ಆಸ್ತಿಪಾಸ್ತಿಗಳನ್ನು ಮಾಡಿಕೊಂಡು ಶ್ರೀಮಂತರಾಗಿದ್ದಾರೆ. ಕೆಲವರು ಹೇರಳವಾದ ಆದಾಯ ಉಳ್ಳ ದೇವಸ್ಥಾನಗಳಲ್ಲಿ ಸೇರಿಕೊಂಡಿರುತ್ತಾರೆ. ಇವರಿಗೆ ಭೋಜನವೆಂದರೆ ಪಂಚಪ್ರಾಣ; ಭೋಜನ ಮಾಡುವುದಕ್ಕೇ ಹುಟ್ಟಿದಂತೆ ಕಾಣುತ್ತದೆ. ಭೋಜನವೆಂದರೆ ಯೋಜನವಾದರೂ ಹೋಗುತ್ತಾರೆ. ಅನ್ನ, ತುಪ್ಪ, ಸಕ್ಕರೆ, ತರಕಾರಿ ಮತ್ತು ಹಾಲು ಇವರ ಆಹಾರ.

ಮೂರನೆಯ ಪಂಗಡಕ್ಕೆ ಸೇರಿದವರು ಬ್ರಾಹ್ಮಣರಂತೆಯೇ ಇರುವ ಮತ್ತೊಂದು ತರ ಜನ. ಇವರು ಹುರಿ ಮಾಡಿದ ರೇಷ್ಮೆಯ ದಾರದಿಂದ ಮೊಟ್ಟೆ ಗಾತ್ರದ ಕಲ್ಲನ್ನು ಬಟ್ಟೆಯನ್ನು ಕುತ್ತಿಗೆಗೆ ನೇತು ಹಾಕಿಕೊಳ್ಳುತ್ತಾರೆ. ಆ ಕಲ್ಲೇ ಇವರಿಗೆ ದೇವರಂತೆ. ಇವರಿಗೆ ಸಮಾಜದಲ್ಲಿ ಬಹಳ ಗೌರವ-ಸನ್ಮಾನಗಳುಂಟು. ಇವರು ಕಟ್ಟಿಕೊಂಡ ಆ ಕಲ್ಲನ್ನು ತಬರ್ಲೈನೇ ಎಂದು

ಕರೆಯುತ್ತಾರೆ. ಆ ಕಲ್ಲಿನ ಮೇಲಿನ ಗೌರವದಿಂದ ಇವರು ಏನು ಮಾಡಿದರೂ ಯಾರೂ ಇವರಿಗೆ ತೊಂದರೆಮಾಡುವುದಿಲ್ಲ. ಇವರು ಮೀನಿನಮಾಂಸ ತಿನ್ನುವುದಿಲ್ಲ. ಒಂದು ಕಡೆಯಿಂದ ಇನ್ನೊಂದು ಕಡೆಗೆ ಇವನ್ನು ಅಡ್ಡಿ ಆತಂಕಗಳಿಲ್ಲದೆ ಹೋಗಬಹುದು. ಇವರಲ್ಲಿ ವರ್ತಕರಾದವರು ವ್ಯಾಪಾರದ ಸಾಮಾನುಗಳನ್ನೂ ಹಣವನ್ನೂ ಹೇರಿಕೊಂಡು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಯಾವ ತೊಂದರೆಯೂ ಇಲ್ಲದೆ ಹೋಗುತ್ತಾರೆ. ಇವರಲ್ಲಿ ಕೆಲವರು ತಾವೇ ವ್ಯಾಪಾರ ಮಾಡುವುದೂ ಉಂಟು. ಇವರು ಏಕಪತ್ನೀ ವ್ರತಸ್ಥರು. ಗಂಡ ಸತ್ತಾಗ ಹೆಂಡತಿ ಗಂಡನ ಶವದೊಡನೆ ಸಮಾಧಿಯಾಗುತ್ತಾಳೆ. ಒಂದಾಳು ಮಟ್ಟಕ್ಕಿಂತ ಹೆಚ್ಚು ಆಳವಾದ ಗುಂಡಿಯನ್ನು ತೋಡಿ, ಅದರೊಳಗೆ ಆಕೆಯನ್ನು ನಿಲ್ಲಿಸಿ, ಸುತ್ತಲೂ ಮಣ್ಣು ನೂಕಿ, ತುಳಿದು ದಮ್ಮಸ್ಸು ಮಾಡಿ, ತಲೆಯ ಮೇಲೆ ದೊಡ್ಡ ಕಲ್ಲು ಹೇರಿ ಮಣ್ಣನ್ನು ಎಳೆಯುತ್ತಾರೆ. ಆಕೆ ನಿಧಾನವಾಗಿ ಸಾಯುತ್ತಾಳೆ. ಇಂಥ ಸಂದರ್ಭಗಳಲ್ಲಿ ಅನೇಕ ಕರ್ಮಗಳನ್ನು ಮಾಡುತ್ತಾರೆ. ಎಂಥ ಕನಿಕರದ ಹಾಗೂ ಸಂಕಟದ ಸ್ಥಿತಿ! ಈ ಸ್ತ್ರೀಯರು ತಮ್ಮ ಆತ್ಮ ಸಂತೋಷದಿಂದ ಈ ಕ್ರೂರ ಅಂತ್ಯಕ್ಕೆ ಬಲಿಯಾಗಬೇಕಾದರೆ ಮತ್ತು ಕೇವಲ ಗೌರವಕ್ಕಾಗಿಯೇ ಈ ರೀತಿ ಮಾಡಬೇಕಾದರೆ ಈ ಪ್ರಪಂಚದ ಆಸೆ, ಗೌರವ, ಘನತೆಗಳಿಗೇನು ಬೆಲೆಯೆಂದು ನಾವು ಆಲೋಚನೆ ಮಾಡಬೇಕಾಗುತ್ತದೆ.

ಬಾರ್ಬೊಸಾ ಸಿಡಿಯಾಡುವ ಆಚರಣೆಯನ್ನೂ ಬೇಟೆಯಾಡುವ ವಿವರಗಳನ್ನು ನೀಡಿದ್ದಾನೆ. ಅವನು ನೀಡಿರುವ ವಿವರಗಳು ಸಮಕಾಲೀನ ಆಚರಣೆಯ ಜತೆಗೆ ತುಲನೆ ಮಾಡಿ ನೋಡಲು ಅವಕಾಶಗಳಿವೆ. ಆ ಕುರಿತ ವಿವರ ಇಂತಿದೆ: ಈ ಮಹಾನಾಡಿನ ಸ್ತ್ರೀಯರಿಗೆ ವಿಗ್ರಹಾರಾಧನೆಯಲ್ಲಿ ಎಷ್ಟು ಅಗಾಧ ಭಕ್ತಿಯೆಂದರೆ ಇವರು ಆ ವಿಗ್ರಹಗಳಿಗಾಗಿ ಎಂತಹ ಅದ್ಭುತ ಕೆಲಸಗಳನ್ನು ಬೇಕಾದರೂ ಮಾಡಬಲ್ಲರು. ತಾನು ಮೆಚ್ಚಿದ ನಲ್ಲನು ತನ್ನನ್ನು ಮದುವೆಯಾಗುವುದಾದರೆ ಇಂತಹ ಸೇವೆಯನ್ನು ಮಾಡುವೆನೆಂದು ದೇವರಲ್ಲಿ ಹರಕೆ ಮಾಡಿಕೊಳ್ಳುತ್ತಾಳೆ. ತನ್ನಿಚ್ಛೆ ನೆರವೇರಿದಾಗ ಆಕೆ ಗಂಡನ ಅನುಮತಿ ಪಡೆದು ದೇವರಿಗೆ ತನ್ನ ರಕ್ತ ಚೆಲ್ಲುವ ಹರಕೆಯನ್ನು ಸಲ್ಲಿಸುತ್ತಾಳೆ. ಅದನ್ನು ನಡೆಸುವ ರೀತಿ ಹೀಗಿದೆ: ಎತ್ತಿನ ಗಾಡಿಯ ಮೇಲೆ ಬಾವಿಯಿಂದ ನೀರೆತ್ತುವ ಏತದಂತಹ ಏತವನ್ನು ಹೂಡುತ್ತಾರೆ. ಆ ಏತದ ತುದಿಯಲ್ಲಿ ಎರಡು ಕಬ್ಬಿಣದ ಕೊಕ್ಕೆಗಳಿರುತ್ತವೆ. ಹರಕೆ ಸಲ್ಲಿಸುವ ಹೆಣ್ಣು ತನ್ನ ತಂದೆ ತಾಯಿ ಬಂಧು-ಬಳಗದೊಡಗೂಡಿ, ವಾದ್ಯ ನೃತ್ಯ ಗಾಯನ ಸಮೇತ ಮೆರವಣಿಗೆ ಹೊರಡುತ್ತಾಳೆ. ಸೊಂಟದಿಂದ ಕೆಳಕ್ಕೆ ಮಾತ್ರ ಬಟ್ಟೆಯನ್ನುಟ್ಟಿರುತ್ತಾಳೆ. ದೇವರ ಗುಡಿಯ ಮುಂದೆ ಹಬ್ಬಾಗಿಲಿನ ಬಳಿ ಏತದ ಗಾಡಿ ನಿಲ್ಲುತ್ತೆ. ಅಲ್ಲಿಗೆ ಹೋದ ಮೇಲೆ ಏತವನ್ನು ಬಗ್ಗಿಸಿ ಅದರ ತುದಿಯಲ್ಲಿರುವ ಕೊಕ್ಕೆಗಳನ್ನು ಸೊಂಟಕ್ಕೆ ಚುಚ್ಚುತ್ತಾರೆ. ಕೊಕ್ಕೆಗಳು ಚರ್ಮವನ್ನು ಹೊಕ್ಕು ಮಾಂಸಖಂಡಕ್ಕೆ ಚುಚ್ಚಿಕೊಳ್ಳುತ್ತವೆ. ಆಕೆಯ ಒಂದು ಕೈಗೆ ಕಠಾರಿಯನ್ನೂ, ಮತ್ತೊಂದು ಕೈಗೆ ಗುರಾಣಿಯನ್ನು ಕೊಡುತ್ತಾರೆ. ಅನಂತರ ಏತವನ್ನು ಮೇಲೆ ಎತ್ತುತ್ತಾರೆ. ಕೆಳಗೆ ನಿಂತ ಜನಸಮೂಹ ಉಘೇ ಎನ್ನುತ್ತದೆ. ಏತದಿಂದ ನೇತಾಡುವ ಆಕೆಯ ಸೊಂಟದಿಂದ ಹೊರಟ ರಕ್ತ ಕಾಲುಗಳ ಮೇಲೆ ಹರಿದು ತೊಟ್ಟಿಕ್ಕುತ್ತಿರುತ್ತದೆ.

ಕಲ್ಲಿನ ಮೇಲಿನ ಗೌರವದಿಂದ ಇವರು ಏನು ಮಾಡಿದರೂ ಯಾರೂ ಇವರಿಗೆ ತೊಂದರೆ ಮಾಡುವುದಿಲ್ಲ. ಇವರೂ ಮೀನು ಮಾಂಸ ತಿನ್ನುವುದಿಲ್ಲ. ಒಂದು ಕಡೆಯಿಂದ ಇನ್ನೊಂದು ಕಡೆಗೆ ಇವನ್ನು ಅಡ್ಡಿ ಆತಂಕಗಳಿಲ್ಲದೆ ಹೋಗಬಹುದು. ಇವರಲ್ಲಿ ವರ್ತಕರಾದವರು ವ್ಯಾಪಾರದ ಸಾಮಾನುಗಳನ್ನೂ ಹಣವನ್ನೂ ಹೇರಿಕೊಂಡು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಯಾವ ತೊಂದರೆಯೂ ಇಲ್ಲದೆ ಹೋಗುತ್ತಾರೆ. ಇವರಲ್ಲಿ ಕೆಲವರು ತಾವೇ ವ್ಯಾಪಾರ ಮಾಡುವುದೂ ಉಂಟು. ಇವರು ಏಕಪತ್ನೀ ವ್ರತಸ್ಥರು. ಗಂಡ ಸತ್ತಾಗ ಹೆಂಡತಿ ಗಂಡನ ಶವದೊಡನೆ ಸಮಾಧಿಯಾಗುತ್ತಾಳೆ. ಒಂದಾಳು ಮಟ್ಟಕ್ಕಿಂತ ಹೆಚ್ಚು ಆಳವಾದ ಗುಂಡಿಯನ್ನು ತೋಡಿ, ಅದರೊಳಗೆ ಆಕೆಯನ್ನು ನಿಲ್ಲಿಸಿ, ಸುತ್ತಲೂ ಮಣ್ಣು ನೂಕಿ, ತುಳಿದು ದಮ್ಮಸ್ಸು ಮಾಡಿ, ತಲೆಯ ಮೇಲೆ ದೊಡ್ಡ ಕಲ್ಲು ಹೇರಿ ಮಣ್ಣನ್ನು ಎಳೆಯುತ್ತಾರೆ. ಆಕೆ ನಿಧಾನವಾಗಿ ಸಾಯುತ್ತಾಳೆ. ಇಂಥ ಸಂದರ್ಭಗಳಲ್ಲಿ ಅನೇಕ ಕರ್ಮಗಳನ್ನು ಮಾಡುತ್ತಾರೆ. ಎಂಥ ಕನಿಕರದ ಹಾಗೂ ಸಂಕಟದ ಸ್ಥಿತಿ ! ಈ ಸ್ತ್ರೀಯರು ತಮ್ಮ ಆತ್ಮ ಸಂತೋಷದಿಂದ ಈ ಕ್ರೂರ ಅಂತ್ಯಕ್ಕೆ ಬಲಿಯಾಗಬೇಕಾದರೆ ಮತ್ತು ಕೇವಲ ಗೌರವಕ್ಕಾಗಿಯೇ ಈ ರೀತಿ ಮಾಡಬೇಕಾದರೆ ಈ ಪ್ರಪಂಚದ ಆಸೆ, ಗೌರವ, ಘನತೆಗಳಿಗೇನು ಬೆಲೆಯೆಂದು ನಾವು ಆಲೋಚನೆ ಮಾಡಬೇಕಾಗುತ್ತದೆ. ಆದರೆ ಆಕೆ ಕೊಂಚವೂ ಮುಖ ಚುಳ್ಳಿಸದೆ ನಗುನಗುತ್ತ ತನ್ನ ಕಠಾರಿಯನ್ನು ಬೀಸುತ್ತಿರುತ್ತಾರೆ. ತನ್ನ ಗಂಡನ ಕಡೆಗೂ ಸಂಬಂಧಿಗಳ ಕಡೆಗೂ ನಿಂಬೆಹಣ್ಣುಗಳನ್ನು ಎಸೆಯುತ್ತಿರುತ್ತಾಳೆ. ಈ ರೀತಿ ಸಿಡಿ ಆಡಿಸಿ ಆಕೆಯನ್ನು ದೇವರ ಮುಂದೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಆಕೆಯನ್ನು ಏತದಿಂದ ಇಳಿಸಿ ಗಾಯಗಳಿಗೆ ಔಷಧಿ ಹಾಕುತ್ತಾರೆ. ಆಕೆ ದೇವರಿಗೆ ಪೂಜೆ ಮಾಡಿ ನೆರೆದವರಿಗೂ ಬ್ರಾಹ್ಮಣರಿಗೂ ಸಂತರ್ಪಣೆ ನಡೆಸಿ ದಾನಧರ್ಮ ಮಾಡುತ್ತಾಳೆ. ಅಂದಿನಿಂದ ಆಕೆ ಗಂಡನ ಅಧೀನಳಾಗುತ್ತಾಳೆ.

ಈ ರಾಜ್ಯದಲ್ಲಿ ಮತ್ತೊಂದು ರೀತಿಯ ವಿಗ್ರಹಾರಾಧನೆ ನಡೆಯುತ್ತದೆ. ಮೂಢ ನಂಬಿಕೆಯಿಂದ ಅನೇಕ ಹೆಂಗಸರು ತಮ್ಮ ಕನ್ಯೆಯರನ್ನು ದೇವದಾಸಿಯರಾಗಿ ಬಿಡುತ್ತಾರೆ. ಅವರು ಹತ್ತು ವರ್ಷ ವಯಸ್ಕರಾದಾಗ ಅವರನ್ನು ಮದುವೆಯಲ್ಲಿ ಮೆರವಣಿಗೆ ಮಾಡಿದಂತೆ. ಮೆರವಣಿಗೆ ಮಾಡುತ್ತ ಬಂಧುಬಳಗದೊಡನೆ ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾರೆ. ದೇವಸ್ಥಾನದ ಬಾಗಿಲಿನ ಹೊರಗಡೆ ಮನುಷ್ಯನ ಎತ್ತರದ ಕಗ್ಗಲ್ಲು ಇರುತ್ತದೆ. ಇದರ ಸುತ್ತ ಮರದ ಕಟಕಟೆಯಿರುತ್ತದೆ. ಈ ಕಟಕಟೆಯ ಮೇಲೆ ಅನೇಕ ದೀಪಗಳನ್ನಿಟ್ಟು ಅಲಂಕರಿಸುತ್ತಾರೆ. ಸುತ್ತಲೂ ರೇಷ್ಮೆಯ ಪರದೆಯನ್ನು ಹಾಕುತ್ತಾರೆ. ಹೊರಗಡೆಯವರಾರಿಗೂ ಒಳಗೆ ನಡೆಯುವುದು ಕಾಣುವುದಿಲ್ಲ. ಮೇಲೆ ಹೇಳಿದ ಶಿಲೆಯ ಮೇಲೆ ಮನುಷ್ಯನ ಅರ್ಧದಷ್ಟು ಎತ್ತರದ ಇನ್ನೊಂದು ಶಿಲೆ ಇರುತ್ತದೆ. ಈ ಶಿಲೆಯ ಮಧ್ಯೆ ಒಂದು ಕುಳಿಯಿರುತ್ತದೆ. ಈ ಕುಳಿಗೆ ಚೂಪಾದ ಕಡ್ಡಿಯನ್ನು ಸಿಕ್ಕಿಸಿರುತ್ತಾರೆ. ಕನ್ಯೆಯ ತಾಯಿ ತನ್ನ ಮಗಳನ್ನೂ ಹತ್ತಿರದ ಸಂಬಂಧಿಗಳಾದ ಸ್ತ್ರೀಯರನ್ನೂ ಕಟಕಟೆಯೊಳಕ್ಕೆ ಕರೆದುಕೊಂಡು ಹೋಗುತ್ತಾಳೆ. ಅಲ್ಲಿ ವಿಶೇಷ

ಪೂಜೆ ಪುರಸ್ಕಾರಗಳು ನಡೆಯುತ್ತವೆ. ಆದರೆ ಅವು ಹೊರಗಡೆಯವರಿಗೆ ಗೊತ್ತಾಗುವುದಿಲ್ಲ. ಅಂತೂ ಆ ವಿಧಿಗಳು ಮುಗಿದ ಮೇಲೆ ಕನ್ಯೆಯು ಅಲ್ಲಿ ಸಿಕ್ಕಿಸಿರುವ ಕಡ್ಡಿಯ ಸಹಾಯದಿಂದ ತನ್ನ ಕನ್ನೆತನವನ್ನು ನೀಗಿ ಕಲ್ಲುಗಳ ಮೇಲೆ ರಕ್ತವನ್ನು ಚೆಲ್ಲುತ್ತಾಳೆ. ನರಸಿಂಗದ ರಾಜನಿಗೂ, ಆತನ ರಾಜ್ಯದ ಹೆಚ್ಚು ಭಾಗವನ್ನು ಗೆದ್ದುಕೊಂಡಿರುವ ದಖನ್ ರಾಜನಿಗೂ ಆಗಾಗ್ಗೆ ಯುದ್ಧಗಳಾಗುತ್ತಲೇ ಇರುತ್ತವೆ. ಹಾಗೆಯೇ ಜೆಂಟೈನ್ ರಾಜನಾದ ಒಳನಾಡಿನಲ್ಲಿರುವ ಒಟಿರ (ಔಡ್ರಾ:ಒರಿಸ್ಸ) ರಾಜನಿಗೂ ಯುದ್ಧಗಳು ನಡೆಯುತ್ತಲೇ ಇರುತ್ತವೆ.

ಸಾಮಾನ್ಯವಾಗಿ ನರಸಿಂಗದ ರಾಜ ತಾನೇ ಸ್ವತಃ ಯುದ್ಧಕ್ಕೆ ಹೋಗುವುದಿಲ್ಲ; ಸೇನಾಧಿಪತಿಗಳನ್ನು ಕಳುಹಿಸುತ್ತಾನೆ. ಹೋಗಬೇಕಾಗಿ ಬಂದಾಗ ನಿರ್ಧಾರವಾದ ದಿನ ನಗರದ ಹೊರಗಡೆ ತನ್ನ ಮಂದಿಮಾರ್ಬಲ ಸಮೇತ ಹೋಗಿ ಯಾವ ದಿಕ್ಕಿಗೆ ಯುದ್ಧಕ್ಕೆ ಹೋಗಬೇಕೋ ಆ ದಿಕ್ಕಿಗೆ ಒಂದು ಬಾಣ ಬಿಡುತ್ತಾನೆ. ಇಂಥ ದಿನ ಯುದ್ಧಕ್ಕೆ ಹೊರಡಬೇಕೆಂದು ನಿರ್ಧರಿಸುತ್ತಾನೆ. ಈ ವಿಚಾರ ಇಡೀ ರಾಜ್ಯಕ್ಕೆಲ್ಲ ಗೊತ್ತಾಗುತ್ತದೆ. ರಾಜ ಊರ ಹೊರಗಡೆ ಹಾಕಿದ ಗುಡಾರಗಳಲ್ಲಿರುತ್ತಾನೆ. ಹೊರಡುವ ದಿನ ಬಂದಾಗ ಆತನ ಆಜ್ಞೆಯಂತೆ ನಗರವನ್ನು ಬೆಂಕಿ ಇಟ್ಟು ಸುಟ್ಟು ಬಿಡುತ್ತಾರೆ. ಅರಮನೆಗಳು, ದುರ್ಗಗಳು, ದೇವಸ್ಥಾನಗಳು ಮತ್ತು ಶ್ರೀಮಂತ ಸರದಾರರ ಮನೆಗಳನ್ನು ಬಿಟ್ಟು ಉಳಿದ ಎಲ್ಲಾ ಮನೆ ಮಠಗಳನ್ನು ಸುಟ್ಟು ಹಾಕುತ್ತಾರೆ. ಇದರ ಉದ್ದೇಶ ಊರಿನವರೆಲ್ಲ ಅವರ ಹೆಂಡತಿ ಮಕ್ಕಳ ಸಮೇತ ಯುದ್ಧಕ್ಕೆ ಹೊರಟು ರಾಜನೊಡನೆ ಹೋರಾಡಲಿ ಎಂದು. ಜನರು ಓಡಿಹೋಗದಿರಲೆಂದು ಅವರಿಗೆ ಕೈ ತುಂಬ ಸಂಬಳ ಕೊಡುತ್ತಾನೆ.

ಈ ಹೆಚ್ಚಿಗೆ ಸಂಬಳಕ್ಕೆ ಮೊದಲು ಅರ್ಹರು ಯಾರೆಂದರೆ ಮದುವೆಯಾಗದ ಹುಡುಗಿಯರು. ಇಂಥವರು ಬಹಳ ಜನ ಇರುತ್ತಾರೆ. ಇವರು ಯುದ್ಧ ಮಾಡದಿದ್ದರೂ ಇವರನ್ನು ಮೆಚ್ಚಿದ ಯೋಧರು ವೀರಾವೇಶದಿಂದ ಹೋರಾಡುತ್ತಾರೆ. ಈ ಯುವತಿಯರ ಮೇಲಿನ ಆಸೆಗಾಗಿ ಬೇರೆ ರಾಜ್ಯಗಳಿಂದಲೂ ಶ್ರೀಮಂತರೂ ಸರದಾರರೂ ಬಂದು ರಾಜನ ಸೈನ್ಯವನ್ನು ಸೇರಿಕೊಳ್ಳುತ್ತಾರೆ. ಪ್ರತಿಯೊಬ್ಬರೂ ಏಳೆಂಟು ಮುದ್ದು ಯುವತಿಯರನ್ನು ತಮ್ಮ ಸೇವೆಗೆ ಸೇರಿಸಿಕೊಂಡಿರುತ್ತಾರೆ. ಇವರಿಗೆ ರಾಜನ ಬೊಕ್ಕಸದಿಂದ ಸಂಬಳ ದೊರೆಯುತ್ತದೆ.

ಈ ಯುವತಿಯರು ಬಹಳ ಮಾನ್ಯತೆಯಿಂದ ಇರುತ್ತಾರೆ. ಇವರಿಗೆ ಯಾರೂ ವಾರಸುದಾರರು ಇಲ್ಲದೇ ಹೋದಾಗ ಇವರ ಇಡೀ ಆಸ್ತಿಯೆಲ್ಲ ರಾಜನಿಗೆ ಸೇರುತ್ತದೆ. ಒಂದು ಸಲ ಇಂಥವಳೊಬ್ಬಳು ಸತ್ತಾಗ ರಾಜನಿಗೆ ಅರುವತ್ತು ಸಾವಿರ ಚಿನ್ನದ ಪಾರ್ಡೊಗಳು ಸಿಕ್ಕಿದುವು. ಇಷ್ಟಲ್ಲದೆ ಆಕೆ ಹನ್ನೆರಡು ಸಾವಿರ ಚಿನ್ನದ ಪರ್ಡೋಗಳನ್ನು ತಾನು ಚಿಕ್ಕಂದಿನಿಂದ ಸಾಕಿದ್ದ ದಾಸಿಯೊಬ್ಬಳಿಗೆ ದಾನ ಮಾಡಿದ್ದಳು. ಈ ರಾಜನ ಅಪಾರ ಶ್ರೀಮಂತಿಕೆಗೆ ಇದೇನು ಹೆಚ್ಚಲ್ಲ. ಒಡವೆ ಮತ್ತು ವಜ್ರ ವೈಢೂರ್ಯಗಳೆಂದರೆ ರಾಜನಿಗೂ ಬಹಳ ಪ್ರೀತಿ. ಬಹಳ ಹಣಕೊಟ್ಟು ಕೊಂಡುಕೊಳ್ಳುತ್ತಾನೆ.

ಈ ರಾಜ್ಯದ ಜನರಿಗೆ ಮೃಗಪಕ್ಷಿಗಳ ಬೇಟೆಯಲ್ಲಿ ತುಂಬಾ ಆಸಕ್ತಿ. ದುಡಿಮೆ ಮಾಡುವ ತೊತ್ತುಗಳೂ ಅನೇಕ ಜನ ಇದ್ದಾರೆ. ನರಸಿಂಗನ ರಾಜ್ಯವನ್ನು ದಾಟಿದರೆ ಸಿಕ್ಕುವುದು ಒಟಿರ(ಒರಿಸ್ಸಾ) ಎಂಬ ರಾಜ್ಯ. ಇಲ್ಲಿ ರಾಜನೂ ಪ್ರಜೆಗಳೂ ಜೆಂಟೈಲರು. ತುಂಬಾ ಶ್ರೀಮಂತನೂ ಶಕ್ತಿವಂತನೂ ಆಗಿದ್ದಾನೆ ರಾಜ. ಇವನಿಗೂ ನರಸಿಂಗದ ರಾಜನಿಗೂ ಆಗಾಗ್ಗೆ ಯುದ್ಧಗಳಾಗುತ್ತಲೇ ಇರುತ್ತವೆ" ಎಂದು ಹೇಳಿದ್ದಾನೆ.[೧೩]

ಈ ಸಾಮ್ರಾಜ್ಯದಲ್ಲಿ ಎರಡು ಭಾಷಿಕ ಆಯಾಮಗಳಿವೆ. ಕನ್ನಡ ಮತ್ತು ತಮಿಳು ಭಾಷೆಯ ಕೊಡುಕೊಳೆಯ ಸಂಬಂಧವಿದೆ. ವ್ಯವಹಾರಕ್ಕಾಗಿ ಈ ಭಾಷೆಗಳನ್ನು ಬಳಸುತ್ತಿದ್ದರು. ಈ ಎರಡು ಭಾಷೆಗಳು ಪ್ರಾಧಾನ್ಯತೆಯನ್ನು ಪಡೆದುಕೊಂಡಿದ್ದವು. ಜೊತೆಗೆ ವ್ಯಾಪಾರದ ಉಲ್ಲೇಖವೂ ಇರುವುದರಿಂದ ಪ್ರಬುದ್ಧತೆಯಿಂದ ಕೂಡಿತ್ತು. ಯುದ್ಧದ ಚಿತ್ರಣ ಇಲ್ಲಿ ಕಾಣುತ್ತೇವೆ. ಯುದ್ಧವನ್ನು ನೋಡಲು ಬರಲು ಅನೇಕ ಜನರು ಕೂಡುತ್ತಿದ್ದರೆಂದರೆ ಬಹುಶಃ ಯುದ್ಧವನ್ನು ಮಾಡುವ ಶೈಲಿಯನ್ನು, ಆ ಮೂಲಕ ಯುದ್ಧದ ಬಗ್ಗೆ ಅರಿವು ಮೂಡಿಸಿಕೊಳ್ಳಲು ಬರುತ್ತಿದ್ದರೆಂದು ಇದರಿಂದಾಗಿ ತಿಳಿಯುತ್ತದೆ. ಜೀವಸಂಕುಲಗಳ ಬಗ್ಗೆ ತಿಳಿಸುತ್ತಾನೆ. ಶ್ರೀಕೃಷ್ಣದೇವರಾಯನ ಆಸ್ಥಾನಕ್ಕೆ ಬಂದದ್ದು ಮತ್ತು ವಿಜಯನಗರ ಸಾಮ್ರಾಜ್ಯದ ವಿದೇಶಾಂಗದ ನೀತಿಯನ್ನು ಇಲ್ಲಿ ಗಮನಿಸಬಹುದಾಗಿದೆ. ಈ ಸಾಮ್ರಾಜ್ಯದಲ್ಲಿ ಜಾತಿಶ್ರೇಣಿಯನ್ನು ಸಹ ಕಾಣಬಹುದಾಗಿದೆ. ಅನೇಕ ಬಗೆಯ ಸುಗಂಧ ವಸ್ತುಗಳನ್ನು ಲೇಪಿಸಿಕೊಳ್ಳುತ್ತಿದ್ದರು. ಇದರಿಂದ ಸೌಂದರ್ಯದ ಕಡೆಗೆ ಗಮನ ನೀಡುತ್ತಿದ್ದರು ಎಂದು ಕಾಣುತ್ತದೆ. ಈತನ ಭೌಗೋಳಿಕ ಮತ್ತು ಮಾನವಕುಲ ಶಾಸ್ತ್ರದ ದೃಷ್ಟಿಯಿಂದ ಅವನ ಬರಹಗಳು ಹಂಪಿಯ ಚರಿತ್ರೆಯ ನಿರ್ಮಾಣ ಮಾಡಿಕೊಳ್ಳಲು ಸಹಾಯಕ ವರ್ತಕರ ಚರಿತ್ರೆಯನ್ನು, ಯುದ್ಧವನ್ನು ವರ್ಣಿಸಿದ್ದಾನೆ.

೫.೧.೩. ಡುಮಿಂಗೋ ಪಾಯೇಸ್

(ಈತ ಪೋರ್ಚುಗಲ್ ದೇಶದ ಪ್ರವಾಸಿಗ. ಕ್ರಿ.ಶ.೧೫೨೦ರಲ್ಲಿ ಶ್ರೀಕೃಷ್ಣದೇವರಾಯನ ಆಸ್ಥಾನಕ್ಕೆ ಭೇಟಿಯಿತ್ತನು. ಅಬ್ದುಲ್ ರಜಾಕ್, ಬಾರ್ಬೊಸಾ ನಂತರ ಬಂದವರಲ್ಲಿ ಡೊಮಿಂಗೊ ಪ್ಯಾಸ್ ಪ್ರಮುಖ ಪ್ರವಾಸಿಗ. ಆತ ಕ್ರಿ.ಶ.೧೫೨೦ರಲ್ಲಿ ವಿಜಯನಗರಕ್ಕೆ ಬಂದನು. ಈತ ಪೋರ್ಚುಗೀಸ್ ಭಾಷೆಯಲ್ಲಿ ತನ್ನ ಪ್ರವಾಸ ಕಥನವನ್ನು ಬರೆದಿದ್ದಾರೆ. ವಿಜಯನಗರದ ರಾಜಧಾನಿಯ ವರ್ಣನೆ, ಅಲ್ಲಿ ಉತ್ಪನ್ನಗೊಳ್ಳುವ ವಸ್ತುಗಳ ಬಗೆಗೆ, ಅಲ್ಲಿ ಆಚರಿಸಲಾಗುತ್ತಿದ್ದ ಆಚರಣೆಗಳ ಬಗೆಗೆ ಎಷ್ಟೆಷ್ಟೋ ಕುತೂಹಲಕರ ವರ್ಣನೆಗಳು ಅವರ ಬರೆಹಗಳಲ್ಲಿ ಇವೆ. ರಾಜನು ಸುಂದರವಾದ ಹಾಗೂ ದೊಡ್ಡದಾದ ಅರಮನೆಗಳನ್ನು ಕಟ್ಟಿಸಿದ್ದಾನೆ. ಅಲ್ಲಲ್ಲಿ ಅನೇಕ ಅನೇಕ ಅಂಗಳಗಳಿವೆ. ಆ ಅಂಗಳಲ್ಲಿ ಅನೇಕ ದಿಬ್ಬಗಳೂ, ಕೊಳಗಳೂ, ಹೂಗಿಡಗಳೂ ಇವೆ. ಮರಗಳಿಂದಲೂ ಹೂಗಿಡಗಳಿಂದಲೂ ತುಂಬಿದ ತೋಟಗಳಿವೆ. ಅರಮನೆಯ ಎಲ್ಲಾ ಕೆಲಸವೂ ಸ್ತ್ರೀಯರಿಂದಲೇ ನಡೆಯಬೇಕಾದ್ದರಿಂದ. ಇವರಿಗೆ ಅರಮನೆಯೊಳಗೇ ವಾಸಕ್ಕೆ ಮನೆಗಳನ್ನು ಕಟ್ಟಿ ಬೇಕಾದುದನ್ನು ಒದಗಿಸುತ್ತಾರೆ. ಹಿಂದೆ ನಾನು ಹೇಳಿದ ಕೊಳಗಳಲ್ಲಿ ಸ್ತ್ರೀಯರು ನಿತ್ಯವೂ

ಸ್ನಾನ ಮಾಡಿ, ವಾದ್ಯ ಬಾರಿಸಿ ಹಾಡಿ ನಲಿಯುತ್ತಾರೆ. ರಾಜನು ಪ್ರತ್ಯೇಕವಾದ ಓಲಗಶಾಲೆಯಲ್ಲಿ ತನ್ನ ಶ್ರೀಮಂತ ಸರದಾರರು ಮತ್ತು ಅಧಿಕಾರಿಗಳೊಡನೆ ಕುಳಿತು ರಾಜ್ಯ ವ್ಯವಹಾರಗಳನ್ನು ಪರಿಶೀಲಿಸುತ್ತಾನೆ. ಅರಮನೆಯ ಪಾಕಗೃಹಗಳು ದೊಡ್ಡದಾಗಿವೆ. ಎರಡನೇ ಕೃಷ್ಣದೇವರಾಯನ ದಿನಚರಿ ತಿಳಿಯಬೇಕಾದರೆ ಪ್ಯಾಸ್‌ನ ಬರೆಹಕ್ಕೆ ನಾವು ಹೋಗಬೇಕು. ಪ್ಯಾಸ್ ಎರಡನೇ ಕೃಷ್ಣದೇವರಾಯನ ಕಾಲದಲ್ಲಿ, ಅಂದರೆ ಕ್ರಿ.ಶ.೧೫೨೦ರಲ್ಲಿ ವಿಜಯನಗರಕ್ಕೆ ಬಂದಿದ್ದನು. ಅದು ವಿಜಯನಗರದ ಉಚ್ಛ್ರಾಯ ಕಾಲ. ಕೃಷ್ಣದೇವರಾಯನನ್ನು ಪ್ಯಾಸ್ ಹಲವಾರು ಸಲ ಕಂಡು ಅವನ ವೈಭವದ ಬಗ್ಗೆಯೂ, ಅವನ ಕಾಲದ ನಡೆನುಡಿಗಳ ಬಗ್ಗೆಯೂ ಬರೆದಿದ್ದಾನೆ.

ಪ್ಯಾಸನು ಅಂದಿನ ನಗರವನ್ನು ಕುರಿತು ಹೀಗೆ ಹೇಳಿದ್ದಾನೆ: "ಆಮೇಲೆ ಈ ದರ್ಚ ನಗರದಿಂದ ೧೮ ರಹದಾರಿ ದೂರವಿರುವ ನರಸಿಂಗ ರಾಜ್ಯದ ಹಾಗೂ ರಾಜ ಯಾವಾಗಲೂ ಅಲ್ಲಿಯೆ ವಾಸಿಸುವ ಬೀಸ್ನಗ ನಗರದ ಕಡೆಗೆ ಹೋಗುವಾಗ ಅನೇಕ ನಗರಗಳು ಮತ್ತು ಗೋಡೆಯುಳ್ಳ ಹಳ್ಳಿಗಳಿವೆ. ಮತ್ತು ಬೀಸ್ನಗ ನಗರ ತಲುಪುವ ಎರಡು ಹರದಾರಿ ಮುಂಚೆ ನಗರವನ್ನು ಪ್ರವೇಶಿಸಲು ಕಣಿವೆ ಮಾರ್ಗಗಳುಳ್ಳ ಉನ್ನತ ಬೆಟ್ಟ ಸಾಲುಗಳಿವೆ. ಇವುಗಳನ್ನು ಹೆಬ್ಬಾಗಿಲುಗಳೆಂದು ಕರೆಯಲಾಗುತ್ತದೆ. ಇವುಗಳ ಮೂಲಕವೇ ಪ್ರವೇಶಿಸಬೇಕು, ಏಕೆಂದರೆ ಇವುಗಳ ಮೂಲಕವಲ್ಲದೆ ಬೇರೆ ದಾರಿಯಿಲ್ಲ. ಈ ಬೆಟ್ಟಸಾಲು ಇಪ್ಪತ್ತು ನಾಲ್ಕು ಹರದಾರಿಗಳ ಆವರ್ತನದಿಂದ ನಗರವನ್ನು ಸುತ್ತುವರಿಯುತ್ತದೆ ಮತ್ತು ಈ ಸಾಲಿನೊಳಗೆ ಅದನ್ನು ಸಮೀಪದಿಂದ ಸುತ್ತುವರಿಯುವ ಮಿಕವು ಇವೆ. ಈ ಬೆಟ್ಟಸಾಲುಗಳಿಗೆ ಯಾವುದೆ ಸಮತಲ ಭೂಮಿ ಹತ್ತುವಲ್ಲೆಲ್ಲ ಅವು ಅದನ್ನು ಬಲು ಭದ್ರ ಗೋಡೆಯೊಂದಿಗೆ ಅಡ್ಡ ಹಾಯುತ್ತವೆ. ಇದರಿಂದಾಗಿ ಮೊದಲ ಸಾಲಿನಲ್ಲಿರುವ ಮತ್ತು ನಗರಕ್ಕೆ ಪ್ರವೇಶ ಮಾರ್ಗಗಳಾಗಿರುವ ದ್ವಾರಗಳ ಮೂಲಕ ದಾರಿಗಳು ಹಾಯುವ ಸ್ಥಳಗಳನ್ನು ಹೊರತುಪಡಿಸಿ ಗುಡ್ಡಗಳು ಪೂರ್ತಿ ಮುಚ್ಚಿವೆ. ಇಂಥ ಸ್ಥಳಗಳಲ್ಲಿ ಕೆಲವು ಮಂದಿ ಸುರಕ್ಷಿತವಿರಬಹುದಾದ ಸಣ್ಣ ತಗ್ಗುಗಳು(ಅಥವಾ ಗುಹೆಗಳು)ಇವೆ. ಈ ಬೆಟ್ಟಸಾಲುಗಳು ನಗರದ ಒಳಭಾಗದವರೆಗೆ ಸಾಗುತ್ತವೆ. ಇವೆಲ್ಲ ಸುತ್ತಗಟ್ಟುಳ್ಳ ಪ್ರದೇಶಗಳ ನಡುವೆ ಭತ್ತ ಬೆಳೆಯುವ ಬಯಲುಗಳು ಮತ್ತು ಕಣಿವೆಗಳಿವೆ. ಲೆಟ್ಯುಸ್ ಮತ್ತು ಕ್ಯಾಬೆಜುಗಳು ಮಾತ್ರವಲ್ಲದೆ ಪೋರ್ತುಗಾಲಿನಲ್ಲಿಯಂತೆ ಕಿತ್ತಲೆ, ನಿಂಬೆ, ಜಂಬೀರ, ಮೂಲಂಗಿ ಮತ್ತಿತರ ತೋಟೋತ್ಪನ್ನಗಳುಳ್ಳ ತೋಟಗಳಿವೆ. ಈ ಬೆಟ್ಟಸಾಲುಗಳ ಮಧ್ಯೆ ಅನೇಕ ಸರೋವರಗಳಿದ್ದು ಅವುಗಳಿಂದ ಮೇಲೆ ಹೇಳಿರುವ ಬೆಳೆಗಳಿಗೆ ನೀರುಣ್ಣಿಸುತ್ತಾರೆ. ಮತ್ತು ಇವೆಲ್ಲ ಬೆಟ್ಟಸಾಲುಗಳಲ್ಲಿ ತೀರ ಚಿಕ್ಕವನ್ನು ಬಿಟ್ಟರೆ ಅರಣ್ಯಗಳು ಇಲ್ಲವೆ ಕುರುಚಲು ಗಿಡಗಳ ಗುಂಪುಗಳಾಗಲೀ ಹಸಿರಾದ ಇನ್ನಾವುದಾಗಲೀ ಇಲ್ಲ. ಈ ಗುಡ್ಡಗಳಾದರೂ ಎಂದಿಗೂ ವಿಚಿತ್ರವಾಗಿವೆ. ಅವುಗಳು ಬಿಳಿಗಲ್ಲಿನವಾಗಿದ್ದು ಅತ್ಯಂತ ಅಸದೃಶ ರೀತಿಯಲ್ಲಿ ಕಲ್ಲು ದಿಮ್ಮಿಗಳನ್ನು ಒಂದರ ಮೇಲೊಂದು ಪೇರಿಸಿಟ್ಟಂತಿದೆ. ಹಾಗಾಗಿ, ಅವು ಹವೆಯಲ್ಲಿ ನಿಂತಿರುವಂತೆ ಮತ್ತು ಒಂದಕ್ಕೊಂದು ಕೂಡಿಲ್ಲವೆಂಬಂತೆ ಭಾಸವಾಗುತ್ತದೆ. ನಗರ ಈ ಬೆಟ್ಟದ ಮಧ್ಯದಲ್ಲಿದ್ದು ಅವುಗಳಿಂದ ಸಂಪೂರ್ಣವಾಗಿ ಸುತ್ತುವರಿಯಲ್ಪಟ್ಟಿದೆ.

ಬೆಟ್ಟಸಾಲುಗಳು ದಖೆಮ್ ರಾಜ್ಯದವರೆಗೂ ತಲುಪುತ್ತವೆ ಮತ್ತು ಇಡಲ್ ಸಾಹಿನ ರಾಜ್ಯದ ಹಾಗೂ ಹಿಂದೆ ನರಸಿಂಗನ ರಾಜ್ಯಕ್ಕೆ ಸೇರಿದ ರಾಚೋಲ ಎಂಬ ನಗರದ ಗಡಿಯವರೆಗೂ ಹಬ್ಬಿವೆ. ಆ ನಗರದ ಸಲುವಾಗಿ ಬಹಳ ಯುದ್ಧವಾಗಿ ಈ ರಾಜ ಅದನ್ನು ಇಡಲ್ ಸಾಹಿನಿಂದ ತೆಗೆದುಕೊಂಡ. ಹೀಗಾಗಿ ಈ ಬೆಟ್ಟಸಾಲುಗಳು ಒಂದು ರೀತಿಯಲ್ಲಿ ಇವರೆಡು ರಾಜ್ಯಗಳು ಎಂದೂ ಒಂದುಗೂಡದೆ ಯಾವಾಗಲೂ ಯುದ್ಧದಲ್ಲಿ ತೊಡಗಿರಲು ಕಾರಣವಾಗಿವೆ. ಒರಿಯಾ ಕಡೆಗೂ ಬೆಟ್ಟಸಾಲುಗಳಿವೆ. ಆದರೆ ನಮ್ಮವುಗಳಂತೆ ಕುರುಚಲು ಗಿಡಗಳು ಮತ್ತು ಪೊದೆಗಳ ಚಿಕ್ಕ ಗುಂಪುಗಳಿರುವುದರಿಂದ ಅವು ಇವುಗಳಿಗಿಂತ ಭಿನ್ನವಾಗಿವೆ. ಈ ಬೆಟ್ಟ ಸಾಲುಗಳ ಎತ್ತರ ಕಡಿಮೆಯಿದ್ದು ಅವುಗಳ ಮಧ್ಯೆ ದೊಡ್ಡ ಬಯಲುಗಳಿವೆ. ಇವೆರಡು ರಾಜ್ಯಗಳ ತೀರ ಪೂರ್ವ ಅಂಚಿಗೆ ನಾಡು, ಎಲ್ಲೂ ಕಾಣದಂಥ ಅತ್ಯಂತ ನಿಬಿಡವಾದ ಕುರುಚಲು ಅಡವಿಯಿಂದ ತುಂಬಿದೆ ಎಂಬುದನ್ನು ಅರಿತಿರಬೇಕು. ಅದರಲ್ಲಿ ದೊಡ್ಡ ಪ್ರಾಣಿಗಳಿವೆ ಮತ್ತು (ಇದು) ಎಂಥ ದುರ್ಗವಾಗಿದೆಯೆಂದರೆ ಅದು ಎರಡೂ ಮಗ್ಗಲುಗಳನ್ನು ಸಂರಕ್ಷಿಸುತ್ತದೆ. ಅದು ಒಂದು ರಾಜ್ಯದಿಂದ ಇನ್ನೊಂದಕ್ಕೆ ಹೋಗುವ ಕಣಿವೆ ಮಾರ್ಗಗಳನ್ನು ಹೊಂದಿದೆ. ಈ ಕಣಿವೆ ಮಾರ್ಗಗಳ ಗಡಿಯಲ್ಲಿ ನರಸಿಂಗದ ರಾಜ ಕೆಲವು ಯೋಧರೊಂದಿಗೆ ಒಬ್ಬ ದಳವಾಯಿಯನ್ನು ಇಟ್ಟಿದ್ದಾನೆ ಮತ್ತು (ಪೋರ್ತುಗೀಜ) ಭಾರತದ ಬದಿಗೆ ನಾನು ಹೇಳಿದುದನ್ನು ಹೊರತುಪಡಿಸಿ ಅವನು ಯಾವ ಸೈನ್ಯವನ್ನೂ ಇರಿಸಿಲ್ಲ.

ಈಗ ಮೊದಲ ಸಾಲಿನ ದ್ವಾರಗಳ ಬಗೆಗೆ ನಾನು ಹೇಳುವುದೇನೆಂದರೆ ಪಶ್ಚಿಮಕ್ಕೆ ಮುಖ್ಯ ಹಾಗೂ ಗೋವಾದಿಂದ ಬರುವವರು ಹಾಯುವ ಹೊರ ಬಾಗಿಲಾಗಿರುವುದರ ಪ್ರವೇಶದಲ್ಲಿ ಈ ರಾಜ ಅದರೊಳಗೆ ಗೋಡೆ ಹಾಗೂ ಗೋಪುರಗಳಿಂದ ಬಲಪಡಿಸಲಾದ ಬಲವಾದ ನಗರವನ್ನು ಕಟ್ಟಿದ್ದಾನೆ. ಮತ್ತು ದ್ವಾರಗಳ ಹೊರ ಬಾಗಿಲುಗಳು ಗೋಪುರಗಳನ್ನು ಹೊಂದಿದ್ದು ಬಲು ಗಟ್ಟಿಯಾಗಿವೆ. ಈ ಗೋಡೆಗಳು ಇತರ ನಗರಗಳ ಗೋಡೆಗಳಂತಿರದೆ ಯಾವ ಪ್ರದೇಶದಲ್ಲೂ ಕಾಣಸಿಗದಂತಹ ಗಟ್ಟಿಕಲ್ಲು ಕಟ್ಟಡವಾಗಿವೆ ಮತ್ತು ಒಳಗಡೆ ಸಪಾಟಾದ ಮಾಳಿಗೆಗಳುಳ್ಳ ಅವೇ ಮಾದರಿಯ ಕಟ್ಟಡಗಳ ಅತಿ ಸುಂದರ ಸಾಲುಗಳಿವೆ. ಇದರಲ್ಲಿ ಅನೇಕ ವರ್ತಕರು ವಾಸವಾಗಿದ್ದು ಅದು ಬಹಳ ಜನಸಂಖ್ಯೆಯಿಂದ ತುಂಬಿದೆ. ಏಕೆಂದರೆ ರಾಜ ಅನೇಕ ಗೌರವಾನ್ವಿತವರ್ತಕರನ್ನು ನಗರಗಳಿಂದ ಅಲ್ಲಿಗೆ ಹೋಗುವಂತೆ ಪ್ರೇರಿಪಿಸುತ್ತಾನೆ ಮತ್ತು ಮತ್ತು ಅದರಲ್ಲಿ ಸಾಕಷ್ಟು ನೀರು ಇದೆ. ಇದಲ್ಲದೆ ರಾಜ ಅಲ್ಲಿ ಒಂದು ಕೆರೆ ಕಟ್ಟಿಸಿದ್ದಾನೆ. ನನಗನಿಸುವಂತೆ ಅದು ಒಂದು ಫ್ಯಾಲ್ಕನ್ ಗುಂಡಿನಷ್ಟು ಅಗಲವಿದೆ. ಅದು ಎರಡು ಗುಡ್ಡಗಳ ಬಾಯಿಯಲ್ಲಿರುವುದರಿಂದ; ಇದೂ ಅಲ್ಲದೆ, ಹೊರಗಿನ ಬೆಟ್ಟ ಸಾಲಿನ ಕೆಳಭಾಗಗಳುದ್ದಕ್ಕೂ ಸಾಗುವ ಕೊಳವೆಗಳ ಮೂಲಕ ಮೂರು ರಹದಾರಿಗಳಿಗಿಂತ ಅಧಿಕ ದೂರದಿಂದ ಅದಕ್ಕೆ ನೀರು ಬರುತ್ತದೆ. ಈ ನೀರನ್ನು ತಾನೇ ಒಂದು ಚಿಕ್ಕ ನದಿಯೊಳಗೆ ಹೊರಸೂಸುವ ಕೆರೆಯೊಂದರಿಂದ ತರಲಾಗುತ್ತದೆ. ಕೆರೆಗೆ ಆಕೃತಿಗಳನ್ನು ಸುಂದರವಾಗಿ ಕೆತ್ತಿದ ಮೂರು ದೊಡ್ಡ

ಸ್ತಂಭಗಳಿವೆ. ಇವು ಮೇಲೆ ಕೆಲವು ಕೊಳವೆಗಳೊಂದಿಗೆ ಜೋಡಿಸಲ್ಪಟ್ಟಿವೆ. ಅವರು ತಮ್ಮ ತೋಟಗಳಿಗೆ ಹಾಗೂ ಭತ್ತದ ಹೊಲಗಳಿಗೆ ನೀರುಣಿಸುವಾಗ ಅವುಗಳ ಮೂಲಕ ನೀರು ಪಡೆಯುವರು. ಈ ಕೆರೆ ನಿರ್ಮಿಸಲೋಸುಗ ಅದು ವ್ಯಾಪಿಸಿರುವ ನೆಲವನ್ನು ಆವರಿಸಿದ್ದ ಗುಡ್ಡವನ್ನು ರಾಜ ಒಡೆಸಿದ. ಕೆರೆಯಲ್ಲಿ ಇಷ್ಟೊಂದು ಕೆಲಸಗಾರರನ್ನು ನಾನು ಕಂಡೆನೆಂದರೆ ಅವರು ಹದಿನೈದು ಅಥವಾ ಇಪ್ಪತ್ತು ಸಾವಿರವಿದ್ದಾರು. ಅವರು ಇರುವೆಗಳಂತೆ ಕಾಣುತ್ತಿದ್ದು ಅವರು ಓಡಾಡುವ ನೆಲವೇ ಕಾಣುತ್ತಿರಲಿಲ್ಲ. ಅವರು ಅಷ್ಟು ಸಂಖ್ಯೆಯಲ್ಲಿ ಇದ್ದರು. ಈ ಕೆರೆಯ ಕಾರ್ಯವನ್ನು ರಾಜ ತನ್ನ ದಳವಾಯಿಗಳಿಗೆ ಹಂಚಿಕೊಟ್ಟಿದ್ದ. ತನ್ನ ಕೈ ಕೆಳಗೆ ಕೊಡಲಾದ ಜನರು ಕೆಲಸ ಮಾಡುವಂತೆ ಕೆರೆ ನಿರ್ಮಾಣ ಪೂರ್ತಿಯಾಗಿ ಮುಗಿಯುವಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ದಳವಾಯಿ ಕರ್ತವ್ಯವಾಗಿತ್ತು.

ಕೆರೆ ಎರಡು ಮೂರು ಸಲ ಒಡೆಯಿತು ಮತ್ತು ಅದು ಮೇಲಿಂದ ಮೇಲೆ ಒಡೆಯುವ ಕಾರಣವನ್ನು ತಮ್ಮ ದೇವತಾ ವಿಗ್ರಹವನ್ನು ಕೇಳಿ ತಿಳಿದುಕೊಳ್ಳುವಂತೆ ರಾಜ ಬ್ರಾಹ್ಮಣರಿಗೆ ಹೇಳಿದ ದೇವತಾವಿಗ್ರಹ ಕೋಪಗೊಂಡಿದೆ ಹಾಗೂ ಅವರು ಬಲಿ ಕೊಡಬೇಕೆಂದು ಇಚ್ಛಿಸುತ್ತದೆ ಮತ್ತು ಅದಕ್ಕೆ ಮನುಷ್ಯರ, ಕುದುರೆಗಳ ಮತ್ತು ಎಮ್ಮೆಗಳ ರಕ್ತ ಕೊಡಬೇಕು ಎಂದು ಬ್ರಾಹ್ಮಣರು ಹೇಳಿದರು ಮತ್ತು ಇದನ್ನು ಕೇಳಿದ ಕೂಡಲೇ ರಾಜ ಗುಡಿಯ ಬಾಗಿಲಿನಲ್ಲಿ ಅರವತ್ತು ಮನುಷ್ಯರ ಮತ್ತು ಅನೇಕ ಕುದುರೆ ಹಾಗೂ ಎಮ್ಮೆಗಳ ತಲೆ ಕಡಿಯಬೇಕೆಂದು ಆಜ್ಞಾಪಿಸಿದ. ಅದನ್ನು ಕೂಡಲೇ ಪೂರೈಸಲಾಯಿತು.

ಈ ಬ್ರಾಹ್ಮಣರು ನಮ್ಮ ಕ್ರೈಸ್ತ ಸನ್ಯಾಸಿಗಳಂತಿರುವವರು ಮತ್ತು ಪವಿತ್ರ ಮಾನವರೆಂದು ಪರಿಗಣಿಸಲ್ಪಡುತ್ತಾರೆ. ನಾನು ಹೇಳುತ್ತಿರುವುದು ದೇವಾಲಯಗಳ ಪುರೋಹಿತರು ಮತ್ತು ಪಂಡಿತರಾದ ಬ್ರಾಹ್ಮಣರ ಬಗೆಗೆ. ಏಕೆಂದರೆ, ರಾಜನಲ್ಲಿ ಅನೇಕ ಬ್ರಾಹ್ಮಣರಿರುವವರಾದರೂ ಅವರು ಪಟ್ಟಣ ಹಾಗೂ ನಗರಗಳ ಅಧಿಕಾರಿಗಳಾಗಿದ್ದು, ಅವುಗಳ ಆಡಳಿತಕ್ಕೆ ಸೇರಿದವರು. ಮಿಕ್ಕವರು ವರ್ತಕರು ಮತ್ತು ಇನ್ನುಳಿದವರು ತಮ್ಮದೇ ಆಸ್ತಿ ಮತ್ತು ಸಾಗುವಳಿಯಿಂದ ಮತ್ತು ತಮ್ಮ ಪಿತ್ರಾರ್ಜಿತ ಹೊಣೆಯುಳ್ಳವರು ಪಂಡಿತರಾಗಿದ್ದು ಸಾವಿಗೆ ಈಡಾಗುವ ಮಾಂಸ ಅಥವಾ ಮೀನು ಮುಂತಾದ ಯಾವುದನ್ನೂ ತಿನ್ನುವುದಿಲ್ಲ. ಸಾರನ್ನು ಕೆಂಪಾಗಿಸುವ ಯಾವುದನ್ನೂ ತಿನ್ನುವುದಿಲ್ಲ. ಏಕೆಂದರೆ ಅದು ರಕ್ತವಾಗಿರುತ್ತದೆಂದು ಅವರು ಹೇಳುತ್ತಾರೆ. ದೇವರ ಸೇವೆ ಮಾಡುತ್ತ ತಪಸ್ಸು ಮಾಡುತ್ತ ಪುರೋಹಿತರಂತಹ ಜೀವನ ಸಾಗಿಸಬಯಸುವ ನಾನು ಹೇಳಿದ ಇತರ ಬ್ರಾಹ್ಮಣರಲ್ಲಿ ಕೆಲವು ಮಾಂಸವನ್ನಾಗಲಿ ಮೀನನ್ನಾಗಲಿ ಸಾವನ್ನುಂಟು ಮಾಡುವ ಯಾವುದನ್ನೇ ಆಗಲಿ ತಿನ್ನುವುದಿಲ್ಲ. ಅವರು ಅನ್ನದೊಂದಿಗೆ ತರಕಾರಿ,ಬೆಣ್ಣೆ ಮತ್ತು ಹಣ್ಣಿನಿಂದ ಮಾಡಿದ ಇತರ ಪದಾರ್ಥಗಳನ್ನು ಮಾತ್ರ ತಿನ್ನುತ್ತಾರೆ. ಅವರೆಲ್ಲ ವಿವಾಹಿತರಾಗಿದ್ದು ಬಲು ಸುಂದರ ಪತ್ನಿಯರನ್ನು ಪಡೆದಿರುತ್ತಾರೆ. ಪತ್ನಿಯರು ಏಕಾಂತ ಪ್ರಿಯರಾಗಿದ್ದು ಮನೆ ಬಿಟ್ಟು ಹೊರಬೀಳುವುದಿಲ್ಲ. ಸ್ತ್ರೀಯರು ತಿಳಿ ಬಣ್ಣದವರು. ಈ ಬ್ರಾಹ್ಮಣರ ಜಾತಿಯಲ್ಲಿ ದೇಶದಲ್ಲಿಯೇ

ಅತ್ಯಂತ ಸುಂದರ ಪುರುಷರು ಮತ್ತು ಸ್ತ್ರೀಯರು ಇದ್ದಾರೆ; ಏಕೆಂದರೆ, ಇತರ ಜಾತಿಗಳಲ್ಲೂ ಸಾಮಾನ್ಯವಾಗಿ ತಿಳಿಬಣ್ಣದ ಜನರಿರುವುದಾದರೂ ಅವರು ತೀರ ಕಡಿಮೆಯಾಗಿದ್ದಾರೆ. ತಮ್ಮನ್ನು ತಾವೇ ಬ್ರಾಹ್ಮಣರೆಂದು ಕರೆದುಕೊಳ್ಳುವವರು ಈ ನಾಡಿನಲ್ಲಿ ಅನೇಕರು ಇದ್ದಾರೆ. ಆದರೆ ಅವರು ನಾನು ಹೇಳಿದವರಿಗಿಂತ ತೀರ ಭಿನ್ನವಾದ ಜೀವನ ಸಾಗಿಸುತ್ತಾರೆ. ನಾನು ಹೇಳಿರುವವರನ್ನು ರಾಜ ಬಹಳ ಗೌರವದಿಂದ ಕಾಣುತ್ತಾನೆ ಮತ್ತು ಬಹಳ ಸ್ನೇಹದೃಷ್ಟಿ ತೋರುತ್ತಾನೆ.

ರಾಜ ನಿರ್ಮಿಸಿದ ಈ ನೂತನ ನಗರಕ್ಕೆ ಯಾವ ಪತ್ನಿಯ ಪ್ರೀತ್ಯರ್ಥವಾಗಿ ಅದನ್ನು ನಿರ್ಮಿಸಿದನೊ ಅವಳ ಹೆಸರು ಇಡಲಾಗಿದೆ ಮತ್ತು ಪ್ರಸಕ್ತ ನಗರವನ್ನು ಬಯಲಿನಲ್ಲಿ ಸ್ಥಾಪಿಸಲಾಗಿದೆ ಮತ್ತು ಅದರ ಸುತ್ತಮುತ್ತ ನೆಲಕ್ಕನುಗುಣವಾಗಿ ನಿವಾಸಿಗಳು ಪ್ರತಿಯೊಂದೂ ಪ್ರತ್ಯೇಕವಾಗಿರುವ ತೋಟಗಳನ್ನು ಮಾಡಿಕೊಂಡಿರುವರು. ಈ ನಗರದಲ್ಲಿ ರಾಜ ಅನೇಕ ವಿಗ್ರಹಗಳುಳ್ಳ ದೇವಾಲಯ ಕಟ್ಟಿಸಿದ. ಅದು ಬಹಳ ಚೆನ್ನಾಗಿ ಮಾಡಿದ ಕೆಲಸವಾಗಿದೆ. ಮತ್ತು ಅದೇ ರೀತಿಯಲ್ಲಿ ಚೆನ್ನಾಗಿ ಮಾಡಿದ ಕೆಲವು ಭಾವಿಗಳನ್ನು ಅದು ಹೊಂದಿದೆ. ಅದರ ಮನೆಗಳು ನಮ್ಮವುಗಳಂತೆ ಮಹಡಿಗಳುಳ್ಳಂತೆ ಕಟ್ಟಿರದೆ ಸಮತಲ ಮಾಳಿಗೆ ಮತ್ತು ಗೋಪುರಗಳಿಂದೊಡಗೂಡಿದ ಒಂದೇ ಅಂತಸ್ತಿನವಿದ್ದು ನಮ್ಮವುಗಳಿಗಿಂತ ಭಿನ್ನವಾಗಿವೆ. ಏಕೆಂದರೆ, ಅವರವು ಅಂತಸ್ತಿನಿಂದ ಅಂತಸ್ತಿಗೆ ಮುಂದುವರಿಯುತ್ತವೆ. ಅವುಗಳಿಗೆ ಸ್ತಂಭಗಳಿವೆ. ಪೂರ್ತಿ ಅನಾವೃತವಾಗಿರುವ ಅವುಗಳಲ್ಲಿ ಒಳಗೂ ಹೊರಗೂ ಮೊಗಸಾಲೆಗಳಿವೆ. ಅಲ್ಲಿ ಅವರಿಗೆ ಬೇಕಿದ್ದರೆ ಜನರನ್ನು ಸುಲಭವಾಗಿ ವಸತಿ ಮಾಡಿಸಬಹುದಾದರಿಂದ ಅವು ರಾಜನಿಗೆ ಸೇರಿದ ಮನೆಗಳಂತೆ ಕಾಣುತ್ತವೆ. ಈ ಅರಮನೆಗಳು ಅವುಗಳನ್ನೆಲ್ಲ ಸುತ್ತುಗಟ್ಟುವ ಗೋಡೆ ಹೊಂದಿವೆ ಮತ್ತು ಒಳಗಡೆ ಅನೇಕ ಕಾವಲುಗಾರರಿರುವ ಎರಡು ದ್ವಾರಗಳಿವೆ. ಅವರು ನಾಯಕರು ಮತ್ತು ಅಲ್ಲಲ್ಲಿ ಕೆಲಸವಿರುವವರನ್ನು ಹೊರತುಪಡಿಸಿ ಯಾರಿಗೂ ಪ್ರವೇಶ ನೀಡುವುದಿಲ್ಲ. ಇವೆರಡು ದ್ವಾರಗಳ ಮಧ್ಯೆ ಸುತ್ತಲೂ ಮೊಗಸಾಲೆಗಳಿರುವ ವಿಶಾಲವಾದ ಓಲಗವಿದೆ. ಅಲ್ಲಿ ಈ ನಾಯಕರು ಮತ್ತು ಇತರ ಗೌರವಾನ್ವಿತ ಜನರು ರಾಜ ತನ್ನಲ್ಲಿಗೆ ಅವರನ್ನು ಕರೆಕಳಿಸುವವರೆಗೆ ಕಾಯುತ್ತಾರೆ.

ರಾಜ ಸಾಧಾರಣ ಎತ್ತರ ಮತ್ತು ಒಳ್ಳೆಯ ಮೈಬಣ್ಣದವನು ಮತ್ತು ಒಳ್ಳೆಯ ಮೈಕಟ್ಟಿನವನು, ತೆಳ್ಳಗಿರುವುದಕ್ಕಿಂತ ದಪ್ಪವೇ ಇದ್ದಾನೆ. ಅವನ ಮುಖದ ಮೇಲೆ ಮೈಲಿ ಕಲೆಗಳಿವೆ. ಅವನು ಅತ್ಯಂತ ಭಯಭಕ್ತಿಯುಳ್ಳವನೂ ಮತ್ತು ಗೆಲುವಿನ ಸ್ವಭಾವದವನೂ ಆನಂದಭರಿತನೂ ಇದ್ದು ಸಾಧ್ಯವಿದ್ದಷ್ಟು ಪರಿಪೂರ್ಣ ರಾಜನಾಗಿದ್ದಾನೆ. ಅವನು ವಿದೇಶಿಯರನ್ನು ಗೌರವಿಸಬಯಸುವವನೂ ಅವರನ್ನು ಪ್ರೀತಿಯಿಂದ ಬರಮಾಡಿಕೊಳ್ಳುವವನೂ ಆಗಿದ್ದು ಅವರ ಸ್ಥಿತಿ ಏನೆ ಇರಲಿ ಅವರ ಎಲ್ಲ ವ್ಯವಹಾರಗಳ ಬಗೆಗೆ ವಿಚಾರಿಸುತ್ತಾನೆ. ಅವನು ಶ್ರೇಷ್ಠ ದೊರೆಯೂ ಬಹಳ ನ್ಯಾಯಪರನೂ ಆಗಿರುವಂತೆಯೆ ಥಟ್ಟನೆ ಕೋಪಾವೇಶಕ್ಕೆ ಒಳಗಾಗುವವನೂ

ಆಗಿದ್ದಾನೆ ಇದು ಅವನ ಬಿರುದಾಗಿದೆ; "ಕ್ರಿಸ್ನರಾವ್ ಮಕಾಜ", ರಾಜಾಧಿರಾಜ, ಭಾರತದ ಮಹಾಪ್ರಭುಗಳ ಪ್ರಭು, ಮೂರು ಸಾಗರಗಳ ಹಾಗೂ ಮೂರು ಲೋಕಗಳ ಗಂಡ". ಅವನು ಈ ಬಿರುದನ್ನು ಹೊಂದಿರುವುದೇಕೆಂದರೆ ಅವನಲ್ಲಿರುವ(?) ಸೈನ್ಯಗಳು ಮತ್ತು ಪ್ರದೇಶಗಳ ಕಾರಣದಿಂದಾಗಿ ಅವನು ಇತರ ಯಾವನಿಗಿಂತಲೂ ಪದವಿಯಲ್ಲಿ ದೊಡ್ಡವನಿರುವನು. ಆದರೆ, ಅವನಂತಹ ಮನುಷ್ಯ ಏನೆಲ್ಲ ಹೊಂದಿರಬೇಕೆಂಬುದನ್ನು ಹೋಲಿಸಿದರೆ ಅವನಲ್ಲಿ (ನಿಜವಾಗಿಯೂ) ಏನೂ ಇಲ್ಲವೆಂದು ತೋರುತ್ತದೆ. ಅವನು ಎಲ್ಲದರಲ್ಲೂ ಅಷ್ಟೊಂದು ದಯಾವೀರನೂ ಪರಿಪೂರ್ಣನೂ ಆಗಿರುವನು. ಈ ರಾಜ ಒರಿಯಾದ ರಾಜನೊಂದಿಗೆ ಸದಾ ಯುದ್ಧದಲ್ಲಿ ತೊಡಗಿರುತ್ತಾನೆ ಮತ್ತು ಅನೇಕ ನಗರ ಪಟ್ಟಣಗಳನ್ನು ವಶಪಡಿಸಿಕೊಳ್ಳುತ್ತಾ ನಾಶಪಡಿಸಿಕೊಳ್ಳುತ್ತ ಅವನ ರಾಜ್ಯವನ್ನು ಪ್ರವೇಶಿಸಿದ. ಅವನು ಅವನ ಬಹಳಷ್ಟು ಸೈನಿಕರನ್ನು ಮತ್ತು ಆನೆಗಳನ್ನು ಹೊಡೆದೋಡಿಸಿದ ಮತ್ತು ಅವನು ಮಗನನ್ನು ಸೆರೆಹಿಡಿದ ಮತ್ತು ಬೀಸ್ನಗ ನಗರದಲ್ಲಿಯ ದೀರ್ಘಕಾಲ ಬಂಧನದಲ್ಲಿರಿಸಿದ. ಅವನು ಅಲ್ಲಿಯೆ ಸತ್ತ. ಒಪ್ಪಂದ ಮಾಡಿಕೊಂಡು ಶಾಂತಿ (ಕಾಪಾಡಿಕೊಳ್ಳಲು)ಗೋಸ್ಕರ ಒರಿಯಾದ ರಾಜ ಕೊಟ್ಟ ಮಗಳನ್ನು ಅವನು ಮದುವೆಯಾಗಿ ಹೆಂಡತಿಯಾಗಿರಿಸಿಕೊಂಡ.

ರಾಜನಿಗೆ ಹನ್ನೆರಡು ಧರ್ಮಪತ್ನಿಯರು. ಅವರಲ್ಲಿ ಮೂವರು ಮುಖ್ಯರು. ಅವರಲ್ಲಿ ಪ್ರತಿಯೊಬ್ಬರ ಪುತ್ರರು ರಾಜ್ಯಕ್ಕೆ ವಾರಸುದಾರರು, ಮಿಕ್ಕವರಲ್ಲ. ಅಂದರೆ, ಅವರೆಲ್ಲರಿಗೂ ಪುತ್ರರಿದ್ದರೆ. ಆದರೆ, ಒಬ್ಬನೇ ಮಗನಿದ್ದಾಗ ಅವನು ಯಾರ ಪುತ್ರನೇ ಆಗಿರಲಿ ಅವನೇ ವಾರಸುದಾರ. ಈ ಪ್ರಧಾನ ಪತ್ನಿಯರಲ್ಲಿ ಒಬ್ಬಳು ಒರಿಯಾ ರಾಜನ ಮಗಳು ಮತ್ತು ಮಿಕ್ಕವರು ಸೆರಿಂಗಪಟಾಒದ ರಾಜನಾಗಿರುವ ಸಾಮಂತನ ಪುತ್ರಿಯರು. ಇನ್ನೊಬ್ಬ ಪತ್ನಿ ವಾರಾಂಗನೆ. ರಾಜನಾಗುವ ಮುನ್ನ ಅವಳು ಅವನ ಉಪಪತ್ನಿಯಾಗಿದ್ದಳು. ಅವನು ರಾಜನಾದರೆ ತನ್ನನ್ನು ಪತ್ನಿಯಾಗಿ ಸ್ವೀಕರಿಸುವಂತೆ ಅವಳು ಅವನಿಂದ ವಚನ ಪಡೆದಿದ್ದಳು. ಹೀಗೆ ಈ ವಾರಾಂಗನೆ ಅವನ ಪತ್ನಿಯಾದಳು. ಅವಳ ಪ್ರೀತ್ಯರ್ಥವಾಗಿ ಅವನು ಈ ಹೊಸ ನಗರವನ್ನು ನಿರ್ಮಿಸಿದ ಮತ್ತು ಅದರ ಹೆಸರು.....? (ಮೂಲ ಕೃತಿಯಲ್ಲಿ ಹೀಗಿದೆ).... ಈ ಪತ್ನಿಯರಲ್ಲಿ ಪ್ರತಿಯೊಬ್ಬಳಿಗೂ ತನ್ನ ಪರಿಚರಿಕೆಯರು, ಆಪ್ತ ಸೇವಕಿಯರು, ಕಾವಲುಗಾರ್ತಿಯರು ಮತ್ತು ಅಗತ್ಯವಿರುವ ಇತರ ಎಲ್ಲ ಸೇವಕಿಯರುಳ್ಳ ತನ್ನದೇ ಮನೆಯಿದೆ. ಇವರೆಲ್ಲ ಸ್ತ್ರೀಯರಾಗಿದ್ದು ಅವರಿರುವಲ್ಲಿ ಅವರನ್ನು ಸಂರಕ್ಷಿಸುವ ನಪುಂಸಕರನ್ನು ಹೊರತುಪಡಿಸಿ ಯಾವ ಪುರುಷನಿಗೂ ಪ್ರವೇಶವಿಲ್ಲ. ಬಹುಶಃ ರಾಜನ ಅನುಗ್ರಹದಿಂದ ಯಾವನೊಬ್ಬ ಉನ್ನತ ಅಂತಸ್ತಿನ ಹಿರಿಯನನ್ನುಳಿದು ಈ ಸ್ತ್ರೀಯರು ಯಾವ ಪುರುಷನ ಕಣ್ಣಿಗೂ ಬೀಳುವುದಿಲ್ಲ. ಅವರು ಹೊರಗೆ ಹೋಗಬಯಸಿದಾಗ ಅವರನ್ನು ಯಾರಿಗೂ ಕಾಣದಂತೆ ಮುಚ್ಚಿದ ಮೇಣೆಗಳನ್ನು ಹೊತ್ತೊಯ್ಯಲಾಗುತ್ತಿತ್ತು ಮತ್ತು ಎಲ್ಲ ಪೂರ್ತಿ ಮುನ್ನೂರು ನಾನೂರು ನಪುಂಸಕರೂ ಅವರೊಂದಿಗಿರುತ್ತಿದ್ದರು. ಮಿಕ್ಕವರೆಲ್ಲ ಅವರಿಂದ ದೂರವಿರುತ್ತಾರೆ. ಈ ರಾಣಿಯರಲ್ಲಿ ಪ್ರತಿಯೊಬ್ಬಳು

ಬಹಳಷ್ಟು ಧನ, ಸಂಪತ್ತು ಮತ್ತು ಸ್ವಂತ ಆಭರಣಗಳನ್ನು ಅಂದರೆ ತೋಳಬಂದಿಗಳು, ಕೈ ಬಳೆಗಳು, ಸಣ್ಣ ಮುತ್ತುಗಳು ಮತ್ತು ವಜ್ರಗಳನ್ನು ಪಡೆದಿರುತ್ತಾರೆ. ಅಲ್ಲದೆ ಅದೂ ದೊಡ್ಡ ಪ್ರಮಾಣದಲ್ಲಿ ಎಂದು ನಮಗೆ ಹೇಳಲಾಯಿತು. ಅವರಲ್ಲಿ ಪ್ರತಿಯೊಬ್ಬಳಿಗೆ ಅನೇಕ ರತ್ನಗಳು, ಮಾಣಿಕ್ಯಗಳು, ವಜ್ರಗಳು, ಮುತ್ತುಗಳು ಮತ್ತು ಸಣ್ಣ ಮುತ್ತುಗಳಿಂದ ಸಾಧ್ಯವಿದ್ದಷ್ಟು ಚೆನ್ನಾಗಿ ಅಲಂಕೃತವಾದ ಅರವತ್ತು ಪರಿಚಾರಿಕೆಯರಿರುವರು ಎಂದೂ ನಮಗೆ ಹೇಳಲಾಯಿತು.

ಇವರನ್ನು ನಾವು ಅನಂತರ ನೋಡಿದೆವು ಮತ್ತು ಚಕಿತರಾದೆವು. ಅವರನ್ನು ನಾವು ನೋಡಿದ ಕೆಲವು ಉತ್ಸವಗಳು ಮತ್ತು ಅವರು ಬಂದ ರೀತಿಯ ಬಗೆಗೆ ನಾನು ಆಮೇಲೆ ಹೇಳುವೆ. ಒಳಗಡೆ ಈ ಪರಿಚಾರಿಕೆಯರೊಂದಿಗೆ ಹನ್ನೆರಡು ಸಾವಿರ ಸ್ತ್ರೀಯರಿದ್ದಾರೆಂದು ಹೇಳಲಾಗುತ್ತದೆ. ಏಕೆಂದರೆ ನೀವು ತಿಳಿಯಬೇಕಾದುದೇನೆಂದರೆ ಅಲ್ಲಿ ಕತ್ತಿ ಗುರಾಣಿ ಹಿಡಿಯುವ ಸ್ತ್ರೀಯರಿದ್ದಾರೆ. ಕುಸ್ತಿ ಆಡುವವರಿದ್ದಾರೆ, ಕಹಳೆ ಊದುವವರಿದ್ದಾರೆ, ಕೊಳಲು ಊದುವವರಿದ್ದಾರೆ ಮತ್ತು ನಮ್ಮವಕ್ಕಿಂತ ಭಿನ್ನವಾದ ಇತರ ವಾದ್ಯಗಳನ್ನು ಊದುವವರಿದ್ದಾರೆ. ಹಾಗೆಯೆ, ಬೋಯಿಗಳಾಗಿ ಮತ್ತು ಅಗಸರಾಗಿ ಮತ್ತು ರಾಜನಿಗೆ ಅವರ ಮನೆಯಲ್ಲಿ ಅಧಿಕಾರಿಗಳಿರುವಂತೆಯೇ ತಮ್ಮ ದ್ವಾರದೊಳಗಡೆ ಕಛೇರಿಗಳಿಗಾಗಿ ಸ್ತ್ರೀಯರಿದ್ದಾರೆ. ಅವರ ಮಧ್ಯೆ ಯಾವುದೇ ಕಲಹ ಅಥವಾ ವೈಮನಸ್ಸು ಇರಬಾರದೆಂದು ಈ ಮೂವರು ಪ್ರಧಾನ ಪತ್ನಿಯರಿಗೂ ಅಷ್ಟೇ, ಒಬ್ಬಳಿಗಿರುವಷ್ಟೆ ಇನ್ನೊಬ್ಬಳಿಗೆ, ಸ್ತ್ರೀಯರು ಇರುತ್ತಾರೆ. ಅವರೆಲ್ಲರೂ ಪ್ರೀತಿಯಿಂದಿದ್ದು ಪ್ರತಿಯೊಬ್ಬಳೂ ಪ್ರತ್ಯೇಕವಾಗಿ ವಾಸಿಸುತ್ತಾಳೆ. ಇದರಿಂದ ಇಷ್ಟೊಂದು ಜನರಿರುವ ಈ ಮನೆಗಳಿಗಾಗಿ ಎಂಥ ದೊಡ್ಡ ಆವರಣ ಇದ್ದಿರಬೇಕು ಮತ್ತು ಏನು ಬೀದಿ ಮತ್ತು ಓಣಿಗಳನ್ನು ಅವು ಹೊಂದಿರಬೇಕು ಎಂಬುದನ್ನು ಊಹಿಸಬಹುದು.

ರಾಜ ಅರಮನೆಯೊಳಗೆ ತಾನೊಬ್ಬನೆ ಇರುತ್ತಾನೆ ಮತ್ತು ತನ್ನ ಪತ್ನಿಯರಲ್ಲೊಬ್ಬಳ ಸಹವಾಸ ಬೇಕೆನಿಸಿದಾಗ ಒಬ್ಬ ನಪುಂಸಕನಿಗೆ ಅವಳನ್ನು ಕರೆತರುವಂತೆ ಆಜ್ಞಾಪಿಸುತ್ತಾನೆ. ಅವಳಿದ್ದಲ್ಲಿ ನಪುಂಸಕ ಪ್ರವೇಶಿಸದೆ ಕಾವಲುಗಾರ್ತಿಯರಿಗೆ ಅದನ್ನು ಹೇಳುತ್ತಾನೆ. ಅವರು ರಾಜನಿಂದ ಸಂದೇಶವಿದೆಯೆಂದು ರಾಣಿಗೆ ತಿಳಿಸುತ್ತಾರೆ. ಆಗ ಅವಳ ಪರಿಚಾರಿಕೆಯಲ್ಲಿ ಇಲ್ಲವೆ ಆಪ್ತ ಸೇವಕಿಯರಲ್ಲಿ ಒಬ್ಬಳು ಬಂದು ಏನು ಬೇಕೆಂಬುದನ್ನು ತಿಳಿದುಕೊಳ್ಳುತ್ತಾಳೆ. ಆ ಮೇಲೆ ರಾಣಿ ರಾಜನಿದ್ದಲ್ಲಿಗಾಗಲಿ ಇಲ್ಲವೆ ರಾಜನೆ ರಾಣಿಯಿದ್ದಲ್ಲಿಗಾಗಲಿ ಬರುತ್ತಾನೆ. ಹೀಗೆ ಅವನು ಬೇರೆ ಯಾರಿಗೂ ತಿಳಿಯದಂತೆ ತನಗೆ ಹಿತವೆನಿಸುವಂತೆ ಸಮಯ ಕಳೆಯುತ್ತಾನೆ. ಈ ನಪುಂಸಕರಲ್ಲಿ ರಾಜನಿಗೆ ಅತ್ಯಂತ ಪ್ರೀತಿಯವರಾಗಿರುವವರು ಮತ್ತು ಅವನು ಮಲಗಿದಲ್ಲಿಯೆ ಮಲಗುವ ಕೆಲವರಿದ್ದಾರೆ; ಅವರು ದೊಡ್ಡ ಸಂಬಳ ಪಡೆಯುತ್ತಾರೆ.

ಈ ರಾಜನಿಗೆ ಪ್ರತಿದಿನ ಬೆಳಗಾಗುವ ಮುನ್ನ ಮುಕ್ಕಾಲು ಪಿಂಟು ಎಳ್ಳೆಣ್ಣೆ ಕುಡಿಯುವ ರೂಢಿಯಿದೆ ಮತ್ತು ಅದೇ ಎಣ್ಣೆಯನ್ನು ತನ್ನ ದೇಹಕ್ಕೆಲ್ಲ ಹಚ್ಚಿಕೊಳ್ಳುತ್ತಾನೆ. ತನ್ನ ಟೊಂಕವನ್ನು ಒಂದು ಚಿಕ್ಕ ಅರಿವೆಯಿಂದ ಸುತ್ತಿಕೊಂಡ ತನ್ನ ತೋಳುಗಳಿಗೆ ಮಣ್ಣಿನಿಂದ ಮಾಡಿದ ದೊಡ್ಡ

ಭಾರಗಳನ್ನು ಕಟ್ಟಿಕೊಂಡು ಕತ್ತಿಯನ್ನು ತೆಗೆದುಕೊಂಡು ಎಲ್ಲ ಎಣ್ಣೆ ಬಸಿದು ಹೋಗುವವರೆಗೆ ಅದರೊಂದಿಗೆ ವ್ಯಾಯಾಮ ಮಾಡುತ್ತಾನೆ ಮತ್ತು ತನ್ನ ಪೈಲ್ವಾನರಲ್ಲೊಬ್ಬನೊಂದಿಗೆ ಕುಸ್ತಿ ಆಡುತ್ತಾನೆ. ಈ ಪರಿಶ್ರಮದ ನಂತರ ಅವನು ಇದನ್ನೆಲ್ಲ ಬೆಳಕು ಹರಿಯುವ ಮುನ್ನ ಮಾಡುತ್ತಾನೆ. ಆಮೇಲೆ ಅವನು ಮೈ ತೊಳೆದುಕೊಳ್ಳಲು ಹೋಗುತ್ತಾನೆ ಮತ್ತು ಅವನು ಪವಿತ್ರನೆಂದು ಪರಿಗಣಿಸುವ, ಅವನ ಬಲು ಪ್ರೀತಿಯವನಾದ ಮತ್ತು ಬಹಳ ಧನಿಕನಾದ ಬ್ರಾಹ್ಮಣನೊಬ್ಬ ಅವನ ಮೈ ತೊಳೆಯುತ್ತಾನೆ. ಸ್ನಾನವಾದ ಮೇಲೆ ಅವನು ಅರಮನೆಯೊಳಗೆ ತನ್ನ ಗುಡಿಯಿರುವಲ್ಲಿಗೆ ಹೋಗಿ ಪದ್ಧತಿಯಂತೆ ತನ್ನ ಪ್ರಾರ್ಥನೆ ಮತ್ತು ವ್ರತಾಚರಣೆ ಮಾಡುತ್ತಾನೆ. ಅಲ್ಲಿಂದ ಅವನು ಗೋಡೆಗಳಿಲ್ಲದೆ ದ್ವಾರಮಂಟಪದ ಆಕಾರದಲ್ಲಿ ಕಟ್ಟಿದ ಕಟ್ಟಡಕ್ಕೆ ಹೋಗುತ್ತಾನೆ. ಅದಕ್ಕೆ ಹಲವಾರು ಸ್ತಂಬಗಳಿದ್ದು ಅವುಗಳಿಗೆ ತುದಿಯವರೆಗೆ ಬಟ್ಟೆ ಇಳಿಬಿಡಲಾಗಿದೆ ಮತ್ತು ಗೋಡೆಗಳಿಗೆ ಸುಂದರವಾಗಿ ಬಣ್ಣ ಹಚ್ಚಲಾಗಿದೆ. ಅದರ ಎರಡೂ ಬದಿಗೆ ಚೆನ್ನಾಗಿ ಮಾಡಿದ ಸ್ತ್ರೀಯರ ಎರಡು ಆಕೃತಿಗಳುಂಟು. ಇಂಥ ಕಟ್ಟಡದಲ್ಲಿ ಅವನು ತನ್ನ ರಾಜ್ಯದಲ್ಲಿ ಹುದ್ದೆಯಲ್ಲಿರುವವರು ಮತ್ತು ತನ್ನ ನಗರಗಳ ಆಡಳಿತ ನೋಡಿಕೊಳ್ಳುವವರೊಂದಿಗೆ ಕೆಲಸ ಮುಗಿಸುತ್ತಾನೆ ಮತ್ತು ತನಗೆ ಪ್ರಿಯರಾದವರೊಂದಿಗೆ ಮಾತಾಡುತ್ತಾನೆ. ಎಲ್ಲರಿಗಿಂತಲೂ ಪ್ರಿಯನಾದವನೆಂದರೆ ತೆಮರ್ಸಿ ಎಂಬ ಹಿರಿಯ. ಇವನು ಇಡಿ ಮನೆಯನ್ನು ನಿಯಂತ್ರಿಸುತ್ತಾನೆ ಮತ್ತು ಮಹಾಪ್ರಭುಗಳು ಅವನೊಂದಿಗೆ ರಾಜನೊಂದಿಗೆ ನಡೆದುಕೊಂಡಂತೆಯೆ ನಡೆದುಕೊಳ್ಳುತ್ತಾರೆ. ರಾಜ ಈ ಮಂದಿಯೊಂದಿಗೆ ತನಗೆ ಇಷ್ಟವಾದ ವಿಷಯಗಳ ಬಗೆಗೆ ಮಾತಾಡಿದ ಮೇಲೆ ದ್ವಾರದಲ್ಲಿ ಕಾಯ್ದಿರುವ ಪ್ರಭುಗಳು ಹಾಗೂ ದಳವಾಯಿಗಳಿಗೆ ಬರಹೇಳುತ್ತಾನೆ. ಅವರು ಕೂಡಲೆ ಬಂದು ಸಲಾಮು ಮಾಡುತ್ತಾರೆ. ಅವರು ಬಂದ ಕೂಡಲೇ ಅವನಿಗೆ ಸಲಾಮು ಮಾಡಿ ಅವನಿಂದ ದೂರ ಗೋಡೆಗುಂಟ ನಿಲ್ಲುತ್ತಾರೆ. ಅವರು ಒಬ್ಬರಿಗೊಬ್ಬರೊಂದಿಗೆ ಮಾತಾಡುವುದಿಲ್ಲ. ಅವನೆದುರು ವೀಳ್ಯದೆಲೆ ಜಗಿಯುವುದೂ ಇಲ್ಲ. ತಮ್ಮ ಅಂಗಿಯ ತೋಳುಗಳಲ್ಲಿ ಕೈಯಿಟ್ಟುಕೊಂಡು ನೆಲದ ಮೇಲೆ ದೃಷ್ಟಿಯಿಟ್ಟು ನಿಂತಿರುತ್ತಾರೆ. ರಾಜ ಯಾರೊಂದಿಗಾದರೂ ಮಾತಾಡಬಯಸಿದರೆ ಅದನ್ನು ಎರಡನೆಯ ವ್ಯಕ್ತಿಯ ಮೂಲಕ ಮಾಡಲಾಗುತ್ತದೆ. ಮತ್ತು ರಾಜ ಯಾರೊಂದಿಗೆ ಮಾತಾಡಬಯಸುತ್ತಾನೊ ಅವನು ಕಣ್ಣೆತ್ತಿ ತನ್ನನ್ನು ಪ್ರಶ್ನಿಸುವವನಿಗೆ ಉತ್ತರ ಕೊಡುತ್ತಾರೆ. ಮತ್ತು ತನ್ನ ಮೊದಲಿನ ಸ್ಥಾನಕ್ಕೆ ಮರಳುತ್ತಾನೆ. ಅವರು ರಾಜ ಹೋಗಲು ಅಪ್ಪಣೆ ಕೊಡುವವರೆಗೆ ಹಾಗೆಯೇ ನಿಂತಿರುತ್ತಾರೆ. ಅವರಲ್ಲಿರುವ ಅತ್ಯಂತ ದೊಡ್ಡ ಮರ್ಯಾದೆಯಾದ ಸಲಾಮು ಎಂದರೆ ತಲೆಯ ಮೇಲೆ ತಮಗೆ ಸಾಧ್ಯವಾದಷ್ಟೂ ಎತ್ತಿ ಕೈ ಜೋಡಿಸುವುದು. ಪ್ರತಿ ದಿನ ಅವರು ರಾಜನಿಗೆ ಸಲಾಮು ಮಾಡಲು ಹೋಗುವರು."[೧೪]

ಬೀಸನಗರ ನಗರದ ವಿಷಯಕ್ಕೆ ಮರಳುವುದಾದರೆ, ಅಲ್ಲಿಂದ ಹೊಸ ನಗರಕ್ಕೆ ಕ್ರೀಡಾಯುದ್ಧದ ಸ್ಥಳದಷ್ಟು ಅಗಲವಾದ ಬೀದಿ ಹೋಗುತ್ತದೆಂಬುದನ್ನು ತಿಳಿಯಬೇಕು. ಅದರ

ಇಕ್ಕೆಲಗಳಲ್ಲೂ ಮನೆಗಳು ಮತ್ತು ಅಂಗಡಿಗಳು ಸಾಲುಗಟ್ಟಿವೆ. ಅವುಗಳಲ್ಲಿ ಎಲ್ಲವನ್ನೂ ಮಾರಲಾಗುತ್ತದೆ. ದಾರಿಹೋಕರಿಗೆ ನೆರಳು ನೀಡುವ ಉದ್ದೇಶದಿಂದ ಈ ರಸ್ತೆಯುದ್ದಕ್ಕೂ ರಾಜ ಹಚ್ಚಲು ಆಜ್ಞಾಪಿಸಿದ ಅನೇಕ ಗಿಡಗಳಿವೆ. ಈ ರಸ್ತೆಯ ಮೇಲೆ ಸುಂದರವಾದ ಕಲ್ಲಿನದೇವಾಲಯವನ್ನು ಕಟ್ಟುವಂತೆ ರಾಜ ಆಜ್ಞಾಪಿಸಿ. ದಳವಾಯಿಗಳ ಮತ್ತು ಮಹಾಪ್ರಭುಗಳು ಕಟ್ಟಿಸಿದ ಇತರ ಗುಡಿಗಳೂ ಇವೆ.

ಹೀಗಾಗಿ ಬೀಸ್ನಗ ನಗರಕ್ಕೆ ಮರಳುತ್ತ ನಿಮಗೆ ತಿಳಿದಿರಬೇಕಾದುದೇನೆಂದರೆ ನೀವು ನಗರದ ದ್ವಾರಗಳನ್ನು ತಲುಪುವ ಮುನ್ನ ನಗರದ ಎಲ್ಲಾ ಆವರಣಗಳನ್ನು ಸುತ್ತುಗಟ್ಟುವ ಗೋಡೆಯುಳ್ಳ ಹೆಬ್ಬಾಗಿಲಿದೆ ಮತ್ತು ಈ ಗೋಡೆ ಬಹಳ ಗಟ್ಟಿಯಾದುದೂ ಬೃಹತ್ ಕಲ್ಲು ಕಟ್ಟಡವೂ ಆಗಿದೆ. ಆದರೆ, ಈಗ ಅದು ಅಲ್ಲಲ್ಲಿ ಒಡೆದಿದೆ. ಅವರು ಅದರಲ್ಲಿ ದುರ್ಗಗಳನ್ನು ಇಡದೆ ಬಿಡರು. ಈ ಗೋಡೆಗೆ ಕೆಲವೆಡೆ ಮತ್ತು ಕೆಳಮಟ್ಟದಲ್ಲಿ ಕಟ್ಟಲಾಗಿರುವ ಭಾಗಗಳಲ್ಲಿ ನೀರಿನ ಕಂದಕವಿದೆ. ಅದರಿಂದ ಪ್ರತ್ಯೇಕವಾಗಿ ಇನ್ನೂ ಒಂದು (ರಕ್ಷಣೆ) ಕೆಳಗೆ ಹೇಳಿದಂತೆ ಮಾಡಿದ್ದು ಇದೆ. ಚೂಪು ತುದಿಯುಳ್ಳ ಕೆಲವು ಎತ್ತರವಾದ ಕಲ್ಲುಗಳನ್ನು ನೆಲದ ಮೇಲೆ ಎದೆ ಎತ್ತರದಲ್ಲಿ ನಿಲ್ಲಿಸಿದ್ದಾರೆ. ಅವು ಒಂದೂವರೆ ಈಟಿಕೋಲಿನಷ್ಟು ಅಗಲವಿದ್ದು ಅವುಗಳ ಮತ್ತು ದೊಡ್ಡ ಗೋಡೆಯ ಮಧ್ಯೆ ಅಷ್ಟೇ ಅಂತರವಿದೆ. ಈ ಗೋಡೆ ಯಾವುದೊಂದು ಗುಡ್ಡ ಅಥವಾ ಕಲ್ಲು ಗಾಡು ತಲುಪುವವರೆಗಿನ ಎಲ್ಲ ಕೆಳಮಟ್ಟದ ನೆಲದಲ್ಲೂ ನಿಂತಿದೆ. ನೀರು ಈ ಗೋಡೆಯ ಮೊದಲ ಸಾಲಿನ ಮೂಲಕ ಹಾಯುತ್ತದೆ. ಮತ್ತು ಊಟೆಗಳಿದ್ದುದರಿಂದ ಸರೋವರಗಳಲ್ಲಿ ಬಹಳ ನೀರು ಇದೆ. ಇಲ್ಲಿ ಹಣ್ಣಿನ ತೋಟಗಳು ಮತ್ತು ಒಂದು ಚಿಕ್ಕ ತೆಂಗಿನ ತೋಪು ಮತ್ತು ಅನೇಕ ಮನೆಗಳಿವೆ.

ನಗರದ ಪ್ರಥಮ ದ್ವಾರದತ್ತ ಈಗ ತಿರುಗೋಣ. ನೀವು ಅದನ್ನು ತಲುಪುವ ಮುನ್ನ ಒಂದು ಚಿಕ್ಕ ನೀರಿನ ಹೊಂಡ ಬರುತ್ತದೆ. ಆ ಮೇಲೆ ಗೋಡೆ ಬರುತ್ತದೆ. ಗೋಡೆ ಪೂರ್ತಿ ಕಲ್ಲು ಕಟ್ಟಡದ್ದಾಗಿದ್ದು ಬಹಳ ಭದ್ರವಾಗಿದೆ ಮತ್ತು ದ್ವಾರ ತಲುಪುವ ಮುಂಚೆ ಅದು ಒಂದು ತಿರುವು ಪಡೆದಿರುತ್ತದೆ. ಈ ದ್ವಾರದ ಬಾಯಿಯಲ್ಲಿ ಆಚೆಗೊಂದು ಈಚೆಗೊಂದು ಎರಡು ಗೋಪುರಗಳಿವೆ. ಇದು ಅದನ್ನು ಬಲು ಭದ್ರವಾಗಿಸಿದೆ. ಅದು ವಿಶಾಲವೂ ಸುಂದರವೂ ಆಗಿದೆ. ನೀವು ಒಳಗೆ ಪ್ರವೇಶಿಸಿದ ತಕ್ಷಣ ಎರಡು ಚಿಕ್ಕ ದೇವಾಲಯಗಳಿವೆ. ಅವುಗಳಲ್ಲೊಂದಕ್ಕೆ ಅನೇಕ ಗಿಡಗಳಿರುವ ಸುತ್ತು ಗೋಡೆಯಿದ್ದರೆ ಇನ್ನೊಂದರಲ್ಲಿ ಪೂರ್ತಿ ಕಟ್ಟಡಗಳೇ ಇವೆ. ಪ್ರಥಮ ದ್ವಾರದ ಈ ಗೋಡೆ ಇಡಿ ನಗರವನ್ನು ಸುತ್ತು ವರಿಯುತ್ತದೆ. ಮುಂದೆ ಸಾಗಿದರೆಇನ್ನೊಂದು ಗೋಡೆ ಸಾಲಿರುವ ಇನ್ನೊಂದು ದ್ವಾರ ಬರುತ್ತದೆ. ಅದು ಕೂಡ ಮೊದಲಿನ ಗೋಡೆಯೊಳಗಡೆ ನಗರವನ್ನು ಸುತ್ತುವರಿಯುತ್ತದೆ. ಇಲ್ಲಿಂದ ರಾಜನ ಅರಮನೆಯವರೆಗೆ ಬಹಳ ಸುಂದರವಾದ ಬೀದಿಗಳು ಮತ್ತು ಪ್ರತಿಷ್ಠಿತರ ಮನೆಗಳ ಸಾಲುಗಳನ್ನು ಕಾಣಬಹುದು. ಮುಖ್ಯ ಬೀದಿಗುಂಟ ಹೋದರೆ ಮುಖ್ಯ ಮಾರ್ಗಗಳಲ್ಲೊಂದು ಬರುತ್ತದೆ. ಅದು ರಾಜನ ಅರಮನೆಯ ಮುಂದಿರುವ

ದೊಡ್ಡ ಬಯಲು ಸ್ಥಳದಿಂಡ ಹೊರಡುತ್ತದೆ. ಇದರ ಎದುರುಗಡೆ ಇರುವ ಇನ್ನೊಂದು, ನಗರದ ಇನ್ನೊಂದು ಬದಿಗೆ ಹೋಗುತ್ತದೆ. ಸರಕು ಹಾಗೂ ಮಿಕ್ಕೆಲ್ಲವನ್ನು ಒಯ್ಯುವ ಬಂಡಿಗಳು ಮತ್ತು ವಾಹನಗಳು ಈ ಬಯಲಿನ ಮೇಲೆಯೆ ಹಾಯ್ದು ಹೋಗುತ್ತದೆ. ಅದು ನಗರದ ಮಧ್ಯದಲ್ಲಿರುವುದರಿಂದ ಅದು ಉಪಯುಕ್ತವಾದಂತೆ ಇರುವಂತಿಲ್ಲ.

ರಾಜನ ಈ ಅರಮನೆ ಇತರ ಕೆಲವು ಗೋಡೆಗಳಂತೆ ಬಲು ಭದ್ರವಾಗಿರುವ ಗೋಡೆಯಿಂದ ಸುತ್ತುವರಿಯಲ್ಪಟ್ಟಿದ್ದು ಲಿಸ್ಬನ್‌ನ ದುರ್ಗಕ್ಕಿಂತ ಹೆಚ್ಚು ಸ್ಥಳ ಆವರಿಸಿದೆ. ಇನ್ನೂ ಮುಂದಕ್ಕೆ ಸಾಗಿ ಇನ್ನೊಂದು ಹೆಬ್ಬಾಗಿಲಿಗೆ ಬಂದರೆ ಅಲ್ಲಿ ಅದಕ್ಕೆ ಹೊಂದಿಕೊಂಡೆ ಆ ಬದಿಗೊಂದು ಈ ಬದಿಗೊಂದರಂತೆ ಎರಡು ದೇವಾಲಯಗಳನ್ನು ಕಾಣಬಹುದು. ಇವುಗಳಲ್ಲೊಂದರ ಬಾಗಿಲಲ್ಲಿ ಅನೇಕ ಕುರಿಗಳನ್ನು ಕಡಿಯಲಾಗುತ್ತದೆ. ಈ ಗುಡಿಯ ಬಾಗಿಲಲ್ಲಿ ಹೊರತುಪಡಿಸಿ ಇಡಿ ನಗರದಲ್ಲಿ ಎಲ್ಲೂ ಅನಾಗರಿಕರ(ಹಿಂದೂಗಳ) ಉಪಯೋಗಕ್ಕಾಗಿ ಅಥವಾ ಮಾರುಕಟ್ಟೆಗಳಲ್ಲಿ ಮಾರಾಟಕ್ಕಾಗಿ ಯಾವುದೇ ಕುರಿ ಕಡಿಯುವುದಿಲ್ಲ. ಅವುಗಳ ರಕ್ತವನ್ನು ದೇವಾಲಯಯದಲ್ಲಿನ ಮೂರ್ತಿಗೆ ನೈವೇದ್ಯ ಮಾಡುತ್ತಾರೆ. ತಲೆಗಳನ್ನು ಅವನಿಗೆ ಬಿಡಲಾಗುತ್ತದೆ ಮತ್ತು ಪ್ರತಿಯೊಂದು ಕುರಿಗೆ ಒಂದು ಚಕ್ರಮ್ ಕೊಡುತ್ತಾರೆ. ಅದು ಕಾರ್ಟಿಲ್ಹಾ (ಕಾರ್ಟಿಲ್ಹಾ=ಫಾರ್ದಿಂಗ್)ದಂತಹ ನಾಣ್ಯ.

ಈ ಪಶುಬಲಿಯ ಸಮಯಕ್ಕೆ ಅಲ್ಲೊಬ್ಬ ಈ ದೇವಾಲಯದ ಮೇಲ್ವಿಚಾರಣೆಯಲ್ಲಿ ಉಪಸ್ಥಿತನಿದ್ದು ಕುರಿತು ಅಥವಾ ಆಡಿನ ತಲೆ ಕಡಿದ ಸಲಕ್ಕೊಮ್ಮೆ ಮೂರ್ತಿ ಆ ಬಲಿಯನ್ನು ಸ್ವೀಕರಿಸುವುದರ ಸಂಕೇತವಾಗಿ ಕೊಂಬು ಊದುತ್ತಾನೆ. ಮುಂದೆ ಈ ಜೋಗಿಗಳು ಯಾವ ತರಹದ ಮನುಷ್ಯರೆಂಬ ಬಗೆಗೆ ಹೇಳುವೆ.

ಈ ದೇವಾಲಯಗಳಿಗೆ ತೀರ ಹತ್ತಿರದಲ್ಲಿ ಕೆತ್ತನೆಯ ಕೆಲಸ ಮತ್ತು ಆಕೃತಿಗಳಿಂದ ತುಂಬಿದ ವಿಜಯೋತ್ಸವದ ರಥವಿದೆ. ಅದನ್ನು ಪ್ರತಿವರ್ಷ ಉತ್ಸವ ಕಾಲದಲ್ಲಿ ಅದು ಸಾಗಬಹುದಾದಂತಹ ಬೀದಿಗಳ ಮೂಲಕ ನಗರದಲ್ಲಿ ಎಳೆಯಲಾಗುತ್ತದೆ. ಅದು ದೊಡ್ಡದಿದ್ದು ತಿರುವುಗಳಲ್ಲಿ ಹಾಯದು. ಮುಂದೆ ಸಾಗಿದರೆ, ನಾನು ವರ್ಣಿಸಿದಂತಹ ಉತ್ಕೃಷ್ಟ ಮನೆಗಳ ಸಾಲುಗಳು ಮತ್ತು ಓಣಿಗಳುಳ್ಳ ವಿಶಾಲ ಮತ್ತು ಸುಂದರ ಬೀದಿಯಿದೆ. ಆ ಮನೆಗಳು ಅಂಥವುಗಳನ್ನು ಪಡೆಯುವಷ್ಟು ಶ್ರೀಮಂತರವು ಎಂದು ತಿಳಿಯಬೇಕು. ಈ ಬೀದಿಯಲ್ಲಿ ವರ್ತಕರಿದ್ದು ಅಲ್ಲಿ ನೀವು ಎಲ್ಲ ತರಹದ ಮಾಣಿಕ್ಯ ಮತ್ತು ವಜ್ರಗಳು, ಪಚ್ಚೆಗಳು, ಮುತ್ತುಗಳು, ಸಣ್ಣ ಮುತ್ತುಗಳು, ಬಟ್ಟೆ ಮತ್ತು ಭೂಮಿಯ ಮೇಲಿರುವ ಮತ್ತು ನೀವು ಕೊಳ್ಳಬಯಸುವ ಪ್ರತಿಯೊಂದು ತರಹದ ವಸ್ತುವನ್ನೂ ಕಾಣಬಹುದು. ಮತ್ತು ಅಲ್ಲಿ ನೀವು ಪ್ರತಿ ಸಂಜೆ ಸಂತೆಯೊಂದನ್ನು ನೋಡುವಿರಿ. ಅದರಲ್ಲಿ ಅವರು ಅನೇಕ ಸಾಮಾನ್ಯ ಕುದುರೆಗಳನ್ನು ಮತ್ತು ತಟ್ಟುಕುದುರೆಗಳನ್ನು ಹಾಗೂ ಅನೇಕ ಜಂಬೀರಗಳನ್ನು, ನಿಂಬೆಗಳನ್ನು, ಕಿತ್ತಲೆಗಳನ್ನು, ದ್ರಾಕ್ಷಿಗಳನ್ನು ಮತ್ತು ಪ್ರತಿಯೊಂದು ತರಹದ ಕಾಯಿಪಲ್ಯೆ ಮತ್ತು ಹಣ್ಣು ಹಂಪಲವನ್ನು ಮತ್ತು ಕಟ್ಟಿಗೆಯನ್ನು

ಮಾರುತ್ತಾರೆ. ಈ ಬೀದಿಯಲ್ಲಿ ಇವೆಲ್ಲ ಇವೆ. ಇದರ ಕೊನೆಗೆ ತನ್ನದೇ ಗೋಡೆಯಿರುವ ಹೆಬ್ಬಾಗಿಲು ಇದೆ. ಈ ಗೋಡೆ ನಾನು ಹೇಳಿರುವ ಎರಡನೆಯ ಗೋಡೆಯನ್ನು ಈ ನಗರಕ್ಕೆ ಮೂರು ಕೋಟೆಗಳಾಗುವ ರೀತಿಯಲ್ಲಿ ಸೇರುತ್ತದೆ. ಇನ್ನೂ ಒಂದು ಕೋಟೆಯೆಂದರೆ ರಾಜನ ಅರಮನೆ. ಈ ಹೆಬ್ಬಾಗಿಲನ್ನು ದಾಟಿದರೆ ಅನೇಕ ಕುಶಲಕರ್ಮಿಗಳಿರುವ ಇನ್ನೊಂದು ಬೀದಿಯಿದೆ ಮತ್ತು ಅಲ್ಲಿ ಹಲವಾರು ವಸ್ತುಗಳನ್ನು ಮಾರಲಾಗುತ್ತದೆ. ಈ ಬೀದಿಯಲ್ಲಿ ಎರಡು ಚಿಕ್ಕ ದೇವಾಲಯಗಳಿವೆ. ಪ್ರತಿ ಬೀದಿಯಲ್ಲೂ ದೇವಾಲಯಗಳಿವೆ. ಇವುಗಳು, ನಮ್ಮ ಭಾಗಗಳಲ್ಲಿ ನಿಮಗೆ ಗೊತ್ತಿರುವಂತೆ, ಎಲ್ಲ ಕುಶಲಕರ್ಮಿಗಳ ಮತ್ತು ವರ್ತಕರ ಸಂಘಗಳಂತಹ ಸಂಸ್ಥೆಗಳಿಗೆ ಸೇರಿವೆ. ಆದರೆ, ಪ್ರಮುಖ ಮತ್ತು ದೊಡ್ಡ ದೇವಾಲಯಗಳು ನಗರದ ಹೊರಗೆ ಇವೆ. ಈ ಬೀದಿಯಲ್ಲಿ ಕ್ರಿಸ್ಟೋವಾಓ ದ ಫಿಗೈರೆಡೊ ವಾಸಿಸಿದ್ದ. ಪ್ರತಿ ಶುಕ್ರವಾರ ಅಲ್ಲಿ ಸಂತೆ ಇರುತ್ತದೆ. ಅದರಲ್ಲಿ ಅನೇಕಾನೇಕ ಹಂದಿಗಳು, ಕೋಳಿಗಳು, ಒಣಗಿಸಿದ ಸಮುದ್ರ ಮೀನುಗಳು, ನನಗೆ ಹೆಸರು ಗೊತ್ತಿರದ ಆ ನಾಡಿನ ಹುಟ್ಟುವಳಿಗಳಾದ ಇತರ ವಸ್ತುಗಳು ಇರುತ್ತವೆ. ಅದರಂತೆಯೆ, ದಿನಾಲು ನಗರದ ಬೇರೆ ಬೇರೆ ಭಾಗಗಳಲ್ಲಿ ಸಂತೆ ಜರುಗುತ್ತದೆ. ಈ ಬೀದಿಯ ಕೊನೆಯಲ್ಲಿ ಮೂವ್ವರ ವಾಸಸ್ಥಾನವಿದೆ. ಅದು ನಗರದ ತೀರ ಅಂಚಿಗೆ ಇದೆ. ಈ ನಾಡಿನ ನಿವಾಸಿಗಳಗಿರುವ ಈ ಮೂವ್ವರಿಗೆ ರಾಜ ಸಂಬಳ ಕೊಡುತ್ತಾನೆ ಮತ್ತು ಅವರು ಅವನ ಕಾವಲುಗಾರರಾಗಿದ್ದಾರೆ. ಅದು ಹೊಂದಿರುವ ಬೃಹತ್ ವ್ಯಾಪಾರ ಹಾಗೂ ಮುಖ್ಯತಃ ವಜ್ರಗಳುಳ್ಳ ಅನೇಕ ಬೆಲೆಯುಳ್ಳ ಹರಳುಗಳಿಂದಾಗಿ ಈ ನಗರದಲ್ಲಿ ಪ್ರತಿಯೊಂದು ದೇಶ ಹಾಗೂ ಜನಾಂಗದ ಜನರನ್ನು ಕಾಣಬಹುದು.[೨೧]

ಈ ನಗರದ ಗಾತ್ರದ ಬಗೆಗೆ ನಾನಿಲ್ಲಿ ಬರೆಯುವುದಿಲ್ಲ. ಏಕೆಂದರೆ, ಯಾವ ಸ್ಥಳದಿಂದಲೂ ಅದು ಎಲ್ಲ ಕಾಣಿಸದು. ಆದರೆ ನಾನೊಂದು ಗುಡ್ಡ ಏರಿದೆ, ಅಲ್ಲಿಂದ ಅದರ ಬಹುಭಾಗವನ್ನು ನೋಡಲು ಶಕ್ಯವಾಯಿತು. ಅದನ್ನು ಎಲ್ಲಿ ನೋಡಲಾಗಲಿಲ್ಲ ಏಕೆಂದರೆ ಅದು ಹಲವಾರು ಬೆಟ್ಟ ಸಾಲುಗಳ ಮಧ್ಯೆ ಇದೆ. ಅಲ್ಲಿಂದ ನಾನು ನೋಡಿದುದು ರೋಮ್‌ನಷ್ಟು ವಿಶಾಲವಾಗಿಯೂ ಮತ್ತು ಬಹಳ ಸುಂದರವಾಗಿಯೂ ಕಂಡಿತು. ಅದರೊಳಗೆ ಮತ್ತು ಮನೆಗಳ ತೋಟಗಳಲ್ಲಿ ಅನೇಕ ಗಿಡಗಳಿವೆ ಮತ್ತು ಅದರ ಮಧ್ಯೆ ಹರಿಯುವ ನೀರಿನ ಅನೇಕ ನಾಲೆಗಳಿವೆ. ಅಲ್ಲಲ್ಲಿ ಸರೋವರಗಳಿವೆ. ರಾಜ ತನ್ನ ಅರಮನೆಯ ಹತ್ತಿರವೇ ತೆಂಗಿನ ಸೋಪು ಮತ್ತು ಇತರ ಸಂಪದ್ಭರಿತ ಹಣ್ಣಿನ ಗಿಡಗಳನ್ನು ಹೊಂದಿದ್ದಾನೆ. ಮೂರರ ವಾಸಸ್ಥಾನದ ಕೆಳಗಡೆ ಒಂದು ಚಿಕ್ಕ ನದಿಯಿದೆ. ಅದರ ಈ ಬದಿಗೆ ಅನೇಕ ಹಣ್ಣಿನ ತೋಟಗಳು ಮತ್ತು ಅನೇಕ ಹಣ್ಣಿನ ಗಿಡಗಳುಳ್ಳ ತೋಟಗಳು ಇವೆ. ಅವುಗಳಲ್ಲಿ ಬಹುಮಟ್ಟಿಗೆ ಇರುವುದು ಮಾವು, ಅಡಿಕೆ, ಹಲಸು ಮತ್ತು ಅನೇಕ ನಿಂಬೆ, ಕಿತ್ತಳೆ ಗಿಡಗಳು. ಅವುಗಳು ಒಂದಕ್ಕೊಂದು ಎಷ್ಟು ಗುತ್ತಾಗಿ ಬೆಳೆದಿವೆಯೆಂದರೆ ಅದು ದಟ್ಟ ಅರಣ್ಯದಂತೆ ತೋರುತ್ತದೆ. ಮತ್ತು ಅಲ್ಲಿ ಬಿಳಿ ದ್ರಾಕ್ಷಿಗಳೂ ಉಂಟು. ನಗರದಲ್ಲಿರುವ ನೀರೆಲ್ಲ ಪ್ರಥಮ ಸುತ್ತಿನ ಗೋಡೆಯ

ಹೊರಗೆ ಇರುವ ನಾನು ಹೇಳಿದ ಎರಡು ಕೆರೆಗಳಿಂದ ಬರುತ್ತದೆ.

ಈ ನಗರದಲ್ಲಿನ ಜನರ ಸಂಖ್ಯೆ ಎಣಿಕೆ ಮಿಕ್ಕಿದ್ದು. ಎಷ್ಟರಮಟ್ಟಿಗೆಂದರೆ ಕಲ್ಪಿತವೆಂದು ತಿಳಿದಾರೆಂಬ ಭಯದಿಂದ ನಾನು ಅದನ್ನು ಇಲ್ಲಿ ಬರೆಯಲಿಚ್ಛಿಸುವುದಿಲ್ಲ. ಜನರ ಮತ್ತು ಆನೆಗಳ ಸಂಖ್ಯೆ ಎಷ್ಟು ದೊಡ್ಡದಾಗಿತ್ತೆಂದರೆ ಆಶ್ವಾಳಾಗಲಿ ಕಾಲಾಳಾಗಲಿ ಯಾವ ಸೈನ್ಯವೂ ಯಾವ ಓಣಿ ಅಥವಾ ಬೀದಿಯನ್ನೂ ಭೇದಿಸಿಕೊಂಡು ನುಗ್ಗಲು ಸಾಧ್ಯವಿಲ್ಲ.

ಜಗತ್ತಿನಲ್ಲಿಯೇ ಇದು ಅತ್ಯಂತ ಚೆನ್ನಾಗಿ ಸವರಿಸಿದ ನಗರ. ಅಕ್ಕಿ, ಗೋದಿ, ಧಾನ್ಯಗಳು, ಮುಸುಕಿನ ಜೋಳ, ಕೆಲಮಟ್ಟಿನ ಜವೆ ಮತ್ತು ಅವರೆಗಳು, ಹಸಿರುಗಡಲೆ, ಬೇಳೆಕಾಳು, ಕುದುರೆಗಡಲೆ ಮತ್ತು ಈ ನಾಡಿನಲ್ಲಿ ಬೆಳೆಯುವ ಹಾಗೂ ಜನರ ಆಹಾರವಾಗಿರುವ ಇತರ ಅನೇಕ ಧಾನ್ಯಗಳು ಮೊದಲಾದ ಆಹಾರ ಧಾನ್ಯಗಳ ದಾಸ್ತಾನು ಇಲ್ಲಿ ಮಾಡಲಾಗಿದೆ. ಇವುಗಳ ದೊಡ್ಡ ಸಂಗ್ರಹವಿದ್ದು ಇವುಗಳ ಬಹಳ ಅಗ್ಗವಾಗಿವೆ. ಅದನ್ನು ಮೂರರನ್ನುಳಿದು ಬೇರೆ ಯಾರೂ ತಿನ್ನದುದರಿಂದ ಗೋಧಿ ಇತರ ಧಾನ್ಯಗಳಷ್ಟು ಸಾಮಾನ್ಯವಾಗಿಲ್ಲ. ಆದರೆ ನಾನು ಹೇಳಿದುದನ್ನು ನೀವು ಕಾಣುವಿರಿ. ಬೀದಿಗಳು ಮತ್ತು ಪೇಟೆಗಳು ಮೂಟೆ ಹೇರಿದ ಲೆಕ್ಕವಿಲ್ಲದಷ್ಟು ಎತ್ತುಗಳಿಂದ ತುಂಬಿದುದರಿಂದ ಅವುಗಳಿಂದಾಗಿ ನೀವು ಮುಂದೆ ಸಾಗಲಾರಿರಿ ಮತ್ತು ಅನೇಕ ಬೀದಿಗಳಲ್ಲಿ ಅವು ಎಷ್ಟೊಂದು ಇರುತ್ತವೆಂದರೆ ನೀವು ಅವು ಹೋಗುವವರೆಗೆ ನಿಲ್ಲಬೇಕು ಇಲ್ಲವೆ ಇನ್ನೊಂದು ಹಾದಿಯಿಂದ ಹೋಗಬೇಕು. ಬಹಳ ಕೋಳಿಗಳೂ ಇವೆ. ಫವಾಒ ಎಂದು ಕರೆಯಲಾಗುವ ಒಂದು ವಿಂಟೆಮ್. ಬೆಲೆಯುಳ್ಳ ನಾಣ್ಯಕ್ಕೆ ನಗರದಲ್ಲಿ ಮೂರು ಕೋಳಿ ಕೊಡುತ್ತಾರೆ. ನಗರದ ಹೊರಗೆ ಒಂದು ವಿಂಟೆಮ್‌ಗೆ ನಾಲ್ಕು ಕೋಳಿ ಕೊಡುತ್ತಾರೆ.

ಈ ನಾಡಿನಲ್ಲಿ ಅನೇಕ ಕವುಜಗ ಹಕ್ಕಿಗಳಿವೆ. ಆದರೆ, ಅವು ನಮ್ಮಂತಹ ನಮೂನೆಯನ್ನು ಅಥವಾ ಮುಟ್ಟದವಾಗಿಲ್ಲ. ಅವು ಇಟಲಿಯ ಎಸ್ಪರ್ನ್‌ಗಳಂತಿವೆ. ಇವು ಮೂರು ವಿಧವಾಗಿವೆ. ಒಂದು ಜಾತಿ ಪೋರ್ತುಗಾಲದವುಗಳಂತೆ ಒಂದೇ ಚಿಕ್ಕ ಗಡಸುಚಾಚು ಹೊಂದಿದೆ; ಇನ್ನೊಂದು ಜಾತಿ ಪ್ರತಿಯೊಂದು ಕಾಲಿನಲ್ಲಿ ಎರಡು ಚೂಪಾದ ಹೆಚ್ಚೂ ಕಡಿಮೆ ನಮ್ಮ ಬೆರಳಿನಷ್ಟು ಉದ್ದ ಹಾಗೂ ದಪ್ಪವಾದ ಗಡಸುಚಾಚು ಹೊಂದಿದೆ. ಇನ್ನೂ ಒಂದು ಜಾತಿ ಬಣ್ಣದ್ದು.ಇವುಗಳಿಂದಲೂ ಲಾವಕ್ಕಿ ಮತ್ತು ಮೊಲಗಳಿಂದಲೂ ಎಲ್ಲ ಜಾತಿಯ ಕಾಡುಪಕ್ಷಿಗಳಿಂದಲೂ ಮತ್ತು ಸರೋವರಗಳಲ್ಲಿರುವ ಗೀಜಗನಂತೆ ಕಾಣುವ ಇತರ ಹಕ್ಕಿಗಳಿಂದಲೂ ಮಾರುಕಟ್ಟೆಗಳು ತುಂಬಿರುತ್ತವೆ. ಇವೆಲ್ಲ ಪಕ್ಷಿಗಳು ಮತ್ತು ಬೇಟೆ ಪ್ರಾಣಿಗಳನ್ನು ಅವರು ಜೀವಂತ ಮಾರುತ್ತಾರೆ ಮತ್ತು ಅವು ಬಹಳ ಅಗ್ಗವಿರುತ್ತವೆ. ಏಕೆಂದರೆ, ಅವರು ಒಂದು ವಿಂಟೆಮ್‌ಗೆ ಆರು ಅಥವಾ ಎಂಟು ಕವುಜಗ ಹಕ್ಕಿಗಳನ್ನು ಕೊಡುತ್ತಾರೆ ಮತ್ತು ಮೊಲಗಳನ್ನು ಎರಡು, ಕೆಲವೊಮ್ಮೆ ಒಂದು ಕೊಡುತ್ತಾರೆ. ಇತರ ಹಕ್ಕಿಗಳನ್ನಾದರೊ ನೀವು ಎಣಿಸಲಾರದಷ್ಟು ಕೊಡುತ್ತಾರೆ. ಏಕೆಂದರೆ, ದೊಡ್ಡವುಗಳನ್ನು ಕೂಡ ಎಷ್ಟೊಂದು ಕೊಡುತ್ತಾರೆಂದರೆ ಅವರು ಕೊಡುವ ಹಕ್ಕಿಗಳು,

ಪಾರಿವಾಳಗಳು ಮತ್ತು ನಾಡಿನ ಇತರ ಸಾಮಾನ್ಯ ಪಕ್ಷಿಗಳಂತಹ ಚಿಕ್ಕವುಗಳ ಕಡೆಗೆ ನೀವು ಗಮನಿಸದಿರಬಹುದು. ಹಕ್ಕಿಗಳು ಎರಡು ತರಹದವು; ಕೆಲವು ಪೋರ್ತುಗಾಲಿನಲ್ಲಿನವುಗಳಂತೆ ಇವೆ, ಮಿಕ್ಕವು ಥ್ರಶ್ ಪಕ್ಷಿಗಳಷ್ಟು ದೊಡ್ಡವು. ಹಕ್ಕಿಗಳನ್ನು ಒಂದು ಫಾವಾಒಗೆ ಹನ್ನೆರಡು ಅಥವಾ ಹದಿನಾಲ್ಕು ಕೊಡುತ್ತಾರೆ. ಪಾರಿವಾಳಗಳ ಬೆಲೆ ಇತರ ಪಕ್ಷಿಗಳಿದ್ದಷ್ಟೆ. ಅವರು ದಿನಾಲು ಕೊಲ್ಲುವ ಕುರಿಗಳಿಗೆ ಲೆಕ್ಕವಿಲ್ಲ. ಅವುಗಳನ್ನು ಎಣಿಸಲಿಕ್ಕಾಗದು. ಏಕೆಂದರೆ, ಪ್ರತಿಯೊಂದು ಬೀದಿಯಲ್ಲಿ ಮಾಂಸ ಮಾರುವ ಜನರಿದ್ದಾರೆ. ಅದು ಎಷ್ಟು ಸ್ವಚ್ಛ ಹಾಗೂ ದಪ್ಪವಾಗಿರುತ್ತದೆಂದರೆ ಅದು ಹಂದಿಯ ಮಾಂಸದಂತೆ ಕಾಣುತ್ತದೆ. ಕಟುಕರ ಮನೆಗಳಿರುವ ಕೆಲವು ಬೀದಿಗಳಲ್ಲಿ ಹಂದಿಗಳೂ ಇವೆ. ಅವು ಎಷ್ಟು ಬೆಳ್ಳಗೆ ಮತ್ತು ಸ್ವಚ್ಛವಾಗಿಯೆಂದರೆ ನಿಮಗೆ ಯಾವುದೇ ದೇಶದಲ್ಲಿ ಇದಕ್ಕಿಂತ ಉತ್ತಮವಾದವುಗಳು ದೊರೆಯವು. ಒಂದು ಹಂದಿಯ ಬೆಲೆ ನಾಲ್ಕು ಅಥವಾ ಐದು ಫನಮ್‌ಗಳು. ಅಲ್ಲದೆ, ದಿನಾಲು ಬರುವ ನಿಂಬೆಯ ರಾಶಿಗಳಿಗೆ ಪೊಮೊಸ್‌ನವುಗಳು ಯಾವ ಲೆಕ್ಕವೂ ಅಲ್ಲ. ಸಿಹಿ ಮತ್ತು ಹುಳಿ ಕಿತ್ತಳೆಗಳ, ಕಾಡುಬದನೆಕಾಯಿಗಳ ಇತರ ಕಾಯಿಪಲ್ಯ, ಹಣ್ಣು ಹಂಪಲುಗಳ ವಿಫುಲತೆ ದಂಗುಬಡಿಸುವಂತಹದು. ಈ ನಗರಗಳ ಪರಿಸ್ಥಿತಿ ಹಗಲೆಲ್ಲ ಸಾಮಗ್ರಿ ಮತ್ತು ಆಹಾರ ಧಾನ್ಯಗಳ ಕೊರತೆ ಬೀಳುವ ಇತರ ನಗರಗಳ ಪರಿಸ್ಥಿತಿಯಂತಿಲ್ಲ. ಏಕೆಂದರೆ, ಇದರಲ್ಲಿ ಎಲ್ಲವೂ ವಿಫುಲವಾಗಿದೆ. ಪ್ರತಿದಿನ ಮಾರಲಾಗುವ ಬೆಣ್ಣೆ, ಎಣ್ಣೆ, ಹಾಲುಗಳ ಮೊತ್ತದ ಬಗೆಗೂ ಹೇಳದಿರಲಾರೆ. ಈ ನಗರದಲ್ಲಿ ಜರುಗುವ ಆಕಳು ಮತ್ತು ಎಮ್ಮೆಗಳ ಸಂಗೋಪನೆ ಯಾವ ಪ್ರಮಾಣದ್ದೆಂದರೆ ಅದರಂತಹದಿನ್ನೊಂದನ್ನು ನೋಡಲು ನೀವು ದೂರ ಹೋಗಬೇಕು. ಬಹಳ ದಾಳಿಂಬೆಗಳೂ ಉಂಟು. ದ್ರಾಕ್ಷಿಗಳನ್ನು ಒಂದು ಫನಮ್‌ಗೆ ಮೂರು ಗೊಂಚಲಿನಂತೆ, ದಾಳಿಂಬೆಗಳನ್ನು ಹತ್ತರಂತೆ ಮಾರಲಾಗುತ್ತದೆ.

ಈ ನಗರದ ಉತ್ತರ ದಿಕ್ಕಿಗೆ ಬಹಳ ನೀರುಳ್ಳ ದೊಡ್ಡ ನದಿಯಿದೆ. ಅದರಲ್ಲಿ ವಿಫುಲ ಮೀನುಗಳಿವೆ. ಆ ಮೀನುಗಳು ಅನಾರೋಗ್ಯಕರವಾಗಿದೆ. ಮತ್ತು ಈ ನದಿಯಲ್ಲಿ...(ಮೂಲದಲ್ಲಿ ಹೀಗೆಯೆ ಇದೆ) ಎಂದು ಎನ್ನಬಹುದಾದದ್ದು ಇದೆ. ಉಳಿದ ನದಿಗಳು ಹರಿದುಬಂದು ಇದಕ್ಕೆ ಸೇರಿರುವುದರಿಂದ ಇದು ವಿಶಾಲವಾಗಿದೆ.

ಈಗ ಈ ನದಿಯ ದಂಡೆಯ ಮೇಲಿರುವ ಊರುಗಳನ್ನು ನೋಡೋಣ. ಸೇನುಗುಂಡಿಮ್ ಎಂದು ಕರೆಯಲಾಗುವ ನಗರವೊಂದು ನಿರ್ಮಿತವಾಗಿದೆ. ಅದು ಈ ಹಿಂದೆ ರಾಜ್ಯದ ರಾಜಧಾನಿಯಾಗಿತ್ತೆಂದು ಹೇಳುತ್ತಾರೆ. ಆದರೆ ಈಗ ಅಲ್ಲಿ ಬಹಳ ಕಡಿಮೆ ಜನ ವಾಸವಾಗಿದ್ದಾರೆ. ಅದು ಇನ್ನೂ ಒಳ್ಳೆಯ ಗೋಡೆಗಳನ್ನು ಹೊಂದಿದ್ದು ಬಹಳ ಭದ್ರವಾಗಿದೆ. ಮತ್ತು ಅದು ಎರಡೇ ದ್ವಾರಗಳಿರುವ ಎರಡು ಬೆಟ್ಟ ಸಾಲುಗಳ ನಡುವೆ ಇದೆ. ಈ ನಗರದಲ್ಲಿ ರಾಜನ ಪರವಾಗಿ ಒಬ್ಬ ದಳವಾಯಿ ಇರುತ್ತಾನೆ. ಜನರು ಈ ಊರಿಗೆ ಬುಟ್ಟಿಗಳಂತೆ ದುಂಡಗಿರುವ ದೋಣಿಗಳಲ್ಲಿ ದಾಟಿ ಬರುತ್ತಾರೆ. ಅವುಗಳನ್ನು ಒಳಗಡೆ ಬೆತ್ತದಂತೆ ಮಾಡಿ ಹೊರಮೈಗೆ

ಚರ್ಮ ಹೊದಿಸುತ್ತಾರೆ. ಅವುಗಳು ಹದಿನೈದು ಇಪ್ಪತ್ತು ಜನರನ್ನು ಒಯ್ಯಬಲ್ಲವು ಮತ್ತು ಅಗತ್ಯ ಬಿದ್ದರೆ ಕುದುರೆ ಮತ್ತು ಎತ್ತುಗಳೂ ಅವುಗಳಲ್ಲಿ ದಾಟುತ್ತವೆ. ಆದರೆ, ಬಹುಮಟ್ಟಿಗೆ ಈ ಪ್ರಾಣಿಗಳು ಈಜಿ ದಾಟುತ್ತವೆ. ಜನರು ಅವುಗಳನ್ನು ಒಂದು ತರದ ಮೋಟು ಹುಟ್ಟು ಹಾಕುತ್ತಾರೆ ಮತ್ತು ಅವು ಇತರ ದೋಣಿಗಳಂತೆ ನೇರವಾಗಿ ಹೋಗಲಾರವಾದುದರಿಂದ ಈ ದೋಣಿಗಳು ಯಾವಾಗಲೂ ದುಂಡಗೆ ತಿರುಗುತ್ತವೆ. ರಾಜ್ಯದಲ್ಲಿ ನದಿಗಳಿರುವೆಡೆಯಲೆಲ್ಲ ಇವುಗಳನ್ನು ಬಿಟ್ಟರೆ ಬೇರೆ ದೋಣಿಗಳಿಲ್ಲ.

ಈ ನಗರದಲ್ಲಿ ಸಜೀವ ಕುರಿಗಳನ್ನು ಮಾರುವ ಸ್ಥಳಗಳೂ ಉಂಟು. ನಗರದ ಸುತ್ತಲಿನ ಹೊಲಗಳು ಅವುಗಳಿಂದ ತುಂಬಿದುದನ್ನು ಕಾಣಬಹುದು. ಅದೇ ರೀತಿ ಆಕಳುಗಳು ಹಾಗೂ ಎಮ್ಮೆಗಳದ್ದೂ. ನೋಡಲು ಅದು ಸುಂದರ ನೋಟವಾಗಿರುತ್ತದೆ. ಹಾಗೆಯೆ ಆಡುಗಳು, ಮರಿಗಳು ಮತ್ತು ಟಗರುಗಳಿದ್ದೂ. ಟಗರುಗಳು ಎಷ್ಟು ದೊಡ್ಡವಿರುತ್ತವೆಂದರೆ ಅವುಗಳಿಗೆ ಲಗಾಮು ಜೀನು ತೊಡಿಸಲಾಗುತ್ತದೆ. ಅನೇಕ ಕುರಿಗಳೂ ಅದೇ ರೀತಿ ಇದ್ದು ಹುಡುಗರು ಅವುಗಳ ಮೇಲೆ ಕುಳಿತು ನಡೆಸುತ್ತಾರೆ.

ನಗರದ ಗೋಡೆಗಳಾಚೆ ಉತ್ತರಕ್ಕೆ ಮೂರು ಬಲು ಸುಂದರ ದೇವಾಲಯಗಳಿವೆ. ಅವುಗಳಲ್ಲೊಂದನ್ನು ವಿಟೆಲಾ ಎಂದು ಕರೆಯಲಾಗುತ್ತದೆ. ಅದು ಈ ನಾಗುಂಡಿಮ್ ನಗರಕ್ಕೆ ಎದುರಾಗಿ ನಿಂತಿದೆ. ಇನ್ನೊಂದನ್ನು ಆ ಒಪರಾದ್ಯನಾರ್ ಎಂದು ಕರೆಯುತ್ತಾರೆ. ಅವರು ಬಹಳ ಭಕ್ತಿ ತೋರುವುದೂ ಮತ್ತು ಮಹಾ ತೀರ್ಥಯಾತ್ರೆ ಹೊರಡುವುದೂ ಇದಕ್ಕೇ. ಈ ದೇವಾಲಯದಲ್ಲಿ, ಪೂರ್ವಕ್ಕಿರುವ ಅದರ ಪ್ರಧಾನ ಹೆಬ್ಬಾಗಿಲಿಗೆ ಎದುರಾಗಿ ಉಪ್ಪರಿಗೆಯ ಮೊಗಸಾಲೆ ಹಾಗೂ ಕಮಾನು ದಾರಿಗಳುಳ್ಳ ಬಲು ಸುಂದರ ಮನೆಗಳ ಬಲು ಸುಂದರ ಬೀದಿಯಿದೆ. ಇವುಗಳಲ್ಲಿ ಅಲ್ಲಿಗೆ ಬರುವ ಯಾತ್ರಿಗಳಿಗೆ ಆಶ್ರಯ ನೀಡಲಾಗುತ್ತದೆ. ಮೇಲುವರ್ಗದವರ ವಾಸಕ್ಕಾಗಿ ಮನೆಗಳೂ ಇವೆ. ಅದೇ ಬೀದಿಯಲ್ಲಿ ರಾಜನ ಅರಮನೆಯೊಂದಿಗೆ. ದೇವಾಲಯವನ್ನು ಸಂದರ್ಶಿಸುವಾಗ ಅವನು ಅಲ್ಲಿಯೇ ತಂಗುತ್ತಾನೆ. ಈ ಪ್ರಥಮ ಹೆಬ್ಬಾಗಿಲಿನ ಮೇಲೆ ಒಂದು ದಾಳಿಂಬೆ ವೃಕ್ಷವಿದೆ. ದ್ವಾರಕ್ಕೆ ಬಲು ಎತ್ತರವಾದ ಗೋಪುರವಿದೆ. ಗೋಪುರ ಪುರುಷ ಸ್ತ್ರೀಯರ, ಬೇಟೆಯ ದೃಶ್ಯಗಳ, ಇನ್ನೂ ಅನೇಕ ಆಕೃತಿಗಳ ಸಾಲುಗಳಿಂದ ಆಚ್ಛಾದಿತವಾಗಿದೆ. ಗೋಪುರ ಮೇಲಕ್ಕೆ ಹೋದಂತೆ ಕಿರಿದಾಗುವುದರಿಂದ ಆಕೃತಿಗಳು ಆಕಾರದಲ್ಲಿ ಚಿಕ್ಕದಾಗುತ್ತವೆ. ಈ ದ್ವಾರ ದಾಟಿದರೆ ಮೊದಲಿನದಂತಹದೇ ಇನ್ನೊಂದು ದ್ವಾರವುಳ್ಳ ವಿಶಾಲ ಅಂಗಳದಲ್ಲಿ ಪ್ರವೇಶಿಸುತ್ತೀರಿ. ಆದರೆ ಈ ದ್ವಾರ ಉದ್ದಕ್ಕೂ ಚಿಕ್ಕದಾಗಿದೆ. ಈ ಎರಡನೆಯ ದ್ವಾರ ದಾಟಿದರೆ ಕಲ್ಲಿನ ಕಂಬಗಳ ಮೇಲೆ ಸುತ್ತಲೂ ಇರುವ ಮೊಗಸಾಲೆಗಳುಳ್ಳ ವಿಶಾಲ ಅಂಗಳವಿದೆ. ಈ ಅಂಗಳದ ಮಧ್ಯದಲ್ಲಿ ಗರ್ಭ ಗುಡಿಯಿದೆ.

ಪ್ರಮುಖ ದ್ವಾರದ ಎದುರಿಗೆ ನಾಲ್ಕು ಸ್ತಂಭಗಳಿವೆ. ಎರಡು ಚಿನ್ನದ ಗಿಲೀಟು ಮಾಡಿದವು, ಇನ್ನೆರಡು ತಾಮ್ರದವು. ಅವುಗಳ ದೀರ್ಘ ವಯಸ್ಸಿನಿಂದಾಗಿ ಬಂಗಾರ

ಉದುರಿಹೋಗಿದೆ ಎಂದು ನನಗೆನಿಸುತ್ತದೆ ; ಉಳಿದೆರಡೂ ತಾಮ್ರದವು, ಏಕೆಂದರೆ ಎಲ್ಲವೂ ತಾಮ್ರದವು. ದೇವಾಲಯದ ದ್ವಾರಕ್ಕೆ ತೀರ ಹತ್ತಿರವಿರುವುದನ್ನು ಈಗ ಇಲ್ಲಿ ಆಳುತ್ತಿರುವ ಈ ರಾಜಾ ಕ್ರಿಸ್ನರಾವ್ ಕೊಟ್ಟಿದ್ದ. ಮಿಕ್ಕವುಗಳನ್ನು ಅವನ ಪೂರ್ವಾಧಿಕಾರಿಗಳು ನೀಡಿದ್ದರು. ದೇವಾಲಯದ ದ್ವಾರದ ಹೊರಬದಿಯಲ್ಲಿ ಚಾವಣಿಯವರೆಗೆ ತಾಮ್ರದಿಂದ ಆಚ್ಛಾದಿತವಾಗಿದ್ದು ಬಂಗಾರದ ಗಿಲೀಟು ಮಾಡಲಾಗಿದೆ. ಚಾವಣಿಯ ತುದಿಯ ಮೇಲೆ ಎರಡೂ ಬದಿಗೆ ಪೂರ್ತಿ ಬಂಗಾರದ ಗಿಲೀಟು ಮಾಡಲಾದ ಹುಲಿಗಳಂತೆ ಕಾಣುವ ಕೆಲವು ದೊಡ್ಡ ಪ್ರಾಣಿಗಳಿವೆ. ಈ ಗರ್ಭಗುಡಿಯನ್ನು ಪ್ರವೇಶಿಸಿದಾಕ್ಷಣ ಅದನ್ನು ಹೊತ್ತಿರುವ ಕಂಬ ಕಂಬದಲ್ಲೂ ಇರುವ ಅನೇಕ ಚಿಕ್ಕ ರಂದ್ರಗಳಲ್ಲಿ ಎಣ್ಣೆ ದೀಪಗಳಿರುವುದನ್ನು ನೋಡುತ್ತೀರಿ. ಅವು ಪ್ರತಿ ರಾತ್ರಿ ಉರಿಯುತ್ತವೆ ಎಂದು ಅವರು ನನಗೆ ಹೇಳುತ್ತಾರೆ. ಅವು ಎರಡೂವರೆ ಇಲ್ಲವೆ ಮೂರು ಸಾವಿರ ದೀಪಗಳಾಗುತ್ತವೆ. ಈ ಗುಡಿಯನ್ನು ದಾಟಿದ ಕೂಡಲೇ ಯಾವುದೋ ಚರ್ಚ್‌ನ ನೆಲಗವಿಯಂತಿರುವ ಇನ್ನೊಂದು ಚಿಕ್ಕ ಗುಡಿಯನ್ನು ಪ್ರವೇಶಿಸುತ್ತೀರಿ. ಅದಕ್ಕೆ ಬದಿಗಳಲ್ಲಿ ಎರಡು ಬಾಗಿಲುಗಳಿದ್ದು ಅಲ್ಲಿಂದ ಮುಂದಕ್ಕೆ ಈ ಕಟ್ಟಡ ಆರಾಧನಾ ಗೃಹದಂತಿವೆ. ಅಲ್ಲಿ ಅವರು ಆರಾಧಿಸುವ ಮೂರ್ತಿಯಿದೆ. ಅದನ್ನು ತಲುಪುವ ಮುನ್ನ ಮೂರು ಬಾಗಿಲುಗಳಿವೆ. ಗರ್ಭಗುಡಿ ಗುಮ್ಮಟ ಚಾವಣಿಯಾಗಿದ್ದು ಆಕಾಶದಿಂದ ಯಾವುದೇ ಬೆಳಕು ಬೀಳದಿದ್ದುದರಿಂದ ಕತ್ತಲಾಗಿರುತ್ತದೆ. ಅದನ್ನು ಯಾವಾಗಲೂ ಬತ್ತಿಗಳಿಂದ ಬೆಳಗಿಸಲಾಗುತ್ತದೆ. ಮೊದಲ ಬಾಗಿಲಲ್ಲಿ ದ್ವಾರಪಾಲಕರಿದ್ದು ಅವರು ಅದರ ಮೇಲ್ವಿಚಾರಣೆಯಲ್ಲಿದ್ದ ಬ್ರಾಹ್ಮಣರನ್ನು ಹೊರತುಪಡಿಸಿ ಯಾರಿಗೂ ಪ್ರವೇಶಿಸಲು ಬಿಡುವುದಿಲ್ಲ. ನಾನು ಅವರಿಗೆ ಏನನ್ನೊ ಕೊಟ್ಟೆನೆಂದು ಒಳಗೆ ಬಿಟ್ಟರು. ಬಾಗಿಲ ಮಧ್ಯೆ ಚಿಕ್ಕ ದೇವತೆಗಳ ವಿಗ್ರಹಗಳಿವೆ. ಪ್ರಧಾನ ಮೂರ್ತಿ ಯಾವುದೇ ಆಕಾರವಿಲ್ಲದ ದುಂಡು ಕಲ್ಲು. ಅದೆಂದರೆ ಅವರಿಗೆ ಬಲು ಭಕ್ತಿ. ಈ ಕಟ್ಟಡದ ಹೊರಮೈಗೆಲ್ಲ ತಾಮ್ರದ ಗಿಲೀಟುಕೊಡಲಾಗಿದೆ. ದೇವಾಲಯದ ಹಿಂದೆ ಹೊರಗಡೆ ನಾನು ಹೇಳಿದ ಮೊಗಸಾಲೆಗಳಿಗೆ ಹತ್ತಿರವಾಗಿಯೆ ಬಿಳಿ ಚಂದ್ರಕಾಂತ ಶಿಲೆಯಲ್ಲಿ ಮಾಡಲಾದ ಆರು ತೋಳುಗಳುಳ್ಳ ಚಿಕ್ಕ ವಿಗ್ರಹವಿದೆ. ಒಂದರಲ್ಲಿ... ಇದೆ. ಇನ್ನೊಂದರಲ್ಲಿ ಖಡ್ಗವಿದೆ. ಉಳಿದುವುಗಳಲ್ಲಿ ಪವಿತ್ರ ಲಾಂಛನಗಳಿವೆ. ಮತ್ತು ಅದರ ಪಾದದಡಿಯಲ್ಲಿ ಒಂದು ಕೋಣವಿದೆ ಮತ್ತು ಅದನ್ನು ಕೊಲ್ಲಲು ಸಹಾಯಕವಾದ ದೊಡ್ಡ ಪ್ರಾಣಿಯೊಂದಿದೆ. ಈ ದೇವಾಲಯದಲ್ಲಿ ಅವಿರತವಾಗಿ ತುಪ್ಪದ ದೀವಿಗೆ ಉರಿಯುತ್ತದೆ ಮತ್ತು ಸುತ್ತಲೂ ಪೂಜಾಗೃಹಗಳಿಗಾಗಿ ಚಿಕ್ಕ ದೇವಾಲಯಗಳಿವೆ. ಮೇಲೆ ಹೇಳಿದ ಇತರೆ ದೇವಾಲಯಗಳು ಅದೇ ಮಾದರಿಯಲ್ಲಿ ರಚಿಸಲ್ಪಟ್ಟಿವೆ. ಆದರೆ ಇದು ಪ್ರಮುಖವಾದುದು ಮತ್ತು ಅತ್ಯಂತ ಪ್ರಾಚೀನವಾದುದು. ಅವುಗಳು ಹಲವಾರು ಕಟ್ಟಡಗಳನ್ನು ಮತ್ತು ಅನೇಕ ಗಿಡಗಳುಳ್ಳ ತೋಟಗಳನ್ನು ಹೊಂದಿವೆ. ಅವುಗಳಲ್ಲಿ ಬ್ರಾಹ್ಮಣರು ಕಾಯಿಪಲ್ಯಗಳನ್ನು ಮತ್ತು ತಾವು ತಿನ್ನುವ ಇತರ ಸಸ್ಯಗಳನ್ನು ಬೆಳೆಯುತ್ತಾರೆ. ಇವುಗಳಲ್ಲಿ ಯಾವುದೊಂದರ ಉತ್ಸವ ಜರುಗಿದಾಗ ಗಾಲಿಗಳ ಮೇಲೆ ಉರುಳುವ ವಿಜಯೋತ್ಸವ ರಥಗಳನ್ನು ಎಳೆಯುತ್ತಾರೆ. ಬಹಳ ವೈಭವದೊಂದಿಗೆ ಹೇಳಲಾದ ಬೀದಿ ಗುಂಟ ವಿಗ್ರಹವನ್ನು (ಒಯ್ಯಲಾಗುತ್ತದೆ) ಅದರೊಂದಿಗೆ ನೃತ್ಯಕನ್ಯೆಯರು

ಮತ್ತು ಸ್ತ್ರೀಯರು ಸಂಗೀತದೊಂದಿಗೆ ದೇವಾಲಯಕ್ಕೆ ಹೋಗುತ್ತಾರೆ. ಈ ರಥಗಳನ್ನು ಎಳೆಯುವ ರೀತಿಯ ಬಗೆಗೆ ನಾನು ಹೇಳುವುದಿಲ್ಲ. ಏಕೆಂದರೆ, ನಾನು ಈ ನಗರದಲ್ಲಿದ್ದ ಒಟ್ಟು ಅವಧಿಯಲ್ಲಿ ಯಾವುದನ್ನೂ ಎಳೆಯಲಿಲ್ಲ. ನಗರದಲ್ಲಿ ಇನ್ನೂ ಅನೇಕ ದೇವಾಲಯಗಳಿವೆ. ಪದಬಾಹುಳ್ಯ ತೊಡೆಯಲು ಅವುಗಳ ಬಗೆಗೆ ನಾನು ಇಲ್ಲಿ ಹೇಳುವುದಿಲ್ಲ.

ಈ ಅನಾಗರಿಕರಲ್ಲಿಯೂ ನಮ್ಮಲ್ಲಿಯಂತೆ ಉತ್ಸವ ಆಚರಿಸುವ ದಿನಗಳಿವೆಯೆಂಬುದನ್ನು ನೀವು ತಿಳಿಯಬೇಕು. ಅವರ ಉಪವಾಸದ ದಿನಗಳೂ ಇವೆ. ಅಂದು ಅವರು ಇಡೀ ದಿನ ಏನನ್ನೂ ಸೇವಿಸುವುದಿಲ್ಲ; ಮಧ್ಯರಾತ್ರಿಗೆ ಮಾತ್ರ ಸೇವಿಸುತ್ತಾರೆ. ಮುಖ್ಯ ಉತ್ಸವದ ಕಾಲ ಬಂದಾಗ, ಅದು ರಾಜ್ಯದ ರಾಜಧಾನಿಯಾದುದರಿಂದಲೂ, ರಾಜ ಹೊಸ ನಗರದಿಂದ ಈ ಬೀಸ್ನಗ ನಗರಕ್ಕೆ ಆಗಮಿಸುತ್ತಾನೆ. ಈ ಉತ್ಸವಗಳಿಗೆ ಅವರು ಹಾಜರಿರುವಂತೆ ರಾಜ್ಯದ ಎಲ್ಲ ನರ್ತಕಿಯರನ್ನು ಕರೆಯಿಸಲಾಗುತ್ತದೆ. ಹಾಗೆಯೆ ದಳವಾಯಿಗಳು ಮತ್ತು ರಾಜರು ಮತ್ತು ಮಹಾಪ್ರಭುಗಳನ್ನು, ಅವರ ಪರಿವಾರಗಳೊಂದಿಗೆ. ಆದರೆ ರಾಜ ಯುದ್ಧಕ್ಕೆ ಕಳಿಸಿದವರನ್ನು ಇಲ್ಲವೆ ಬೇರೆ ಭಾಗಗಳಲ್ಲಿರುವವರನ್ನು ಇಲ್ಲವೇ (ಆಕ್ರಮಣದ) ಭೀತಿಯಿರುವ ಕಡೆ ರಾಜ್ಯದ ದೂರ ಗಡಿಯಲ್ಲಿರುವವರನ್ನು ಮಾತ್ರ, ಉದಾಹರಣೆಗೆ ಒರಿಯಾ ರಾಜ್ಯ ಮತ್ತು ಇಡಲ್‌ಸಾಒನ ಪ್ರದೇಶಗಳು, ಕರೆಯುವುದಿಲ್ಲ. ಇಂಥ ದಳವಾಯಿಗಳು ಇಂಥ ಸ್ಥಳಗಳಲ್ಲಿ ಅನುಪಸ್ಥಿತರಿದ್ದರೂ ನಾನು ಇನ್ನು ಮುಂದೆ ಹೇಳುವವರು ಅವರ ಪರವಾಗಿ ಉತ್ಸವಕ್ಕೆ ಬಂದಿರುತ್ತಾರೆ.

ಹನ್ನೆರಡನೆಯ ಸೆಪ್ಟಂಬರದಿಂದ ಪ್ರಾರಂಭವಾಗಿ ಒಂಬತ್ತು ದಿನ ನಡೆಯುವ ಈ ಉತ್ಸವಗಳು ರಾಜನ ಅರಮನೆಯಲ್ಲಿ ಜರುಗುತ್ತವೆ. ಅರಮನೆ ಈ ತರಹದ್ದು ಇದೆ. ಅದು ನಾನು ಹೇಳಿರುವ ಬಯಲು ಸ್ಥಳಕ್ಕೆ ತೆರೆಯುವ ದ್ವಾರ ಹೊಂದಿದೆ. ಈ ದ್ವಾರದ ಮೇಲೆ ಸ್ವಲ್ಪ ಎತ್ತರದ ಗೋಪುರವಿದೆ. ಮಿಕ್ಕವುಗಳಂತೆ ಇದನ್ನೂ ಕಟ್ಟಲಾಗಿದ್ದು ಅದಕ್ಕೆ ಮೊಗಸಾಲೆಗಳಿವೆ. ಈ ದ್ವಾರದ ಹೊರಗೆ ಅರಮನೆಯನ್ನು ಸುತುತ್ತದೆಂದು ನಾನು ಹೇಳಿರುವ ಗೋಡೆ ಪ್ರಾರಂಭವಾಗುತ್ತದೆ. ದ್ವಾರದಲ್ಲಿ ಅನೇಕ ದ್ವಾರಪಾಲಕರಿರುವರು. ಅವರು ಕೈಯಲ್ಲಿ ಚರ್ಮದ ಕೋರಡಗಳು ಮತ್ತು ಬಡಿಗೆಗಳನ್ನು ಹಿಡಿದಿರುತ್ತಾರೆ. ದಳವಾಯಿಗಳು ಮತ್ತು ಪ್ರಮುಖರು ಕಾವಲು ಪಡೆಯ ಮುಖ್ಯಸ್ಥನಿಂದ ಆಜ್ಞೆ ಬಂದಿರುವವರನ್ನು ಅಲ್ಲದೆ ಬೇರೆ ಯಾರನ್ನೂ ಪ್ರವೇಶಿಸಗೊಡವುದಿಲ್ಲ. ಈ ದ್ವಾರ ದಾಟಿದರೆ ಒಂದು ಬಯಲು ಸ್ಥಳವಿದೆ ಮತ್ತು ಮೊದಲಿನಂತಹ ಇನ್ನೊಂದು ದ್ವಾರವುಂಟು. ಅಲ್ಲಿಯೂ ದ್ವಾರಪಾಲಕರು ಮತ್ತು ರಕ್ಷಕರು ಇರುವವರು."[೧೫]

ಪ್ಯಾಸ್ ಹಂಪಿಯ 'ಸಂಜೆ ಸಂತೆ'ಯ ವಿವರವನ್ನು ನೀಡಿದ್ದಾನೆ. "ಅಲ್ಲಿ ನೀವು ಪ್ರತಿ ಸಂಜೆ ಸಂತೆಯೊಂದನ್ನು ನೋಡುವಿರಿ. ಅದರಲ್ಲಿ ಅವರು ಅನೇಕ ಸಾಮಾನ್ಯ ಕುದುರೆಗಳನ್ನು ಮತ್ತು ತಟ್ಟು ಕುದುರೆಗಳನ್ನು ಹಾಗೂ ಅನೇಕ ಜಂಬೀರಗಳನ್ನು, ನಿಂಬೆಗಳನ್ನು, ಕಿತ್ತಲೆಗಳನ್ನು, ದ್ರಾಕ್ಷಿಗಳನ್ನು ಮತ್ತು ಪ್ರತಿಯೊಂದು ತರಹದ ಕಾಯಿಪಲ್ಯೆ ಮತ್ತು ಹಣ್ಣು ಹಂಪಲುಗಳನ್ನು ಮತ್ತು ಕಟ್ಟಿಗೆಯನ್ನು ಮಾಡುತ್ತಾರೆ. ಪ್ಯಾಸ್ ಕುರಿ ಮಾರುವ ಸ್ಥಳಗಳನ್ನು ಕುರಿಗಳ ಕಸಾಯಿಖಾನೆಯನ್ನು

ಕುರಿತು ಬರೆಯುವ ಭಾಗಗಳು 'ಸಾಮಾಜಿಕ ಜೀವನ'ದ ಜೀವಂತ ಭಾಗಗಳೇ ಆಗಿವೆ.

ಬಾರ್ಬೊಸಾ ನವರಾತ್ರಿ ಉತ್ಸವದ ಬಗ್ಗೆ ನೀಡಿರುವ ವರ್ಣನೆ ಕ್ವಚಿತ್ತಾಗಿದೆ. ಆದರೆ, ಪ್ಯಾಸ್ ನವರಾತ್ರಿ ಉತ್ಸವ ಕುರಿತು ನೀಡಿರುವ ವಿವರಗಳು ಮನೋಜ್ಞವಾಗಿವೆ. ಪ್ರತಿದಿನವೂ ನಡೆಯುವ ವಿವರಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ. ಆ ಚಿತ್ರಣವು ದೀರ್ಘವೂ ಸಮಕಾಲೀನ ವಿವರಗಳನ್ನು ಒಳಗೊಂಡಿದ್ದೂ ಆಗಿದೆ. ಪ್ಯಾಸ್ ಮಹಾಶಯನು ವರ್ತಕ, ಬ್ರಾಹ್ಮಣರ ಬಗೆಗೆ ಕೊಡುವ ಸಾಮಾಜಿಕ ವಿವರಗಳು ಐತಿಹಾಸಿಕ ವಿವರಗಳಿಗೆ ಪೂರಕವಾಗಿರುವುದನ್ನು ನಾವು ಗಮನಿಸಬಹುದು."[೧೭]

"ಅರಮನೆಯ ಆವರಣವನ್ನು ಪ್ರವೇಶಿಸಲು ಎರಡು ಬಾಗಿಲುಗಳಿವೆ. ಇವೆರಡು ಬಾಗಿಲುಗಳ ಮಧ್ಯೆ ಬಹುದೊಡ್ಡ ಅಂಗಳವಿದೆ. ಇದರ ಸುತ್ತ ಪಡಸಾಲೆ ಇದೆ. ರಾಜನ ಹೆಂಡತಿಯರು ತಮ್ಮದೇ ಆದ ಮನೆಗಳಲ್ಲಿ ಸಖಿಯರು ಮತ್ತು ಅವ್ವೆಯರೊಡಗೂರಿ ಬೇರೆ ಬೇರೆ ಇರುತ್ತಾರೆ. ಈ ಸಖಿಯರೂ ಸೇರಿ ಅಂತಃಪುರದಲ್ಲಿ ಹನ್ನೆರಡು ಸಾವಿರ ಹೆಂಗಸರಿದ್ದಾರೆಂದು ತಿಳಿಯಿತು. ಆ ಮೂವರು ಪಟ್ಟ ಮಹಿಷಿಯರ ಬಳಿಯಲ್ಲಿಯೂ ಸಮಾನ ಸಂಖ್ಯೆಯಲ್ಲಿ ಊಳಿಗದವರಿದ್ದಾರೆ. ಇವರಿಂದ ಅರಮನೆಯ ಆವರಣದಲ್ಲಿರುವ ಜನರದಷ್ಟು ಅವರಿರುವ ಮನೆಗಳೆಷ್ಟು, ಬೀದಿಗಳೆಷ್ಟು ಎಂಬುದನ್ನು ನೀವೇ ಊಹಿಸಿಕೊಳ್ಳಿ. ರಾಜನು ಅರಮನೆಯೊಳಗೆ ತಾನೆ ಬೇರೆ ಇರುತ್ತಾನೆ. (ರಾಜನು) ಸ್ನಾನ ಮಾಡಿದ ನಂತರ ಅರಮನೆಯೊಳಗೆ ಇರುವ ದೇವಸ್ಥಾನಕ್ಕೆ ಹೋಗಿ ದೇವರನ್ನು ಪೂಜೆ ಮಾಡುತ್ತಾನೆ. ಅನಂತರ ಸುಂದರವಾಗಿ ಅಲಂಕೃತವಾದ ಅನೇಕ ಕಂಬಗಳುಳ್ಳ ತೊಟ್ಟಿಯಲ್ಲಿ ಕುಳಿತು ತನ್ನ ಆಪ್ತ ಮಂತ್ರಿಗಳು ಮತ್ತು ಅಧಿಕಾರಿಗಳೊಡನೆ ರಾಜಕಾರ್ಯ ನಿರ್ವಹಣೆಯಲ್ಲಿ ಮಗ್ನನಾಗುತ್ತಾನೆ. ಈ ತೊಟ್ಟಿಯ ಕಂಬಗಳಲ್ಲಿ ಸೊಗಸಾಗಿ ಮಾಡಿದ ಸ್ತ್ರೀ ವಿಗ್ರಹಗಳಿವೆ. ಸ್ವಲ್ಪ ದೂರ ಹೋದರೆ ಒಂದು ಒಳಕೋಟೆಯೂ, ಅದನ್ನು ಪ್ರವೇಶಿಸಲು ಒಂದು ಹೆಬ್ಬಾಗಿಲೂ ಇದೆ. ಇಲ್ಲಿಂದ ಒಳಗಡೆ ಹೋದರೆ ರಾಜನ ಅರಮನೆಯವರೆಗೂ ದಳವಾಯಿಗಳ, ಶ್ರೀಮಂತರ ಮತ್ತು ವರ್ತಕರ ಸುಂದರವಾದ ಬೀದಿಗಳೋ ಬೀದಿಗಳು; ಮನೆಗಳೋ ಮನೆಗಳು. ರಾಜಬೀದಿಯನ್ನೇ ಹಿಡಿದು ಹೋದರೆ ಅರಮನೆಯ ಮುಂದಿನ ಮೈದಾನ. ಊರಿನ ನಟ್ಟ ನಡುವೆ ಇರುವುದರಿಂದ ಎಲ್ಲರಿಗೂ ಬೇಕಾದ ಸ್ಥಳ. (ಅರಮನೆಯಲ್ಲಿ) ಒಂದು ಕಡೆ ಪೋರ್ಚುಗೀಸರಿಂದ ಹಿಡಿದು ಎಲ್ಲಾ ಪರದೇಶೀ ಜನರ ನಡತೆಗಳ ಚಿತ್ರಗಳಿದ್ದುವು(ಗೋಡೆಗಳ ಮೇಲೆ). ಈ ಚಿತ್ರಗಳನ್ನು ಅರಮನೆಯಲ್ಲಿಯೇ ಇರುವ ರಾಣಿಯರಿಗೋಸ್ಕರ ಬರೆಯಿಸಿದ್ದರು. ಇನ್ನೊಂದು ಮೃಗಗಳ ಕಾದಾಟಕ್ಕೆ ಮಾಡಿದ್ದ ಅಖಾಡವನ್ನು ನೋಡಿದೆವು. ಒಂದು ಕಡೆ ರಾಜನ ಆಜ್ಞೆಯಂತೆ ಬಿಲ್ಲು ಬಾಣಗಳನ್ನು ಹಿಡಿದ ಸ್ತ್ರೀಯರ ಚಿತ್ರಗಳನ್ನು ಚಿತ್ರೀಕರಿಸಿದ್ದರು. ಅನಂತರ ನೃತ್ಯ ಶಾಲೆಯನ್ನು ನೋಡಿದೆವು. ಬಹು ಉದ್ದವಾಗಿದೆ. ಅಗಲ ಕಡಿಮೆ. ಕಲ್ಲಿನಲ್ಲಿ ಕಡೆದ ಕಂಬಗಳು. ಈ ಕಂಬಗಳ ಪಾದಗಳನ್ನು ಆನೆ ಮುಂತಾದ ಪ್ರಾಣಿಗಳ ಆಕಾರಕ್ಕೆ ಕೆತ್ತಿದ್ದಾರೆ. ನಾನಾ ತರಹದ ವಿಗ್ರಹಗಳನ್ನು ಕೊರೆದಿದ್ದಾರೆ. ಎಲ್ಲ ಕಂಬಗಳ

ಮೇಲೂ ನರ್ತಕಿಯರ ಚಿತ್ರ ಕೆತ್ತಿದ್ದಾರೆ. ಈ ನೃತ್ಯ ಶಾಲೆಯ ಕೊನೆಯಲ್ಲಿ ಚಿತ್ರಿತವಾದ ವಿಶ್ರಾಂತಿ ಕೋಣೆ ಇದೆ. ಇವರ ವಿಚಾರದಲ್ಲಿ ವಿಜಯನಗರ ಸಾಮ್ರಾಜ್ಯ ಜನಸಂಖ್ಯೆಯಿಂದ ತುಂಬಿತ್ತು. ವಿಜಯನಗರದಲ್ಲಿ ಮಣಿ, ಮಾಣಿಕ್ಯ, ವಸ್ತು, ವಜ್ರ, ಲಿಂಬೆ, ಬಾಳೆ, ದ್ರಾಕ್ಷಿ, ದಾಳಿಂಬೆ ಮೊದಲಾದವುಗಳು ದೊರೆಯುತ್ತಿದ್ದವು. ದಸರಾ ಹಬ್ಬವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಲಾಗುತ್ತಿತ್ತು ಎಂದು ವರ್ಣಿಸಿದ್ದಾನೆ.

ಪೇಸನು ವಿಜಯನಗರ ರಾಜಧಾನಿ, ಅರಮನೆ, ಉತ್ಸವ, ಹಬ್ಬಹರಿದಿನಗಳನ್ನು ಕುರಿತು ಸ್ಪಷ್ಟ ವಿಚಾರಗಳನ್ನು ವ್ಯಕ್ತಪಡಿಸಿರುವರು. ಅಂದು ರಾಜಧಾನಿಯು ಉತ್ಸವಗಳಿಗಾಗಿ ಮತ್ತು ಮನರಂಜನಾ ಕಾರ್ಯಕ್ರಮಗಳಿಗಾಗಿ ವಿಶೇಷ ಪ್ರಖ್ಯಾತಿ ಪಡೆದಿತ್ತು. ಅಂದು ನವರಾತ್ರಿ ಉತ್ಸವ ಹಂಪಿಯಲ್ಲಿ ಹೇಗೆ ವಿಜೃಂಭಣೆಯಿಂದ ನಡೆಯುತ್ತಿತ್ತು ಎಂಬುದನ್ನು ಕುರಿತು ಹೇಳಿರುವನು. ಅಂದಿನ ರಾಜನ ಧರ್ಬಾರು, ಕುಸ್ತಿಯಾಳುಗಳ ಪಂದ್ಯ, ಸುಂದರಿಯರ ಭರತನಾಟ್, ಕುದುರೆ ದಂಡಿನ ಅಣಕು ಕಾಳಗ, ವಿಧವಿಧವಾದ ಮದ್ದಿನ ಬೆಳಕು ಮುಂತಾದ ಆಚರಣೆಗಳನ್ನು ತಿಳಿಸಿದ್ದಾನೆ. ರಾಯನ ಸಾಮ್ರಾಜ್ಯವು ಭಟ್ಕಳದಿಂದ ಒರಿಸ್ಸಾದವರೆಗೂ ಹಬ್ಬಿತ್ತು. ವಿದೇಶಿ ವ್ಯಾಪಾರವು ಹೊನ್ನಾವರ, ಮಂಗಳೂರ, ಬಾರಕೊರ, ಬಂದರುಗಳ ಮುಂಖಾಂತರ ನಡೆಯುತ್ತಿತ್ತು. ವ್ಯಾಪಾರದ ಸರಕನ್ನು ಬಂದರು ಸ್ಥಳಕ್ಕೆ ಒಯ್ಯಲು ಎತ್ತುಗಳನ್ನು ಬಳಸಿಕೊಳ್ಳುತ್ತಿದ್ದರು. ಹಂಪಿಯಲ್ಲಿ ಅಕ್ಕಿ, ಗೋಧಿ, ರಾಗಿ, ಬಾರ್ಲಿ, ಅವರೆ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತಿತ್ತು. ಅವುಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಲಾಗುತ್ತಿತ್ತು.

ರಾಯನು ನ್ಯಾಯಪ್ರಿಯನು, ದಯಾಪರನು, ಉದಾರಿಯೂ, ಉಲ್ಲಾಸಿತನು, ನಗುಮುಖವುಳ್ಳವನು ಆಗಿದ್ದನು. ಆತ ಪ್ರಜೆಗಳ ಯೋಗಕ್ಷೇಮವನ್ನು ಬಯಸುತ್ತಿದ್ದನಲ್ಲದೆ,ಅನೇಕ ದಾನಧರ್ಮಗಳನ್ನು ಮಾಡುತ್ತಿದ್ದನು. ವಿಜಯನಗರದ ಅಮರನಾಯಕ ಪದ್ಧತಿಯನ್ನು ಕುರಿತು ಹೇಳಬೇಕೆಂದರೆ, ಬಿಜೆನಗರ ರಾಜನಿಗೆ ೫ ಜನ ರಾಜರು ಸಾಮಂತರಾಗಿದ್ದಾರೆ. ವಿಸ್ತಾರವಾದ ಭೂಪ್ರದೇಶಗಳನ್ನು, ಸಂಪನ್ಮೂಲಗಳನ್ನು ಹೊಂದಿರುವ ಇತರ ನಾಯಕರೂ ಇದ್ದಾರೆ. ವಿಜಯನಗರದ ಈ ನಾಯಕರುಗಳಿಗೆ ಅಧೀನ ನಾಯಕರು ಇರುತ್ತಿದ್ದರು. ಇವರು ಅವರಿಗೆ ಭೂಮಿಯನ್ನು ಕೊಡುತ್ತಿದ್ದರು. ಇದು ಉಪ–ಊಳಿಗಮಾನ್ಯಕ್ಕೆ ಎಡಗೊಟ್ಟಿತ್ತು. ಬೇರೆ ಬೇರೆ ನಾಯಕರು ಹೇಗೆ ತಮ್ಮ ತಮ್ಮ ನಿಯಂತ್ರಣದಲ್ಲಿದ್ದ ಭೂಪ್ರದೇಶಕ್ಕೆ ಅನುಗುಣವಾಗಿ ವರಮಾನವನ್ನು ರಾಜನಿಗೆ ಒಪ್ಪಿಸುತ್ತಿದ್ದರು ಎಂಬುದನ್ನು ಕುರಿತು ತಿಳಿಸಿದ್ದಾನೆ. ವಿಜಯನಗರ ಸಾಮ್ರಾಜ್ಯ ರೋಮ್ ನಗರದಷ್ಟೇ ದೊಡ್ಡದಾಗಿದೆ. ಇವರ ಕಾಲದ ಸಮಾಜದಲ್ಲಿ ಸ್ತ್ರೀಯನ್ನು ಗೌರವದಿಂದ ಕಾಣಲಾಗುತ್ತಿತ್ತು. ಪ್ರಾಣಿಬಲಿ ಇರಲಿಲ್ಲ. ರಾಯನು ಓರಿಸ್ಸಾದ ಗಜಪತಿಯನ್ನು ಸೋಲಿಸಿ ಅವನ ಮಗಳಾದ ಜಗನ್ಮೋಹಿನಿಯನ್ನು ಮದುವೆಯಾದನು ಎನ್ನುವ ಸಂಗತಿಗಳನ್ನು ನಿರೂಪಿಸಿದ್ದಾನೆ.[೧೮]

ಹೀಗೆ ಫಾಯೇಸ್ ಶ್ರೀಕೃಷ್ಣದೇವರಾಯನ ಕಾಲದಲ್ಲಿ ನಡೆದ ಅನೇಕ ರಾಜಕೀಯ,

ರಾಜ್ಯದ ವರ್ಣನೆ ಹಬ್ಬ ಹರಿದಿನಗಳನ್ನು ತುಂಬಾ ಮನೋಜ್ಞವಾಗಿ ಚಿತ್ರಿಸಿದ್ದಾನೆ. ಕಂದಾಯ ವಿಚಾರದಲ್ಲೂ ಪ್ರವಾಸಿಗ ವಿವರಣೆಯನ್ನು ನೀಡಿದ್ದಾನೆ. ಸಾಮ್ರಾಜ್ಯದಲ್ಲಿ ಬೆಳೆಯುತ್ತಿದ್ದ ಅನೇಕ ಬೆಳೆಗಳು ಇಂದಿಗೂ ಬೆಳೆಯುತ್ತಿರುವುದಕ್ಕೆ ಅಲ್ಲಿನ ಮಣ್ಣಿನ ಫಲವತ್ತತೆ ಕಾರಣ. ವ್ಯಾಪಾರದ ವಹಿವಾಟಿನ ಬಗ್ಗೆ ಅನೇಕ ವಿವರಗಳನ್ನು ನೀಡುತ್ತಾನೆ. ಬೇರೊಂದು ಸಾಮ್ರಾಜ್ಯ ನಡುವೆ ಇದ್ದ ವೈವಾಹಿಕ ಜೀವನದ ಬಗ್ಗೆ ಹೇಳಿರುವುದು ಕಾಣಬಹುದಾಗಿದೆ. ಸಾಮ್ರಾಜ್ಯದಲ್ಲಿ ನಡೆಯುವ ಸಾಂಸ್ಕೃತಿಕ ಚಟುವಟಿಕೆಗಳನ್ನು ಕುರಿತು ತಮ್ಮ ಪ್ರವಾಸ ಕಥನಗಳಲ್ಲಿ ಫಾಯೇಸ್ ನಿರೂಪಿಸಿದ್ದಾನೆ.

೫.೧.೪. ಫೆರ್ನಾವೋ ನೂನಿಜ್

ಪೋರ್ಚುಗಲ್ ದೇಶದವನಾದ ಈತ, ವಿಜಯನಗರದರಸ ಅಚ್ಯುತರಾಯನ ಆಸ್ಥಾನಕ್ಕೆ ಭೇಟಿಯಿತ್ತಿದ್ದನು. ಅವನು ವಿಜಯನಗರವನ್ನು ಕುರಿತು ಒಂದು ಕೃತಿಯನ್ನು ರಚಿಸಿದ್ದಾನೆ. ಆ ಕೃತಿಯಲ್ಲಿ ಹಲವಾರು ವಿಚಾರಗಳನ್ನು ವ್ಯಕ್ತಪಡಿಸಿದ್ದಾನೆ. ವಿದೇಶಿ ಪ್ರವಾಸಿಗರಲ್ಲಿ ೧೬ನೇ ಶತಮಾನದ ಪೂರ್ವಾರ್ಧದಲ್ಲಿ ಬಂದ ನ್ಯೂನಿಜ್ ಪ್ರವಾಸಿ ಬರೆದ ಪ್ರವಾಸ ಕಥನವು ಅಬ್ದುಲ್ ರಜಾಕ್, ಬಾರ್ಬೊಸಾ, ಪ್ಯಾಸ್ ಇವರೆಲ್ಲರ ಬರೆಹಗಳಿಗಿಂತ ಬಹುದೀರ್ಘವಾಗಿದೆ.ಅವನು ರಾಜ, ರಾಜನ ಆಡಳಿತ, ಸುತ್ತಮುತ್ತಣ ಜನಜೀವನ, ಸಾಂಸ್ಕೃತಿಕ ಸಂಗತಿಗಳನ್ನು ವಿವರವಾಗಿ ನೀಡಿದ್ದಾನೆ. ವಿಜಯನಗರದ ಸಮಕಾಲೀನ ಸಮಾಜೋ–ರಾಜಕೀಯ ಸಂಗತಿಗಳನ್ನು ಕುರಿತು ಇವನು ನೀಡಿರುವಷ್ಟು ವಿವರಗಳು ಬೇರೆ ಯಾವ ಪ್ರವಾಸಿಗನೂ ನೀಡಿಲ್ಲದಿರುವುದು ಅವನ ವೈಶಿಷ್ಟ್ಯವಾಗಿದೆ. ಈತನು ಕುಶಲ ರಾಜತಾಂತ್ರಿಕ; ಅವನ ಬರೆಗಳಲ್ಲಿ ಕಾಣಿಸುವ ರಾಜತಾಂತ್ರಿಕ ವಿವರಗಳು ನ್ಯೂನಿಜ್‌ನ ಮನೋಭಾವನೆಯನ್ನು ಪ್ರತಿಬಿಂಬಿಸುತ್ತವೆ. ಅವನು ೨೨ ಅಧ್ಯಾಯಗಳಲ್ಲಿ ವಿಜಯನಗರದ ವಿವರಗಳನ್ನು ನೀಡಿದ್ದಾನೆ. ಅರಮನೆಯಲ್ಲಿ ನಡೆಯುತ್ತಿದ್ದ ದುಷ್ಟಕೂಟಗಳು, ಕುಟಿಲೋಪಾಯಗಳು, ಮಂತ್ರಿ, ಸಾಮಂತ, ಡಣ್ಣಾಯಕರ ಮನೋಭಾವನೆಗಳನ್ನೂ ಬಹು ವಿವರವಾಗಿ ನ್ಯೂನಿಜ್ ವರ್ಣಿಸಿದ್ದಾನೆ. ಅವನು ನೀಡಿರುವ ವಿವರಗಳು ಚಾರಿತ್ರಿಕ ಸಂಗತಿಗಳಾಗಿರುವುದನ್ನು ವಿದ್ವಾಂಸರು ಒಪ್ಪಿದ್ದಾರೆ. ಒಂದು ಉದಾಹರಣೆಯನ್ನು ಮಾತ್ರ ಆಸಕ್ತಿಗಾಗಿ ನೋಡಬಹುದು. ರಾಜನ ಊಟದ ವಿವರ ಕುತೂಹಲಕಾರಿಯಾಗಿದೆ.

ತನ್ನ ಸ್ವಂತ ಸೇವೆಗಾಗಿ ಅವನು ಹತ್ತು ಜನ ಅಡುಗೆಯ ಸ್ತ್ರೀಯರನ್ನು ಮತ್ತು ತಾನು ಔತಣ ಕೂಟ ಸಂದರ್ಭಗಳಿಗಾಗಿ ಕಾಯ್ದಿಟ್ಟ ಇತರರನ್ನು ಹೊಂದಿದ್ದಾನೆ. ಈ ಹತ್ತು ಆನ ರಾಜನನ್ನು ಬಿಟ್ಟು ಬೇರಾರಿಗೂ ಅಡುಗೆ ಮಾಡುವುದಿಲ್ಲ. ಅಡುಗೆಮನೆಯ ಬಾಗಿಲಿಗೆ ಅವನು ಒಬ್ಬ ಬೀಜವೊಡೆದ ಪುರುಷನನ್ನು ರಕ್ಷಕನನ್ನಾಗಿ ಇರಿಸುತ್ತಾರೆ. ಅವನು ವಿಷದ ಭಯದಿಂದಾಗಿ ಯಾರಿಗೂ ಒಳಗೆ ಪ್ರವೇಶಿಸಲು ಕೊಡುವುದಿಲ್ಲ. ರಾಜ ಉಣ್ಣ ಬಯಸಿದಾಗ ಪ್ರತಿ ವ್ಯಕ್ತಿ ಹೊರಟುಹೋಗುತ್ತಾನೆ. ಮತ್ತು ತಮ್ಮ ಕರ್ತವ್ಯವಾಗಿದ್ದ ಕೆಲವು ಸ್ತ್ರೀಯರು ಬರುತ್ತಾರೆ. ಮತ್ತು ಊಟಕ್ಕೆ ಸಿದ್ಧಗೊಳಿಸುತ್ತಾರೆ. ಅವನು ಅವನಿಗಾಗಿ ಬಂಗಾರದಿಂದ ಮಾಡಿದ, ದುಂಡಗಿನ, ಮೂರು ಕಾಲಿನ ಸ್ಟೂಲನ್ನು ಇಟ್ಟು ಅದರ ಮೇಲೆ ಭಕ್ಷ್ಯಗಳನ್ನು ಇಡುತ್ತಾರೆ. ಇವುಗಳನ್ನು

ದೊಡ್ಡ ಬಂಗಾರದ ಪಾತ್ರೆಗಳಲ್ಲಿ ತರಲಾಗುತ್ತದೆ ಮತ್ತು ಚಿಕ್ಕ ಭಕ್ಷ್ಯಗಳನ್ನು ಬಂಗಾರದ ಬೋಗಣಿಗಳಲ್ಲಿ ತರಲಾಗುತ್ತದೆ. ಅವುಗಳಲ್ಲಿ ಕೆಲವೊಂದನ್ನು ಬೆಲೆಯುಳ್ಳ ಹರಳುಗಳಿಂದ ಅಲಂಕರಿಸಲಾಗುತ್ತದೆ. ಮೇಜಿನ ಮೇಲೆ ಅರಿವೆ ಇರುವುದಿಲ್ಲ. ಆದರೆ, ರಾಜ ಊಟ ಮುಗಿಸಿದಾಗ ಒಂದನ್ನು ತರಲಾಗುತ್ತದೆ ಮತ್ತು ಅವನು ತನ್ನ ಕೈಗಳನ್ನು ಮತ್ತು ಬಾಯಿಯನ್ನು ತೊಳೆದುಕೊಳ್ಳುತ್ತಾನೆ. ಸ್ತ್ರೀಯರು ಮತ್ತು ಬೀಜವೊಡೆದ ಪುರುಷರು ಅವನಿಗೆ ಊಟ ಬಡಿಸುತ್ತಾರೆ.[೫೯]

ಶ್ರೀಕೃಷ್ಣದೇವರಾಯನು ವಿಜಯನಗರದಲ್ಲಿದ್ದ ಚಿನ್ನಾದೇವಿಯನ್ನು ಇಟ್ಟಿದ್ದ ಅಪಾರ ಪ್ರೇಮದಿಂದಾಗಿ. ಮರಿ ತಿಮ್ಮರಸನು ಅರಮನೆಗೆ ಸೇರಿದಂತೆ ಒಂದು ಎತ್ತರವಾದ ಹಾಗೂ ದೊಡ್ಡದಾದ ಗೋಪುರವನ್ನು ಕಟ್ಟಿಸಿ ಅದರಲ್ಲಿ ಆ ಚಿನ್ನಾದೇವಿಯನ್ನಿಟ್ಟನು. ರಾಜನ ಅರಮನೆಯು ದೊಡ್ಡದಾಗಿದ್ದು, ಅದರಲ್ಲಿ ವಿಶಾಲವಾದ ಕೋಣೆಗಳಿವೆ. ಪ್ರತಿಯೊಬ್ಬ ಹೆಂಡತಿಗೂ ಬೇರೆ ಬೇರೆ ಕೋಣೆ. (ರಾಜನ) ಅಡುಗೆ ಮನೆಯಲ್ಲಿ ಸುಮಾರು ಇನ್ನೂರು ಜನ ಉಸ್ತುವಾರಿ ನೋಡಿಕೊಳ್ಳುವ ಜನರಿದ್ದಾರೆ.

ವಿಜಯನಗರ ಸಾಮ್ರಾಜ್ಯವು ಅಚ್ಯುತರಾಯನ ಕಾಲದಲ್ಲಿ ೨೦೦ಕ್ಕಿಂತಲೂ ಹೆಚ್ಚು ನಾಯಕರಿಗೆ ಭೂಮಿಯನ್ನು ಭಾಗಮಾಡಲಾಗಿತ್ತು. ಎಲ್ಲ ಭೂಮಿಯು ರಾಜನಿಗೆ ಸೇರಿದೆ, ಅವನ ಪ್ರಕಾರ ಇಲ್ಲಿ ತುಂಬಾ ಉಪಯೋಗವಾಗುತ್ತಿದ್ದ ಧಾನ್ಯ ಜೋಳ, ದೇಶದ ಹೆಚ್ಚಿನ ಭಾಗದಲ್ಲಿ ವೀಳ್ಯದೆಲೆಯ ಬೇಸಾಯ ನಡೆದಿತ್ತು. ಹಾಗೆಯೇ ಇಲ್ಲಿನ ದ್ರಾಕ್ಷಿ, ಕಿತ್ತಳೆ, ನಿಂಬೆ, ದಾಳಿಂಬೆ, ಹಲಸು, ಮಾವಿನ ಹಣ್ಣುಗಳನ್ನು ಸಹ ಕಂಡನು. ಹಣ್ಣುಗಳ ಬೆಳೆ ಕಡಿಮೆಯಿತ್ತು. ಸಂಜೆಯೂ ಸಂತೆ ನಡೆಯುತ್ತಿತ್ತು. ಅಲ್ಲಿ ಎಲ್ಲ ವಸ್ತುಗಳು ದೊರಕುತ್ತಿದ್ದವು.

ನ್ಯೂನಿಜನು ಬ್ರಾಹ್ಮಣರನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಿದ್ದನು. ಅವರು ದೇವಾಲಯದ ಪುರೋಹಿತರು, ಅಧಿಕಾರಿಗಳು, ವ್ಯಾಪಾರಸ್ಥರು ಮತ್ತು ಅಗ್ರಹಾರವನ್ನು ಪಡೆದವರಾಗಿದ್ದರು. ಬ್ರಾಹ್ಮಣರಲ್ಲಿ ಕೆಲವರು ತುಂಬಾ ಪ್ರಭಾವಶಾಲಿಗಳಾಗಿದ್ದರು. ಅವರು ವಿದ್ವಾಂಸರು, ಜ್ಯೋತಿಷ್ಯರು, ಸಾಹಿತಿಗಳು, ವೈದ್ಯರು, ನ್ಯಾಯ ತೀರ್ಮಾನ ಮಾಡುವವರಾಗಿದ್ದರು. ವಿಜಯನಗರದಲ್ಲಿ ಸತಿಪದ್ಧತಿ ಆಚರಣೆಯಲ್ಲಿತ್ತು. ಕೆಳಜಾತಿಗಿಂತ ಮೇಲುಜಾತಿಯ ಕುಟುಂಬಗಳಲ್ಲಿ ಸಾಮಾನ್ಯವಾಗಿತ್ತು. ಅಚ್ಯುತರಾಯನು ಮಡಿದಾಗ ಅವನ ೫೦೦ಕ್ಕೂ ಹೆಚ್ಚು ಪತ್ನಿಯರು ಹಾಗೆಯೇ ಆತ್ಮಾಹುತಿ ಮಾಡಿಕೊಂಡರೆಂದು ತಿಳಿಸಿದ್ದಾನೆ. ಆತ ಇಲ್ಲಿನ ರಾಜರ ಅರಮನೆಗಳನ್ನು ಹೀಗೆ ವರ್ಣಿಸುತ್ತಾನೆ. "ರಾಜನ ಅರಮನೆಗಳು ವಿಶಾಲವಾದ ಕೊಠಡಿಗಳಿಂದ ಕೂಡಿ ಬಹುದೊಡ್ಡವಾಗಿವೆ. ಅವುಗಳಲ್ಲಿ ಮಠಗಳಲ್ಲಿರುವಂತೆ ಕೊಠಡಿಗಳಿವೆ. ಒಂದೊಂದು ರಾಜನ ಒಬ್ಬೊಬ್ಬ ಪತ್ನಿಗೆ ಸೇರಿದುದು. ಆಕೆಯೊಂದಿಗೆ ದಾಸಿಯೂ ಇರುತ್ತಾಳೆ. ರಾಜನು ವಿಶ್ರಾಂತಿಗೆ ತೆರಳುವಾಗ ಈ ಕೊಠಡಿಗಳ ಮುಂದೆ ಹೋಗುತ್ತಾನೆ. ಆಗ ಅವನ ಪತ್ನಿಯರು ಬಾಗಿಲಲ್ಲಿ ನಿಂತಿದ್ದು ಅವನನ್ನು ಒಳಕ್ಕೆ ಬರಲು ಆಹ್ವಾನಿಸುತ್ತಾರೆ. ಮಹಾನವಮಿ ಹಬ್ಬದ ಆಚರಣೆಯ ಕೊನೆಯ ದಿನದಲ್ಲಿ ೨೫

ಕೋಣ, ೪೫೦೦ ಕುರಿಗಳನ್ನು ಬಲಿ ಕೊಡಲಾಗುತ್ತಿತ್ತು" ಎಂಬುದಾಗಿ ವರ್ಣಿಸಿದ್ದಾನೆ.[೨೦]

ಹೀಗೆ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ, ಕೃಷ್ಣದೇವರಾಯನ ಆಡಳಿತದ ಸಾಧನೆ ಅಚ್ಯುತರಾಯನ ಆಳ್ವಿಕೆಯ ಬಗ್ಗೆ ಮತ್ತು ಅಂದಿನ ಕಾಲದ ರಾಜಕೀಯ ಆರ್ಥಿಕ, ಸಾಮಾಜಿಕ, ಧಾರ್ಮಿಕ ಮುಂತಾದ ಅಂಶಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡಿದ್ದಾನೆ. ಇದು ಸಹ ಪ್ರಸ್ತುತ ವಿಷಯಕ್ಕೆ ಅನುಗುಣವಾದ ಆಕರವಾಗಿ ಸಹಕಾರಿಯಾಗುತ್ತದೆ. ಇತಿಹಾಸ ತಜ್ಞರು ವಿಜಯನಗರದ ಅರಸುಗಳ ಬಗೆಗೆ ಅಧ್ಯಯನ ಕೈಗೊಳ್ಳುವಾಗ ಇಂತಹ ಉಲ್ಲೇಖಗಳು ಪ್ರಸ್ತುವೆನಿಸುವವು. ಹಂಪಿಯ ಆಳರಸರ ವಿಜಯಗಳು, ಪತನ ಇವೆಲ್ಲ ಇತಿಹಾಸದ ನೆಲೆಯಲ್ಲೆ ಬರುವವು.

೫.೧.೫. ನಿಕೊಲೋ ಕೊಂಟಿ

ಈತ ವೆನೀಸ್ ನಗರದ ಗೌರವ ಮನೆತನಕ್ಕೆ ಸೇರಿದವನು. ಚಿಕ್ಕವನಿದ್ದಾಗಲೇ ಸಿರಿಯಾ ದೇಶದ ಡಮಾಸ್ಕಸ್ ನಗರದಲ್ಲಿ ವರ್ತಕನಾಗಿ ತನ್ನ ವೃತ್ತಿಯನ್ನು ಪ್ರಾರಂಭಿಸಿದ. ಅಲ್ಲಿ ಅರಬ್ಬೀ ಭಾಷೆಯನ್ನು ಕಲಿತು, ಬಹುಶಃ ಅಲ್ಲಿಯೇ ಮದುವೆಯಾಗಿ, ತನ್ನ ಹೆಂಡತಿಯ ಸಮೇತ ಪೂರ್ವದೇಶಕ್ಕೆ ಪ್ರಯಾಣ ಹೊರಟ. ಸಂಸಾರ ಸಮೇತ ಇಂಡಿಯಾಕ್ಕೆ ಬಂದ ಪ್ರವಾಸಿ ಇವನೊಬ್ಬನೇ ಎಂದು ಕಾಣುತ್ತದೆ. ಆರುನೂರು ಇತರ ವರ್ತಕರ ತಂಡವನ್ನು ಕೂಡಿಕೊಂಡು ವ್ಯಾಪಾರದ ಸಾಮಾನುಗಳ ಸಮೇತ ಈತ ಪ್ರಯಾಣವನ್ನು ಆರಂಭಿಸಿದನು. ಯಾವ ವರ್ಷ ಪ್ರಯಾಣ ಹೊರಟನೆಂದು ಖಚಿತವಾಗಿ ಗೊತ್ತಿಲ್ಲ.

ಅರೇಬಿಯಾ ದೇಶದ ಮರುಳುಗಾಡನ್ನು ದಾಟಿ ಯೂಪ್ರೆಟಿಸ್ ನದಿಯ ಬಳಿ ಇದ್ದ ಬಾಗದಾದ್ ಎಂಬ ಪುರಾತನ ಪಟ್ಟಣವನ್ನು ತಲುಪಿದನು. ಮುಂದೆ ಬುಸ್ಸಾರ, ಓರ್ಮಸ್ ದ್ವೀಪಕ್ಕೆ ಬಂದು ಅಲ್ಲಿಂದ ಇಂಡಿಯಾ ದೇಶದ ಕಡೆ ಪ್ರಯಾಣ ಹೊರಟು ಕಾಲಕೇಶಿಯ (ಬಹುಶಃ ಜಾಸ್ಕ್) ಎಂಬ ಪರ್ಷಿಯಾ ದೇಶದ ಭವ್ಯ ನಗರಕ್ಕೆ ಬಂದನು. ಪರ್ಷಿಯಾದಲ್ಲಿ ಮತ್ತೆ ಕೆಲವು ಪರ್ಷಿಯಾ ವರ್ತಕರನ್ನು ಕೂಡಿಕೊಂಡು ಬಾಡಿಗೆ ಹಡಗಿನಲ್ಲಿ ಇಂಡಿಯಾ ದೇಶಕ್ಕೆ ಪ್ರಯಾಣ ಹೊರಟನು. ಇಂಡಿಯಾ ದೇಶದ ಮಲಬಾರ್ ತೀರ, ವಿಜಯನಗರ, ಪೆನುಗೊಂಡ, ಮಲಯಪುರ ಮುಂತಾದ ಸ್ಥಳಗಳನ್ನೂ, ಸಿಲೋನ್, ಸುಮಾತ್ರ ಮತ್ತು ಜಾವಾ ದ್ವೀಪಗಳನ್ನೂ, ಕೊನೆಯದಾಗಿ ದಕ್ಷಿಣ ಚೀನಾ ದೇಶವನ್ನೂ ನೋಡಿಕೊಂಡು ತನ್ನ ದೇಶಕ್ಕೆ ಹಿಂದಿರುಗುವಾಗ ಇಥಿಯೋಪಿಯಾ ದೇಶದ ಸಮುದ್ರತೀರವನ್ನು ಹಾಯ್ದು ಕೆಂಪು ಸಮುದ್ರದ ಮೂಲಕ ಕೈರೋ ಪಟ್ಟಣವನ್ನು ತಲುಪಿದನು. ಕೈರೋ ಪಟ್ಟಣದಲ್ಲಿ ಅವನ ಹೆಂಡತಿಯೂ, ಪ್ರವಾಸ ಕಾಲದಲ್ಲಿ ಹುಟ್ಟಿದ ನಾಲ್ಕು ಮಕ್ಕಳ ಪೈಕಿ ಇಬ್ಬರು ಮಕ್ಕಳೂ ತೀರಿಹೋದರು. ಸುಮಾರು ಇಪ್ಪತ್ತೈದು ವರ್ಷಗಳ ನಂತರ, ಅಂದರೆ ಕ್ರಿ.ಶ.೧೪೪೪ರಲ್ಲಿ ನಿಕೊಲೋ ಕೊಂಟಿ ವೆನೀಸಿಗೆ ಹಿಂದಿರುಗಿದನು.

"ಕಂಬೈತಾದಲ್ಲಿ ಇಪ್ಪತ್ತು ದಿವಸಗಳು ನಿಂತು ಆಮೇಲೆ ಮುಂದೆ ಪ್ರಯಾಣ ಮಾಡಿ ಸಮುದ್ರದ ದಡದಲ್ಲಿರುವ ಎರಡು ನಗರಗಳಿಗೆ ಬಂದೆ. ಒಂದರ ಹೆಸರು ಪಕಮೂರಿಯ.

ಇನ್ನೊಂದರ ಹೆಸರು ಹೆಲ್ಲಿ. ಸ್ಥಳದ ಭಾಷೆಯಲ್ಲಿ ಕರೆಯುವ ಬೆಳದಿ, ಗೆಬೆಲಿ, ನೀಲಿ ಮತ್ತು ಶುಂಠಿ ಎಂಬುವುಗಳನ್ನು ಈ ಪ್ರದೇಶದಲ್ಲಿ ಬೆಳೆಯುತ್ತಾರೆ. ಶುಂಠಿ ಒಂದು ಕುರುಚಲು ಗಿಡದ ಬೇರು. ಈ ಗಿಡ ಎರಡು ಮೊಳ ಎತ್ತರ ಬೆಳೆಯುತ್ತದೆ. ಎಲೆಗಳು ಅಗಲವಾಗಿರುತ್ತವೆ. ಬೇರನ್ನು ಅಗೆದು ಅದಕ್ಕೆ ಬೂದಿ ಬೆರಸಿ ಮೂರು ದಿವಸ ಬಿಸಿಲಿನಲ್ಲಿ ಒಣಗಿಸುತ್ತಾರೆ.

ಮೇಲೆ ಹೇಳಿದ ಸ್ಥಳಗಳಿಂದ ಹೊರಟು, ಭೂಭಾಗದೊಳಕ್ಕೆ ಮುನ್ನೂರು ಮೈಲಿ ಪ್ರಯಾಣ ಮಾಡಿ, ಭವ್ಯ ನಗರವಾದ ಬಿಜೆನೆಗಾಲಿಯಾ (ವಿಜಯನಗರ) ಎಂಬ ಸ್ಥಳಕ್ಕೆ ಬಂದೆ. ಇದು ಬಹಳ ಕಡಿದಾದ ಪರ್ವತಗಳಿಗೆ ತೀರಾ ಸಮೀಪದಲ್ಲಿದೆ. ನಗರದ ಸುತ್ತಳತೆ ಅರವತ್ತು ಮೈಲಿ. ಸುತ್ತ ಕಟ್ಟಿರುವ ಕೋಟೆ ಪರ್ವತಗಳಷ್ಟು ಎತ್ತರವಾಗಿದ್ದು ಅವುಗಳ ಬುಡದಲ್ಲಿರುವ ಕಣಿವೆಗಳನ್ನು ಆಕ್ರಮಿಸಿಕೊಂಡಿದೆ. ಈ ನಗರದಲ್ಲಿ ಶಸ್ತ್ರಾಸ್ತ್ರಗಳಲ್ಲಿ ಪ್ರವೀಣರಾದ ತೊಂಬತ್ತು ಸಾವಿರ ಜನರಿದ್ದಾರೆಂದು ಅಂದಾಜು ಹಾಕಲಾಗಿದೆ. ಇಲ್ಲಿಯ ನಿವಾಸಿಗಳು ತಮ್ಮ ಇಚ್ಛೆ ಬಂದಷ್ಟು ಜನ ಹೆಂಡತಿಯರನ್ನು ಮದುವೆ ಆಗುತ್ತಾರೆ. ಗಂಡನು ಸತ್ತರೆ ಹೆಂಡತಿಯರೆಲ್ಲ ಚಿತೆಯಲ್ಲಿ ಬಿದ್ದು ಸಾಯುತ್ತಾರೆ.

ಇಟಲಿ ದೇಶದವನಾದ ಈತ ೧ನೇ ದೇವರಾಯನ ಆಸ್ಥಾನಕ್ಕೆ ಭೇಟಿಯಿತ್ತು ಅನೇಕ ವಿಚಾರಗಳನ್ನು ವ್ಯಕ್ತಪಡಿಸಿರುವನು. ಇವನು 'ವಿಜಯನಗರ ೬೦ ಮೈಲು ಸುತ್ತಳತೆಯನ್ನು ಹೊಂದಿದೆ. ಅದರ ಸುತ್ತಲು ಕಾಯಲು ೬೦ ಸಾವಿರ ಸೈನಿಕರಿದ್ದರು. ಅದು ೫ ಲಕ್ಷ ಜನಸಂಖ್ಯೆ ಹೊಂದಿದೆ' ಎಂದು ವರ್ಣಿಸಿದ್ದಾನೆ. ಹಂಪಿಯು ಗುಡ್ಡದ ಪಕ್ಕದಲ್ಲಿದೆ. ರಾಜನಿಗೆ ೧೨ ಸಾವಿರ ರಾಣಿಯರಿದ್ದರು. ಇಲ್ಲಿ ಹಬ್ಬಗಳನ್ನು ವೈಭವದಿಂದ ಆಚರಿಸುತ್ತಿದ್ದರು. ಸಾಮಾಜದಲ್ಲಿ ಜನರ ರೀತಿ ನೀತಿ ಉಡುಗೆ-ತೊಡುಗೆ ಸಂಪ್ರದಾಯ, ಸಂಸ್ಕೃತಿಗಳ ಬಗ್ಗೆ ಈತ ಅತ್ಯಂತ ನಿಷ್ಪಕ್ಷಪಾತವಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ಈತ ವಿಜಯನಗರವನ್ನು ಬಿಜನೆಗಾಲಿಯ ಎಂದು ಕರೆಯುತ್ತಾನೆ. ಇಲ್ಲಿ ಸತಿ ಪದ್ಧತಿ ಆಚರಣೆಯಿದೆ. ಈ ಪ್ರದೇಶದ ಜನರು ತಮಗೆ ಇಷ್ಟ ಬಂದಷ್ಟು ಜನ ಪತ್ನಿಯರನ್ನು ಹೊಂದಬಹುದು, ಪತಿ ಸತ್ತು ಹೋದರೆ ಅವರನ್ನು ಪತಿಯ ದೇಹದೊಂದಿಗೆ ಸುಟ್ಟು ಬಿಡುತ್ತಾರೆ. ಈತ ಇಲ್ಲಿನ ಕೃಷಿ ಸಂಪತ್ತು ಕೈಗಾರಿಕೆ ಸಾಮಾಜಿಕ ಸೌಹಾರ್ದತೆ ದೇಶಿಯ ವ್ಯಾಪಾರ, ರಾಜನ ಧಾರ್ಮಿಕ ಸಹಿಷ್ಣತಾ ನೀತಿ ರಾಜರು ಮಾಡಿದ ಯುದ್ಧಗಳು ಮತ್ತು ರಾಜ್ಯದ ವಿಸ್ತಾರ ಮುಂತಾದ ಸಂಗತಿಗಳನ್ನು ತಿಳಿಸಿರುವನು. ಆದ್ದರಿಂದ ಈತನ ಸತ್ಯತೆಯ ವಿಚಾರಗಳನ್ನು ಆಧರಿಸಿ ನಾವು ವಿಜಯನಗರ ರಾಜಮನೆತನದ ಸಾಮಾಜಿಕ ಜೀವನದ ಸ್ಪಷ್ಟ ಬದುಕನ್ನು ಅರ್ಥೈಸಿಕೊಳ್ಳಬಹುದು.

ಇಲ್ಲಿಯ ರಾಜನು ಇಂಡಿಯಾ ದೇಶದ ರಾಜರೆಲ್ಲರಿಗಿಂತ ಬಹಳ ಬಲಾಢ್ಯನಾಗಿದ್ದಾನೆ. ಇವನಿಗೆ ಹನ್ನೆರಡು ಸಾವಿರ ಹೆಂಡತಿಯರಿದ್ದಾರೆ. ಇವರಲ್ಲಿ ನಾಲ್ಕು ಸಾವಿರ ಜನ ಅವನು ಹೋದೆಡೆಯಲ್ಲೆಲ್ಲಾ ಕಾಲ್ನಡಗೆಯಲ್ಲಿ ಹೋಗುತ್ತಾರೆ.ಇವರದು ಮುಖ್ಯವಾಗಿ ಅಡುಗೆಯ ಕೆಲಸ. ಇವರಿಗಿಂತಲೂ ಹೆಚ್ಚು ರೂಪವತಿಯರಾದ ನಾಲ್ಕು ಸಾವಿರ ಹೆಂಡತಿಯರು ಕುದುರೆಗಳ

ಮೇಲೆ ಸವಾರಿ ಮಾಡುತ್ತಾ ಹೋಗುತ್ತಾರೆ. ಉಳಿದವರನ್ನು ಪಲ್ಲಕ್ಕಿಗಳ ಮೇಲೆ ಗಂಡಸರು ಹೊತ್ತುಕೊಂಡು ಹೋಗುತ್ತಾರೆ. ಇವರಲ್ಲಿ ಎರಡು ಮೂರು ಸಾವಿರ ಹೆಂಡತಿಯರು ರಾಜನು ಸತ್ತಾಗ ತಮ್ಮ ಆತ್ಮ ಸಂತೋಷದಿಂದ ಚಿತೆಯೊಳಗೆ ಬಿದ್ದು ಪ್ರಾಣತ್ಯಾಗ ಮಾಡುತ್ತೇವೆಂಬ ವಾಗ್ದಾನ ಮಾಡಿ ರಾಜನ ಕೈಹಿಡಿದಿರುತ್ತಾರೆ.

ಬಿಜೆನೆಗೇಲಿಯಾದಿಂದ ಎಂಟು ದಿವಸ ಪ್ರಯಾಣ ಮಾಡಿದರೆ ಪೆಲಗೊಂಡ (ಪೆನುಗೊಂಡ?) ಎಂಬ ಬಹು ಭವ್ಯವಾದ ನಗರ ಸಿಕ್ಕುತ್ತದೆ. ಇದು ಮೇಲೆ ಹೇಳಿದ ರಾಜನ ಅಧೀನಕ್ಕೆ ಒಳಪಟ್ಟಿದೆ. ಇದರ ಸುತ್ತಳತೆ ಹತ್ತು ಮೈಲಿಗಳು. ಇಲ್ಲಿಂದ ಭೂಮಾರ್ಗವಾಗಿ ಇಪ್ಪತ್ತು ದಿವಸಗಳು ಪ್ರಯಾಣ ಮಾಡಿದರೆ ರೇವು ಪಟ್ಟಣದ ಪೆಡಿಘಟಾನಿಯಂ ಎಂಬ ಸ್ಥಳ ಸಿಕ್ಕುತ್ತದೆ. ಹೋಗುವಾಗ ದಾರಿಯಲ್ಲಿ ಒಡೆಘೇರಿಯಾ(ಉದಯಗಿರಿ) ಮತ್ತು ಸೆಂಡರ್‌ಘೇರಿಯಾ (ಚಂದ್ರಗಿರಿ) ಎಂಬ ಪಟ್ಟಣಗಳೂ ಸಿಕ್ಕುತ್ತವೆ. ಇಲ್ಲಿ ಶ್ರೀಗಂಧದ ಮರ ಬೆಳೆಯುತ್ತದೆ.)

ಬಿಜನೆಗೇಲಿಯಾದಲ್ಲಿಯೂ(ವಿಜಯನಗರ) ಕೂಡ ವರ್ಷಕ್ಕೊಮ್ಮೆ ದೇವರ ವಿಗ್ರಹವನ್ನು ಎರಡು ರಥಗಳ ಮಧ್ಯ ಇಟ್ಟು ಮೆರವಣಿಗೆ ಮಾಡುತ್ತಾರೆ. ಈ ರಥಗಳಲ್ಲಿ ಸರ್ವಾಲಂಕೃತವಾದ ಗಾಯಕಿಯರು ದೇವರ ಭಜನೆ ಮಾಡುತ್ತಿರುತ್ತಾರೆ. ಜನಗಳ ಗುಂಪು ವಿಗ್ರಹವನ್ನು ಹಿಂಬಾಲಿಸಿ ಹೋಗುತ್ತಿರುತ್ತದೆ. ವಿಶೇಷ ಭಕ್ತಿ, ಇರುವ ಅನೇಕರು ರಥದ ಚಕ್ರಕ್ಕೆ ಮೈಒಡ್ಡಿ ಪ್ರಾಣತ್ಯಾಗ ಮಾಡುತ್ತಾರೆ. ಮತ್ತೆ ಕೆಲವರು ತಮ್ಮ ಪಕ್ಕೆಯಲ್ಲಿ ತೂತುಮಾಡಿ ಅದರಲ್ಲಿ ಹಗ್ಗವನ್ನು ಪೋಣಿಸಿ ರಥಕ್ಕೆ ಅಲಂಕಾರಿಕವಾಗಿ ತೂಗುಹಾಕಿಕೊಳ್ಳುತ್ತಾರೆ. ಹೀಗೆ ತೂಗುಹಾಕಿಕೊಂಡು ವಿಗ್ರಹದೊಡನೆ ಮೆರವಣಿಗೆ ಹೋಗುತ್ತಾರೆ. ಈ ತರಹ ಬಲಿದಾನ ಎಲ್ಲಾ ಬಲಿದಾನಗಳಿಗಿಂತ ಉತ್ಕೃಷ್ಟವೆಂದು ಇವರು ಭಾವಿಸುತ್ತಾರೆ.

ವರ್ಷದಲ್ಲಿ ಮೂರು ದೊಡ್ಡ ಹಬ್ಬಗಳನ್ನು ಆಚರಿಸುತ್ತಾರೆ. ಒಂದು ಹಬ್ಬದಲ್ಲಿ ಸ್ತ್ರೀ ಪುರುಷರಾದಿಯಾಗಿ ನದಿ ಅಥವಾ ಸಮುದ್ರದಲ್ಲಿ ಸ್ನಾನಮಾಡಿ ಹೊಸ ಬಟ್ಟೆಗಳನ್ನು ಉಟ್ಟು ಮೂರು ದಿವಸ ನೃತ್ಯ, ಗಾಯನ ಮತ್ತು ಭೋಜನದಲ್ಲಿ ಕಳೆಯುತ್ತಾರೆ. ಇನ್ನೊಂದು ಹಬ್ಬದಲ್ಲಿ ದೇವಸ್ಥಾನಗಳಲ್ಲಿಯೂ, ಮನೆಯ ಮೇಲ್ಛಾವಣೆಯ ಮೇಲೂ ಹಗಲು ರಾತ್ರಿ ಸುಸಿಮನ್ನಿ ಎಣ್ಣೆಯ ಅಸಂಖ್ಯಾತ ದೀಪಗಳನ್ನು ಉರಿಸುತ್ತಾರೆ.ಇನ್ನೊಂದು ಒಂಬತ್ತು ದಿವಸಗಳ ಹಬ್ಬ. ಆಗ ದೊಡ್ಡ ಬೀದಿಗಳಲ್ಲಿ ಹಡಗಿನ ಪಠಸ್ತಂಭದಂತಹ ಸ್ತಂಭಗಳನ್ನು ನೆಟ್ಟು ಬಹು ಸುಂದರವಾದಜರತಾರೀ ಬಟ್ಟೆಯ ಚೂರುಗಳನ್ನು ಮೇಲ್ಗಡೆ ಸಿಕ್ಕಿಸುತ್ತಾರೆ. ಈ ಸ್ತಂಭದ ತುದಿಯಲ್ಲಿ ದಿನವೂ ದೇವರಲ್ಲಿ ಅಪಾರ ಭಕ್ತಿಯುಳ್ಳ ಮತ್ತು ಎಂಥ ಕಷ್ಟವನ್ನಾದರೂ ಸ್ಥಿರ ಮನಸ್ಸಿನಿಂದ ಸಹಿಸಬಲ್ಲ ಒಬ್ಬನನ್ನು ಕುಳ್ಳಿರಿಸುತ್ತಾರೆ. ಇವನ ಕಡೆಗೆ ಕಿತ್ತಳೆ, ನಿಂಬೆ, ಮುಂತಾದ ಹಣ್ಣುಗಳನ್ನು ಎಸೆಯುತ್ತಾರೆ. ಇವಲ್ಲದೆ ಮೂರು ದಿನಗಳ ಹಬ್ಬ ಮತ್ತೊಂದಿದೆ. ಈ ಹಬ್ಬದಲ್ಲಿ ಎಲ್ಲರ ಮೇಲೂ, ರಾಜರಾಣಿಯರನ್ನೂ ಬಿಡದೆ, ಓಕುಳಿ ನೀರನ್ನು ಎರಚುತ್ತಾರೆ. ಈ ಓಕುಳಿ ನೀರನ್ನು ಈ ಉದ್ದೇಶಕ್ಕಾಗಿಯೇ ದಾರಿಯ ಪಕ್ಕದಲ್ಲಿ ಇಟ್ಟಿರುತ್ತಾರೆ. ಓಕುಳಿ ಎರಚಿದರೂ

ಎಲ್ಲರೂ ನಗುತ್ತಲೇ ಇರುತ್ತಾರೆ.

ಮದುವೆಗಳನ್ನು ಬಹು ವೈಭವದಿಂದ ಮಾಡುತ್ತಾರೆ. ಹಾಡುತ್ತಾರೆ, ವಾದ್ಯಗಳನ್ನು ಬಾರಿಸುತ್ತಾರೆ. ಭೋಜನ ಕೂಟಗಳನ್ನು ಏರ್ಪಡಿಸುತ್ತಾರೆ. ಕೆಲವರು ಹಾಡಿದರೆ ಮತ್ತೆ ಕೆಲವರು ನಮ್ಮ ರೀತಿಯಲ್ಲಿ ಕುಣಿಯುತ್ತಾರೆ. ಕೆಲವರು ಬಣ್ಣದ ಕೋಲುಗಳನ್ನು ಹಿಡಿದು ಕೋಲಾಟ ಮಾಡುತ್ತಾರೆ. ಇದನ್ನೆಲ್ಲಾ ನೋಡುವುದಕ್ಕೆ ಬಹಳ ಆನಂದವಾಗುತ್ತದೆ.

ಗಂಗಾನದಿಯ ಉತ್ತರಕ್ಕಿರುವ ಜನರಲ್ಲಿ ಮೇಲ್ತರಗತಿಯ ಜನರನ್ನು ಬಿಟ್ಟರೆ ಬೇರೆಯವರು ಬಿಸಿನೀರಿನಲ್ಲಿ ಸ್ನಾನ ಮಾಡುವುದಿಲ್ಲ. ಅದರ ಬದಲು ದಿನಕ್ಕೆ ಹಲವಾರು ಸಲ ತಣ್ಣೀರಿನಲ್ಲಿ ಸ್ನಾನ ಮಾಡುತ್ತಾರೆ. ಇಲ್ಲಿ ಎಣ್ಣೆ ತೆಗೆಯುವುದಿಲ್ಲ. ನಮ್ಮಲ್ಲಿ ಬೆಳೆಯುವ ಹಣ್ಣುಗಳಾದ ಪೀಚ್‌ಹಣ್ಣು, ಪೇರುಹಣ್ಣು, ಚೆರ್ರಿಹಣ್ಣು, ನಿಂಬೆಹಣ್ಣು ಇಲ್ಲಿ ಸಿಕ್ಕುವುದಿಲ್ಲ."[೨೧]

ನಿಕೊಲೋ ಕೊಂಟಿಯು ನಾಣ್ಯಗಳನ್ನು ಕುರಿತು ಹೇಳುವಾಗ ಈ ರೀತಿಯಾಗಿ ಹೇಳುವನು: "ವರ್ಷವನ್ನು ಹನ್ನೆರಡು ತಿಂಗಳಾಗಿ ವಿಭಾಗಿಸಿದ್ದಾರೆ. ದೇಶದ ಕೆಲವು ಭಾಗಗಳಲ್ಲಿ ನಾಣ್ಯಗಳಿಲ್ಲ. ಅದರ ಬದಲು ನಾವು ಬೆಕ್ಕಣ್ಣುಮಣಿ ಎಂದು ಕರೆಯುವ ಮಣಿಗಳನ್ನು; ಕೆಲವು ಕಡೆ ದಬ್ಬಳದೋಪಾದಿಯಲ್ಲಿ ಮಾಡಿದ ಕಬ್ಬಿಣದ ತುಂಡುಗಳನ್ನು; ಮತ್ತೆ ಕೆಲವು ಕಡೆ ರಾಜನ ಹೆಸರನ್ನು ಕೆತ್ತಿದ ರಟ್ಟುಗಳನ್ನು ಉಪಯೋಗಿಸುತ್ತಾರೆ. ಇಂಡಿಯಾದ ಹಿಂಬದಿಯಲ್ಲಿ ವೆನೀಸಿನ ಡುಕೆಟ್ ನಾಣ್ಯಗಳನ್ನು ಉಪಯೋಗಿಸುತ್ತಾರೆ. ಕೆಲವು ಕಡೆ ಚಿನ್ನದ ನಾಣ್ಯಗಳು ಚಲಾವಣೆಯಲ್ಲಿವೆ.

ಯುದ್ಧ ಮಾಡುವಾಗ ಭಲ್ಲೆ ಕತ್ತಿ ಮತ್ತು ದುಂಡಾದ ಗುರಾಣಿಗಳನ್ನೂ ಬಿಲ್ಲುಗಳನ್ನೂ ಉಪಯೋಗಿಸುತ್ತಾರೆ. ಕೆಲವು ಭಾಗಗಳಲ್ಲಿ ಶಿರಸ್ತ್ರಾಣಗಳನ್ನು ಎದೆ ಕವಚವನ್ನೂ ಉಪಯೋಗಿಸುತ್ತಾರೆ. ಮಧ್ಯ ಇಂಡಿಯಾದ ಜನರು ಗುಂಡುಗಳನ್ನು ಸಿಡಿಸುವ ಯಂತ್ರವನ್ನೂ, ಸಿಡಿಗುಂಡುಗಳನ್ನೂ ಉಪಯೋಗಿಸುತ್ತಾರೆ. ಅಲ್ಲದೆ ನಗರಗಳಿಗೆ ಮುತ್ತಿಗೆ ಹಾಕಲು ಬೇಕಾದ ಆಯುಧಗಳನ್ನೂ ಉಪಯೋಗಿಸುತ್ತಾರೆ.

ಕಾಂಬೈತಾ ನಿವಾಸಿಗಳು ಮಾತ್ರ ಕಾಗದವನ್ನು ಉಪಯೋಗಿಸುತ್ತಾರೆ. ಉಳಿದ ಕಡೆಗಳಲ್ಲೆಲ್ಲಾಮರದ ಎಲೆಗಳ ಮೇಲೆ ಬರೆದು ಅವುಗಳನ್ನು ಜೋಡಿಸಿ ಸುಂದರವಾದ ಪುಸ್ತಕಗಳನ್ನು ಮಾಡುತ್ತಾರೆ. ನಾವು ಅಥವಾ ಯಹೂದಿಗಳು ಬರೆಯುವಂತೆ ಎಡದಿಂದ ಬಲಕ್ಕಾಗಲೀ, ಬಲದಿಂದ ಎಡಕ್ಕಾಗಲೀ ಬರೆಯದೆ, ಮೇಲಿನಿಂದ ಕೆಳಕ್ಕೆ ಬರೆಯುತ್ತಾರೆ. ಇಂಡಿಯಾದೇಶದಲ್ಲಿ ನಾನಾ ಭಾಷೆಗಳೂ, ಭಾಷಾರೂಪಗಳೂ ಇವೆ. ಗುಲಾಮರು ಬೇಕಾದಷ್ಟು ಜನರಿದ್ದಾರೆ. ಸಾಲ ತೀರಿಸಲು ಸಾಧ್ಯವಿಲ್ಲದ ಸಾಲಗಾರ ಸಾಲ ಕೊಟ್ಟವನ ಸೊತ್ತಾಗುತ್ತಾನೆ. ಇವರು ನಮ್ಮನ್ನು ಫರಂಗಿಯವರೆಂದು ಕರೆಯುತ್ತಾರೆ. ವಿವೇಕದಲ್ಲಿ ತಮ್ಮನ್ನು ಮೀರಿಸುವವರು ಯಾರೂ ಇಲ್ಲವೆಂದು ಭಾವಿಸುತ್ತಾರೆ. ತಮಗೆ ಮಾತ್ರ ಎರಡು ಕಣ್ಣುಗಳಿವೆ ಉಳಿದವರಿಗೆ ಒಂದೇ ಕಣ್ಣಿದೆಯೆಂದು ಭಾವಿಸುತ್ತಾರೆ.

ಒಬ್ಬನ ಮೇಲೆ ದುಷ್ಕೃತ್ಯದ ಆರೋಪಣೆ ಬಂದರೆ ಸಾಕ್ಷಿಗಳು ಇಲ್ಲದಿದ್ದಲ್ಲಿ ಅಪರಾಧಿ ಪ್ರಮಾಣ ಮಾಡುವುದಕ್ಕೆ ಅವಕಾಶ ಕೊಡುತ್ತಾರೆ. ಮೂರು ತರಹ ಪ್ರಮಾಣಗಳಿವೆ. ಒಂದರಲ್ಲಿ ಅಪರಾಧಿ ದೇವರ ಮುಂದೆ ನಿಂತು ತಾನು ನಿರಪರಾಧಿಯೆಂದು ಹೇಳಿ ಕೆಂಪಗೆ ಕಾದ ಕಬ್ಬಿಣವನ್ನು ನಾಲಗೆಯಿಂದ ನೆಕ್ಕಬೇಕು. ಅವನಿಗೆ ಏನೂ ಅಪಾಯವಾಗದಿದ್ದರೆ ನಿರಪರಾಧಿಯೆಂದು ತೀರ್ಮಾನಿಸುತ್ತಾರೆ. ಮತ್ತೊಂದು ವಿಧಾನದಲ್ಲಿ ದೇವರ ಮುಂದೆ ಕಾದ ಕಬ್ಬಿಣದ ತುಂಡನ್ನೋ ಅಥವಾ ಕಾದ ತಗಡನ್ನೋ ಕೈಯಲ್ಲಿ ಹಿಡಿದು ನಾಲ್ಕಾರು ಹೆಜ್ಜೆ ನಡೆದುಕೊಂಡು ಹೋಗಬೇಕು. ಅವನಿಗೆ ಏನೂ ಅಪಾಯವಾಗದಿದ್ದರೆ ಅವನು ನಿರಪರಾಧಿಯೆಂದು ತೀರ್ಮಾನಿಸುತ್ತಾರೆ. ಮೂರನೆಯದು ಸರ್ವೇಸಾಮಾನ್ಯವಾದ ವಿಧಾನ. ದೇವರ ಮುಂದೆ ಕುದಿಯುವ ತುಪ್ಪವನ್ನಿಟ್ಟು ಅದರೊಳಕ್ಕೆ ಅಪರಾಧಿಯ ಎರಡು ಬೆರಳುಗಳನ್ನು ಅದ್ದಿಸುತ್ತಾರೆ. ಹಾಗೆ ಮಾಡಿದ ತಕ್ಷಣವೇ ಬೆರಳುಗಳ ಸುತ್ತ ಬಟ್ಟೆ ಸುತ್ತಿ ಮುದ್ರೆ ಒತ್ತುತ್ತಾರೆ. ಮೂರನೆಯ ದಿವಸ ಬಟ್ಟೆಯನ್ನು ಬಿಚ್ಚಿ ನೋಡುತ್ತಾರೆ. ಬೆರಳುಗಳು ಸುಟ್ಟಿದ್ದರೆ ಅಪರಾಧಿ ಎಂತಲೂ, ಸುಡದಿದ್ದರೆ ನಿರಪರಾಧಿ ಎಂತಲೂ ತೀರ್ಮಾನಿಸುತ್ತಾರೆ.

ನಮ್ಮ ದೇಶದಲ್ಲಿ ಜನಗಳ ಪ್ರಾಣ ಹರಣ ಮಾಡುವಂಥ ಉಪದ್ರವಗಳು ಈ ದೇಶದಲ್ಲಿ ಇಲ್ಲವೇ ಇಲ್ಲ. ಈ ಕಾರಣದಿಂದ ಇಲ್ಲಿಯ ಜನಸಂಖ್ಯೆ ನಂಬಿಕೆಗೂ ಮೀರಿದ್ದು, ಇವರ ಸೈನ್ಯದಲ್ಲಿ ಲಕ್ಷಾಂಶ ಜನರು ಇರುತ್ತಾರೆ. ಒಂದು ಯುದ್ಧದಲ್ಲಿ ವಿಜಯಿಗಳಾದವರು ವಿಜಯ ಸಂಕೇತಕ್ಕಾಗಿ ಹನ್ನೆರಡು ರಥಗಳಲ್ಲಿ ತಲೆಗಳನ್ನು ತುಂಬಿಕೊಂಡು ಬಂದಿದ್ದರು. ಈ ತಲೆಗಳನ್ನು ತಲೆಗಳ ಹಿಂಬದಿಯ ಕೂದಲಿಗೆ ರೇಷ್ಮೆ ಮತ್ತು ಜರತಾರಿಯ ಹುರಿ ಕಟ್ಟಿ ತಂದಿದ್ದರು. ನಾನು ಕೆಲವು ಯುದ್ಧಗಳನ್ನು ಪ್ರೇಕ್ಷಕನಾಗಿ ನೋಡಿದ್ದುಂಟು. ಕೇವಲ ಪ್ರೇಕ್ಷಕನೆಂದು ಎರಡು ಪಕ್ಷಗಳಿಗೂ ಗೊತ್ತಾದ್ದರಿಂದ ನನಗೆ ಯಾವ ತೊಂದರೆಯೂ ಆಗಲಿಲ್ಲ."[೨೨]

ಹೀಗೆ ನಿಕೊಲೋ ಕೊಂಟಿಯು ವಿಜಯನಗರ ಕಾಲದ ಒಟ್ಟೂ ಸಾಮ್ರಾಜ್ಯ, ಜನರು, ತಿನ್ನುವ ತಿನಿಸುಗಳನ್ನು, ಕಾನೂನು ಸುವ್ಯವಸ್ಥೆ, ಯುದ್ಧದ ಸನ್ನಿವೇಶಗಳನ್ನು ಕುರಿತು ಹೇಳುವನು. ಈ ಮಾತುಗಳು ರಾಜನ ರಾಜವೈಭವ ಅವನ ಕಾಲದ ಸ್ಥಿತಿಗತಿಗಳನ್ನು ವಿವರಿಸುವಲ್ಲಿ ಯಶಸ್ವಿಯಾಗಿದ್ದಾನೆ ಅನ್ನಿಸುತ್ತದೆ. ಕೃಷಿ ಸಂಪತ್ತಿನ ಬಗೆಗೆ, ಕೈಗಾರಿಕೆ, ಸಾಮಾಜಿಕ ಸೌಹಾರ್ದತೆಯ ಬಗೆಗೆ, ದೇಶಿಯ ವ್ಯಾಪಾರ, ರಾಜನ ಧಾರ್ಮಿಕ ಸಹಿಷ್ಣತಾ ನೀತಿ ರಾಜರು ಮಾಡಿದ ಯುದ್ಧಗಳು ಮತ್ತು ರಾಜ್ಯದ ವಿಸ್ತಾರವನ್ನು ಕುರಿತು ನಿಕೊಲೋ ಕೊಂಟಿ ತನ್ನ ಕೃತಿಯಲ್ಲಿ ಹೇಳುತ್ತಾ ಹೋಗುವನು. ನಿಕೊಲೋ ಕೊಂಟಿ ರಜಾಕನಿಗಿಂತ ಭಿನ್ನವಾಗಿ ಆಡಳಿತದಿಂದ ಹಿಡಿದು ಸಾಮಾಜಿಕ ಆಯಾಮದವರೆಗೂ ತನ್ನ ಅಭಿಪ್ರಾಯಗಳನ್ನು ಮಂಡಿಸುತ್ತಾ ಹೋಗುವನು.

೫.೧.೬. ಅಥನೇಷಿಯಸ್ ನಿಕಿಟಿನ್

ಈತನು ರಷ್ಯಾ ದೇಶದವನು. ಕ್ರಿ.ಶ.೧೫೭೦ರಲ್ಲಿ ವ್ಯಾಪಾರಕ್ಕಾಗಿ ಭಾರತಕ್ಕೆ ಬಂದಿದ್ದನು. ಆಗ ಇಲ್ಲಿ ಆಳ್ವಿಕೆ ನಡೆಸುತ್ತಿದ್ದ ವಿಜಯನಗರ ಮತ್ತು ಬಹಮನಿ ರಾಜ ಮನೆತನದ ಬಗ್ಗೆ

ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ನಿಕಿಟಿನ್ ರಷ್ಯಾ ದೇಶದ ತ್ವೆರ್ ಎಂಬ ಊರಿನವನು. ರಷ್ಯಾ ದೇಶದಿಂದ ಇಂಡಿಯಾ ದೇಶಕ್ಕೆ ಬಂದ ಪ್ರವಾಸಿಗರಲ್ಲಿ ಬಹುಶಃ ಮೊದಲನೆಯವನು. ಮೂರನೆಯ ಐವಾನನು ರಷ್ಯಾದೇಶವನ್ನು ಆಳುತ್ತಿದ್ದಾಗ(ಕ್ರಿ.ಶ.೧೪೭೦) ವ್ಯಾಪಾರಕ್ಕೋಸ್ಕರ ಇಂಡಿಯಾ ದೇಶಕ್ಕೆ ಬಂದಿದ್ದನು. ಇವನು ಹೆಚ್ಚಾಗಿ ಗೋಲ್ಕೊಂಡ ಮತ್ತು ದಖಿನ್ ರಾಜ್ಯಗಳ ವಿಚಾರ ಬರೆದಿರುವ ಬಗ್ಗೆ ತಿಳಿಯುತ್ತದೆ. ವಿಜಯನಗರ ಕುರಿತು ಅಷ್ಟು ಆಳವಾಗಿ ಈ ದೇಶದ ಸ್ಥಿತಿಗತಿಗಳನ್ನು ನೋಡಿಯಾಗಲೀ ಅಥವಾ ತಿಳಿದಾಗಲೀ ಬರೆಯದಿದ್ದರೂ, ಇವನು ಹೇಳಿರುವ ವಿಚಾರಗಳು ಪ್ರಸ್ತುತ ಅಧ್ಯಾಯದಲ್ಲಿ ಗಮನಾರ್ಹವಾಗಿವೆ.

ಕ್ರಿ.ಶ.೧೪೬೮ರಲ್ಲಿ ತನ್ನ ಊರಾದ ತ್ವೆರ್‌ನಿಂದ ಹೊರಟು ರಷ್ಯಾ, ಇಂಡಿಯಾ ಮತ್ತು ಏಷ್ಯಾ ಮೈನರ್‌ನ ಕೆಲವು ಭಾಗಗಳನ್ನು ನೋಡಿಕೊಂಡು ಕ್ರಿ.ಶ.೧೪೭೪ರಲ್ಲಿ ತನ್ನ ದೇಶಕ್ಕೆ ಹಿಂದಿರುಗಿದನು. ತನ್ನ ಊರಿನಿಂದ ಹೊರಟು ಕ್ಯಾಸ್ಪಿಯನ್ ಸಮುದ್ರವನ್ನು ದಾಟಿ ಬೊಖಾರಕ್ಕೆ ಬಂದನು. ಪರ್ಷಿಯಾ ದೇಶದ ಉತ್ತರ ಮತ್ತು ಪಶ್ಚಿಮ ಪ್ರದೇಶಗಳಿಗೆ ಭೇಟಿ ಮಾಡಿ ಓರ್ಮಸ್ಸಿಗೆ ಬಂದನು. ಅಲ್ಲಿಂದ ಹೊರಟು ಇಂಡಿಯಾಕ್ಕೆ ಸಮುದ್ರಯಾನ ಮಾಡಿ ಬೊಂಬಾಯಿಯ ಚೌಲ್ ಎಂಬ ಬಂದರನ್ನು ಮುಟ್ಟಿದನು. ಅಲ್ಲಿಂದ ಬೀದರ್‌ಗೆ ತಲುಪಿ ನಾಲ್ಕು ವರ್ಷಗಳನ್ನು ಕಳೆದು, ನಂತರ ಕ್ಯಾಲಿಕಟ್, ಸಿಲೋನ್, ಪೆಗು ಮುಂತಾದ ಸ್ಥಳಗಳಿಗೆ ಭೇಟಿ ನೀಡಿದನು. ನಿಕಿಟಿನ್ ನಂತರ ಸ್ವದೇಶಕ್ಕೆ ತೆರಳಿದ ಬಗ್ಗೆ ಮಾಹಿತಿಯಿಲ್ಲ. ನಿಕಿಟಿನನ ಪ್ರವಾಸ ಕಥನವನ್ನು ರಷ್ಯನ್ ಲೆಗೇಷನ್ನಿನ ಸೆಕ್ರೆಟರಿಯವರಾದ ಕೌಂಟ್ ವೀಲ್ ಹೋರ್‌ಸ್ಕಿ ಇಂಗ್ಲಿಷ್‌ಗೆ ಭಾಷಾಂತರಿಸಿದ್ದಾರೆ.

ಅವನು ನೀಡಿದ ಪ್ರಮುಖ ವಿವರಗಳು ಇಂತಿವೆ: ವಿಜಯನಗರದ ಸೈನ್ಯ ೧ ಲಕ್ಷ ಕಾಲ್ದಳ, ೫೦ ಸಾವಿರ ಅಶ್ವದಳವಿತ್ತೆಂದು ತಿಳಿಸಿದ್ದಾನೆ. ಈತ ವಿಜಯನಗರ ಸಾಮ್ರಾಜ್ಯಕ್ಕಿಂತ ಹೆಚ್ಚು ಮಾಹಿತಿಯನ್ನು ಬಹುಮನಿ ರಾಜ್ಯದ ಬಗ್ಗೆ ತಿಳಿಸಿದ್ದಾನೆ. ಗೋಧಿ, ಅಕ್ಕಿ, ದ್ವಿದಳ ಧಾನ್ಯ ಮತ್ತಿತರೆ ಆಹಾರವಸ್ತುಗಳನ್ನು ಸಾಮ್ರಾಜ್ಯದಲ್ಲಿ ಬೆಳೆಯುತ್ತಿರುವುದನ್ನು ಕಂಡನು. ಹಾಗಾಗಿ ಇಲ್ಲಿಯ ಭೂಮಿ ಫಲವತ್ತಾಗಿದೆ. ಬೇಸಾಯಕ್ಕೆ ಯೋಗ್ಯ ಭೂಮಿಯಾಗಿದೆ. ಜೋಳ ತುಂಬಾ ಅಗ್ಗದ ದರದಲ್ಲಿ ದೊರಕುತ್ತಿತ್ತು. ದ್ವಿದಳ ಧಾನ್ಯಗಳು ಹೇರಳವಾಗಿದ್ದವು ಎಂದನು. ಕ್ರಿ.ಶ.೧೪೫೦ರಲಿ ಬಹುಮನಿ ಸೇನೆಗಳು ವಿಜಯನಗರದ ಮೇಲೆ ದಾಳಿ ಮಾಡಿವು. ರಾಜಧಾನಿಯವರೆಗೂ ಬಂದವು. ಆದರೆ ಯಶಸ್ವಿಯಾಗಿ ಅವುಗಳನ್ನು ಹಿಮ್ಮೆಟ್ಟಿಸಲಾಯಿತು. ವಿಜಯನಗರದ ಮೂರು ಕಡೆ ಬೆಟ್ಟಗಳಿಂದ ಆವೃತ್ತವಾಗಿದೆ. ಒಂದು ಕಡೆ ನದಿ ಹರಿಯುತ್ತಿದೆ ಎಂದು ತಿಳಿಸಿದ್ದಾನೆ.

"ಹಿಂದೂಗಳ ಸುಲ್ತಾನ ಕದಮನು ಬಹಳ ಶಕ್ತಿವಂತನಾದ ರಾಜ. ಇವನ ಬಳಿ ಅಸಂಖ್ಯಾತ ಸೈನ್ಯವಿದೆ. ಇವನು ಬಿಜನೇಘರ್(ವಿಜಯಗನರ) ಎಂಬ ಸ್ಥಳದಲ್ಲಿ ಪರ್ವತದ ಮೇಲೆ ವಾಸ ಮಾಡುತ್ತಾರೆ. ಈ ಭಾರೀ ನಗರದ ಸುತ್ತಲೂ ಮೂರು ಕೋಟೆಗಳಿವೆ. ಈ ಊರಿನ ಮಧ್ಯೆ ನದಿ ಹರಿಯುತ್ತದೆ. ಒಂದು ಕಡೆ ಕಂಟಕಕಾರಿಯಾದ ಜಂಗಲ್ ಇದೆ. ಶತ್ರುವು ಬಿಜನೇಘರ್ ಮೇಲೆ ದಾಳಿ ಮಾಡಿ ಒಂದು ತಿಂಗಳು ಮುತ್ತಿಗೆ ಹಾಕಿದನು. ಅನ್ನ ನೀರಿನ

ಅಭಾವದಿಂದ ಅನೇಕ ಸೈನಿಕರು ಸತ್ತು ಹೋದರು. ಹತ್ತಿರದಲ್ಲಿ ಯಥೇಚ್ಛವಾಗಿ ನೀರಿದ್ದರೂ ಅದು ಅವನ ಕೈಗೆ ಸಿಕ್ಕದಾಯಿತು. ಅನಂತರ ಮಲ್ಲಿಕ್ ಖಾನ್ ಖೋಡಾ ಎಂಬುವನು ಈ ಭದ್ರವಾದ ನಗರವನ್ನು ಹಗಲೂ ರಾತ್ರಿ ಮುತ್ತಿಗೆ ಹಾಕಿ ಗೆದ್ದನು. ಭಾರಿ ಫಿರಂಗಿ ಸಮೇತ ಮುತ್ತಿಗೆ ಹಾಕಿದ ಸೈನಿಕರಿಗೆ ಇಪ್ಪತ್ತು ದಿನಗಳು ಅನ್ನ ನೀರಿರಲಿಲ್ಲ. ಮಲ್ಲಿಕ್ ಖಾನನು ತನ್ನ ಯೋಧರಲ್ಲಿ ಅತ್ಯುತ್ತಮವಾದ ಐದು ಸಾವಿರ ಜನರನ್ನು ಕಳೆದುಕೊಂಡನು. ನಗರವು ಕೈವಶವಾದ ಮೇಲೆ ಇಪ್ಪತ್ತು ಸಾವಿರ ಹೆಂಗಸರು ಗಂಡಸರ ತಲೆಯನ್ನು ಕೆಡಿಸಲಾಯಿತು. ಇಪ್ಪತ್ತು ಸಾವಿರ ಜನರನ್ನು ಚಿಕ್ಕವರು ಮುದುಕರೆನ್ನದೆ ಖೈದಿಗಳನ್ನಾಗಿ ಮಾಡಿ ಆಮೇಲೆ ತಲೆ ಒಂದಕ್ಕೆ ಐದು, ಹತ್ತು ಟೆಂಕಗಳಂತೆ ಮಾರಲಾಯಿತು"[೨೩]

ಈ ಮೇಲಿನ ಪ್ರಕರಣದ ಪ್ರಕಾರ ವಿಜಯನಗರದ ರಾಜನ ಮತ್ತು ಅಲ್ಲಿನ ಜನರು ಇದ್ದ ಪರಿಸ್ಥಿತಿ, ಸೈನ್ಯದ ವಿಚಾರ ಕುರಿತು ಹೇಳುವಲ್ಲಿ ಪ್ರವಾಸಿಗನ ಮುಂದಾಲೋಚನೆಯು ಕೆಲಸ ಮಾಡಿದೆ. ಏಕೆಂದರೆ ಆ ಕಾಲದ ಸೈನಿಕರ ದೈನಿಕ ಸ್ಥಿತಿಯನ್ನು,ಕಷ್ಟದ ದಿನಗಳನ್ನು ನೆನಪಿಸುವಂತಹ ಪ್ರಕರಣ ಇಲ್ಲಿದೆ. ವಿಜಯನಗರದ ಭೌಗೋಳಿಕ ಚಿತ್ರಣವನ್ನು ನೀಡುವನು. ಕೋಟೆಯ ಬಗ್ಗೆ ವಿವರ ನೀಡುವನು.

೫.೧.೭. ಸೀಜರ್ ಫ್ರೆಡೆರಿಕ್

ವೆನಿಸಿನ ಪ್ರವಾಸಿಗನಾದ ಈತ, ೧೫೬೩–೧೫೮೧ರ ವೇಳೆಯಲ್ಲಿ ವಿಜಯನಗರಕ್ಕೆ ಬಂದಿದ್ದನು. ಸೀಜರ್ ಫ್ರೆಡರಿಕ್ ಇಟಾಲಿಯ ವೇನಿಸ್ ಪಟ್ಟಣದ ನಿವಾಸಿ, ಕ್ರಿ.ಶ.೧೫೬೩ರಲ್ಲಿ ಪ್ರಪಂಚದ ಪೂರ್ವ ಭಾಗಗಳನ್ನು ನೋಡಬೇಕೆಂದು ಆಸೆಯಿಂದ, ಕೆಲವು ವ್ಯಾಪಾರದ ಸರಂಜಾಮುಗಳೊಡನೆ ಜೊಕೊಮೊವಟಿಕಾ ಎಂಬುವನ ಹಡಗಿನಲ್ಲಿ ಸೈಪ್ರೆಸ್ ತಲುಪಿದ. ನಂತರ ಆರ್ಮೆನಿಯಾ ಮತ್ತು ಮೂರ್ ವರ್ತಕರ ಪರಿಚಯ ಮಾಡಿಕೊಂಡು ಯೂಪ್ರಟಿಸ್ ನದಿಯ ಬೀರ್ ಪಟ್ಟಣದ ಮೂಲಕ ಬ್ಯಾಬಿಲೋನ್ ನಗರ ತಲುಪಿದ. ಅರೇಬಿಯಾದ ಬಸೋರಾ ಹಾಗೂ ಓರ್ಮಾಸ್ ನಗರವನ್ನು ಸಂದರ್ಶಿಸಿ ಮುಂದೆ ಗೋವಾಕ್ಕೆ ತಲುಪಿದ. ಹಾಗೆದಾರಿಯಲ್ಲಿ ಬರುವ ದಿಯು, ಕಾಂಬೆಯಾ (ಕ್ಯಾಂಬೆ) ರಾಜ್ಯದಲ್ಲಿರುವ ಸಣ್ಣ ದ್ವೀಪ. ಅಲ್ಲಿ ದೊರಕುವ ಸಾಂಬಾರದ ವಸ್ತು, ಹತ್ತಿ ಬಟ್ಟೆ, ರೇಷ್ಮೆ ವಸ್ತ್ರ, ಔಷಧಿ ಮತ್ತು ಅಮೂಲ್ಯವಾದ ಹರಳುಗಳ ಬಗೆಗೆ ತಿಳಿಸಿದ್ದಾನೆ. ಗೋವಾ, ಪೋರ್ಚುಗಲ್ಲರ ರಾಜಧಾನಿ, ಇದು ಸುಂದರವದ ನಗರ, ಪೋರ್ಚುಗಲ್ಲಿನಿಂದ ಗೋವಾಕ್ಕೆ ದೊಡ್ಡ ಹಡಗುಗಳು ಬಂದು ಕೆಲದಿನಗಳು ತಂಗಿ ಮುಂದೆ ಹೋಗುತ್ತವೆ. ಬಿಸಾಪೊರ್ (ಬಿಜಾಪುರ)ದ ದಿಯೂಲ್‌ಖಾನ (ಅಲಿ ಆದಿಲ್ ಷಾ) ಕ್ರಿ.ಶ.೧೫೭೦ರಲ್ಲಿ ಗೋವೆಯ ಮುತ್ತಿಗೆ ಹಾಕಿ, ಸಂಧಿ ನಡೆದ ಬಗ್ಗೆ ತಿಳಿಸಿದ್ದಾರೆ. ಈತನು ಕ್ರಿ.ಶ.೧೫೬೭ರಲ್ಲಿ ಬಿಜೇನಗರ (ವಿಜಯನಗರಕ್ಕೆ) ಬಂದ. ಅದಕ್ಕೆ ಪ್ರವಾಸಿಗ ಫ್ರೆಡೆರಿಕ್‌ನು ಹೀಗೆ ಹೇಳುತ್ತಾನೆ: "ನಾನು ಕ್ರಿ.ಶ.೧೫೬೭ರಲ್ಲಿ ಗೋವಾದಿಂದ ಬಿಜೇನಗರ್ (ವಿಜಯನಗರ) ಎಂಬ ನಗರಕ್ಕೆ ಹೋದೆ. ಇದು ನರಸಿಂಗ ರಾಜ್ಯದ ರಾಜಧಾನಿ. ಗೋವಾದಿಂದ ಎಂಟು ದಿನಗಳ

ಪ್ರಯಾಣ. ಮುನ್ನೂರು ಅರೇಬಿಯಾ ಕುದುರೆಗಳನ್ನು ಹೊಡೆದುಕೊಂಡು ಹೊರಟಿದ್ದ ಇನ್ನಿಬ್ಬರ ವರ್ತಕ ಜೊತೆ ಪ್ರಯಾಣ ಹೊರಟೆ. ಬಿಜೇನಗರದ ಕುದುರೆಗಳು ಸಣ್ಣ. ಈ ಕಾರಣ ಅರೇಬಿಯಾ ಕುದುರೆಗಳಿಗೆ ಒಳ್ಳೆ ಗಿರಾಕಿ. ಕುದುರೆಗಳಿಗೆ ಹೆಚ್ಚು ಬೆಲೆ ಬರುವಂತೆ ಮಾರಲೇಬೇಕು, ಏಕೆಂದರೆ ಇವನ್ನು ಪರ್ಷಿಯಾದಿಂದ ಓರ್ಮಾಸಿಗೆ ಸಾಗಿಸಿ, ಅಲ್ಲಿಂದ ಗೋವಾಕ್ಕೆ ತಂದು, ಗೋವಾದಲ್ಲಿ ಪ್ರತಿ ಕುದುರೆಗೆ ಇನ್ನೂರ ನಲವತ್ತು ಪಗೋಡಾ ಸುಂಕ ಕೊಟ್ಟು ಬಿಜೇನಗರಕ್ಕೆ ತರಬೇಕು. ಇಲ್ಲಿ ಒಂದೊಂದು ಕುದುರೆ ೩೦೦, ೪೦೦, ೫೦೦ ಕೆಲವು ವೇಳೆ ೧೦೦೦ ಡಕಟ್‌ಳು ಬೆಲೆ ಸಿಕ್ಕುತ್ತದೆ" ಎಂದು ಇತಿಹಾಸದ ವಿದ್ವಾಂಸರು ಹೇಳುತ್ತಾರೆ.

ಅವನು ತಾಳಿಕೋಟೆ ಯುದ್ಧ ಕುರಿತು 'ನಗರದಲ್ಲಿ ಹುಲಿ ಮತ್ತು ಇತರೆ ಕಾಡು ವಿವಿಧ ವಸ್ತುಗಳು, ಅರೇಬಿಯಾದ ಕುದುರೆಗಳು, ವೆಲ್ವೆಟೆ, ದಮಾಸ್ ಮತ್ತು ಸ್ಯಾಟಿನ ಬಟ್ಟೆಗಳು, ಚೈನಾದಿಂದ ಬಟ್ಟೆಗಳು, ಕೇಸರಿ ಮತ್ತು ಕೆಂಪುರತ್ನಗಳು ಬಿಜೆನಗರಕ್ಕೆ ಆಮದಾಗುತ್ತಿದ್ದವು. ಬಿಜೇನಗರದಿಂದ ಆಭರಣಗಳು ಪಗೋಡಗಳನ್ನು ರಫ್ತು ಮಾಡಲಾಗುತ್ತಿತ್ತೆಂದು ತಿಳಿಸಿದ್ದಾನೆ.

ವಿಜಯನಗರವನ್ನು ಕುರಿತು ಫ್ರೆಡೆರಿಕ್ ಅವನು "ಬಿಜೇನಗರ್ ನಗರವನ್ನು ಕ್ರಿ.ಶ.೧೫೬೫ರಲ್ಲಿ (ತಾಳಿಕೋಟೆ ಯುದ್ಧದಲ್ಲಿ) ಮೂರರ ಶಕ್ತಿವಂತರಾದ ನಾಲ್ಕು ರಾಜರು ಧ್ವಂಸಮಾಡಿದರು. ಶಕ್ತಿಗಿಂತ ಹೆಚ್ಚಾಗಿ ಮೋಸದಿಂದ ಈ ನಗರವನ್ನು ವಶಪಡಿಸಿಕೊಂಡರು. ಎಂದು ಹೇಳಬೇಕು. ಬಿಜೇನಗರ್ ರಾಜನ ಬಳಿ ಇದ್ದ ಇಬ್ಬರು ಮೂರ ದಳವಾಯಿಗಳು ತಮ್ಮ ಅಧೀನದಲ್ಲಿದ್ದ ಎಪ್ಪತ್ತು ಎಂಬತ್ತು ಸಾವಿರ ಸೈನ್ಯ ಸಮೇತ ಮೂರ ರಾಜರುಗಳ ಕಡೆ ಸೇರಿಕೊಂಡು ಬಿಟ್ಟರು. ಶತ್ರು ಸೈನ್ಯವನ್ನು ಲೆಕ್ಕಕ್ಕೆ ತಾರದೆ ಬಿಜೇನಗರದ ರಾಜ ನಗರವನ್ನು ಬಿಟ್ಟು ಹೊರಗಡೆ ಬಂದು ಬಯಲಿನಲ್ಲಿ ಯುದ್ಧ ಆರಂಭಿಸಿದನು. ಆದರೆ ಯುದ್ಧ ನಾಲ್ಕು ಗಂಟೆಗಳಿಗಿಂತ ಹೆಚ್ಚು ಕಾಲ ನಡೆಯಲಿಲ್ಲ. ಏಕೆಂದರೆ, ಆ ಇಬ್ಬರು ರಾಜದ್ರೋಹಿ ದಳವಾಯಿಗಳು ತಮ್ಮ ದಳ ಸಮೇತ ತಮ್ಮ ರಾಜನ ಸೈನ್ಯದ ಮೇಲೆಯೇ ಬಿದ್ದರು.

ಇಲ್ಲಿಗೆ ಮೂವತ್ತು ವರ್ಷಗಳಿಂದ ಬಿಜೇನಗರ್ ರಾಜ್ಯವನ್ನು ಮೂರು ಸಹೋದರರು ಆಳುತ್ತಾ ಬಂದಿದ್ದರು. ನಿಜವಾದ ಹಕ್ಕುದಾರನನ್ನು ಸೆರೆಮನೆಯಲ್ಲಿಟ್ಟು ಈ ಮೂವರು ಕ್ರೂರವಾಗಿ ರಾಜ್ಯ ಆಳಿದ್ದರು. ವರ್ಷಕ್ಕೊಮ್ಮೆ ನಿಜವಾದ ರಾಜನನ್ನು ಜನಗಳಿಗೆ ತೋರಿಸಿ, ತಾವು ಮನಬಂದಂತೆ ದರ್ಬಾರು ಮಾಡುತ್ತಿದ್ದರು. ಈ ಸಹೋದರುಗಳು ಸೆರೆಮನೆಯಲ್ಲಿ ಇಡಲ್ಪಟ್ಟ ರಾಜನ ತಂದೆಯ ಕೆಳಗೆ ದಳವಾಯಿಗಳಾಗಿದ್ದವರು. ತಂದೆ ಸತ್ತಾಗ ಚಿಕ್ಕ ವಯಸ್ಸಿನವನಾದ ಮಗನನ್ನು ಸೆರೆಮನೆಗೆ ಹಾಕಿ ಈ ಮೂವರು ತಾವೇ ರಾಜ್ಯ ಆಳಲಾರಂಭಿಸಿದರು. ಇವರಲ್ಲಿ ಮುಖ್ಯನಾದವನು ರಾಮರಾಜಿಯೋ (ರಾಮರಾಯ) ಇವನು ಸಿಂಹಾಸನದ ಮೇಲೆ ಕುಳಿತುಕೊಂಡು ರಾಜನೆಂದು ಮೆರೆದ. ಎರಡನೆಯವನು ತೆಮಿರಾಜಿಯೋ (ತಿರುಮಲ) ನಿತ್ಯದ ಆಡಳಿತವನ್ನು ಇವನು ನೋಡಿಕೊಳ್ಳುತ್ತಿದ್ದ. ಮೂರನೆಯವನು ಬೆನ್‌ಗಾತ್ರೇ (ವೆಂಕಟಾದ್ರಿ). ಇವನು ಸೈನ್ಯದ ಮುಖ್ಯ ದಳಪತಿಯಾಗಿದ್ದ.

ಈ ಮೂವರು ಯುದ್ಧರಂಗಕ್ಕೆ ಹೋದರೂ ಮೊದಲನೆಯವನ ಮತ್ತು ಕೊನೆಯವನ ಸುದ್ದಿ ಗೊತ್ತಾಗಲೇ ಇಲ್ಲ. ಸತ್ತರೋ ಇಲ್ಲವೋ ತಿಳಿಯಲಿಲ್ಲ. ತೆಮಿರಾಜಿಯೋ ಮಾತ್ರ ಒಂದು ಕಣ್ಣು ಕಳೆದುಕೊಂಡು ಯುದ್ಧರಂಗದಿಂದ ಓಡಿಹೋದ. ಈ ಸುದ್ದಿ ರಾಣಿವಾಸಕ್ಕೆ ತಿಳಿಯಿತೋ ಇಲ್ಲವೋ ಅವರೆಲ್ಲ ಸೆರೆಮನೆಯಲ್ಲಿದ್ದ ನಿಜವಾದ ರಾಜನ ಸಮೇತ ನಗರದಿಂದ ಪಲಾಯನ ಮಾಡಿದರು. ಮೂರರ ನಾಲ್ಕು ರಾಜರು ವೈಭವದಿಂದ ನಗರವನ್ನು ಪ್ರವೇಶಿಸಿ, ಆರು ತಿಂಗಳು ಇದ್ದು, ಊರನ್ನೆಲ್ಲಾ ಶೋಧಿಸಿ, ಭಂಡಾರವನ್ನು ಕೊಳ್ಳೆ ಹೊಡೆದರು. ಆಮೇಲೆ ತಮ್ಮ ಸ್ಥಳಗಳಿಗೆ ಹಿಂದಿರುಗಿದರು. ಏಕೆಂದರೆ ಇವರ ರಾಜ್ಯಗಳಿಂದ ಇಷ್ಟು ದೂರದಲ್ಲಿದ್ದ ಮತ್ತು ಇಷ್ಟು ದೊಡ್ಡದಾದ ರಾಜ್ಯವನ್ನು ಆಳುವುದು ಅವರ ಕೈಯ್ಯಿಂದ ಆಗಲಿಲ್ಲ.

ಇವರು ಹೋದ ಮೇಲೆ ತೆಮಿರಾಜಿಯೋ (ತಿರುಮಲ) ಬಿಜೇನಗರಕ್ಕೆ ಹಿಂದಿರುಗಿ ಜನರನ್ನು ಪುನರ್ವಸತಿ ಮಾಡಲಾರಂಭಿಸಿದನು. ಗೋವಾದಲ್ಲಿದ್ದ ವರ್ತಕರಿಗೆ ಕುದುರೆಗಳಿದ್ದರೆ ತೆಗೆದುಕೊಂಡು ಬರಬೇಕೆಂದೂ, ಅವಕ್ಕೆ ಒಳ್ಳೆಯ ಬೆಲೆ ಕೊಡುವುದಾಗಿಯೂ ಹೇಳಿ ಕಳುಹಿಸಿದ. ಈ ಕಾರಣವೇ ಮೇಲೆ ತಿಳಿಸಿದ ಇಬ್ಬರು ವರ್ತಕರು ಕುದುರೆಗಳ ಸಮೇತ ಬಿಜೇನಗರಕ್ಕೆ ಹೊರಟಿದ್ದರು. ಯುದ್ಧದಲ್ಲಿ ತೆಗೆದುಕೊಂಡಿದ್ದ ಕುದುರೆಗಳಿದ್ದರೆ ಅವಕ್ಕೂ ಕೇಳಿದಷ್ಟು ಬೆಲೆ ಕೊಡುವುದಾಗಿ ರಾಜ ತಿಳಿಸಿದ. ಅಲ್ಲದೆ ಕುದುರೆಗಳನ್ನು ತರುವವರಿಗೆ ದಾರಿಯಲ್ಲಿ ಎಲ್ಲಾ ರಕ್ಷಣೆಗಳನ್ನು ಒದಗಿಸುವುದಾಗಿ ಭರವಸೆ ಕೊಟ್ಟನು. ವರ್ತಕರು ಅನೇಕ ಕುದುರೆಗಳನ್ನು ಬಿಜೇನಗರಕ್ಕೆ ತಂದರು. ಅವನ್ನು ತರುವವರೆಗೂ ರಾಜ ಒಳ್ಳೆಯ ಮಾತುಗಳನ್ನಾಡುತ್ತಿದ್ದು, ಆಮೇಲೆ ವರ್ತಕರಿಗೆ ಏನೂ ಕೊಡದೆ ನಗರದಿಂದ ಹೊರಟು ಹೋಗುವಂತೆ ಹೇಳಿದ. ವರ್ತಕರು ತಮಗಾದ ನಿರಾಶೆಯಿಂದ ಹುಚ್ಚರಂತೆ ಅತ್ತೂ ಅತ್ತೂ ಸಾಕಾದರು.

ನನ್ನ ಕೆಲಸವನ್ನೆಲ್ಲಾ ಕೇವಲ ಒಂದು ತಿಂಗಳಲ್ಲಿ ಮುಗಿಸಬಹುದಾಗಿದ್ದರೂ ನಾನು ಏಳು ತಿಂಗಳ ಕಾಲ ಬಿಜೇನಗರದಲ್ಲಿ ಇದ್ದೆ. ಏಕೆಂದರೆ ಕಳ್ಳಕಾಕರ ಕಾಟ ಇಲ್ಲದಾಗ ಪ್ರಯಾಣ ಮಾಡಬೇಕಾಗಿತ್ತು. ದಾರಿಯಲ್ಲಿ ಕಳ್ಳಕಾಕರು ಆಡಿದ್ದೇ ಆಟವಾಗಿತ್ತು. ನಾನಿದ್ದ ಏಳು ತಿಂಗಳ ಕಾಲದಲ್ಲಿ ಜೆಂಟೈಲರು ಮಾಡುತ್ತಿದ್ದ ಅನೇಕ ವಿಚಿತ್ರ ಹಾಗೂ ಅಮಾನುಷ ಕೃತ್ಯಗಳನ್ನು ಕಂಡೆ. ಗಣ್ಯರಾದ ಗಂಡಸರಾಗಲೀ ಹೆಂಗಸರಾಗಲೀ ಸತ್ತರೆ ಇಲ್ಲಿ ಸುಡುತ್ತಾರೆ. ಮದುವೆಯಾದ ಗಂಡಸು ಸತ್ತರೆ ಅವನ ಹೆಂಡತಿ ಚಿತೆಯಲ್ಲಿ ಬಿದ್ದು ಸಾಯುತ್ತಾಳೆ. ಗಂಡ ಸತ್ತ ಮೇಲೆ ಹೆಂಡತಿ ಅಥವಾ ಮೂರು ತಿಂಗಳ ನಂತರ ಚಿತೆಯಲ್ಲಿ ಬೀಳುವುದಕ್ಕೆ ಸಿದ್ಧಳಾಗುತ್ತಾಳೆ. ನಿರ್ದಿಷ್ಟವಾದ ದಿನ ಬಹಳ ಹೊತ್ತಿಗೆ ಮುಂಚೆ ಎದ್ದು ಕುದುರೆಯ ಮೇಲೋ, ಆನೆಯ ಮೇಲೋ ಅಥವಾ ಎಂಟು ಜನ ಹೊತ್ತ ಪಲ್ಲಕ್ಕಿಯ ಮೇಲೋ ಕುಳಿತು ಚಿತೆಯ ಸ್ಥಳಕ್ಕೆ ಹೊರಡುತ್ತಾಳೆ. ಆಕೆ ವಧುವಿನಂತೆ ಅಲಂಕಾರ ಮಾಡಿಕೊಂಡಿರುತ್ತಾಳೆ. ತಲೆ ಕೂದಲನ್ನು ಇಳಿಯ ಬಿಟ್ಟಿರುತ್ತಾಳೆ. ತನ್ನ ಯೋಗ್ಯತೆಗನುಸಾರವಾಗಿ ಒಡವೆ ವಸ್ತ್ರಗಳನ್ನು ಹಾಕಿಕೊಂಡಿರುತ್ತಾಳೆ. ಊರಿನಲ್ಲೆಲ್ಲಾ ಆಕೆಯ ಮೆರವಣಿಗೆಯಾಗುತ್ತದೆ. ವೆನೀಸ್‌ನಲ್ಲಿ ಮದುವೆಗೆ ಹೊರಟ ಹೆಣ್ಣಿನ ಮೆರವಣಿಗೆಯಂತೆ.

ಆಕೆಯ ಎಡಗೈಯಲ್ಲಿ ಕನ್ನಡಿ, ಬಲಗೈಯಲ್ಲಿ ಒಂದು ಬಾಣ ಇರುತ್ತದೆ. ಮೆರವಣಿಗೆಯಾಗುವಾಗ ಆಕೆ ಹಾಡುತ್ತಾ ಇರುತ್ತಾಳೆ. ತಾನು ತನ್ನ ನಲ್ಲನೊಡನೆ ಚಿರನಿದ್ರೆ ಮಾಡಲು ಹೋಗುತ್ತಿರುವೆನೆಂದು. ಆಕೆಯ ನೆಂಟರಿಷ್ಟರು ಮೆರವಣಿಗೆಯಲ್ಲಿ ಭಾಗವಹಿಸುತ್ತಾರೆ."೨೪

ಮುಂದುವರೆದು "ಇನ್ನೊಂದು ರೀತಿಯಲ್ಲಿ ಹೆಂಗಸರು ತಮ್ಮ ಪ್ರಾಣತ್ಯಾಗ ಮಾಡುವುದನ್ನು ನಾನು ನೋಡಿದ್ದೇನೆ. ಸತ್ತ ಗಂಡನ ಶವವನ್ನು ಚಕ್ಕಲುಬೊಕ್ಕಲಾಗಿ ಕುಳ್ಳಿರಿಸುತ್ತಾರೆ. ಅವನ ಹೆಂಡತಿ ಬಂದು ಅವನ ಕುತ್ತಿಗೆಯನ್ನು ತಬ್ಬಿಕೊಂಡು ಕುಳಿತುಕೊಳ್ಳುತ್ತಾಳೆ. ಗಾರೆಯವರು ಸುತ್ತಲೂ ಗೋಡೆ ಕಟ್ಟುತ್ತಾರೆ. ಇನ್ನೇನು ಗೋಡೆಯನ್ನು ಮುಚ್ಚಬೇಕು. ಅಷ್ಟರಲ್ಲಿ ಗಂಡಸೊಬ್ಬನು ಬಂದು ಆಕೆಯ ಕುತ್ತಿಗೆಯನ್ನು ಹಿಸುಕಿ ಸಾಯಿಸಿಬಿಡುತ್ತಾನೆ. ಆಮೇಲೆ ಗೋಡೆಯನ್ನು ಮುಚ್ಚಿ ಇಬ್ಬರನ್ನೂ ಸಮಾಧಿ ಮಾಡುತ್ತಾರೆ.

ಇಷ್ಟಲ್ಲದೆ, ಇವರಲ್ಲಿ ಇನ್ನೂ ಅನೇಕ ಅನಾಗರೀಕ ಕೃತ್ಯಗಳಿವೆ. ಅವನ್ನೆಲ್ಲಾ ಇಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಈ ರೀತಿ ಏತಕ್ಕೆ ಮಾಡುವಿರೆಂದು ನಾನು ಜನರನ್ನು ವಿಚಾರಿಸಿದಾಗ, ಇದು ತಮ್ಮ ಪುರಾತನ ಪದ್ಧತಿಯೆಂದು ಅವರು ಹೇಳಿದರು. ಹಿಂದಿನ ಕಾಲದಲ್ಲಿ ಹೆಂಡತಿಗೆ ಗಂಡ ಆಗದೇ ಇದ್ದರೆ ವಿಷಕೊಟ್ಟು ಸಾಯಿಸಿ ಪರಪುರುಷರ ಸಂಗ ಮಾಡುತ್ತಿದ್ದರಂತೆ. ಇದನ್ನು ತಪ್ಪಿಸಲು ಈ ಪದ್ಧತಿಯನ್ನು ಅನುಷ್ಠಾನಕ್ಕೆ ತಂದರಂತೆ. ಹೀಗೆ ಮಾಡಿದಾಗಿನಿಂದ ಹೆಂಡತಿಯರು ಗಂಡಂದಿರ ಬಗ್ಗೆ ಸರಿಯಾಗಿ ನಡೆದುಕೊಳ್ಳುತ್ತಿರುವರೆಂದು ಹೇಳಿದರು. ಏಕೆಂದರೆ, ಗಂಡ ಸತ್ತರೆ ಹೆಂಡತಿಗೂ ಅದೇ ಗತಿಯಾಗುತ್ತದೆ. ಯುದ್ಧದಲ್ಲಿ ಸೋತು ಹೋದ ಕಾರಣ ಬಿಜೇನಗರದ ರಾಜ ಕ್ರಿ.ಶ.೧೫೬೭ರಲ್ಲಿ ತನ್ನ ರಾಜಧಾನಿಯನ್ನು ಎಂಟು ದಿನ ಪ್ರಯಾಣದಷ್ಟು ದೂರದಲ್ಲಿರುವ ಪೆನುಗೊಂಡೆಗೆ ಬದಲಾಯಿಸಿದನು.

ಬಿಜೇನಗರ ಪೂರ್ತಿ ನಾಶವಾಗಿಲ್ಲ. ಮನೆಗಳನ್ನೂ ಹಾಗೆಯೇ ಉಳಿದಿವೆ. ಆದರೆ ಅವುಗಳಲ್ಲಿ ಹುಲಿ ಮುಂತಾದ ಕಾಡುಪ್ರಾಣಿಗಳು ಸೇರಿಕೊಂಡಿವೆಯೆಂದು ನನಗೆ ತಿಳಿದು ಬಂದಿದೆ. ಮನೆಗಳನ್ನು ಮಣ್ಣಿನಿಂದ ಕಟ್ಟಿದ್ದಾರೆ. ಮೂರು ಜನ ಸಹೋದರರ ಅರಮನೆಗಳನ್ನೂ ದೇವಸ್ಥಾನಗಳನ್ನೂ ಕಲ್ಲು ಮತ್ತು ಗಾರೆಗಳಿಂದ ಕಟ್ಟಿದ್ದಾರೆ. ಉಳಿದ ಮನೆಗಳು ಸರಳವಾಗಿವೆ. ನಾನು ಎಷ್ಟೋ ರಾಜರ ಆಸ್ಥಾನಗಳನ್ನು ನೋಡಿದ್ದೇನೆ. ಆದರೆ ಬಿಜನೇಗರದ ರಾಜನ ಆಸ್ಥಾನವನ್ನು ಮೀರಿಸುವುದನ್ನು ನಾನೆಲ್ಲಿಯೂ ನೋಡಿಲ್ಲ. ನಗರದಲ್ಲಿ ಕಳ್ಳಕಾಕರ ಭಯವಿಲ್ಲ. ಏಕೆಂದರೆ ಪೋರ್ಚುಗಲ್ ವರ್ತಕರು ಸೆಕೆ ತಡೆಯಲಾರದೆ ಬೀದಿಗಳಲ್ಲಿ ಅಥವಾ ಜಗಲಿಗಳ ಮೇಲೆ ಭಯವಿಲ್ಲದೆ ಮಲಗಿಕೊಳ್ಳುತ್ತಾರೆ. ಎರಡು (ಏಳು) ತಿಂಗಳು ನಾನು ಇಲ್ಲಿ ಇದ್ದ ಮೇಲೆ ಇಬ್ಬರು ವರ್ತಕರ ಸಮೇತ ಗೋವಾಕ್ಕೆ ಹಿಂದಿರುಗಬೇಕೆಂದು ಮನಸ್ಸು ಮಾಡಿದೆ. ಅವರು ಎರಡು ಪಲ್ಲಕ್ಕಿಗಳಲ್ಲಿ ಹೊರಡಲು ಸಿದ್ಧತೆ ಮಾಡಿಕೊಂಡಿದ್ದರು. ಈ ಪಲ್ಲಕ್ಕಿಗಳು ಪ್ರಯಾಣಕ್ಕೆ ಬಹಳ ಅನುಕೂಲವಾಗಿರುತ್ತವೆ. ಒಂದು ಪಲ್ಲಕ್ಕಿ ಹೊರಲು ಎಂಟು ಜನ ಇರುತ್ತಾರೆ. ಸರದಿಯ ಮೇಲೆ ನಾಲ್ಕು ನಾಲ್ಕು ಜನ ಹೊರುತ್ತಾರೆ. ನಾನು ಎರಡು ಎತ್ತುಗಳನ್ನು ಕೊಂಡು

ಕೊಂಡೆ : ಒಂದು ನನ್ನ ಸವಾರಿಗೆ ; ಇನ್ನೊಂದು ಸಾಮಾನು ಸರಂಜಾಮು ಮತ್ತು ಆಹಾರದ ವಸ್ತುಗಳನ್ನು ಹೊರುವುದಕ್ಕೆ. ಈ ದೇಶದಲ್ಲಿ ಸವಾರಿಗೆ ಸಬರ ಬಿಗಿದ ಎತ್ತುಗಳನ್ನು ಉಪಯೋಗಿಸುತ್ತಾರೆ. ಇದು ಕುಳಿತುಕೊಳ್ಳುವುದಕ್ಕೆ ಅನುಕೂಲವಾಗಿರುತ್ತದೆ" ಎಂದು ಅವನು ವಿಜಯನಗರದ ವಿದೇಶಿ ವ್ಯಾಪಾರವನ್ನು ಕುರಿತು ವರ್ಣಿಸಿದ್ದಾನೆ.[೨೫]

ಈ ಸಾಮ್ರಾಜ್ಯದಲ್ಲಿ ವಿನಿಮಯವಾಗುತ್ತಿದ್ದ ವಸ್ತುಗಳನ್ನು ಕುರಿತು "ಪ್ರತಿವರ್ಷ ಗೋವಾದಿಂದ ಬಿಜೇನಗರಕ್ಕೆ ಹೋಗುತ್ತಿದ್ದ ವಸ್ತುಗಳೆಂದರೆ : ಅರೇಬಿಯಾ ಕುದುರೆಗಳು, ವೆಲ್ವೆಟ್ ಬಟ್ಟೆಗಳು, ಡಮಸ್ಕ್ ಮತ್ತು ಸಾಟಿನ್ ಬಟ್ಟೆಗಳು, ಪೋರ್ಚುಗಲ್ಲಿನ ಒಂದು ತರ ಟಫೇಟಾ ರೇಷ್ಮೆ, ಚಿನ್ನ, ಸಣ್ಣ ಪುಟ್ಟ ವಸ್ತುಗಳು, ಕೇಸರಿ ಮತ್ತು ಕೆಂಪು ಬಟ್ಟೆಗಳು. ಬಿಜೇನಗರದದಿಂದ ತುರ್ಕಿಗೆ ಒಡವೆಗಳು ಮತ್ತು ಚಿನ್ನದ ಪಗೋಡಗಳು ಹೋಗುತ್ತಿದ್ದವು. ಬಿಜೇನಗರದಲ್ಲಿ ಉಪಯೋಗಿಸುತ್ತಿದ್ದ ಬಟ್ಟೆಗಳೆಂದರೆ ವೆಲ್ವೆಟ್, ಸ್ಯಾಟಿನ್, ಡಮಾಸ್ಕ್ ಕೇಸರಿ ಅಥವಾ ಬಿಳಿ ಲಂಬಾಸ್ಪ ಬಟ್ಟೆಗಳು. ಈ ಕೇಸರಿ ಅಥವಾ ಬಿಳೀ ಬಟ್ಟೆಯನ್ನು ಜನರು ಅವರವರ ಸ್ಥಾನಮಾನಕ್ಕೆ ತಕ್ಕಂತೆ ತಲೆಗೆ ಉದ್ದವಾದ ಪೇಟ ಸುತ್ತಲು ಉಪಯೋಗಿಸುತ್ತಿದ್ದರು. ಈ ಪೇಟಗಳಿಗೆ ಕೊಲಯೇ (ಕುಲಾಯಿ) ಎಂದು ಹೆಸರು. ಇದನ್ನು ವೆಲ್ವೆಟ್, ಸ್ಯಾಟಿನ್ ಮತ್ತು ಡಮಾಸ್ಕ್ ಬಟ್ಟೆಯಿಂದ ಅಥವಾ ಕೇಸರಿ ಬಟ್ಟೆಯಿಂದ ಮಾಡುತ್ತಾರೆ. ಜನರು ತುರುಕರಂತೆ ಶರಾಯಿಗಳನ್ನು ಧರಿಸುತ್ತಾರೆ. ಕಾಲಿಗೆ ಅಸ್ಪರ್ಘ್ ಎಂಬ ಎತ್ತರವಾದ ಪಾದರಕ್ಷೆಗಳನ್ನೂ, ಕಿವಿಗಳಿಗೆ ತೂಕವಾದ ಚಿನ್ನದ ಆಭರಣಗಳನ್ನೂ ಧರಿಸುತ್ತಾರೆ."[೨೬]

ಈ ಮೇಲಿನ ಪ್ರಕರಣವು ವಿಜಯನಗರ ಸಾಮ್ರಾಜ್ಯದ ರಾಜಮನೆತನ ಯುದ್ಧದ ಸರಂಜಾಮುಗಳನ್ನು, ವರ್ತಕರು ಅಂದಿನ ಎಂತಹ ಪ್ರಖರ ಬುದ್ಧಿವಂತರಾಗಿದ್ದರು ಎಂದು ತಿಳಿಯುತ್ತದೆ. ಹಾಗೆಯೇ ಅಂದಿನ ಆಭರಣಗಳ ವಸ್ತುವಿನಿಮಯ ಹಾಗೂ ಬಟ್ಟೆಗಳನ್ನು ಧರಿಸುವಿಕೆಯನ್ನು ಗಮನಿಸಿದರೆ, ಅಂದಿನ ಜನರು ಆಭರಣ ಪ್ರಿಯರಾಗಿದ್ದರು ಎಂದು ತಿಳಿಯುತ್ತದೆ.

೫.೧.೮. ಲೊಡೊವಿಕೊ ದಿ ವರ್ತೆಮಾ

ಲೊಡೊವಿಕೊ ದಿ ವರ್ತೆಮಾ(Lodovico di Varthema)ನ ಸ್ವಂತ ಜೀವನದ ಬಗ್ಗೆ ಈತನ ಪ್ರವಾಸ ಕಥನದಲ್ಲಿ ಅಲ್ಲಿ ಇಲ್ಲಿ ಬರುವ ಕೆಲವು ಮಾತುಗಳನ್ನು ಬಿಟ್ಟರೆ, ಬೇರಾವ ಸಾಮಗ್ರಿಗಳೂ ದೊರೆಯುವುದಿಲ್ಲ. ಈತನೇ ಅದರಲ್ಲಿ ಒಂದೆಡೆ ಹೇಳಿರುವಂತೆ ವರ್ತೆಮಾ ಇಟಲಿ ದೇಶದ ಬೊಲೊಗ್ನದವನು. ತಂದೆ ಒಬ್ಬ ವೈದ್ಯನಾಗಿದ್ದನು. ತಂದೆಯಿಂದ ಮಗನೂ ಅಷ್ಟಿಷ್ಟು ವೈದ್ಯ ತಿಳಿದುಕೊಂಡಿದ್ದನೆಂದು ಗೊತ್ತಾಗುತ್ತದೆ. "ಫಿರಂಗಿಗಳನ್ನು ಎರಕ ಹೊಯ್ಯುವ ಕೆಲಸ ನನಗೆ ಬರುತ್ತದೆ" ಎಂದು ಒಮ್ಮೆ ಹೇಳಿಕೊಂಡಿರುವುದರಿಂದ ಈತ ಮೊದಲಿಗೆ ಸೈನಿಕ ವೃತ್ತಿಯಲ್ಲಿ ಇದ್ದಿರಲೂಬಹುದು ಅಥವಾ ಆ ಕಲೆಯನ್ನು ಕಲಿತಿರಲೂಬಹುದು. ವರ್ತೆಮಾ ತನ್ನ ಪ್ರವಾಸ ಕಥನವನ್ನು ಫೆಡರಿಕೋ ದಿ ಮೊಂಟಿಫೆಲ್ಟ್ರೋ (Federico di Montefeltro)

ಎಂಬ ಯುರ್ಬಿನೋ(Urbino) ಡ್ಯೂಕನ ನಾಲ್ಕನೆಯ ಮಗಳೂ. ಅಲ್ಬಿ(Albi)ಮತ್ತು ತಗ್ಲಿಯಕೊಜ್ಜ (Tagliacozza) ಎಂಬ ಊರುಗಳ ಡ್ಯೂಕನ ಹೆಂಡತಿಯೂ ಆದ ಅಗ್ನೇಸಿನಾ (Agnesina) ಎಂಬುವಳಿಗೆ ಅರ್ಪಿಸುತ್ತಾನೆ. ಅಗ್ನೇಸಿನಾ ಆಕೆಯ ತಾಯಿಯಂತೆ ಪ್ರತಿಭಾವಂತಳೂ, ಸಾಹಿತ್ಯಿಕ ಆಸಕ್ತಿಯುಳ್ಳವಳೂ ಆಗಿದ್ದಳೆಂದು ಗೊತ್ತಾಗುತ್ತದೆ."೨೭

ಆಕೆಗೆ ತನ್ನ ಪ್ರವಾಸ ಕಥನವನ್ನು ಅರ್ಪಿಸುವಾಗ ವರ್ತೆಮಾ ಈ ಕೆಳಗಿನ ಮಾತುಗಳನ್ನು ಹೇಳುತ್ತಾನೆ: "ಪ್ರಪಂಚದ ನಾನಾ ರಾಜ್ಯಗಳನ್ನು ನೋಡುವಾಸೆ ಬೇರೆಯವರಿಗೆ ಹೇಗೆ ಮೂಡಿತೋ ಹಾಗೆ ಈತನಿಗೂ ಮೂಡಿತು. ಈಜಿಪ್ಟಿನ ಅಲೆಕ್ಸಾಂಡ್ರಿಯಾ ತಲುಪಿ ಮುಂದೆ ಕೈರೋ ಮುಟ್ಟಿದ. ತ್ರಿಪೊಲಿ, ಅಲೆಪ್ಪಿ, ಮೆಕ್ಕಾ, ಏಡನ್, ಓರ್ಮ್ಸ್, ಹೇರತ್ ಮುಖಾಂತರ ನಾವು ಇಲ್ಲಿ ಕೆಲವು ದಿನಗಳಿದ್ದು, ನರಸಿಂಗನ ರಾಜ್ಯದ ಕಡೆಗೆ ಪ್ರಯಾಣ ಮಾಡಿದೆವು. ಹದಿನೈದು ದಿನಗಳು ಒಳಭೂಭಾಗದಲ್ಲಿ ಪ್ರಯಾಣ ಮಾಡಿ, ಬಿಸೆನಗರ್(ವಿಜಯನಗರ) ಎಂಬ ನಗರವನ್ನು ತಲುಪಿದೆವು. ನಗರ ಬಹಳ ದೊಡ್ಡದು. ಸುತ್ತಲೂ ಭದ್ರವಾದ ಕೋಟೆ ಇದೆ. ಏಳು ಮೈಲು ಸುತ್ತಳತೆಯ ಮೂರು ಕೋಟೆ ಗೋಡೆಗಳಿವೆ. ಇಲ್ಲಿ ಭಾರೀ ವ್ಯಾಪಾರ ನಡೆಯುತ್ತದೆ. ಬಹು ಫಲವತ್ತಾದ ಭೂಮಿ. ರುಚುರುಚಿಯಾದುದೆಲ್ಲ ಇಲ್ಲಿ ಸಿಕ್ಕುತ್ತವೆ. ನಾನಿಲ್ಲಿಯವರೆಗೆ ಕಂಡ ಸ್ಥಳಗಳಲ್ಲೆಲ್ಲಾ ಬಹು ಒಳ್ಳೆಯ ಹವೆಯ ಊರೆಂದರೆ ಇದೇ. ಎರಡನೆಯ ಸ್ವರ್ಗವೋ ಎನ್ನುವಂತಿದೆ ಈ ನಗರ. ರಾಜ ಪೇಗನ್, ಪ್ರಜೆಗಳೆಲ್ಲ ವಿಗ್ರಹಾರಾಧಕರು. ಬಹುಶಕ್ತಿವಂಥನಾದ ಈ ರಾಜನ ಬಳಿ ೪೦,೦೦೦ ಕುದುರೆಗಳಿವೆ. ಒಂದು ಕುದುರೆಗೆ ೩೦೦ ರಿಂದ ೫೦೦ ಪರ್ದಾಯಿಗಳ ಬೆಲೆಯಾಗುತ್ತದೆ. ಎಂಬುದನ್ನು ಮರೆಯಬಾರದು. ಕೆಲವು ೮೦೦ ಪರ್ದಾರ್‌ಗಳಷ್ಟು ಬೆಲೆ ಆಗುವುದುಂಟು. ಅಲ್ಲದೆ, ಇಲ್ಲಿ ೪೦೦ ಆನೆಗಳೂ, ಒಂಟೆಗಳೂ ಇವೆ. ಕನೊನೋರ್‌ನಲ್ಲಿ ಆನೆಗಳು ಸಮುದ್ರದಿಂದ ಹಡಗೊಂದನ್ನು ಭೂಮಿಗೆ ಎಳೆದು ತಂದುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಬಹಳ ಸೂಕ್ಷ್ಮ ಬುದ್ಧಿಯ ಆನೆಗಳು ಯುದ್ಧದಲ್ಲಿ ಬಹಳ ಉಪಯೋಗವಾಗುತ್ತವೆ. ಗಂಡಾನೆಗಳು ಗುಟ್ಟಾದ ಸ್ಥಳದಲ್ಲಿ ನೀರಿನೊಳಕ್ಕೆ ಹೋಗಿ ಹೆಣ್ಣಾನೆಯನ್ನು ಕೊಡುತ್ತವೆ.

ನಾನು ಕಂಡು ಕೇಳಿದ ರಾಜರುಗಳಲ್ಲೆಲ್ಲಾ ನರಸಿಂಗರಾಜನೆ ಅತ್ಯಂತ ಶ್ರೀಮಂತನೆಂದು ಹೇಳಬೇಕು. ಇವನ ಬ್ರಾಹ್ಮಣರು ಅಂದರೆ ಪುರೋಹಿತರು ಹೇಳುವ ಪ್ರಕಾರ ಈತನ ಆದಾಯ ದಿನಕ್ಕೆ ೧೨೦೦೦ ಪರ್ದಾಯ್‌ಗಳು. ಈ ರಾಜ ಯಾವಾಗಲೂ ಹಲವಾರು ಮೂರ ಮತ್ತು ಪೇಗನ್ ರಾಜರುಗಳೊಡನೆ ಯುದ್ಧದಲ್ಲಿ ತೊಡಗಿರುತ್ತಾನೆ. ಕ್ಯಾಲಿಕಟ್‌ನಲ್ಲಿ ಪೂಜಿಸುವಂತೆ ಈ ರಾಜ ಮತ್ತು ಈತನ ಪ್ರಜೆಗಳು ದೆವ್ವವನ್ನು ಪೂಜಿಸುತ್ತಾರೆ. (ಭೂತೋಪಾಸನೆಯೇ?) ಜನಸಾಮಾನ್ಯರೆಲ್ಲ ಸೊಂಟಕ್ಕೆ ಸುತ್ತಿದ ಬಟ್ಟೆ ಬಿಟ್ಟರೆ ಬೆತ್ತಲೆ. ರಾಜನ ಪಟ್ಟದ ಕುದುರೆಗೆ ತೊಡಗಿಸಿದ ಆಭರಣಗಳ ಬೆಲೆ ಹೇಳತೀರದು. ಆ ಆಭರಣಗಳ ಬೆಲೆ ನಮ್ಮ ನಗರಗಳ ಬೆಲೆಯಷ್ಟಾಗುತ್ತದೆ. ಚಿನ್ನದ 'ಪರ್ದಾಯ್', ಬೆಳ್ಳಿಯ 'ತಾರೆ' ಮತ್ತು ಚಿನ್ನದ ಸಣ್ಣ ನಾಣ್ಯವಾದ 'ಫನಂ' ಇವು ಇಲ್ಲಿಯ ನಾಣ್ಯಗಳು. 'ಕಾಸ್'(ಕಾಸು) ಎಂಬ ಸಣ್ಣ ನಾಣ್ಯವೂ ಉಂಟು.

ಒಂದು ತಾರೆಗೆ ೧೬ ಕಾಸ್‌ಗಳು. ನರಸಿಂಗನ ರಾಜ್ಯದಲ್ಲಿ ಎಲ್ಲಿ ಅಂದರೆ ಅಲ್ಲಿಗೆ ಕ್ಷೇಮವಾಗಿ ಹೋಗಬಹುದು. ಆದರೆ ಅಲ್ಲಲ್ಲಿ ಸಿಂಹಗಳ (ಹುಲಿಗಳ?) ಕಾಟವುಂಟು. ನರಸಿಂಗರಾಜ ಕ್ರೈಸ್ತರ ಸ್ನೇಹಿತ. ಅದಲ್ಲಿಯೂ ಪೋರ್ಚುಗಲ್ ರಾಜನ ಮೇಲೆ ಹೆಚ್ಚು ಸ್ನೇಹ, ತನ್ನ ರಾಜ್ಯಕ್ಕೆ ಬಂದ ಕ್ರೈಸ್ತರಿಗೆ ಬಹಳ ಮರ್ಯಾದೆ ತೋರಿಸುತ್ತಾನೆ.

ನಾವು ಈ ಭವ್ಯ ನಗರದಲ್ಲಿ ಹಲವಾರು ದಿನಗಳಿದ್ದು, ಕನೊನೋರಿಗೆ ಹಿಂದಿರುಗಿ, ತೊರ್ಮಪಟ್ಟಣ (ಧರ್ಮಪಟಂ) ಪಂಡರಣಿ(Pandarani) ಮುಖಾಂತರ ಕ್ಯಾಲಿಕಟ್ಟಿಗೆ ಬಂದೆವು. ಸಿಲೋನಿನ ರಾಜರುಗಳೆಲ್ಲ ನರಸಿಂಗ ರಾಜನಿಗೆ ಪೊಗದಿ ಸಲ್ಲಿಸುತ್ತಾರೆ. ಮುಖ್ಯ ಭೂಭಾಗದಿಂದ ಇಲ್ಲಿಗೆ ಅಕ್ಕಿ ಬರುವುದೇ ಇದಕ್ಕೆ ಕಾರಣ. ಇಲ್ಲಿಯ ಜನರು ನಮ್ಮವರಿಗಿಂತ ಹೆಚ್ಚು ಕಾಲ ಬದುಕುತ್ತಾರೆ. ಸಿಲೋನಿನಿಂದ ಹೊರಟು ಮೂರು ದಿನಗಳ ಸಮುದ್ರಯಾನ ಮಾಡಿ ನಾವು ನರಸಿಂಗ ರಾಜ್ಯಕ್ಕೆ ಸೇರಿದ ಪುಲಿಕಾಟ್ ಎಂಬಲ್ಲಿಗೆ ಹೋದೆವು. ಇಲ್ಲಿ ಭಾರಿ ವ್ಯಾಪಾರ ನಡೆಯುತ್ತದೆ. ಸಿಲೋನ್ ಮತ್ತು ಪೆಗಳಾಗಳಿಂದ ಆಭರಣಗಳು ಬರುತ್ತವೆ. ನಾವು ಇಲ್ಲಿ ಒಬ್ಬ ವರ್ತಕನ ಮನೆಯಲ್ಲಿ ಬಿಡಾರ ಹೂಡಿ ನಮ್ಮ ಬಳಿ ವ್ಯಾಪಾರಕ್ಕಾಗಿ ಹವಳ, ಕೇಸರಿ, ಚಿತ್ತಾರದ ಮಕಮಲ್ ಬಟ್ಟೆ ಮತ್ತು ಚಾಕುಗಳು ಇದೆಯೆಂದು ಹೇಳಿದೆವು. ಇಲ್ಲಿಯ ರಾಜನಿಗೂ ತರ್ನಸ್ಸೆರಿ (ತನ್ನಸೇರಿಂ) ರಾಜನಿಗೂ ಯುದ್ಧವಾಗುತ್ತಿರುತ್ತದೆ. ಆದುದರಿಂದ ನಾವು ಬಹಳ ದಿನ ತಂಗಲಿಲ್ಲ. ಕೆಲವು ದಿನಗಳಿದ್ದು ಸಾವಿರ ಮೈಲು ಪ್ರಯಾಣ ಮಾಡಿ ತರ್ಮಸ್ಸೆರಿ ತಲುಪಿದೆವು. ತರ್ಮಸ್ಸೆರಿಯ ರಾಜ ಪೆಗನ್. ಇವನಿಗೂ ನರಸಿಂಗ ರಾಜ ಮತ್ತು ಬಂಘಲ್ಲಾದ (ಬಂಗಾಳದ) ರಾಜನಿಗೂ ಆಗಾಗ ಯುದ್ಧಗಳು ನಡೆಯುತ್ತಲೇ ಇರುತ್ತವೆ. ಇಲ್ಲಿಂದ ಮುಂದೆ ನಾವು ಬಂಘ್ಹೆಲ್ಲಾ (ಬಂಗಾಳಕ್ಕೆ) ಹೋಗಬೇಕೆಂದು ನಿರ್ಧರಿಸಿದೆವು."[೨೮]

೫.೧೯. ಲೆಫ್ಟಿನೆಂಟ್ ಎಮಿಟ್

ಆಂಗ್ಲ ಅಧಿಕಾರಿ ಲೆಫ್ಟಿನೆಂಟ್ ಎಮಿಟ್ ನವೆಂಬರ್ ಮಾಹೆಯ ಕೊನೆಯಲ್ಲಿ ಈ ನಗರಕ್ಕೆ ಭೇಟಿ ನೀಡಿ ಇಲ್ಲಿ ಅವಶೇಷಗಳನ್ನು ತನ್ನ ದಿನಚರಿಯಲ್ಲಿ ಮುಂದಿನಂತೆ ದಾಖಲಿಸಿದ್ದಾನೆ. "ಈ ನಗರವು ತುಂಗಭದ್ರಾ (Tombuddra) ನದಿಯ ದಕ್ಷಿಣ ದಂಡೆಯ ಮೇಲಿದ್ದು, ಆನೆಗೊಂದಿ (Annagondy) ಎದುರು ದಿಕ್ಕಿನಲ್ಲಿದೆ. (ಆನೆಗೊಂದಿ) ತುಂಗಭದ್ರ ನದಿಯ ಉತ್ತರದ ದಡದಿಂದ ಎರಡು ಮೈಲಿ ದೂರದಲ್ಲಿದ್ದು, ಇದೇ ಹಸರಿನ ಜಿಲ್ಲೆಯೊಂದು (ನಗರ) ಇಂದು ಅಸ್ತಿತ್ವದಲ್ಲಿದೆ. ಇದು ಪ್ರಾಚೀನ ನಗರ 'ಬಿಜ್ಜನುಗ್ಗೂರು' ಕಾಲದಲ್ಲಿ ಒಂದು ಜಹಾಗೀರ್ ಆಗಿತ್ತು. ಎರಡು ಶತಮಾನಗಳ ಹಿಂದೆ ಈ ಸಾಮ್ರಾಜ್ಯದ ಅಧೀನಕ್ಕೊಳಪಟ್ಟ ವಿಶಾಲಭಾಗವನ್ನು ಕೆನಾರ(Canahara) ಎಂದು ಕರೆಯಲಾಗುತ್ತಿತ್ತು."

"ಕೊಮಲಾಪುರದ(Comalapura) ಆಗ್ನೇಯ ಭಾಗದ ಕೊಲೆವೆಯ ಅರ್ಧ ಮೈಲಿ ದೂರದವರೆಗೆ ಬೆಟ್ಟ ಮತ್ತು ದೇವಾಲಯಗಳಿಂದ ಬೆಟ್ಟ ಮತ್ತು ದೇವಾಲಯಗಳಿಂದ ಸುತ್ತುವರೆದಿದೆ.

ಅತ್ಯಂತ ಸುಂದರವಾಗಿರುವ ಈ ಪ್ರದೇಶವು ಪೂರ್ವ ಭಾಗದಲ್ಲಿ ಬಲವಾದ ಕಲ್ಲಿನ ಕೊಲವೆಯಿಂದ ಮತ್ತು ಪಶ್ಚಿಮ ಭಾಗದಲ್ಲಿ ನದಿಯು ಎಲ್ಲೆಯಾಗಿ ಸುತ್ತುವರೆದಿದೆ. ಎಂಟು ಮೈಲಿಯಷ್ಟು ಸುತ್ತಳತೆಯಿರುವ ಈ ಪ್ರದೇಶವನ್ನು ಕುರಿತು ನಾನು ಬಹಳವಾಗಿ ಕೇಳಿದ್ದೇನೆ. ಇದರ ಮಧ್ಯಭಾಗವು ಎತ್ತರವಾದ ಹಲವು ಬೆಟ್ಟಗಳಿಂದ ಹಾಗೂ ದೇವಾಲಯಗಳಿಂದ ಸುತ್ತುವರೆದಿದೆ. ಇಲ್ಲಿ ೩೦ ರಿಂದ ೪೫ ಯಾರ್ಡ್‌ನಷ್ಟು ವಿಶಾಲವಾಗಿರುವ ಹಲವು ರಸ್ತೆಗಳನ್ನು ನಾನು ಕಂಡಿದ್ದೇನೆ. ಇಂದು ಇಲ್ಲಿ ಕೆಲವರು ಉತ್ತಮವಾದ ಭತ್ತವನ್ನು ಬೆಳೆಯುತ್ತಾರೆ."

ಹೀಗೆ ಒಂದು ರಸ್ತೆಯ ಅವಶೇಷವನ್ನು ಸಹ ಈತನು ತನ್ನ ದಿನಚರಿಯಲ್ಲಿ ದಾಖಲಿಸಿದ್ದಾನೆ. "ನೈರುತ್ಯ ಮೂಲೆಯಲ್ಲಿರುವ ರಸ್ತೆಯು ಈಶಾನ್ಯ ಭಾಗದೆಡೆಗೆ ಸುಮಾರು ಅರ್ಧ ಮೈಲಿ ದೂರದವರೆಗೂ ಸಾಗಿದೆ. ಇದು ೩೫ ಯಾರ್ಡ್‌ನಷ್ಟು ಅಗಲವಾಗಿದೆ. ಇದರ ಎರಡೂ ಬದಿಯಲ್ಲಿ ಕಂಬಗಳ ಸಾಲಿವೆ. ಅಲ್ಲದೆ ನೈರುತ್ಯ ಮೂಲೆಯ ಕೊನೆಯ ಭಾಗದಲ್ಲಿ ವಿಶಾಲವಾದ ಮತ್ತು ಬೃಹತ್ ದೇವಾಲಯ ಇತ್ತು" ಎಂದು ದಾಖಲಿಸಿದ್ದಾನೆ. (ಇದು ಈಗಿನ ವಿರೂಪಾಕ್ಷ ದೇವಾಲಯ) "ಈ ರಸ್ತೆಯ ಪಶ್ಚಿಮ ಭಾಗದಲ್ಲಿ (ತುಂಗಭದ್ರಾ ನದಿಯ ದಡದಲ್ಲಿ) ಮಾವಿನ ಹಣ್ಣಿನ ತೋಟವಿದೆ. ಇಲ್ಲಿ ಹಲವು ತೊರೆಗಳು (Strearns) ಇವೆ. ಅಲ್ಲದೆ ಇಲ್ಲಿ ಕಾಲುವೆಯ ಭಗ್ನಾವಶೇಷಗಳು ಹರಡಿವೆ. ಈ ಪ್ರದೇಶದ ಹೆಸರೇನೆಂದು ನಾನಾ ಸ್ಥಳೀಯರನ್ನು ವಿಚಾರಿಸಿದಾಗ ಇದು ಆಳು ಪಟ್ಟಣ (Allputna) ಎಂಬುದಾಗಿ ತಿಳಿಸಿದರು."[೨೯]

ನನ್ನ ಸ್ನೇಹಿತ ಕ್ಯಾಪ್ಟನ್ ಕ್ರಿಕ್ ಪ್ಯಾಟ್ರಿಕ್‌ನು ಪರ್ಷಿಯನ್ ಭಾಷೆಯಲ್ಲಿ ರಚಿಸಿರುವಂತೆ "ಹಾಳುಪಟ್ಟಣ ಮತ್ತು ಬಿಜುನಗರ ಎರಡೂ ಒಂದೇ. ಆದರೆ ಇದನ್ನು ಅಲ್ಲಿಯ ಜನರು ಮೂಲ ಹೆಸರಿನಿಂದ ಕರೆಯುತ್ತಿಲ್ಲ. ಕ್ಯಾಪ್ಟನ್ ಬಿಟ್‌ಸನ್ ಎನ್ನುವವನು ಎಮಿಟ್‌ನಿಗಿಂತಲೂ ಅವನು ಸಹ ದಾಖಲಿಸಿದ್ದಾನೆ. ಎಮಿಟ್‌ನು ನೋಡಿದ ಕ್ರಮವೂ ಸರಿಯಾಗಿದ್ದು, ತದನಂತರ ಬಿಜಯನಗರದ ಅವಶೇಷಗಳು ಹೆಚ್ಚು ಹಾಳಾಗಿವೆ" ಎಂದು ಆತ ವಿವರಿಸಿದ್ದಾನೆ.[೩೦] ಜಿಲ್ಲೆಯ ಕೇಂದ್ರದಲ್ಲಿರುವ ಆನೆಗೊಂದಿಯನ್ನು ದಖ್ಖನ್‌ನೊಡನೆ ನೋಡಿರುವುದು ಲೇಖಕನ ಹಿಡಿತಕ್ಕೆ ಸಾಕ್ಷಿಯಾಗಿದೆ.

"ಕ್ರಿ.ಶ.೧೫೬೭ರಲ್ಲಿ ಬಿಜನಗರಕ್ಕೆ ಭೇಟಿ ನೀಡಿದ ಸೀಸರ್ ಫೆಡ್ರಿಕ್‌ನು ೨೪ ಮೈಲಿಗಳ ವಿಸ್ತಾರವಾದ ಈ ನಗರದಲ್ಲಿ ಹಲವು ದೇವಾಲಯಗಳು ಬೆಟ್ಟಗಳು ಇವೆ" ಎಂದು ದಾಖಲಿಸಿದ್ದಾನೆ. ಎಮಿಟ್‌ನು ಸಹ ಪ್ರಾಚೀನವಾದ ಈ ನಗರವು Boundaryಯಿಂದ ಸುತ್ತುವರೆದಿದೆ. ಕಲ್ಲು ಹಾಸಿನ ರಸ್ತೆಗಳು ಕಮಲಾಪುರದವರೆಗೆ ಮುಂದುವರೆದಿದ್ದು, ಅದು ನಗರದ ಎಲ್ಲಿಯವರೆಗೆಮುಂದುವರೆದಿದೆ. ಹೀಗೆ ಹಾದು ಹೋಗುವಾಗ ಹಲವು ದ್ವಾರಗಳಿದ್ದು, ಅವುಗಳಲ್ಲಿ ಒಂದು ದ್ವಾರ ಇಡೀ ನಗರಕ್ಕೆ ಪ್ರಮುಖವಾಗಿತ್ತು ಎಂದು ಈತನು ದಾಖಲಿಸಿದ್ದಾನೆ. ಟಿಪ್ಪುವಿನಿಂದ ಹಿಂದಿರುಗಿಸಲ್ಪಟ್ಟ ಆನೆಗೊಂದಿ ಸರ್ಕಾರವನ್ನು(Circar of Annagondy) ನಾನು ಮನಸ್ಸಿನಲ್ಲಿ ಊಹಿಸಿದ್ದೇನೆ. ಟಿಪ್ಪುವಿನ ಅಧೀನದಲ್ಲಿದ್ದ ಈ ಪ್ರದೇಶ ದೋ ಅಬ್

ಪ್ರದೇಶಲ್ಲಿದ್ದು, ನಿಜಾಮರು ಮರಾಠರಿಂದ ಪಡೆದುಕೊಂಡಿದ್ದು ಅದಕ್ಕೂ ಪೂರ್ವದಲ್ಲಿ ಆನೆಗೊಂದಿಯ ಬಿಜನಗರದ ರಾಜರ ಮೂಲ ಸಂತತಿಯ ನೆಲೆಯಾಗಿತ್ತು. ಅಷ್ಟೇ ಅಲ್ಲದೆ ಮುಂದೆ ಆ ಸಾಮ್ರಾಜ್ಯಕ್ಕೂ ಈ ಪ್ರದೇಶ ಸೇರಿಸಲ್ಪಟ್ಟಿತ್ತು. ಇಲ್ಲಿ ಪ್ರಾಚೀನ ರಾಜಧಾನಿಯ ಹಲವು ಅವಶೇಷಗಳಿವೆ. ಟಿಪ್ಪು ತನ್ನ ಪ್ರತಿಷ್ಠೆಗಾಗಿ ಈ ಪ್ರದೇಶವನ್ನು ಆ ಕಾಲದಲ್ಲಿ ಹಿಡಿದುಕೊಂಡನು. ಈ ಕುರಿತು ನಾನು ಹೆಚ್ಚಿನ ವಿವರಣೆ ನೀಡಿದ್ದೇನೆ. ನಾನು ಇಲ್ಲಿನ ರಹದಾರಿ ಮೊದಲಾದ ವಿವರಗಳನ್ನು 'ವೀವ್ ಆಫ್ ದಿ ಡೆಕ್ಕನ್' ಎಂಬ ಗ್ರಂಥದಲ್ಲಿ ಯಥಾವತ್ತಾಗಿ ದಾಖಲಿಸಿ ಅದನ್ನು ಕ್ರಿ.ಶ.೧೭೯೧ರಲ್ಲಿ ಪ್ರಕಟಿಸಿದ್ದೇನೆ. ಇದರಲ್ಲಿ ಹಲವು ಘಟನೆಗಳನ್ನು ಮತ್ತು ಯುದ್ಧದ ನಂತರ ವಿವರವನ್ನು ನೀಡಲಾಗಿದೆ."[೫೧]

ಹೀಗೆ ಮೇಲಿನ ಅನೇಕ ರಾಯಭಾರಿಗಳು ಅಥವಾ ವಿದೇಶಿ ಬರಹಗಾರರು ಹಂಪಿಯನ್ನು ಹಲವು ಆಯಾಮಗಳಲ್ಲಿ ತಮ್ಮದೇ ಆದ ತಾತ್ವಿಕತೆಯ ಹಿನ್ನೆಲೆಯಲ್ಲಿ ತಮ್ಮ ಬರೆಹಗಳಲ್ಲಿ ನಿರೂಪಿಸಿದ್ದಾರೆ. ವಿಜಯನಗರದ ಗತವೈಭವ, ಸಾಮ್ರಾಜ್ಯ, ಅಲ್ಲಿನ ಸಾಮಾಜಿಕ. ಧಾರ್ಮಿಕ, ರಾಜಕೀಯ, ಆರ್ಥಿಕ ಆಯಾಮಗಳು ಅವರ ಆಲೋಚನೆಯ ಪ್ರತೀಕವಾಗಿವೆ. ಇವರಲ್ಲಿ ಇವರದೇ ಆದ ಒಂದೊಂದು ತಾತ್ವಿಕತೆಯಿದೆ. ಮುಖ್ಯವಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಬಂದು ಹೋಗುವುದು ಅವರಲ್ಲಿನ ಉದ್ದೇಶ, ಮಹತ್ವ ಹಾಗೂ ಧೋರಣೆ ಗುರಿಗಳು ಬೇರೆ ಬೇರೆಯಾಗಿವೆ. ಇವರ ಪ್ರಯಾಣವು ಹಲವು ಕಥನಗಳನ್ನು ಓದಿದಾಗ ಹಲವು ಸಂಶೋಧನೆಗೆ ಎಡೆಮಾಡಿಕೊಟ್ಟಿವೆ. ಹಾಗೆಯೇ ಅವರಲ್ಲಿದ್ದ ಮತ್ತೊಂದು ಮುಖ್ಯವಾದ ಸಂಗತಿಯೆಂದರೆ, ಆಸ್ಥಾನಕ್ಕೆ ಬಂದ ರಾಜರನ್ನು ಭೇಟಿ ಮಾಡಿ ಅವರ ಉದ್ದೇಶಗಳನ್ನು ತಿಳಿಸುವುದು ಹಾಗೂ ಅವರನ್ನು ಮನವೊಲಿಸಿಕೊಳ್ಳುವುದು ಆಗಿದೆ. ವಿಜಯನಗರದ ಪೂರ್ವೋತ್ತರ ಇತಿಹಾಸವನ್ನು ಕಟ್ಟಿಕೊಟ್ಟ ಪ್ರವಾಸಿಗರ ಈ ಬರೆಹಗಳು ಅಪೂರ್ವ ಕಥನಗಳಾಗಿರುವುದು ಒಂದು ವಿಶೇಷ. ಇಂತಹ ಬರೆಹಗಳ ಮೂಲಕ ಕರ್ನಾಟಕವನ್ನು ಅದರ ಮೂಲಕ ವಿಜಯನಗರ ಅಥವಾ ಹಂಪಿಯನ್ನು ತಿಳಿಯುವುದಕ್ಕೆ ಸಹಾಯಕವಾಗಿದೆ. ನಾವು ನಿನ್ನೆಯನ್ನು ಸರಿಯಾಗಿ ತಿಳಿಯದೆ ಇಂದಿನ ವರ್ತಮಾನವನ್ನು ತಿಳಿಯಲಾರೆವು. ಇಂದಿನ ವರ್ತಮಾನ ತಿಳಿಯದೆ ಭವಿಷ್ಯತ್ತನ್ನು ನಿರ್ಮಿಸಿಕೊಳ್ಳಲಾರೆವು. ನಿನ್ನೆ–ಇಂದು–ನಾಳೆಗಳ ಸುಸಾಂಗತ್ಯದಲ್ಲಿ ಜೀವನಪಥವಿದೆ. ಅಂತಹ ಜೀವನಪಥವನ್ನು ತಿಳಿಸಿಕೊಡುವ ಪ್ರವಾಸಿಗರ ಬರೆಹಗಳು ಅಧ್ಯಯನದ ನೇರ ಆಕರಗಳಾಗಿವೆ.

೫.೨. ಪ್ರಮುಖ ಆಧುನಿಕ ವಿದ್ವಾಂಸರು ದೃಷ್ಟಿಯಲ್ಲಿ ಹಂಪಿ

ಹಂಪಿ ಮತ್ತು ವಿಜಯನಗರದ ಕುರಿತ ಇತಿಹಾಸ ಸಂಶೋಧನೆ ಮತ್ತು ಕೃತಿಗಳ ರಚನೆಯನ್ನು ನಮ್ಮ ಭಾರತೀಯ ವಿದ್ವಾಂಸರಿಗೆ ಹೋಲಿಕೆ ಮಾಡಿ ನೋಡಿದರೆ ವಿದೇಶಿ ವಿದ್ವಾಂಸರೇ ಹೆಚ್ಚು ಸಂಶೋಧನೆ ನಡೆಸಿದ್ದಾರೆ ಮತ್ತು ಹೆಚ್ಚು ಕೃತಿಗಳನ್ನು ರಚಿಸಿ ಅತಿ ಮಹತ್ವದ ಕೊಡುಗೆಗಳನ್ನು ಹಂಪಿಗೆ ನೀಡಿದ್ದಾರೆ. ಆರಂಭಿಕ ವಿಜಯನಗರದ ಇತಿಹಾಸ ರಚನೆ

ಒಂದು ಬಗೆಯಲ್ಲಿ ಪೋರ್ಚಗೀಸ್, ಇಟಲಿ, ರಷ್ಯಾ, ಪರ್ಶಿಯಾ, ಮೊದಲಾದ ದೇಶಗಳಿಂದ ಇಲ್ಲಿಗೆ ಆಗಮಿಸಿದ ವಿದೇಶಿ ಪ್ರವಾಸಿಗರಿಂದ ಮೊದಲಿಗೆ ನೆರವೇರಿತು. ಅವರು ಇಲ್ಲಿ ತಾವು ಕಂಡ ಅನೇಕ ಸತ್ಯಗಳನ್ನು, ಇಲ್ಲಿನ ಜನರ ಸ್ಥಿತಿಗತಿಗಳನ್ನು ವ್ಯವಸ್ಥಿತವಾಗಿ ತಮ್ಮ ಬರಹ ಹಾಗು ಪ್ರವಾಸಿ ಕಥನಗಳಲ್ಲಿ ದಾಖಲಿಸಿದ್ದಾರೆ. ಆದರೆ ವಿಜಯನಗರದ ಕುರಿತು ಅನೇಕ ವಿದ್ವಾಂಸರು, ಅಧಿಕಾರಿಗಳು ಬಹು ದಶಕಗಳಿಂದ ವ್ಯವಸ್ಥಿತವಾಗಿ ಸಂಶೋಧನೆ ನಡೆಸಿ ಮಹತ್ವದ ಕೃತಿಗಳನ್ನು ಪ್ರಕಟಿಸಿದರು. ವಿಜಯನಗರ ರಿಸರ್ಚ ಪ್ರಾಜೆಕ್ಟ್ ಸಹ ಅತ್ಯಂತ ಸ್ಮರಣೀಯ ಕೆಲಸ ಮಾಡಿತು. ಇವರ ಬರಹಗಳಿಲ್ಲದೆ ಹೋಗಿದ್ದರೆ ಪ್ರಾಯಶಃ ವಿಜಯನಗರದ ಇತಿಹಾಸ ಅಧ್ಯಯನ ಇಂದಿಗೂ ಮಸುಕಾಗಿರುತ್ತಿದ್ದಿತು. ಈ ವಿದೇಶಿ ಮೂಲದ ವಿದ್ವಾಂಸರ ಪ್ರಯತ್ನ ಹಂಪಿಯ ಮೇಲೆ ಹೊಸ ಬೆಳಕು ಬೀರಲು ಯಾವ ರೀತಿ ಸಹಾಯಕವಾಗಿದೆ ಎನ್ನುವುದನ್ನು ಇಲ್ಲಿ ಅವಲೋಕಿಸುವುದು ಮುಖ್ಯವೆನಿಸುತ್ತದೆ.

ಬಳ್ಳಾರಿ ಜಿಲ್ಲೆಯ ಇತಿಹಾಸ ದೃಷ್ಟಿಯಿಂದ ವಿಜಯನಗರ ಸಾಮ್ರಾಜ್ಯ ಮತ್ತು ಬ್ರಿಟಿಷರ (ಕಲೆಕ್ಟರ್‌ಗಳ) ಆಳ್ವಿಕೆ ಬಹು ಮುಖ್ಯವಾಗಿವೆ. ಹಂಪಿ ಭಾಗವನ್ನು ವಿಜಯನಗರದ ಅವನತಿಯ ನಂತರ ಬಿಜಾಪುರದ ಸುಲ್ತಾನರು, ಮರಾಠರು, ಮೊಗಲರು, ಪಾಳೇಯಗಾರರು, ಹೈದರ್ ಮತ್ತು ಟಿಪ್ಪು ಆಳ್ವಿಕೆ ಮಾಡಿದರು. ೧೭೯೨ರಲ್ಲಿ ಟಿಪ್ಪುವಿನ ನಂತರ ಇದರ ಅರ್ಧ ಭಾಗ ಮರಾಠರ (ಸಂಡೂರು) ಅಧೀನಕ್ಕೆ ಒಳಗಾಯಿತು. ೧೭೯೯ ಉಳಿದರ್ಧ ಭಾಗ ಹೈದರಾಬಾದಿನ ನಿಜಮನ ಅಧೀನಕ್ಕೆ ಒಳಗಾಯಿತು. ೧೮೦೦ರಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಬಳ್ಳಾರಿ ಭಾಗವನ್ನು ದತ್ತಿ ಜಿಲ್ಲೆಯಾಗಿ ನಿಜಾಮ ಬಿಟ್ಟುಕೊಟ್ಟನು. ಅಂದು ಮದ್ರಾಸ್ ಪ್ರೆಸಿಡೆನ್ಸಿಯಲ್ಲಿದ್ದ ೨೨ ಜಿಲ್ಲೆಗಳಲ್ಲಿ ಬಳ್ಳಾರಿ(೪ನೆಯದು)ಒಂದಾಗಿದ್ದು, ಅಲ್ಲಿ ಕಲೆಕ್ಟರುಗಳ ಆಳ್ವಿಕೆ ೧೮೦೦-೧೯೪೭ರ ವರೆಗೆ ಮುಂದುವರೆಯಿತು. ೧೧೨ ಜನ ಕಲೆಕ್ಟರುಗಳು ಇಲ್ಲಿ ಆಳ್ವಿಕೆ ಮಾಡಿದರು.[೨] ಇದು ಹಂಪಿಯ ಇತಿಹಾಸ ಸಂಶೋಧನೆ ಮತ್ತು ಸ್ಮಾರಕಗಳರಕ್ಷಣೆ, ದೇವಾಲಯಗಳ ಪೂಜೆ ಮತ್ತು ಪುನಸ್ಕಾರದ ಪುನರ್ ಜೀವನದ ಹಿನ್ನೆಲೆಯಲ್ಲಿ ಹಂಪಿಗೆ ಈ ಆಳ್ವಿಕೆ ವರದಾನವಾಯಿತು. ವಿಲಿಯಂ ಜೋನ್ಸನ್ ರಾಯಲ್ ಏಷಾಯಟಿಕ್ ಸೂಸೈಟಿಯಿಂದ ಮತ್ತು ಆಂಗ್ಲ ಅಧಿಕಾರಿಗಳಾದ ಬುಕಾನಿನ್, ಕನ್ನಿಂಗ್ ಹ್ಯಾಂ, ರಾರ್ಬಟ್ ಬ್ರೂಸ್‌ಪುಟ್, ಪ್ರಿನ್ಸಿಪ್, ರೈಸ್, ಫ್ಲೀಟರ ಸಂಶೋಧನೆಗಳಿಂದ ಪ್ರಭಾವಿತರಾದ ಕಲೆಕ್ಟರುಗಳು ಈ ಮೇಲೆ ಹೇಳಿದ ಅಂಶಗಳಿಗೆ ಒತ್ತು ಕೊಟ್ಟು ಇಲ್ಲಿ ಆಳ್ವಿಕೆ ಮಾಡಿದರು. ಅವರಲ್ಲಿ ಪ್ರಥಮ ಕಲೆಕ್ಟರ್ ಆಗಿದ್ದ ರಾಬರ್ಟ್ ಸಿವೆಲ್ ಹಂಪಿಯ ಇತಿಹಾಸವನ್ನು ಬೆಳಕಿಗೆ ತರುವ ಪ್ರಯತ್ನವನ್ನು ಮೊದಲಬಾರಿಗೆ ಮಾಡಿದರು. ಅನಂತರ ಮಡೋಸ್ ಟೇಲರ, ಪರ್ಗೂಸನ್ ಹಂಪಿಯ ಕುರಿತ ಮಹತ್ವದ ಕೃತಿ ಬರೆದರು. ಅದೇ ರೀತಿ ಇಲ್ಲಿ ಆಳ್ವಿಕೆ ಮಾಡಿದ ಸಿ.ಎ. ಗಾಲ್ಪನ್, ರಾರ್ಬಟ್ ಸನ್, ಮಿ. ಹಂಟ್ಲೇ ಗೊರ್ಡಾನ್, ಮಿ.ಜೆ.ಎಚ್, ಮಾಸ್ಪರ್ ಮೊದಲಾದವರು ಇಲ್ಲಿನ ಸ್ಮಾರಕಗಳ ರಕ್ಷಣೆಗೆ ಮೊದಲು ಕ್ರಮ ಕೈಗೊಂಡರು. ಅದೇ ರೀತಿ ಇಲ್ಲಿನ ಅಧಿಕಾರಿಗಳಲ್ಲಿ ಒಬ್ಬನಾದ ರಾರ್ಬಟ್ ಸನ್

ಹಂಪಿಯ ವಿರುಪಾಕ್ಷ ದೇವಾಲಯದಲ್ಲಿ ರಥೋತ್ಸವ ಆಚರಿಸಲು ಅನುಮತಿ ನೀಡಿದ.೩೩ ಈ ರೀತಿ ಬ್ರಿಟಿಷ್ ಆಳ್ವಿಕೆ ಹಂಪಿಗೆ ಒಂದು ವರದಾನವಾಯಿತು. ಈ ಹಿನ್ನೆಲೆಯಲ್ಲಿ ಹಂಪಿಗೆ ವಿದೇಶಿ ವಿದ್ವಾಂಸರ ಕೊಡುಗೆ ಏನು ಎನ್ನುವುದನ್ನು ವಿವರಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಬಳ್ಳಾರಿ ಜಿಲ್ಲಾಧಿಕಾರಿಯಾಗಿದ್ದ ರಾಬರ್ಟ್ ಸಿವೆಲ್ ಅವರು ಗೋವಾದ ಪತ್ರಾಗಾರಗಳಲ್ಲಿ ಮತ್ತು ಪೋರ್ಚಗಲ್ಲಿನ ನ್ಯಾಷನಲ್ ಲೈಬ್ರರಿಯಿಂದ ಹೆಚ್ಚಿನ ಮಾಹಿತಿ ಸಂಗ್ರಹಿಸಿ ವಿದೇಶಿಗರ ವಿಚಾರಗಳನ್ನಾಧರಿಸಿ ಪ್ರಥಮ ಬಾರಿಗೆ ವಿಜಯನಗರದ ಇತಿಹಾಸವನ್ನು ಕುರಿತು 'ದಿ ಫರ್ಗಾಟನ್ ಎಂಪೈರ್' ಎಂಬ ಕೃತಿಯನ್ನು ರಚಿಸಿದನು. ಅಲ್ಲಿಂದ ಆರಂಭವಾದ ವಿದೇಶಿಯರ ಈ ಪ್ರಯತ್ನ ಕಳೆದ ವರ್ಷ ಜಾರ್ಜ ಮಿಶಲ್‌ರು ಪ್ರಕಟಿಸಿದ 'ದ ಸ್ಟೋನ್ ಸ್ಟೋರಿ' ಕೃತಿಯವರೆಗೆ ಹಬ್ಬಿದೆ. ಅದು ನಿರಂತರವಾಗಿ ಇಂದಿಗೂ ಮುಂದುವರೆಯುತ್ತಲೇ ಇದೆ. ಅವರಲ್ಲಿ ಇಲ್ಲಿನ ಶಾಸನಗಳನ್ನು ಆಧಾರವಾಗಿಟ್ಟು ಕೆಲಸ ಮಾಡಿದ Breckenridge(೧೯೮೫) Kulke(೧೯೮೫) ludden(೧೯೮೫) ನಿಜಕ್ಕೂ ಮಹತ್ವದ ಕಾರ್ಯಗಳಾಗಿವೆ. ಅನಂತರ ಇಲ್ಲಿನ ಸ್ಮಾರಕಾವಶೇಷಗಳನ್ನು ಆಧಾರವಾಗಿಟ್ಟುಕೊಂಡು ಕೆಲಸ ನಿರ್ವಹಿಸಿದ ಅನೇಕ ವಿದ್ವಾಂಸರಿದ್ದಾರೆ. ಅವರಲ್ಲಿ ಪ್ರಮುಖರಾದವರೆಂದರೆ Sewell (೧೯೦೦, ೧೯೩೨), Longhurst (೧೯೧೭), Ludden(೧೯೮೫) Stein "The State and Agrarian Order"(೧೯೭೩) Chander(೧೯೮೭) Richard(೧೯೩೩) menon, Kelsall(1972) Francis (1904)-John.m.Fritz, George Michell, Carla M.Sinopoli, George Michell, Anila Verghese, Dominic.J.Davison-Jenkins ಮೊದಲಾದವರು ಪ್ರಮುಖರಾಗಿದ್ದಾರೆ. ಹಂಪಿ ಮತ್ತು ವಿಜಯನಗರ ಕುರಿತು ಕೆಲಸ ಮಾಡಿದ ಎಲ್ಲಾ ವಿದ್ವಾಂಸರ ನಿರಂತರ ಪ್ರಯತ್ನದಿಂದ ಹಲವಾರು ಲೇಖನಗಳು, ಸಂಶೋಧನಾಕೃತಿಗಳು ಇಲ್ಲಿಯವರೆಗೆ ಹೊರಬಂದಿವೆ. ಇದರಿಂದ ಹಂಪಿ ಇಡೀ ಜಗತ್ತಿಗೆ ಪರಿಚಯವಾಗಲು ಸಾಧ್ಯವಾಯಿತು. ಅದು ಮುಂದೆ ವಿಶ್ವಮಾನ್ಯತೆ ಗಳಿಸಿಕೊಳ್ಳಲು ಮತ್ತು ಹಂಪಿ ವಿಶ್ವಪರಂಪರಾ ಪಟ್ಟಿಯಲ್ಲಿ ಸೇರ್ಪಡೆಯಾಗಲು ಒಂದು ಬಗೆಯಲ್ಲಿ ಕಾರಣವಾಗಿದ್ದನ್ನು ನಾವು ಮರೆಯುವಂತಿಲ್ಲ. ಆದ್ದರಿಂದ ಆರಂಭದಿಂದ ಇಲ್ಲಿಯವರೆಗೆ ಪ್ರಕಟವಾಗಿರುವ ಎಲ್ಲಾ ಲೇಖನ ಮತ್ತು ಪುಸ್ತಕಗಳನ್ನು ಇಲ್ಲಿ ದಾಖಲಿಸುವುದು ಕಷ್ಟ ಸಾಧ್ಯ. ಅಧ್ಯಯನದ ಅನುಕೂಲಕ್ಕಾಗಿ ಇಲ್ಲಿಯವರೆಗೆ ಹಂಪಿಯ ಇತಿಹಾಸ ಮತ್ತು ಪುರಾತತ್ವ ಕ್ಷೇತ್ರದ ಮೇಲೆ ಪ್ರಕಟವಾದ ಲೇಖನ ಮತ್ತು ಪುಸ್ತಕಗಳಲ್ಲಿ ಅತಿ ಪ್ರಾಮುಖ್ಯ ಪಡೆದ ಲೇಖನ ಮತ್ತು ಕೃತಿಗಳನ್ನು ಇಲ್ಲಿ ದಾಖಲಿಸಲು ಪ್ರಯತ್ನಿಸಲಾಗಿದೆ.

೫.೧.೧೦. ವಿದೇಶಿ ವಿದ್ವಾಂಸರ ಪ್ರಮುಖ ಕೃತಿಗಳು ಮತ್ತು ಲೇಖನಗಳು

ಹಂಪಿ ಮತ್ತು ವಿಜಯನಗರ ಇಡೀ ವಿಶ್ವದಲ್ಲಿ ಜನಪ್ರಿಯವಾಗಲು ಇಲ್ಲಿರುವ ಅಸಂಖ್ಯಾತ ಸ್ಮಾರಕಗಳು ಮತ್ತು ಇಲ್ಲಿನ ವಿಶಿಷ್ಟ ನೈಸರ್ಗಿಕ ತಾಣಗಳು ಕಾರಣವಾಗಿವೆ. ಈ ಆಕರ್ಷಣೆಯಿಂದಾಗಿಯೇ ಹಂಪಿಗೆ ಬರುವ ಅನೇಕ ಪ್ರವಾಸಿಗರು ಇಲ್ಲಿನ ವೈಶಿಷ್ಟ್ಯತೆಗಳಿಂದ

ಮೂಕ ವಿಸ್ಮಿತರಾಗುತ್ತಾರೆ. ಈ ವೈಶಿಷ್ಟ್ಯತೆ ಅನೇಕ ಬರಹಗಾರರಿಗೆ, ಸಂಶೋಧಕರಿಗೆ ಈ ಪ್ರದೇಶದ ಕುರಿತು ಕೆಲಸ ಮಾಡಲು ಪ್ರೇರೇಪಣೆಯನ್ನು ಒದಗಿಸಿದೆ. ಇದರಿಂದಾಗಿ ವಿದೇಶಿ ಮೂಲದ ಹಲವು ವಿದ್ವಾಂಸರು ಬೇರೆ ಬೇರೆ ದೇಶಗಳಿಂದ ಇಲ್ಲಿಗೆ ಆಗಮಿಸಿ ಹಂಪಿಯ ಕುರಿತು ಅಧ್ಯಯನ ಮಾಡುತ್ತಾ ಸಂಶೋಧನೆಯಲ್ಲಿ ನಿರತರಾದರು. ಇದರೊಂದಿಗೆ ಇಲ್ಲಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸಿದರು. ವಿದೇಶಿ ಮೂಲದ ವಿದ್ವಾಂಸರು ಇಲ್ಲಿ ಅಧ್ಯಯನ ಮಾಡಲು ಹಲವು ಅಂಶಗಳು ಕಾರಣವಾಗಿರುವುದನ್ನು ಗುರುತಿಸಲಾಗಿದೆ. ಒಂದು– ದೇಶಿ ವಿದ್ವಾಂಸರ ಜೊತೆಗೆ ವಿದೇಶಿ ವಿದ್ವಾಂಸರಿಗೆ ಇದ್ದ ಅಥವಾ ಇರುವ ರೋಮ್ಯಾಂಟಿಕ್ ಇಂಟರೆಸ್ಟ್; ಎರಡು– ಅಧ್ಯಯನಕಾರರಲ್ಲಿ ಇರುವ ಅಥವಾ ಇದ್ದ ಸ್ವಯಂ ಅಧ್ಯಯನ ಅಥವಾ ಸಂಶೋಧನ ಆಸಕ್ತಿ; ಮೂರು– ಸರ್ ವಿಲಿಯಂ ಜೋನ್ಸ್ ಮತ್ತು ಅವರ ರಾಯಲ್ ಏಷ್ಯಾಟಿಕ್ ಸೊಸೈಟಿಯ ಪ್ರಭಾವ ಮತ್ತು ಅದರ ಆಶಯದಂತೆ ಪೌರ್ವಾತ್ಯ ನಾಡುಗಳ ಅಧ್ಯಯನ ಮಾಡಬೇಕೆಂಬ ಕುತೂಹಲ; ನಾಲ್ಕು– ಬ್ರಿಟಿಷ್ ಆಳ್ವಿಕೆ (ಕಲೆಕ್ಟರ್) ಇದ್ದ ಕಾಲದಲ್ಲಿ ಇಲ್ಲಿನ ಅಧಿಕಾರಿಗಳು ಅಥವಾ ತಜ್ಞರು ಸ್ಥಳೀಯ ಇತಿಹಾಸ ಮತ್ತು ಸಂಸ್ಕೃತಿಯನ್ನು ಅಧ್ಯಯನ ಮಾಡಿ ಅದನ್ನು ಸಂರಕ್ಷಿಸಬೇಕೆಂಬ ಬ್ರಿಟಿಷ್ ಸರ್ಕಾರದ ನಿಲುವು. (ಇದು ಅವರ ಆಳ್ವಿಕೆಗೂ ಅತ್ಯಂತ ಅವಶ್ಯಕವಾಗಿತ್ತು.) ಹಾಗೂ ಐದು– ಆಯಾ ದೇಶಗಳು ಮತ್ತು ಅಲ್ಲಿನ ಸರಕಾರಗಳು ಸಂಶೋಧಕರಿಗೆ ನೀಡಿದ ಅಥವಾ ನೀಡುವ ಬೆಂಬಲ ಹಾಗೂ ಹಣಕಾಸಿನ ನೆರವು(ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ ಧನ, ಇತರೆ).

ಈ ಮೇಲಿನ ಕಾರಣಗಳಿಂದಾಗಿ ಅನೇಕರು ಹಂಪಿಯ ಮೇಲೆ ಹಲವು ಅಧ್ಯಯನಗಳನ್ನು ಮಾಡಿದ್ದಾರೆ. ಇದರಿಂದಾಗಿ ಅಸಂಖ್ಯಾತ ಸಂಶೋಧನೆ ಮತ್ತು ಅಧ್ಯಯನಗಳು ಹಂಪಿಯನ್ನು ಕುರಿತು ನಡೆದವು. ಇದರಿಂದಾಗಿ ಹಂಪಿ ಜಗತ್ತಿನಲ್ಲಿ ಜನಪ್ರಿಯವಾಯಿತು. ಬಹುಶಃ ಹಂಪಿಯಲ್ಲಿ ಬಹುದಶಕಗಳಿಂದ ರಾಜ್ಯ ಪುರಾತತ್ವ ಇಲಾಖೆಯ ಸಹಯೋಗದಲ್ಲಿ ನಡೆದ 'ವಿಜಯನಗರ ರಿಸರ್ಚ್ ಪ್ರಾಜೆಕ್ಟ್'ನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಪ್ರಾಯಶಃ ಭಾರತದ ಯಾವ ನಗರಗಳ ಅಥವಾ ರಾಜವಂಶಗಳ ಮೇಲೆ ಇಷ್ಟೊಂದು ಅಧ್ಯಯನ ಇಲ್ಲಿಯವರೆಗೆ ನಡೆದಿಲ್ಲ. ಈ ಕಾರಣಕ್ಕಾಗಿ ಹಂಪಿ ಕುರಿತಂತೆ ಹಲವಾರು ಮಹತ್ವದ ಕೃತಿಗಳು ಮತ್ತು ಲೇಖನಗಳು ಇಲ್ಲಿಯವರೆಗೆ ರಚನೆಯಾಗಿವೆ. ಈ ರೀತಿ ರಚಿತವಾದವುಗಳಲ್ಲಿ ಕೆಲವು ವಿಶ್ವ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾದ ಲೇಖನಗಳು, ಕೃತಿಗಳು ಇವೆ. ಅವುಗಳಲ್ಲಿ ಹಂಪಿಯ ಚರಿತ್ರೆ ಮತ್ತು ಪುರಾತತ್ವಕ್ಕೆ ಸಂಬಂಧಿಸಿದ ಆಯ್ದ ಕೆಲವು ಮುಖ್ಯ ಲೇಖನ ಮತ್ತು ಕೃತಿಗಳ ವಿವರವನ್ನು ಇಲ್ಲಿ ನೀಡಲಾಗಿದೆ. ಅವಶ್ಯವಿದ್ದಡೆ ಕೆಲವು ಲೇಖನ ಮತ್ತು ಗ್ರಂಥಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

೧. ಅಲೆಗ್ಸಾಂಡರ್ ಮ್ಯಾಕ್, 'ದಿ ಟೆಂಪಲ್ಸ್ ಡಿಸ್ಟ್ರಿಕ್ಟ್ ಆಫ್ ವಿಠ್ಠಲಾಪುರ', ನಿವ್ ಲೈಟ್ ಆನ್ ಹಂಪಿ ರಿಸೆಂಟ್ ರಿಸರ್ಚ್ಸ್ ಅಟ್ ವಿಜಯನಗರ, ಎಡಿಟ್ಸ್: ಜಾನ್ ಎಂ.ಫ್ರಿಟ್ಜ್ ಅಂಡ್

ಜಾರ್ಜ್ ಮೈಕಲ್, ಮಾರ್ಗ್ ಪಬ್ಲಿಕೇಶನ್ಸ್, ಬಾಂಬೆ, ೨೦೦೧, ಪು.೨೪,೩೯. ದಿಸ್ ಆರ್ಟಿಕಲ್ ಡೀಲ್ಸ್ ವಿಥ್ ವಿಠ್ಠಲಾಪುರ, ಎ ಸಬ್‌ಅರ್ಬ್ ಆಫ್ ವಿಜಯನಗರ, ವಿಚ್ ಸರ್ವ್ಡ್ ಆ್ಯಸ್ ಸೆಂಟರ್ ಆಫ್ ಪಿಲಗ್ರಿಮೇಜ್ ಅಂಡ್ ಆಲ್‌ಸೋ ಆ್ಯಸ್ ಎ ಡೇ ಟು ಬ್ಯುಸಿನೆಸ್ ಸೆಂಟರ್ ಫಾರ್ ಲೋಕಲ್ ರೆಸಿಡೆಂಟ್ಸ್. ದ ಬೌಂಡ್ರೀಸ್ ಅಂಡ್ ಫ್ಯೂಚರ್ಸ್ ಆಫ್ ವಿಠ್ಠಲಾಪುರ, ದ ಅಲ್ವರ್ ಟೆಂಪಲ್ಸ್ ವಿಚ್ ಆರ್ ಆರ್ಕಿಟೆಕ್ಚ್ಯುರಲಿ ವೆರಿ ಸಿಗ್ನಿಫಿಕೇಂಟ್ ಆರ್ ಡಿಸ್ಕಸ್ಡ್. ದ ರಸಿಡೆಂಟ್ಸ್ ಅಂಡ್ ದೇರ್ ಸ್ಟ್ರಕ್ಚ್ಯುರಲ್ ರಿಮೇನ್ಸ್ ಆರ್ ಆಲ್‌ಸೋ ನೋಟೆಡ್. ದ ಬ್ಯುಸಿ ಬಜಾರ್ಸ್ ಅಂಡ್ ದ ಅಗ್ರಿಕಲ್ಚರಲ್ ಆಕ್ಟಿವಿಟೀಸ್ ಎಕ್ಸ್‌ಟೆಂಡೆಡ್ ಅರೌಂಡ್ ದ ವಿಠ್ಠಲ ಟೆಂಪಲ್.

೨. ಅನಿಲ್ ವರ್ಗೀಸ್, 'ಮಂಡಪಾಸ್ ಇನ್ ವಿಜಯನಗರ ಟೆಂಪಲ್ಸ್', ಜರ್ನಲ್ಸ್ ಆಫ್ ದ ಏಸಿಯಾಟಿಕ್ ಸೋಸೈಟಿ ಆಫ್ ಬಾಂಬೆ, ೭(ನಿವ್ ಸೀರಿಯಸ್).

೩. ಅನಿಲ್ ವರ್ಗಿಸ್ ಅಂಡ್ ಡಿಟೇರ್ ಎಗ್ನೇರ್, 'ಎ ಮೋನಾಟಿಕ್ಸ್ ಕಾಂಪ್ಲೆಕ್ಸ್ ಇನ್ ವಿಠ್ಠಲಾಪುರ' ಹಂಪಿ-ವಿಜಯನಗರ, ಜರ್ನಲ್ಸಚ ಆಫ್ ಸೌಥ್ ಏಶಿಯನ್ ಸ್ಟಡೀಸ್, ವಾಲ್ಯೂಮ್. ೪, ೧೯೯೮, ಪುಟ.೧೨೭-೧೪೦.

೪. ಅನಿಲ್ ವರ್ಗೀಸ್, 'ಕೃಷ್ಣದೇವರಾಯಸ್ ಮೋನೊಮೆಂಟ್ಸ್ ಆಫ್ ವಿಕ್ಟರಿ', ದ ಕೃಷ್ಣ ಟೆಂಪಲ್ ಅಟ್ ವಿಜಯನಗರ, ಜರ್ನಲ್ಸ್ ಆಫ್ ದ ಏಸಿಯಾಟಿಕ್ ಸೊಸೈಟಿ ಆಫ್ ಬಾಂಬೆ, ೭೧,(ನ್ಯೂ ಸೀರಿಸ್), ೧೯೭-೨೦೭, ೧೯೯೬ ಸಿ.

೫. ಅನಿಲ್ ವರ್ಗೀಸ್, 'ದ ತಿರುವೆಂಗಲನಾಥ ಟೆಂಪಲ್ ಇನ್ ಕೃಷ್ಣಾಪುರ, ವಿಜಯನಗರ, ಪ್ರೋಗ್ರೆಸ್ ಆಫ್ ರಿಸರ್ಚ್ ೧೯೮೮-೯೧, ಎಡಿಟ್ಸ್: ಡಿ.ವಿ.ದೇವರಾಜ್ ಅಂಡ್ ಚನ್ನಬಸಪ್ಪ, ಎಸ್.ಪಾಟೀಲ್, ಡೈರಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಮೈಸೂರು, ೧೯೯೬, ಪುಟ.೧೭೭-೧೯೧. ದಿಸ್ ಆರ್ಟಿಕಲ್ ಸ್ಪೀಕ್ಸ್ ಅಬೌಟ್ ದ ತಿರುವೆಂಗಲನಾಥ ಟೆಂಪಲ್ಸ್ ಸಿಚ್ಯುಯೇಟೆಡ್ ನಿಯರ್ ದ ಉದ್ದಾನ್ ವೀರಭದ್ರ ಟೆಂಪಲ್ ಅಟ್ ಕೃಷ್ಣಾಪುರಪೇಟೆ. ದಿಸ್ ವಾಸ್ ಬಿಲ್ಟ್ ಇನ್ ೧೫೪೫ ಎ.ಡಿ. ಇಟ್ಸ್ ಆರ್ಕಿಟೆಕ್ಚರ್ ಸ್ಕೆಲ್ಪ್‌ಚರ್ ಅಂಡ್ ಐಕಾನೋಗ್ರಫಿ ಆರ್ ಎಕ್ಸ್‌ಪ್ಲೈನ್ಡ್. ದ ಎವೊಲ್ಯೂಷನ್ ಆಫ್ ಟೆಂಪಲ್ ಆರ್ಕಿಟೆಕ್ಚರ್ ಅಂಡ್ ದ ರಿಲಿಜಿಯಸ್ ಸಿಚುವೇಶನ್ ಪ್ರಿಯರ್ ಟು ಅಂಡ್ ಆಫ್ಟರ್ ದ ಡಿಸ್ಟ್ರಕ್ಷನ್ ಆಫ್ ದ ಸಿಟಿ ಆಫ್ ವಿಜಯನಗರ ಆರ್ ಡಿಸ್ಕಸ್ಡ್ ಅರ್.

೬. ಅನಿಲ್ ವರ್ಗೀಸ್, 'ದ ವಿರೂಪಾಕ್ಷ ಟೆಂಪಲ್ ಆಫ್ ಎ.ಡಿ.೧೩೯೮ ಆನ್ ಹೇಮಕೂಟ ಹಿಲ್', ಹಂಪಿ-ವಿಜಯನಗರ, ಜರ್ನಲ್ ಆಫ್ ದ ಏಸಿಯಾಟಿಕ್ ಸೊಸೈಟಿ ಆಫ್ ಬಾಂಬೆ, ೭೨(ನ್ಯೂ ಸಿರೀಸ್), ೧೯೯೭ ಎ, ಪುಟ.೧೫೫-೧೬೪.

೭. ಅನಿಲ್‌ವರ್ಗೀಸ್, ಸನ್ನಾಡೊಲಪ್ಕಿಲ್ಲ ೧೯೯೮. ಬಿಬಿಲೋಗ್ರಫಿ ಆನ್ ಹಂಪಿಆರ್ಕಿಟೆಕ್ಚರ್ ಆರ್ಟಿಕಲ್ಸ್ ಇಂದಿರಾಗಾಂಧಿ ನ್ಯಾಶನಲ್ ಸೆಂಟರ್ ಫಾರ್ ದ ಆರ್ಟ್ಸ್, ಹೊಸದೆಲ್ಲಿ-೨.

೮. ಅಣ್ಣ ದಲ್ಲಪಿಕೊಲ್ಲ ಅಂಡ್ ಅನಿಲ್ ವರ್ಗೀಸ್, 'ದ ರಾಮಾನುಜಾ ಟೆಂಪಲ್' ಅಟ್ ವಿಠ್ಠಲಾಪುರ, ಹಂಪಿ ವಿಜಯನಗರ, ಸೌಥ್ ಏಸಿಯನ್ ಸ್ಟಡೀಸ್.

೯. ಅಣ್ಣ ದಲ್ಲಪಿಕೊಲ್ಲ ಅಂಡ್ ಅನಿಲ್ ವರ್ಗೀಸ್, 'ಮಂಡಪಾಸ್ ಇನ್ ವಿಜಯನಗರ ಟೆಂಪಲ್ಸ್, ಜರ್ನಲ್ಸ್ ಆಫ್ ದ ಏಸಿಯಾಟಿಕ್ ಸೊಸೈಟಿ ಆಫ್ ಬಾಂಬೆ, ವಾಲ್ಯೂಮ್, ೭೩, ೧೯೯೮, ಪುಟ.೨೦೭-೨೨೨.

೧೦.ಪ್ರಭಾಕರ್ ಆರ್.ಪಿ., ವಿಎಂಎಸ್-೩೭೦, ಎಂ ಕಂಬೈನ್ಡ್ ಫಾರ್ಟಿಫಿಕೇಶನ್ ವಾಲ್ ಅಂಡ್ ರಿಸರ್ವಿಯರ್ ಎಂಬ್ಯಾಂಕ್‌ಮೆಂಟ್ ಇನ್ ದಿ ವಿಜಯನಗರ ಮೆಟ್ರೋಪೊಲಿಶನ್ ರೀಸನ್, ವಿಜಯನಗರ, ಪ್ರೋಗ್ರೆಸ್ ಆಫ್ ರಿಸರ್ಚ್ ೧೯೯೧-೯೨, ಎಡಿಟ್ಸ್: ದೇವರಾಜ್ ಡಿ.ವಿ. ಅಂಡ್ ಪಾಟೀಲ್ ಸಿ.ಎಸ್. ಡೈರೆಕ್ಟೊರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಮೈಸೂರು.

೧೧.ಚಾರ್ಲ್ಲ ಎಂ.ಸಿನೋಪೋಲಿ, 'ಡಿಫೈನಿಂಗ್ ಎ ಸಕ್ರೇಡ್ ಲ್ಯಾಂಡ್‌ಸ್ಕೇಪ್',ಟೆಂಪಲ್ ಆರ್ಕಿಟೆಕ್ಚರ್ ಅಂಡ್ ಡಿವೈನ್ ಇಮೇಜಸ್ ಇನ್ ದ ವಿಜಯನಗರ ಸಬ್‌ಅರ್ಬ್ಸ್, ಸೌತ್ ಏಸಿಯನ್ ಆರ್ಕಲಾಜಿ ೧೯೯೧, ಪ್ರೊಸಿಡಿಂಗ್ಸ್ ಆಫ್ ದ ಎಲೆವೆಂಥ್ ಇಂಟರ್‌ನ್ಯಾಶನಲ್ ಕಾನ್ಫರೆನ್ಸ್ ಆಫ್ ದ ಅಸೋಸಿಯೇಶನ್ ಆಫ್ ಸೌಥ್‌ಏಸಿಯನ್ ಆರ್ಕಲಾಜಿಸ್ಟ್ ಇನ್ ವೆಸ್ಟರ್ನ್ ಯುರೋಪ್ ಬೆರ್ಲಿನ್, ೧-೫ ಜುಲೈ ೧೯೯೧, ಎಡಿಟ್ಸ್. ಅಡಲ್‌ಬೆಟ್ ಜೆ. ಗಾಯ್ಲ ಅಂಡ್ ಜೆರ್ಡ್ ಜೆ.ಆರ್.ಮೆವಿಸ್ಸೆನ್, ಸ್ಟಟ್‌ಗರ್ಟ್, ಫ್ರಾನ್ಜ್ ಸ್ಟೆನೆರ್ ವರ್ಲಾಗ್, ೧೯೯೩, ಪುಟ.೬೨೫-೬೩೬.

೧೨.ಚಾರ್ಲ್ಲ ಎಂ.ಸಿನೋಪೋಲಿ, ಆ್ಯನ್ ಅರ್ಲಿ ವಿಜಯನಗರ ಟೆಂಪಲ್. ಕಾಂಪ್ಲೆಕ್ಸ್ ಇನ್ ದ ವಿಜಯನಗರ ಮೆಟ್ರೋಪೊಲಿಟನ್ ರೀಜನ್, ಶ್ರೀ ನಾಗಾಭಿನಂದನಂ, ಡಾ. ಎಂ.ಎಸ್. ನಾಗರಾಜ ರಾವ್ ಫೆಸ್ಟ್‌ಸ್ಕ್ರಿಫ್ಟ್, ಎಡಿಟ್ಸ್: ಎಲ್. ಕೆ. ಶ್ರೀನಿವಾಸನ್ ಅಂಡ್ ಎಸ್.ನಾಗರಾಜು, ಬೆಂಗಳೂರು, ೧೯೯೫, ಪುಟ. ೨೬೧-೨೬೮. ದಿಸ್ ಆರ್ಟಿಕಲ್ ಸ್ಪೀಕ್ ಅಬೌಟ್ ದ ಟೆಂಪಲ್ ಕಾಂಪ್ಲೆಕ್ಸ್ ಇನ್ ದ ಮೆಟ್ರೋಪೊಲಿಟನ್ ವಿಜಯನಗರ ರೀಜನ್. ದ ಡೀಟೈಲ್ಸ್ ಆಫ್ ದ ಟೆಂಪಲ್ಸ್ ಅಂಡ್ ಇಟ್ಸ್ ಅರ್ಲಿ ಫ್ಯೂಚರ್ಸ್ ಆರ್ ಹೈಲೆಟೇಟಡ್. ಚಂದ್ರಶೇಖರಯ್ಯ ಬಿ.ಎಂ., ವಿಠ್ಠಲ್ ಟೆಂಪಲ್, ಫ್ಲೋರಲ್ ಮ್ಯಾಗ್ನಿಫಿಸೆನ್ಸ್, ಮಾರ್ಚ್ ಆಫ್ ಕರ್ನಾಟಕ, ಎಡಿಟ್: ನರೇಂದ್ರನಾಥ ಆರ್, ಗುರುಪ್ರಸಾದ್ ಡಿ.ವಿ., ಚೀಫ್ ಎಡಿಟ್. ವಾಲ್ಯೂ ೩೮. ಇಸ್ಸು ನಂ.೧, ಜನವರಿ ೨೦೦೦, ಡೈರೆಕ್ಟರೇಟ್ ಆಫ್ ಇನ್ಫಪಾರ್‌ಮೇಷನ್ ಅಂಡ್ ಪಬ್ಲಿಸಿಟಿ, ಗವರ್ನಮೆಂಟ್ ಆಫ್ ಕರ್ನಾಟಕ, ಬೆಂಗಳೂರು, ೨೦೦೦, ಪುಟ.೧೮-೨೧. ದಿಸ್ ಆರ್ಟಿಕಲ್ ಡಿಸ್ಕ್ರೈಬ್ಸ್ ದ ಓರ್ನೇಟ್ ಕ್ಯಾರಕ್ಟರ್ ಆಫ್ ವಿಜಯನಗರ ಟೆಂಪಲ್ಸ್. ಫರ್ ಫೆಕ್ಸನ್ ಆಫ್ ಆರ್ಟ್ ವಾಸ್ ಅಚೀವ್ಡ್ ಲಾರ್ಜ್ಲಿ ಬೈ ಕವರಿಂಗ್ ದ ಪಿಲ್ಲರ್ಸ್ ದ ಪೀರ್ಸ್ ಇನ್‌ಟು ಕಾಂಪ್ಲಿಕೇಟೆಡ್ ಕರ್‌ವಿಂಗ್ಸ್ ವಿಥ್ ಹ್ಯೂಮನ್ ಫಿಗರ್ಸ್, ಅನಿಮಲ್ಸ್ ಅಂಡ್ ಡಿವೈನ್ ಅಂಡ್ ಸೆಮಿ-ಡಿವೈನ್ ಬೀಯಿಂಗ್ಸ್ ಡೆಕ್ಸೆರೊಸ್ಲಿ ಚಿಸ್‌ಲೇಡ್ ಇನ್ ಸಾಲಿಡ್‌ಬ್ಲಾಕ್ ಆಫ್ ಸ್ಟೋನ್. ಇಟ್ ಆಲ್‌ಸೋ ರೆಫರ್ಸ್ ಟು

ದ ಆರ್ಕಿಟೆಕ್ಚರಲ್ ಫಿಗರ್ಸ್ ಆಫ್ ವಿಜಯನಗರ ಅಂಡ್ ಸಪೋರ್ಟೆಡ್ ಬೈ ಫೋಟೋಗ್ರಫಿಸ್ ಆಫ್ ದ ಮಾನೋಮೆಂಟ್ಸ್.

೧೩. ಡೇವಿಡ್ ಗಿಬ್ಸನ್ ಅಂಡ್ ಹಿದರ್ ಮಿಲ್ಲರ್, ಎ ಕಾಂಪ್ಲೆಕ್ಸ್ ಸೌಥ್ ಆಫ್ ಮಾಲ್ಯವಂತ ಹಿಲ್ ವಿಜಯನಗರ, ಪ್ರೋಗ್ರೆಸ್ ಆಫ್ ರಿಸರ್ಚ್,೧೯೯೧-೯೨ ಎಡಿಟ್ಸ್. ದೇವರಾಜ್ ಡಿ.ವಿ. ಅಂಡ್ ಚನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು. ೧೯೯೬.

೧೪. ಜಾರ್ಜ್ ಮೈಕಲ್, 'ಎ ಸ್ಮಾಲ್ ಡೇಟಡ್ ಟೆಂಪಲ್ ಅಟ್ ವಿಜಯನಗರ', ವಿಜಯನಗರ ಪ್ರೊಗ್ರೆಸ್ ಆಫ್ ರಿಸರ್ಚ್ ೧೯೭೯-೮೩, ಎಡಿಟ್ಸ್. ಎಂ.ಎಸ್.ನಾಗರಾಜ ರಾವ್, ಡೈರಕ್ಟೋರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು, ೧೯೮೩, ಪುಟ.೪೫-೪೯. ದಿಸ್ ಆರ್ಟಿಕಲ್ ಸ್ಪೀಕ್ಸ್ ಅಬೌಟ್ ದ ಸ್ಮಾಲ್ ಡೇಟೆಡ್ ಟೆಂಪಲ್. ದಿಸ್ ಟೆಂಪಲ್ ಸ್ಟ್ಯಾಂಡ್ಸ್ ಐಸೋಲೇಟೆಡ್ ಇನ್ ದ ಫೀಲ್ಡ್, ಈಸ್ಟ್ ಆಫ್ ಒನ್ ಆಫ್ ದ ಗ್ರೇಟ್‌ವೇಸ್ ಇನ್ ದ ಇನ್ನರ್ ಸರ್ಕಲ್ ಆಫ್ ಫಾರ್ಟಿಫಿಕೇಶನ್ಸ್ ದಟ್ ಡಿಫೈನ್ಸ್ ದ ಅರ್ಬನ್ ಕೋರ್ ಆಫ್ ವಿಜಯನಗರ. ದಿಸ್ ಟೆಂಪಲ್ ಪಾರ್ಟ್ರೋನ್ ಇಸ್ ಶ್ರೀರಂಗ, ದ ಚೌರಿ ಬೀರೆರ್ ಆಫ್ ಮಲ್ಲಿಕಾರ್ಜುನ, ದ ಲೆಟರ್ ವಾಸ್ ದ ಸನ್ ಆಫ್ ಪ್ರೌಢದೇವರಾಯ. ದಿ ಇನ್‌ಸ್ಕ್ರಿಪ್ಸನ್ ಕ್ಯಾನ್ ಬಿ ಡೇಟೆಡ್ ಟು ದ ರೀಜನ್ ಆಫ್ ಮಲ್ಲಿಕಾರ್ಜುನ ಐ.ಈ.೧೪೪೭-೧೪೬೭, ಎ.ಡಿ.

೧೫. ಜಾರ್ಜ್ ಮೈಕೆಲ್, 'ಆರ್ಕಟೆಕ್ಚರಲ್ ಡಾಕ್ಯೂಮೆಂಟ್ಸೇಶನ್ ಅಟ್ ವಿಜಯನಗರ, ಸೌಥ್ ಏಶಿಯನ್ ಆರ್ಕ್ಯಾಲಾಜಿ, ೧೯೮೩, ಎಡಿಟ್ಸ್. ಎಂ. ಟೆಡ್ಡಿ ಅಂಡ್ ಜೆ.ಸ್ಕಾಟ್ಸ್‌ಮನ್ಸ್, ನಾಪಲ್ಸ್. ಇನ್ಸ್ ಟಿಟ್ಯೂಟ್ ಯುನಿವರ್‌ಸಿಟಿ ಓರಿಯಂಟಲ್, ಡಿಪಾರ್ಟ್ ಮೆಂಟ್ ದಿ ಸ್ಟಡಿ ಏಸಿಯಾಟಿಕ್, ಸೀರಿಸ್ ಮೈನರ್ XXIII, ಪುಟ.೮೪೩-೮೬೨.೧೯೮೫.ಸಿ.

೧೬. ಜಾರ್ಜ್ ಮೈಕಲ್, ಟು ಟೆಂಪಲ್ಸ್ ಫ್ರಮ್ ದ ಅರ್ಲಿ ವಿಜಯನಗರ ಪಿರೀಯಡ್, ಸ್ಟಡೀಸ್ ಇನ್ ಮಾನೋಮೆಂಟಲ್ ಆರ್ಕ್ಯಾಯಿಸಂ, ಕುಸುಮಾಂಜಲಿ, ನಿವ್ ಇಂಟರ್‌ಪ್ರಿಟೇಶನ್ ಆಫ್ ಇಂಡಿಯನ್ ಆರ್ಟ್ ಅಂಡ್ ಕಲ್ಚರ್, ಸಿ.ಶಿವರಾಮಮೂರ್ತಿ ಕೊಮ್ಮಮೊರೇಶನ್ ವಾಲ್ಯೂಮ್, ಎಡಿಟ್: ಎಂ.ಎಸ್.ನಾಗರಾಜ ರಾವ್, ಆಗಾಮ್ ಕಲಾ ಪ್ರಕಾಶನ, ನಿವ್ ದೆಲ್ಲಿ, ೧೯೮೭, ಪುಟ. ೨೧೩-೨೧೬. ದಿಸ್ ಆರ್ಟಿಕಲ್ ಡೀಲ್ಸ್ ವಿಥ್ ದ ಟೂ ಟೆಂಪಲ್ಸ್ ವಿಚ್ ಆರ್ ಆಸ್ಕ್ರಿಬೆಡ್ ಟು ದ ಅರ್ಲಿ ಫ್ಯೂಚರ್ಸ್ ಲೈಕ್ ಪಿಲ್ಲರ್ಸ್ ಇತ್ಯಾದಿ ಆರ್ ಡಿಸ್ಕಸ್ಡ್. ಜಾರ್ಜ್ ಮೈಕಲ್, ಹಿಂದೂ ಆರ್ಟ್ ಆರ್ಕಿಟೆಕ್ಚರ್, ವರ್ಡ್ ಆಫ್ ಆರ್ಟ್ ಸಿರೀಸ್, ಥೀಮ್ಸ್ ಅಂಡ್ ಹಡ್‌ಸನ್, ಲಂಡನ್.

೧೭. ಜಾರ್ಜ್ ಮೈಕೆಲ್, ಎ ನೆವರ್ ಫರಗೆಟ್ಟನ್ ಸಿಟಿ, ವಿಜಯನಗರ, ಎಡಿಟ್: ಅಣ್ಣಾ ಎಲ್. ದಲ್ಲಾಪಿಕ್ಕೊಲಾ, ಸ್ಟಟ್‌ಗಾರ್ಟ್, ಫ್ರಾನ್ಜ್ ಸ್ಟೆನರ್ ವರ್ಲಾಗ್ ವಿಸ್‌ಬಡೆನ್ ಜಿ.ಎಂ.ಬಿ.ಎಚ್., ೧೯೮೫, ಪುಟ. ೧೯೬-೨೦೭. ದಿಸ್ ಆರ್ಟಿಕಲ್ ಡೀಲ್ಸ್ ವಿಥ್ ದ ವಿಜಯನಗರ ಸಿಟಿ ಅಂಡ್

ಇಟ್ಸ್ ಇನ್ ಫ್ಲೂಯನ್ಸ್ ಆನ್ ದ ಪೀಪಲ್ ಫಾರ್ ಮೋರ್ ದನ್ ಫೋರ್ ಸೆಂಟೂರಿಯಸ್. ದ ಡಿಫರೆಂಟ್ ಟ್ರಾವಲರ್ಸ್ ಅಂಡ್ ದೇರ್ ರೇಟಿಂಗ್ಸ್ ಆರ್ ಡಿಸ್ಕಸ್ಡ್.

೧೮. ಜಾರ್ಜ್ ಮೈಕೆಲ್, ಆರ್ಕಿಟೆಕ್ಚರಲ್ ಟ್ರೆಡಿಷನ್ಸ್ ಅಟ್ ವಿಜಯನಗರ, ೧. ಟೆಂಪಲ್ ಸ್ಟೈಲ್ಸ್, ೨.ಇಸ್ಲಾಮಿಕ್ ಸ್ಟೈಲ್ಸ್, ವಿಜಯನಗರ, ಎಡಿಟ್: ಅಣ್ಣಾ ಎಲ್. ದಲ್ಲಾಪಿಕ್ಕೊಲಾ, ಸ್ಟಟ್‌ಗಾರ್ಟ್, ಫ್ರಾನ್ಜ್ ಸ್ಟೆನರ್ ವರ್ಲ್ಲಾಗ್ ವಿಸ್‌ಬಡೆನ್ ಜಿ.ಎಂ.ಬಿ.ಎಚ್., ೧೯೮೫, ಪುಟ. ೨೭೪-೨೮೬. ದಿಸ್ ಆರ್ಟಿಕಲ್ ಡಿಸ್ಕಸಸ್ ದ ಡಿಫರೆಂಟ್ ಟೆಂಪಲ್ಸ್ ಅಟ್ ವಿಜಯನಗರ, ಕದಂಬಾ ಇನ್‌ಫ್ಲೈಯನ್ಸಡ್ ಸಕ್ರೇಡ್ ಮಾನೋಮೆಂಟ್ಸ್ ಅಂಡ್ ೧೫ನೇ ಸೆಂಚುರಿ ಟೆಂಪಲ್ಸ್. ದಿ ಕಾಂಟ್ರೀಬ್ಯೂಷನ್ ಆಫ್ ಇಲ್ಲೂಸ್ಟ್ರಿಯಸ್ ರೂಲ್ಸ್, ದ ೬೧ನೇ ಸೆಂಚುರಿ, ೧೭ನೇ ಸೆಂಚುರಿ ಟೆಂಪಲ್ಸ್ ಆರ್ ಆಲ್‌ಸೋ ಡಿಸ್ಕಸ್ಡ್. ಇನ್ ದ ಸೆಕೆಂಡ್ ಆರ್ಟಿಕಲ್ ದ ಇಸ್ಲಾಮಿಕ್ ಸ್ಟೈಲ್ಡ್ ಬಿಲ್ಡಿಂಗ್ಸ್ ಆರ್ ಡಿಸ್ಕಸ್ಡ್ ದ ಇನ್‌ಫ್ಲ್ಯುಯೆನ್ಸ್ ಆನ್ ದ ಸೆಕ್ಯುಲರ್ ಆರ್ಕಿಟೆಕ್ಚರ್ ಇಸ್ ಡಿಸ್ಕಸ್ಡ್.

೧೯. ಜಾರ್ಜ್ ಮೈಕೆಲ್, ವಿಜಯನಗರ: ದಿ ಆರ್ಕಿಟೆಕ್ಚುರಲ್ ರೆಕಾರ್ಡ್, ಸೌಥ್ ಏಸಿಯನ್ ಸ್ಟಡೀಸ್ ೧, ಪುಟ.೧೯-೪೧, ೧೯೮೫ ಡಿ.

೨೦.ಜಾರ್ಜ್ ಮೈಕೆಲ್ ಆರ್ಕಿಟೆಕ್ಚರ್ ಆಫ್ ದ ಮುಸ್ಲಿಂ ಕ್ವಾಟ್ರಸ್ ಅಟ್ ವಿಜಯನಗರ, ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್ ೧೯೮೩-೮೪, ಸಂಪಾದನೆ: ಎಂ.ಎಸ್.ನಾಗರಾಜ ರಾವ್ ಅಂಡ್ ಸಿ.ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು, ೧೯೮೫, ಪುಟ.೧೦೧-೧೧೯. ದಿಸ್ ಆರ್ಟಿಕಲ್ ಡೀಲ್ಸ್ ವಿಥ್ ದ ಇಸ್ಲಾಮಿಕ್ ಸ್ಟೈಲ್ ಬಿಲ್ಡಿಂಗ್ಸ್ ಇನ್‌ಕ್ಲೂಡಿಂಗ್ ತಂಬ್ಸ್. ಮಾಸ್ಕ್ಯೂಸ್ ಅಂಡ್ ಅದರ್ ಕೋಲುಮ್ಡ್ ಬಿಲ್ಡಿಂಗಸ್ ವಿಚ್ ಡಿಸ್ಪ್ಲೈ ಕ್ಲೋಸ್ ಕಾಂಟೆಕ್ಟ್ ವಿಥ್ ಸರ್ಟೈನ್ ಆರ್ಕಿಟೆಕ್ಚರಲ್ ಫ್ಯೂಚರ್ಸ್ ಆಫ್ ದ ನಾರ್ಥ್. ದ ಡಿಫರೆಂಟ್ ಟೈಪ್ಸ್ ಆಫ್ ತಂಬ್ಸ್ ಅಂಡ್ ಮಾಸ್ಕ್ಯೂಸ್ ಆರ್ ಎಕ್ಸ್‌ಪ್ಲೈನ್ಡ್.

೨೧.ಜಾರ್ಜ್ ಮೈಕಲ್, ಟು ತಂಬ್ಸ್ ಅಟ್ ಹೊಸಪೇಟ್, ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್ ೧೯೮೪-೮೭, ಸಂಪಾದನೆ: ದೇವರಾಜ್ ಡಿ.ವಿ. ಅಂಡ್ ಚನ್ನಬಸಪ್ಪ, ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು, ೧೯೯೧, ಪುಟ.೧೮೭-೧೯೦. ದಿಸ್ ಆರ್ಟಿಕಲ್ ಡೀಲ್ಸ್ ವಿಥ್ ದ ಟು ತಂಬ್ಸ್ ಅಟ್ ಹೊಸಪೇಟೆ ವಿಚ್ ವಾಸ್ ಒನ್ಸ್ ಎ ಪಾರ್ಟ್ ಆಫ್ ದ ಗ್ರೇಟರ್ ಮೆಟ್ರೊಪೊಲಿಟಿನ್ ಏರಿಯಾ ಆಫ್ ವಿಜಯನಗರ. ದೀಸ್ ಟು ತಂಬ್ಸ್ ಆರ್ ಅಟ್ ದ ಸೌಥ್ ವೆಸ್ಟ್ರನ್ ಪಾರ್ಟ್ ಆಫ್ ದ ಪ್ರೆಸೆಂಟ್ ಹೊಸಪೇಟೆ ಟೌನ್. ನೊ ಎಪಿಗ್ರಾಫಿಕಲ್ ರೆಕಾರ್ಡ್ಸ್ ಹ್ಯಾವ್ ಯೆಟ್ ಬೀಸ್ ಡಿಸ್ಕವರ್ಡ್ ಟು ಥ್ರೋ ಲೈಟ್ ಆನ್ ದೋಸ್ ಮುಸ್ಲಿಂ ಪ್ಯಾಟ್ರನ್ಸ್.

೨೨. ಜಾರ್ಜ್ ಮೈಕಲ್, ರಿವಿವಲಿಸಮ್ ಆ್ಯಸ್ ದ ಇಂಪೀರಿಯಲ್ ಮೋಡ್, ರಿಲೀಜಿಯಸ್ ಆರ್ಕಿಟೆಕ್ಚರ್ ಡೂರಿಂಗ್ ದ ವಿಜಯನಗರ ಪೀರಿಯಡ್, ಪರಸೆಪ್ಸನ್ಸ್ ಆಫ್ ಸೌಥ್ ಏಸಿಯಾಸ್ ವಿಜುವಲ್ ಪಾಸ್ಟ್, ಎಡಿಟ್ಸ್,

೨೩.ಜಾರ್ಜ್‌ಮೈಕಲ್, ದಿ ಆಟ್ ಅಂಡ್ ಆರ್ಕಿಟೆಕ್ಚರ್ ಆಫ್ ಸದರನ್ ಇಂಡಿಯಾ, ವಿಜಯನಗರ ಅಂಡ್ ದ ಸಕ್ಸಸರ್ ಸ್ಟೇಟ್ಸ್, ನಿವ್ ಕೇಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ ೧.೬, ಕೇಂಬ್ರಿಡ್ಜ್ ಯೂನಿವರ್‌ಸಿಟಿ ಪ್ರೆಸ್, ಕೇಂಬ್ರಿಡ್ಜ್, ೧೯೯೫.

೨೪. ಜಾರ್ಜ್‌ಮೈಕಲ್, ಫೌಂಡೇಶನ್ ಗೇಟ್ ಆಫ್ ದ ವಿಠ್ಠಲ ಟೆಂಪಲ್ ಅಟ್ ಹಂಪಿ, ಹೇಮಕೂಟ, ರೀಸೆಂಟ್ ರಿಸರ್ಚರ್ಸ್ ಇನ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಂ, ಎಡಿಟ್: ನರಸಿಂಹ ಮೂರ್ತಿ ಎ.ವಿ., ಸುರೇಶ ಕೆ.ಎಂ., ಪೂಣಚ್ಚ ಕೆ.ಪಿ. ಅಂಡ್ ಬಸವರಾಜ ಕೆ.ಆರ್., ಭಾರತೀಯ ಕಲಾ ಪ್ರಕಾಶನ, ದೆಲ್ಲಿ. ೨೦೦೦, ಪುಟ.೩೨೪-೩೨೮. ದ ಆರ್ಟಿಕಲ್ ಡೀಲ್ಸ್ ವಿಥ್ ದ ಡೇಟಿಂಗ್ ಅಂಡ್ ಕನ್ಸ್ಟ್ರಕ್ಷನ್ ಆಫ್ ದ ಟೆಂಪಲ್ ಆಫ್ ವಿಜಯನಗರ ವಿಠ್ಠಲ ಅಟ್ ಹಂಪಿ, ಆನ್ ಬೇಸಿಸ್ ಆಫ್ ಇನ್‌ಸ್ಕ್ರಿಪ್ಷನ್ಸ್; ಕ್ಯಾರಕ್ಟರ್‌ಸ್ಟಿಕ್ ಫ್ಯೂಚರ್ ಈಟಿಸಿ.

೨೫. ಜಾರ್ಜ್‌ಮೈಕಲ್, ದೇರ್ ಡೇಟೆಸ್ ಟೆಂಪಲ್ಸ್ ಅಟ್ ತಿಮ್ಮಲಾಪುರ, ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್ ೧೯೮೮-೯೧, ಎಡಿಟ್ಸ್: ಡಿ.ವಿ.ದೇವರಾಜ ಅಂಡ್ ಚನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು, ಪುಟ.೧೯೨-೯೬. ದಿಸ್ ಆರ್ಟಿಕಲ್ ನರೆಟ್ಸ್ ಥ್ರೀ ಡೇಟೆಡ್ ಟೆಂಪಲ್ಸ್ ಆರ್ ಡೇಟೆಡ್ ಟೆಂಪಲ್ಸ್ ಅಟ್ ತಿಮ್ಮಲಾಪುರ ಲೊಕೇಟೆಡ್ ಅಟ್ ೨೬ ಕಿ.ಮೀ. ಫ್ರಮ್ ಹೊಸಪೇಟೆ. ದ ಟೆಂಪಲ್ಸ್ ಆರ್ ಡೇಟೆಡ್ ಟು ೧೫೫೯ ಎ.ಡಿ. ಬಿಲ್ಟ್ ಬೈ ಬಯಕಾರ ರಾಮಯ್ಯ. ದ ಡಿಫರೆಂಟ್ ಪಾರ್ಟ್ ಆಫ್ ದ ಟೆಂಪಲ್ ಅಂಡ್ ಇಟ್ಸ್ ಆರ್ಕಿಟೆಕ್ಚರಲ್ ಡೆವಲಪ್‌ಮೆಂಟ್ಸ್ ಆರ್ ಡಿಸ್ಕಸ್ಡ್ ಹಿಯರ್.

೨೬.ಜಾನ್ ಫಿಶ್ಚರ್, ದ ಛತ್ರ(ಫೀಡಿಂಗ್ ಹಾಲ್) ಇನ್ ಕೃಷ್ಣಾಪುರ(ವಿಥ್ ಅಪೆಂಡಿಕ್ಸ್ ಬೈ ಜಾನ್ ಎಂ.ಫ್ರಿಡ್ಜ್ ವಿಜಯನಗರ ಫ್ರೋಗ್ರೆಸ್ ಆಫ್ ರಿಸರ್ಚ್, ೧೯೯೧-೯೨, ಎಡಿಟ್ಸ್: ಡಿ.ವಿ.ದೇವರಾಜ ಅಂಡ್ ಚನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು.

೨೭. ಜಾನ್‌ಮೆಕಿಮ್ ಮಲವಿಲ್ಲೆ ಅಂಡ್ ಜಾನ್ ಎಂ. ಫ್ರಿಟ್ಜ್, ಮ್ಯಾಪಿಂಗ್ ದ ಸಕ್ರೇಡ್ ಜಿಯೋಮೆಟ್ರ ಆಫ್ ವಿಜಯನಗರ, ಮ್ಯಾಪಿಂಗ್ ಇನ್‌ವಿಸಿಬಲ್ ವರ್ಡ್ಸ್, ಎಡಿಟ್ಸ್, ಜಿ.ಈಡಿನ್‌ಬರ್ಗ್, ಯುನಿವರ್‌ಸಿಟಿ ಆಫ್ ಈಡನ್‌ಬರ್ಗ್ ಪ್ರೆಸ್, ೧೯೯೩, ಪುಟ.೪೧-೬೨.

೨೮.ಜಾನ್ ಎಂ. ಫ್ರಿಟ್ಜ್ ಅಂಡ್ ಜಾರ್ಜ್‌ಮೈಕಲ್, ದ ಗ್ರಾಂಡ್ ರನ್ಸ್ ಆಫ್ ದ ಏನ್ಸಿಯಂಟ್ ಸಿಟಿ ಆಫ್ ವಿಜಯನಗರ, ಇನ್‌ಸೈಡ್ ಔಟ್‌ಸೈಡ್, ೨೧, ೧೯೮೧, ಪುಟ.೪೦-೪೩.

೨೯.ಜಾನ್ ಎಂ. ಫ್ರಿಟ್ಜ್ ಅಂಡ್ ಜಾರ್ಜ್‌ಮೈಕಲ್,(ವಿಥ್ ಫೋಟೋಗ್ರಫಿಸ್ ಬೈ ಜಾನ್ ಗಾರ್ಲಿಂಗ್ಸ್) ಇಸ್ಲಾಮಿಕ್ ಸ್ಟ್ರಕ್ಚರ್ಸ್ ಆಫ್ ವಿಜಯನಗರ, ಆರ್ಟ್ಸ್ ಅಂಡ್ ಇಸ್ಲಾಮಿಕ್ ವರ್ಲ್ಡ್, ವಿಂಟರ್, ಲಂಡನ್, ೧೯೮೩, ಪುಟ.೬೯-೭೦.

೩೦.ಜಾನ್ ಎಂ. ಫ್ರಿಟ್ಜ್, ಫ್ಯೂಚರ್ಸ್ ಅಂಡ್ ಲೇಔಟ್ ಆಫ್ ವಿಜಯನಗರ, ದ ರಾಯಲ್ ಸೆಂಟರ್, ವಿಜಯನಗರ ಸಿಟಿ ಅಂಡ್ ಎಂಪೈರ್, ಎಡಿಟ್ಸ್. ಅಣ್ಣ ಎಲ್. ದಲ್ಲಾಪಿಕ್ಕೊಲ ಐ, ಸ್ಟಟ್ ಗಾರ್ಟ್, ಫ್ರಾನ್ಜ್ ಸ್ಟೈನರ್ ವೆರ್ಲಾಗ್ ವೈಸ್‌ಬಡೆನ್ ಜಿಎಂಬಿಎಚ್, ೧೯೮೫, ಪುಟ.೨೪೦-೨೫೬.

೩೧.ಜಾನ್ ಎಂ. ಫ್ರಿಟ್ಜ್ ಅಂಡ್ ಜಾರ್ಜ್‌ಮೈಕಲ್, ವಿಜಯನಗರ, ವೇರ್ ಕಿಂಗ್ಸ್ ಅಂಡ್ ಗಾಡ್ಸ್ ಮೀಟ್, ಫೆಸ್ಟಿವಲ್ ಆಫ್ ಇಂಡಿಯಾ ಇನ್ ದ ಯುನೈಟೆಡ್ ಸ್ಟೇಟ್ಸ್, ೧೯೮೫-೮೬, ನ್ಯೂಯಾರ್ಕ್, ಅಬಾಮ್ಸ್ ೧೯೮, ಪುಟ.೪೩-೪೮.

೩೨.ಜಾನ್ ಎಂ.ಫ್ರಿಟ್ಜ್, ವಾಸ್ ವಿಜಯನಗರ ಎ ಕಾಸ್‌ಮಿಕ್ ಸಿಟಿ? ವಿಜಯನಗರ, ಸಿಟಿ ಅಂಡ್ ಎಂಪೈರ್, ಎಡಿಟ್: ಅಣ್ಣ ಎಲ್.ದಲ್ಲಪಿಕ್ಕೊಲ, ಸ್ಟಟ್ಗಾರ್ಟ್, ಫ್ರಾನ್ಜ್ ಸ್ಟೈನರ್ ವರ್ಲಾಗ್ ವೆಸ್‌ಬೆಡೆನ್ ಜಿಬಿಎಂಎಚ್.೧೯೮೫ ವಿ, ಪುಟ.೧೯೮೫ ಬಿ, ಪುಟ.೨೫೭-೨೭೩. ದ ಆಥರ್ ಡಿಸ್ಕಸ್ಡ್ ಅಬೌಟ್ ದ ಡಿಫರೆಂಟ್ ಫ್ಯೂಚರ್ಸ್ ಆಫ್ ವಿಜಯನಗರ ಅಂಡ್ ರೈಸೀಸ್ ದ ಕ್ವಶನ್ ವೆಧರ್ ದಿಸ್ ಸಿಟಿ ಇಸ್ ಕೋಸ್ಮಿಕ್ ಇನ್ ನೇಚರ್. ಜಾನ್ ಎಂ. ಫ್ರಿಟ್ಜ್ ಅಂಡ್ ಜಾರ್ಜ್‌ಮೈಕಲ್, ಇಂಟರ್‌ಪ್ರಿಟಿಂಗ್ ದ ಪ್ಲಾನ್ ಆಫ್ ಎ ಮೆಡಿವಾಳ್ ಹಿಂದೂ ಕ್ಯಾಪಿಟಲ್, ವಿಜಯನಗರ ವಲ್ಡ್ ಆರ್ಕಿಯೋಲಾಜಿ ೧೯(೧) ೧೯೮೭, ಪುಟ.೧೦೫-೧೨೯

೩೩.ಜಾನ್ ಎಂ.ಫ್ರಿಟ್ಜ್, ದ ಪ್ಲಾನ್ ಆಫ್ ವಿಜಯನಗರ, ಸಾಸ್ತ್ರಿಕ್ ಟ್ರೆಡಿಶನ್ಸ್ ಇನ್ ಇಂಡಿಯಾ ಆರ್ಟ್ಸ್, ಎಡಿಟ್: ಅಣ್ಣ ಎಲ್.ದಲ್ಲಪಿಕ್ಕೊಲ, ವಾಲ್ಯೂಮ್.೧,೨೩೭-೨೫೧, ವಾಲ್ಯೂಮ್.೨, ೧೨೦-೧೨೯. ವಸ್ಟಟ್ಗಾರ್ಟ್, ಫ್ರಾನ್ಜ್ ಸ್ಟೈನರ್ ವರ್ಲಾಗ್, ರಿಪ್ರಿಂಟೆಡ್ ಇನ್ ವಿಜಯನಗರ, ಪ್ರೊಗ್ರೆಸ್ ಆಫ್ ರಿಸರ್ಚ್ ೧೯೮೪-೮೭, ಎಡಿಟ್ಸ್: ಡಿ.ವಿ.ದೇವರಾಜ ಅಂಡ್ ಚನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು, ೧೯೮೯, ಪುಟ.೧೨೨-೧೩೫. ದಿಸ್ ಆರ್ಟಿಕಲ್ ಡೀಲ್ಸ್ ವಿಥ್ ದ ಸಿಟಿ ಆಫ್ ವಿಜಯನಗರ ಇಟ್ಸ್ ಲೇಔಟ್ ಇನ್ ಅಕಾರ್ಡೆನ್ಸ್ ವಿಥ್ ದ ಶಿಲ್ಪಾಶಾಸ್ತ್ರ. ದ ಸಾಸ್ತ್ರಿಕ್ ಎಲಿಮೆಂಟ್ಸ್ ಪ್ರೆಸೆಂಟ್ ಅಟ್ ವಿಜಯನಗರ, ದ ಕಂಪಾರಿಸನ್ ವಿಥ್ ಸಾಸ್ತ್ರಿಕ್ ಮಾಡೆಲ್ಸ್ ಆರ್ ಎಕ್ಸ್‌ಪ್ಲೇನ್ಡ್ ಹಿಯರ್.

೩೪.ಜಾನ್‌ಎಂ.ಫ್ರಿಟ್ಜ್, ಇಲೆವೇಟೆಡ್ ಪ್ಲಾಟ್‌ಫಾರಂ ನಿಯರ್ ಕಮಲಾಪುರ, ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್, ೧೯೮೭-೮೮, ಎಡಿಟ್ಸ್: ಡಿ.ವಿ.ದೇವರಾಜ ಅಂಡ್ ಚನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು, ೧೯೯೧, ಪುಟ.೧೦೫-೧೧೨.

೩೫.ಜಾನ್ ಪ್ರಿಟ್ಜ್, ಥ್ರೀ ಪ್ಯಾಲೆಸ್ ಕಾಂಪ್ಲೆಕ್ಸ್ ನಿಯರ್ ದ ಆಕ್ಟಗೋನಲ್ ಬಾಥ್ ಇನ್ ದ ರಾಯಲ್ ಸೆಂಟರ್, ಇಂಟರ್‌ಡಕ್ಷನ್ ಅಂಡ್ ಪ್ಯಾಲೆಸ್ ಕಾಂಪ್ಲೆಕ್ಸ್ ೩, ವಿಜಯನಗರ ಪ್ರೊಗ್ರೆಸ್ ಆಫ್ ರಿಸರ್ಚ್, ೧೯೯೧-೯೨, ಎಡಿಟ್ಸ್: ಡಿ.ವಿ.ದೇವರಾಜ ಅಂಡ್ ಚನ್ನಬಸಪ್ಪ ಎಸ್. ಪಾಟೀಲ್,

ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು, (ಎಂಎಸ್ ೧೯೯೨, ೧೯೯೭).

೩೬.ಜಾನ್ ಎಂ. ಫ್ರಿಟ್ಜ್ ಅಂಡ್ ಡೇವಿಡ್ ಗಿಬ್ಸನ್, ಗೇಮ್ ಬೋರ್ಡ್ಸ್ ಅಟ್ ವಿಜಯನಗರ, ಪ್ರಿಲಿಮಿನರಿ ರಿಪೋರ್ಟ್. ಬೋರ್ಡ್ ಗೇಮ್ಸ್ ಆಫ್ ದ ಏನ್ಸಿಯೆಂಟ್ ವರ್ಲ್ಡ್, ಎಡಿಟ್. ಐ.ಎಲ್. ಫಿನ್‌ಕೆಲ್, ಬ್ರಿಟಿಷ್ ಮ್ಯೂಸಿಯಂ, ಲಂಡನ್,(ಎಂಎಸ್ ೧೯೯೨)

೩೭.ಜಾನ್ ಎಂ.ಫ್ರಿಟ್ಜ್ ಅಂಡ್ ಜಾರ್ಜ್ ಮೈಕಲ್, ದ ಫರ್‌ಫೆಕ್ಟ್ ಸಿಟಿ, ದ ರಾಯಲ್ ಜಿಯಗ್ರಾಫಿಕಲ್ ಸೊಸೈಟಿ ಮ್ಯಾಗ್ಜಿನ್, ೬೬(೨)(ಫೆಬ್ರವರಿ) ೧೯೯೪, ಪುಟ.೪೦-೪೩

೩೮.ಜಾನ್ ಎಂ.ಫ್ರಿಟ್ಜ್ ಅಂಡ್ ಜಾರ್ಜ್ ಮೈಕಲ್, ವೇರ್ ಕಿಂಗ್ಸ್ ಅಂಡ್ ಗಾಡ್ಸ್ ಮೀಟ್ ಫ್ಯೂಚರಿಂಗ್ ಫೋಟೋಗ್ರಾಫ್ಸ್ ಬೈ ಜಾನ್ ಗೊಲ್ಲಿಂಗ್ಸ್ ಏನ್ಸಿಯೆಂಟ್ ಇಂಡಿಯಾ, ಲ್ಯಾಂಡ್ ಆಫ್ ಮೈಸ್ಟ್ರಿ, ಅಲೆಗ್ಜಾಂಡ್ರಿಯಾ, ವಿಎ, ಟೈಮ್-ಲೈಫ್ ಬುಕ್ಸ್, ೧೯೯೪, ಪುಟ.೧೪೭-೧೫೭.

೩೯.ಜಾನ್ ಎಂ.ಫ್ರಿಟ್ಜ್ ಅಂಡ್ ಜಾರ್ಜ್ ಮೈಕಲ್, ವಿಜಯನಗರ, ದ ಸಿಟಿ ಆಫ್ ವಿಕ್ಟರ್, ನಾಗಚಂದ್ರಿಕಾ ಡಿ.ವಿ.ದೇವರಾಜ ಅಂಡ್ ಚನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು, ೧೯೯೬, ಪುಟ.೧೯೯-೨೦೦. ವಿಜಯನಗರ ಸಿಟಿ ಆಫ್ ವಿಕ್ಟರಿ ಎಸ್ಟಬ್ಲೆಶ್ಡ್ ಇನ್ ೧೪ನೇ ಸೆಂಚ್ಯುರಿ ಬೈ ಹಕ್ಕ ಅಂಡ್ ಬುಕ್ಕ. ವಿಥ್ ದ ರೀಸೆಂಟ್ ಫೈಂಡಿಂಗ್ಸ್ ಅಂಡ್ ಇನ್‌ಕ್ರೀಸ್ಡ್ ಅಂಡರ್‌ಸ್ಟ್ಯಾಂಡಿಂಗ್ ಆಫ್ ದ ಫಾರ್ಮ್ ಫಂಕ್ಷನ್ ಆಫದ ದಿಸ್ ಸಿಟಿ ಇಸ್ ವೆಲ್ ಎಕ್ಸ್‌ಪ್ಲೇನ್ಡ್ ಇನ್ ದ ಆರ್ಟಿಕಲ್. ದ ಇಂಪಾರ್ಟೆಂಟ್ ಕಲ್ಚರಲ್ ಅಂಡ್ ಆರ್ಟಿಸ್ಟಿಕ್ ಪ್ರಾಬ್ಲಮ್ಸ್ ಆರ್ ಡಿಯಲ್ಟ್ ಹಿಯರ್.

೪೦. ಲಿಂಡ್ಸೈಟಮನ್ ಅಂಡ್ ಆಸ್ಕರ್ ಕ್ಯಾರಿಬರ್ಗ್, ಆ್ಯನ್ ಇರಿಗೇಶನ್ ಟವರ್ ಆನ್ ದ ಹಿರಿಯ ಕೆನಲ್(ನಂ೫-ಈ-೧೨/೪೫) ವಿಜಯನಗರ ಪ್ರೊಗ್ರೆಸ್ ಆಫ್ ರಿಸರ್ಚ್, ೧೯೮೩-೯೪, ಎಡಿಟ್ಸ್: ಡಿ.ವಿ.ದೇವರಾಜ ಅಂಡ್ ಚನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು.

೪೧. ಲುಂಡಲ್ ಜೆ. ಎಲ್, ಆ್ಯನ್ ಅರ್ಲಿ ವಿಜಯನಗರ ಟೆಂಪಲ್ ಕಾಂಪ್ಲೆಕ್ಸ್, ವಿಜಯನಗರ ಪ್ರೊಗ್ರೆಸ್ ಆಫ್ ರಿಸರ್ಚ್, ೧೯೯೧-೯೨, ಎಡಿಟ್ಸ್: ಡಿ.ವಿ.ದೇವರಾಜ ಅಂಡ್ ಚನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು.

೪೨. ಮಾಲ್ವಿನ್ ಜೆ.ಎಂ., ದ ಕಾಸ್ಮಿಕ್ ಜಿಯೋಮೆಟ್ರೀಸ್ ಆಫ್ ವಿಜಯನಗರ, ಏನ್ಸಿಯಂಟ್ ಸಿಟೀಸ್, ಸಕ್ರೆಡ್ ಸ್ಕಿಸ್, ಕಾಸ್ಮಿಕ್ ಜಿಯೋಮೆಟ್ರೀಸ್ ಅಂಡ್ ಸಿಟಿ ಪ್ಲಾನಿಂಗ್ ಇನ್ ಏನ್ಸಿಯಂಟ್ ಇಂಡಿಯಾ, ಎಡಿಟ್ಸ್: ಜೆ.ಮಾಕಿಮ್ ಮಾಲ್ವಿಲ್ಲೆ ಅಂಡ್ ಲಲಿತ್ ಎಂ.ಗುಜರಾಲ್, ನಿವ್‌ದೆಲ್ಲಿ-ಇಂದಿರಾ ಗಾಂಧಿ ನ್ಯಾಶನಲ್ ಸೆಂಟರ್ ಫಾರ್ ಆರ್ಟ್ಸ್ ಅಂಡ್ ಆರ್ಯನ್ ಬುಕ್ಸ್ ಇಂಟರ್ ನ್ಯಾಶನಲ್, ೨೦೦, ಪುಟ.೧೦೦-೧೧೮. ದಿಸ್ ಆರ್ಟಿಕಲ್ ಡೀಲ್ಸ್ ವಿಥ್ ದ ಆರ್ಕಿಯೋಸ್ಟೋನೊಮಿ

ಅಟ್ ವಿಜಯನಗರ. ಹಿ ಫರ್ದರ್ ಸ್ಟೇಟಸ್ ದಟ್ ದ ಮೇಜರ್ ಟೆಂಪಲ್ಸ್ ಅಲಿಗ್ನೆಡ್ ವಿಥ್ ದ ಸಕ್ರೇಡ್ ರಿವರ್. ಹಿ ಕನ್‌ಕ್ಲೂಡ್ಸ್ ಇನ್ ದ ಆರ್ಟಿಕಲ್ ದಟ್ ದ ವಿಜಯನಗರ ಕಿಂಗ್ಸ್ ಮಸ್ಟ್ ಹ್ಯಾವ್ ರಿಲೀಸ್ಡ್ ಅಂಡ್ ಇನ್ಕೋರ್ಪೋಟೆಡ್ ದ ಜಿಯೋಮೆಟ್ರಿಕಲ್ ಮೆಟಫರ್ ಇನ್ ಟು ದೇರ್ ಸಿಟಿ ಲಿಂಕಿಂಗ್ ದ ಕ್ಯಾಪಿಟಲ್ ಟು ದ ಗ್ರೇಟ್ ಈವೆಂಟ್ಸ್ ಆಫ್ ಹಿಸ್ಟರಿ ಅಂಡ್ ಪ್ರೀ ಹಿಸ್ಟರಿ. ಹಿ ಅನಾಲೈಸಿಸ್ ದ ಮೇಜರ್ ಟೆಂಪಲ್ಸ್ ಅಲಿಜೆನ್ಡ್ ನಾಟ್ ಓನ್ಲಿ ವಿಥ್ ರಿವರ್ಸ್ ಬಟ್ ಆಲ್‌ಸೋ ವಿಥ್ ಅದರ್ ಸಕ್ರೇಡ್ ಪ್ಲೇಸ್.

೪೩. ನಿಕೋಲ್ಸ್ ಪೋವೆಲ್ ಅಂಡ್ ಬೆರ್ರಿ ಲೆವೀಸ್, ಹಿಲ್ಸೈಡ್ ಶಿವ ಶ್ರೈನ್ ಇನ್ ವಿಜಯನಗರಸ್ ಈಸ್ಟರ್ನ್ ಅರ್ಬನ್ ಕೋರ್, ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್, ೧೯೯೩-೯೪, ಎಡಿಟ್ಸ್: ಡಿ.ವಿ.ದೇವರಾಜ ಅಂಡ್ ಚನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು.

೪೪. ಪಾಲ್ ಕೋಪ್- ಫಾಕ್ನರ್, ಎ ಕೊಲಪ್ಸಸ್ಡ್ ಮಂಡಪ ಇನ್ ಹಂಪಿ(ಎನ್ ಎಲ್ ಸಿ/೧೨) ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್, ೧೯೯೩-೯೪, ಎಡಿಟ್ಸ್: ಡಿ.ವಿ.ದೇವರಾಜ ಅಂಡ್ ಚನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು.

೪೫. ಪಾಲ್ ಕೋಪ್- ಫಾಕ್ನರ್, ಹೋಮ್ಸ್ ಫ್ರಮ್ ಬೆಡ್‌ರಾಕ್, ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್, ೧೯೮೮-೮೯, ಎಡಿಟ್ಸ್: ಡಿ.ವಿ.ದೇವರಾಜ ಅಂಡ್ ಚನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು, ಪುಟ.೧೨೪-೧೨೭.

೪೬. ಪೆರ್ಸಿ ಬ್ರೌನ್, ಇಂಡಿಯನ್ ಆರ್ಕಿಟೆಕ್ಚರ್(ಬುದ್ಧಿಸ್ಟ್ ಅಂಡ್ ಹಿಂದೂ ಪಿರಿಯಡ್), ಡಿ.ಬಿ. ತರಪೊರ್‌ವೆಲ ಸನ್ಸ್ ಅಂಡ್ ಕೋ. ಪ್ರೈವೆಟ್ ಲಿಮಿಟೆಡ್, ಬಾಂಬೆ, ೧೯೫೬, ಪುಟ.೯೧-೯೪. ದ ಬುಕ್ ಡಿಸ್ಕಸಸ್ ವಿಥ್ ದ ಆರ್ಕಿಟೆಕ್ಚರಲ್ ಫ್ಯೂಚರ್ಸ್ ಅಂಡ್ ಸ್ಟೈಲ್ಸ್ ಆಫ್ ಇಂಡಿಯಾ ಫ್ರಮ್ ದ ಬುದ್ಧಿಸ್ಟ್ ಪಿರಿಯಡ್ ಆನ್‌ವರ್ಡ್ಸ್. ಒನ್ ಆಫ್ ದ ಚಾಪ್ಟರ್ಸ್ ಡಿಸ್ಕಸಸ್ ದ ಆರ್ಕಿಟೆಕ್ಚರಲ್ ಸ್ಟೈಲ್ ಆಫ್ ವಿಜಯನಗರ ಪಿರಿಯಡ್ ಅಂಡ್ ಮೆನ್ಶೆನ್ಸ್ ಅಬೌಟ್ ಹಂಪಿ ಆಲ್‌ಸೋ.

೪೭. ಫಿಲಿಪ್ ಬಿ. ವಾಗ್‌ನರ್, ಆರ್ಕಿಟೆಕ್ಚರಲ್ ಅಂಡ್ ಮೈಥಿಕ್ ಸ್ಪೇಸ್ ಅಟ್ ದ ಹೇಮಕೂಟ ಹಿಲ್, ಎ ಪ್ರಿಲಿಮಿನರಿ ರಿಪೋರ್ಟ್, ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್, ೧೯೮೪-೮೭, ಎಡಿಟ್ಸ್: ಡಿ.ವಿ.ದೇವರಾಜ ಅಂಡ್ ಚನ್ನಬಸಪ್ಪ ಎಸ್. ಪಾಟೀಲ್, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು, ೧೯೯೧, ಪುಟ.೧೪೨-೧೪೮. ದಿಸ್ ಆರ್ಟಿಕಲ್ ಡೀಲ್ಸ್ ವಿಥ್ ದ ಡಾಕುಮೆಂಟೇಶನ್ ವರ್ಕ್ ಅಟ್ ಹೇಮಕೂಟ ಅಂಡ್ ಮನ್ಮಥ ಟ್ಯಾಂಕ್ ಅಂಡ್ ಇನ್‌ಕ್ಲೂಡ್ಸ್ ದ ಪ್ರಿಪರೇಶನ್ ಆಫ್ ಮ್ಯಾಪ್ಸ್. ಮಿಸುರ್ಡ್ ಡ್ರಾಯಿಂಗ್, ಆರ್ಕಿಟೆಕ್ಚರಲ್ ಡಿಸ್ಕ್ರಿಪ್ಷನ್ ಅಂಡ್ ಫೋಟೋಗ್ರಾಫಿಕ್ ಡಾಕುಮೆಂಟೇಶನ್ ಆಫ್ ದ ಸೈಟ್ ಅಂಡ್ ಇಂಡುವಿಜುವಲ್ ಸ್ಟ್ರಕ್ಚರ್ಸ್, ಹಿಸ್ಟರಿ ಮಿಥ್, ಕಲ್ಟ್ ಅಂಡ್ ಆರ್ಕಿಟೆಕ್ಚರಲ್ ಡೆವಲಪ್‌ಮೆಂಟ್ ಆರ್ ಎಕ್ಸ್‌ಪ್ಲೈನ್ಡ್ ಹಿಯರ್.

೪೮. ಫಿಲಿಪ್ ಬಿ. ವಾಗ್ನರ್, ಸುಲ್ತಾನ್ ಅಮಾಂಗ್ ಹಿಂದೂ ಕಿಂಗ್ಸ್ ಡ್ರೆಸ್ ಅಂಡ್ ಇಸ್ಲಾಮಿಕೈಜೇಶನ್ ಆಫ್ ಹಿಂದೂ ಕಲ್ಚರ್ ಅಟ್ ವಿಜಯನಗರ, ಜರ್ನಲ್ ಆಫ್ ಏಶಿಯಾ ಸ್ಟಡೀಸ್ ೫೫/೪ (ನವಂಬರ್ ೧೯೯೬), ೧೯೯೬, ಪುಟ.೮೫೧.೮೮೦

೪೯. ಫಿಲಿಪ್ ಬಿ. ವಾಗ್ನರ್, ಫ್ರಮ್ 'ಪಂಪ'ಸ್ ಕ್ರಾಸಿಂಗ್' ಟು 'ದ ಪ್ಲೇಸ್ ಆಫ್ ಲಾರ್ಡ್ ವಿರೂಪಾಕ್ಷ', ಆರ್ಕಿಟೆಕ್ಚರ್, ಮಿಥ್ ಅಂಡ್ ಪಾಟ್ರೋನೇಜ್ ಅಟ್ ಹಂಪಿ ಬಿಫೋರ್ ದ ಫೌಂಡಿಂಗ್ ಆಫ್ ವಿಜಯನಗರ. ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್, ೧೯೮೮-೯೧, ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು, ೧೯೯೬, ಪುಟ.೧೪೧-೧೭೪.

೫೦. ಫಿಲಿಪ್ ಬಿ. ವಾಗ್ನರ್, ಹರಿಹರ, ಬುಕ್ಕ ಅಂಡ್ ದ ಸುಲ್ತಾನ್, ದ ದೆಲ್ಲಿ ಸುಲ್ತಾನೇಟ್ ಇನ್ ದ ಪೊಲಿಟಿಕಲ್ ಇಮ್ಯಾಜಿನೇಶನ್ ಆಫ್ ವಿಜಯನಗರ, ಬಿಯಾಂಡ್ ಟರ್ಕ್ ಅಂಡ್ ಹಿಂದೂ, ಶಾಪಿಂಗ್ ರಿಲಿಜಿಯಸ್ ಐಡಿಂಟಿಟೀಸ್ ಇಸ್ಲಾಮಿಕೇಟ್ ಇಂಡಿಯಾ, ಎಡಿಟ್ಸ್: ಡೇವಿಡ್ ಗಿಲ್ ಮಾರ್ಟಿನ್ ಅಂಡ್ ಬ್ರುಸ್ ಬಿ. ಲಾರೆನ್ಸ್.(ಗೈನ್ಸಿಲ್ಲೆ, ಯುನಿವರ್ಸಿಟಿ ಆಫ್ ಫ್ಲೋಟಿಡಾ ಪ್ರೆಸ್).

೫೧. ಫಿಲಿಪ್ ಬಿ. ವಾಗ್ನರ್, ಆರ್ಕಿಟೆಕ್ಚರ್ ಅಂಡ್ ರಾಯಲ್ ಅಥಾರಿಟಿ ಅಂಡರ್ ದ ಅರ್ಲಿ ಸಂಗಮಾಸ್, ನಿವ್ ಲೈಲ್ ಆನ್ ಹಂಪಿ- ರೀಸೆಂಟ್ ರಿಸರ್ಚ್ ಅಟ್ ವಿಜಯನಗರ, ಎಡಿಟ್ಸ್: ಜಾನ್ ಎಂ. ಫ್ರಿಟ್ಜ್ ಅಂಡ್ ಜಾರ್ಜ್ ಮೈಕಲ್, ಮಾರ್ಗ್ ಪಬ್ಲಿಕೇಶನ್ಸ್, ಬಾಂಬೆ ೨೦೦೧, ಪುಟ.೧೨-೨೩. ದಿಸ್ ಆರ್ಟಿಕಲ್ ಟ್ರಾಕ್ಸ್ ದ ಅರ್ಲಿ ಹಿಸ್ಟರಿ ಆಫ್ ಹಂಪಿ ರೈಟ್ ಫ್ರಮ್ ೭ನೇ ಸೆಂಚುರಿ ಅಪ್ ಟು ದ ವಿಜಯನಗರ ಪೀರಿಯಡ್. ದ ಕಂಡಿಶನ್ ಆಫ್ ಹಂಪಿ ಆನ್ ದ ಈವ್ ಆಫ್ ಫೌಂಡಿಂಗ್ ಆಫ್ ವಿಜಯನಗರ, ಲೇಔಟ್ ಆಫ್ ದ ಸಿಟಿ, ಅಡಪ್ಟೇಶನ್ ಆಫ್ ವಿರೂಪಾಕ್ಷ ಆ್ಯಸ್ ದ ಸ್ಟೇಟ್ ಡೈಟಿ, ಆರ್ಕಿಟೆಕ್ಚರಲ್ ಅಂಡ್ ರಿಚುವಲ್ ರಿಸ್ಟ್ರಕ್ಚರಿಂಗ್ ಆಫ್ ದ ಹೇಮಕೂಟ ಅಂಡ್ ಅರ್ಲಿ ಸಂಗಮ ಮೆಮೋರಿಯಲ್ ಶ್ರೀನೆಸ್ ಆರ್ ಎಕ್ಸ್‌ಪ್ಲೇನ್ಡ್. ದ ಇಂಪಾಕ್ಟ್ ಆಫ್ ವಿರೂಪಾಕ್ಷ ಕಲ್ಟ್ ಆನ್ ದ ಪ್ಲಾನಿಂಗ್ ಆಫ್ ದ ಅರ್ಬನ್ ಕೋರ್ ಆರ್ ಡಿಸ್ಕಸ್ಡ್ ಇನ್ ಡಿಟೈಲ್.

೫೨. ಪಿರ್ರೆ ಫಿಲ್ಲಿಯೋಜಾಟ್, ಟೆಕ್ನಿಕ್ಸ್ ಆಫ್ ಕ್ರೊನೊಲಾಜಿ ಆಫ್ ಕನ್ಸ್ಟ್ರಕ್ಷನ್ ಇನ್ ದ ಟೆಂಪಲ್ ಆಫ್ ವಿಠ್ಠಲ ಅಟ್ ಹಂಪಿ, ವಿಜಯನಗರ ಸಿಟಿ ಅಂಡ್ ಎಂಪೈರ್, ನಿವ್ ಕರೆಂಟ್ಸ್ ಆಫ್ ರಿಸರ್ಚ್, ಸ್ಟಟ್ಗರ್ಟ್, ೧೯೮೫, ವಾಲ್ಯೂಂ-೧, ಪುಟ.೨೯೬-೩೦೭. ದಿಸ್ ಆರ್ಟಿಕಲ್ ನರೇಟ್ಸ್ ಇನ್ ಡೀಟೈಲ್ಸ್ ಅಬೌಟ್ ದ ಕ್ರೊನೋಲಾಜಿ ಆಫ್ ದ ಕನ್‌ಸ್ಟ್ರಕ್ಷನ್ ಆಫ್ ವಿಠ್ಠಲ ಟೆಂಪಲ್. ದ ಬಿಲ್ಡಿಂಗ್ ಮೆಟಿರಿಯಲ್, ದ ವಾಲ್ ಕನ್‌ಸ್ಟ್ರಕ್ಷನ್ಸ್, ದ ಲೆಟರ್ ಆಡಿಶನ್ಸ್ ಆರ್ ಮೇಂಟೈನ್ಡ್ ಅಂಡ್ ದ ಡೇಟ್ ಆಫ್ ದ ಗೋಪುರ, ಹಂಡರೆಡ್ ಪಿಲ್ಲರ್ ಪವಿಲಿಯನ್ ಅಂಡ್ ದ ಪಾರ್ಟ್ಸ್ ಆಫ್ ದ ಟೆಂಪಲ್ಸ್ ಆರ್ ಹೈಲೆಟೆಡ್.

೫೩. ರಿಚರ್ಡ್ ಬ್ಲರ್ಟನ್ ಟಿ.,ವಿಜಯನಗರ, ಸಿಟಿ ಆಫ್ ವಿಕ್ಟರಿ, ಫೆಸ್ಟಿವಲ್ ರಿವಿವ್–೪, ೧೯೮೨.

೫೪. ರಿಚರ್ಡ್ ಬ್ಲರ್ಟನ್ ಟಿ., ವಿಜಯನಗರ, ಸಿಟಿ ಅಂಡ್ ಎಂಪೈರ್, ಎಡಿಟ್ಸ್: ಅಣ್ಣ ಎಲ್. ದಲ್ಲಪಿಕ್ಕೊಲಾ, ಸ್ಟಟ್ಗರ್ಟ್, ಫ್ರಾನ್ಜ್ ಸ್ಟೈನರ್ ವರ್ಲಾಗ್ ವೀಸ್‌ಬಡೆನ್ ಜಿಎಂಬಿಎಚ್, ಪುಟ.೩೯೯–೪೦೧.

೫೫. ರಿಚರ್ಡ್ ಬ್ಲರ್ಟನ್ ಟಿ., ಪ್ಯಾಲೇಸ್ ಸ್ಟಕ್ಚರ್ಸ್ ಅಟ್ ವಿಜಯನಗರ, ದ ಆರ್ಕಿಟೆಕ್ಚರಲ್ ಎವಿಡೆನ್ಸ್ ಸೌಥ್ ಏಶಿಯನ್ ಆರ್ಕಿಯೋಲಾಜಿ, ೧೯೮೫, ಎಡಿಟ್ಸ್: ಫ್ರಿಫೆಲ್ಪ್ ಕೆ ಅಂಡ್ ಸೊರೆನ್‌ಸೆನ್, ಲಂಡನ್, ಕರ್‌ಜೋನ್ ಪ್ರೆಸ್, ೧೯೮೯, ಪುಟ.೪೨೬–೪೪೦.

೫೬. ಫಿಲ್ಲಿಯೋಜಾಟ್, ಪಿಯಿರ್ರೆ–ಸಿಲ್ವೈನ್ ಅಂಡ್ ವಸುಂಧರಾ ಫಿಲ್ಲಿಯೋಜಾಟ್, ಹಂಪಿ–ವಿಜಯನಗರ, ದ ಟೆಂಪಲ್ ಆಫ್ ವಿಠ್ಠಲ, ಸೀತಾರಾಮ ಭಾರತೀಯ ಇನ್ಸಿಟಿಟ್ಯೂಟ್ ಆಫ್ ಸೈಂಟಿಫಿಕ್ ರಿಸರ್ಚ್, ನಿವ್ ದೆಲ್ಲಿ, ೧೯೮೮. ಎ ಫುಲ್ ಡಿಸ್ಕ್ರಿಪ್ಶನ್ ಆಫ್ ದ ವಿಠ್ಠಲ ಟೆಂಪಲ್ ಇನ್ ದ ಸಕ್ರೇಡ್ ಸೆಂಟರ್. ಅಕ್ಕೊಮ್‌ಪೇನ್ಡ್ ಬೈ ಎಕ್ಸಲೆಂಟ್ ಮೀಸುರ್ಡ್ ಡ್ರಾಯಿಂಗ್ಸ್.

೫೭. ಫಿಲ್ಲಿಯೋಜಾಟ್ ಅಂಡ್ ವಸುಂಧರಾ, ಎಡಿಟರ್, ವಿಜಯನಗರ, ಆ್ಯಸ್ ಸೀನ್ ಡೊಮಿಂಗೊ ಪೈಸ್ ಅಂಡ್ ಫೆರ್ನೋ ನೂನಿಜ್(೧೬ನೇ ಸೆಂಚುರಿ ಪೋರ್ಚುಗೀಸ್ ಕ್ರೋನಿಕ್ಲಿಯರ್ಸ್) ಅಂಡ್ ಅದರ್ಸ್, ನ್ಯಾಶನಲ್ ಬುಕ್ ಟ್ರಸ್ಟ್, ನ್ಯೂ ದೆಲ್ಲಿ, ೧೯೯೯. ಎ ಕಾಂಪ್ಲಿಕೇಶನ್ ಆಫ್ ಫಾರಿನರ್ಸ್ ರಿಪೋರ್ಟ್ಸ್ ರಿಲೈಯಿಂಗ್ ಹ್ಯಾವಿಲಿ ಆನ್ ಸೆವೆಲ್.

೫೮. ಫ್ರಿಟ್ಜ್, ಜಾನ್ ಎಂ. ಅಂಡ್ ಜಾರ್ಜ್‌ಮೈಕಲ್, ಎಡಿಟರ್ಸ್: ನಿವ್ ಲೈಟ್ ಆನ್ ಹಂಪಿ, ರಿಸೆಂಟ್ ರಿಸರ್ಚ್ ಅಟ್ ವಿಜಯನಗರಮ ಮಾರ್ಗ್ ಪಬ್ಲಿಕೇಶನ್ಸ್, ಮುಂಬೈ, ೨೦೦೧. ಎ ರಿವಿವ್ ಆಫ್ ಟ್ವೆಂಟಿ ಇಯರ್ ಆಫ್ ಇನ್‌ವೆಸ್ಟಿಗೇಶನ್ ಅಟ್ ದ ಸೈಟ್ ಬೈ ಟ್ವೆಲ್ಯೂ ಸ್ಕಾಲರ್ಸ್, ಇನ್‌ಕ್ಲೂಡಿಂಗ್ ರೆಕಮೆಂಡೇಶನ್ಸ್ ಫಾರ್ ರೆಸ್ಪಾನ್ಸಿಬಲ್ ಮ್ಯಾನೆಜ್‌ಮೆಂಟ್ ಆಫ್ ದ ಸೈಟ್.

೫೯. ಗಾರ್ಲಿಂಗ್ಸ್ ಜೆ., ಜಾನ್ ಎಂ. ಫ್ರಿಟ್ಜ್ ಅಂಡ್ ಜಾರ್ಜ್‌ಮೈಕಲ್, ಸಿಟಿ ಆಫ್ ವಿಕ್ಟರ್, ವಿಜಯನಗರ: ದ ಮೆಡಿವಲ್ ಕ್ಯಾಪಿಟಲ್ ಆಫ್ ಸೌಥ್ ಇಂಡಿಯಾ, ಅಪೆರ್ಚುರ್, ನ್ಯೂಯಾರ್ಕ್, ೧೯೯೧. ಹಾರ್ಡ್ ಟು ಫೈನ್ಡ್, ಬಟ್ ವರ್ಥ್ ಇಟ್ ಫಾರ್ ದ ವಂಡರ್‌ಫುಲ್ ಬ್ಲಾಕ್ ಅಂಡ್ ವೈಟ್ ಫೋಟೋಗ್ರಾಪ್ಸ್. ದ ಮೋಸ್ಟ್ ಕಂಪ್ಲೀಟ್ ಜನರಲ್ ಇಂಟರ್‌ಡಕ್ಷನ್ ಟು ದ ಸೈಟ್.

೬೦. ಕೊಟ್ರಯ್ಯ, ಸಿ.ಟಿ.ಎಂ. ಅಂಡ್ ಅನ್ನಾಡೋಲ್ಯಾಂಪಿಯಾ, ಕಿಂಗ್ ಕೋರ್ಟ್ ಅಂಡ್ ಕ್ಯಾಪಿಟಲ್: ಆ್ಯನ್ ಅನ್ಥಲಾಜಿ ಆಫ್ ಕನ್ನಡ ಲಿಟರೇರಿ ಸೋರ್ಸ್ ಫಾರ್ ದ ವಿಜಯನಗರ ಪಿರಿಯಡ್, ಮನೋಹರ, ನ್ಯೂ ದೆಲ್ಲಿ, ೨೦೦೨. ದೀಸ್ ಲಿಟರೆರಿ ಎಕ್ಸ್ಟ್ರಾಕ್ಸ್ ಆಫ್ ದ ಪಿರಿಯಡ್ ಮೇಕ್ ಫಾರ್ ಲೈವ್ಲಿ ರೀಡಿಂಗ್.

೬೧. ಮೈಕಲ್, ಜಾರ್ಜ್, ವಿಜಯನಗರ: ಆರ್ಕಿಟೆಕ್ಚರಲ್ ಇನ್ವೆಂಟರಿ ಆಫ್ ದ ಅರ್ಬನ್ ಕೋರ್, ೨ ವಾಲ್ಯೂಮ್ಸ್: ಡೈರೆಕ್ಟರೇಟ್ ಆಫ್ ಆರ್ಕಿಯೋಲಾಜಿ ಅಂಡ್ ಮ್ಯೂಸಿಯಮ್ಸ್, ಮೈಸೂರು, ೧೯೯೦, ಗಿವ್ಸ್ ಕಂಪ್ಲೀಟ್ ಡಿಸ್ಕ್ರಿಪ್ಷನ್ಸ್ ವಿಥ್ ಮ್ಯಾಪ್, ಮೀಸೂರ್ಡ್ ಡ್ರಾಯಿಂಗ್ ಅಂಡ್ ಫೋಟೋಗ್ರಾಫ್ಸ್ ಆಫ್ ದಿಸ್ ಪಾರ್ಟ್ ಆಫ್ ದ ಸೈಟ್.

೬೨. ಮೈಕಲ್, ಜಾರ್ಜ್ ಅಂಡ್ ಫಿಲ್ಲಿಪ್ ಬಿ. ವಾಗನರ್, ವಿಜಯನಗರ: ಆರ್ಕಿಟೆಕ್ಚರಲ್ ಇನ್‌ವೆಂಟರಿ ಆಫ್ ದ ಸಕ್ರೇಡ್ ಸೆಂಟರ್, ೩ ವಾಲ್ಯೂಮ್ಸ್, ಮನೋಹರ, ನ್ಯೂ ದೆಲ್ಲಿ, ೨೦೦೨. ಫುಲ್ ಡಿಸ್ ಕ್ರಿಪ್ಷನ್ಸ್ ವಿಥ್ ಮ್ಯಾಪ್ಸ್, ಮೀಸೂರ್ಡ್ ಡ್ರಾಯಿಂಗ್ ಅಂಡ್ ಫೋಟೋಗ್ರಾಫ್ಸ್.

೬೩. ಮೋರ್ರಿಸನ್, ಕ್ಯಾಥಲೀನ್ ಬಿ., ಫೀಲ್ಡ್ಸ್ ಆಫ್ ವಿಕ್ಟರ್: ವಿಜಯನಗರ ಅಂಡ್ ದ ಕೋರ್ಸ್ ಆಫ್ ಇಂಟೆನ್ಸಿಫಿಕೇಶನ್, ರೀಪ್ರಿಂಟ್, ಮನ್ಶಿರಾಮ್ ಮನೋಹರಲಾಲ್, ನ್ಯೂ ದೆಲ್ಲಿ, ೨೦೦೦. ಆ್ಯನ್ ಅನಾಲೈಸಿಸ್ ಆಫ್ ದ ಡೆವಲಪ್‌ಮೆಂಟ್ ಆಫ್ ಅಗ್ರಿಕಲ್ಚರ್ ಇನ್ ದ ರೀಜನ್ ಬೇಸ್ಡ್ ಆನ್ ಆ್ಯನ್ ಆರ್ಕಿಯೋಲಾಜಿಕಲ್ ಸರ್ವೇ ಆಫ್ ದ ಕ್ಯಾಪಿಟಲ್ಸ್ ಹಿಂಟರ್‌ಲ್ಯಾಂಡ್.

೬೪. ಸೇವೆಲ್, ರಾಬರ್ಟ್, ಎ ಫರ್‌ಗೆಟನ್ ಎಂಪೈರ್(ವಿಜಯನಗರ): ಎ ಕಾಂಟ್ರೂಬ್ಯೂಷನ್ ಟು ದ ಹಿಸ್ಟರಿ ಆಫ್ ಇಂಡಿಯಾ, ರೀಪ್ರಿಂಟ್, ಏಶಿಯನ್ ಎಡುಕೇಶನಲ್ ಸರ್ವೀಸ್, ನ್ಯೂ ದೆಲ್ಲಿ, ೨೦೦೦. ದ ಕ್ಲಾಸಿಕಲ್ ಹಿಸ್ಟರಿ ಆಫ್ ವಿಜಯನಗರ, ಟುಗೆದರ್ ವಿಥ್ ದ ಪೋರ್ಚುಗೀಸ್ ಕ್ರೋನಿಕಲ್ಸ್.

೬೫. ಸ್ಟೈನ್, ಬರ್ಟನ್, ದ ನಿವ್ ಕೇಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ, ೧, ವಿಜಯನಗರ,ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್, ಕೇಂಬ್ರಿಡ್ಜ್, ೧೯೮೯. ಗಿವ್ಸ್ ದ ಹಿಸ್ಟೋರಿಕಲ್ ಬ್ಯಾಕ್‌ರೌಂಡ್ ಫಾರ್ ದ ಸೈಟ್ ಅಂಡ್ ಎಂಪೈರ್.

೬೬. ವರ್ಗೀಸ್, ಅನಿಲ್, ರಿಲಿಜಿಯಸ್ ಟ್ರೆಡಿಶನ್ಸ್ ಅಟ್ ವಿಜಯನಗರ: ಆ್ಯಸ್ ರಿವೀಲೆಡ್ ಥ್ರೋ ಇಟ್ಸ್ ಮಾನೊಮೆಂಟ್ಸ್, ಮನೋಹರ, ನ್ಯೂದೆಲ್ಲಿ, ೧೯೯೫. ಪ್ರೊವಿಡೆಸ್ ಆನ್ ಅನಾಲೈಸಿಸ್ ಆಫ್ ದ ಹಿಸ್ಟರಿ ಆಫ್ ರಿಲಿಜಿಯಸ್ ಬಿಲೀಫ್ಸ್ ಅಂಡ್ ಪ್ರಾಕ್ಟೀಸ್ ಇನ್ ವಿಜಯನಗರ ಟೈಮ್ಸ್.

೬೭. ವರ್ಗೀಸ್, ಅನಿಲ್, ಆರ್ಕಿಯೋಲಾಜಿ, ಆರ್ಟ್ ಅಂಡ್ ರಿಲಿಜಿಯನ್: ನ್ಯೂ ಪರ್‌ಸ್ಪೆಕ್ಟೀವ್ಸ್ ಆನ್ ವಿಜಯನಗರ, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂದೆಲ್ಲಿ, ೨೦೦೦. ರಿಸರ್ಚ್ ಎಸ್ಸೇಸ್ ಆನ್ ದ ಹಿಸ್ಟರಿ ಅಂಡ್ ಆರ್ಕಿಯೋಲಾಜಿ ಆಫ್ ದ ಸೇಟ್.

೬೮. ವರ್ಗೀಸ್, ಅನಿಲ್, ಮಾನೋಮೆಂಟಲ್ ಲೆಗಸಿ, ಹಂಪಿ, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂದೆಲ್ಲಿ, ೨೦೦೨. ಸಿಚ್ಯುವೇಟ್ಸ್ ದ ಮಾನೋಮೆಂಟ್ಸ್ ಆಫ್ ದ ಸೈಟ್ ದೇರ್ ಹಿಸ್ಟೋರಿಕಲ್, ಆರ್ಟಿಸ್ಟಿಕ್ ಅಂಡ್ ರಿಲಿಜಿಯಸ್ ಕಾಂಟೆಕ್ಸ್.

೬೯. ವಾಗ್ನೋರ್, ಫಿಲ್ಲಿಪ್ ಬಿ., "ಸುಲ್ತಾನ್ ಅಮಾಂಗ್ ಹಿಂದೂ ಕಿಂಗ್ಸ್: ಡ್ರೆಸ್, ಟೈಟಲ್ಸ್, ಅಂಡ್ ದ ಇಸ್ಲಾಮಿಕೈಜೇಶನ್ ಆಫ್ ಹಿಂದೂ ಕಲ್ಚರ್ ಅಟ್ ವಿಜಯನಗರ", ಜರ್ನಲ್ ಆಫ್

ಏಶಿಯನ್ ಸ್ಟಡೀಸ್, ೫೫/೪, ನವೆಂಬರ್-೧೯೯೬, ಪುಟ.೮೫೧-೮೦. ಎ ನಿವ್ ಅಪ್ರೋಚ್ ಟು ಸುಲ್ತಾನೇಟ್ ಅಸ್ಪೆಕ್ಟ್ಸ್ ಆಫ್ ಲೈಫ್ ಅಟ್ ದ ಕ್ಯಾಪಿಟಲ್.[೬೪]

೫.೧.೧೧. ವಿದೇಶಿ ಸಂಶೋಧಕರ ಪ್ರಮುಖ ಸಂಶೋಧನ ಕೃತಿಗಳು

ವಿಜಯನಗರ ಮತ್ತು ಹಂಪಿಯ ಕುರಿತು ಅನೇಕ ವಿದೇಶಿ ಸಂಶೋಧಕರು ಸಂಶೋಧನೆ ನಡೆಸಿ ಅಮೂಲ್ಯ ಕೊಡುಗೆಗಳನ್ನು ನೀಡಿದ್ದಾರೆ. ಇದು ಅತ್ಯಂತ ಮಹತ್ವದ ಕಾರ್ಯ. ವಿವಿಧ ವಿದೇಶಿ ವಿಶ್ವವಿದ್ಯಾಲಯಗಳ ಸಂಶೋಧಕರು ವಿಜಯನಗರವನ್ನು ಕುರಿತು ತಮ್ಮ ವಿವಿಧ ಪದವಿಗಳಿಗಾಗಿ ಸಿದ್ಧಪಡಿಸಿದ ಸಂಶೋಧನೆ ಪ್ರಬಂಧಗಳ ವಿವರವನ್ನು ಇಲ್ಲಿ ದಾಖಲಿಸುವುದು ಮುಖ್ಯವೆನಿಸುತ್ತದೆ. ಅವುಗಳಲ್ಲಿ ಮುಖ್ಯವಾದ ಕೆಲವು ಪ್ರಬಂಧಗಳ ಚರ್ಚೆ ಇಲ್ಲಿದೆ.

೧.ಅಲೆಗ್ಸಾಂಡರ್ ಮ್ಯಾಕ್, ಸೋಶಿಯಲ್ ಸ್ಪೇಸ್ ಅಟ್ ವಿಜಯನಗರ(ಟೆನ್‌ಟೇಟಿವ್ ಟೈಟಲ್) ಪಿಎಚ್.ಡಿ. ಪ್ರಬಂಧ, ಡಿಪಾರ್ಟ್ ‌ಮೆಂಟ್ ಆಫ್ ಆಂಥ್ರಾಪಲಾಜಿ, ಆರಿಜೋನ್ ಸ್ಟೇಟ್ ಯುನಿವರ್ಸಿಟಿ, ಟೆಂಪೆ.

೨.ಅನಿಲ್ ವರ್ಗೀಸ್, ರಿಲಿಜಿಯಸ್ ಟ್ರೆಡಿಶನ್ ಇನ್ ದ ಸಿಟಿ ಆಫ್ ವಿಜಯನಗರ ಪ್ರಿಯೋರ್ ಟು ೧೫೬೫ ಎ.ಡಿ.(ಬೇಸ್ಡ್ ಆನ್ ಎ ಸ್ಟಡಿ ಆಫ್ ದ ಮಾನೊಮೆಂಟ್ಸ್), ಪಿಎಚ್.ಡಿ.,ಪ್ರಬಂಧ ಡಿಪಾರ್ಟ್‌ಮೆಂಟ್ ಆಫ್ ಹಿಸ್ಟರಿ, ಯುನಿವರ್ಸಿಟಿ ಆಫ್ ಬಾಂಬೆ, ೧೯೮೯.

೩.ಬ್ರಿಗೀಟ್ ಪಾಶ್ಚರ್, ದ ಪಟ್ಟಾಭಿರಾಮ ಟೆಂಪಲ್, ಎ ಡಿಸ್ಕ್ರಿಪ್ಷನ್ ಅಂಡ್ ಐಕೊನೋಗ್ರಾಫಿಕ್ ಅನಾಲೈಸೀಸ್, ಥೀಸಿಸ್ ಆಫ್ ಮಾಸ್ಟರ್ ಆಫ್ ಆರ್ಟ್ಸ್, ವರ್ಮೋಂಟ್ ಕಾಲೇಜ್ ಆಫ್ ನೋರ್ವಿಚ್ ಯುನಿವರ್ಸಿಟಿ, ೧೯೮೭.

೪.ಡೊಮಿನಿಕ್ ಜೆ.,ಡಿವಿಸನ್-ಜೆನ್ಕಿನ್ಸ್, ದ ಇರ್ರಿಗೇಶನ್ ಸಿಸ್ಟಮ್ ಅಂಡ್ ವಾಟರ್ ಸಪ್ಲೈಸಿಸ್ಟಮ್ ಆಫ್ ದ ಸಿಟಿ ಆಫ್ ವಿಜಯನಗರ. ೨ ವಾಲ್ಯೂಮ್ಸ್. ಪಿಎಚ್.ಡಿ. ಪ್ರಬಂಧ, ಫ್ಯಾಕಲ್ಟಿ ಆಫ್ ಓರಿಯಂಟಲ್ ಸ್ಟಡೀಸ್, ಯುನಿವರ್ಸಿಟಿ ಆಫ್ ಕೇಂಬ್ರೀಡ್ಜ್, ೧೯೮೮.

೫.ಎಮ್ಮ ಅಡಾಮ್ಸ್, ದ ಆರ್ಕಿಟೆಕ್ಚರ್ ಆಫ್ ರಾಯಲ್ ರಿಚುವಲ್, ಲೆಜಿಟಿಮೇಶನ್ ಆಫ್ ಡಿವೈನ್ ಕಿಂಗ್‌ಶಿಪ್ ಇನ್ ದ ಪ್ಲಾನಿಂಗ್ ಆಫ್ ದ ರಾಯಲ್ ಸೆಂಟರ್ ಆಫ್ ವಿಜಯನಗರ. ಡಜಂಟೇಶನ್ ಆಫ್ ಡಿಪ್ಲೊಮ ಇನ್ ಆರ್ಕಿಟೆಕ್ಚರ್, ಡಿಪಾರ್ಟಮೆಂಟ್ ಆಫ್ ಆರ್ಕಿಟೆಕ್ಚರ್, ಯುನಿವರ್ಸಿಟಿ ಆಫ್ ಕೇಂಬ್ರಿಡ್ಜ್, ೧೯೮೫.

ಈ ಮೇಲೆ ಉಲ್ಲೇಖಿಸಿದ ಕೆಲವು ಕೃತಿಗಳಲ್ಲಿ ಅತಿ ಮಹತ್ವ ಪಡೆದ ಕೆಲ ಕೃತಿಗಳ ಮಾಹಿತಿಯನ್ನು ಈ ಮುಂದೆ ಉಲ್ಲೇಖಿಸಲಾಗಿದ್ದು, ಆ ಕೃತಿಗಳಲ್ಲಿ ಉಲ್ಲೇಖಿತವಾಗಿರುವ ಅನೇಕ ವಿವರಗಳು ಆಯಾ ಲೇಖಕರ ಮನಸ್ಥಿತಿಯನ್ನು ಮತ್ತು ಅವರ ಕೃತಿಯ ಉದ್ದೇಶವನ್ನು ಸ್ಪಷ್ಟಪಡಿಸುತ್ತವೆ. ಆದ್ದರಿಂದ ಆಯ್ದ ಕೆಲವು ಕೃತಿಗಳ ಮೇಲಿನ ಸಂಕ್ಷಿಪ್ತವಾದ ಚರ್ಚೆ ಈ ಮುಂದಿದೆ.

೧.ಬರ್ಟನ್ ಸ್ಟೀನ್: ಅಮೇರಿಕಾದ ಇತಿಹಾಸ ತಜ್ಞನಾದ ಈತ Burten stein-Segnentary state (೧೯೮೦) ಮತ್ತು 'ಹಿಸ್ಟರಿ ಆಫ್ ವಿಜಯನಗರ' ಎಂಬ ಕೃತಿಯನ್ನು ೧೯೯೨ರಲ್ಲಿ ರಚಿಸಿದರು. ಇದರಲ್ಲಿ ವಿಜಯನಗರದ ಆರ್ಥಿಕ ಮತ್ತು ಸಾಮಾಜಿಕ ಹಾಗೂ ಸೇನಾ ವ್ಯವಸ್ಥೆಯನ್ನು ಕುರಿತು ಆಳವಾದ ಅಧ್ಯಯನ ಮಾಡಿದ್ದಾನೆ. ವಿಜಯನಗರದ ಅವನತಿಯ ನಂತರ ಸ್ಥಿತಿಗತಿಯ ಬಗ್ಗೆ ತಿಳಿಸಿದ್ದಾನೆ ಹಾಗೂ ಇವರ ರಾಜ್ಯಾಡಳಿತದಲ್ಲಿ ಧರ್ಮಾಚರಣೆಯನ್ನು ನಿರ್ವಹಿಸುವ ಕೇಂದ್ರವಿತ್ತು. ಅದು ನವರಾತ್ರಿ ಉತ್ಸವಗಳಲ್ಲಿ ಹಬ್ಬ ಹರಿದಿನಗಳನ್ನು ನಡೆಸಿ ಸೈನ್ಯಾಧಿಕಾರಿಗಳನ್ನು ಸಂಘಟಿಸುವ ಸಲುವಾಗಿ ಇತ್ತೆಂದು ತಿಳಿಸುತ್ತಾನೆ.

೨. ಅನಿಲ್ ವರ್ಗೀಸ್ ಅವರ Religious Traditions at Vijayanagara as Revealed Through its Monuments ಎನ್ನುವ ಕೃತಿಯಲ್ಲಿ ಲೇಖಕರು ಮುಖ್ಯವಾಗಿ ವಿಜಯನಗರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಧಾರ್ಮಿಕ ಪರಂಪರೆಯನ್ನು ದೇವಾಲಯ ಮತ್ತು ಸ್ಮಾರಕಗಳಲ್ಲಿರುವ ಶಿಲ್ಪಗಳನ್ನು, ಶಾಸನಗಳನ್ನು ಆಧರಿಸಿ ವಿವರಿಸಿದ್ದಾರೆ. ಒಂದನೇ ಅಧ್ಯಾಯದಲ್ಲಿ ವಿಜಯನಗರದ ಹಿನ್ನೆಲೆ ಹಾಗೂ ಧಾರ್ಮಿಕ ಮತ್ತು ಪುರಾತತ್ತ್ವೀಯ ಹಿನ್ನೆಲೆಯನ್ನು ಕುರಿತು ವಿಶದೀಕರಿಸಿದ್ದಾರೆ. ಎರಡನೇ ಅಧ್ಯಯದಲ್ಲಿ ಹಂಪಿಯಲ್ಲಿರುವ ವಿರುಪಾಕ್ಷ ದೇವಾಲಯವನ್ನೊಳಗೊಂಡಂತೆ ಉಳಿದಿರುವ ಹಲವು ಶೈವ ದೇವಾಲಯಗಳ ಆಧಾರದ ಮೇಲೆ ಅಂದಿನ ಶೈವ ಪರಂಪರೆಯನ್ನು ವಿಶ್ಲೇಷಿಸಿದ್ದಾರೆ. ಮೂರನೇ ಅಧ್ಯಾಯದಲ್ಲಿ ಇಲ್ಲಿನ ಸ್ಮಾರಕ ಮತ್ತು ಅವಶೇಷಗಳನ್ನು ಆಧಾರವಾಗಿಟ್ಟುಕೊಂಡು ನರಸಿಂಹ ಪರಂಪರೆಯನ್ನು ವಿಶ್ಲೇಷಿಸಿದ್ದಾರೆ. ಇಲ್ಲಿ ರಾಮಾಯಾಣ ಪರಂಪರೆ ಯಾವ ರೀತಿ ಇಲ್ಲಿನ ದೇವಾಲಯಗಳಲ್ಲಿನ ಶಿಲ್ಪಗಳಲ್ಲಿ ಕಾಣಿಸಿಕೊಂಡಿದೆ ಎನ್ನುವುದನ್ನು ನಾಲ್ಕನೇ ಅಧ್ಯಾಯದಲ್ಲಿ ಉದಾಹರಣೆ ಸಮೇತ ವಿವರಿಸಿದ್ದಾರೆ. ಹಂಪಿಯಲ್ಲಿ ಕೃಷ್ಣ ಮತ್ತು ವಿಠ್ಠಲ ಪಂಥದ ಮೂಲ, ಆ ಪರಂಪರೆ ಹೇಗೆ ಬೆಳವಣಿಗೆ ಆಯಿತು ಮತ್ತು ಆ ಪಂಥದ ಮಹತ್ವವೇನು ಎಂಬುದನ್ನು ಹಂಪಿಯಲ್ಲಿರುವ ದೇವಾಲಯ ಮತ್ತು ಪ್ರಾಚ್ಯಾವಶೇಷಗಳನ್ನು ಆಧಾರವಾಗಿಟ್ಟುಕೊಂಡು ಐದನೇ ಅಧ್ಯಾಯದಲ್ಲಿ ಚರ್ಚಿಸಿದ್ದಾರೆ. ಮೂಲತಃ ತಮಿಳುನಾಡಿನ ಶ್ರೀವೈಷ್ಣವ ಪರಂಪರೆ ಹಂಪಿಗೆ ಹೇಗೆ ಕಾಲಿಟ್ಟಿತು; ಅದನ್ನು ಪ್ರತಿನಿಧಿಸುವ ಸ್ಮಾರಕಗಳು ಯಾವುವು ಅದರ ಮಹತ್ವ, ಬೆಳವಣಿಗೆ ಮೊದಲಾದ ಅಂಶಗಳನ್ನು ಆರನೇ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಇಲ್ಲಿನ ಪ್ರಖ್ಯಾತ ಧರ್ಮಗಳ ಚಿಕ್ಕ ಚಿಕ್ಕ ಪಂಥಗಳಾದ ನಾಗ, ಗರುಡ, ಹನುಮಂತ, ಶಾಕ್ತ ಮೊದಲಾದ ಪರಂರೆಗಳನ್ನು ಏಳನೇ ಅಧ್ಯಾಯದಲ್ಲಿ ವಿಶ್ಲೇಷಿಸಿದ್ದಾರೆ. ಅದೇ ರೀತಿ ಇಲ್ಲಿನ ಪ್ರಧಾನ ದೇವಾಲಯಗಳಲ್ಲಿ ಅಂದು ನಡೆಯುತ್ತಿದ್ದ ಹಬ್ಬ-ಉತ್ಸವಗಳು, ವಿಶೇಷ ಪೂಜೆ ಮೊದಲಾದವುಗಳನ್ನು ಕುರಿತು ಶಾಸನ ಮತ್ತು ಸಾಹಿತ್ಯ ಕೃತಿಗಳ ಹಿನ್ನೆಲೆಯಲ್ಲಿ ಎಂಟನೇ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಹಂಪಿಯಲ್ಲಿನ ಧಾರ್ಮಿಕ ಪರಂಪರೆಯ ಪ್ರತೀಕಗಳಾದ ಮಠ ಮತ್ತು ಅಗ್ರಹಾರಗಳು ಮತ್ತು ಅವುಗಳ ಕಾರ್ಯವೈಖರಿಯ ಕುರಿತು ವ್ಯವಸ್ಥಿತವಾಗಿ ಒಂಬತ್ತನೆಯ ಅಧ್ಯಾಯದಲ್ಲಿ ಚರ್ಚಿಸಿದ್ದಾರೆ. ಅಂದು ಹಂಪಿಯಲ್ಲಿದ್ದ ಇತರೆ ಧರ್ಮಗಳಾದ ಕ್ರೈಸ್ತ, ಮುಸ್ಲಿಂ, ಜೈನ ಮೊದಲಾದವುಗಳ ಮೂಲ, ಅನುಷ್ಠಾನ, ಬೆಳವಣಿಗೆ ಹಾಗೂ ಬೇರೆ ಧರ್ಮಗಳ ಮೇಲೆ ಬೀರಿದ ಪರಿಣಾಮ ಇನ್ನು ಮೊದಲಾದ ಅಂಶಗಳ ಕುರಿತು ಚರ್ಚಿಸಿದ್ದಾರೆ.

ಒಟ್ಟಿನಲ್ಲಿ ಈ ಲೇಖಕರು ಹಂಪಿಯಲ್ಲಿ ಅಂದು ಅಸ್ಥಿತ್ವದಲ್ಲಿದ್ದ ವಿವಿಧ ಧರ್ಮಗಳು ಅವು ರಾಜ್ಯದ ಅಭಿವೃದ್ಧಿಯಲ್ಲಿ ನಿರ್ವಹಿಸಿರಬಹುದಾದ ಪಾತ್ರ ಮತ್ತು ಅವು ಉಂಟುಮಾಡಿದ ಪರಿಣಾಮ ಅದು ರಾಜ್ಯ ವ್ಯವಸ್ಥೆಯ ಏರುಪೇರುಗಳಿಗೆ ಹೇಗೆ ಕಾರಣವಾಯಿತು. ಮೊದಲಾದ ಅಂಶಗಳನ್ನು ತಾವು ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡ ಹೊಸ ಅಂಶಗಳ ಆಧಾರದಿಂದ ಮತ್ತು ಇಲ್ಲಿ ದೊರೆಯುವ ದೇವಾಲಯ, ಶಾಸನ, ಶಿಲ್ಪ, ಸ್ಮಾರಕ ಶಿಲೆಗಳನ್ನು ಆಧಾರವಾಗಿಟ್ಟುಕೊಂಡು ವಿಶ್ಲೇಷಿಸಿದ್ದಾರೆ.

೫.೨. ಪ್ರಮುಖ ಆಧುನಿಕ ವಿದೇಶಿ ವಿದ್ವಾಂಸರ ದೃಷ್ಟಿಯಲ್ಲಿ ಹಂಪಿ

ಹಂಪಿಯ ಸಂರಕ್ಷಣೆ ಮಾಡುವಲ್ಲಿ ಮತ್ತು ಅದರ ಅಭಿವೃದ್ಧಿ ಮಾಡುವಲ್ಲಿ ನಮ್ಮ ಸರ್ಕಾರ ಮತ್ತು ಜನರು ಹಿಂದೆ ಬಿದ್ದಿದ್ದಾರೆ. ಆದರೆ ಅದರ ಅಭಿವೃದ್ಧಿಯಾಗಬೇಕೆಂಬುದು ಮತ್ತು ಇಲ್ಲಿನ ಚರಿತ್ರೆ ಮತ್ತು ಪರಂಪರೆಯನ್ನು ಉಳಿಸಿ ಮುಂದಿನ ಪೀಳಿಗೆಗೆ ಬೆಳೆಸಬೇಕು ಎಂಬುದನ್ನು ಅನೇಕ ವಿದೇಶಿ ಮೂಲದ ವಿದ್ವಾಂಸರು ಹೊಂದಿದ್ದಾರೆ. ಆ ಹಿನ್ನೆಲೆಯಲ್ಲಿ ಹಂಪಿಯನ್ನು ಯಾರು ಸಂರಕ್ಷಣೆ ಮಾಡಬೇಕು ಮತ್ತು ಯಾಕೆ ರಕ್ಷಣೆ ಮಾಡಬೇಕು ಮುಂತಾದ ವಿಚಾರಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ತಮ್ಮ ಬರಹಗಳ ಮೂಲಕ ಮತ್ತು ಖಾಸಗಿಯಾಗಿ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಆಯ್ದ ಕೆಲವು ವಿದ್ವಾಂಸರ ಅಭಿಪ್ರಾಯಗಳನ್ನು ಇಲ್ಲಿ ಚರ್ಚಿಸಲಾಗಿದೆ.

೫.೨.೧.ಜಾರ್ಜ್ ಮಿಶಲ್

ಇಂಗ್ಲೆಂಡ್ ಮೂಲದ ಖ್ಯಾತ ವಾಸ್ತು ಶಾಸ್ತ್ರಜ್ಞರಾದ ಇವರು ಹಂಪಿಯ ಕುರಿತು ಹೆಚ್ಚು ಕೆಲಸಮಾಡಿದವರಲ್ಲಿ ಒಬ್ಬರಾಗಿದ್ದಾರೆ. ಅವರು ಹಂಪಿಯ ಕುರಿತು ಈ ರೀತಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. "ಹಂಪಿ ವಾಸ್ತು ಶಿಲ್ಪದ ಮತ್ತು ಸ್ಮಾರಕಗಳ ಕೇಂದ್ರ, ಇದರ ವಾಸ್ತವ ಇತಿಹಾಸ ರಚನೆಯಾಗಬೇಕು ಇಲ್ಲಿ ವಿಜಯನಗರದ ಅರಸರು ನಿರ್ಮಿಸಿರುವ ಸ್ಮಾರಕಗಳ ತಾಂತ್ರಿಕ ಜ್ಞಾನ ಇಂದಿನ ಆಧುನಿಕ ವಿಜ್ಞಾನಕ್ಕೆ ಒಂದು ಸವಾಲಾಗಿದೆ. ಇಂದು ವಿಶ್ವ ಪರಂಪರೆಯ ತಾಣವಾಗಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ. ಆದರೆ ಅದರ ರಕ್ಷಣೆ ಮಾಡುವಲ್ಲಿ ನಾವು ಸೋತಿದ್ದೇವೆ. ಹಂಪಿಯನ್ನು ಲೋಕಲ್ ಜನರ ಸಹಾಯದಿಂದ ಸಂರಕ್ಷಿಸಬೇಕಾದ ಅವಶ್ಯಕತೆ ಇದೆ" ಎನ್ನುತ್ತಾರೆ.

೫.೨.೨.ಜಾನ್ ಫ್ರೀಡ್ಜ್

ಇಂಗ್ಲೆಂಡ್ ಮೂಲದ ಖ್ಯಾತ ಪುರಾತತ್ವಶಾಸ್ತ್ರಜ್ಞರಾದ ಇವರು ಹಂಪಿಯ ಕುರಿತು ಹೆಚ್ಚು ಕೆಲಸಮಾಡಿದರು. ಅವರು ಹಂಪಿಯ ಕುರಿತು ಈ ರೀತಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. "ಹಂಪಿ ಬಹು ಪ್ರಾಚೀನ ಮಾನವ ನೆಲೆ, ಇದು ಮಧ್ಯಯುಗದಲ್ಲಿ ಅತಿ ವಿಸ್ತಾರವಾದ ನಗರವಾಗಿತ್ತು, ಇದರ ಪೂರ್ವ ದ್ವಾರ ಇಂದಿನ ಜಿಂದಾಲ್ ಕಂಪನಿಯಾಗಿತ್ತು. ಅಲ್ಲಿನ ದ್ವಾರಕ್ಕೆ ಹಿಂದೆ ತೋರಣಗಳನ್ನು ಕಟ್ಟಿ ಸಿಂಗರಿಸುತ್ತಿದ್ದರು. ಆ ಕಾರಣದಿಂದ ಅದನ್ನು ತೋರಣಗಲ್ಲು ಎನ್ನಲಾಗುತ್ತದೆ. ಈ ವಿಶಾಲ ನಗರ ಇಂದು ಅನಾಥ ಸ್ಥಿತಿಯಲ್ಲಿದೆ. ಸ್ಥಳೀಯ ವ್ಯಾಪಾರಿ ಶಕ್ತಿಗಳು, ಸ್ಥಳೀಯ ಜನರು ಅಭಿವೃದ್ಧಿ ನೆಪವೊಡ್ಡಿ ಇದನ್ನು ನಿರ್ಲಕ್ಷಿಸಿವೆ. ಸ್ಥಳೀಯ ಆಡಳಿತ ಇಲಾಖೆಗಳು ಇಲ್ಲಿನ ಸ್ಮಾರಕಗಳ ರಕ್ಷಣೆಯಲ್ಲಿ

ವಿಫಲವಾಗಿವೆ. ಆದ್ದರಿಂದ ಜನರು ಮತ್ತು ಇಲಾಖೆಗಳು ಇದರ ಕಡೆ ಗಮನಹರಿಸಿ ಇದರ ಅಭಿವೃದ್ಧಿಕಡೆ ಗಮನಹರಿಸಬೇಕಾದ ಅವಶ್ಯಕತೆ ಇದೆ" ಎನ್ನುತ್ತಾರೆ.

೫.೨.೩. ಮಿಂಜಾ ಎಂಗ್

ಯುನೆಸ್ಕೊ ಅಧಿಕಾರಿ ಮತ್ತು ಅದರ ಪ್ರತಿನಿಧಿಯಾಗಿ ಆಗಮಿಸಿದ್ದ ಮಿಂಜಾ ಎಂಗ್ ರವರು ಹಂಪಿ ಕುರಿತಂತೆ ತಮ್ಮ ಅಭಿಪ್ರಾಯವನ್ನು ಈ ರೀತಿ ವ್ಯಕ್ತಪಡಿಸುತ್ತಾರೆ. "ಹಂಪಿ ಸ್ಮಾರಕಗಳ ತಾಣವನ್ನು ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಸರ್ಕಾರ ಪ್ರಸಕ್ತ ಹಲವು ಒತ್ತಡಗಳಿಗೆ ಅನುಗುಣವಾಗಿ ನೀತಿಗಳನ್ನು ರೂಪಿಸುತ್ತದೆ. ಇದಕ್ಕೆ ಬದಲಾಗಿ ಇಲ್ಲಿನ ಎಲ್ಲಾ ಸಾಂಸ್ಕೃತಿಕ ಸಂಪನ್ಮೂಲಗಳನ್ನು ನಿರಂತರವಾಗಿ ಮೊದಲು ಸಂರಕ್ಷಿಸುವ ಕೆಲಸವಾಗಬೇಕಿದೆ. ಇದರಿಂದಾಗಿ ಇಲ್ಲಿ ಅಭಿವೃದ್ಧಿ ಹೆಸರಿನಲ್ಲಿ ನಮ್ಮ ಪರಂಪರೆಗೆ ದಕ್ಕೆಯಾಗುತ್ತಿದೆ. ಆದ್ದರಿಂದ ಇಲ್ಲಿನ ಸಾಂಸ್ಕೃತಿಕ ಸಂಪನ್ಮೂಲವನ್ನು, ಅದರ ವಿಶಿಷ್ಟತೆ ಹಾಗೂ ಅಸಾಧಾರಣ ಮೌಲ್ಯಗಳನ್ನು ಮುಂದಿನ ಪೀಳಿಗೆಗೂ ಮುಂದುವರೆಸಬೇಕಾದ ಅಗತ್ಯವಿದೆ" ಎನ್ನುತ್ತಾರೆ.

೫.೨.೪. ಡೇವಿಡ್ ರೂಬೋ

ಜರ್ಮನಿಯ ಇತಿಹಾಸ ತಜ್ಞರಾದ ಇವರು, ಹಂಪಿ ಕುರಿತಂತೆ ಈ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ: "ಹಂಪಿಯಲ್ಲಿ ಸ್ಥಳೀಯ ಜನರ ನಿರಂತರವಾದ ಅಭಿವೃದ್ಧಿಯನ್ನು ಸಾಧಿಸುವ ಗುರಿ ಹೊಂದಬೇಕು. ಇಲ್ಲಿ ನಿರಂತರ ಅಭಿವೃದ್ಧಿಯಾಗಬೇಕಾದರೆ, ಇಲ್ಲಿಯ ಭೂಮಿಯ ಅನಧಿಕೃತ ಬಳಕೆಯನ್ನು ತಡೆಗಟ್ಟುವುದು. ವಾಣಿಜ್ಯ ಭೂ ಬಳಕೆಯನ್ನು ತಡೆಗಟ್ಟುವುದು ಅವಶ್ಯಕ. ಅಲ್ಲದೆ ಇಲ್ಲಿನ ಸ್ಥಳೀಯ ಸಂಸ್ಕೃತಿ ಮತ್ತು ಸಾಂಪ್ರದಾಯಿಕ ಜೀವನ ಶೈಲಿಯನ್ನು ರಕ್ಷಿಸುವುದು ಮುಖ್ಯವಾಗಬೇಕಿದೆ. ಸ್ಥಳೀಯ ಆಧಾರಿತ ಬೆಳವಣಿಗೆ, ಉಪಕ್ರಮಗಳಿಗೆ ನೆರವು ನೀಡುವುದು. ಅಲ್ಲದೆ ಸ್ಥಳೀಯ ತಾಂತ್ರಿಕ ಪರಿಣಿತಿಗೆ ಮತ್ತು ಆರ್ಥಿಕ ಚಟುವಟಿಕೆಗಳಿಗಾಗಿ ಆದ್ಯತೆ ನೀಡುವುದು ಹಾಗೂ ಹಂಪಿಯಲ್ಲಿ ಸ್ಥಳೀಯರಲ್ಲದ ಉದ್ಯಮಿಗಳು, ವ್ಯಾಪಾರಿಗಳನ್ನು ತಡೆಯುವುದು ಸರ್ಕಾರದ ಆದ್ಯತೆಯಾದಲ್ಲಿ ಈ ಪ್ರದೇಶ ಅಭಿವೃದ್ಧಿಯಾಗುವಲ್ಲಿ ಯಾವುದೇ ಸಂಶಯವಿಲ್ಲ".

೫.೨.೫. ಸುಗುಣ ಗೆಹ್ಲೋಟ್

ಯುನೆಸ್ಕೊ ಅಧಿಕಾರಿಯಾದ ಇವರು ಹಂಪಿಯ ರಕ್ಷಣೆ ಕುರಿತಂತೆ ಈ ರೀತಿ ಅಭಿಪ್ರಾಯಪಡುತ್ತಾರೆ: "ಹಂಪಿ ಪ್ರದೇಶಕ್ಕೆ ಧಕ್ಕೆ ತರುವ ಕೆಲಸ ನೆಡೆಯಬಾರದು, ಹಂಪಿ ಪ್ರದೇಶದಲ್ಲಿನ ಆಕ್ರಮಗಳನ್ನು ತಡೆಗಟ್ಟಬೇಕು ಮತ್ತು ಕಲ್ಲುಗಣಿಗಾರಿಕೆ ಸೇರಿದಂತೆ ಇತರೆ ಗಣಿಗಾರಿಕೆಗಳನ್ನು ಇಲ್ಲಿ ತಡೆಯಬೇಕು. ಹಂಪಿ ಅಭಿವೃದ್ಧಿ ಪ್ರಾಧಿಕಾರ ಮಾಸ್ಟರ್ ಪ್ಲಾನ್ ರಚಿಸಿದ್ದು, ಅದನ್ನು ಕಟ್ಟುನಿಟ್ಟಾಗಿ ಇಲ್ಲಿ ಜಾರಿಗೊಳಿಸಿದರೆ ಹಂಪಿಯನ್ನು ಸಹಜ ರೀತಿಯಲ್ಲಿ ಅಭಿವೃದ್ಧಿಮಾಡಬಹುದು. ಪ್ರವಾಸಿಗರು ಮತ್ತು ಇತರೆ ಕ್ಷೇತ್ರಗಳಿಗೆ ಧಕ್ಕೆಯಾಗುವುದನ್ನು ನಿಯಾಂತ್ರಿಸಲು ಸರಕಾರಗಳು ಮುಂದಾಗಬೇಕಾದ ಅವಶ್ಯಕತೆ ಇದೆ".

ಹೀಗೆ ಈ ಮೇಲಿನ ಎಲ್ಲಾ ವಿದ್ವಾಂಸರ ಪ್ರಕಾರ ಹಂಪಿಯ ಗತವೈಭವವನ್ನು ಸಾರುವ ಇಲ್ಲಿನ ಸ್ಮಾರಕಾವಶೇಷಗಳನ್ನು ರಕ್ಷಣೆ ಮಾಡಬೇಕಾಗಿದೆ. ಹಲವು ವೈಶಿಷ್ಟ್ಯಪೂರ್ಣ ಹೊಂದಿದ ಸುತ್ತಮುತ್ತಲಿನ ಪ್ರದೇಶಗಳನ್ನು ವಿವಿಧ ಆಯಾಮಗಳಲ್ಲಿ ಚಿತ್ರಿಸಲಾಗಿದೆ. ಅವುಗಳನ್ನು ಸಾಂಸ್ಕೃತಿಕವಾಗಿ ಉಳಿಸುವ ಕೆಲಸವಾಗಬೇಕಾಗಿದೆ ಎನ್ನುವ ಆಶಯ ಧೋರಣೆ ಇಲ್ಲಿ ತಮ್ಮ ಅಭಿಪ್ರಾಯಗಳ ಮೂಲಕ ವಿದ್ವಾಂಸರು ವ್ಯಕ್ತಪಡಿಸಿದ್ದಾರೆ.

ಒಟ್ಟಾರೆಯಾಗಿ ರಾಮಾಯಣ ಕಾಲದ ಪವಿತ್ರವಾದ ಕಿಷ್ಕಿಂಧೆಯು ಮಹಮ್ಮದೀಯರ ಕಾಲದಲ್ಲಿ ವಿಜಯನಗರವೆಂದು ಪ್ರಖ್ಯಾತವಾಗಿ ಈಗ ಹಾಳು ಹಂಪೆಯಾಗಿದೆ. ಭಾರತದ ಇತಿಹಾಸದಲ್ಲಿ ದಕ್ಷಿಣಕ್ಕೆ ನೆಲೆಸಿದ ವಿಜಯನಗರದ ಚರಿತ್ರೆಯು ಅದ್ಭುತವಾದ ಘಟ್ಟವಾಗಿದೆ. ವಿಜಯನಗರ ಸಾಮ್ರಾಜ್ಯವು ೨೪೦ ವರ್ಷ ಪರ್ಯಂತರ ಮಹಮ್ಮದೀಯರ ಆಕ್ರಮಣವನ್ನು ತಡೆದು ಹಿಂದೂ ಧರ್ಮದ ರಕ್ಷಣೆ ಮತ್ತು ಪೋಷಣೆ ನೆರವಿಗೆ ನಿಂತು ಹೋರಾಡಿತು.

ರಾಬರ್ಟ್ ಸಿವೆಲ್ ರಚಿಸಿದ 'ಮರೆತುಹೋದ ಸಾಮ್ರಾಜ್ಯ'ವು ಕರ್ನಾಟಕಾಂಧ್ರ ಹೃದಯಗಳಲ್ಲಿ ಗತವೈಭವದ ನೆನಪಿನ ಅಲೆಗಳನ್ನು ಎಬ್ಬಿಸಿತು. ತೆಲುಗು, ಇಂಗ್ಲಿಷ್, ಕನ್ನಡ ಭಾಷೆಗಳಲ್ಲಿ ಈ ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ಅನೇಕ ಗ್ರಂಥಗಳು ರಚನೆಯಾದವು. ಅವುಗಳಲ್ಲಿ ಭಗ್ನಕರ್ನಾಟ, ಶ್ರೀಕೃಷ್ಣದೇವರಾಯ, ಹಂಪೆಯ ಅವಶೇಷಗಳು ಮೊದಲಾದ ಕೃತಿಗಳು ವಿಜಯನಗರದ ವೈಭವವನ್ನು ಕಣ್ಣಿಗೆ ಕಟ್ಟುವಂತಿದೆ. ಅಲ್ಲದೆ ಕುಂದೂರಿ ಈಶ್ವರದತ್ತ ಅವರು ರಚಿಸಿದ 'ಜೀರ್ಣ ವಿಜಯನಗರ ಚರಿತ್ರೆ' ವಿಜಯನಗರದ ಪ್ರತಿಭೆಯನ್ನು ವಿಷದಗೊಳಿಸುತ್ತದೆ.

ವಿಜಯನಗರದ ಚರಿತ್ರೆಯಲ್ಲಿ ವಿದ್ಯಾರಣ್ಯರು, ಹರಿರಾಯರು ಸಾಮ್ರಾಜ್ಯದ ಏಳಿಗೆಗೆ ಪ್ರಮುಖ ಪಾತ್ರವಹಿಸಿದರು. ಬ್ರಾಹ್ಮಣರು ಬ್ರಾಹ್ಮಣೇತರರು ನಾಯಕರು ರಣರಂಗದಲ್ಲಿ ಕಲಾಸಾಹಿತ್ಯ ರಂಗದಲ್ಲಿ, ಕೃಷಿ ವಾಣಿಜ್ಯ ರಂಗದಲ್ಲಿ ಗೋಪನಮಂತ್ರಿ, ಮಾರನಮಂತ್ರಿ, ಸಾಳ್ವ ತಿಮ್ಮರಸರು ಮೊದಲಾದ ದಂಡನಾಯಕರು ವಿಜಯನಗರದ ವಿಜಯೋತ್ಸವದಲ್ಲಿ ಪ್ರಖ್ಯಾತರಾದರು. ಈ ಸಾಮ್ರಾಜ್ಯದ ಸ್ವತಃ ಸಾಹಿತಿಗಳು, ಕವಿಗಳೂ ಸಾಹಿತಿಗಳ ಪೋಷಕರು ಕೂಡ; ಕೃಷ್ಣದೇವರಾಯ, ಅಲ್ಲಸಾನಿ ಪೆದ್ದಣ್ಣ, ತೆನಾಲಿ, ಎರಡನೇ ದೇವರಾಯ ಅವರಿಂದ ಸಾಹಿತ್ಯ ಸಮೃದ್ಧವಾಗಿ ಬೆಳೆಯಿತು. ಅಲ್ಲದೆ ರಾಜಾಶ್ರಯದಿಂದ ಶಿಲ್ಪ, ಕೃಷಿ, ವಾಣಿಜ್ಯ, ವಿದೇಶಿ ವ್ಯಾಪಾರ, ಅಭಿವೃದ್ಧಿಯಾದವು. ವಿಜಯನಗರದ ಆಡಳಿತವು ನಿರಂಕುಶ ಪ್ರಭುತ್ವವಾದರೂ ಸ್ವದೇಶ ಪ್ರಭುತ್ವವಾದ್ದರಿಂದ ಪ್ರಜಾಪ್ರಭುತ್ವವನ್ನು ವಿಕಾಸಗೊಳಿಸುವ ಹಲವು ಮಾರ್ಗಗಳಿಗೆ ದಿಕ್ಸೂಚಿಯಾಯಿತು.

ವಿಜಯನಗರಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರು ಇಲ್ಲಿದ್ದಷ್ಟು ದಿನ ತಾವು ಕಣ್ಣಾರೆ ಕಂಡ, ಕಿವಿಯಾರೆ ಕೇಳಿದ ವಿದ್ಯಮಾನಗಳ ಬಗೆಗೆ ವಿಫುಲವಾದ ಮಾಹಿತಿಯನ್ನೇ ನೀಡುತ್ತಾರೆ. ಅವರಲ್ಲಿ ಅಬ್ದುಲ್ ರಜಾಕ್, ಬಾರ್ಬೋಸಾ, ನಿಕೊಲೋ ಕೊಂಟಿ, ಡೊಮಿಂಗೋ ಪೇಸ್, ನಿಕಟಿನ್ ಹಲವಾರು ಪ್ರವಾಸಿಗರು ವಿಜಯನಗರವನ್ನಾಳಿದ ಅರಸರ ಬಗೆಗೆ ಅವರ ದಂಡಯಾತ್ರೆಗಳ ಬಗೆಗೆ ತಮ್ಮ ಪ್ರವಾಸ ಕಥನಗಳಲ್ಲಿ ವಿವರಿಸುವ ಕೆಲಸ ಮಾಡಿದ್ದಾರೆ. ಅವರು ನೀಡುವ ವರದಿಗಳು

ವಿಜಯನಗರ ಸಾಮ್ರಾಜ್ಯದ ಚರಿತ್ರೆ ರಚಿಸಲು ಸಹಾಯಕಾರಿಯಾಗಿವೆ. ಮುಖ್ಯವಾಗಿ ವಿಜಯನಗರ ಮತ್ತು ಬಹಮನಿ ಸುಲ್ತಾನರ ನಡುವೆ ದೋ-ಅಬ್(ಕೃಷ್ಣ-ತುಂಗಭದ್ರಾ ನದಿ ಬಯಲು ಪ್ರದೇಶ) ಪ್ರದೇಶಕ್ಕಾಗಿ ನಿರಂತರ ನಡೆದ ಯುದ್ಧಗಳ ಬಗೆಗೆ ಖಚಿತ ಮಾಹಿತಿಯನ್ನು ನೀಡುತ್ತವೆ. ಈ ಎರಡೂ ಸಾಮ್ರಾಜ್ಯಗಳ ಆರ್ಥಿಕ ಪ್ರಗತಿಗೆ ಈ ಪ್ರದೇಶ ಬಹುಮುಖ್ಯವಾಗಿತ್ತು. ಈ ಕಾರಣಕ್ಕಾಗಿಯೇ ನಿರಂತರ ಕದನಗಳು ನಡೆಯುತ್ತಿದ್ದವು.

ಈ ಹಿನ್ನೆಲೆಯಲ್ಲಿ ಇಂತಹ ಕುತೂಹಲಕಾರಿ ಘಟನೆಗಳಿಗೆ ಕಾರಣವಾದ 'ಹಂಪಿ'ಯ ಪರಿಸರ ಇಂದು ವಿಶ್ವಪರಂಪರೆಯಲ್ಲಿ ಐತಿಹಾಸಿಕ ತಾಣವಾಗಿ ಗುರುತಿಸಿಕೊಂಡು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಇಲ್ಲಿನ ಅನೇಕ ಕಲಾಕೃತಿಗಳು, ಜನರ ಕಣ್ಮನ ಸೆಳೆಯುತ್ತಿವೆ. ಇದಕ್ಕೆ ಕಾರಣ ಅನೇಕ ದೇಶಿ ವಿದೇಶಿ ಪ್ರವಾಸಿಗರು ತಮ್ಮ ಪ್ರವಾಸ ಕಥನಗಳಲ್ಲಿ ಹಂಪಿಯ ಸ್ಮಾರಕ ಸ್ಥಳಗಳನ್ನು ನೆಲೆ ಹಚ್ಚಿರುವುದಾಗಿದೆ. ಈ ಮೂಲಕ ಚರಿತ್ರೆಯ ಹಲವು ಆಯಾಮಗಳು ಸೃಷ್ಟಿಯಾಗುವುದಕ್ಕೆ ಇವರ ಆಕರಗಳು ಪೂರಕವಾಗಿವೆ. ಕರ್ನಾಟಕದ ಒಟ್ಟೂ ಸಂಸ್ಕೃತಿಯನ್ನು ಕಟ್ಟಿಕೊಡುವುದಕ್ಕೆ ಇವರ ಪ್ರವಾಸ ಕಥನಗಳು ಇಂದಿಗೂ ಇತಿಹಾಸಕಾರರಿಗೆ ಬಹುಮುಖ್ಯವಾದ ಆಕರಗಳಾಗಿವೆ.

□□□

ಕೊನೆ ಟಿಪ್ಪಣಿಗಳು

೧. ವಿವೇಕ ರೈ ಬಿ.ಎ., (ಸಂ), ಪ್ರವಾಸಿ ಕಂಡ ವಿಜಯನಗರ, ಪುಟ.೯

೨. ಅದೇ ಪುಟ.೧೦

೩. ಅದೇ ಪುಟ.೧೨

೪. ಅದೇ ಪುಟ.೧೨-೧೭

೫. ಅದೇ ಪುಟ.೧೭-೨೦

೬. ಅದೇ ಪುಟ.೨೧-೨೫

೭. ಅದೇ ಪುಟ.೨೫-೨೭

೮. ಅದೇ ಪುಟ.೩೨

೯. ಅದೇ ಪುಟ.೩೪

೧೦.ಅದೇ ಪುಟ.೩೬-೩೭

೧೧.ಅದೇ ಪುಟ.೩೭-೩೮

೧೨.ನಾಗೇಗೌಡ.ಎಚ್.ಎಲ್. (ಲೇ), ವಿವೇಕರೈ.ಬಿ.ಎ, (ಸಂ), ಪೂರ್ವೋಕ್ತ, ದುಆರ್ತೆ ಬಾರ್ಬೊಸಾ, ಪುಟ.೪೩

೧೩.ಅದೇ ಪುಟ.೨೬೮-೨೭೭

೧೪.ವಿವೇಕ ರೈ ಬಿ.ಎ., (ಸಂ), ಪ್ರವಾಸಿ ಕಂಡ ವಿಜಯನಗರ, ಪುಟ.೫೮-೬೫

೧೫.ಅದೇ ಪುಟ.೬೬-೭೪

೧೬.ವಿವೇಕ ರೈ ಬಿ.ಎ, (ಸಂ), ಪೂರ್ವೋಕ್ತ, ಪುಟ.೬೩

೧೭.ಅದೇ ಪ್ರಸ್ತಾವನೆ, ಪುಟ. XVII

೧೮.ಅದೇ. ೬೯

೧೯.ರಾಬರ್ಟ್ ಸಿವೆಲ್ (ಲೇ), ಸದಾನಂದ ಕನವಳ್ಳಿ, (ಅನು), ಡಾ.ವಿವೇಕ ರೈ.ಬಿ.ಎ, (ಸಂ), ಪೂರ್ವೋಕ್ತ, ನ್ಯೂನಿಜ್, ಪುಟ.೧೮೨

೨೦.ಅದೇ ಪುಟ. ೧೮೩

೨೧.ವಿವೇಕ ರೈ.ಬಿ.ಎ, (ಸಂ), ಪ್ರವಾಸಿ ಕಂಡ ವಿಜಯನಗರ, ಪುಟ.೪-೬

೨೨.ಅದೇ ಪುಟ. ೬-೭

೨೩.ನಾಗೇಗೌಡ.ಎಚ್.ಎಲ್. (ಲೇ), ವಿವೇಕರೈ.ಬಿ.ಎ, (ಸಂ), ಪೂರ್ವೋಕ್ತ, ನಿಕಿಟಿನ್, ಪುಟ. ೨೯-೩೦

೨೪. ನಾಗೇಗೌಡ.ಎಚ್.ಎಲ್. (ಲೇ), ವಿವೇಕರೈ.ಬಿ.ಎ, (ಸಂ), ಪೂರ್ವೋಕ್ತ, ಸೀಜರ್ ಫ್ರೆಡೆರಿಕ್, ಪುಟ. ೧೯೬-೧೯೭

೨೫. ಅದೇ ಪುಟ. ೯೮-೯೯

೨೬. ಅದೇ ಪುಟ. ೨೦೦

೨೭. ಅದೇ ಪುಟ. ೨೦೨

೨೮. ಅದೇ ಪುಟ ೨೦೫-೨೦೬

೨೯. ಅದೇ ಪುಟ. ೨೨೫-೨೨೬

೩೦. ರಿವ್ಯೂ ಆಫ್ ದ ಡೆಕ್ಕನ್, ಪುಟ.೧೪

೩೧. ನಾಗೇಗೌಡ.ಎಚ್.ಎಲ್. (ಲೇ), ವಿವೇಕರೈ.ಬಿ.ಎ, (ಸಂ), ಪೂರ್ವೋಕ್ತ, ಸೀಜರ್ ಫ್ರೆಡೆರಿಕ್, ಪುಟ.೨೨೭

೩೨. ವಿರೂಪಾಕ್ಷಿ ಪೂಜಾರಹಳ್ಳಿ, ವಸಾಹತುಕಾಲೀನ ಬಳ್ಳಾರಿ ಜಿಲ್ಲೆ, ಪುಟ.೧೫

ಅಧ್ಯಾಯ ಆರು

ಹಂಪಿಯ ಸಾಂಸ್ಕೃತಿಕ ಹಿನ್ನೆಲೆ

೬.೧. ಕಲೆ ಮತ್ತು ವಾಸ್ತು ಶಿಲ್ಪಗಳ ಹಿನ್ನೆಲೆಯಲ್ಲಿ ಹಂಪಿಯ ಸಂಸ್ಕೃತಿ

೬.೨. ಜಾನಪದ ಕಲೆ ಮತ್ತು ಆಟಗಳ ಹಿನ್ನೆಲೆಯಲ್ಲಿ ಹಂಪಿಯ ಸಂಸ್ಕೃತಿ

೬.೩. ಪ್ರಮುಖ ಹಬ್ಬ, ಜಾತ್ರೆಗಳ ಹಿನ್ನೆಲೆಯಲ್ಲಿ ಹಂಪಿಯ ಸಂಸ್ಕೃತಿ

ಅಧ್ಯಾಯ ಆರು

ಹಂಪಿಯ ಸಾಂಸ್ಕೃತಿಕ ಹಿನ್ನೆಲೆ

ಪ್ರಸ್ತಾವನೆ

ಸಂಸ್ಕೃತಿಯನ್ನು ನಾಗರಿಕತೆಯ ಮಾತೃಕೆ ಎಂದು ಹೇಳಲಾಗುತ್ತದೆ. ಅದು ತನ್ನ ಒಡಲಲ್ಲಿ ನಾಗರಿಕತೆ ಎನ್ನುವ ಶಿಶುವನ್ನು ಇಟ್ಟುಕೊಂಡು ಪೋಷಿಸುತ್ತದೆ. ಹಾಗಾಗಿ ನಾವು ಸಂಸ್ಕೃತಿಯ ಸಹಾಯದಿಂದ ಆಯಾ ಕಾಲದ ಜನಜೀವನವನ್ನು ಅರಿಯಬಹುದು. ಪ್ರತಿ ಸಮಾಜದಲ್ಲಿರುವ ಜನರು ಅಳವಡಿಸಿಕೊಂಡಿರುವ ಪರಂಪರೆ, ಇತಿಹಾಸ, ಆಹಾರಪದ್ಧತಿ, ವೇಷಭೂಷಣ, ಅವರ ಜೀವನಕ್ರಮ, ಆಚರಣೆ, ಅವರ ಧರ್ಮ ಇತ್ಯಾದಿಗಳೆಲ್ಲವುಗಳ ಸಮೂಹವನ್ನು ಸಾಮಾನ್ಯವಾಗಿ 'ಸಂಸ್ಕೃತಿ' ಎಂದು ಕರೆಯಬಹುದು. "ಪ್ರತಿ ಸಮಾಜಕ್ಕೂ ಅದರದ್ದೇ ಆದ ಸಂಸ್ಕೃತಿ ಇರುತ್ತದೆ. ಅದುವೇ ಆಯಾ ಸಮಾಜದ ಜೀವಾಳವಾಗಿರುತ್ತದೆ. ಆ ಕಾರಣಕ್ಕಾಗಿ ಸಂಸ್ಕೃತಿ ಪ್ರತಿ ಕಾಲ ಘಟ್ಟಗಳಲ್ಲಿ ಮುಖ್ಯ ಪಾತ್ರವಹಿಸುತ್ತದೆ."[೧] ಈ ಹಿನ್ನೆಲೆಯಲ್ಲಿ ಹಂಪಿಯ ಸಂಸ್ಕೃತಿಯನ್ನು ಅವಲೋಕಿಸಬೇಕೆನಿಸುತ್ತದೆ. ಹಂಪಿ ಪ್ರಾಗೈತಿಹಾಸಿಕ, ಆದಿ ಇತಿಹಾಸ ಮತ್ತು ಚಾರಿತ್ರಿಕ ಕಾಲಘಟ್ಟಗಳಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿದೆ. ಆದ್ದರಿಂದ ಇಲ್ಲಿನ ಸಂಸ್ಕೃತಿಯನ್ನು ಕಲೆ ಮತ್ತು ವಾಸ್ತುಶಿಲ್ಪಗಳ ಹಿನ್ನೆಲೆಯಲ್ಲಿ ಹಂಪಿಯ ಸಂಸ್ಕೃತಿ ಮತ್ತು ಜಾನಪದ ಕಲೆ ಹಾಗು ಆಟಗಳ ಹಿನ್ನೆಲೆಯಲ್ಲಿ ಮತ್ತು ಪ್ರಮುಖ ಹಬ್ಬ, ಜಾತ್ರೆಗಳ ಹಿನ್ನೆಲೆಯಲ್ಲಿ ಹಂಪಿಯ ಸಂಸ್ಕೃತಿ ಎಂದು ಮೂರು ಭಾಗವಾಗಿ ಮಾಡಿಕೊಂಡು ಇಲ್ಲಿ ಅಧ್ಯಯನ ಮಾಡಲಾಗಿದೆ.

೬.೧. ಕಲೆ ಮತ್ತು ವಾಸ್ತುಶಿಲ್ಪಗಳ ಹಿನ್ನೆಲೆಯಲ್ಲಿ ಹಂಪಿಯ ಸಂಸ್ಕೃತಿ

ಕಲೆ ಮತ್ತು ವಾಸ್ತು ಶಿಲ್ಪಗಳು ಆಯಾ ಸಮಾಜದ ಸಂಸ್ಕೃತಿಯನ್ನು ಪ್ರತಿನಿಧಿಸುವ ಸಂಕೇತಗಳಾಗಿವೆ. ಅವುಗಳ ಸಹಾಯದಿಂದ ಅಂದಿನ ಪರಂಪರೆ ಮತ್ತು ಚರಿತ್ರೆ ಹಾಗೂ ಆಯಾ ಸಮಾಜದ ಸಂಸ್ಕೃತಿಯನ್ನು ಅರಿಯಬಹುದು. ಹಂಪಿ ಕಲೆ ಮತ್ತು ವಾಸ್ತುಶಿಲ್ಪಗಳ ಕೇಂದ್ರವಾಗಿದ್ದು, ಇಲ್ಲಿರುವ ಹಲವು ಕಟ್ಟಡಗಳು ಅಂದಿನ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ಅವುಗಳ ಸಹಾಯದಿಂದ ವಿವಿಧ ಕಾಲಘಟ್ಟಗಳ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಬಹುದು. ಹಂಪಿಯಲ್ಲಿನ ಕಲೆ ಮತ್ತು ವಾಸ್ತುಶಿಲ್ಪಗಳ ಕೇಂದ್ರವಾಗಿರುವ ಕಟ್ಟಡಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಪ್ರಧಾನವಾಗಿ ಪ್ರಾಗೈತಿಹಾಸಿಕ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಮತ್ತು ಚಾರಿತ್ರಿಕ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಎಂದು ಎರಡು ಭಾಗವಾಗಿ ವಿಭಾಗಿಸಬಹುದು.

೬.೧.೧. ಪ್ರಾಗೈತಿಹಾಸಿಕ ಕಾಲದ ಕಲೆ ಮತ್ತು ವಾಸ್ತು ಶಿಲ್ಪ

'ಭಾಸ್ಕರಕ್ಷೇತ್ರ', 'ಕಿಷ್ಕಿಂದ', 'ಪಂಪಾತೀರ್ಥ', 'ವಿಜಯನಗರ' ಎಂದೆಲ್ಲ ಕರೆಯಿಸಿಕೊಳ್ಳುವ ಹಂಪಿ ಬಹುಪ್ರಾಚೀನ ಕಾಲದಿಂದಲೂ ತನ್ನ ಪ್ರಾಮುಖ್ಯತೆಯನ್ನು ಉಳಿಸಿಕೊಂಡಿದೆ. ದೇಶದ ಇತರೆಡೆಯಂತೆ ಹಂಪಿ ಪರಿಸರದಲ್ಲೂ ಬಹುಪ್ರಾಚೀನ ಕಾಲದಿಂದಲೂ ಮನುಷ್ಯ ವಾಸಿಸಿದ್ದಕ್ಕೆ ಸಾಕಷ್ಟು ಪುರಾವೆಗಳಿವೆ. ಇಲ್ಲಿನ 'ಮೊಸಳಯ್ಯನಗುಡ್ಡ', 'ಕಿಷ್ಕಿಂದೆ', 'ವಾಲಿಕಾಷ್ಠ', 'ವಾಲಿಭಂಡಾರ' ಎನ್ನುವ ಹೆಸರುಗಳೇ ಹಂಪಿಯ ಪ್ರಾಚೀನತೆಯನ್ನು ಸೂಚಿಸುತ್ತವೆ. ಕೇವಲ ಹಂಪಿಯಲ್ಲಿ ಅಲ್ಲದೆ ಅದರ ಸುತ್ತಲಿನ ಹಲವಾರು ಪ್ರದೇಶಗಳಲ್ಲಿ ನಡೆಸಿದ ಹಲವಾರು ಅನ್ವೇಷಣೆ ಮತ್ತು ಕೆಲ ಉತ್ಖನನದ ಫಲವಾಗಿ ಆದಿಮಾನವನ ಹಲವಾರು ತಾಣಗಳು ಬೆಳಕಿಗೆ ಬಂದಿವೆ.

ಶಿಲಾಯುಗದ ಮಾನವನು ಹಂಪಿ ಪರಿಸರವನ್ನು ತನ್ನ ನಿವಾಸಕ್ಕಾಗಿ ಆರಿಸಿಕೊಳ್ಳುವಲ್ಲಿ ಇಲ್ಲಿಯ ನಿಸರ್ಗದತ್ತ ಪರಿಸರವೇ ಮುಖ್ಯ ಕಾರಣ. ಈ ಭಾಗವು ದೊಡ್ಡ, ಚಿಕ್ಕಬಂಡೆಗಳು ಗುಂಡುಗಳು, ಬೆಟ್ಟಗಳಿಂದ ಆವರಿಸಿವೆ. ಇಲ್ಲಿನ ವಿಸ್ತಾರವಾದ ಹಾಸು ಬಂಡೆಗಳ ನಡುವೆ ಗುಹೆಗಳಿದ್ದು, ಆ ಕಾಲದ ಮಾನವನಿಗೆ ಅನುಕೂಲಕರವಾದ ನೆರಳಾಶ್ರಯವನ್ನು ಒದಗಿಸಿದ್ದವು. ಅಲ್ಲದೇ ಎಂದೂ ಬತ್ತದೇ ಸತತವಾಗಿ ಹರಿಯುವ, ನೀರಿನಿಂದ ಇರುವ ತುಂಗಭದ್ರಾ ನದಿ ಮತ್ತು ಅದನ್ನು ಕೂಡಿಕೊಳ್ಳುವ ಚಿಕ್ಕ ಚಿಕ್ಕ ಹಳ್ಳ, ತೊರೆಗಳಿಂದ ಅವನಿಗೆ ಜೀವನಾವಶ್ಯದಲ್ಲಿ ಒಂದಾದ ನೀರು ಸಾಕಷ್ಟು ದೊರೆಯುತ್ತಿತ್ತು. ಹಳ್ಳ, ಕೊಳ್ಳ, ಕಣಿವೆ, ಗುಡ್ಡ ಮತ್ತು ಗುಹೆ ಮುಂತಾದವುಗಳಲ್ಲಿ ಶಿಲಾಯುಗದ ಮಾನವನು ಬದುಕಲು ಅವಶ್ಯವಾಗಿ ಬೇಕಾದ ಮರ, ಬಳ್ಳಿ, ಎಲೆ, ಗಡ್ಡೆ, ಗೆಣಸು, ಹಣ್ಣು, ನೀರು ಮುಂತಾದವುಗಳು ವಿಪುಲವಾಗಿ ಹಾಗೂ ಸುಲಭವಾಗಿ ದೊರೆಯುತ್ತಿದ್ದವು. ತನ್ನ ಉಪಯೋಗಕ್ಕೆ ಬೇಕಾದ ಕಲ್ಲಿನ ಆಯುಧಗಳನ್ನು ನಿರ್ಮಿಸಲು ಬೇಕಾದ ಘಟ್ಟಿಯಾದ ಕಲ್ಲುಗಳು, ಬೆಣಚು ಕಲ್ಲುಗಳು, ಡೈಕ್ ಹಾಗೂ ಆಯುಧಗಳ ತಯಾರಿಕೆಗೆ ಬೇಕಾದ ವಿವಿಧ ಲೋಹ, ಅದಿರು(ಕಬ್ಬಿಣ, ತಾಮ್ರ ಇತರೆ) ಮುಂತಾದವುಗಳು ಹೇರಳವಾಗಿ ಇದೇ ಸ್ಥಳದಲ್ಲಿಯೇ/ಸ್ಥಳಿಯವಾಗಿ ಇಲ್ಲವೇ ಸಮೀಪದಲ್ಲಿಯೇ ಲಭಿಸುತ್ತಿದ್ದವು. ಅಲ್ಲಲ್ಲಿ ಕಂಡುಬರುವ ಛಾವಣಿಯ ರೂಪದ ಬಂಡೆಗಳು ಅವನನ್ನು ಮಳೆ, ಗಾಳಿ, ಬಿಸಿಲುಗಳಿಂದ ರಕ್ಷಿಸುತ್ತಿದ್ದವು ಮತ್ತು ವಿಶ್ರಾಂತಿ ಸಮಯದ ಚಟುವಟಿಕೆಗಳಿಗೆ ಅನುಕೂಲ ತಾಣಗಳಾಗಿದ್ದವು. ಈ ಎಲ್ಲಾ ಕಾರಣಗಳಿಂದಾಗಿ ಹಂಪೆ ಮತ್ತು ಅದರ ಸುತ್ತಮುತ್ತಲನ ಪ್ರದೇಶಗಳು ಆದಿಮಾನವನ ಚಟುವಟಿಕೆಯ ಕೇಂದ್ರವಾಗಲು ಅಥವಾ ಅವನು ನೆಲೆ ನಿಲ್ಲಲು ಮುಖ್ಯ ಕಾರಣವಾದವು. ಆದರೆ ಈ ಸಂಸ್ಕೃತಿಯ ಕುರುಹುಗಳು ನಿರೀಕ್ಷಿಸಿದಷ್ಟು ಹೇರಳವಾಗಿ ಈ ಪ್ರದೇಶಗಳಲ್ಲಿ ಪ್ರಸಕ್ತ ಹೆಚ್ಚಾಗಿ ಕಾಣಬರುತ್ತಿಲ್ಲ. ಶಿಲಾಯುಗದ ನಂತರ ಆದಿ ಮತ್ತು ಪ್ರಾಚೀನ ಹಾಗೂ ಮಧ್ಯಮ ಯುಗಗಳಲ್ಲಿ ಹಂಪೆಯನ್ನೊಳಗೊಂಡಂತೆ ಇತರೆ ನೆಲೆಗಳು ಧಾರ್ಮಿಕ ಮತ್ತು ರಾಜಕೀಯ ಕೇಂದ್ರವಾಗಿ ಪ್ರಗತಿ ಹೊಂದಿದವು. ಪರಿಣಾಮವಾಗಿ

ಮಾನವನ ಚಟುವಟಿಕೆಗಳು ಅಧಿಕವಾದವು. ಇದರಿಂದಾಗಿ ಶಿಲಾಯುಗದ ಸಂಸ್ಕೃತಿಯ ಅವಶೇಷಗಳು ಅನೇಕ ವೇಳೆ ಸ್ಥಳಪಲ್ಲಟವಾಗಿ ಹಾಳಾಗಿರಬೇಕು ಅಥವಾ ಮಣ್ಣಿನ ಪದರುಗಳಲ್ಲಿ ಹೂತು ಹೋಗಿರಬೇಕು. ಇಲ್ಲವೆ ಮಾನವನ ನಿಧಿ ಶೋಧದ ದಾಹದಿಂದಾಗಿ, ಆದಿಮಾನವನಿಗೆ ಸಂಬಂಧಿಸಿದ ಹಲವಾರು ಅವಶೇಷಗಳು ಕಣ್ಮರೆಯಾದವು. ಕೆಲವು ನೆಲೆಗಳು ಅವಸಾನಗೊಂಡವು. ಆದರೂ ಪುರಾತತ್ವವಿದರ ನಿರಂತರ ಅನ್ವೇಷಣೆ, ಉತ್ಖನನ ಕಾರ್ಯ ಕೈಗೊಂಡು ಅಳಿದುಳಿದ ಅವಶೇಷಗಳನ್ನು ಆಧಾರವಾಗಿಟ್ಟುಕೊಂಡು ಹಲವು ನಿವೇಶನಗಳನ್ನು ಬೆಳಕಿಗೆ ತಂದಿದ್ದಾರೆ. ಇನ್ನು ಹೆಚ್ಚಿನ ಸಂಶೋಧನೆಯನ್ನು ಈ ಪರಿಸರದಲ್ಲಿ ನಡೆಸಿದರೆ ಮತ್ತಷ್ಟು ನೆಲೆಗಳು ದೊರೆಯುವ ಸಾಧ್ಯತೆ ಇದೆ. ಹಂಪಿಯಲ್ಲಿ ಮಾನವನ ಪ್ರಾಚೀನತೆ ಕ್ರಿ.ಪೂ.ಸು.೩೦೦೦-೧೫೦೦ ವರ್ಷಗಳಷ್ಟು ಹಿಂದೆ ಹೋಗುತ್ತದೆ. ಅದನ್ನು ಈ ಮುಂದಿನ ನೆಲೆಗಳಲ್ಲಿ ದೊರೆತ ಪ್ರಾಗೈತಿಹಾಸಿಕ ಅವಶೇಷಗಳು ಸಾಕ್ಷೀಕರಿಸುತ್ತವೆ. ಈ ಕಾಲಕ್ಕೆ ಸೇರಿದ ಅಧಿಕೃತ ಕಟ್ಟಡಗಳು (ಬೃಹತ್ ಶಿಲಾಯುಗದ ಸಮಾಧಿಗಳನ್ನು ಹೊರತುಪಡಿಸಿ) ಇದುವರೆಗೆ ನಮಗೆ ದೊರೆತಿಲ್ಲ. ಆದರೆ ಆ ಕಾಲದ ಮನುಷ್ಯ ಉಪಯೋಗಿಸಿ ಬಿಟ್ಟು ಹೋದ ಮಡಿಕೆ ಕುಡಿಕೆ ಮತ್ತು ಆಯುಧೋಪಕರಣಗಳು ಹಾಗೂ ಅವನು ವಾಸಿಸಿದ ಗುಹೆಗಳು, ಅವುಗಳ ಮೇಲೆ ಮತ್ತು ಬಂಡೆಗಳ ಮೇಲೆ ಅವನು ಬಿಡಿಸಿದ ವರ್ಣ/ಕುಟ್ಟಿದ/ಕೊರೆದ ಚಿತ್ರಗಳು ನಮಗೆ ದೊರೆತಿದ್ದು, ಅವು ಅಂದಿನ ಕಲಾ ಪರಂಪರೆಯನ್ನು ಅಭಿವ್ಯಕ್ತಿಸುತ್ತವೆ. ಆ ಹಿನ್ನೆಲೆಯಲ್ಲಿ ಹಂಪಿಯ ಅನ್ವೇಷಣೆ ಮತ್ತು ಉತ್ಖನನಗಳಲ್ಲಿ ಈ ಸಂಸ್ಕೃತಿಗೆ ಸೇರಿದ ಮತ್ತು ಇದುವರೆಗೆ ದೊರೆತ ಈ ಕಾಲದ ಪ್ರಮುಖ ಪ್ರಾಚ್ಯಾವಶೇಷಗಳು ಅಂದಿನ ಕಲೆ ಮತ್ತು ವಾಸ್ತುಶಿಲ್ಪವನ್ನು ಅಭಿವ್ಯಕ್ತಪಡಿಸುತ್ತವೆ. ಆದ್ದರಿಂದ ಅವುಗಳ ವೈಶಿಷ್ಟ್ಯತೆಯನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

೧. **ಹಂಪೆ:** ಶಿಲಾಯುಗದ ಮಾನವನ ಕೆಲವು ಅವಶೇಷಗಳು ಇಲ್ಲಿ ದೊರೆತಿವೆ. ಆ ಕಾಲದ ಮಾನವ ಇಲ್ಲಿ ವಾಸಿಸಿದ್ದ ಎಂಬುದಕ್ಕೆ ಸ್ಪಷ್ಟ ಪುರಾವೆಗಳಾಗಿವೆ. ಕ್ರಿ.ಶ.೧೮೮೭ರಲ್ಲಿ ರಾಬರ್ಟ್ ಬ್ರೂಸ್ ಪೂಟ್ ಎಂಬ ಆಂಗ್ಲ ಅಧಿಕಾರಿಯು ಹಂಪೆಯ ನವಶಿಲಾಯುಗದ ಮನುಷ್ಯನ ನಿವಾಸಗಳಲ್ಲೊಂದಾಗಿತ್ತೆಂದು ಬರೆದಿದ್ದಾನೆ. ಹಂಪಿಯ ವಿವಿಧ ನೆಲೆಗಳಲ್ಲಿ ಆದಿಮಾನವನಿಗೆ ಸಂಬಂಧಿಸಿದ ಅವಶೇಷಗಳು ದೊರೆತಿದ್ದು, ಅವುಗಳನ್ನು ಇಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ.

ಅ) **ಮೋಸಳಯ್ಯನಗುಡ್ಡ:** ಇದು ತುಂಗಭದ್ರಾ ನದಿಯ ಬಲದಂಡೆಯ ಮೇಲಿರುವ ಹಂಪೆಯ ವಿಠ್ಠಲ ದೇವಸ್ಥಾನದ ಸಮೀಪದಲ್ಲಿದೆ. ಇಲ್ಲಿ ಅನ್ವೇಷಣೆ ಮತ್ತು ಉತ್ಖನನವನ್ನು ಸಹ ಮಾಡಲಾಗಿದೆ. ಕೈಯಿಂದ ಮಾಡಿದ ಮಡಿಕೆಗಳ ಚೂರುಗಳು ಇಲ್ಲಿ ದೊರೆತಿವೆ. ಅವು ಒಂದು ವಿಧವಾದ ಕಂದು ಬಣ್ಣದಲ್ಲಿದ್ದು, ವಿವಿಧ ಆಕಾರಗಳಲ್ಲಿವೆ. ಬಾಚಿಗಳು ಕೊಡಲಿಗಳು ಮತ್ತು ಕುಟ್ಟುವ ಸಾಧನೆಗಳು ವಿವಿಧ ನಿರ್ಮಾಣದ ಹಂತಗಳಲ್ಲಿರುವ ಆಯುಧಗಳು ಸಹ ದೊರತಿವೆ.

ಇದೇ ನೆಲೆಯ ಸಮೀಪ ತುಂಗಭದ್ರಾ ನದಿಯ ಆಚೆ ದಂಡೆಯಲ್ಲಿಯ ಆನೆಗುಂದಿಯಲ್ಲಿಯೂ ಸಹ ನವಶಿಲಾಯುಗದ ಅವಶೇಷಗಳು ದೊರತಿವೆ. ಈ ಸಂಸ್ಕೃತಿ ಅರಿಯಲು ಪೂರಕವಾಗಿವೆ. ಅಲ್ಲದೆ ಇಲ್ಲಿಯೇ ವರ್ಣಚಿತ್ರಗಳನ್ನು ಗುರುತಿಸಲಾಗಿದೆ. ಈ ಚಿತ್ರಗಳನ್ನು ಸಹ ಕಂದು, ಕೆಂಪು ಬಣ್ಣಗಳಲ್ಲಿ ಬರೆಯಲಾಗಿದೆ. ಇಲ್ಲಿ ಮಾನವನ ಹಾಗೂ ವನ್ಯ ಮೃಗಗಳ ಚಿತ್ರಗಳಿವೆ. ವನ್ಯ ಮೃಗಗಳೆಂದರೆ ಕಾಡು ಕೋಣ, ಹುಲಿ, ಚಿಗರೆ, ಎತ್ತು, ಚಿರತೆ ಮುಂತಾದವುಗಳಿವೆ. ಪಕ್ಕದಲ್ಲಿಯೇ ಕೆಲವು ಮಾನವರ ಒಂದು ವಿಧವಾದ ಸಮೂಹ ನೃತ್ಯದಲ್ಲಿ ಭಾಗಿಗಳಾಗಿರುವುದನ್ನು ನೋಡಬಹುದು. ಇತರೆ ಚಿತ್ರಗಳ ವಿನ್ಯಾಸಗಳೆಂದರೆ ಬೇಟೆಯಾಡುವ ದೃಶ್ಯ, ಒಂದು ರೀತಿಯ ಆರಾಧನಾ ನೃತ್ಯ, ಮತ್ತಿತರ ವನ್ಯಮೃಗಗಳ ಚಿತ್ರಗಳಿದ್ದು, ಅತ್ಯಂತ ಮಹತ್ವವಾಗಿವೆ. ಈ ವರ್ಣಚಿತ್ರಗಳು ಆಕೃತಿ, ವಿನ್ಯಾಸ ಬಳಸಲಾದ ಬಣ್ಣಗಳು, ಕಥಾವಸ್ತು ಮತ್ತು ರೂಪ ನಿರೂಪಣಾ ದೃಷ್ಟಿಯಿಂದ ಇತರೆಡೆ ದೊರೆತ ಚಿತ್ರಗಳಿಗೆ ಹೋಲಿಕೆಯಾಗುತ್ತವೆ.[೨]

ಆ) ಚಕ್ರತೀರ್ಥ: ಇಲ್ಲಿನ ಬಂಡೆ ಛಾವಣಿಗಳ ಒಳಭಾಗದ ಮೇಲೆ ಶಿಲಾಯುಗದ ಮಾನವನು ತನ್ನ ವಿರಾಮ ಸಮಯದಲ್ಲಿ ಬಿಡಿಸಿರುವ ವರ್ಣ ಚಿತ್ರಗಳಿವೆ. ಇವುಗಳನ್ನು ನವ ಶಿಲಾಯುಗದ ಮಾನವನು ತನ್ನ ಮನರಂಜನೆಗಾಗಿಯೋ ಅಥವಾ ತನ್ನ ಭಾವನೆಗಳಿಗೆ ಒಂದು ರೂಪಕೊಡಲು ಚಿತ್ರಿಸಿದ್ದರಬೇಕು. ಇವುಗಳಲ್ಲಿ ಒಂದು ಕೆಡ ಬೃಹದಾಕಾರದ ಪಕ್ಷಿಯೊಂದು, ಬೃಹದಾಕಾರದ ಮಾನವ ದೇಹವನ್ನು ತನ್ನ ಚುಂಚುವಿನಿಂದ ಕುಕ್ಕುತ್ತಿರುವಂತೆ ತೋರಿಸಲಾಗಿದೆ. ಇವುಗಳ ದೇಹದ ಭಾಗವನ್ನು ಅಡ್ಡ-ಅಡ್ಡ ಗೆರೆಗಳಿಂದ ಕಂದು, ಕೆಂಪು ಬಣ್ಣಗಳಲ್ಲಿ ತುಂಬಲಾಗಿದೆ. ಇಲ್ಲಿಯೇ ಕಠಾರಿಯ ಚಿತ್ರವೊಂದನ್ನು ಬಿಡಿಸಿರುವುದು ವಿಶೇಷವಾಗಿದೆ.[೩]

ಇ) ಪ್ರಕಾಶನಗರ: ಮ್ಯಾಂಗೋಟ್ರೀಯಿಂದ ಪ್ರಕಾಶನಗರಕ್ಕೆ ಹೋಗುವ ದಾರಿಯ ಬಲಭಾಗಕ್ಕಿರುವ ಬಂಡೆಯ ಮೇಲೆ ಕಂದು, ಕೆಂಪು ಬಣ್ಣದಿಂದ ಚಿತ್ರಿಸಿದ ವರ್ಣಚಿತ್ರಗಳಿವೆ. ಇದರಲ್ಲಿ ಜಿಂಕೆಯಂತಹ ಪ್ರಾಣಿ, ಮನುಷ್ಯರ ಚಿತ್ರಗಳಿವೆ.[೪]

ಈ) ಗಾಯತ್ರಿಪೀಠ: ಪ್ರಕಾಶನಗರದಿಂದ ಗಾಯತ್ರಿ ಪೀಠಕ್ಕೆ ಹೋಗುವ ದಾರಿಯ ಬಲಭಾಗಕ್ಕಿರುವ ಬಂಡೆಯ ಮೇಲೆ ಕಂದು, ಕೆಂಪು ಬಣ್ಣದಿಂದ ಚಿತ್ರಿಸಿದ ವರ್ಣಚಿತ್ರಗಳಿವೆ. ಇದರಲ್ಲಿ ಕಡವೆ, ಜಿಂಕೆಯಂತಹ ಪ್ರಾಣಿ, ಮನುಷ್ಯರ ಚಿತ್ರಗಳಿವೆ.[೫]

ಉ) ಭರಮದೇವರ ಬಂಡೆ: ಪ್ರಕಾಶನಗರದಿಂದ ವಾಟರ್‌ಫಾಲ್ಸ್‌ಗೆ ಹೋಗುವ ದಾರಿಯ ಬಲಭಾಗಕ್ಕಿರುವ ಭರಮದೇವರ ಬಂಡೆಯ ಸಮೀಪದ ತುಂಗಭದ್ರಾ ನದಿ ದಡದ ಮೇಲಿರುವ ಬಂಡೆಯ ಮೇಲೆ ಕಂದು, ಕೆಂಪುಬಣ್ಣದಿಂದ ಚಿತ್ರಿಸಿದ ವರ್ಣಚಿತ್ರಗಳಿವೆ. ಇದರಲ್ಲಿ ಜಿಂಕೆ, ಮೊಸಳೆ ಮತ್ತು ಮನುಷ್ಯರ ಚಿತ್ರಗಳಿವೆ. ಇಲ್ಲಿರುವ ಚಿತ್ರಗಳಲ್ಲಿ ಗುಂಪು ನೃತ್ಯ ಮಾಡುವ ಚಿತ್ರಗಳು ಗಮನ ಸೆಳೆಯುತ್ತವೆ.[೬]

ಕೃಷ್ಣದೇವಾಲಯದ ಬಳಿಯ ಬೆಟ್ಟದಲ್ಲಿ ಮತ್ತು ಮತಂಗಪರ್ವತದ ಬಳಿ ಇದೇ

ರೀತಿಯ ವರ್ಣಚಿತ್ರಗಳಿವೆ. ಮೇಲೆ ವಿವರಿಸಿದ ಶಿಲಾಯುಗದ ಮಾನವ ಸಂಸ್ಕೃತಿಯ ಅವಶೇಷಗಳಲ್ಲದೆ, ಹಂಪೆಯಲ್ಲಿ ಕೆಲವಡೆ ಹಾಸುಬಂಡೆಗಳ ಮೇಲೆ ಚಿಕ್ಕ-ಚಿಕ್ಕ ಕುಳಿಗಳು ಕಂಡುಬರುತ್ತವೆ. ಅವು ಲಂಬಾಕಾರದ ವರ್ತುಳದಂತಿರುವ ಕುಳಿಗಳಾಗಿವೆ. ಇವುಗಳು ೮ ರಿಂದ ೬ ಅಂಗುಳ ಉದ್ದವಾಗಿವೆ. ಈಗಾಗಲೇ ತಿಳಿಸಿರುವಂತೆ ಈ ಕುಳಿಗಳು ಶಿಲಾಯುಗದ ಮಾನವನಿಂದ ನಿರ್ಮಿತವಾಗಿದ್ದು, ಆಗಿನ ಮಾನವನು ತಾನು ತಯಾರಿಸಿದ ಕಲ್ಲಿನ ಕೈಗೊಡಲಿ ಮತ್ತು ಕಡುಗತ್ತಿಗಳನ್ನು ಹರಿತಗೊಳಿಸಲೋಸುಗ ಹಾಸುಬಂಡೆಯ ಮೇಲೆ ಆಗಾಗ್ಗೆ ಮಸೆಯುತ್ತಿದ್ದುದರ ಪರಿಣಾಮವಾಗಿ ಈ ಕುಳಿಗಳು ಏರ್ಪಟ್ಟಿರಬೇಕು ಅನಿಸುತ್ತದೆ. ಅನೇಕ ಬಾರಿ ಹೊಸ ಹೊಸ ಶಿಲಾಯುಧಗಳನ್ನು ಸಿದ್ಧಪಡಿಸಿದಾಗ ಉಪಯೋಗಿಸಿದ್ದರಿಂದಾಗಿ ಸ್ವಲ್ಪ ಆಳದ ಕುಳಿಗಳಾದವು. ಹರಿತಗೊಳಿಸುವುದರೊಂದಿಗೆ ಈ ಆಯುಧಗಳಿಗೆ ಒಂದು ರೀತಿಯ ಹೊಳಪು ದೊರೆಯುತ್ತಿತ್ತು. ಆ ಮಾನವನು ತನಗೆ ಅವಶ್ಯವಿದ್ದ ಶಿಲಾಯುಧಗಳನ್ನು ಇಂತಹ ನೆಲೆಗಳಲ್ಲಿಯೇ ತಯಾರಿಸಿಕೊಳ್ಳುತ್ತಿದ್ದನು. ದೀರ್ಘಕಾಲದವರೆಗೆ ಇಲ್ಲಿಯೇ ವಾಸವಾಗಿದ್ದನು ಎಂಬ ವಿಷಯವನ್ನು ಈ ಕುಳಿಗಳು ಸೂಚಿಸುತ್ತವೆ.[೭]

೨. **ಕಮಲಾಪುರ:** ಹೊಸಪೇಟೆ ತಾಲೂಕಿನಲ್ಲಿರುವ ಈ ಗ್ರಾಮ ಹಂಪಿಯ ಮತ್ತು ವಿಜಯನಗರ ಸಾಮ್ರಾಜ್ಯದ ಒಂದು ಭಾಗವಾಗಿತ್ತು. ಇದರ ನೈರುತ್ಯ ದಿಕ್ಕಿನಲ್ಲಿ ಸುಮಾರು ೬ ಕಿ.ಮೀ. ದೂರದ ಒಂದು ಚಿಕ್ಕ ಹಳ್ಳದಲ್ಲಿ ಪ್ರಾಚೀನ ಶಿಲಾಯುಗದ(ಕ್ರಿ.ಪೂ. ೩೫೦೦೦-೧೦,೦೦೦ ವರ್ಷಗಳ ಹಿಂದೆ) ಕಲ್ಲಿನಾಯುಧಗಳು ದೊರೆತಿವೆ. ಈ ಕಾಲದಲ್ಲಿ ಮಾನವನು ತನಗೆ ಬೇಕಾದ ದುಂಡಾದ ಕಲ್ಲುಗಳನ್ನು, ಬಡೆದೋ ಕೆತ್ತಿಯೋ ತಯಾರಿಸಿಕೊಳ್ಳುತ್ತಿದ್ದನು. ಇಲ್ಲಿ ದೊರೆತ ಶಿಲಾಯುಧಗಳು ಒಂದು ವಿಧವಾದ ಘಟ್ಟಿಕಲ್ಲಿನಿಂದ ತಯಾರಿಸಲ್ಪಟ್ಟದ್ದು. ಒಮ್ಮೆ ಒಂದು ಕಡೆ ಹರಿತವಾಗಿದ್ದರೆ ಇನ್ನೂ ಕೆಲವೊಮ್ಮೆ ಎರಡೂ ಕಡೆ ಹರಿತವಾಗಿರುವಂತೆ ಹಿಮ್ಮುಖಗಳೊಂದಿಗೆ ತಯಾರಿಸಲಾಗಿದೆ. ಇವುಗಳಲ್ಲದೆ ಉಳಿಗಳು, ಕೆತ್ತುವ ಸಾಧನಗಳು, ಕೈಗೊಡಲಿ ಫ್ಲೇಕ್ ಮುಂತಾದ ಕಲ್ಲಿನಿಂದ ಮಾಡಿದ ಆಯುಧಗಳು ದೊರೆತಿವೆ. ಅವುಗಳ ಜೊತೆಗೆ ಅಪೂರ್ಣವಾಗಿರುವ ಕೆಲ ಶಿಲಾಯುಧಗಳು ಮತ್ತು ಕೆಲವು ಬೆಂಡಾದ ಭಾಗಗಳು ಸಹ ದೊರೆತಿವೆ. ಅಲ್ಲದೆ ಇಲ್ಲಿಯೇ ಆದಿ ಹಳೆಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಗುರುತಿಸಿದ್ದು, ಇಲ್ಲಿ ಆ ಕಾಲದ ಕೈ ಗೊಡಲಿ ಹೆರೆಗತ್ತಿ, ಮಚ್ಚುಗತ್ತಿ ಮೊದಲಾದ ಉಪಕರಣಗಳು ದೊರೆತಿದ್ದು, ಇವುಗಳನ್ನು ಡಾಲರೈಟ್ ಶಿಲೆಯಲ್ಲಿ ರೂಪಿಸಲಾಗಿದೆ. ಒಮ್ಮುಖ ಹಾಗೂ ಇಮ್ಮುಖದ ನೀಳಚೆಕ್ಕೆ, ಸೂಕ್ಷ್ಮ ಶಿಲೋಪಕರಣಗಳು ಇಲ್ಲಿ ದೊರೆತಿವೆ. ಅಲ್ಲದೆ ಕನ್ನಡ ವಿಶ್ವವಿದ್ಯಾಲಯ ಗಿರಿಸೀಮೆಯ ಬಂಡೆ ಮತ್ತು ಇಲ್ಲಿನ ಅತಿಥಿಗೃಹದ ಪೂರ್ವದ ಬಂಡೆಯ ಮೇಲೆ ಹಾಗೂ ಅಳ್ಳಿಕೆರೆಯ ಉತ್ತರಕ್ಕಿರುವ ಬೆಟ್ಟದ ಬಂಡೆಗಳ ಮೇಲೆ ನವಶಿಲಾಯುಗ ಕಾಲಕ್ಕೆ ಸೇರಿದ ಕುಟ್ಟು ಚಿತ್ರಗಳಿದ್ದು, ಅವುಗಳಲ್ಲಿ ಗೂಳಿ, ಮನುಷ್ಯ, ಜಿಂಕೆ, ಕಡಿವೆ ರೀತಿಯ ಚಿತ್ರಗಳು ಪ್ರಮುಖವಾಗಿದೆ. ಅವು ಅಂದಿನ ಸಂಸ್ಕೃತಿಯನ್ನು ಅರಿಯಲು ಸಹಾಯಕವಾಗಿವೆ.[೮]

೩) **ನಿಂಬಾಪುರ:** ಹೊಸಪೇಟೆ ತಾಲೂಕಿನ ಹಂಪೆಯಿಂದ ಸುಮಾರು ಎರಡು ಕಿ.ಮೀ. ದೂರದಲ್ಲಿ ಒಂದು ಚಿಕ್ಕ ಬೂದಿಯಗುಡ್ಡ ಅಥವಾ ಮರಡಿ ಕಾಣಬರುತ್ತದೆ. ಅದನ್ನು ಸ್ಥಳೀಯರು 'ವಾಲಿಕಾಷ್ಠ' ಎಂದು ಕರೆಯುವ ವಾಡಿಕೆಯಿದೆ. ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಈ ಭಾಗಕ್ಕೆ ನಿಂಬಾಪುರವೆಂದು ಹೆಸರಿತ್ತು. ಆಗ ಕೆಲ ದೇವಸ್ಥಾನಗಳು ಮಠಮಾನ್ಯಗಳು ಈ ಭಾಗದಲ್ಲಿ ಅಸ್ತಿತ್ವಕ್ಕೆ ಪಡೆದುಕೊಂಡಿದ್ದವು. ಇಲ್ಲಿನ ಬೂದಿಗುಡ್ಡವನ್ನು ಕ್ಯಾಪ್ಟನ್ ನ್ಯೂಬೋಲ್ಡ್ ಎಂಬುವನು ಕ್ರಿ.ಶ.೧೮೭೨ರಲ್ಲಿಯೇ ಗುರುತಿಸಿದ್ದನು.[೯] ಆಗ ಅದು ೪೫ ಅಡಿ ಉದ್ದವಿದ್ದು ೧೦ರಿಂದ೧೫ ಎತ್ತರವಾಗಿತ್ತು. ಆದರೂ ಶಿಲಾಯುಗದ ಅವಶೇಷಗಳು ಅಷ್ಟಾಗಿ ಕಾಣಬರಲಿಲ್ಲ. ಇದು ಕುಡತಿನಿಯ ಹತ್ತಿರವಿರುವ ಬೂದಿಕಣಿವೆಯನ್ನು ಹೋಲುತ್ತದೆ. ಆದರೆ ಇದು ಅದಕ್ಕಿಂತಲೂ ಚಿಕ್ಕ ಪ್ರಮಾಣದಲ್ಲಿದೆ. ಕುಡತಿನಿಯಲ್ಲಿ ದೊರೆತಂತಹ ಶಿಲಾಯುಗದ ಅವಶೇಷಗಳು ಇಲ್ಲಿ ಇನ್ನೂ ದೊರೆತಿಲ್ಲ, ಈ ಕುರಿತು ಇಲ್ಲಿ ಇನ್ನೂ ಸಂಶೋಧನೆ ನಡೆಯಬೇಕಾಗಿದೆ. ಸದ್ಯಕ್ಕೆ ಬಳ್ಳಾರಿ ಮತ್ತು ಪಕ್ಕದ ರಾಯಚೂರು ಜಿಲ್ಲೆಗಳಲ್ಲಿ ಅನೇಕ ಕಡೆ ಕಾಣಬರುವ ಬೂದಿಗುಡ್ಡಗಳಂತೆ ಇದು ಇದ್ದು, ನವಶಿಲಾಯುಗದ ಕೊನೆಯ ಹಂತಕ್ಕೆ ಸೇರಿದೆ.[೧೦]

ಈ ಮೇಲೆ ವಿವರಿಸಲಾದ ಆಧಾರಗಳ ಮೇಲೆ ಹಂಪೆಯ ಪ್ರಾಂತವು ಶಿಲಾಯುಗದ ಮಾನವನ ಚಟುವಟಿಕೆಗಳ ಮತ್ತು ಸಂಸ್ಕೃತಿಯ ಕ್ಷೇತ್ರವಾಗಿತ್ತು ಎಂದು ಹೇಳಬಹುದಾಗಿದೆ. ಇವು ನವಶಿಲಾಯುಗದ ಕೊನೆಯ ಹಂತಕ್ಕೆ ಸೇರಿದವುಗಳೆಂದು ಕೆಲವರಿಂದ ತರ್ಕಿಸಲಾಗಿದೆ. ಆದರೂ ಇವುಗಳ ಕಾಲವನ್ನು ನಿರ್ದಿಷ್ಟವಾಗಿ ಹೇಳಬೇಕಾದರೆ ಈ ಭಾಗದಲ್ಲಿ ವ್ಯವಸ್ಥಿತ ಹಾಗೂ ಸಮಗ್ರ ರೀತಿಯಲ್ಲಿ ಸರ್ವೇಕ್ಷಣಾ ಮತ್ತು ಉತ್ಖನನ ಕಾರ್ಯಗಳು ಜರುಗಿಸಿದಲ್ಲಿ ಹೆಚ್ಚಿನ ಮಾಹಿತಿಗಳು ಲಭ್ಯವಾಗುವ ಸಾಧ್ಯತೆಯಿದೆ.

ಈ ಎಲ್ಲಾ ಪ್ರಕರಣಗಳನ್ನು ಗಮನಿಸಿದಾಗ ಆ ಕಾಲದ ಚಿತ್ರಕಲೆಯನ್ನು ಪ್ರತಿನಿಧಿಸುತ್ತದೆ. ಬಣ್ಣಗಳ ತಿಳುವಳಿಕೆ, ಅದನ್ನು ಬಳಸುವ ವಿಧಾನ ಗೊತ್ತಿರುವಂತೆ ಗೋಚರಿಸುತ್ತದೆ. ಇದರಿಂದ ಅಂದಿನ ಚಿತ್ರಕಲೆಯನ್ನು ತಿಳಿಯಲು ಪೂರಕವಾಗಿದೆ. ಈ ಚಿತ್ರಗಳನ್ನು ಆಸುಬಂಡೆಯ ಮೇಲೆ, ಕಲ್ಲುಬಂಡೆಗಳ ಮೇಲೆ ಬಿಡಿಸಿರುವ ಕಾರಣಗಳಿಂದ ಇಂದಿಗೂ ಅವು ಇತಿಹಾಸದ ಕುರುಹುಗಳಾಗಿ ಲಭಿಸಿವೆ. ಚಿತ್ರಗಳನ್ನು ಬರೆಯುವ ಸಾಧನಗಳು ಹೇಗೆ ಮಾಡುತ್ತಿದ್ದರು ಎಂದು ತಿಳಿದು ಬರುವುದಿಲ್ಲವಾದರೂ ಅವುಗಳನ್ನು ಬಹಳ ಅಚ್ಚುಕಟ್ಟಾಗಿ ಬಳಕೆ ಮಾಡಿರುವುದು ಇಲ್ಲಿ ಗಮನಿಸಬಹುದು. ಇವುಗಳನ್ನು ಶೋಧಿಸಿದ ವಿದ್ವಾಂಸರಿಗೆ ತಿಳಿಯದೆ ಹೋಗಿದ್ದರೆ, ಅವು ಅತಿವೃಷ್ಟಿ ಅನಾವೃಷ್ಟಿಗೆ ಸಿಲುಕಿ ನಾಶವಾಗುತ್ತಿದ್ದವು ಎಂದು ತೋರುತ್ತವೆ.

೧. ಚಾರಿತ್ರಿಕ ಕಾಲದ ಕಲೆ ಮತ್ತು ವಾಸ್ತುಶಿಲ್ಪ

ಹಂಪಿಗೆ ಭಾರತದ ಚರಿತ್ರೆಯಲ್ಲಿ ಮಹತ್ವದ ಸ್ಥಾನವಿದೆ. ಪ್ರಾಗೈತಿಹಾಸಿಕ ಕಾಲದಿಂದ ಹಿಡಿದು ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ಇದು ತನ್ನದೇ ಆದ ಪಾತ್ರ ನಿರ್ವಹಿಸಿದೆ. ಇಲ್ಲಿ

ದಕ್ಷಿಣ ಭಾರತದ ಇತಿಹಾಸದಲ್ಲಿಯೇ ಅತಿ ಮಹತ್ವ ಪಡೆದಿರುವ ವಿಜಯನಗರ ಸ್ರಾಮಾಜ್ಯ ಹುಟ್ಟಿ, ಬೆಳೆದು, ಅವಸಾನಗೊಂಡಿದ್ದು, ಈ ಪುಣ್ಯಭೂಮಿಯಲ್ಲಿಯೇ. ಇದಕ್ಕೆ ಆಸರೆಯಾಗಿನಿಂತಿದ್ದು, ತುಂಗಭದ್ರಾ ನದಿ ಮತ್ತು ಇಲ್ಲಿನ ಭೌಗೋಳಿಕ ಪರಿಸರ. ಇಲ್ಲಿನ ಉತ್ತಮ ಭೌಗೋಳಿಕ ಪರಿಸರ ಅತ್ಯಂತ ಹಿತಕರವಾಗಿದ್ದರಿಂದ ಮತ್ತು ಹಂಪಿ ಬಹು ಹಿಂದಿನಿಂದಲೂ ವಾಣಿಜ್ಯ ಮತ್ತು ವ್ಯಾಪಾರದ ಕೇಂದ್ರವಾಗಿದ್ದರಿಂದ ಹಾಗೂ ಇದು ಆಯಕಟ್ಟಿನ ಜಾಗದಲ್ಲಿ ಇದ್ದಿದ್ದರಿಂದ ಇದನ್ನು ಪ್ರಾಚೀನ ಕರ್ನಾಟಕದ ಅನೇಕ ಅರಸು ಮನೆತನಗಳು ತಮ್ಮ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡವು. ಕಾಲ ಕ್ರಮೇಣ ಇಲ್ಲಿ ರಾಜ್ಯ ಸ್ಥಾಪನೆ ಮಾಡಿದ ವಿಜಯನಗರದ ಅರಸರು ಸಹ ತಮ್ಮ ಆಳ್ವಿಕೆಯ ಅವಧಿಯಲ್ಲಿ ಈ ರೀತಿಯ ಉತ್ತಮವಾದ ಪ್ರದೇಶವನ್ನು ಆಯ್ದುಕೊಂಡು ಅಲ್ಲಿ ಕೃತಕವಾಗಿ ಕೋಟೆಗಳನ್ನು ಕಟ್ಟಿ ಜನರನ್ನು, ಅವರಲ್ಲಿರುವ ಸಂಪತ್ತನ್ನು ಶತ್ರುಗಳಿಂದ ರಕ್ಷಿಸಿ ತಮ್ಮ ಸಾಮ್ರಾಜ್ಯ ಕಟ್ಟಿ ಬೆಳೆಸಿದರು. ಹೀಗಾಗಿಯೇ ಆ ರಾಜಮನೆತನದ ಕೀರ್ತಿ ಪತಾಕೆಗಳು ಚಿರಸ್ಥಾಯಿಯಾಗಿ ಉಳಿದವು.

ವಿಜಯನಗರಕ್ಕಿಂತಲೂ ಮೊದಲು ಹಂಪಿಯನ್ನು ತಮ್ಮ ಆಡಳಿತದ ಕೇಂದ್ರವನ್ನಾಗಿ ಮಾಡಿಕೊಂಡಿದ್ದ ರಾಷ್ಟ್ರಕೂಟರು, ಬಾದಾಮಿ ಚಾಲುಕ್ಯರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು ಮೊದಲಾದ ಅರಸರಿಂದ ಮತ್ತು ವಿಜಯನಗರದ ಅರಸರಿಂದ, ಅವರ ಸಾಮಂತರಿಂದ, ಅವರ ಆಧಿನಾಧಿಕಾರಿಗಳಿಂದ, ಆ ಕಾಲದ ಜನರಿಂದ ನಿರ್ಮಾಣವಾದ ಹಲವಾರು ಸ್ಮಾರಕಗಳು ಹಂಪಿಯಲ್ಲಿದ್ದು, ಅವುಗಳಿಂದ ಅಂದಿನ ಸಂಸ್ಕೃತಿಯನ್ನು ಅರಿಯಬಹುದಾಗಿದೆ. ಹಂಪಿಯನ್ನು "ಜಗತ್ತಿನ ಬಯಲು ವಸ್ತುಸಂಗ್ರಹಾಲಯ, ಸ್ಮಾರಕಗಳ ತವರೂರು, ಜಗತ್ತಿನ ಸ್ಮಾರಕಗಳ ತರಬೇತಿಶಾಲೆ" ಇನ್ನು ಮುಂತಾಗಿ ಕರೆಯಬಹುದಾಗಿದೆ.[೧೦] ಅಷ್ಟೊಂದು ವೈವಿಧ್ಯಮಯ ಸ್ಮಾರಕಗಳು ಈ ಪ್ರದೇಶದಲ್ಲಿ ಕಾಣಸಿಗುತ್ತವೆ. ಇಲ್ಲಿ ಹೆಜ್ಜೆ ಹೆಜ್ಜೆಗೂ ಸ್ಮಾರಕಗಳು ಕಾಣಸಿಗುತ್ತವೆ. ಇಲ್ಲಿ ಪ್ರಾಗೈತಿಹಾಸಿಕ ಕಾಲದ ಕೈಗೊಡಲಿ, ಮಡಕೆಚೂರು, ರೇಖಾ, ಕುಟ್ಟಿದ, ಕೊರೆದ ಹಾಗೂ ವರ್ಣಚಿತ್ರಗಳು, ಕುಳಿಗಳು ಮತ್ತು ಕಲ್ಗೋರಿಗಳಷ್ಟೇ ಅಲ್ಲದೆ ವಿಜಯನಗರದ ಪೂರ್ವದ ಅರಸರಿಂದ, ಇಲ್ಲವೇ ಸಮಕಾಲೀನ ವಿಜಯನಗರದ ಅರಸರಿಂದ, ಇಲ್ಲವೇ ನಂತರ ಕಾಲದ ಅಧಿಕಾರಿಗಳು ಅಥವಾ ಜನರಿಂದ ನಿರ್ಮಾಣವಾದ ಪ್ರಸಿದ್ಧ ಸ್ಮಾರಕಗಳು, ದೇವಾಲಯಗಳು, ಗುಹಾದೇವಾಲಯಗಳು, ಕೆರೆ, ಬಾವಿ, ಕಾಲುವೆ, ಮಸೀದಿ, ದರ್ಗಾ, ಸಮಾಧಿಗಳು, ಮಠಗಳು, ಶಾಸನಗಳು, ಸ್ಮಾರಕಶಿಲೆಗಳು, ಅಳಿದುಳಿದ ಕಟ್ಟಡ ಅವಶೇಷಗಳು, ಕೋಟೆಕೊತ್ತಲಗಳು, ಜಿನಬಸದಿಗಳು, ಪ್ರಾಚೀನ ರಸ್ತೆಗಳು, ವಿಭಿನ್ನ ಬಗೆಯ ಮೂರ್ತಿ ಮತ್ತು ಶಿಲ್ಪಗಳು ಇನ್ನು ಮುಂತಾದವುಗಳು ಇಲ್ಲಿ ಹೇರಳವಾಗಿ ಕಾಣಬರುತ್ತವೆ. ಅಂದಿನ ಮಾನವನ ಜೀವನಕ್ರಮ ಮತ್ತು ಸಂಸ್ಕೃತಿಯನ್ನು ಅರಿಯಲು ಇವು ಏಕಮೇವ ಆಧಾರಗಳಾಗಿವೆ. ಇವುಗಳ ಸಹಾಯದಿಂದ ಅಂದಿನ ಸಮಾಜೋ-ಆರ್ಥಿಕ ಮತ್ತು ರಾಜಕೀಯ ಹಾಗೂ ಧಾರ್ಮಿಕ ವಿವರಗಳನ್ನು ಅರಿಯಬಹುದಾಗಿದೆ.

ಕಲೆ ಮತ್ತು ವಾಸ್ತುಶಿಲ್ಪಗಳ ಕೇಂದ್ರಗಳಾದ ಇವುಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಧಾರ್ಮಿಕ ಸ್ಮಾರಕಗಳು, ಲೌಕಿಕ ಸ್ಮಾರಕಗಳು, ಸೈನಿಕ ಸ್ಮಾರಕಗಳು ಎಂದು ಮೂರು ಭಾಗಗಳಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡಲು ಯತ್ನಿಸಲಾಗಿದೆ.

ಅ) ಧಾರ್ಮಿಕ ಸ್ಮಾರಕಗಳು

ಹಂಪಿಯಲ್ಲಿ ಕಾಣಬರುವ ಧಾರ್ಮಿಕ ಸ್ಮಾರಕಗಳು ಇಲ್ಲಿನ ಧಾರ್ಮಿಕ ಪರಂಪರೆಯನ್ನು ಅರಿಯಲು ಸಹಾಯಕವಾಗಿವೆ. ಅವು ಇಂದು ಪ್ರಾವಾಸಿಗರ ಮತ್ತು ಧಾರ್ಮಿಕ ದೃಷ್ಟಿಯಿಂದ ಹಂಪಿಗೆ ಆಗಮಿಸುವವರ ಪ್ರಮುಖ ಆಕರ್ಷಿತ ಕೇಂದ್ರಗಳಾಗಿವೆ. ಇಲ್ಲಿ ಕಾಣಬರುವ ದೇವಾಲಯ, ಮಠ, ಜೈನಬಸದಿ, ಮಸೀದಿ, ದರ್ಗಾ ಮೊದಲಾದವುಗಳನ್ನು ಈ ಪ್ರಕಾರದ ಅಡಿಯಲ್ಲಿ ಸೇರಿಸಿ ಅಧ್ಯಯನ ಮಾಡಲಾಗಿದೆ. ಕಲೆ ಮತ್ತು ವಾಸ್ತು ಶಿಲ್ಪದ ಪ್ರತೀಕವಾಗಿರುವ ಇವು ಅಂದಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕಲಾ ಕೇಂದ್ರಗಳಾಗಿವೆ. ಈ ಹಿನ್ನೆಲೆಯಲ್ಲಿ ಹಂಪಿಯಲ್ಲಿನ ಪ್ರಮುಖ ಧಾರ್ಮಿಕ ಕೇಂದ್ರಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

೧. ವಿರೂಪಾಕ್ಷ ದೇವಾಲಯ

×× ವಿರೂಪಾಕ್ಷ ದೇವಾಲಯವು ವಿಜಯನಗರ ಪೂರ್ವಕಾಲದಿಂದಲೂ ಅಂದರೆ ಕ್ರಿ.ಶ.೮ನೇ ಶತಮಾನದಿಂದ ಕ್ರಿ.ಶ.೧೬ನೇ ಶತಮಾನದವರೆಗೆ ಅತ್ಯಂತ ಮುಖ್ಯ ಪಾತ್ರವಹಿಸಿದೆ. ಈ ದೇವಾಲಯ ಇಂದಿಗೂ ನಿತ್ಯ ಪೂಜೆಗೊಳ್ಳುತ್ತಿದೆ. ಚೌಕಾಕಾರವಾಗಿರುವ ಗರ್ಭಗುಡಿಯಲ್ಲಿ ಲಿಂಗವಿದ್ದು, ಅದನ್ನು ಶ್ರೀ ವಿರೂಪಾಕ್ಷಸ್ವಾಮಿ ಎಂದು ಆರಾಧಿಸಲಾಗುತ್ತದೆ. ನವರಂಗ ಮತ್ತು ಮುಖಮಂಟಪದ ಕಂಬಗಳಲ್ಲಿ ನಯನ ಮನೋಹರವಾದ ಲೌಕಿಕ ಮತ್ತು ಧಾರ್ಮಿಕ ಶಿಲ್ಪಗಳಿವೆ. ಇಲ್ಲಿ ಹಲವು ಉಪದೇವತೆಗಳ ಹಾಗೂ ಕಲ್ಯಾಣಮಂಟಪ, ಪಾಕಶಾಲೆ, ಉತ್ಸವ ಮಂಟಪ ಇತರೆ ವಿವಿಧೋಪಯೋಗಿ ಮಂಟಪಗಳಿವೆ. ಇಲ್ಲಿನ ರಂಗಮಂಟಪದ ವಿತಾನದಲ್ಲಿರುವ ವಿದ್ಯಾರಣ್ಯರ ಮೆರವಣಿಗೆ, ದಿಕ್ಪಾಲಕರ, ಮತ್ತು ವಿಷ್ಣುವಿನ ದಶಾವತಾರ, ಮತ್ಸ್ಯಯಂತ್ರ ಭೇದಿಸುತ್ತಿರುವ ಅರ್ಜುನ, ಮನ್ಮಥ ವಿಜಯ, ಶಿವ ತ್ರಿಪುರಾಂತಕ ಹಾಗು ಗಿರಿಜಾ ಕಲ್ಯಾಣಕ್ಕೆ ಸಂಬಂಧಿಸಿದ ವರ್ಣ ಚಿತ್ರಗಳು ಇವೆ. ಅವು ಈ ಅಧ್ಯಯನ ದೃಷ್ಟಿಯಿಂದ ಅತ್ಯಂತ ಗಮನಾರ್ಹವಾಗಿವೆ. ಇವು ವಿಜಯನಗರದ ಸ್ಮರಣಾರ್ಹ ವರ್ಣ ಚಿತ್ರಗಳೆನಿಸಿವೆ. ಗರ್ಭಗುಡಿ ಮೇಲೆ ಶಿಖರವಿದ್ದು, ಆಕರ್ಷಣೀಯವಾಗಿದೆ. ವಿಜಯನಗರ ಕಾಲದ ಕಾಲುವೆಯೊಂದು ಇಲ್ಲಿನ ಪಾಕಶಾಲೆಯ ಒಳಗಿನಿಂದ ಹಾದು ಹೋಗುವುದು ವಿಶೇಷವಾಗಿದೆ. ಈ ದೇವಾಲಯಕ್ಕೆ ಎರಡು ಪ್ರಕಾರ ಗೋಡೆಗಳು ಹಾಗೂ ಮೂರು ಮುಖ್ಯ ಪ್ರವೇಶ ದ್ವಾರಗಳಿವೆ. ಮೊದಲನೇ ಆವರಣ ಗೋಡೆಗೆ ಹೊಂದಿಕೊಂಡಂತೆ ಪೂರ್ವಭಾಗಕ್ಕಿರುವ ಚಿಕ್ಕಗೋಪುರವನ್ನು 'ರಾಯಗೋಪುರ' ಎಂದು ಕರೆಯಲಾಗುತ್ತದೆ. ಇದನ್ನು ಮತ್ತು ಮುಖ್ಯ ದೇವಾಲಯದ ಮಹಾಮಂಟಪನ (ರಂಗಮಂಟಪ ೧೯.೭*೧೩.೮ ಮೀಟರ್)ವನ್ನು ಕ್ರಿ.ಶ.೧೫೧೦ರಲ್ಲಿ ಶ್ರೀಕೃಷ್ಣದೇವರಾಯ

ನಿರ್ಮಿಸಿದನು ಎಂದು ಆತನ ಕಾಲದ ಶಾಸನವೊಂದು ವಿವರಿಸುತ್ತದೆ. ಉತ್ತರ ಭಾಗಕ್ಕಿರುವ ಪ್ರವೇಶ ದ್ವಾರವನ್ನು 'ಕನಕಗಿರಿ ಗೋಪುರ'ವೆಂದು ಕರೆಯಲಾಗುತ್ತದೆ. ಇಲ್ಲಿರುವ ಎರಡನೇ ಪ್ರಕಾರ ಗೋಡೆಗೆ ಪೂರ್ವದಲ್ಲಿ ಹೊಂದಿಕೊಂಡಂತಿರುವ ಮುಖ್ಯ ಪ್ರವೇಶ ದ್ವಾರ ಮತ್ತು ಗೋಪುರವು 'ಬಿಷ್ಟಪ್ಪಯ್ಯ ಗೋಪುರ'ವೆಂದು ಖ್ಯಾತವಾಗಿದೆ. ಇದನ್ನು ಸಂಗಮ ದೊರೆಯಾದ ಎರಡನೇ ದೇವರಾಯನ ಅಧಿಕಾರಿಯಾಗಿದ್ದ ಪ್ರೋಲಗಂಟಿ ತಿಪ್ಪ ಎನ್ನುವವನು ಕ್ರಿ.ಶ.೧೪೨೨-೪೬ರಲ್ಲಿ ನಿರ್ಮಿಸಿದನೆಂದು ಶಾಸನವೊಂದು ಹೇಳುತ್ತದೆ. ಇದೇ ವಿವರವನ್ನು 'ಉತ್ತರ ನರಸಿಂಹ ಪುರಾಣ' ಮತ್ತು 'ಶಿವತತ್ವ ಚಿಂತಾಮಣಿ' ಕೃತಿಗಳು ದಾಖಲಿಸಿವೆ. ಒಂಬತ್ತು ತಳಗಳನ್ನು ಹೊಂದಿರುವ ಇದು, ಸು.೫೨ ಮೀಟರ್ ಎತ್ತರವಿದೆ. ಇದು ವಿಜಯನಗರ ಕಾಲವಧಿಯಲ್ಲಿ ನಿರ್ಮಾಣವಾದ ದ್ರಾವಿಡ ಶೈಲಿಗೆ ಅತ್ಯಂತ ಉತ್ತಮ ಉದಾಹರಣೆಯಾಗಿದೆ. ಕ್ರಿ.ಶ.೧೫೧೦ರಲ್ಲಿ ಶ್ರೀಕೃಷ್ಣದೇವರಾಯ ತನ್ನ ಪಟ್ಟಾಭಿಷೇಕದ ನೆನಪಿಗಾಗಿ ಈ ಗೋಪುರವನ್ನು ದುರಸ್ಥಿ ಮಾಡಿಸಿ ಇದಕ್ಕೆ 'ಹಿರಿಯ ಗೋಪುರ' ಅಥವಾ 'ಮುಖ್ಯ ಗೋಪುರ' ಎಂದು ಕರೆದು, ಸಿಂಗನಾಯಕನಹಳ್ಳಿಯನು ದಾನ ನೀಡಿದನು. ಇದರ ಮೇಲೆ ಶಾಲಾ, ಕೂಟ, ಪಂಜರ, ಅರೆಗಂಬಗಳ ಹಾಗೂ ದೇವಾನುದೇವತೆಗಳ ಮತ್ತು ಮಿಥುನ ಶಿಲ್ಪಗಳಿದ್ದು, ನೋಡುಗರನ್ನು ಆಕರ್ಷಿಸುತ್ತವೆ. ಮುಖ್ಯ ಗೋಪುರದ ಪ್ರವೇಶ ದ್ವಾರದ ಬಳಿ ಇರುವ ಮೂರು ತಲೆಗಳಿರುವ ನಂದಿಯನ್ನು 'ತ್ರಿಕಾಲ'(ಭೂತ, ವರ್ತಮಾನ, ಭವಿಷತ್‌ಕಾಲ)ಗಳ ಪ್ರತೀಕವೆಂದು ಜನರು ನಂಬಿದ್ದಾರೆ. ಈ ದೇವಾಲಯದಲ್ಲಿ ಮುಖ್ಯ ದೇವಾಲಯದೊಂದಿಗೆ ಚಾಲುಕ್ಯರ ಕಾಲದ ಪಂಪಾಬಿಕೆ ಮತ್ತು ಭುವನೇಶ್ವರಿ (ಕ್ರಿ.ಶ.೧೨ನೇ ಶತಮಾನ) ದೇವಾಲಯಗಳು ಅಲ್ಲದೆ ಮುಕ್ತಿ ನರಸಿಂಹ, ಪಾತಳೇಶ್ವರ, ಗುಲಗುಂಜಿ ಮಾಧವ, ಪಾತಳೇಶ್ವರ, ನವದುರ್ಗ, ಸೂರ್ಯ ನಾರಾಯಣ, ತಾರಕೇಶ್ವರ, ವೀರಭದ್ರ, ಸರಸ್ವತಿ, ವಿದ್ಯಾರಣ್ಯ, ಮೊದಲಾದ ಉಪದೇವತೆಗಳ ಚಿಕ್ಕ ಚಿಕ್ಕ ಗುಡಿಗಳಿವೆ. "ಮುಖ್ಯಗೋಪುರದ ಛಾಯೆ ತಲೆಕೆಳಗಾಗಿ(ಇನ್ವರ್ಟ್‌ಇಮೇಜ್) ಕಾಣುವಂತೆ ಮಾಡಿರುವುದು ವಿಜಯನಗರದ ಅರಸರ ವೈಜ್ಞಾನಿಕ ಜ್ಞಾನದ ಪ್ರತೀಕವಾಗಿದ್ದು, ಆಚ್ಚರಿಯನ್ನುಂಟು ಮಾಡುತ್ತದೆ. ಪ್ರಕಾರ ಗೋಡೆಗಳ ಸುತ್ತಲೂ ಹೊಂದಿಕೊಂಡಂತಿರುವ ಸಾಲು ಮಂಟಪಗಳ ಮೇಲಿನ ಮತ್ತು ದೇವಾಲಯದ ಕೈಪಿಡಿ ಗೋಡೆ (ಪ್ಯಾರಪೆಟ್)ಗಳಲ್ಲಿರುವ ಗಾರೆ ಶಿಲ್ಪಗಳು ಅಂದಿನ ಕಲಾ ಕೌಶಲ್ಯದ ಪ್ರತೀಕವಾಗಿವೆ."[೧೨] ವಿಜಯನಗರ ವಾಸ್ತು ಶೈಲಿಯಲ್ಲಿರುವ ಇದು ಹಿಂದೂ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಹಲವಾರು ಶಿಲ್ಪಗಳನ್ನು ಒಳಗೊಂಡಿದೆ. ಈ ದೇವಾಲಯದ ರಂಗಮಂಟಪ, ರಾಯಗೋಪುರವನ್ನು ಮೊದಲೇ ತಿಳಿಸಿದಂತೆ ಶ್ರೀಕೃಷ್ಣದೇವರಾಯ ಕಟ್ಟಿಸಿ, ಹಿರೇಗೋಪುರಕ್ಕೆ ಜೀರ್ಣೋದ್ಧಾರ ಮಾಡಿಸಿದ್ದನು. ಇಲ್ಲಿರುವ ಗೋಪುರಗಳಿಗೆ ೧೮೫೭ ರಲ್ಲಿ ಬಳ್ಳಾರಿ ಜಿಲ್ಲಾ ಕಲೆಕ್ಟರ್ ಮಿಸ್ಟರ್ ರಾಬರ್ಟಸನ್‌ನ ನೇತೃತ್ವದಲ್ಲಿ ರಕ್ಷಣಾತ್ಮಕ ಕಾರ್ಯಗಳನ್ನು ಕೈಗೊಂಡಿದ್ದರು ಎಂದು ತಿಳಿದುಬರುತ್ತದೆ. ಜನಪ್ರಿಯ ಅಧಿಕಾರಿಯಾದ ಎಫ್.ಡಬ್ಲ್ಯೂ.ರಾಬರ್ಟ್‌ಸನ್ ಕಾಲದಲ್ಲಿ 'ಬಳ್ಳಾರಿ ದಂಗೆ' ನಡೆದರೂ,

ಕಾಲುವೆ, ನೀರಿನ ವ್ಯವಸ್ಥೆ, ಸ್ಮಾರಕಗಳ ರಕ್ಷಣೆಗೆ ಪ್ರೋತ್ಸಾಹ ನೀಡಿದನು. ಇವನ ಅವಧಿಯಲ್ಲಿ ಗ್ರಾಮಾಧಿಕಾರಿಗಳು ಸಂಪೂರ್ಣ ಸರ್ಕಾರದ ನಿಯಂತ್ರಣಕ್ಕೊಳಪಟ್ಟಿರಲಿಲ್ಲ. ಅಲ್ಲದೆ, ಕೆಲವು ನಿರ್ಬಂಧಗಳನ್ನು ಸಹ ವಿಧಿಸಲಾಯಿತೆಂದು ತಿಳಿದುಬರುತ್ತದೆ. ರಾಬರ್ಟ್‌ಸನ್ ಹಂಪಿ ಸ್ಮಾರಕಗಳಿಗೆ ತನ್ನ ಶಕ್ತ್ಯಾನುಸಾರ ರಕ್ಷಣೆ ಕಾರ್ಯಗಳನ್ನು ಮಾಡಿಸಿದನೆಂಬುವುದರಲ್ಲಿ ಅನುಮಾನವಿಲ್ಲ. ಇವನು ವಿರೂಪಾಕ್ಷಸ್ವಾಮಿ ದೇವಾಲಯಕ್ಕೆ ತನ್ನ ಆಸಕ್ತಿ ಮೀಸಲಾಗಿಟ್ಟಿಲ್ಲವಾದರೂ, ಇತರ ದೇವಾಲಯಗಳಿಗೆ ಮಾಡಿಸಿದ್ದನು. ಗಮನಿಸಬಹುದು.[೧೩] ಇದೇ ದೇವಾಲಯದ ಉತ್ತರ ದಿಕ್ಕಿಗಿರುವ ಕನಕಗಿರಿ ಗೋಪುರವನ್ನು ನಿರ್ಮಿಸಿದವರು ಯಾರೆಂಬುದು ತಿಳಿದಿಲ್ಲ. ಆದರೆ, ಹೈದರಾಬಾದಿನ ನಿಜಾಮ ಇದನ್ನು ಕಟ್ಟಿಸಿದನೆಂದು ಪ್ರತೀತಿ ಇದೆ. ಇದನ್ನೂ ಸಹ ರಾಬರ್ಟ್‌ಸನ್ನನು ಇಟ್ಟಿಗೆ ಮತ್ತು ಗಾರೆಯನ್ನು ಬಳಸಿ ರಕ್ಷಣೆಗೊಳಿಸಿದ್ದಲ್ಲದೆ, ಇತರ ದುರಸ್ತಿ ಕಾರ್ಯಗಳನ್ನು ಕೈಗೊಂಡಿದ್ದು ಗಮನಾರ್ಹವಾಗಿದೆ.[೧೪] ೧೮೫೬ರ ನಂತರ ಗೋಪುರ-ದೇವಾಲಯದಲ್ಲಿ ಕೆಲವು ವಿಗ್ರಹಗಳನ್ನು ಸ್ಥಾನಪಲ್ಲಟಗೊಳಿಸಲಾಗಿದೆ. ಇದನ್ನು ಅಲೆಗ್ಸಾಂಡರ್ ಗ್ರಿನಲಾ ಮತ್ತು ಗಾಲಿಂಗ್‌ರವರ ಫೋಟೋಗ್ರಾಫಿಯಿಂದ ತಿಳಿಯಬಹುದು. ರಾಯಗೋಪುರದ ಬಲಭಾಗದ ಮಂಟಪವನ್ನು ತೆಗೆಯದೇ ಅದಕ್ಕೆ ಹಾಗೆಯೇ ಗೋಡೆಯನ್ನು ನಿರ್ಮಿಸಲಾಗಿದೆ. ಈಗ ಗೃಹದೋಪಾದಿಯಲ್ಲಿರುವುದು ಕುತೂಹಲಕಾರಿ ಅಂಶ. ರಾಬರ್ಟ್‌ಸಿವೆಲ್‌ನ ಆಡಳಿತದಲ್ಲಿ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಲಯಗಳಿಗೆ ತನ್ನ ಪ್ರೋತ್ಸಾಹ ನೀಡಿರುವುದು ಪ್ರಶಂಸನೀಯ. ಇವನ ಅವಧಿಯಲ್ಲಿ ಕೈಗೊಂಡ ರಕ್ಷಣಾ ಕಾರ್ಯಗಳೆಂದರೆ, ಹಂಪಿ ವಿರೂಪಾಕ್ಷಸ್ವಾಮಿಯ ಬೃಹತ್ ಗೋಪುರದ ಮುಂಭಾಗ ಮತ್ತು ಪಶ್ಚಿಮಭಾಗ ಬಿರುಕು ಬಿಟ್ಟಿದ್ದರಿಂದ ನಾಲ್ಕು ಕಬ್ಬಿಣದ ತೊಲೆಗಳನ್ನು ಪೂರ್ವ ಮಹಾದ್ವಾರದ ಕಮಾನಿಗೆ ತೊಡಿಸಲಾಗಿದೆ. ಅದೇ ಗೋಪುರದ ಭಾರವನ್ನು ಎರಡು ಗೋಡೆಗಳಲ್ಲಿ ತೋರ್ಪಡಿಸುತ್ತದೆ. ಅದೇ ಗೋಪುರದ ಪಶ್ಚಿಮದ್ವಾರಕ್ಕೆ ನಾಲ್ಕು ಕಬ್ಬಿಣದ ಕಂಬಗಳನ್ನು ನಿಲ್ಲಿಸಿ, ಎರಡು ತೊಲೆಗಳನ್ನು ಅಡ್ಡವಾಗಿ, ೨ ಬೋಧಿಗಳನ್ನು ಪೂರ್ವಪಶ್ಚಿಮವಾಗಿ ಇಡಲಾಗಿದೆ. ಇದರ ಕಾಲಮಾನ ೧೮೮೪ ರಿಂದ ೧೮೮೬ ರಲ್ಲಿ ಆಗಿದೆ ಎನ್ನಬಹುದು. ಇವುಗಳನ್ನು ಇಂಗ್ಲೆಂಡ್‌ನಿಂದ ಆಮದು ಮಾಡಿಕೊಂಡಿರುವುದು ತಿಳಿದುಬರುತ್ತದೆ. ರಾಬರ್ಟ್ ಸಿವೆಲ್‌ನ ನಂತರ ಕಲೆಕ್ಟರನಾಗಿದ್ದ ಸಿ.ಎ.ಗಾಲ್ಟನ್ ಈ ಮೇಲಿನಂತೆ ರಕ್ಷಣೆ ವ್ಯವಸ್ಥೆಯನ್ನು ಉದಾರೀಕರಣಗೊಳಿಸಿದ್ದು, ಅವನ ಉದಾತ್ತ ಮನಸ್ಸು, ವರ್ಚಸ್ಸನ್ನು ಪ್ರತಿನಿಧಿಸುತ್ತದೆ. ಸ್ವಾತಂತ್ರ್ಯೋತ್ತರದಲ್ಲಿ ಈ ದೇವಾಲಯಕ್ಕೆ ಇನ್ನಷ್ಟು ರಕ್ಷಣಾ ಕಾರ್ಯಗಳನ್ನು ಕೈಗೊಳ್ಳಲಾಗಿದೆ.[೧೫] ಇದು ಅಧಿಕಾರದಲ್ಲಿ ಇರುವ ದಕ್ಷ ಆಡಳಿತಗಾರರ ಕೆಲಸವನ್ನು ಪ್ರತಿನಿಧಿಸುತ್ತದೆ. ಯಾವುದೇ ಒಂದು ಕುರುಹನ್ನು ರಕ್ಷಿಸುವಲ್ಲಿ ಕಾಳಜಿಯ ಪ್ರತೀಕವೂ ಆಗಿದೆ. ಇದರಿಂದ ಇಂತಹ ಅಧಿಕಾರಿಗಳು ಇತಿಹಾಸವನ್ನು ಸೃಷ್ಟಿಸುವಲ್ಲಿ ಮತ್ತು ಮರಳಿಸುವಲ್ಲಿ ಮುಂದಿನ ಪೀಳಿಗೆಗೆ ಮಾದರಿಯಾಗಬಲ್ಲರು.

೨. ಶ್ರೀಭುವನೇಶ್ವರಿ ದೇವಾಲಯದ ವಾಸ್ತು ಮತ್ತು ಮೂರ್ತಿ

ಕನ್ನಡಿಗರ ಅಧಿದೇವತೆ ಎಂದು ಕರೆಯಲ್ಪಡುವ ಈ ದೇವಾಲಯ ಹಂಪಿಯ ಶ್ರೀವಿರುಪಾಕ್ಷ ದೇವಾಲಯದ ದಕ್ಷಿಣ ಭಾಗದಲ್ಲಿದೆ. ಈ ದೇವಾಲಯ ಗರ್ಭಗುಡಿ ಮತ್ತು ನವರಂಗಗಳನ್ನು ಹೊಂದಿದೆ. ಇದನ್ನು ಪ್ರವೇಶಿಸಲು ಎರಡು ಕಡೆ ದ್ವಾರಗಳಿವೆ. ಇಲ್ಲಿನ ಅಧಿಷ್ಠಾನ, ಭಿತ್ತಿ, ನವರಂಗದಲ್ಲಿನ ಕಂಬ, ದ್ವಾರ ಅದರ ಬಂಧಗಳು ಹಾಗೂ ಗರ್ಭಗುಡಿ ಮತ್ತು ನವರಂಗದ ವಿತಾನಗಳು ವಾಸ್ತು ಶಿಲ್ಪ ಮತ್ತು ಅಲಂಕಾರ ದೃಷ್ಟಿಯಿಂದ ಅತ್ಯಂತ ಪ್ರಮುಖವಾಗಿವೆ. ಇಲ್ಲಿನ ಅಷ್ಟದಿಕ್ಪಾಲಕರ ಮತ್ತು ಶ್ರೀಚಕ್ರದ ಅಲಂಕಾರ ವಿಶೇಷವಾಗಿದ್ದು, ನಯನ ಮನೋಹರವಾಗಿವೆ. ಪೀಠದ ಮೇಲೆ ಆಸೀನವಾಗಿರುವ ಭುವನೇಶ್ವರಿ ದೇವಿ ನಾಲ್ಕು ಕೈಗಳನ್ನು ಹೊಂದಿದ್ದು, ಮೇಲಿನ ಕೈಗಳಲ್ಲಿ ಅಂಕುಶ, ಪಾಶಗಳಿದ್ದು, ಕೆಳಗಿನ ಕೈಗಳು ಅಭಯ, ವರದ ಮುದ್ರೆಯಲ್ಲಿವೆ. ಕರಂಡ ಮುಕುಟ ಧಾರಿಯಾದ ದೇವಿ ತನ್ನ ಕೊರಳು ಮತ್ತು ದೇಹದ ಮೇಲೆ ವಿವಿಧ ಅಲಂಕೃತ ಆಭರಣಗಳನ್ನು ಧರಿಸಿದ್ದಾಳೆ. ದೇವಿಯ ಹಿಂಬದಿಯಲ್ಲಿ ಕೀರ್ತಿಮುಖಯುಕ್ತ ಸುಂದರ ಪ್ರಭಾವಳಿ ಇದೆ. ಇಲ್ಲಿರುವ ನಯನ ಮನೋಹರ ಶಿಲ್ಪಗಳು ಜನರನ್ನು ಸದಾ ಕಾಲ ಆಕರ್ಷಿಸುತ್ತವೆ.[೧೬] ಇದು ಇತಿಹಾಸಕ್ಕೆ ಪೂರಕವಾಗಿದ್ದರೂ ಕನ್ನಡಿಗರ ನಂಬಿಕೆಯನ್ನು ಗಟ್ಟಿಗೊಳಿಸುವ ಆ ಮೂಲಕ ಕನ್ನಡತನವನ್ನು ಉಳಿಸಿಕೊಳ್ಳುವಾಗ ಈ ದೇವತೆಯನ್ನು ನೆನೆಯುವ ವಾಡಿಕೆ ಈಗಲೂ ಇದೆ. ಶ್ರೀಕೃಷ್ಣದೇವರಾಯನು ಯುದ್ಧಕ್ಕೆ ತೆರಳುವಾಗ ಈ ದೇವತೆಯ ದರ್ಶನವನ್ನು ಪಡೆದುಕೊಂಡು ಹೋಗುತ್ತಿದ್ದನು ಎಂದು ಇತಿಹಾಸ ಸಾರಿ ಹೇಳುತ್ತದೆ. ಇದರ ಬಗ್ಗೆ ಇತಿಹಾಸದ ವಿದ್ವಾಂಸರಾದ ಚಿದಾನಂದಮೂರ್ತಿಯವರು ಈ ದೇವತೆಯ ಬಗ್ಗೆ ಧನಾತ್ಮಕ ಅಭಿಪ್ರಾಯವನ್ನು ಹೇಳುತ್ತಾರೆ.

೩. ಬಡವಿ ಲಿಂಗ

ಇದು ೯ ಅಡಿಯ ದೇವಸ್ಥಾನವಾಗಿದ್ದು, ಲಕ್ಷ್ಮಿನರಸಿಂಹ ದೇವಸ್ಥಾನದ ಸಮೀಪವೇ ಕಾಣಸಿಗುತ್ತದೆ. ಇದರ ವಿಶಿಷ್ಟತೆಯೆಂದರೆ, ಇದು ಒಂದು ಪ್ರಾಚೀನ ಕಾಲುವೆಯ ಮುಖಾಂತರ ಹರಿದು ಬರುವ ನೀರಿನಿಂದ ಸದಾಕಾಲ ಆವೃತ್ತವಾಗಿರುತ್ತದೆ. ಈ ಲಿಂಗದಲ್ಲಿ ಮೂರು ಕಣ್ಣುಗಳನ್ನು ಕೆತ್ತಲಾಗಿದ್ದು, ಭಗವಾನ್ ಶಿವನ ಮೂರು ನೇತ್ರಗಳನ್ನು ಪ್ರತಿನಿಧಿಸುತ್ತದೆ. ಸ್ಥಳೀಯರ ನಂಬಿಕೆ ಪ್ರಕಾರ, ಹಂಪಿ ಎಂಬ ಬಡ ಬುಡಕಟ್ಟು ಜನಾಂಗದವನೊಬ್ಬ ತನ್ನ ಆಸೆಗಳನ್ನು ಈಡೇರಿಸಿದರೆ ಒಂದು ಶಿವಲಿಂಗವನ್ನು ಕಟ್ಟುತ್ತೇನೆಂದು ಮಾತು ಕೊಡುತ್ತಾನೆ. ಇದನ್ನರಿತ ಪರಮೇಶ್ವರನು ಅವನ ಆಸೆಗಳನ್ನು ಈಡೇರಿಸಲು ನಿರ್ಧರಿಸಿದನು. ತದನಂತರ ಆ ಭಕ್ತನು ಬಡವಲಿಂಗವನ್ನು ನಿರ್ಮಿಸಿ ಈಶ್ವರನಿಗೆ ಅರ್ಪಿಸಿದನು. ಇನ್ನೊಂದು ದಂತಕಥೆಯ ಪ್ರಕಾರ, ಈ ಲಿಂಗವು ಒಬ್ಬ ರೈತ ಮಹಿಳೆಯಿಂದ ನಿರ್ಮಿತವಾಗಿದ್ದು, ಅದಕ್ಕವಳು ಬಡವಲಿಂಗ ಎಂದು ನಾಮಕರಣ ಮಾಡಿದ್ದಳು ಎಂಬ ನಂಬಿಕೆ ಜನರಲ್ಲಿದೆ.[೧೭] ಇದು ಅಲ್ಲಿನ ಐತಿಹ್ಯ ಮತ್ತು ಪುರಾಣದಂತೆ ಗೋಚರಿಸುತ್ತದೆ. ಇದು ಇತಿಹಾಸವನ್ನು ಅರಿಯುವಲ್ಲಿ ಪೂರಕವಾಗಿದೆ ಅಷ್ಟೆ

೪. ಸಾಸುವೆ ಕಾಳು ಗಣೇಶ

ಹೇಮಕೂಟ ಬೆಟ್ಟದ ಕೆಳಗಿರುವ ಸಾಸಿವೆಕಾಳು ಗಣೇಶ ಗುಡಿ ಹಂಪಿಯ ಹಂಪಿಯ ಆಕರ್ಷಣೆಗಳಲ್ಲಿ ಒಂದಾಗಿದೆ. ಸಾಸಿವೆ ಕಾಳಿನ ಆಕಾರದಲ್ಲಿರುವ ಕಾರಣಕ್ಕಾಗಿ ಇದನ್ನು ಸಾಸಿವೆ ಕಾಳು ಗಣಪತಿ ಎಂದು ಕರೆಯುತ್ತಾರೆ. ಆದ್ದರಿಂದ ಭಕ್ತ ಸಮೂಹದಲ್ಲಿ ಇದು, ಸಾಸಿವೆಕಾಳು ಗಣೇಶನೆಂಬ ಹೆಸರಿನಿಂದಲೂ ಚಿರಪರಿಚಿತವಾಗಿದೆ. ಪುರಾಣದ ಪ್ರಕಾರ, ಒಮ್ಮೆ ಭಗವಾನ್ ಗಣೇಶನು ಮಿತಿಮೀರಿ ತಿಂದಿದ್ದರ ಪರಿಣಾಮ ಹೊಟ್ಟೆ ಒಡೆಯುವಂತಾಗಿ, ಅದನ್ನು ತಡೆಯಲು ಸರ್ಪವನ್ನು ಹೊಟ್ಟೆಗೆ ಅಡ್ಡಲಾಗಿ ಸುತ್ತಿಕೊಂಡನೆಂಬುದು ಪ್ರತೀತಿ ಇದೆ.

ಇಲ್ಲಿರುವ ಜನಪ್ರಿಯ ಗಣಪತಿ ವಿಗ್ರಹವು ೮ ಅಡಿ ಉದ್ದವಾಗಿದೆ. ವಿಗ್ರಹವು ಒಂದೇ ಕಲ್ಲಿನಿಂದ ಕೆತ್ತಲ್ಪಟ್ಟಿದ್ದು, ಬಲಗೈಯಲ್ಲಿ ಮುರಿದ ಆನೆಯ ದಂಡ ಮತ್ತು ಅಂಕುಶವನ್ನು ಕಾಣಬಹುದು. ಮೊದಲನೇ ಎಡಗೈ, ವಂಕಿಯಾಕಾರದ ಪಾಶವನ್ನು ಹೊಂದಿದ್ದು, ಎರಡನೇ ಎಡಗೈಯ ಮತ್ತು ಸೊಂಡಿಲು ಕಲ್ಲಿನಿಂದ ಬೇರ್ಪಡಿಸಿ ಕೆತ್ತಲಾಗಿದೆ. ಸಾಸಿವೆಕಾಳು ಗಣೇಶ ಗುಡಿ ವಿಶಾಲವಾದ ಆವರಣವನ್ನು ಹೊಂದಿರುವುದನ್ನು ಕಾಣಬಹುದು. ಅಲ್ಲಿ ಕೆತ್ತಲಾಗಿರುವ ಶಾಸನದ ಮಾಹಿತಿಯ ಪ್ರಕಾರ, ಇದನ್ನು ಚಂದ್ರಗಿರಿಯ ವ್ಯಾಪಾರಿಯೊಬ್ಬನು ಕ್ರಿ.ಶ.೧೫೦೬ರಲ್ಲಿ ವಿಜಯನಗರ ಸಾಮ್ರಾಜ್ಯದ ದೊರೆಯಾದ ಎರಡನೇ ನರಸಿಂಹನಿಗೋಸ್ಕರ ಇದನ್ನು ಕಟ್ಟಿದನೆಂಬುದು ತಿಳಿದು ಬರುತ್ತದೆ.[೧೮]

೫. ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನ

ಹಂಪಿಯ ಬಡವಿ ಲಿಂಗದ ಪಕ್ಕದಲ್ಲಿರುವ ಇದನ್ನು ಉಗ್ರ ನರಸಿಂಹ ಗುಡಿ ಎಂದು ಕರೆಯುತ್ತಾರೆ. ಇದರಲ್ಲಿರುವ ಲಕ್ಷ್ಮೀ ನರಸಿಂಹ ೬.೭ಮೀ. ಎತ್ತರವಿದೆ. ಒಂದೇ ಕಲ್ಲಿನಲ್ಲಿ ಕೆತ್ತಲಾದ, ನರಸಿಂಹನ(ಭಗವಾನ ವಿಷ್ಣುವಿನ ಅವತಾ) ವಿಗ್ರಹವು ಆದಿಶೇಷನ (ಏಳು ಹೆಡೆಯ ಸರ್ಪ) ಮೇಲೆ ವಿಶ್ರಮಿಸುವ ಭಂಗಿಯಲ್ಲಿದ್ದು, ಅತ್ಯಂತ ಹೆಸರುವಾಸಿಯಾಗಿದೆ. ಇದು ಹಂಪಿಯಲ್ಲಿರುವ ಮೂರ್ತಿಗಳಲ್ಲೇ ಅತ್ಯಂತ ವಿಶಿಷ್ಟವಾಗಿದೆ. ಅಲ್ಲಿ ಸಿಗುವ ಶಾಸನದ ಮಾಹಿತಿಯ ಪ್ರಕಾರ, ಇದನ್ನು ಕ್ರಿ.ಶ.೧೫೨೮ರಲ್ಲಿ ವಿಜಯನಗರದ ಶ್ರೇಷ್ಠ ದೊರೆಯಾದ ಶ್ರೀಕೃಷ್ಣದೇವರಾಯನ ಆಳ್ವಿಕೆಯಲ್ಲಿ ಪೂರ್ಣಗೊಳಿಸಲಾಯಿತೆಂದು ತಿಳಿದುಬರುತ್ತದೆ. ಮೂಲ ವಿಗ್ರಹವು ಲಕ್ಷ್ಮೀದೇವತೆಯು ವಿಷ್ಣುವಿನ ತೊಡೆಯಲ್ಲಿ ಕುಳಿತಿರುವ ಭಂಗಿಯಲ್ಲಿದೆ. ಆದರೆ ಕ್ರಿ.ಶ.೧೫೬೫ರಲ್ಲಿ ಲಕ್ಷ್ಮೀದೇವತೆಯ ವಿಗ್ರಹವು ನಾಶ ಹೊಂದಿದ್ದು, ಪ್ರಸ್ತುತ ಅದನ್ನು ಕಮಲಾಪುರ ಸಂಗ್ರಹಾಲಯದಲ್ಲಿ ಇರಿಸಲಾಗಿದೆ. ಆದರೂ ಉಬ್ಬಿರುವ ಕಣ್ಣುಗಳನ್ನು ಚಿತ್ರಿಸಲಾಗಿರುವ ನರಸಿಂಹನ ವಿಗ್ರಹವು ಇಂದಿಗೂ ಕೂಡ ಬಹುಪಾಲು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ನರಸಿಂಹ ಹಾಗೂ ಲಕ್ಷ್ಮೀದೇವತೆಯ ವಿಗ್ರಹಗಳನ್ನು ಒಂದೇ ಕಲ್ಲಿನಿಂದ ಕೆತ್ತಲಾಗಿದೆ.[೧೯] ಇದರ ಕೆತ್ತನೆಯ ಹಿಂದೆ ಎಷ್ಟು ಜನರ ಶ್ರಮ, ಸಮಯವು ಕಳೆದು ಹೋಗಿರಬಹುದು ಎನ್ನುವುದು ಕಂಡುಬಂದಂತಿಲ್ಲ.

ಸಾಮಾನ್ಯವಾಗಿ ದಕ್ಷಿಣ ಭಾರತದ ವಾಸ್ತುಶಿಲ್ಪಿಗಳು ಉಪಯೋಗಿಸುವ ಸಾಮಗ್ರಿಗಳ

ವಿರುದ್ಧವಾಗಿ, ಸಂಗಮರು ಗ್ರಾನೈಟ್ ಕಲ್ಲುಗಳಿಂದ ಲಕ್ಷ್ಮೀ ನರಸಿಂಹ ದೇವಾಲಯವನ್ನು ಕಟ್ಟಿದ್ದಾರೆ. ಆದರೆ ಕೆಲವು ಸೂಕ್ಷ್ಮವಾದ ಕೆಲಸಗಳನ್ನು ಸ್ಕಿಸ್ಟ (ಒಂದು ಮೃದುವಾದ ಕಲ್ಲು)ನಿಂದ ಮಾಡಲ್ಪಟ್ಟಿದ್ದು ಗ್ರಾನೈಟ್ ಬಳಕೆ ಮಾಡಲಾಗಿಲ್ಲ. ಜಟಿಲವಾದ ವಿನ್ಯಾಸಗಳ ಅಭಾವವನ್ನು ಸರಿದೂಗಿಸಲು, ವಾಸ್ತುಶಿಲ್ಪಗಾರರು, ವಿಶಾಲವಾದ ಕಟ್ಟಡವನ್ನು ನಿರ್ಮಿಸಿದ್ದಾರೆ.

೬. ಕೃಷ್ಣ ದೇವಾಲಯ

ಶ್ರೀಕೃಷ್ಣದೇವರಾಯನಿಂದ ನಿರ್ಮಿತವಾದ ದೇವಾಲಯಗಳಲ್ಲಿ ಈ ದೇವಾಲಯ ಒಂದು. ಇದು ಅತ್ಯಂತ ನಯನ ಮನೋಹರವಾಗಿದೆ. ಈ ದೇವಾಲಯ ಗರ್ಭಗುಡಿ, ಅಂತರಾಳ, ಅರ್ಧಮಂಟಪ, ನವರಂಗ, ಮುಖಮಂಟಪ, ಪ್ರದಕ್ಷಣಾಪಥ, ದ್ವಾರ ಗೋಪುರ, ಉತ್ಸವ ಮಂಟಪ, ಕಲ್ಯಾಣ ಮಂಟಪಗಳನ್ನು ಹೊಂದಿದೆ. ಇದರ ಮೂಲ ಗರ್ಭಗುಡಿಯಲ್ಲಿ ಈಗ ವಿಠ್ಠಲ ಮೂರ್ತಿ ಇಲ್ಲ. ಈ ಗುಡಿಯ ಪಕ್ಕದಲ್ಲಿ ಅಮ್ಮನವರ ದೇವಾಲಯವಿದ್ದು ಸುತ್ತಲೂ ಪ್ರಕಾರವಿದೆ. ಈ ದೇವಾಲಯದಲ್ಲಿರುವ ರಾಮಾಯಣ ಮತ್ತು ಮಹಾಭಾರತದ ಕಥಾಪ್ರಸಂಗಗಳನ್ನು ಮತ್ತು ಸಾಮಾಜಿಕ ಜನಜೀವನವನ್ನು ನಿರೂಪಿಸುವ ಹಲವಾರು ಶಿಲ್ಪಗಳು ಇಲ್ಲಿನ ಭಿತ್ತಿ ಮತ್ತು ಶಿಖರ, ಗೋಪುರಗಳ ಮೇಲಿರುವ ವಿವಿಧ ಶಿಲ್ಪಗಳು ಅತ್ಯಂತ ನಯನ ಮನೋಹರವಾಗಿದ್ದು, ಅಧ್ಯಯನಾಸ್ತಕರನ್ನು ತಮ್ಮತ್ತ ಸೆಳೆದುಕೊಳ್ಳುತ್ತವೆ. ಈ ದೇವಾಲಯದ ಮುಂಭಾಗದಲ್ಲಿ ವಿಶಾಲವಾದ ಬೀದಿ ಇದ್ದು, ಅದನ್ನು 'ಕೃಷ್ಣ ಬಜಾರು' ಎಂದು ಗುರುತಿಸಲಾಗಿದೆ. ಬಹುಶಃ ಶ್ರೀಕೃಷ್ಣದೇವರಾಯನ ಹೆಸರು ಸೂಚಿಸುವಂತೆ ಕೃಷ್ಣ ಎನ್ನುವ ದೇವಾಲಯವನ್ನು ಕಟ್ಟಿದ್ದು ಅವನ ನೆನಪಿಗಾಗಿ ಎಂದು ತೋರುತ್ತದೆ. ಅವನ ಹೆಸರಿನ ಮೇಲೆ ದೇವಾಲಯವನ್ನು ನಿರ್ಮಿಸುವುದು ಕೂಡ ಅವನ ಆಳ್ವಿಕೆಯ ಕಾಲವನ್ನು ಸೂಚಿಸುತ್ತದೆ. "ಇಲ್ಲಿ ವಿಜಯನಗರ ಕಾಲದಲ್ಲಿ ದವಸ ಧಾನ್ಯಗಳನ್ನು, ಇತರೆ ವಸ್ತುಗಳನ್ನು ಪ್ರತಿನಿತ್ಯ ಮತ್ತು ವಾರದ ಮಾರುಕಟ್ಟೆ ದಿನಗಳಲ್ಲಿ ಮಾರಾಟ ಮಾಡಲಾಗುತ್ತಿತ್ತು."[೨೦] ಇಲ್ಲಿ ವ್ಯಾವಹಾರಿಕ ಆಯಾಮವಿದೆ. ಜನರಲ್ಲಿ ದಿನನಿತ್ಯ ಬಳಸುವ ವಸ್ತುಗಳನ್ನು ಕೊಂಡುಕೊಳ್ಳುವ ಮತ್ತು ಮಾರಾಟ ಮಾಡುವ ಚಟುವಟಿಕೆಯನ್ನು ಇಂದಿನ ದೊಡ್ಡ ಬಜಾರುಗಳನ್ನು ನೆನಪಿಸುವಂತಿವೆ.

೭. ವಿಠ್ಠಲ ದೇವಾಲಯ

ಹಂಪಿಯಲ್ಲಿರುವ ವೈಷ್ಣವ ದೇವಾಲಯಗಳಲ್ಲೇ ಬಹು ಆಕರ್ಷಣೀಯ ಶಿಲ್ಪ, ಸ್ಮಾರಕಗಳಿರುವ ದೇವಾಲಯವಿದು. ಇದು ಗರ್ಭಗುಡಿ, ಅಂತರಾಳ, ಅರ್ಧಮಂಟಪ, ನವರಂಗ, ಮುಖಮಂಟಪ, ಮಹಾಮಂಟಪ, ಪ್ರದಕ್ಷಣಾಪಥ, ಮೂರು ಗೋಪುರಗಳಿದ್ದು, ಉತ್ಸವ ಮಂಟಪ, ಕಲ್ಯಾಣ ಮಂಟಪಗಳನ್ನು ಹೊಂದಿದೆ. ಇದರ ಮೂಲ ಗರ್ಭಗುಡಿಯಲ್ಲಿ ಈಗ ವಿಠ್ಠಲ ಮೂರ್ತಿ ಇಲ್ಲ. ಈ ಗುಡಿಯ ಪಕ್ಕದಲ್ಲಿ ಅಮ್ಮನವರ ದೇವಾಲಯವಿದ್ದು, ಸುತ್ತಲೂ ಪ್ರಕಾರವಿದೆ. ಈ ದೇವಾಲಯದಲ್ಲಿರುವ ಸಂಗೀತ ಕಂಬಗಳು ಮತ್ತು ಇಲ್ಲಿನ ಕಲ್ಲಿನ ರಥ ಜಗತ್ತಿನಲ್ಲೇ ಹಂಪಿಗೆ ಒಂದು ಮಹತ್ವದ ಸ್ಥಾನಮಾನವನ್ನು ಒದಗಿಸಿಕೊಟ್ಟಿವೆ. ಇಲ್ಲಿನ ಅಧಿಷ್ಠಾನ, ಭಿತ್ತಿ, ಮತ್ತು ಶಿಖರ ಹಾಗು ಗೋಪುರಗಳಲ್ಲಿರುವ ಅಸಂಖ್ಯಾತ ಶಿಲ್ಪಗಳು ಅಂದಿನ ಸಂಸ್ಕೃತಿಯನ್ನು ನಮಗೆ

ಪರಿಚಯಿಸುತ್ತವೆ. ಈ ಕಟ್ಟಡದ ವಾಸ್ತು ಅತ್ಯಂತ ವಿಶಿಷ್ಟವಾಗಿದ್ದು, ಅಂದಿನ ತಾಂತ್ರಿಕತೆಗೆ ಹೆಸರಾಗಿದೆ. ಈ ದೇವಾಲಯದ ಮುಂಭಾಗದಲ್ಲಿ ವಿಶಾಲವಾದ ಬೀದಿ ಇದ್ದು, ಅದನ್ನು 'ವಿಠ್ಠಲ ಬಜಾರು' ಎಂದು ಗುರುತಿಸಲಾಗಿದೆ. ಇಲ್ಲಿ ವಿಜಯನಗರ ಕಾಲದಲ್ಲಿ ಮುತ್ತು ರತ್ನಗಳನ್ನು, ಬಳ್ಳದಲ್ಲಿ ಅಳೆದು ಮಾರಲಾಗುತ್ತಿತ್ತು ಎಂದು ಊಹಿಸಲಾಗಿದೆ.[೨೧] ಇಲ್ಲಿ ಕೂಡ ದವಸ ಧಾನ್ಯಗಳನ್ನು, ಇತರೆ ವಸ್ತುಗಳನ್ನು ಪ್ರತಿ ನಿತ್ಯ ಮತ್ತು ವಾರದ ಮಾರುಕಟ್ಟೆ ದಿನಗಳಲ್ಲಿ ಮಾರಾಟ ಮಾಡುವಂತೆ ಬೆಲೆಬಾಳುವ ರತ್ನಗಳನ್ನು ಅಳೆಯಲಾಗುತ್ತಿತ್ತು ಎಂದರೆ ವಿಜಯನಗರ ಸಾಮ್ರಾಜ್ಯ ಎಷ್ಟು ಸಮೃದ್ಧಿಯಾಗಿತ್ತು ಎಂಬುದು ಗೋಚರಿಸುತ್ತದೆ.

ಇದರ ಪೂರ್ವ ದ್ವಾರ, ದಕ್ಷಿಣ ದ್ವಾರಗಳ ಮೇಲ್ಭಾಗ ಕುಸಿದು ಬೀಳುವ ಸಂಭವವಿದ್ದರಿಂದ ಒಳಭಾಗಕ್ಕೆ ಕಬ್ಬಿಣದ ಸಲಾಕೆಗಳನ್ನು ಮತ್ತು ಕಲ್ಲಿನ ತೊಲೆಗಳನ್ನು ಗೋಡೆಗೆ ಸೇರಿಸಿದ್ದಾರೆ. ಹಂಪಿಯ ವಿಠ್ಠಲ ದೇವಾಲಯಕ್ಕೆ ಡ್ಯೂಕ್ ಆಫ್ ಬುಕಿಂಗ್ ಹ್ಯಾಂ ಭೇಟಿ ನೀಡಿ ಹೇಳುತ್ತಾನೆ. ಭೇಟಿ ನೀಡಿ "ವಿಠ್ಠಲ ಸುಂದರವಾದ ದೇವಾಲಯ (ಏಕಾಕೃತಿ ಶಿಲೆಗಳಿವೆ). ಮಧುರೆ ಅಥವಾ ವೆಲ್ಲೂರಿನ ದೇವಾಲಯಗಳಂತಿದೆ. ಈ ವಿಠ್ಠಲ ದೇವಾಲಯದ ಹಿಂಭಾಗದಲ್ಲಿ ಪ್ರತ್ಯೇಕ ಮಂಟಪಕ್ಕೆ ಒತ್ತುಗೋಡೆಯನ್ನು ಮತ್ತು ಮಂಟಪದ ಅರ್ಧಗೋಡೆ ಮಂಟಪಕ್ಕೆ ಒತ್ತುಗೋಡೆಯನ್ನು ಮತ್ತು ಮಂಟಪದ ಅರ್ಧಗೋಡೆ ಭಗ್ನಗೊಂಡಿದ್ದರಿಂದ ಪೂರ್ಣಗೊಳಿಸಲಾಗಿದೆ. ಇದು ಆರಂಭದ ಕಲೆಕ್ಟರುಗಳು ಮಾಡಿಸಿದ ಕೆಲಸವಲ್ಲ. ಇದೇ ದೇವಾಲಯದ ಪೂರ್ವ ಮಹಾದ್ವಾರಕ್ಕೆ ೧೮೫೬ರ ನಂತರ ಕಲ್ಲಿನಿಂದ ಮೂರು ಕಂಬಗಳನ್ನು ನಿರ್ಮಿಸಲಾಗಿದೆ.[೨೨] ಆಧಾರ ಕಂಬಗಳನ್ನು ಕಲ್ಯಾಣ ಮಂಟಪದಲ್ಲಿ ಎರಡು ದ್ವಾರಗಳಿಗೆ ಎರಡು ಕಂಬಗಳನ್ನು ನಿಲ್ಲಿಸಲಾಗಿದೆ. ಉತ್ತರಕ್ಕೆ ದೊಡ್ಡ ಗಾತ್ರದ ಒತ್ತುಗೋಡೆ ನಿರ್ಮಾಣ ಮಾಡಿರುವುದುಂಟು. ಇಡೀ ವಿಠ್ಠಲ ದೇವಾಲಯದಲ್ಲಿ ೧೭ಕ್ಕೂ ಹೆಚ್ಚು ಕಂಬಗಳನ್ನು ಸಹಾಯಕ್ಕೆ ನಿಲ್ಲಿಸಲಾಗಿದೆ. ಇಲ್ಲಿನ ಕಂಬಗಳಲ್ಲಿ ಶಬ್ದ ಪ್ರತಿಧ್ವನಿಸುವುದು, ಸಂಗೀತದಂತೆ ಗೋಚರಿಸುವುದನ್ನು ಅನೇಕರು ಅವುಗಳನ್ನು ಪರೀಕ್ಷಿಸುತ್ತಾರೆ. ಹಂಪಿಯ ವಿಠ್ಠಲ ದೇವಾಲಯದ ಬಗ್ಗೆ ಡ್ಯೂಕ್ ಆಫ್ ಬ್ಯಾಕಿಂಗ್ ಹ್ಯಾಮ್ (Duke of Bucking ham) ಭೇಟಿ ನೀಡಿ ತನ್ನ ದಾಖಲೆಯಲ್ಲಿ ಸ್ಮಾರಕ ಹಾಳಾದ ರೀತಿಯನ್ನು, ಈ ಸ್ಮಾರಕವನ್ನು ಸಂರಕ್ಷಿಸಬೇಕಾದ ಅವಶ್ಯಕತೆ ಇದೆ ಎಂದು ಸರ್ಕಾರಕ್ಕೆ ತನ್ನ ವರದಿಯನ್ನು ಕಳುಹಿಸುತ್ತಾನೆ. ಕಲ್ಲಿನ ರಥ ಈ ದೇವಾಲಯದ ಆವರಣದಲ್ಲಿದ್ದು, ೧೮೫೬ರ ಮುನ್ನ ಗೋಪುರವನ್ನೊಂದಿತ್ತು. ಈಗ್ಗೆ ಒಂದು ಶತಮಾನದಿಂದ ಅದು ಇಲ್ಲ. ಅದರ ಬಿಡಿ ಭಾಗಗಳು ಬಿದ್ದು ನಾಶ ಹೊಂದುವ ಹಂತದಲ್ಲಿ ರಾಬರ್ಟ್‌ಸಿವೆಲ್ ೧೮೯೪ರಲ್ಲಿ ಅದನ್ನು ಪಕ್ಕದಲ್ಲಿ ಇಡಿಸಿದನೆಂದು ತಿಳಿದುಬರುತ್ತದೆ. ಜಿ.ಡಿ.ಇ.ಗ್ರಿಬಲ್‌ರವರು ವಿಠ್ಠಲ ದೇವಾಲಯದ ಕಂಬಗಳನ್ನು, ಇತರ ಬಿಡಿಭಾಗಗಳನ್ನು ದುರಸ್ತಿಗೊಳಿಸಿದ್ದಕ್ಕೆ ಮತ್ತು ವಿನಾಶಗೊಳ್ಳಲು ಕಾರಣಗಳನ್ನು ಉಲ್ಲೇಖಿಸಿರುತ್ತಾರೆ.[೨೩] ರಥದ ಪಕ್ಕದಲ್ಲಿರುವ ಮಂಟಪಕ್ಕೆ ಎರಡು ಸಹಾಯಕ ಕಂಬಗಳನ್ನು ನಿರ್ಮಿಸಲಾಗಿದೆ. ಇದರ ಪೂರ್ವಮಂಟಪದ ಕಂಬಗಳಿಗೆ ಒತ್ತು ಕಂಬದ ಗೋಡೆಯನ್ನು

ಕಟ್ಟಿಸಲಾಗಿದೆ. ಮೊದಲಿಗೆ ಕಲೆಕ್ಟರುಗಳು ಪಿ.ಡಬ್ಲ್ಯೂ.ಡಿ. ವತಿಯಿಂದ ಇದನ್ನು ಕಲ್ಲಿನಿಂದ ಒತ್ತು ಕಂಬಗಳನ್ನು ನಿರ್ಮಿಸಿದ್ದಾರೆ.

೮. ಪಟ್ಟಾಭಿರಾಮ ದೇವಾಲಯ

ಕಮಲಾಪುರದ ಪೂರ್ವ ದಿಕ್ಕಿಗಿರುವ ಪಟ್ಟಾಭಿರಾಮ ದೇವಾಲಯಕ್ಕೆ ಚೌಕಾಕಾರದ ಸುತ್ತುಗೋಡೆ ಮತ್ತು ಆವರಣವನ್ನು ನಿರ್ಮಿಸಲಾಗಿದೆ. ಹಂಪಿಯಲ್ಲಿರುವ ಧಾರ್ಮಿಕ ಕಟ್ಟಡಗಳಲ್ಲೇ ವಿಶಾಲವಾದ ಮತ್ತು ಬಹು ಆಕರ್ಷಣೀಯ ಶಿಲ್ಪ, ಸ್ಮಾರಕಗಳಿರುವ ದೇವಾಲಯವಿದು. ಇದು ಗರ್ಭಗುಡಿ, ಅಂತರಾಳ, ಅರ್ಧಮಂಟಪ, ನವರಂಗ, ಮುಖಮಂಟಪ, ಮತ್ತು ಮೂರು ಗೋಪುರಗಳಿದ್ದು, ಉತ್ಸವಮಂಟಪ, ಕಲ್ಯಾಣ ಮಂಟಪಗಳನ್ನು ಹೊಂದಿದೆ. ಇದರ ಮೂಲ ಗರ್ಭಗುಡಿಯಲ್ಲಿ ಈಗ ಮೂಲ ಮೂರ್ತಿ ಇಲ್ಲ. ಈ ಗುಡಿಯ ಪಕ್ಕದಲ್ಲಿ ಅಮ್ಮನವರ ದೇವಾಲಯವಿದ್ದು, ಸುತ್ತಲೂ ಪ್ರಕಾರವಿದೆ. ಈ ದೇವಾಲಯದಲ್ಲಿರುವ ಸಂಯೋಗ ಸ್ತಂಭಗಳು ಹಂಪಿಯ ವಿಠ್ಠಲ ದೇವಾಲಯದ ಸಂಗೀತ ಕಂಬಗಳಿಗೆ ಮಾದರಿಯಾದವು. ಬಹುಶಃ ಈ ದೇವಾಲಯದಲ್ಲಿನ ಕಂಬಗಳನ್ನೇ ಆಧಾರವಾಗಿಟ್ಟುಕೊಂಡು ಆ ಸಂಗೀತ ಕಂಭಗಳನ್ನು ನಿರ್ಮಿಸಿರಬೇಕೆನಿಸುತ್ತದೆ. ಇಲ್ಲಿನ ಅಧಿಷ್ಠಾನ, ಭಿತ್ತಿ ಮತ್ತು ಶಿಖರ ಹಾಗು ಗೋಪುರಗಳಲ್ಲಿರುವ ಅಸಂಖ್ಯಾತ ಶಿಲ್ಪಗಳು ಅಂದಿನ ಸಂಸ್ಕೃತಿಯನ್ನು ನಮಗೆ ಪರಿಚಯಿಸುತ್ತವೆ. ಈ ಕಟ್ಟಡದ ವಾಸ್ತು ಅತ್ಯಂತ ವಿಶಿಷ್ಟವಾಗಿದ್ದು, ಅಂದಿನ ತಾಂತ್ರಿಕತೆಗೆ ಹೆಸರಾಗಿದೆ. ಈ ದೇವಾಲಯದ ಮುಂಭಾಗದಲ್ಲಿ ವಿಶಾಲವಾದ ಬೀದಿ ಇದ್ದು, ಅದನ್ನು 'ವರದರಾಜಮ್ಮನ ಪಟ್ಟಣದ ಬಜಾರು' ಎಂದು ಗುರುತಿಸಲಾಗಿದೆ. ಇಲ್ಲಿರುವ ಮೂರು ಗೋಪುರಗಳಿಗೆ ರಕ್ಷಣೆ ಮಾಡಿದ್ದು, ಇದರಲ್ಲಿ ಕಲ್ಯಾಣ ಮಂಟಪದ, ಮಹಾಮಂಟಪಗಳಿದ್ದು, ಅವುಗಳಿಗೆ ಆಗ್ನೇಯ ದಿಕ್ಕಿಗಿರುವ ಕಲ್ಯಾಣ ಮಂಟಪಕ್ಕೆ ಎರಡು ಒತ್ತುಗೋಡೆಗಳನ್ನು ನಿರ್ಮಿಸಿದ್ದಾರೆ. ಈಶಾನ್ಯ ದಿಕ್ಕಿಗಿರುವ ಬಾವಿಗೆ ಸುತ್ತಲೂ ಕಟ್ಟೆಯನ್ನು ಮೇಲ್ಭಾಗದಲ್ಲಿ ಕಟ್ಟಿಸಿ, ಗಾರೆಯನ್ನು ಮೆತ್ತಲಾಗಿದೆ. ದೇವಾಲಯದ ಪೂರ್ವ ದ್ವಾರಬಾಗಿಲಿನ ಒಳಭಾಗದಲ್ಲಿ ತೊಲೆಗಳು ಸೀಳಿದ್ದರಿಂದ ಕಟ್ಟಡದ ಒಳಭಾಗದಲ್ಲಿ ದೇವಾಲಯದ ಹಿಂಭಾಗದಲ್ಲಿ ದೊಡ್ಡಗಾತ್ರದ ಒತ್ತುಗೋಡೆಯನ್ನು ಸಹ ನಿರ್ಮಿಸಲಾಗಿದೆ. ಇದನ್ನು ಪುನಃ ೧೯೬೪–೬೫ರಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ದುರಸ್ತಿ ಕಾರ್ಯವನ್ನು ಕೈಗೊಂಡಿತ್ತು.[೨೪]

೯. ಸರಸ್ವತಿ ದೇವಾಲಯ

ಇದು ಕಮಲಾಪುರ–ಹಂಪಿಯ ರಸ್ತೆಯಲ್ಲಿರುವ ಚಂದ್ರಶೇಖರ ದೇವಾಲಯದ ಉತ್ತರ ದಿಕ್ಕಿಗಿದೆ. ಹಂಪಿಯಲ್ಲಿ ನೋಡಬೇಕಾಗಿರುವ ಸ್ಥಳಗಳಲ್ಲಿ ಇದು ಸಹ ಒಂದಾಗಿದೆ. ಇದು ಗರ್ಭಗುಡಿ, ಅಂತರಾಳ, ತೆರೆದ ಮುಖಮಂಟಪಗಳನ್ನು ಹೊಂದಿದೆ. ಇದರ ಮೂಲ ಗರ್ಭಗುಡಿಯಲ್ಲಿ ಈಗ ಮೂಲ ಮೂರ್ತಿ ಇಲ್ಲ. ಬ್ರಿಟಿಷರ ಕಾಲದಲ್ಲಿ ಬಲಭಾಗದ ಗೋಡೆಯನ್ನು ಇದಕ್ಕೆ ನಿರ್ಮಿಸಿದ್ದಾರೆ. ಆಧುನಿಕ ವಿಧಾನವನ್ನು ಅನುಸರಿಸಿ ಮೆಟ್ಟಿಲುಗಳನ್ನು

ಮಾಡಲಾಗಿದೆ. ಇದನ್ನು ರಕ್ಷಣೆ ಮಾಡಿದ ಕಾಲಮಾನ ನಿಖರವಾಗಿ ತಿಳಿದುಬಂದಿಲ್ಲ. ಇದಲ್ಲದೆ ಪಶ್ಚಿಮ ಭಾಗದ ಗೋಡೆ ಬಿದ್ದಿದ್ದರಿಂದ ಅದನ್ನು ಪೂರ್ಣಗೊಳಿಸಲಾಗಿದೆ.

೧೦. ಚಂದ್ರಶೇಖರ ದೇವಾಲಯ

ಕಮಲಾಪುರದ ಉತ್ತರ ದಿಕ್ಕಿನಲ್ಲಿರುವ ಈ ದೇವಾಲಯ ಹಂಪಿಯ ಧಾರ್ಮಿಕ ಕಟ್ಟಡಗಳಲ್ಲಿ ಮತ್ತೊಂದು ಪ್ರಮುಖ ಕಟ್ಟಡವಾಗಿದೆ. ಇದು ಗರ್ಭಗುಡಿ, ಅಂತರಾಳ, ಅರ್ಧಮಂಟಪ, ನವರಂಗ, ತೆರದ ಮುಖಮಂಟಪ, ಮತ್ತು ಮೂರು ಗೋಪುರಗಳಿದ್ದು, ಉತ್ಸವ ಮಂಟಪಗಳನ್ನು ಹೊಂದಿದೆ. ಇದರ ಮೂಲ ಗರ್ಭಗುಡಿಯಲ್ಲಿ ಈಗ ಮೂಲ ಮೂರ್ತಿ ಇಲ್ಲ. ಇದರ ಕಂಬ, ಭಿತ್ತಿ ಮತ್ತು ಶಿಖರ, ಗೋಪುರದಲ್ಲಿರುವ ಶಿಲ್ಪಗಳು ಆಕರ್ಷಣೀಯವಾಗಿವೆ. ಇದಕ್ಕೆ ಮೂರು ಕಡೆ ಸುತ್ತು ಗೋಡೆಗೆ ಪುನಃ ಕಟ್ಟಡ ಕಟ್ಟಿಸಿ, ನಂತರ ಭಾಗಗಳನ್ನು ಜೀರ್ಣೋದ್ಧಾರ ಮಾಡಿಸಿರುವುದು ಗಮನಾರ್ಹ ಕಲ್ಲು, ಇಟ್ಟಿಗೆ ಮತ್ತು ಗಾರೆ ಬಳಕೆ ಮಾಡಿರುವುದು ಔಚಿತ್ಯಪೂರ್ಣವಾಗಿದೆ. ಇದರ ಪಶ್ಚಿಮ ಭಾಗದಲ್ಲಿ ಪ್ರಕಾರ ಗೋಡೆ ಬಿದ್ದುದರಿಂದ ಅದಕ್ಕೆ ಪುನಃ ಕಟ್ಟಡವನ್ನು ಅದೇ ಜಾಗದಲ್ಲಿ ನಿರ್ಮಿಸಿದ್ದಾರೆ. ಇತ್ತೀಚೆಗೆ ಅನುಕೂಲಕ್ಕೆ ತಕ್ಕಂತೆ ಪ್ರಕಾರ ಗೋಡೆಯನ್ನು ಕಿರಿದಾರಿ ಮಾಡಿಕೊಂಡು ಮಹಾದ್ವಾರದ ಬಳಕೆ ಕಡಿಮೆಯಾಗಿದೆ.[೫]

೧೧. ಶಿವ ದೇವಾಲಯ

ಇದು ಹಂಪಿಯ ವಿಠ್ಠಲ ದೇವಾಲಯದ ಉತ್ತರಕ್ಕಿದೆ. ಈ ದೇವಾಲಯ ಹಂಪಿಯ ಧಾರ್ಮಿಕ ಕಟ್ಟಡಗಳಲ್ಲಿ ಮತ್ತೊಂದು ಪ್ರಮುಖ ಕಟ್ಟಡವಾಗಿದೆ. ಇದು ಗರ್ಭಗುಡಿ, ಅಂತರಾಳ, ಅರ್ಧಮಂಟಪ, ನವರಂಗ, ತೆರದ ಮುಖಮಂಟಪ ಮತ್ತು ಪ್ರವೇಶ ಗೋಪುರಗಳಿದ್ದು, ಉತ್ಸವ ಮಂಟಪಗಳನ್ನು ಹೊಂದಿದೆ. ಇದರ ಮೂಲ ಗರ್ಭಗುಡಿಯಲ್ಲಿ ಈಗ ಮೂಲಮೂರ್ತಿ ಇಲ್ಲ. ಇದರ ಕಂಬ, ಭಿತ್ತಿ ಮತ್ತು ಶಿಖರ, ಗೋಪುರದಲ್ಲಿರುವ ಶಿಲ್ಪಗಳು ಆಕರ್ಷಣೀಯವಾಗಿವೆ. ಈ ದೇವಾಲಯದ ಮುಂಭಾಗದಲ್ಲಿ ವಿಶಾಲವಾದ ಬೀದಿ ಇದೆ. ಇದರ ಪ್ರವೇಶ ದ್ವಾರದ ಮೇಲ್ಭಾಗದಲ್ಲಿ ಇದಕ್ಕೆ ಸಹಾಯಕ ಗೋಡೆಯನ್ನು ಕಟ್ಟಲಾಗಿದೆ. ದೇವಾಲಯದ ಮಂಟಪದಲ್ಲಿ ಒತ್ತು ಕಂಬಗಳನ್ನು ಸುಮಾರು ೫-೬ ಕಡೆ ನಿರ್ಮಿಸಿದ್ದಾರೆ. ೧೯೮೦ಳರಲ್ಲಿ ಪ್ರಾಚೀನ ಸ್ಮಾರಕಗಳ ಸಂರಕ್ಷಣ ಕಾಯ್ದೆಯ ನಂತರ ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಲಾಗಿದೆ. ಗರ್ಭಗೃಹ ಇತರ ಮಂಟಪಗಳಿಗೆ ನಾಲ್ಕು ಗೋಡೆಗಳಿಗೆ ಒತ್ತು ನೀಡಲಾಗಿದೆ.

೧೨. ಚಂಡಿಕೇಶ್ವರ ದೇವಾಲಯ

ಇದು ಉದ್ದಾನ ವೀರಭದ್ರಸ್ವಾಮಿ ದೇವಾಲಯದ ಉತ್ತರಕ್ಕಿದೆ. ಈ ದೇವಾಲಯ ಹಂಪಿಯ ಧಾರ್ಮಿಕ ಕಟ್ಟಡಗಳಲ್ಲಿ ಮತ್ತೊಂದು ಪ್ರಮುಖ ಕಟ್ಟಡವಾಗಿದೆ. ಇದು ಗರ್ಭಗುಡಿ, ಅಂತರಾಳ, ಅರ್ಧಮಂಟಪ, ನವರಂಗ, ತೆರೆದ ಮುಖಮಂಟಪಗಳನ್ನು ಹೊಂದಿದೆ. ಇದರ ಮೂಲ ಗರ್ಭಗುಡಿಯಲ್ಲಿ ಈಗ ಮೂಲ ಮೂರ್ತಿ ಇಲ್ಲ. ಇದರ ಕಂಬ, ಭಿತ್ತಿ ಮತ್ತು ಶಿಖರ, ಗೋಪುರದಲ್ಲಿರುವ ಶಿಲ್ಪಗಳು ಆಕರ್ಷಣೀಯವಾಗಿವೆ. ಈ ದೇವಾಲಯದ ಅವಶೇಷಗಳು

ಸ್ಥಳಾಂತರಗೊಂಡಿದ್ದರಿಂದ ಗರ್ಭಗೃಹದ ಬಲಭಾಗಕ್ಕೆ ಒತ್ತು ಗೋಡೆಯನ್ನು ಕಟ್ಟಡದ ಮೇಲ್ಭಾಗಕ್ಕೆ ಕುಂಬೆಗೆ ಕಲ್ಲಿನ ಕಿರುಗೋಡೆಯನ್ನು ನಿರ್ಮಿಸಿದ್ದು ಕಂಡುಬರುತ್ತವೆ. ಅಲ್ಲದೆ ೧೯೫೩ಕ್ಕಿಂತ ಮೊದಲು ನಿರ್ಮಾಣ ಕಾರ್ಯ ಆಗಿದೆ ಎಂದು ಹೇಳಬಹುದು.

೧೩. ಹಜಾರರಾಮ ದೇವಾಲಯ

ಇದು ಮಹಾನವಮಿ ದಿಬ್ಬದ ವಾಯುವ್ಯ ಭಾಗಕ್ಕಿದೆ. ಈ ದೇವಾಲಯ ಹಂಪಿಯ ಧಾರ್ಮಿಕ ಕಟ್ಟಡಗಳಲ್ಲಿ ಮತ್ತೊಂದು ಅತ್ಯಂತ ಪ್ರಮುಖ ಕಟ್ಟಡವಾಗಿದೆ. ಇದು ಅರಮನೆಗೆ ಸಮೀಪ ಇರುವ ಕಾರಣಕ್ಕಾಗಿ ಇದನ್ನು 'ಹಜಾರರಾಮ ದೇವಾಲಯ' ಎಂದು ಕರೆಯಲಾಗುತ್ತದೆ. ಇದು ವಿಜಯನಗರ ಕಾಲದ ರಾಜ ದೈವಗಳಲ್ಲಿ ಒಂದಾಗಿತ್ತು. ಇದು ಗರ್ಭಗುಡಿ, ಅಂತರಾಳ, ಅರ್ಧಮಂಟಪ, ನವರಂಗ, ತೆರೆದ ಮುಖಮಂಟಪ ಮತ್ತು ಮೂರು ಗೋಪುರಗಳಿದ್ದು, ಉತ್ಸವ ಮಂಟಪಗಳನ್ನು ಹೊಂದಿದೆ. ಇದರ ಮೂಲ ಗರ್ಭಗುಡಿಯಲ್ಲಿ ಈಗ ಮೂಲಮೂರ್ತಿ ಇಲ್ಲ. ಈ ಗುಡಿಯ ಪಕ್ಕದಲ್ಲಿ ಅಮ್ಮನವರ ದೇವಾಲಯವಿದ್ದು, ಸುತ್ತಲೂ ಪ್ರಕಾರವಿದೆ. ಈ ದೇವಾಲಯದಲ್ಲಿರುವ ರಾಮಾಯಣ ಮತ್ತು ಮಹಾಭಾರತದ ಕಥಾ ಪ್ರಸಂಗಗಳನ್ನು ಮತ್ತು ಸಾಮಾಜಿಕ ಜನ ಜೀವನವನ್ನು ನಿರೂಪಿಸುವ ಹಲವಾರು ಶಿಲ್ಪಗಳು ಇಲ್ಲಿನ ಭಿತ್ತಿ ಮತ್ತು ಶಿಖರ, ಗೋಪುರಗಳ ಮೇಲಿರುವ ವಿವಿಧ ಶಿಲ್ಪಗಳು ಅತ್ಯಂತ ನಯನ ಮನೋಹರವಾಗಿದ್ದು, ಅಧ್ಯಯನಾಸ್ತಕರನ್ನು ತಮ್ಮತ್ತ ಸೆಳೆದುಕೊಳ್ಳುತ್ತವೆ. ಪ್ರಕಾರದ ಹೊರ ಭಿತ್ತಿಯ ಮೇಲೆ ವಿಜಯನಗರ ಕಾಲದ ಆನೆ, ಕುದುರೆ, ಕಾಲ್ದಳಗಳ ಸೈನ್ಯವನ್ನು ನೆನಪಿಸುವ ಶಿಲ್ಪಗಳು ಅಂದಿನ ಯುದ್ಧ ವ್ಯವಸ್ಥೆಯ ಪ್ರತೀಕವಾಗಿವೆ. ಈ ದೇವಾಲಯದ ಮುಂಭಾಗದಲ್ಲಿ ವಿಶಾಲವಾದ ಬೀದಿ ಇದ್ದು, ಅದನ್ನು 'ಪಾನಸುಪಾರಿ ಬಜಾರು' ಎಂದು ಗುರುತಿಸಲಾಗಿದೆ. ಇಲ್ಲಿ ವಿಜಯನಗರ ಕಾಲದಲ್ಲಿ ವಿಶೇಷವಾಗಿ ಎಲೆ ಅಡಿಕೆಗಳನ್ನು ಮಾರಾಟ ಮಾಡಲಾಗುತ್ತಿತ್ತು. ಈ ದೇವಾಲಯದ ಪಶ್ಚಿಮಕ್ಕೆ ಗೋಳಾಕಾರದ ಕಮಾನಿನ ದ್ವಾರವಿದ್ದು (ಪಟ್ಟಣ ನಿವೇಶನದ ಆಗ್ನೇಯಕ್ಕೆ) ೧೮೫೬ರಲ್ಲಿ ವಿನಾಶದ ಹಂತದಲ್ಲಿತ್ತು. ಸುತ್ತುಗೋಡೆಗೆ ಮತ್ತು ಅದರ ಕಮಾನು ದ್ವಾರವಿದ್ದು ಸಹಾಯಕ ಕಿರುಗೋಡೆಗಳನ್ನು ನಿರ್ಮಿಸಲಾಗಿದೆ. ಈ ಪ್ರಕಾರ ಗೋಡೆಗೆ ಒತ್ತು ಗೋಡೆಯನ್ನು ಮತ್ತು ಮೇಲ್ಭಾವಣಿ ಭಗ್ನಗೊಂಡಿದ್ದಕ್ಕೆ ಕಟ್ಟಡವನ್ನು ಪೂರ್ಣಗೊಳಿಸಲಾಗಿದೆ. ಆನೆಗಳು, ಕುದುರೆಗಳು, ಕಾಲಾಳುಗಳು, ಕುದುರೆ ಆಳುಗಳು ಇನ್ನಿತರ ಶಿಲ್ಪಗಳನ್ನು ಮಣ್ಣಿನಿಂದ ಮರೆಯಾಗಿದ್ದವನ್ನು ಆಂಗ್ಲ ಅಧಿಕಾರಿಗಳು ಮಾಡಿಸಿದ ದುರಸ್ತಿ ಕಾರ್ಯಗಳಿಂದ ಬೆಳಕಿಗೆ ಬಂದಿವೆ. ಹಜಾರರಾಮ ದೇವಾಲಯ ಕುರಿತು ಲಾಂಗ್ ಹರ್ಸ್ಟ್ ಈ ರೀತಿ ಅಭಿಪ್ರಾಯಿಸಿದ್ದಾರೆ: "ಈ ದೇವಾಲಯದ ಆವರಣದ ಗೋಡೆಯನ್ನು ಪೂರ್ಣಗೊಳಿಸಿ, ಹೊರಗೋಡೆಗೆ ಒತ್ತು ಗೋಡೆಯನ್ನು, ಮಂಟಪಕ್ಕೆ ಸಹಾಯಕ ಕಂಬಗಳನ್ನು ನಿರ್ಮಿಸಲಾಗಿದೆ. ಇದು ಲೋಕೋಪಯೋಗಿ ಇಲಾಖೆಯಿಂದ ನೆರವೇರಿತ್ತು."[೨೬]

೧೪. ಪಟ್ಟಣದ ಯಲ್ಲಮ್ಮ

ಹಜಾರರಾಮ ದೇವಾಲಯದಿಂದ ಕಿರುದಾರಿ ಮೂಲಕ ಹೋದರೆ (ಪಾನ ಸುಪಾರಿ ಬಜಾರು) ಇದು ಕಾಣಬರುತ್ತದೆ. ಈ ದೇವತೆ ಹಿಂದಿನ ಕಾಲದಲ್ಲಿ ನಗರದ ಆರಾಧ್ಯ ದೇವತೆಯಾಗಿದ್ದ ಬಗ್ಗೆ ಶಾಸನ ಉಲ್ಲೇಖವಿದೆ. ಸುಮಾರು ಏಳು ತಲೆಮಾರಿನಿಂದ ಇಂದಿನವರೆಗೆ ಕುರುಬರು ಪೂಜಾರಿಗಳಾಗಿ ಕರ್ತವ್ಯವನ್ನು ಮುಂದುವರೆಸುತ್ತಾರೆ. ಇದಕ್ಕೆ ಬ್ರಿಟಿಷರು ಯಾವ ರೀತಿಯ ರಕ್ಷಣೆಯನ್ನು ಕೊಟ್ಟರೆಂಬುದು ತಿಳಿದುಬಂದಿಲ್ಲ. ಗಾರೆ ಮತ್ತು ಇಟ್ಟಿಗೆಗಳಿಂದ ಮೇಲ್ಛಾವಣಿ ಗೋಡೆ ಭಾಗವನ್ನು ಸರಿಪಡಿಸಲಾಗಿದೆ. ಇದಕ್ಕೆ ವಿದ್ಯುತ್, ದ್ವಾರಗಳಿಗೆ ಬಾಗಿಲುಗಳಿಗೆ ಆಧುನಿಕ ಉಪಕರಣಗಳನ್ನು ಇತ್ತೀಚೆಗೆ ಮಾಡಲಾಗಿದೆ. ಇದರ ಪಕ್ಕದಲ್ಲಿರುವ ಮಾಧವ ದೇವಾಲಯ ವಿನಾಶ ಹೊಂದಿದ್ದು, ಅದರ ಹತ್ತಿರ ಅಷ್ಟಕೋನಾಕೃತಿಯ ಕಾವಲುಗೋಪುರವಿದೆ. ಇದರ ದಕ್ಷಿಣ ಭಾಗಕ್ಕಿರುವ ಭಗ್ನಗೊಂಡ ಗೋಡೆಗೆ ಮತ್ತೊಮ್ಮೆ ಗೋಡೆಯನ್ನು ಕಟ್ಟಲಾಗಿದೆ.[೨೬] ಇದು ಬಹುಶಃ ಇದೇ ಶತಮಾನದ ಪೂರ್ವಾರ್ಧದಲ್ಲಿ ಆಗಿರಬೇಕು.

೧೫. ಮಾತಂಗ ಪರ್ವತ

ಹಂಪಿ ಪರಿಸರದ ಬಹು ಎತ್ತರದ ಪರ್ವತ ಇದಾಗಿದೆ. ಇಲ್ಲಿ ಸೂರ್ಯಸ್ತ ಮತ್ತು ಉದಯಿಸುವ ಸೂರ್ಯನನ್ನು ನೋಡಲು ಅತಿ ಪ್ರಸಿದ್ಧಿಯಾಗಿದೆ. ಈ ಪರ್ವತದ ತುದಿಭಾಗದಲ್ಲಿ ಸುಂದರ ಮತಂಗ ದೇವಾಲಯವಿದೆ. ಇದನ್ನು ಮತಂಗ ವೀರಭದ್ರನೆಂದು ಇತ್ತೀಚೆಗೆ ಕರೆಯಲಾಗುತ್ತದೆ. ಇಲ್ಲಿಯೇ ಮತಂಗ ಮಹಾಋಷಿಗಳು ಮತ್ತು ಅವರ ಮಗಳಾದ ಮಾತಂಗಿ (ಪಾರ್ವತಿಯ ಅವತಾರ) ನೆಲೆಸಿದ್ದರೆಂದು ನಂಬಲಾಗುತ್ತದೆ. ಆ ಕಾರಣಕ್ಕೆ ಇಲ್ಲಿನ ಮಾದಿಗ ಸಮುದಾಯದವರು ಈ ಬೆಟ್ಟವನ್ನು ಪವಿತ್ರ ಬೆಟ್ಟವೆಂದು ನಂಬಿದ್ದಾರೆ. ಅಷ್ಟೇ ಅಲ್ಲದೆ ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ ನೆಲೆಸಿರುವ ಈ ಸಮುದಾಯದ ಜನರು ನಿರ್ದಿಷ್ಟ ದಿನಗಳಲ್ಲಿ ಭೇಟಿ ನೀಡುವ ಪರಿಪಾಠ ಇಟ್ಟುಕೊಂಡಿದ್ದಾರೆ. ಸಹಸ್ರಾರು ಅಡಿಗಳ ಎತ್ತರಕ್ಕೆ ಹತ್ತುವುದು ವಿಶಿಷ್ಟ ಅನುಭವವೇ ಸರಿ. ಪರ್ವತಕ್ಕೆ ಹತ್ತಲು ಇರುವ ಮೆಟ್ಟಿಲುಗಳ ರಿಪೇರಿ, ಹವಾಮಾನ ದೃಷ್ಟಿಯಿಂದ ಮೇಲ್ಭಾಗದ ವೀರಭದ್ರ ದೇವಾಲಯಕ್ಕೆ ಸುತ್ತುಗೋಡೆಯನ್ನು ನಿರ್ಮಿಸಲಾಗಿದೆ.[೨೮] ಅಪಾಯವನ್ನು ತಪ್ಪಿಸುವ ಸಲುವಾಗಿ ಇಂತಹ ಸ್ತುತ್ಯಾರ್ಹ ಕೆಲಸಗಳನ್ನು ಕಲೆಕ್ಟರುಗಳನ್ನು ಮಾಡಿರುವುದು ಅಭಿನಂದನಾರ್ಹರು.

೧೬. ಮೌಲ್ಯವಂತ ರಘುನಾಥ ದೇವಾಲಯ

ಕಮಲಾಪುರದ ಪ್ರವಾಸಿ ಮಂದಿರದಿಂದ ೧೧/೨ಮೈಲು ದೂರವಿದೆ. ಇದು ಗರ್ಭಗುಡಿ, ಅಂತರಾಳ, ಅರ್ಧಮಂಟಪ, ನವರಂಗ, ತೆರೆದ ಮುಖಮಂಟಪ, ಮತ್ತು ಮೂರು ಗೋಪುರಗಳಿದ್ದು, ಉತ್ಸವ ಮಂಟಪಗಳನ್ನು ಹೊಂದಿದೆ. ಇದರ ಮೂಲ ಗರ್ಭಗುಡಿಯಲ್ಲಿ ಶ್ರೀರಾಮ, ಲಕ್ಷ್ಮಣ, ಸೀತೆಯವರನ್ನೊಳಗೊಂಡ ಏಕಾಶಿಲಾ ವಿಗ್ರಹವಿದೆ. ಈ ಗುಡಿಯ ಪಕ್ಕದಲ್ಲಿ ಅಮ್ಮನವರ

ದೇವಾಲಯವಿದ್ದು ಸುತ್ತಲೂ ಪ್ರಕಾರವಿದೆ. ಇದು ದ್ರಾವಿಡ ಶೈಲಿಯ ವಾಸ್ತುವನ್ನು ಹೊಂದಿದ್ದು, ವಿಜಯನಗರ ಶೈಲಿಯ ಉತ್ಕೃಷ್ಟ ರಚನೆಯಾಗಿದೆ. ಈ ದೇವಾಲಯ ಹಂಪಿಯ ಧಾರ್ಮಿಕ ಕಟ್ಟಡಗಳಲ್ಲಿ ಮತ್ತೊಂದು ಅತ್ಯಂತ ಪ್ರಮುಖ ಕಟ್ಟಡವಾಗಿದೆ. ಇದು ವಿಜಯನಗರ ಕಾಲದ ರಾಜ ದೈವಗಳಲ್ಲಿ ಒಂದಾಗಿತ್ತು. ಈ ದೇವಾಲಯದಲ್ಲಿರುವ ರಾಮಾಯಣ ಮತ್ತು ಮಹಾಭಾರತದ ಕಥಾಪ್ರಸಂಗಗಳನ್ನು ಮತ್ತು ಸಾಮಾಜಿಕ ಜನಜೀವನವನ್ನು ನಿರೂಪಿಸುವ ಹಲವಾರು ಶಿಲ್ಪಗಳು ಇಲ್ಲಿನ ಭಿತ್ತಿ ಮತ್ತು ಶಿಖರ, ಗೋಪುರಗಳ ಮೇಲಿರುವ ವಿವಿಧ ಶಿಲ್ಪಗಳು ಅತ್ಯಂತ ನಯನ ಮನೋಹರವಾಗಿದೆ. ಇದಕ್ಕೆ ಬ್ರಿಟಿಷರು ರಕ್ಷಣೆ ಕೆಲಸ ಮಾಡಿಸಿದ್ದಾರೆ. ಯಾತ್ರಿಗಳ ಆರಾಧನಾ ಕೇಂದ್ರವಿದು. ಅನೇಕ ಶುಭ ಕಾರ್ಯಗಳು ಇಲ್ಲಿ ಜರುಗುತ್ತವೆ.

ಆನೆಗುಂಡಿಯು ಹಂಪಿಯಿಂದ ತುಂಗಭದ್ರಾ ನದಿಯ ಉತ್ತರ ಭಾಗದ ದಡದಲ್ಲಿದೆ. ಇದು ಅಂದಿನ ವಿಜಯನಗರ ಸಾಮ್ರಾಜ್ಯದ ಆರಂಭಿಕ ರಾಜಧಾನಿಯಾಗಿತ್ತು. ಇದರ ಅರ್ಥ ಕನ್ನಡದಲ್ಲಿ ಆನೆಗೆ ತೋಡಿದ ಗುಂಡಿ ಎಂದಾಗುತ್ತದೆ. ಈ ಪ್ರದೇಶವು ಹಂಪಿಗಿಂತಲೂ ಪ್ರಾಚೀನವಾಗಿದ್ದು, ರಾಮಾಯಣದ ಪ್ರಕಾರ ಇದನ್ನು ಸುಗ್ರೀವನ ರಾಜ್ಯ ಕಿಷ್ಕಿಂದೆ ಎಂದು ನಂಬಲಾಗಿದೆ. ಸಮಯಾವಕಾಶವಿದ್ದರೆ ಪ್ರವಾಸಿಗರು ಖಂಡಿತವಾಗಿಯು ಈ ಸ್ಥಳಕ್ಕೆ ಭೇಟಿ ನೀಡಿ ಅಂಜನಾದ್ರಿ ಬೆಟ್ಟವನ್ನು ನೋಡಬಹುದು. ಈ ಬೆಟ್ಟವನ್ನು ಹನುಮಂತನ ಹುಟ್ಟು ಸ್ಥಳವೆಂದು ನಂಬಲಾಗಿದೆ. ಹಂಪಿಗಿಂತಲೂ ನೆಮ್ಮದಿಯಾದಂಥ ವಾತಾವರಣವನ್ನು ಆನೆಗುಂಡಿಯು ಹೊಂದಿದೆ. ಹೊಸ ಸೇತುವೆ(ಬ್ರಿಡ್ಜ್)ಯನ್ನು ತುಂಗಭದ್ರಾ ನದಿಗೆ ಕಟ್ಟಲಾಗಿತ್ತು. ಆದರೆ ಅದು ಮುರಿದು ಬಿದ್ದಿದ್ದು ಇನ್ನೊಂದು ಕಡೆ ಸೇತುವೆ ಕಟ್ಟುವ ಕೆಲಸ ಪ್ರಗತಿಯಲ್ಲಿದೆ. ಮುಂಬರುವ ದಿನಗಳಲ್ಲಿ ಪ್ರವಾಸಿಗರು ಆನೆಗುಂಡಿಯನ್ನು ಸುಲಭವಾಗಿ ತಲುಪಬಹುದಾಗಿದೆ. ಸದ್ಯ, ಈ ಪ್ರದೇಶವನ್ನು ಸುತ್ತು ಮಾರ್ಗದಿಂದ ತಲುಪಬಹುದಾಗಿದೆ. ಗಗನ ಪ್ಯಾಲೇಸ್, ಪಂಪಸರೋವರ ಲಕ್ಷ್ಮೀ ದೇವಾಲಯ, ಶ್ರೀಕೃಷ್ಣದೇವರಾಯ ಸಮಾಧಿ, ಆನೆಗುಂಡಿ ಕೋಟೆಯ ಹೆಬ್ಬಾಗಿಲು ಹಾಗೂ ಏಳುತಲೆಯ ಸರ್ಪ ಇವು ಆನೆಗುಂಡಿಯ ಕೆಲವು ಪ್ರಮುಖ ಆಕರ್ಷಣೆಗಳು. ಇಷ್ಟೇ ಅಲ್ಲದೆ ಪ್ರವಾಸಿಗರು ಶ್ರೀ ಗವಿರಂಗನಾಥಸ್ವಾಮಿ ದೇವಸ್ಥಾನ, ಗಣಪತಿ ದೇವಸ್ಥಾನ, ಚಿಂತಾಮಣಿ ಶಿವ ದೇವಸ್ಥಾನ, ಹುಚ್ಚೈಪನ ಮಠ ಮತ್ತು ಜೈನ್ ದೇವಾಲಯಗಳಿಗು ಕೂಡ ಭೇಟಿ ನೀಡಬಹುದು.[೨೯]

ಹಂಪಿಯಲ್ಲಿ ಕೇವಲ ಹಿಂದೂ ಧಾರ್ಮಿಕ ಸ್ಮಾರಕಗಳಲ್ಲದೆ, ಮುಸ್ಲಿಮರಿಗೆ ಸೇರಿದ ಕೆಲವಾರು ಮಸೀದಿ, ದರ್ಗಾ ಹಾಗು ಸಮಾಧಿ ಕಟ್ಟಡಗಳು ಹಂಪಿಯ ಗೋರಿ ಕೆಳಗಿನ ಮಾಗಾಣಿ, ಮಾಲ್ಯವಂತ ರಘುನಾಥ ಬೆಟ್ಟದ ಹಿಂಭಾಗದಲ್ಲಿ, ಕಟ್ಟಿಗೆ ಅಹಮ್ಮದ್‌ಖಾನ್ ಗೋರಿಯ ಸಮೀಪ ಮತ್ತು ಕಡ್ಡಿರಾಂಪುರ ಮೊದಲಾದಡೆ ಕಂಡುಬರುತ್ತವೆ. ಅಲ್ಲದೆ ಕಮಲಮಹಲ್ ಹಿಂಭಾಗದಲ್ಲಿ ಮತ್ತು ಸಿಂಘಾರದ ಹೆಬ್ಬಾಗಿಲ ಪೂರ್ವದಲ್ಲಿ ಹಲವು ಜೈನ ದೇವಾಲಯಗಳು ಇವೆ. ಇವು ಅಂದಿನ ಪರಂಪರೆಯನ್ನು ಬಿತ್ತರಿಸುವ ಅಮೂಲ್ಯ ಕೇಂದ್ರಗಳಾಗಿವೆ.

ಆ) ಲೌಕಿಕ ಸ್ಮಾರಕಗಳು

ಹಂಪಿಯಲ್ಲಿ ಜನರು ವಾಸಮಾಡಿದ ಮತ್ತು ಆಡಳಿತ ಕಟ್ಟಡಗಳಾಗಿ ಉಪಯೋಗಿಸಿದ ಹಲವಾರು ಕಟ್ಟಡಗಳಿವೆ. ಅವುಗಳಿಂದ ಅಂದಿನ ಸಂಸ್ಕೃತಿಯನ್ನು ಅರಿಯಬಹುದಾಗಿದೆ. ಅವುಗಳಲ್ಲಿ ಅಂದಿನ ಬಜಾರುಗಳು, ಅರಮನೆಗಳು, ವಿವಿಧ ಕಟ್ಟಡಗಳು ಪ್ರಮುಖವಾಗಿದ್ದು ಅವುಗಳನ್ನು ಇಲ್ಲಿ ವಿವರಿಸಲಾಗಿದೆ.

೧. ಹಂಪಿ ಬಜಾರ್

ಹಂಪಿಯ ಶ್ರೀ ವಿರೂಪಾಕ್ಷ ದೇವಾಲಯದ ಪೂರ್ವದ ಮುಖ್ಯ ಗೋಪುರದ ಮುಂಭಾಗದಿಂದ ಎದುರು ಬಸವಣ್ಣ ಮಂಟಪದವರೆಗೆ ಇರುವ ಬೀದಿಯನ್ನು ಹಂಪಿ ಬಜಾರ್ ಎಂದು ಕರೆಯಲಾಗುತ್ತದೆ. ಇದನ್ನು ಸಂಗಮ ದೊರೆಯಾದ ಎರಡನೇ ದೇವರಾಯನು (ಕ್ರಿ.ಶ.೧೪೨೨-೪೬) ನಿರ್ಮಿಸಿದನು. ಇದು ೭೧೭ಮೀ. ಉದ್ದ ೩೦-೩೮ ಮೀ. ಅಗಲ ಇದೆ. ರಾಜ್ಯ ಪುರಾತತ್ವ ಇಲಾಖೆ ೧೯೭೯-೮೩ ರ ಅವಧಿಯಲ್ಲಿ ಎದುರು ಬಸವಣ್ಣ ಮಂಟಪದಿಂದ ಎರಡು ಅಂತಸ್ತಿನ ಮಂಟಪದವರೆಗೆ ಉತ್ಖನನ ನಡೆಸಿದೆ. ಈ ಬೀದಿಯ ಉದ್ದಕ್ಕೂ ಶಿಲೆಯ ನೆಲ ಹಾಸು(ಸ್ಟೋನ್ ಪೇವಿಂಗ್) ೧.೭೫ ಮೀಟರ್ ಆಳದಲ್ಲಿ ಇದ್ದಿದ್ದನ್ನು ರಾಜ್ಯ ಪುರಾತತ್ವ ಇಲಾಖೆ ಕೈಗೊಂಡಿದ್ದ ಉತ್ಖನನದ ವೇಳೆ ಪತ್ತೆ ಹಚ್ಚಿದೆ. ಇದೇ ವೇಳೆ ನಾಣ್ಯಗಳು, ಮಡಿಕೆ ಮೊದಲಾದ ವಸ್ತುಗಳನ್ನು ಪರಿಶೋಧಿಸಿದೆ.[೩೦] ಈ ಬೀದಿಯ ಎರಡು ಬದಿಯಲ್ಲಿ ನಿರ್ಮಿಸಿರುವ ಸಾಲು ಮಂಟಪಗಳು ಭದ್ರವಾದ ಅಧಿಷ್ಠಾನದ ಮೇಲೆ ನಿರ್ಮಿತವಾಗಿದ್ದು, ಎರಡು ಇಲ್ಲವೇ ಎರಡಕ್ಕಿಂತಲೂ ಹೆಚ್ಚಿನ ಅಂಕಣಗಳನ್ನು ಹೊಂದಿವೆ. ಈ ಬೀದಿಯನ್ನು ರಥಬೀದಿ, ಹಂಪೆ ಬಜಾರು, ತೇರುಬೀದಿ, ಪಂಪಾ ರಥ ವೀಧಿ ಮುಂತಾಗಿ ಕರೆಯಲಾಗಿದೆ. ಪ್ರತಿ ವರ್ಷ ಹಂಪಿ ಹುಣ್ಣಿಮೆಯಂದು ನಡೆಯುವ ರಥೋತ್ಸವವನ್ನು ಇದೇ ಬೀದಿಯಲ್ಲಿಯೇ ಇಂದಿಗೂ ನಡೆಸುತ್ತಿರುವುದು ವಿಶೇಷವಾಗಿದೆ.

ಪ್ರೌಢದೇವರಾಯನು ಈ ಬೀದಿಯಲ್ಲಿದ್ದ ಕಲ್ಲು-ಮುಳ್ಳುಗಳನ್ನು ತೆಗಸಿ ವಿಶಾಲಗೊಳಿಸಿದ ವಿವರ ಮತ್ತು ಈ ಬೀದಿಯನ್ನು ಯಾವ ಉದ್ದೇಶಕ್ಕಾಗಿ ನಿರ್ಮಿಸಿದ ಎನ್ನುವ ವಿವರಗಳು ಲಕ್ಕಣ್ಣದಂಡೇಶನ 'ಶಿವತತ್ವ ಚಿಂತಾಮಣಿ'ಯಲ್ಲಿ ಉಲ್ಲೇಖಿತಗೊಂಡಿವೆ. ಇದು ವಿಜಯನಗರ ಕಾಲದಲ್ಲಿ ಕೇವಲ ಯಾತ್ರಾತ್ರಿಗಳ ನಿವಾಸ ಸ್ಥಾನವಾಗಿರದೇ ಪ್ರಸಿದ್ಧ ಮಾರುಕಟ್ಟೆಯೂ ಆಗಿದ್ದು, ಜನರಿಗೆ ಅವಶ್ಯಕ ವಸ್ತುಗಳು ಇಲ್ಲಿ ದೊರೆಯುತ್ತಿದ್ದವು. ಇದೇ ಬೀದಿಯಲ್ಲಿ ವಿಜಯನಗರ ಕಾಲದಲ್ಲಿ ಕೆಲ ಶೈವಮಠಗಳಿದ್ದವು. ಈ ಮಠಗಳಲ್ಲಿದ್ದ 'ಒಂದೆತ್ತಿನಯ್ಯಗಳು', ಕ್ರಿಯಾಶಕ್ತಿ ಯತಿರಾಯರು, ದಕ್ಷಿಣಾಮೂರ್ತಿ ಯತಿ ಚಕ್ರವರ್ತಿಗಳು, ಆಕಾಶವಾಸಿ ಯತಿಗಳು, ಗಜೆಗಂಟೆಗಳೆಂಬ ಮಠದ ಗುರುಗಳು ಉಚಿತ ವಿದ್ಯಾಭ್ಯಾಸ, ಉಚಿತ ವಸ್ತ್ರ, ಉಚಿತ ದಾಸೋಹ ನೀಡುವ ಸಮಾಜ ಮುಖಿ ಕಾರ್ಯಗಳನ್ನು ಮಾಡುತ್ತಿದ್ದರು. ಕನಕದಾಸರು ತಮ್ಮ 'ಮೋಹಿನಿ ತರಂಗಿಣಿ'ಯಲ್ಲಿ

ಈ ವಿವರವನ್ನು ದಾಖಲಿಸಿದ್ದಾರೆ. ಬಜಾರಿನ ಕಂಬ ಮತ್ತು ಭಿತ್ತಿ ಹಾಗೂ ಕೈಪಿಡಿ ಗೋಡೆಗಳಲ್ಲಿ ಹಲವಾರು ಸುಂದರ ಲೌಕಿಕ ಮತ್ತು ಧಾರ್ಮಿಕ ಶಿಲ್ಪಗಳಿದ್ದು ಅಂದಿನ ಶಿಲ್ಪಿಗಳ ಕೌಶಲ್ಯಕ್ಕೆ ಸಾಕ್ಷಿಯಾಗಿವೆ. ಈ ಬಜಾರಿನ ಮತ್ತು ವಿರೂಪಾಕ್ಷ ದೇವಾಲಯದ ವೈಭವದ ಕುರಿತು ಲಕ್ಕಣ್ಣ ದಂಡೇಶನ 'ಶಿವತತ್ವ ಚಿಂತಾಮಣಿ' ಮೊದಲಾದ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಮತ್ತು ಡೋಮಿಂಗೋ ಪಯಾಸ್ ಮತ್ತಿತರ ವಿದೇಶಿ ಪ್ರವಾಸಿಗರು ತಮ್ಮ ಪ್ರವಾಸ ಕಥನಗಳಲ್ಲಿ ಬಣ್ಣಿಸಿದ್ದಾರೆ. ಒಟ್ಟಿನಲ್ಲಿ ಹಂಪಿ ಬಜಾರ್ ಅಂದು ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದೆ. ಹಂಪಿಯಲ್ಲಿ ಇದೇ ರೀತಿಯ ಕೆಲವಾರು ಬಜಾರುಗಳು ಇದ್ದವು. ಅವುಗಳಲ್ಲಿ ವಿಠ್ಠಲ ಬಜಾರು, ಕೃಷ್ಣ ಬಜಾರು, ಪಾನ್ ಸುಪಾರಿ ಬಜಾರು, ವರದರಾಜಮ್ಮನ ಬಜಾರು ಪ್ರಮುಖವಾಗಿದ್ದು, ಅಂದು ವಿವಿಧ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳ ಕೇಂದ್ರಗಳಾಗಿದ್ದವು.[೩೧]

೨. ಲೋಟಸ್ ಮಹಲ್(ಜೆನಾನಾ ಎನ್ಕ್ಲೋಸರ್)

ಎತ್ತರದ ಕಲ್ಲಿನ ಗೋಡೆಗಳಿಂದ ಸುತ್ತುರೆಯಾಗಿ ನಿರ್ಮಿಸಲಾದ ಜೆನಾನಾ ಎನ್ಕ್ಲೋಸರ್, ಹಂಪಿಯಲ್ಲಿ ನೋಡಲೇಬೇಕಾದ ಒಂದು ಸ್ಥಳ. ಈ ಸ್ಥವು ಕೇವಲ ಮಹಿಳೆಯರ ಪ್ರವೇಶಕ್ಕೆ ಮಾತ್ರವಿದ್ದು, ಅವರ ಗೌಪ್ಯತೆಯನ್ನು ಕಾಪಾಡುವ ರೀತಿಯಲ್ಲಿ ನಿರ್ಮಿಸಲಾಗಿದೆ. ಇದರಲ್ಲಿ ನಾಲ್ಕು ಪ್ರಧಾನ ರಚನೆಗಳಿದ್ದು, ಅವುಗಳೇ ಮಹಾರಾಣಿ ಅರಮನೆ(ಕ್ವೀನ್ಸ್ ಪ್ಯಾಲೇಸ್), ಎರಡು ನಿರೀಕ್ಷಣಾ ಗೋಪುರಗಳು ಹಾಗೂ ಜನಪ್ರಿಯವಾದ ಲೋಟಸ್ ಮಹಲ್. ಈ ಕಟ್ಟಡಕ್ಕೆ ಅನೇಕ ಖಿಂಡಿಗಳಿದ್ದು, ರಾಣಿಯರ ಬೇಸಿಗೆ ಅರಮನೆಯಾಗಿತ್ತು. ಕ್ವೀನ್ಸ್ ಪ್ಯಾಲೇಸ್ ೪೬*೨೯ಮೀ. ಅಳತೆ ಹೊಂದಿದ್ದು, ಕಟ್ಟಿಗೆ ಹಾಗೂ ಇತರೆ ಸಾಮಗ್ರಿಗಳಿಂದ ನಿರ್ಮಿಸಲ್ಪಟ್ಟಿದೆ. ಇತಿಹಾಸಕಾರರ ಪ್ರಕಾರ, ಈ ಸ್ಥಳವು ಕೇವಲ ಮಹಿಳೆಯರಿಗಾಗಿ ಮಾತ್ರ ಮೀಸಲಾಗಿದ್ದುದರಿಂದ, ಇದರ ರಕ್ಷಣೆಯು ನಪುಂಸಕ ಸೈನಿಕರಿಂದ ಮಾಡಲ್ಪಡುತ್ತಿತ್ತು. ಉತ್ತರ ಹಾಗೂ ಆಗ್ನೇಯ ದಿಕ್ಕಿನಲ್ಲಿ ಕಟ್ಟಲಾದ ಎರಡು ಕಟ್ಟಡಗಳು ನಿರೀಕ್ಷಣಾ ಗೋಪುರಗಳಾಗಿ ನಿರ್ವಹಿಸಲ್ಪಡುತ್ತಿದ್ದವು. ಈ ಕಟ್ಟಡಗಳಿಂದ ಮಹಾರಾಣಿ ಹಾಗೂ ಆಕೆಯ ಕುಟುಂಬದ ಸದಸ್ಯರು ಹೊರಗೆ ನಡೆಯುತ್ತಿದ್ದ ಚಟುವಟಿಕೆಗಳನ್ನು ವೀಕ್ಷಿಸುತ್ತಿದ್ದು. ಇಂಡೋ-ಇಸ್ಲಾಮಿಕ್ ಮಾದರಿಯ ವಾಸ್ತುಶಿಲ್ಪವುಳ್ಳ ಲೋಟಸ್ ಪ್ಯಾಲೇಸ್ ರಾಜ ಮಹಿಳೆಯರು ಸಂಧಿಸಿ ದಿನಕಳೆಯುವ ಸ್ಥಳವಾಗಿತ್ತು. ರಾಜಮನೆತನದ ಆನೆಗಳು ವಿರಮಿಸುತ್ತಿದ್ದ ಸ್ಥಳವಾದ ಎಲಿಫಂಟ್ ಸ್ಟೇಬಲ್ಸ್ ಇದರ ಹಿಂಬದಿಯಲ್ಲಿದ್ದು, ಆಕರ್ಷಣೀಯ ತಾಣವಾಗಿದೆ. ಜನಾನ ಸುತ್ತು ಆವರಣ(ಅಂತಃಪುರ)ದ ಪಶ್ಚಿಮ ದ್ವಾರ ಮತ್ತು ಪೂರ್ವಗಳ ಮೇಲ್ಭಾಗದ ಗೋಡೆಗೆ ಕಲ್ಲಿನಿಂದ ಗೋಡೆಯನ್ನು ಪೂರ್ಣಗೊಳಿಸಿದ್ದಲ್ಲದೆ, ಆವರಣದ ಗೋಡೆಗೆ ನಾಲ್ಕಾರು ಹತ್ತರ ಒತ್ತು ಗೋಡೆಗಳನ್ನು ಕಟ್ಟಿದ್ದಾರೆ. ಇದನ್ನು ಮೊದಲು ಮಹಮ್ಮದೀಯರು ಎರಡು ದ್ವಾರಗಳಿಗೆ ಕಬ್ಬಿಣದ ಸಲಾಕೆ ಮತ್ತು ಸಿಮೆಂಟ್ ಕಾಂಕ್ರೀಟ್‌ನಿಂದ

ದುರಸ್ತಿಗೊಳಿಸಿದ್ದು ಸ್ವಾಗತಾರ್ಹವೆನಿಸಿದೆ. ಮೊದಲು ಕಮಾನು ದ್ವಾರವಿದ್ದು, ಈಗ ಟ್ರಾಬಿಯೆಟ್ ವಿಧಾನದಲ್ಲಿದೆ. ಇದು ೧೯೮೦ರ ದಶಕದಲ್ಲಿ ಪಿ.ಡಬ್ಲ್ಯೂ.ಡಿ. ವತಿಯಿಂದ ಮತ್ತು ಅನಂತಪುರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಯೋಗದಿಂದ ಪುರಾತತ್ವ ಇಲಾಖೆಯವರು ರಕ್ಷಣಾ ಕಾರ್ಯಗಳನ್ನು ಕೈಗೊಂಡಿರುವುದು ಸ್ಮರಣೀಯ. ಆಂಗ್ಲ ಅಧಿಕಾರಿಗಳ ಹಾಗೂ ವಿದೇಶಿಯಾತ್ರಿಕರ ಹಿತದೃಷ್ಟಿಯಿಂದ ಲೋಕೋಪಯೋಗಿ ಇಲಾಖೆಯವರು ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ಗೋಡೆಗಳಿಗೆ ಒತ್ತು ಗೋಡೆಗಳನ್ನು ನಿರ್ಮಿಸಿದ್ದು ಕಂಡುಬರುತ್ತದೆ.[೩೨]

೩. ಅಷ್ಟಕೋನಾಕೃತಿಯ ನೀರಿನ ತೊಟ್ಟಿ

ಕಮಲಾಪುರದಿಂದ ಹಂಪಿಗೆ ಹೋಗುವ ದಾರಿಯಲ್ಲಿ ಕಂಡುಬರುತ್ತದೆ. ಇದು ಅಷ್ಟಭುಜಾಕೃತಿಯ ನೀರಿನ ಚಿಲುಮೆ. ದೊಡ್ಡಗಾತ್ರದ ಮೂರು ಒತ್ತುಗೋಡೆಗಳನ್ನು ತೆರೆದ ಕಮಾನು ದ್ವಾರಗಳಿಗೆ ನಿರ್ಮಿಸಲಾಗಿದೆ. ಈ ಕಟ್ಟಡ ಶಾಶ್ವತವಾಗಿ ಈವರೆಗಿರಲು ಸುತ್ತಲೂ ಮೂರು ಕಡೆ ನಿರ್ಮಿಸಿದ ಒತ್ತುಗೋಡೆಗಳೇ ಕಾರಣವೆನ್ನಬಹುದು. ಬ್ರಿಟಿಷ್ ಇಂಜಿನೀಯರುಗಳು, ಲೋಕೋಪಯೋಗಿ ಇಲಾಖೆ ವತಿಯಿಂದ ಸ್ವಾತಂತ್ರ್ಯ ಪೂರ್ವದಲ್ಲಿ ಈ ಕಾರ್ಯವನ್ನು ಯಶಸ್ವಿಗೊಳಿಸಿದ್ದಾರೆ. ಇಂದು ಸ್ಮಾರಕವಾಗಿ ಇದು ತನ್ನ ದಾರುಣ ಸ್ಥಿತಿಯನ್ನು ಜನರಿಗೆ ತೋರಿಸಿಕೊಟ್ಟಿದೆ.

೪. ಮಹಾನವಮಿ ದಿಬ್ಬ

೧೯೮೩ರಲ್ಲಿ ಬಳ್ಳಾರಿ ಜಿಲ್ಲಾ ಕಲೆಕ್ಟರ್ ರಾಬರ್ಟ್ ಸಿವೆಲ್ ಮಹಾನವಮಿ ದಿಬ್ಬದಲ್ಲಿ ಮಣ್ಣಿನಿಂದ ಆವೃತವಾಗಿದ್ದ ಅಥವಾ ಹೂತು ಮರೆಯಾಗಿದ್ದ ಶಿಲ್ಪವನ್ನು ಶೋಧಿಸಿ ಬೆಳಕಿಗೆ ತಂದರಲ್ಲದೆ, ರಕ್ಷಣೆಯನ್ನು ಒದಗಿಸಲಾಗಿದೆ. ಈಗ ಅದು ಮಹಾನವಮಿ ದಿಬ್ಬದ ವಾಯುವ್ಯ ಭಾಗಕ್ಕಿದೆ. ಮನಮೋಹಕವಾಗಿರುವ ಈ ಶಿಲ್ಪವನ್ನು ದಿವಂಗತ ಮಲ್ಲಿಸೇನಾ ಮಲದಾರಿ ದೇವನು ಜೈನ ಶಿಕ್ಷಕ ಕೆತ್ತಿ ಶಾಸನ ಬರೆದನೆಂದು ತಿಳಿದುಬರುತ್ತದೆ.[೩೩] ಮಹಾನವಮಿ ದಿಬ್ಬಕ್ಕೆ ಪ್ಲಾಟ್ ಫಾರಂ ಎನ್ನುತ್ತಾರೆ. ಹೊರಗಡೆ ಸುತ್ತಲೂ ಗೋಡೆಗಳಿವೆ. ಜಿಂಕೆ, ಆನೆ, ಒಂಟೆ, ಹುಲಿ ಬೇಟೆ ಚಿತ್ರಗಳನ್ನು ಸುಂದರವಾಗಿ ಕೆತ್ತಲಾಗಿದೆ. ನೃತ್ಯ ಮಾಡುವ ಬಾಲಕಿಯರಿದ್ದರು. ಅರಮನೆ ಕಟ್ಟಡದಿಂದ ದಕ್ಷಿಣಕ್ಕೆ ೬೦೦(ಅಡಿ ಅಂಗಲು) ಅಂಗುಲಗಳಿವೆ. ಒಟ್ಟು ಎತ್ತರ ೩೧ ಅಡಿಗಳು. ಇದರ ಬಳಿ ಕೊಳಯಿದೆ. ಕೆಳಗಡೆಯಿಂದ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಒಳಗಡೆಯಿಂದ ಮೇಲಕ್ಕೆ ಹತ್ತಲು ಮೆಟ್ಟಿಲುಗಳ ಒಳದಾರಿಯಿದೆ. ಇದಕ್ಕೆ 'ಮಹಾನವಮಿ ದಿಬ್ಬ' ಅಥವಾ 'ದಸರಾ ದಿಬ್ಬ' ಎನ್ನುತ್ತಾರೆ.

೫. ರಾಣಿ ಸ್ನಾನದ ಗೃಹ

ಹಂಪಿ ಕಮಲಾಪುರ ರಸ್ತೆಯಲ್ಲಿರುವ ಇದು ಹಂಪಿಯಲ್ಲಿರುವ ಲೌಕಿಕ ಕಟ್ಟಡಗಳಲ್ಲಿ ಖ್ಯಾತವಾಗಿರುವ ಕಟ್ಟಡಗಳಲ್ಲಿ ಒಂದಾಗಿದೆ. ಇಂಡೋ-ಇಸ್ಲಾಮಿಕ್ ಶೈಲಿಯಲ್ಲಿರುವ ಈ ಕಟ್ಟಡ

ಅಂದಿನ ವಾಸ್ತು ಶಿಲ್ಪದ ಪ್ರತೀಕವಾಗಿದೆ. ಇದು ೭೮ ಅಡಿ ೫ ಇಂಚು ಸ್ಕ್ವಯರ್ ಅಡಿಗಳ ಪ್ಲಾನ್. ನಡುವೆ ನೀರು ನಿಂತುಕೊಳ್ಳುವ ಭಾಗ ೫೦ ಅಡಿ ೯ ಇಂಚುಗಳಲ್ಲಿದೆ. ೬ ಅಡಿ ಆಳವಿದೆ. ಉತ್ತಮ ಕೆತ್ತನೆ ಕಂಬಗಳು, ಗಾರೆ ಕೆಲಸ ನಾಲ್ಕು ಕಡೆ ಸ್ನಾನ ಮಾಡಲು ಉಡುಗೆ ತೊಡುಗೆ ದೊಡ್ಡ ಕಿಟಕಿಗಳಿವೆ. ಮೂರು ತೆರೆದಿವೆ. ಕೆಲವು ಭಗ್ನಗೊಂಡಿವೆ. ಗಾರೆಯನ್ನು ಬಳಸಿ ಮಾಡಿರುವ ಹೂ ಬಳ್ಳಿಗಳ ಅಲಂಕಾರ ಆಕರ್ಷಣೀಯವಾಗಿವೆ.

೬. ಅಷ್ಟಭುಜಾಕೃತಿಯ ಸ್ನಾನದ ಗೃಹ

ಇದು ಸರಸ್ವತಿ ದೇವಾಲಯದ ಹತ್ತಿರವಿದೆ. ತೆರೆದ ಮಂಟಪದ ಕಂಬಗಳಿಂದ ಸುತ್ತುವರೆದಿದ್ದು, ಸುತ್ತಲೂ ಅಲ್ಲಲ್ಲಿ ಕಂಡಿ ಕೊರೆದಿರುವ ಕಲ್ಲಿನ ಕಂಬಗಳನ್ನು ನಿಲ್ಲಿಸಲಾಗಿದೆ. ಬಹುಶಃ ಇದರ ಸುತ್ತಲೂ ದಾರಿ ಏರಿಸಿ ವಸ್ತ್ರಗಳಿಂದ ಅದನ್ನು ಮರೆ ಮಾಡಿರಬೇಕು. ಈ ವಿಧಾನವು ಒಳಗೆ ಸ್ನಾನ ಮಾಡುವವರು ಹೊರಗಿನ ಜನಕ್ಕೆ ಕಾಣಬಾರದ್ದೆಂದು ಇದ್ದಿರಬಹುದು. ಸ್ಥಳೀಯರು ಇದನ್ನು ರಾಜನ ಸ್ಥಾನಗೃಹ ಎಂದು ಕರೆಯುತ್ತಾರೆ. ಈ ಮೇಲಿನ ರಾಣಿ ಮತ್ತು ರಾಜನ ಸ್ನಾನದ ಗೃಹಗಳು ರೊಮ್‌ನಲ್ಲಿದ್ದ ಹವಾ/ಅಮ್ ಮಹಲ್‌ಗಳನ್ನು ಹೋಲುತ್ತವೆ ಎಂದು ವಿದ್ವಾಂಸರಾದ ಎಸ್.ಕೆ. ಜೋಷಿ ಅಭಿಪ್ರಾಯಪಡುತ್ತಾರೆ.

೭. ಪ್ರಾಚ್ಯವಸ್ತು ಸಂಗ್ರಹಾಲಯ

ಈ ಮೇಲಿನ ಸ್ಮಾರಕಗಳಂತೆ ಹಂಪಿಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಮತ್ತೊಂದು ಆಧುನಿಕ ಸ್ಮಾರಕ ಎಂದರೆ ಕಮಲಾಪುರದಲ್ಲಿರುವ ಪ್ರಾಚ್ಯವಸ್ತು ಸಂಗ್ರಹಾಲಯ. ಇದು ಆದಿಮ ಮಾನವನ ಮತ್ತು ವಿಜಯನಗರ ಕಾಲದ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಹಂಪಿಯ ಅನ್ವೇಷಣೆ ಮತ್ತು ಉತ್ಖನನಗಳಲ್ಲಿ ಸಂಗ್ರಹಿಸಿದ ಪ್ರಾಚ್ಯವಸ್ತುಗಳನ್ನು ಮತ್ತು ಅಳಿದುಳಿದ ಸ್ಮಾರಕಾವಶೇಷಗಳನ್ನು ಸಹ ಇಲ್ಲಿ ಸಂರಕ್ಷಿಸಿಡಲಾಗಿದೆ. ಇಲ್ಲಿರುವ ಮಾಡಲ್ ಇಡೀ ಹಂಪಿ ಒಳಗೊಂಡ ಪ್ರಮುಖ ಸ್ಥಳಗಳನ್ನು ಪರಿಚಯಿಸುತ್ತದೆ. ಇದರ ಒಳಭಾಗದಲ್ಲಿರುವ ಸಣ್ಣ ಮಾದರಿಯು ಗ್ಯಾಲರಿ ರಾಯಲ್ ಸೆಂಟರನ ವಿಸ್ತಾರವಾದ ವಿವರಗಳನ್ನು ನೀಡುತ್ತದೆ.

ಈ ಸಂಗ್ರಹಾಲಯವು ಪ್ರಧಾನವಾಗಿ ನಾಲ್ಕು ಭಾಗಗಳನ್ನು ಹೊಂದಿದೆ. ಮೇಲೆ ವಿವರಿಸಿದ ಹಂಪಿಯ ಮಾದರಿಗಳು ಒಂದನೇ ಭಾಗದಲ್ಲಿದ್ದು, ಎರಡನೇ ಭಾಗವು ಹಂಪಿಯ ಅವಶೇಷಗಳಿಗೆ ಸಂಬಂಧಿಸಿದ ಮೂರ್ತಿಗಳು ಹಾಗೂ ಶಿಲ್ಪಾಕೃತಿಗಳನ್ನು ಹೊಂದಿದೆ. ಮೂರನೇ ಭಾಗವು ಆಗಿನ ಕಾಲದಲ್ಲಿ ಉಪಯೋಗಿಸಲ್ಪಡುತ್ತಿದ್ದ ಯುದ್ಧ ಸಲಕರಣೆಗಳು, ನಗನಾಣ್ಯಗಳು ಮತ್ತು ಇತರೆ ಸಾಮಗ್ರಿಗಳನ್ನು ಹೊಂದಿದೆ. ನಾಲ್ಕನೇ ಭಾಗವು ಇತಿಹಾಸದ ಪೂರ್ವ ಹಾಗೂ ನಂತರದ ವಸ್ತುಗಳನ್ನು ಹೊಂದಿದೆ. ವೀರಗಲ್ಲುಗಳು, ಸತಿ ಕಲ್ಲುಗಳು, ಚಿಕ್ಕದಾದ ರಾಯಲ್ ಸೆಂಟರ್ ಪ್ರತಿರೂಪ, ಪಿಂಗಾಣಿ ವಸ್ತುಗಳು ಮತ್ತು ಗೋಡೆಯ ಅಲಂಕಾರಿಕ ವಸ್ತುಗಳನ್ನು ಹೊಂದಿದೆ. ಈ ಸಂಗ್ರಹಾಲಯವು ಪ್ರತಿ ಶುಕ್ರವಾರ ಹಾಗೂ ರಾಷ್ಟ್ರೀಯ ರಜಾ ದಿನಗಳಂದು

ಮುಚ್ಚಿರುತ್ತದೆ. ಉಳಿದ ದಿನಗಳಲ್ಲಿ ಇದರ ಸಮಯ ಬೆಳಿಗ್ಗೆ ೧೦ ರಿಂದ ಸಂಜೆ ೫ರ ವರೆಗೆ ಇದು ಕರ್ತವ್ಯ ನಿರ್ವಹಿಸುತ್ತದೆ. ಇಲ್ಲಿಗೆ ಅಸಂಖ್ಯಾತ ಪ್ರವಾಸಿಗರು ಭೇಟಿ ನೀಡುತ್ತಾರೆ.

ಈ ಮೇಲಿನ ಲೌಕಿಕ ಸ್ಮಾರಕಗಳಲ್ಲಿ ಕೆತ್ತಲ್ಪಟ್ಟ ವಿವಿಧ ಶಿಲ್ಪಗಳು ಅಂದಿನ ಪರಂಪರೆ ಮತ್ತು ಸಂಸ್ಕೃತಿಯ ವೈಭವವನ್ನು, ಅಂದಿನ ತಂತ್ರಗಾರಿಕೆಯನ್ನು ಅರಿಯಲು ಸಹಾಯಕವಾಗಿವೆ. ಅದೇ ರೀತಿ ಇಲ್ಲಿರುವ ಕೆಲವು ಇಂಡೋ-ಇಸ್ಲಾಮಿಕ್ ಶೈಲಿಯಲ್ಲಿ ನಿರ್ಮಿಸಲಾಗಿದ್ದು, ಅಂದಿನ ಜನ ಜೀವನವನ್ನು ಮತ್ತು ಅಂದು ಹಂಪಿಯಲ್ಲಿ ವಿವಿಧ ಧರ್ಮೀಯರು ವಾಸವಾಗಿದ್ದರು ಎಂಬುದನ್ನು ಪ್ರತಿನಿಧಿಸುವ ಕಲಾ ಕೇಂದ್ರಗಳಾಗಿವೆ.

ಇ) ಸೈನಿಕ ಸ್ಮಾರಕಗಳು

ಹಂಪಿಯಲ್ಲಿರುವ ಧಾರ್ಮಿಕ ಮತ್ತು ಲೌಕಿಕ ಕಟ್ಟಡಗಳಂತೆ ಅಂದಿನ ಕಲೆ ಮತ್ತು ವಾಸ್ತು ಶಿಲ್ಪವನ್ನು ಪ್ರತಿನಿಧಿಸುವ ಸೈನಿಕ ಸ್ಮಾರಕಗಳು ಹಂಪಿಯಲ್ಲಿದ್ದವು. ಅವು ಅಂದಿನ ಸಂಸ್ಕೃತಿಯನ್ನು ಅನಾವರಣಗೊಳಿಸುತ್ತವೆ. ಅಲ್ಲಿರುವ ವಿಶಾಲವಾದ ಕೋಟೆ, ಕೊತ್ತಲಗಳು, ಗಜ ಶಾಲೆ, ಕಾವಲುಗಾರರ ಕಟ್ಟಡ, ಪಹರೆ ಕಟ್ಟಡಗಳು ಇದಕ್ಕೆ ಉತ್ತಮ ಉದಾಹರಣೆಗಳಾಗಿವೆ. ಅವುಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

೧. ಹಂಪಿಯ ಕೋಟೆ

ವಿಜಯನಗರದ ಅರಸರು ಇತರೆ ಅರಸರಂತೆ ತಮ್ಮ ಸಾಮ್ರಾಜ್ಯವನ್ನು, ಅಲ್ಲಿರುವ ಜನರನ್ನು, ಶತ್ರುಗಳಿಂದ ರಕ್ಷಿಸಲು ಶಾಸ್ತ್ರಬದ್ಧವಾಗಿ ತಮ್ಮ ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ಹಲವಾರು ದುರ್ಗಗಳನ್ನು ನೂತನವಾಗಿ ನಿರ್ಮಾಣ ಮಾಡಿದರು. ಇಲ್ಲವೇ ಇದ್ದ ದುರ್ಗಗಳನ್ನು ಬಲಪಡಿಸಿದರು. ಹಾಗೇ ನಿರ್ಮಾಣವಾದ ಬಲಿಷ್ಠವಾದ ದುರ್ಗ/ಕೋಟೆಗಳಲ್ಲಿ ಅಂದಿನ ರಾಜಧಾನಿಯ ಕೋಟೆ(ವಿಜಯನಗರ (ಹಂಪಿ) ಅತ್ಯಂತ ಪ್ರಮುಖವಾಗಿದೆ. ಅಂದಿನ ಕೋಟೆಯ ವೈಶಿಷ್ಟ್ಯ ಅರಿಯಲು ನಮಗೆ ಶಾಸನಗಳು, ಸಮಕಾಲೀನ ಸಾಹಿತ್ಯ ಕೃತಿಗಳು ಹಾಗೂ ವಿದೇಶಿಯರ ಬರವಣಿಗೆಗಳು ನೆರವಾಗುತ್ತವೆ. ಸ್ಥಳೀಯವಾಗಿ ದೊರೆಯುವ ಶಿಲೆಯನ್ನು ಬಳಸಿದ್ದರಿಂದಾಗಿ ಹೆಚ್ಚು ಸುಭದ್ರವಾದ ದುರ್ಗವನ್ನು ಉದ್ದೇಶಿತ ಸ್ಥಳದಲ್ಲಿ ಅಂದು ನಿರ್ಮಿಸಲಾಯಿತು. ವಿಜಯನಗರದ ರಾಜಧಾನಿ ಹಂಪಿಯ ಸ್ಥಳ ಆಯ್ಕೆ ಮಾಡುವಾಗ ಸಹಜವಾಗಿಯೇ ಶಾಸ್ತ್ರಗ್ರಂಥಗಳ ನಿಯಮಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ಉತ್ತರಕ್ಕೆ ತುಂಗಭದ್ರಾ ಮತ್ತು ಸಾಲು ಬೆಟ್ಟಗಳು ಹಾಗೂ ಪೂರ್ವದಲ್ಲಿನ ಗುಡ್ಡಗಳ ಸಾಲುಗಳು ಸಹಜವಾಗಿಯೇ ನಗರಕ್ಕೆ ರಕ್ಷಣೆ ಒದಗಿಸುತ್ತಿದ್ದರೂ ಸಹ ಬಲಿಷ್ಠ ರಕ್ಷಣಾ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರುವ ದೃಷ್ಟಿಯಿಂದ ಈ ಗುಡ್ಡಗಳ ಮಧ್ಯದಲ್ಲಿ, ಗುಡ್ಡಗಳ ಮೇಲೆ ಹಾಗೂ ನೆಲದ ಮಟ್ಟದಲ್ಲಿ ಕೋಟೆಯನ್ನು ವ್ಯವಸ್ಥಿತವಾಗಿ ಯುದ್ಧ ತಂತ್ರದ ದೃಷ್ಟಿಯಿಂದ ನಿರ್ಮಿಸಲಾಗಿದೆ.

ಸು.೨೫ ಚ.ಕಿ.ಮೀ. ವಿಸ್ತಾರವಿರುವ ವಿಜಯನಗರದ ರಾಜಧಾನಿಯ ಸುತ್ತಲೂ ಆಯ್ದಭಾಗಗಳಲ್ಲಿ ಏಳು ಹಂತಗಳಲ್ಲಿ ಕೋಟೆಯನ್ನು ಕಾಲಾನುಕ್ರಮದಲ್ಲಿ ನಿರ್ಮಿಸಿರುವುದು ಇಲ್ಲಿಯ ವಿಶೇಷವಾಗಿದೆ. ಗಿರಿ ಹಾಗೂ ಜಲದುರ್ಗದ ಸಮ್ಮಿಶ್ರಣ ಲಕ್ಷಣಗಳನ್ನು ಹೊಂದಿರುವ ಇಲ್ಲಿನ ಕೋಟೆಯ ನಿರ್ಮಾಣದ(ಪ್ರಾಚೀನತೆಯ) ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಕ್ರಿ.ಶ. ಏಳನೇ ಶತಮಾನದಿಂದ ಹಂಪಿಯ ಅಸ್ತಿತ್ವದ ಬಗ್ಗೆ ಆಕರಗಳು ದೊರೆಯುತ್ತವೆ. ಆದರೂ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಸಿಂದರ ಆಳ್ವಿಕೆ ಇದ್ದಾಗ ಇಲ್ಲಿ ಕೋಟೆ ಇದ್ದಂತೆ ಕಾಣುವುದಿಲ್ಲ. ಆದರೆ ಹೊಯ್ಸಳ ದೊರೆ ಮೂರನೇ ಬಲ್ಲಾಳನು(ಕ್ರಿ.ಶ. ೧೩೩೧ ರಲ್ಲಿ) ವಿರೂಪಾಕ್ಷ ದುರ್ಗದಿಂದ ಆಳ್ವಿಕೆ ಮಾಡುವಾಗ ಪ್ರಾಯಶಃ ಕೋಟೆಯೊಂದನ್ನು ಕಟ್ಟಿಸಿರಬಹುದು. ತರುವಾಯ ಹಂಪಿಯನ್ನು ಆಳಿದ ಸಂಗಮ ದೊರೆ ಮೊದಲನೇ ಬುಕ್ಕನು(ಕ್ರಿ.ಶ.೧೩೫೬-೧೩೭೭) ವಿಜಯನಗರ ಪಟ್ಟಣದಲ್ಲಿ ಕೋಟೆಯನ್ನು ಕಟ್ಟಿಸಿ ರಾಜಧಾನಿಯನ್ನು ಆನೆಗೊಂದಿಯಿಂದ ವಿಜಯನರಕ್ಕೆ ಸ್ಥಳಾಂತರಿಸಿದನು. ಪ್ರಾರಂಭದಲ್ಲಿ ಚಿಕ್ಕದಾಗಿದ್ದ ಪಟ್ಟಣದ ಸುತ್ತಲು ಕಟ್ಟಿಸಿದ ಕೋಟೆಯು ಈಗ ಒಳಕೋಟೆ ಆಗಿದೆ. ಈ ಕೋಟೆಯು ಮಹಾನವಮಿದಿಬ್ಬ ಇರುವ ಅರಮನೆ ಪ್ರದೇಶ, ರಾಣಿ ಸ್ನಾನಗೃಹ, ಜೈನ ದೇವಾಲಯ, ಪ್ರಸನ್ನ ವಿರೂಪಾಕ್ಷ ದೇವಾಲಯದ ಪ್ರದೇಶವನ್ನು ಸುತ್ತುವರಿದಿದೆ. ಈ ಕೋಟೆಯಲ್ಲಿರುವ ಸಿಂಘಾರದ ಬಾಗಿಲನ್ನು ಬುಕ್ಕರಾಯನ ಶಾಸನವೊಂದು ಹೆಸರಿಸುತ್ತದೆ.[೩೪] ಇದರಿಂದ ಈ ವೇಳೆಗಾಗಲೇ ಈ ಭಾಗದ ಕೋಟೆ ಅಸ್ತಿತ್ವದಲ್ಲಿತ್ತು ಎಂಬುದು ಸ್ಪಷ್ಟವಾಗುತ್ತದೆ. ಮುಂದೆ ಅಧಿಕಾರಕ್ಕೆ ಬಂದ ಹರಿಹರನ ಕಾಲದಲ್ಲಿ(ಕ್ರಿ.ಶ. ೧೩೭೭-೧೪೦೪) ಇನ್ನೊಂದು ಹಂತದಲ್ಲಿ ಮೇಲಿನ ಕೋಟೆಯ ಸುತ್ತಲೂ ಕೋಟೆ ನಿರ್ಮಿಸಿರುವುದು ಹೊದೆಯ ಬಾಗಿಲನ್ನು ಉಲ್ಲೇಖಿಸುವ ಶಾಸನದಿಂದ ಪರೋಕ್ಷವಾಗಿ ವೇದ್ಯವಾಗುತ್ತದೆ. ನಂತರ ಆಳ್ವಿಕೆ ಮಾಡಿದ ಇಮ್ಮಡಿ ದೇವರಾಯ(ಕ್ರಿ.ಶ. ೧೪೨೪-೧೪೪೬) ಮತ್ತು ಶ್ರೀಕೃಷ್ಣದೇವರಾಯನ(ಕ್ರಿ.ಶ. ೧೫೦೯-೧೫೪೨) ಕಾಲದಲ್ಲಿಯೂ ರಾಜಧಾನಿ ಸಾಕಷ್ಟು ಬೆಳೆಯಿತು. ಅಲ್ಲದೇ ಅನೇಕ ಉಪನಗರಗಳು ಈ ವೇಳೆ ನಿರ್ಮಾಣವಾಗಿ ಅವುಗಳ ಸುತ್ತಲೂ ನಿರ್ಮಾಣವಾದ ಕೋಟೆಯ ಕುರಿತು ಸಮಕಾಲೀನ ಸಾಹಿತ್ಯ ಕೃತಿಗಳಿಂದ ಹಾಗೂ ವಿದೇಶಿ ಪ್ರವಾಸಿಗರ ಬರಹಗಳಿಂದ ಸ್ಪಷ್ಟವಾಗುತ್ತದೆ. ಇವುಗಳೇ ನಂತರದ ವಿಜಯನಗರ ಅರಸರು ಕೋಟೆಗಳಿಗೆ ಯಾವ ರೀತಿ ಪ್ರಾಮುಖ್ಯತೆ ಕೊಟ್ಟಿದ್ದರೆಂಬ ವಿವರವನ್ನು ಸಹ ನೀಡುತ್ತವೆ. ಅಚ್ಯುತರಾಯನ ಕಾಲದ ಕ್ರಿ.ಶ. ೧೫೪೦ರ ಶಾಸನವೊಂದು ಪೆನುಗೊಂಡೆ ಬಾಗಿಲವರೆಗೆ ಕೋಟೆ ನಿರ್ಮಾಣವಾಗಿತ್ತು ಎಂಬುದು ಸ್ಪಷ್ಟಪಡಿಸುತ್ತದೆ.[೩೫] ಹೀಗೆ ಕಾಲಾನುಕ್ರಮದಲ್ಲಿ ವಿಜಯನಗರ ಕೋಟೆ ರಚನೆ ಆಗಿರುವುದನ್ನು ಗುರುತಿಸಬಹುದಾಗಿದೆ.

ಇಲ್ಲಿನ ಕೋಟೆ ಗೋಡೆಯ ರಚನೆಗಾಗಿ ಒಂದೇ ಅಳತೆಯ ಬೆಣೆ (Wedge Shaped) ಯಾಕಾರದ ಶಿಲೆಗಳನ್ನು ಮಾತ್ರ ಬಳಸಿಕೊಂಡು ಯಾವುದೇ ಸಂದುಗಳಿಲ್ಲದಂತೆ ಪರಸ್ಪರ ಅವುಗಳನ್ನು ಜೋಡಿಸಿ ನಿರ್ಮಿಸಲಾಗಿದೆ. ಹೊರ ಮೈ(ಮುಂಭಾಗ) ಯನ್ನು ಬಹಳ ದಪ್ಪವಾಗಿ

ಹಾಗೂ ಒಳ ಮೈಯನ್ನು ಮಣ್ಣಿನ ಇಳಿವೋರೆ(Ramp)ಗಳಿಂದ ಕಟ್ಟಲಾಗಿದೆ. ಶತ್ರುಗಳಿಗೆ ಸುಲಭವಾಗಿ ಕೈಗೆಟುಕದಂತೆ ಹೆಚ್ಚು ಸುಭದ್ರವಾಗಿ ಹಾಗೂ ಬಲಿಷ್ಠವಾಗಿ ಈ ಕೋಟೆಯನ್ನು ಕಟ್ಟಿರುವುದು ಇದರ ಭದ್ರತೆಯ ಮತ್ತೊಂದು ವೈಶಿಷ್ಟ್ಯವಾಗಿದೆ. ಶಾಸ್ತ್ರ ನಿಯಮಕ್ಕನುಗುಣವಾಗಿ ರಚಿತವಾದ ಈ ಕೋಟೆಯಲ್ಲಿ ಗುಮ್ಮಟದ ಬಾಗಿಲು, ಸೋಮವಾರದ ಬಾಗಿಲು, ಉದಯಗಿರಿ ಬಾಗಿಲು, ಅರೆ ಶಂಕರ ಬಾಗಿಲು, ಒಂದನೇ ಪೆನುಗೊಂಡೆ ಮತ್ತು ಎರಡನೇ ಪೆನುಗೊಂಡೆ ಬಾಗಿಲು, ಹೂವಿನ ಬಾಗಿಲು, ಕೊತಾರದ ಬಾಗಿಲು, ಉಪ್ಪರಿಗೆ ಬಾಗಿಲು, ಸ್ವಾಮಿ ದೇವರ ಬಾಗಿಲು, ಆಂಜನೇಯ ದೇವಾಲಯದ ಸಮೀಪವಿರುವ ಬಾಗಿಲುಗಳಿವೆ. ಅಲ್ಲದೆ ಸಿಂಘಾರದ ಹೆಬ್ಬಾಗಿಲು, ಬೇಟೆಗಾರರ ಹೆಬ್ಬಾಗಿಲು, ಭಿಮನ ಹೆಬ್ಬಾಗಿಲುಗಳೆಂಬ ಬೃಹತ್ ಹೆಬ್ಬಾಗಿಲುಗಳೂ ಸಹ ಇಲ್ಲಿದ್ದು, ಸಂಶೋಧಕರ ಕುತೂಹಲವನ್ನು ಕೆರೆಳಿಸಿವೆ. ಇಲ್ಲಿನ ಕೋಟೆಯಲ್ಲಿ ಬಾಗಿಲು, ಹೆಬ್ಬಾಗಿಲುಗಳಷ್ಟೆ ಅಲ್ಲದೆ ಜನರ ಓಡಾಟಕ್ಕಾಗಿ ಹಲವಾರು ಚಿಕ್ಕ ಚಿಕ್ಕ ಪ್ರವೇಶ ಬಾಗಿಲುಗಳು (ದಿಡ್ಡಿಗಳು) ಇದ್ದ ಬಗ್ಗೆ ಶಾಸನಗಳು ವಿವರಿಸುತ್ತವೆ. ಅವುಗಳಲ್ಲಿ ಹಂಪಾದೇವರ ದಿಡ್ಡಿ, ರೆಮ್ಮು ದಿಡ್ಡಿ, ಜಡೇಶಂಕರ ದೇವರ ದಿಡ್ಡಿ, ಮಾತಂಗ ದೇವರ ದಿಡ್ಡಿಗಳು ಪ್ರಮುಖವಾಗಿವೆ. ಇವುಗಳೊಂದಿಗೆ ಯುದ್ಧ ತಂತ್ರದ ದೃಷ್ಟಿಯಿಂದ ರಚಿಸಲ್ಪಟ್ಟ ಸ್ವಾಮಿ ದ್ರೋಹರ ಗಂಡನ ಕೊತ್ತಳ, ಮೀಸರ ಗೊಂಡನ ಕೊತ್ತಳ, ಆನೆಗೊಂದಿ ಕೊತ್ತಳ, ಮತಂಗ ದೇವರ ಕೊತ್ತಳ, ಪ್ರತಾಪ ಕೊತ್ತಳ, ಮಳಲ ವಿನಾಯಕ ಮತ್ತು ಹನುಮನ ಕೊತ್ತಳ, ಹಂಪಿಯ ಕೊತ್ತಳಗಳಲ್ಲದೆ ಇನ್ನು ಹಲವು ಕೊತ್ತಳಗಳಿದ್ದು, ಕೋಟೆಗಳ ಕುರಿತು ಅಧ್ಯಯನ ಮಾಡುವವರಿಗೆ ಆಕರಗಳಾಗಿವೆ. ಇಲ್ಲಿನ ಕೋಟೆ ಗೋಡೆ ಮತ್ತು ಕೊತ್ತಳಗಳ ಹಾಗೂ ದ್ವಾರಗಳು, ಆಯ್ದ ಭಾಗಗಳಲ್ಲಿ ಹಲವಾರು ಶಿಲ್ಪಗಳನ್ನು ವಿವಿಧ ಉದ್ದೇಶಗಳನ್ನು ಇಟ್ಟುಕೊಂಡು ಕೆತ್ತಲಾಗಿದೆ. ಇವುಗಳನ್ನು ಆಧಾರದಿಂದ ಅಂದಿನ ಸಾಂಸ್ಕೃತಿಕ ಮತ್ತು ಸಾಮಾಜಿಕ ಇತಿಹಾಸವನ್ನು ರಚಿಸಬಹುದಾಗಿದೆ.

ಸಿಂಘಾರದ ಹೆಬ್ಬಾಗಿಲಿನಲ್ಲಿ ಸಿಂಗಾರ ಮಾಡಿಕೊಳ್ಳುತ್ತಿರುವ ಸ್ತ್ರೀ, ಹಣ್ಣು ತಿನ್ನುತ್ತಿರುವ ಮಂಗ, ಗಣೇಶ, ನಂದಿ, ದಮ್ಮಡಿ ಹಿಡಿದ ಪುರುಷರು, ಸಿಂಹ, ನಾಯಿಯ ಹಾಗೂ ಚೂಪನೆಯ ಗಟ್ಟವುಳ್ಳ ದ್ವಾರಪಾಲಕನ ಶಿಲ್ಪಗಳಿವೆ. ಇದೇ ರೀತಿಯ ದ್ವಾರ ಪಾಲಕನ ಮತ್ತೊಂದು ಶಿಲ್ಪವಿರುವ ದ್ವಾರ ಪಟ್ಟಿಕೆ ಕಮಲಾಪುರ ಕೇಂದ್ರ ಪುರಾತತ್ವ ವಸ್ತು ಸಂಗ್ರಹಾಲಯದಲ್ಲಿದೆ. ಅದೇ ರೀತಿ ಹೊದೆಯ ಬಾಗಿಲಿನ ಪೂರ್ವದ ಭಿತ್ತಿಗೆ ಆಸೀನ ಲಕ್ಷ್ಮೀನರಸಿಂಹನ ಶಿಲ್ಪವಿದೆ. ಸೋಮವಾರದ ಬಾಗಿಲಿನ ಕೋಟೆಯಲ್ಲಿ ಬಿಲ್ಲು ಹಿಡಿದಿರುವ ವೀರ(ಅಭ್ಯಾಸನಿರತ) ಆನೆ, ಲಕ್ಷ್ಮಿ, ಹನುಮಂತ, ಹಂಸ, ನಂದಿ, ಯಾಳಿ, ಕತ್ತಿ ವರಸೆಯಲ್ಲಿ ತೊಡಗಿರುವ ಶಿಲ್ಪಗಳಿವೆ. ಗುಮ್ಮಟದ ಬಾಗಿಲ ಕೋಟೆಯಲ್ಲಿ ಹಂಸ, ಮೀನು, ನರ್ತನ ಸ್ತ್ರೀ, ಆನೆ, ಗಣೇಶ, ಸರ್ಪ, ಮೊಸಳೆ, ನಂದಿ, ಅದಕ್ಕೆ ಎದುರಾಗಿ ಅಂಜಲಿ ಹಸ್ತನಾಗಿ ನಿಂತಿರುವ ಭಕ್ತನ ಶಿಲ್ಪಗಳಿವೆ. ಅದೇ ರೀತಿ ಭೈರವ, ಆಂಜನೇಯ, ಯಕ್ಷ, ನೃತ್ಯ ಶಿಲ್ಪಗಳು ಹೂವಿನ ಬಾಗಿಲ ಕೋಟೆಯಲ್ಲಿದ್ದರೆ, ಅದೇ ದ್ವಾರದ ಅಧಿಷ್ಠಾನದಲ್ಲಿ ಮೃದಂಗ ಬಾರಿಸುವ ಸ್ತ್ರೀ, ನೃತ್ಯ ಶಿಲ್ಪ, ನಂದಿ, ಗುರಾಣಿ

ಹಿಡಿದು ಹೋರಾಡುತ್ತಿರುವ ವೀರರು, ಕೈ ಮೇಲಕ್ಕೆತ್ತಿರುವ ಯತಿ ಇನ್ನು ಮೊದಲಾದ ಶಿಲ್ಪಗಳಿವೆ. ಭೀಮನ ಬಾಗಿಲ ಕೋಟೆಯ ಮೇಲೆ ದುಶ್ಯಾಸನನನ್ನು ಸಂಹಾರ ಮಾಡುತ್ತಿರುವ ಭೀಮನ ಹಾಗೂ ದ್ರೌಪದಿಯ ಎರಡು ಶಿಲ್ಪಗಳಿದ್ದು, ಆಕರ್ಷಣೀಯವಾಗಿದೆ. ಕೋಟೆ ಶಂಕರ ಬಾಗಿಲ ಕೋಟೆಯ ಭಿತ್ತಿಯಲ್ಲಿ ಮಲ್ಲಯುದ್ಧದಲ್ಲಿ (ಕುಸ್ತಿ) ತೊಡಗಿದ ಶಿಲ್ಪಗಳು ಅಲ್ಲದೆ ಹುಲಿ ಮತ್ತು ಕೆಲ ಸ್ತ್ರೀ ಶಿಲ್ಪಗಳಿವೆ. ಅದೇ ರೀತಿ ಕಮಲಾಪುರ-ಕಂಪ್ಲಿ ರಸ್ತೆಯಲ್ಲಿರುವ ಮುಸ್ಲಿಂ ಮುಸಾಫಿರ್ ಖಾನೆಯ ಬಳಿ ಇರುವ ಕೋಟೆಯಲ್ಲಿ ಸಳ ಹುಲಿಯನ್ನು ಕೊಲ್ಲುತ್ತಿರುವ ಶಿಲ್ಪ, ವಿಷ್ಣು, ಮತ್ಸನಾಥ, ಹುಲಿಯ ಮೇಲೆ ಕುಳಿತಿರುವ ನಾಥನ ಶಿಲ್ಪಗಳಿದ್ದು, ಅಧ್ಯಯನದ ದೃಷ್ಟಿಯಿಂದ ಮುಖ್ಯವೆನಿಸಿದೆ. ಎರಡನೇ ಪೆನುಗೊಂಡೆ ಬಾಗಿಲು ಕೊತ್ತಳದ ಭಿತ್ತಿಯಲ್ಲಿ ನಂದಿ, ಅದರ ಎದುರುಗಡೆ ಅಂಜಲಿ ಹಸ್ತನಾಗಿರುವ ಭಕ್ತನ ಶಿಲ್ಪಗಳಿವೆ. ಗುಮ್ಮಟ ಬಾಗಿಲಲ್ಲೂ ಇದೇ ರೀತಿಯ ಶಿಲ್ಪವಿದ್ದು, ಅದನ್ನು ಪ್ರೌಢದೇವರಾಯನಿಗೆ ಸಂಬಂಧಿಸಿದ್ದೆಂದು ವಿದ್ವಾಂಸರು ಊಹಿಸಿದ್ದಾರೆ. ಇದೇ ಕೋಟೆಯ ದ್ವಾರದಲ್ಲಿ ವಿಶಿಷ್ಟವಾಗಿರುವ ದ್ವಾರಪಾಲಕ ಶಿಲ್ಪಗಳಿದ್ದು, ಅವು ಅಧ್ಯಯನ ಯೋಗ್ಯವೆನಿಸಿವೆ.[೩೬]

ಕ್ರಿ.ಶ.೧೪೪೩ರಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದ ಅಬ್ದುಲ್ ರಜಾಕನು ಈ ನಗರವನ್ನು ವರ್ಣಿಸುತ್ತಾ ಇಲ್ಲಿನ ಕೋಟೆಯ ಕುರಿತು ಮುಂದಿನಂತೆ ಹೇಳುತ್ತಾನೆ: "ಇಲ್ಲಿನ ಕೋಟೆ ಚಕ್ರಾಕಾರವಾಗಿದೆ. ಇದನ್ನು ಬೆಟ್ಟದ ತುದಿಯ ಮೇಲೆ ಕಲ್ಲು ಮತ್ತು ಗಾರೆಯಿಂದ ಕಟ್ಟಿದ್ದಾರೆ. ಇದರ ಹೆಬ್ಬಾಗಿಲುಗಳು ಬಹು ಬಲವಾಗಿವೆ. ಇವುಗಳನ್ನು ಒಂದೇ ಸಮನೆ ಕಾಯುತ್ತಾರೆ, ಯಾರನ್ನು ಪರೀಕ್ಷೆ ಮಾಡದೇ ಒಳಗೆ ಬಿಡುವುದಿಲ್ಲ. ಇವರು ಸುಂಕ ವಸೂಲಿ ಮಾಡುತ್ತಾರೆ" ಎಂದು ಹೇಳಿದ್ದಾನೆ.[೩೭] ಇದರಿಂದ ಅಂದಿನ ಕೋಟೆ ಬಾಗಿಲುಗಳು ಮತ್ತು ಅಲ್ಲಿನ ಕಾವಲಿನ ಭಟರ ಕಾರ್ಯವೈಖರಿ ಬಗ್ಗೆ ನಮಗೆ ಸ್ಪಷ್ಟವಾಗುತ್ತದೆ. ಅಲ್ಲದೇ ಸಮಕಾಲೀನ ಹಲವು ಸಾಹಿತ್ಯ ಕೃತಿಗಳು ವಿಜಯನಗರ ಕಾಲದ ಕೋಟೆಗಳ ಮಹತ್ವ ಕುರಿತು ಉಲ್ಲೇಖಿಸಿವೆ. ನಂಜುಂಡ ಕವಿ ತನ್ನ 'ಭೈರವೇಶ್ವರ ಕಾವ್ಯ'ದಲ್ಲಿ ಅಂದು ಜರುಗುತ್ತಿದ್ದ ಕೋಟೆ ಕಾಳಗಗಳು ಮತ್ತು ಅವುಗಳಲ್ಲಿ ಕಾವಲಿನ ಭಟರು ನಿರ್ವಹಿಸುತ್ತಿದ್ದ ಪಾತ್ರ ಕುರಿತು ವಿವರವಾಗಿ ಹೇಳಿದ್ದಾನೆ. ವಿಜಯನಗರ ಅರಸರು ತಮ್ಮ ರಾಜ್ಯದ ರಕ್ಷಣೆಗಾಗಿ ಉತ್ತಮವಾದ ಸೈನಿಕ ಇಲಾಖೆಯನ್ನು ಹೊಂದಿದ್ದರು. ಅದರಲ್ಲಿ ಸೈನಿಕರೊಂದಿಗೆ ರಾಜ್ಯದ ರಕ್ಷಣೆಗಾಗಿ ಪ್ರತ್ಯೇಕವಾಗಿ ಕಾವಲು ಭಟರ ಪಡೆಯನ್ನು ನೇಮಿಸಿಕೊಂಡಿದ್ದರ ಬಗ್ಗೆ ಸಾಕಷ್ಟು ಪುರಾವೆಗಳಿವೆ. ಅಂದಿನ ಕೋಟೆ ಬಾಗಿಲುಗಳನ್ನು ಕಾವಲುಗಾರರು ಸಂರಕ್ಷಿಸುತ್ತಿದ್ದರ ಬಗ್ಗೆ ಸಹ ಸಾಕಷ್ಟು ವಿವರಗಳು ಲಭ್ಯವಿದೆ. ಈ ಮೇಲಿನ ಕೋಟೆಕೊತ್ತಲಗಳಲ್ಲಿ ಕೆತ್ತಲ್ಪಟ್ಟ ವಿವಿಧ ಶಿಲ್ಪಗಳು ಅಂದಿನ ಪರಂಪರೆ ಮತ್ತು ಸಂಸ್ಕೃತಿಯ ವೈಭವವನ್ನು ಅರಿಯಲು ಸಹಾಯಕವಾಗಿವೆ. ಅದೇ ರೀತಿ ಇಲ್ಲಿರುವ ಪಹರೆ ಕಟ್ಟಡಗಳು ಹಾಗೂ ಗಜಶಾಲೆ, ಕಾವಲುಗಾರರ ಕಟ್ಟಡಗಳು ಇಂಡೋ-ಇಸ್ಲಾಂಮಿಕ್ ಶೈಲಿಯಲ್ಲಿ ನಿರ್ಮಿಸಲಾಗಿದ್ದು, ಅಂದಿನ ಜನಜೀವನವನ್ನು ಪ್ರತಿನಿಧಿಸುವ ಕಲಾ ಕೇಂದ್ರಗಳಾಗಿವೆ.

ಈ ಮೇಲಿನ ವಿವಿಧ ಧಾರ್ಮಿಕ ಸ್ಮಾರಕಗಳಲ್ಲಿ ಕೆತ್ತಲ್ಪಟ್ಟ ವಿವಿಧ ಶಿಲ್ಪಗಳು ಅಂದಿನ ಪರಂಪರೆ ಮತ್ತು ಸಂಸ್ಕೃತಿಯ ವೈಭವವನ್ನು, ಅಂದಿನ ವಾಸ್ತು ತಂತ್ರಗಾರಿಕೆಯನ್ನು ಅರಿಯಲು ಸಹಾಯಕವಾಗಿವೆ. ಅಷ್ಟೇ ಅಲ್ಲದೆ ಅವು ಅಂದಿನ ಅದೆಷ್ಟೊ ಆಚರಣೆಗಳನ್ನು ಮತ್ತು ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆ ಮೊದಲಾದ ಬಹು ಅಪರೂಪದ ಕಥಾ ಪ್ರಸಂಗಗಳನ್ನು, ಅಂದಿನ ಧಾರ್ಮಿಕ ಪರಂಪರೆಯನ್ನು ಇಲ್ಲಿನ ಶಿಲ್ಪಗಳು ಒಳಗೊಂಡಿವೆ. ಅದೇ ರೀತಿ ಇಲ್ಲಿರುವ ಕೆಲವು ಕಡೆ ಕೆತ್ತಲಾದ ಮಿಥುನಶಿಲ್ಪಗಳು ಅಂದಿನ ಜನರಿಗೆ ಲೈಂಗಿಕ ಜ್ಞಾನ ನೀಡುವ ಮುಖ್ಯ ಮಾಧ್ಯಮಗಳಾಗಿದ್ದವು. ಈ ಹಿನ್ನೆಲೆಯಲ್ಲಿ ಅಂದಿನ ಧಾರ್ಮಿಕ ಸ್ಮಾರಕಗಳು ಅಂದಿನ ಜನಜೀವನವನ್ನು ಮತ್ತು ಅಂದು ಹಂಪಿಯಲ್ಲಿ ವಿವಿಧ ಧರ್ಮೀಯರು ವಾಸವಾಗಿದ್ದರು ಎಂಬುದನ್ನು ಪ್ರತಿನಿಧಿಸುತ್ತವೆ. ಅಷ್ಟೇ ಅಲ್ಲದೇ ಅವು ಕಲಾಕೇಂದ್ರಗಳಾಗಿ, ಧಾರ್ಮಿಕ ಮತ್ತು ಸಾಮಾಜಿಕ ಕೇಂದ್ರಗಳಾಗಿ ಕರ್ತವ್ಯ ನಿರ್ವಹಿಸಿದ್ದವು.

೬.೨ ಜಾನಪದ ಕ್ರೀಡೆ, ಕಲೆ ಮತ್ತು ಆಟಗಳ ಹಿನ್ನೆಲೆಯಲ್ಲಿ ಹಂಪಿಯ ಸಂಸ್ಕೃತಿ

ಹಂಪಿಯ ಪರಿಸರದಲ್ಲಿ ಇಂದಿಗೂ ಹಲವು ಜನಪದ ಕ್ರೀಡೆ, ಕಲೆ ಮತ್ತು ಆಟಗಳು ಜೀವಂತವಾಗಿವೆ. ಆ ಕಾರಣಕ್ಕಾಗಿ ಹಂಪಿಯನ್ನು ಜನಪದ ಕಲೆಗಳ ತವರೂರು ಎನ್ನಬಹುದು. ವಿಜಯನಗರದ ಅರಸರ ಕಾಲದಲ್ಲಿ ಶಾಸ್ತ್ರೀಯ ಸಂಗೀತ, ನೃತ್ಯ, ಶಿಲ್ಪಕಲೆಗಳಂತೆಯೇ ಜನಪದ ಕಲೆಗಳಿಗೂ ಹೆಚ್ಚಿನ ಮಹತ್ವ ದೊರೆತಿತ್ತು. ಇಲ್ಲಿನ ಜನಜೀವನದ ಬಗೆಗೆ ಬೆಳಕು ಚೆಲ್ಲುವ ಆ ಕಾಲದಲ್ಲಿ ರಚನೆಗೊಂಡ ಗ್ರಂಥಗಳು ಹಾಗೂ ಹಂಪಿ ಪ್ರವಾಸಿಗರ ಬರಹಗಳು ಹಾಗೂ ಶಿಲ್ಪ ಸ್ಮಾರಕಗಳಿಂದ ಈ ಅಂಶ ತಿಳಿದುಬರುತ್ತದೆ. ಪ್ರದರ್ಶನಾತ್ಮಕ ಕಲೆಗಳಲ್ಲಿ ಪ್ರಮುಖವಾಗಿ ಕೋಲಾಟ, ಕೊರವಂಜಿ ಕುಣಿತ, ಓಕುಳಿಯಾಟ, ದೊಂಬರಾಟ, ಹಾವಾಡಿಗರ ಆಟ, ಇತರೆ ಜನಪದ ಗೀತಮೇಳಗಳನ್ನು ಗಮನಿಸಬಹುದು. ಇವುಗಳು ಅಂದಿನ ಜನರ ಮನರಂಜನೆಯ ಸಾಧನಗಳು ಮತ್ತು ಕಲೆಯ ಕೇಂದ್ರಗಳು ಸಹ ಆಗಿದ್ದವು. ಜನಪದರು ತಮ್ಮ ಬಿಡುವಿನ ವೇಳೆಯಲ್ಲಿ ತಮ್ಮದೇ ಆದ ಹಲವಾರು ರೀತಿಯ ನಿಯಮಗಳ ಚೌಕಟ್ಟಿನಲ್ಲಿ ಪರಸ್ಪರ ಸ್ಪರ್ಧಾತ್ಮಕ ಮನೋಭಾವಕ್ಕಿಂತ ಹೆಚ್ಚಾಗಿ ಜಾಣ್ಮನದ ಕೆಲವು ಆಟಗಳನ್ನು ತಮ್ಮ ವಿನೋದಕ್ಕಾಗಿ ಆಡುತ್ತಿದ್ದರು. ಅವುಗಳಲ್ಲಿ ಕೆಲವು ಇಂದಿಗೂ ಪ್ರಚಲಿತದಲ್ಲಿವೆ. ಜನಪದ ಆಟಗಳನ್ನು ಕೇವಲ ಕಾಲಹರಣದ ಆಟಗಳು ಎಂದು ತಿಳಿಯದೆ ಅವುಗಳ ಬಗ್ಗೆ ಯೋಚಿಸಿದಾಗ ಅವುಗಳು ಸಾಂಸ್ಕೃತಿಕ ಜಗತ್ತಿಗೆ ದಾರಿಯನ್ನು ಮಾಡಿಕೊಟ್ಟಿವೆ. ಜನಪದ ಆಟಗಳು ಚಮತ್ಕಾರತೆ, ತೀಕ್ಷ್ಣಬುದ್ಧಿವಂತಿಕೆಯನ್ನು ಸಾಣೆ ಹಿಡಿಯುತ್ತವೆ. ಅಷ್ಟೇ ಅಲ್ಲದೆ ಅಂದಿನ ಸಂಸ್ಕೃತಿಯನ್ನು ಬೆರಗು ಭಿನ್ನಾಣಗಳನ್ನು ಆ ಕಾಲದ ಆಟ ಮತ್ತು ಕಲೆ ಹಾಗು ಕ್ರೀಡೆಗಳಲ್ಲಿ ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಅಂದು ಈ ಭಾಗದಲ್ಲಿ ಆಸ್ತಿತ್ವದಲ್ಲಿದ್ದ ವಿವಿಧ ಜಾನಪದ ಕ್ರೀಡೆ, ಕಲೆ ಹಾಗೂ ಆಟಗಳಲ್ಲಿ ಕೆಲ ಪ್ರಮುಖವಾದವುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

೧. ಕುಸ್ತಿ ಕಲೆ

ಭಾರತದಲ್ಲಿ ಪ್ರಚಲಿತವಿದ್ದ ೬೪ ವಿದ್ಯೆಗಳಲ್ಲಿ ಈ ಗರಡಿ ಕಲೆಯೂ ಒಂದು. ಸಮರ ಕಲೆಗಳಲ್ಲಿ ಒಂದೆಂದು ಪರಿಗಣಿಸಲಾಗಿರುವ ಮಲ್ಲಯುದ್ಧ ಎನ್ನುವುದು ಈ ಕುಸ್ತಿ ಕಲೆಯೇ ಆಗಿದೆ. ಯಾವುದೇ ಆಯುಧ ಆಧಾರವಿಲ್ಲದೆ ತನ್ನ ದೈಹಿಕಶಕ್ತಿ ಮತ್ತು ಯುಕ್ತಿಗಳಿಂದ ನಡೆಸುವ ಕ್ರಿಯೆಯೇ ಮಲ್ಲಯುದ್ಧ. ಸಮರ ವೇಳೆಯಲ್ಲಿ ಯುದ್ಧದ ಅಂಗವಾಗಿ ಬಳಕೆಗೊಳ್ಳುವ ಈ ಕಲೆ, ಸಾಮಾನ್ಯ ವೇಳೆಯಲ್ಲಿ ಕ್ರೀಡೆಯಾಗಿ ಬಳಕೆಗೊಳ್ಳುತ್ತದೆ. ಎಲ್ಲ ಸಮರ ಕಲೆಗಳ ಬೇರಾಗಿರುವ ಈ ಕಲೆ ಪ್ರಾಚೀನ ಕಾಲದಿಂದಲೂ ಗೌರವಕ್ಕೆ ಪಾತ್ರವಾಗಿದೆ.

ವಿಜಯನಗರ ಕಾಲದಲ್ಲಿ ಈ ಕಲೆ ಶ್ರೀಮತವಾಗಿ ಬೆಳೆದದ್ದನ್ನು ವಿದೇಶಿ ಪ್ರವಾಸಿಗಳು ವರ್ಣಿಸಿರುವುದನ್ನು ಗಮನಿಸಬಹುದು. ಗ್ರಾಮೀಣ ಭಾರತದ ಒಂದು ಅಂಗವೇನೋ ಎನ್ನುವಂತೆ ನಂಟನ್ನು ಹೊಂದಿದ್ದ ಕ್ರೀಡೆ ಎಂದರೆ ಕುಸ್ತಿ ಎನ್ನಬಹುದು. ದೈಹಿಕಶಕ್ತಿ ಯುಕ್ತಿಗಳ ಪ್ರತೀಕವಾಗಿ ಈ ಗರಡಿ ಕಲೆ ಇದೆ. ಇದರ ಬಗ್ಗೆ ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಿಸಲಾಗಿದೆ.

ಕುಮಾರವ್ಯಾಸನು ತನ್ನ ಕರ್ಣಾಟ ಭಾರತ ಕಥಾಮಂಜರಿಯಲ್ಲಿ ಗರುಡಿ, ಗರುಡಿಮನೆ ಮಲ್ಲರಪಟ್ಟುಗಳ ಬಗೆಗೆ ವಿವರವಾದ ಉಲ್ಲೇಖಗಳನ್ನು ಕೊಡುತ್ತಾ ಹೋಗುತ್ತಾನೆ. ಗರುಡಿ ಮನೆಯ ಆರಂಭಿಸುವ ಮುನ್ನ ಆಚರಿಸುತ್ತಿದ್ದ ಆಚರಣೆಯನ್ನು ಆದಿಪರ್ವದಲ್ಲಿ ಕೊಡುತ್ತಾನೆ.

ಗರುಡಿಯ ಕಟ್ಟಿತು ನೂರು ಯೋಜನೆ

ವರೆಯ ವಿಸ್ತಾರದಲಿ ಸಾವಿರ

ಕುರಿಯ ಹೊಯ್ದರು ಪೂಜಿಸಿದರಾ ಚದುರ ಚಂಡಿಕೆಯ ಎನ್ನುತ್ತಾನೆ.[೩೮]

ಇಲ್ಲಿ ಗರುಡಿಯ ಆರಂಭದಲ್ಲಿ ಪೂಜಿಸುತ್ತಿದ್ದುದು ಚಂಡಿಯನ್ನು ಹನುಮನನ್ನಲ್ಲ. ಕುಮಾರವ್ಯಾಸನು ಮಲ್ಲಯುದ್ದ ವರ್ಣನೆಗಳು ಬಂದಾಗ ಮನತುಂಬಿ ವರ್ಣಿಸುತ್ತಾನೆ. ಜರಾಸಂಧ, ಭೀಮ, ದುರ್ಯೋಧನರ ನಡುವೆ ಆದ ಮಲ್ಲಯುದ್ಧ ವರ್ಣನೆಗಳನ್ನು ನೋಡಿದಾಗ ಅವನಿಗೂ ಸಹ ಗರುಡಿಯ ಅನುಭವ ಇದ್ದ ಹಾಗೆ ಕಂಡುಬರುತ್ತದೆ.

ನಂಜುಂಡ ಕವಿಯ 'ಕುಮಾರರಾಮ ಸಾಂಗತ್ಯ'ದಲ್ಲಿ ಬರುವ ಮಲ್ಲಯುದ್ಧ ಹಾಗೂ ಪಟ್ಟುಗಳು ಅಂದಿನ ಜೀವನದಲ್ಲಿ ಕಂಡುಬರುವ ಜೀವನ ವಿಧಾನವಾಗಿದೆ. ಕಂಪಿಲೆಯ ರಾಮನೆಂದೇ ಹೆಸರು ಪಡೆದಿರುವ ಈ ವ್ಯಕ್ತಿ ೧೪ನೇ ಶತಮಾನದಲ್ಲಿ ಜೀವಿಸಿದ್ದ, ಅವನ ಜೀವನವನ್ನೇ ಆಧಾರವಾಗಿಟ್ಟುಕೊಂಡು ಕವಿ ಕಾವ್ಯ ರಚಿಸಿದ್ದಾನೆ. ಅಲ್ಲಿ ಬರುವ ಗುಂಡು ಎತ್ತುವ ಸ್ಪರ್ಧೆ, ಅಂದಿನ ಮಲ್ಲರ ಶಕ್ತಿಯ ಪ್ರದರ್ಶನ ಕಲೆಯಾಗಿದೆ. ಈ ರಾಮನಾಥ ಚರಿತೆಯಲ್ಲಿ ಗರಡಿಯ ಕುರಿತು ಉಲ್ಲೇಖಿಸಲಾಗಿದೆ:

ಪುರದ ಬಹಿರ್ದಳೆಯದೊಳೆಣ್ಣೆಸೆಯೋಳು

ಗರುಡಿಗಳಿಹವದ ಜೊಳಗೆ ಬಿರಿದಿನ

ಬಂಟಗಳ ಬಿಡದೆ ಪಾಡುಗಳನು ಬರಿಸುವ ಬ್ಯಾಸಿಗಳಿಹರು ಎಂಬ ಪದ್ಯವೊಂದನ್ನು ಬರೆದಿದ್ದಾನೆ.[೩೯] ಇದು ೧೪೨೫ರಲ್ಲಿಯೇ ಗರಡಿಮನೆಗಳಿದ್ದವು ಎಂಬುದನ್ನು ಸೂಚಿಸುತ್ತದೆ. ಸಾಂಸ್ಕೃತಿಕ ಕಾರಣಗಳಿಗಾಗಿ ಇಂದು ಗರಡಿಕಲೆ ಮೂಲೆ ಗುಂಪಾಗುತ್ತಿದೆ. ಅದಕ್ಕೆ ಸರಿಯಾದ ಪ್ರೋತ್ಸಾಹ ಆರ್ಥಿಕ ಸಹಾಯ ಹಾಗೂ ಆಧುನಿಕ ಬದುಕಿಗೆ ತಕ್ಕಂತೆ ಅಲ್ಪ ಸ್ವಲ್ಪ ಬದಲಾವಣೆಗಳನ್ನು ತಂದರೆ, ಇಂದಿಗೂ ಗರಡಿಕಲೆ ತನ್ನತನವನ್ನು ಉಳಿಸಿಕೊಳ್ಳುತ್ತದೆ. ನಾಡಹಬ್ಬ, ಹಂಪಿಉತ್ಸವದಲ್ಲಿ ಪ್ರಮುಖ ಆಕರ್ಷಣೆಯೆಂದರೆ ಕುಸ್ತಿ. ಆದ್ದರಿಂದಲೇ ಸಾಂಸ್ಕೃತಿಕ ಹೊಸಪೇಟೆ ತಾಲ್ಲೂಕಿನ ಕೇರಿಗೊಂದು ಗರಡಿಮನೆಗಳಿರುತ್ತಿದ್ದವು. ಹಂಪಿ ಉತ್ಸವ ಸಮೀಪಿಸುತ್ತಿದ್ದಂತೆ ಗರಡಿ ಮಲ್ಲರೆಲ್ಲರೂ ಸೇರಿ ಮುಂಜಾನೆಯಿಂದ ರಾತ್ರಿಯವರೆಗೂ ಬಿಡುವಿಲ್ಲದೆ ಕಸರತ್ತು ನಡೆಸುತ್ತಿದ್ದರು. ಪ್ರಾಚೀನ ಸಮರ ಕಲೆಗಳಲ್ಲಿ ಒಂದಾದ ಗರಡಿ ಕಲೆಯನ್ನು ವಿಜಯನಗರ ಸಾಮ್ರಾಜ್ಯದ ಅರಸರ ಕಾಲದಲ್ಲಿಯೂ ರೂಢಿಯಲ್ಲಿತ್ತು. ಹಾಗಾಗಿ ಹಂಪಿ ಪ್ರದೇಶದ ವ್ಯಾಪ್ತಿಯಲ್ಲಿ ಸಾಕಷ್ಟು ಗರಡಿ ಮನೆಗಳಿರುವುದನ್ನು ಕಾಣುತ್ತೇವೆ. ಹೊಸಪೇಟೆ, ಕಂಪ್ಲಿ, ಗಂಗಾವತಿ ಮತ್ತಿತರೆ ಗ್ರಾಮಗಳಲ್ಲಿ ಗರಡಿ ಮನೆಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾಗುತ್ತಿತ್ತು.

ವಿಜಯನಗರದಲ್ಲಿ ಕುಸ್ತಿಯ ಕಲೆಯು ಮಲ್ಲಯುದ್ಧ, ಬಾಹುಯುದ್ಧ, ಗರಡಿ ವಿದ್ಯೆ ಮುಂತಾಗಿ ಹೆಸರುಗಳಿಂದ ಅತ್ಯಂತ ಜನಪ್ರಿಯವಾಗಿತ್ತು. ಇದು ಸಮರಕಲೆಯ ಒಂದು ಭಾಗವಾಗಿ ಮನೋರಂಜನೆಯ ಕ್ರೀಡಾ ಪ್ರದರ್ಶನವಾಗಿ ರಾಜರ ಮತ್ತು ಜನರ ಮನ್ನಣೆಗೆ ಪಾತ್ರವಾಗಿತ್ತು. ಅಬ್ದುಲ್ ರಜಾಕ್, ನ್ಯೂನಿಜ್, ಪಯಸ್, ಬಾರ್ಬೋಸಾ ಮುಂತಾದ ವಿದೇಶ ಪ್ರವಾಸಿಗರು ಕುಸ್ತಿಯಾಟವನ್ನು ಕಣ್ಣಾರೆ ಕಂಡು, ಹಲವು ಸನ್ನಿವೇಶಗಳನ್ನು ತಮ್ಮ ಪ್ರವಾಸ ಕಥನಗಳಲ್ಲಿ ದಾಖಲಿಸಿದ್ದಾರೆ. ಕನ್ನಡದ ಮಹಾಕವಿಗಳಾದ ಕುಮಾರವ್ಯಾಸ ರತ್ನಾಕರವರ್ಣಿ, ಷಡಕ್ಷರದೇವ, ನಂಜುಂಡ ಮುಂತಾದ ಕವಿಗಳು ತಮ್ಮ ಕಾವ್ಯ ಕೃತಿಗಳಲ್ಲಿ ಕುಸ್ತಿಕಾಳಗದ ಸಂದರ್ಭಗಳನ್ನು ಜೀವಂತವಾಗಿರುವಂತೆ ಚಿತ್ರಿಸಿದ್ದಾರೆ.

ಮಹಾನವಮಿ ಉತ್ಸವದ ಸಂದರ್ಭದಲ್ಲಿ ಹಬ್ಬ-ಹರಿದಿನಗಳಲ್ಲಿ ರಾಜರು ಕುಸ್ತಿ ಪಂದ್ಯಗಳನ್ನು ಏರ್ಪಡಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ವಿಜಯನಗರದ ಕುಸ್ತಿಯ ಕುರಿತು ಶಾಸನಗಳಲ್ಲಿ ಏನಾದರೂ ಉಲ್ಲೇಖಗಳು ಸಿಗುತ್ತವೆ ಎಂದು ನೋಡಿದಾಗ ಮಾಹಿತಿಗಳು ಲಭ್ಯವಿಲ್ಲ. ಜನಜೀವನದ ಒಂದು ಭಾಗವಾಗಿದ್ದ ಈ ಕಲೆಯ ಬಗ್ಗೆ ಪುರಾವೆಗಳು ಸಿಗುತ್ತಿಲ್ಲ. ಅಸಂಖ್ಯಾತ ಸಮಾಧಿಗಳ ವಿನ್ಯಾಸಗಳನ್ನು ಹೊಂದಿರುವ ಒಂದು ಬೆಟ್ಟದ ತಪ್ಪಲು ಪ್ರದೇಶದಲ್ಲಿ ಒಂದು ಶಾಸನ ದೊರೆತಿದೆ. ವಿಜಯನಗರದ ಪ್ರಜೆಗಳಾಗಿದ್ದ ಮುಸ್ಲಿಮರು ವಾಸವಾಗಿದ್ದ ನೆಲವಿದು. ಇಲ್ಲಿರುವ ಅಸಂಖ್ಯಾತ ಕುರುಹುಗಳನ್ನು ಆಧರಿಸಿ ನಡೆದಿರುವ ಶೋಧನೆಗಳು ಇನ್ನು ಸ್ಪಷ್ಟಪಡಿಸಿವೆ. ಇಲ್ಲಿರುವ ಅಹಮದ್‌ಖಾನ್ ಧರ್ಮಶಾಲೆ(ಮಸೀದಿ) ಹತ್ತಿರದಲ್ಲಿರುವ ಮಂಟಪದ ಗುಂಡಿನಲ್ಲಿ ಶಾಸನವೊಂದನ್ನು ಕೆತ್ತಲಾಗಿದೆ.

ಅ) ಒಂದನೇ ಶಾಸನ: ಕುಸ್ತಿಯಲ್ಲಿ ಮುಸ್ಲಿಮರು

ಕ್ರಿ.ಶ.೧೪೪೧ರ ಕಾಲದ ಈ ಶಾಸನವು ಮುಸ್ಲಿಮ್ ಪೈಲ್ವಾನನೊಬ್ಬನ ಬಗ್ಗೆ ನೀಡುತ್ತದೆ. ಶ್ರೀಮತು ಹಾಮಾದಿಮ ಮೀರಿಪಲುವಾನನು ದಾವಿಮಯನಗ ಮಗ ಬರಿಯಮ ಕೊಟ್ಟ ಮನೆಯ ಕ್ರಮ ಗ(ದೆ) ಅಕ್ಷಾರದಲು ಅರುವರಾಹಕೆ ಬಿಟ್ಟ ಶಾಸನ ಮಲುಖಾನನ ಪಾಗೆ. ಹಾಮಾದಿ ಮಮೀರಿ ಪಾಲುವಾನನು (ಮೀರ್‌ಷಪಹಿಲ್‌ವಾನ್) ಮತ್ತು ದಾವಿಮಯನ ಮಗ ಬರಿಯಮನು ಮಲುಖಾನನಿಗೆ ಮನೆಯೊಂದನ್ನು ಆರು ವರಾಹಗಳಿಗೆ ಕೊಂಡು ದಾಣವಾಗಿ ಕೊಟ್ಟಿದ್ದು ಈ ಶಾಸನದ ಸಾರಾಂಶ.

ಮುಖ್ಯವಾಗಿ ಸೈನ್ಯ ಬಲದಲ್ಲಿ ಅವರಿಗೆ ಪ್ರಾಮುಖ್ಯತೆ ನೀಡಲಾಗಿತ್ತು. ವಿಜಯನಗರದ ಸೈನ್ಯವನ್ನು ಬಲಪಡಿಸುವುದಕ್ಕಾಗಿ ೨ನೇ ದೇವರಾಯನು ಅಶ್ವದಳ, ಪದಾತಿದಳ ಮತ್ತು ಬಿಲ್ಲು ಪಡೆಯಲ್ಲಿ ಹಲವು ಬದಲಾವಣೆಗಳನ್ನು ಮಾಡಿಕೊಂಡಿದ್ದನೆಂದು ತಿಳಿಯುತ್ತದೆ. ಈ ಮೂರು ವಿಧದ ಸಮರಕಲೆಗಳಲ್ಲಿ ಮುಸಲ್ಮಾನರು ಹೆಚ್ಚಿನ ಪರಿಶ್ರಮ ಹೊಂದಿರುವುದನ್ನು ಅರಿತಿದ್ದ ಆತನು, ತನ್ನ ಸೈನ್ಯ ಸಂಘಟನೆಯಲ್ಲಿ ಅವರು ಸೇರುವುದಕ್ಕೆ ಉತ್ತೇಜನ ನೀಡಿದ್ದನು. ಈ ಹಿನ್ನೆಲೆಯಲ್ಲಿ ನೋಡಿದಾಗ ಹಂಪಿಯ ಗುಂಡುಕಲ್ಲಿನ ಮೇಲೆ ಶಾಶ್ವತವಾಗಿ ಶಾಸನದ ರೂಪದಲ್ಲಿ ಉಳಿದುಕೊಂಡ ಮೀರಪಾಲುವಾನನು ಮಲ್ಲಕಲೆಯಲ್ಲಿ ಅನುಭವ ಹೊಂದಿದ ಆ ಕಾಲದ ಪ್ರಸಿದ್ಧ ಪೈಲ್ವಾನನಾಗಿರಬೇಕು ಎಂಬುದರ ಬಗ್ಗೆ ಸಂದೇಹವಿಲ್ಲ.

ಆ) ೨ನೇ ಶಾಸನ: ಕುಸ್ತಿಯಲ್ಲಿ ಮಹಿಳೆಯರು

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಕ್ರಿ.ಶ.೧೪೪೬ರ ಶಾಸನವೊಂದರಲ್ಲಿ ಕುಸ್ತಿ ಕಾಳಗಕ್ಕೆ ಇನ್ನೊಂದು ಆಧಾರವನ್ನು ಒದಗಿಸುತ್ತದೆ ಮತ್ತು ಈ ಕ್ಷೇತ್ರದಲ್ಲಿ ಮಹಿಳೆಯರು ಸಹ ಪರಿಶ್ರಮ ಹೊಂದಿದ್ದರೆಂಬ ವಿಚಾರದ ಮೇಲೆ ಬೆಳಕು ಚೆಲ್ಲುತ್ತದೆ. 'ಎಪಿಗ್ರಾಫಿಕಾ ಕರ್ನಾಟಕ'ದ ೭ನೇ ಸಂಪುಟದಲ್ಲಿ ಸೇರಿರುವ ಈ ಶಾಸನವನ್ನು ಉಲ್ಲೇಖಿಸುತ್ತಾ ಎನ್.ಸರಸ್ವತಿ ನಾಣಯ್ಯ ಅವರು ನಾಗನಗೌಡನ ಮಗ ಮಾದಿಗೌಡನು ಕುಸ್ತಿಯಾಡುತ್ತಿರುವಾಗ ಮರಣ ಹೊಂದಿ ಸ್ವರ್ಗ ಸೇರಿದನು. ಆತನ ಮಗಳ ಹರಿಯಕ್ಕ ತನ್ನ ತಂದೆಯನ್ನು ಕೊಂದ ಕುಸ್ತಿಪಟುವಿನೊಂದಿಗೆ ಕಾದು ತಾನೂ ಸ್ವರ್ಗ ಸೇರಿದಳು. ಈ ವೀರಗಲ್ಲನ್ನು ಅವರ ಚಿಕ್ಕಪ್ಪ ಚೆನ್ನ ನಿಲ್ಲಿಸಿದನು. ವೀರಗಲ್ಲಿನ ಮೇಲಿನ ಭಾಗದಲ್ಲಿ ಒಬ್ಬ ಕುಸ್ತಿಪಟು ನಿಂತಿದ್ದಾನೆ. ಅವನ ಎದುರಿಗೆ ನಿಂತಿರುವ ಹರಿಯಕ್ಕ ಎಡಗೈಯಲ್ಲಿ ಅವನ ಜುಟ್ಟು ಹಿಡಿದು ಬಲಗೈಯಲ್ಲಿ ಖಡ್ಗದಿಂದ ಅವನನ್ನು ಇರಿಯುತ್ತಿದ್ದಾಳೆ. ಇದರಿಂದ ಹಿರಿಯಕ್ಕ ವಿಜಯನಗರ ಕಾಲದಲ್ಲಿ ಪ್ರಖ್ಯಾತ ಕುಸ್ತಿಪಟುವಾಗಿದ್ದಳು ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

ವಿಜಯನಗರ ಕಾಲದ ಮಹಿಳೆಯರು ಮಲ್ಲ ಕಲೆಯಲ್ಲಿ ಪರಿಣಿತರಾಗಿದ್ದರೆ? ಎನ್ನುವುದಕ್ಕೆ

ಸರಿಯಾದ ಶಾಸನಗಳು ಸಿಗುವುದಿಲ್ಲ. ಶಿಕಾರಿಪುರ ಶಾಸನವೊಂದೇ ಏಕೈಕ ಆಧಾರವಾಗಿ ನಿಲ್ಲುತ್ತದೆ. ಆದರೆ ಕರಡಿ ಸಾಧನೆಯ ಕ್ಷೇತ್ರದಲ್ಲಿ ವಿಜಯನಗರದ ಮಹಿಳೆಯರು ಪಾಲ್ಗೊಳ್ಳುತ್ತಿದ್ದರು ಎನ್ನುವುದಕ್ಕೆ ವಿದೇಶಿ ಪ್ರವಾಸಿಗರ ಉಲ್ಲೇಖಗಳಿಂದ ಸಾಹಿತ್ಯ ಕೃತಿಗಳಿಂದ ತಿಳಿಯಬಹುದು. ಮಹಿಳೆಯರ ಕುಸ್ತಿಯಾಟ ಅರಮನೆಯ ರಾಜ, ರಾಣಿಯರನ್ನು ಮನರಂಜಿಸುವ ಕ್ರೀಡೆಯಾಗಿತ್ತೆಂದು ಇದರಿಂದ ತಿಳಿಯುತ್ತದೆ. ಆದರೆ ಅವರು ಬಹಿರಂಗವಾಗಿ ಕುಸ್ತಿ ಪ್ರದರ್ಶನದಲ್ಲಿ ಭಾಗವಹಿಸುತ್ತಿದ್ದರೆ ಎನ್ನುವುದು ತಿಳಿಯುವುದಿಲ್ಲ. ಇದರಿಂದ ಅರಮನೆಯ ದಾಸಿಯರಲ್ಲಿ ಒಂದು ವರ್ಗವು ಮಲ್ಲಕಲೆಯಲ್ಲಿ ಪರಿಣತಿ ಹೊಂದಿತ್ತೆಂದು ತಿಳಿಯುತ್ತದೆ. ಹಂಪಿಯ ಹಜಾರರಾಮ ದೇವಸ್ಥಾನ, ವಿಜಯವಿಠ್ಠಲ ದೇವಾಲಯ ಮುಂತಾದ ಕಡೆಗಳಲ್ಲಿ ಉಬ್ಬುಶಿಲ್ಪ ರಚನೆಯಲ್ಲಿ ಮಹಿಳೆಯರನ್ನು ಹೋರಾಟಗಾರರಾಗಿ ಕುಸ್ತಿಪಟುಗಳಾಗಿ, ಅಂಗರಕ್ಷಕರಾಗಿ, ನೃತ್ಯಗಾರ್ತಿಯರಾಗಿ ಸಂಗೀತಗಾರರಾಗಿ ಚಿತ್ರಿಸಿದ್ದಾರೆ. ಪ್ರವಾಸಿಗರು ನೀಡಿರುವ ವರ್ಣನೆಗಳಿಗೂ ಶಿಲ್ಪಗಳು ನೀಡುವ ಚಿತ್ರಣಕ್ಕೂ ಸಾಮ್ಯತೆ ಇರುವುದು ಸ್ಪಷ್ಟವಾಗುತ್ತದೆ. ನೃತ್ಯ ಶಿಕ್ಷಣಕ್ಕೆ ಪೂರ್ವಭಾವಿಯಾಗಿ ಅಂಗಸೌಷ್ಠವವನ್ನು ಬೆಳೆಸಿಕೊಳ್ಳಲು ಮಹಿಳೆಯರು ನಾನಾ ಬಗೆಯ ವ್ಯಾಯಾಮಗಳನ್ನು ಮಾಡಬೇಕಾಗಿತ್ತು. ವಿಜಯನಗರದ ಅರಮನೆಯಲ್ಲಿ ಸ್ತ್ರೀಯರಿಗಾಗಿ ಪ್ರತ್ಯೇಕ ಗರಡಿ ಮನೆ ಇದ್ದಿತು ಎಂಬುದನ್ನು ದಾಖಲೆಗಳು ಸ್ಪಷ್ಟಪಡಿಸುತ್ತವೆ. ಹಜಾರರಾಮ ದೇವಾಲಯ, ವಿಜಯವಿಠ್ಠಲ ದೇವಾಲಯ, ಅಚ್ಯುತರಾಯ ದೇವಾಲಯ, ವಿರೂಪಾಕ್ಷ ದೇವಾಲಯ, ಮಹಾನವಮಿ ದಿಬ್ಬ, ಕೋಟೆಯ ಹೆಬ್ಬಾಗಿಲು ಇತ್ಯಾದಿ ಕಟ್ಟಡಗಳಲ್ಲಿ ಗೋಡೆ ನಿರ್ಮಾಣಗಳಲ್ಲಿ ಪಟ್ಟಿಕೆಗಳಲ್ಲಿ ಕುಸ್ತಿಯ ಕಲೆ ಬಗ್ಗೆ ಕೆತ್ತನೆ ಮಾಡಲಾಗಿದೆ. ಹಂಪಿಯ ಹಜಾರರಾಮ ದೇವಸ್ಥಾನ, ವಿಜಯವಿಠ್ಠಲ ದೇವಾಲಯ, ಮುಂತಾದ ಕಡೆಗಳಲ್ಲಿ ಉಬ್ಬುಶಿಲ್ಪ ರಚನೆಯಲ್ಲಿ ಮಹಿಳೆಯರನ್ನು ಹೋರಾಟಗಾರರಾಗಿ ಕುಸ್ತಿಪಟುಗಳಾಗಿ, ಅಂಗರಕ್ಷಕರಾಗಿ, ನೃತ್ಯಗಾರ್ತಿಯರಾಗಿ ಸಂಗೀತಗಾರರಾಗಿ ಚಿತ್ರಿಸಿದ್ದಾರೆ. ಪ್ರವಾಸಿಗರು ನೀಡಿರುವ ವರ್ಣನೆಗಳಿಗೂ ಶಿಲ್ಪಗಳು ನೀಡುವ ಚಿತ್ರಣಕ್ಕೂ ಸಾಮ್ಯತೆ ಇರುವುದು ಸ್ಪಷ್ಟವಾಗುತ್ತದೆ.

೨. ಕೋಲಾಟ

ಹಂಪಿ ಪರಿಸರದಲ್ಲಿ ಇರುವ ಜನಪದ ಆಟಗಳಲ್ಲಿ ಕೋಲಾಟ ಒಂದು. ಇದು ಸಮೂಹ ನೃತ್ಯ. ಇದರಲ್ಲಿ ಸಾಮಾನ್ಯವಾಗಿ ಹೆಣ್ಣುಗಂಡುಗಳಿಬ್ಬರೂ ಭಾಗವಹಿಸುತ್ತಾರೆ. ದೇಶದ ಎಲ್ಲಾ ಕಡೆಯೂ ಈ ನೃತ್ಯ ಕಂಡುಬರುತ್ತದೆ. ಇದು ತುಂಬಾ ಪ್ರಾಚೀನ ಪಶುಪಾಲಕ, ಕೃಷಿ ಬದುಕಿನ ಜನಸಮುದಾಯಗಳಲ್ಲಿ ಅದರಲ್ಲು ಬುಡಕಟ್ಟು ಸಮುದಾಯಗಳಲ್ಲಿ ಈ ಕಲೆ ಹೆಚ್ಚಾಗಿ ಕಂಡು ಬರುತ್ತದೆ. ವಿಜಯನಗರ ಸಾಮ್ರಾಜ್ಯದ ಹಂಪಿ ಪರಿಸರದಲ್ಲಿ ಕಂಡುಬರುವ ಕೋಲಾಟದ ಉಬ್ಬುಶಿಲ್ಪಗಳು ಹೆಚ್ಚಾಗಿ ಹೆಂಗಸರು ನೃತ್ಯ ಮಾಡುತ್ತಿರುವಂತೆ ಕೆತ್ತಲಾಗಿದೆ. ಅದಕ್ಕೆ ಹೌದೆಂಬಂತೆ ಈ ಪ್ರದೇಶದಲ್ಲಿ ಅದರಲ್ಲೂ ವಿಶೇಷವಾಗಿ ಗೌರಿಹುಣ್ಣಿಮೆಯ ಸಂದರ್ಭದಲ್ಲಿ ಹೆಣ್ಣುಮಕ್ಕಳು

ಗೌರಿ ಕೋಲು ಹಾಕುತ್ತಾ ಕುಣಿಯುತ್ತ ಮನೆಮನೆಗೆ ಸಂಚರಿಸಿರುವ ಸಂಪ್ರದಾಯ ವರ್ಷದ ಗೌರಿಹುಣ್ಣಿಮೆ ಸಂದರ್ಭದಲ್ಲಿ ಕಂಡುಬರುತ್ತದೆ. ಅದೇ ರೀತಿ ಹುಡುಗರು ಸಹ ಕೋಲಾಟದಲ್ಲಿ ಸಾಕಷ್ಟು ಪರಿಣಿತಿ ಪಡೆದಿದ್ದು, ಅನೇಕ ಕಡೆ ವಿಶೇಷ ದಿನಗಳಲ್ಲಿ ಕೋಲಾಟದ ಪ್ರದರ್ಶನಗಳನ್ನು ನೀಡುತ್ತಾರೆ. ಬಗೆಬಗೆಯ ಕೋಲಾಟದ ಶಿಲ್ಪಗಳನ್ನು ಹಂಪಿಯ ಮಹಾನವಮಿ ದಿಬ್ಬ, ಹಜಾರರಾಮ, ಮಾಲ್ಯವಂತ ರಘುನಾಥ, ವಿರೂಪಾಕ್ಷ, ವಿಠ್ಠಲ, ಕೃಷ್ಣ ದೇವಾಲಯದ ಭಿತ್ತಿ ಮತ್ತು ಕಂಬಗಳಲ್ಲಿರುವ ಶಿಲ್ಪಗಳು ಅಂದಿನ ಕೋಲಾಟವನ್ನು ನಮಗೆ ಪರಿಚಯಿಸುತ್ತೇವೆ.[೪೦]

ಕೂಡ್ಲಿಗಿ ತಾಲ್ಲೂಕಿನ 'ಹುಡೇಂ' ಗ್ರಾಮದ ಸಣ್ಣ ಮಲ್ಲಯ್ಯ ಎನ್ನುವ ಕೋಲಾಟದ ಕಲಾವಿದ "ಹಂಪೆಯ ಹಾಡು" ಎನ್ನುವ ಕೋಲಾಟದ ಪದದ ಮೂಲಕ ಹಂಪಿಯ ವೈಶಿಷ್ಟ್ಯತೆಯನ್ನು ಹೀಗೆ ಹೇಳುತ್ತಾರೆ:

ಮಂದಾಲಗಿರಿ ಪರ್ವತವಣ್ಣ

ಮೊದಲೆಂಗಿದ್ದಲ್ಲೊ ಹಂಪೆ ವಿರೂಪಾಕ್ಷನ

ತೇರು ನೋಡವರು ಬಳವಿಲ್ಲ

ಉತ್ತರದೇಶ ತೆಂಕಣ ಪಡವಲು

ಹುಟ್ಟತಣ್ಣ ವಿರೂಪಾಕ್ಷನ ತೇರು

ಆರು ಗಾಲಿನ ಕೀಲು ಮಂಟಪ

ಕೀಲು ನತ್ತಿಲಿ ಬಳೆಗಳ ಪಿಡಿದು

ಟೆಂಗಿನ ಎಣ್ಣೆಪುಸಿದ್ದರಣ್ಣ

ಮಂಡೆಗೆಣ್ಣೆ ತಿಡಿದರಣ್ಣ

ಮಂದಾಲಗಿರಿ ಪರ್ವತವಣ್ಣ ॥ಪ॥ (ಡಾ.ವಿರೂಪಾಕ್ಷಿ ಪೂಜಾರಹಳ್ಳಿರವರು ತಮ್ಮ 'ವಾಲ್ಮೀಕಿ ಸಿರಿ' ಎನ್ನುವ ಕೃತಿಯ ಪುಟ. ೧೨೮ರಲ್ಲಿ ಸಂಪಾದಿಸಿದ್ದಾರೆ.)

ಅಂದು ಹಂಪೆಯ ವಿರುಪಾಕ್ಷನ ತೇರು ಅತಿ ವಿಜೃಂಭಣೆಯಿಂದ ಜರುಗುತ್ತಿತ್ತು ಮತ್ತು ವೀಕ್ಷಿಸಲು ದಿಕ್ಕು ದಿಕ್ಕಿನಿಂದ ಜನರು ಆಗಮಿಸುತ್ತಿದ್ದರು ಎನ್ನುವುದನ್ನು ಈ ಹಾಡು ಸೂಚಿಸುತ್ತದೆ. ಅದೇ ರೀತಿ ಹಂಪೆ ಕ್ಷೇತ್ರದ ನಿಸರ್ಗರಮಣಿಯವಾದ ವರ್ಣನೆ, ಮನಕ್ಕೆ ಮುದ ನೀಡುವ ಕಲೆ, ಸಂಸ್ಕೃತಿಗೆ ಹೆಸರಾಗಿರುವ ಈ ಕ್ಷೇತ್ರದ ಸುಂದರವಾದ ತುಂಗಭದ್ರಾ ನದಿ, ಇಲ್ಲಿ ಸುತ್ತಲು ಬಾಳೆಯ ವನದಿಂದ ಆವೃತ್ತವಾಗಿರುವ ತೋಟಗಳು, ತೆಂಗಿನವನವು ಈ ಕ್ಷೇತ್ರಕ್ಕೆ ಸೊಬಗನ್ನು ಹೆಚ್ಚಿಸುತ್ತವೆ ಎನ್ನುವ ವಿವರ ಇರುವ ಮತ್ತೊಂದು ಕೋಲಾಟದ ಹಾಡನ್ನು ಅದೇ ಕೃತಿಯ ಆ ಹಾಡಿನ ವಿವರ ಇಂತಿದೆ:

ಚಂದರಗುತ್ತಿ ಮುಂದೆ ಮುಂದೆ ಒತ್ತಿ

ಒತ್ತಲಿರುವ ಗಂಗೋತ್ರಿಯ ಹೊಳೆಯು

ಬಸವನ ಜಾಗ್ಯವು ಬಾಳೆಯ ವನವು

ಕಾಯಿಕೋಲು ತೆಂಗಿನ ವನವು

ಸಾಲು ಲೋಲು ಸಂಪಿಗೆ ವನವು.....

ತಾಳೆಮದ್ದಲೆ ಟಮಟೆ ಗುಡಿ-ಗುಡಿ

ಬೋರಂಬೊ ವಾರ್ತೆಗಳಣ್ಣ

ಕೋಲಾಟ ಮೆಲ್ಲಟಗಳಣ್ಣ

ಚೆಂಡಿನ ಆಟ ಚೆಂಡು ಬಗರಿ ಆಟ

ಭಾಗವಂತರ ಸೋಗುಗಳು

ಪಾತುರಾದವು ವಯಭೋಗಗಳು (ಪುಟ.೧೨೯ರಲ್ಲಿ ಅದೇ ಲೇಖಕರು ದಾಖಲಿಸಿದ್ದಾರೆ.)

ಹೀಗೆ ಸಣ್ಣಮಲ್ಲಯ್ಯನವರ ಧ್ವನಿಯಲ್ಲಿ ಮಧುರವಾದ ಜನಪದ ಕೋಲಾಟದ ಗೀತೆಗಳಲ್ಲಿ "ಹಂಪೆ ಕ್ಷೇತ್ರದ" ಶ್ರೇಷ್ಠತೆಯನ್ನು ಮತ್ತು ಈ ಸಾಮ್ರಾಜ್ಯದ ವೈಶಿಷ್ಟ್ಯತೆಯು ಜೀವಂತವಾಗಿ ಉಳಿದು ಕೊಂಡಿದೆ.

೩. ಕೊರವಂಜಿ ಕುಣಿತ

ಅಂದಿನ ಪ್ರಮುಖ ಕಲೆಗಳಲ್ಲಿ ಕೊರವಂಜಿ ಕುಣಿತವೂ ಒಂದಾಗಿತ್ತು. ಈ ಅಧ್ಯಯನದ ದೃಷ್ಟಿಯಿಂದ ಪ್ರಮುಖವಾಗಿದೆ. ರಾಜ ತನ್ನ ದ್ವಾರಗಳೊಳಗೆ ನಾಲ್ಕು ಸಾವಿರಕ್ಕೂ ಹೆಚ್ಚು ಸ್ತ್ರೀಯರನ್ನು ಹೊಂದಿದ್ದಾನೆ ಎಂಬುದಾಗಿ ಸಿವೆಲ್ ತಿಳಿಸುತ್ತಾನೆ. ಆದರೆ ಅವರೆಲ್ಲ ಸಂಗೀತ ಹಾಗೂ ನೃತ್ಯಗಾರ್ತಿಯರು, ಕಣಿ ಹಾಗೂ ಭವಿಷ್ಯ ನುಡಿಯುವ ಸ್ತ್ರೀಯರೂ ಎಂಬುದಾಗಿ ತಿಳಿದುಬರುತ್ತದೆ. ಅಲ್ಲದೆ ಕಣಿ ಪುಟ್ಟಿ ಹಿಡಿದು ನರ್ತಿಸುತ್ತಿರುವ ಕೊರವಂಜಿಯ ಉಬ್ಬುಶಿಲ್ಪವೊಂದು ಮಾಲ್ಯವಂತ ರಘನಾಥ ದೇವಾಲಯದ ಮುಖಮಂಟಪದಲ್ಲಿ ಕಂಡುಬರುತ್ತದೆ.[೪೧] ರಾಜನಿಗೆ ಸಾಮ್ರಾಜ್ಯದ ಅಭಿವೃದ್ಧಿ, ಪ್ರಜೆಗಳ ಏಳ್ಗೆಗಳ ಬಗೆಗೆ ವರದಿ ಸಲ್ಲಿಸಿ ಮಾರ್ಗದರ್ಶನ ನೀಡುತ್ತಿದ್ದ ಪುರೋಹಿತಶಾಹಿಗಳಂತೆಯೇ ರಾಜನ ಕಷ್ಟ, ಸುಖ ಮುಂದೆ ಆತನ ಆಡಳಿತದಲ್ಲಿನ ಸುಧಾರಣೆ, ಮಾರ್ಪಾಡುಗಳು, ಜನಸಾಮಾನ್ಯರ ಅಭಿಪ್ರಾಯಗಳನ್ನು ಸಂಗ್ರಹಿಸುವ ಮೂಲಕ ರಾಜನಿಗೆ ಆತನ ಆಡಳಿತದ ಸುಸ್ಥಿತಿಯ ವಿಷಯದಲ್ಲಿ ಕಣಿ ಕೊರವಂಜಿಗಳು ಮಹತ್ವದ ಪಾತ್ರವಹಿಸುತ್ತಿದ್ದರು.

೪. ಓಕುಳಿಯಾಟ

ವಿಜಯನಗರ ಸಾಮ್ರಾಜ್ಯದ ಕಾಲಕ್ಕೆ ನಡೆಯುತ್ತಿದ್ದ ಮಹಾನವಮಿ, ವಸಂತೋತ್ಸವಗಳಂತೆ ಓಕಳಿಯಾಟವೂ ಒಂದು. ಇದರಿಂದಾಗಿ ದೊಡ್ಡ ದೊಡ್ಡ ಉತ್ಸವಗಳಲ್ಲಿ ಓಕಳಿಯಾಟ ಮಹತ್ವ ಪಡೆದುಕೊಂಡಿತ್ತು. ಅಂದು ನಗರದ ಪ್ರಮುಖ ಬೀದಿಗಳಲ್ಲಿ ಅಲ್ಲಿಗಲ್ಲಿಗೆ ತುಂಬಿಟ್ಟ ಬಣ್ಣದ ನೀರಿನಿಂದ ಓಕುಳಿಯಾಡುತ್ತಿದ್ದ ಬಗ್ಗೆ ಉಲ್ಲೇಖಗಳು ಕಂಡುಬರುತ್ತವೆ. ಅದನ್ನು ಮಹಾನವಮಿ ದಿಬ್ಬ, ವಿಠ್ಠಲ ದೇವಸ್ಥಾನಗಳಲ್ಲಿನ ಹಲವಾರು ಉಬ್ಬುಶಿಲ್ಪಗಳಲ್ಲಿ ಕಾಣಬಹುದು.[೪೨] ಈ ಮೂಲಕ ವಿಜಯನಗರದಲ್ಲಿನ ಸಾಂಸ್ಕೃತಿಕ ಬದುಕಿನ ಮತ್ತೊಂದು ಮುಖದ ಪರಿಚಯವಾಗುತ್ತದೆ. ಪಂಪನು ಹೇಳುವಂತೆ 'ಮಾನವ ಕುಲಂ ತಾನೊಂದೆ ವಲಂ.......'ಎನ್ನುವಂತೆ ಎಲ್ಲಾ ಮನುಷ್ಯರು ಕೂಡಿ ಆಡುವ ಈ ಆಟವು ಅಂದಿಗೂ ಉತ್ಕೃಷ್ಟವಾಗಿ ಆಡುತ್ತಿದ್ದರೆಂದು ಇದರಿಂದ ತಿಳಿಯುತ್ತದೆ.

೫. ದೊಂಬರಾಟ

ದೊಂಬರು ಮೂಲತಃ ಒಂದು ಅಲೆಮಾರಿ ಸಮುದಾಯ. ಇವರು ತಮ್ಮ ಜೀವನ ವೃತ್ತಿಯಾಗಿ ದೈಹಿಕ ಕಸರತ್ತುಗಳನ್ನು ಮಾಡುವುದರ ಮೂಲಕ ಪ್ರದರ್ಶನ ಜೀವನ ನಡೆಸುತ್ತಾರೆ. ದೊಂಬರು ಮಾಡಿ ತೋರಿಸುವ ದೈಹಿಕ ಕಸರತ್ತಿನ ಆಟವನ್ನು ದೊಂಬರಾಟ ಎಂದು ಕರೆಯುತ್ತಾರೆ. ವಿಜಯನಗರ ಪೂರ್ವದ ಆನೆಗೊಂದಿ ಹಾಗೂ ಕಂಪಲಿ ಪಟ್ಟಣಗಳ ಚರಿತ್ರೆಯಲ್ಲಿ ಈ ಸಮುದಾಯದ ಪಾತ್ರ ಮಹತ್ವದ್ದಾಗಿದೆ. ಕಂಪಿಲರಾಯನ ಹೆಂಡತಿ ಹರಿಯಲಾದೇವಿಗೆ ಮಕ್ಕಳಿಲ್ಲದ ಕಾರಣ ಕಂಪಿಲರಾಯ ರತ್ನಾಜಿಯನ್ನು ಮದುವೆಯಾಗುತ್ತಾನೆ. ಈ ರತ್ನಾಜಿಯ ವಂಶದವರು ನಾವು ಎಂದು ದೊಂಬರು ಹೇಳಿಕೊಳ್ಳುತ್ತಾರೆ. "ಕಂಪಲಿಯ ಕುಮಾರರಾಮನ ಚರಿತ್ರೆ ಜನಸಾಮಾನ್ಯರ ಮೌಖಿಕ ಸಂಸ್ಕೃತಿಯಲ್ಲಿ ಸ್ಥಾನಪಡೆದುಕೊಂಡಿದೆ. ರತ್ನಾಜಿ ತನ್ನ ಸಾಕು ಮಗ ಕುಮಾರರಾಮನನ್ನೇ ತನ್ನ ಕಾಮತೃಷೆಗೆ ಬಯಸಿದ ಆಶಯವಂತೂ ಕನ್ನಡ ನಾಡಿನ ತುಂಬೆಲ್ಲ ಮನೆಮಾತಾಗಿದೆ. ಅಂದು ಈ ಆಟ ಒಂದು ಜನಪ್ರಿಯ ಆಟವಾಗಿತ್ತು ಎನ್ನುವುದಕ್ಕೆ ಮಹಾನವಮಿ, ವಿಠ್ಠಲ, ಹಜಾರರಾಮ ಮೊದಲಾದ ಸ್ಮಾರಕಗಳ ಮೇಲೆ ಕೆತ್ತಲ್ಪಟ್ಟ ಶಿಲ್ಪಗಳೇ ಸಾಕ್ಷಿಯಾಗುತ್ತವೆ."[೪೩]

೬. ಹಾವಾಡಿಗರು

ಜನಪದರ ಮೌಖಿಕ ಸಾಹಿತ್ಯ ಅನನ್ಯವಾದುದು. 'ಉದರ ನಿಮಿತ್ತಂ ಬಹುಕೃತವೇಷಂ' ಎಂಬಂತೆ ಹೊಟ್ಟೆಪಾಡಿಗಾಗಿ ಹತ್ತಾರು ವೇಷಕಟ್ಟಿರುವ ಜಂಗಮ, ಜೋಗಿ, ದಾಸಯ್ಯ ಹಾವಾಡಿಗರು ಈ ನಗರದಲ್ಲಿ ಇದ್ದ ಬಗ್ಗೆ ಸಾಹಿತ್ಯ ಗ್ರಂಥಗಳಲ್ಲಿ ಹಾಗೂ ವಿದೇಶಿ ಪ್ರವಾಸಿಗರ ಬರಹಗಳಿಂದ ತಿಳಿದುಬರುತ್ತದೆ. ವಿಜಯನಗರ ಮಹಾನವಮಿ ಹಬ್ಬದ ಸಂದರ್ಭದಲ್ಲಿ

ಹಾವಾಡಿಗರ ಪ್ರದರ್ಶನಗಳು ನಡೆಯುತ್ತಿದ್ದ ಬಗ್ಗೆ ಹೇಳಲಾಗಿದೆ. ವಿಜಯ ವಿಠ್ಠಲ ದೇವಸ್ಥಾನದ ಕಲ್ಲಿನ ರಥಕ್ಕೆ ಎದುರಾಗಿ, ಸಂಗೀತದ ಕಲ್ಲಿನ ಕಂಬದ ಕೆಳಗೆ ಬುನಾದಿ ಚೌಕಟ್ಟಿನ ಸಮೀಪ ಹೊರಮೈಗೆ ಪುಂಗಿ ಊದುತ್ತಾ ಹಾವು ಹಾಡಿಸುತ್ತಿರುವ ಜೊತೆಗೆ ಕೋತಿಯನ್ನು ಕಟ್ಟಿಕೊಂಡಿರುವ ಹಾವಾಡಿಗರ ಅಪರೂಪದ ಉಬ್ಬುಶಿಲ್ಪ ಕಂಡುಬರುತ್ತದೆ. ಈ ಮೂಲಕ ವಿಜಯನಗರದ ಕಾಲಕ್ಕೆ ಹಾವಾಡಿಗರು ಹಾಗೂ ಆ ಕಲೆ ಜೀವಂತವಾಗಿದ್ದ ಬಗೆಗೆ ತಿಳಿದುಬರುತ್ತದೆ.

೭. ಹುಲಿಮನೆಯಾಟ

ಜನಪದರು ತಮ್ಮ ಬೇಸರಕಳೆಯಲು ಆಡುತ್ತಿದ್ದ ಹಲವಾರು ಆಟಗಳಲ್ಲಿ ಈ ಆಟ ಪ್ರಮುಖವಾಗಿದೆ. ಹುಲಿಮನೆಯಾಟದ ನಕಾಶೆಗಳು ಎಲ್ಲ ಗ್ರಾಮಗಳ ಕಟ್ಟೆಯ ಮೇಲೆ ಕೆತ್ತಲಾಗಿರುತ್ತದೆ. ಸಾಮಾನ್ಯವಾಗಿ ಎಲ್ಲಾ ಗ್ರಾಮೀಣ ಬದುಕಿನ ಜನರಲ್ಲಿ ಪ್ರಚಲಿತವಿರುವ ಆಟ ಹುಲಿಮನಿ ಆಟ. ಕೃಷಿ ಹಾಗೂ ಪಶುಪಾಲರ ಬದುಕಿನ ಸಮುದಾಯಗಳಲ್ಲಿ ಇಂದಿಗೂ ಹೆಚ್ಚಾಗಿ ಕಂಡುಬರುತ್ತದೆ. ಈ ಆಟಕ್ಕೆ ತ್ರಿಭುಜಾಕಾರದ ನಕಾಶೆ ಪಟ ಬರೆದು ಅದರ ಒಂದೊಂದು ಗೆರೆಗಳು ಸಂದಿಸುವ ಸ್ಥಳಗಳಲ್ಲಿ ಒಂದು ಎರಡು ನಾಲ್ಕು ಹೀಗೆ ಹುಲಿ ಎಂಬುದಾಗಿ ಸಂಕೇತಿಸಿ ಕೆಲವು ಕಲ್ಲುಗಳನ್ನು ಇಡುತ್ತಾರೆ. ಅನಂತರ ಹೆಚ್ಚಿನ ಸಂಖ್ಯೆಯ ಸಣ್ಣ ಸಣ್ಣ ಕಲ್ಲುಗಳನ್ನು ನಕಾಶೆಯ ಗೆರೆಗಳು ಸಂದಿಸುವ ಸ್ಥಳಗಳಲ್ಲಿ ಇಟ್ಟಿರುತ್ತಾರೆ. ಇಲ್ಲಿ ಆಟ ನಡೆಯುವುದು ಹುಲಿ ಮತ್ತು ಆಕಳುಗಳನ್ನು ತಿನ್ನಲು ಹೊಂಚು ಹಾಕುವುದು. ಅದರಿಂದ ಆಕಳು ಹೇಗೆ ತಪ್ಪಿಸಿಕೊಳ್ಳಬೇಕು ಹುಲಿ ಹೇಗೆ ಬಂಧಿಸಿಡಬೇಕು ಎಂಬ ಚಿಂತನ ಮಂತನದ ಚಾಣಾಕ್ಷ ಆಟ ಇದಾಗಿದೆ. ಈ ಆಟಕ್ಕೆ ಸಂಬಂಧಿಸಿದ ನಕಾಶೆಗಳು ಹಂಪಿಯ ದೇವಾಲಯಗಳ ಕಟ್ಟೆ ಇಲ್ಲವೇ ಬಜಾರುಗಳ ಕಟ್ಟೆಯ ಮೇಲೆ ಇಲ್ಲವೇ ನೈಸರ್ಗಿಕ ಬಂಡೆಯ ಮೇಲೆ ಕೊರೆಯಲಾಗಿದ್ದು, ಈ ಆಟ ಅಂದು ಜನಪ್ರಿಯವಾಗಿತ್ತು ಎನ್ನುವುದಕ್ಕೆ ಸಾಕ್ಷಿಯಾಗಿವೆ.[೪೪]

೮. ಪಗಡೆಯಾಟ

ಪಗಡೆಯಾಟದ ಉಲ್ಲೇಖ ಮಹಾಭಾರತದಲ್ಲಿ ಕಂಡು ಬರುತ್ತದೆ. ಅಲ್ಲದೆ ದೇಶದಾದ್ಯಂತ ಈ ಆಟ ಪ್ರಚಲಿತವಿದ್ದರೂ ಹುಲಿಮನಿ ಆಟದಂತೆ ಜನಸಾಮಾನ್ಯರಿಂದ ಇದು ಹೆಚ್ಚಾಗಿ ಆಡಲ್ಪಡುವುದಿಲ್ಲ. ಹೆಚ್ಚಾಗಿ ಮಧ್ಯಮವರ್ಗದ ಜನರಲ್ಲಿ ಈ ಆಟ ಪ್ರಚಲಿತದಲ್ಲಿದೆ. ಇದು ಪ್ರಭುತ್ವಶಾಹಿ ಜನರ ಆಟವೂ ಹೌದು. ವಿಶೇಷ ಹಬ್ಬ ಹುಣ್ಣಿಮೆಯ ಸಂದರ್ಭದಲ್ಲಿ ಪಗಡೆಯಾಟ ಆಡುತ್ತಾರೆ. ಇದಕ್ಕೆ ಸಂಬಂಧಿಸಿದ ನಕಾಶೆಗಳು ಹಂಪಿಯ ಕೆಲವು ಸ್ಮಾರಕಗಳಲ್ಲಿ ಇರುವುದನ್ನು ಕಾಣಬಹುದಾಗಿದೆ.

೯. ಮೂರು ಮನೆಯಾಟ

ಹಿಂದೆ ಹಂಪಿಯಲ್ಲಿ ಜನಪದರು ಆಡುತ್ತಿದ್ದ ಆಟಗಳಲ್ಲಿ ಮತ್ತೊಂದು ಪ್ರಮುಖ ಆಟ

ಎಂದರೆ ಮೂರು ಮನೆಯಾಟ. ಇಲ್ಲಿ ಪ್ರಮುಖವಾಗಿ ಇಬ್ಬರು ಆಟಗಾರರು ಪರಸ್ಪರ ಎದುರು-ಬದುರಾಗಿ ಕುಳಿತು ಆಟವಾಡುತ್ತಾರೆ. ಒಂದು ಚೌಕದ ಒಳಗೆ ಇನ್ನೊಂದು, ಅದರೊಳಗೆ ಮತ್ತೊಂದು ಹೀಗೆ ಮೂರು ಚೌಕಗಳಿರುತ್ತವೆ. ಮೂರು ಚೌಕಗಳಿಗೂ ನಾಲ್ಕು ದಿಕ್ಕುಗಳಿಂದ ಮೂರು ಚೌಕಗಳನ್ನು ಸ್ಪರ್ಶಿಸುವಂತೆ ಗೆರೆಗಳನ್ನು ಎಳೆಯಲಾಗುತ್ತದೆ. ಆಟವಾಡುವಾಗ ಯಾವುದೇ ರೀತಿಯ ವಸ್ತುಗಳನ್ನು ಲೆಕ್ಕಾಚಾರ ಅಥವಾ ಉರುಳು ಬಿಡಲು ಬಳಸುವುದಿಲ್ಲ. ಇದೊಂದು ಮಾನಸಿಕ ಕಸರತ್ತಿನ ಆಟವೇ ಸರಿ. ಇದಕ್ಕೆ ಸಂಬಂಧಿಸಿದ ನಕಾಶೆಗಳು ಹಂಪಿಯಲ್ಲಿನ ವಿರೂಪಾಕ್ಷ, ವಿಠ್ಠಲ ದೇವಾಲಯ ಮತ್ತು ಅಲ್ಲಿರುವ ಮಂಟಪಗಳ ಮೇಲೆ ಮತ್ತು ಕೆಲ ನೈಸರ್ಗಿಕ ಬಂಡೆಗಳ ಮೇಲೆ ಕೆತ್ತಿರುವುದನ್ನು ಕಾಣಬಹುದಾಗಿದ್ದು, ಈ ಆಟ ಜನಪ್ರಿಯವಾಗಿತ್ತು ಎಂಬುದಕ್ಕೆ ಸಾಕ್ಷಿಯಾಗಿವೆ.

೧೦. ಚನ್ನಮಣೆಯಾಟ

ಗ್ರಾಮೀಣ ಒಳಾಂಗಣದ ಆಟಗಳಲ್ಲಿ ಚನ್ನಮಣೆ ಆಟವೂ ಒಂದು. ಸಾಮಾನ್ಯವಾಗಿ ಈ ಒಳಾಂಗಣದ ಆಟಗಳನ್ನು ಮಹಿಳೆಯರು ಹಾಗೂ ಹೆಣ್ಣು ಮಕ್ಕಳು ಆಡುತ್ತಾರೆ. ಸುಮಾರು ಎರಡೂವರೆ ಅಡಿ ಉದ್ದ ಹಾಗೂ ಒಂದು ಅಡಿ ಅಗಲದ ಮರದ ಹಲಗೆಯ ಮೇಲೆ ಏಳೇಳು ಗುಣಿಗಳ ಎರಡು ಸಾಲುಗಳಿರುತ್ತವೆ. ಒಂದೊಂದು ಸಾಲಿನ ಗುಣಿಗಳಿಗೆ ಎದುರು-ಬದುರಾಗಿ ಇಬ್ಬರು ಆಟಗಾರರು ಕುಳಿತು ಈ ಆಟವಾಡುತ್ತಾರೆ. ಗುಣಿಗೆ ಸಾಮಾನ್ಯವಾಗಿ ಹುಣಿಸೆ ಬೀಜ, ಅಂಟುವಾಳು ಬೀಜ, ಗುಲಗಂಜಿ ಬೀಜಗಳನ್ನು ಬಳಸುತ್ತಾರೆ. ಈ ಆಟವನ್ನು ಹರಳುಮಣೆ ಆಟ ಎಂದು ಸಹ ಕರೆಯುತ್ತಾರೆ. ಇದಕ್ಕೆ ಸಂಬಂಧಿಸಿದ ನಕಾಶೆಗಳು ಹಂಪಿಯಲ್ಲಿನ ವಿರೂಪಾಕ್ಷ, ವಿಠ್ಠಲ ದೇವಾಲಯ ಮತ್ತು ಅಲ್ಲಿರುವ ಮಂಟಪಗಳ ಮೇಲೆ ಮತ್ತು ಕೆಲ ಆಸು, ಹುಟ್ಟು ಕಲ್ಲು ಬಂಡೆಗಳ ಮೇಲೆ ಕೆತ್ತಿರುವುದು ಕಾಣಬಹುದಾಗಿದೆ.

೧೧. ಚೌಕಾದ ಮನಿಯಾಟ

ಇದು ಪಗಡೆಯಾಟದಷ್ಟೇ ಜನಪ್ರಿಯವಾದ ಆಟ, ಇದನ್ನು ಚೌಕದ ಮನಿ ಆಟ ಎಂಬುದಾಗಿಯೂ ಕರೆಯುತ್ತಾರೆ. ಸ್ತ್ರೀಯರು ಹೆಚ್ಚಾಗಿ ಈ ಆಟವನ್ನು ಆಡುತ್ತಾರೆ. ಹೀಗೆ ಹಂಪಿ ಪರಿಸರದ ಸ್ಮಾರಕಗಳಲ್ಲಿ ಹಲವಾರು ಬಗೆಯ ಜನಪದ ಆಟಗಳ ನಕಾಶೆ ಪಟಗಳು ಕಂಡು ಬರುತ್ತವೆ. ಆದರೆ ಇವುಗಳನ್ನು ಕೆಲವು ಅಂದಿನ ದೇವಾಲಯ ಹಾಗೂ ಜಿನಾಲಯಗಳು ಪೂಜೆಗೊಳ್ಳುವ ಕಾಲಕ್ಕೆ ದೇವಾಲಯಗಳ ಜಗಲಿ ಹಾಗೂ ರಂಗಮಂಟದ ಹಾಸುಬಂಡೆಗಳ ಮೇಲೆ ಬಿಡಿಸಲ್ಪಟ್ಟಿವೆ. ಮಳೆ ಇಲ್ಲದಾಗ ಚನ್ನಮಣೆ ಆಟವಾಡಿದರೆ ಮಲೆ ಬರುತ್ತದೆ ಎಂಬ ನಂಬಿಕೆ ಇಲ್ಲಿನ ಜನಪದರಲ್ಲಿದೆ.[೯೫]

೬.೩. ಪ್ರಮುಖ ಹಬ್ಬ, ಜಾತ್ರೆಗಳ ಹಿನ್ನೆಲೆಯಲ್ಲಿ ಹಂಪಿಯ ಸಂಸ್ಕೃತಿ

ತುಂಗಭದ್ರಾ ನದಿ ತೀರದ ಪವಿತ್ರ ಯಾತ್ರಾ ಸ್ಥಳವಾದ ಹಂಪಿಯನ್ನು 'ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ' ಎಂದು; ಪಂಪಾಕ್ಷೇತ್ರ, ಪಂಪಾಸ್ಥಳ, ಭಾಸ್ಕರಕ್ಷೇತ್ರ, ಹೊಸಪಟ್ಟಣ,

ವಿಜಯದ ನಗರ, ವಿಜಯನಗರ, ದಕ್ಷಿಣಕಾಶಿ ಎಂದು ಕರೆಯಲಾಗುತ್ತದೆ. ಇಲ್ಲಿನ ಹೇಮಕೂಟದಲ್ಲಿ ಪಾರ್ವತಿ, ಶಿವನಿಗೋಸ್ಕರ ತಪಸ್ಸುಮಾಡಿ ಶಿವನನ್ನು ಪಡೆದಳು ಎಂಬ ಪ್ರತೀತಿ ಇಲ್ಲಿದೆ. ಈ ವಿವರವನ್ನು ೧೨ನೇ ಶತಮಾನದ ಹರಿಹರ ಕವಿಯು ತನ್ನ 'ಗಿರಿಜಾಕಲ್ಯಾಣ'ದಲ್ಲಿ ಉಲ್ಲೇಖಿಸಿದ್ದಾನೆ. ಇದೇ ವಿವರವನ್ನು 'ತಿರುವಣಮಲ್ಲೈ ಸ್ಥಳಪುರಾಣ' ಮತ್ತು 'ಪಂಪಾಮಹಾತ್ಮೆ' ಕೃತಿಗಳು ಸಹ ಉಲ್ಲೇಖಿಸಿವೆ. 'ಸ್ಕಂದಪುರಾಣವು' ಈ ಪಂಪಾಕ್ಷೇತ್ರವನ್ನು 'ಶಾಕ್ತ' ಕೇಂದ್ರವೆಂದು ಕರೆದಿದೆ. ವಿಜಯನಗರದ ಕಾಲವಧಿಯಲ್ಲಿ(ಕ್ರಿ.ಶ.೧೪-೧೬) ಶೈವ ಮತ್ತು ವೈಷ್ಣವ ಧರ್ಮಗಳ ಪರಸ್ಪರ ತಿಕ್ಕಾಟ ಮತ್ತು ಸಾಂಸ್ಕೃತಿಕ ರಾಜಕಾರಣದ ಪರಿಣಾಮವಾಗಿ ಹಂಪಿ ಬಹುಪ್ರಾಮುಖ್ಯತೆ ಪಡೆದುಕೊಂಡಿತು. ಮೇಲ್ವರ್ಗದ ಹಿಂದೂ ಜನರಿಗೆ ಉತ್ತರ ಭಾರತದ ಕಾಶಿ ಎಷ್ಟು ಮುಖ್ಯವೋ ಅದೇ ರೀತಿ ದಕ್ಷಿಣ ಭಾರತದ ಹಂಪಿ ಸಹ ಅವರ ದೃಷ್ಟಿಯಲ್ಲಿ ಅಷ್ಟೇ ಪ್ರಾಮುಖ್ಯತೆ ಪಡೆದಿದೆ. ಇದೊಂದು ಪ್ರವಾಸಿ ತಾಣಕ್ಕಿಂತಲೂ ಅಧಿಕವಾಗಿ ಬಹು ಪ್ರಾಚೀನ ಕಾಲದಿಂದಲೂ ಜನರ ಯಾತ್ರಾ ಸ್ಥಳವಾಗಿ, ಅವರ ವಿವಿಧ ಆಚರಣೆಗಳ ಧಾರ್ಮಿಕ ಕೇಂದ್ರವಾಗಿ ಅತ್ಯಂತ ಪ್ರಮುಖ ಪಾತ್ರವನ್ನು ನಿರ್ವಹಿಸಿದೆ. ಹಂಪೆಯಲ್ಲಿ ಪ್ರಾಚೀನ ಕಾಲದಿಂದಲೂ ವೈದಿಕ ಶೈವ ಮತ್ತು ವೈಷ್ಣವ ಶಾಖೆಗಳು ಬೇರುಬಿಟ್ಟಿವೆ. ಇದು ಜೈನರ ಧಾರ್ಮಿಕ ಸ್ಥಳ ಮಾತ್ರವಾಗಿರದೆ, ಅನೇಕ ಅವೈದಿಕ ಪಂಥಗಳ ಕೇಂದ್ರ ಸ್ಥಾನವೂ ಆಗಿತ್ತೆಂದು ತಿಳಿಯುತ್ತದೆ. ಧಾರ್ಮಿಕ ರಾಜಕಾರಣದಲ್ಲಿ ಉಳಿದ ಬಲಹೀನ ಮತಪಂಥಗಳು ಮೂಲೆ ಗುಂಪಾಗಿ ಶೈವ ಮತ್ತು ವೈಷ್ಣವ ಪಂಥಗಳು ಮಾತ್ರ ಪ್ರಧಾನ ನೆಲೆಗೆ ಏರಿದಂತೆಯೂ ಕಾಣುತ್ತದೆ. ಧರ್ಮದ ಪರಮ ಪದಕ್ಕಾಗಿ ಇವೆರಡೂ ಶಾಖೆಗಳ ನಡುವೆ ಸಾಂಸ್ಕೃತಿಕ ಸಂಘರ್ಷಗಳು ನಡೆದಿವೆ. ವೈಷ್ಣವ ಪರಂಪರೆ ಬಿಂಬಿಸಲು ರಾಮನ ಬಂಟ ಹನುಮನು ಉದಿಸಿದ ಕಿಷ್ಕಿಂದೆಯ ನಾಡಾಗಿಯೂ ಹಂಪೆ ಪ್ರಸಿದ್ಧಿ ಪಡೆದಿದೆ. ರಾಮಾಯಣ ಪ್ರಸ್ತಾಪಿತ ಪಂಪಾಕ್ಷೇತ್ರ ಹಂಪೆಯ ಪಂಪಾಕ್ಷೇತ್ರವೆಂದು ನಂಬಿರುವ ಪರಿಣಾಮವಾಗಿ ಧರ್ಮ ರಾಜಕಾರಣದ ಆಧಾರ ಪಠ್ಯವಾಗಿ ಕಿಷ್ಕಿಂದೆ ಕಾಂಡ ಅನುಕೂಲವಾಗಿ ಒದಗಿದೆ. ಇಲ್ಲಿನ ಅಂಜನಾದ್ರಿ ಬೆಟ್ಟ, ಸುಗ್ರೀವ ಗುಹೆ, ಸೀತೆ ಸೆರಗು ಮೊದಲಾದ ಸ್ಥಳಗಳ ಕುರಿತು ಹಲವಾರು ಐತಿಹ್ಯಗಳು ಹುಟ್ಟಿಕೊಂಡಿವೆ. ಇವು ಮೌಖಿಕ ಪರಂಪರೆಯಲ್ಲಿ ಇಂದಿಗೂ ಕಾರ್ಯನಿರ್ವಹಿಸುತ್ತಿವೆ. ಇದನ್ನು ಆಧರಿಸಿ ಹುಯಿಲಗೋಳ ನಾರಾಯಣರಾಯರು ಪಂಪಾಕ್ಷೇತ್ರವನ್ನು 'ಹನುಮನುದಿಸಿದ ನಾಡೆ'ಂದು ಹಾಡಿದ್ದಾರೆ.

ಹಂಪಿ, ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ, ಅಂದಿನ ಮುಖ್ಯ ಆಡಳಿತದ ಕೇಂದ್ರವಾಗಿ ಮೆರೆದಿದೆ. ಪುರಾಣ ಕಾಲದಿಂದ ಪ್ರಸಿದ್ಧವಾಗಿರುವ ಇದು, ಹಲವು ತೆರನಾದ ವೈಶಿಷ್ಟ್ಯಗಳಿಗೆ ಹೆಸರು ವಾಸಿಯಾಗಿದೆ. ನಿಗದಿತ ಕಾಲಗಳಲ್ಲಿ ಇಲ್ಲಿನ ಸ್ಥಳೀಯರು ನಡೆಸುವ ಹಬ್ಬ ಹರಿದಿನಗಳು ಮತ್ತು ಜಾತ್ರೆಗಳಲ್ಲಿ ಇಲ್ಲಿನ ಸ್ಥಳೀಯ ಸಂಸ್ಕೃತಿ ಅನಾವರಣಗೊಳ್ಳುವುದನ್ನು ಕಾಣಬಹುದು. ಇವುಗಳ ಆಧಾರದಿಂದ ಇಲ್ಲಿನ ಸಾಂಸ್ಕೃತಿಕ ಇತಿಹಾಸ ಪುನರ್ ರಚಿಸಬಹುದು. ಈ ಹಿನ್ನೆಲೆಯಲ್ಲಿ ಹಂಪಿ ಭಾಗದ ದೇವಾಲಯಗಳಲ್ಲಿ ನಡೆಯುವ ಪ್ರಮುಖ ಹಬ್ಬ,

ಜಾತ್ರೆಗಳನ್ನು ಅವಲೋಕಿಸುವುದು ಸೂಕ್ತವೆನಿಸುತ್ತದೆ. ಆದ್ದರಿಂದ ಇಲ್ಲಿ ನಡೆಯುವ ಪ್ರಮುಖ ಆಚರಣೆ, ಹಬ್ಬ, ಜಾತ್ರೆಗಳನ್ನು ಅ) ದೇವಾಲಯಗಳ ಆಚರಣೆಗಳಲ್ಲಿ ಹಂಪಿಯ ಸಂಸ್ಕೃತಿ ಆ) ಹಬ್ಬಗಳಲ್ಲಿ ಹಂಪಿಯ ಸಂಸ್ಕೃತಿ ಇ) ಜಾತ್ರೆಗಳಲ್ಲಿ ಹಂಪಿಯ ಸಂಸ್ಕೃತಿ ಎಂದು ವಿಭಾಗಿಸಿಕೊಂಡು ಇಲ್ಲಿ ಅಧ್ಯಯನ ಮಾಡಲಾಗಿದೆ.

ಅ) ದೇವಾಲಯಗಳ ಆಚರಣೆಗಳಲ್ಲಿ ಹಂಪಿಯ ಸಂಸ್ಕೃತಿ

ಹಂಪಿಯಲ್ಲಿ ಇಂದು ಪೂಜೆಗೊಳ್ಳುವ ದೇವಾಲಯಗಳಲ್ಲಿ ಶ್ರೀ ವಿರೂಪಾಕ್ಷ ಮತ್ತು ಪಂಪಾದೇವಿ ಮತ್ತು ಮಾಲ್ಯವಂತ ರಘುನಾಥ, ಉದ್ಧಾನ ವೀರಭದ್ರ ದೇವಾಲಯಗಳು ಪ್ರಮುಖವಾಗಿವೆ. ಅವುಗಳಲ್ಲಿ ಶ್ರೀ ವಿರೂಪಾಕ್ಷ ಮತ್ತು ಪಂಪಾಂಬಿಕೆಯರ ದೇವಾಲಯಗಳಲ್ಲಿ ನಡೆಯುವ ಪ್ರಮುಖ ಆಚರಣೆಗಳ ಮೂಲಕ ಹಂಪಿಯ ಸಂಸ್ಕೃತಿಯನ್ನು ಅವಲೋಕಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಹಂಪೆಯ ಕವಿ ಹರಿಹರ ಪಂಪಾಕ್ಷೇತ್ರದಲ್ಲಿ 'ಹಿರಿಯ ಹಂಪಾದೇವಿ ಚಿಕ್ಕ ಹಂಪಾದೇವಿ ನಲವಿಂದಲೊಪ್ಪುತಿರೆ' ಎಂದು ಉಲ್ಲೇಖಿಸಿದ್ದಾನೆ. ಇದು ವಿರೂಪಾಕ್ಷ ದೈವದಸ್ಥಾನವನ್ನು ಸ್ಪಷ್ಟೀಕರಿಸುತ್ತದೆ. ಅಂದು ಹಂಪಿಯ ಮೂಡಲಲ್ಲಿ ಕಿನ್ನರೇಶ್ವರ, ತೆಂಕಣದಲ್ಲಿ ಜಂಬುಕೇಶ್ವರ, ಪಶ್ಚಿಮದಲ್ಲಿ ಸೋಮೇಶ್ವರ, ಉತ್ತರದಲ್ಲಿ ವಾಣಿಭದ್ರೇಶ್ವರರು ನೆಲೆಸಿದ ಪಂಪಾಪುರದ ಗಡಿರೇಖೆಗಳನ್ನು ಸೂಚಿಸಿ ಇದರ ಮಧ್ಯದಲ್ಲಿ ಶ್ರೀ ವಿರೂಪಾಕ್ಷ ರಾಜನಂತೆ ಶೋಭಿಸುತ್ತಿದ್ದ ಎಂದು ಉಲ್ಲೇಖಿಸಲಾಗಿದೆ. ಅದರಲ್ಲಿ ಪಂಪಾ ಸರೋವರವೇ ಪಂಪಾಕ್ಷೇತ್ರದ ಆದಿಯೆಂದೂ, ದೇವತೆ ಮೊದಲು ಆಮೇಲೆ ಊರು ಎಂದೂ ಪ್ರತಿಪಾದಿಸಿ ಶೈವ ಹಿರಿಮೆ ಸಾರಲಾಗಿದೆ. 'ಪಂಪಾ ಮಹಾತ್ಮೆ'ಯಲ್ಲಿ ಉಲ್ಲೇಖಿತವಾಗಿರುವ

'ಪಂಪಾ ತಾಯಿಲಿಂದ ಹಂಪೀಗೆ ಹೆಸರಾತು।

ಹಂಪವ್ವನ ಒರಗಿದ ಪಂಪಾಪತಿ. ತಾನು।

ಪಂಪಾ ಸರುವರದಾಗ ಕುಳತಾನ'

ಎಂಬ ಜನಪದ ತ್ರಿಪದಿ ಪಂಪಾದೇವಿ ಮತ್ತು ಪಂಪಾ ಸರೋವರವೆ ಪಂಪಾಕ್ಷೇತ್ರದ ಮೂಲವೆಂದು ಸಾರುತ್ತದೆ.[೪೬]

ವಿರೂಪಾಕ್ಷ ದೇವಾಲಯದಲ್ಲಿ ನಡೆಯುವ ಕೆಲವು ಆಚರಣೆಗಳಿಂದ ಇಲ್ಲಿನ ಸ್ಥಳೀಯ ಸಂಸ್ಕೃತಿಯನ್ನು ಗುರುತಿಸಬಹುದಾಗಿದೆ. ಇಂದು ಹಂಪಿ ಪರಿಸರದಲ್ಲಿ ಹಲವು ಸಮುದಾಯಗಳಿಗೆ ಸೇರಿದ ಜನರು ವಾಸವಾಗಿದ್ದಾರೆ. ಅವರು ಶ್ರೀ ವಿರೂಪಾಕ್ಷನಿಗೆ ಸಂಬಂಧಿಸಿದಂತೆ ಕೆಲ ಅಚರಣೆಗಳನ್ನು ಪ್ರಸಕ್ತ ದಿನಮಾನಗಳಲ್ಲಿಯೂ ಮುಂದುವರಿಸಿಕೊಂಡು ಬಂದಿದ್ದಾರೆ. ಅವರಲ್ಲಿ ವೀರಶೈವ, ವಾಲ್ಮೀಕಿ ಅಥವಾ ಬೇಡರು, ಕುರುಬರು, ಡೊಂಬರು, ಗೊಲ್ಲರು, ದೊಕ್ಕಲರು, ಹೆಳವರು ಮತ್ತು ವೇಷಗಾರರು ಮೊದಲಾದವರು ಪ್ರಮುಖವಾಗಿದ್ದಾರೆ. ಇವರು ಹಂಪಿಯ

ಇತಿಹಾಸದೊಂದಿಗೆ ಮತ್ತು ವಿರೂಪಾಕ್ಷನೊಂದಿಗೆ ಭಾವನಾತ್ಮಕ ಸಂಬಂಧವಿರಿಸಿಕೊಂಡಿದ್ದಾರೆ. ಅವರಲ್ಲಿ ವಾಲ್ಮೀಕಿ ಅಥವಾ ಬೇಡರು ಹಂಪಿ ಸುತ್ತಲ ಗಾಮಗಳಲ್ಲಿ ಪ್ರಬಲ ಸಂಖ್ಯೆಯಲ್ಲಿದ್ದಾರೆ. ಇವರು ಯುಗಾದಿ ಮರುದಿವಸ ನಡೆಸುವ 'ಬೇಟೆ ಮರದ ಆಚರಣೆ' ಈ ಸಮುದಾಯದ ಬುಡಕಟ್ಟು ಚಹರೆಯನ್ನು ತೋರಿಸುತ್ತದೆ.[೪೭] ಇವರು ಜನಪದ ದೈವಗಳನ್ನು ಪ್ರಧಾನವಾಗಿ ಆರಾಧಿಸುತ್ತಾರೆ. ಹಂಪಿ ಜಾತ್ರೆಯ ಸಂದರ್ಭದಲ್ಲಿ ವಿಶೇಷವಾಗಿ ವಿರೂಪಾಕ್ಷನಿಗೆ ನಡೆದುಕೊಳ್ಳುತ್ತಾರೆ. ಇವರು ವಿರೂಪಾಕ್ಷನ ರಥೋತ್ಸವದಲ್ಲಿ ಮೊದಲು ಮಿಣೆಗೆ(ರಥ ಎಳೆಯುವ ಹಗ್ಗಕ್ಕೆ) ಕೈಹಾಕಿ ರಥ ಎಳೆಯುತ್ತಾರೆ. ಕುರುಬರು ಹಂಪಿಯ ಮೂಲ ವಿರೂಪಾಕ್ಷ ಮೂಲತಃ ಬೀರಪ್ಪ ಅಥವಾ ಬೀರೆ ದೇವರು ಎಂದು ಹೇಳುತ್ತಾರೆ. ಹಂಪಿಯ ಸುತ್ತಲಿನ ಅದರಲ್ಲೂ ವಿಶೇಷವಾಗಿ ಸಮಾಜದ ತಳಸಮುದಾಯಗಳಲ್ಲಿ ರೂಢಿಗತವಾಗಿರುವ ಕೆಲ ನಂಬಿಕೆ ಮತ್ತು ಆಚರಣೆಗಳು ಶ್ರೀ ವಿರೂಪಾಕ್ಷ ಯಾವ ಮೂಲದವನೆಂಬುದನ್ನು ಪತ್ತೆ ಮಾಡಲು ನಮಗೆ ಸಹಾಯಕವಾಗಿವೆ. ಈ ಸಮುದಾಯಗಳಲ್ಲಿನ ಕೆಲವರು ಇಂದಿಗೂ ವಿರೂಪಾಕ್ಷನ ಪರವಾಗಿ, ಇನ್ನು ಕೆಲವರು ಪಂಪಾಂಬಿಕೆಯ ಪರವೆಂದು ಹೇಳಿಕೊಂಡು ಕೆಲವು ಆಚರಣೆಗಳನ್ನು ಪ್ರತಿನಿತ್ಯ ಇಲ್ಲವೇ ಕೆಲ ವಿಶೇಷ ದಿನಗಳಂದು ಆಚರಿಸುವುದು ಗಮನಾರ್ಹವಾಗಿದೆ. ವಿಶೇಷವಾಗಿ ಹಂಪಿಯಲ್ಲಿ ನಡೆಯುವ ಫಲಪೂಜೆ ಮತ್ತು ಜಾತ್ರೆಗಳಲ್ಲಿ ಇಂದಿಗೂ ನಡೆಯುವ ಆಚರಣೆಗಳು ವಿರೂಪಾಕ್ಷನ ಮೂಲವನ್ನು ತುಲನಾತ್ಮಕವಾಗಿ ವಿಶ್ಲೇಷಿಸಲು ನಮಗೆ ಸಹಾಯಕವಾಗಿವೆ.[೪೮] ಇಲ್ಲಿ ನಡೆಯುವ ಆಚರಣೆಗಳನ್ನು ದೇವಾಲಯದಲ್ಲಿ ಪ್ರತಿನಿತ್ಯ ನಡೆಯುವ ಆಚರಣೆಗಳು ಮತ್ತು ದೇವರ ಹೆಸರಿನಲ್ಲಿ ಹೊರಗಡೆ ನಡೆಯುವ ಆಚರಣೆಗಳು ಎಂದು ಎರಡು ಭಾಗ ಮಾಡಿಕೊಂಡು ಅಭ್ಯಾಸ ಮಾಡಲಾಗಿದೆ.

೧) ದೇವಾಲಯದಲ್ಲಿ ಪ್ರತಿ ನಿತ್ಯ ನಡೆಯುವ ಆಚರಣೆಗಳು

ಈ ದೇವಾಲಯದಲ್ಲಿ ಆಗಮ ಶಾಸ್ತ್ರಕ್ಕನುಗುಣವಾಗಿ ಶೈವಾಗಮ ಪದ್ಧತಿ ಪ್ರಕಾರ ಹಲವು ರೀತಿಯ ಪೂಜೆ-ಪುನಸ್ಕಾರಗಳನ್ನು ಇಲ್ಲಿ ತಪ್ಪದೇ ನಡೆಸಲಾಗುತ್ತದೆ.[೪೯] ಇಲ್ಲಿ ನಡೆಯುವ ಮತ್ತು ನಡೆಸುವ ಆಚರಣೆಗಳನ್ನು ಈ ಮುಂದಿನಂತೆ ವಿಭಾಗಿಸಬಹುದು.

ಅ) ಪ್ರತಿನಿತ್ಯದ ಆಚರಣೆಗಳು

ಆ) ವಿಶೇಷ ದಿನಗಳಂದು ನಡೆಸುವ ಆಚರಣೆಗಳು

ಇ) ಹಬ್ಬಗಳಂದು ನಡೆಸುವ ಆಚರಣೆಗಳು

ಈ) ಜಾತ್ರೆ ಮತ್ತು ಉತ್ಸವಗಳಲ್ಲಿ ನಡೆಸುವ ಆಚರಣೆಗಳು

ಅ) ಪ್ರತಿನಿತ್ಯದ ಆಚರಣೆಗಳು

ಅಭಿಷೇಕ, ಅಲಂಕಾರ, ಅರ್ಚನೆ, ಮಂಗಳಾರತಿಗಳನ್ನು ವಾರದ ಪ್ರತಿ ದಿನವೂ ತಪ್ಪದೇ ನಿಯಮದಿಂದ ಮಾಡಲಾಗುತ್ತದೆ. ಅಲ್ಲದೇ ಭಕ್ತಾಧಿಗಳ ಇಷ್ಟಾನುಸಾರವಾಗಿ ವಿವಿಧ ಅಭಿಷೇಕ ಮತ್ತು ಅಲಂಕಾರಗಳನ್ನು ಮಾಡಲಾಗುತ್ತದೆ ಮತ್ತು ಪ್ರತಿ ದಿನ ಶ್ರೀ ಸ್ವಾಮಿಗೆ ಮೂರು ಭಾರಿ (ತ್ರಿಕಾಲವೂ) ಹೋಳಿಗೆ ಮತ್ತು ಅನ್ನದ ನೈವೇದ್ಯ ಮಾಡಲಾಗುತ್ತದೆ. ಅಲ್ಲದೆ ಮಂಗಳ ವಾದ್ಯಗಳ ಸಮೇತ ಬಲಿಪೀಠಗಳಿಗೆ ಅನ್ನದ ಬಲಿಯನ್ನು ಹಾಕಲಾಗುತ್ತದೆ.

ಆ) ವಿಶೇಷ ದಿನಗಳಂದು ನಡೆಯುವ ಆಚರಣೆಗಳು

ಪ್ರತಿ ಸೋಮವಾರವನ್ನು ವಾರದ ದಿನವೆಂದು ಪರಿಗಣಿಸಲಾಗಿದೆ. ಅಂದು ನಿತ್ಯ ಪೂಜೆಗಳ ಜೊತೆಗೆ ಎರಡು ಭಾರಿ ವಿಶೇಷ ಪೂಜೆಯನ್ನು ಮತ್ತು ಅಭೀಷೇಕವನ್ನು ಭಕ್ತಿ ಭಾವದಿಂದ ನಡೆಸಲಾಗುತ್ತದೆ. ಅಲ್ಲದೇ ಪ್ರತಿ ಹುಣ್ಣಿಮೆ ಮತ್ತು ಅಮವಾಸ್ಯೆಯಂದು ವಿಶೇಷ ಪೂಜೆಗಳನ್ನು ಇಲ್ಲಿ ನಡೆಸಲಾಗುತ್ತದೆ.

ಇ) ಹಬ್ಬಗಳಂದು ನಡೆಯುವ ಆಚರಣೆಗಳು

ಪ್ರತಿ ದೇವಿ ನವರಾತ್ರಿಯಲ್ಲಿ ಪ್ರತಿ ದಿನ ಮುಂಜಾನೆ ಮತ್ತು ಸಂಜೆ 'ಶ್ರೀಚಕ್ರಾರ್ಚನೆ' ವಿಶೇಷ ಪೂಜೆಯನ್ನು ನಡೆಸಲಾಗುತ್ತದೆ. ಅಲ್ಲದೆ ವಿದ್ಯಾರಣ್ಯಮಠದ ಪೂಜ್ಯ ಗುರುಗಳು ಬಂದು ಶ್ರೀ ದೇವಿಯ ಕುಂಕುಮಾರ್ಚನೆಯನ್ನು ತಾವೇ ನಡೆಸಿಕೊಡುವುದು ವಿಶೇಷವಾಗಿದೆ. ಇಲ್ಲಿ ನವರಾತ್ರಿಯ ಒಂದು ದಿನ ಚಂಡಿಹೋಮವನ್ನು ವಿಶೇಷವಾಗಿ ನಡೆಸಲಾಗುತ್ತದೆ.

ಈ) ಜಾತ್ರೆ ಮತ್ತು ಉತ್ಸವಗಳಲ್ಲಿ ನಡೆಸುವ ಆಚರಣೆಗಳು

ಪ್ರತಿ ವರ್ಷ ನಡೆಯುವ ವಿರುಪಾಕ್ಷೇಶ್ವರ ಜಾತ್ರೆಯಲ್ಲಿ ದೇವಿಗೆ ವಿಶೇಷ ಪೂಜೆ ಮಾಡಲಾಗುತ್ತದೆ. ಅಲ್ಲದೆ ಹಂಪಿ ಉತ್ಸವದ ಸಂದಭದಲ್ಲಿ ತಾಯಿ ಭುವನೇಶ್ವರಿಯ ಉತ್ಸವ ಮೂರ್ತಿಯನ್ನು ಮೆರವಣಿಗೆ ಮಾಡಲಾಗುತ್ತದೆ.

೨. ದೇವರ ಹೆಸರಿನಲ್ಲಿ ಹೊರಗಡೆ ನಡೆಯುವ ಆಚರಣೆಗಳು

ಪಂಪಾದೇವಿ ಮತ್ತು ಪಂಪಾಪತಿಗೆ ಸಂಬಂಧಿಸಿದ ಫಲಪೂಜೆ ಮತ್ತು ಹಂಪಿ ಜಾತ್ರೆ ಆಚರಣೆಗಳಲ್ಲಿ ಹಂಪಿ ಪರಿಸರದ ಸುತ್ತಲ ಗ್ರಾಮಗಳ ಜನ ಪ್ರವಾಹದ ಸಂಖ್ಯೆಯಲ್ಲಿ ಸೇರುತ್ತಾರೆ. ಪ್ರತಿವರ್ಷ ಡಿಸೆಂಬರ್ ತಿಂಗಳಿನಲ್ಲಿ ವಿರೂಪಾಕ್ಷ ಮತ್ತು ಪಂಪಾಬಿಕೆಯರ ಮದುವೆಯ ನಿಶ್ಚಿತಾರ್ಥದ(ಎಂಗೇಜ್ ಮೆಂಟ್) ಪ್ರತೀಕವಾಗಿ ಫಲಪೂಜೆ ಆಚರಣೆ ನಡೆಯುತ್ತದೆ. ಈ ಸಂದರ್ಭದಲ್ಲಿ ಹಂಪಿಗೆ ಬಂದ ಜನರೆಲ್ಲ ಮದುಮಗಳು ಮತ್ತು ಮದುಮಗನ ಪರವಾಗಿ ಎರಡು ಗುಂಪುಗಳಾಗುತ್ತಾರೆ. ಅವರೆಲ್ಲ ಉತ್ತರಕ್ಕೆ ತಿರುಗುವ ನದಿ ದಂಡೆಯ ಚಕ್ರತೀರ್ಥದ ಬಳಿ ಸೇರುತ್ತಾರೆ. ಆ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಅ) ಫಲಪೂಜೆ

ಹಂಪಿಯಲ್ಲಿ ನಡೆಯುವ ಆಚರಣೆಗಳಲ್ಲಿ ಫಲಪೂಜೆ ಆಚರಣೆ ಮಹತ್ವವಾಗಿದೆ. ಏಕೆಂದರೆ ಇದು ಹಂಪಿಯ ಸ್ಥಳೀಯ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಸಾಮಾನ್ಯವಾಗಿ ನವೆಂಬರ್ ಇಲ್ಲವೇ ಡಿಸೆಂಬರ್ ತಿಂಗಳಲ್ಲಿ ಈ ಫಲಪೂಜೆ ಆಚರಣೆ ನಡೆಯುತ್ತದೆ. ಮೂರು ದಿನಗಳ ಕಾಲ ನಡೆಯುವ ಈ ಫಲಪೂಜೆ ಕಾರ್ಯಕ್ರಮದಲ್ಲಿ ತೆಪ್ಪೋತ್ಸವ ಮತ್ತು ವಿರೂಪಾಕ್ಷ ಮತ್ತು ಪಂಪಾಂಬಿಕೆಯರ ಮದುವೆ ನಿಶ್ಚಯ ಶಾಸ್ತ್ರಗಳು ಮುಖ್ಯವಾಗಿ ನಡೆಯುತ್ತವೆ. ವಿರೂಪಾಕ್ಷ ದೇವಾಲಯದ ಸಮೀಪ ಇರುವ ಮನ್ಮಥ ಹೊಂಡದಲ್ಲಿ ಸಾಮಾನ್ಯವಾಗಿ ತೆಪ್ಪೋತ್ಸವನ್ನು ಮೊದಲು ನಡೆಸಲಾಗುತ್ತದೆ. ಅಲ್ಲಿ ವಿರೂಪಾಕ್ಷಸ್ವಾಮಿಯನ್ನು ತೆಪ್ಪದಲ್ಲಿ ಕುಳ್ಳಿರಿಸಿ ಇಂದಿನ ವಿದ್ಯಾರಣ್ಯ ಪೀಠದ ಗುರುಗಳು ದೇವರನ್ನು ಪೂಜಿಸಿ ತೆಪ್ಪೋತ್ಸವ ನಡೆಯುವ ಒಪ್ಪಿಗೆ ಸೂಚಿಸುತ್ತಾರೆ. ನಂತರ ತೆಪ್ಪೋತ್ಸವ ಕಾರ್ಯಕ್ರಮ ಜರುಗುತ್ತದೆ. ಆದಾದ ಮರುದಿನ ಫಲಪೂಜೆ ಕಾರ್ಯಕ್ರಮ ನಡೆಯುತ್ತದೆ. ಸುತ್ತಲ ಹಳ್ಳಿಗಳ ಜನರು ದೈವದವರು ಚಕ್ರತೀರ್ಥದ ಬಳಿಯ ರಾಮಲಕ್ಷ್ಮಣ ಗುಡಿಯ ಬಳಿ ಸೇರಿರುತ್ತಾರೆ. ಆ ನಂತರ ಶ್ರೀ ವಿರೂಪಾಕ್ಷನನ್ನು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ತಂದು ಅಲ್ಲಿರುವ ಕಟ್ಟೆಯ ಮೇಲೆ ಕೂರಿಸಿ ಆ ನಂತರ ವಿವಿಧ ಧಾರ್ಮಿಕ ವಿಧಿಗಳು ಮುಗಿದ ಮೇಲೆ ಅಲ್ಲಿ ಬಂದಿರುವವರಲ್ಲಿ ಅರ್ಧಜನರು ಮತ್ತು ರಾಮ-ಲಕ್ಷ್ಮಣಗುಡಿಯ ಅರ್ಚಕರು ಹೆಣ್ಣಿನಕಡೆ(ಪಂಪಾಂಬಿಕೆ) ಮತ್ತು ವಿರೂಪಾಕ್ಷ ದೇವಾಲಯದ ಅರ್ಚಕರು, ಮತ್ತೇ ಕೆಲವರು ಗಂಡಿನಕಡೆ ಮಾತನಾಡಲು ಆರಂಭಿಸುತ್ತಾರೆ. ಸಂಪ್ರದಾಯಬದ್ಧವಾಗಿ ವಧುವಿಗೆ ವರನ ಕಡೆಯವರು ಇಂತಿಷ್ಟು ತೆರ ಮತ್ತು ಒಡವೆಗಳನ್ನು ಕೊಡಬೇಕೆಂದು ಮತ್ತು ಮದುವೆ ದಿನಾಂಕ(ಹಂಪಿಯ ಜಾತ್ರೆ)ವನ್ನು ಗೊತ್ತು ಮಾಡಿಕೊಳ್ಳುತ್ತಾರೆ. ಇದು ಫಲಪೂಜೆ ಎಂದು ಪ್ರಸಿದ್ಧಿ ಆಗಿದ್ದು, ಇದನ್ನು ನೋಡುವುದು ಅದೃಷ್ಟ ಎಂದು ಭಾವಿಸುತ್ತಾರೆ. ಅದಕ್ಕಾಗಿಯೇ ಈ ಭಾಗದಲ್ಲಿ ಪಡೆದವನಿಗೆ ಫಲಪೂಜೆ ದತ್ತಗೇಡಿಗೆ(ನತದೃಷ್ಟನಿಗೆ) ಹಂಪಿ ಪರಿಷೆ ಎನ್ನುವ ಗಾದೆ ಮಾತು ಹುಟ್ಟಿಕೊಂಡಿದೆ. ಗಂಡಿನ ಕಡೆಯವರು ಹೆಣ್ಣು ಕೇಳುವ ಎಲ್ಲ ಆಚರಣೆಗಳನ್ನು ಅನುಸರಿಸುತ್ತಾರೆ. ಎರಡೂ ಕಡೆಯವರು ವೀಳ್ಯ ವಿನಿಮಯ ಮಾಡಿಕೊಂಡು ಮಧ್ಯ ರಾತ್ರಿಯವರೆಗೆ ಸಂಬಂಧ ಕುದುರಿಸುವ ಮಾತುಕತೆ ನಡೆಸುತ್ತಾರೆ. ಕೊನೆಗೆ ಹಂಪಿ ದೈವಗಳ ಮದುವೆ ನಿಶ್ಚಯವಾಗುತ್ತದೆ. ನಿರ್ಧಾರದ ಪ್ರಕಾರ ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ಪಂಪಾದೇವಿ ಮತ್ತು ಪಂಪಾಪತಿಯರ ಮದುವೆಯ ಪ್ರತೀಕವಾಗಿ ಹಂಪಿಯ ಜಾತ್ರೆ ಪ್ರತಿ ವರ್ಷ ನಡೆಯುತ್ತದೆ. ಆದರೂ ಗಿಡ ಮರಗಳಿಗೆ ಕಲ್ಲು ಕಟ್ಟುವ ಅಥವಾ ಸಣ್ಣ ಕಲ್ಲಿನಲ್ಲಿ ಮಂಟಪ ಕಟ್ಟುವ ಆಚರಣೆಯ ಮೂಲ ತಾಣ, ಇಂದು ಹಂಪಿಯಲ್ಲಿ ನಡೆಯುವ ಫಲಪೂಜೆ ಆಚರಣೆಯ ಮೂಲವಾಗಿದೆ. ಇಲ್ಲಿನ ದೈವ ಕಲ್ಪನೆ ಯಾವ ಕಾಲಘಟ್ಟದಲ್ಲಿ ಮೂಡಿತೆಂದು ಹೇಳಲು ಆಧಾರಗಳಿಲ್ಲದಿದ್ದರೂ ಜನಪದ ನಂಬಿಕೆ ಶೈವ ಪುರಾಣವನ್ನೇ ಅನುಸರಿಸಿದೆ ಎಂದು

ಹೇಳಬಹುದು. ಹಂಪಿ ಸುತ್ತಲಿನ ಕೆಳಸ್ತರದ ಜನರಲ್ಲಿ ಇದೇ ಪ್ರಕಾರದ ನಿಶ್ಚಯ ಶಾಸ್ತ್ರಗಳು ನೇರವೇರಿವುದನ್ನು ನಾವು ಇಂದಿಗೂ ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಈ ಆಚರಣೆ ಇಲ್ಲಿನ ಕೆಲ ಕೆಳವರ್ಗಗಳಲ್ಲಿ ಆಚರಿಸಲ್ಪಡುವ ಆಚರಣೆಗಳ ಪ್ರತೀಕವಾದ ಆಚರಣೆಯಾಗಿದೆ. ಒಟ್ಟಿನಲ್ಲಿ ಈ ಆಚರಣೆಯಿಂದ ಬಹು ಮುಖ್ಯವಾದ ಕೆಲ ಸಂಗತಿಗಳನ್ನು ಇಲ್ಲಿ ಅವಲೋಕಿಸಬಹುದು.

ಸಾಮಾನ್ಯ ಮನುಷ್ಯರ ಮದುವೆ ಆಚರಣೆಗಳನ್ನೆಲ್ಲ ಈ ಮದುವೆಯಲ್ಲೂ ನಡೆಸಲಾಗುತ್ತದೆ. ಆರಂಭದಲ್ಲಿ ತೇರು ಎಳೆಯುವ ಹೊಣೆಗಾರಿಕೆ ಸ್ಥಳೀಯ ಬೇಡ ಸಮುದಾಯದವರಿಗಲ್ಲದೆ ಬೇರೆಯವರಿಗಿಲ್ಲ. ಈ ಎರಡೂ ಆಚರಣೆಗಳಲ್ಲಿ ಮದುವೆಯೆಂಬ ಸಾಮಾಜಿಕ ಸಂಸ್ಥೆಯ ಮೇಲೆ ಧಾರ್ಮಿಕ ಮುಸುಕು ಆವರಿಸಿಕೊಂಡಿರುವುದು ಎದ್ದು ಕಾಣುವ ಅಂಶವಾಗಿದೆ. ಇದು ಸಹ ಶ್ರೀ ವಿರುಪಾಕ್ಷ ಹೊರಗಿನಿಂದ ಬಂದು ಇಲ್ಲಿ ಕಾಲ ಕ್ರಮೇಣ ನೆಲೆನಿಂತನೆಂಬುದನ್ನು ಧ್ವನಿಸುತ್ತದೆ. ವಿಜಯನಗರ ಸ್ಥಾಪನೆಯ ಆರಂಭದಿಂದಲೂ ರಾಜವಂಶದವರಿಂದ ಪೂಜಿಸಲ್ಪಟ್ಟ ಇಲ್ಲಿಯ ಶೈವ ಪರಂಪರೆ ಎಲ್ಲ ಕಾಲಕ್ಕೂ ಮಾನ್ಯವಾಗಿದೆ. ಹಂಪೆಯ ದೈವ ವೈದಿಕ ಕುಲ ಸಂಜಾತನಾಗಿದ್ದು, ಪರಿಶಿಷ್ಟರ ಮನೆಯಳಿಯನಾಗಿದ್ದಾನೆ. ವಿರೂಪಾಕ್ಷ ದೇವಾಲಯದಲ್ಲಿ ವಿರೂಪಾಕ್ಷನ ಪತ್ನಿಯರ ಸಾಲಿನಲ್ಲಿ ಪಂಪಾದೇವಿ, ಭುವನೇಶ್ವರಿಯರನ್ನು ಇರಿಸಲಾಗಿದೆ. ಪಂಪಾದೇವಿಯನ್ನು ವಿರೂಪಾಕ್ಷ ವರಿಸಿರುವುದು–ಹಂಪೆಯ ಸ್ಥಳೀಯ ಸ್ತ್ರೀ ದೈವ ಆರಾಧಕ ಕೆಳಸಮುದಾಯಗಳು ಇಂಥ ವಿವಾಹ ವ್ಯವಸ್ಥೆಗೆ ಒಳಪಟ್ಟಿವೆಯೆಂದು ಕಾಣಿಸುತ್ತದೆ. ಬಿಳಿಗಿರಿ ರಂಗನಲ್ಲಿ ಕುಸುಮಬಾಲೆ ಮತ್ತು ಮಾದೇಶ್ವರನಲ್ಲಿ ಸೋಲಿಗರ ಸಂಕಮ್ಮ ಬಳಕೆಯಾಗಿರುವ ಹಾಗೆಯೆ ವಿರೂಪಾಕ್ಷನಲ್ಲಿ ಪಂಪಾದೇವಿ ಬಳಕೆಯಾಗಿದೆ. ಸೋಲಿಗರೆಲ್ಲ ಮಾದೇಶ್ವರನ ಒಕ್ಕಲು ಮತ್ತು ಬಿಳಿಗಿರಿ ರಂಗನ ಒಕ್ಕಲು ಆದಂತೆ ಹಂಪೆಯಲ್ಲಿ ಸ್ಥಳೀಯ ಕೆಳ ಸಮುದಾಯಗಳು ಶ್ರೀ ವಿರುಪಾಕ್ಷನ ಒಕ್ಕಲಂತೆ ನಡೆದುಕೊಳ್ಳುತ್ತಾರೆ.[೫೦] ಇಲ್ಲಿಯ ಸುತ್ತಲಿನ ಹಳ್ಳಿಗಳ ಬೇಡರ–ಗೊಲ್ಲರ ಸಮುದಾಯಗಳು ತಮ್ಮ ಮನೆಯ ಮದುವೆ ಕಾರ್ಯವಿದ್ದಲ್ಲಿ ಮೊದಲು ಹಂಪೆಯ ಫಲ ಪೂಜೆಯಲ್ಲಿ ಭಾಗವಹಿಸಿ, ನಂತರ ಮನೆ ಕಾರ್ಯಮಾಡುವ ಸಂಪ್ರದಾಯ ಬೆಳೆಸಿಕೊಂಡಿದ್ದಾರೆ. ಅಲ್ಲದೆ ಜಾತ್ರೆಯ ದಿನ ಪಂಪಾದೇವಿಯನ್ನು ಪಂಪಾಪತಿಗೆ ಮದುವೆ ಮಾಡಿಕೊಟ್ಟು ಸಂಭ್ರಮಿಸಿ ತಮ್ಮ ಮನೆಯ ಮದುವೆಯಂತೆ ಭಾವಿಸುತ್ತಾರೆ. ಹಂಪೆಯ ಆಚರಣೆಗಳಲ್ಲಿಂದು ಪ್ರಮುಖ ಅಂಶವಾಗಿದ್ದು, ಸ್ಥಳೀಯ ಬಹುಸಂಖ್ಯಾತ ಸಮುದಾಯಗಳು ಮೇಲು ಜಾತಿಯ ಪುರುಷಶಾಹಿ ವ್ಯವಸ್ಥೆಗೆ ತಮ್ಮನ್ನು ಒಪ್ಪಿಸಿಕೊಂಡಿವೆ. ಈ ಸಮುದಾಯಗಳು ತಮ್ಮ ಮೂಲ ಸ್ತ್ರೀ ದೈವ ಆರಾಧನೆಯನ್ನು ಮನೆಯ ಮಟ್ಟಿಗೆ ಉಳಿಸಿಕೊಂಡು ಅದರಿಂದ ದೂರವಾಗಿದ್ದಾರೆ. ಇದು ಅವೈದಿಕ ಸ್ತ್ರೀಕೇಂದ್ರಿತ ಸಮುದಾಯಗಳು ಶೈವ ಆರಾಧಕ ಸಮುದಾಯದ ಜೀವನ ಮೌಲ್ಯಗಳಿಂದ ಪ್ರಭಾವಿತವಾಗಿರುವುದರ ಪರಿಣಾಮವಾಗಿದೆ. ಅಲ್ಲದೆ ಹಂಪೆಯಲ್ಲಿ ವಿರೂಪಾಕ್ಷನು(ಶಿವನು) ಸ್ಥಳೀಯ ಪಂಪಾದೇವಿಯನ್ನು ವರಿಸಿ ಅವಳ ನೆಲೆಯಲ್ಲೆ ತನ್ನ ನೆಲೆಯನ್ನು ಕಂಡುಕೊಂಡಿರುವುದು ಹಿಂದೂ ಕುಟುಂಬ

ವ್ಯವಸ್ಥೆಯ ಮನೆ ಅಳಿಯತನವನ್ನು ಸೂಚಿಸುತ್ತದೆ ಎಂದು ಡಾ. ಶ್ರೀಧರರಾವ್ ಅವರು ಪ್ರತಿಪಾದಿಸಿರುವುದು ಒಂದಂಡೆ ಸರಿ ಎನಿಸುತ್ತದೆ.[೫೧]

ಹಂಪೆ ಶೈವ ಪರಂಪರೆಯ ಪ್ರತೀಕವಾಗಲು ಪಂಪಾದೇವಿ ವಿರೂಪಾಕ್ಷರ ಮಿಲನದ ತಾಣವಾಗಿ ಪರಿಣಮಿಸಿದೆ. ಇಲ್ಲಿಯ ಸ್ಥಳೀಯ ಜನಪದ ಪುರಾಣವನ್ನು ಶೈವ ಪುರಾಣ ತನ್ನ ಗಟ್ಟಿ ನೆಲೆಯನ್ನಾಗಿ ಮಾಡಿಕೊಂಡಿದೆ. ಆನೆಗೊಂದಿ ಪ್ರದೇಶದ ಸರೋವರಕ್ಕೂ ದೈವತ್ವಕ್ಕೇರಿಸಿದ ನದಿಯ ಸ್ತ್ರೀರೂಪವಾದ ಪಂಪಾದೇವಿಗೂ ಸಂಬಂಧ ಕಲ್ಪಿಸಿದೆ. ಹಂಪಮ್ಮ ಮತ್ತು ಆಕೆಯ ಮದುವೆಗೂ ಶಿವನಿಗೂ ಸಂಬಂಧ ಏರ್ಪಡಿಸಿದೆ. ಪಂಪಾತೀರ್ಥ-ಪಂಪಾಕ್ಷೇತ್ರವನ್ನು ಶೈವಕ್ಷೇತ್ರವನ್ನಾಗಿ ಪರಿವರ್ತಿಸಿದೆ. ಹಾಗಾಗಿ ಪಂಪಾದೇವಿಗೆ ಒಲಿದ ಪಂಪಾಪತಿಯೇ ಇಂದಿಗೂ ಇಲ್ಲಿಯ ಪ್ರಧಾನ ದೈವವಾಗಿ ಪ್ರತಿಷ್ಠಾಪಿತವಾಗಿದೆ. ಶೈವಪಂಥದ ಪರವಾಗಿ ಶೈವ ಪುರಾಣಗಳು, ಹರಿಹರನ 'ಗಿರಿಜಾ ಕಲ್ಯಾಣ' ನೆರವಿಗಿವೆ. ಅಲ್ಲದೆ ನಾಡಿನ ಮೂಲೆಮೂಲೆಯಿಂದ ಮಹಾಪೂರ ಸಂಖ್ಯೆಯಲ್ಲಿ ಹರಿದು ಬರುವ ವೀರಶೈವ ಮತಾನುಯಾಯಿಗಳು ಮತ್ತು ಸ್ಥಳೀಯ ಕೆಳಸಮುದಾಯಗಳು ವಿರೂಪಾಕ್ಷ ದೇವಾಲಯದಲ್ಲಿ ಪ್ರತಿ ವರುಷ ಜರುಗುವ ಸಮಾಜೋ-ಧಾರ್ಮಿಕ ಆಚರಣೆಗಳಿಗೆ ಸಾಕ್ಷಿಗಳಾಗುತ್ತಾರೆ. ಈ ಅಂಶಗಳು ದೈವ ಕಲ್ಪನೆ ಭಾರತೀಯ ಸಮಾಜದ ಸುಪ್ತ ಮನಸ್ಸಿನ ಚಟುವಟಿಕೆಗಳಿಗೆ ನೇರ ಸಂಬಂಧ ಹೊಂದಿರುವುದನ್ನು ಕಾಣಿಸುತ್ತದೆ.

ಶಿಷ್ಟ ದೈವಗಳೊಂದಿಗೆ ಇಂದಿಗೂ ವಿಜಯನಗರದ ಹಾಳು ಪಟ್ಟಣದಲ್ಲಿರುವ ಮತ್ತು ಬಹಳ ಹಿಂದಿನಿಂದಲೂ ಆರಾಧಿಸಿಕೊಂಡು ಬಂದಿರುವ ಬೇರೆ ಬೇರೆ ಹೆಸರಿನ ಅವೈದಿಕ ಮತ್ತು ಕೆಳ ಸಮುದಾಯಗಳ ಸ್ಥಳೀಯ ಸ್ತ್ರೀ ದೈವಗಳು ಇವೆ. ಒಂದೆಡೆ ಪಂಪಾಪತಿ ಪ್ರಧಾನವಾಗುಳಿದು ಶಿಷ್ಟ ಮತ್ತು ಪರಿಶಿಷ್ಟರ ಆರಾಧನೆಗೆ ಒಳಗಾಗಿದ್ದರೆ ಇನ್ನೊಂದೆಡೆ ಮುಂಚೂಣಿಗೆ ಬಾರದ ಸ್ಥಳೀಯ ಕೆಳಸಮುದಾಯಗಳಿಂದ ನಿತ್ಯ ಪೂಜೆಗೆ ಒಳಗಾಗಿರುವ ಸ್ತ್ರೀ ದೈವಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿವೆ. ಹಂಪೆ ಪಂಪಾದೇವಿಯ ನೆಲೆಯಾದರೂ ಇಲ್ಲಿ ತಳ ಸಮುದಾಯಗಳ ಪ್ರತಿನಿಧಿಯಂತಿರುವ ಪಂಪಾದೇವಿಯನ್ನು ವರಿಸಿದ ಉನ್ನತ ಸಮುದಾಯದ ದೈವವಾದ ಶಿವನೇ ಪ್ರಧಾನ ದೈವವಾಗಿದ್ದಾನೆ.

ವಿಜಯನಗರದ ಅರಸರು(ಸಂಗಮ ದೊರೆಗಳು) ತಮ್ಮ ಹಿರಿಯರ ನಿರ್ದೇಶನದಂತೆ ಇಲ್ಲಿ ರಾಜ್ಯವನ್ನು ಕಟ್ಟಿ, ಸುದೀರ್ಘ ಆಳ್ವಿಕೆ ಮಾಡಿ ನೂತನ ಅಧ್ಯಾಯವೊಂದನ್ನು ಆರಂಭಿಸಿದರು. ಅಲ್ಲದೆ ತಮ್ಮ ಕುಲ ಗುರು ಮತ್ತು ರಾಜ್ಯ ಕಟ್ಟಲು ನೆರವಾಗಿದ್ದ (ವಿದ್ಯಾರಣ್ಯ/ ಕ್ರಿಯಾಶಕ್ತಿಗಳ?) ರಾಜ ಗುರುಗಳ ನಿರ್ದೇಶನದಂತೆ ಈಗಾಗಲೇ ಅಸ್ತಿತ್ವದಲ್ಲಿದ್ದ ಶ್ರೀ ವಿರೂಪಾಕ್ಷನನ್ನು ತಮ್ಮ ರಾಜದೈವ ಮತ್ತು ಕುಲದೈವವನ್ನಾಗಿ ಸ್ವೀಕರಿಸಿ, ತಾವು ಶೈವ ಮತಾವಲಂಬಿಗಳಾದರು. ಹಾಗೂ ಆ ದೇವಾಲಯದ ಅಭಿವೃದ್ಧಿಗಾಗಿ ಎಲ್ಲ ರೀತಿಯ ಕ್ರಮಗಳನ್ನು ಕಾಲಾಂತರದಲ್ಲಿ

ಕೈಗೊಂಡರು. ಆ ದೈವದ ಮೇಲಿನ ಭಕ್ತಿ ಮತ್ತು ಗೌರವದಿಂದಾಗಿ ಈ ವಂಶದ ಕೆಲವು ರಾಜರು 'ಶ್ರೀ ವಿರುಪಾಕ್ಷ' ಎಂಬ ಹೆಸರಿನಲ್ಲಿ ಶಾಸನ ಮತ್ತು ನಾಣ್ಯಗಳನ್ನು ಹೊರಡಿಸಿದರು. ಇದು ಅವರು ಆ ದೈವದ ಮೇಲೆ ಇಟ್ಟ ನಂಬಿಕೆಯನ್ನು ಸೂಚಿಸುತ್ತದೆ. ಲಭ್ಯ ಪೌರಾಣಿಕ, ಚಾರಿತ್ರಿಕ ಮತ್ತು ಜನಪದೀಯ ಆಧಾರಗಳ ಮೇಲೆ ಪಂಪಾಬಿಕೆಯ(ಶಕ್ತಿ) ಕೇಂದ್ರವಾಗಿದ್ದ ಹಂಪಿಯಲ್ಲಿ ಕಾಲ ಕ್ರಮೇಣ ಶ್ರೀ ವಿರೂಪಾಕ್ಷ ದೈವ ಅಸ್ತಿತ್ವ ಪಡೆಯಿತು ಎಂದು ಹೇಳಹುದು. ಆರಂಭದ ಬಹುತೇಕ ಶಾಸನಗಳಲ್ಲಿ ಕೇವಲ ಪಂಪಾಬಿಕೆಯ ಉಲ್ಲೇಖ ಮಾತ್ರ ಇರುವುದು ಈ ಅಂತಿಮ ನಿರ್ಣಯಕ್ಕೆ ಸಾಕ್ಷಿಯಾಗಿವೆ. ಇದರಿಂದಾಗಿಯೇ ಶ್ರೀ ವಿರೂಪಾಕ್ಷ ದೇವಾಲಯ ಅಂದಿನಿಂದ ಇಂದಿನವರೆಗೂ ತನ್ನ ಪ್ರಾಬಲ್ಯವನ್ನು ಉಳಿಸಿಕೊಂಡು ಶೈವ ಧರ್ಮದ ಪ್ರಾಧಾನ ಕೇಂದ್ರವಾಗಿ, ಅದರ ಅಡಿಗಲ್ಲಾಗಿ ಅಸ್ತಿತ್ವದಲ್ಲಿದೆ.

ಹಂಪಿಯ ಶ್ರೀ ವಿರೂಪಾಕ್ಷ ದೇವಾಲಯದ ದಕ್ಷಿಣಕ್ಕೆ ಶ್ರೀ ಭುವನೇಶ್ವರಿ ದೇವಾಲಯವಿದೆ. ಭುವನೇಶ್ವರಿ ದೇವಿಯನ್ನು ಕನ್ನಡಾಂಬೆ, ಕನ್ನಡದ ತಾಯಿ, ಕನ್ನಡಿಗರ ಅಧಿದೇವತೆ/ ಕುಲದೇವತೆ ಎಂದೆಲ್ಲಾ ಪರಿಗಣಿಸಲಾಗಿದೆ. ಈ ದೈವದ ಕುರಿತು ಕೆಲ ನಂಬಿಕೆಗಳಿದ್ದು, ವಿವಿಧ ಆಚರಣೆಗಳನ್ನು ಜನರು ಆಚರಿಸುತ್ತಾರೆ. ಹಂಪಿಯಲ್ಲಿ ಭುವನೇಶ್ವರಿ ದೇವಾಲಯ ಸ್ಥಾಪನೆಯಾದ ಕುರಿತಂತೆ ಮತ್ತು ಶ್ರೀ ಭುವನೇಶ್ವರಿ ದೇವಿಯ ಕುರಿತು ಜನರಲ್ಲಿ ಹಲವು ರೀತಿಯ ನಂಬಿಕೆ, ಐತಿಹ್ಯಗಳಿವೆ. ಅಲ್ಲದೆ ಜನರು ತಮ್ಮ ಇಷ್ಟಾರ್ಥಗಳ ಸಿದ್ಧಿಗಾಗಿ ಮತ್ತು ತಮ್ಮ ಕಷ್ಟಗಳ ಪರಿಹಾರಕ್ಕಾಗಿ ದೇವಿಯ ಮೊರೆ ಹೋಗಿ ಹಲವಾರು ಅರಿಕೆಗಳನ್ನು ಸಹ ಇಂದಿಗೂ ಕಟ್ಟಿಕೊಳ್ಳುತ್ತಾರೆ. ಅವುಗಳಲ್ಲಿ ಪ್ರಮುಖವಾದವು ಇಂತಿವೆ.

ವಿಜಯನಗರ ಸ್ರಾಮಾಜ್ಯದ ದೊರೆಗಳ ಕುಲ ಗುರುಗಳಾದ ಶ್ರೀ ವಿದ್ಯಾರಣ್ಯರು ತಮ್ಮ ವಂಶದ ಕುಲ ದೇವತೆಯಾದ ಶ್ರೀ ಭುವನೇಶ್ವರಿಯನ್ನು ಕುರಿತು ತಪಸ್ಸುಮಾಡಿ ಆಕೆಯ ಅಣತಿಯಂತೆ ಹಂಪಿಯ ಶ್ರೀ ವಿರೂಪಾಕ್ಷೇಶ್ವರ ದೇವಾಲಯದ ಪ್ರಾಂಗಣದಲ್ಲಿ ದಕ್ಷಿಣಾಭಿಮುಖವಾಗಿ ದುಷ್ಟ ಸಂಹಾರಿಣಿಯ ಪ್ರತೀಕವಾಗಿ ಈ ದೇವಾಲಯ ಪ್ರತಿಷ್ಠಾಪಿಸಿದರು ಎಂದು ಜನರು ನಂಬಿದ್ದಾರೆ. ವಿಜಯನಗರದ ಸ್ಥಾಪನೆಗೆ ಶಕ್ತಿ ನೀಡಲೆಂದು ವಿದ್ಯಾರಣ್ಯರು ಭುವನೇಶ್ವರಿಯನ್ನು ಪ್ರಾರ್ಥಿಸಿದರಂತೆ. ಆಗ ಭುವನೇಶ್ವರಿಯು ವಿದ್ಯಾರಣ್ಯರ ಪ್ರಾರ್ಥನೆಗೆ ಒಲಿದು ಕೆಲವು ಗಳಿಗೆಯ (ಮೂರು ಮುಕ್ಕಾಲು ಗಳಿಗೆ) ಕಾಲ ಮುತ್ತು, ರತ್ನ, ಚಿನ್ನದ ಮಳೆ ಸುರಿಸಿದರಂತೆ. ಹೀಗೆ ಮುತ್ತು ಸುರಿದ ಭಾಗ ಮುತ್ತಿನಕೂಟ, ರತ್ನಸುರಿದ ಭಾಗ ರತ್ನಕೂಟ ಹಾಗೂ ಚಿನ್ನ ಸುರಿದ ಭಾಗ ಹೇಮಕೂಟವಾಯಿತು. ನಂತರ ಇಲ್ಲಿಯೇ ವಿದ್ಯಾರಣ್ಯರು ವಿಜಯನಗರವನ್ನು ಸ್ಥಾಪನೆ ಮಾಡಿ ಅದರ ನೆನಪಿಗಾಗಿ ಶ್ರೀ ಭುವನೇಶ್ವರಿಯನ್ನು ಪ್ರತಿಷ್ಠಾಪಿಸಿದರು ಎಂದು ಜನರು ಹೇಳುತ್ತಾರೆ.[೨]

ಜನರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಈ ಮುಂದಿನ ಹಲವು ರೀತಿಯ ಅರಿಕೆಗಳನ್ನು

ಕಟ್ಟಿಕೊಳ್ಳುವ ಪರಿ ಪಾಠವನ್ನು ಇಂದಿಗೂ ಇಟ್ಟುಕೊಂಡಿದ್ದು, ಅವು ಇಂತಿವೆ:

೧. ಜನರು ಸಂತಾನ ಪ್ರಾಪ್ತಿಗಾಗಿ ಭುವನೇಶ್ವರಿ ಹೋಮ ಮಾಡಿಸುವ ಅರಿಕೆ ಕಟ್ಟಿಕೊಳ್ಳುತ್ತಾರೆ.

೨. ಋತುಮತಿ ಆಗದವರು ಸಕಾಲಿಕವಾಗಿ ಋತುಮತಿ ಆಗಲು ಅಪೇಕ್ಷಿಸಿ ಹಲವು ನಮೂನೆಯ ಅಭಿಷೇಕ ಮತ್ತು ಅಲಂಕಾರಗಳನ್ನು ಮಾಡಿಸುವ ಅರಿಕೆಗಳನ್ನು ಕಟ್ಟಿಕೊಳ್ಳುತ್ತಾರೆ.

೩. ಸಕಾಲಿಕವಾಗಿ ವಿವಾಹ ಆಗದವರು ತಮ್ಮ ಸಕಾಲಿಕ ವಿವಾಹಕ್ಕಾಗಿ ಹಲವು ನಮೂನೆಯ ಅಭಿಷೇಕ ಮತ್ತು ಅಲಂಕಾರಗಳನ್ನು ಮಾಡಿಸುವ ಅರಿಕೆಗಳನ್ನು ಕಟ್ಟಿಕೊಳ್ಳುತ್ತಾರೆ.

ದೇವಿಯ ಕುರಿತು ಜನರಲ್ಲಿ ತುಂಬಾ ಭಕ್ತಿ ಇದೆ. ಆಕೆಯನ್ನು ಇಷ್ಟಾರ್ಥ ದೈವ, ದುಷ್ಟ ಸಂಹಾರಿಣಿ, ಬೇಡಿದ್ದನ್ನು ನೀಡುವ ತಾಯಿ ಎಂದು ಜನರು ನಂಬಿದ್ದಾರೆ. ದೇವಿಯ ಅನುಗ್ರಹದಿಂದ ನಮಗೆ ಸಕಲವೂ(ಜಯ, ಸಂಪತ್ತು ಇತರೆ ಎಲ್ಲವೂ) ಪ್ರಾಪ್ತಿಯಾಗುತ್ತದೆ ಎಂದು ಜನರು ನಂಬಿದ್ದಾರೆ. ವಿಶೇಷವಾಗಿ 'ನವೆಂಬರ್ ಒಂದರಂದು' ಇಲ್ಲಿಂದ ಜ್ಯೋತಿಯನ್ನು ತೆಗೆದುಕೊಂಡು ಹೋಗುತ್ತಾರೆ. ಅಲ್ಲದೆ ಯುವಕರು ಸಂಘ, ಸಂಸ್ಥೆಗಳು ಕ್ರೀಡಾಕೂಟಗಳ ಆಯೋಜನೆಗೆ, ಕೆಲ ವಿಶೇಷ ಹೊಸ ಕಾರ್ಯಗಳನ್ನು ಆರಂಭಿಸಲು ಇಲ್ಲಿಂದಲೇ ಜ್ಯೋತಿಯನ್ನು ತೆಗೆದುಕೊಂಡು ಹೋಗುವ ಪರಿಪಾಠವಿದೆ. ತಮ್ಮ ಇಷ್ಟಾರ್ಥಗಳು ನೇರವೇರಿದಾಗ ಮತ್ತು ತಮ್ಮ ಕಷ್ಟಗಳು ತೀರಿದಾಗ ಭಕ್ತರು ಶ್ರೀ ದೇವಾಲಯಕ್ಕೆ ಬಂದು ತಮ್ಮ ಅರಿಕೆಗಳನ್ನು ತೀರಿಸಿಕೊಳ್ಳುತ್ತಾರೆ. ಅಲ್ಲದೇ ಹಲವಾರು ಭಕ್ತರು ವಿವಿಧ ದಾನಗಳನ್ನು ದೇವಾಲಯಕ್ಕೆ ಸಹ ನೀಡಿದ್ದಾರೆ. ಅವರಲ್ಲಿ ಉದ್ಯಮಿಗಳಾದ ಶ್ರೀ ರಂಗನಗೌಡ್ರು ಇತ್ತೀಚಿಗೆ ಪಂಪಾದೇವಿ ಮತ್ತು ಭುವನೇಶ್ವರಿ ದೇವಿಯರಿಗೆ ಒಂದು ಸುವರ್ಣ ಕೀರೀಟ. ಕರ್ಣ ಕುಂಡಲ, ಪಾಶ, ಅಂಕುಶ, ಅಭಯ ಮತ್ತು ವರದ ಹಸ್ತಗಳನ್ನು ದಾನವಾಗಿ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

ದೇವಿಗೆ ಪ್ರತಿ ನಿತ್ಯವೂ ಅಭಿಷೇಕ, ಅಲಂಕಾರ, ಅರ್ಚನೆ, ಮಂಗಳಾರತಿಗಳನ್ನು ವಾರದ ಪ್ರತಿದಿನವೂ ತಪ್ಪದೇ ನಿಯಮದಿಂದ ಮಾಡಲಾಗುತ್ತದೆ. ಅಲ್ಲದೇ ಭಕ್ತಾಧಿಗಳ ಇಷ್ಟ ಅನುಸಾರವಾಗಿ ವಿವಿಧ ಅಭಿಷೇಕ ಮತ್ತು ಅಲಂಕಾರಗಳನ್ನು ಮಾಡಲಾಗುತ್ತದೆ. ಪ್ರತಿದಿನ ಮೂರು ಭಾರಿ (ತ್ರಿಕಾಲವೂ) ಹೋಳಿಗೆ ಮತ್ತು ಅನ್ನದ ನೈವೇದ್ಯ ಮಾಡಲಾಗುತ್ತದೆ. ಅದೇ ರೀತಿ ವಿಶೇಷ ದಿನಗಳಂದು ಅಂದರೆ ಪ್ರತಿ ಶುಕ್ರವಾರವನ್ನು ವಾರದ ದಿನವೆಂದು ಪರಿಗಣಿಸಲಾಗಿದೆ. ಅಂದು ನಿತ್ಯ ಪೂಜೆಗಳ ಜೊತೆಗೆ ಎರಡು ಭಾರಿ ವಿಶೇಷ ಕುಂಕುಮಾರ್ಚನೆಯನ್ನು ಭಕ್ತಿ ಭಾವದಿಂದ ನಡೆಸಲಾಗುತ್ತದೆ. ಅಲ್ಲದೇ ಪ್ರತಿ ಹುಣ್ಣಿಮೆ ಮತ್ತು ಅಮವಾಸ್ಯೆಯಂದು ವಿಶೇಷ ಪೂಜೆಗಳನ್ನು ಇಲ್ಲಿ ನಡೆಸಲಾಗುತ್ತದೆ. ಪ್ರತಿ ಶುಕ್ರವಾರದಂದು ದೇವಿಗೆ ಉದ್ದಿನ ವಡೆಯನ್ನು ನೈವೇದ್ಯ ಮಾಡಲಾಗುತ್ತದೆ. ಇದಲ್ಲದೆ ಹಬ್ಬಗಳಂದು ದೇವಿಗಾಗಿ ವಿಶೇಷ ಆಚರಣೆ ಮಾಡಲಾಗುತ್ತದೆ. ಪ್ರತಿ ದೇವಿ ನವರಾತ್ರಿಯಲ್ಲಿ ಪ್ರತಿ ದಿನ ಮುಂಜಾನೆ ಮತ್ತು ಸಂಜೆ 'ಶ್ರೀಚಕ್ರಾರ್ಚನೆ' ವಿಶೇಷ

ಪೂಜೆಯನ್ನು ನಡೆಸಲಾಗುತ್ತದೆ. ಅಲ್ಲದೆ ವಿದ್ಯಾರಣ್ಯ ಮಠದ ಪೂಜ್ಯ ಗುರುಗಳು ಬಂದು ಶ್ರೀ ದೇವಿಯ ಕುಂಕುಮಾರ್ಚನೆಯನ್ನು ತಾವೇ ನಡೆಸಿಕೊಡುವುದು ವಿಶೇಷವಾಗಿದೆ. ಇಲ್ಲಿ ನವರಾತ್ರಿಯ ಒಂದು ದಿನ ಚಂಡಿ ಹೋಮವನ್ನು ವಿಶೇಷವಾಗಿ ನಡೆಸಲಾಗುತ್ತದೆ. ಇದಲ್ಲದೆ ಪ್ರತಿ ವರ್ಷ ನಡೆಯುವ ವಿರುಪಾಕ್ಷೇಶ್ವರ ಜಾತ್ರೆಯಲ್ಲಿ ದೇವಿಗೆ ವಿಶೇಷ ಪೂಜೆ ಮಾಡಲಾಗುತ್ತದೆ. ಅಲ್ಲದೆ ಹಂಪಿ ಉತ್ಸವದ ಸಂದರ್ಭದಲ್ಲಿ ತಾಯಿ ಭುವನೇಶ್ವರಿಯ ಉತ್ಸವ ಮೂರ್ತಿಯನ್ನು ಮೆರವಣಿಗೆ ಮಾಡಲಾಗುತ್ತದೆ.[೫೨]

ಭಾಷಾವಾರು ಪ್ರಾಂತ್ಯಗಳ ರಚನೆಯ ಕಾಲಘಟ್ಟದಲ್ಲಿ ತೆಲಗು ಭಾಷೆಗೆ ಚಾರಿತ್ರಿಕ ಹಿನ್ನೆಲೆ ನೀಡುವ ಉದ್ದೇಶದಿಂದ ಆಂಧ್ರದವರು ವಿಜಯನಗರ ಸ್ರಾಮಾಜ್ಯವನ್ನು ನಮ್ಮದು ಎಂದು ಪ್ರತಿಪಾದಿಸಲು ಆರಂಭಿಸಿದರು. ಈ ಹಕ್ಕು ಪ್ರತಿಪಾದನೆ ಒಂದು ಕಡೆ ಮತ್ತೊಂದು ಕಡೆ ಕರ್ನಾಟಕದ ಏಕೀಕರಣದ ಸಂಕಷ್ಟ ಸಮಯದಲ್ಲಿ ವಿಜಯನಗರವನ್ನು ಕನ್ನಡಿಗರ ಸಾಮ್ರಾಜ್ಯವೆಂದು ಪ್ರತಿಪಾದಿಸಿ ಈ ನೆಲದ ಭಾಷೆಗೊಂದು ಚಾರಿತ್ರಿಕ ಹಿನ್ನೆಲೆಯನ್ನು ಕಟ್ಟಿಕೊಡಬೇಕಾದ ತುರ್ತು ಅವಶ್ಯಕತೆ ನಮ್ಮ ಬರಹಗಾರರ ಮೇಲಿತ್ತು. ಇದಕ್ಕಾಗಿ ವಿಜಯನಗರವನ್ನು ಆದರ್ಶವಾಗಿಟ್ಟುಕೊಂಡು, ಅದಕ್ಕೊಂದು ಚಾರಿತ್ರಿಕ ಮೂಲವನ್ನು ನೀಡುವ ಹಿನ್ನೆಲೆಯಲ್ಲಿ ಆ ಸಾಮ್ರಾಜ್ಯ ಸ್ಥಾಪನೆಗೆ ಭುವನೇಶ್ವರಿಯ ಒಲುಮೆಯ ಪರಿಕಲ್ಪನೆ (ವಿದ್ಯಾರಣ್ಯ!) ನೀಡಿ, ಆ ಅಧಿ ದೇವತೆಯನ್ನೇ ನಮ್ಮ ಇಂದಿನ ಕನ್ನಡಿಗರ ಕುಲದೇವತೆ ಎಂದು ಪ್ರತಿಪಾದಿಸಲಾಯಿತು. ಈ ಹಿನ್ನೆಲೆಯಲ್ಲಿಯೇ ಭೂಮಿಯನ್ನು ಹೆಣ್ಣಿಗೆ ಹೋಲಿಸಿ ಆ ಹೆಣ್ಣನ್ನು ಶಕ್ತಿ ದೇವತೆಯ ರೂಪಗಳಲ್ಲೊಂದಾದ ಭುವನೇಶ್ವರಿಗೆ ಹೋಲಿಸಿ ಭುವನೇಶ್ವರಿಯನ್ನೇ ಕನ್ನಡಿಗರ ಕುಲದೇವತೆ ಎಂದು ಪ್ರತಿನಿಧಿಸಲಾಯಿತು.

ಇದನ್ನು ಗಮನಿಸಿದರೆ ಕರ್ನಾಟಕ ಏಕೀಕರಣ ಚಳುವಳಿಯ ಭಾಗವಾಗಿಯೇ ಈ ಕಲ್ಪನೆ ರೂಪಗೊಂಡಿದ್ದು ಸ್ಪಷ್ಟವಾಗುತ್ತದೆ. ಚರಿತ್ರೆಯ ಮುಖಾಂತರ ನಾಡಿನ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದವರಿಗೆ ಆದರ್ಶವಾಗಿ ಕಂಡಿದ್ದು ವಿಜಯನಗರ. ಹಂಪಿಯಲ್ಲಿನ ಭುವನೇಶ್ವರಿ ದೇವಿಯನ್ನು ನೋಡಿ ಅವಳನ್ನೇ ಕನ್ನಡಿಗರ ಕುಲದೇವತೆಯೆಂದು ತಮ್ಮ ಕೃತಿಗಳಲ್ಲಿ ಕರೆದರು. ವಿಜಯನಗರದಲ್ಲಿ ಕೇವಲ ಭುವನೇಶ್ವರಿಯ ಮೂರ್ತಿಯಷ್ಟೇ ಅಲ್ಲ ಶಕ್ತಿ ದೇವತೆಗಳಾದ ಹಂಪಮ್ಮ, ಗಾಯತ್ರಿ, ಸರಸ್ವತಿ, ಲಕ್ಷ್ಮಿ, ದುರ್ಗೆ, ಪಟ್ಟಣದ ಎಲ್ಲಮ್ಮ, ಕೀರೀಟ ಎಲ್ಲಮ್ಮ, ಹತ್ತು ಕೈಯಮ್ಮ, ಮೊದಲಾದವು ಬಹು ಹಿಂದಿನಿಂದಲೂ ಇವೆ. ಇಷ್ಟೆಲ್ಲ ದೇವತೆಗಳು ಇದ್ದರೂ ದೇವಿ ಭಾಗವತದ ಅನ್ವಯ ಮೂರು ಲೋಕದ ಅಧಿದೇವತೆಯಾದ ಭುವನೇಶ್ವರಿಯೇ ಏಕೆ ಕನ್ನಡದ ಅಧಿ ದೇವತೆಯಾದಳು? ಎನ್ನುವುದು ನಮ್ಮ ಮುಂದಿರುವ ಬಹು ದೊಡ್ಡ ಪ್ರಶ್ನೆ. ಹಾಗೆ ನೋಡಿದರೆ ಹಂಪಿ ಮತ್ತು ಅದರ ಸುತ್ತಲಿನ ಸ್ಥಳೀಕರು ಇತರೆ ಶಕ್ತಿ ದೇವತೆಗಳನ್ನು ಆರಾಧಿಸುವಷ್ಟು ಭುವನೇಶ್ವರಿಯನ್ನು ಆರಾಧಿಸುವುದಿಲ್ಲ. ಏಕೀಕರಣ ಹೋರಾಟಗಾರರಿಗೂ ಈ ಭುವನೇಶ್ವರಿ ದೇವಿಗೂ ಒಂದು ಅವಿನಾಭಾವ ಸಂಬಂಧವಿದ್ದಂತೆ ಈ ಮೇಲಿನ ವಿವರಗಳಿಂದ ತೋರುತ್ತದೆ. ಏಕೀಕರಣ ಚಳುವಳಿಯಲ್ಲಿದ್ದ ಬಹುತೇಕರು

ಮೇಲ್ವರ್ಗಕ್ಕೆ (ಬ್ರಾಹ್ಮಣ) ಸೇರಿದವರಾಗಿದ್ದರು. ಆದ್ದರಿಂದ ಶೂದ್ರರು ಪೂಜಿಸುವ ಇತರ ಶಕ್ತಿದೇವತೆಗಳು ಅವರ ಕಣ್ಣಿಗೆ ಬೀಳಲಿಲ್ಲ. ತಾವು ಆರಾಧಿಸುತ್ತಿದ್ದ ಕುಲದೇವತೆಯಾದ ಭುವನೇಶ್ವರಿಯನ್ನೇ ಕನ್ನಡಿಗರ ಕುಲದೇವತೆಯನ್ನಾಗಿ ಪರಿಗಣಿಸಿದರು. ಆ ಕಾಲಘಟ್ಟದಲ್ಲಿ ಹೋರಾಟಗಾರರು ಕುಲ ಎನ್ನುವುದನ್ನು ಜಾತಿ ಎನ್ನುವ ಅರ್ಥದಲ್ಲಿ ಬಳಸದೇ ಒಂದೇ ಭಾಷೆಯನ್ನು ಆಡುವ ಎಲ್ಲರೂ ಒಂದೇ ಕುಲದವರು ಎಂದು ಗ್ರಹಿಸಿದರು. ಹರಿದು ಹಂಚಿ ಹೋಗಿದ್ದ ಕನ್ನಡ ಭಾಷಿಕರೆಲ್ಲರೂ ಒಂದೇ ಕುಲದವರೆಂದು ಪರಿಗಣಿಸಿದರು. ಆ ಮೂಲಕ ಕನ್ನಡ ಏಕೀಕರಣಕ್ಕೆ ಅಣಿಯಾದರೆಂದು ಹೇಳಬಹುದು.[೫೪]

ಇದೇ ಹಿನ್ನೆಲೆಯಲ್ಲಿಯೇ ಕನ್ನಡ ಭಾಷೆಗೆ ಒಂದು ಪ್ರಾಚೀನತೆಯನ್ನು ಮತ್ತು ಆ ಭಾಷೆಗೆ ಒಂದು ದೈವತ್ವದ ಸ್ಥಾನ ನೀಡಬೇಕೆಂಬ ಸದಾಶಯದೊಂದಿಗೆ ಅಂದಿನ ನಾಯಕರು/ಬರಹಗಾರರು/ಸಾಹಿತಿಗಳು ಭುವನೇಶ್ವರಿಗೆ ಒಂದು ಚಾರಿತ್ರಿಕ ಮಹತ್ವ ನೀಡಿ, ಆಕೆಯನ್ನು ವಿಜಯನಗರದ ಪ್ರತಿನಿಧಿಯೆಂಬಂತೆ, ಕನ್ನಡಿಗರ ಅಧಿದೇವತೆ, ಕುಲದೇವತೆ ಎಂಬಂತೆ ಬಿಂಬಿಸಿ ಆಕೆಗೆ ಒಂದು ಪೂಜ್ಯ ಮತ್ತು ಮಹತ್ವದ ತಾಯಿಯ ಸ್ಥಾನವನ್ನು ಕಲ್ಪಿಸಿದರು. ಅಂದಿನಿಂದ ಭುವನೇಶ್ವರಿ ಕನ್ನಡಿಗರ ಕುಲದೇವತೆ ಆದಳು. ಕನ್ನಡಿಗರ ತಾಯಿಯಾದಳು ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ.

ಭಾರತದ ರಾಷ್ಟ್ರೀಯ ಹೋರಾಟದ ಫಲವಾಗಿ ಒಂದೊಂದು ನಾಡಿಗೆ ಒಬ್ಬೊಬ್ಬ ಅಧಿದೇವತೆಯನ್ನು ನೇಮಿಸಿಕೊಂಡಿದ್ದನ್ನು ಕಾಣಬಹುದು. ಬಂಗಾಲದ ಮುಖಾಂತರ ಈ ಪರಂಪರೆ ಆರಂಭವಾಯಿತು. ಇದರ ಮುಖ್ಯ ಉದ್ದೇಶ ಭಾರತೀಯ ಧರ್ಮ, ಪುರಾಣ, ತತ್ವ, ಚರಿತ್ರೆ, ಮಹಾಕಾವ್ಯ, ಐತಿಹ್ಯಗಳನ್ನು ಆಧಾರವಾಗಿಟ್ಟುಕೊಂಡು, ಆ ಮೂಲಕ ತಮ್ಮ ಅಸ್ತಿತ್ವವನ್ನು ನಿರ್ಮಾಣ ಮಾಡಿಕೊಳ್ಳುವುದು ಮತ್ತು ಪರತಂತ್ರದ ದಾಸ್ಯದಲ್ಲಿದ್ದ ಈ ನೆಲವನ್ನು ಬಂಧನದಿಂದ ಬಿಡುಗಡೆಗೊಳಿಸುವುದಾಗಿತ್ತು. ಬಂಕಿಮಚಂದ್ರ ಚಟರ್ಜಿಯವರ 'ಆನಂದಮಠ'ದಿಂದ ಈ ಪರಂಪರೆ ಹುಟ್ಟಿಕೊಂಡಿತು. ಇದೇ ಮಾದರಿಯನ್ನು ಕಾಲ ಕ್ರಮೇಣ ಬೇರೆ ಬೇರೆ ಭಾಷಿಕರೂ ಅನುಸರಿಸಿದ್ದನ್ನು ಗುರುತಿಸಬಹುದು. ಈ ಭರತ ಭೂಮಿಯನ್ನು ತಾಯಿ ಎಂದು ಉಳಿದ ನಾಡುಗಳ ಭಾಷೆಯನ್ನು ಆಕೆಯ ಮಕ್ಕಳೆಂದು ಪರಿಭಾವಿಸಿ ಆ ನಾಡುಗಳಿಗೂ ಸಹ ತಾಯಿಯ ಸ್ಥಾನವನ್ನು ಕಲ್ಪಿಸಿ ಕೊಡುವ ಪರಿಪಾಠ ಆರಂಭವಾಯಿತು. ಅಂದರೆ ಒಟ್ಟಾರೆ ಭರತ ಭೂಮಿಯನ್ನು ಮುಖ್ಯ ತಾಯಿಗೆ ಹೋಲಿಸಿ 'ಭಾರತಾಂಬೆ' ಎಂದು ಕರೆದು ಉಳಿದ ನಾಡಿನ ಸ್ಥಳೀಯ ಭಾಷೆಗಳಿಗೆ ಮತ್ತೆ ತಾಯಿಯ ಸ್ಥಾನವನ್ನು ನೀಡುವುದರೊಂದಿಗೆ ಆಕೆಯ ಮಕ್ಕಳ ಸ್ಥಾನವನ್ನು ಕಲ್ಪಿಸಿಕೊಡಲಾಯಿತು. ಇಲ್ಲಿ ಭಾರತ ಮಾತೆಯ ಮಕ್ಕಳಾಗಿ ಭಾರತದ ಎಲ್ಲಾ ಭಾಷಿಕರ ನಾಡುಗಳು ಕಾಣಿಸಿಕೊಳ್ಳುವುದು ವಿಶೇಷ ಎನಿಸುತ್ತದೆ. ರಾಷ್ಟ್ರೀಯ ಹೋರಾಟ ಮತ್ತು ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ತಾಯಿ ಮಕ್ಕಳ ಸಂಬಂಧದ ಮುಂದೆ ಉಳಿದವು ನಗಣ್ಯ ಎನ್ನುವಂತೆ ಈ ಸಂಬಂಧವನ್ನು ಬೆಸೆಯಲಾಗಿದೆ. ಇದುವೇ ಕರ್ನಾಟಕದ ಸಂದರ್ಭದಲ್ಲಿ ಭುವನೇಶ್ವರಿಯ ಹುಟ್ಟಿಗೆ ಕಾರಣವಾಯಿತು.

ಆ) ಹಬ್ಬಗಳಲ್ಲಿ ಹಂಪಿಯ ಸಂಸ್ಕೃತಿ

ಭಾರತೀಯ ಹಬ್ಬಗಳು ಇಲ್ಲಿನ ಸಂಸ್ಕೃತಿಯ ಪ್ರತೀಕವಾಗಿದ್ದು, ಅವು ನಮ್ಮ ಪರಂಪರೆ ಮತ್ತು ಸಂಸ್ಕೃತಿಯ ದ್ಯೋತಕಗಳಾಗಿವೆ. ಇಲ್ಲಿನ ವಿವಿಧ ಸಮುದಾಯಗಳ ವೈಶಿಷ್ಟ್ಯತೆಗಳು ಹಬ್ಬಗಳ ಮೂಲಕ ಪ್ರತಿಬಿಂಬಿತವಾಗುತ್ತೇವೆ. ನಂಬಿಕೆಯ ತಳಹದಿಯ ಮೇಲೆ ನಡೆಯುವ ಅದೆಷ್ಟೋ ಆಚರಣಗಳಲ್ಲಿ ಪ್ರತಿ ಸಮಾಜದ ವಿವಿಧ ಮುಖಗಳು ಅನಾವರಣಗೊಳ್ಳುವುದನ್ನು ನಾವು ಗುರುತಿಸಬಹುದಾಗಿದೆ. ಹಂಪಿಯ ಸಂಸ್ಕೃತಿ ವಿವಿಧ ಸಮುದಾಯಗಳು ನಡೆಸುವ ಇಲ್ಲಿನ ಹಬ್ಬಗಳಲ್ಲಿ ವ್ಯಕ್ತವಾಗುವುದನ್ನು ಗುರುತಿಸಬಹುದು. ಹಂಪಿಯಲ್ಲಿ ನೆಲೆಸಿರುವ ವಿವಿಧ ಸಮುದಾಯಗಳು ತಮ್ಮ ಸಂಪ್ರದಾಯಕ್ಕನುಗುಣವಾಗಿ ವಿವಿಧ ಆಚರಣೆಗಳನ್ನು ವಿಧಿಬದ್ಧವಾಗಿ ನಡೆಸುತ್ತಾರೆ. ಅವುಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಅ) ಯುಗಾದಿ

ಭಾರತದ ಇತರೆಡೆ ಅಚರಿಸುವ ಹಬ್ಬಗಳ ಮಾದರಿಯಲ್ಲಿಯೇ ಇಲ್ಲಿಯೂ ಯುಗಾದಿ ಹಬ್ಬವನ್ನು ಸಂಭ್ರಮ ಮತ್ತು ಸಡಗರದಿಂದ ಹೊಸವರ್ಷದ ಸಂಕೇತವಾಗಿ ಆಚರಿಸುತ್ತಾರೆ. ಬೇವು ಬೆಲ್ಲ ಹಂಚುವುದು, ಎಣ್ಣೆ ಸ್ನಾನ ಮತ್ತು ಹೊಸಬಟ್ಟೆ ಧರಿಸುವುದು ಇಲ್ಲಿಯೂ ಸರ್ವೇ ಸಾಮಾನ್ಯವಾಗಿದೆ. ಆದರೆ ಇದೇ ಹಬ್ಬದಲ್ಲಿ ಇಲ್ಲಿನ ಕೆಲವು ಸಮುದಾಯಗಳು ಕೆಲವು ವಿಭಿನ್ನ ಆಚರಣೆಗಳನ್ನು ನಡೆಸುವುದು ವಾಡಿಕೆ. ಅವುಗಳೆಂದರೆ:

೧. ಇಲ್ಲಿನ ಸ್ಥಳೀಯ ಸಮುದಾಯಗಳಾದ ಬೇಡ, ಮಾದಿಗ, ಹೊಲಯ, ಬೋವಿ ಮತ್ತು ಕೊರಚ, ಕೊರಮ, ಬೆಸ್ತ ಮೊದಲಾದ ಸಮುದಾಯಗಳು ಯುಗಾದಿ ಹಬ್ಬದಲ್ಲಿ ತಮ್ಮ ಹಿರಿಯರ ಸಂತೃಪ್ತಿಗಾಗಿ ನಡೆಸುವ ಪಿತೃ ಪಕ್ಷವನ್ನು(ಹಿರಿಯರ ಹಬ್ಬವನ್ನು) ಅಮಾವಾಸ್ಯೆಯ ನಂತರದ ದಿನವಾದ ಪಾಡ್ಯದಂದು ವಿಶೇಷವಾಗಿ ಆಚರಿಸಿ, ಹೊಸಬಟ್ಟೆಗಳನ್ನು ತೊಟ್ಟು, ಇತರರಿಗೆ ಬೇವು-ಬೆಲ್ಲ ನೀಡಿ ಸಂಭ್ರಮಿಸುತ್ತಾರೆ. ಅವರ ಪ್ರಕಾರ ಈ ದಿನ ಅತ್ಯಂತ ಶ್ರೇಷ್ಠ ದಿನವಾಗಿದ್ದು, ತಮ್ಮ ಹಿರಿಯರನ್ನು ಸಂತೃಪ್ತಗೊಳಿಸುವ ದಿನವಾಗಿದೆ ಎನ್ನುತ್ತಾರೆ.

೨. ಇಲ್ಲಿನ ಬೇಡ ಸಮುದಾಯ ಪ್ರತಿವರ್ಷ ಯುಗಾದಿಯ ಪ್ರಯುಕ್ತ ಬೇಟೆ ಆಡುವ ಆಚರಣೆಯನ್ನು ಚಾಚು ತಪ್ಪದೆ ಹಿಂದಿನಿಂದ ನಡೆಸುತ್ತಾ ಬರುತ್ತಾರೆ. ಯುಗಾದಿಯ ಮುನ್ನ ದಿನ ಬೇಟೆಗಾಗಿ ಹತ್ತಿರದ ಅರಣ್ಯಕ್ಕೆ ಹೋಗಿ ಅಲ್ಲಿ ಸಿಗುವ ವಿವಿಧ ಕಾಡಿನಮೃಗ ಮತ್ತು ಪಕ್ಷಿಗಳನ್ನು ಬೇಟೆಯಾಡಿ(ಹಂದಿ, ಉಡ, ಜಿಂಕೆ, ಚಿಪ್ಪುಹಂದಿ ಮತ್ತು ಕೌಜುಗ, ಬುರ್ಲೆ ಮೊದಲಾದ ಪಕ್ಷಿಗಳನ್ನು) ಊರಿನಲ್ಲಿ ತಂದು ಮೆರವಣಿಗೆ ಮಾಡುತ್ತಾರೆ. ನಂತರ ಆ ಬೇಟೆಯಾಡಿದ ಪ್ರಾಣಿಗಳನ್ನು ತಮ್ಮ ತಮ್ಮಲ್ಲಿ ಹಂಚಿಕೊಂಡು ಮಾಂಸದಡುಗೆ ಮಾಡಿಕೊಂಡು ಸೇವಿಸುತ್ತಾರೆ. ಈ ಆಚರಣೆಯಲ್ಲಿ ಗಮನಿಸಬೇಕಾದ ಒಂದು ಮುಖ್ಯ ಸಂಗತಿ ಏನಂದರೆ, ಆದಿ ಕಾಲದ ಮನುಷ್ಯ ಮೂಲತಃ ಬೇಟೆಯಾಡಿ ಜೀವಿಸುತ್ತಿದ್ದ ಮತ್ತು ಆ ಪ್ರಾಣಿಗಳನ್ನೇ ತಮ್ಮ ಆಹಾರಕ್ಕಾಗಿ ಬಳಕೆ ಮಾಡಿಕೊಳ್ಳುತ್ತಿದ್ದ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಆ) ದಸರಾ ಹಬ್ಬ

ಹಂಪಿ ಭಾಗದಲ್ಲಿ ಅತಿ ವಿಜೃಂಭಣೆಯಿಂದ ಆಚರಿಸುವ ಹಬ್ಬಗಳಲ್ಲಿ ದಸರಾ ಹಬ್ಬವೂ ಒಂದು. ಇದನ್ನು ಸ್ಥಳೀಯರು ಮಾರ್ನಾಮಿ, ಮಹಾನವಮಿ ಎಂದೆಲ್ಲಾ ಕರೆಯುತ್ತಾರೆ. ಈ ಹಬ್ಬದಲ್ಲಿ ದೇವರು ಪಟ್ಟಕ್ಕೆ ಕುಳಿತುಕೊಳ್ಳುವುದು ಮತ್ತು ಬನ್ನಿಕೊಡುವುದು ಇಲ್ಲಿನ ಬಹುಮುಖ್ಯ ಆಚರಣೆಗಳಾಗಿದ್ದು, ಆ ವಿವರ ಈ ಮುಂದಿನಂತಿದೆ: ಇಲ್ಲಿ ವಾಸಿಸುವ ಪ್ರತಿ ಸಮುದಾಯಗಳು ತಮ್ಮ ಕುಲದ ದೇವರುಗಳನ್ನು ಸಿಂಗರಿಸಿಕೊಂಡು ಒಂದು ವಾರದ ಮೊದಲಿಂದಲೇ ಪ್ರತಿ ಮನೆಗೆ ತೆರಳಿ ಅವರಿಂದ ಪೂಜಿಸಿಕೊಂಡು ಪ್ರತಿ ಮನೆಯವರು ನೀಡುವ ದವಸ ಧಾನ್ಯ ಇಲ್ಲವೇ ಹಣವನ್ನು ತೆಗದುಕೊಂಡು ದೇವಾಲಯದ ಹೊರಗಡೆ ಪಟ್ಟಕ್ಕೆ ಕುಳಿತುಕೊಳ್ಳುತ್ತೇವೆ. ನಂತರ ದಸರಾ ಹಬ್ಬದ ಬನ್ನಿ ಮಡಿಯುವ ದಿನದಂದು ಪಟ್ಟಣದ ಯಲ್ಲಮ್ಮ ದೈವದ ಬಳಿ ಹೋಗಿ ಪೂಜೆ ಪುನಸ್ಕಾರಗಳನ್ನು ಮಾಡಿಕೊಂಡು ನಂತರ ಬನ್ನಿ ಮುಡಿದು ವಾಪಾಸು ತಮ್ಮಮ್ಮ ದೇವಾಲಯಕ್ಕೆ ವಾಪಾಸು ಬಂದು ತಮ್ಮ ಮೂಲ ಗುಡಿಯನ್ನು ಸೇರಿಕೊಳ್ಳುತ್ತವೆ. ಈ ರೀತಿ ದೇವರು ಹಿಂತಿರುಗುವಾಗ ಅವುಗಳ ಹಿಂದೆ ಬರುವ ಭಕ್ತಾದಿಗಳು ಅಲ್ಲಿಂದ ಬನ್ನಿಗಿಡದ ಎಲೆಗಳನ್ನು ತಂದು ಹಿರಿಯರಿಗೆ ಮತ್ತು ಸಮಾನ ವಯಸ್ಕರಿಗೆ ಅದನ್ನು ಕೊಟ್ಟು ಪರಸ್ಪರ ಹಾರೈಸಿಕೊಳ್ಳುತ್ತಾರೆ. ಆ ವೇಳೆ ಬಹುತೇಕರು “ಬನ್ನಿಕೊಟ್ಟು ಬಂಗಾರದಂಗೆ ಇರೋಣಾ” ಎನ್ನುತ್ತಾರೆ. ಅದಕ್ಕೆ ಪ್ರತೀಕವಾಗಿ ಆಯಿತು ಎಂದು ಉದ್ಘರಿಸುತ್ತಾರೆ. ಅಂದು ಮತ್ತು ನಂತರ ಹಬ್ಬದೂಟ ಸವೆದು ಜನರು ಸಂಭ್ರಮಿಸುತ್ತಾರೆ. ವಿಜಯನಗರ ಕಾಲದಲ್ಲಿ ಇದನ್ನು ವಿಜಯದಶಮಿ ಎಂದು ಒಂಬತ್ತು ದಿನಗಳ ಕಾಲ ಆಚರಿಸುತ್ತಿದ್ದರು. ಅಂದು ವಿವಿಧ ವಿನೋದಾವಳಿಗಳು ಈ ಹಬ್ಬದ ಪ್ರಯುಕ್ತ ನಡೆಯುತ್ತಿದ್ದವು. ನಂತರ ಅರಸರು ಇಂದಿನ ಜನ ಮಹಾನವಮಿ ದಿಬ್ಬದ ಮೇಲೆ ರಾಜ ದರ್ಬಾರನ್ನು ನಡೆಸಿ ಜನರಿಗೆ ಸಾರ್ವಜನಿಕವಾಗಿ ದರ್ಶನ ನೀಡುವುದರೊಂದಿಗೆ ಜನರ ಬಹುತೇಕ ಬೇಡಿಕೆಗಳನ್ನು ನೇರವೇರಿಸುತ್ತಿದ್ದರು. ಅಂದು ವಿಜಯನಗರಕ್ಕೆ ಭೇಟಿ ನೀಡಿದ ಕೆಲವು ವಿದೇಶಿ ಪ್ರವಾಸಿಗರು ಅಂದಿನ ವಿಜಯನಗರದ ವರ್ಣನೆಯನ್ನು ತಮ್ಮ ಪ್ರವಾಸಿ ಕಥನಗಳಲ್ಲಿ ವಿಶೇಷವಾಗಿ ಬಣ್ಣಿಸಿದ್ದಾರೆ. ಈ ಹಬ್ಬದ ಮೂಲಕವು ಹಿಂದಿನ ಪರಂಪರೆ ಮತ್ತು ಸಂಸ್ಕೃತಿ ವ್ಯಕ್ತವಾಗುವುದನ್ನು ನಾವು ಗುರುತಿಸಬಹುದಾಗಿದೆ. ಈ ಹಬ್ಬದಲ್ಲಿ ಮತ್ತೊಂದು ವಿಶೇಷ ಕಾರ್ಯಕ್ರಮ ಜರುಗುತ್ತದೆ. ಅದೇನೆಂದರೆ ಇಲ್ಲಿನ ಸ್ಥಳೀಯ ಸಮುದಾಯಗಳಾದ ಬೇಡ, ಮಾದಿಗ, ಹೊಲೆಯ, ಬೋವಿ ಮತ್ತು ಕೊರಚ, ಕೊರಮ, ಬೆಸ್ತ ಮೊದಲಾದ ಸಮುದಾಯಗಳಿಗೆ ಸೇರಿದ ಕೆಲವು ಕುಟುಂಬಗಳು ಈ ಹಬ್ಬದ ಮೊದಲನೆ ದಿನ ಪಿತೃಪಕ್ಷವನ್ನು(ಹಿರಿಯರ ಹಬ್ಬವನ್ನು) ವಿಶೇಷವಾಗಿ ಆಚರಿಸಿ, ಹೊಸ ಬಟ್ಟೆಗಳನ್ನು ತೊಟ್ಟು, ಬಂಧು ಬಾಂಧವರನ್ನು ಕರೆದು ಸಿಹಿ ಊಟ ಬಡಿಸಿ ಸಂಭ್ರಮಿಸುತ್ತಾರೆ. ಅವರ ಪ್ರಕಾರ ಈ ದಿನ ಅತ್ಯಂತ ಶ್ರೇಷ್ಠ ದಿನವಾಗಿದ್ದು, ತಮ್ಮ ಹಿರಿಯರನ್ನು ಸಂತೃಪ್ತಗೊಳಿಸುವ ದಿನವಾಗಿದೆ ಎನ್ನುತ್ತಾರೆ.

ಇ) ಮೊಹರಂ ಹಬ್ಬ

ಹಂಪಿ ಜನರ ಪ್ರಾಚೀನ ಸಂಸ್ಕೃತಿಯನ್ನು ಅನಾವರಣಗೊಳಿಸುವ ಹಬ್ಬಗಳಲ್ಲಿ ಪೀರಲಹಬ್ಬ ಎಂದು ಕರೆಯುವ ಮೊಹರಂ ಹಬ್ಬವೂ ಒಂದಾಗಿದೆ. ಇದನ್ನು ಸಾಮಾನ್ಯವಾಗಿ ಹಿಂದೂ ಮುಸ್ಲಿಂರು ಒಂದಾಗಿ ಸೇರಿ ಏಕತೆಯಿಂದ ಆಚರಿಸುತ್ತಾರೆ. ಆ ಎರಡು ಧರ್ಮಗಳ ಭಾವೈಕ್ಯತೆಯ ಸಂಕೇತವಾದ ಈ ಹಬ್ಬ ಸಾಮಾನ್ಯವಾಗಿ ಆಕ್ಟೋಬರ್-ಡಿಸೆಂಬರ್ ತಿಂಗಳಲ್ಲಿ ನಾಲ್ಕು ದಿನಗಳ ಕಾಲ ಬಹು ಸಂಭ್ರಮದಿಂದ ಆಚರಿಸುತ್ತಾರೆ. ಸಹೋದರರಿಬ್ಬರು ಮುಸ್ಲಿಂ ಸಂಪ್ರದಾಯಕ್ಕೆ ಅನುಗುಣವಾಗಿ ಬಲಿಯಾದ ಘಟನೆಯನ್ನು ಈ ಹಬ್ಬ ಸಂಕೇತಿಸುತ್ತದೆ. ಈ ಹಬ್ಬ ಆರಂಭವಾಗುವ ಒಂದು ವಾರದ ಮೊದಲು ಗುದ್ದಲಿ ಹಾಕುವ ಕಾರ್ಯಕ್ರಮ ನಡೆಯುತ್ತದೆ. ಇದು ಹಬ್ಬದ ಆರಂಭವನ್ನು ಸೂಚಿಸುತ್ತದೆ. ಆ ನಂತರದ(ಒಂದು ವಾರದ ನಂತರ) ಪೀರಲ ದೇವರನ್ನು ಅಲಂಕರಿಸಿ ಅಲ್ಲಿರುವ ಮಸೀದಿಗಳಲ್ಲಿ ಪ್ರತಿಷ್ಠಾಪಿಸುತ್ತಾರೆ. ನಂತರ ಜನರು ಹೂವು ಅರ್ಪಿಸಿ ಸಕ್ಕರೆ ಓದಿಸಿಕೊಂಡು ಬರುತ್ತಾರೆ. ಮೂರನೆಯ ದಿನ ಹಬ್ಬದ ಪ್ರಮುಖ ಘಟ್ಟವಾದ ಕತ್ತಲ ರಾತ್ರಿ ಕಾರ್ಯಕ್ರಮ ನಡೆಯುತ್ತದೆ. ಇಡೀ ರಾತ್ರಿ ಜನರು ನಿದ್ದೆಗೆಟ್ಟು ದೇವರ ದರ್ಶನ ಪಡೆಯುತ್ತಾರೆ. ಅಲ್ಲದೆ ತಾವು ಕಟ್ಟಿಕೊಂಡ ಅರಿಕೆಗಳನ್ನು ತಿರಿಸಿ ಮುಡುಪುಗಳನ್ನು ಸಮರ್ಪಿಸುತ್ತಾರೆ. ಅಲ್ಲದೆ ಅಂದು ರಾತ್ರಿ ಪೀರಲ ದೇವರಗುಡಿ ಮುಂದೆ ಇರುವ ಪೀರಲ ಕುಣಿಯಲ್ಲಿ ದೊಡ್ಡ ದೊಡ್ಡ ಮರದ ದಿಮ್ಮಿಗಳನ್ನು ಹಾಕಿ ನಿಗದಿತ ಸಮಯದಲ್ಲಿ ಅದಕ್ಕೆ ಬೆಂಕಿ ಹಚ್ಚಿ ಕುಣಿಯುತ್ತಾರೆ. ಮರುದಿನ ದೇವರು ಹೊತ್ತವರು ಬರಿಗಾಲಿನಲ್ಲಿ ಆ ಅಗ್ನಿಕುಂಡವನ್ನು ಪ್ರವೇಶಿಸಿ ಬೆಂಕಿ ತುಳಿಯುವ ಕಾರ್ಯವನ್ನು ನಡೆಸುತ್ತಾರೆ. ಆ ದಿನ ಮಧ್ಯಾಹ್ನದ ನಂತರ ಗ್ರಾಮದಲ್ಲಿರುವ ಎಲ್ಲಾ ಪೀರಲ ದೇವರುಗಳು ಒಟ್ಟಾಗಿ ಸೇರಿ ಮೆರವಣಿಗೆಯಲ್ಲಿ ನೀರಿರುವ ಜಾಗಕ್ಕೆ ಹೋಗಿ ಪೂಜೆ ಮಾಡಿ ಅಲಂಕಾರ ಮಾಡಿರುವ ಪೀರಲ ದೇವರುಗಳನ್ನು ತೆಗೆದು ಪೆಟ್ಟಿಗೆಯಲ್ಲಿ ಭದ್ರವಾಗಿಟ್ಟು ಆ ನಂತರ ತಮ್ಮ ತಮ್ಮ ಸ್ವಸ್ಥಾನಕ್ಕೆ ಹಿಂತಿರುಗುತ್ತವೆ. ಇದನ್ನು ದೇವರು ಸಾಯುವುದು ಎನ್ನುತ್ತಾರೆ. ಇಲ್ಲಿಗೆ ಮೊಹರಂ ಹಬ್ಬದ ಆಚರಣೆ ಅಂತ್ಯವಾಗುತ್ತದೆ. ಹಬ್ಬದ ದಿನಗಳಲ್ಲಿ ಜನರು ತಮ್ಮ ಅರಿಕೆಯ ಭಾಗವಾಗಿ ಹುಲಿವೇಷ, ದೆವ್ವ ಮತ್ತು ರಾಕ್ಷಸನ ವೇಷ ಮೊದಲಾದ ವೇಷಗಳನ್ನು ಕಟ್ಟಿ ತಮ್ಮ ಅರಿಕೆಗಳನ್ನು ತೀರಿಸುತ್ತಾರೆ. ಹಬ್ಬದ ದಿನಗಳಲ್ಲಿ ಬಗೆ ಬಗೆಯ ಮಾಂಸ ಮತ್ತು ಸಿಹಿಯೂಟಗಳನ್ನು ಮಾಡಿಕೊಂಡು ಬಂಧು ಬಾಂಧವರಿಗೆ ನೀಡಿ ಸಂತೋಷಪಡುತ್ತಾರೆ. ಈ ಹಬ್ಬದಲ್ಲಿ ಗಮನಿಸಬೇಕಾದ ಕೆಲ ಮುಖ್ಯವಾದ ಅಂಶಗಳಿವೆ. ಅವುಗಳೆಂದರೆ:

೧) ಇದನ್ನು ಮುಸ್ಲಿಂರು ದುಃಖದ ಸಂಕೇತವೆಂದು ಆಚರಿಸುತ್ತಾರೆ. ಆದರೆ ಇದರಲ್ಲಿ ಹಿಂದೂಗಳು ಸಕ್ರಿಯವಾಗಿ ಭಾಗವಹಿಸುವುದು ವಿಶೇಷವಾಗಿದೆ. ಕಮಲಾಪರದಲ್ಲಿರುವ ಸ್ಥಳೀಯ ವಾಲ್ಮೀಕಿ(ಬೇಡ) ಸಮುದಾಯದವರು ತಾವೇ ಪೂಜಾರಿಗಳಾಗಿ, ಪ್ರತ್ಯೇಕವಾಗಿ ವ್ಯವಸ್ಥಿತವಾಗಿ ಆಚರಿಸುವುದು ಮತ್ತೊಂದು ವಿಶೇಷವಾಗಿದೆ. ಅದೆಷ್ಟೋ ಜನರು ತಮ್ಮ ಹೆಸರುಗಳನ್ನು ಪೀರ,

ಮುಸ್ತಾಪ, ಸಾಬಣ್ಣ ಮುಂತಾಗಿ ಇಟ್ಟುಕೊಳ್ಳುತ್ತಾರೆ. ಇದೆಲ್ಲವೂ ಅವರು ಬೇರೆ ಮೂಲದವರೇ ಎಂಬುದನ್ನು ಸೂಚಿಸುತ್ತದೆ.

೨) ದುಃಖದ ಪ್ರತೀಕವಾಗಿ ನಡೆಯುವ ಈ ಹಬ್ಬದಲ್ಲಿ ಹಿಂದೂ ಮುಸ್ಲಿಮರು ಸಮಾನವಾಗಿ, ಸಕ್ರಿಯವಾಗಿ ಭಾಗವಹಿಸುವುದು ಮೂಲತಃ ಇವರೆಲ್ಲಾ ಒಂದೇ ಮೂಲಕ್ಕೆ ಸೇರಿದವರೇ ಎಂಬುದನ್ನು ಸೂಚಿಸುತ್ತದೆ.

೩) ಈ ಹಬ್ಬದಲ್ಲಿ ನಡೆಯುವ ಹುಲಿವೇಷದಂತಹ ಅರಿಕೆಯ ವಿವಿಧ ಆಚರಣೆಗಳು ಇಲ್ಲಿನ ಸ್ಥಳೀಯ ಜನರ ತಮ್ಮ ಮೂಲ ಸಾಂಸ್ಕೃತಿಕ ಆಚರಣೆಗಳ ಪ್ರತೀಕಗಳಾಗಿವೆ.

ಈ ಮೇಲಿನ ಹಬ್ಬಗಳ ರೀತಿಯಲ್ಲಿಯೇ ಸ್ಥಳೀಯರು ದೀಪಾವಳಿ, ನೂಲಹಬ್ಬ ಇನ್ನು ಮೊದಲಾದ ಹಬ್ಬಗಳನ್ನು ಚಾಚು ತಪ್ಪದೇ ಮಾಡುತ್ತಾರೆ. ಆ ಎಲ್ಲಾ ಹಬ್ಬಗಳಲ್ಲಿ ಇಲ್ಲಿನ ಸ್ಥಳೀಯರ ಸಂಸ್ಕೃತಿ ವ್ಯಕ್ತವಾಗಿರುವುದನ್ನು ನಾವು ಕಾಣಬಹುದಾಗಿದೆ.

ಇ) ಜಾತ್ರೆಗಳಲ್ಲಿ ಹಂಪಿಯ ಸಂಸ್ಕೃತಿ

ಹಂಪಿಯಲ್ಲಿ ಪ್ರಸಕ್ತ ಶ್ರೀ ವಿರೂಪಾಕ್ಷ ಮತ್ತು ಪಂಪಾಂಬಿಕೆಯರ ಜಾತ್ರೆ, ರಾಮಲಕ್ಷ್ಮಣರ ಜಾತ್ರೆ ಹಾಗೂ ಮಾಲ್ಯವಂತ ರಘುನಾಥರ ಜಾತ್ರೆಗಳು ನಡೆಯುತ್ತವೆ. ಅವು ಇಲ್ಲಿನ ಸ್ಥಳೀಯ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ಈ ಹಿನ್ನೆಲೆಯಲ್ಲಿ ಈ ಭಾಗದಲ್ಲಿ ನಡೆಯುವ ಪ್ರಮುಖ ಜಾತ್ರೆಗಳನ್ನು ಇಲ್ಲಿ ಅವಲೋಕಿಸಲಾಗಿದೆ.

೧. ಹಂಪಿ ಜಾತ್ರೆ

ಹಂಪಿಯ ಸಂಸ್ಕೃತಿ ಇಲ್ಲಿ ನಡೆಯುವ ಜಾತ್ರೆಯಲ್ಲಿ ವ್ಯಕ್ತವಾಗುವುದನ್ನು ಕಾಣಬಹುದು. ಹಂಪಿ ವಿರೂಪಾಕ್ಷೇಶ್ವರ ಸ್ವಾಮಿಯ ಜಾತ್ರೆ ಸಾಮಾನ್ಯವಾಗಿ ಮಾರ್ಚ್-ಏಪ್ರಿಲ್ ತಿಂಗಳಲ್ಲಿ ನಡೆಯುತ್ತದೆ. ಸ್ಥಳೀಯರು ಇದನ್ನು ಪಂಪಾಬಿಕೆ ಮತ್ತು ವಿರೂಪಾಕ್ಷನ ವಿವಾಹ ಎಂದು ಬಗೆಯುತ್ತಾರೆ. ಇದಕ್ಕಾಗಿ ಸಿದ್ಧತೆಗಳು ಬಹು ಹಿಂದಿನಿಂದ ಆರಂಭಗೊಂಡಿರುತ್ತವೆ. ಒಂದು ವಾರಗಳ ಕಾಲ ನಡೆಯುವ ಈ ಜಾತ್ರೆಯಲ್ಲಿ ವಿವಿಧ ಆಚರಣೆಗಳನ್ನು ವಿದ್ಯುಕ್ತವಾಗಿ ಮಾಡಲಾಗುತ್ತದೆ. ಅವುಗಳಲ್ಲಿ ರಥೋತ್ಸವ ಒಂದಾಗಿದ್ದು, ಅದು ಇಲ್ಲಿ ಮುಖ್ಯ ಆಕರ್ಷಣೆ ಮತ್ತು ಆಚರಣೆಯಯ ಆಗಿರುತ್ತದೆ. ಈ ಜಾತ್ರೆಯಲ್ಲಿ ಹಂಪಿ ಸುತ್ತಲಿನ ಅನೇಕ ಗ್ರಾಮಗಳ ಜನರು ಭಾಗವಹಿಸುತ್ತಾರೆ. ಅವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮತ್ತು ಗೊಲ್ಲ ಜಾತಿಯವರು ಭಾಗವಹಿಸಿ ಪರಂಪರೆಯಿಂದ ಬಂದಿರುವ ವಿವಿಧ ಕಸಬುಗಳನ್ನು ಅವರು ಸಕ್ರಿಯವಾಗಿ ನೆರವೇರಿಸುತ್ತಾರೆ. ಕಮಲಾಪುರದ ಬೇಡರು ಬಂದು ಮೊದಲು ತೇರಿನ ಹಗ್ಗ ಹಿಡಿಯಬೇಕೆಂಬ ನಿಯಮ ಇದ್ದು ಅದನ್ನು ಪರಂಪರೆಯಿಂದ ನಡೆಸಿಕೊಂಡು ಬರುತ್ತಾರೆ. ಅದರಂತೆ ಇಲ್ಲಿನ ಕಮ್ಮಾರ, ಬಡಿಗಿ ಮೊದಲಾದ ವಿಶ್ವಕರ್ಮ ಜಾತಿಯವರು ಹಂಪಿಯ ರಥ ಕಟ್ಟುವ ಕಾಯಕ ಮಾಡುತ್ತಾರೆ. ಅದರಂತೆ ಮಾದಿಗ ಸಮುದಾಯದವರು ಆ ರಥಕ್ಕೆ ಹಗ್ಗ

ಕಟ್ಟುವ ಮತ್ತು ಹರಿದಿರುವ ಹಗ್ಗಗಳನ್ನು ಸರಿಪಡಿಸುವ ಮತ್ತು ಊರಿನ ಕಸಗೂಡಿಸುವ ಕೆಲಸ ಮಾಡುತ್ತಾರೆ. ಅಗಸರು ರಥೋತ್ಸವದ ವೇಳೆ ಮತ್ತು ಇತರೆ ಪ್ರಮುಖ ಆಚರಣೆಗಳು ನಡೆಯುವ ವೇಳೆ ಪಂಜು(ದೀವಟಿಗೆ) ಹಿಡಿಯುವ ಕಾರ್ಯವನ್ನು ಮಾಡುತ್ತಾರೆ.[೫೫] ಫಲಪೂಜೆಯ ದಿನದಂದು ನಿಗದಿ ಮಾಡಿದ ವಿರೂಪಾಕ್ಷ ಮತ್ತು ಪಂಪಾಂಬಿಕೆಯ ಲಗ್ನವನ್ನು ದೇವಾಲಯದಲ್ಲಿ ಸಾರ್ವಜನಿಕರ ಸಮ್ಮುಖದಲ್ಲಿ ನೆರವೇರಿಸುತ್ತಾರೆ. ಅಂದೇ ಆ ವಿವಾಹದ ಪ್ರತೀಕವಾಗಿ ನಡೆಸುವ ಮೆರವಣಿಗೆ ಶಾಸ್ತ್ರವನ್ನು ರಥೋತ್ಸವದ ಹೆಸರಿನಲ್ಲಿ ನಡೆಸುತ್ತಾರೆ. ಆ ರಥೋತ್ಸವದ ವೇಳೆ ಭಕ್ತಾದಿಗಳು ಬಾಳೇಹಣ್ಣು ಮತ್ತು ಹೂವನ್ನು ತೇರಿನ ಕಳಶ ಮುಟ್ಟುವಂತೆ ಎಸೆದು ತಮ್ಮ ಭಕ್ತಿಯ ಪರಕಾಷ್ಠತೆಯನ್ನು ತೋರಿಸಿಕೊಳ್ಳುತ್ತಾರೆ. ಈ ಜಾತ್ರೆಯ ಪ್ರಯುಕ್ತ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಅನೇಕ ಜಾನಪದ ಕಲಾತಂಡಗಳು ಭಾಗವಹಿಸಿ ಈ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗನ್ನು ತುಂಬುವುದನ್ನು ಕಾಣಬಹುದು. ಅವುಗಳಲ್ಲಿ ಡೊಳ್ಳು, ಕಹಳೆ, ತಮಟೆ, ಗಾರುಡಿ, ಹಗಲು ವೇಷ ಮತ್ತು ಉರುಮೆ, ಕೋಲಾಟ, ಜಾನಪದ ಕುಣಿತದ ತಂಡಗಳು ಭಾಗವಹಿಸುತ್ತವೆ. ಇಲ್ಲಿ ಪಂಪಾಂಬಿಕೆಯು ಸ್ಥಳೀಯ ಹೆಣ್ಣಾಗಿ, ವಿರೂಪಾಕ್ಷ ಹೊರಗಿನಿಂದ ಬಂದ ವರನಾಗಿ ಕಾಣಿಸಿಕೊಳ್ಳುವುದು ವಿಶೇಷವಾಗಿದೆ. ಮಾತೃ ಪ್ರಧಾನ ವ್ಯವಸ್ಥೆ ಮತ್ತು ಸ್ಥಳೀಯ ಮದುವೆಯ ಆಚರಣೆ ಮತ್ತು ಸಂಸ್ಕೃತಿಗಳು ಈ ಜಾತ್ರೆಯಲ್ಲಿ ಪ್ರಧಾನವಾಗಿ ವ್ಯಕ್ತವಾಗುತ್ತವೆ.

೨. ರಾಮ ಲಕ್ಷಣ ಜಾತ್ರೆ

ಹಂಪಿಯಲ್ಲಿ ನಡೆಯುವ ಕೆಲವೇ ಕೆಲ ಮುಖ್ಯವಾದ ಜಾತ್ರೆಗಳಲ್ಲಿ ಈ ಜಾತ್ರೆಯು ಒಂದು. ಇದು ಸಾಮಾನ್ಯವಾಗಿ ರಾಮನವಮಿ ದಿನದಂದು ಜರುತ್ತದೆ. ಜಾತ್ರೆಯಲ್ಲಿ ವಿವಿಧ ಧಾರ್ಮಿಕ ವಿಧಿವಿಧಾನಗಳು ಜರುಗುತ್ತವೆ. ಅವುಗಳಲ್ಲಿ ರಥೋತ್ಸವ ಒಂದು ಪ್ರಮುಖ ಆಚರಣೆಯಾಗಿದೆ. ಶ್ರೀ ವಿರೂಪಾಕ್ಷಸ್ವಾಮಿ ಜಾತ್ರೆಯಂತೆ ಈ ಜಾತ್ರೆಯಲ್ಲಿಯೂ ಇಲ್ಲಿನ ಹಲವಾರು ಕೆಳ ಸಮುದಾಯಗಳು ಭಾಗವಹಿಸುತ್ತೇವೆ. ಅವು ತಮಗೆ ಪರಂಪರೆಯಿಂದ ಬಳುವಳಿಯಾಗಿ ನಿಗದಿ ಮಾಡಿರುವ ಕೆಲಸ ಕಾರ್ಯಗಳನ್ನು ತಪ್ಪದೇ ಮಾಡುತ್ತಾರೆ.

□□□

ಕೊನೆ ಟಿಪ್ಪಣಿಗಳು

೧. ಎಚ್.ತಿಪ್ಪೇಸ್ವಾಮಿ, ಮಧ್ಯಕಾಲೀನ ಮಹಾನಗರ ಹಂಪಿ, ಪು. ೨೭

೨. ಎಚ್.ತಿಪ್ಪೇಸ್ವಾಮಿ, ಹಂಪಿ ಪ್ರಾಧಿಕಾರ ವ್ಯಾಪ್ತಿಯ ಸ್ಮಾರಕಗಳು, ಸಂ.೨, ಪು.೧–೧೯,

೩. ಅದೇ ಪುಟ. ೨–೩

೪. ಅದೇ ಪುಟ. ೪–೫

೫. ಅದೇ ಪುಟ. ೬-೭

೬. ಶ್ರೀನಿವಾಸ್.ಎಲ್., ಹಂಪಿ ಪರಿಸರದ ಆದಿಮಾನವನ ನೆಲೆಗಳು, ಪು.೧೭

೭. ಅದೇ ಪುಟ. ೧೮

೮. ಅದೇ ಪುಟ. ೨೦

೯. ಕೆ.ಬಿ.ಶಿವತಾರಕ್, ೧೯೯೮, ಕರ್ನಾಟಕದ ಪುರಾತತ್ವ ನೆಲೆಗಳು, ಪು. ೪೭

೧೦. ಅದೇ ೪೯

೧೧. ಎಚ್.ತಿಪ್ಪೇಸ್ವಾಮಿ., ಹಂಪಿ ಪ್ರಾಧಿಕಾರದ ವ್ಯಾಪ್ತಿಯ ಸ್ಮಾರಕಗಳು ವರದಿ-೨,

೧೨. ಅದೇ ಪುಟ. ೩

೧೩. ವಿರುಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ,

೧೪. ಅದೇ, ೨೩

೧೫. ಅದೇ, ೨೮

೧೬. ಎಚ್.ತಿಪ್ಪೇಸ್ವಾಮಿ., ಪೂರ್ವೋಕ್ತ,

೧೭. ಶ್ರೀ ನರಸಿಂಹ ಪ್ರಸಾದ್, ಮಾರ್ಗದರ್ಶಕರು, ಹಂಪಿ ಇವರು ನೀಡಿದ ಮಾಹಿತಿ

೧೮. Longhurst : Hampi Ruins, 1981, Asian Educational Services, New Delhi, P. 60.

೧೯. ಅದೇ ಪುಟ. ೬೨

೨೦. ಅದೇ ಪುಟ. ೬೯

೨೧. ಶ್ರೀ. ಪ್ರಕಾಶ್ ಶೆಟ್ಟಿ, ಮಾರ್ಗದರ್ಶಕರು, ಹಂಪಿ ಇವರು ನೀಡಿದ ಮಾಹಿತಿ.

೨೨. Preservation of National Monuments, 1881-82, P. cxxxii.

೨೩. J.D.E. Gribble, History of Deccan, 1981, Vol-1, P. 72.

೨೪. Longhurst, ಅದೇ ಪುಟ. ೭೫

೨೫. ವಿರೂಪಾಕ್ಷಿ ಪೂಜಾರಹಳ್ಳಿ, ಬಳ್ಳಾರಿ ಜಿಲ್ಲೆಯಲ್ಲಿ ಕಲೆಕ್ಟರುಗಳ ಆಳ್ವಿಕೆ (೧೮೦೦-೧೯೪೭): ಒಂದು ಸಮೀಕ್ಷೆ (ಎಂ.ಫಿಲ್. ಪ್ರಬಂಧ), ೫೮

೨೬. Longhurst : Hampi Ruins, 1981, Asian Educational Services, New Delhi, -103, & D.E. Gribble, 1981, History of Deccan, Vol-1,-77

೨೭. The City of Victory Vijayanagar, -23.

೨೮. ವಿರೂಪಾಕ್ಷ ಪೂಜಾರಹಳ್ಳಿ, ೨೦೦೯, ಪೂರ್ವೋಕ್ತ,

೨೯. ಎಚ್.ತಿಪ್ಪೇಸ್ವಾಮಿ, ಪೂರ್ವೋಕ್ತ, ಸಂ.೩, ಪು.೩೬

೩೦. ಅದೇ ಪುಟ. ೩೮

೩೧. ಎಸ್.ವೈ.ಸೋಮಶೇಖರ, ಹಂಪಿಯ ಬಜಾರುಗಳು, ಹೆಚ್ಚಿನ ಓದಿಗಾಗಿ ೧೧,೧೨,

೩೨. Longhurst : Hampi Ruins, 1981, Asian Educational Services, New Delhi, P. 84.

೩೩. Ibid,–೬೭.

೩೪. ಸಿ.ಎಸ್. ಪಾಟೀಲ್, ೧೯೯೪, ಕರ್ನಾಟಕದ ಕೋಟೆಗಳು, ೪೫

೩೫. ಅದೇ, ೪೮

೩೬. ತಿಪ್ಪೇಸ್ವಾಮಿ, ಎಚ್, ಹಂಪಿ(ವಿಜಯನಗರ)ಕೋಟೆಯಲ್ಲಿನ ಶಿಲ್ಪಗಳು, ಆರ್.ಗೋಪಾಲ್, (ಸಂ.), ವಿಜಯನಗರ ಅಧ್ಯಯನ.ಸಂ.೧೫, ಪುಟ. ೬೭–೭೮

೩೭. ವಿವೇಕ ರೈ (ಸಂ), ಪೂರ್ವೋಕ್ತ, ಅಬ್ದುಲ್ ರಜಾಕ್, ಪು.

೩೮. ಆದಿಪರ್ವ, ಸಂಧಿ ೭.೫೦

೩೯. ರಾಮನಾಥ ಚರಿತೆ, ಪುಟ ೬೮–೭೫

೪೦. ಪುರುಷೋತ್ತಮ ಬಿಳಿಮಲೆ ಮತ್ತು ಚಲುವರಾಜು, ಹಂಪಿ ಜಾನಪದ, ಪು.೧೪೦ ನೋಡಿ.

೪೧. ಅದೇ, ೧೪೨

೪೨. ಅದೇ, ೧೨೬–೧೨೭ ವಿವರಕ್ಕೆ ನೋಡಿ.

೪೩. ಚಲುವರಾಜು; ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು.

೪೪. ಅದೇ, ೨೫

೪೫. ಅದೇ, ೨೭

೪೬. ಶ್ರೀ ಗುರು ಓಂ ಸಿದ್ಧಲಿಂಗೇಶ್ವರಸ್ವಾಮಿ (ಅನು), ೧೯೮೩, ಶ್ರೀ ಪಂಪಾ ಮಹಾತ್ಮೆ,

೪೭. ಶ್ರೀಧರರಾವ್ ಪಿಸ್ಸೆ. ೨೦೧೧. ಪಂಪಾಕ್ಷೇತ್ರದ ಅಧಿದೈವ ಕಲ್ಪನೆ. ಆರ್.ಗೋಪಾಲ್.(ಸಂ), ವಿಜಯನಗರ ಅಧ್ಯಯನ.ಸಂ.೧೪,

೪೮. ಎಚ್.ತಿಪ್ಪೇಸ್ವಾಮಿ, ಆದಿಮ, ಪು.೧೨೩

೪೯. ಶ್ರೀಪಾದ, ಅರ್ಚಕರು, ಹಂಪಿ ವಿರೂಪಾಕ್ಷೇಶ್ವರ ದೇವಾಲಯ ಇವರು ನೀಡಿದ ಮಾಹಿತಿ.

೫೦. ಶ್ರೀಧರರಾವ್ ಪಿಸ್ಸೆ, ಪೂರ್ವೋಕ್ತ.

೫೧. ಅದೇ ಮತ್ತು ಎಚ್.ತಿಪ್ಪೇಸ್ವಾಮಿ, ಪೂರ್ವೂಕ್ತ.

೫೨. ಎಚ್.ತಿಪ್ಪೇಸ್ವಾಮಿ, ಪೂರ್ವೋಕ್ತ.

೫೩. ಶ್ರೀಪಾದ, ಅರ್ಚಕರು, ಹಂಪಿ ವಿರುಪಾಕ್ಷೇಶ್ವರ ದೇವಾಲಯ ಇವರು ನೀಡಿದ ಮಾಹಿತಿ.

೫೪. ಗಾದೆಪ್ಪ, ಪಂಪಾಕ್ಷೇತ್ರ, ೧೩

೫೫. ಹಂಪಿ ವಿರೂಪಾಕ್ಷೇಶ್ವರ ದೇವಾಲಯದ ಆಡಳಿತಾಧಿಕಾರಿಗಳು ನೀಡಿದ ಮಾಹಿತಿ.

ಅಧ್ಯಾಯ ಏಳು

ಹಂಪಿಯ ಸಮಕಾಲೀನ ಸಮಸ್ಯೆಗಳು-ಸವಾಲುಗಳು

೭.೧. ವಿಶ್ವ ಪರಂಪರೆಯ ತಾಣವಾಗಿ ಹಂಪಿ

೭.೧.೧. ವಿಶ್ವ ಪರಂಪರೆ ತಾಣದ ಘೋಷಣೆ

೭.೧.೨. ವಿಶ್ವ ಪರಂಪರೆ ತಾಣದ ಅರ್ಹತೆಗಳು ಮತ್ತು ವಿಭಾಗ ಕ್ರಮ

೭.೧.೩. ಹಂಪಿ ವಿಶ್ವ ಪರಂಪರೆಯ ಸಂರಕ್ಷಣೆ

೭.೧.೪. ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದ ಕಾರ್ಯಕ್ಷೇತ್ರದ ನಕ್ಷೆ

೭.೧.೫. ಹಂಪಿ ಸಂರಕ್ಷಣೆ ಯಾರು ಮಾಡಬೇಕು

೭.೨ ಪ್ರವಾಸೋದ್ಯಮದ ಹಿನ್ನೆಲೆಯಲ್ಲಿ ಹಂಪಿ

೭.೨.೧ ಪ್ರವಾಸಿಗರ ಸಮಸ್ಯೆಗಳು

ಅಧ್ಯಾಯ ಏಳು

ಹಂಪಿಯ ಸಮಕಾಲೀನ ಸಮಸ್ಯೆಗಳು ಮತ್ತು ಸವಾಲುಗಳು

ಪ್ರಸ್ತಾವನೆ

ಹಂಪಿ ತುಂಗಭದ್ರೆಯ ದಕ್ಷಿಣ ತೀರ ಪ್ರದೇಶದಲ್ಲಿ ಗುಡ್ಡ-ಬೆಟ್ಟಗಳ ಆವರಣದಲ್ಲಿ ವಿಜಯನಗರ ರಾಜಧಾನಿಯ ಹೆಸರಿನಿಂದಲೇ ಪ್ರಖ್ಯಾತವಾಯಿತು. ಅದಕ್ಕೂ ಪೂರ್ವದಲ್ಲಿ ಈ ನದಿಯ ಉತ್ತರ ದಡದಲ್ಲಿ ಆನೆಗೊಂದಿಯೆಂಬ ಪ್ರಾಚೀನ ಪಟ್ಟಣವೂ ಅಸ್ತಿತ್ವದಲ್ಲಿ ಇದ್ದಿತು. ಈ ಹೊಸ ರಾಜಧಾನಿ ಸ್ಥಳವು ಪೌರಾಣಿಕ ಐತಿಹ್ಯಗಳ ಆವರಣದಲ್ಲಿ ಹಂಪಿ ಪುಣ್ಯ ಸ್ಥಳ, ಪವಿತ್ರ ಕ್ಷೇತ್ರವೆಂದು ಗೌರವವನ್ನು ತಳೆದಿತ್ತು. ಪರಂಪರಾಗತ ಸ್ಥಳೀಯ ನಂಬಿಕೆಯಂತೆ, ರಾಮಾಯಣದಲ್ಲಿ ವರ್ಣಿಸಲಾದ ಪಂಪಾಸರೋವರವು ಮತ್ತು ವಾನರಾಧಿರಾಜನಾದ ವಾಲಿಯ ರಾಜಧಾನಿ ಕಿಷ್ಕಿಂಧೆ ಇದೇ ಪ್ರದೇಶದಲ್ಲಿ ಇದ್ದಿತು.

೭ನೆಯ ಶತಮಾನದ ಚಾಲುಕ್ಯ ವಂಶದ ವಿನಯಾದಿತ್ಯನ ಒಂದು ತಾಮ್ರಶಾಸನದಲ್ಲಿ ಈ ಸ್ಥಳವನ್ನು ಪಂಪಾಕ್ಷೇತ್ರವೆಂದು ಕರೆದಿದೆ. ಈ ಸ್ಥಳದ ಅಧಿಷ್ಠಾನ ದೇವನಾದ ಶ್ರೀವಿರೂಪಾಕ್ಷ ದೇವನನ್ನು ೧೧ನೇ ಶತಮಾನದ ಒಂದು ಶಿಲಾಶಾಸನದಲ್ಲಿ ಪಂಪಾಪತಿ ಮಹಾಕಾಲವೆಂದು ಸಂಬೋಧಿಸಿದೆ. ಆರಂಭದ ಕೆಲವು ಶಾಸನಗಳಲ್ಲಿ ಈ ರಾಜಧಾನಿ ನಗರಿಯನ್ನು ಅಂಕರೂಪದಿಂದ ಇಲ್ಲವೆ ಅಧಿಕ ವ್ಯಾಪ್ತಿಯಿಂದ 'ಶ್ರೀವಿರೂಪಾಕ್ಷಪುರ', 'ಹೊಸಪಟ್ಟಣ', 'ಹೊಸ ಹಂಪೆಯ ಪಟ್ಟಣ', 'ಹಸ್ತಿನಾವತಿ', 'ಹಂಪೆ ಹಸ್ತಿನಾವತಿ', 'ಕುಂಜರ ಕೋಣ', 'ವಿದ್ಯಾನಗರ' ಎಂಬ ನಾನಾ ಹೆಸರುಗಳಿಂದ ಕರೆಯಲಾಗುತ್ತಿತ್ತು.

ವಿಶ್ವವಿಖ್ಯಾತ ಹಂಪಿ ಇಂದು ಹಲವು ಕಾರಣಗಳಿಗಾಗಿ ನಮಗೆ ಮುಖ್ಯವಾಗಿದೆ. ಇಲ್ಲಿರುವ ಸ್ಮಾರಕಗಳು ಜಗತ್ತಿನಲ್ಲೇ ಪ್ರಸಿದ್ಧಿ ಆಗಿವೆ. ಆದ್ದರಿಂದ ದೇಶ ವಿದೇಶಗಳಿಂದ ಇಂದು ಹಂಪಿ ವೀಕ್ಷಣೆಗೆ ಭೇಟಿ ನೀಡುತ್ತಾರೆ. ಅದೇ ರೀತಿ ಧಾರ್ಮಿಕ ಹಿನ್ನೆಲೆಯಲ್ಲಿ ಬಹುಹಿಂದಿನಿಂದಲೂ ಜನ ಇಲ್ಲಿಗೆ ಬಂದು ಹೋಗುತ್ತಾರೆ. ಹಿಂದೆ ಹಂಪಿಯಲ್ಲಿ ರಾಜಪ್ರಭುತ್ವ ಇದ್ದ ಕಾಲದಲ್ಲಿ ಜನರು ರಾಜನಿಗೆ ಎದುರುಕೊಂಡು ಇಲ್ಲಿಗೆ ಜನರು ಬರುತ್ತಿದ್ದರು. ಅನಂತರ ಪ್ರಜಾಪ್ರಭುತ್ವ ಬಂದ ಕಾಲದಲ್ಲಿ ನಮ್ಮ ಪ್ರಭುತ್ವಗಳು ಆಚರಿಸುವ ಉತ್ಸವ ಮೊದಲಾದ ಸರ್ಕಾರಿ ಕಾರ್ಯಕ್ರಮಗಳಲ್ಲಿ ಕೆಲವೇ ಜನರು ಮಾತ್ರ ಭಾಗವಹಿಸುತ್ತಾರೆ. ಪ್ರಭುತ್ವಕ್ಕಿಂತಲೂ ಮಿಗಿಲಾದುದು ದೈವ ಎಂದು ನಂಬಿರುವ ಜನರು ಹಂಪಿಯ ಅಧಿದೈವವಾದ ವಿರೂಪಾಕ್ಷನ ಮೇಲಿನ ದೈವಭಕ್ತಿಯಿಂದ ಅಸಂಖ್ಯಾತ ಜನರು ಬಹುಹಿಂದಿನಿಂದಲೂ ಸರದಿ ಸಾಲಿನಲ್ಲಿ ಹಂಪಿಗೆ ಬರುತ್ತಿದ್ದರು. ಅದೇ

ದೈವಭಕ್ತಿ ಇಂದಿಗೂ ಜನರನ್ನು ತನ್ನತ್ತ ಆಕರ್ಷಿಸುತ್ತಿದೆ. ಆ ಕಾರಣಕ್ಕಾಗಿ ಜನರು ತಪ್ಪದೇ ಹಂಪಿಗೆ ಬಂದು ಹೋಗುತ್ತಾರೆ. ಹಂಪಿಗೆ ವಿವಿಧ ಉದ್ದೇಶಗಳನ್ನು ಇಟ್ಟುಕೊಂಡು ಆಗಮಿಸುತ್ತಿರುವ ಪ್ರವಾಸಿಗರು ಇಂದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅದೇ ರೀತಿ ಪ್ರವಾಸೋದ್ಯಮದ ಮತ್ತು ವಿಶ್ವಪರಂಪರೆಯ ತಾಣವಾಗಿರುವ ಹಂಪಿ ಹತ್ತು ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಅವುಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

೭.೧ ವಿಶ್ವಪರಂಪರೆಯ ತಾಣವಾಗಿ ಹಂಪಿ

ಹಂಪಿಯನ್ನು ಬಯಲು ವಸ್ತುಸಂಗ್ರಹಾಲಯ ಎಂದು ಕರೆಯಲಾಗುತ್ತದೆ. ಇಲ್ಲಿನ ಭವ್ಯ ಪರಂಪರೆ ಮತ್ತು ಶ್ರೀಮಂತಿಕೆಯ ಇತಿಹಾಸದಿಂದಾಗಿ ಹಂಪಿಯು ೧೯೮೬ ವಿಶ್ವ ಪರಂಪರೆ (World Heritage List) ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಇದರಿಂದ ಯುನೆಸ್ಕೋ(UNESCO) ಎಂಬ ಅಂತರಾಷ್ಟ್ರೀಯ ಸಂಸ್ಥೆಯು ಹಂಪಿಯ ರಮಣೀಯತೆಯನ್ನು ಕಾಪಾಡಲು ಮತ್ತು ಭಗ್ನಗೊಂಡಿರುವ ಸ್ಮಾರಕಗಳನ್ನು ಯಥಾವತ್ತಾಗಿ ಪ್ರತಿಷ್ಠಾಪಿಸಲು ಕಾರ್ಯೋನ್ಮುಖವಾಗಿದೆ. ಅಷ್ಟೇ ಅಲ್ಲದೇ ಹಂಪಿಗೆ ಪ್ರವಾಸಿಗರನ್ನು ಆಕರ್ಷಿಸಲು ದೇಶ-ವಿದೇಶಗಳಲ್ಲಿ ಕಲಾಕೃತಿಗಳ ಪ್ರದರ್ಶನ, ವಿದ್ವಾಂಸರೊಂದಿಗೆ ಚರ್ಚೆ, ನೃತ್ಯ, ರೂಪಕಗಳನ್ನು ಏರ್ಪಡಿಸುತ್ತಾ ಕಲಾರಸಿಕರನ್ನು ಸೆಳೆಯುವಲ್ಲಿ ನಿರತವಾಗಿದೆ. ಇದಕ್ಕಾಗಿ ಹಂಪಿ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ಉತ್ಖನನ ನಿರಂತರವಾಗಿ ನಡೆದಿದೆ. ಈ ಭಾಗದಲ್ಲಿದ್ದ ಪ್ರವಾಸಿ ತಾಣಗಳ ರಕ್ಷಣೆಗಾಗಿ ಮುಂಜಾಗ್ರತಾ ಕ್ರಮಗಳನ್ನು ಕೇಂದ್ರ ಪುರಾತತ್ವ ಸರ್ವೇಕ್ಷಣಾ ಇಲಾಖೆ ಹಾಗೂ ಕೇಂದ್ರ, ರಾಜ್ಯ ಪ್ರವಾಸೋದ್ಯಮ ಇಲಾಖೆ ಜಂಟಿಯಾಗಿ ಕಾರ್ಯಾಚರಣೆಗೆ ಇಳಿದಿವೆ. ಈ ಹಿನ್ನೆಲೆಯಲ್ಲಿ ಹಂಪಿ ವೀಕ್ಷಣೆಗೆ ಆಗಮಿಸುವ ಪ್ರವಾಸಿಗರ ಸಂಖ್ಯೆ ನಿರಂತರವಾಗಿ ಹೆಚ್ಚುತ್ತಿದೆ. ವಿಶ್ವಪರಂಪರೆಯ ಅರ್ಥ, ವಿಶ್ವಪರಂಪರೆ ಪಟ್ಟಿಗೆ ಸೇರಿಸುವ ಕ್ರಮ, ಅದರ ಔಚಿತ್ಯ ಮತ್ತು ಹಂಪಿಯನ್ನು ವಿಶ್ವಪರಂಪರೆ ಪಟ್ಟಿಗೆ ಸೇರಿಸಿದ ಕ್ರಮ ಮತ್ತು ವಿಶ್ವಪರಂಪರೆಯ ಕೇಂದ್ರವಾಗಿರುವ ಹಂಪಿ ಮತ್ತು ಅಲ್ಲಿನ ಜನರು ಎದುರಿಸುತ್ತಿರುವ ಕೆಲ ಅತಿಮುಖ್ಯ ಸಮಸ್ಯೆಗಳನ್ನು ಇಲ್ಲಿ ಅವಲೋಕಿಸಲಾಗಿದೆ.

ನಮ್ಮ ಹಿರಿಯರಿಂದ ನಮಗೆ ಬಳುಬಳಿಯಾಗಿ ಬಂದ ಸಂಪ್ರದಾಯ, ಆಚರಣೆ, ಹಬ್ಬ, ಜಾತ್ರೆ, ಕಲಾ ಪದ್ಧತಿ ಹಾಗೂ ಉಳಿದು ಬಂದಿರುವ ದೇವಾಲಯಗಳು, ಸ್ಮಾರಕಗಳನ್ನು ಮತ್ತು ವಸ್ತುಗಳನ್ನು ನಮ್ಮ ಪರಂಪರೆ ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ಪರಂಪರೆಯನ್ನು ಮೂರ್ತ/ಸ್ಥಿರ ಪರಂಪರೆ(Tengable Heritage), ಅಮೂರ್ತ/ಅಸ್ಥಿರ ಪರಂಪರೆ (Intengable Heritage), ನೈಸರ್ಗಿಕ ಪರಂಪರೆ.[೧](Natural Heritage) ಎನ್ನುವ ಮೂರು ವಿಭಾಗಗಳಾಗಿ ಮಾಡಲಾಗಿದೆ. ಸ್ಥಿರ ಪರಂಪರೆಯಲ್ಲಿ ಸ್ಥಿರವಾದ ಕಟ್ಟಡಗಳು, ಅರಮನೆಗಳು, ಕೋಟೆಗಳು ಇತ್ಯಾದಿಗಳು ಬರುತ್ತವೆ. ಅದೇ ರೀತಿ ಅಸ್ಥಿರ ಪರಂಪರೆ ಎಂದರೆ ಕಲೆ, ಹಾಡುಗಾರಿಕೆ, ಸಂಪ್ರದಾಯ, ಹಬ್ಬ-ಜಾತ್ರೆ, ಲೋಹಗಾರಿಕೆ, ಕರಕುಶಲ ಕಲೆ, ವೈದ್ಯ ಪದ್ಧತಿ ದಿನನಿತ್ಯದ ಆಚರಣೆಗಳು ಇತ್ಯಾದಿಗಳು ಇದರಲ್ಲಿ ಬರುತ್ತವೆ. ನೈಸರ್ಗಿಕ ಪರಂಪರೆಯಲ್ಲಿ ವಿಶೇಷವಾಗಿರುವ

ನಿಸರ್ಗದತ್ತ ಬೆಟ್ಟ ಗುಡ್ಡಗಳು, ಸರೋವರ, ಗುಹೆ, ಅರಣ್ಯ, ಸಸ್ಯ ಹಾಗೂ ಜೀವ ಸಂಕುಲಗಳು ಬರುತ್ತವೆ. ಪ್ರತಿಯೊಂದು ದೇಶಕ್ಕೂ ತನ್ನದೇ ಆದ ಪರಂಪರೆ ಇರುತ್ತದೆ. ಅವುಗಳನ್ನು ಸಂರಕ್ಷಣೆ ಆಯಾ ದೇಶಗಳ ಸರ್ಕಾರದ ಹೊಣೆಯಾಗಿರುತ್ತದೆ. ಇದೊಂದು ಮುಖ್ಯ ಆದ್ಯತೆಯ ಕೆಲಸವಾಗಬೇಕೆಂದು ಬಯಸಿದ ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ಯುನೆಸ್ಕೊ ವಿಶ್ವದ ಚಾರಿತ್ರಿಕ, ಸಾಂಸ್ಕೃತಿಕ, ನೈಸರ್ಗಿಕ ಮಹತ್ವ ಪಡೆದ ಸ್ಥಳಗಳನ್ನು ವಿಶ್ವ ಪರಂಪರೆಯ ತಾಣಗಳೆಂದು ಗುರುತಿಸಿ ಅವುಗಳ ಸಂರಕ್ಷಣೆಗಾಗಿ ವಿಶೇಷ ಕಾಯ್ದೆಗಳನ್ನು ಅನುಷ್ಠಾನಕ್ಕೆ ತಂದಿದೆ. ಇದಕ್ಕಾಗಿ ಅದು ಕೊಟ್ಯಾಂತರ ಹಣವನ್ನು ಪ್ರತಿ ವರ್ಷ ಖರ್ಚುಮಾಡುತ್ತಿದೆ. ಇದು ತನ್ನ ೧೯೭೨ರ ಅಧಿವೇಶನದಲ್ಲಿ ನೈಸರ್ಗಿಕ ಮತ್ತು ಸಾಂಸ್ಕೃತಿಕ ಪ್ರದೇಶಗಳಲ್ಲಿ ಆಗುತ್ತಿರುವ ತೀವ್ರ ಬದಲಾವಣೆಗಳನ್ನು ಗಮನಿಸಿ ಅವುಗಳ ರಕ್ಷಣೆಗೆ ಮುಂದಾಯಿತು. ಮನುಕುಲದ ಪರಂಪರೆಯನ್ನು ಮುಂದಿನ ಪೀಳಿಗಿಗೆ ಉಳಿಸಿ ಕೊಡಬೇಕೆಂಬ ಸದಾಶಯದೊಂದಿಗೆ, ಇದಕ್ಕೆ ಮಾರಕವಾಗುವಂತಹ ಕ್ರಮಗಳನ್ನು ಕಡಿಮೆ ಮಾಡಲು ಸಂಕಲ್ಪ ಮಾಡಿತು. ಈ ನಿಟ್ಟಿನಲ್ಲಿ ಅದು ಕೆಲ ಒಪ್ಪಂದಗಳನ್ನು ತನ್ನ ಸದಸ್ಯ ರಾಷ್ಟ್ರಗಳೊಂದಿಗೆ ಮಾಡಿಕೊಂಡಿತು. ೧೯೭೫ರಲ್ಲಿ ಪರಂಪರೆಯ ಸಂರಕ್ಷಣೆಗಾಗಿ ಕಟಿ ಬದ್ಧರಾಗಲು ಸುಮಾರು ೨೨ ದೇಶಗಳು ಯುನೋಸ್ಕೊಗೆ ತಮ್ಮ ಒಪ್ಪಿಗೆ ಸೂಚಿಸಿದವು.[೨] ಕಾಲ ಕ್ರಮೇಣ ವಿಶ್ವಪರಂಪರೆಯ ತಾಣಗಳನ್ನು ಗುರುತಿಸುವ ಕೆಲಸ ಬರದಿಂದ ಸಾಗಿತು. ಇದರ ಪರಿಣಾಮವಾಗಿ ಈಗ ಸುಮಾರು ೧೫೩ ದೇಶಗಳ ೯೩೬ ಸಾಂಸ್ಕೃತಿಕ ಮತ್ತು ನೈಸರ್ಗಿಕ ತಾಣಗಳು ವಿಶ್ವಪರಂಪರೆ ಪಟ್ಟಿಯಲ್ಲಿ ಸೇರಿವೆ. ೭೨೫ ಸಾಂಸ್ಕೃತಿಕ, ೧೮೩ ನೈಸರ್ಗಿಕ ಮತ್ತು ೨೮ ಸಾಂಸ್ಕೃತಿಕ ಹಾಗೂ ನೈಸರ್ಗಿಕ ಎರಡೂ ಸೇರಿದ ತಾಣಗಳಾಗಿವೆ. ಇವುಗಳಲ್ಲಿ ಶೇಕಡಾ ೬೬ ಸಾಂಸ್ಕೃತಿಕ ತಾಣಗಳಿವೆ. ಅವುಗಳಲ್ಲಿ ಭಾರತ ದೇಶವು ತನ್ನ ಸ್ಥಾನವನ್ನು ಪಡೆದುಕೊಂಡಿರುವುದು ವಿಶೇಷವಾಗಿದೆ. ಇಂದು ಭಾರತ ದೇಶದಲ್ಲಿ ಸುಮಾರು ೨೮ ಸ್ಥಳಗಳು ವಿಶ್ವ ಪರಂಪರೆ ಪಟ್ಟಿಯಲ್ಲಿವೆ. ಪಟ್ಟದಕಲ್ಲು ಸ್ಮಾರಕಗಳ ಗುಂಪು ಮತ್ತು ಹಂಪಿ ಸ್ಮಾರಕಗಳ ಗುಂಪು ಈ ಮನ್ನಣೆಯನ್ನು ಪಡೆದಿರುವುದು ವಿಶೇಷವಾಗಿದೆ.

೭.೧.೧. ವಿಶ್ವ ಪರಂಪರೆ ತಾಣದ ಘೋಷಣೆ

ಯಾವುದಾದರೂ ತಾಣವನ್ನು ಪರಂಪರೆ ಪಟ್ಟಿಗೆ ಸೇರಿಸುವುದು, ಆಯಾ ದೇಶದ ಸರ್ಕಾರಗಳನ್ನು ಅವಲಂಬಿಸಿದೆ. ೧೯೭೨ರಲ್ಲಿ ನಡೆದ ವಿವಿಧ ದೇಶಗಳ ಸಮಿತಿಯ ಒಪ್ಪಂದದಂತೆ, ಪ್ರತಿ ದೇಶ/ರಾಜ್ಯ ತನ್ನ ಪ್ರದೇಶದಲ್ಲಿರುವ ಸಾಂಸ್ಕೃತಿಕ ಅವಶೇಷಗಳ ಮತ್ತು ನೈಸರ್ಗಿಕ ತಾಣಗಳ ಯಾದಿ/ಪಟ್ಟಿಯನ್ನು ಅಪೇಕ್ಷೆ ಪಟ್ಟಲ್ಲಿ ವಿಶ್ವಪರಂಪರೆ ಹಣಕಾಸು ನಿಧಿಯಿಂದ ಸಹಾಯ ಪಡೆದು ತಯಾರಿಸಲು ಅವಕಾಶಗಳಿವೆ.[೩] ಯಾವುದೇ ದೇಶವು ತನ್ನ ಪರಂಪರೆಯ ತಾಣಗಳನ್ನು ಈ ಪಟ್ಟಿಗೆ ಸೇರಿಸಲು ಕೆಲವು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಇದಕ್ಕಾಗಿ ದೇಶವೊಂದು ಅನುಸರಿಸಬೇಕಾದ ಮೊದಲ ಕ್ರಮ ಏನು? ಇದರ ವಿಧಿ ವಿಧಾನಗಳೇನು? ಮೊದಲಾದವುಗಳ ಕುರಿತು ಇಲ್ಲಿ ಅವಲೋಕಿಸಲಾಗಿದೆ. ಪಟ್ಟಿಗೆ ಸೇರಿಸಲು

ವಿನಂತಿಸುವ ದೇಶ/ರಾಷ್ಟ್ರ ಈ ತಾಣಗಳ ರಕ್ಷಣೆಯ ಬದ್ಧತೆ ಬಗ್ಗೆ ವಿವರಗಳನ್ನು ನೀಡಬೇಕಾಗುತ್ತದೆ.[೪] ದೇಶವೊಂದು ತನ್ನ ದೇಶದಲ್ಲಿನ ಸಾಂಸ್ಕೃತಿಕ ಸ್ವತ್ತು ಇಲ್ಲವೇ ನೈಸರ್ಗಿಕ ತಾಣಗಳ ಚಕ್ಕುಬಂದಿಯೊಡನೆ ಅವುಗಳಿಗೆ ಸಂಬಂಧಿಸಿದ ಸಮಗ್ರ ಮಾಹಿತಿಯನ್ನು ಮೊದಲು ಕ್ರೋಢೀಕರಿಸಬೇಕು. ಅನಂತರ ಇದು ಏಕೆ ಅಥವಾ ಯಾವ ರೀತಿಯಲ್ಲಿ ಇದು ಅದ್ವಿತಿಯ ಮತ್ತು ಸಾರ್ವತ್ರಿಕ ಮಹತ್ವ ಹೊಂದಿದೆ ಎಂದು ವಿವರಿಸುವ ಪ್ರತ್ಯೇಕ ಕಡತವನ್ನು ಆಯಾ ದೇಶ ಸಿದ್ಧಪಡಿಸಬೇಕು. ಈ ಕಡತವನ್ನು ಯುನೆಸ್ಕೊ ಇವರಿಗೆ ಸಲ್ಲಿಸಬೇಕು, ಇದನ್ನು ಮತ್ತೊಂದು ಎನ್.ಜಿ.ಓ. ಸಮಿತಿಯ ಮೌಲೀಕರಣಕ್ಕಾಗಿ ಕಳುಹಿಸಲಾಗುವುದು. ಈ ಎನ್.ಜಿ.ಓ. ಸಂಸ್ಥೆಯು ಸ್ಥಳ ಪರಿಶೀಲನೆಗೆ ಮತ್ತು ಸಂರಕ್ಷಣೆಯ ಅಗತ್ಯದ ಬಗ್ಗೆ ವರದಿ ನೀಡಲು ತಜ್ಞರ ಸಮಿತಿಯೊಂದನ್ನು ಕಳುಹಿಸುವುದು. ತಜ್ಞರಿಂದ ಬಂದ ಈ ವರದಿಯನ್ನು ವಿಶ್ವಪರಂಪರೆ ಸಮಿತಿ ಕಚೇರಿಯ ಏಳು ಸದಸ್ಯರ ಉಪ ಸಮಿತಿಯು ಪರಿಶೀಲಿಸುತ್ತದೆ. ೧೯೭೨ ಒಪ್ಪಂದದ ಅನ್ವಯ ಶಿಫಾರಸ್ಸಾಗಿರುವ ಸ್ಥಳವು ವಿಶ್ವಪರಂಪರೆ ಪಟ್ಟಿಗೆ ಸೇರಿಸಲು ನಿಜಕ್ಕೂ ಅರ್ಹವಾಗಿದಿಯೋ? ಅದಕ್ಕೆ ಅರ್ಹ ಮಾನದಂಡಗಳಿವೆಯೇ ಮತ್ತು ಈ ತಾಣಗಳ ರಕ್ಷಣೆಗೆ ಸೂಕ್ತ ಕಾನೂನುಗಳಿವೆಯೇ ಎಂದು ಈ ಸಮಿತಿಯು ಪರಿಶೀಲಿಸುತ್ತದೆ. ನಂತರ ಅದು ತನ್ನ ಶಿಫಾರಸ್ಸುಗಳನ್ನು ಸಮಿತಿಗೆ ನೀಡುತ್ತದೆ. ವಿಶ್ವಪರಂಪರೆ ಪಟ್ಟಿಗೆ ಸೇರಿಸುವ, ಮುಂದೂಡುವ ಅಥವಾ ತಿರಸ್ಕರಿಸುವ ನಿರ್ಧಾರವನ್ನು ಪುನಃ ಇಪ್ಪತ್ತೊಂದು ಸದಸ್ಯರ ಸಮಿತಿಯು ಕೈಗೊಳ್ಳುತ್ತದೆ. ಪ್ರಪಂಚದ ನೈಸರ್ಗಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಪ್ರತಿಬಿಂಬಿಸುವ ಅಂಶಗಳಿವೆಯೆ? ಎಂಬುದನ್ನು ವಿಶ್ವ ಪರಂಪರೆ ಪಟ್ಟಿಗೆ ಸೇರಿಸುವ ಮುನ್ನ ಈ ಸಮಿತಿಯು ಎಚ್ಚರಿಕೆಯಿಂದ ಖಾತರಿಪಡಿಸಿಕೊಳ್ಳುತ್ತದೆ.

೭.೧.೨.ವಿಶ್ವ ಪರಂಪರೆ ತಾಣದ ಅರ್ಹತೆಗಳು ಮತ್ತು ವಿಭಾಗ ಕ್ರಮ

ಪಾರಂಪರಿಕ ಸಮಿತಿಯು ಹಲವಾರು ವೈಶಿಷ್ಟ್ಯತೆ ಮತ್ತು ಮಾನದಂಡಗಳನ್ನು ಅನುಸರಿಸಿ ಶಿಫಾರಸ್ಸಾಗಿರುವ ಸ್ಥಳವನ್ನು ಸಾಂಸ್ಕೃತಿಕ ಅಥವಾ ನೈಸರ್ಗಿಕ ಪರಂಪರೆಯ ತಾಣ ಎಂದು ಮೊದಲು ವಿಭಾಗಿಸುತ್ತದೆ.[೫] ಪಾರಂಪರಿಕ ಸಮಿತಿಯು ಸಾಂಸ್ಕೃತಿಕ ಪರಂಪರೆಯನ್ನು ಅವುಗಳ ವೈಶಿಷ್ಟ್ಯತೆಯನ್ನು ಆಧರಿಸಿ ಮೂರು ಬಗೆಯಾಗಿ ವರ್ಗೀಕರಿಸುತ್ತದೆ.

೧. **ಸ್ಮಾರಕಗಳು:** ನಮ್ಮ ಹಿರಿಯರಿಂದ ನಿರ್ಮಿಸಲ್ಪಟ್ಟ ಪ್ರಾಚೀನ ಕಟ್ಟಡಗಳು, ಅಲ್ಲದೇ ಶಿಲ್ಪಗಳು ಮತ್ತು ವರ್ಣಚಿತ್ರಗಳು, ಗುಹಾಂತರ ಮಾನವ ನೆಲೆಗಳು, ಪ್ರಾಚ್ಯವಸ್ತುವುಳ್ಳ ಸ್ಥಳಗಳನ್ನು ಸ್ಮಾರಕಗಳೆಂದು ಗುರುತಿಸಲಾಗುತ್ತದೆ. ಉದಾ:ದೇವಾಲಯಗಳು, ಮಸೀದಿ, ಚರ್ಚುಗಳು, ಅರಮನೆಗಳು, ಧಾರ್ಮಿಕ ಸ್ಥಳಗಳು, ಕೋಟೆಗಳು, ಹಳೆಯ ಶಾಲೆಗಳು, ಮನೆಗಳು, ಹಳೆಯ ಕಾರ್ಖಾನೆಗಳು, ಸಮಾಧಿಗಳಿರುವ ಸ್ಥಳಗಳು ಇತ್ಯಾದಿ.

೨. **ಕಟ್ಟಡಗಳ ಸಮೂಹಗಳು:** ಇವು ಪಟ್ಟಣಗಳಲ್ಲಿ, ಗ್ರಾಮಗಳಲ್ಲಿ ಅಥವಾ ಜಿಲ್ಲೆಯಲ್ಲಿ ಹರಡಿರಬಹುದಾದ ಇತರೆ ಪ್ರಕಾರದ ಕಟ್ಟಡಗಳು ಇದರಡಿಯಲ್ಲಿ ಬರುತ್ತವೆ.

೩. ಸ್ಥಳಗಳು: ಇವು ಮಾನವ ನಿರ್ಮಿತ, ನೈಸರ್ಗಿಕ ಮತ್ತು ಮಾನವ ಸಮೂಹ ನಿರ್ಮಿತ ಪಟ್ಟಣ ಅಥವಾ ಗ್ರಾಮಗಳಲ್ಲಿನ ಭೂ ಸಾದೃಶ್ಯಗಳು ಇದರಡಿಯಲ್ಲಿ ಬರುತ್ತವೆ. ಇದೇ ಪಾರಂಪರಿಕ ಸಮಿತಿಯು ನೈಸರ್ಗಿಕ ಪರಂಪರೆಯ ತಾಣಗಳನ್ನು ಸಹ ಗುರುತಿಸುವಾಗ ಮನುಕುಲದ ನೈಸರ್ಗಿಕ ಪರಂಪರೆ ಕುರಿತಾಗಿ ಈ ಕೆಳಕಂಡ ಮಾನದಂಡಗಳನ್ನು ಆಧಾರವಾಗಿ ಇಟ್ಟುಕೊಂಡು ಅದನ್ನು ಕೆಲವು ಪ್ರಕಾರವಾಗಿ ವಿಭಾಗಿಸುತ್ತದೆ.[೫]

ಅ) ಭೌಗೋಳಿಕ ಮತ್ತು ಜೈವಿಕ ರಚನೆಗಳು: ಕಾಡುಗಳು, ಹಿಮರಾಶಿ, ದ್ವೀಪಗಳು, ಸರೋವರಗಳು, ಗುಹೆಗಳು, ಪರ್ವತಗಳು ಇತ್ಯಾದಿ.

ಆ) ವಿನಾಶದ ಅಂಚಿನಲ್ಲಿರುವ ಸಸ್ಯ ಮತ್ತು ಪ್ರಾಣಿ ವರ್ಗ: ವಿನಾಶದಂಚಿನ ಸಸ್ಯಮತ್ತು ಪ್ರಾಣಿ ವರ್ಗ, ಹವಳ ಗೋಡೆಗಳು, ಉಷ್ಣವಲಯದ ಮಳೆ ಕಾಡುಗಳು ಇತ್ಯಾದಿ.

ಇ) ವಿಶೇಷ ಸ್ಥಳಗಳು: ವಿಶೇಷವಾಗಿ ಗುರ್ತಿಸಲ್ಪಟ್ಟ ಸ್ಥಳಗಳು ಅಥವಾ ಪ್ರದೇಶಗಳು, ರಾಷ್ಟ್ರೀಯ ಉದ್ಯಾನವನಗಳು

ಈ ಮೇಲಿನ ವಿಭಾಗಗಳನ್ನು ಆಧಾರವಾಗಿಟ್ಟುಕೊಂಡು ಗುರುತಿಸಿರುವ ಯಾವುದೇ ತಾಣವು ಕೆಲವು ವಿಶೇಷ ಅರ್ಹತೆಗಳನ್ನು ಹೊಂದಿರಬೇಕಾಗುತ್ತದೆ. ವಿಶ್ವಪರಂಪರೆ ಪಟ್ಟಿಗೆ ಸೇರಿದ ಸಾಂಸ್ಕೃತಿಕ ಅಥವಾ ನೈಸರ್ಗಿಕ ತಾಣಗಳಿಗೆ ಸೇರಿದ ಸಂಪತ್ತು ಅತ್ಯಂತ ವಿಶಿಷ್ಟವಾಗಿರಬೇಕು. ಇದನ್ನು ಮಾನದಂಡವಾಗಿಟ್ಟುಕೊಂಡು ತಾಣವೊಂದನ್ನು ವಿಶ್ವಪರಂಪರೆ ಪಟ್ಟಿಗೆ ಸೇರಿಸುವ ಇಲ್ಲವೇ ಕೈಬಿಡುವ ಕೆಲಸವನ್ನು ಈ ಮೇಲಿನ ಸಮಿತಿ ಮಾಡುತ್ತದೆ. ತಾಣವೊಂದನ್ನು ವಿಶ್ವಪರಂಪರಾ ಪಟ್ಟಿಯಲ್ಲಿ ಸೇರಿಸುವಾಗ ಆ ಸಮಿತಿಯು ಅದರ ಅರ್ಹತೆಯನ್ನು ಈ ಕೆಳಕಂಡ ಅಂಶಗಳಿಗೆ ಹೋಲಿಸಿ ಸೂಕ್ಷ್ಮವಾಗಿ ಪರಿಶೀಲಿಸುತ್ತದೆ. ಅದು ಮರುಸೃಷ್ಟಿಯಾಗಿರಬಾರದು ಮತ್ತು ನೈಜವಾಗಿರಬೇಕು.[೬] ನೈಸರ್ಗಿಕ ತಾಣಗಳು ವಿಶ್ವದಲ್ಲೆ ವಿಶಿಷ್ಟ ಸ್ಥಾನ ಪಡೆದ ಪ್ರದೇಶ ಆಗಿರಬೇಕು ಹಾಗೂ ಮರುಸೃಷ್ಟಿ ಸಾಧ್ಯವಿಲ್ಲದಂತಹ ಪ್ರದೇಶ ಆಗಿರಬೇಕು ಮತ್ತು ಅದು ನೈಜವಾಗಿರಬೇಕು. ಯಾವುದೇ ತಾಣ ಅಥವಾ ಕಟ್ಟಡವು ಬಹಳ ಸಂರಕ್ಷಣೆಗೊಳಗಾಗಿರಬಾರದು. ಅಲಂಕರಣಗೊಂಡ ಅಥವಾ ಶತಮಾನಗಳ ಕಾಲದಲ್ಲಿ ನೈಸರ್ಗಿಕತೆ ಕಳೆದುಕೊಂಡಿರಬಾರದು. ಅದರ ಬಹುಭಾಗ ನಿರ್ಮಾಣವಾದ(ಸೃಷ್ಟಿಯ) ಕಾಲದಲ್ಲಿ ಹೇಗಿತ್ತೋ? ಹಾಗೆಯೇ ಇರಬೇಕು. ಪ್ರಪಂಚದಲ್ಲಿ ಇಂತಹ ಕೆಲವು ಉದಾಹರಣೆಗಳಿವೆ. ಅವುಗಳಲ್ಲಿ ಅಂಗ್‌ಕೋರ್ ವ್ಯಾಟ್ ದೇವಾಲಯ ಸಂಕೀರ್ಣ, ಈಜಿಪ್ಟಿನ ಪಿರಮಿಡ್‌ಗಳು ಮುಖ್ಯವಾಗಿದ್ದು, ತನ್ನ ವೈಶಿಷ್ಟ್ಯತೆಯಿಂದ ಪ್ರಸಿದ್ಧಿಯಾಗಿವೆ. ಇದೇ ರೀತಿ ಅಮೂರ್ತ ಪರಂಪರೆಯ ಸ್ಥಳಗಳನ್ನು ಗುರುತಿಸುವಾಗಲೂ ಮತ್ತು ವಿಭಾಗಿಸುವಾಗಲೂ ಇದೇ ರೀತಿಯ ಮಾನದಂಡಗಳನ್ನು ಅನುಸರಿಸುತ್ತದೆ. ಈ ಅರ್ಹತೆ ಹೊಂದಿ ಮೇಲಿನ ಸಮಿತಿಯಿಂದ ಶಿಫಾರಸ್ಸಾಗಿರುವ ಸ್ಥಳಗಳನ್ನು ಮಾತ್ರ ವಿಶ್ವಪರಂಪರೆಯ ತಾಣವೆಂದು ಯುನೆಸ್ಕೋ ಆ ನಂತರ ಘೋಷಿಸುತ್ತದೆ.[೭]

ವಿಶ್ವ ಪಾರಂಪರಿಕ ತಾಣಗಳನ್ನು ಗುರುತಿಸುವ ಮತ್ತು ಅವುಗಳನ್ನು ಉಳಿಸುವ ಅಭಿಯಾನವನ್ನು ಅನೇಕ ದೇಶಗಳು ಹಲವಾರು ವರ್ಷಗಳಿಂದ ಮಾಡುತ್ತಾ ಬರುತ್ತಿವೆ. ಆದರೆ ಇದನ್ನು ಮತ್ತಷ್ಟು ಜನಪ್ರಿಯಗೊಳಿಸಲು ಮತ್ತು ಜನರ ಸಹಭಾಗಿತ್ವವನ್ನು ಒಳಗೊಳ್ಳುವಂತೆ ಮಾಡಲು ವಿಶ್ವ ಪರಂಪರೆಯ ಕೇಂದ್ರ ಮತ್ತು ಯುನೆಸ್ಕೊ ಸಂಯುಕ್ತವಾಗಿ ಯುವ ಜನತೆಯ ಕೈಯಲ್ಲಿ ವಿಶ್ವ ಪರಂಪರೆ ಎಂಬ ಯೋಜನೆಯನ್ನು ೧೯೯೪ ರಲ್ಲಿ ಕಾರ್ಯಾರಂಭ ಮಾಡಿದೆ. ಈ ಯೋಜನೆಯ ಉದ್ದೇಶಗಳು ಇಂತಿವೆ:

೧. ಯುವ ಜನತೆಗೆ ತಮ್ಮ ಚಿಂತೆ ಮತ್ತು ಕಾಳಜಿಯನ್ನು ವ್ಯಕ್ತಪಡಿಸಲು ಮತ್ತು ಸಂರಕ್ಷಣೆ ಹಾಗೂ ಸಂಸ್ಕೃತಿಕ ಮತ್ತು ನೈಸರ್ಗಿಕ ತಾಣಗಳ ಅಭಿವೃದ್ಧಿಯಲ್ಲಿ ಭಾಗವಹಿಸಲು ಅನುಕೂಲ ಮಾಡುವುದು.

೨. ವಿಶ್ವ ಪರಂಪರೆಯ ಕುರಿತಾದ ಶಿಕ್ಷಣ ಶಾಲಾ ಕಾಲೇಜುಗಳ ಪಠ್ಯಗಳಲ್ಲಿ ಅಳವಡಿಕೆ ಮತ್ತು ಬೋಧನೆ ಮತ್ತು ಆ ಹಂತದಿಂದಲೇ ಅವರನ್ನು ಇದರಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವುದು.

೩. ಯುವ ಜನತೆಯನ್ನು ವಿಶ್ವ ಪರಂಪರೆ ಕುರಿತಾದ ಬೇಸಿಗೆ ಶಿಬಿರ ಮತ್ತು ಪರಂಪರೆ ಸಂರಕ್ಷಣೆ ಕುರಿತಾದ ತರಬೇತಿ, ಕಾರ್ಯಾಗಾರಗಳು ಮತ್ತು ಕಮ್ಮಟಗಳಲ್ಲಿ ಭಾಗವಹಿಸಲು ಉತ್ತೇಜಿಸುವುದು.

೪. ಆಧುನಿಕ ತಂತ್ರಜ್ಞಾನ ಬಳಸಿ ವಿಶ್ವ ಪರಂಪರೆ ಕುರಿತ ಶಿಕ್ಷಣವನ್ನು ಪರಿಣಾಮಕಾರಿಯಾಗಿ ಬೋಧಿಸುವ ಮಾರ್ಗೋಪಾಯಗಳನ್ನು ಅನುಸರಿಸುವುದು.

ಸುಮಾರು ೧೩೦ ದೇಶಗಳ ಯುವ ಜನತೆ ಭಾಗವಹಿಸುತ್ತಿರುವ ಈ ಯೋಜನೆ ಫಲಕಾರಿಯಾಗಿದೆ. ಐದು ಖಂಡಗಳಲ್ಲಿ ಸುಮಾರು ಹತ್ತು ಅಂತರಾಷ್ಟ್ರೀಯ ಚಿಂತನಾ ಸಭೆಗಳಲ್ಲಿ ಪ್ರಪಂಚದಾದ್ಯಂತ ಬಂದ ಯುವ ಜನತೆ ಪರಸ್ಪರ ಭೇಟಿಯ ಮೂಲಕ ಮತ್ತೊಬ್ಬರ ನೈಸರ್ಗಿಕ ಮತ್ತು ಸಾಂಸ್ಕೃತಿಕ ಸಂಪತ್ತು ಕುರಿತು ತಾವು ಅರಿತು, ಮತ್ತೊಬ್ಬರಲ್ಲಿ ಜಾಗೃತಿಯನ್ನುಂಟು ಮಾಡಿದ್ದಾರೆ. ದೇಶದ ಇತರೆಡೆಯಂತೆ ಕರ್ನಾಟಕ ರಾಜ್ಯದ ಕೆಲವು ಪ್ರದೇಶಗಳ ವೈಶಿಷ್ಟ್ಯತೆಯನ್ನು ಯುನೆಸ್ಕೋ ಗುರುತಿಸಿ ಅವುಗಳನ್ನು ವಿಶ್ವಪರಂಪರೆಯ ತಾಣಗಳೆಂದು ಗುರುತಿಸಿದೆ. ಹಂಪಿಯನ್ನು ೧೯೮೬ರಲ್ಲಿ ಮತ್ತು ಪಟ್ಟದಕಲ್ಲನ್ನು ೧೯೮೭ರಲ್ಲಿ ವಿಶ್ವಪರಂಪರೆಯ ತಾಣಗಳೆಂದು ಗುರುತಿಸಿ ಅವುಗಳ ಸಂರಕ್ಷಣೆಗೆ ಮುಂದಾಗಿದೆ.[೮]

೭.೧.೩. ಹಂಪಿ ವಿಶ್ವ ಪರಂಪರೆಯ ಸಂರಕ್ಷಣೆ

ಹಂಪಿ ೧೪-೧೬ನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದ ಈ ಪ್ರದೇಶವು ಅನೇಕ ದೇವಾಲಯಗಳನ್ನು ಹೊಂದಿದೆ. ಬಹಳ ಜನ ವಿದೇಶಿ ಪ್ರವಾಸಿಗರು ಈ ನಗರವನ್ನು ವರ್ಣಿಸಿದ್ದಾರೆ. ಇದನ್ನು ದಕ್ಷಿಣಕಾಶಿ, ಪಂಪಾಕ್ಷೇತ್ರ ಎಂದೆಲ್ಲಾ

ಕರೆಯಲಾಗುತ್ತದೆ. ವಿಜಯನಗರದ ಅರಸರು ತಮ್ಮ ಕಾಲಾವಧಿಯಲ್ಲಿ ವಿವಿಧ ಪ್ರಕಾರದ ಅಸಂಖ್ಯಾತ ಸ್ಮಾರಕಗಳನ್ನು ನಿರ್ಮಿಸಿದರು. ಇದರಿಂದ ಹಲವಾರು ಸ್ಮಾರಕಗಳು ಇಲ್ಲಿ ನಿರ್ಮಾಣಗೊಂಡು ಇದು ಬಯಲುವಸ್ತು ಸಂಗ್ರಹಾಲಯ, ಸ್ಮಾರಕಗಳ ತವರೂರು ಎಂದು ಇದು ಖ್ಯಾತವಾಯಿತು.[೯] ಹೀಗೆ ನಿರ್ಮಿತವಾದ ಸ್ಮಾರಕಗಳು ಕಾಲಕ್ರಮೇಣ ಬೇರೆ ಬೇರೆ ಕಾರಣಕ್ಕಾಗಿ ಅವಸಾನದತ್ತ ಮುಖಮಾಡಿವೆ. ವಿನಾಶದಂಚಿದಲ್ಲಿರುವ ಸ್ಮಾರಕಗಳ ದಾಖಲೀಕರಣ ಮತ್ತು ಅವುಗಳ ಸಂರಕ್ಷಣೆ ಮೊದಲು ಇಲ್ಲಿ ಬ್ರಟಿಷ್ ಅಧಿಕಾರಿಗಳಿಂದ ಆರಂಭವಾಯಿತು. ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಬಳ್ಳಾರಿಯು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ ೨೨ ಜಿಲ್ಲೆಗಳಲ್ಲಿ ಒಂದಾಗಿತ್ತು. ಆ ಕಾರಣಕ್ಕಾಗಿ ಹಂಪಿಯ ಸ್ಮಾರಕಗಳ ರಕ್ಷಣೆ ಕಾರ್ಯ ಅವರ ಕಾಲದಲ್ಲೇ ಆರಂಭವಾಯಿತು. ಹಂಪಿಯ ಇತಿಹಾಸವನ್ನು ಹಿಡಿದಿಡುವ ಮತ್ತು ಸ್ಮಾರಕಗಳ ಸಂರಕ್ಷಣೆಯ ಕೆಲಸವನ್ನು ಬ್ರಿಟಿಷ್ ಅಧಿಕಾರಿಗಳು ಮೊದಲು ಆರಂಭಿಸಿದರು. ಅವರಲ್ಲಿ ಬಳ್ಳಾರಿ ಕಲೆಕ್ಟರ್ ಆಗಿದ್ದ ರಾಬರ್ಟ್ ಸಿವಿಲ್‌ರವರು ಹಂಪಿಯ ೧೮೭೭ ರಲ್ಲಿ ಅವಸಾನದಂಚಿನಲ್ಲಿದ್ದ ಕೆಲಸ್ಮಾರಕಗಳ ಸಂರಕ್ಷಣೆ ಮಾಡಿದರು. ಇದಕ್ಕಿಂತಲೂ ಮುಖ್ಯವಾಗಿ ಇಲ್ಲಿ ಅವರು ವಿಜಯನಗರ ಸಾಮ್ರಾಜ್ಯದ ಕುರಿತು ಅನ್ವೇಷಣೆ ಕೈಗೊಂಡು ಅವುಗಳನ್ನು 'ಫಾರಗೆಟನ್ ಎಂಪೈರ್' ಎನ್ನುವ ಕೃತಿಯನ್ನು ಹೊರತಂದು ಇಡೀ ಜಗತ್ತಿಗೆ ಹಂಪಿಯನ್ನು ಮೊದಲು ಪರಿಚಯಿಸಿದರು. ಅದೇ ರೀತಿ ೧೮೦೦-೧೮೦೭ರ ವರೆಗೆ ಕಲೆಕ್ಟರ್ ಸರ್ ಥಾಮಸ್ ಮನ್ರೋ ಮತ್ತು ೧೮೨೪-೧೮೩೮ರ ವರಗೆ ಕಲೆಕ್ಟರ್ ಆಗಿದ್ದ ಎಫ್.ಡಬ್ಲ್ಯೂ. ರಾಬರ್ಟ್‌ಸನ್ ಅವರು ಹಂಪಿಯ ಸ್ಮಾರಕಗಳನ್ನು ವಿಕ್ಷಿಸಿ ಅವುಗಳಲ್ಲಿ ಕಲ್ಲಿನ ತೇರು, ವಿರೂಪಾಕ್ಷ ದೇವಾಲಯದ ಮುಖ್ಯಗೋಪುರಗಳಿಗೆ ತಡೆ ಗೋಡೆ ನಿರ್ಮಿಸಿ ಅವುಗಳು ಬಿಳದಂತೆ ಸಂರಕ್ಷಣೆ ಮಾಡಿಸಿದರು. ೧೮೮೫ರಲ್ಲಿ ವಿರೂಪಾಕ್ಷ ದೇವಾಲಯದ ರಥೋತ್ಸವಕ್ಕೆ ಬಳ್ಳಾರಿ ಕಲೆಕ್ಟರ್ ಅನುಮತಿ ನೀಡಿದ್ದು ಬಹಳ ಮುಖ್ಯವಾದ ಅಂಶ. ಹಂಪಿಯ ಅಸಂಖ್ಯಾತ ಸ್ಮಾರಕಗಳ ಸಮೂಹವನ್ನು ಅವುಗಳ ವಿಶೇಷತೆಯನ್ನು ಗಮನಿಸಿದ ಯುನೆಸ್ಕೋ ೧೯೮೬ರಲ್ಲಿ ಹಂಪಿ ಪ್ರದೇಶವನ್ನು ವಿಶ್ವಪರಂಪರೆ ತಾಣವೆಂದು ಘೋಷಿಸಿತು. ಭಾರತೀಯ ಪುರಾತತ್ವ ಸರ್ವೇಕ್ಷಣೆ ಇಲಾಖೆ ೫೬ ಸ್ಮಾರಕಗಳನ್ನು ಮತ್ತು ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಸುಮಾರು ೧೨೦೦ ಸ್ಮಾರಕಗಳನ್ನು ಈ ಪ್ರದೇಶದಲ್ಲಿ ಗುರ್ತಿಸಿದೆ.[೧೦] ಯುನೆಸ್ಕೋ ನಿರ್ದೇಶನದಂತೆ ಕರ್ನಾಟಕ ಸರ್ಕಾರವು ಹಂಪಿ ವಿಶ್ವಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರವನ್ನು ೨೦೦೧ರಲ್ಲಿ ಸ್ಥಾಪಿಸಿದೆ. ಇದರ ೨೦೦೨ರ ಕಾಯ್ದೆ ಅನ್ವಯ ಇದರ ವ್ಯಾಪ್ತಿಯಲ್ಲಿ ಬಳ್ಳಾರಿ ಜಿಲ್ಲೆಯ ೧೫ ಗ್ರಾಮಗಳು ಮತ್ತು ಕೊಪ್ಪಳ ಜಿಲ್ಲೆಯ ೧೪ ಗ್ರಾಮಗಳನ್ನು ಒಳಗೊಂಡಂತೆ ಒಟ್ಟು ೨೯ ಗ್ರಾಮಗಳು ಬರುತ್ತವೆ. ಈ ಪ್ರಾಧಿಕಾರವು ಇಲ್ಲಿರುವ ಸಾಂಸ್ಕೃತಿಕ ಮತ್ತು ನೈಸರ್ಗಿಕ ಸಂಪತ್ತನ್ನು ಗುರುತಿಸಿ ಸಂರಕ್ಷಣೆ ಮಾಡುವುದು ಮತ್ತು ಇಲ್ಲಿರುವ ಸ್ಮಾರಕಗಳನ್ನು ಸಂರಕ್ಷಣೆ ಮಾಡುವುದು ಹಾಗೂ ಅನಿಯಮಿತ ಅಭಿವೃದ್ಧಿಯನ್ನು ತಡೆಯುವುದು ಮತ್ತು ಜನರ ಅಭಿವೃದ್ಧಿ ಮಟ್ಟವನ್ನು ಹೆಚ್ಚಿಸುವ ಪ್ರಧಾನ ಉದ್ದೇಶಗಳನ್ನು ಹೊಂದಿದೆ. ಇದು ತನ್ನ ಕಾರ್ಯ ವ್ಯಾಪ್ತಿಯ ಹಳ್ಳಿಗಳನ್ನು ಕೋರ್, ಬಫ಼ರ್

ಮತ್ತು ಫೆರಿಪೆರಿ ಎಂಬ ಮೂರು ಭಾಗಗಳನ್ನಾಗಿ ವಿಂಗಡಿಸಿಕೊಂಡಿದ್ದು, ಜನರ ಅಗತ್ಯತೆಗಳನ್ನು ಅನುಸರಿಸಿ ಕಟ್ಟಡ ಕಾಮಗಾರಿ ಮತ್ತು ವ್ಯಾಪಾರ ಪರವಾನಿಗೆಯನ್ನು ನೀಡುತ್ತಿದೆ. ಆದರೆ ಈ ಪ್ರದೇಶದ ನಿರ್ವಹಣೆ ಮತ್ತು ಅಭಿವೃದ್ಧಿಯಲ್ಲಿ ಪ್ರಾಧಿಕಾರವು ಹಲವಾರು ಸಮಸ್ಯೆಗಳನ್ನು ಎದುರಿಸುತ್ತದೆ. ಹಂಪಿಯ ಪ್ರಾಚೀನ ಪರಂಪರೆಯನ್ನು ಸಂರಕ್ಷಿಸಿ ಅದನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಬಹು ದೊಡ್ಡ ಜವಾಬ್ದಾರಿ ಪ್ರಾಧಿಕಾರದ ಮೇಲಿದೆ. ಈ ಹಿನ್ನೆಲೆಯಲ್ಲಿ ಅಗತ್ಯವಾಗಿ ಕೈಗೊಳ್ಳಬೇಕಿರುವ ಕೆಲವು ಕ್ರಮಗಳನ್ನು ಇಲ್ಲಿ ದಾಖಲಿಸಲಾಗಿದೆ.

೬.೧.೪. ಹಂಪಿ ವಿಶ್ವಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದ ಕಾರ್ಯಕ್ಷೇತ್ರದ ನಕ್ಷೆ

೧.ಈ ಪ್ರದೇಶಗಳಲ್ಲಿ ಪಾರಂಪರಿಕ ಕಟ್ಟಡಗಳು ಮತ್ತು ಸ್ಮಾರಕಗಳನ್ನು ವ್ಯವಸ್ಥಿತವಾಗಿ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿ ಗುರುತಿಸುವುದು. ಅವುಗಳ ಮೌಲ್ಯಗಳನ್ನು ಆಧರಿಸಿ ಆ ಪಾರಂಪರಿಕ ಕಟ್ಟಡಗಳನ್ನು ಶ್ರೇಣೀಕರಿಸುವುದು.

೨.ಗುರುತಿಸಲಾದ ಪಾರಂಪರಿಕ ಕಟ್ಟಡಗಳ ಸಂರಕ್ಷಣಾ ಕಾರ್ಯಗಳನ್ನು ಆದ್ಯತಾನುಸಾರವಾಗಿ ಸಾರ್ವಜನಿಕ ಸಹಭಾಗಿತ್ವದೊಂದಿಗೆ ಕೈಗೊಳ್ಳುವುದು.

೩.ಪಾರಂಪರಿಕ ಕಟ್ಟಡ ಮತ್ತು ಪ್ರದೇಶಗಳನ್ನು ಸಂರಕ್ಷಿಸಲು ಮತ್ತು ಸುತ್ತಮುತ್ತಲ ನೈರ್ಮಲ್ಯವನ್ನು ಕಾಪಾಡಲು ಸಾರ್ವಜನಿಕರಲ್ಲಿ ತಿಳಿವಳಿಕೆ ಮೂಡಿಸಲು ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಪರಂಪರೆ ಕುರಿತಂತೆ ಪ್ರದರ್ಶನ/ಕಮ್ಮಟ/ವಿಚಾರ ಸಂಕಿರಣ/ಕಾರ್ಯಗಾರಗಳನ್ನು ಏರ್ಪಡಿಸುವುದು ಹಾಗೂ ಪರಂಪರೆಯ ಸಂರಕ್ಷಣೆ ಕುರಿತಂತೆ ಲಘು ಪುಸ್ತಕ/ಮಾಹಿತಿ ಪುಸ್ತಕಗಳ ಪ್ರಕಟಣೆ ಮಾಡುವುದು.

೪.ಯುನೆಸ್ಕೊ, ಇನ್‌ಟ್ಯಾಕ್, ಭಾರತ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಸ್ವಾಯತ್ತ ಸಂಸ್ಥೆಗಳಿಂದ ಮತ್ತು ಖಾಸಗಿ ಉದ್ಯಮಿಗಳ ನೆರವಿನೊಂದಿಗೆ ಹಣಕಾಸಿನ ಸಹಾಯ ಪಡೆದು ವಿನೂತನ ಯೋಜನೆಗಳನ್ನು ತನ್ನ ಕಾರ್ಯವ್ಯಾಪ್ತಿಯಲ್ಲಿ ಗುರುತಿಸುವುದು.

೫.ಸ್ಮಾರಕಗಳ ಬಳಿ ನಿರ್ಮಾಣವಾಗಿರುವ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವುದು ಮತ್ತು ಎಲ್ಲಾ ಎನ್‌ಕ್ರೋಚ್‌ಮೆಂಟ್‌ಗಳನ್ನು ತಡೆಯುವುದು.

೬.ಕಲ್ಲು ಗಣಿಗಾರಿಕೆಗಳು ನಡೆಯದಂತೆ ಕ್ರಮಕೈಗೊಳ್ಳುವುದು ಇದಕ್ಕಾಗಿ ಒಂದು ಟಾಸ್ಕ್ ಫೋರ್ಸ್ ಕಮಿಟಿಯನ್ನು ನೇಮಿಸುವುದು.

೭.ಅವಸಾನದಂಚಿನಲ್ಲಿರುವ ಎಲ್ಲಾ ಕಲಾಪ್ರಕಾರಗಳನ್ನು ಗುರುತಿಸಿ ದಾಖಲಿಸುವುದು. ಹಾಗೆಯೇ ಸ್ಥಳೀಯ ಕಲಾವಿದರನ್ನು ಗುರುತಿಸುವುದು ಮತ್ತು ಅವರು ಭಾಗವಹಿಸಲು ಅನುಕೂಲವಾಗುವಂತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು.

೮.ಈ ಪ್ರದೇಶದಲ್ಲಿ ನಡೆಯುವ ಹಬ್ಬ, ಜಾತ್ರೆ, ಸಂಪ್ರದಾಯ, ನಂಬಿಕೆ, ಕಲಾಪರಂಪರೆ,

ವೈದ್ಯಪದ್ಧತಿ, ಉಡುಗೆ-ತೊಡುಗೆ ಮೊದಲಾದ ಅಮೂರ್ತ ಪರಂಪರೆಯನ್ನು ಸರಿಯಾಗಿ ಗುರುತಿಸಿ ದಾಖಲಿಸುವುದು.

೯.ಅನಧಿಕೃತವಾಗಿ ನಡೆಯುತ್ತಿರುವ ಉದ್ಯಮ ಮತ್ತು ವ್ಯಾಪಾರ, ವಾಣಿಜ್ಯ ಚಟುವಟಿಕೆಗಳನ್ನು ನಿಯಂತ್ರಿಸುವುದು.

೧೦.ಅನಧೀಕೃತ ಚಟುವಟಿಕೆಗಳನ್ನು ತಡೆದು ಜನರಿಗೆ ಅನುಕೂಲವಾಗುವಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡುವುದು.

೧೧.ಈ ಪಾರಂಪರಿಕ ಪ್ರದೇಶಗಳಲ್ಲಿ ಧ್ವನಿ ಮತ್ತು ಬೆಳಕು ವ್ಯವಸ್ಥೆ, ಹಂಪಿ ಪ್ರದೇಶಗಳ ಮಾಹಿತಿ ಮತ್ತು ಚಾರಿತ್ರಿಕ ಸಾಂಸ್ಕೃತಿಕ ಮಾಹಿತಿಗಳನ್ನೊಳಗೊಂಡ ವೆಬ್‌ಸೈಟ್‌ನ್ನು ಸಿದ್ಧಪಡಿಸುವುದು. ಸಾಕ್ಷ್ಯಚಿತ್ರಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

೧೨.ಪ್ರವಾಸಿಗರಿಗೆ ಆಯ್ದಸ್ಥಳಗಳಲ್ಲಿ ಊಟ/ತಿಂಡಿ, ಕುಡಿಯುವ ನೀರು ಮತ್ತು ಶೌಚಾಲಯ ಲಭ್ಯವಾಗುವಂತೆ ನೋಡಿಕೊಳ್ಳುವುದು.

೧೩.ಪ್ರಸಕ್ತ ನಡೆಸುತ್ತಿರುವ ಬ್ಯಾಟರಿಚಾಲಿತ ವಾಹನಗಳನ್ನು ರದ್ದುಪಡಿಸಿ ಅವುಗಳ ಜಾಗದಲ್ಲಿ ನಮ್ಮ ಪರಂಪರೆಯ ಒಂದು ಭಾಗವಾದ ಕುದುರೆಗಾಡಿ(ಜಟಾಕಬಂಡಿ) ಇಲ್ಲವೇ ಎತ್ತಿನ ಬಂಡಿಗಳನ್ನು ಪ್ರವಾಸಿಗರ ಓಡಾಟಕ್ಕೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡುವುದು.

೧೪.ಪ್ರಾಧಿಕಾರದ ವತಿಯಿಂದ ಸ್ಥಳೀಯ ಪ್ಯಾಕೇಜ್ ಟೂರ್ ಹಮ್ಮಿಕೊಳ್ಳುವುದು ಮತ್ತು ಅದಕ್ಕಾಗಿಯೇ ಪ್ರತ್ಯೇಕ ಮಾರ್ಗದರ್ಶಕರನ್ನು ನೇಮಿಸಿಕೊಳ್ಳುವುದು.

೧೫.ಪ್ರವಾಸಿಗರಿಗೆ ಅನುಕೂಲವಾಗುವಂತೆ ಒಂದು ಮಾಹಿತಿ ಕೇಂದ್ರವನ್ನು ಮತ್ತು ನಮ್ಮ ದೇಶಿಪರಂಪರೆಯನ್ನು ಪ್ರತಿನಿಧಿಸುವ ಒಂದು ಗ್ರಂಥಾಲಯ ಮತ್ತು ವಸ್ತುಸಂಗ್ರಹಾಲಯವನ್ನು ಸ್ಥಾಪಿಸುವುದು.

೧೬.ಸ್ಥಳೀಯ ಪ್ರದೇಶದ ನಿರುದ್ಯೋಗಿಗಳಿಗೆ ಅನುಕೂಲವಾಗುವ ಹಾಗೆ ವಿವಿಧ ಕುಲವೃತ್ತಿಗಳ ಕುರಿತು ತರಬೇತಿ ನೀಡಿ ಅವುಗಳನ್ನು ಸಂರಕ್ಷಿಸುವುದು ಮತ್ತು ಅವರಿಗಾಗಿ ಉದ್ಯೋಗಾಧಾರಿತ ತರಬೇತಿಗಳನ್ನು ಸಹ ಹಮ್ಮಿಕೊಳ್ಳುವುದು.

೧೭.ಸ್ಥಳೀಯರಿಗೆ ಉತ್ತಮ ಶಿಕ್ಷಣ,ಆರೋಗ್ಯ ದೊರೆಯಲು ಬೇಕಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದು.

೧೮. ವಿವಿಧ ಕಡೆ ಸಂಗ್ರಹಿಸುತ್ತಿರುವ ಪ್ರವೇಶ ಶುಲ್ಕ ಮತ್ತು ಟೋಲ್ ಫೀಗಳನ್ನು ರದ್ದುಪಡಿಸಿ ಒಂದು ಕಡೆ ಮಾತ್ರ ಇವುಗಳನ್ನು ಸಂಗ್ರಹಿಸಲು ಕ್ರಮಕೈಗೊಳ್ಳುವುದು.

೭.೧.೫. ಹಂಪಿ ಸಂರಕ್ಷಣೆ ಯಾರು ಮಾಡಬೇಕು

ಹಂಪಿಯ ರಕ್ಷಣೆ ಕುರಿತು ಇತ್ತೀಚಿನ ಯುನೆಸ್ಕೊದ ಎಚ್ಚರಿಕೆಯಿಂದಾಗಿ ನಿದ್ದೆಯಿಂದ

ಎದ್ದಿರುವ ರಾಜ್ಯ ಮತ್ತು ಕೇಂದ್ರ ಸರಕಾರಗಳು ಹಂಪಿ ಅಭಿವೃದ್ಧಿಗೆ ಮಾಸ್ಟರ್‌ಪ್ಲಾನ್ ಅನುಷ್ಠಾನಗೊಳಿಸಲು ತುದಿಗಾಲಿನಲ್ಲಿ ನಿಂತಿವೆ. ಈಗಾಗಲೆ ಕೇಂದ್ರ ಸರ್ಕಾರ ಸುಮಾರು ೮೫ ಮತ್ತು ರಾಜ್ಯ ಸರ್ಕಾರ ಸುಮಾರು ೧೨೦೦ ಸ್ಮಾರಕಗಳು ರಕ್ಷಣೆ ಹೊಣೆ ಹೊತ್ತಿವೆ. ಮೊದ ಮೊದಲು ಹಲ್ಲಿಲ್ಲದ ಕಡಲೆಯಂತಾಯಿಗಿತ್ತು. ಸದ್ಯ ಹಂಪಿಯನ್ನು ಸದೃಢಗೊಳಿಸಲು ರಾಜ್ಯಸರ್ಕಾರ ಮುಂದಾಗಿದೆ. ಇದಕ್ಕಾಗಿ ಹಂಪಿ ಪ್ರಾಧಿಕಾರ ೨೦೦೮ರ ಮೇ ನಲ್ಲಿ ಮಾಸ್ಟರ್ ಪ್ಲಾನ್‌ಗೆ ಹಸಿರು ನಿಶಾನೆ ತೋರಿದೆ. ಹಂಪಿಯ ಸ್ಮಾರಕ ಹಾಗೂ ಸುತ್ತಮುತ್ತಲಿನ ಪರಿಸರವನ್ನು ಸಹಜ ರೀತಿಯಲ್ಲಿ ಮುಂದಿನ ಪೀಳಿಗೆಗೆ ಕಟ್ಟಿಕೊಡಲು ಪ್ರಾಧಿಕಾರ ಕಾರ್ಯರಂಭಿಸಿದೆ. ಮಾಸ್ಟರ್‌ಪ್ಲಾನ್‌ನಲ್ಲಿ ಮೊದಲು ಮೂರು ವಲಯಗಳನ್ನಾಗಿ ವಿಂಗಡಿಸಲಾಗಿದೆ. ಕೋರ್, ಬಫರ್ ಮತ್ತು ಫೆಡರಲ್ ಝೋನ್ ಎಂದು ವಿಂಗಡಿಸಲಾಗಿತ್ತು. ನಂತರದ ದಿನಗಳಲ್ಲಿ ಬಫರ್ ಝೋನ್‌ಅನ್ನು ಕೈಬಿಡಲಾಗಿದೆ. ಬಳ್ಳಾರಿ ಜಿಲ್ಲೆಯ ತಾಲೂಕಿನ ೧೪ ಹಳ್ಳಿಗಳು ಹಾಗೂ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ೧೫ ಹಳ್ಳಿಗಳು ವಲಯ ವ್ಯಾಪ್ತಿಗೊಂಡಿದೆ. ಅತಿ ಹೆಚ್ಚು ಸ್ಮಾರಕಗಳು ಹೊಂದಿರುವುದನ್ನು ಕೊರ್‌ಝೋನ್ ಎಂದು ಗುರುತಿಸಿದೆ. ಕಡಿಮೆ ಸ್ಮಾರಕಗಳನ್ನು ಒಳಗೊಂಡಿರುವ ಪೆರಿಫರಲ್ ಝೋನ್ ಎಂದು ಹೆಸರಿಸಲಾಗಿದೆ.

ಸ್ಮಾರಕಗಳ ಸಂರಕ್ಷಣೆ ಪ್ರವಾಸಿಗರಿಗೆ ವಿಜಯನಗರ ಸಾಮ್ರಾಜ್ಯದ ಸಂಸ್ಕೃತಿ ಕಟ್ಟಿಕೊಡುವುದು ಕಾಂಕ್ರಿಟ್ ಕಟ್ಟಡಗಳಿಗೆ ತಿಲಾಂಜಲಿ ನೀಡುವುದು; ಒತ್ತುವರಿ ತೆರುವುಗೊಳಿಸುವುದು; ಹಂಪಿ ಸುತ್ತಲಿನ ಪ್ರದೇಶಗಳಿಗೆ ಸಾಂಸ್ಕೃತಿಕ ಪರಂಪರೆ ನೈಸರ್ಗಿಕ ಪರಿಸರ ಸಂರಕ್ಷಣೆ ಹಂಪಿ ಪ್ರದೇಶದ ಅಬಿವೃದ್ಧಿ ಹಾಗೂ ಮಾಸ್ಟರಪ್ಲಾನ್ ವಾಣಿಜ್ಯ ಉದ್ದೇಶಕ್ಕಾಗಿ ಅದರ ಬಳಿಕ ತಡೆಯುವುದು; ಮಾಸ್ಟರ್‌ಪ್ಲಾನ್‌ನ ಬಹು ಮುಖ್ಯವಾದ ಉದ್ದೇಶವಾಗಿದೆ. ಅದು ಉಲ್ಲೇಖಿಸುವ ಹಾಗೇ ಕೊರ್ ಝೋನ್ ೩೪೩.೬೪ ಹೆಕ್ಟೇರ್ ಪ್ರದೇಶವನ್ನು ಒಳಗೊಂಡಿದೆ. ಹೊಸಪೇಟೆ ತಾಲ್ಲೂಕಿನ ಹಳ್ಳಿಗಳಾದ ಕೃಷ್ಣಾಪುರ(೯೨.೭೧ ಹೆ.ಪ್ರ) ಸಿಗನಾಥನಹಳ್ಳಿ (೧೬೨.೯೧ ಹೆ.ಪ್ರ) ನಿಂಭಾಪುರ(೧೨೬.೨೭ ಹೆ.ಪ್ರ) ಕಡ್ಡಿರಾಂಪುರ(೩೦೪.೨೮ ಹೆ.ಪ್ರ), ಕಮಲಾಪುರ ಪಟ್ಟಣ (೮೮೮೨.೪೬ ಹೆ.ಪ್ರ)ಗಳು ಬರುತ್ತವೆ. ಫೆರಿಪೆರಿಯಲ್ ಝೋನ್‌ನಲ್ಲಿ ಹೊಸಪೇಟೆ ತಾಲ್ಲೂಕಿನ ಡಣಾಪುರ(೧೮೩.೬೬ಹೆ.ಪ್ರ)ಮಲಪನಗುಡಿ(೧೦೪೩.೩೯ ಹೆ.ಪ್ರ) ನಾಗೆನಹಳ್ಳಿ (೪೧೩ ಹೆ.ಪ್ರ)ಗುಡಿ ಓಬಳಾಪುರ(೪೭೫.೩ ಹೆ.ಪ್ರ) ಬುಕ್ಕಸಾಗರ(೧೪೦೩.೭೫ ಹೆ.ಪ್ರ) ವೆಂಕಟಾಪುರ(೨೯೬೩.೩೨ ಹೆ.ಪ್ರ) ಕಾಳಗಟ್ಟ(೬೯೧.೩೨ ಹೆ.ಪ್ರ) ಮತ್ತು ಕೊಂಡನಾಯಕನಹಳ್ಳಿ(೧೬೯.೨೪ಹೆ.ಪ್ರ) ಬರುತ್ತದೆ. ಅದೇ ರೀತಿ ಕೋರ್ ಝೋನ್‌ನಲ್ಲಿ ಗಂಗಾವತಿ ತಾಲ್ಲೂಕಿನ ಅನೆಗುಂದಿ(೭೨೧.೯೧ಹೆ.ಪ್ರ) ವಿರುಪಾಪುರಗಡ್ಡೆ(೩೩೧.೬೯ಹೆ.ಪ್ರ) ಒಳಗೊಂಡಿದೆ. ಪೆರಿಡೆಲ್ ಝೋನ್‌ನಲ್ಲಿ ಗಂಗಾವತಿ ತಾಲ್ಲೂಕಿನ ತಿರುಮಲಾಪುರ(೨೮೩.೫೧ಹೆ.ಪ್ರ) ಸಣಾಪುರ(೬೬೪.೮೨ ಹೆ.ಪ್ರ) ಹನುಮನಹಳ್ಳಿ (೧೮೭೫೩ಹೆ.ಪ್ರ), ಅಂಜಿನಹಳ್ಳಿ(೧೯೨.೩೨ಹೆ.ಪ್ರ), ಚಿಕ್ಕರಾಂಪುರ(೩೩೭.೮೪ಹೆ.ಪ್ರ) ಲಕ್ಷ್ಮೀಪುರ

(೧೦೧೦.೬೫ಹೆ.ಪ್ರ) ರಾಂಪುರ(೩೩೦.೪ಹೆ.ಪ್ರ) ಕೃಷ್ಣಾಪುರ(೮೧.೫ಹೆ.ಪ್ರ) ರಾಮದುರ್ಗ(೧೫೮.೩೬ ಹೆ.ಪ್ರ) ಮಲ್ಲಾಪುರ(೯೫೪.೨೩ ಹೆ.ಪ್ರ) ಬಸವನದುರ್ಗ(೫೪೯.೧೩ ಹೆ.ಪ್ರ) ಸಿಂಗನಗುಡ್ಡ(೧೬೬.೦೨ ಹೆ.ಪ್ರ) ರಂಗಾಪುರ(೩೮೦.೨ ಹೆ.ಪ್ರ) ಬರುತ್ತದೆ. ಈ ವಲಯದಲ್ಲಿ ಬರುವ ಹಳ್ಳಿ ಹಾಗೂ ಪಟ್ಟಣಗಳಲ್ಲಿ ಕಟ್ಟಡ ನೀರ್ಮಿಸಬೇಕಾದರೆ ಹಂಪಿ ಅಭಿವೃದ್ಧಿ ಪ್ರಾಧಿಕಾರ ಕೇಂದ್ರ ರಾಜ್ಯ ಪುರಾತತ್ವ ಇಲಾಖೆಗಳು ಸಂಬಂಧಿಸಿದ ಗ್ರಾ.ಪಂ. ಅಥವಾ ಪಟ್ಟಣ ಪಂಚಾಯಿತಿ ನಿರಾಪೇಕ್ಷಣೆ ಪತ್ರ(ಎನ್‌ಒಸಿ) ಪಡೆಯುವುದು ಕಡ್ಡಾಯವಾಗಿದೆ. ಇಲ್ಲವಾದಲ್ಲಿ ಕಾನೂನು ಕ್ರಮಕೈಗೊಳ್ಳಲಾಗುತ್ತದೆ. ಒಂದು ವೇಳೆ ಒಪ್ಪಿಗೆ ಇದ್ದರೆ ಪ್ರಾಧಿಕಾರದ ಸಲಹೆ ಅನುಸಾರವೇ ಮನೆ/ಕಟ್ಟಡ ನಿರ್ಮಿಸಬೇಕು. ವಿಜಯನಗರದ ಕಾಲದ ಸಂಸ್ಕೃತಿ ವಾಸ್ತುಶಿಲ್ಪ ಪ್ರಪಂಚವನ್ನೇ ನೆನಪಿಸುವ ರೀತಿಯಲ್ಲೇ ಮನೆಗಳನ್ನು ನಿರ್ಮಿಸಬೇಕು. ಹಂಪಿ ವಿಶ್ವಪರಂಪರೆಯ ತಾಣವಾಗಿರುವುದರಿಂದ ಈ ಪ್ರದೇಶದಲ್ಲಿ ಹಲವು ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೊಳಿಸಲಾಗಿದೆ. ಅದರೆ ಹಂಪಿ ಪ್ರದೇಶದಲ್ಲಿ ಒತ್ತುವರಿ ನಡೆದಿದೆ ಮತ್ತು ಕಾಂಕ್ರಿಟ್ ಕಟ್ಟಡಗಳು ತಲೆ ಎತ್ತಿವೆ ಇದಕ್ಕೆ ಕೆಲ ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿವೆ. ಅದರ ತಕ್ಕ ಫಲ ಇನ್ನು ಸಿಕ್ಕಿಲ್ಲ.

ಯುನೆಸ್ಕೊ ಅಧಿಕಾರಿಯಾದ ಸುಗುಣ ಗೆಹ್ಲೋಟ್ ಅವರು ಹಂಪಿ ಪ್ರದೇಶಕ್ಕೆ ಧಕ್ಕೆ ತರುವ ಕೆಲಸ ನಡೆಯಬಾರದು. ಹಂಪಿ ಅಭಿವೃದ್ಧಿ ಪ್ರಾಧಿಕಾರ ಮಾಸ್ಟರ್‌ಪ್ಲಾನ್ ರಚಿಸಿದ್ದು, ಅದು ಕಟ್ಟುನಿಟ್ಟಾಗಿ ಜಾರಿಗೊಳಿಸಿದರೆ ಹಂಪಿಯನ್ನು ಸಹಜ ರೀತಿಯಲ್ಲಿ ಸಂರಕ್ಷಿಸಬಹುದು. ಹಂಪಿಗೆ ಧಕ್ಕೆಯಾಗುವುದನ್ನು ನಿಯಂತ್ರಿಸಲು ಸರಕಾರಗಳು ಮುಂದಾಗಬೇಕು ಎನ್ನುತ್ತಾರೆ. ಹಂಪಿ ಸ್ಮಾರಕಗಳು ಇಂದು ಹಲವು ಇಲಾಖೆಗಳಲ್ಲಿ ಹಂಚಿ ಹೋಗಿವೆ. ಕೇಂದ್ರ, ರಾಜ್ಯ ಪುರಾತತ್ವ ಇಲಾಖೆ, ಮುಜುರಾಯಿ ಇಲಾಖೆಗಳ ಸುಪರ್ದಿಯಲ್ಲಿ ಇವು ಬರುತ್ತವೆ. ಇಲ್ಲಿನ ದೇಗುಲ ಹಾಗೂ ಸ್ಮಾರಕಗಳ ರಕ್ಷಣೆಗಾಗಿ ಪ್ರಾಧಿಕಾರವನ್ನು ರಚಿಸಿಲಾಗಿದೆ. ಅದರೆ ಅಧಿಕಾರಿಗಳು ಒಬ್ಬರ ಮೇಲೊಬ್ಬರು ಗೂಬೆ ಕೂರಿಸುತ್ತ ಜವಾಬ್ದಾರಿಯಿಂದ ನುಣಿಚಿಕೊಳ್ಳುತ್ತಿದ್ದಾರೆ. ಕೊನೆಗೆ ಯುನೆಸ್ಕೋದತ್ತ ಅವರು ಬೆರಳು ತೋರಿಸುತ್ತಾರೆ. ಇದು ಸರಿಯಲ್ಲ.[೧೧] ಪುರಾಣ ಕಾಲದಿಂದ ಪ್ರಸಿದ್ಧಿ ಪಡೆದಿರುವ ಹಂಪಿಯ ಸಂರಕ್ಷಣೆ ಕೇವಲ ಸರ್ಕಾರದ ಅಥವಾ ಕೆಲ ಇಲಾಖೆಗಳ ಜವಾಬ್ದಾರಿಯಲ್ಲ. ಅದು ಎಲ್ಲಾ ಸಂಘ-ಸಂಸ್ಥೆಗಳ ಮತ್ತು ಎಲ್ಲಾ ಸಾರ್ವಜನಿಕರ ಕರ್ತವ್ಯವಾಗಿದೆ. "ಇದು ನಮ್ಮ ಹಂಪೆ, ಇದು ನಮ್ಮ ಪರಂಪರೆ" ಎನ್ನುವ ದೃಷ್ಟಿಯಿಂದ ಪ್ರತಿಯೊಬ್ಬರು ಸಹ ಇದರ ಸಂರಕ್ಷಣೆಗೆ ಮುಂದಾಗಬೇಕಿದೆ. ತಪ್ಪಿದಲ್ಲಿ ನಮ್ಮ ಪರಂಪರೆಯ ಕೇಂದ್ರವಾಗಿರುವ ಹಂಪಿ ಕೇವಲ ಕೊಂಪೆಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಈ ಹಿನ್ನೆಲೆಯಲ್ಲಿ ಈ ಪ್ರದೇಶದ ಪರಂಪರೆಯ ವ್ಯವಸ್ಥಿತ ಅಧ್ಯಯನ ಮತ್ತು ದಾಖಲೀಕರಣ ಹಿಂದೆಂದಿಗಿಂತಲೂ ಇಂದು ತುರ್ತಾಗಿ ಆಗಬೇಕಾಗಿದೆ.

೭.೨ ಪ್ರವಾಸೋದ್ಯಮದ ಹಿನ್ನೆಲೆಯಲ್ಲಿ ಹಂಪಿ

ಪ್ರವಾಸ ಜೀವನದಲ್ಲ ಒಂದು ಅನುಭವ. ನಾವು ಅನೇಕ ಬಗೆಯ ಪ್ರವಾಸಗಳನ್ನು ಮಾಡುತ್ತೇವೆ. ಅದರಲ್ಲೂ ದೇಶವಿದೇಶಗಳ ಅಪೂರ್ವ 'ತಾಣ'ಗಳನ್ನು ನೋಡಬೇಕೆಂಬುದು ಮನುಷ್ಯನ ಮೂಲಬಯಕೆಗಳಲ್ಲಿ ಒಂದು. ಅಂತಹ ಬಯಕೆಯ ಪರಿಣಾಮವಾಗಿ ಬೇರೆ ಬೇರೆ ದೇಶದ ಪ್ರವಾಸಿಗರು ನಮ್ಮ ದೇಶಕ್ಕೂ ನಮ್ಮ ದೇಶದ ಪ್ರವಾಸಿಗರು ವಿದೇಶಗಳಿಗೂ ಹೋಗಿ ಬರುವುದುಂಟು. ಹಂಪಿಗೆ ವಿದೇಶಗಳಿಂದ ಬಂದು ಹೋದವರ ಸಂಖ್ಯೆ ಅಪರಿಮಿತ. ಕ್ರಿಶ.೧೩ನೇ ಶತಮಾನ ಪೂರ್ವಾರ್ಧದಿಂದ ಈ 'ಯಾತ್ರೆ' ಆರಂಭವಾಗಿ ಕಳೆದ ಶತಮಾನದವರೆಗೂ ವಿದೇಶಿ ಪ್ರವಾಸಿಗರು ಬಂದು ಹೋಗಿದ್ದಾರೆ. ಬಂದು ಹೋದವರಲ್ಲಿ ಕೆಲವರು 'ಪ್ರವಾಸ ಕಥನ'ಗಳನ್ನು ಬರೆದಿಟ್ಟಿದ್ದಾರೆ. ಇನ್ನೆಷ್ಟೂ ಪ್ರವಾಸ ಕಥನಗಳು ಕಾಲಗರ್ಭದಲ್ಲಿ ಹೂತುಹೋಗಿವೆ. ಕೆಲವು ಪ್ರವಾಸಿಗರು ಬರೆದಿಟ್ಟುಕೊಂಡ ದಿನಚರಿಗಳು ಕನ್ನಡಕ್ಕೆ ಬರದೆ ಹಾಗೇ ಉಳಿದುಬಿಟ್ಟಿವೆ. ಇಲ್ಲಿಗೆ ಬಂದು ಹೋದ ನಿಕೊಲೊ-ದೆ-ಕೊಂತಿ. ಅಬ್ದುಲ್ ರಜಾಕ್. ದುಆರ್ತೆ ಬಾರ್ಬೊಸಾ, ಡೊಮಿಂಗೊ ಪ್ಯಾಸ್, ಫರ್ನಾಓ ನೂನಿಜ್ ಇವರಂತಹ ಪ್ರಸಿದ್ಧ ಪ್ರವಾಸಿಗರ ಬರೆಹಗಳು ಇರುವಂತೆ ; ಇಬ್-ನೆ-ಬತುತಾ, ಅಥನೇಷಿಯಸ್ ನಿಕಿಟಿನ್, ಸೀಜರ್ ಫ್ರೆಡರಿಕ್, ಬ್ಯಾರಡಸ್, ಲೆಫ್ಟಿನೆಂಟ್ ಎಮಿಟ್ ಇವರಂಥ ಅಷ್ಟು ಪ್ರಸಿದ್ಧರಲ್ಲದ ಪ್ರವಾಸಿಗರೂ ಇದ್ದಾರೆ. 'ವಿಜಯನಗರ'ದ ಸಾಂಸ್ಕೃತಿಕ ಚರಿತ್ರೆಯನ್ನು ಅಧ್ಯಯನ ಮಾಡುವವರಿಗೆ ಇವರೆಲ್ಲರೂ ನೀಡುವ ವಿವರಗಳು ಅಪೂರ್ವವಾಗಿವೆ. ಆ ಬಗೆಯ 'ಪ್ರವಾಸ ಕಥನ'ಗಳು ಇತಿಹಾಸದ ದಾಖಲೆಗಾಗಿ ಮಾತ್ರ ಉಳಿದುಕೊಳ್ಳದೆ; ಸಾಂಸ್ಕೃತಿಕ ದಾಖಲೆಗಳಾಗಿಯೂ ಮನುಷ್ಯ ಸ್ವಭಾವದ ರೂಪಣಗಳಾಗಿಯೂ ಉಳಿಯುತ್ತವೆ. ಇಂತಹ ಅಪೂರ್ವ ಪ್ರವಾಸ ಕಥನಗಳನ್ನು ದೇಶ-ವಿದೇಶದ ಬರೆಹಗಳಲ್ಲಿ ಕಾಣುತ್ತೇವೆ.

ಭಾರತ ಬಹುಸಂಸ್ಕೃತಿಗಳ ಬೀಡು, ಹತ್ತಾರು ರಾಜ-ಮಹಾರಾಜರು ಸೇರಿದಂತೆ ವಿದೇಶಿಯರು ಇಲ್ಲಿ ಆಳ್ವಿಕೆ ಮಾಡಿದ ಪರಿಣಾಮವಾಗಿ ಹಲವು ವಿಭಿನ್ನ ಸಂಸ್ಕೃತಿಗಳ ಜನ್ಮತಾಳಿವೆ. ಅಲ್ಲದೆ ಅವು ತನ್ನ ಶ್ರೀಮಂತಿಕೆಯ ವೈಭವತೆಯನ್ನು ಮೈಗೂಡಿಸಿಕೊಂಡಿವೆ. ಮೌರ್ಯರು, ಶಾತವಾಹನರು, ಗಂಗರು, ಕದಂಬರು, ಚಾಳುಕ್ಯರು, ರಾಷ್ಟ್ರಕೂಟರು, ಚೋಳರು, ಹೊಯ್ಸಳರು ಸೇರಿದಂತೆ ಹತ್ತಾರು ರಾಜಮನೆತನಗಳ ಜೊತೆಗೆ ಮೊಘಲರು, ಬ್ರಿಟಿಷರ ಆಳ್ವಿಕೆಗೆ ಭಾರತ ಒಳಗಾಗಿ ತನ್ನದೇ ಆದ ಕಲೆ, ಸಾಹಿತ್ಯ, ಸಂಸ್ಕೃತಿಗಳ ಮಿಶ್ರಣವನ್ನು ಇಲ್ಲಿ ಕಾಣಬಹುದು. ಇಂತಹ ವೈವಿಧ್ಯಮಯ ಸಂಸ್ಕೃತಿಯಿಂದ ಹೊರಹೊಮ್ಮಿದ ಚಿತ್ರಕಲೆ, ಶಿಲ್ಪಕಲೆ, ಪ್ರವಾಸಿ ತಾಣಗಳು, ಕೋಟೆ ಕೊತ್ತಲಗಳು, ಗುಡಿ ಗೋಪುರಗಳು, ಆಯುಧಗಳು, ಆಭರಣಗಳು, ವಸ್ತ್ರಗಳು ಸೇರಿದಂತೆ ಅನೇಕ ಅವಿಸ್ಮರಣೀಯ ಸ್ಥಳಗಳನ್ನು (ಕುರುಹು) ವಿಶ್ವದ ಯಾವುದೇ ದೇಶದಲ್ಲಿ ಕಾಣುವುದು ಅಪರೂಪ. ಆದರೆ ಪ್ರವಾಸಿಗರನ್ನು ಆಕರ್ಷಿಸುವಲ್ಲಿ ನಮ್ಮ ಘನ

ಸರ್ಕಾರಗಳ ಆದ್ಯತೆ, ನೀತಿ-ನಿಯಮಗಳು ವಿಫಲವಾಗಿರುವುದು. ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರು ಸಹಭಾಗಿತ್ವವು ಪ್ರವಾಸೋದ್ಯಮದ ಜೊತೆಗೆ ಸಮ್ಮಿಲನಗೊಳ್ಳದಿರುವುದು ದುರಂತವೇ ಸರಿ. ಇದಕ್ಕೆ ಕರ್ನಾಟಕವೂ ಕೂಡ ಹೊರತಾಗಿಲ್ಲ. ನಮ್ಮ ರಾಜ್ಯದಲ್ಲಿ ಪ್ರವಾಸೋದ್ಯಮದ ಬೆಳವಣಿಗೆಗೆ ವಿಫಲವಾದ ಅವಕಾಶಗಳಿವೆ. ಹಂಪಿ, ಬೇಲೂರು, ಹಳೇಬೀಡು, ಬಾದಾಮಿ, ಪಟ್ಟದಕಲ್ಲು, ಐಹೊಳೆ, ಮೈಸೂರು, ಜೋಗ, ಯಾಣ ಸೇರಿದಂತೆ ರಾಜ್ಯದಲ್ಲಿ ೨೫೦ ರಿಂದ ೩೦೦ ಪ್ರವಾಸಿ ತಾಣಗಳು ಇವೆ. ಇವುಗಳ ಬಗ್ಗೆ ಸೂಕ್ತ ಮಾಹಿತಿ ಹಾಗೂ ಮಾರ್ಗದರ್ಶನದ ತಂತ್ರಗಳನ್ನು ವ್ಯವಸ್ಥಿತವಾಗಿ ಕಾರ್ಯರೂಪಕ್ಕೆ (ಜಾರಿಗೊಳಿಸಿದರೆ) ಪ್ರವಾಸೋದ್ಯಮ ಕ್ಷೇತ್ರದಲ್ಲಿ ನಮ್ಮ ರಾಜ್ಯ ದೇಶಕ್ಕೆ ಮುಂಚೂಣಿಯಾಗುವುದರಲ್ಲಿ ಸಂದೇಹವೇ ಇಲ್ಲ.[೧೨]

ಪ್ರವಾಸೋದ್ಯಮ ಎಂಬುದು ಒಂದು ಅದ್ಭುತವಾದ ಸಾಧ್ಯಾಸಾಧ್ಯತೆಗಳುಳ್ಳ ಒಂದು ಉದ್ಯಮ. ಇಲ್ಲಿ ಯಾವುದೇ ಸ್ವರೂಪದ ಮೌಲ್ಯವಿಲ್ಲ. ಇದು ಪರಿಸರ ಪ್ರೇಮಿ ಹಾಗೂ ಜನಸ್ನೇಹಿಯೂ ಹೌದು. ಪ್ರಸಕ್ತ ಸನ್ನಿವೇಶದಲ್ಲಿ ನಾವು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದ ಬಗ್ಗೆ ಸಾಕಷ್ಟು ಮಾತನಾಡುತ್ತೇವೆ. ಆದರೆ ಈ ಎಲ್ಲಾ ಕ್ಷೇತ್ರಗಳು ತಂತ್ರಜ್ಞಾನದಲ್ಲಿ ಉನ್ನತ ವ್ಯಾಸಂಗ ಪಡೆದವರಿಗೆ ಮಾತ್ರ ಉದ್ಯೋಗ ನೀಡಬಲ್ಲವು. ಅನಕ್ಷರಸ್ಥರು, ಕಡಿಮೆ ವ್ಯಾಸಂಗ ಹೊಂದಿದವರು ಇವುಗಳ ಮುಂದೆ ಅಪಹಾಸ್ಯಕ್ಕೆ ಒಳಗಾಗಬೇಕಿದೆ. ಆದರೆ ಪ್ರವಾಸೋದ್ಯಮವು ಅಭಿವೃದ್ಧಿಗೊಂಡಂತೆಲ್ಲಾ ದೇಶದ ನರ-ನಾಡಿಗಳಲ್ಲಿರುವ ಪಾರಂಪರಿಕ ವೃತ್ತಿಗಳಿಗೂ ಆಶ್ರಯ ತಾಣವಾಗಬಲ್ಲದು. ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿಯಿಂದ ಒಬ್ಬ 'ಹೂ' ಮಾರುವವನು, ಒಬ್ಬ ಹಾವಾಡಿಗ ಕೂಡ ತನ್ನದೇ ಆದ ನೆಲೆ ಕಂಡುಕೊಳ್ಳಲು ನೆರವಾಗುತ್ತದೆ. ಪ್ರವಾಸಿ ತಾಣಗಳಲ್ಲಿ ಹೋಟೆಲ್, ಗೂಡಾಂಗಡಿ ಚಟುವಟಿಕೆ, ಬಿದಿರು-ಬಂಬು, ಕರಕುಶಲ ವಸ್ತುಗಳು ಸೇರಿದಂತೆ ಹತ್ತಾರು ಗೃಹಪಯೋಗಿ ವಸ್ತುಗಳ ಉತ್ಪಾದಕರು ಬದುಕಲು ಸಹಕಾರಿಯಾಗುತ್ತದೆ. ಇದರಿಂದ ಯಾವುದೇ ವಿದ್ಯಾರ್ಹತೆ ಹೊಂದಿರುವ ಯುವಕ-ಯುವತಿಯರು, ಪ್ರಾಥಮಿಕ, ಪ್ರೌಢಶಿಕ್ಷಣ ಮತ್ತು ಪದವೀಧರರು ಕೂಡ ಪ್ರವಾಸೋದ್ಯಮದಲ್ಲಿ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಬದುಕು ಕಟ್ಟಿಕೊಳ್ಳಬಹುದು. ಇದರ ಜೊತೆಗೆ ನಮ್ಮ ಯುವಶಕ್ತಿ ಹಾಗೂ ಪಾರಂಪರಿಕ ಕೌಶಲ್ಯಗಳನ್ನು ಕರಗತ ಮಾಡಿಕೊಂಡವರಿಗೂ ಉದ್ಯೋಗ ನೀಡಬಹುದು ಮಾತ್ರವಲ್ಲ; ಪ್ರವಾಸೋದ್ಯಮ ಕ್ಷೇತ್ರ ನಮ್ಮ ಯುವಕರಲ್ಲಿ ನಾಡಿನ ಸಂಸ್ಕೃತಿ-ಪರಂಪರೆ ಕುರಿತು ಅರಿವು ಮೂಡಿಸುವ ಶಿಕ್ಷಣ ವಾಹಿನಿಯೂ ಹೌದು. ನಮ್ಮ ಆಚಾರ-ವಿಚಾರ, ಭಾಷೆ-ಉಡುಪು, ನಮ್ಮ ಸಂಸ್ಕೃತಿಯ ಬಗ್ಗೆ ದೇಶ-ವಿದೇಶಗಳ ಜನರಿಗೆ ತಿಳಿಸಿಕೊಡುವ ಅವಕಾಶವುಳ್ಳ ಉದ್ಯಮ ಈ ಪ್ರವಾಸೋದ್ಯಮ ಕ್ಷೇತ್ರ.[೧೩]

ಕ್ರಸಂ.	ವರ್ಷ	ಪ್ರವಾಸಿಗರ ಸಂಖ್ಯೆ[೧೬]
೧	೧೯೯೬-೯೭	೧,೭೨,೫೦೩
೨	೧೯೯೭-೯೮	೧,೮೩,೦೪೪

೩	೧೯೯೮-೧೯೯೯	೩,೨೦,೫೪೦
೪	೧೯೯೯-೨೦೦೦	೨,೧೨,೬೧೦
೫	೨೦೦೦-೨೦೦೧	೨,೯೭,೯೭೬
೬	೨೦೦೧-೨೦೦೨	೩,೧೫,೭೯೧
೭	೨೦೦೨-೨೦೦೩	೨,೯೬,೨೩೨
೮	೨೦೦೪-೨೦೦೫	೩,೧೮,೦೨೭
೯	೨೦೦೫-೨೦೦೬	೩.೨೯.೦೬೪

ಈ ಮೇಲಿನ ಪಟ್ಟಿಯಲ್ಲಿರುವಂತೆ ೧೯೯೬-೯೭ರಲ್ಲಿ ದೇಶ ವಿದೇಶಗಳಿಂದ ಹಂಪಿಗೆ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆ(೧ ಲಕ್ಷದ ೭೨ ಸಾವಿರದ ೫೦೩) ೧೭೨೫೦೩ ಇದೆ. ೧೯೯೭-೯೮ ವರ್ಷಕ್ಕೆ ೧೮೩೦೪೮ ಕ್ಕೆ ಏರಿಕೆಯಾಗಿದೆ. ೧೯೯೮-೯ರ ವರ್ಷದಲ್ಲಿ ೩೨೦೫೪೦ ಪ್ರವಾಸಿಗರ ಸಂಖ್ಯೆ ೨ ಪಟ್ಟು ಅಧಿಕಗೊಂಡಿರುವುದು ಈ ತಾಣದ ಮಹತ್ವವನ್ನು ಸಾರುತ್ತದೆ.

ಹಂಪಿ ವೀಕ್ಷಣೆಗೆ ವಿಶ್ವದ ನಾನಾ ದೇಶಗಳಿಂದ ಪ್ರವಾಸಿಗರು ಆಗಮಿಸುತ್ತಾರೆ. ಅವರಲ್ಲಿ ಇಸ್ರೇಲ್, ಹಾಲೆಂಡ್, ಇಟಲಿ, ಸ್ವೀಡನ್, ಬೆಲ್ಜಿಯಂ, ಡೆನ್ಮಾರ್ಕ್, ಆಸ್ಟ್ರಿಯಾ, ಕೆನಡಾ, ಅಮೇರಿಕಾ, ಜಪಾನ್, ಬೆಲ್ಜಿಯಂ, ಸ್ವಿಡ್ಜರ್‌ಲ್ಯಾಂಡ್, ಪೋಲೆಂಡ್, ಪೋರ್ಚುಗಲ್ ಸೇರಿದಂತೆ ನೂರಾರು ದೇಶಗಳ ಪ್ರವಾಸಿಗರ ಸಂಖ್ಯೆ ಬೆಳೆಯುತ್ತಾ ಸಾಗಿದೆ. ಹೀಗೆ ವಿಶ್ವ ಪರ್ಯಟನಾ ಅಂಗವಾಗಿ ಹಂಪಿಗೆ ಆಗಮಿಸುವ ಅನೇಕ ದೇಶಗಳ ಪ್ರವಾಸಿಗರಲ್ಲದ ಈ ಭಾಗದಲ್ಲಿ ವ್ಯಾಪಾರ-ವ್ಯವಹಾರಗಳಲ್ಲಿ ಚೇತರಿಕೆ ಕಂಡು ಬರುತ್ತದೆ. ಈ ಬಗ್ಗೆ ಕೆಲವು ಇಲಾಖೆಗಳಲ್ಲಿ ಸಂಗ್ರಹವಾದ ಮೊತ್ತದ ವಿವರ ಈ ಕೆಳಗಿನಂತೆ ಕಂಡುಬರುತ್ತದೆ.

ಕ್ರ. ಸಂ	ವಿವರಗಳು	೧೯೯೯-೨೦೦೦	೨೦೦೦-೦೧	೨೦೦೧-೦೨
೦೧	ಕೇಂದ್ರ ಪುರಾತತ್ವ ಇಲಾಖೆ (ಕಮಲ ಮಹಲ್ ಮತ್ತು ವಿಠಲ ದೇವಸ್ಥಾನ)[೧೭]	೧೪,೩೨,೩೬೦	೩೭,೧೮,೧೫೫	೩,೮೩,೩೮೬೦೨
೦೨	ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನ (ಮುಜರಾಯಿ ಇಲಾಖೆ)[೧೮]	೧,೧೮,೩೫೨	೧೨.೨೫,೦೬೬	೨.೩೯,೪೯೨
೦೩	ಕೇಂದ್ರ ಪುರಾತತ್ವ ವಸ್ತು ಸಂಗ್ರಹಾಲಯ[೧೯]	-	೨,೯೧,೬೦೦	೨,೫೭,೦೯೫

ಈ ಮೇಲಿನ ಕೋಷ್ಟಕವನ್ನು ಪರಿಶೀಲಿಸಿದಾಗ ಹಂಪಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಾ ನಡೆದಿದೆ. ಇದರಿಂದ ಬೇರೆ ಬೇರೆ ಇಲಾಖೆಗಳಿಗೆ ಬರುವ ಆದಾಯವು ಹೆಚ್ಚಾಗಿರುವುದು ಕಂಡುಬರುತ್ತದೆ. ಕ್ರ.ಸಂ.೧ರಲ್ಲಿ ಕೇಂದ್ರ ಪುರಾತತ್ವ ಇಲಾಖೆಯು ೧೯೯೯-೨೦೦೦ ವರ್ಷದಲ್ಲಿ ೧೪,೩೨,೩೬೦ ಆದಾಯ ಗಳಿಸಿದರೆ ೨೦೦೧-೦೨ರ ಹೊತ್ತಿಗೆ ೩೩,೮೩,೩೮೬ ರೂಪಾಯಿಗಳಿಗೆ ಆದಾಯ ಏರಿಕೆಯಾಗಿದೆ. ಹಾಗೆಯೇ ಕ್ರ.ಸಂ. ೨ ಹಾಗೂ ೩ ರಲ್ಲಿ ಆದಾಯವು ವರ್ಷದಿಂದ ವರ್ಷಕ್ಕೆ ಅಧಿಕಗೊಂಡಿರುವುದು ಸ್ಪಷ್ಟವಾಗುತ್ತದೆ.

ಹಂಪಿಗೆ ಭೇಟಿ ನೀಡುತ್ತಿರುವ ಪ್ರವಾಸಿಗರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಹಂಪಿಯನ್ನು ವಿಶ್ವಪರಂಪರೆ ಪಟ್ಟಿಯಲ್ಲಿ ದೃಢೀಕರಿಸಲಾಗಿದೆ. ಪ್ರವಾಸಿಗರಿಗೆ ಸೂಕ್ತ ಭದ್ರತೆ, ಮೂಲಭೂತ ಸೌಕರ್ಯಗಳ ಪೂರೈಕೆ, ಪ್ರವಾಸಿ ತಾಣಗಳ ರಕ್ಷಣೆ, ಪರಿಚಯ ಜಾಹೀರಾತು ಸೇರಿದಂತೆ ಅನೇಕ ಅಭಿವೃದ್ಧಿ ಯೋಜನೆಗಳು ಭರದಿಂದ ಸಾಗಿವೆ. ಕೇಂದ್ರ, ರಾಜ್ಯ ಹಾಗೂ ಯುನೆಸ್ಕೋ ಸಹಯೋಗದಲ್ಲಿ ಹಂಪಿಯ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯ ಯೋಜನೆಗಳು ಜಾರಿಗೊಳ್ಳುತ್ತಿವೆ. ಹಂಪಿಯಲ್ಲಿ ಪ್ರವಾಸೋದ್ಯಮವು ಇಂದು ಒಂದು ಉದ್ಯಮವಾಗಿ ಅಭಿವೃದ್ಧಿಯಾಗಿದೆ. ಅದನ್ನು ಆಶ್ರಯಿಸಿ ಕೊಂಡವರು ಮತ್ತು ಅದರಿಂದ ಜೀವಿಸುತ್ತಿರುವ ಹಲವಾರು ಸಣ್ಣಪುಟ್ಟ ವ್ಯಾಪಾರಸ್ಥರು, ಮಾರ್ಗದರ್ಶಿಗಳು, ಟ್ರಾವೆಲ್ ಏಜನ್ಸಿಗಳು ಇಂದು ಹತ್ತು ಹಲವಾರು ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಪುರಾತತ್ವ ಇಲಾಖೆ ಮತ್ತು ಹಂಪಿ ಪ್ರಾಧಿಕಾರ ಹಾಗೂ ಇತರೆ ಇಲಾಖೆಗಳು ಕೈಗೊಳ್ಳುವ ಜನಪರ ಯೋಜನೆಯ ಹೆಸರಿನಲ್ಲಿ ಕೈಗೊಳ್ಳುವ ಕಾರ್ಯಗಳಿಂದಾಗಿ ಸ್ಥಳೀಯ ನಾಗರೀಕರಿಗೆ ಹಾಗೂ ಸ್ಥಳೀಯ ವ್ಯಾಪಾರಸ್ಥರಿಗೆ ಅನೇಕ ಅನಾನುಕೂಲಗಳಾಗಿವೆ. ಇದರಿಂದ ಪ್ರವಾಸಿಗರು ಮತ್ತು ಪ್ರವಾಸೋದ್ಯಮಗಳು ಬಿಕ್ಕಟ್ಟಿಗೆ ಸಿಲುಕಿಕೊಂಡಿವೆ. ಪ್ರಸಕ್ತ ಪ್ರವಾಸೋದ್ಯಮದ ಹಿನ್ನೆಲೆಯ ಸಮಸ್ಯೆಗಳನ್ನು ಇಲ್ಲಿ ಅವಲೋಕಿಸಬಹುದಾಗಿದೆ.

ಹಂಪಿಯಲ್ಲಿ ಮೊದಲು ಸುಮಾರು ೭೦೦ಕ್ಕೂ ಹೆಚ್ಚು ಕುಟುಂಬಗಳು ವಾಸವಾಗಿದ್ದವು. ಸ್ಥಳಾಂತರದ ಪೂರ್ವದಲ್ಲಿ ಹಂಪಿ ವಿರೂಪಾಕ್ಷ ದೇವಾಲಯದ ಬಜಾರಿನಲ್ಲಿ ಸು.೧೨೦ ಕುಟುಂಬಗಳು ವಾಸವಾಗಿದ್ದವು. ಇಲ್ಲಿನ ಕುಟುಂಬಗಳ ಒಟ್ಟು ಜನಸಂಖ್ಯೆ ೩೦೦೦ ಗಡಿ ದಾಟಿದೆ. ಇದರ ಜೊತೆಗೆ ಬೇರೆ, ಬೇರೆ ರಾಜ್ಯ ಹಾಗೂ ಅಕ್ಕ-ಪಕ್ಕದ ಜಿಲ್ಲೆಗಳಿಂದ ಕೆಲವು ಬೆರಳೆಣಿಕೆಯ ವ್ಯಾಪಾರಿಗಳು ವಲಸೆ ಬಂದು ನೆಲೆಸಿದ್ದಾರೆ. ಅಧ್ಯಯನದ ಅನುಕೂಲಕ್ಕಾಗಿ ಕ್ಷೇತ್ರಕಾರ್ಯದಲ್ಲಿ ಶೇಕಡ ೨೦% ಕುಟುಂಬಗಳನ್ನು(ಅಂದರೆ ೧೦೦ ಕುಟುಂಬಗಳನ್ನು) ಆಯ್ಕೆ ಮಾಡಿಕೊಂಡಿದ್ದು, ೧೦ ಕ್ಕೂ ಹೆಚ್ಚು ಜಾತಿಗಳ ಬೇರೆಬೇರೆ ಸಮಾಜದ ಜನರನ್ನು ಸಂದರ್ಶನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಇದಕ್ಕೆ ಸಂಬಂಧಿಸಿದ ಅಂಕಿ ಅಂಶಗಳನ್ನು ಈ ಕೆಳಗಿನ ಕೋಷ್ಟಕಗಳಿಂದ ಅರಿಯಬಹುದು.

ಕ್ರಸಂ.	ಹಂಪಿಯಲ್ಲಿರುವ ಒಟ್ಟು ಕುಟುಂಬಗಳ ಸಂಖ್ಯೆ	ಸಂದರ್ಶನಕ್ಕೆ ಆಯ್ಕೆ ಮಾಡಿಕೊಂಡ ಕುಟುಂಬಗಳು	ಸಂದರ್ಶನಕ್ಕೆ ಬಳಸಿಕೊಂಡ ಜಾತಿಗಳು	ಕುಟುಂಬಗಳಲ್ಲಿರುವ ಒಟ್ಟು ಸಂಖ್ಯೆ
೦೧	೭೦೦	೧೦೦	೧೦	೩೫೦

ಜಾತಿವಾರು ಆಯ್ಕೆಯ ವಿವರಗಳು[೨೦]

ಕ್ರಸಂ.	ಜಾತಿಗಳ ಹೆಸರು	ಕುಟುಂಬಗಳ ಸಂಖ್ಯೆ
೦೧	ರಜಪೂತ	೧೦
೦೨	ಲಿಂಗಾಯತ	೧೬
೦೩	ನಾಯಕ	೨೦
೦೪	ಬ್ರಾಹ್ಮಣ	೧೨
೦೫	ಮುಸ್ಲಿಂ	೧೦
೦೬	ಬಾರಿಕ	೧೦
೦೭	ಕುರುಬ	೧೦
೦೮	ಭೋವಿ	೦೮
೦೯	ಕ್ಷತ್ರಿಯ	೦೨
೧೦	ಕ್ಷೌರಿಕ	೦೨

ಈ ಮೇಲಿನ ಕೋಷ್ಟಕಗಳ ಅವಶ್ಯಕತೆಯನ್ನು ಒಮ್ಮೆ ಹೇಳಬೇಕಾಗುತ್ತದೆ. ಏಕೆಂದರೆ ಹಂಪಿ ವಿಶ್ವ ಪರಂಪರೆಯಲ್ಲಿ ಸೇರ್ಪಡೆಗೊಂಡ ನಂತರ ಹಂಪಿಯಲ್ಲಿ ಬಹಳಷ್ಟು ಬದಲಾವಣೆಗಳು ಸಂಭವಿಸಿವೆ. ಕೆಲವು ದುಷ್ಟಕೂಟಗಳ ಸಹಯೋಗದಲ್ಲಿ ಭಯೋತ್ಪಾದಕರ ರಕ್ಷಣ ತಾಣವಾಗಿ ಕಳೆದ ಕೆಲವು ವರ್ಷಗಳ ಹಿಂದೆ ಕುಖ್ಯಾತಿಯನ್ನು ಪಡೆದಿತ್ತು. ಹೊಸಪೇಟೆ ನಗರದ ಸುತ್ತಮುತ್ತಲಿನ ಕೆಲವು ಮತೀಯ ಸಂಘಟನೆಗಳು 'ಹಂಪಿ' ರಕ್ಷಣೆಯ ಹಿನ್ನೆಲೆಯಲ್ಲಿ ವಿವಾದದ ಕೇಂದ್ರವಾಗಿ ಚರ್ಚೆಗೆ ಎಡೆಮಾಡಿಕೊಟ್ಟಿದ್ದು ಹಾಗೂ ಯುನೆಸ್ಕೋ ಮತ್ತು ಪ್ರವಾಸೋದ್ಯಮ ಅಭಿವೃದ್ಧಿಯ ಹೆಸರಿನಲ್ಲಿ ನೂರಾರು ವರ್ಷಗಳಿಂದ ನೆಲೆಯೂರಿದ್ದ ಜನರನ್ನು(ಸ್ಥಳೀಯರನ್ನು) ಸ್ಥಳಾಂತರಿಸಲಾಗಿದೆ. ಕೇಂದ್ರ, ರಾಜ್ಯ ಹಾಗೂ ಯುನೆಸ್ಕೋ ಸಹಯೋಗದಲ್ಲಿ ಹಂಪಿಯಲ್ಲಿ ನಡೆಯುತ್ತಿರುವ ವಿವಿಧ ಮೂಲ ಸೌಕರ್ಯಗಳ ಬಗ್ಗೆ ಸ್ಥಳೀಯರನ್ನು ಪ್ರಶ್ನಿಸಿದಾಗ ದೊರೆತ ಉತ್ತರಗಳು ಈ ರೀತಿಯಾಗಿವೆ:

ಮೌಲ ಸೌಕರ್ಯಗಳ ಪ್ರಮಾಣ[೨೧]

ಕ್ರ.ಸಂ	ವಿವರಗಳು	ಹೇಳಿಕೆಗಳ ಗುಣಮಟ್ಟ				ಶೇಕಡಾ	ಒಟ್ಟು
		ಉತ್ತಮ	ಸಾಧಾರಣ	ಕನಿಷ್ಠ	ಗೊತ್ತಿಲ್ಲ	(%)	
೦೧	ರಸ್ತೆ ಸುಧಾರಣೆ	೩೦	೫೦	೧೫	೦೫	೧೦೦%	೧೦೦
೦೨	ಶಿಕ್ಷಣ	–	೨೦	೭೦	೧೦	೧೦೦%	೧೦೦
೦೩	ವೈದ್ಯಕೀಯ	೨೦	೨೦	೫೫	೦೫	೧೦೦%	೧೦೦
೦೪	ರಕ್ಷಣೆ	೭೦	೩೫	–	–	೧೦೦%	೧೦೦
೦೫	ಸಾರಿಗೆ–ಸಂಪರ್ಕ	೪೦	೫೦	೧೦	–	೧೦೦%	೧೦೦

ಹಂಪಿಯ ಸುತ್ತ–ಮುತ್ತ ಸಮರೋಪಾದಿಯಲ್ಲಿ ನಡೆದಿರುವ ವಿವಿಧ ಮೂಲ ಸೌಕರ್ಯಗಳ ಬಗ್ಗೆ ಸ್ಥಳೀಯರಿಂದ ವಿಭಿನ್ನ ಹೇಳಿಕೆಗಳು ಕೋಷ್ಠಕದಲ್ಲಿ ದಾಖಲಾಗಿವೆ. ಪ್ರವಾಸದ ಅನುಕೂಲತೆಗಾಗಿ ನಡೆದಿರುವ ರಸ್ತೆ ಸುಧಾರಣೆಯ ಬಗ್ಗೆ ಶೇಕಡ ೫೦%ರಷ್ಟು ಸಾಧಾರಣವಾಗಿದೆ ಎಂಬ ಉತ್ತರ ನೀಡಿದ್ದಾರೆ. ಶೇಕಡ ೩೦% ರಷ್ಟು ಜನರು ಉತ್ತಮವಾಗಿದೆ, ಶೇಕಡ ೧೫% ರಷ್ಟು ಕನಿಷ್ಠವಾಗಿದೆ, ಶೇಕಡ ೫% ರಷ್ಟು ಗೊತ್ತಿಲ್ಲ ಎಂಬ ಉತ್ತರ ನೀಡಿದ್ದಾರೆ. ವೈದ್ಯಕೀಯ ಮತ್ತು ಶಿಕ್ಷಣದ ಬಗ್ಗೆ ಸ್ಥಳೀಯರಿಂದ ತುಂಬಾ ಅತೃಪ್ತಿ ವ್ಯಕ್ತವಾಗಿದೆ. ಆದರೆ ಹಂಪಿಯ ಸುತ್ತಮುತ್ತ ಕೈಗೊಂಡಿರುವ ಭದ್ರತೆಯ ಬಗ್ಗೆ ವ್ಯಾಪಕ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಶೇಕಡ ೭೦% ರಷ್ಟು ಜನರು ಇತ್ತೀಚಿಗೆ ಹಂಪಿಯ ಭದ್ರತೆಯ ಬಗ್ಗೆ ಕಾಳಜಿ ಹೆಚ್ಚಾಗಿದ್ದು, ಹಂಪಿ ಪ್ರಾಧಿಕಾರದ ರಚನೆ, ಪೊಲೀಸ್ ಠಾಣೆಯ ಉನ್ನತೀಕರಣ, ಸಂಚಾರ ಗಸ್ತು, ಪರವಾನಿಗೆ ನೀಡಿಕೆ, ಪ್ರವಾಸಿಗರ ಮಾಹಿತಿ ದಾಖಲೆ ಇತ್ಯಾದಿಗಳಿಂದ ರಕ್ಷಣಾ ಚಟುವಟಿಕೆ ಉತ್ತಮವಾಗಿದೆ

ಹಂಪಿಯ ರಕ್ಷಣೆ ಹಾಗೂ ಅಭಿವೃದ್ಧಿಗೆ ಪೂರಕವಾಗಿ ಹಂಪಿಯಲ್ಲಿ ನೆಲೆಸಿದ್ದ ಸ್ಥಳೀಯರನ್ನು ಒಕ್ಕಲೆಬ್ಬಿಸುವ(ಸ್ಥಳಾಂತರಿಸುವ) ಕೆಲಸ ನಡೆದಿದೆ. ಹತ್ತಾರು ವರ್ಷಗಳಿಂದ ಈ ಭಾಗದಲ್ಲಿ ತಮ್ಮ ತನು–ಮನಗಳನ್ನು ಹಂಪಿಯ ಮಣ್ಣಿಗೆ ಅರ್ಪಿಸಿಕೊಂಡಿದ್ದ ೩೦೦ ಕುಟುಂಬಗಳನ್ನು ಸರ್ಕಾರ ಕಡ್ಡಿರಾಂಪುರದ ಹತ್ತಿರಕ್ಕೆ ಸ್ಥಳಾಂತರಿಸಿದೆ. ಸ್ಥಳಾಂತರ ಸಮಯದಲ್ಲಿ ಸ್ಥಳೀಯರ ಪ್ರತಿಭಟನೆ, ವಿರೋಧ ವ್ಯಕ್ತವಾಗಿತ್ತು. ಇದಕ್ಕೆ ಹೊಸಪೇಟೆ ಸ್ಥಳೀಯ ಶಾಸಕ ಶ್ರೀಯುತ ಆನಂದ್‌ಸಿಂಗ್ ಅವರ ಬೆಂಬಲವು ದೊರೆತು ರಾಜ್ಯಮಟ್ಟದ ಸುದ್ಧಿಯಾಯಿತು. ಆದರೂ ಸರ್ಕಾರ ಸೇರಿದಂತೆ ಸಂಬಂಧಿಸಿದ ಪ್ರಾಧಿಕಾರಗಳು ಸ್ಥಳೀಯರ ಮನವೊಲಿಸುವಲ್ಲಿ ಯಶಸ್ವಿಯಾಗಿ ಸ್ಥಳಾಂತರ ಕಾರ್ಯ ನಿರ್ದಿಷ್ಟವಾಗಿ ನಡೆದಿದೆ. ಈ ಘಟನೆಯ ಬಗ್ಗೆ ಸ್ಥಳೀಯ ನಿವಾಸಿಗಳೊಂದಿಗೆ ಚರ್ಚಿಸಿದಾಗ ಹೆಚ್ಚಾಗಿ ಅಸಮಾಧಾನದ ಮಾತುಗಳು ಕೇಳಿಬಂದವು. ಹುಟ್ಟಿ ಬೆಳೆದ ವಾತಾವರಣ ತ್ಯಾಗ ಮಾಡುವುದು ತುಂಬಾ ನೋವಿನ ಸಂಗತಿಯಾಗಿದ್ದು, ಹೊಸ ಜಾಗದಲ್ಲಿ ಈ ಹಿಂದಿನ

ಸಂಸ್ಕೃತಿ-ಸಂಬಂಧಗಳನ್ನು ಕಾಣುವುದು ಅಸಾಧ್ಯ ಎಂಬ ಆತಂಕದ ಮಾತುಗಳು ಕೇಳಿಬಂದವು. ಕೆಲವರು ಸ್ಥಳಾಂತರ ವಿಷಯ ಪ್ರಸ್ತಾಪವಾಗುತ್ತಿದ್ದಂತೆ ಭಾವುಕರಾಗಿ ಅಳಲು ಪ್ರಾರಂಭಿಸಿದರು. ಮತ್ತೇ ಕೆಲವರು ಸ್ಥಳೀಯ ಸರ್ಕಾರದ ವಿರುದ್ಧ ಆಕ್ರೋಶದ ಮಾತುಗಳನ್ನು ಆಡುವ ಮೂಲಕ ಅಂತರಾಳದಲ್ಲಿ ಹುದುಗಿದ್ದ ಸಿಟ್ಟನ್ನು ಹೊರಹಾಕಿದರು. ಕೆಲವು ಶಿಕ್ಷಿತರು ಸರ್ಕಾರದ ನಿರ್ಧಾರ ಉತ್ತಮವಾಗಿದ್ದು, ಬದಲಾವಣೆಗೆ ತಕ್ಕಂತೆ ಹೊಂದಿಕೊಳ್ಳುವುದು ಜಾಣತನದ ಲಕ್ಷಣ ಎಂದು ಉದಾರತೆಯನ್ನು ಪ್ರದರ್ಶಿಸಿದ್ದನ್ನು ಈ ಕೆಳಗಿನ ಕೋಷ್ಟಕದಿಂದ ತಿಳಿಯಬಹುದು.

ಸ್ಥಳಾಂತರದ ಪರಿಣಾಮ

ಕ್ರಸಂ.	ಒಳ್ಳೆಯದು	ನಷ್ಟದಾಯಕ	ಸಾಧಾರಣ	ಇತರೆ	ಒಟ್ಟು
೦೧	೧೫	೮೦	–	೦೫	೧೦೦
ಶೇಕಡವಾರು	೧೫%	೮೦%	–	೫%	೧೦೦%

ಈ ಮೇಲಿನ ಕೋಷ್ಟಕದಲ್ಲಿ ಶೇಕಡಾ ೮೦ರಷ್ಟು ಜನರು ಸ್ಥಳಾಂತರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರೆ, ಹತ್ತಾರು ವರ್ಷಗಳಿಂದ ನಾವೆಲ್ಲಾ ಇಲ್ಲಿ ನೆಲೆಸಿದ್ದರಿಂದಲೇ ಇಲ್ಲಿರುವ ಪ್ರವಾಸಿ ತಾಣಗಳು ಸುರಕ್ಷಿತವಾಗಿದ್ದವು. ಇಲ್ಲಿರುವ ಪ್ರತಿಯೊಂದು ಕಲ್ಲುಗಳೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದು, ಇಲ್ಲಿಂದ ನಮ್ಮನ್ನು ಎತ್ತಂಗಡಿ ಮಾಡಿ ಹೊಸ ಜಾಗದಲ್ಲಿ ನಮ್ಮೆಲ್ಲಾ ಆಶಯಗಳನ್ನು ಸರ್ಕಾರ ಪುನಃ ಕಟ್ಟಿ ಕೊಡುವುದು ಅಸಾಧ್ಯದ ಮಾತು. ಜೊತೆಗೆ ನಮ್ಮೊಂದಿಗಿದ್ದ ಐತಿಹಾಸಿಕ ತಾಣಗಳು ಮತ್ತು ಕಲ್ಲುಗುಂಡುಗಳು ಸುರಕ್ಷಿತವಾಗಿರುತ್ತವೆಯೇ ಎಂಬ ಆತಂಕದ ಮಾತುಗಳು ಕೇಳಿಬಂದವು.

೭.೨.೧ ಪ್ರವಾಸಿಗರ ಸಮಸ್ಯೆಗಳು

ವಿಜಯನಗರ ಸಾಮ್ರಾಜ್ಯ ೧೫ನೇ ಶತಮಾನದಲ್ಲಿ ಸ್ವರ್ಣಯುಗ ಎಂದು ಕರೆಯಲ್ಪಟ್ಟಿತ್ತು. ಶ್ರೀಕೃಷ್ಣದೇವಾರಾಯ ಆಡಳಿತ ಕಾಲದಲ್ಲಿ ಇದು ಉಚ್ಛ್ರಾಯಸ್ಥಿತಿಯಲ್ಲಿದ್ದ ಮೂಲೆ ಮೂಲೆಗಳಿಂದ ವ್ಯಾಪರಕ್ಕಾಗಿ ಬಂದ ವಿದೇಶಿ ಪ್ರವಾಸಿಗರು ತಮ್ಮ ಪ್ರವಾಸನ ಕಥನದಲ್ಲಿ ವಿಜಯನಗರದ ವೈಭವವನ್ನು ವರ್ಣಿಸಿದ್ದಾರೆ. ವಿಜಯನಗರ ಕಲಾ ಶಿಲ್ಪ ವೈಭವ ಈಗ ಮುಕ್ಕಾಗಿದೆ. ೬೦೦ವರ್ಷ ಗತಿಸಿದರೂ ಮೂಕ ಸಾಕ್ಷಿಗಳಾಗಿ ನಿಂತು ಹಾಳು ಹಂಪಿ ಎಂದು ಕರೆಯಿಸಿಕೊಳ್ಳುತ್ತಿದೆ. ಆದರೂ ಹಿಂದಿನಿಂದಲೂ ಜನರು ಇಲ್ಲಿಗೆ ಬಂದು ಹೋಗುತ್ತಾರೆ. ಪ್ರಸಕ್ತ ಹಂಪಿ ಪ್ರವಾಸಿಗರ ಹಿನ್ನೆಲೆಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳು ಇಂತಿವೆ.[೨]

೧. ಹಂಪಿ ವೀಕ್ಷಣೆಗೆ ಉತ್ತಮ ರಸ್ತೆ ಇಲ್ಲ

ಹಂಪಿಗೆ ಬಂದು ಹೋಗಲು ಪ್ರವಾಸಿಗರಿಗೆ ಉತ್ತಮವಾದ ರಸ್ತೆ ವ್ಯವಸ್ಥೆ ಇಲ್ಲ. ಇಲ್ಲಿರುವ ಒಂದು ರಸ್ತೆ ಅದೂ ಅರ್ಜೀಣವಾದ ರಸ್ತೆ, ದೊಡ್ಡ ದೊಡ್ಡ ಗುಂಡಿಗಳು ಇವೆ.

ವಾಹನ ಚಾಲಕರಿಗೆ ಇಲ್ಲಿ ಚಾಕಚಕ್ಯತೆ ಬೇಕು. ರಸ್ತೆಯಲ್ಲಿ ವಾಹನಗಳು ವೇಗದಲ್ಲಿ ತಿರುಗಾಡದಂತೆ ಸಾಗುತ್ತವೆ.

೨. ಪ್ರವಾಸಿಗರಿಗೆ ಉತ್ತಮ ಹೋಟಲ್‌ಗಳ ಕೊರತೆ

ಹಂಪಿಗೆ ಆಗಮಿಸುವ ಪ್ರವಾಸಿಗರಿಗೆ ಊಟ, ತಿಂಡಿಗೆ ಅತಿ ಅವಶ್ಯಕವಾಗಿ ಬೇಕಾದ ಉತ್ತಮವಾದ ಹೋಟಲ್‌ಗಳು ಇಲ್ಲ. ಇಲ್ಲಿ ಉತ್ತಮ ದರ್ಜೆಯ ಹೋಟಲುಗಳು ಇರದೇ ಇದ್ದಿದ್ದರಿಂದ ಹಲವು ತೊಂದರೆಗಳನ್ನು ಪ್ರವಾಸಿಗರು ಎದರಿಸುತ್ತಿದ್ದಾರೆ. ಕಮಲಾಪುರದಲ್ಲಿರುವ ಕೆ.ಎಸ್.ಟಿ.ಡಿ.ಸಿ.ಯವರು ನಡೆಸುವ ಹೋಟಲ್ ಮಯೂರ ಭುವನೇಶ್ವರಿ ಎಂಬ ಹೋಟೆಲ್ ನಮ್ಮ ಪ್ರವಾಸೋದ್ಯಮ ಇಲಾಖೆ ವತಿಯಿಂದ ನಡೆಯುತ್ತಿದೆ. ಇಲ್ಲಿ ಯಾವ ರೀತಿ ಗ್ರಾಹಕರನ್ನು ಶೋಷಿಸಲಾಗುತ್ತಿದೆ ಎನ್ನುವುದನ್ನು ಚಿತ್ರದುರ್ಗದ ಮೃತ್ಯುಂಜಯ ಅವರು ಈ ಮುಂದಿನಂತೆ ದಾಖಲಿಸಿದ್ದಾರೆ. 'ಅಲ್ಲಿ ಕುಳಿತು ಎಷ್ಟೋ ಸಮಯ ಕಳೆದರು ಕ್ಯಾರೆ ಎನ್ನುವವರಿಲ್ಲ. ನಂತರ ಬಂದ ಬೇರೆರ್ ಆರ್ಡರ್ ಕೇಳಿದ ಬೆಳಗಿನ ಉಪಹಾರ ಇಡ್ಲಿ ಸಾಂಬಾರ್ ವಡೆ, ಚೌಚೌ ಬಾತ್, ಉಪಮಾ, ಪೂರಿ ಸಾಗು, ಯಾವುದು ಇಲ್ಲವೆಂದು, ಕಡೆಗೆ ಇರುವುದಾದರು ಏನು ಎಂದು ಕೇಳುವ ಮೊದಲು ಪಕ್ಕದ ಅಸನಗಳಲ್ಲಿ ವಿರಾಜಿಸುತಿದ್ದ ವಿದೇಶಿಯರ ಮೇಜಿನ ಮೇಲೆ ಬ್ರೆಡ್ಡು, ಜಾಮ್, ಬಿಸ್ಕತ್, ಬನ್ನು, ಬಟರ್, ಅಮ್ಮಟ್, ಕಾಫಿ, ಟೀ, ಡಿಕಾಕ್ಷನ್ ಸಪ್ಲೆಯಾಗುವುದು ಕಂಡುಬಂತು. ಕಡೆಗೆ ದೋಸೆ ಮಾತ್ರ ಇದೆ ಎಂದು ತಿಳಿದು, ತಿಂದು ಹಂಪಿ ಕಡೆ ಮುಖ ಮಾಡಿದೆವು. ಹಸಿದ ಹೊಟ್ಟೆಗಾಗಿ ಅದೇ ಪ್ರವಾಸೋದ್ಯಮ ಇಲಾಖೆಯ ಮಯೂರಕ್ಕೆ ಬಂದೆವು. ಹಿಂದೆ ಇಲ್ಲಿ ದಕ್ಷಿಣ ಭಾರತ, ಉತ್ತರ ಭಾರತ ಊಟ ಸಿಗುತಿತ್ತು. ಆರ್ಡರ್‌ಗೆ ಊಟವಿಲ್ಲ ಎಂಬ ಉತ್ತರ ಮತ್ತು ಮೆನ್ಯು ಕೈಗೆ ಕೊಟ್ಟರು. ಅನ್ನ ಒಂದು ಚಿಕ್ಕ ಬಟ್ಟಲಿಗೆ ರೂ.೩೦. ಅದಕ್ಕೆ ಸಾಂಬಾರು ತಿಳಿಸಾರು ಇಲ್ಲ. ಅದಕ್ಕೆ ಪ್ರತ್ಯೇಕ ದಾಲ್ ತೆಗೆದುಕೊಳ್ಳಬೇಕು. ಇದರ ಬೆಲೆ ರೂ.೮೦. ಅನ್ನವು ಕಡಿಮೆ ದರ್ಜೆಯ ಅಕ್ಕಿ ಸರಿಯಾಗಿ ಮೂರು ತುತ್ತು ಆಗುವುದಿಲ್ಲ. ಮಾನ್ಯರೆ ಈ ಜಿಲ್ಲೆ ಕರ್ನಾಟಕಕ್ಕೆ ಅತಿ ಹೆಚ್ಚು ಅಕ್ಕಿ ಕೊಡುವ ಜಿಲ್ಲೆ. ಸಿರುಗುಪ್ಪ ಮಸೂರಿ ಅಕ್ಕಿ ಹೆಸರುವಾಸಿ. ಪ್ರವಾಸಿಗರಿಗೆ ತಿನ್ನುವ ಅನ್ನವೇ ಹೀಗಾದರೆ ಹೇಗೆ? ಎಂದು ಪ್ರಶ್ನಿಸುತ್ತಾರೆ.' ಇದೇ ಪರಿಸ್ಥಿತಿ ಹಂಪಿಯ ಅನೇಕ ಹೋಟಲುಗಳಿವೆ.

೩. ಪ್ರವಾಸಿಗರ ಮತ್ತು ವಾಹನಗಳ ಮೇಲೆ ದುಬಾರಿ ಪ್ರವೇಶ ಶುಲ್ಕ ಹೇರಿಕೆ

ಹಂಪೆಯ ವಿಕ್ಷಣೆಗೆ ಬರುವ ಪ್ರವಾಸಿಗರಿಗೆ ಮತ್ತು ವಾಹನಗಳ ಮೇಲೆ ಅತಿ ದುಬಾರಿ ಶುಲ್ಕ ಹೇರಲಾಗುತ್ತಿದೆ. ಇದು ನಿಯಮಬಾಹಿರ ಮತ್ತು ಆಕ್ರಮ ಸುಂಕ ಎಂದು ಪ್ರವಾಸಿಗರು ಹೇಳುತ್ತಾರೆ. ಇಲ್ಲಿರುವ ದುಬಾರಿ ತೆರಿಗೆಗಳು ಇಂತಿವೆ:

ಅ) ಹಂಪಿಗೆ ಪ್ರವೇಶ ಮಾಡುವಾಗ ಅಲ್ಲಿನ ಗ್ರಾಮಪಂಚಾಯತಿ ಪ್ರತಿ ವಾಹನಗಳಿಗೆ ರೂ.೨೦ ಶುಲ್ಕವನ್ನು ವಿಧಿಸುತ್ತದೆ.

ಆ)ಹಂಪಿಯಲ್ಲಿ ವಾಹನಗಳ ಪಾರ್ಕಿಂಗ್‌ಗಾಗಿ ರೂ.೧೦ನ್ನು ವಸೂಲಿ ಮಾಡಲಾಗುತ್ತಿದೆ.

ಇ)ವಿರೂಪಾಕ್ಷ ದೇವಾಲಯದೊಳಗೆ ಹೋಗಲು ೨ ರೂಪಾಯಿ ತಲೆ ಗಂದಾಯ ಹೇರಲಾಗುತ್ತದೆ.

ಈ)ದೇವಾಲಯದ ದ್ವಾರದಲ್ಲೇ ಚಪ್ಪಲಿ ಸುಂಕ ಹೇರಲಾಗುತ್ತದೆ.

ಉ)ಕಮಲಮಹಲ್ ಅವರಣದ ಪ್ರವೇಶಕ್ಕೆ ಪುರಾತತ್ತ್ವ ಇಲಾಖೆ ಕೌಂಟರ್‌ನಲ್ಲಿ ಪ್ರತಿ ವ್ಯಕ್ತಿಗೆ ರೂ.೧೦ ಸಂದಾಯ ಮಾಡಬೇಕು.

ಋ) ಕಮಲಾಪುರ ಮ್ಯೂಸಿಯಂನಲ್ಲಿ ಪಟ್ಟಣ ಪಂಚಾಯಿತಿ ಕಾರ್ಯಾಲಯ ಇದರ ಹೆಸರಿನಿಂದ ಪಾರ್ಕಿಂಗ್ ಶುಲ್ಕ ರೂ.೨೦ ವಸೂಲಿ ಮಾಡಲಾಗುತ್ತದೆ.

ಎ)ಕಮಲಾಪುರ ಮ್ಯೂಸಿಯಂನ ಪ್ರವೇಶಕ್ಕಾಗಿ ರೂ.೧೦ನ್ನು ವಿಧಿಸಲಾಗುತ್ತಿದೆ.

ಏ)ವಿಠ್ಠಲ ದೇವಾಲಯದ ಬಳಿ ಪ್ರತಿಯೊಬ್ಬರಿಗೆ ರೂ.೧೦ನ್ನು ಪುರಾತತ್ವ ಇಲಾಖೆ ವಿಧಿಸುತ್ತದೆ.

ಐ)ವಾಹನಗಳ ಪಾರ್ಕಿಂಗ್ ಶುಲ್ಕವನ್ನು ಬುಕ್ಕಸಾಗರ ಸ್ಥಳೀಯ ಪಂಚಾಯಿತಿ ರೂ.೨೦ ವಿಧಿಸುತ್ತದೆ.

ಒ)ತಳವಾರಘಟ್ಟದ ಮೊದಲಿರುವ ತುರ್ತುಕಾಲುವೆ ಹತ್ತಿರ ರೂ.೨೦ ಮತ್ತು ರೂ.೧೦ನ್ನು ಪ್ರತಿವಾಹನಗಳಿಗೆ ವಿಧಿಸುತ್ತಾರೆ.

ಇಲ್ಲಿ ವಿದೇಶಿಯರಿಗೆ ಹೆಚ್ಚು ಶುಲ್ಕ ತೆಗೆದುಕೊಳ್ಳಲಾಗುತ್ತದೆ. ವಿದೇಶಿಯರ ಸುಲಿಗೆ ದೇಶಕ್ಕೆ ಮಾನತರುವ ವಿಷಯವಲ್ಲ. ಅವರನ್ನು ಚಪ್ಪಲಿ ಕಾಯುವನು ೫೦ ರೂ. ಕೇಳುತ್ತಾನೆ. ಇಲಾಖೆಯವರು ಸ್ಮಾರಕ ಪ್ರವೇಶಕ್ಕೆ ರೂ.೨೫೦. ಶುಲ್ಕ ವಸೂಲಿ ಮಾಡುತ್ತಾರೆ.

೪. ಉತ್ತಮ ತರಬೇತಿ ಪಡೆದ ಮಾರ್ಗದರ್ಶಕರ ಕೊರತೆ

ಹಂಪಿಯಲ್ಲಿ ಉತ್ತಮ ಸುಶಿಕ್ಷಿತ ಮಾರ್ಗದರ್ಶಿಗಳ ಕೊರತೆ ಇದೆ. ಅವರೆಲ್ಲಾ ಹಂಪಿಯ ವಾಸ್ತವ ಇತಿಹಾಸಕ್ಕೆ ಬದಲಾಗಿ ಅಜ್ಜಿ ಕಥೆಗಳ ರೀತಿ ಹಂಪಿಯನ್ನು ಪರಿಚಯಿಸುತ್ತಾರೆ. ಇಲ್ಲಿರುವ ಬಹುತೇಕರಿಗೆ ಗೈಡು ಪರವಾನಿಗಾಗಿ ಇಲ್ಲ. ಅಲ್ಲದೆ ಅವರಿಗೆ ಉತ್ತಮ ತರಬೇತಿ ಇಲ್ಲ. ಇವರಿಂದಾಗಿ ವಿದೇಶಿಯರಿಗೆ ಸರಿಯಾದ ಮಾರ್ಗದರ್ಶನ ದೊರೆಯುತ್ತಿಲ್ಲ. ಇನ್ನು ಬಟ್ಲರ್ ಇಂಗ್ಲಿಷ್ ಮಾರ್ಗದರ್ಶಿಗಳು ನಿಯಮ ಮೀರಿ ಸಾವಿರಾರು ರೂಪಾಯಿ ಅಧಿಕವಾಗಿ ಕೇಳುತ್ತಾರೆ ಇದು ನಿಜಕ್ಕೂ ವಿಶ್ವಪರಂಪರೆಗೆ ಕೊಡುವ ಗೌರವವೇ?.

೫. ಉತ್ತಮ ಶೌಚಾಲಯ ವ್ಯವಸ್ಥೆ ಇಲ್ಲ

ಉತ್ತಮ ದರ್ಜೆಯ ಶೌಚಾಲಯಗಳು ಇಂದು ಪ್ರಾಸಿಗರಿಗೆ ದೊರೆಯುತ್ತಿಲ್ಲ. ಈಗಿರುವ ಒಂದೆರಡು ಶೌಚಾಲಯಗಳು ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲ. ಇದರಿಂದ ಹೆಂಗಸರು ಮತ್ತು ಮಕ್ಕಳು ತೀವ್ರ ತೊಂದರೆ ಅನುಭವಿಸುತ್ತಾರೆ. ಅನೇಕರು ಇದಕ್ಕಾಗಿ ನದಿ ದಂಡೆಯನ್ನು

ಅವಲಂಬಿಸುತ್ತಾರೆ. ವಿರೂಪಾಕ್ಷ ದೇವಾಲಯದ ಎಡ ಭಾಗಕ್ಕೆ ತುಂಗಭದ್ರಾ ನದಿ ದಂಡೆ, ಇಲ್ಲಿ ಯಾವುದೆ ಸ್ನಾನ ಘಟ್ಟ, ರಕ್ಷಣೆ ತಡೆ ಮೆಶ್ ಅಳವಡಿಕೆ ಯಾವುದೂ ಇಲ್ಲ ತಟದ ಅಕ್ಕಪಕ್ಕ ದಂಡಿ ಹೇಸಿಗೆ ದುರ್ವಾಸನೆಮಯ ಬಟ್ಟೆ ಒಗೆತ ಜಲಮಾಲಿನ್ಯದಿಂದ ನದಿ ನೀರು ಕೊಳಕಾಗಿದೆ. ಶೌಚಾಲಯಕ್ಕೆ ಹೋದರೆ ಅಲ್ಲಿ ನೀರಿಲ್ಲ. ರೂ.೫ ತೆತ್ತ ಮೇಲೂ ಎಲ್ಲಿಂದಲೋ ಬಕೀಟ್ ನೀರು ತಂದು ಕೊಡುತ್ತಾರೆ.

೬. ಪ್ರವಾಸಿಗರಿಗೆ ಕುಡಿಯುವ ನೀರಿನ ಕೊರತೆ

ಉತ್ತಮ ದರ್ಜೆಯ ಕುಡಿಯುವ ನೀರು ಇಂದು ಪ್ರವಾಸಿಗರಿಗೆ ದೊರೆಯುತ್ತಿಲ್ಲ. ಈಗಿರುವ ಒಂದೆರಡು ಕುಡಿಯುವ ನೀರಿನ ಫಿಲ್ಟರ್‌ಗಳು ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲ. ಕುಡಿಯುವ ನೀರು ಎಂಬ ನಾಮಫಲಕ್ಕೆ ನೋಡಿ ಹತ್ತಿರ ಹೋದರೆ ಪೈಪುಗಳು ಕಿತ್ತಿವೆ. ಎಲ್ಲ ಅಸ್ತವ್ಯಸ್ತವಾಗಿದೆ.

೭. ಪ್ರವಾಸಿಗರಿಗೆ ಅತ್ಯಾಧುನಿಕ ಸೌಲಭ್ಯಗಳಿಲ್ಲ

ಪ್ರವಾಸಿ ಮಾಹಿತಿ ನೀಡುವ ಆಡಿಯೋ, ವಿಡಿಯೋ, ಕಿಯೋನಿಕ್ಸ್ ಮೊದಲಾದ ಆಧುನಿಕ ವ್ಯವಸ್ಥೆಗಳು ಪ್ರವಾಸಿಗರಿಗೆ ಅಲಭ್ಯವಾಗಿವೆ. ಇತ್ತೀಚೆಗೆ ಆಯೋಜಿಸಿದ್ದ ನೆರಳು ಬೆಳಕಿನ ಕಾರ್ಯಕ್ರಮ ಈಗ ಮಾಯವಾಗಿದೆ. ಇದರ ವಿದ್ಯುತ್ ತಂತಿಗಳು ಎಲ್ಲೆಂದರಲ್ಲೇ ಯಮಪಾಶವಾಗಿ ಬಿದ್ದಿವೆ.

೮. ಬ್ಯಾಟರಿ ವಾಹನಗಳಿಂದ ಪ್ರವಾಸಿಗರ ಶೋಷಣೆ

ವಿಜಯ ವಿಠಲ ದೇವಸ್ಥಾನಕ್ಕೆ ಹೋಗಲು ಅಲ್ಲಿಂದ ೧.ಕಿಮೀ. ಈಚೆ ಪ್ರವಾಸಿಗರ ವಾಹನ ತಡೆದು ನಿಲ್ಲಿಸುತ್ತಾರೆ. ಅಲ್ಲಿಂದ ಪ್ರಾಧಿಕಾರದವರು ವಾಯುಮಾಲಿನ್ಯದ ನೆಪದಲ್ಲಿ ಆಯೋಜಿಸಿರುವ ಬ್ಯಾಟರಿ ವಾಹನದಲ್ಲಿ ಪ್ರತಿ ವ್ಯಕ್ತಿಗೆ ರೂ.೨೦ ಹಣೆತೆತ್ತು ಹೋಗಬೇಕು. ನಮ್ಮ ವಾಹನ ಬಿಡದಿದಕ್ಕೆ ಕಾರಣ ಕೇಳಲಾಗಿ ಮುಂದೆ ಅಮೂಲ್ಯ ಶಿಲ್ಪಕಲೆಯ ಸ್ಮಾರಕಗಳು ಇವೆ. ಅದರಲ್ಲಿ ವಿಜಯವಿಠ್ಠಲ ದೇವಸ್ಥಾನ, ನರ್ತನ ಸಭಾಮಂಟಪ ಕಲ್ಲಿನ ತೇರು, ಇವುಗಳಿಗೆ ಪೆಟ್ರೋಲ್ ಹೊಗೆ ಮಾಲಿನ್ಯದಿಂದ ಶಿಲೆಗಳು ಹಾಳಾಗಿವೆ. ಅದ್ದರಿಂದ ಬ್ಯಾಟರಿಚಾಲಿತ ವಾಹನಗಳು ಇಲಾಖೆಯವರು ಮಾಡಿದ್ದಾರೆ ಎನ್ನುತ್ತಾರೆ ಸ್ಥಳೀಯರು. ಅವರು ನಿಗದಿ ಮಾಡಿದ ವಾಹನದಲ್ಲೇ ಹೊರಟರೆ ಕಲ್ಲು ಮಣ್ಣುಗಳಿಂದ ಕೂಡಿದ ಮಣ್ಣಿನ ರಸ್ತೆ ಧೂಳುಮಯ. ಇದರ ಬಾಜು ಇರುವ ಪುರಂದರದಾಸರ ಮಂಟಪ ಇಲ್ಲಿಗೆ ಕಾಲು ನಡಿಗೆಯಲ್ಲಿ ಹೋಗಬೇಕು ರಸ್ತೆ ನೀರು ಹರಿದು ಕೊರಕುಲು. ಕಾಲು ಜಾರಿ ಬಿದ್ದರೆ ಕೈಮುರಿತ ಗ್ಯಾರಂಟಿ. ನಿಜಕ್ಕೂ ಈ ಪ್ರದೇಶ ವಿಶ್ವಪರಂಪರೆಗೆ ಸೇರಿದೆಯೇ? ಎಂಬ ಅನುಮಾನ ನಮಗೆ ಬರುತ್ತದೆ.

೯. ಸರಿಯಾದ ಮಾಹಿತಿ ಪುಸ್ತಕಗಳಿಲ್ಲ

ಹಂಪಿಯ ಸಮಗ್ರ ಇತಿಹಾಸ ಪರಿಚಯಿಸುವ ಮಾಹಿತಿ ಪುಸ್ತಕಗಳನ್ನು ಇದುವರೆಗೂ

ಸಂಬಂಧಿಸಿದ ಇಲಾಖೆಗಳು ಪ್ರಕಟಿಸದೇ ಇರುವುದು ದೌರ್ಭಾಗ್ಯವೇ ಸರಿ. ಪ್ರವಾಸಿಗರು ಅನಿವಾರ್ಯವಾಗಿ ಖಾಸಗಿಯವರ ಪುಸ್ತಕಗಳನ್ನು ಅವಲಂಬಿಸಿದ್ದಾರೆ.

೧೦. ಪ್ರವಾಸಿಗರಿಗೆ ಉತ್ತಮ ಲಾಡ್ಜ್‌ಗಳಿಲ್ಲ

ವಿಶ್ವವಿಖ್ಯಾತ ಹಂಪಿ ವೀಕ್ಷಣೆಗೆ ಬರುವವರಿಗೆ ಅವರು ಅಂತಸ್ತಿಗೆ ತಕ್ಕ ಹೋಟಲ್‌ಗಳು ಹಂಪಿಯಲ್ಲಿ ಇಲ್ಲ ಇದರಿಂದ ಪ್ರವಾಸಿಗರು ಪರದಾಡಬೇಕಾದ ಪರಿಸ್ಥಿತಿ ಇದೆ. ಅದಕ್ಕಾಗಿ ಕೆಲ ಖಾಸಗಿ ಲಾಡ್ಜ್‌ಗಳನ್ನು ಮತ್ತು ಗೆಸ್ಟ್ ಹೌಸ್‌ಗಳನ್ನು ದುಬಾರಿ ಹಣಕೊಟ್ಟು ಬಳಸಬೇಕಾದ ಅನಿವಾರ್ಯತೆ ಇದೆ. ಪ್ರವಾಸೋದ್ಯಮ ಇಲಾಖೆ ಹಲವು ಸಮಸ್ಯೆಗಳನ್ನು ಎದುರುಸುತ್ತಿದೆ. ಪ್ರವಾಸ ಇಲಾಖೆ ತನ್ನ ಶಕ್ತಿ, ಸಾಮರ್ಥ್ಯ ಹಾಗೂ ಸಾಧ್ಯತೆಗಳ ಬಗ್ಗೆ ನಮ್ಮ ರಾಜಕಾರಣಿಗಳಿಗಳಾಗಲಿ, ಅಧಿಕಾರಿಗಳಿಗಾಗಲಿ ಅರ್ಥವಾದಂತೆ ಕಾಣುತ್ತಿಲ್ಲ. ಹೀಗಾಗಿ ಪ್ರವಾಸೋದ್ಯಮ ಕ್ಷೇತ್ರವು ಸಮಸ್ಯೆಯ ಆಗರವಾಗಿದೆ ಎನ್ನಬಹುದು. ಈ ಹೇಳಿಕೆಗೆ ಪೂರಕವಾಗಿ ರಾಜ್ಯದಲ್ಲಿರುವ ಪರಿಸ್ಥಿತಿಯನ್ನು ಅವಲೋಕಿಸಿದಾಗ ಕಳೆದ ೧೨ ವರ್ಷಗಳಲ್ಲಿ ನಮ್ಮ ಪ್ರವಾಸೋದ್ಯಮ ಇಲಾಖೆಯು ಒಂದು ಡಜನ್ ಸಚಿವರನ್ನು ಅಷ್ಟೇ ಸಂಖ್ಯೆಯ ಕಾರ್ಯದರ್ಶಿಗಳನ್ನು, ಹಿರಿಯ ಅಧಿಕಾರಿಗಳನ್ನು ಕಂಡಿದೆ. ಇಂತಹ ಕ್ರಮದಿಂದ ಇಲಾಖೆಯನ್ನು ಅರ್ಥಮಾಡಿಕೊಳ್ಳಲು ಹಾಗೂ ಅಭಿವೃದ್ಧಿ ಯೋಜನೆಗಳನ್ನು ಹೇಗೆ ರೂಪಿಸಲು ಸಾಧ್ಯ? ಸಚಿವರನ್ನು, ಅಧಿಕಾರಿಗಳನ್ನು ಒಂದು ಖಾತೆಯಿಂದ(ಇಲಾಖೆ) ಮತ್ತೊಂದು ಇಲಾಖೆಗೆ ವರ್ಗಾಯಿಸಿದರೆ ಪ್ರವಾಸೋದ್ಯಮ ಇಲಾಖೆಯನ್ನು ನಿರ್ವಹಿಸುವುದಾದರೂ ಹೇಗೆ? ಇಂತಹ ನಡವಳಿಕೆ ಇಲಾಖೆಗೆ ಕಂಟಕ ಎಂಬುದನ್ನು ಅರ್ಥ ಮಾಡಿಕೊಳ್ಳುವುದಾದರೂ ಯಾವಾಗ? ಎಂಬ ಹತ್ತಾರು ಪ್ರಶ್ನೆಗಳಿಗೆ ಉತ್ತರ ಹುಡುಕಲು ಹೊರಟಾಗ ಪ್ರವಾಸೋದ್ಯಮ ಕ್ಷೇತ್ರ ಬೆಳೆಯಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಮನ್ವಯತೆ ಅವಶ್ಯಕ. ವಿವಿಧ ಇಲಾಖೆಗಳ ನಡುವೆ ಸಾಮರಸ್ಯ ಇದ್ದಾಗ ಮಾತ್ರ ಪ್ರವಾಸಿ ತಾಣಗಳಿಗೆ ವಿವಿಧ ಮೂಲ ಸೌಕರ್ಯಗಳನ್ನು ಒದಗಿಸಲು ಮತ್ತು ಉತ್ತೇಜಿಸಲು ಸಹಕಾರಿಯಾಗುತ್ತದೆ. ರಾಜ್ಯದಲ್ಲಿರುವ ಪ್ರವಾಸಿ ತಾಣಗಳ ಬಗ್ಗೆ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸಮರೋಪಾದಿಯ ಕಾರ್ಯಯೋಜನೆ ರೂಪಗೊಳ್ಳಬೇಕು. ಪ್ರವಾಸೋದ್ಯಮ ಮಾಹಿತಿ ಕೂಟಗಳು, ಮೇಳಗಳು, ಸಾಕ್ಷ್ಯಚಿತ್ರಗಳು, ಜಾಹೀರಾತು ಸೇರಿದಂತೆ ವಿವಿಧ ತಂತ್ರೋಪಾಯಗಳನ್ನು ಕೈಗೊಳ್ಳಬೇಕು. ಇದರಿಂದ ಅಂತರಾಷ್ಟ್ರೀಯ ಟ್ರಾವೆಲ್ಸ್ ಏಜನ್ಸಿಗಳು, ಬಂಡವಾಳದಾರರು, ಮಾರ್ಗದರ್ಶಕರು, ಮಾಹಿತಿದಾರರು ಹೋಟೆಲ್ ಉದ್ಯಮಿಗಳು, ಇತಿಹಾಸಕಾರರು, ಶಿಕ್ಷಣ ಪ್ರೇಮಿಗಳು, ಬರಹಗಾರರು, ಸಂಶೋಧಕರು. ಆಕರ್ಷಿತಗೊಂಡ ಪ್ರವಾಸೋದ್ಯಮ ಕಾರ್ಯದಲ್ಲಿ ನೇರವಾಗಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ. ಈಗಾಗಲೇ ಸರ್ಕಾರ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಅನೇಕ ಕಾರ್ಯಕ್ರಮಗಳನ್ನು ಆರಂಭಿಸಿದೆ. ಇದಕ್ಕಾರು ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಸಿನಿಮಾ ತಾರೆಯರು, ನೃತ್ಯಗಾರರು, ಕಲಾವಿದರು, ಸಂಗೀತಗಾರರು ಸೇರಿದಂತೆ

ಅನೇಕ ವಿದ್ವಾಂಸರನ್ನೊಂದಿಗೆ ಸಾಂಘಿಕ ಪ್ರಯತ್ನದಲ್ಲಿ ತೊಡಗಿದೆ. ಆದರೂ ಸಹ ಪಾಶ್ಚಿಮಾತ್ಯ ದೇಶಗಳ ಕೆಲವು ನಗರಗಳು ಗಳಿಸುವ ಸಂಪತ್ತನ್ನು(ಆದಾಯ) ನಮ್ಮ ದೇಶ ಗಳಿಸಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಬಹುಮುಖ್ಯ ಕಾರಣವೆಂದರೆ ಪ್ರವಾಸೋದ್ಯಮ ಇಲಾಖೆ, ಅಧಿಕಾರಿ ವರ್ಗ ಹಾಗೂ ಸಚಿವರ ನಡುವೆ ಸಮನ್ವಯದ ಕೊರತೆ, ಕಳಕಳಿ, ಕಾಳಜಿ ಇಲ್ಲವಾಗಿ ಪ್ರವಾಸೋದ್ಯಮದ ಉತ್ಸವಗಳಿಗೆ ಹೋಗುವುದು ಒಂದು ಮೋಜಿನ ತಾಣವಾಗಿ ಕುಟುಂಬದ ಸದಸ್ಯರೊಂದಿಗೆ ಮೋಜು-ಮಸ್ತಿಯಲ್ಲಿ ತೊಡಗಿ ಕಾಲಹರಣ ಮಾಡುತ್ತಿರುವುದರಿಂದ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಆಮೆ ವೇಗದಲ್ಲಿ ಅಭಿವೃದ್ಧಿ ಕಾರ್ಯ ತೆವಳುತ್ತಾ ನಡೆದಿದೆ.

೧೧. ಪ್ರವಾಸೋದ್ಯಮ ಇಲಾಖೆಯಲ್ಲಿ ಸ್ಥಿರತೆ ಹಾಗೂ ನಿರಂತರತೆ ಮಾಯವಾಗಿದೆ

ನಮ್ಮ ಅಕ್ಕ ಪಕ್ಕದ ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿನ ಪ್ರವಾಸೋದ್ಯಮ ಆಡಳಿತದಲ್ಲಿ ನಿರಂತರತೆ ನೆಲೆಗೊಂಡಿದೆ. ಹಂಪಿಯಲ್ಲಿರುವ ಕಛೇರಿಯಲ್ಲಿ ಮತ್ತು ಅದರ ಕೇಂದ್ರ ಕಛೇರಿಯಲ್ಲಿ ಪ್ರತಿ ೬-೮ ತಿಂಗಳಿಗೊಮ್ಮೆ ಅಧಿಕಾರಿಗಳ ಬದಲಾವಣೆ ಸಾಮಾನ್ಯವಾಗಿದೆ. ಇಂತಹ ಕ್ರಮವು ಇಲಾಖೆಯ ಬಗ್ಗೆ ನಿರ್ಲಿಪ್ತತೆಯನ್ನು ಹುಟ್ಟುಹಾಕುತ್ತದೆ. ಇಲಾಖೆಯ ಕಾರ್ಯವೈಖರಿ ಮತ್ತು ಸ್ವರೂಪವನ್ನು ಅಧಿಕಾರಿಗಳು ತಿಳಿದುಕೊಳ್ಳುವುದರಲ್ಲಿಯೇ ಅವರನ್ನು ಬೇರೆಡೆಗೆ ವರ್ಗಾಯಿಸಿದ ಆದೇಶ ಅಧಿಕಾರಿಗಳ ಕೈ ಸೇರಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಯಾವುದೇ ಅಧಿಕಾರಿ ತಮ್ಮನ್ನು ತಾವು ಇಲಾಖೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳದೆ ಕೇವಲ ಕಾಲಹರಣ ಮಾಡುವುದರಲ್ಲಿ ದಿನಗಳನ್ನು ಎಣಿಸುತ್ತಾರೆ ಎಂಬ ಆಪಾದನೆ ಇದೆ. ನಮ್ಮ ರಾಜ್ಯದಲ್ಲಿ ಅಪರೂಪದ ಕೆಲವು ಪ್ರವಾಸಿ ತಾಣಗಳಿವೆ. ಕೇರಳ ಮತ್ತು ತಮಿಳುನಾಡು ರಾಜ್ಯಗಳಿಗಿಂತ ಉದ್ದವಾದ ಮತ್ತು ಸುಂದರವಾದ ಕರಾವಳಿ ತೀರ ನಮ್ಮಲ್ಲಿದ್ದರೂ ಕೇರಳ ಮತ್ತು ತಮಿಳುನಾಡು ರಾಜ್ಯಗಳು ಪ್ರವಾಸಿಗರನ್ನು ಸೆಳೆಯುವಲ್ಲಿ ನಮಗಿಂತಲೂ ಮುಂದಿದ್ದಾರೆ.

೧೨. ಪ್ರವಾಸೋದ್ಯಮ ಇಲಾಖೆಯ ಪುನರ್‌ಚೇತನದ ಅವಶ್ಯಕತೆ

ಈ ಪ್ರವಾಸೋದ್ಯಮ ಕ್ಷೇತ್ರ ಬಹುಮುಖ ಸ್ವರೂಪವನ್ನು ಮೈಗೂಡಿಸಿಕೊಂಡಿದೆ. ಪ್ರವಾಸಿ ತಾಣಗಳ ವೀಕ್ಷಣೆಯ ಜೊತೆಗೆ, ಪರಿಸರ ಪ್ರೇಮಿಗಳು ಈ ಭಾಗದ ಪರಿಸರವನ್ನು ಅಸ್ವಾದಿಸಲು ಬರುವವರಿದ್ದಾರೆ. ಸಾಹಸಿ ಮನೋಭಾವನೆಯುಳ್ಳವರು ಚಾರಣ ಕೈಗೊಳ್ಳುವುದು, ಮತ್ತೆ ಕೆಲವರು ವನ್ಯಜೀವಿಗಳ ವೀಕ್ಷಣೆ ಮತ್ತು ಅಧ್ಯಯನ, ಗಿಡಮೂಲಿಕೆಗಳನ್ನು ಸಂಗ್ರಹಿಸುವ ಪಾರಂಪರಿಕ ವೈದ್ಯರು, ಛಾಯಾ ಚಿತ್ರಕಾರರು, ಬರಹಗಾರರೂ, ಇತಿಹಾಸಕಾರರು, ಚಲನಚಿತ್ರ ತಂಡಗಳು ಸೇರಿದಂತೆ ಅನೇಕರಿಗೆ ಪ್ರೇರಣೆಯ ತಾಣವಾಗಿ ಹಂಪಿಯ ಪ್ರವಾಸೋದ್ಯಮ ನಿಲ್ಲಲು ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ಬೇರೆ ಬೇರೆ ಇಲಾಖೆಗಳನ್ನು ಒಗ್ಗೂಡಿಸಿ, ಸಮನ್ವಯ ಸಾಧಿಸಲು ಸಾಧ್ಯವಾದರೆ ಪ್ರವಾಸೋದ್ಯಮ ಇಲಾಖೆ ಪರಿಪೂರ್ಣಗೊಳ್ಳುವುದರಲ್ಲಿ ಸಂದೇಹವಿರಲಾರದು.

೧೩. ವ್ಯಾಪಾರಿ ವಸ್ತುಗಳ ಅಲಭ್ಯತೆ

ವಿರೂಪಾಕ್ಷ ದೇವಸ್ಥಾನದ ತೇರು ಬೀದಿಯಲ್ಲಿ ಮೊದಲು ಪ್ರವಾಸಿಗರಿಗೆ ಅವಶ್ಯಕವಾದ ಎಲ್ಲಾ ವ್ಯಾಪಾರಿ ವಸ್ತುಗಳು ದೊರೆಯುತ್ತಿದ್ದವು. ಆ ವೈಭೋಗ ಪ್ರಸಕ್ತ ದಿನದಲ್ಲಿ ಕಂಡು ಬರುತ್ತಿಲ್ಲ. ಏಕೆಂದರೆ ಪುರಾತತ್ತ್ವ ಇಲಾಖೆಯವರು ಮೊದಲಿದ್ದ ಅಂಗಡಿಗಳನ್ನು ಪ್ರಸಕ್ತ ದಿನಗಳಲ್ಲಿ ತೆರವು ಮಾಡಿಸಿರುವುದರಿಂದ ಆ ಇಡೀ ಬೀದಿಯು ಹಾಳು ಕೊಂಪೆಯಂತೆ ಗೋಚರವಾಗುತ್ತಿದೆ.

೧೪. ಮೌಲ್ಯ ಕಳೆದುಕೊಂಡ ಹಂಪಿ ಉತ್ಸವ

ನಮ್ಮ ರಾಜ್ಯದಲ್ಲಿ ನಡೆಯುವ ಮೈಸೂರಿನ ದಸರಾ ವಿಶ್ವಖ್ಯಾತಿಯನ್ನು ಪಡೆದಿದೆ. ಜಂಬೂಸವಾರಿಯನ್ನು ವೀಕ್ಷಿಸಲು ದೇಶ-ವಿದೇಶಗಳಿಂದ ಲಕ್ಷಾಂತರ ಜನರು ದಸರಾ ಉತ್ಸವಕ್ಕೆ ಆಗಮನಿಸಿ ಉತ್ಸವದ ಮೆರಗನ್ನು ಕಣ್ತುಂಬಿಕೊಳ್ಳುವುದು ಇತಿಹಾಸ. ಈ ದಾರಿಯಲ್ಲಿ 'ಹಂಪಿ ಉತ್ಸವ'ವನ್ನು ದಿವಂಗತ ಎಂ.ಪಿ.ಪ್ರಕಾಶರು ಮಹಾತ್ವಾಕಾಂಕ್ಷೆಯೊಂದಿಗೆ ಆರಂಭಿಸಿದರು. ಅದಕ್ಕಾಗಿ ನಿಗದಿತ ದಿನಾಂಕವನ್ನು ನಿಗದಿಪಡಿಸಿ, ದೇಶ-ವಿದೇಶಗಳಿಂದ ಕಲಾತಂಡಗಳನ್ನು ಆಹ್ವಾನಿಸಿ ಶ್ರೀಮಂತಿಕೆಯ ತಳಪಾಯವನ್ನು ಒದಗಿಸಿದ್ದರು. ಇದರಿಂದ ಹಂಪಿ ಪ್ರವಾಸೋದ್ಯಮವು ಸಾಕಷ್ಟು ಅಭಿವೃದ್ಧಿ ಕಂಡಿತ್ತು. ಇದರಿಂದ ಅನೇಕ ಸಣ್ಣಪುಟ್ಟ ವ್ಯಾಪಾರಿಗಳ ಜೀವನಕ್ಕೂ ಹಂಪಿ ಉತ್ಸವ ಆಸರೆಯಾಗಿತ್ತು. ಆದರೆ ಕ್ರಮೇಣ ಬದಲಾದ ರಾಜಕೀಯ ಸ್ಥಿತ್ಯಂತರಗಳಿಂದಾಗಿ ಹಂಪಿ ಉತ್ಸವ ಮೂಲೆಗುಂಪಾಗಲು ಕಾರಣವಾಯಿತು. ಪ್ರಕಾಶರು ನಿಗದಿಗೊಳಿಸಿದ್ದ ನಿರ್ದಿಷ್ಟ ದಿನಾಂಕಗಳನ್ನು ಬದಲಾಯಿಸಲಾಯಿತು. ಕೇವಲ ಹಣ ಬಲದಿಂದಲೇ ರಾಜಕೀಯಕ್ಕೆ ಬಂದ ಜಿಲ್ಲೆಯ ರಾಜಕೀಯ ನಾಯಕರು, ಹಂಪಿ ಉತ್ಸವದ ಹಿನ್ನೆಲೆ ಅರಿಯದೇ ರಾಜಕೀಯ ದೊಂಬರಾಟಕ್ಕೆ ಬಲಿಕೊಟ್ಟಿದ್ದು ಒಂದು ದೊಡ್ಡ ದುರಂತ. ಇದೇ ದಾಟಿಯಲ್ಲಿ ಕೆಲ ಉನ್ನತಧಿಕಾರಿಗಳು ಉತ್ಸವನ್ನು ಜನಸಾಮಾನ್ಯರ ಉತ್ಸವವಾಗಿ ಮಾಡುವ ಬದಲು ಅದನ್ನು ಉಳ್ಳವರ ಉತ್ಸವವನ್ನಾಗಿ ಕಳೆದ ವರ್ಷಗಳಲ್ಲಿ ಪರಿವರ್ತಿಸಿದರು. ಇದರ ದುಷ್ಪಾರಿಣಾಮ ಪ್ರವಾಸಿಗರು, ಸ್ಥಳೀಯ ವ್ಯಾಪಾರಿಗಳು ಮತ್ತು ಜನರ ಮೇಲೆ ಉಂಟಾಯಿತು. ಇದು ಇಲ್ಲಿನ ಜನ ಜೀವನದ ಮೇಲೆ ಪರಿಣಾಮ ಬೀರಿತು.

ಪರಂಪರೆಯನ್ನು ಪ್ರತಿಬಿಂಬಿಸಬೇಕಾದ ಹಂಪಿ ಉತ್ಸವ ಕೇವಲ ವೈಯಕ್ತಿಕ ಪ್ರತಿಷ್ಠೆಗಳಿಗೆ ಉತ್ಸವಗಳು ಬಲಿಯಾಗುತ್ತಿರುವುದು ವಿಷಾದನೀಯ. ಇನ್ನು ಮುಂದಾದರೂ ಘನ ಸರ್ಕಾರಗಳು ಸಂಸ್ಕೃತಿ ಮತ್ತು ಪರಂಪರೆ ಬಿಂಬಿಸಬೇಕಾದ ಉತ್ಸವಗಳ ಬಗ್ಗೆ ಒಂದು ಸ್ಪಷ್ಟ ನಿರ್ಧಾರ ಕೈಗೊಳ್ಳುವುದು ಅವಶ್ಯಕ. ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಸಂಸ್ಕೃತಿ ಬಿಂಬಿಸುವ ಕಲೆ, ಸಾಹಿತ್ಯ, ಜಾತ್ರೆ ಇತ್ಯಾದಿಗಳು ಸರ್ಕಾರ ಆದ್ಯತಾ ಕಾರ್ಯ ಚಟುವಟಿಕೆಯಾದಾಗ ಮಾತ್ರ ಮುಂದಿನ ಜನಾಂಗಕ್ಕೆ ಬಳುವಳಿಯಾಗಿ ರೂಪುಗೊಳ್ಳಲು ಹಾಗೂ ಬೆಳೆದು ಬರಲು ಸಾಧ್ಯವಾಗುತ್ತದೆ.

ಹಂಪಿಯ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ನಿರಂತರತೆ ಅಥವಾ ಇಚ್ಛಾಶಕ್ತಿಯುಳ್ಳ ಒಬ್ಬ ಯುವ ಉತ್ಸಾಹಿ ಮತ್ತು ಹಂಪಿಯ ಸಂಪೂರ್ಣ ಮಾಹಿತಿಯುಳ್ಳ ಉನ್ನತಾಧಿಕಾರಿಯನ್ನು ಪ್ರತ್ಯೇಕವಾಗಿ ನೇಮಿಸಿ ಆತನಿಗೆ ಕನಿಷ್ಠ ೫ ವರ್ಷಗಳ ಕಾಲ ಅವನ ಸುಪರ್ಧಿಗೆ ಸ್ಥಳೀಯ ಇಲಾಖೆಯನ್ನು ಒಪ್ಪಿಸಬೇಕು. ಆ ಅಧಿಕಾರಿ ಇಲ್ಲಿನ ಎಲ್ಲಾ ಪ್ರವಾಸಿ ತಾಣಗಳ ಗುರುತಿಸುವಿಕೆ ಮತ್ತು ಅವುಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಯ ಮಾಡುವುದಾದರೆ ಇಲ್ಲಿನ ಪ್ರವಾಸೋದ್ಯಮದ ಆಶಯಗಳು ಈಡೇರಬಲ್ಲವು. ಇಲ್ಲಿನ ಸ್ಥಳೀಯ ಪ್ರವಾಸೋದ್ಯಮ ಇಲಾಖೆಗೂ ಒಂದು ವಾಣಿಜ್ಯ ಯೋಜನೆ ರೂಪಿಸಬೇಕು. ಇದರಲ್ಲಿ ದೂರದೃಷ್ಟಿಯುಳ್ಳ ಕಾರ್ಯ ಯೋಜನೆಗಳಿಗೆ ಆದ್ಯತೆ ನೀಡುವುದಾದರೆ ಪ್ರವಾಸಿ ಕ್ಷೇತ್ರಗಳ ಅಭಿವೃದ್ಧಿಯ ಜೊತೆಗೆ ಚಿಕ್ಕ-ಪುಟ್ಟ ತಾಣಗಳಿಗೂ ಮರುಜೀವ ಲಭಿಸಲು ಸಾಧ್ಯವಾಗುತ್ತದೆ. ವಿಶ್ವದೆಲ್ಲೆಡೆ ಇರುವಂತೆ ರಾಜ್ಯದಲ್ಲೂ ಒಂದು ಪ್ರತ್ಯೇಕ ಪ್ರವಾಸೋದ್ಯಮ ಮಂಡಳಿ ರಚನೆಯಾಗಬೇಕು. ಈ ಮಂಡಳಿಯಲ್ಲಿ ಮುಖ್ಯಮಂತ್ರಿ ಸೇರಿದಂತೆ, ಸಾಹಿತ್ಯ, ಸಂಸ್ಕೃತಿ, ಉದ್ಯಮ ಪರಂಪರೆ ಕ್ಷೇತ್ರಗಳ ಪ್ರತಿನಿಧಿಗಳು ಒಗ್ಗೂಡಿ ಕೆಲಸ ಮಾಡುವಂತಾದರೆ ಇಲಾಖೆ ಪರಿಪೂರ್ಣಗೊಳ್ಳಲು ಸಾಧ್ಯವಾಗುತ್ತದೆ.[೨೩]

ವಿರೂಪಾಕ್ಷ ದೇವಾಲಯ ತುಂಬೆಲ್ಲ ಮಂಗಗಳ ಹಾವಳಿ ಹೆಚ್ಚಿದೆ. ಇಲ್ಲಿ ಬಲವಿದ್ದರೆ ಮಂಗಳಾರತಿ ಇಲ್ಲವಾದರೆ ಮಂಗಗಳಿಗೆ ತೆಂಗು ಬಾಳೆಹಣ್ಣು ಕೊಟ್ಟು ಕೈ ಮುಗಿಯಬೇಕು. ಗರ್ಭಗುಡಿ ದೇವರು ಛಾಯಚಿತ್ರ ತೆಗೆಯುವಂತಿಲ್ಲ ಕೈ ಬೆಚ್ಚಗೆ ಮಾಡಿದರೆ ಎಲ್ಲಾ ಸಾಧ್ಯ ಎನ್ನುವ ಅನುಭವ. ಹಂಪಿಯಲ್ಲಿ ವಾಸ್ತವ ಇತಿಹಾಸ ತಿಳಿದಿರುವ ಮತ್ತು ಭಾಷಾ ಪ್ರಾವಿಣ್ಯತೆ ಇರುವ ಮಾರ್ಗದರ್ಶಿಗಳ ಅವಶ್ಯಕತೆ ಇದೆ. ರಾಷ್ಟ್ರೀಯ ಹೆದ್ದಾರಿ ನವೀಕರಣ, ಹಂಪಿಯ ರಸ್ತೆಗಳು ಅಗಲೀಕರಣ ಮತ್ತು ಕಾಂಕ್ರಿಟ್ ವ್ಯವಸ್ಥೆ, ಮಾಹಿತಿ/ವಿಚಾರಣೆ ಕಛೇರಿ ಸ್ಥಾಪನೆ, ಗ್ರಾಮಪಂಚಾಯಿತಿ ಮತ್ತು ಸ್ಥಳೀಯ ಕಚೇರಿಗಳ ಆಕ್ರಮ ವಸೂಲಿಯನ್ನು ತಡೆ, ನಿಧಿಗಳ್ಳರ ನಿಗ್ರಹ ಮಾಡಿ ಉತ್ತಮ ಶೌಚಾಲಯಗಳ ವ್ಯವಸ್ಥೆ ಮಾಡಿದಲ್ಲಿ ಮಾತ್ರ ಹಂಪಿಯನ್ನು ವಿಶ್ವಪರಂಪರೆ ಎಂದು ಗುರುತಿಸಬಹುದು. ಆಗ ಮಾತ್ರ ಹಂಪಿಯ ಪ್ರವಾಸೋದ್ಯಮದ ಹಿನ್ನೆಲೆಯ ಸಮಸ್ಯೆಗಳು ಕಡಿಮೆಯಾಗಲು ಸಾಧ್ಯ.

ಕ್ರಿ.ಶ.೧೩೩೬ರಿಂದ ೧೬ನೇ ಶತಮಾನದವರೆಗೆ ಅಸ್ತಿತ್ವದಲ್ಲಿದ್ದ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪಿ ನಯನಮನೋಹರವಾದ, ಸಹಜ, ಸುಂದರ ವಿನ್ಯಾಸದಿಂದಾಗಿ, ದೊಡ್ಡ ದೊಡ್ಡ ಕಲ್ಲುಬಂಡೆಗಳಿಂದ ಸುತ್ತುವರೆದಿರುವ ಭೂದೃಶ್ಯಗಳಿಂದಾಗಿ, ವಿಸ್ತಾರವಾಗಿ ಕಾಣಬರುವ ಪ್ರಾಕೃತಿಕ ಅವಶೇಷಗಳಿಂದಾಗಿ, ತಿರುವುಮುರುವಿನ ತುಂಗಾಭದ್ರಾ ನದಿಯಿಂದಾಗಿ ಈ ಭೂಮಂಡಲದಲ್ಲಿರುವ ಅತ್ಯಂತ ಮಹೋನ್ನತ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದು ಎನ್ನುವುದರಲ್ಲಿ ಎರಡು ಮಾತೇ ಇಲ್ಲ. ೧೯೮೨ರಲ್ಲಿ ಹಂಪಿಯನ್ನು ವಿಶ್ವಪರಂಪರೆ ಸ್ಥಳವೆಂದು ದಾಖಲಾಗಲು ಸೂಚಿಸಲಾಯಿತು. ಆದರೆ, ೧೯೮೬ರಲ್ಲಿ ಹಂಪಿಯು ವಿಶ್ವಪರಂಪರೆ ಸ್ಥಳವೆಂದು ದಾಖಲಾಯಿತು. ಈ ತರುವಾಯ ೧೯೯೯ರಲ್ಲಿ ಹಂಪಿಯು ವಿಶ್ವಪರಂಪರೆ ಸ್ಥಳವೆಂದು ದಾಖಲಾಯಿತು. ಬಳಿಕ

೧೯೯೯ರಲ್ಲಿ ಎರಡು ಸೇತುವೆಗಳನ್ನು ನಿರ್ಮಿಸಿದ್ದರಿಂದಾಗಿ ನುಂಗಲಾರದ ತುತ್ತಾಗಿ ಪರಿಣಮಿಸಿತು. ಹಂಪಿಯನ್ನು ವಿನಾಶದ ಅಂಚಿನಲ್ಲಿರುವ ಪಟ್ಟಿಗೆ ಸೇರಿಸಲಾಯಿತು. ಈಗ ಒಂದು ಸೇತುವೆಯನ್ನು ಒಡೆದು ಹಾಕಲಾಗಿದೆ. ಎರಡೂ ಬದಿಗಳಿಗೆ ಸಂಪರ್ಕ ಕಲ್ಪಿಸುವಂಥ ಇನ್ನೊಂದು ಸೇತುವೆಯ ನಿರ್ಮಾಣಕ್ಕೆ ವಿಶ್ವಪರಂಪರೆ ಕೇಂದ್ರದ ಒಪ್ಪಿಗೆಯನ್ನು ನಿರೀಕ್ಷಿಸಲಾಗಿತ್ತು. ಆದರೆ ಒಪ್ಪಿಗೆ ದೊರೆಯಲಿಲ್ಲ. ಆ ಸೇತುವೆಯು ಸ್ಥಳೀಯ ಜನರ ಸಂಚಾರಕ್ಕಾಗಿ ಮಾತ್ರವೆ ಇರುತ್ತದೆಂದು ಖಾತ್ರಿಪಡಿಸುವಂಥ ವಿಧಿಬದ್ಧ ವಿವರಣೆ ದಾಖಲೆಯನ್ನು ವಿಶ್ವಪರಂಪರೆ ಕೇಂದ್ರಕ್ಕೆ ಸಲ್ಲಿಸಲಾಯಿತಾದರೂ, ನಂತರದ ದಿನಗಳಲ್ಲಿ ಸೇತುವೆ ಮುರಿದು ಬಿದ್ದಿತ್ತು. ಅಲ್ಲದೆ ಅಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಸಾವನ್ನಪ್ಪಿದ್ದು ಒಂದು ದುರಂತವೇ ಸರಿ.

ವಿನಾಶದ ಅಂಚಿನಲ್ಲಿರುವ ಪಟ್ಟಿಗೆ ಸೇರಿರುವುದರಿಂದ ಆಗಿರುವ ಹಾನಿಯನ್ನು ಕಡಿಮೆ ಮಾಡಲು ಇದುವರೆಗೆ ಸಾಧ್ಯವಾಗಿಲ್ಲ. ಪ್ರವಾಸೋದ್ಯಮ ಮತ್ತು ಸಾರಿಗೆ ಪ್ರಾಜೆಕ್ಟ್‌ಗಳು ತೆಗೆದುಕೊಂಡ ಅತ್ಯಂತ ಉನ್ನತಮಟ್ಟದ ಕ್ರಮಗಳಿಂದಲೂ ಗೊಂದಲ, ಬಿಕ್ಕಟ್ಟುಗಳು ಹೆಚ್ಚಾಗಿ ಅಂತರ ಕಡಿಮೆಯಾಗಲಿಲ್ಲ. ಹಂಪಿಯ ಸಾಂಸ್ಕೃತಿಕ ಅಂತಃಸತ್ವ, ಮಹತ್ವವನ್ನು ವಿಶ್ವಕ್ಕೆ, ರಾಷ್ಟ್ರಕ್ಕೆ, ರಾಜ್ಯಕ್ಕೆ ಹಾಗೂ ಸ್ಥಳೀಯರಿಗೆ ಒಂದು ಸಂಪತ್ತು ಎಂದು ತಿಳಿಸುವ ಪ್ರಯತ್ನಗಳು ನಡೆದವು. ಈ ತಾಣದ ಬಗ್ಗೆ ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಚರ್ಚೆಗಳು ನಡೆದವು. ವಿಶ್ವಪರಂಪರೆ ಸಂಸ್ಥೆಯು ಹಂಪಿ ಪ್ರಾಧಿಕಾರ ಮತ್ತು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯನ್ನು ಪದೇ ಪದೇ ಹಂಪಿಯ ಕುರಿತು ಭೂಪಟಗಳನ್ನು ಕೇಳಿತು. ಆದರೆ ಸಹಜವಾಗಿ ಇರುವಂತಹ ಭೂಪಟವನ್ನು ಇಲಾಖೆ ನೀಡಿತ್ತು. ವಾಸ್ತುಶಿಲ್ಪದ ದಾಖಲೆ ಸಂಗ್ರಹಣೆಯ ಮತ್ತು ಹಂಪಿಯಲ್ಲಿ ಯಾವ ಯಾವ ಸ್ಥಳದಲ್ಲಿ ರಚನೆಗಳಿವೆ ಎಂಬ ಬಗ್ಗೆ ವಿವರಣೆಯನ್ನು ಕೇಳಿತ್ತು. ಪ್ರಮುಖ ದೇವಾಲಯವಾದ ಹಂಪಿ ಬಜಾರ್, ರಥಬೀದಿಯಲ್ಲಿ ಜನವಸತಿ ಮತ್ತು ಅಂಗಡಿ ಮುಂಗಟ್ಟುಗಳ ಬಗ್ಗೆ ಪ್ರಶ್ನೆ ಬಂದಾಗ ಸರ್ಕಾರವು ಅವುಗಳನ್ನು ತೆರವುಗೊಳಿಸುವ ಭರವಸೆಯನ್ನು ನೀಡಿತ್ತು. ಈ ಮುಂಚೆ ಹೇಗೆ ಹಂಪಿ ಇತ್ತೋ ಅದೇ ರೀತಿಯಲ್ಲಿ ಉಳಿಸಿಕೊಳ್ಳುವ ಬಗ್ಗೆ ಯುನಿಸ್ಕೋಗೆ ತಿಳಿಸಿತ್ತು. ಹಾಗಾಗಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯು ಹಂಪಿಯ ಮುಖ್ಯ ಬೀದಿಯ ಮಂಟಪಗಳಲ್ಲಿ ಆಕ್ರಮಿಸಿಕೊಂಡಿದ್ದ ಅಂಗಡಿ ಮುಂಗಟ್ಟುಗಳನ್ನು ೨೦೧೧ರ ಆಗಸ್ಟ್ ತಿಂಗಳಲ್ಲಿ ತೆರವುಗೊಳಿಸಿತು. ಇದರಿಂದ ವ್ಯಾಪಾರಿಗಳು ಮತ್ತು ಸ್ಥಳೀಯ ನಿವಾಸಿಗಳು ಬೀದಿಗೆ ಬಿದ್ದಿದ್ದರು. ಕರ್ನಾಟಕ ಹೈಕೋರ್ಟ್ ನಿರ್ದೇಶನದ ಮೇರೆಗೆ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಇವರಿಗೆ ವಸತಿ ಸೌಕರ್ಯ ಕಲ್ಪಿಸಲು ಮುಂದಾಗಿದೆ. ಪ್ರವಾಸಿಗರಿಗೆ ಅಗತ್ಯವಾಗಿದ್ದ ವಸ್ತುಗಳನ್ನು ಖರೀದಿಸಲು ಅಂಗಡಿಗಳು ಇಲ್ಲದಂತಾದವು. ವ್ಯಾಪಾರಿಗಳ ಹಿತವನ್ನು ಕಾಪಾಡುವ ದೃಷ್ಟಿಯಿಂದ ಇಲಾಖೆಯು ಕಡ್ಡಿರಾಂಪುರದ ಬಳಿ ಷಾಪಿಂಗ್ ಕಾಂಪ್ಲೆಕ್ಸ್‌ಗಳನ್ನು ನಿರ್ಮಿಸುತ್ತಿದೆ.[೨೨] ಆದರೆ ಇದು

ಪ್ರವಾಸೋದ್ಯಮದ ಮೇಲೆ ಇದರ ನೇರ ಪರಿಣಾಮ ಬೀರಿದ್ದು, ಈ ಕ್ಷೇತ್ರದ ಓನ್ನಡೆಗೆ ಕಾರಣವಾಗಿರುವುದನ್ನು ಗುರುತಿಸಬಹುದು.

□□□

ಕೊನೆ ಟಿಪ್ಪಣಿಗಳು

೧. ನೈಸರ್ಗಿಕ ಪರಂಪರೆಯು ಮೂರ್ತ ಪರಂಪರೆಯಡಿಯಲ್ಲಿಯೇ ಅಧ್ಯಯನ ಮಾಡಬಹುದಾಗಿದೆ. ಆದರೆ ಇತ್ತೀಚಿಗೆ ಇದನ್ನು ಪ್ರತ್ಯೇಕವಾಗಿ ಗುರುತಿಸಲಾಗುತ್ತದೆ.

೨. ಪ್ರಸಕ್ತ ವಿಶ್ವದ ಸುಮಾರು ೧೭೫ ದೇಶಗಳು ಈ ಉದ್ದೇಶ, ಸಾಧನೆಗಾಗಿ ಯುನೋಸ್ಕೋ ಜತೆ ಕೈಜೋಡಿಸಿವೆ.

೩. ನೋಡಿ: ವರ್ಡ್ ಹೇರಿಟೇಜ್ ಸೈಟ್ಸ್

೪. ಇದರಲ್ಲಿ ಹಾಲಿ ಇರುವ ಸಂರಕ್ಷಣಾ ನಿಯಮಗಳು, ಈ ಬಗ್ಗೆ ನಿಯುಕ್ತ ಅಧಿಕಾರಿಗಳು, ಹಣಕಾಸು ಅನುದಾನ ಇತ್ಯಾದಿಗಳ ಬಗ್ಗೆ ಮಾಹಿತಿ ನೀಡಬೇಕು.

೫. ಈ ಸಮಿತಿ ಸಾಂಸ್ಕೃತಿಕ ಮತ್ತು ನೈಸರ್ಗಿಕ ಪರಂಪರೆಯ ತಾಣಗಳನ್ನು ಬೇರ್ಪಡಿಸುವಾಗ ಆದರೆ ಈ ವಿಂಗಡಣೆಯನ್ನು ತೀರ ಕಟ್ಟುನಿಟ್ಟಾಗಿ ಪಾಲಿಸಲಾಗುವುದಿಲ್ಲ ಏಕೆಂದರೆ, ಕೆಲವೊಮ್ಮೆ ಹಲವು ಬಾರಿ ನೈಸರ್ಗಿಕ ತಾಣಗಳಲ್ಲಿ ಮಾನವನ ಕುರುಹುಗಳದ್ದೇ ಇರುತ್ತವೆ ಅಥವಾ ಮಾನವ ಜನಾಂಗವು ಈ ತಾಣಗಳಿಗೆ ಆಧ್ಯಾತ್ಮಿಕ/ಧಾರ್ಮಿಕ ಮೌಲ್ಯಗಳನ್ನು ಕಂಡುಕೊಂಡು ತಮ್ಮ ನಂಬಿಕೆ ಮತ್ತು ದಂತ/ಕಟ್ಟು ಕಥೆಗಳಲ್ಲಿ, ಆಳವಾಗಿ ಬೇರೂರಿ ವಿಶಾಲವಾಗಿ ಸಾಂಸ್ಕೃತಿಕ ದೃಷ್ಟಿ ಪ್ರದೇಶವಾಗಿ ಹರಡಿಕೊಂಡಿರುತ್ತವೆ.

೬. ಮರುಸೃಷ್ಠಿ ಸಾಧ್ಯವಿಲ್ಲವೆಂದರೆ ಅಂತಹ ತಾಣಗಳು ನಾಶಗೊಂಡರೆ ಅವುಗಳನ್ನು ಪುನಃ ಯಥಾ ಸ್ಥಿತಿಗೆ ತರುವುದು ಅಸಾಧ್ಯ. ಮರುಸೃಷ್ಟಿ ಎಂದರೆ ಅಂಥಹ ತಾಣಗಳು ನಾಶಗೊಂಡ ನಂತರ ಮರುಸೃಷ್ಟಿ ಅಸಾಧ್ಯ. ವನ ಸಂಪತ್ತಿನ ನಾಶ, ವೈಜ್ಞಾನಿಕ ಪರಿಣಿತಿ ಮತ್ತು ಮಾನವ ಪ್ರಯತ್ನದ ಯಾವುದೇ ಅರಣ್ಯೀಕರಣ ಕಾರ್ಯಕ್ರಮ ಮರುಸೃಷ್ಟಿ ಮಾಡಬಹುದು. ನೈಜತೆ ವಿಷದಪಡಿಸಲು ಕಷ್ಟವಾದುದು.

೭. ಭಾರತದಲ್ಲಿ ೧೯೮೦ ಕ್ಕಿಂತ ಮೊದಲು ಸ್ಮಾರಕಗಳೇ ನಮ್ಮ ಪರಂಪರೆ ಎಂದು ತಿಳಿಯಲಾಗಿತ್ತು. ಈ ಸ್ಮಾರಕಗಳು ಐತಿಹಾಸಿಕ ಮಹತ್ವ ಹೊಂದಿದ್ದವು ಮತ್ತು ಅವುಗಳು ವಾಸ್ತುಶೈಲಿಗಾಗಿ ಪ್ರಸಿದ್ಧಿ ಹೊಂದಿದ್ದವು. ಆದರೆ ಇತ್ತೀಚಿಗೆ ಉಳಿದವುಗಳನ್ನು ಪರಂಪರೆಯ ಪ್ರತೀಕಗಳೆಂದು ಗುರುತಿಸಲಾಗುತ್ತದೆ.

೮. ಅದೇ ರೀತಿ ಕರ್ನಾಟಕದ ಪಶ್ಚಿಮಘಟ್ಟವನ್ನು ೨೦೧೩ರಲ್ಲಿ ಈ ಪಟ್ಟಿಗೆ ಸೇರಿಸಿದೆ.

೯. ಎಚ್.ತಿಪ್ಪೇಸ್ವಾಮಿ. ಹಂಪಿ ಪ್ರಾಧಿಕಾರ ವ್ಯಾಪ್ತಿಯ ಸ್ಮಾರಕಗಳ ವರದಿ, ಸಂಪುಟ.೨ ೧೦,

ಇಲ್ಲಿ ೨೫೦೦ ಕ್ಕಿಂತಲೂ ಹೆಚ್ಚು ಸ್ಮಾರಕಗಳಿವೆ.

೧೦.ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾದ ಲೇಖನ.

೧೧.ಪತ್ರಕರ್ತ ಕೃಷ್ಣ ಎನ್.ಲಮಾಣಿ ಅವರ ಅಭಿಪ್ರಾಯ.

೧೨.ಕೆ. ಸಿದ್ಧಪ್ಪ, ೨೦೧೧, ಹಂಪಿಯ ಪ್ರವಾಸೋದ್ಯಮ, ಪು.೧-೧೭೦

೧೩.ಅದೇ. ಪುಟ. ೧೭೧

೧೪.ಸದಾನಂದ ಕನವಳ್ಳಿ(ಅನು), ೧೯೯೨, ಮರೆತುಹೋದ ಮಹಾ ಸಾಮ್ರಾಜ್ಯ ವಿಜಯನಗರ, ಪುಟ. ೨೭೫

೧೫.ಅದೇ, ಪುಟ. ೯೫

೧೬.ಹಿರಿಯ ಸ್ಮಾರಕ ರಕ್ಷಣಾಧಿಕಾರಿಗಳು, ಪ್ರವಾಸಿಗರ ಪ್ರವೇಶ ದರದ ನೋಂದಣಿ ಪುಸ್ತಕ, ಕಮಲಾಪುರ, ಪುರಾತತ್ವ ಇಲಾಖೆ-೨೦೦೧

೧೭.ಸ್ಮಾರಕಗಳ ಹಿರಿಯ ಸಂರಕ್ಷಣಾಧಿಕಾರಿಗಳು, ಕಮಲ ಮಹಲ್ ಮತ್ತು ವಿಠಲ ದೇವಸ್ಥಾನದ ಪ್ರವೇಶ ದರ ಟಿಕೇಟ್‌ಗಳ ನೊಂದಣಿ ಪುಸ್ತಕ, ಕಮಲಾಪುರ. ಕೇಂದ್ರ ಪುರಾತತ್ವ ಇಲಾಖೆ-೨೦೦೨

೧೮.ಕಾರ್ಯನಿರ್ವಾಹಕ ಅಧಿಕಾರಿಗಳು, ಪ್ರವಾಸಿಗರ ಪ್ರವೇಶ ದರ ನೊಂದಣಿ ಪುಸ್ತಕ, ಹಂಪಿ, ಮುಜರಾಯಿ ಇಲಾಖೆ-೨೦೦೨.

೧೯.ಸಹಾಯಕ ಸೂಪರಿಂಟೆಂಡೆಂಟ್, ಪ್ರವೇಶ ದರದ ನೋಂದಣಿ ಪುಸ್ತಕ ಕಮಲಾಪುರ, ಕೇಂದ್ರ ಪುರಾತತ್ವ ವಸ್ತು ಸಂಗ್ರಹಾಲಯ-೨೦೦೨.

೨೦.ಕ್ಷೇತ್ರ ಕಾರ್ಯದಲ್ಲಿ ವ್ಯಕ್ತಿಗಳಿಂದ ಲಭ್ಯವಾದ ಮಾಹಿತಿ.

೨೧.ಕ್ಷೇತ್ರ ಕಾರ್ಯದಲ್ಲಿ ದೊರೆತ ಮಾಹಿತಿ.

೨೨.ಎಚ್.ತಿಪ್ಪೇಸ್ವಾಮಿ, ಆದಿಮ, ಹಂಪಿ ವಿಶ್ವ ಪರಂಪರೆ ಮತ್ತು ಸಂರಕ್ಷಣೆ ಪುಟ.೧೬೦-೧೬೭

೨೩.ಎಂ. ಮೃತ್ಯುಂಜಯ, ಚಿತ್ರದುರ್ಗ ಇವರು ವಿಜಯಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟಿಸಿದ ಲೇಖನ ೨೩ ನವೆಂಬರ್ ೨೦೧೨.

೨೪. ಕೆ. ಸಿದ್ದಪ್ಪ, ಪೂರ್ವೋಕ್ತ.

ಅಧ್ಯಾಯ ಎಂಟು

ಸಮಾರೋಪ

೮.೧ ಅಧ್ಯಯನದ ಫಲಿತಗಳು

೮.೨ ಅಧ್ಯಯನದ ಹೊಸ ಸಾಧ್ಯತೆಗಳು

ಅಧ್ಯಾಯ ಎಂಟು

ಸಮಾರೋಪ

೮.೧. ಅಧ್ಯಯನದ ಫಲಿತಗಳು

ಪ್ರಸ್ತುತ ನಿಬಂಧವು ಎಂಟು ಅಧ್ಯಾಯಗಳನ್ನು ಒಳಗೊಂಡಿದೆ. ಈ ನಿಬಂಧವು, ಹೊಸ ಹೊಳಹುಗಳನ್ನು ಕಂಡುಕೊಳ್ಳುವ, ವಿಶ್ಲೇಷಿಸುವ ಮತ್ತು ತಾತ್ವಿಕತೆಯನ್ನು ಕಟ್ಟಿಕೊಡುವ ಆಶಯವನ್ನು ಹೊಂದಿದೆ. ಒಟ್ಟಾರೆ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿರುವ ಪ್ರಮುಖ ಫಲಿತಗಳು ಹೀಗಿವೆ:

೧. ಕರ್ನಾಟಕದ ಸಂಸ್ಕೃತಿ ನಿರ್ಮಾಣದ ದೃಷ್ಟಿಯಿಂದ ಹಂಪಿ ತೊಡಗುವಿಕೆ ಬಹಳ ಮಹತ್ವವಾಯಿತು. ಇದು ಅನೇಕ ಲೇಖಕರನ್ನು ತಮ್ಮ ಪ್ರತಿಭೆಯನ್ನು ಪ್ರಕಟಿಸಲು ನೆರವಾಯಿತು. ಲಕ್ಷಾಂತರ ಪ್ರವಾಸಿಗರು ತಮ್ಮ ಅಭಿರುಚಿಯನ್ನು ರೂಪಿಸಿಕೊಳ್ಳಲು ಮತ್ತು ಬರಹದ ಮೂಲಕ ಅಭಿವ್ಯಕ್ತಿಗೊಳಿಸಲು ನೆರವಾಯಿತು. ಈ ಹಿನ್ನೆಲೆಯಲ್ಲಿ ಕನ್ನಡದಲ್ಲಿ ದೇಶಿ ವಿದೇಶಿಯರ ಅಧ್ಯಯನವೆಂದರೆ, ಕನ್ನಡಿಗರ ಸಾಂಸ್ಕೃತಿಕ ಅಧ್ಯಯನವೂ ಆಗಿದೆ. ಜತೆಗೆ ಕರ್ನಾಟಕದ ಜನಪ್ರಿಯ ಸಂಸ್ಕೃತಿಯ ಬಹಳ ಮಹತ್ವದ ಅಧ್ಯಾಯದ ಅಧ್ಯಯನವೂ ಆಗಿದೆ.

೨. ಸಾಮಾನ್ಯವಾಗಿ ಕನ್ನಡ ಭಾಷಿಕ ಸಂಸ್ಕೃತಿಗಳ ಭಾಗವಾಗಿರುವ ಲೇಖಕರು/ಕವಿಗಳು ಕನ್ನಡ ಕಾವ್ಯ ಮತ್ತು ಕಾದಂಬರಿ, ನಾಟಕಗಳ ಲೋಕದಲ್ಲಿ ಹಂಪಿಯನ್ನು ಬಿಂಬಿಸಿರುವುದು ಹೊಸ ಸಂಚಲನೆಗಳಿಗೆ ಕಾರಣರಾಗಿದ್ದಾರೆ. ಅದರಲ್ಲೂ ಕನ್ನಡದ ಸೃಜನಶೀಲ ಪ್ರಕಾರಗಳಲ್ಲಿ ಹಂಪಿಯನ್ನು ಕುರಿತು ಬರೆದವರು ಪರಂಪರೆಯಲ್ಲೂ ದ್ವಿಭಾಷಿಕತೆ, ಬಹುಭಾಷಿಕತೆ, ಬಹುಸಾಂಸ್ಕೃತಿಕತೆಗಳ ಹಿನ್ನೆಲೆಯವರು. ಹೆಚ್ಚು ಸೃಜನಶೀಲತೆಯನ್ನು ಪ್ರಕಟಿಸಿದ್ದಾರೆ ಮತ್ತು ಸಮೃದ್ಧವಾದ ಸಾಹಿತ್ಯವನ್ನು ರಚಿಸಿಕೊಟ್ಟಿದ್ದಾರೆ. ಮೂಲತಃ ಹಂಪಿಯೇ ಹಲವು ಪ್ರತಿಭೆಗಳ ಸಾಹಿತ್ಯದಿಂದ ರೂಪುಗೊಂಡಿದೆ. ಈ ಹಿನ್ನೆಲೆಯಲ್ಲಿ ಭಾಷಿಕ ಮತ್ತು ಸಾಂಸ್ಕೃತಿಕ ಮಿಶ್ರಣದ ಹಿನ್ನೆಲೆಯು ಒಂದು ದೊಡ್ಡ ಶಕ್ತಿಯಾಗಿ ಚಾರಿತ್ರಿಕ ಲೋಕದಲ್ಲಿ ಕೆಲಸ ಮಾಡಿದೆ. ಹಲವು ರಾಜಮನೆತನಗಳು ಹಂಪಿಯನ್ನು ಆಳಿವೆ. ಸಾಮ್ರಾಜ್ಯ ವಿಸ್ತರಣೆಗೆ ಹಲವು ರಾಜಮಹಾರಾಜರ ನಡುವೆ ಯುದ್ಧ ವೈಷಮ್ಯ ಒಪ್ಪಂದಗಳು ಮಾಡಿಕೊಂಡಿವೆ. ಪರರಾಜರರು ಮತ್ತು ಕನ್ನಡಿಗರ ನಡುವೆ ಅನೇಕ ರಾಜಕೀಯ, ಆರ್ಥಿಕ ಕಾರಣಗಳಿಂದ ಸಂಘರ್ಷಗಳಿದ್ದರೂ, ಹಂಪಿ ಮಾತ್ರ ಹಲವು ಭಾಷಿಕ ಸಮುದಾಯಗಳ ನಡುವೆ ಸೌಹಾರ್ದ ಸಂಬಂಧವನ್ನು ಬೆಳೆಸುವ ಕೆಲಸವನ್ನು ಮಾಡಿದೆ. ಆದ್ದರಿಂದ ಹಂಪಿಗೆ ಒಂದು ಆಯಾಮವಿಲ್ಲ. ಇದನ್ನು ಮೀರಿದ ಒಂದು ಸಾಂಸ್ಕೃತಿಕ ಹೊಣೆಗಾರಿಕೆಯನ್ನು ನಿರ್ವಹಿಸಿದ ಚಾರಿತ್ರಿಕ ಆಯಾಮವೂ ಇದೆ.

೩. ಇತಿಹಾಸ ಬರೆದ ಅನೇಕ ವಿದ್ವಾಂಸರಲ್ಲಿದ್ದ ಚಾರಿತ್ರಿಕ ಪ್ರಜ್ಞೆ ಮತ್ತು ಅವರು ನಿರೂಪಿಸಿದ ಸಾಹಿತ್ಯಕ ಪ್ರತಿಭೆಯನ್ನು ಸೂಚಿಸುತ್ತದೆ. ಕನ್ನಡದ ವಿದ್ವಾಂಸರು ಶಿಷ್ಟ ಮತ್ತು ಜನಪದ ಎರಡರಲ್ಲೂ ಪರಿಣತಿ ಪಡೆದಿದ್ದರು. ಅವರು ಸ್ವತಃ ಅವರು ಎರಡೂ ಆಯಾಮಗಳನ್ನು ಬಲ್ಲವರೂ ಆಗಿದ್ದರು. ಸಾಹಿತ್ಯವಿಲ್ಲದೆ ಚರಿತ್ರೆಯನ್ನು ಕಲ್ಪಿಸಿಕೊಳ್ಳುವಂತೆಯೇ ಇಲ್ಲ. ಹೀಗೆ ವಿಶಿಷ್ಟ ಬಗೆಯ ಲೇಖಕರನ್ನು ಬಹುಶಃ ೧೯ನೇ ಶತಮಾನದ ಕೊನೆಯ ಮತ್ತು ೨೦ನೇ ಶತಮಾನದ ಮೊದಲ ಭಾಗದಲ್ಲಿ ಕರ್ನಾಟಕದ ಚರಿತ್ರೆಯನ್ನು ಬರೆಯುವಲ್ಲಿ ಸೃಷ್ಟಿಮಾಡಿತು. ವಿಶ್ವವಿದ್ಯಾಲಯಗಳ ಪಠ್ಯಕ್ರಮದ ಭಾಗವಾಗಿ (ಚರಿತ್ರೆಯ ವಿಭಾಗದಲ್ಲಿ) ಹಂಪಿ ಸೇರಿಕೊಂಡು ವಿಶಿಷ್ಟವಾದ ಮನ್ನಣೆ ಪಡೆದಿದೆ.

೪. ಈಗಾಗಲೇ ಪ್ರಕಟವಾದ ಲೇಖಕರ ಕೃತಿಗಳಲ್ಲಿ ಅವರ ಸಾಹಿತ್ಯದಲ್ಲಿ ಹಂಪಿಯ ಉಲ್ಲೇಖಗಳು ಸಿಗುತ್ತವೆ. ಇವು ಚಾರಿತ್ರಿಕ ವಿಶ್ಲೇಷಣೆಯನ್ನು ಬಯಸುತ್ತಿವೆ. ಇವು ಚರಿತ್ರೆಯ ಭಾಗವಾಗಿ ಕನ್ನಡದಲ್ಲಿ ಹುದುಗಿರುವ ಕಾರಣ ಇವು ಓದುಗರ ಅನುಭವದ ಎಳೆಗಳಲ್ಲಿ ಬಿಚ್ಚಿಕೊಳ್ಳುತ್ತಿರುತ್ತವೆ. ಈ ಪ್ರಕ್ರಿಯೆಯು ಹಂಪಿಯನ್ನು ಬೇರೊಂದು ಬಗೆಯಲ್ಲಿ ಜೀವಂತವಾಗಿಡುವ ಕೆಲಸವನ್ನು ಮಾಡುತ್ತಿದೆ. ಈ ಕೆಲಸವು ಹಂಪಿಯ ಚಾರಿತ್ರಿಕ ಅಂಶಗಳನ್ನು ಹುಡುಕಿ ನೋಡುವ ಆಸಕ್ತಿಯನ್ನು ಹೊಸತಲೆಮಾರಿನವರಲ್ಲಿ ಹುಟ್ಟಿಸುತ್ತಿದೆ. ಇಂತಹ ಬೌದ್ಧಿಕ ಚರ್ಚೆಗಳು ಕೂಡ, ಇತಿಹಾಸದ ಲೋಕವನ್ನು ವಿಸ್ಮೃತಿಗೆ ಒಳಗಾಗದಂತೆ ಬೇರೊಂದು ಬಗೆಯಲ್ಲಿ ಜೀವಂತವಿಡುವ ಕೆಲಸ ಮಾಡುತ್ತಿವೆ.

೫. ಮನುಷ್ಯ ತಾನು ನೆಲೆಸಿದ ಪ್ರದೇಶದ ಸಂಸ್ಕೃತಿಯ ವಾಹಕವಾಗಿ ಮೌಖಿಕ ದಾಖಲೆಗೆ ನಾಂದಿ ಹಾಡುತ್ತಾನೆ. ಜಾನಪದ ಸಾಹಿತ್ಯದ ಬೇರು, ಅದನ್ನು ಅವಲಂಬಿಸಿಯೇ ಇಲ್ಲಿಯ ಉಳಿದ ಸಾಹಿತ್ಯ ಬೆಳವಣಿಗೆ ಹೊಂದುತ್ತದೆ. ಜನರ ಬಾಯಿಯಿಂದ ಬಾಯಿಗೆ ತನ್ನ ಪರಂಪರೆ ಮತ್ತು ಸಂಸ್ಕೃತಿಯನ್ನು ಜಾನಪದ ವರ್ಗಾಯಿಸುತ್ತದೆ. ಹಂಪಿಯ ಭಾಗದಲ್ಲಿರುವ ಜನಪದರ ಕಥೆಗಳು, ಕಾವ್ಯ, ಒಗಟುಗಳು, ಐತಿಹ್ಯಗಳು ಹಂಪಿಯ ವೈಭವಕ್ಕೆ ವಿಶಿಷ್ಟವಾದ ಆಯಾಮವನ್ನು ತಂದುಕೊಡುತ್ತದೆ. ಹಂಪಿಗೆ ಸ್ಥಳೀಯವಾದ ಜನಪದ ಹಾಡು ಪರಂಪರೆ, ಓದುವಿಕೆಯಲ್ಲಿ ಸಾಹಿತ್ಯಕ ಕೃತಿಗಳ ಜೊತೆಗೆ ಸಂಬಂಧವಿದೆ. ಇವು ಜನರ ಮನರಂಜನೆಗೆ ಮಾತ್ರ ಸೀಮಿತವಾಗದೆ, ಅವರ ಅಭಿರುಚಿ ಆಲೋಚನ ಕ್ರಮವನ್ನು ಕೂಡ ರೂಪಿಸಿವೆ. ಹಂಪಿ ಚರಿತ್ರೆಗೆ ಸಂಬಂಧಿಸಿದ ಸಂಗತಿಯಾಗಿದ್ದರೂ ತನ್ನ ಪರಿಸರದಲ್ಲಿರುವ ಸಾಹಿತ್ಯ, ಧಾರ್ಮಿಕ ಆಚರಣೆ, ಸಾಮಾಜಿಕ ನಂಬಿಕೆಗಳ ಜೊತೆ ಆಂತರಿಕ ಸಂಬಂಧವನ್ನು ಹೊಂದಿದೆ.

೬. ಹಂಪಿಯನ್ನು ಉಲ್ಲೇಖಿಸುವ ಆಧುನಿಕ ಕನ್ನಡ ಕಾವ್ಯ, ಕಾದಂಬರಿಯ ಪರಂಪರೆಯ ಜತೆಗಿಂತಲೂ ಆಧುನಿಕ ಪೂರ್ವದ ಕಾವ್ಯಗಳ ಜತೆ ತಮ್ಮ(ಉಲ್ಲೇಖ) ಸಂಬಂಧವನ್ನು ಹೊಂದಿವೆ. ಉತ್ತರ ಕರ್ನಾಟಕದಲ್ಲಿ ಒಳಗೊಂಡ ಹಂಪಿಯ ಚರಿತ್ರೆ, ಕರಾವಳಿ ಹಾಗೂ ದಕ್ಷಿಣ ಕರ್ನಾಟಕದ ಚರಿತ್ರೆಯ ವಿಷಯದಲ್ಲಿಯೂ ಈ ಮಾತು ನಿಜ. ಮುಖ್ಯವಾಗಿ ಲಕ್ಕಣ

ದಂಡೇಶನ 'ಶಿವತತ್ವ ಚಿಂತಾಮಣಿ' ರತ್ನಾಕರವರ್ಣಿಯ 'ಭರತೇಶ ವೈಭವ'ಗಳ ರಚನೆಯಲ್ಲಿ ಅಲ್ಲಲ್ಲಿ ಹಂಪಿಯ ಮೇಲೆ ಆಳವಾದ ಪ್ರಭಾವವನ್ನು ಬೀರಿರುವ ಅಂಶಗಳಿವೆ. ಚರಿತ್ರೆಯು ಕನ್ನಡ ಸಾಹಿತ್ಯದ ಜತೆಗೆ ಹೊಂದಿದ್ದ ಕರುಳಬಳ್ಳಿಯ ಸ್ವರೂಪವನ್ನು ಸೂಚಿಸುತ್ತದೆ. ಇದನ್ನು ಆಧುನಿಕ ಪೂರ್ವಕಾವ್ಯದ ಇತಿಹಾಸ ರೂಪದ ಮರುಹುಟ್ಟು ಎಂದು ಸಹ ಕರೆಯಬಹುದು.

೭. ಹಂಪಿಗೆ ಸಮಾಜದ ವ್ಯವಸ್ಥೆಯ ಜತೆ ಸಂಬಂಧವಿದೆ. ಹಂಪಿಯನ್ನು ರೂಪಿಸುವಲ್ಲಿ ರಾಜ ಮಹಾರಾಜರ ಆದಿಯಾಗಿ ಕರ್ನಾಟಕದ ಬೇರೆ ಬೇರೆ ಸಮುದಾಯ ಮತ್ತು ವರ್ಗದ ಜನರು ಭಾಗವಹಿಸಿರುವರು. ಪ್ರತಿಸಮುದಾಯದ ವೃತ್ತಿಯ ಸ್ವರೂಪಕ್ಕೂ ಹಂಪಿಯಲ್ಲಿ ಭಾಗವಹಿಸುವುದಕ್ಕೂ ಸಂಬಂಧವಿದೆ. ಇಪ್ಪತ್ತನೇ ಶತಮಾನದ ಮೊದಲಾರ್ಧದ ಅನೇಕ ಚಾರಿತ್ರಿಕ ವಿದ್ಯಮಾನಗಳನ್ನು ಸಾಹಿತ್ಯ ಮತ್ತು ಚರಿತ್ರೆಯ ಕೃತಿಗಳು ಪ್ರತಿನಿಧಿಸುತ್ತವೆ. ಇವುಗಳಲ್ಲಿ ಜಾತಿ, ಅಸ್ಪೃಶ್ಯತೆ ಮತ್ತು ಲಿಂಗತಾರತಮ್ಯ ಕುರಿತ ಅಂಶಗಳು ಹುದುಗಿವೆ.

೮.ಹಂಪಿಯ ಚರಿತ್ರೆಯ ವಿಷಯಕ್ಕೂ ಆಧುನಿಕ ಕನ್ನಡ ಲೇಖಕರ ನಡುವೆ ಸಾಮಾನ್ಯವಾಗಿ ಕೊಡುಕೊಳೆಯ ಸಂಬಂಧವಿದೆ. ಹಂಪಿಯನ್ನು ಕಟ್ಟಿಕೊಡುವಲ್ಲಿ ಕನ್ನಡದ ವಿಮರ್ಶಕರೂ ಕೂಡ ಗಂಭೀರವಾಗಿ ಪರಿಗಣಿಸಿದ್ದಾರೆ. ಕೀರ್ತಿನಾಥ ಕುರ್ತಕೋಟಿ ಮುಂತಾದವನ್ನು ಇಲ್ಲಿ ಉದಾಹರಿಸಬಹುದು. ಇಂತಹ ಲೇಖಕರು ಚರಿತ್ರೆಯ ಮರುನಿರ್ಮಾಣಕ್ಕೆ ಪೂರಕವಾದವರು.

೯. ಕರ್ನಾಟಕದಲ್ಲಿ ಹಂಪಿಯ ಕುರಿತ ಹಾಡುಗಳನ್ನು, ಧ್ವನಿಬೆಳಕನ್ನು ಕ್ಯಾಸೆಟ್, ಸಿಡಿಗಳ ಮೂಲಕ ಕೇಳುವ ನೋಡುವ ವ್ಯವಸ್ಥೆಯನ್ನು ಪ್ರಸ್ತುತ ಸಂದರ್ಭದ ತಾಂತ್ರಿಕತೆಯಲ್ಲಿ ರೂಪುಗೊಂಡಿದೆ. ಈ ತಂತ್ರಜ್ಞಾನವು ಚಲನಚಿತ್ರ ಹಾಡುಗಳ ಹಾಡುಗಾರಿಕೆಗೂ ವಿಸ್ತರಣೆಗೊಂಡಿತು. ಈ ಹಿನ್ನೆಲೆಯಲ್ಲಿ ಈಗ ಹಂಪಿಯ ಗೀತೆಗಳು ದೊಡ್ಡ ಪ್ರಮಾಣದಲ್ಲಿ ನವಮೌಖಿಕ ಪರಂಪರೆಯ ಭಾಗವಾಗಿರುವ ಸಿಡಿ ಮತ್ತು ಕ್ಯಾಸೆಟ್‌ಗಳಲ್ಲಿ ಸಿಕ್ಕುತ್ತಿವೆ. ಹಂಪಿ ಗೊತ್ತಿಲ್ಲದವರ ಅದರ ಸಂಪರ್ಕವೂ ಇಲ್ಲದ ಜನಸಮುದಾಯಗಳಿಗೆ ಅವು ಲಭ್ಯವಾಗಿವೆ ಮತ್ತು ಅವರಲ್ಲಿ ಹೊಸ ಅಭಿರುಚಿ ಬೆಳೆಯಲು ಕಾರಣವಾಗಿವೆ. ಈ ಮೂಲಕ ಹಂಪಿಯನ್ನು ಅರ್ಥೈಸಿಕೊಳ್ಳಲು ಸಹಾಯಕವಾದೀತು.

೧೦. ಕನ್ನಡ ಜಾನಪದದ ಭಾಗವಾಗಿರುವ ಲಾವಣಿ, ಗಾದೆ, ಭಜನೆ ಹಾಡುಗಳಲ್ಲಿ ಹಂಪಿಯ ಕುರಿತ ಅನೇಕ ಅಂಶಗಳು ದೊರೆಯುವವು. ಅವು ಮೌಖಿಕ ಸಾಹಿತ್ಯವಾದರೂ ಚಲನಶೀಲತೆಯನ್ನು ಪಡೆದುಕೊಂಡಿವೆ. ಆಧುನಿಕತೆಯು ಜನರ ಬದುಕನ್ನು ಸಮಾಜವು ಆವರಿಸಿಕೊಂಡಂತೆಲ್ಲ, ನಗರ ಮಧ್ಯಮವರ್ಗದಲ್ಲಿ ಹಳತನ್ನು ಕುರಿತ ಒಂದು ಬಗೆಯ ವ್ಯಾಮೋಹವು (ನೊಸ್ಟಾಲ್ಜಿಯಾ) ಬೆಳೆಯುತ್ತಿದೆ. ಇದು ಕನ್ನಡ ಜಾನಪದದ ಮರುಹುಟ್ಟಿನ ಸಂಕೇತವೂ ಆಗಿದೆ.

೧೧. ಮರೆತುಹೋದ ಅಥವಾ ಮರೆಯಲಾಗದ ಮಹಾ ಸಾಮ್ರಾಜ್ಯವಾಗಿ 'ಹಂಪಿ',

'ವಿಜಯನಗರ' ಮುಂತಾಗಿ ಇಂದಿಗೂ ಕನ್ನಡದಲ್ಲಿ ದಾಖಲೆಗೊಳ್ಳುತ್ತಲೇ ಇದೆ. ವರ್ತಮಾನದ ಇತಿಹಾಸಕ್ಕೆ ಒಂದು ಸ್ಮೃತಿಯಾಗಿ 'ಹಂಪಿ' ಕನ್ನಡ ಸಾಹಿತ್ಯವನ್ನು ಕಾಡುತ್ತಲೇ ಇದೆ. ಕರ್ನಾಟಕ ಏಕೀಕರಣ ಮತ್ತು ಸ್ವಾತಂತ್ರ್ಯ ಹೋರಾಟಕ್ಕೆ ಬಹುದೊಡ್ಡ ಸ್ಫೂರ್ತಿಯಾದ ಈ 'ಹಂಪಿ' ಕರ್ನಾಟಕದ ಸಾಂಸ್ಕೃತಿಕ ನೆಲೆಯಾಗಿ ಇಂದಿಗೂ ಅನುಕರಣಗೊಳ್ಳುತ್ತಲೇ ಇದೆ. ಬಹುಮುಖ್ಯವಾಗಿ ರಾಷ್ಟ್ರೀಯವಾದಕ್ಕೆ ಹಂಪಿ ಬಳಕೆಯಾಗಿದೆ. ಇದು ನಂತರದಲ್ಲಿ ದುರಂತದ ಸಂಕೇತವಾಗಿ ವಸ್ತುವಾಗಿ ಕನ್ನಡಿಗರನ್ನು ಎಚ್ಚರಿಸುತ್ತಲೇ ಇದೆ. ಇದು 'ಕರ್ನಾಟಕದ ಗತ ವೈಭವ'ವೆಂತಲೂ 'ಹಾಳು ಹಂಪಿ' ಎಂತಲೂ ವಿಭಿನ್ನ ಆಯಾಮಗಳನ್ನು ಹೊಂದಿದೆ. ಈ ಪ್ರದೇಶ 'ಇತಿಹಾಸ ತಜ್ಞರಿಗಿಂತಲೂ ಭಿನ್ನವಾಗಿ ಕಾಣಿಸಿಕೊಂಡಿದೆ. ಇತಿಹಾಸ ರೂಪಿಸಿದ ಹಂಪಿಗೂ ಸಾಹಿತ್ಯ ರೂಪಿಸಿದ ಹಂಪಿಗೂ ಸಾಕಷ್ಟು ಭಿನ್ನತೆಗಳಿವೆ. ಏಕೆಂದರೆ ಇತಿಹಾಸ ಒಂದು ಕಾಲಘಟ್ಟವನ್ನು ನೋಡುವುದಕ್ಕೂ, ಅದನ್ನು ಆಧರಿಸಿ ರೂಪುಗೊಂಡ ಸಾಹಿತ್ಯ ಆ ಕಾಲಘಟ್ಟವನ್ನು ಪರಿಭಾವಿಸುವುದಕ್ಕೂ ಸಾಕಷ್ಟು ಅಂತರವಿರುತ್ತದೆ. ಆ ನೆಲೆಯಲ್ಲಿಯೇ ಆಧುನಿಕ ಕನ್ನಡ ಕೃತಿಕಾರರ ಹಂಪಿಯನ್ನು ಆದರ್ಶ ರಾಜ್ಯವಾಗಿಯೂ ಮತ್ತು ದುರಂತರಾಜ್ಯವಾಗಿಯೂ ಚಿತ್ರಿಸಿದ್ದಾರೆ. ಆಧುನಿಕ ಕಾಲದ ಕೃತಿಕಾರರಿಗೆ ರಾಮಾಯಣ, ಮಹಾಭಾರತ, ವೇದ ಪುರಾಣ ಸ್ಮೃತಿಗಳಂತೆ 'ಹಂಪಿ'ಯೂ ಒಂದು ಸಾಂಸ್ಕೃತಿಕ ಮೌಲ್ಯವಾಗಿದ್ದು ಅತ್ಯಂತ ಗಮನಾರ್ಹ ಸಂಗತಿಯಾಗಿದೆ.

೧೨. ಕನ್ನಡದ ಆಧುನಿಕ ಸಾಹಿತಿಗಳಿಗೆ ರಾಷ್ಟ್ರೀಯವಾದ ತುಂಬಾ ಅಗತ್ಯವಾಗಿತ್ತು. ಪರಕೀಯ ಆಳ್ವಿಕೆಯಿಂದ ಮುಕ್ತಿ ಹೊಂದಬೇಕೆನ್ನುವ ಸಂದರ್ಭದ ಬಂದಾಗಲ್ಲೆಲ್ಲಾ 'ಹಂಪಿ' ನೆನಪಾಗಿದೆ. ಹೀಗಾಗಿ ಹಂಪಿ ಬರೀ ಐತಿಹಾಸಿಕ ಸಂಗತಿಯಲ್ಲ, ಘಟನೆ ಅಲ್ಲ. ಅದು ವರ್ತಮಾನಕ್ಕೆ ಉತ್ತರವಾಗಿಯೂ ಕಂಡಿದೆ. ಗತ ವೈಭವದ ಕಾರಣಕ್ಕಾಗಿಯೇ ಸಮಕಾಲೀನ ರಾಜಕೀಯ ಸಮಸ್ಯೆಗಳ ಸಂದರ್ಭದಲ್ಲೆಲ್ಲಾ ಪರಿಹಾರವಾಗಿ 'ದಿವ್ಯೌಷದವಾಗಿ ಸೂಚಿತಗೊಂಡಿದೆ.

೧೩. ಭಾವುಕ ನೆಲೆಯಲ್ಲಿ ನವೋದಯ ಪೂರ್ವ, ನವೋದಯದ ಸಂದರ್ಭದಲ್ಲಿ ಚಿತ್ರಣಗೊಂಡಿದ್ದರೆ, ನವ್ಯೋತ್ತರ, ನವ್ಯದ ಸಂದರ್ಭದಲ್ಲಿ ವೈಚಾರಿಕ ನೆಲೆಯಲ್ಲಿ 'ಹಂಪಿ' ಚಿತ್ರಣಗೊಂಡಿದೆ. ಚಾರಿತ್ರಿಕ ದೃಷ್ಟಿಕೋನದಿಂದ, ವೈಚಾರಿಕ ದೃಷ್ಟಿಕೋನದಿಂದ ಆಧುನಿಕ ಸಾಹಿತ್ಯ ಪ್ರಕಾರಗಳಲ್ಲಿ ದಾಖಲಾಗುತ್ತಲೇ ಇದೆ. ಇಲ್ಲಿ ಈ ಎರಡೂ ನೆಲೆಗಳ ಮಾದರಿಗಳಿವೆ.

೧೪. ಕರ್ನಾಟಕ ಚರಿತ್ರೆಯನ್ನು ಪುನರ್ ರೂಪಿಸುವಲ್ಲಿ ಸಾಹಿತ್ಯದ ಪ್ರಯತ್ನ ಬಹುಮುಖ್ಯವಾಗಿದೆ. ಚರಿತ್ರೆ ಮತ್ತು ಸಾಹಿತ್ಯಗಳೆರಡು ಒಂದು ಐತಿಹಾಸಿಕ ಸಂಬಂಧಾಂತರಗಳ ಸ್ಥಿತಿಗತಿಗಳನ್ನು ಹೇಗೆ ನಿರ್ವಚಿಸಿದೆ ಎನ್ನುವುದನ್ನು ಈ ಮೂಲಕ ಇಲ್ಲಿ ಕಂಡುಕೊಳ್ಳಲಾಗಿದೆ. ಇದೊಂದು ರೀತಿಯ ಇತಿಹಾಸ ಮತ್ತು ಸಾಹಿತ್ಯದ ಅಂತರ್ ಸಂಬಂಧವನ್ನು ಕಂಡುಕೊಳ್ಳುವ ವಿಧಾನವೆಂದೇ ಭಾವಿಸಿ, ಕನ್ನಡದ ಸೃಜನಶೀಲ ಮನಸ್ಸು ವಿವಿಧ ಪ್ರಕಾರಗಳಲ್ಲಿ ಹೇಗೆ ಅಭಿವ್ಯಕ್ತಿ ಪಡೆದುಕೊಂಡಿದೆ ಎನ್ನುವುದನ್ನು ಸ್ಥೂಲವಾಗಿ ತಿಳಿಸಲಾಗಿದೆ.

೧೫. ವಸಾಹತುಶಾಹಿ ಆಡಳಿತ ಕ್ರಮ ಭಾರತೀಯರ ರಾಜಕೀಯ ಪ್ರತಿಜ್ಞೆಯನ್ನು ಎಚ್ಚರಿಸುತ್ತಲೇ, ಒಂದು ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಳ್ಳಲು ಒತ್ತಾಯಿಸುತ್ತಿತ್ತು. ಅಂತೆಯೇ, ಸಾಮಾಜಿಕ, ವಿಷಮತೆಗಳನ್ನು ಬಹುದೊಡ್ಡ ತೊಡಕು ಎಂದು ಭಾವಿಸುತ್ತಲೇ, ಸಾಂಸ್ಕೃತಿಕವಾದ ಐಕ್ಯತೆಯನ್ನು ಸಾಧಿಸುವ ಆಶಯವನ್ನು ಇಡೀ ಭಾರತದಲ್ಲಿಯೇ ಕಂಡುಬಂದ ಸಾಮಾನ್ಯ ಸಂಗತಿಯಾಗಿತ್ತು ಇದಕ್ಕೆ ಪ್ರೇರಣೆಯಾಗಿ ನಿಂತದ್ದು, ಬಂಗಾಲ, ಮಹಾರಾಷ್ಟ್ರ. ಈ ಮಾದರಿಗಳನ್ನು ನಾಡು-ನುಡಿ, ದೇಶಕ್ಕಾಗಿ ಕನ್ನಡಿಗರೂ ಬಳಸಿಕೊಂಡಿದ್ದು ತಮ್ಮ ಅನನ್ಯತೆಗಾಗಿ ಎನ್ನುವುದನ್ನು ಮರೆಯುವಂತಿಲ್ಲ. ಈ ಸಂವೇದನೆಗಳನ್ನು ಅನೇಕ ಪಠ್ಯಗಳಲ್ಲಿ ಮೂಡಿಬಂದಿರುವುದನ್ನು ದಾಖಲಿಸುವ ಅಗತ್ಯ ತುಂಬಾ ಇದೆ.

೧೬. ನವೋದಯ ಪೂರ್ವದ ಕಾಲದಿಂದ ದಲಿತ ಬಂಡಾಯದವರೆಗೂ ಆಧುನಿಕ ಸಾಹಿತ್ಯ ವಿಸ್ತರಿಸಿಕೊಂಡಿದೆ. ಅನೇಕ ರೀತಿಯ ಚಾರಿತ್ರಿಕ ಅಂಶಗಳನ್ನು ದಾಖಲಿಸಿರುವ ಕನ್ನಡ ಸಾಹಿತ್ಯಕ್ಕೆ 'ಹಂಪಿ'ಯೂ ಹೊರತಾಗಿಲ್ಲ. ಕಾವ್ಯ, ನಾಟಕ, ಕಾದಂಬರಿ ರೂಪಗಳಲ್ಲಿ ಬಹುವಿಧವಾಗಿ ಅಭಿವ್ಯಕ್ತಗೊಂಡಿರುವ 'ಹಂಪಿ' ಹಿಂದೂ ಧರ್ಮದ ರಾಷ್ಟ್ರ ನಿರ್ಮಾಣದ ಆಶಯವನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಹೊಂದಿದ್ದರೆ, ನಂತರದಲ್ಲಿ ರಾಷ್ಟ್ರೀಯ ಕಲ್ಪನೆಯಿಂದ ಬಿಡಿಸಿಕೊಂಡು ವರ್ತಮಾನ ಸಂಗತಿಗಳಿಗೆ ಉತ್ತರವೆನ್ನುವಂತೆ ಚಿತ್ರಣಗೊಂಡಿದೆ. ಭಾರತೀಯತೆ, ಕರ್ನಾಟಕತ್ವದಿಂದ ಬಿಡಿಸಿಕೊಂಡ ಹಂತವಾಗಿಯೂ ಇದು ಕಾಣಿಸಿಕೊಂಡಿದೆ. ಈ ಎಲ್ಲಾ ಆಯಾಮಗಳನ್ನು ಸಾಹಿತ್ಯದ ಪಠ್ಯದ ಹಿನ್ನೆಲೆಯಲ್ಲಿ ನೋಡುವ ಆಯಾಮವೂ ಇದೆ.

೧೭. ವಿವಿಧ ಪ್ರವಾಸಿಗರು ಹಂಪಿಯನ್ನು ಸಂದರ್ಶಿಸಿದ್ದನ್ನು ಹಂಪಿಯ ಶಾಸನಗಳು ಸಾರುತ್ತವೆ. ಮಾತಂಗ ಪರ್ವತಕ್ಕೆ ಕಾಲಾನುಕಾಲಕ್ಕೆ ರಾಜರು, ಅಧಿಕಾರಿಗಳು ಭೇಟಿ ನೀಡಿದ್ದನ್ನು ಶಾಸನದಲ್ಲಿ ದಾಖಲಿಸಲಾಗಿದೆ. ಇಂತಹ ಪ್ರಕಟಿತ ಮತ್ತು ಅಪ್ರಕಟಿತ ಶಾಸನಗಳು ದೇಶಿ ವಿದೇಶಿಯರ ಮೇಲೆ ಬೆಳಕು ಚೆಲ್ಲುತ್ತವೆ. ಇವು ಚಾರಿತ್ರಿಕವಾಗಿ ಎಷ್ಟು ಮುಖ್ಯವೋ, ಸಾಹಿತ್ಯಕವಾಗಿ ಅಷ್ಟು ಮುಖ್ಯವಾಗಿವೆ. ಈ ಹಿನ್ನೆಲೆಯಲ್ಲಿ ಹಂಪಿಯ ಕುರಿತ ವಿಶ್ಲೇಷಣೆ ಮತ್ತು ವಿದ್ವಾಂಸರ ತಾತ್ವಿಕತೆ ಕಟ್ಟಿಕೊಡುವಾಗ ಇದು, ಕನ್ನಡದಲ್ಲಿ ಹೊಸತನದ ಅಧ್ಯಯನದ ಮಾದರಿಯಾಗಿದೆ.

೧೮. ಪ್ರಾಚೀನ ಸಾಂಸ್ಕೃತಿಕ ರಾಜಧಾನಿಗೆ ಭೇಟಿ ನೀಡಿದ ಕವಿಗಳು, ಸಾಹಿತಿಗಳು, ವಿದ್ವಾಂಸರು, ಇತಿಹಾಸಕಾರರು ಮತ್ತು ರಾಜಕಾರಣಿಗಳು ಹಂಪಿಯ ಬಗ್ಗೆ ಅವರ ದೃಷ್ಟಿಕೋನ, ಅದರ ಮಹತ್ವ ಅದರ ರಕ್ಷಣೆಯ ಜವಾಬ್ದಾರಿ ಕುರಿತು ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದು ಅದರ ಮಹತ್ವವನ್ನು ಒತ್ತಿ ಹೇಳುತ್ತದೆ. ಇದರ ಹಿಂದೆ ಚರಿತ್ರೆಯನ್ನು ಕಟ್ಟುವ ಕೆಲಸ ಮತ್ತು ಯುವ ಪೀಳಿಗೆಗೆ ನೀಡುವ ಹೊಸ ಅಧ್ಯಯನದ ಹೊಳವು ಆಗಿದೆ. ಹೀಗಾಗಿ ಇಲ್ಲಿ ಹಂಪಿಯ ಪುನರ್ಮನನದ ಆಯಾವೂ ಇದೆ; ಅಭಿವೃದ್ಧಿಯ ಪ್ರತೀಕದ ಆಯಾಮವೂ ಇದೆ.

೧೯. ಸಾಮ್ರಾಜ್ಯದ ಅವನತಿಯ ನಂತರ ಹಂಪಿಯ ಭಾಗವನ್ನು ಸುಲ್ತಾನರು, ಮರಾಠರು, ಮೊಘಲರು, ಪಾಳೆಯಗಾರರು, ಹೈದರ್ ಮತ್ತು ಟಿಪ್ಪು ಆಳ್ವಿಕೆ ಮಾಡಿದರು. ಇಂತಹ ಸಮೃದ್ಧವಾದ ಇತಿಹಾಸವನ್ನು ಗಮನಿಸಿದಾಗ ಮುಖ್ಯವಾಗಿ ದೇಶಿ ವಿದ್ವಾಂಸರಿಗೆ ಹೋಲಿಸಿದರೆ, ವಿದೇಶಿಯರೇ ವಿಜಯನಗರ ಸಾಮ್ರಾಜ್ಯ ಕುರಿತು ಹೆಚ್ಚು ಸಂಶೋಧನೆ ಕೈಗೊಂಡಿದ್ದಾರೆ. ಇವರ ಸಂಶೋಧನೆಗಳಿಲ್ಲದಿದ್ದರೆ ಈ ಸಾಮ್ರಾಜ್ಯ ಇಂದಿಗೂ ಎಲೆಮರೆಕಾಯಿಯಂತೆ ಇರುತ್ತಿತ್ತು. ಆಧುನಿಕವಾಗಿ ಚರ್ಚಿಸುವಾಗ ಬಳ್ಳಾರಿ ಜಿಲ್ಲೆಯ ಇತಿಹಾಸದ ದೃಷ್ಟಿಯಿಂದ ವಿಜಯನಗರ ಸಾಮ್ರಾಜ್ಯ ಮತ್ತು ಬ್ರಿಟಿಷ್ ಕಲೆಕ್ಟರ್‌ಗಳ ಆಳ್ವಿಕೆ ಮುಖ್ಯವಾದದ್ದು. ಇದನ್ನು ಗಮನಿಸಿದಾಗ ಹಂಪಿಯನ್ನು ಉಳಿಸುವ, ಅದರ ಪುರೋಭಿವೃದ್ಧಿಗೆ ಒತ್ತು ನೀಡುವಿಕೆ ಆಯಾಮವಿದೆ.

೨೦. ಪ್ರವಾಸೋದ್ಯಮ ಒಂದು ಅಸ್ಮಿತವಾದ ಸಾಧ್ಯತೆಗಳನ್ನು ಒಳಗೊಂಡಿರುವ ಉದ್ಯಮವಾಗಿದೆ. ಹಂಪಿಗೆ ಭೇಟಿ ನೀಡುವುದು ೧೩ನೇ ಶತಮಾನದ ಪೂರ್ವಾರ್ಧರಿಂದ ಆರಂಭವಾಗಿ ೨೧ನೇ ಶತಮಾನದವರೆಗೂ ಜಾರಿಯಲ್ಲಿದೆ. ಇದು ಅಂಕಿ-ಅಂಶಗಳಿಂದ ಗುರುತಿಸುವುದಾದರೂ, ಹಂಪಿಯ ಮುಂದಿನ ಇತಿಹಾಸವನ್ನು ಗುರುತಿಸುವಿಕೆ ಮಾಡುತ್ತಿದೆ. ಪ್ರವಾಸೋದ್ಯಮವು ಒಂದು ಸರ್ಕಾರ ಉದ್ಯಮವಾಗಿದೆ. ಇದು ಹಂಪಿಯ ಗತವೈಭವವನ್ನು ಕಂಡುಂಡದ್ದನ್ನು ನೋಡಲು ಬರುವ ಜನರಿಗೆ ಸಹಾಯಕವಾಗಿ ಕೆಲಸ ಮಾಡುತ್ತಿದೆ. ಇದು ಭಾರತದ ಎಲ್ಲಾ ರಾಜ್ಯಗಳಿಗೂ ಅನ್ವಯಿಸುವಂತಹದ್ದು. ಈ ಹಿನ್ನೆಲೆಯಲ್ಲಿ ಪ್ರವಾಸೋದ್ಯಮವು ಹಂಪಿಯ ಸ್ಮಾರಕಗಳನ್ನು ಮತ್ತು ಇತಿಹಾಸವನ್ನು ಕಾಯ್ದಿರಿಸಲು ಒಂದು ಮಾಧ್ಯಮವಾಗಿ ಕೆಲಸ ಮಾಡುತ್ತಿದೆ. ಇದರ ಜೊತೆಗೆ ಪುರಾತತ್ವ ಇಲಾಖೆಯೂ ಹಂಪಿಯನ್ನು ನೋಡುವ ಮತ್ತು ಅದನ್ನು ಕಟ್ಟುವ ಕೆಲಸ ಮಾಡುತ್ತಿದೆ.

೮.೨. ಅಧ್ಯಯನದ ಹೊಸ ಸಾಧ್ಯತೆಗಳು

೧. ಹಂಪಿಯನ್ನು ಚಾರಿತ್ರಿಕವಾಗಿ ಚಿತ್ರಿಸುವ ಅನೇಕ ನಾಟಕಗಳು, ಕಾವ್ಯಗಳು, ಹಾಡುಗಳು ಇನ್ನೂ ಮುಂತಾಗಿ ಲೇಖಕಾನುಸಾರವಾಗಿ ಪ್ರಕಟವಾಗುತ್ತಿವೆ. ಹಂಪಿಯನ್ನು ಸೃಷ್ಟಿಸಿರುವ ಚರಿತ್ರೆಯ ಸಂಕಲನಗಳೂ ಬಂದಿವೆ. ಆದರೆ ಇಡೀ ಕರ್ನಾಟಕವನ್ನು ಸೃಷ್ಟಿಸುವ ಸರಣಿಸಂಪುಟಗಳು ಪ್ರಕಟವಾಗುವ ಅಗತ್ಯವಿದೆ. ಹಂಪಿಯನ್ನು ನೋಡುವ ಕೀರ್ತನೆಗಳನ್ನು ತತ್ವಪದಗಳನ್ನು ಸಾಂಸ್ಥಿಕ ನೆಲೆಯಲ್ಲಿ ಸಂಗ್ರಹಿಸಿ ಸಂಪಾದಿಸಿ, ಕೃತಿಗಳನ್ನು ಪ್ರಕಟಿಸಬೇಕಿದೆ. ಅನೇಕ ದೇಶಿಯರು ವಿದೇಶಿಯರು ಬಿಟ್ಟು ಹೋದಂತಹ ಇನ್ನೂ ಅನೇಕ ಮುದ್ರಣಕ್ಕೆ ಸಿಗದೆ ಮೌಖಿಕ ರೂಪದಲ್ಲಿಯೇ ಇರುವ ಸಾಧ್ಯತೆಯಿದೆ. ಅವನ್ನು ಸಂಗ್ರಹಿಸುವ ಮತ್ತು ಸಂಪಾದಿಸು ಅಗತ್ಯವಿದೆ. ಈ ಸಂಗ್ರಹಗಳು ಹಂಪಿಯ ಚರಿತ್ರೆಯ ಅಧ್ಯಯನಕ್ಕೆ ಹೊಸ ಜಗಿತವನ್ನು ಕೊಡಬಲ್ಲವು.

೨. ಕರ್ನಾಟಕ ಚರಿತ್ರೆ ಹಾಗೂ ಹಂಪಿಯ ಚರಿತ್ರೆಯನ್ನು ಜತೆಗಿಟ್ಟು ತೌಲನಿಕವಾಗಿ

ನೋಡುವ ಸಾಧ್ಯತೆಯೂ ಇದೆ. ಕರ್ನಾಟಕದ ಚರಿತ್ರೆಗೆ ಇಂತಹ ಹೊಸ ಆಯಾಮದ ಅಧ್ಯಯನಗಳಿಗೆ ಬೇಕಾದ ಸಮೃದ್ಧಿ ಮತ್ತು ಶಕ್ತಿಯಿದೆ.

೩. ಕರ್ನಾಟಕ ಮತ್ತು ಹಂಪಿಯನ್ನು ಚಿತ್ರಿಸುವ ಕೃತಿಗಳನ್ನು ಆಯಾ ಪ್ರಾದೇಶಿಕ ಹಿನ್ನೆಲೆಯಲ್ಲಿ ನೋಡಿದಾಗ, ಅವುಗಳ ಸಾಂಸ್ಕೃತಿಕ ಚಹರೆ ತಿಳಿಯುತ್ತದೆ. ಈ ಪ್ರಾದೇಶಿಕ ಅಗತ್ಯಗಳಿಗೆ ಅನುಸಾರವಾಗಿ ರೂಪುಗೊಂಡ ಈ ಪಠ್ಯಗಳು ಈ ಪ್ರಾದೇಶಿಕವಾದ ಸೀಮಿತತೆಯನ್ನು ಮೀರಿ ಪ್ರಸರಣಗೊಂಡಿವೆ ಕೂಡ. ಈ ಅಂಶವನ್ನು ತೌಲನಿಕ ಅಧ್ಯಯನ ಮಾಡುವ ಸಾಧ್ಯತೆಯಿದೆ.

೪. ಪಂಡಿತ–ಪಾಮರ, ವಿದೇಶೀ ಯಾತ್ರಿಕರಿಂದ ವಿಶೇಷವಾಗಿ ಮನ್ನಣೆ ಪಡೆದ 'ಹಂಪಿ'ಯನ್ನು ಚರಿತ್ರೆ, ಜಾನಪದ, ಪ್ರವಾಸೋದ್ಯಮ, ಮಾನವಶಾಸ್ತ್ರ, ಪುರಾತತ್ವಶಾಸ್ತ್ರ, ಶಾಸನಶಾಸ್ತ್ರಗಳು ವಿಭಿನ್ನವಾಗಿ ಅಧ್ಯಯನಗಳಿವೆ. ನಿರಂತರ ಉತ್ಖನನಕ್ಕೆ ಕಾರಣವಾದ 'ಹಂಪಿ'ಯನ್ನು ಸಾಹಿತ್ಯಿಕವಾಗಿ ನೋಡಿರುವುದು ಇನ್ನೂ ಕಡಿಮೆ ಇರಬಹುದು. ಈ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ಅಗತ್ಯತೆಯಿದೆ.

ಹೀಗೆ ಆಧುನಿಕ ಕನ್ನಡ ಸಾಹಿತ್ಯವು 'ಹಂಪಿ'ಯನ್ನು ಒಂದು ನೋವಾಗಿ ಸಂಭ್ರಮವಾಗಿ, ದುರಂತವಾಗಿ ಕಂಡಿರಿಸಿದೆ. ಕರ್ನಾಟಕತ್ವ, ಭಾರತೀಯತೆಯ ವಿಷಯ ಬಂದಾಗಲೆಲ್ಲಾ ನಮ್ಮ ಲೇಖಕರು 'ಹಂಪಿ'ಯನ್ನು ಒಂದು 'Icon' ಆಗಿ ಬಳಸಿಕೊಂಡಿರುವುದು ಸ್ಪಷ್ಟವಾಗಿದೆ. ಬ್ರಿಟೀಷರ ಕಾಲದಲ್ಲಿಯೂ ನಾವು ಮುಸ್ಲಿಂರನ್ನು ಶತ್ರುಗಳೆಂದು ಚಿತ್ರಿಸಿರುವುದು ವಿಚಿತ್ರವಾದರೂ, ದ್ವಂದ್ವವಾದರೂ, ನೇರವಾಗಿ ಬ್ರಿಟಿಷರನ್ನು ವಸ್ತುವನ್ನಾಗಿಸಿಕೊಳ್ಳುವ ಸಾಧ್ಯತೆಗಳು ಇರಲಿಲ್ಲ. ಈ ಕಾರಣಕ್ಕಾಗಿ ಹಿಂದೂ ಧರ್ಮ ಎಂಬಲ್ಲಿ 'ಭಾರತೀಯತೆ'ಯೆಂದೂ ಮುಸ್ಲಿಂರು ಎಂಬಲ್ಲಿ ಬ್ರಿಟಿಷರು ಎಂದು ಓದಿಕೊಂಡಲ್ಲಿ ಸರಿಯೆನಿಸುತ್ತದೆ. ಸನಾತನ ಧರ್ಮದ ಪ್ರತೀಕವಾಗಿ ಬಹುತೇಕ ಸಾಹಿತಿಗಳು ಹಂಪಿ ಅಥವಾ ವಿಜಯನಗರವನ್ನು ಕಂಡಿದ್ದಾರೆ. ರಾಷ್ಟ್ರೀಯ ಚಳುವಳಿ, ಕರ್ನಾಟಕದ ಸಮಗ್ರತೆಗೆ ಪೂರಕವಾಗಿ 'ಹಂಪಿ'ಯನ್ನು ವಸ್ತುವನ್ನಾಗಿರಿಸಿಕೊಂಡಿರುವುದು ಸ್ಪಷ್ಟವಾಗಿದೆ. ಅದರ ಇತ್ತೀಚಿನ ಕಂಬಾರರಂತಹವರು ಅವನ್ನು ಬೇರೆ ನೆಲೆಯಲ್ಲಿ ಕಂಡಿದ್ದಾರೆ. ಆದರೂ 'ಹಂಪಿ' ಒಂದು ಸಾಂಸ್ಕೃತಿಕ ಎಚ್ಚರ ಎನ್ನುವುದನ್ನು ಇಡೀ ಆಧುನಿಕ ಸಾಹಿತ್ಯದಲ್ಲಿ ಕಾಣಬಹುದು. ಇಲ್ಲಿ ಕಥೆಗಳನ್ನು ಹೊರತುಪಡಿಸಿ, ಉಳಿದ ಸಾಹಿತ್ಯ ಪ್ರಕಾರಗಳನ್ನು ಸಂಕ್ಷಿಪ್ತವಾಗಿ, ಒಂದು ಮಿತಿಯೊಳಗೆ ವಿವರಿಸಲಾಗಿದೆ.

□□□

ಅನುಬಂಧ

೧. ಪರಾಮರ್ಶನ ಗ್ರಂಥಗಳು

೧.೧. ಕನ್ನಡ ಭಾಷಾ ಆಕರಗಳು

ಅ) ಗ್ಯಾಸೆಟಿಯರ್ಸ್ ಮತ್ತು ನಿಘಂಟುಗಳು

ಆ) ಕನ್ನಡ ನಿಯತಕಾಲಿಕೆಗಳು ಮತ್ತು ಪತ್ರಿಕೆಗಳು

೧.೨. ಆಂಗ್ಲ ಭಾಷಾ ಆಕರಗಳು

ಅ) ಜರ್ನಲ್ಸ್ ಮತ್ತು ಗ್ಯಾಸೆಟಿರಿಯರ್ಸ್

೨. ನಕ್ಷೆಗಳು

೨.೧. ಹಂಪಿಯ ಸ್ಥಳ ನಿರ್ದೇಶನದ ನಕ್ಷೆ

೨.೨. ಹಂಪಿಯ ಪ್ರಮುಖ ಪ್ರವಾಸಿ ತಾಣಗಳನ್ನು ಸೂಚಿಸುವ ನಕ್ಷೆ

೩. ಛಾಯಾಚಿತ್ರಗಳು

೪. ದೇಶಿ–ವಿದೇಶಿಯರ ಛಾಯಾಚಿತ್ರಗಳಲ್ಲಿ ನಿರೂಪಿತವಾಗಿರುವ ಹಂಪಿ

೧. ಪರಾಮರ್ಶನ ಗ್ರಂಥಗಳು

೧.೧ ಕನ್ನಡ ಭಾಷಾ ಆಕರಗಳು

೧. ಅರ್ಪಣ ಸಿ.ಎಸ್., ೨೦೦೭-೦೮, **ಸಂಗಮರ ದೇವಾಲಯಗಳು**, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

೨. ಅಶ್ವತ್ಥ, ೧೯೩೬, **ವಿಜಯನಗರ**, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ, ಸಂ: ಶ್ರೀ ವೆಂಕಟೇಶ ಶ್ರೀನಿವಾಸ ಪಂಡಿತ.

೩. ಆನಂದಕಂದ, ೧೯೩೫, **ಅಶಾಂತಿಪರ್ವ**, ಶರತ್ ಪ್ರಕಾಶನ ಮಂದಿರ, ಧಾರವಾಡ.

೪. ಆನಂದಕಂದ, ೧೯೩೪, **ರಾಜಯೋಗಿ**, ಮನೋಹರ ಗ್ರಂಥಮಾಲಾ, ಧಾರವಾಡ.

೫. ಆಲೂರು ವೆಂಕಟರಾಯರು, ೨೦೦೯, **ಕರ್ನಾಟಕತ್ವದ ವಿಕಾಸ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬. ಕನ್ನಡ ಸಾಹಿತ್ಯ ಪರಿಷತ್ತು, ೧೯೯೯, **ಹರಿಹರ ವಿಚಾರ ಸಂಕಿರಣ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೭. ಕರಿಬಸಪ್ಪ.ಎ. ೨೦೦೯, **ಬಳ್ಳಾರಿ ಜಿಲ್ಲೆಯ ಐತಿಹ್ಯಗಳು**, ಸಾಯಿಮಣಿ ಪ್ರಕಾಶನ,

೮. ಕಲಬುರ್ಗಿ.ಎಂ.ಎಂ. (ಸಂ.), ೧೯೯೯, **ಹರಿಹರನ ರಗಳೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೯. ಕಂದಗಲ್ಲ ಹಣಮಂತರಾಯ, ೧೯೯೪, **ವರಪ್ರದಾನ**, ಕನ್ನಡ ಮಸ್ತಕ ಪ್ರಾಧಿಕಾರ,ಬೆಂಗಳೂರು.

೧೦.ಕಮಲೇಶ್.ಕೆ.ಆರ್., ೨೦೧೧, **ವಿಜಯನಗರ ಸಾಮ್ರಾಜ್ಯದ ಮಾತೃಸ್ಥಾನ ಆನೆಗುಂದಿ**, ಆನೆಗುಂದಿ ಉತ್ಸವ ಸಮಿತಿ, ಜಿಲ್ಲಾಡಳಿತ, ಕೊಪ್ಪಳ.

೧೧.ಕೀರ್ತಿನಾಥ ಕುರ್ತಕೋಟಿ, ೨೦೦೨, **ಯುಗಧರ್ಮ ಹಾಗೂ ಸಾಹಿತ್ಯ ದರ್ಶನ**, ಮನೋಹರ ಗ್ರಂಥಮಾಲೆ, ಧಾರವಾಡ.

೧೨. ಕುಂಬಾಸ, ೧೯೯೦, **ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ**, ಶ್ರೀ ಮಾಲತೇಶ ಪ್ರಕಾಶನ, ಹರಪನಹಳ್ಳಿ.

೧೩. ಕುವೆಂಪು, **ಹಂಪೆಯ ಭೀಮ**, ೨೦೦೦, ಶಿವಾರೆಡ್ಡಿ ಕೆ.ಸಿ.(ಸಂ), ಕುವೆಂಪು ಸಮಗ್ರ ಕಾವ್ಯ ಸಂ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪. ಕುಲಕರ್ಣಿ ಆರ್.ಬಿ., ೧೯೨೪, **ಕನ್ನಡಿಗನ ಸರ್ವಸ್ವ,** ಆರ್.ಬಿ.ಕುಲಕರ್ಣಿ ಕಾವ್ಯರತ್ನ, ಬೆಳಗಾವಿ.

೧೫. ಕುಲಕರ್ಣಿ ಶಂಕರ ಅಣ್ಣಾಜಿ, ೧೯೨೨, **ಕರ್ನಾಟಕ ಸಿಂಹಾಸನ ಸ್ಥಾಪನೆ,** ಶ್ರೀವಿದ್ಯಾರಣ್ಯ ಪ್ರಕಾಶನ ಸಂಸ್ಥೆ, ಧಾರವಾಡ.

೧೬. ಕುಶಾಲಪ್ಪ ಗೌಡ, ಕೆ, ೨೦೧೧, **ಮಧುರಾ ವಿಜಯಂ ಅಥವಾ ವೀರ ಕಂಪರಾಯ ಚರಿತಂ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭. ಕೃಷ್ಣರಾಯ ಅ.ನ., ೨೦೦೪, **ಅಳಿಯ ರಾಮರಾಯ ಮತ್ತು ಪ್ರಳಯಾನಂತರ,** ಸಾಗರ್ ಪ್ರಕಾಶನ, ಬೆಂಗಳೂರು.

೧೮. ಕೃಷ್ಣರಾಯ ಶಾ.ಮಂ. ೧೯೮೨, **ತ.ರಾ.ಸು. ಬದುಕು-ಬರೆಹ,** ವಿಶ್ವಭಾರತಿ ಪ್ರಕಾಶನ, ಗೋವ.

೧೯. ಕೊಟ್ರಯ್ಯ ಸಿ.ಟಿ.ಎಂ., ೧೯೯೭, **ಹಂಪೆ ಶಿಲಾಯುಗ ಸಂಸ್ಕೃತಿ:ಕ್ರಿಸ್ತಶತಾಬ್ದಿ ಆರಂಭದ ಶಾಸನ,** ಶ್ರೀಶರಣರ ಸುವಾಸಿನಿ ಬಳಗ, ಹೊಸಪೇಟೆ.

೨೦. ಕೊಟ್ರೇಶ್, ಎಂ, ೨೦೧೧, **ಬಳ್ಳಾರಿ ಜಿಲ್ಲೆಯ ಕೋಟೆಗಳು,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೧. ಗರುಡ ಸದಾಶಿವರಾಯ, ೧೯೨೯, **ಯಚ್ಚಮನಾಯಕ,** ಮಲ್ಲಪ್ಪ ವಿರೂಪಾಕ್ಷಪ್ಪ ಅರಳಿ, ಗದಗ.

೨೨. ಗಳಗನಾಥ, ೧೯೯೯, **ಕನ್ನಡಿಗರ ಕರ್ಮಕಥೆ, (ಗಳಗನಾಥರ ಕಾದಂಬರಿಗಳು ಸಂ-೧)** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೩. ಗಳಗನಾಥ, ೧೯೯೯, **ಮಾಧವ ಕರುಣಾವಿಲಾಸ (ಗಳಗನಾಥರ ಕಾದಂಬರಿಗಳು ಸಂ.೨)** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೪. ಗಾದೆಪ್ಪ, ೨೦೧೦, **ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಜಯನಗರದ ಪ್ರತಿನಿಧಿಕರಣ,** ಗೀತಾಂಜಲಿ ಪ್ರಕಾಶನ, ಶಿವಮೊಗ್ಗ.

೨೫. ಗಾದೆಪ್ಪ, ೨೦೧೨, **ಪಂಪಾಕ್ಷೇತ್ರ,** ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೬. ಗೀತಾಚಾರ್ಯ ನಾ., ೨೦೦೮, **ಹರಿದಾಸ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ** (ಮಂಟಪಮಾಲೆ-೧೫೬), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೭. ಗುರುಲಿಂಗ ಕಾಪಸೆ(ಸಂ), ೨೦೦೩, ಆನಂದಕಂದ: ದೇಶಿ ಪ್ರತಿಭೆಯ ಸಾಧನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೮. ಗುರುಮೂರ್ತಿ ಪೆಂಡಕೂರು, (ಸಂ), ೨೦೦೪, **ಬಳ್ಳಾರಿ ಜಿಲ್ಲೆಯ ಸ್ಥಳ ನಾಮಗಳು,** ಕನ್ನಡ ಸಾಹಿತ್ಯ ಪರಿಷತ್ತು , ಬೆಂಗಳೂರು

೨೯. ಗುರುಮೂರ್ತಿ ಪೆಂಡಕೂರು(ಅನುವಾದ) ಕುಂದೂರಿ ಈಶ್ವರದತ್ತು(ತೆಲುಗು ಮೂಲ), ೨೦೧೦, **ಭಗ್ನ ವಿಜಯನಗರ ಚರಿತ್ರೆ,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೦. ಗೋವಿಂದರಾಜು, ಸಿ.ಆರ್, ೨೦೦೦, **ಕರ್ನಾಟಕ ಏಕೀಕರಣ ಚಳುವಳಿ ಮತ್ತು ಕನ್ನಡ ಸಾಹಿತ್ಯ,** ಎಸ್.ಬಿ.ಎಸ್.ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು.

೩೧. ಗೋವಿಂದರಾಜು, ಸಿ.ಆರ್., (ಸಂ) ೨೦೦೬, **ಚರಿತ್ರೆ ಅಧ್ಯಯನ** (ಜುಲೈ-ಡಿಸೆಂಬರ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೨. ಚನ್ನಬಸಪ್ಪ ಕೋ., ೨೦೦೭, **ಕರ್ನಾಟಕ ಏಕೀಕರಣ ಬಳ್ಳಾರಿ ಜಿಲ್ಲೆ ಹಿನ್ನೆಲೆಯಲ್ಲಿ,** ಲೋಹಿಯಾ ಪ್ರಕಾಶನ, ಬಳ್ಳಾರಿ

೩೩. ಚನ್ನಬಸಪ್ಪ ಎಸ್.,(ಸಂ) ೧೯೯೬, **ವಿಜಯನಗರದ(ಹಂಪೆಯ) ಶಾಸನಗಳು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೩೪. ಚಂದ್ರಪೂಜಾರಿ ಎಂ., ೨೦೦೯, **ಸಂಶೋಧನೆ ಏನು? ಏಕೆ? ಹೇಗೆ?,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೫. ಚಂದ್ರಶೇಖರ ಟಿ.ಆರ್., **ಬಳ್ಳಾರಿ ಜಿಲ್ಲೆಯ ನಿಸರ್ಗ ಸಂಪತ್ತು,** ಪ್ರಾಸರಾಂಗ ಕನ್ನಡ ವಿ.ವಿ.ಹಂಪಿ

೩೬. ಚಂದ್ರಶೇಖರಯ್ಯ, ಬಿ.ಎಂ., (ಸಂ), ೨೦೦೫, **ಕರ್ನಾಟಕ ಸಾಂಸ್ಕೃತಿಕ ಇತಿಹಾಸ ಪರಂಪರೆ,** ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು

೩೭. ಚಿದಾನಂದಮೂರ್ತಿ ಎಂ., ೨೦೧೦, **ಹೊಸತು ಹೊಸತು,** ಸಪ್ನ ಬುಕ್ ಹೌಸ್, ಬೆಂಗಳೂರು.

೩೮. ಚಿದಾನಂದಮೂರ್ತಿ ಎಂ., ೨೦೧೦, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಸಪ್ನ ಬುಕ್ ಹೌಸ್, ಬೆಂಗಳೂರು.

೩೯. ಚಿದಾನಂದಮೂರ್ತಿ ಎಂ., ೨೦೦೬, **ಕನ್ನಡ ಸಂಸ್ಕೃತಿ: ನಮ್ಮ ಹೆಮ್ಮೆ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೪೦. ಚಿನ್ನಸ್ವಾಮಿ ಸೋಸಲೆ. ಎನ್., ೨೦೦೪, **ಸಾಮ್ರಾಜ್ಯ ಮತ್ತು ಸಂಸ್ಥಾನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೧. ಧಾರವಾಡಕರ ರಾ.ಯ.(ಸಂ), **ಶಾಂತಕವಿಗಳ ಮೂರು ಕೀರ್ತನೆಗಳು,** ಸರಸ್ವತೀಪುರ, ಮೈಸೂರು.

೪೨. ಜೋಗನ್ ಶಂಕರ್, ೧೯೯೩, **ದೇವದಾಸಿ ಸಂಪ್ರದಾಯ**, ವಿಮೋಚನಾ ಪ್ರಕಾಶನ, ಅಥಣಿ.

೪೩. ತಿಪ್ಪೇರುದ್ರಸ್ವಾಮಿ ಎಚ್., ೧೯೯೭, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಡಿ.ವಿ.ಕೆ.ಮೂರ್ತಿ, ಮೈಸೂರು.

೪೪. ದೀಕ್ಷಿತ್ ಜಿ.ಎಸ್(ಸಂ), ೧೯೯೧, **ಸಂಗಮರ ಕಾಲದ ವಿಜಯನಗರ: ಅದರ ಇತಿಹಾಸ ಮತ್ತು ಸಂಸ್ಕೃತಿಗಳ ಅಧ್ಯಯನ**, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

೪೫. ದೀಕ್ಷಿತ್ ಜಿ.ಎಸ್., ಬಿ.ರಾಮಸ್ವಾಮಿ, ಭಾರ್ಗವಿ ಶಿವಯ್ಯ, ೧೯೯೭, **ಶ್ರೀ ಕೃಷ್ಣದೇವರಾಯ-ಜೀವನ, ಸಾಧನೆಗಳು**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೪೬. ದೇವರ ಕೊಂಡಾರೆಡ್ಡಿ, (ಸಂ.), ೧೯೯೮, **ಕನ್ನಡ ವಿವಿ ಶಾಸನ ಸಂ.೧, ಬಳ್ಳಾರಿ ಜಿಲ್ಲೆ**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೭. ದೇವರ ಕೊಂಡಾರೆಡ್ಡಿ, (ಸಂ.), ೧೯೯೯, **ಕನ್ನಡ ವಿವಿ ಶಾಸನ ಸಂ.೨ ಕೊಪ್ಪಳ ಜಿಲ್ಲೆ**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೮. ದೇವರ ಕೊಂಡಾರೆಡ್ಡಿ, (ಸಂ.), ೨೦೦೦, **ಕನ್ನಡ ವಿ.ವಿ ಶಾಸನ ಸಂ.೩ ಹಂಪಿ ಶಾಸನಗಳು**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,

೪೯. ದೇವರ ಕೊಂಡಾರೆಡ್ಡಿ(ಸಂ), ೨೦೦೬, **ಹಂಪಿ ಸಂಪುಟ ಕಲೆ, ಕ್ರೀಡೆ ಮತ್ತು ಕೌಶಲ**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೦. ಧಾರವಾಡಕರ.ರಾ.ಯ.(ಸಂ), ೧೯೮೩, **ಶಾಂತಕವಿಗಳ ಮೂರು ಕೀರ್ತನೆಗಳು**, ಸರಸ್ವತಿಪುರಂ, ಧಾರವಾಡ.

೫೧. ದೇವೀರಪ್ಪ ಎಚ್., ೧೯೭೪, **ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೨. ನರಸಿಂಹಮೂರ್ತಿ ಎ.ವಿ., ೧೯೯೬, **ವಿಜಯನಗರದ ನಾಣ್ಯ ಸಂಪತ್ತು**(ಗೃಹಸರಸ್ವತಿ ಗ್ರಂಥ ಮಾಲೆ-೮೨), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೫೩. ನಾಗಯ್ಯ. ಜೆ.ಎಂ., ೨೦೦೨, **ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ**, ಲೋಹಿಯಾ ಪ್ರಕಾಶನ, ಬಳ್ಳಾರಿ.

೫೪. ನಾಗೇಗೌಡ ಎಚ್.ಎಲ್., ೧೯೬೬, **ಪ್ರವಾಸಿ ಕಂಡ ಇಂಡಿಯಾ ಸಂಪುಟಗಳು**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೫೫. ನಾಗೇಗೌಡ ಎಚ್.ಎಲ್., ೨೦೦೬, **ಪ್ರವಾಸಿ ಕಂಡ ಇಂಡಿಯಾ**, ಐಬಿಹೆಚ್ ಪ್ರಕಾಶನ, ಬೆಂಗಳೂರು.

೫೬. ನಾಗೇಶ, ೧೯೩೯, **ಎಚ್ಚಮ ನಾಯಕ**, ಸದ್ಭಾವಚಂದ್ರಿಕೆ, ಆನಂದವನ, ಅಗಡಿ.

೫೭. ನಾಯಕ ಹಾ.ಮಾ. (ಸಂ), ೧೯೯೨, **ವಿದ್ಯಾರಣ್ಯ ವಿಜಯ**, ಡಿ.ವಿ.ಜಿ.ಕೃತಿ ಶ್ರೇಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೫೮. ನಿರುಪಮಾ (ಅನು), ೨೦೧೦, **ಶ್ರೀಕೃಷ್ಣದೇವರಾಯನ ಆಮುಕ್ತ ಮೌಲ್ಯದ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೯. ಪ್ರಭಾಕರ ರಾವ್ ಕೆ., ೨೦೧೩, **ಭಾರತೀಯ ಇತಿಹಾಸಕಾರರು ಪರಿಚಯಾತ್ಮಕ ಲೇಖನಗಳು**, ರವೀಂದ್ರ ಪುಸ್ತಕಾಲಯ, ಸಾಗರ.

೬೦. ಪುರುಷೋತ್ತಮ ಬಿಳಿಮಲೆ, ಚಲುವರಾಜ, ೧೯೯೬, **ಹಂಪಿ ಜಾನಪದ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೧. ಬಸವರಾಜ ಮಲಶೆಟ್ಟಿ, **ಹಂಪೆ–ಒಂದು ಪರಿಚಯ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೨. ಬಾರ್ಕೂರು ಉದಯ, ೨೦೦೩, **ಹೈದರಾಲಿ–ಟಿಪೂ:ಇತಿಹಾಸ ಕಥನ**, ಮಾನವತಾ ವೇದಿಕೆ, ಮಂಗಳೂರು.

೬೩. ಬಿ.ಎಂ.ಶ್ರೀ., **ಕನ್ನಡ ತಾಯಿ ನೋಟ**, ವಿಜಯನಗರ ಸ್ಮಾರಕ ಮಹೋತ್ಸವ ಸಂಚಿಕೆ, ಸಂ: ಶ್ರೀವೆಂಕಟೇಶ ಶ್ರೀನಿವಾಸ ಪಂಡಿತ.

೬೪. ಬಿ.ಎಂ.ಶ್ರೀ., ೨೦೧೦, **ಕನ್ನಡ ಬಾವುಟ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬೫. ಭೂಸನೂರ ಮಠ ಸಂ.ಶಿ., ? **ವಿಜಯಕಲ್ಯಾಣ(ವಿಜಯನಗರ ಸಂಸ್ಕೃತಿಯ ಸಮಗ್ರ ದರ್ಶನ)**, ಮಹಾಕವಿ ಸಂಶೋಧನ ಕೇಂದ್ರ, ಶ್ರೀ ಜಗದ್ಗುರು ಕೊಟ್ಟೂರು ಸಂಸ್ಥಾನ ಮಠ, ಹಂಪೆ.

೬೬. ಬೆಟಗೇರಿ ಕೃಷ್ಣಶರ್ಮ, ೧೯೮೩, **ಕರ್ಣಾಟಕ ಜನ ಜೀವನ**, ಪ್ರಥಮ ವಿಶ್ವ ಕನ್ನಡ ಸಮ್ಮೇಳನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೬೭. ಮಂಜುನಾಥ ಬೇವಿನಕಟ್ಟಿ(ಸಂ), **ವಿಜಯನಗರ ಸಾಂಸ್ಕೃತಿಕ ಆಯಾಮಗಳು**, ಶ್ರೀ ವಿದ್ಯಾ ವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್, ಆನೆಗೊಂದಿ, ಹೊಸಪೇಟೆ.

೬೮. ಮಧುರಚೆನ್ನ, ಸಿಂಪಿ ಲಿಂಗಣ್ಣ, ೧೯೩೬, **ಕನ್ನಡಿಗರ ಕುಲಗುರು**, ಅರವಿಂದ ಗ್ರಂಥಮಾಲ, ಹಲಸಂಗಿ.

೬೯. ಮಹದೇವ.ಸಿ, ಚೆನ್ನಸ್ವಾಮಿ ಸೋಸಲೆ,(ಸಂ),೨೦೦೨, **ಹಂಪಿ ಅಂದು–ಇಂದು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೦. ಮಹದೇವ ಸಿ.(ಸಂ), ೨೦೦೯, **ಕುಮ್ಮಟದುರ್ಗದ ಅರಸರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೧. ಮೀನಾಕ್ಷಿ ಜಂಗಮನಿ, ೨೦೦೮, **ಆನೆಗೊಂದಿ ಐತಿಹಾಸಿಕ ಪರಂಪರೆ**, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ,

೭೨. ಮುಗಳಿ ರಂ.ಶ್ರೀ, ೧೯೪೮, **ವಿಜಯ ಸಾಮ್ರಾಜ್ಯ**, ವಿಜಯ ಗ್ರಂಥಮಾಲೆ, ಬೆಳಗಾವಿ.

೭೩. ಮೋಹಕೃಷ್ಣ ರೈ. ಕೆ., (ಸಂ), **ಚರಿತ್ರೆ ಅಧ್ಯಯನ** (ಜುಲೈ–ಡಿಸೆಂಬರ್ ೨೦೦೭), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೪. ರಮೇಶ ನಾಯಕ(ಸಂ)., ೨೦೦೭, **ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರು ಚಿಂತನೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೫. ರಹಮತ್ ತರೀಕೆರೆ, ೨೦೦೯, **ಕನ್ನಡ ಸಂಶೋಧನೆ ತಾತ್ವಿಕ ವಿಚಾರ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೬. ರಂಗನಾಥರಾವ್. ಜಿ.ಎನ್., ೧೯೯೯, **ಮಾಸ್ತಿಯವರ ನಾಟಕಗಳು**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೭೭. ರಂಗನಾಥಶರ್ಮ, ಎನ್., (ಸಂ), ೨೦೧೧, **ರಾಘವಾಂಕನ ಹರಿಶ್ಚಂದ್ರ ಚರಿತೆ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೭೮. ರಾಬರ್ಟ್ ಸೆವಿಲ್(ಮೂಲ), ಸದಾನಂದ ಕನವಳ್ಳಿ (ಅನು), ೨೦೦೬, **ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,ಹಂಪಿ,

೭೯. ರಾಮಾಚಂದ್ರರಾವ್ ಗುಮಾಸ್ತೆ(ಕುಕನೂರು) (ಕನ್ನಡಕ್ಕೆ), ಗಡಿಯಾರಂ ರಾಮಕೃಷ್ಣ ಶರ್ಮ (ಆಲಂಪೂರು)(ತೆಲುಗು ಮೂಲ), ೨೦೦೨, **ವಿದ್ಯಾರಣ್ಯ ಒಂದು ಚಾರಿತ್ರಿಕ ಅಧ್ಯಯನ**, ಕೇಂದ್ರೀಯ ಸಂಸ್ಥೆ, ಭಾರತೀಯ ಭಾಷೆ ಮಾನವ ಸಂಪನ್ಮೂಲ ವಿಭಾಗ, ಮೈಸೂರು.

೮೦. ರಾಮೇಗೌಡ, ೧೯೯೨, **ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು**, ಚಿತ್ರಕೂಟ ಪ್ರಕಾಶನ, ಮೈಸೂರು.

೮೧. ಲಕ್ಷ್ಮಣ್ ತೆಲಗಾವಿ (ಸಂ), ೨೦೦೬, **ಕೆ.ರಾಮಸ್ವಾಮಯ್ಯಂಗರ್ ಅವರ ಜೀರ್ಣವಿಜಯನಗರಾದರ್ಶಂ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೨. ಲಕ್ಷ್ಮಣ್ ತೆಲಗಾವಿ, ೨೦೦೬, **ಚರಿತ್ರೆ ಅಧ್ಯಯನ**, ಸಂ.೧, ಸಂಚಿಕೆ ೨, ಜನವರಿ-ಜೂನ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೩. ಲಕ್ಷ್ಮಣ್ ತೆಲಗಾವಿ, ೨೦೦೯, **ವಿಜಯನಗರಕಾಲದ ರಾಮಾನುಜಕೂಟಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೪. ಲಕ್ಷ್ಮಣ್ ತೆಲಗಾವಿ, (ಸಂಪಾದಕ), ೨೦೧೧, **ರಾಮಾಜಿ ತಿರುಮಲ ಹರಿಕಾರೆಯ ರಾಮರಾಜನ ಬಖೈರು**, ಪ್ರಸರಾಂಗ, ಕನ್ನಡ ವಿ.ವಿ. ಹಂಪಿ, ಪು.೧೧೨.

೮೫. ಎ.ಲಕ್ಷ್ಮಣರಾವ್, ೨೦೦೭, **ಹಂಪೆಗೆ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೮೬. ವಸುಂಧರಾ ಫಿಲಿಯೋಜಾ, ೧೯೭೬, **ಹಂಪಿ**, ಪ್ರೇಮದಾಯಿ ಪ್ರಕಾಶನ, ಬೆಂಗಳೂರು.

೮೭. ವಸುಂಧರಾ ಫಿಲಿಯೋಜಾ, ೧೯೮೨, **ಅಳಿದುಳಿದ ಹಂಪೆ**, ಪ್ರೇಮದಾಯಿ ಪ್ರಕಾಶನ, ಬೆಂಗಳೂರು.

೮೮. ವಾಸುದೇವನ್, ಸಿ.ಎಸ್. ೨೦೦೧, **ಹಂಪಿ ಪರಿಸರದ ಕೆರೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೯. ವಿರೂಪಾಕ್ಷಿ ಪೂಜಾರಹಳ್ಳಿ, ೧೯೯೫, **ಬಳ್ಳಾರಿ ಜಿಲ್ಲೆಯಲ್ಲಿ ಕಲೆಕ್ಟರುಗಳ ಆಳ್ವಿಕೆ (೧೮೦೦-೧೯೪೭)**, (ಎಂ.ಫಿಲ್. ಅಪ್ರಕಟಿತ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ,

೯೦. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೬, **ವಾಲ್ಮೀಕಿ ಸಿರಿ, ಸ್ಮರಣ ಸಂಪುಟ**, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ.

೯೧. ವಿರೂಪಾಕ್ಷಿ ಪೂಜಾರಹಳ್ಳಿ,(ಸಂ), ೨೦೦೮, **ಚರಿತ್ರೆ ಅಧ್ಯಯನ**, ಸಂಪುಟ ೪, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೯೨. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೮, **ವಿಜಯನಗರ ಕಾಲದ ಸಂಸ್ಕೃತಿ, ಬೇಟೆ, ಪಶುಪಾಲನೆ, ಮತ್ತು ಕೃಷಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೩. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೯, **ವಸಾಹತುಕಾಲೀನ ಬಳ್ಳಾರಿ ಜಿಲ್ಲೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೯೫. ವೀರಣ್ಣ ಸಿ., ೨೦೧೧, **ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ-೨**, ನವಕರ್ನಾಟಕ ಪಬ್ಲಿಕೇಶನ್ ಪ್ರೈ.ಲಿಮಿಟೆಡ್, ಬೆಂಗಳೂರು.

೯೬. ವೀರಭದ್ರ ಬಸಪ್ಪಾ, ೧೯೦೮, **ವಿಜಯನಗರ ಸಾಮ್ರಾಜ್ಯವು** (ಸಂ:ಕಾ.ವೆಂ. ಶ್ರೀನಿವಾಸಮೂರ್ತಿ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೯೭. ವೆಂಕಟರತ್ನಂ ಎ.ವಿ., ೧೯೭೪, **ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ**,

ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೯೮. ವೆಂಕಟಸುಬ್ಬಯ್ಯ ಜಿ., ೨೦೦೭, **ಗತಿಪ್ರಜ್ಞೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೯. ಶಂಭುಶರ್ಮ ಪಂ., ೧೯೩೬, **ವಿಜಯನಗರ ಸ್ಮರಣೆ**, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ, ಸಂ: ಶ್ರೀ ವೆಂಕಟೇಶ ಶ್ರೀನಿವಾಸ ಪಂಡಿತ.

೧೦೦. ಶಾಮರಾಯ ತ.ಸು. ೨೦೦೭, **ಕನ್ನಡ ನಾಟಕ**, ಪ್ರತಿಭಾ ಪ್ರಕಾಶನ, ಮೈಸೂರು.

೧೦೧. ಶ್ರೀಕಂಠಯ್ಯ ಕೆ., ೧೯೮೩, **ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ**, ಗೀತಾ ಬುಕ್ ಹೌಸ್, ಮೈಸೂರು,

೧೦೨. ಶ್ರೀನಿವಾಸ, ೧೯೨೯, **ತಾಳಿಕೋಟೆ**, ಕರ್ನಾಟಕ ಸಾಹಿತ್ಯ ಮಂದಿರ, ಧಾರವಾಡ

೧೦೩. ಶ್ರೀನಿವಾಸಮೂರ್ತಿ ಕಾ.ವೆಂ.(ಸಂ), ೧೯೯೮, **ನಾಟಕಗಳು**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೦೪. ಶ್ರೀನಿವಾಸ ಪಾಡಿಗಾರ, ೨೦೦೪, **ಭಾರತೀಯ ಇತಿಹಾಸದ ಶಾಸನ ಆಕರಗಳು**, ರಾಮಾಶ್ರಯ ಪಬ್ಲಿಕೇಶನ್ಸ್, ಧಾರವಾಡ.

೧೦೫. ಶ್ರೀಗುರು ಓಂ ಸಿದ್ಧಲಿಂಗೇಶ್ವರಸ್ವಾಮಿ (ಅನು), ೧೯೮೩, **ಶ್ರೀ ಪಂಪಾ ಮಹಾತ್ಮೆ**, ಶ್ರೀ ಗುರು ವೃಷಭಾಶ್ರಮ, ಹೊಳಗುಂದಿ

೧೦೬. ಶ್ರೀನಿವಾಸ ಹಾವನೂರ, ೨೦೦೮, **ಮಧ್ಯಕಾಲೀನ ಕರ್ನಾಟಕ(ಜಿ.ಎಸ್.ದೀಕ್ಷಿತ್ ಅವರ ಆಯ್ದ ಬರಹಗಳು**, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಮೈಸೂರು.

೧೦೭. ಶ್ರೀನಿವಾಸ ಎಲ್, ೨೦೧೦, **ಹಂಪಿ ಪರಿಸರದ ಆದಿಮಾನವ ನೆಲೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೮. ಷೇಕ್ ಅಲಿ. ಬಿ., ಸುರೇಂದ್ರರಾವ್, ಬಿ. (ಸಂ), ೧೯೯೭, **ಕರ್ನಾಟಕ ಚರಿತ್ರೆ**, ಸಂ.೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೯. ಸ.ಪ.ಗಾಂವಕರ, ೧೯೩೬, **ವಿಜಯದಶಮಿ**, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ, ಸಂ: ಶ್ರೀ ವೆಂಕಟೇಶ ಶ್ರೀನಿವಾಸ ಪಂಡಿತ.

೧೧೦. ಸದಾನಂದ ಪಾಟೀಲ್, ೨೦೦೬, **ಹರಿಹರ ಕಥಾಕೋಶ**, ಬಸವ ಸಮಿತಿ, ಬೆಂಗಳೂರು.

೧೧೧. ಸದ್ಯೋಜಾತ ಸ್ವಾಮೀಜಿ, ೧೯೭೧, ವಿಜಯನಗರದ **ಧಾರ್ಮಿಕ ಜೀವನ**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೧೨. ಸಾಲಿರಾಮಚಂದ್ರರಾಯರ ಸಮಗ್ರಕಾವ್ಯ, ಸಂ: ಸಿದ್ಧಲಿಂಗಣಶೆಟ್ಟಿ, ೧೯೩೬, **ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ**, ಸಂ: ಶ್ರೀ ವೆಂಕಟೇಶ ಶ್ರೀನಿವಾಸ ಪಂಡಿತ.

೧೧೩.ಸೀತಾರಾಮಯ್ಯ.ಎಂ.ವಿ., ೧೯೮೩, **ಪಂಪಾಯಾತ್ರೆ,** ವಿಶ್ವ ಕನ್ನಡ ಸಮ್ಮೇಳನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೧೪.ಸೀತಾರಾಮಯ್ಯ ಎಂ.ವಿ., (ಪ್ರ.ಸಂ.) ವಿ.ಎಸ್.ಎಸ್.ಆಚಾರ್ಯ(ಸಂ), ೧೯೮೩, **ಶ್ರೀಕೃಷ್ಣದೇವರಾಯನ ದಿನಚರಿ,** ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

೧೧೫.ಸುರೇಶ ಪಾಟೀಲ, ೧೯೯೮, **ನಾಟಕಗಳು,** : ಕಾ.ವೆಂ.ಶ್ರೀನಿವಾಸಮೂರ್ತಿ. (ಸಂ), ಕನ್ನಡ ಸಾಹಿತ್ಯ ಮತ್ತು ಕರ್ನಾಟಕತ್ವ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೧೬.ಸುಂಕಾಪುರ ಎಂ.ಎಸ್., ೧೯೭೭, **ಗಿರಿಜಾಕಲ್ಯಾಣ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೧೭.ಸೂರ್ಯನಾರಾಯಣರಾವ್ (ಮೂಲ) ಬಾಲಸುಬ್ರಮಣ್ಯ (ಅನು), ೨೦೦೦, **ಮರೆಯಲಾಗದ ಮಹಾಸಾಮ್ರಾಜ್ಯ,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,ಹಂಪಿ.

೧೧೮.ಸೋಮಶೇಖರ.ಎಸ್.ವೈ., ೨೦೦೯, **ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ,** ಸಂಚಿಕೆ ಪ್ರಕಾಶನ, ಚಿತ್ರದುರ್ಗ.

೧೧೯.ಸೋಮಶೇಖರ ಎಸ್.ವೈ., ೧೯೯೭, **ಹಂಪಿಯ ಬಜಾರುಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅ) ಕನ್ನಡ ಗ್ಯಾಸೆಟಿಯರ್ ಮತ್ತು ನಿಘಂಟುಗಳು

೧. ಬಳ್ಳಾರಿ ಜಿಲ್ಲಾ ಗ್ಯಾಸೆಟೆರಿಯರ್, ಕರ್ನಾಟಕ ಸರ್ಕಾರ, ಬೆಂಗಳೂರು.

೨. ರಾಯಚೂರು ಜಿಲ್ಲಾ ಗ್ಯಾಸೆಟೆರಿಯರ್, ಕರ್ನಾಟಕ ಸರ್ಕಾರ, ಬೆಂಗಳೂರು.

೩. ಕನ್ನಡ ನಿಘಂಟು, ಸಂ.೨-೮, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಆ) ಕನ್ನಡ ನಿಯತಕಾಲಿಕೆಗಳು ಮತ್ತು ಪತ್ರಿಕೆಗಳು

೧. ಇತಿಹಾಸ ದರ್ಶನ, ವಿವಿಧ ಸಂಪುಟಗಳು, ಇತಿಹಾಸ ಆಕಾಡೆಮಿ, ಬೆಂಗಳೂರು

೨. ವಿಜಯನಗರ ಅಧ್ಯಯನ, ವಿವಿಧ ಸಂಪುಟಗಳು, ರಾಜ್ಯ ಪುರಾತತ್ವ ವಸ್ತು ಸಂಗ್ರಹಾಲಯಗಳ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

೩. ವಿಜಯನಗರ ಅಧ್ಯಯನ, ವಿವಿಧ ಸಂಪುಟಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೪. ಚರಿತ್ರೆ ಅಧ್ಯಯನದ ಸಂಚಿಕೆಗಳು

೫. ಶಾಸನ ಅಧ್ಯಯನದ ಸಂಚಿಕೆಗಳು

೬. ಅರುಣೋದಯ ವಿಜಯನಗರ ಸಾಮ್ರಾಜ್ಯ ಸಂಚಿಕೆಗಳು

೭. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ

೮. ಪ್ರಜಾವಾಣಿ ಮತ್ತು ವಿಜಯ ಕರ್ನಾಟಕ ಪತ್ರಿಕೆಗಳು

೯. ರಾಜೇಶ್ ಹಂ.ಗು.(ಸಂ) ೨೦೧೦, ಇತಿಹಾಸ ದರ್ಪಣ(ತ್ರೈಮಾಸಿಕ) ವಿಶೇಷ ಸಂಚಿಕೆ ೪, ಸಂ.೧ ಬೆಂಗಳೂರು.

೧.೨. ಆಂಗ್ಲ ಭಾಷಾ ಆಕರಗಳು

1.Alexandra Mack, 1994, ***Social Space At Vijayanagara***, Ph.D., Dissertation, Department Of Anthropology, Arizona State University, Tempe.

2.Anila Verghese, 1995, ***Religious Traditions At Vijayanagara,*** Manohar American Institute Of Indian Studies, Newdelhi.

3.Anila Verghese, 1989, ***Religious Traditions In The City Of Vijayanagara Prior To 1565 A.D.*** (Based On A Study Of The Monuments), Ph. D., Dissertation, Department Of History, University Of Bombay.

4.Burton Stein, 1989, ***The New Cambridge History of India I.2, Vijayanagara,*** Cambridge University Press, Cambridge .

5.Brigitte Pascher, 1987,***The Pattabhirama Temple,*** A Description And Iconographic Analysis, Thesis For Master Of Arts, Vermont College Of Norwich University.

6.Carla M. Sinopoli, 1986, ***Material Pattering And Social Organization, A Study Of Ceramics From Vijayanagara, South India.*** University Microfilms, Ann Arbor. (Ph.D. Dissertation, Department Of Anthroplogy, University Of Michigan).

7.Devakunjari, D., 1992,***Hampi***, Archaeological Survey of India, New Delhi,

8. Devaraj, D. and Channabasappa S. Patil, editors, 1992, ***Vijayanagara: Progress of Research,1984-1991,*** *Directorate of Archaeology and Museums*, Mysore.

9. Dominic J. Davison-Jenkins, 1988, ***The Irrigation System And Water Supply System Of The City Of Vijayanagara. 2 Vols.*** Ph. D., Dissertation, Faculty Of Oriental Studies, University Of Cambridge.

10. Dominic.J.Davison-Jenkins, 1997,***The Irrigation And Water Supply Systems Of Vijayanagara,*** Ajay Kumar Jain, Manohar Publishers & Distributors, Newdelhi.

11. Emma Adams, 1985, ***The Architecture Of Royal Ritual, Legitimation Of Divine Kingship In The Planning Of The Royal Centre Of Vijayanagara.***Dissertation Of Diploma In Architecture, Department Of Architecture, University Of Cambridge.

12. Filliozat, Pierre-Sylvain And Vasundhara Filliozat, 1988,***Hampi-Vijayanagar, The Temple Of Vithala,*** Sitaram Bhartia Institute Of Scientific Research, New Delhi.

13. Filliozat, Vasundhara, Editor, 1999,***Vijayanagara, As Seen By Domingo Paes And Fernao Nuniz 16th Century Portuguese Chroniclers)*** *And Others*, National Book Trust, New Delhi.

14. Fritz, John M. And George Michell, Editors, 2001, ***New Light On Hampi,*** *Recent Research At Vijayanagara*, Marg Publications, Mumbai,.

15. Fritz, John M. And George Michell, 2002, *Hampi*, IBH, Mumbai.

16. Fritz, John M., George Michell And M. S. Nagaraja Rao, 1984, ***Where Kings And Gods Meet: The Royal Centre At Vijayanagara,*** **India,** University Of Arizona Press, Tucson.

17. George Michell, 1990, ***Vijayanagara : Architectural Inventory of the Urban Core ; Vols I & II,*** Directorate of Archaeology and Museums, Mysore.

18. George Michell, 1992, ***The Vijayanagara Courtly Style,*** Americal Institute of Indan studies. New Delhi.

19. Gollings, J., John M. Fritz And George Michell, 1991, ***CityOf Victory, Vijayanagara: The Medieval Capital Of South India,*** Aperture, New York,.

20. Gopal.M.H, 1978, ***The History Of The Vijayanagara Empire,*** Popular Publications, Bombay.

21. Hanumappa, 1998, ***Decline and fall of the Vijayanagara Empire,*** (M. Phil, dissertation), Gulbarga University, Gulbarga.

22. Jayanthi V.G, 1993, ***Hampi, A Cultural Study,*** (Ph.D., Thesis), Karnataka University, Dharwad, Not published.

23. Janice Bailey-Goldschmidt, 1989, ***The Gateways Of Vijayanagara,*** Thesis For Undergraduate Honors, Department Of Anthropology, University OfMaryland, College Park, Vijayanagara In The World System, Ph.D. Dissertation, Department Of Anthropology, University Of Pennsylvania.

24. Kamble M T, 1993, ***Vijayanagara Temples at Hampi*** (Ph.D., Thesis), Karnataka University, Dharwad,.

25. Kathleen D. Morrison, 1992, ***Transforming the Agricultural Landscape, Intensification of Production at Vijayanagara, India,*** University Microfilms, Ann Arbor, (Ph.D., Dissertation, Department of Anthropology, University of California, Berkeley),.

26. Kotraiah, C. T. M. And Anna L. Dallapiccola, 2002, ***King, Court And Capital: An Anthology Of Kannada Literary Sources For The Vijayanagara Period,*** Manohar, New Delhi,.

27. Longhurst, A. H., 1995, ***Hampi Ruins: Described And Illustrated,***Asian Educational Services, New Delhi.

28. Michell, George And Phillip B. Wagoner, 2002, ***Vijayanagara: Architectural Inventory Of The Sacred Centre*, 3 Volumes,** Manohar, New Delhi.

29. Michell, George, 1990, ***Vijayanagara: Architectural Inventory Of The Urban Core*, 2 Volumes,** Directorate Of Archaeology And Museums, Mysore.

30. Morrison, Kathleen B., 2000, **Fields Of Victory: *Vijayanagara And The Course Of Intensification***, Munshiram Manoharlal, New Delhi.

31. Nagaraja Rao., M. S., editor, 1988, ***Vijayanagara: Through the Eyes of Alexander Greenlaw 1856 and John Gollings, 1983,*** Directorate of Archaeology and Museums, Mysore,.

32. Patil, Channabasappa, S. and Vinoda C. Patil, 1995, ***Inscriptions at Vijayanagara (Hampi),*** Directorate of Archaeology and Museums, Mysore.

33. Patil C.S. 1984, ***Temples of Bellary and Raichur District,*** Directorate of Archaeology and Museums, Mysore.

34. Ramanna H.S, 1979, ***South India as Seen by Foreign Travellers A.D. 1330-1600,*** Ph. D., Thesis, Mysore University, Mysore,.

35. Ramamurthy J R., 1996, **The Vijayanagara Heritage** (Hampi Vijayanagara History Seminors-1996), Sri Vidyanagara Hampi Heritage Trust Anegundi, Hospet.

36. Richard Blurton T, 1985, ***The Exhibition, Where Kings And Gods Meet, The Royal Centre At Vijayanagara***, Cambridge University Press, Cambridge.

37. Rubies, J.-P., 2000, ***Travel And Ethnology In The Renaissance: South India Through European Eyes, 1250-1625,*** Cambridge University Press, Cambridge.

38. Sarasvati M.L, 1984, ***Irrigation System in the Vijayanagara empire,*** Ph.D., Thesis, Dept. of History, Mysore University, Mysore.

39. Sankalia H.D., ***Mesolithic And Premesolithic Industries From Excavations At Sanganakalu,*** Bellary.

40. Sewell, Robert, 2000, ***A Forgotten Empire (Vijayanagar)***, Asian Educational Services, New Delhi.

41. Settar, S., 1990, **Hampi: *A Medieval Metropolis,*** Kala Yatra, Bangalore.

42. Shivakumar B. Javalgeri, 2000, ***Military organisation under Vijayanagara empire,*** M.Phil., dissertation, Gulbarga University, Gulbarga.Stein, Burton, 1989, ***The New Cambridge History Of India I.1, Vijayanagara,*** Cambridge University Press, Cambridge.

43. Sugandha Purandara, 1986, ***History and Arcaheology of Anegondi***, Ph.D., dissertation, Department of Archaeology, Deccan College, Pune,

44. Venkata Ramayya.N, 1990, Vijayanagara Origin Of The City And Empire, Asian Educational Services, New Dehli, Madras.

45. Verghese, Anila, 2000, ***Archaeology, Art And Religion: New Perspectives On Vijayanagara,*** Oxford University Press, New Delhi.

46. Verghese, Anila, 2002, ***Monumental Legacy,*** **Hampi,** Oxford University Press, New Delhi.

47. Verghese, 1995, Anila, ***Religious Traditions At Vijayanagara: As Revealed Through Its Monuments***, Manohar, New Delhi.

48. Wagoner, Phillip B., 1993,***TidingsOf The King: A Translation And Ethnohistorical Analysis Of The Rayavacakamu,*** University Of Hawaii Press, Honolulu.


49. Yamini Patel, 1982, ***Structural Elements of an Indian Medieval City,*** Vijayanagara, Thesis for Diploma in Architecture, School of Architecture, Ahmedabad.

ನಕ್ಷೆಗಳು

೧. ಹಂಪಿಯ ಸ್ಥಳ ನಿರ್ದೇಶನದ ನಕ್ಷೆ



೨. ಹಂಪಿಯ ಪ್ರಮುಖ ಪ್ರವಾಸಿ ತಾಣಗಳನ್ನು ಸೂಚಿಸುವ ನಕ್ಷೆ



ಛಾಯಾಚಿತ್ರಗಳು



೧. ತುಂಗಭದ್ರಾ ನದಿ ಮತ್ತು ವಿರೂಪಾಕ್ಷ ದೇವಾಲಯದ ವಿಹಂಗಮ ನೋಟ



೨. ಉಗ್ರನರಸಿಂಹ(ಲಕ್ಷ್ಮಿನರಸಿಂಹ) ಮೂರ್ತಿಯ ನೋಟ



ನಾಣ್ಯ ಶಾಲೆಯ ಆವರಣದಲ್ಲಿರುವ ಇಂಡೋ-ಇಸ್ಲಾಂಮಿಕ್ ಶೈಲಿಯ ಕಾವಲುಗೋಪುರ



೪. ಕಟ್ಟಿಗೆ ಅಹಮದ್‌ಖಾನ್‌ನ ಗೋರಿ



೫. ಕಮಲಾಪುರ ಕಂಪ್ಲಿ ರಸ್ತೆಯಲ್ಲಿರುವ ಮುಸಾಫೀರ್ ಖಾನೆಯ ನೋಟ.



೬. ಅವಸಾನದಂಚಿನಲ್ಲಿರುವ ವರಾಹ ದೇವಸ್ಥಾನದ ಪ್ರವೇಶದ್ವಾರ

೭. ವಿಠ್ಠಲ ದೇವಾಲಯದ ಮುಂಭಾಗದ ಬಜಾರಿನ ಮರು ಉತ್ಖನನದಲ್ಲಿ ದೊರೆತ ಪ್ರಾಚ್ಯಾವಶೇಷಗಳು







೮. ಮಹಾನವಮಿ ದಿಬ್ಬದ ಬಳಿಯ ಪುಷ್ಕರಣಿ



೯. ಮಹಾನವಮಿ ದಿಬ್ಬದ ಸಾಮಾನ್ಯ ನೋಟ



೧೦. ವಿಠ್ಠಲ ದೇವಾಲಯದಲ್ಲಿರುವ ಸಂಗೀತ ಕಂಬಗಳು



೧೧. ಹಂಪಿಯ ವಿರೂಪಾಕ್ಷ ಬೀದಿಯ ಆಕ್ರಮ ಕಟ್ಟಡಗಳನ್ನು ತೆರವುಗೊಳಿಸುತ್ತಿರುವ ನೋಟ



೧೨. ಹಜಾರರಾಮ ದೇವಾಲಯದ ಭಿತ್ತಿಯ ಮೇಲಿನ ಪೌರಾಣಿಕ ಶಿಲ್ಪಗಳು

೧೩. ವಿಠ್ಠಲ ದೇವಾಲಯದ ಹಿಂಬದಿಯಲ್ಲಿರುವ ವಿಷ್ಣು ದೇವಸ್ಥಾನದ ಕಂಬದ
ಮೇಲಿರುವ ಮಿಥುನ ಶಿಲ್ಪಗಳು







೧೪. ಭೀಮನ ದ್ವಾರದಲ್ಲಿರುವ ಭೀಮನ ವಿಗ್ರಹ



೧೫. ಹಂಪಿ ವಿರೂಪಾಕ್ಷ ದೇವಾಲಯದಲ್ಲಿರುವ ಕನ್ನಡಿಗರ ಅಧಿದೈವ ಭುವನೇಶ್ವರಿ ದೇವಿ



೧೬. ಚಕ್ರತೀರ್ಥದಬಳಿಯ ನದಿ ದಂಡೆಯ ಮೇಲೆ ಧಾರ್ಮಿಕ ವಿಧಿ ನಡೆಸುತ್ತಿರುವ ಜಾನಪದ ದೈವಗಳು



. ೧೭. ನದಿ ದಾಟಲು ಬಳಸುವ ಪಾರಂಪರಿಕ ಹರಿಗೋಲು



೧೮. ಪ್ರಸಕ್ತ ಹಂಪಿಯಲ್ಲಿ ಬಳಸುತ್ತಿರುವ ಬ್ಯಾಟರಿ ಚಾಲಿತ ವಾಹನಗಳು



೧೯. ಕೀಲುಕುದುರೆಯ ಜಾನಪದ ದೃಶ್ಯ



೨೦. ಕನ್ನಡ ವಿಶ್ವವಿದ್ಯಾಲಯದ ಅಕ್ಷರ ಗ್ರಂಥಾಲಯದ ಕಟ್ಟಡ



. ೨೧. ಕಮಲಾಪುರ ಮ್ಯೂಸಿಯಂನಲ್ಲಿರುವ ಹಂಪಿಯ ಮಾಡಲ್


೪. ದೇಶಿ–ವಿದೇಶಿಯರ ಛಾಯಾಚಿತ್ರಗಳಲ್ಲಿ ನಿರೂಪಿತವಾಗಿರುವ ಹಂಪಿ

ಚರಿತ್ರೆಯು ಗತ ಕಾಲದ ಆಧಾರಗಳನ್ನು ಲಿಖಿತ ರೂಪದಲ್ಲಿ ಒಳಗೊಂಡಿರುವಂತೆಯೇ ಗತಕಾಲದ ಜನರಿಂದ ಮೌಖಿಕ ಆಧಾರಗಳನ್ನು ತಲೆಮಾರಿನಿಂದ ತಲೆಮಾರಿಗೆ ಸಾಗಿಸುತ್ತಲೇ ಬಂದಿರುತ್ತದೆ. ಓದೇ ಪ್ರಧಾನವಾದ ನಮ್ಮ ಜನರು ಲಿಖಿತ ಆಧಾರಗಳನ್ನೇ ಚರಿತ್ರೆ ಎಂದು ಜನರ ಮೌಖಿಕ ವಿವರಗಳನ್ನು ತಿರಸ್ಕರಿಸಿದ್ದೇಕೆ? ಎಂಬ ಪ್ರಶ್ನೆಗೆ ರಾಜಕೀಯ ಮತ್ತು ಆರ್ಥಿಕವಾದ ಕಾರಣಗಳಿವೆ. ಲಿಖಿತ ಚರಿತ್ರೆಯ ಏಕಮುಖ ನಿಲುವುಗಳನ್ನ ಮತ್ತು ಆಡಳಿತ ಕೇಂದ್ರದ ಪರವಾದ ಅದರ ನಿಲುವುಗಳನ್ನು ಆ ನಂತರದ ಜನ ಚರಿತ್ರೆಗಳು ಒರೆಗೆ ಹಚ್ಚಿ ಅದರ ಕೊರತೆಗಳನ್ನು ತೋರಿಸಿಕೊಟ್ಟಿವೆ.

ಕಲಿತವರ ಮತ್ತು ಕಲಿಯದವರ ಕೂಡಲಸಂಗಮದಿಂದಲೇ ಪೂರ್ಣ ಸತ್ಯ ಕಾಣಲು ಸಾಧ್ಯ. ಇಂತಹ ನೋಟವೇ ಹೊಸದು. ಇದು ಕಾಲ ಸರಿದಂತೆಯೂ ಹೊಸದಾಗಬಲ್ಲದು; ವಿಸ್ತಾರಗೊಳ್ಳಬಲ್ಲದು. ವಿವರ್ಣಗೊಳ್ಳುತ್ತಾ ಹೊಳಪಾಗುತ್ತಾ ಹೋಗುವ ಈ ಪರಿಯೇ ವಿಶಿಷ್ಟವಾದುದು. ಇದಕ್ಕೆ ಉದಾಹರಣೆಯೆಂಬಂತೆ 'ಹಂಪೆ' ಎಂಬ ಸ್ಥಳವನ್ನು ಒಮ್ಮೆ ಎದುರಿಗೆ ಇಟ್ಟುಕೊಂಡು ಇದರ ಛಾಯಾಚಿತ್ರಗಳಲ್ಲಿ ನಿರೂಪಿತವು ಬಗೆ ಬಗೆಯ ಆವರಣಗಳನ್ನು ಪರಿಶೀಲಿಸೋಣ. ಈ ಅಂಶಗಳು ಮುಖ್ಯವಾಗಿ ವಿಜಯನಗರದ ಪತನವನ್ನು, ಹೊರಗಿನ ದಾಳಿಯನ್ನು ಅಳೆಯುತ್ತ ವಿಜಯನಗರ ಪತನಕ್ಕೆ ಒಳಗಿನ ನೈತಿಕ ಪತನವೂ ಕಾರಣವೆನ್ನುವ ಸಾಕ್ಷಿ ನೀಡುತ್ತವೆ. ಆಧುನಿಕ ಹಂಪಿಯಂತೂ ನೈತಿಕ ಅಧಃಪತನದ ಚಿತ್ರವನ್ನೇ ಗತದ ನೆನಪು ಮಾಸುವಂತೆ ಹೊತ್ತು ನಿಂತಿಂತಿದೆ.

ಧಾರ್ಮಿಕ ಕ್ಷೇತ್ರವಾಗಿ ಈಗ ಪ್ರಸಿದ್ಧಿ ಪಡೆದಿರುವ ಈ ತಾಣ ತನ್ನ ಮೂಲ ಸಹಿಷ್ಣು ರೂಪಗಳ ಮೇಲೆ ಹಿಂದೂ ಜಾಗೃತಿ ಕೇಂದ್ರದಂತೆ ರೂಪುಗೊಳ್ಳುತ್ತಿರುವುದನ್ನೂ ಗಮನಿಸಬೇಕಾದ ಅಂಶಗಳಲ್ಲಿ ಒಂದು. ಹಂಪಿಯ ರೂಪಾಂತರದ ಚಿತ್ರಗಳಲ್ಲಿ ವಿದೇಶಿ ಮತ್ತು ದೇಶಿ ಕ್ಯಾಮರಾ ಕಣ್ಣುಗಳು ವಿಶೇಷವಾಗಿ ಕಂಡಿವೆ.

ಹಂಪಿ ಸಾವಿರಾರು ಪ್ರವಾಸಿಗರ ಮತ್ತು ಸಂಶೋಧಕರ ತಾಣವಾಗಿದೆ. ಇಲ್ಲಿನ ಸ್ಮಾರಕಗಳು ಇವರನ್ನೆಲ್ಲಾ ಆಕರ್ಷಿಸುವಂತಿವೆ. ಇವುಗಳ ಮೌಲ್ಯ ಮತ್ತು ಮಹತ್ವವನ್ನು ಅರಿತ ಪುರಾತತ್ವ ಇಲಾಖೆಯು ಹಂಪಿಯ ಸ್ಮಾರಕಗಳ ಪುನರ್‌ನಿರ್ಮಾಣ, ದುರಸ್ಥೀಕರಣ, ಅನ್ವೇಷಣೆ ಮತ್ತು ಭೂಶೋಧನಾ ಕಾರ್ಯದಲ್ಲಿ ತೊಡಗಿಸಿಕೊಂಡಿತು. ಇಲಾಖೆಯ ಈ ಕಾರ್ಯದಿಂದಾಗಿ ಹಂಪಿ ಒಂದೊಂದು ವರ್ಷವು ಹೊಸ ಹೊಸದಾಗಿ ಕಾಣುವಂತಾಯಿತು. ಈ ಬದಲಾವಣೆ ಸ್ಮಾರಕಗಳ ತೌಲನಿಕ ಅಧ್ಯಯನಕ್ಕೂ ಹೊಸ ಅವಕಾಶ ನೀಡಿದಂತಾಯಿತು. ಹೀಗೆ ಇಲ್ಲಿಗೆ ಬಂದು ಗತಕಾಲದಿಂದ ತೆಗೆದ ಹಂಪಿಯ ಛಾಯಾಚಿತ್ರಗಳು ಹೇಗೆ ಅನೇಕ ವಸ್ತುವಿಷಯಗಳನ್ನು ಚರ್ಚಿಸಬಲ್ಲವು ಎಂಬುದಕ್ಕೆ ಸಾಕ್ಷಿಯಾಗಿ ಮೈಸೂರು ಪುರಾತತ್ವ ಇಲಾಖೆಯ ೨೦೦೮ 'ವಿಜಯನಗರ ಥ್ರೂ ದ ಐಸ್ ಆಫ್ ಅಲೆಕ್ಸಾಂಡರ್ ಜಾನ್ ಗ್ರೀನ್‌ಲಾ, ಜಾನ್ ಗಾಲಿಂಗ್ಸ್, ಡಾ.ಆರ್ ಗೋಪಾಲ್ ಮತ್ತು ಮುರಳೀಧರ' ಅವರ ಛಾಯಾಚಿತ್ರಗಳ ಪುಸ್ತಕದ ಕೆಲ ಅಂಶಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.



Alexander John Greenlaw
(1818-1870)



John Gollings



Dr. R. Gopal & M.N. Muralidhar - 2008



John Gollings 1983



Alexander J. Greenlaw - 1856

೧. ಗತದ ಹಂಪಿಯನ್ನು ನಮ್ಮವರು ನಿರ್ಲಕ್ಷಿಸಿದ ಚಿತ್ರವನ್ನು ಅಲೆಕ್ಸಾಂಡರ್ ಜಾನ್ ಗ್ರೀನ್ ಲಾ ಅವರ ೧೮೫೬ರ ಚಿತ್ರ ಹೇಳುತ್ತದೆ. ೧೯೮೩ರಲ್ಲಿ ಜಾನ್‌ಗಾಲಿಂಗ್ಸ್ ತೆಗೆದ ಇದೇ ಚಿತ್ರವು ಅಲ್ಪಮಟ್ಟಿಗಿನ ಕುರೂಪವನ್ನು ಹೋಗಲಾಡಿಸಿಕೊಂಡಿದೆ. ಅದೇ ೨೦೦೮ರಲ್ಲಿ ಡಾ.ಆರ್. ಗೋಪಾಲ್ ಮತ್ತು ಎಂ.ಎನ್.ಮುರಳೀಧರ್ ಅವರು ತೆಗೆದ ಚಿತ್ರವು ಸಂಪೂರ್ಣ ದುರಸ್ಥಿಗೆ ಒಳಗಾಗಿದ್ದು ಇದು ತನ್ನ ಗತದ ಸೌಂದರ್ಯವನ್ನು ಮರುಹೊತ್ತಂತೆ ಕಾಣುತ್ತದೆ.



Dr. R. Gopal & M.N. Muralidhar - 2008



John Gollings - 1983




Alexander J. Greenlaw - 1856

೨. ೧೮೫೬ರಲ್ಲಿ ಅಲೆಕ್ಸಾಂಡರ್ ಜಾನ್‌ಗ್ರೀನ್ ಲಾ ಅವರು ತೆಗೆದ ವಿರೂಪಾಕ್ಷ ಬಜಾರಿನ ದಕ್ಷಿಣ ಪಶ್ಚಿಮ ಚಿತ್ರವು ಗಿಡಗಂಟೆಗಳಿಂದ ಕಲ್ಲು ಬಂಡೆಗಳಿಂದ ತುಂಬಿ ಹೋಗಿ ರಸ್ತೆಯೇ ಹಾಳಾದ ಚಿತ್ರ ನೀಡುತ್ತದೆ. ಅದೇ ೧೯೮೩ರ ಜಾನ್ ಗಾಲಿಂಗ್ಸ್ ತೆಗೆದ ಚಿತ್ರದಲ್ಲಿ ವಿದ್ಯುತ್ ತಂತಿಯ ಅಳವಡಿಕೆಯ ಉದ್ದೇಶಕ್ಕಾಗಿ ಅಲ್ಲಿನ ಕಂಬಗಳ ಮಂಟಪವನ್ನೇ ಹಾಳುಮಾಡಿರುವುದು ಕಂಡುಬರುತ್ತದೆ. ಇದೇ ಮುಂದೆ ೨೦೦೮ರ ದೇಶೀಯ ಡಾ.ಗೋಪಾಲ್ ಮತ್ತು ಮುರಳೀಧರ ಅವರ ಚಿತ್ರವು ಬಜಾರವು ಪುನರ್ ನಿರ್ಮಾಣವಾದದ್ದನ್ನು ಆಧುನಿಕ ಕಾಂಪೋಂಡ್ ನಿರ್ಮಿತವಾಗಿರುವುದನ್ನು ಕಾಣಬಹುದಾಗಿದೆ.



Alexander J. Greenlaw - 1856



Dr. R. Gopal & M.N. Muralidhar - 2008



John Gollings - 1983

೩. ೧೮೫೬ರ ಅಲೆಕ್ಸಾಂಡರ್ ಜಾನ್‌ಗ್ರೀನ್ ಲಾ ಅವರ ಸಾಸಿವೆ ಕಾಳು ಗಣಪ ಚಿತ್ರ ಸಂಪೂರ್ಣ ದನಗಾಹಿಗಳ ಮತ್ತು ಜೂಜುಕೋರರ ತಾಣವಾಗಿರುವುದನ್ನು ಸೂಚಿಸುತ್ತದೆ. ೧೯೮೩ರ ಇದೇ ಚಿತ್ರ ಜಾನ್ ಗಾಲಿಂಗ್ಸ್ ಕ್ಯಾಮಾರದಲ್ಲಿ ರಕ್ಷಣೆಯನ್ನು ಪಡೆದಂತಿದೆ. ಆದರೆ ೨೦೦೮ ರ ಗೋಪಾಲ್ ಮತ್ತು ಮುರಳೀಧರರ ಚಿತ್ರವು ಇದರ ಕುಂದಿದ ರೂಪವನ್ನು ಪಡೆದುಕೊಂಡಿರುವುದಲ್ಲದೆ, ಇದರ ಕಾಳಜಿಗೆ ಪ್ರತೀಕವೆಂಬಂತೆ ಇಲ್ಲಿನ ಹೊಸದಾಗಿ ನಿರ್ಮಾಣವಾಗಿರುವ ತೋಟವೂ ಇದರ ಕಾಂತಿಯನ್ನು ಹೆಚ್ಚಿಸಿದೆ.



John Gollings - 1983



Alexander J. Greenlaw 1856




Dr. R. Gopal & M.N. Muralidhar - 2008

೪. ೧೮೫೬ರ ಅಲೆಕ್ಸಾಂಡರ್ ಜಾನ್‌ಗ್ರೀನ್ ಲಾ ಚಿತ್ರದಲ್ಲಿ ಪ್ರಸಿದ್ಧ ವಿರೂಪಾಕ್ಷ ದೇವಸ್ಥಾನವು ಶಿಥಿಲಾವಸ್ಥೆಗೆ ಮುಟ್ಟಿದೆ. ಒಳಅಂಗಳವು ನಾಲ್ಕು ಬಸವಣ್ಣನ ಮೂರ್ತಿಗಳಿಂದ ಕೂಡಿದೆ. ೧೯೮೩ರ ಜಾನ್‌ಗಾಲಿಂಗ್ಸ್ ಚಿತ್ರದಲ್ಲಿ ಅಂಗಳದ ದುರಸ್ಥಿ ನಡೆದಿದ್ದು ಕೇವಲ ಎರಡು ಬಸವಣ್ಣಗಳು ಉಳಿದಿವೆ. ಇಲ್ಲಿ

ಎದ್ದ ವಿದ್ಯುತ್ ಕಂಬ ಮೂಲ ಸೌಂದರ್ಯಕ್ಕೆ ಊನಗೊಳಿಸಿದೆ. ಸುತ್ತಲ ಮಂಟಪಗಳು ಮನೆಗಳಾಗಿ ಪರಿವರ್ತನೆಗೊಂಡಿವೆ. ೨೦೦೮ರ ಗೋಪಾಲ್ ಮತ್ತು ಮುರಳೀಧರರ ಚಿತ್ರದಲ್ಲೂ ಮಂಟಪಗಳು ಮನೆಗಳಾಗಿ ಮುಂದುವರೆದಿವೆ .ಮೂಲ ಕಂಬಗಳು ಕಾಂಕ್ರೇಟ್ ಗೋಡೆಗಳಾಗಿ ಪರಿವರ್ತನೆ ಹೊಂದಿ ಬಾಗಿಲು ಮತ್ತು ಕಬ್ಬಿಣದ ಗೇಟ್‌ಗಳಿಂದ ಸುಣ್ಣಬಣ್ಣಗಳಿಂದ ಬದಲಾವಣೆಗೊಂಡಿವೆ. ಇಲ್ಲಿ ೧೯೮೩ರ ಚಿತ್ರದ ವಿದ್ಯುತ್ ಕಂಬ ತೆಗೆದು ಹಾಕಲಾಗಿದೆ.



Alexander J. Greenlaw - 1856



John Gollings - 1983



Dr. R. Gopal & M.N. Muralidhar - 2008

೫.೧೮೫೬ರ ಅಲೆಕ್ಸಾಂಡರ್ ಜಾನ್‌ಗ್ರೀನ್ ಲಾ ಅವರ ಚಿತ್ರ ರಸ್ತೆ ಇರದ ಕಡಲೇ ಕಾಳು ಗಣೇಶ ಮಂಟಪವನ್ನೂ ದೂರದ ವಿರೂಪಾಕ್ಷ ದೇವಸ್ಥಾನದ ಸುತ್ತಲಿನ ಹಾಳುಬಿದ್ದ ಕಲ್ಲುಗಳ ರಾಶಿಗಳನ್ನೂ ಚಿತ್ರಿಸಿದೆ. ಅದೇ ೧೯೮೩ರ ಜಾನ್ ಗಾಲಿಂಗ್ಸ್ ಅವರ ಚಿತ್ರ ಮಣ್ಣಿನರಸ್ತೆಯನ್ನೂ ಪಕ್ಕದ ದೊಡ್ಡ ಬೃಹತ್ ಬಂಡೆ ಒಡೆದಿರುವುದನ್ನೂ ಕಾಣಬಹುದು. ೨೦೦೮ರ ಗೋಪಾಲ್ ಮತ್ತು ಮುರಳೀಧರರ ಚಿತ್ರವು ಟಾರು ರಸ್ತೆಯನ್ನೂ ಸಂಪೂರ್ಣ ದುರಸ್ಥಿಗೊಂಡ ಗೋಡೆಗಳನ್ನೂ ದೂರದ ಸುಂದರ ವಿರೂಪಾಕ್ಷ ಗೋಪುರದ ಸೌಂದರ್ಯವನ್ನು ಸೊಗಸಾದ ಹಿನ್ನೆಲೆಯನ್ನು ಒದಗಿಸಿದೆ.



John Gollings - 1983



Dr. R. Gopal & M.N. Muralidhar - 2008



Alexander J. Greenlaw 1856

೬. ೧೮೫೬ರ ಅಲೆಕ್ಸಾಂಡರ್ ಜಾನ್‌ಗ್ರೀನ್ ಲಾ ಅವರ ಕೃಷ್ಣ ಬಜಾರಿನ ಮೆಟ್ಟಿಲು ಕೊಳ ಮತ್ತು ಅದರೊಳಗಿನ ಮಂಟಪವು ನಿರ್ಲಕ್ಷ್ಯಕ್ಕೆ ಒಳಗಾಗಿ ಮೀನು ಹಿಡಿವವರ ದನಗಾಹಿಗಳ ನಿವಾಸವಾಗಿದೆ. ೧೯೮೩ರ ಜಾನ್ ಗಾಲಿಂಗ್ಸ್ ಅವರ ಚಿತ್ರ ತೀವ್ರನಿರ್ಲಕ್ಷ್ಯದಿಂದ ಸಂಪೂರ್ಣ ಪೊದೆ ಬೆಳೆದು ನೀರು ಮತ್ತು ಮಂಟಪವೇ ಕಾಣದಂತಾಗಿದೆ. ೨೦೦೮ರ ಗೋಪಾಲ್ ಮತ್ತು ಮುರಳೀಧರರ ಚಿತ್ರ ಸಂಪೂರ್ಣ ದುರಸ್ಥಿಯಿಂದ ಮೂಲರೂಪವನ್ನು ಪಡೆದುಕೊಂಡು ತನ್ನ ಸೊಗಸು ಸೌಂದರ್ಯದ ಚಹರೆಯನ್ನು ಪ್ರದರ್ಶಿಸುವಂತಿದೆ.



Dr. R. Gopal & M.N. Muralidhar - 2008



Alexander J. Greenlaw 1856



John Gollings - 1983

೭. ೧೮೫೬ರ ಅಲೆಕ್ಸಾಂಡರ್ ಜಾನ್‌ಗ್ರೀನ್ ಲಾ ಅವರ ಪಶ್ಚಿಮ ಮಹಾದ್ವಾರ ಕೃಷ್ಣಾ ದೇವಸ್ಥಾನದ ಮುಖ್ಯ ದ್ವಾರವು ಪ್ರಸಿದ್ಧ ಕೆತ್ತನೆಯ ಕಂಬಗಳ ನಡುವೆ ಪೊದೆಗಳು ಬೆಳೆದು ಗೋಪುರ ಬಿದ್ದು ದನಗಾಹಿಗಳ ವಾಸವಾಗಿರುವುದನ್ನು ತೋರುತ್ತದೆ. ೧೯೮೩ರ ಜಾನ್ ಗಾಲಿಂಗ್ಸ್ ಅವರ ಚಿತ್ರ ಗಿಡಗಂಟೆಗಳನ್ನು ಕಳೆದುಕೊಂಡು ಬಿದ್ದ ಗೋಡೆಯೊಳಗಿನ ಮಂಟಪದ ಚಿತ್ರಣವನ್ನು ಪುನರ್ ನಿರ್ಮಿಸಲಾಗಿರುವುದನ್ನು ತೋರುತ್ತದೆ. ೨೦೦೮ರಲ್ಲಿ ಗೋಪಾಲ್ ಮತ್ತು ಮುರಳೀಧರರ ಚಿತ್ರ ಗೋಪುರದ ಗೋಡೆ, ಅಂಗಳ, ಗೋಪುರಗಳ ಪುನರ್‌ನಿರ್ಮಾಣದಿಂದ ಈ ಸ್ಮಾರಕವು ಸೊಗಸಾಗಿ ಕಾಣುವಂತಾಗಿದೆ.



Alexander J. Greenlaw - 1856



John Gollings - 1983



Dr. R. Gopal & M.N. Muralidhar - 2008

೮. ಹಂಪಿ ೨೦೦೮ರ ಗೋಪಾಲ್ ಮತ್ತು ಮುರಳೀಧರ ತೆಗೆದ ಚಿತ್ರದಂತೆ ತನ್ನ ಕಲ್ಲಿನ ರಥ ಮತ್ತು ವಿಠ್ಠಲ ಮಂಟಪದ ಅಂದದಿಂದ ಕೂಡಿದೆ. ಆದರೆ ಈ ಹಂಪಿ ೧೮೫೬ರ ಅಲೆಕ್ಸಾಂಡರ್ ಜಾನ್‌ಗ್ರೀನ್ ಲಾ ಚಿತ್ರದಲ್ಲಿ ಅವಕ್ಕಾಗುವಷ್ಟು ಹಾಳಾಗಿದೆ. ಗಿಡ ಮರಗಳಿಂದ ಹುಲ್ಲು ಪೊದೆಗಳಿಂದ ದನಗಾಹಿಗಳಿಂದ ಸಂಪೂರ್ಣ ಜನದೂರವಾಗಿದೆ. ಅದೇ ೧೯೮೩ರ ಜಾನ್ ಗಾಲ್ಲಿಂಗ್ಸ್ ಅವರ ಚಿತ್ರದಲ್ಲಿ ದುರಸ್ಥಿಗೆ ಒಳಗಾಗಿ ಮೆಲ್ಲಗೆ ಮೂಲ ಸೌಂದರ್ಯದಲ್ಲಿ ಬರುವಂತೆ ಕಾಣುತ್ತದೆ. ನಿಜಕ್ಕೂ ಇದು ಪರಿವರ್ತನೆಯಿಂದ ಈಗ ದಂಗುಬಡಿಸುವಂತೆ ಸೊಗಸು ಪಡೆದ್ದಾಗಿದೆ ಎನ್ನುವಂತಿದೆ.



Dr. R. Gopal & M.N. Muralidhar - 2008



John Gollings - 1983



Alexander J. Greenlaw - 1856

೯. ಅಲೆಗ್ಸಾಂಡರ್ ಜಾನ್‌ಗ್ರೀನ್ ಲಾ ಅವರ ೧೮೫೬ರ ಫೋಟೋದಲ್ಲಿ ವಿಠ್ಠಲ ದೇವಸ್ಥಾನದ ಕಂಬಗಳ ಒಳ ಆವರಣವು ನಿರಾಶ್ರಿತರ ಅಲೆಮಾರಿಗಳ ತಾಣವಾಗಿತ್ತು ಎಂಬ ಚಿತ್ರ ನೀಡುತ್ತದೆ. ಇದೇ ೧೯೮೩ರ ಜಾನ್ ಗಾಲಿಂಗ್ಸ್ ಅವರ ಚಿತ್ರದಲ್ಲಿಯೂ ಈ ಸಂಗೀತ ಕಂಬಗಳ ವಿಠ್ಠಲ ದೇವಸ್ಥಾನವು ಇನ್ನೂ ಅಲೆಮಾರಿ ಮತ್ತು ನಿರಾಶ್ರಿತರ ತಾಣವಾಗಿದೆ. ೨೦೦೮ರ ಗೋಪಾಲ್ ಮತ್ತು ಮುರಳೀಧರರ ಚಿತ್ರವು ಸಣ್ಣ ಪುಟ್ಟ ಕೆಲಸ ಕಾರ್ಯಗಳಿಂದ ಸೊಗಸನ್ನು ಹೆಚ್ಚಿಸಿಕೊಂಡಿರುವುದಲ್ಲದೆ ಪ್ರವಾಸಿಗರಿಗೆ ತೆರೆದ ಮನಸ್ಸಿನಿಂದ ಸೆಳೆಯುವಂತೆ ಕಂಗೊಳಿಸುತ್ತದೆ.

ಇದೇ ಮಾದರಿಯಲ್ಲಿ ಕಮಲ ಮಹಲ್, ರಾಣಿ ಮಹಲ್, ಆನೆ ಲಾಯ ಮೊದಲಾದ ಸ್ಥಳಗಳೂ ಕಾಲ ಕಾಲಕ್ಕೆ ದುರಸ್ಥಿಗೊಂಡು ಹಂಪಿಯನ್ನು ನೋಡುಗರ ಕಣ್ಣೊಳಗೆ ಉಳಿಯುವಂತೆ ಮಾಡಿದ ದಾಖಲಾತಿಗಳಂತೆ ಕಾಣುತ್ತವೆ.

೪೪೪೪

AKSHARA GRANTHALAYA
ACC.NO.131992

ಚರಿತ್ರೆ ವಿಭಾಗ